ಡಾ. ಎಂ. ಎಂ. ಕಲಬುರ್ಗಿ
ಸಮಗ್ರ ಸಾಹಿತ್ಯ

ಸಂಪುಟ ೨೮

ಕಾವ್ಯ ಸಾಹಿತ್ಯ : ಭಾಗ-೧೦



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

[illegible]

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೨೮ : ಕಾವ್ಯ ಸಾಹಿತ್ಯ : ಭಾಗ-೧೦

❖

- ಕಿತ್ತೂರ ಸಂಸ್ಥಾನ ಸಾಹಿತ್ಯ - ೧
- ಕಿತ್ತೂರ ಸಂಸ್ಥಾನ ಸಾಹಿತ್ಯ - ೨
- ಕಿತ್ತೂರ ಸಂಸ್ಥಾನ ಸಾಹಿತ್ಯ - ೩

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಎಂ. ಎಸ್. ಮದಭಾವಿ

ವಿಜಯಪುರ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೨೧

COMPLETE WORK OF DR. M.M.KALBURGI
VOLUME - 28 : KAVYA SAHITY : BHAGA-10
Edited by : Dr. M.S. Madabhavi, Vijayapur

Published by : Dr. P.G. Halakatti Research Centre
B.L.D.E. Association, Vijayapur, Karnatak

©

First Edition : 2021
Pages : xxxviii + 792=830

Copies: 1000
Price Rs: 414/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Sarsawatidevi Bhagawati, Dharwad.
Printer : The PrintPoint, No. 9/8 6th Cross, 4th Main, Rajajinagar, Industrial Town,
Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೨೮–ಕಾವ್ಯ ಸಾಹಿತ್ಯ : ಭಾಗ–೧೦

ಸಂಪಾದಕರು : ಡಾ. ಎಂ.ಎಸ್. ಮದಭಾವಿ, ವಿಜಯಪುರ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ: ೨೦೨೧
ಪುಟಗಳು: xxxviii + ೭೯೨=೮೩೦

ಪ್ರತಿಗಳು: ೧೦೦೦
ಬೆಲೆ ರೂ: ೪೧೪/–

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: ಪ್ರಿಂಟ್ ಪಾಯಿಂಟ್, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ,
ಇಂಡಸ್ಟ್ರಿಯಲ್ ಟೌನ್, ಬೆಂಗಳೂರು–೫೬೦೦೪೪. ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಮಾಜಿ ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

ಡಾ. ಗುರುಲಿಂಗ ಕಾಪಸೆ, ಧಾರವಾಡ
ಡಾ. ವೀರಣ್ಣ ರಾಜೂರ, ಧಾರವಾಡ
ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ
ಡಾ. ಬಿ.ವ್ಹಿ. ಶಿರೂರ, ಹುಬ್ಬಳ್ಳಿ
ಡಾ. ಎಂ.ಎಸ್. ಮದಭಾವಿ, ವಿಜಯಪುರ
ಡಾ. ಎಸ್.ಕೆ. ಕೊಪ್ಪಾ, ಇಂಡಿ
ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ
ಡಾ. ಕೆ. ರವೀಂದ್ರನಾಥ, ಹಂಪಿ
ಡಾ. ಎಫ್. ಟಿ. ಹಳ್ಳಿಕೇರಿ, ಹಂಪಿ
ಡಾ. ವಿ. ಎಸ್. ಮಾಳಿ, ಹಾರೂಗೇರಿ
ಡಾ. ಪಿ. ಕೆ. ರಾಠೋಡ, ಧಾರವಾಡ
ಡಾ. ಮಲ್ಲಿಕಾರ್ಜುನ ಮೇತ್ರಿ, ವಿಜಯಪುರ
ಶ್ರೀ ಶಶಿಧರ ತೋಡ್ಕರ, ಧಾರವಾಡ
ಡಾ. ವಿ. ಡಿ. ಐಹೊಳ್ಳಿ, ವಿಜಯಪುರ
ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಡಾ. ಹನುಮಂತ ಮೇಲಿನಮನಿ, ಧಾರವಾಡ

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು–ನುಡಿ–ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ–ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ–ಅದ್ವಿತೀಯ–ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ–ಪಾಂಡಿತ್ಯ–ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ–ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ–ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ

ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು

ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟ ಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟಿಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟಿಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ-ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ-ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ-ನಡುಗನ್ನಡ-ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ, ಸಂಶೋಧನೆ, ವಿಮರ್ಶೆ, ನಾಡು-ನುಡಿ-ಸಂಸ್ಕೃತಿ-ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ-ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ-ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ-ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ

ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ–೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ–ಧಾರ್ಮಿಕ–ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ–೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ–ವ್ಯಾಪ್ತಿ–ವಿಧಾನ–ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ

ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ: ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು-ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ-ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೪೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ-ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ,

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ-೧, ೧೮. ಶಾಸನ ವ್ಯಾಸಂಗ-೨. ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ-ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ-೧, ೩೧. ಮಾರ್ಗ-೨, ೩೨. ಮಾರ್ಗ-೩, ೩೩. ಮಾರ್ಗ-೪, ೩೪. ಮಾರ್ಗ-೫, ೩೫. ಮಾರ್ಗ-೬, ೩೬. ಮಾರ್ಗ-೭, ೩೭. ಮಾರ್ಗ-೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ-೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ-೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ-೨, ೫೦. ವಚನ ಸಂಕಲನ ಸಂಪುಟ-೪, ೫೧. ವಚನ ಸಂಕಲನ ಸಂಪುಟ-೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ-೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು. ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸ್ವಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು. ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ–೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ–೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ–೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ–೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ–೨, ೯೧. ಬಸವ ಮಾರ್ಗ–೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ. ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧–೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ. ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ–೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು–ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ-ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ-ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ಸಂದೀಶ ಹಂಜೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ

ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ-ಕರ್ನಾಟಕ ಸರ್ಕಾರದ ಧನ ಸಹಾಯದಿಂದ-ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪-೭-೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ-ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩-೯-೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ-ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ-ವರದಿಗಳು, ಆಡಿಯೋ-ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾದಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **-ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **-ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **-ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ
೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)
೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)
೩. ಕೆಟ್ಟಿತ್ತು ಕಲ್ಯಾಣ (ನಾಟಕ)
೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)
೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ
೨. ಧಾರವಾಡ ಜಿಲ್ಲೆಯ ಶಾಸನ ಸೂಚಿ
೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ
೪. ಧಾರವಾಡ ತಾಲೂಕಿನ ಶಾಸನಗಳು
೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ **–ಸಂ. ಡಾ. ಪಂಡಿತ ರಾಠೋಡ**

೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ **–ಸಂ. ಡಾ. ಪಂಡಿತ ರಾಠೋಡ**

೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ
೨. ವಚನ ಸಾಹಿತ್ಯ ಆಕರ ಕೋಶ
೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ **–ಸಂ. ಡಾ. ವೀರಣ್ಣ ರಾಜೂರ**

೧. ಬಸವಸ್ತೋತ್ರದ ವಚನಗಳು
೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨ –ಸಂ. ಡಾ. ಗುರುಲಿಂಗ ಕಾಪಸೆ

೧. ಚೆನ್ನಬಸವಣ್ಣನವರ ವಚನ ಮಹಾಸಂಪುಟ

೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩ –ಸಂ. ಡಾ. ವೀರಣ್ಣ ರಾಜೂರ

೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪ –ಸಂ. ಡಾ. ವೀರಣ್ಣ ರಾಜೂರ

೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫ –ಸಂ. ಡಾ. ವೀರಣ್ಣ ರಾಜೂರ

೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬ –ಸಂ. ಡಾ. ವೀರಣ್ಣ ರಾಜೂರ

೧. ಪರಮಾನಂದ ಸುಧೆ

೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭ –ಸಂ. ಡಾ. ಪಂಡಿತ ರಾಠೋಡ

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮ –ಸಂ. ಡಾ. ಪಂಡಿತ ರಾಠೋಡ

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯ –ಸಂ. ಶಶಿಧರ ತೋಡ್ಕರ

೧. ವಚನ ಸಂಕಲನ–೪

೨. ವಚನ ಸಂಕಲನ–೬

೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦ –ಸಂ. ಡಾ. ವೀರಣ್ಣ ರಾಜೂರ

೧. ವಚನಶಾಸ್ತ್ರಸಾರ(ಸಂಪುಟ–೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧ –ಸಂ. ಡಾ. ಗುರುಪಾದ ಮರಿಗುದ್ದಿ

೧. ಹರಿಹರನ ರಗಳೆಗಳು, ಭಾಗ–೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನಾಥ ಪುರಾಣ ಸಂಗ್ರಹ
೨. ಶಬ್ದಮಣಿದರ್ಪಣ ಸಂಗ್ರಹ
೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ
೪. ಆದಯ್ಯನ ಲಘುಕೃತಿಗಳು
೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ
೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ
೨. ಸಿದ್ಧಮಂಕ ಚರಿತೆ
೩. ಗುಂಡಬಸವೇಶ್ವರ ಪುರಾಣ
೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ **–ಸಂ. ಡಾ. ಹನುಮಂತ ಮೇಲಿನಮನಿ**

೧. ಹೊಸಕುಮಾರರಾಮನ ಸಾಂಗತ್ಯ
೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ **–ಸಂ. ಡಾ. ಹನುಮಂತ ಮೇಲಿನಮನಿ**

೧. ಕೊಮಾರ ರಾಮಯ್ಯನ ಚರಿತ್ರೆ
೨. ಬಾಲರಾಮಯ್ಯನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಸಿರುಮಣ ನಾಯಕನ ಸಾಂಗತ್ಯ
೨. ಸಿರುಮನ ಚರಿತೆ
೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ
೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ –ಸಂ. ಡಾ. ಎಂ ಎಸ್. ಮದಭಾವಿ

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧
೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨
೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩
೪. ನಿರ್ಣಯ ಪುರಾಣ

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ –ಸಂ. ಡಾ. ಎಂ ಎಸ್. ಮದಭಾವಿ

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ
೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ
೩. ಮಡಿವಾಳಪ್ಪ ಸಾಸನೂರ ಬದುಕು–ಬರಹ

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ –ಸಂ. ಡಾ. ವಿ.ಎಸ್. ಮಾಳಿ

೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ –ಸಂ. ಡಾ. ಕೆ. ರವೀಂದ್ರನಾಥ

ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ –ಸಂ. ಡಾ. ಕೆ. ರವೀಂದ್ರನಾಥ

ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ-೩ –ಸಂ. ಡಾ. ಕೆ. ರವೀಂದ್ರನಾಥ
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ-೪ –ಸಂ. ಡಾ. ಕೆ. ರವೀಂದ್ರನಾಥ
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ-೫ –ಸಂ. ಡಾ. ಕೆ. ರವೀಂದ್ರನಾಥ
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ-೧ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಚಿತ್ರ –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ-೨ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಪತ್ರ–ವರದಿಗಳು –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ-೩ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಆಡಿಯೋ–ವಿಡಿಯೋ –ಡಾ. ವಿ.ಡಿ. ಐಹೊಳ್ಳಿ

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ-೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು–ಪುನರುಕ್ತಿಕಾರಣವಾಗಿ– ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ

ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು-ಅವು ಆಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ-ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು-ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು-ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ-ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ-ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ-ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು

ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ–ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು–ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ–ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ–ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ

ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ.ಎಂ.ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ–ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ–ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ (ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬುರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ–ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.

❖ ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.

❖ ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.

❖ ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.

❖ ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ

ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ಎಂ. ಎಸ್. ಮದಭಾವಿ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ಎಂ. ಎಸ್. ಮದಭಾವಿ

ಸಂಶೋಧಕರಾದ ಡಾ. ಎಂ.ಎಂ.ಕಲಬುರ್ಗಿ ಅವರು ಗ್ರಂಥ, ಕಡತ, ಶಾಸನ ಹೀಗೆ ವಿವಿಧ ಆಕರಗಳನ್ನು ಬಳಸಿಕೊಂಡು ನಿರಂತರ ಅಧ್ಯಯನ ಮಾಡಿಕೊಂಡು ಬಂದವರು. ಅವರ ಚಾರಿತ್ರಿಕ ದಾಖಲಾತಿ ಅಧ್ಯಯನದ ಫಲ, ಅವರು ಸಂಪಾದಿಸಿ ಪ್ರಕಟಿಸಿದ ಐತಿಹಾಸಿಕ ಕೃತಿಗಳು. ಇಲ್ಲಿ ಅವರು ಸಂಪಾದಿಸಿದ ಕಿತ್ತೂರ ಸಂಸ್ಥಾನ ಸಾಹಿತ್ಯ-೧ (ಸಂ-ಡಾ. ಎಂ.ಎಂ.ಕಲಬುರ್ಗಿ, ಡಾ. ಚೆನ್ನಕ್ಕ ಪಾವಟೆ) ಕಿತ್ತೂರ ಸಂಸ್ಥಾನ ಸಾಹಿತ್ಯ-೨ (ಸಂ-ಡಾ. ಎಂ.ಎಂ.ಕಲಬುರ್ಗಿ, ಡಾ. ಚೆನ್ನಕ್ಕ ಪಾವಟೆ, ಡಾ. ಅನ್ನಪೂರ್ಣ ಹತ್ತಿಮತ್ತೂರ) ಕಿತ್ತೂರ ಸಂಸ್ಥಾನ ಸಾಹಿತ್ಯ-೩ (ಸಂ-ಡಾ. ಎಂ.ಎಂ.ಕಲಬುರ್ಗಿ) ಈ ಕೃತಿಗಳು ಆ ಮನೆತನದ ಸಾಹಿತ್ಯಕ್ಕೆ ಸಂಬಂಧಿಸಿವೆ.

ಒಂದು ಕಾಲದಲ್ಲಿ ಸಂಸ್ಥಾನಗಳು ರಾಜಮನೆತನಗಳಂತೆ ವೈಭವೋಪೇತವಾಗಿ ಮೆರೆದಿದ್ದವು. ಅವುಗಳಲ್ಲಿ ಕಿತ್ತೂರ ಸಂಸ್ಥಾನವೂ ಒಂದು. ಕರ್ನಾಟಕ ಇತಿಹಾಸದಲ್ಲಿ ಆಂಗ್ಲರ ವಿರುದ್ಧದ ಯುದ್ಧದಿಂದಾಗಿ ಕಿತ್ತೂರ ಚೆನ್ನಮ್ಮ ಹೆಚ್ಚು ಪ್ರಸಿದ್ಧಳಾಗಿದ್ದಾಳೆ. ಅವಳ ಶುಚಿತ್ವ ಮತ್ತು ಸ್ವಾತಂತ್ರ್ಯ ಮೌಲ್ಯ ದುರಂತದಲ್ಲಿ ಕೊನೆಗೊಂಡವು. ಅದು ಜನಮಾನಸವನ್ನು ಕಲಕಿತು. ಹೀಗಾಗಿ ಶಿಷ್ಟ ಕವಿಗಳಿಗಿಂತ ಜನಪದ ಕವಿಗಳು ಅವಳ ಕುರಿತು ಹಾಡಿ ಹೊಗಳಿದರು. ಸಾಹಿತ್ಯ ರಚನೆ ಮಾಡಿದರು. ಅವೆಲ್ಲದರ ವ್ಯಾಪಕ ಸಂಗ್ರಹ ಕಾರ್ಯ ನಡೆಯಲಿಲ್ಲ. ಆ ಕೊರತೆಯನ್ನು ಮನಗಂಡ ಎಂ.ಎಂ.ಕಲಬುರ್ಗಿಯವರು ಕಿತ್ತೂರ ಆಸ್ಥಾನ ಸಾಹಿತ್ಯವನ್ನು ಮೂರು ಭಾಗಗಳಲ್ಲಿ ಸಂಪಾದಿಸಿ ಮಹದುಪಕಾರ ಮಾಡಿದ್ದಾರೆ. ಕಿತ್ತೂರ ದೇಸಾಯಿಯವರು ಪ್ರಜಾಹಿತ ಕಾರ್ಯಕ್ಕೆ ದೊಡ್ಡಕಾಣಿಕೆ ನೀಡಿದ್ದಾರೆ. ಆ ಕಾಲಘಟ್ಟದಲ್ಲಿ ಅವರು ಆಡಳಿತ, ಸಂಘಟನೆ, ಸಾಮ್ರಾಜ್ಯ ವಿಸ್ತಾರ, ಸಾಹಿತ್ಯ ಸೃಷ್ಟಿ, ನ್ಯಾಯದಾನ, ಸಂಗೀತ, ನೃತ್ಯ, ಉಂಬಳಿ ಇವುಗಳ ಮೂಲಕ ನಾಡಿನ ಸರ್ವತೋಮುಖದ ಅಭ್ಯುದಯವನ್ನು ಸಾಧಿಸುವುದು ಮುಖ್ಯವಾಗಿತ್ತು. ಇವುಗಳನ್ನು ಮುಂದಿನ ತಲೆಮಾರಿಗೆ ತಿಳಿಸುವಲ್ಲಿ ಶಿಷ್ಟಸಾಹಿತ್ಯ ಮತ್ತು ಜಾನಪದ ಸಾಹಿತ್ಯದೊಂದಿಗೆ, ಸಾಂಸ್ಕೃತಿಕ ಪರಂಪರೆಯ ಕೋಟೆ ಕೊತ್ತಲ, ಯುದ್ಧ ಸನ್ನಿವೇಶ, ತುಬಾಕಿಗಳು, ಪೋಷಾಕು ಮೊದಲಾದ ಹೋರಾಟದ ಸಾಧನಗಳು ನಮಗೆ ಮುಖ್ಯವಾಗುತ್ತವೆ.

ಭಾಗ – ೧

ಕಿತ್ತೂರ ಸಂಸ್ಥಾನ ಸಾಹಿತ್ಯ ಭಾಗ–೧: ಗದುಗಿನ ತೋಂಟದಾರ್ಯಮಠದ ಪೂಜ್ಯ ತೋಂಟದ ಸಿದ್ಧಲಿಂಗಮಹಾಸ್ವಾಮಿಗಳ ಪೀಠಾರೋಹಣ ರಜತಮಹೋತ್ಸವ ಸಂದರ್ಭದಲ್ಲಿ ಪ್ರಕಟವಾಗಿದೆ. ಇದರಲ್ಲಿ ಒಟ್ಟು ೨೩ ಪಠ್ಯಗಳಿದ್ದು, ಎರಡು ಭಾಗಗಳನ್ನಾಗಿ ಮಾಡಲಾಗಿದೆ. ಮೊದಲ ಭಾಗದಲ್ಲಿ 'ಮಲ್ಲೇಂದ್ರ ಭಕ್ತಿ ತರಂಗಿಣಿ,' ಮಲ್ಲೇಂದ್ರ ಪೂಜಾ ವಿಲಾಸ, ಮಲ್ಲೇಂದ್ರ ಪೂಜಾ ವಿಲಾಸ ತಾರಾವಳಿ, ಮಲ್ಲೇಂದ್ರ ಮಾನಸೋಲ್ಲಾಸ, ಮಲ್ಲೇಂದ್ರ ವಿಜಯ, ಗಣೇಶೋತ್ಸವ, ಕಿತ್ತೂರು ಮಲ್ಲಸರ್ಜನ ಪದಗಳು–ಹೀಗೆ ಏಳು ಕೃತಿಗಳು ಸೇರಿವೆ. ಮಲ್ಲೇಂದ್ರ ಭಕ್ತಿ ತರಂಗಿಣಿಯಲ್ಲಿ ಮಲ್ಲಸರ್ಜನ ಮಗ ಶಿವಲಿಂಗ ಸರ್ಜನ ಮದುವೆ ಸಂದರ್ಭದ ಚಿತ್ರವಿದೆ. ಆ ಸಂದರ್ಭದಲ್ಲಿ ಬಸವಪುರಾಣ ಪ್ರವಚನ ನಡೆಯುತ್ತಿದ್ದುದನ್ನು, ಬಂದ ಮಾಹೇಶ್ವರರಿಗೆ ಪ್ರಸಾದ–ಕಾಣಿಕೆ, ಮಹಿಳೆಯರಿಗೆ ಸೀರೆ, ಕುಪ್ಪಸ, ಮಕ್ಕಳಿಗೆ ಚಿತ್ರ ವಿಚಿತ್ರ ಬಟ್ಟೆ ಕೊಟ್ಟು ತಣಿಸಿ ಮಲ್ಲಸರ್ಜ ಬಸವೇಶೋಪಮನಾದುದನ್ನು ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ಗಣಾರಾಧನೆ ಏರ್ಪಡಿಸಿದುದನ್ನು ತಿಳಿಸುತ್ತದೆ. 'ಮಲ್ಲೇಂದ್ರ ಪೂಜಾ ವಿಲಾಸ'ದಲ್ಲಿ ಕಿತ್ತೂರ ಸಂಸ್ಥಾನ ಶಿವನಿಂದ ಸ್ಥಾಪಿತವಾಯಿತೆಂದು ಹೇಳುತ್ತ ಮುದಿ ಮಲ್ಲಸರ್ಜ–ರುದ್ರಸರ್ಜ–ವೀರಭದ್ರ–ಮಲ್ಲಸರ್ಜರ ವಂಶಾವಳಿ ನೀಡಲಾಗಿದೆ. ಮಲ್ಲಸರ್ಜನ ಹೆಂಡತಿ ರುದ್ರಾಂಬೆ ಉದರದಲ್ಲಿ ಶಿವಲಿಂಗಸರ್ಜ, ವೀರಸರ್ಜರು; ಚನ್ನಮ್ಮನ ಉದರದಲ್ಲಿ ರುದ್ರಸರ್ಜ ಉದಯಿಸಿದುದನ್ನು, ಮಲ್ಲಸರ್ಜ ಜಂಗಮಾರ್ಚನೆ ನೆರವೇರಿಸುತ್ತಿದ್ದುದನ್ನು ಹೇಳುತ್ತದೆ. 'ಮಲ್ಲೇಂದ್ರ ಪೂಜಾವಿಲಾಸ ತಾರಾವಳಿ'ಯಲ್ಲಿ ಕಿತ್ತೂರು ರಾಜಧಾನಿಯಲ್ಲಿ ಶ್ರಾವಣ ಮಾಸದಲ್ಲಿ ಜಂಗಮರ ಪಾದಪೂಜೆ ನೆರವೇರಿಸಿದ್ದನ್ನು ಉಲ್ಲೇಖಿಸಿದೆ. ಇಲ್ಲಿ ಅವನಿಗೆ ಶರ್ಮರಜಂಗ, ಬಹಾದ್ದೂರ ಬಿರುದಿರುವುದು ಗಮನಾರ್ಹ. ಕಾಶೀರಾಜನ 'ಮಲ್ಲೇಂದ್ರ ಮಾನಸೋಲ್ಲಾಸ'ದಲ್ಲಿ ಮಲ್ಲಸರ್ಜನನ್ನು ಬಸವೇಶ್ವರನ ಅವತಾರವೆಂದು ಚಿತ್ರಿಸಲಾಗಿದೆ. ಇವನ ಸಚಿವ ವೀರಸಂಗಪ್ಪ ಎಂಬುದು ತಿಳಿಯುತ್ತದೆ. ಶ್ರಾವಣ ಮಾಸದಲ್ಲಿ ಶಿವಪೂಜೆ ನೆರವೇರಿಸಿ ಗಣಾಧೀಶ್ವರರನ್ನು ಆನೆಯ ಮೇಲೆ ಕುಳ್ಳಿರಿಸಿ ಮೆರವಣಿಗೆ ಮಾಡಿಸಿದುದನ್ನು ತಿಳಿಸುತ್ತದೆ. 'ಮಲ್ಲೇಂದ್ರ ವಿಜಯ'ದಲ್ಲಿ ಟಿಪ್ಪು, ಚಿತ್ರದುರ್ಗ, ಧಾರವಾಡಗಳನ್ನು ಗೆದ್ದು ಕಿತ್ತೂರಿನ ಮೇಲೆ ದಾಳಿ ಮಾಡಿ ಮಲ್ಲೇಂದ್ರನನ್ನು ಸೆರೆಹಿಡಿದು ಶ್ರೀರಂಗಪಟ್ಟಣಕ್ಕೆ ಒಯ್ದುದನ್ನು, ಗಂಡನಿಗಾಗಿ ರುದ್ರಾಂಬೆ ವ್ರತ ಹಿಡಿದುದ್ದನ್ನು, ಮಲ್ಲೇಂದ್ರ ಏಳು ಸುತ್ತಿನ ಕೋಟೆ ದಾಟಿ, ೫೦೦ ಖಡ್ಗಧಾರಿಗಳನ್ನು ಸೋಲಿಸಿ, ಬೆನ್ನಟ್ಟಿದ ನಾಲ್ಕು ಸಾವಿರ ಸೈನ್ಯವನ್ನು ಲೆಕ್ಕಿಸದೇ ಕಿತ್ತೂರಿಗೆ ಬಂದು ಬಳಗವನ್ನು ಸೇರಿಕೊಂಡ ಕಥೆಯಿದೆ. ಗಣೇಶೋತ್ಸವದಲ್ಲಿ ಸಿದ್ಧಿವಿನಾಯಕನ ಪೂಜೆಯಿಂದ ಸರ್ವಸಮೃದ್ಧಿಯೆಂದು ತಿಳಿದು ಆಚರಿಸಿದುದನ್ನು ತಿಳಿಸುತ್ತದೆ. ಕೊನೆಯದಾದ ಕಿತ್ತೂರು ಮಲ್ಲಸರ್ಜನ ಪದಗಳು ಕೃತಿಯಲ್ಲಿ ೧೮ ಕನ್ನಡ ಪದ ೧೦ ಮರಾಠಿ ಪದಗಳಿವೆ. ಉಭಯ ಭಾಷಾ ಪ್ರವೀಣನಾದ ಕವಿ ಕಾಶೀರಾಜ ಮಲ್ಲೇಂದ್ರನ ಕುರಿತು ಶೃಂಗಾರನಿಷ್ಠ ಮತ್ತು ಭಕ್ತಿನಿಷ್ಠ ಹಾಡುಗಳನ್ನು ರಚಿಸಿದ್ದಾನೆ.

ಎರಡನೆಯ ಭಾಗ ಕಿತ್ತೂರಿನ ಕುರಿತ ಜಾನಪದ ಹಾಡು ಮತ್ತು ಲಾವಣಿಗಳನ್ನೊಳಗೊಂಡಿದೆ. ಈರಪ್ಪ ದೇಸಾಯಿ, ಕಿತ್ತೂರ ಅರಸರ ಕೋಲುಪದ, ಮಲ್ಲಸರ್ಜನ ಕಾವ್ಯ, ಕಿತ್ತೂರ ಮಲ್ಲಸರ್ಜನ ಲಾವಣಿ, ಸೂಳೆ ಸರ್ಜನರ ಪ್ರಣಯ, ಶಿವಲಿಂಗರುದ್ರಸರ್ಜ, ಕರಿಯಾತಿ ಕಾಳಗ, ಕಿತ್ತೂರ ಮಿಂಚಿನ ಕಾಳಗ, ವೀರರಾಣಿ ಚೆನ್ನವ್ವ, ಚೆನ್ನಮ್ಮರಾಣಿ, ಕಿತ್ತೂರಿನ

ಮುತ್ತಿಗೆ, ಚೆನ್ನಮ್ಮ ರಾಣಿಯ ಕೊನೆಯ ಕಾಳಗ, ಕಿತ್ತೂರ ರಾಣಿಯ ಅಂತ್ಯ, ಕಿತ್ತೂರ ಚನ್ನವ್ವನ ಸೊಸೆ, ಈರವ್ವನ ದುರಂತ ಮರಣ, ಕಿತ್ತೂರಿನ ಕೊನೆಯ ಕಾಳಗ ಹೀಗೆ ಹದಿನಾರು ಪದ್ಯಗಳು ಸೇರಿವೆ.

ಕಿತ್ತೂರ ಮಲ್ಲಸರ್ಜನ ತಂದೆ ಈರಪ್ಪ ದೇಸಾಯಿಯವರು ೩ ದಶಕಗಳಿಗಿಂತ ಹೆಚ್ಚು ಕಾಲ ಆಳಿ ಶೌರ್ಯ, ಸಾಹಸ, ಘನತೆ, ಗೌರವವನ್ನು ಉಳಿಸಿಕೊಂಡು ಬಂದುದನ್ನು ನಂತರ ಅವರನ್ನು ಸೆರೆ ಹಿಡಿದು ವಿಷಪ್ರಾಶನ ಮಾಡಿ ಮಿರಜದಲ್ಲಿ ಕೊಂದಿರುವ ಐತಿಹಾಸಿಕ ವಿಷಯ ಜಾನಪದ ನುಡಿಗಳಲ್ಲಿ ಬಂದಿದೆ. ಕಿತ್ತೂರ ಅರಸರ ಕೋಲ ಪದದಲ್ಲಿ–ಟಿಪ್ಪು ಸುಲ್ತಾನನು ಮಲ್ಲಸರ್ಜನನ್ನು ಸೆರೆಹಿಡಿದು ಅವನ ಊಟ ಮತ್ತು ನಿದ್ರೆಗೆ ಎರವಾದ ಪ್ರಸಂಗದೊಂದಿಗೆ ಮಲ್ಲಸರ್ಜನನ ಹೆಂಡಂದಿರಾದ ರುದ್ರವ್ವ, ಚೆನ್ನವ್ವರ ದುಃಖದ ಪ್ರಸ್ತಾಪ ಬಂದಿದೆ.

ಮಲ್ಲಸರ್ಜನ ಕಾವ್ಯದಲ್ಲಿ ದೇವೇಂದ್ರನಿಗೆ ಸಮನಾದ ಮಲ್ಲಸರ್ಜ ಪೇಶ್ವೆ ಬಾಜೀರಾಯನಿಗೆ ಗೌರವ ಸಲ್ಲಿಸಲು ಹೊರಟು ಮಗ ಬಾಪೂ ಸಾಹೇಬನಿಗೆ ರಾಜ್ಯದ ಕಡೆಗೆ ಗಮನ ಹರಿಸಲು ತಿಳಿಸಿ ಪರಿವಾರದವರನ್ನು ಸಮಾಧಾನ ಪಡಿಸಿ ಹೊಂಗಲದತ್ತ ಹೊರಡುತ್ತಾನೆ. ಅಲ್ಲಿ ಅವರಿಬ್ಬರ ಭೇಟಿ ಸಾಧ್ಯವಾಗದೇ ಚಾಡಿಯಿಂದ ಬಾಜೀರಾಯ ಮಲ್ಲೇಂದ್ರನನ್ನು ಸೆರೆಹಿಡಿಯುತ್ತಾನೆ. ಬಾಜೀರಾಯನನ್ನು ಕಾಣದೇ ಮಲ್ಲಸರ್ಜ ಕೃಶನಾಗುತ್ತಾನೆ. ಕೊನೆಗೆ ಬಹಳ ದಿನ ಉಳಿಯಲಿಕ್ಕಿಲ್ಲವೆಂದು ಬಾಜೀರಾಯ ಇವನನ್ನು ಬಿಡುಗಡೆ ಮಾಡುತ್ತಾನೆ. ಮಲ್ಲೇಂದ್ರ ಕಿತ್ತೂರಿಗೆ ಬಂದು ಪ್ರಾಣ ಬಿಡುತ್ತಾನೆ. ಆ ಸಂದರ್ಭದಲ್ಲಿ ಬಂಧು ಬಳಗದವರ ದುಃಖ ಮೇರೆ ಮೀರುತ್ತದೆ. ಅದರ ಚಿತ್ರ ಇಲ್ಲಿದೆ.

ಕಿತ್ತೂರ ಮಲಸರ್ಜನ ಲಾವಣಿಯ ಕರ್ತೃ ರುದ್ರಕವಿ. ಮಲ್ಲಸರ್ಜನು ತೀರಿಕೊಂಡ ನಂತರ ಚೆನ್ನಮ್ಮ ಬಾಪುಸಾಹೇಬನನ್ನು ಪಟ್ಟಕ್ಕೇರಿಸಿ ರಾಜ್ಯಭಾರವನ್ನು ಮುಂದುವರೆಸಿದಳು. ೭ ವರ್ಷ ಕಳೆದಮೇಲೆ ನಡುವಿನ ಬಾಬಾಸಾಹೇಬ ರೋಗದಿಂದ ಬಳಲಿ, ಚೆನ್ನವ್ವನ ಉದರಪುತ್ರ ಬಾಳಾಸಾಹೇಬನು, ಅದರಂತೆ ಹಿರಿಯಮಗ ಬಾಪುರಾಯನು ಮಡಿದರು. ವಾರಸುದಾರರು ಇಲ್ಲದ್ದನ್ನು ಗಮನಿಸಿದ ಬ್ರಿಟಿಷರು ನೀವು ಉಂಬಳಿ ಪಡೆದು ಆರಾಮವಾಗಿರಬಹುದೆಂದು ತಿಳಿಸುತ್ತಾರೆ. ಅದಕ್ಕೆ ಚೆನ್ನಮ್ಮ ಸಮ್ಮತಿಸುವುದಿಲ್ಲ. ಬ್ರಿಟಿಷರ ದಂಡು ಕಿತ್ತೂರನ್ನು ಮುತ್ತುತ್ತದೆ. ಕಿತ್ತೂರ ದಂಡಿನ ಮುಂದೆ ಅವರ ಆಟ ನಡೆಯಲಿಲ್ಲ. ಆಗ ಸುದ್ದಿ ಮುಂಬೈಗೆ ಕಳುಹಿಸಲು ಆಂಗ್ಲ ಸೈನ್ಯವು ಬೆಳಗಾವಿಗೆ ಬಂದಿಳಿದು ಕಿತ್ತೂರಿಗೆ ಧಾವಿಸಿ ಬಂದು ಕೋಟೆಯನ್ನು ಕೆಡವಿ ಅರಮನೆ ಪ್ರವೇಶಿಸುತ್ತದೆ. ಅತ್ತೆ ಚೆನ್ನಮ್ಮ, ಸೊಸೆ ವೀರಮ್ಮನನ್ನು ಹೊಂಗಲದಲ್ಲಿ ೬ ವರ್ಷ ಸೆರೆಯಲ್ಲಿ ಇಟ್ಟು ಸಂಪತ್ತನ್ನು ಬೆಳಗಾವಿಗೆ ಸಾಗಿಸುತ್ತಾರೆ. ಆಂಗ್ಲರನ್ನು ಕಿತ್ತೂರಿನಿಂದ ಓಡಿಸಲು ರಾಯಣ್ಣನು ಪ್ರತಿಜ್ಞೆ ಮಾಡುತ್ತಾನೆ. ಸೈನ್ಯ ಕೂಡಿಸಲು ಹೋರಾಟ ನಡೆಸುತ್ತಾನೆ. ಈ ಎಲ್ಲ ವಿವರಗಳು ಇಲ್ಲಿನ ಲಾವಣಿಯಲ್ಲಿದೆ.

ಸೂಳೆ–ಸರ್ಜರ ಪ್ರಣಯ, ರಾಜನ ಶುಚಿತ್ವವನ್ನು ಸಾರುತ್ತದೆ. ರುದ್ರಕವಿ ಕನಸಿನ ಮೂಲಕ ಅದರ ಚಿತ್ರಣವನ್ನು ನೀಡಿದ್ದಾನೆ. ಶಿವಲಿಂಗರುದ್ರ ಸರ್ಜ ಕೃತಿಯಲ್ಲಿ ಶಿವಲಿಂಗರುದ್ರ ಸರ್ಜನು ಪ್ರಜೆಗಳ ವಿನಂತಿಮೇರೆಗೆ ಬೇಟೆಯಾಡಲು ಹೋಗುತ್ತಾನೆ. ಅಲ್ಲಿ ಥ್ಯಾಕರೆ ಸಾಹೇಬನ ಭೇಟಿಯಾಗುತ್ತದೆ. ಶಿವಲಿಂಗರುದ್ರಸರ್ಜನಿಗೆ ನೀರಡಿಕೆ ನಿವಾರಣೆಯಾಗುವ ಔಷಧಕೊಡುವುದಾಗಿ ಹೇಳಿ ಥ್ಯಾಕರೆ,

ಹಾಲಿನಲ್ಲಿ ವಿಷ ಬೆರಸಿ ಕುಡಿಸುತ್ತಾನೆ. ಶಿವಲಿಂಗರುದ್ರ ಪ್ರಾಣ ಬಿಡುತ್ತಾನೆ. ಕಲ್ಮಠದಲ್ಲಿ ಅವನ ಸಮಾಧಿ ಮಾಡುತ್ತಾರೆ. ಅದರ ವಿವರ ಇಲ್ಲಿದೆ. ಕರಿಯಾತಿ ಕಾಳಗದಲ್ಲಿ ಚೆನ್ನಮ್ಮ ಸ್ವತಃ ಏರಿಹೋಗಿ ಅಲ್ಲಿ ಕರಿಯಾತಿ ಗ್ರಾಮದ ತುರುಕಾರರನ್ನು ಸದೆಬಡಿದು ರಾಮಯ್ಯನನ್ನು ಬಿಡಿಸಿಕೊಂಡು ಕಿತ್ತೂರಿಗೆ ಮರಳಿದ ಕಥೆ ಇದೆ.

ಕಿತ್ತೂರಲ್ಲಿ ಮಿಂಚಿನ ಕಾಳಗದಲ್ಲಿ ಚೆನ್ನಮ್ಮ ದತ್ತಕ ಮೊಮ್ಮಗನಿಗೆ ಪಟ್ಟಗಟ್ಟಿದ ಸುದ್ದಿ ಧಾರವಾಡಕ್ಕೆ ಮುಟ್ಟುತ್ತದೆ. ದಂಡಿನೊಂದಿಗೆ ಕಿತ್ತೂರ ಮೇಲೆ ದಾಳಿ ಮಾಡಿದ ಥ್ಯಾಕರೆಯನ್ನು ಚೆನ್ನಮ್ಮನ ಅಪ್ಪಣೆಯಂತೆ ಕಿತ್ತೂರಿನ ಸೈನಿಕರು ಕೊಂದು ಹಾಕಿದ ವಿವರವಿದೆ. ವೀರರಾಣಿ ಚೆನ್ನವ್ವನ ಕೃತಿಯಲ್ಲಿ ಥ್ಯಾಕರೆ ಕಿತ್ತೂರ ರಾಜ್ಯ ನಮ್ಮದೆಂದು ನಿನ್ನ ಗಂಡ ಓಲೆ ಬರೆದಿರುವನೆಂದು ಹೇಳಿದಾಗ ಇವನನ್ನು ಹೊರಗೆ ನೂಕಿರಿ ಎಂದು ಹೇಳಿ ಅವನ ಸಾವಿಗೆ ಕಾರಣವಾದ ಸಂಗತಿ ಇಲ್ಲಿದೆ. ಚೆನ್ನಮ್ಮ ರಾಣಿ ಕೃತಿಯಲ್ಲಿ ಚೆನ್ನಮ್ಮ ದರಬಾರ ನಡೆಸುತ್ತಿದ್ದುದನ್ನು ತಿಳಿದು ಥ್ಯಾಕರೆ ಡಂಗುರ ಸಾರಿ ದಂಡು ಸೇರಿಸುತ್ತಾನೆ. ಒಂದು ರಾತ್ರಿ "ಮಲಸರ್ಜನು ಕನಸಿನಲ್ಲಿ ಬಂದು ಗಂಡುಡಿಗೆ ಉಟ್ಟು ಯುದ್ಧ ಮಾಡು" ಎಂದು ಹೇಳಿದಂತಾಗುತ್ತದೆ. ಆಗ ಚೆನ್ನಮ್ಮ ತನ್ನ ಕಡೆಯ ಜನರಿಗೆ ಹೇಳಿ ಕಳುಹಿಸುತ್ತಾಳೆ. ಸ್ವತಃ ಗಂಡುವೇಷ ಧರಿಸಿ, ಖಡ್ಗ ಹಿಡಿದು, ಯುದ್ಧಕ್ಕೆ ಸಿದ್ಧಳಾಗುತ್ತಾಳೆ. ದಂಡು ಕೂಡಿಸಿ ಕುದುರೆ ಏರಿ ಕಾದಿ ಧಾರವಾಡದಲ್ಲಿ ಥ್ಯಾಕರೆ ಸಾಹೇಬನ ರುಂಡ ಕತ್ತರಿಸುತ್ತಾಳೆ. ಸಾಹೇಬನ ಎಳೆಯ ಮಕ್ಕಳನ್ನು ಕೊಲ್ಲಬೇಡಿ ಮಕ್ಕಳಂತೆ ಸಲಹುವುದು ಎಂದು ಅಪ್ಪಣೆ ನೀಡಿ ಮಾನವೀಯತೆ ಮೆರೆಯುತ್ತಾಳೆ. ಆ ವಿವರಗಳೆಲ್ಲ ಇಲ್ಲಿವೆ.

ಕಿತ್ತೂರಿನ ಮುತ್ತಿಗೆ (ಕರ್ತೃ ಹೆಬ್ಬಳ್ಳಿ ಬಸವ) ಥ್ಯಾಕರೆ ಮರಣದ ನಂತರ ನಡೆದ ಯುದ್ಧದ ವಸ್ತುವನ್ನೊಳಗೊಂಡ ಹಾಡು. ಚೆನ್ನಮ್ಮನ ಮೇಲಿನ ಸೇಡಿನಿಂದ ಕರ್ನಲ್ ಹಲ್ಲು ಮಸೆಯುತ್ತಿದ್ದ. ಆಗ ಮದನ ಬಾವಿ ಹತ್ತಿರ ಕಾಳಗ ಏರ್ಪಟ್ಟಿತು. ಚೆನ್ನಮ್ಮ ವಿವಿಧ ಗ್ರಾಮಗಳ ದಂಡು ಬರಲು ತಿಳಿಸಿದಳು. ೧೦ ಸಾವಿರ ದಂಡು ಬಂದಿತು. ಅದರ ವಿವರ ಇಲ್ಲಿದೆ. ಚೆನ್ನಮ್ಮ ರಾಣಿಯ ಕೊನೆಯ ಕಾಳಗದಲ್ಲಿ ಥ್ಯಾಕರೆ ಮರಣಾನಂತರ ಸ್ಟೀವನ್‌ಸನ್ ಮತ್ತು ಇಲಿಯಟ್ ಈ ಇಬ್ಬರು ಸರದಾರರು ಕೈಸೆರೆಯಾಗುತ್ತಾರೆ. ಈ ಸುದ್ದಿ ತಿಳಿದ ಕರ್ನಲ್ ಡಿಕೆನ್ ಕಿತ್ತೂರಿಗೆ ಮುತ್ತಿಗೆ ಹಾಕುತ್ತಾನೆ. ಕಿತ್ತೂರು ಮೋಸದಿಂದ ಸೋಲುತ್ತದೆ. ಚೆನ್ನಮ್ಮ ಕಣ್ಣೀರು ಹಾಕುತ್ತಿದ್ದ ಚಿತ್ರ ಇಲ್ಲಿದೆ. ಕಿತ್ತೂರ ರಾಣಿಯ ಅಂತ್ಯದಲ್ಲಿ ಆಂಗ್ಲ ಸೈನ್ಯ ಹಿಮ್ಮೆಟ್ಟತೊಡಗಿದಂತೆ ಕಂಡರೂ ಪಿತೂರಿ ಕಾರಣವಾಗಿ ಅವರು ಊರೊಳಗೆ ನುಗ್ಗಿ ೧೨ ಸಾವಿರ ಸೈನ್ಯವನ್ನು ಕಂಗೆಡಿಸಿ ಹಾಳು ಮಾಡಿದ ವಿವರಗಳು ಇಲ್ಲಿವೆ.

ಕಿತ್ತೂರ ಚೆನ್ನವ್ವನ ಸೊಸೆ–(ಕರ್ತೃ ಹೆಬ್ಬಳ್ಳಿ ಬಸವ)ಯುದ್ಧದ ನಂತರ ಬ್ರಿಟೀಷರು ಈರವ್ವಳನ್ನು ಹೊಂಗಲದಿಂದ ಧಾರವಾಡಕ್ಕೆ ಸಾಗಿಸಿದರು. ಅದೇ ಚಿಂತೆಯಲ್ಲಿ ಅವಳು ಸಂಗ್ರಾಣಿ ಬೇನೆಯಿಂದ ಪ್ರಾಣಬಿಟ್ಟಳು ಎಂಬ ಸಂಗತಿ ಈ ಕೃತಿಯಲ್ಲಿದೆ. ಈರವ್ವನ ದುರಂತ ಮರಣದಲ್ಲಿ –ಬೇಬರ ಸಾಹೇಬ ಅವಳಿಗೆ ಒಂದೊಂದೇ ವಿಷದ ಗುಳಿಗೆ ಕೊಡುತ್ತ ಹೋದ. ಹಾಲಿನಲ್ಲಿ ವಿಷಬೆರೆಸಿ ಕುಡಿಸಿದ್ದರಿಂದ ವಿಷ ಮೈಯೆಲ್ಲ ಆವರಿಸಿ ಧಾರವಾಡದಲ್ಲಿ ಅವಳು ತೀರಿಕೊಂಡ ಸಂಗತಿಯಿದೆ.

ಕಿತ್ತೂರಿನ ಕೊನೆಯ ಕಾಳಗ–(ಕರ್ತೃ ಚೌಬಾರಿ ಅಡಿವೆಪ್ಪಗೌಡ.) ಇದು ಸಂಗೊಳ್ಳಿ ರಾಯಣ್ಣನಿಗೆ ಸಂಬಂಧಿಸಿದೆ. ರಾಯಣ್ಣ ಅರಿವೆ ವ್ಯಾಪಾರದ ನೆಪದಲ್ಲಿ ದೇಶ ದೇಶ ತಿರುಗಿ ಜನರನ್ನು

ಸಂಘಟಿಸತೊಡಗಿದ್ದ. ಕುಲಕರ್ಣಿಗೆ ರಾಯಣ್ಣನ ವತನಿಕೆಯನ್ನು ಮರಳಿ ಪಡೆಯಬೇಕೆಂಬ ಆಸೆ. ರಾಯಣ್ಣ ತಾಯಿಯ ಹತ್ತಿರ ಬಂದು "ನನ್ನನ್ನು ಇನ್ನು ಮೇಲೆ ನೀನು ಮರೆಯಬೇಕು" ಸುರಪುರ ಮಹಾರಾಜನನ್ನು ಕಂಡು ಅವರ ಆದೇಶದಂತೆ ಹುಲಿಕಾಳಗ, ಶಸ್ತ್ರ ಮಲ್ಲಗಂಬಗಳಲ್ಲಿ ಗೆದ್ದು ಭರಮಣ್ಣನ ರುಂಡ ಕತ್ತರಿಸಿದ. ನಂತರ ಬೈಲಹೊಂಗಲಕ್ಕೆ ಹೋಗಿ ಚೆನ್ನಮ್ಮನನ್ನು ಕಂಡು ಭಾಷೆ ಕೊಟ್ಟು ಬ್ರಿಟಿಷರ ದಂಡನ್ನು ಹಲವು ಸಂದರ್ಭಗಳಲ್ಲಿ ಸಂಹಾರ ಮಾಡಿದ ವಿವರಗಳು ಇಲ್ಲಿವೆ.

ಒಂದನೆಯ ಭಾಗದಲ್ಲಿ ಕೆಲವು ವಿಷಯ ಪುನರಾವೃತ್ತಿಯಾಗಿದ್ದರೂ ಹೇಳುವ ಪರಿ ಭಿನ್ನವಾಗಿದೆ. ವಿಶೇಷವಾಗಿ ಮಲ್ಲೇಂದ್ರನು ಮಾಡುವ ಧಾರ್ಮಿಕ ಆಚರಣೆಗಳ ಬಗ್ಗೆ ಒತ್ತು ನೀಡಿದ್ದಾರೆ. ಎರಡನೆಯ ಭಾಗದಲ್ಲಿ ಕಿತ್ತೂರಿನ ರಾಜಕೀಯ ವ್ಯವಸ್ಥೆ ಹೋರಾಟದ ಪ್ರಸಂಗಗಳು ಎದ್ದು ಕಾಣುತ್ತವೆ. ಇಲ್ಲಿನ ಅಪಾರ ಜಾನಪದ ಸಾಮಗ್ರಿ ನಮಗೆ ಅನೇಕ ಚಾರಿತ್ರಿಕ ಸಂಗತಿಗಳನ್ನು ಒದಗಿಸಿಕೊಡುತ್ತದೆ. ವಿಶೇಷವಾಗಿ ಯುದ್ಧ ದುರಂತಗಳು ನಮ್ಮ ಮನ ಕಲಕುತ್ತವೆ. ಅನ್ಯ ಆಕರಗಳೊಂದಿಗೆ ತೌಲನಿಕವಾದ ಅಧ್ಯಯನ ನಡೆದರೆ ಇಲ್ಲಿನ ಅಂಶಗಳ ಸತ್ಯಾಸತ್ಯತೆ ಖಚಿತಪಡಿಸಲು ಸಾಧ್ಯವಾಗುತ್ತದೆ. ಅಂಥ ಅಧ್ಯಯನಕ್ಕೆ ಕಿತ್ತೂರು ಸಂಸ್ಥಾನ ಸಾಹಿತ್ಯ ಹಾದಿ ಮಾಡಿಕೊಟ್ಟಿದೆ. ಕಲಬುರ್ಗಿಯವರು ಇದನ್ನು ಸಂಪಾದಿಸುವ ಮೂಲಕ ಸಾಂಸ್ಕೃತಿಕ ಚಾರಿತ್ರ್ಯದ ಮೇಲೆ ಬೆಳಕು ಚೆಲ್ಲಿದ್ದಾರೆ. ಇವುಗಳಲ್ಲಿ ಕೆಲವು ಕೃತಿಗಳು ಈ ಹಿಂದೆ ಕೆಲವರಿಂದ ಪ್ರಕಟವಾಗಿದ್ದವು. ಇನ್ನೂ ಕೆಲವು ಹೊಸದಾಗಿ ಶೋಧಿಸಿದವು. ಇಲ್ಲಿ ಎಲ್ಲವನ್ನೂ ಕ್ರೋಡೀಕರಿಸಿ ಶುದ್ಧರೂಪದಲ್ಲಿ ಪ್ರಕಟಿಸಿ, ಅವುಗಳ ವಿಷಯ ಕುರಿತು ಮೌಲಿಕ ಪ್ರಸ್ತಾವನೆಯನ್ನು ಬರೆದು ಒಂದೆಡೆ ಕಿತ್ತೂರ ಸಂಸ್ಥಾನಕ್ಕೆ ಸಂಬಂಧಿಸಿದ ಸಾಹಿತ್ಯ ದೊರಕುವಂತೆ ಮಾಡಿದ ಕಲಬುರ್ಗಿ ಅವರು ಅಭಿನಂದನಾರ್ಹರೆನಿಸಿದ್ದಾರೆ.

ಭಾಗ – ೨

ಕಿತ್ತೂರ ಸಂಸ್ಥಾನ ಸಾಹಿತ್ಯ ಭಾಗ–೨ : ಇದೂ ಕೂಡ ತೋಂಟದಾರ್ಯ ಮಠದ ಲಿಂಗಾಯತ ಅಧ್ಯಯನ ಸಂಸ್ಥೆಯಿಂದ ಪ್ರಕಟವಾಗಿದೆ. ಇದರಲ್ಲಿ ೧೩೧ ಹಾಡುಗಳು ಸಂಗ್ರಹವಾಗಿವೆ. ಇದನ್ನು ಸಿದ್ಧಪಡಿಸಿದ ಶ್ರೀ ತಲ್ಲೂರು ರಾಯನಗೌಡರು ಈ ರಚನೆಗಳ ಕರ್ತೃ ಮುನಿಪುರದ ನೀಲಕಂಠಾರ್ಯರು ಎಂದು ದಾಖಲಿಸಿದ್ದಾರೆ. ಈ ಮುನಿಪುರ ಈಗಿನ ಬೆಳಗಾವಿ ಜಿಲ್ಲೆಯ ಮುನವಳ್ಳಿ ಎಂದು ತಿಳಿದುಬರುತ್ತದೆ. ಕವಿ ನೀಲಕಂಠಾರ್ಯನು ಮಲ್ಲಸರ್ಜನ ಸಮಕಾಲೀನನಾಗಿದ್ದು; (ಕ್ರಿ.ಶ.೧೮೦೩) ತನ್ನ ಮಗನ ಮದುವೆಗೆ ಶಿವಲಿಂಗರುದ್ರಸರ್ಜನಿಂದ ಆರ್ಥಿಕ ಸಹಾಯ ಪಡೆದುದನ್ನು ಉಲ್ಲೇಖಿಸಿದ್ದಾನೆ.

ಪ್ರಸ್ತುತ ಕೃತಿಯಲ್ಲಿ ಮುನವಳ್ಳಿ ನೀಲಕಂಠಾರ್ಯನ ೧೨೧, ಮುಚಖಂಡಿ ವೀರ ಮುದ್ರಿಕೆಯ ೧೦ ಹೀಗೆ ೧೩೧ ಹಾಡುಗಳಿವೆ. ರಾಜಭಕ್ತಿ, ದೈವಭಕ್ತಿಗಳನ್ನು ಕೇಂದ್ರವಾಗಿಟ್ಟುಕೊಂಡು ಬರೆದ ಪಾಂಡಿತ್ಯ ಪೂರ್ಣ ರಚನೆಗಳಿವು. ರಾಗ, ತಾಳಗಳ ಸೂಚನೆ ಪ್ರತಿ ಹಾಡಿನ ಮೇಲಿರುವುದರಿಂದ ಇದು ಓದುವ ಸಾಹಿತ್ಯವಲ್ಲ, ಹಾಡುವ ಸಾಹಿತ್ಯ, ಕೇಳುವ ಸಾಹಿತ್ಯವೆಂಬುದು ಸ್ಪಷ್ಟವಾಗುತ್ತದೆ. ಹಸ್ತಪ್ರತಿಯಲ್ಲಿಯೇ ಕಿತ್ತೂರ ದೇಸಾಯಿಯವರ ಪದಗಳು, ಸ್ತೋತ್ರಪದಗಳು, ಆರತಿಪದಗಳು ಎಂಬ ಉಪಶೀರ್ಷಿಕೆಗಳಿರುವುದು ಇದಕ್ಕೆ ಪ್ರಬಲ ಸಾಕ್ಷಿಯಾಗಿದೆ. ಮೂರು ವಹಿಗಳಲ್ಲಿ ಹರವಿದ ಇಲ್ಲಿನ ಹಾಡುಗಳು ಚಾರಿತ್ರಿಕ, ಸಾಂಸ್ಕೃತಿಕ ದೃಷ್ಟಿಯಿಂದ ನಮ್ಮ ಗಮನ ಸೆಳೆಯುತ್ತವೆ.

ಎರಡನೆಯ ಸಂಪುಟ ಧಾರ್ಮಿಕ ಆಚರಣೆ ಮತ್ತು ದೈವಭಕ್ತಿಯನ್ನು ಮುಖ್ಯ ವಿಷಯವನ್ನಾಗಿಟ್ಟುಕೊಂಡಿದೆ. ಇಲ್ಲಿನ ಹಾಡುಗಳಲ್ಲಿ ಮಲ್ಲಸರ್ಜ ಹೋಳಿ ಹಬ್ಬ ಆಚರಿಸುತ್ತಿದ್ದ. ರಾಜ ಬೀದಿಗಿಳಿದು ಅಧಿಕಾರಿಗಳು, ಮಕ್ಕಳು, ಪ್ರಜೆಗಳೊಂದಿಗೆ ಹೋಳಿ ಆಡುತ್ತಿದ್ದ. ಆಗ ಸಾಹಿತ್ಯ, ಸಂಗೀತ, ನೃತ್ಯ ಪ್ರದರ್ಶನಗಳು ಜರುಗುತ್ತಿದ್ದ ಸಂಗತಿಗಳಿವೆ. ಮಲ್ಲಸರ್ಜ ಬಸವಪುರಾಣ ಪ್ರವಚನ ಏರ್ಪಡಿಸುತ್ತಿದ್ದುದನ್ನು, ಶ್ರಾವಣಮಾಸದಲ್ಲಿ ಜಂಗಮ ಪಾದಪೂಜಾ ಕಾರ್ಯಕ್ರಮ ಕೈಗೊಳ್ಳುತ್ತಿದ್ದುದನ್ನು, ಈ ಸಂದರ್ಭದಲ್ಲಿ ಪ್ರಸಾದ, ವಸ್ತ್ರದಾನ ನಡೆಯುತ್ತಿದ್ದುದನ್ನು ವಿವರಿಸಲಾಗಿದೆ. ಇಲ್ಲಿನ ಹಾಡುಗಳ ಮತ್ತೊಂದು ವಿಶೇಷವೆಂದರೆ ಬೇರೆ ಬೇರೆ ಗ್ರಾಮಗಳ ಅಲ್ಲಿನ ದೇವತೆಗಳ ಮತ್ತು ಗುರುಗಳ ಸ್ತುತಿ ಇರುವುದು. ರಾಜನ ರೂಪ, ಲಾವಣ್ಯ, ಶೌರ್ಯಗಳೊಂದಿಗೆ ಆತನ ಧಾರ್ಮಿಕ ಬದುಕನ್ನು ಇಲ್ಲಿನ ಹಾಡುಗಳು ಕಟ್ಟಿಕೊಡುತ್ತವೆ. ಹೀಗಾಗಿ ಮಲ್ಲಸರ್ಜನನ್ನು "ಗಣವಿಸರವನುಣಿಸಿದಿ ವೃಷಭೇಂದ್ರನ ತೆರ ಮಲ್ಲಮಹೀಶ ವೃಶೇಷ" ಎಂದು ಕೀರ್ತಿಸಿ ಕಲ್ಯಾಣದ ಬಸವಣ್ಣನೊಂದಿಗೆ ಹೋಲಿಸಲಾಗಿದೆ. ರುದ್ರವ್ವ, ಚೆನ್ನವ್ವರ ಹೆಸರೂ ಇಲ್ಲಿ ಉಲ್ಲೇಖಿತವಾಗಿರುವುದು ಗಮನಾರ್ಹವಾಗಿದೆ. ಒಟ್ಟಿನಲ್ಲಿ ಇಲ್ಲಿನ ಹಾಡುಗಳ ವಸ್ತು-ವಿಷಯ ಕಿತ್ತೂರು ಸಂಸ್ಥಾನದ ಚರಿತ್ರೆಗೆ ಕೊಂಡಿಯಾಗಿ ನಿಲ್ಲುತ್ತವೆ. ಇದನ್ನು ಕಲಬುರ್ಗಿಯವರು ಸಮರ್ಥವಾಗಿ ಸಂಪಾದಿಸಿಕೊಟ್ಟಿದ್ದಾರೆ.

ಭಾಗ – ೩

ಕಿತ್ತೂರ ಸಂಸ್ಥಾನ ಸಾಹಿತ್ಯ-೩ : ಕಿತ್ತೂರು ಸಂಸ್ಥಾನ ಸಾಹಿತ್ಯ ಹೆಸರಿನ ಎರಡು ಸಂಪುಟಗಳ ಮುಂದುವರಿಕೆಯಾಗಿ ಮೂರನೆಯ ಸಂಪುಟ ಪ್ರಕಟವಾಗಿದೆ. ಇದು ಎರಡು ಲೇಖನಗಳನ್ನೊಳಗೊಂಡ ಸಂಪುಟ. 'ನಿರ್ಣಯ ಪುರಾಣ' ಹೆಸರಿನ ಪ್ರಾಚೀನ ಗ್ರಂಥದಲ್ಲಿ ಕಿತ್ತೂರ ಸಂಸ್ಥಾನ ಮತ್ತು ಅದರ ಸಮಕಾಲೀನ ಸಮಾಜಕ್ಕೆ ಸಂಬಂಧಪಟ್ಟ ವಿಷಯ ಹಾಗೂ ವಾಲ್ಟರ್ ಎಲಿಯಟ್‌ರವರ ಲೇಖನದ ಕನ್ನಡ ಅನುವಾದ "ದಕ್ಷಿಣ ಮರಾಠಾ ದೇಶ"ಕ್ಕೆ ಸೇರಿದ ಕಿತ್ತೂರಿನಲ್ಲಿ ೧೮೨೪ರ ಸಪ್ಟಂಬರ ಮತ್ತು ಡಿಸೆಂಬರ ನಡುವೆ ಜರುಗಿದ ಬಂಡಾಯಕ್ಕೆ ಸಂಬಂಧಿಸಿದ ಘಟನಾವಳಿಗಳು ಈ ಸಂಪುಟದಲ್ಲಿ ಎಡೆಪಡೆದಿವೆ.

ನಿರ್ಣಯ ಪುರಾಣ :

ಇದರಲ್ಲಿ ಧಾರ್ಮಿಕ ತತ್ವ-ಆಚರಣೆಗಳ ವಿಷಯವಿದೆ. ಜಂಗಮದಾಸೋಹ ಸೂಚಿಸುವ ಎರಡು ಉಲ್ಲೇಖಗಳಲ್ಲಿ-ಶಿವಲಿಂಗರುದ್ರ ಸರ್ಜನಿಗಿಂತ ಮಲ್ಲಸರ್ಜನ ಮನೋಧರ್ಮ ಭಿನ್ನವೂ ಮತ್ತು ಉದಾತ್ತವೂ ಇದ್ದಿತ್ತೆಂದು ತಿಳಿಯುತ್ತದೆ.

ಶಿವಲಿಂಗರುದ್ರಸರ್ಜ ಶುಭಕಾರ್ಯ ಪ್ರಾರಂಭಿಸುವ ಸಂದರ್ಭದಲ್ಲಿ ಪಂಚಾಂಗವನ್ನು ಕೇಳುತ್ತಿದ್ದನು. ಈತ ಮನೆಯಲ್ಲಿ ಚಿಕ್ಕಮ್ಮ, ಚೆನ್ನಮ್ಮ, ಹೆಂಡತಿ ವೀರಮ್ಮ ಇದ್ದರೂ ದಾಸಿ ಗೆಜ್ಜಿಮಹಾಂತಮ್ಮನಿಂದ ಊಟ ನೀಡಿಸಿಕೊಳ್ಳುತ್ತಿದ್ದ ವಿಕ್ಷಿಪ್ತ ನಡೆಯನ್ನು ಉಲ್ಲೇಖಿಸಲಾಗಿದೆ. ಜೊತೆಗೆ ಆತ ಮತಾಂಧನಾಗಿದ್ದ ಎಂಬ ಧ್ವನಿಯೂ ಈ ಕೃತಿಯಲ್ಲಿದೆ. ಗೆಜ್ಜಿ ಮಹಾಂತವ್ವ ಶಿವಲಿಂಗರುದ್ರಸರ್ಜನಿಗೆ ಆಪ್ತ ಎನಿಸಿದ್ದಳು. ಚೆನ್ನಮ್ಮ ಬೇರೆ ಮನೆಯಲ್ಲಿ ವಾಸಿಸುವ ದುಸ್ಥಿತಿ ಅನುಭವಿಸಿದಳು ಎಂದು ಹೇಳಲಾಗಿದೆ.

ಶಿವಲಿಂಗರುದ್ರಸರ್ಜನ ಮರಣ, ವೀರಮ್ಮನ ವೈಧವ್ಯ, ಚೆನ್ನಮ್ಮನ ಆಡಳಿತ, ದತ್ತಕ ವಿಷಯ, ಚೆನ್ನಮ್ಮನ ಸೋಲು, ಗೆಜ್ಜಿ ಮಹಾಂತವ್ವನ ಕುಹಕತನ ಮತ್ತು ಕುಟಿಲತೆ ಸವಾಯಿ ಮಲ್ಲಸರ್ಜನನೆಂಬ ಹುಡುಗನು ಕಿತ್ತೂರ ಸಂಸ್ಥಾನದ ಅಧಿಪತಿಯಲ್ಲ ಎಂಬ ಹೇಳಿಕೆಯೊಂದಿಗೆ ಸರಕಾರ ಖರ್ಚಿಗೆ ಹಣ ನೀಡುವುದು. ಹಾಳು ಬಿದ್ದಿರುವ ಕೋಟೆ ಪುನರುಜ್ಜೀವನಗೊಳಿಸುವುದು ಮೊದಲಾದ ಸಂಗತಿಗಳು ಇವೆ. ಹಿಂದೆ ಪೆಂಡಾರೆಯವರು ಸಂಗಮೇಶ್ವರನ ಆಭರಣಗಳನ್ನು ಕದ್ದಿರುವದು, ಈಗಲೂ ಕೂಡಾ ಇದು ದಾಳಿಯ ಘಟನೆ ಎಂದು ಜನ ಮಾತನಾಡಿಕೊಳ್ಳುತ್ತಿದ್ದುದನ್ನು ವಿವರಿಸಲಾಗಿದೆ. ಈಗಲೂ ಸಂಗಮೇಶ್ವರ ದೇವಾಲಯದ ಕಳಸವನ್ನು ಬಾಗಲಕೋಟ ತಹಶೀಲದಾರ ಕಛೇರಿಯ ಭಂಡಾರದಲ್ಲಿ ಸುರಕ್ಷಿತವಾಗಿದ್ದು ಜಾತ್ರೆಯ ಸಂದರ್ಭದಲ್ಲಿ ಮಾತ್ರ ತರುತ್ತಾರೆ. ಇದು ಕಿತ್ತೂರ ಸಂಸ್ಥಾನ ಮತ್ತು ಸಂಗಮೇಶ್ವರ ದೇವಸ್ಥಾನದ ಅವಿನಾಭಾವ ಸಂಬಂಧವನ್ನು ಸೂಚಿಸುತ್ತಿದ್ದು ಪೆಂಡಾರೆಯವರ ದಾಳಿಯ ಬಳಿಕ ಈ ಉಪಕ್ರಮ ಆರಂಭವಾದುದನ್ನು ಕಲಬುರ್ಗಿಯವರು ಸರಿಯಾಗಿ ಊಹಿಸಿದ್ದಾರೆ.

ನಿರ್ಣಯ ಪುರಾಣದ ಹಸ್ತಪ್ರತಿ ತುಂಬ ತ್ರುಟಿತವಾಗಿದ್ದು, ದೊರೆತಷ್ಟು ಭಾಗವಾದರೂ ಉಳಿದುಕೊಳ್ಳಲಿ ಎಂದು ಈ ಸಂಪುಟದಲ್ಲಿ ಅದನ್ನು ಅಳವಡಿಸಲಾಗಿದೆ. ಈ ಕುರಿತು ಡಾ. ಕಲಬುರ್ಗಿಯವರು ಬರೆದಿದ್ದ ಬಿಡಿ ಲೇಖನಗಳನ್ನು ಪ್ರಸ್ತಾವನೆ ರೂಪದಲ್ಲಿ ಈ ಕೃತಿಗೆ ಆರಂಭದಲ್ಲಿ ಜೋಡಿಸಲಾಗಿದೆ.

ಇಂಗ್ಲಿಷಿನಲ್ಲಿ ವಾಲ್ಟರ್ ಎಲಿಯಟ್ ಬರೆದ ಲೇಖನ ಕನ್ನಡದಲ್ಲಿ ಅನುವಾದಗೊಂಡಿದೆ. ಈತ ಥ್ಯಾಕರೆ ಕೈಕೆಳಗೆ ಅಧಿಕಾರಿಯಾಗಿದ್ದವ. ಇನ್ನೋರ್ವ ಅಧಿಕಾರಿ ಸ್ಟಿವನ್‌ಸನ್ ಕಿತ್ತೂರ ಕಾಳಗ ಸಂದರ್ಭದಲ್ಲಿ ಕಿತ್ತೂರಲ್ಲಿ ಎರಡು ಯುದ್ಧಗಳನ್ನು ಕಂಡವನು. ಇವನು ಕಂದಾಯ ಇಲಾಖೆಯ ಅಧಿಕಾರಿಯಾಗಿದ್ದರೂ, ಶಿಕ್ಷಣ, ಇತಿಹಾಸದ ಬಗ್ಗೆ ಕಾಳಜಿವಹಿಸಿದವ. ಕನ್ನಡ ಶಾಲೆಗಳನ್ನು ತೆರೆಯಬೇಕೆಂದು ಹೇಳಿದವ. ಈತ ಸ್ವಂತ ಹಣದಿಂದಲೆ ಶಿಕ್ಷಕರಿಗೆ ಸಂಬಳ ನೀಡಿದ್ದಾನೆ ಎಂಬ ಉಲ್ಲೇಖ ಗಮನಾರ್ಹವಾಗಿದೆ. ಇತಿಹಾಸದ ಬಗ್ಗೆ ಅಪಾರ ಆಸಕ್ತಿ ಹೊಂದಿದ ಈತ ೧೩೦೦ ಶಾಸನಗಳನ್ನು ಸಂಗ್ರಹಿಸಿ ಅದರಲ್ಲಿ ೫೯೫ಳನ್ನು ಆರಿಸಿಕೊಂಡು ಕರ್ನಾಟಕ ದೇಶ ಇನ್‌ಸ್ಕ್ರಿಪ್ಸನ್ ಹೆಸರಿನ ಸಂಪುಟ ಸಿದ್ಧಪಡಿಸಿದ್ದಾನೆ. ಇಂಗ್ಲೆಂಡಿನ ಬ್ರಿಟಿಷ ಗ್ರಂಥಾಲಯದಿಂದ ತಂದಿದ್ದ ಈ ಸಂಪುಟವನ್ನು ಡಾ. ಕಲಬುರ್ಗಿಯವರ ಯೋಚನೆಯಂತೆ ಡಾ. ಸಿ.ಆರ್.ಯರವಿನತೆಲಿಮಠ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಇಲ್ಲಿ ಅತಿಯಾದ ವರ್ಣನೆ, ಪ್ರಶಂಸೆ, ಬಹುಪರಾಕ ಯಾವುದೂ ಇಲ್ಲ. ಚಾರಿತ್ರಿಕ ಅಂಶಗಳನ್ನು ಆಂಗ್ಲ ಭಾಷೆಯಲ್ಲಿ ಹಿಡಿದಿಟ್ಟರೂ ಅನುವಾದದ ಮೂಲಕ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ತಿಳಿಯಲು ಸಾಧ್ಯವಾಗಿರುತ್ತದೆ. ಈ ಕೃತಿಯೂ ತೋಂಟದಾರ್ಯಮಠದಿಂದಲೇ ಪ್ರಕಟವಾಗಿದೆ.

***

'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಅಡಿಯಲ್ಲಿ ಈ ಮೇಲ್ಕಾಣಿಸಿದ ಕಿತ್ತೂರ ಸಂಸ್ಥಾನ ಸಾಹಿತ್ಯ ಭಾಗ-೧, ೨ ಮತ್ತು ೩ರ ಸಂಪಾದನೆಯನ್ನು ಅತ್ಯಂತ ಅಭಿಮಾನದಿಂದ ಮಾಡಿದ್ದೇನೆಂಬ ಸಂತೃಪ್ತಿಯ ಭಾವ ನನ್ನಲ್ಲಿದೆ. ಇಂತಹ ಹೊಣೆಯನ್ನು ಹೊರಿಸಿದ

ಈ ಯೋಜನೆಯ ಗೌರವಾಧ್ಯಕ್ಷರು ಮತ್ತು ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರಿಗೆ, ಈ ಯೋಜನೆಯ ಅಧ್ಯಕ್ಷರು ಮತ್ತು ಸಂಸ್ಥೆಯ ಪ್ರಧಾನಕಾರ್ಯದರ್ಶಿಗಳಾದ ಸನ್ಮಾನ್ಯ ಶ್ರೀ ಜಿ.ಕೆ.ಪಾಟೀಲ ಅವರಿಗೆ, ಪ್ರಧಾನ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಸಮಿತಿಯ ಸದಸ್ಯರಿಗೆ, ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಸಹಕರಿಸಿದ ಡಾ. ವಿ.ಡಿ.ಐಹೊಳ್ಳಿ, ಡಾ. ಹನುಮಂತ ಮೇಲಿನಮನಿ ಅವರಿಗೆ ಗೌರವಪೂರ್ವಕ ವಂದನೆಗಳು.

❖❖

*

ಪರಿವಿಡಿ

ಕಿತ್ತೂರ ಸಂಸ್ಥಾನ ಸಾಹಿತ್ಯ

[ಭಾಗ : ಒಂದು]

ಸಂಪಾದಕರು
ಡಾ. ಎಂ. ಎಂ. ಕಲಬುರ್ಗಿ
ಡಾ. ಚೆನ್ನಕ್ಕ ಪಾವಟೆ

೧೯೯೯

ವೀರಶೈವ ಅಧ್ಯಯನಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ
ಡಂಬಳ-ಗದಗ

*

ಪ್ರಸ್ತಾವನೆ

ಉತ್ತರ ಕರ್ನಾಟಕದಲ್ಲಿ ಚೆನ್ನಮ್ಮನ "ಕಿತ್ತೂರು ಯುದ್ಧ", ದಕ್ಷಿಣ ಕರ್ನಾಟಕದಲ್ಲಿ ಟಿಪ್ಪುವಿನ "ಮೈಸೂರು ಯುದ್ಧ"ಗಳು ಆಂಗ್ಲರ ವಿರುದ್ಧ ಕನ್ನಡಿಗರು ಕೈಗೆತ್ತಿಕೊಂಡ ಎರಡು ಮುಖ್ಯ ಸಮರ ಸಂದರ್ಭಗಳಾಗಿವೆ. "ಸ್ವಾತಂತ್ರ್ಯ"ವೆಂಬ ಜೀವನಮೌಲ್ಯವನ್ನು ಕೇಂದ್ರವಾಗಿಟ್ಟುಕೊಂಡ ಇವು, ಭೌತಿಕವಾಗಿ ಸೋಲು ಎನಿಸಿದರೂ ತಾತ್ವಿಕವಾಗಿ ಗೆಲವು ಎನಿಸಿವೆ– ಎಂದೇ ಹೇಳಬೇಕು. ಇವುಗಳಲ್ಲಿ ಸತ್ತವನು ಥ್ಯಾಕರೆಯೆಂಬ ಆಂಗ್ಲಪುರುಷ, ಹೋರಾಡಿದವಳು ಚೆನ್ನಮ್ಮನೆಂಬ ಭಾರತೀಯ ಮಹಿಳೆ– ಎಂಬ ಕಾರಣವಾಗಿ, ಕಿತ್ತೂರು ಯುದ್ಧ ಹೆಚ್ಚು ಪ್ರಸಿದ್ಧಿ ಪಡೆದಿದೆ.

ಸಾಮಾನ್ಯವಾಗಿ ಪ್ರಾಚೀನಕಾಲದಲ್ಲಿ ಜನರನ್ನು ಪ್ರಭಾವಿಸುತ್ತಿದ್ದುವು, ರಾಜಕೀಯ ಮತ್ತು ಧಾರ್ಮಿಕ ಘಟನೆಗಳು. ತಕ್ಷಣ ಸಾಂಸ್ಕೃತಿಕ ಮಹತ್ವ ಪಡೆದುಕೊಳ್ಳುತ್ತಲಿದ್ದ ಈ ಘಟನೆಗಳಿಗೆ ಸಾಮಾನ್ಯರೂ ಅಸಾಮಾನ್ಯರೂ ತೀವ್ರವಾಗಿ ಸ್ಪಂದಿಸುತ್ತಿದ್ದರು. ಹೀಗಾಗಿ ಈ ಮೌಲ್ಯಗಳ ಸ್ಮಾರಕವೆಂಬಂತೆ ದೇವಾಲಯ ಸೃಷ್ಟಿ–ಸಾಹಿತ್ಯ ಸೃಷ್ಟಿಗಳು ಜರುಗಿ, ಅವು ಉದ್ದಕ್ಕೂ ಜನಮನವನ್ನು ಆಳುತ್ತಿದ್ದವು.

ಕರ್ನಾಟಕದ ರಾಜಕೀಯ ಪರಂಪರೆಯಲ್ಲಿ ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ವಿಜಯನಗರ ಮೊದಲಾದ ಮಹಾರಾಜರೂ, ಮೈಸೂರು, ಕೆಳದಿ ಮೊದಲಾದ ರಾಜರೂ ಬೆಳಗಿದ್ದಾರೆ. ಇವರಲ್ಲಿ ಅಖಂಡ ಕರ್ನಾಟಕದ ಮೇಲೆ ದೊಡ್ಡ ಪ್ರಭಾವ ಬೀರಿದವರೆಂದರೆ, ೧೪ನೆಯ ಶತಮಾನದ ಕುಮಾರರಾಮ ಮತ್ತು ೧೯ನೆಯ ಶತಮಾನದ ಕಿತ್ತೂರು ಚೆನ್ನಮ್ಮ, ಶುಚಿತ್ವ, ಸ್ವಾತಂತ್ರ್ಯಗಳೆಂಬ ಮೌಲ್ಯಗಳನ್ನು ಎತ್ತಿಹಿಡಿದು ದುರಂತದಲ್ಲಿ ಕೊನೆಗೊಂಡ ಈ ವ್ಯಕ್ತಿಗಳ ಆದರ್ಶ, ಕನ್ನಡಿಗರ ಮನಸ್ಸನ್ನು ಆಳವಾಗಿ ಕಲಕಿತು. ಹೀಗಾಗಿ ಇವರನ್ನು, ಇವರ ಮನೆತನಗಳನ್ನುಕುರಿತು ಶಿಷ್ಟಕವಿಗಳು, ಇವರಿಗಿಂತ ಹೆಚ್ಚು ಜಾನಪದ ಕವಿಗಳು ಸಾಹಿತ್ಯರಚನೆ ಮಾಡಿದರು.

ಕಿತ್ತೂರ ಸಂಸ್ಥಾನ ಸಾಹಿತ್ಯ :

ಟಿಪ್ಪು ಸುಲ್ತಾನನ ಚರಿತ್ರೆ ಮೈಸೂರು ರಾಜಮನೆತನದೊಂದಿಗೆ ಹೆಣೆದುಕೊಂಡಿರುವುದರಿಂದ, ಆ ಮನೆತನದ ಅಭ್ಯಾಸದ ಭಾಗವಾಗಿ ಅವನ ಅಭ್ಯಾಸವೂ ನಡೆಯಿತು. ಮೈಸೂರು ಅರಸೊತ್ತಿಗೆ ಭಾರತ ಸ್ವಾತಂತ್ರ್ಯದವರೆಗೂ ಉಳಿದು ಬಂದುದರಿಂದ, ಆಧುನಿಕ ಅಧ್ಯಯನಕ್ಕೂ ಅದು ತೆರೆದುಕೊಂಡಿತು. ದುರ್ದೈವದ ಸಂಗತಿಯೆಂದರೆ, ಈ ಎರಡೂ ಅವಕಾಶಗಳಿಂದ ವಂಚಿತವಾದ

ಕಾರಣ ಕಿತ್ತೂರು ಸಂಸ್ಥಾನದ ಅಭ್ಯಾಸ ನಡೆಯಲೇ ಇಲ್ಲ. ಇದರ ಒಟ್ಟು ಆಕರಸಾಮಗ್ರಿಯಲ್ಲಿ ಇಂಗ್ಲಿಷ್ ಸಾಮಗ್ರಿ ಇಂಗ್ಲೆಂಡಿನಲ್ಲಿ ಉಳಿದರೆ, ಮರಾಠಿ ಸಾಮಗ್ರಿ ಪುಣೆಯಲ್ಲಿ ಉಳಿಯಿತು. ಕನ್ನಡ ಸಾಮಗ್ರಿಯ ವ್ಯಾಪಕ ಸಂಗ್ರಹಕಾರ್ಯ ನಡೆಯಲೇ ಇಲ್ಲ.

ಇಂಥ ಸಂದರ್ಭದಲ್ಲಿ ಶ್ರೀ ದೊಡ್ಡ ಭಾವೆಪ್ಪ ಮೂಗಿ, ತಲ್ಲೂರ ರಾಯನಗೌಡ, ಕಲ್ಮೇಶ್ವರ ಶೆಟ್ಟರು ಮೊದಲಾದವರ ಪ್ರಯತ್ನದಿಂದಾಗಿ ಬೈಲಹೊಂಗಲದಲ್ಲಿ "ಕಿತ್ತೂರು ಚೆನ್ನಮ್ಮರಾಣಿ ಇತಿಹಾಸ ಮಂಡಲ" ಹೆಸರಿನ ಸಂಸ್ಥೆ ಹುಟ್ಟಿಕೊಂಡಿತು. ಇದರ ಪ್ರಾರಂಭೋತ್ಸವ ೨೩.೬.೧೯೪೬ ರಂದು ಗದುಗಿನ ಶ್ರೀ ಬಸರೀಗಿಡದ ವೀರಪ್ಪ ಅವರಿಂದ ಜರುಗಿತು. ಶ್ರೀ ಹಾಲಬಾವಿ ವೀರಭದ್ರಪ್ಪ, ಎಂ. ಪಿ. ವಾಲಿ, ಶಿ.ಶಿ. ಬಸವನಾಳ, ನಂದೀಮಠ, ಪದ್ಮಾವತಿ ಅಂಗಡಿ, ಸರಸ್ವತಿದೇವಿ ಗೌಡರ, ಫ.ಗು.ಹಳಕಟ್ಟಿ, ಚೆನ್ನಬಸವಸ್ವಾಮಿಗಳು ಕಲ್ಮಠ ಮೊದಲಾದವರ ಬೆಂಬಲದಲ್ಲಿ ಇದು ರೂಪಗೊಂಡಿತು. ಜಾನಪದ ಹಾಡು, ಕಾಗದ ಪತ್ರ, ತಾಮ್ರಪಟ, ತಾಳೆಗರಿ, ರಾಜಪೋಷಾಕು ಇತ್ಯಾದಿಗಳನ್ನು ಸಂಗ್ರಹಿಸಿದುದಲ್ಲದೆ ವಾಚನಾಲಯ, ಗ್ರಂಥಾಲಯ ಮೊದಲಾದವುಗಳನ್ನು ಸ್ಥಾಪಿಸಿದ ಈ ಸಂಸ್ಥೆ, ಕೆಲವು ಗ್ರಂಥಗಳನ್ನೂ ಹೀಗೆ ಪ್ರಕಟಿಸಿದೆ :

೧. ಕಿತ್ತೂರ ಬಂಡಾಯ–೧೯೪೭ (ಪುಟ ೧೪೦)

೩೮ ಲೇಖನ– ಹಾಡುಗಳು, ೨೭ ಭಾವಚಿತ್ರಗಳು ಇದರಲ್ಲಿವೆ, ಇದಕ್ಕೆ "ಎರಡು ಮಾತು" ತಲ್ಲೂರ ರಾಯನಗೌಡರು ಬರೆದಿದ್ದಾರೆ,

೨. ಫಾರಸಿ ಕಾಗದ ಪತ್ರಗಳು–೧೯೪೮ (ಪುಟ ೪೮)

೬ ಭಾವಚಿತ್ರಗಳನ್ನೊಳಗೊಂಡ ಇದರ ಸಂಪಾದಕರು ದೊಡ್ಡಭಾವೆಪ್ಪ ಮೂಗಿ.

೩. ಮಲ್ಲಸರ್ಜ ಕಾವ್ಯ–೧೯೪೮

೧೦ ಭಾವಚಿತ್ರಗಳನ್ನೊಳಗೊಂಡ ಈ ಕಾವ್ಯದ ಸಂಪಾದಕರು ತಲ್ಲೂರ ರಾಯನಗೌಡರು.

೪. ಕಿತ್ತೂರ ರಾಜ್ಯಾದಾಯ

ಇದರ ಸಂಪಾದಕರು ದೊಡ್ಡಭಾವೆಪ್ಪ ಮೂಗಿ.

ಹೀಗೆ "ಕಿತ್ತೂರ ಚೆನ್ನಮ್ಮರಾಣಿ ಇತಿಹಾಸ ಮಂಡಲ"ದ ಆಶ್ರಯದಲ್ಲಿ ಮೇಲಿನ ೪ ಗ್ರಂಥಗಳು ಪ್ರಕಟವಾದರೆ, ಇದೇ ಬೈಲಹೊಂಗಲದ "ರುದ್ರಗಡ ಪ್ರಕಾಶನ"ದ ಆಶ್ರಯದಲ್ಲಿ ೧೨ ಜಾನಪದ ಹಾಡುಗಳನ್ನೊಳಗೊಂಡ "ಕಿತ್ತೂರ ಕಾಳಗ" (೧೯೫೯) ಹೆಸರಿನ ಕೃತಿ ಹೊರಬಂದಿದೆ. ಇದರ ಸಂಪಾದಕರು ದೊಡ್ಡಭಾವೆಪ್ಪ ಮೂಗಿ.

ಹೀಗೆ ಈ ಎರಡೂ ಪ್ರಕಾಶನಗಳು ೫ ಗ್ರಂಥಗಳನ್ನು ಪ್ರಕಟಿಸಿದ್ದು, ಇವುಗಳಲ್ಲಿ "ಫಾರಸಿ ಕಾಗದ ಪತ್ರಗಳು" ಮತ್ತು "ಕಿತ್ತೂರು ರಾಜ್ಯಾದಾಯ" ಕೃತಿಗಳನ್ನು ಬಿಟ್ಟರೆ ಉಳಿಯುವ ೩ ಕೃತಿಗಳಲ್ಲಿ "ಕಿತ್ತೂರ ಬಂಡಾಯ" ದಲ್ಲಿ ಕೆಲವು ಜಾನಪದ ಮತ್ತು ಶಿಷ್ಟಪದ ಹಾಡುಗಳಿವೆ. "ಕಿತ್ತೂರ ಕಾಳಗ"ದಲ್ಲಿ ಕೇವಲ ೧೨ ಜಾನಪದ ಹಾಡುಗಳಿವೆ. ತಲ್ಲೂರ ರಾಯನಗೌಡರು

ಪ್ರಕಟಿಸಿದ "ಮಲ್ಲಸರ್ಜ ಕಾವ್ಯ" ಒಂದು ದೀರ್ಘ ಜಾನಪದ ಗೀತವಾಗಿದ್ದು, ಡಾ. ಸುಂಕಾಪುರ ಅವರು ಇದನ್ನು "ಕಿತ್ತೂರ ದುಂದುಮೆ" ಹೆಸರಿನಿಂದ ಪ್ರಕಟಿಸಿದ್ದಾರೆ. ಈ ೨. ಕೃತಿಗಳನ್ನು ಹೊರತುಪಡಿಸಿ, ಇತ್ತೀಚೆ ಶ್ರೀ ಕ್ಯಾತನಹಳ್ಳಿ ರಾಮಣ್ಣ ಅವರು"ಕಿತ್ತೂರ ಚೆನ್ನವ್ವನ ಸೊಸಿ" ಪದವನ್ನು, ಡಾ. ವೀರಣ್ಣ ರಾಜೂರ ಅವರು "ಮಲ್ಲೇಂದ್ರ ಪೂಜಾವಿಲಾಸ ತಾರಾವಳಿ" ಕೃತಿಯನ್ನು ಬೆಳಕಿಗೆ ತಂದಿದ್ದಾರೆ. ಇದು ಈವರೆಗೆ ಬೆಳಕಿಗೆ ಬಂದ ಕಿತ್ತೂರು ಸಂಸ್ಥಾನವನ್ನು ಕುರಿತ ಹಳೆಯ ಸಾಹಿತ್ಯ.

II

ಈ ಶತಮಾನದ ಪೂರ್ವಾರ್ಧದಲ್ಲಿ ಗಣ್ಯ ಶಿಕ್ಷಕರೆನಿಸಿದ್ದ ಶ್ರೀ ವೀರಪ್ಪ ವೀರಭದ್ರಪ್ಪ ನಾಗಶೆಟ್ಟಿ ಮಾಸ್ತರ ಅವರು ಸಾಹಿತ್ಯಪ್ರಿಯರು. ಇವರ ಪುಸ್ತಕ ಪ್ರೀತಿ ಅಗಾಧವಾದುದು. ತಮ್ಮ ಅಭ್ಯಾಸಕ್ಕಾಗಿ ಇವರು ೧೯೨೪ರಿಂದ ೧೯೫೦ ರ ಮಧ್ಯೆ ಸ್ವಹಸ್ತಾಕ್ಷರದಿಂದ ಬರೆದುಕೊಂಡಿದ್ದ ಈ ಕೆಳಗಿನ ೫ ಹಸ್ತಪ್ರತಿಗಳು ನಮಗೆ ಈ ಸಂಪುಟ ರಚನೆಗೆ ಪ್ರೇರಣೆ ನೀಡಿದವು.

೧. ಕಿತ್ತೂರ ಮಲ್ಲಸರ್ಜನ ಪದಗಳೂ ಮಲ್ಲೇಂದ್ರ ಮಾನಸೋಲ್ಲಾಸದ ಆರಂಭದ ಭಾಗವೂ

೨. ಮಲ್ಲೇಂದ್ರ ಭಕ್ತತರಂಗಿಣಿ ಮತ್ತು ಗಣೇಶೋತ್ಸವ

೩. ಮಲ್ಲೇಂದ್ರ ಪೂಜಾವಿಲಾಸ

೪. ಮಲ್ಲೇಂದ್ರ ವಿಜಯ

೫. ಕಿತ್ತೂರ ಮಲ್ಲಸರ್ಜನ ಲಾವಣಿ

ಈ ೫ ಹಸ್ತಪ್ರತಿಗಳಲ್ಲಿ ೭ ಕೃತಿಗಳಿದ್ದು, ಇವುಗಳನ್ನೂ ಮೇಲೆ ಹೇಳಿದ ದೊಡ್ಡಭಾವೆಪ್ಪ ಮೂಗಿ, ತಲ್ಲೂರ ರಾಯನಗೌಡರು, ಕ್ಯಾತನಹಳ್ಳಿ ರಾಮಣ್ಣ, ವೀರಣ್ಣ ರಾಜೂರ ಪ್ರಕಟಿಸಿದ ಸಾಹಿತ್ಯವನ್ನೂ, ಬಳಸಿಕೊಂಡು ರೂಪಿಸಿದ ಈ ಸಂಪುಟದ ಒಟ್ಟು ಸ್ವರೂಪ ಹೀಗಿದೆ :

ಕಾವ್ಯ/ ಹಾಡು/ಲಾವಣಿ	ಆಕರ
೧. ಮಲ್ಲೇಂದ್ರ ಭಕ್ತಿತರಂಗಿಣಿ	–ಶ್ರೀ ನಾಗಶೆಟ್ಟಿ ಮಾಸ್ತರ ಹಸ್ತಪ್ರತಿ
೨. ಮಲ್ಲೇಂದ್ರ ಪೂಜಾವಿಲಾಸ	–ಶ್ರೀ ನಾಗಶೆಟ್ಟಿ ಮಾಸ್ತರ ಹಸ್ತಪ್ರತಿ
೩. ಮಲ್ಲೇಂದ್ರ ಪೂಜಾವಿಲಾಸ ತಾರಾವಳಿ	– ಡಾ. ವೀರಣ್ಣ ರಾಜೂರ ಅವರಿಂದ ಪ್ರಕಟಿತ.
೪. ಮಲ್ಲೇಂದ್ರ ಮಾನಸೋಲ್ಲಾಸ	–ಶ್ರೀ ನಾಗಶೆಟ್ಟಿ ಮಾಸ್ತರ ಹಸ್ತಪ್ರತಿ. (ಇದರ ೭ ಪದ್ಯಗಳು ಮಾತ್ರ "ಕಿತ್ತೂರ ಬಂಡಾಯ" ಕೃತಿಯಲ್ಲಿ ಪ್ರಕಟವಾಗಿವೆ. ಕರ್ತೃ "ಕಾಶಿರಾಜ ಕವಿ"* ಎಂದು ಸೂಚಿಸಿದ್ದಾರೆ).

---

* ಇಲ್ಲಿಯ ೪ ಮತ್ತು ೭ನೆಯ ಕೃತಿಗಳು ಕ್ರಮವಾಗಿ ಕಾಶಿರಾಜ ಕವಿ ಮತ್ತು ಅಮೃತೇಶ ಕವಿಯೆಂದು ಹೇಳಲಾಗಿದೆ. ಆದರೆ ಇವೆರಡೂ ಹೆಸರುಗಳು ಒಬ್ಬನನ್ನೇ ಸೂಚಿಸುತ್ತಿದ್ದು, ಅವನು ಅಣ್ಣಿಗೇರಿಯ ಅಮೃತೇಶನ ಭಕ್ತಕಾಶಿರಾಜ ಕವಿಯೆಂದು ಕಾಣುತ್ತದೆ.ಪುಟ ೯೨ರ ಗದ್ಯ ನೋಡಿರಿ.

೫. ಮಲ್ಲೇಂದ್ರ ವಿಜಯ	– ಶ್ರೀ ನಾಗಶೆಟ್ಟಿ ಮಾಸ್ತರ ಹಸ್ತಪ್ರತಿ.
೬. ಗಣೇಶೋತ್ಸವ	–ಶ್ರೀ ನಾಗಶೆಟ್ಟಿ ಮಾಸ್ತರ ಹಸ್ತಪ್ರತಿ.
೭. ಕಿತ್ತೂರು ಮಲ್ಲಸರ್ಜನ ಪದಗಳು	– ಶ್ರೀ ನಾಗಶೆಟ್ಟಿ ಮಾಸ್ತರ ಹಸ್ತಪ್ರತಿ. (ಇಲ್ಲಿಯ "ರಾಜೇಂದ್ರಾ ರಾಜ್ಯ ಧುರಂಧರಾ..." ಎಂದು ಆರಂಭವಾಗುವ ಒಂದು ಪದ "ಕಿತ್ತೂರ ಬಂಡಾಯ" ಕೃತಿಯಲ್ಲಿ ಪ್ರಕಟವಾಗಿದೆ. ಇದರ ಕರ್ತೃ "ಅಮೃತೇಶ ಕವಿ" ಎಂದು ಸೂಚಿಸಿದ್ದಾರೆ).

ಭಾಗ–೨

೧. ವೀರಪ್ಪ ದೇಸಾಯಿ	–ಕಿತ್ತೂರ ಕಾಳಗ.
೨. ಕಿತ್ತೂರು ಅರಸರ ಕೋಲುಪದ	–ಕಿತ್ತೂರ ಬಂಡಾಯ ಮತ್ತು ಕಿತ್ತೂರ ಕಾಳಗ.("ಕಿತ್ತೂರ ಕಾಳಗ"ದಲ್ಲಿ "ದೊರೆ ಮಲ್ಲಸರ್ಜ" ಎಂದು ಶೀರ್ಷಿಕೆಯಿದೆ).
೩. ಮಲ್ಲಸರ್ಜನ ಕಾವ್ಯ	–ಶ್ರೀ ತಲ್ಲೂರ ರಾಯನಗೌಡರು "ಮಲ್ಲಸರ್ಜನಕಾವ್ಯ" ಎಂಬ ಶೀರ್ಷಿಕೆಯಿಂದ, ಡಾ. ಸುಂಕಾಪುರ ಅವರು "ಕಿತ್ತೂರ ದುಂದುಮೆ" ಶೀರ್ಷಿಕೆಯಿಂದ ಇದನ್ನು ಪ್ರಕಟಿಸಿದ್ದಾರೆ.
೪. ಕಿತ್ತೂರ ಮಲ್ಲಸರ್ಜನ ಲಾವಣಿ	– ಶ್ರೀ ನಾಗಶೆಟ್ಟಿ ಮಾಸ್ತರ ಹಸ್ತಪ್ರತಿ.("ಕಿತ್ತೂರ ಬಂಡಾಯ" ಕೃತಿಯಲ್ಲಿ ಮಾತ್ರ ಕಿತ್ತೂರ ಗೀತೆ, ಕಿತ್ತೂರ ಸಿರಿಸಂಪತ್ತು ಎಂಬ ಶೀರ್ಷಿಕೆಗಳ ಕೆಳಗೆ ಸ್ವಲ್ಪ ಭಾಗವನ್ನು ಪ್ರಕಟಿಸಿದ್ದಾರೆ. ಇದರ ಕರ್ತೃ ರುದ್ರಕವಿ ಎಂದು ಸೂಚಿಸಿದ್ದಾರೆ).
೫. ಸೂಳೆ– ಸರ್ಜರ ಪ್ರಣಯ	– "ಕಿತ್ತೂರ ಬಂಡಾಯ"ದಲ್ಲಿ ಮೂರು ಪುಟಗಳಷ್ಟು ಮಾತ್ರ ಪ್ರಕಟವಾಗಿದ್ದು, ಕರ್ತೃ ರುದ್ರ ಕವಿ ಎಂದು ಸೂಚಿಸಿದ್ದಾರೆ.
೬. ಶಿವಲಿಂಗರುದ್ರಸರ್ಜ	– ಕಿತ್ತೂರ ಕಾಳಗ.
೭. ಕರಿಯಾತಿ ಕಾಳಗ	– ಕಿತ್ತೂರ ಕಾಳಗ.
೮. ಕಿತ್ತೂರ ಮಿಂಚಿನ ಕಾಳಗ	– ಕಿತ್ತೂರ ಬಂಡಾಯ
೯. ವೀರರಾಣಿ ಚೆನ್ನಮ್ಮ	– ಜೀವನ ಜೋಕಾಲಿ

೧೦. ಚೆನ್ನಮ್ಮ ರಾಣಿ	– ಕಿತ್ತೂರ ಕಾಳಗ.
೧೧. ಕಿತ್ತೂರಿನ ಮುತ್ತಿಗೆ	– ಕಿತ್ತೂರ ಕಾಳಗ.
೧೨. ಚೆನ್ನಮ್ಮ ರಾಣಿಯ ಕೊನೆಯ ಕಾಳಗ	– ಕಿತ್ತೂರ ಕಾಳಗ
೧೩. ಕಿತ್ತೂರ್‌ರಾಣಿಯ ಅಂತ್ಯ	– ಕಿತ್ತೂರ ಕಾಳಗ
೧೪. ಕಿತ್ತೂರ ಚೆನ್ನಮ್ಮನ ಸೊಸೆ	– ಐದು ಐತಿಹಾಸಿಕ ಲಾವಣಿಗಳು
೧೫. ಈರವ್ವನ ದುರಂತ ಮರಣ	– ಕಿತ್ತೂರ ಬಂಡಾಯ.
೧೬. ಕಿತ್ತೂರಿನ ಕೊನೆಯ ಕಾಳಗ	– ಕಿತ್ತೂರ ಕಾಳಗ.

ಹೀಗೆ ಈ ಎರಡೂ ಭಾಗಗಳು ಸೇರಿ ೨೩ ಪಠ್ಯಗಳನ್ನು ಇಲ್ಲಿ ಸಮಾವೇಶಗೊಳಿಸಲಾಗಿದ್ದು, ಪ್ರಧಾನವಾಗಿ ಮೊದಲಿನ ಭಾಗ ಶಿಷ್ಟ ರಚನೆ, ಎರಡನೆಯ ಭಾಗ ಜಾನಪದ ರಚನೆಯೆಂದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ.

III

ಈ ೨೩ ಪಠ್ಯಗಳಲ್ಲಿ ಕೆಲವು ಪ್ರಥಮ ಸಲ ಪ್ರಕಟವಾಗುತ್ತಲಿವೆ. ಕೆಲವು ಈ ಮೊದಲು ಪ್ರಕಟವಾಗಿದ್ದರೂ ಹೆಚ್ಚು ಪ್ರಚಾರಕ್ಕೆ ಬಂದಿಲ್ಲ. ಹೀಗಾಗಿ ಇವುಗಳ ಸಾರವನ್ನು ಇಲ್ಲಿ ಕೊಡುವುದು ಉಚಿತವೆನಿಸುತ್ತದೆ.

೧. ಮಲ್ಲೇಂದ್ರ ಭಕ್ತಿತರಂಗಿಣಿ : (ಕರ್ತೃ– ಮುನವಳ್ಳಿ ನೀಲಕಂಠಾರ್ಯ)

ವೀರಭದ್ರ ಬಹದ್ದೂರ್ ದೇಸಾಯಿಯವರ ಪುತ್ರ ಮಲ್ಲಸರ್ಜ. ಇವನ ರಾಣಿ ರುದ್ರಾಂಬೆ. ಇವರ ಒಬ್ಬ ಮಗ (ಶಿವಲಿಂಗ)ರುದ್ರಸರ್ಜ. ಇನ್ನೊಬ್ಬ ಮಗ ವೀರ(ಭದ್ರ)ಸರ್ಜ. ಶಿವಲಿಂಗಸರ್ಜನ ಮದುವೆ ಜರುಗಿತು. ವೀರಸಂಗತಾತ ಹೆಸರಿನ ಸಚಿವನ ನೇತೃತ್ವದಲ್ಲಿ ಬಸವಪುರಾಣ ಪ್ರವಚನವನ್ನು ವ್ಯವಸ್ಥೆಗೊಳಿಸಲಾಯಿತು. ಬಳಿಕ ಧಾರವಾಡದ ಟೀಕಿನ ವೃಷಲಿಂಗಾರ್ಯರಿಂದ, ಶಾಲಿವಾಹನ ಶಕ ೧೭೫೫ರ ರುಧಿರೋದ್ಗಾರಿ ಸಂವತ್ಸರದ ಮಾರ್ಗಶೀರ್ಷ ಬಹುಳ ಚತುರ್ದಶಿಯ ಸೋಮವಾರ (ವಿಧುವಾರ) ದಂದು ಕಿತ್ತೂರು ಅರಮನೆಯಲ್ಲಿ ಭೀಮಕವಿಯ ಬಸವಪುರಾಣದ ಪ್ರವಚನದ ಆರಂಭವಾಯಿತು. ನಾಲ್ಕೂವರೆ ತಿಂಗಳವರೆಗೆ ಬಡವರಿಗೆ ಪ್ರಸಾದ ವಿತರಣೆ, ಜಂಗಮರಿಗೆ ಸತ್ಕಾರ ಇತ್ಯಾದಿಗಳು ಮುನ್ನಡೆದವು. ರುಧಿರೋದ್ಗಾರಿ ಸಂವತ್ಸರದ ಚೈತ್ರಮಾಸ ಶುಕ್ಲ ದಶಮಿ ಗುರುವಾರದಂದು ಹೊಟ್ಟೆಮಠದ ಕೊಟ್ಟೂರಾರ್ಯರನ್ನು ಬರಮಾಡಿಕೊಂಡು ಪಾದಪೂಜೆಮಾಡಿ, ಆರೇಳು ಸಾವಿರ ಮಾಹೇಶ್ವರರನ್ನು ಪ್ರಸಾದ–ಕಾಣಿಕೆಗಳಿಂದ, ಮಹಿಳೆಯರನ್ನು ಸೀರೆ–ಕುಪ್ಪಸಗಳಿಂದ, ಮಕ್ಕಳನ್ನು ಚಿತ್ರ ವಿಚಿತ್ರ ಬಟ್ಟೆಗಳಿಂದ ತಣಿಸಿ "ಬಸವೇಶೋಪಮ"ನಾಗಿ ಮಲ್ಲಸರ್ಜ ಶೋಭಿಸಿದ. ಚೈತ್ರಮಾಸದ ಶುಕ್ಲ (ಕೃಷ್ಣ?) ಪಕ್ಷ ಚತುರ್ದಶಿ ಗುರುವಾರ (ಜೈವಾತೃಕವಾರ)ದಂದು ಬಸವಪುರಾಣ ಪ್ರವಚನ ಸಮಾರಂಭ ಅಂತಿಮವಾಗಿ ಮುಗಿಯಿತು. ಸೋಮವಾರ ಬಸವಪುರಾಣದ ಮೆರವಣಿಗೆ ವೈಭವದಿಂದ ಜರುಗಿತು. ಗುರುಸಿದ್ಧೇಶ್ವರ ವಾಸವಾಗಿರುವ ಕಾರಣ ಗುರುವಾರಪೇಟೆ ಎಂಬ

ಹೆಸರು ಹೊತ್ತ ಬೀದಿಗೆ ಬಂದು, ಗುರುವಿಗೆ ಮಲ್ಲಸರ್ಜ ನಮಸ್ಕಾರ ಸಲ್ಲಿಸಿದ. ಬುಧವಾರದಂದು ಬುಧರನ್ನು ತಣಿಸಿದ. ಟೀಕಿನ ವೃಷಲಿಂಗಾರ್ಯರಿಂದ ವಾಚಿಸಲ್ಪಟ್ಟು, ಮಡಿವಾಳಶಾಸ್ತ್ರಿಗಳಿಂದ ವ್ಯಾಖ್ಯಾನಿಸಲ್ಪಟ್ಟ ಬಸವಪುರಾಣ ಪ್ರವಚನ ಸಮಾರಂಭ ಮುಕ್ತಾಯಗೊಂಡಿತು. ದುರದುಂಡೇಶ್ವರ ಕ್ಷೇತ್ರ, ಗುರುಸಿದ್ಧೇಶ್ವರ ಕ್ಷೇತ್ರ, ಹೂಂಡದ ಬಸವೇಶ್ವರ ಕ್ಷೇತ್ರ, ನಂದಿಹಳ್ಳಿಯ ನಂದೀಶಕ್ಷೇತ್ರ, ಬೆಳವಡಿ ವೀರೇಶನ ಕ್ಷೇತ್ರ, ಕಾದರವಳ್ಳಿಯ ಶಿವಕ್ಷೇತ್ರ, ತೇರದಾಳ, ಇಂಗಳೇಶ್ವರದ ಸಂಗಮ, ಬಾಗೇವಾಡಿ, ಎಡೂರ ವೀರಭದ್ರ ಕ್ಷೇತ್ರ, ಗೋಕರ್ಣ, ಹಂಪಿಯ ವಿರೂಪಾಕ್ಷ ಕ್ಷೇತ್ರ, ನಂಜನಗೂಡಿನ ನಂಜುಂಡೇಶ್ವರ ಕ್ಷೇತ್ರ, ಶ್ರೀಶೈಲ ಕ್ಷೇತ್ರಗಳಲ್ಲಿ ಮಲ್ಲಸರ್ಜ ಗಣಾರಾಧನೆ ಏರ್ಪಡಿಸಿದ.

೨. ಮಲ್ಲೇಂದ್ರ ಪೂಜಾವಿಲಾಸ : (ಕರ್ತೃ – ಮುನವಳ್ಳಿ ನೀಲಕಂಠಾರ್ಯ)

ಜಂಬೂದ್ವೀಪ ಮಧ್ಯದ ಕುಂತಳದೇಶದಲ್ಲಿ ಕಿತ್ತೂರು ಗ್ರಾಮ ಒಪ್ಪುತ್ತಿದೆ. ಕಲ್ಯಾಣಪಟ್ಟಣದಲ್ಲಿ ಜನಕಲ್ಯಾಣಕಾರ್ಯ ಕೈಕೊಂಡ ಶರಣರು ಬಿಜ್ಜಳನ ಸೈನ್ಯದಿಂದ ಅಟ್ಟಿಸಿಕೊಂಡು ಬರುವ ಮಾರ್ಗದಲ್ಲಿ ನಂದೀಹಳ್ಳಿ, ರಣಗಟ್ಟಿ, ಉಳುವಿಗಳೊಂದಿಗೆ ಕಿತ್ತೂರನ್ನೂ ಶಿವ ಸ್ಥಾಪಿಸಿದ. ಇಲ್ಲಿಯ ಅರಸು ಮುದಿಮಲ್ಲಸರ್ಜ, ಇವನ ಮಗ ರುದ್ರಸರ್ಜ, ಇವನ ಮಗ ವೀರಭದ್ರ, ಇವನ ಮಗ ಮಲ್ಲಸರ್ಜ. ಇವನ ಹೆಂಡತಿ ರುದ್ರಾಂಬೆಯ ಉದರದಲ್ಲಿ ಶಿವಲಿಂಗ(ರುದ್ರ)ಸರ್ಜ, ವೀರ(ಭದ್ರ)ಸರ್ಜರೂ, ಚೆನ್ನಮ್ಮನ ಉದರದಲ್ಲಿ ರುದ್ರಸರ್ಜ(ಶಿವಬಸವರಾಜ?)ನೂ ಉದಯಿಸಿದರು. ಈ ಮಲ್ಲಸರ್ಜನ ಜಂಗಮಾರ್ಚನೆಯ ವರ್ಣನೆ ಹರಿಹರ, ಪದ್ಮರಸ, ರಾಘವ, ಮಲುಹಣ, ನಿಜಗುಣ, ಷಡಕ್ಷರರುಗಳಿಗೆ ಮಾತ್ರ ಸಾಧ್ಯ.

ಶ್ರಾವಣಮಾಸದಲ್ಲಿ ದೇಶಿಕರನ್ನು ಬರಮಾಡಿಕೊಂಡು, ವೀರಸಂಗತಾತನೆಂಬ ಸಚಿವನ ಮೇಲ್ವಿಚಾರಣೆಯಲ್ಲಿ, ಮಡಿವಾಳಶಾಸ್ತ್ರಿಗಳ ನೇತೃತ್ವದಲ್ಲಿ ಪಾದಪೂಜೆ ಮಡುತ್ತಿದ್ದನು. ಫಲ, ಪತ್ರ, ಪುಷ್ಪ, ಧೂಪ, ದೀಪ, ಮಂತ್ರ, ಕೀರ್ತನೆ, ನೈವೇದ್ಯಗಳಿಂದ ಈ ಪೂಜೆ ಜರುಗುತ್ತಿದ್ದಿತು. ೧೪ ಕರ್ಯಾತಗಳಲ್ಲಿರುವ ೩೬೦ ಹಳ್ಳಿಗಳ ಪ್ರಜೆಗಳನ್ನು ಈ ಪೂಜೆಗೆ ಬರಮಾಡಿಕೊಳ್ಳುತ್ತಿದ್ದನು. ದೇಶಿಕರನ್ನು ಗಜಮಸ್ತಕದಲ್ಲಿ ಕುಳ್ಳಿರಿಸಿ ಮೆರೆಸುತ್ತಿದ್ದನು. ಗುರುವಾರದಂದು ಗುರುವಾರಪೇಟೆಯಲ್ಲಿರುವ ಗುರುಸಿದ್ಧೇಶ್ವರನ ಸ್ಥಾನಕ್ಕೆ ಬಂದು ವಂದಿಸಿ, ಆಶೀರ್ವಾದ ಪಡೆದು ಅರಮನೆಗೆ ಮರಳುವನು. ಶಾಲಿವಾಹನ ಶಕ ೧೭೨೬ನೆಯ ಕ್ರೋಧನ ಸಂವತ್ಸರ ಭಾದ್ರಪದ ಶುದ್ಧ ಚೌತಿಯ ಬುಧವಾರ (ಪ್ರಾಲೇಯಾಂಶುತನಯ ವಾರ)ದಲ್ಲಿ ಈ ಕೃತಿ ಸಮಾಪ್ತವಾಯಿತು.

೩. ಮಲ್ಲೇಂದ್ರ ಪೂಜಾವಿಲಾಸ ತಾರಾವಳಿ : (ಕರ್ತೃ – ಮುನವಳ್ಳಿ ನೀಲಕಂಠಾರ್ಯ)

ಪಂಪಾಪುರದ ಪಶ್ಚಿಮಕ್ಕಿರುವ, ಕಲ್ಯಾಣಪಟ್ಟಣಕ್ಕೆ ಮಿಗಿಲಾಗಿರುವ ಕಿತ್ತೂರು ರಾಜಧಾನಿಯಲ್ಲಿ ಶಮಶರಜಂಗ ಬಹದ್ದೂರ ಮಲ್ಲಸರ್ಜನು ಶ್ರಾವಣಮಾಸದಲ್ಲಿ ಜಂಗಮರ ಪಾದಪೂಜೆಯನ್ನು ನೆರವೇರಿಸುವನು. ನೀಲಾಂಬೆಯ ಮಗಳಾದ ರಾಣಿ ರುದ್ರಾಂಬೆ, ಗುರು ಮಡಿವಾಳಯ್ಯಗಳ ಸೂಚನೆಯಂತೆ ಮಂತ್ರಿ ವೀರಸಂಗಪ್ಪನ ನೆರವಿನಿಂದ ಈ ಪೂಜೆಯನ್ನು ಪೂರೈಸಿ, ಗುರುವಾರಪೇಟೆಯಲ್ಲಿರುವ ಚೌಕಿಯ ಗುರುಸಿದ್ಧೇಶ್ವರನ ದರ್ಶನವನ್ನು ಗುರುವಾರದಂದು ಪಡೆದು ಶೋಭಿಸುತ್ತಿದ್ದನು.

೪. ಮಲ್ಲೇಂದ್ರ ಮಾನಸೋಲ್ಲಾಸ : (ಕರ್ತೃ– ಅಣ್ಣಿಗೆರೆ ಅಮೃತೇಶನ ಭಕ್ತ ಕಾಶೀರಾಜ)

ಕೈಲಾಸದ ನಂದಿಯ ಅವತಾರವೆನಿಸಿದ ಬಸವೇಶ್ವರನೇ ಶಿವನ ಆಜ್ಞೆಯಿಂದ ಮಲ್ಲಸರ್ಜನಾಗಿ ಈ ಭೂಮಿಯಲ್ಲಿ ಜನಿಸಿದನು. ಇವನ ರಾಜಧಾನಿ ಕಿತ್ತೂರು. ೧೪ ಕರ್ಯಾತಗಳನ್ನು ೧೪ ಲೋಕಗಳೆಂಬಂತೆ ಆಳಿದ ಇವನ ಸಚಿವ ವೀರಸಂಗಪ್ಪನು ಶಿವನಿಗೆ ನಂದಿಯಂತೆ, ಅಚ್ಯುತಗೆ ಉದ್ಧವನಂತೆ ನಡೆದುಕೊಳ್ಳುತ್ತಿದ್ದನು. ಮಲ್ಲಸರ್ಜ ಶಿವಭಕ್ತನಾಗಿದ್ದು, ಶ್ರಾವಣಮಾಸದಲ್ಲಿ ಶಿವಪೂಜೆ ನೆರವೇರಿಸುತ್ತಿದ್ದನು. ಗಣಾಧೀಶರನ್ನು ಆನೆಯ ಮೇಲೆ ಕುಳ್ಳಿರಿಸಿ ಮೆರವಣಿಗೆ ಮಾಡಿಸುತ್ತಿದ್ದನು.

೫. ಮಲ್ಲೇಂದ್ರ ವಿಜಯ : (ಕರ್ತೃ – ಮುನವಳ್ಳಿ ನೀಲಕಂಠಾರ್ಯ)

ನಂದೀಶಾವತಾರ ಶಮಶರಜಂಗ ಬಹದ್ದೂರ ಮಲ್ಲೇಂದ್ರನು ಆಳುತ್ತಿದ್ದನು. ದಕ್ಷಿಣ ದೇಶದ ದುಷ್ಟಭೂಪಾಲನು (ಟಿಪ್ಪು)ಚಿತ್ರದುರ್ಗ, ಧಾರವಾಡಗಳನ್ನು ಗೆದ್ದು. ಕಿತ್ತೂರಿಗೆ ದಾಳಿಮಾಡಿ ಮಲ್ಲೇಂದ್ರನನ್ನು ಶ್ರೀರಂಗಪಟ್ಟಣಕ್ಕೆ ಒಯ್ದು ಸೆರೆಯಿಟ್ಟನು. ಗಂಡನಿಗಾಗಿ ರುದ್ರಾಂಬೆ ಸೋಮವಾರ ವ್ರತಹಿಡಿದಳು. ಅಲ್ಲಿ ಮಲ್ಲೇಂದ್ರನು ಏಳು ಸುತ್ತಿನ ಕೋಟೆಯನ್ನು ದಾಟಿ, ಐನೂರು ಖಡ್ಗಪಾಣಿಗಳನ್ನು ಸೋಲಿಸಿ, ಮಡಿವಾಳಪ್ಪನೆಂಬುವನೊಡನೆ ಹೊರಹೊರಟನು. ಬೆನ್ನಟ್ಟಿದ ನಾಲ್ಕು ಸಾವಿರ ಸೈನ್ಯವನ್ನು ಲೆಕ್ಕಿಸದೆ ಕಿತ್ತೂರಿಗೆ ಬಂದು, ಅತ್ತೆ ನೀಲಾಂಬೆ, ಸತಿ ರುದ್ರಾಂಬೆಯರನ್ನು ಕೂಡಿಕೊಂಡನು. ಕೆಲವು ದಿನ ಗತಿಸುವಲ್ಲಿ ರುದ್ರಾಂಬೆ "ನನ್ನ ಇಬ್ಬರು ಮಕ್ಕಳನ್ನು ನಿನ್ನ ಮಕ್ಕಳೆಂದು ಸಲಹು" ಎಂದು ಚೆನ್ನವ್ವನಿಗೆ ಹೇಳಿ ತೀರಿಕೊಂಡಳು. ಕಿತ್ತೂರು ಎರಡನೆಯ ಕಲ್ಯಾಣವೆನಿಸಿತು. ಮಲ್ಲಸರ್ಜ ಬಸವೇಶ್ವರನೆನಿಸಿದನು. ಮುದಿಮಲ್ಲಸರ್ಜ, ರುದ್ರಸರ್ಜರ ಪುಣ್ಯ ಪುಂಜವೇ ಗಟ್ಟಿಗೊಂಡಂತೆ ವೀರಭದ್ರಾವನಿಪತಿಗೆ ಹುಟ್ಟಿದ ಮಲ್ಲೇಂದ್ರನು ಬಸವೇಶನೆಂದೇ ಭಾವಿಸಿ, ಪ್ರಜೆಗಳು ರಾಜಧಾನಿ ಕಿತ್ತೂರಿಗೆ ಬರುತ್ತಿದ್ದರು. ಅಲ್ಲಮಪ್ರಭುವೇ ಕರಸ್ಥಲದ ಲಿಂಗವಾಗಿ ಮಲ್ಲೇಂದ್ರನಿಂದ ಪೂಜೆಗೊಳ್ಳುತ್ತಿದ್ದನು. ಚಿತ್ರದುರ್ಗ ಮುರುಗೇಶನ ಕರಕಮಲಸಂಭೂತ ಅರಭಾವಿ ದುರದುಂಡೇಶನ ಕೃಪೆ, ಮನೆ ದೈವ ಬೆಳವಡಿಯ ವೀರೇಶನ ಕರುಣೆ, ಕಿತ್ತೂರಿನ ಗುರುಸಿದ್ಧೇಶನ ಆಶೀರ್ವಾದಗಳಿಂದ ಮಲ್ಲೇಂದ್ರ ರಾಜ್ಯವಾಳುತ್ತಲಿದ್ದನು.

೬. ಗಣೇಶೋತ್ಸವ : (ಕರ್ತೃ– ಮುನವಳ್ಳಿ ನೀಲಕಂಠಾರ್ಯ)

ಸಿದ್ಧಿವಿನಾಯಕ ಪೂಜೆಯಿಂದ ಸರ್ವ ಸಮೃದ್ಧಿಯೆಂದು ತಿಳಿದು, ಮಲ್ಲೇಂದ್ರನು ಭಾದ್ರಪದ ಶುದ್ಧ ಚತುರ್ಥಿಯಂದು ಗಣೇಶೋತ್ಸವವನ್ನು ಆಚರಿಸುತ್ತಿದ್ದನು. ಕಿತ್ತೂರಿನ ಸೋಮವಾರಪೇಟೆಯಿಂದ ಗಣೇಶನನ್ನು ಮೆರವಣಿಗೆಯಲ್ಲಿ ತಂದು ಸ್ಥಾಪಿಸಿ, ೧೫ ದಿನಗಳವರೆಗೆ ಪೂಜಿಸುತ್ತಿದ್ದನು. ವಾದ್ಯಘೋಷ, ಪೂಜೆ, ಸಂಗೀತ, ನರ್ತನಗಳು ಜರುಗಿ, ಕೊನೆಯ ದಿನ ರಣಗಟ್ಟಿ ಪ್ರದೇಶದಲ್ಲಿ ಗಂಗೆಗೆ ಅರ್ಪಿಸುತ್ತಿದ್ದನು.

೭. ಕಿತ್ತೂರು ಮಲ್ಲಸರ್ಜನ ಪದಗಳು : (ಕರ್ತೃ – ಅಣ್ಣಿಗೆರೆ ಅಮೃತೇಶನ ಭಕ್ತ ಕಾಶೀರಾಜ)

ಇದು ೨೮ ಪದಗಳ ಸಂಗ್ರಹ. ಇದರಲ್ಲಿ ೧೮ ಕನ್ನಡ ಪದ, ೧೦ಮರಾಠಿ ಪದಗಳಿವೆ. ಇದರ ಕರ್ತೃ ಕನ್ನಡ–ಮರಾಠಿ ಉಭಯ ಭಾಷಾ ಬಲ್ಲಿದನಾದ ಅಣ್ಣಿಗೆರೆಯ ಅಮೃತೇಶನ ಭಕ್ತನಾದ ಕಾಶೀರಾಜ. ಇಲ್ಲಿಯ ಪ್ರತಿಯೊಂದು ಪದದ ಮೇಲೆ ರಾಗ ನಿರ್ದೇಶನವಿದೆ. ಪ್ರಧಾನವಾಗಿ

ಮಲ್ಲೇಂದ್ರನನ್ನು ಕುರಿತ ಶೃಂಗಾರನಿಷ್ಠ ಪದಗಳಿವು. ಹೀಗಿದ್ದೂ ಅಲ್ಲಲ್ಲಿ ಭಕ್ತಪರ ಹಾಡುಗಳೂ ಇಲ್ಲಿವೆ.

* * * * *

ಎರಡನೆಯ ಭಾಗ ಹಳೆಯ ಜಾನಪದ ಹಾಡುಗಳನ್ನೊಳಗೊಂಡಿದೆ. ಇವುಗಳನ್ನು ನಾವು ಶ್ರೀನಾಗಶೆಟ್ಟಿ ಮಾಸ್ತರ ಹಸ್ತಪ್ರತಿ, ಕಿತ್ತೂರ ಕಾಳಗ, ಕಿತ್ತೂರ ಬಂಡಾಯ, ಜೀವನ ಜೋಕಾಲಿ, ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು–ಈ ಕೃತಿಗಳಿಂದ ಆಯ್ದುಕೊಂಡಿದ್ದೇವೆ. ಈ ಎಲ್ಲ ಹಾಡುಗಳ ವಿಷಯ ಹೀಗಿದೆ :

೧. ಈರಪ್ಪ ದೇಸಾಯಿ : (ಕರ್ತೃ –?)

ಮಲ್ಲಸರ್ಜನ ತಂದೆಯಾದ ಈರಪ್ಪ ದೇಸಾಯಿಯನ್ನು ಪರಶುರಾಮ ಪಟವರ್ಧನನು ಗೋಕಾಕ ಕಾಳಗದಲ್ಲಿ ಸೋಲಿಸಿ, ಸೆರೆಹಿಡಿಯುತ್ತಾನೆ. ನ್ಯಾಸರಗಿ ದ್ಯಾವಪ್ಪ, ವಣ್ಣೂರ ದೇಸಾಯಿಗಳಿಗೆ ಸಂಸ್ಥಾನದ ವ್ಯವಸ್ಥೆ ನೋಡಿಕೊಳ್ಳಲು ಹೇಳಿ ತಾನು ಮೇಣೆ ಹತ್ತಿ ಗೋಕಾಕ ಮಾರ್ಗವಾಗಿ ಮಿರಜಿಗೆ ಹೋದ ಬಳಿಕ, ವಿಷಪ್ರಾಶನಕ್ಕೆ ತುತ್ತಾಗುತ್ತಾನೆ. ಬಹುಶಃ ಕರಬಸ್ಯಾ, ಬೂಸಿಬಸ್ಯಾ, ಚೆನ್ನಬಸ್ಯಾ ಇವರ ಕೈವಾಡವೂ ಇದರಲ್ಲಿರುವ ಸಾಧ್ಯತೆಯಿದೆ. ಈರಪ್ಪನ ಶವವನ್ನು ಸಂಗೊಳ್ಳಿ ಹೊಳೆಯವರೆಗೆ ತಂದು, ಕಿತ್ತೂರಿಗೆ ಬಂದು ಸುದ್ದಿ ಮುಟ್ಟಿಸುತ್ತಾರೆ. ಹೆಂಡತಿ ಪಾರ್ವತವ್ವ ದುಃಖಿಸುತ್ತಾಳೆ.

೨. ಕಿತ್ತೂರ ಅರಸರ ಕೋಲ ಪದ : (ಕರ್ತೃ–?)

ಕಿತ್ತೂರ ದೇಸಾಯಿ ಮಲ್ಲಸರ್ಜನನ್ನು ಟಿಪ್ಪುಸುಲ್ತಾನ ಸೆರೆ ಒಯ್ದ ಘಟನೆ ಇದರ ವಸ್ತು. ಊಟ–ನಿದ್ರೆಗೆ ಎರವಾದ ಮಲ್ಲಸರ್ಜನಿಗೆ ದಾರಿಯಲ್ಲಿ ಮಡಿವಾಳಪ್ಪನೆಂಬುವನು ನೆರವಾಗುತ್ತಾನೆ. ಇಲ್ಲಿ ಹೆಂಡಂದಿರಾದ ರುದ್ರವ್ವ, ಚೆನ್ನವ್ವರ ದುಃಖದ ಪ್ರಸ್ತಾಪವೂ ಇದೆ. ಇಲ್ಲಿಯ ಕೆಲವು ವಾಕ್ಯಗಳು ರುದ್ರವ್ವ, ಚೆನ್ನವ್ವರ ಹೊಟ್ಟೆಯ ಮಕ್ಕಳನ್ನೂ ಮಲ್ಲಸರ್ಜನ ಜೊತೆ ಸೆರೆ ಒಯ್ದಿರಬಹುದೇ? ಎಂಬ ಸಂದೇಹ ಹುಟ್ಟಿಸುತ್ತವೆ.

೩. ಮಲ್ಲಸರ್ಜನ ಕಾವ್ಯ : (ಕರ್ತೃ –?)

ದೇವೇಂದ್ರನಿಗೆ ಸಮನಾದ ಮಲ್ಲಸರ್ಜ ಮುಪ್ಪಿನ ಮಡಿವಾಳಸ್ವಾಮಿಯ ಭಕ್ತ. ಚೌಕಿಯ ಗುರುಸಿದ್ಧನ ಧ್ಯಾನಾಸಕ್ತ, ಶ್ರಾವಣ ಮಾಸದ ಶಿವಪೂಜಾ ಧುರಂಧರನಾದ ಇವನ ಪ್ರತಾಪವನ್ನು ಪುಣೆಯ ಹಿರಿಯ ಬಾಜೀರಾಯ ಪೇಶ್ವೆ ಕೇಳಿ, ಸಂಡೂರಿನ ಕಾರ್ತಿಕಸ್ವಾಮಿ ದರ್ಶನದ ನೆಪಮಾಡಿ, ಕಾರಭಾರಿ ಮಾಣಿಕೇಶ್ವರನ ಜೊತೆ ದಂಡು ಸಹಿತ ಪ್ರಯಾಣ ಬೆಳೆಸಿದನು. ರಾಸ್ತೆ ಮಾಧವರಾಯ ದಂಡನ್ನು ಮುನ್ನಡೆಸಿದನು. ಪಟವರ್ಧನರೂ ಸೇರಿಕೊಂಡರು. ಪಂಡರಪುರದಲ್ಲಿ ದಂಡು ಒಗ್ಗೂಡಿತು. ಹಿರಿಹೊಳೆಯ ತೀರದಲ್ಲಿ ವಾಸ್ತವ್ಯ ಮಾಡಿ, ಚಿಂತಾಮಣಿರಾಯ, ನಿಪ್ಪಾಣಿ ದೇಸಾಯಿಗಳನ್ನು ಸೇರಿಸಿಕೊಂಡು, ನಣದಿ ಗ್ರಾಮದ ಹಳ್ಳಕ್ಕೆ ದಂಡು ಬಂದಿತು. ಅಪ್ಪಾಸಾಹೇಬ ದೊರೆ ಕಪ್ಪಕಾಣಿಕೆ ನೀಡಿದನು. ಎಲ್ಲರೂ ಒಂದಾಗಿ ಗೋಡಗೇರಿ ಮಾರ್ಗವಾಗಿ ಹೊಂಗಲಕ್ಕೆ ಬಂದರು. ಬಳಿಕ ಬಾಜಿರಾಯ ಸಂಡೂರಿಗೆ ಬಂದು ಕಾರ್ತಿಕಸ್ವಾಮಿಯ ದರ್ಶನ ಪಡೆದು, ಮಕ್ಕಳ ಭಾಗ್ಯವನ್ನು

ಬೇಡಿಕೊಂಡು ಹಂಪಸಾಗರ, ಕಡೂರ, ಕಂಪಲಿ, ಕನಕಗಿರಿ, ಹೊಸಪೇಟೆ, ಬಾಗಲಕೋಟೆ, ಬಾದಾಮಿ, ಬೂದಿಹಾಳ ಮೂಲಕ ಗುರ್ಲಹೊಸೂರಕ್ಕೆ ಬಂದನು. ಮಲ್ಲಸರ್ಜನು ಬಾಜೀರಾಯನಿಗೆ ಗೌರವ ಸಲ್ಲಿಸಲು ಹೊರಟು ನಿಂತ. ಅತ್ತೆ ನೀಲವ್ವನಿಗೆ ವಂದಿಸಿ, ಹಿರಿಯ ಮಗ ಬಾಪೂಸಾಹೇಬನಿಗೆ ರಾಜ್ಯದ ಕಡೆಗೆ ಗಮನಕೊಡಲು, ಚಿಕ್ಕ ತಮ್ಮಂದಿರೊಡನೆ ಸರಿಯಾಗಿ ನಡೆದುಕೊಳ್ಳಲು ತಿಳಿಹೇಳಿದ. ಸತಿ ಚೆನ್ನವ್ವ, ಅತ್ತೆ ನೀಲವ್ವನವರನ್ನು ಸಮಾಧಾನಪಡಿಸಿ, ಕಿಲ್ಲೆಯ ವ್ಯವಸ್ಥೆಯನ್ನು ಕೋಟೆಯ ಹೊಣೆಯನ್ನು ಶಿವಪುತ್ರ ಮತ್ತು ಗುರುಪುತ್ರ ವೀರಪ್ಪ ಇವರಿಗೆ ವಹಿಸಿಕೊಟ್ಟು, ನಡುವಿನ ಮಗ ವೀರಪ್ಪನನ್ನು ಕರೆದುಕೊಂಡು ಹೊಂಗಲದತ್ತ ಮಲ್ಲೇಂದ್ರ ಹೊರಟ. ಮಾರಿಹಾಳ ಪ್ರದೇಶದಲ್ಲಿ ಬಾಜೀರಾಯ ಮಲ್ಲಸರ್ಜರ ದಂಡು ಭೆಟ್ಟಿಯಾದವೇ ಹೊರತು, ಇಬ್ಬರಿಗೂ ನೇರ ಭೆಟ್ಟಿ ಸಂಭವಿಸಲಿಲ್ಲ, ಬೆಳಗಾವಿ, ಎಡೂರ ದಾಟಿ ಮಿರಜ ಮಾರ್ಗವಾಗಿ ಪುಣೆಯ ಕಡೆಗೆ ಸೈನ್ಯ ಮುನ್ನಡೆಯಿತು. ಶೇಗುಣಿಸಿ ಅಲ್ಲಪ್ಪಗೌಡ ಮಧ್ಯದಲ್ಲಿ ಬಂದು ಸೇರಿ, ಬಾಜೀರಾಯನಿಗೆ ಮಲ್ಲಸರ್ಜನ ವಿರುದ್ಧ ಚಾಡಿಹೇಳಿದ. ಬಾಜೀರಾಯ ಮಲ್ಲೇಂದ್ರನ ಮೇಲೆ ೪ ಲಕ್ಷ ರೂಪಾಯಿಯ ಕಪ್ಪಕಾಣಿಕೆಯ ಬಾಕಿ ತೋರಿಸಿ, ರಾಜಕುಮಾರ ವೀರಪ್ಪ ದೇಸಾಯಿಗೆ ಕಿತ್ತೂರಿಗೆ ಹಿಂತಿರುಗ ಹೇಳಿ, ಮಲ್ಲೇಂದ್ರನನ್ನು ಸೆರೆಹಿಡಿದುಕೊಂಡು ಪುಣೆಗೆ ಹೋದನು. ಅಲ್ಲಿ ಮುಧೋಳಕರ ಮನೆಯಲ್ಲಿ ಸೆರೆಯಿಟ್ಟ, ಇತ್ತ ಅಲ್ಲಪ್ಪಗೌಡನಿಗೆ ದಾರಿಯಲ್ಲಿಯೇ ಗಂಡಮಾಲೆ ಹುಣ್ಣು ಹುಟ್ಟಿ, ಸೇಗುಣಿಸಿಗೆ ಬರುತ್ತಲೇ ತೀರಿಕೊಂಡ.

ಪುಣೆಯಲ್ಲಿ ಮಲ್ಲೇಂದ್ರನಿಗೂ ಬಾಜೀರಾಯನಿಗೂ ಭೆಟ್ಟಿ ಸಂಧಿಸಲೇ ಇಲ್ಲ. ಈ ಕೊರಗಿನಲ್ಲಿ ಮಲ್ಲೇಂದ್ರ ಸೊರಗಿಹೋದ. ಅಳಿಯನ ದಾರುಣ ಸ್ಥಿತಿ ಕೇಳಿ ಅತ್ತೆ ನೀಲವ್ವ ಕ್ಷೀಣಿಸಿ ತೀರಿಕೊಂಡಳು. ಇದನ್ನು ಕೇಳಿ ಮಲ್ಲಸರ್ಜ ಮತ್ತೂ ಕ್ಷೀಣಿಸಿ ೩ ವರ್ಷ ಅಲ್ಲಿ ಕಳೆಗುಂದುತ್ತ ನಡೆದ. ಬಾಪೂಸಾಹೇಬನಿಗೆ ಉತ್ತರಾಧಿಕಾರಿ ಕೊಟ್ಟು ಅವನ ತಮ್ಮಂದಿರಿಗೆ ತಿಗಡಿ, ಹೊಂಗಲ ಕೊಟ್ಟ ಬಗ್ಗೆ ಮೃತ್ಯುಪತ್ರ ಬರೆದು ರಾಮಲಿಂಗಪ್ಪನ ಜೊತೆ ಕಿತ್ತೂರಿಗೆ ಕಳಿಸಿದ. ಇದನ್ನು ನೋಡಿ ಪರಿವಾರದವರು ಗಾಬರಿಯಾಗಿ ಪುಣೆಗೆ ಬಂದರು. ಮಲ್ಲಸರ್ಜ ಬಹಳ ದಿನ ಉಳಿಯುವುದಿಲ್ಲವೆಂದು ತಿಳಿದ ಬಾಜೀರಾಯ ಅವನನ್ನು ಬಿಡುಗಡೆ ಮಾಡಿದನು.

ಮಲ್ಲೇಂದ್ರ ಮೇಣೆಯಲ್ಲಿ ಅರಭಾವಿಗೆ ಬರುತ್ತಲೇ, ಗುರುಸಿದ್ಧಪ್ಪನ ಸೂಚನೆಯ ಮೇರೆಗೆ ಮೂವರು ಮಕ್ಕಳು, ಚೆನ್ನಮ್ಮ ಬಂದು ಸೇರಿದರು. ಅಲ್ಲಿಂದ ಎಲ್ಲರೂ ಹೊಂಗಲ, ಬೆಳವಡಿಗಳಿಗೆ ಬಂದು, ಕಿತ್ತೂರ ಸಮೀಪಿಸಿದರು. ಮಂತ್ರಿ ಶಿವಬಸಪ್ಪ ಭೆಟ್ಟಿಯಾದ. ಶನಿವಾರ ಸಂಜೆ ಹೊಂಡದ ಬಸವಣ್ಣನಲ್ಲಿಗೆ ಬಂದು, ಬಳಿಕ ಚೌಕಿಮಠಕ್ಕೆ ಬಂದು, ಅಲ್ಲಿ ೩ ತಾಸು ಕಳೆದು ಅರಮನೆ ಪ್ರವೇಶಿಸಿದರು. ಮಲ್ಲೇಂದ್ರನಿಗೆ ಬಿಕ್ಕು ಹತ್ತಿತು. ಬೆಳಗಿನ ಜಾವ ಮಲ್ಲೇಂದ್ರ ಪ್ರಾಣಬಿಟ್ಟ. ಎಲ್ಲರೂ ದುಃಖಿಸಿದರು.

ಶವ ಸಿಂಗರಿಸಿದರು. ಕಲ್ಲುಮಠದ ಸ್ವಾಮಿಗಳು ಬಂದು, ಎಲ್ಲ ಮಕ್ಕಳನ್ನು ಒಳಗೆ ಕರೆದು ಬುದ್ಧಿ ಹೇಳಿ, ಸಮಾಧಾನ ಮಾಡಿದರು. ದುಃಖಿತೆಯಾದ ಚೆನ್ನಮ್ಮ ಆರತಿ ಬೆಳಗಿದಳು. ಬಾಳಾಸಾಹೇಬನ ಮದುವೆ ಮಾಡದೆ ತೀರಿಕೊಂಡದನ್ನು ನೆನೆದು ಅತ್ತಳು. ಸೊಲ್ಲಾಪುರದಿಂದ ಸೊಸೆ ಗೊತ್ತುಮಾಡಿ, ಮಾರ್ಗಶಿರಮಾಸದಲ್ಲಿ ಮದುವೆ ಜರುಗದೇ ಹೋದದನ್ನು ನೆನೆದು ದುಃಖಿಸಿದಳು. ವಂಟಮುರಿದೇಸಾಯರ ಸಮ್ಮುಖದಲ್ಲಿ ಬಾಬಾಸಾಹೇಬನಿಗೆ ಹೊಂಗಲ,

ಬಾಳಾಸಾಹೇಬನಿಗೆ ತಿಗಡಿ, ಬಾಪೂ ಸಾಹೇಬನಿಗೆ ನೇರ ವಾರಸುದಾರಿಕೆ ನಿರ್ದಿಷ್ಟಪಡಿಸಿ, ತನ್ನ ಕೈಯಿಂದ ಮುದ್ರೆ ಹಾಕಿಸಿದುದನ್ನು ನೆನೆದು ಅತ್ತಳು.

ಏಳು ಉಪ್ಪರಿಗೆ ವಿಮಾನದಲ್ಲಿ ಶವವನ್ನು ಕುಳ್ಳಿರಿಸಿ, ಕಲ್ಲುಮಠದಲ್ಲಿ ಸಮಾಧಿಗೊಳಿಸಿದರು. ಇಬ್ಬರು ತಮ್ಮಂದಿರನ್ನು ಬಾಪೂಸಾಹೇಬನ ಕೈಗೆ ಕೊಟ್ಟರು. ಗುರುವಾದ ಶಾಂತವೀರನು ಹೇಳಿದ ಈ ವಿವರವನ್ನು ಶಿಷ್ಯ ಶೀಗಿಹಳ್ಳಿಯ ನಿರಂಜಪ್ಪ ಶೆಟ್ಟಿ ಕಾವ್ಯವಾಗಿಸಿದನು.

೪. ಕಿತ್ತೂರ ಮಲ್ಲಸರ್ಜನ ಲಾವಣಿ : (ಕರ್ತೃ-ರುದ್ರಕವಿ)

ಮೇಲೆ ಹೇಳಿದ ಮಲ್ಲಸರ್ಜ ಕಾವ್ಯದ ವಿವರಗಳನ್ನೇ, ಅಂದರೆ ಮಲ್ಲಸರ್ಜನ ಮರಣ, ಸಮಾಧಿವರೆಗಿನ ವಿವರಗಳನ್ನೇ ಇಲ್ಲಿ ೫೫ ಚೌಕಗಳ ಲಾವಣಿಯನ್ನಾಗಿ ಮಾಡಲಾಗಿದೆ. ಹೀಗಾಗಿ ಇಷ್ಟು ಭಾಗವನ್ನು ಬಿಟ್ಟು, ೫೬ನೆಯ ಚೌಕದಿಂದ ಮುಂದುವರಿಯುವ ಈ ಅರಸು ಮನೆತನದ ಘಟನೆಗಳ ಕಥಾಸಾರವನ್ನು ಇಲ್ಲಿ ಕೊಡಲಾಗಿದೆ.

ಮಲ್ಲಸರ್ಜನ ಸಮಾಧಿಕಾರ್ಯವನ್ನು ಮುಗಿಸಿ ಎಲ್ಲರೂ ಅರಮನೆಗೆ ಬಂದರು. ಚೆನ್ನಮ್ಮ ಬಾಪುಸಾಹೇಬನನ್ನು ಪಟ್ಟಕ್ಕೆ ಕುಳ್ಳಿರಿಸಿ ರಾಜ್ಯಕಾರ್ಯ ಮುಂದುವರಿಸಿದಳು. ಅಷ್ಟರಲ್ಲಿ ಜಾನ್ ಮಂಡೇಲ್ ಸಾಹೇಬ ಸರದಾರನ ನೇತೃತ್ವದಲ್ಲಿ ಬ್ರಿಟಿಶರು ಬೆಳವಡಿಯಲ್ಲಿ ವಾಸ್ತವ್ಯ ಮಾಡಿದರು. ಇದನ್ನು ತಿಳಿದ ಬಾಪೂಸಾಹೇಬ ಭೆಟ್ಟಿಯಾಗಿ, ನಜರಾಣಿ ಸಲ್ಲಿಸುತ್ತ, ಆಳುವುದಕ್ಕೆ ಒಪ್ಪಿಕೊಂಡನು. ಹೀಗೆ ೭ ವರ್ಷ ಕಿತ್ತೂರು ರಾಜ್ಯ ಮುನ್ನಡೆಯಿತು. ಅಷ್ಟರಲ್ಲಿ ನಡುವಿನ ಮಗ ಬಾಬಾ ಸಾಹೇಬನು ರೋಗ ಉಲ್ಬಣಿಸಿ ಮಡಿದನು. ಬಳಿಕ ಚೆನ್ನವ್ವನ ಉದರಪುತ್ರ ಬಾಳಾಸಾಹೇಬನೂ ಮಡಿದನು. ಕೆಲವು ದಿನಗಳಲ್ಲಿ ಹಿರಿಯ ಮಗ ಬಾಪುರಾಯನೂ ಮಡಿದನು. ಹೆಂಡತಿ ವೀರವ್ವ ದುಃಖಮಾಡಿದಳು.

ವಾರಸು ಇಲ್ಲದ ಈ ಸಂದರ್ಭದಲ್ಲಿ ಚೆನ್ನವ್ವ ರಾಜ್ಯಭಾರ ನಡೆಸಿದಳು. ಅತ್ತೆ ಸೊಸೆಯರಲ್ಲಿ ಮನಸ್ತಾಪ ಹುಟ್ಟಿತು. ಅಪುತ್ರಕ ರಾಜ್ಯವನ್ನು ನುಂಗಲು ಬ್ರಿಟಿಶರು ಹೊಂಚು ಹಾಕಿ "ರಾಜ್ಯವನ್ನು ತಾವು ಆಳುತ್ತೇವೆ. ಅರಸುಮನೆತನದವರು ಉಂಬಳಿ ಪಡೆದು ಸುಖವಾಗಿರುವುದು" ಎಂದು ತಿಳಿಸಿದರು. ಚೆನ್ನಮ್ಮ ಸರದಾರ ಅವರಾದಿ ವೀರಪ್ಪ ಮೊದಲಾದವರೊಂದಿಗೆ ಸಮಾಲೋಚಿಸಿ, ಬ್ರಿಟಿಶರ ಮಾತನ್ನು ನಿರಾಕರಿಸಿದಳು. ಬ್ರಿಟಿಶರ ದಂಡು ಕಿತ್ತೂರನ್ನು ಮುತ್ತಿತು. ಕಿತ್ತೂರು ಸೈನ್ಯದ ಎದುರು ಆಂಗ್ಲರ ದೊಡ್ಡ ಸೈನ್ಯ ಸೋತುಹೋಯಿತು. ಆಗ ಮುಂಬಯಿಗೆ ಸುದ್ದಿ ಕಳುಹಿಸಲು, ಆಂಗ್ಲ ಸೈನ್ಯ ಬೆಳಗಾವಿಗೆ ಬಂದಿಳಿದು, ಕಿತ್ತೂರನ್ನು ಮುತ್ತಿ ಕೋಟೆಯನ್ನು ಕೆಡವಿ, ಅರಮನೆಯನ್ನು ಪ್ರವೇಶಿಸಿತು. ಅತ್ತೆ ಚೆನ್ನಮ್ಮ, ಸೊಸೆ ವೀರಮ್ಮನನ್ನು ಹೊಂಗಲದಲ್ಲಿ ಸೆರೆಯಿಟ್ಟರು. ಅರಮನೆಯ ಸಂಪತ್ತನ್ನು ತಿಂಗಳವರೆಗೆ ಬೆಳಗಾವಿಗೆ ಸಾಗಿಸಿದರು.

ಕಿತ್ತೂರ ರಾಜ್ಯವನ್ನು ತಾಲೂಕು ಮಹಲುಗಳೆಂದು ವಿಭಾಗಿಸಿ, ಮಹಲ್ಕರಿ ಅಮಲ್ದಾರ್ ನೇಮಿಸಿ ಆಳತೊಡಗಿದರು. ಹೊಂಗಲದ ಅರಮನೆಯಲ್ಲಿ ಸೆರೆಯಾಳಾಗಿ ಅತ್ತೆ ಸೊಸೆಯರು ೬ ವರ್ಷ ಕಳೆದರು.

ಆಂಗ್ಲರನ್ನು ಕಿತ್ತೂರ ರಾಜ್ಯದಿಂದ ಓಡಿಸಲು ಕುರುಬ ರಾಯಣ್ಣ ಚೆನ್ನಮ್ಮನ ಮುಂದೆ ಪ್ರತಿಜ್ಞೆಮಾಡಿ, ನಂದಗಡ ಖಾನಾಪುರಗಳಲ್ಲಿ ಸೈನ್ಯ ಕೂಡಿಸಿ ಹೋರಾಟ ಮುಂದುವರಿಸಿದನು. ಆಗ ಕಂಪನಿ

ಸರಕಾರ ಸೊಸೆ ವೀರವ್ವನನ್ನು ಧಾರವಾಡಕ್ಕೆ, ಅಲ್ಲಿಂದ ಕುಸುಗಲ್ಲಿಗೆ ಸಾಗಿಸಿದರು. ಅಲ್ಲಿ ಹೊಂಗಲದ ಬಸವಣ್ಣನನ್ನು ನೆನೆಯುತ್ತ ವ್ಯಾಕುಲಚಿತ್ತದಿಂದ ಅವಳು ದಿನಕಳೆಯುತ್ತಿದ್ದಳು.

೫. ಸೂಳೆ–ಸರ್ಜರ ಪ್ರಣಯ : (ಕರ್ತೃ–ರುದ್ರಕವಿ)

ಸೂಳೆಯೊಬ್ಬಳು ಕನಸಿನಲ್ಲಿ ಕಿತ್ತೂರ ಅರಸು ಶಮಶರಜಂಗ ಬಹದ್ದೂರ ಶಿವಲಿಂಗರುದ್ರಸರ್ಜ (ಬಾಪೂಸಾಹೇಬ)ನನ್ನು ಕಂಡು, ವಿರಹದಿಂದ ಬಳಲಿ, ತನ್ನನ್ನು ಅವನೊಂದಿಗೆ ಒಡಗೂಡಿಸಲು ದೂತೆಯನ್ನು ಪರಿಪರಿಯಾಗಿ ಬೇಡಿಕೊಳ್ಳುವಳು. ಐಶ್ವರ್ಯವಂತನಾದ ಅವನ ಸಮಾಗಮ ನಿನ್ನೊಂದಿಗೆ ಅಸಾಧ್ಯವೆಂದು ಹೇಳಿದ ದೂತೆಯ ಮಾತಿಗೆ ಮುನಿದು, ಕೂಡುವುದು ಸಾಧ್ಯವಾಗದಿದ್ದರೆ ಪ್ರಾಣತ್ಯಾಗ ಮಾಡುವೆನೆಂದು ಹಟ ಹಿಡಿದಳು. ಆಗ ಅನಿವಾರ್ಯವೆಂಬಂತೆ ದೂತೆ ಬಾಪೂಸಾಹೇಬನ ಹತ್ತಿರ ಹೋಗಿ ಸೂಳೆಯ ಇಂಗಿತವನ್ನು ತಿಳಿಸಲು, ಅವನು ಮುಗುಳು ನಕ್ಕು, ತಾನು ಪರಸ್ತ್ರೀಮೋಹಿಯಲ್ಲವೆಂದು ಹೇಳಿ, ಅವಳನ್ನು ಹಿಂದುರಿಗಿಸಿದನು–ಎಂದು ಮುಗಿಯುವ ಈ ಹಾಡಿನ ಉದ್ದೇಶ, ರಾಜನ ಶುಚಿತ್ವವನ್ನು ಸಾರುವುದಾಗಿದೆ.

೬. ಶಿವಲಿಂಗರುದ್ರಸರ್ಜ : (ಕರ್ತೃ–?)

ಕಿತ್ತೂರ ನಾಡಿನ ಬಾಳಗುಂದ ಗುಡ್ಡ. ಹುಲಿಯ ಕೊತ್ತಲ, ಹಂದೂರಗಳಲ್ಲಿ ಮೃಗಗಳ ಹಾವಳಿ ಹೆಚ್ಚಲಾಗಿ, ಬೇಟೆಮಾಡಲು ಪ್ರಜೆಗಳು ಶಿವಲಿಂಗಸರ್ಜನಿಗೆ ಬಿನ್ನವಿಸಿದರು. ಶಿವಲಿಂಗರುದ್ರಸರ್ಜನಿಗೆ ಅಡವಿಯಲ್ಲಿ ಥ್ಯಾಕರೆ ಸಾಹೇಬನ ಭೆಟ್ಟಿಯಾಯಿತು. ಬೇಟೆಯಾಡಿ ನೀರಡಿಸಿದ ಶಿವಲಿಂಗರುದ್ರಸರ್ಜನಿಗೆ ನೀರಡಿಕೆ ನಿವಾರಣೆಯಾಗುವ ಔಷಧ ಕೊಡುವುದಾಗಿ ಹೇಳಿ, ಥ್ಯಾಕರೆ ಹಾಲಿನಲ್ಲಿ ವಿಷ ಬೆರೆಸಿ ಕುಡಿಸಿ, ಕೋಣೆಯ ಬಾಗಿಲು ಮುಚ್ಚಿ ಹೋದ. ಶಿವಲಿಂಗರುದ್ರಸರ್ಜನಿಗೆ ಎಚ್ಚರ ತಪ್ಪಿತು. ಧ್ವನಿ ಕ್ಷೀಣಿಸತೊಡಗಿತು. ಕೆಟ್ಟ ಕನಸು ಕಂಡ ಹೆಂಡತಿ ಈರವ್ವ, ಅತ್ತೆ ಚೆನ್ನವ್ವ–ಚೆನ್ನವ್ವನ ಸೊಸೆ ಜಾನಕಿಬಾಯಿ ಅವರೊಂದಿಗೆ ಅಡವಿಗೆ ಹೋಗಿ, ಬಾಗಿಲ ಕೀಲಿ ಮುರಿದು, ದೀನಸ್ಥಿತಿಯ ಗಂಡನನ್ನು ಅರಮನೆಗೆ ತಂದಳು. ತಾಯಿ ಚೆನ್ನವ್ವನ ತೊಡೆಯ ಮೇಲೆ ಶಿವಲಿಂಗರುದ್ರಸರ್ಜ ಪ್ರಾಣಬಿಟ್ಟನು.

ಅವರಾದಿ ಈರಪ್ಪ, ಅಂಬಡಗಟ್ಟಿ ಗುರುಸಿದ್ದಪ್ಪ, ಪಟ್ಟಣಶೆಟ್ಟಿ ಗುರುಸಿದ್ದಪ್ಪ, ಹುರಕಡ್ಲಿ ಮಲ್ಲೇಶಪ್ಪ, ಕನ್ನೂರ ಮಲ್ಲಪ್ಪರನ್ನು ಕರೆಕರೆದು ಈರವ್ವ ಶೋಕಿಸಿದಳು.

ಶಿವಲಿಂಗರುದ್ರಸರ್ಜ ಸತ್ತ ಸುದ್ದಿ ಧಾರವಾಡಕ್ಕೆ ತಲುಪಿತು. ಥ್ಯಾಕರೆ ಭಂಡಾರದ ಕೋಣೆಗಳಿಗೆ ತನ್ನ ಕೀಲಿ ಹಾಕಿದ. ಗುತ್ತಿನಾಡಿನಲ್ಲಿಯೂ ಇಂಥ ಸಂಪತ್ತು ಕಾಣಲಿಲ್ಲವೆಂದು ಆಶ್ಚರ್ಯಪಟ್ಟ.

ಶಿವಲಿಂಗರುದ್ರಸರ್ಜನ ಶವವನ್ನು ತೇರಿನಲ್ಲಿಟ್ಟು, ಸೋಮವಾರಪೇಟೆ, ಗುರುವಾರ ಪೇಟೆ ಮಾರ್ಗವಾಗಿ ಕಲ್ಮಠಕ್ಕೆ ಒಯ್ದು, ಸಮಾಧಿ ಮಾಡಿ, ಅರಮನೆಗೆ ಮರಳಿದರು.

೭. ಕರಿಯಾತಿ ಕಾಳಗ : (ಕತೃ–?)

ಬಳ್ಳೊಡಿ (ಬೆಳವಡಿ) ಗ್ರಾಮದಲ್ಲಿ ತುರುಕಾರರು ಹೂಡಿದ ದಂಗೆಯನ್ನು ಸದೆಬಡಿಯಲು ಬಂದ ಕಿತ್ತೂರು ರಾಜ್ಯದ ಸೈನ್ಯಾಧಿಕಾರಿ ರಾಮಯ್ಯ, ವೈರಿಗಳ ಕೈಗೆ ಸೆರೆಸಿಕ್ಕನು. ಆಗ ಚೆನ್ನಮ್ಮ ಸ್ವತಃ ಏರಿಹೋಗಿ ಕರಿಯಾತಿ ಗ್ರಾಮದ ನೆರೆಯಲ್ಲಿ ಯುದ್ಧ ಮಾಡಿದ ವಿವರ ಈ ಹಾಡಿನಲ್ಲಿದೆ.

ಚೆನ್ನವ್ವ ಬಳ್ಳೋಡಿ ಗ್ರಾಮಕ್ಕೆ ಬಂದು ಚೌಬಾರಿಯಲ್ಲಿ ಡೇರೆ ಹೊಡೆದಳು. ಹತ್ತನೂರು ಹಳಬರೇ ಮೊದಲಾದವರ ದಂಡನ್ನು ಸಂಗ್ರಹಿಸಿ, ಕರಿಯಾತಿ ಗ್ರಾಮದ ನೆರೆಯಲ್ಲಿ ತುರುಕಾರರನ್ನು ಸದೆಬಡಿದು, ಚೆನ್ನವ್ವ ರಾಮಯ್ಯನನ್ನು ಬಿಡಿಸಿಕೊಂಡು ಕಿತ್ತೂರಿಗೆ ಮರಳಿದಳು.

೮. ಕಿತ್ತೂರ ಮಿಂಚಿನ ಕಾಳಗ : (ಕರ್ತೃ–?)

ಚೆನ್ನವ್ವ(ದತ್ತಕ) ಮೊಮ್ಮಗನಿಗೆ ಪಟ್ಟಗಟ್ಟಿದಳು.ಈ ಸುದ್ದಿ ಧಾರವಾಡಕ್ಕೆ ಮುಟ್ಟಿತು. ಥ್ಯಾಕರೆ ದಂಡಿನೊಂದಿಗೆ ಕಿತ್ತೂರಿಗೆ ಬಂದು ದಾಳಿ ಮಾಡಿದ. ಆಗ ಕೋಟೆ ಒಳಗಿನ ಕಿತ್ತೂರ ಸೈನಿಕರು ಚೆನ್ನವ್ವನ ಅಪ್ಪಣೆಯಂತೆ ವೈರಿಗಳ ಮೇಲೆ ಎರಗಿ ಥ್ಯಾಕರೆನನ್ನು ಕೊಂದರು. ಈ ಸುದ್ದಿ ತಿಳಿದ ಮಂಡೇಲಸಾಹೇಬ ಕಂಪನಿಗೆ ಪತ್ರ ಬರೆದು, ಹೆಚ್ಚಿನ ಸೈನ್ಯ ತರಿಸಿದ. ಚೆನ್ನವ್ವ ತನ್ನ ಸೈನಿಕರಿಗೆ ಉಡುಗೊರೆ ನೀಡಿ ಹುರಿದುಂಬಿಸಿದಳು. (ಇಲ್ಲಿ ಮೂರು ಪದ್ಯಗಳು ಇಲ್ಲ). ಈರಪ್ಪದೇಸಾಯಿ, ಮಲ್ಲಪ್ಪದೇಸಾಯಿ, ಶಿವಲಿಂಗರುದ್ರಸರ್ಜ, ಬಾಪೂಸಾಹೇಬ, (ಇವೆರಡೂ ಒಬ್ಬನ ಹೆಸರು) ತೀರಿಹೋದರೆಂದು “ಅಕ್ಕ ಚೆನ್ನವ್ವನ ಅತ್ತಂಥ ಕಣ್ಣೀರು ಚಿಕ್ಕಹೊಳೆಯಾಗಿ ಹರಿದವು”.

೯. ವೀರರಾಣಿ ಚೆನ್ನವ್ವ : (ಕರ್ತೃ–ಮಾಗಡಿ ಬಸವ)

“ಕಿತ್ತೂರು ರಾಜ್ಯ ನಮ್ಮದೆಂದು ನಿನ್ನ ಗಂಡ ಓಲೆ ಬರೆದು ಕೊಟ್ಟಿರುವ”ನೆಂದು ಥ್ಯಾಕರೆ ಚೆನ್ನಮ್ಮನಿಗೆ ಹೇಳಿದ. “ಇವನನ್ನು ಹೊರಗೆ ನೂಕಿರಿ” ಎಂದು ಹೇಳಿ, ಆಕೆ ಅಗಸಿ ಬಾಗಿಲು ಹಾಕಿಸಿದ ಬಳಿಕ ಜರುಗಿದ ಯುದ್ಧದಲ್ಲಿ ಥ್ಯಾಕರೆ ಮಡಿದ. ಈ ಸುದ್ದಿ ಧಾರವಾಡ ಮೂಲಕ ವಿಲಾಯತಿಗೆ ಮುಟ್ಟಿತು. ಇದನ್ನು ತಿಳಿದ ಕಿತ್ತೂರರಾಣಿ ತನ್ನ ಸೈನ್ಯಕ್ಕೆ ಬಗೆಬಗೆಯ ಉಡುಗೊರೆ ಕೊಟ್ಟಳು. ೧೬ ಸಾವಿರ ದಂಡು ಒಟ್ಟುಗೂಡಿತು. ಜಾರ್ಜ ಮಂಡೇಲ್ ಸಾಹೇಬರ ನೇತೃತ್ವದಲ್ಲಿ ಮಂಗಳವಾರ ಸಂಜೆ ಕಿತ್ತೂರನ್ನು ಮುತ್ತಿತು. ಕಿತ್ತೂರ ಸೈನ್ಯದ ಎದುರು ಆಂಗ್ಲ ಸೈನ್ಯ ಮುರಿದೋಡಿತು. ಜಾರ್ಜ ಮಂಡೇಲ್ ಸಾಹೇಬ ಗಾಯಗೊಂಡ ಸುದ್ದಿ ಧಾರವಾಡಕ್ಕೆ ಮುಟ್ಟುತ್ತಲೆ, ಮೈಸೂರು ದಂಡಿನೊಂದಿಗೆ ಚಾಪ್ಲಿನ್ ಸಾಹೇಬ್ ಬಂದು ಕೋಟೆಯನ್ನು ಕೆಡವಿದ. ಹಬ್ಸೇನ್ ಶೌರ್ಯಕ್ಕೆ ತತ್ತರಿಸಿದ ಚಾಪ್ಲಿನ್ ತನ್ನ ಎಲ್ಲ ದಂಡನ್ನು ಒಗ್ಗೂಡಿಸಿ, ಮೇಲುಗೈಯಾಗಿ, ಅರಮನೆ ಪ್ರವೇಶಿಸಿ, ರಾಣಿಯನ್ನು ಹೊರಗೆ ಬರಲು ಕರೆದು, ಅವಳಿಂದ ರಾಜ್ಯವನ್ನು ಪಡೆದು, ಹೊಂಗಲಕ್ಕೆ ಅವಳನ್ನು ಸಾಗಿಸಿದನು. ಈ ಕಥೆಯನ್ನು ಮಾಗಡಿ ಬಸವ ಪದಮಾಡಿ ಹೇಳಿದನು.

೧೦. ಚೆನ್ನಮ್ಮ ರಾಣಿ : (ಕರ್ತೃ–?)

ಮಲ್ಲಸರ್ಜನ ರಾಣಿ ಚೆನ್ನಮ್ಮ ದರಬಾರ ನಡೆಸುತ್ತಲಿದ್ದಳು. ಥ್ಯಾಕರೆ ಡಂಗುರ ಸಾರಿ, ದಂಡು ಸೇರಿಸಿದನು. ಬೆಳಗಾವಿಯಿಂದ ಎಳ್ಳೂರ ಖಾನಾಪೂರ ದಾಟಿ, ಮಲಪ್ರಭೆ ನದಿ ತೀರದಲ್ಲಿ ಇಳಿದು, ರಾಮನಕೆರೆ, ಕಿತ್ತೂರ ಅಭಿಮುಖವಾಗಿ ದಂಡು ಹೊರಟಿತು. ಒಂದು ರಾತ್ರಿ ಮಲ್ಲಸರ್ಜ ಚೆನ್ನಮ್ಮನ ಕನಸಿನಲ್ಲಿ ಬಂದು “ಗಂಡುಡಿಗೆ ಉಟ್ಟು ನೀನು ಯುದ್ದಮಾಡು” ಎಂದು ಹೇಳಿದ, ಸಂಗೊಳ್ಳಿ ರಾಯಣ್ಣ, ಅಂಕಲಗಿ ಅಡಿವೆಪ್ಪ, ಮಡಿವಾಳ ಮಹಾದೇವಪ್ಪ, ಕಲ್ಮಠದ ಮಡಿವಾಳಸ್ವಾಮಿ, ತಳವಾರ ಫಕೀರ, ಗೌಡರ ಬಸಪ್ಪ, ಅಂಬಡಗಟ್ಟಿ ಗುರುಸಿದ್ಧಪ್ಪ ಇವರೆಲ್ಲರಿಗೆ ಯುದ್ಧಕ್ಕೆ ನೆರವಾಗಿ ಬರಲು ಚೆನ್ನಮ್ಮ ಪತ್ರ ಬರೆಯಿಸಿದಳು. ತಾನು ಗಂಡುವೇಷ ಧರಿಸಿ, ಖಡ್ಗ ಹಿಡಿದು, ಯುದ್ಧಕ್ಕೆ

ಅಡಿ ಇಟ್ಟಳು. ಇದನ್ನು ಕೇಳಿ ಹೆಗ್ಗೇರಿ ಗೌಡ ವಕ್ಕುಂದಕ್ಕೆ ಪತ್ರ ಬರೆದ. ಹೂಲಿ ಚೆನಬಸವಗೌಡ, ಹೊಂಗಲದ ಶಿಲೇದಾರ ಚೆನ್ನಪ್ಪ, ದಳವಾಯಿ ದೇವಪ್ಪ, ಕೋರಿಕೊಪ್ಪದ ಎಲ್ಲಪ್ಪ, ಗೌಡರ ಸಂಕಪ್ಪ, ಮೂಗಬಸವದ ಹುದ್ದಾರ, ನಾಯಕರ ಶಿವನಗೌಡ, ನಾವಲಗಟ್ಟಿ-ಇಲಿಹಾಳ ಮೊಖಾಸಿ ಗಜಪತಿ, ಮರುಕಟ್ಟಿ-ತೊಳ್ಗಿ ಗೌಡರು ನೆರವಿಗೆ ಬಂದರು. ಹುಣಸಿಕೊಟ್ಟಿ, ವಣ್ಣೂರ ಬಂಟರೂ ಬಂದರು. ಇವರೆಲ್ಲ ಹೆಗ್ಗೇರಿ ಮಾಳದ ಮೇಲೆ ಇಳಿದರು. ಗರಗದ ಗೌಡರು ಮಮ್ಮಿಗಟ್ಟಿಗೆ ಸುದ್ದಿ ಮುಟ್ಟಿಸಿದರು. ಗೌಡರ ಬಸಪ್ಪ ದಂಡು ಕೂಡಿಸಿದ. ಈ ಎಲ್ಲ ದಂಡು ಧಾರವಾಡದ ಮಾಳಕ್ಕೆ ನಡೆಯಿತು. ಥ್ಯಾಕರೆ ಸಾಹೇಬನ ದಂಡು ಸುತ್ತುಗಟ್ಟಿತು. ಚೆನ್ನವ್ವ ಎದುರಾಗಿ ಖಡ್ಗ ಹಿರಿದು, ಕುದುರೆ ಏರಿ ಕಾದಿದಳು. ಥ್ಯಾಕರೇ ಸಾಹೇಬನ ರುಂಡ ಕತ್ತರಿಸಿದಳು. ಹಿಂದಕ್ಕೆ ಹೊರಳಿ ನೋಡುವಲ್ಲಿ, ಸಾಹೇಬನ ಎಳೆಯ ಮಕ್ಕಳು ಕೊಲ್ಲಬೇಡೆಂದು ಕೈಮುಗಿದವು. ಚೆನ್ನಮ್ಮ ಕರುಣೆ ತೋರಿ, ಜಕಾತಿ ಬಸವಲಿಂಗಪ್ಪನನ್ನು ಕರೆಯಿಸಿ "ಈ ಮಕ್ಕಳನ್ನು ನಮ್ಮ ಮಕ್ಕಳಂತೆ ಸಲಹುವುದು" ಎಂದು ಅಪ್ಪಣೆ ನೀಡಿದಳು.

೧೧. ಕಿತ್ತೂರಿನ ಮುತ್ತಿಗೆ : (ಕರ್ತೃ-ಹೆಬ್ಬಳ್ಳಿ ಬಸವ)

(ಇದು ಥ್ಯಾಕರೆ ಮರಣದ ಬಳಿಕ ನಡೆದ ಎರಡನೆಯ ಯುದ್ಧವನ್ನು ವಸ್ತುವನ್ನಾಗಿಟ್ಟುಕೊಂಡ ಹಾಡು). ಕಿತ್ತೂರ ರಾಣಿ ಸರದಾರನ ತಲೆ ಹೊಡಿಸಿ ನೆತ್ತರ ಕಾವಲಿ ಹರಿಸಿದಳು. ಕರ್ನಲ್ ಹಲ್ಲು ಮಸೆಯುತ್ತಿದ್ದ. ಆಗ ಮದನಬಾವಿ ಹತ್ತಿರ ಕಾಳಗ ಏರ್ಪಟ್ಟಿತು. ರಾಣಿ ಅವರಾದಿ ಈರಪ್ಪನನ್ನು ಕರೆಸಿದಳು. ನಿಪ್ಪಾಣಿಗೆ ಪತ್ರ ಬರೆಸಿದಳು. ಒಕ್ಕುಂದ, ಬೆಳ್ಳೋಡಿ, ದೇಮಟ್ಟಿ, ಎಡಾಲ, ಸಾಣಿಕೊಪ್ಪ, ನಾವಲಗಟ್ಟಿ, ತಪರಗುಂದ, ಕಾದರೊಳ್ಳಿ, ಕರ್ಚಲಗಟ್ಟಿ, ಹಣ್ಣಿಕೇರಿ, ಬನ್ನಿಕೊಪ್ಪ, ಅಂಬಡಗಟ್ಟಿ, ಸವಣೂರ, ಶಿರಹಟ್ಟಿ, ಸೀಗಿಗಟ್ಟಿ, ಹೂಲಿಕಟ್ಟಿ, ಸೀಗಿಗಳ್ಳಿ, ಮೇಟ್ಯಾಲ, ದೇಮಟ್ಟಿ, ಕೊದಾನಪುರ, ನಂದಿಹಳ್ಳಿ, ಬೆಳ್ಳಿಕಟ್ಟಿ, ಬೆಳವಡಿ, ಕರಿಯಾತಿ ಗ್ರಾಮಗಳ ದಂಡು ಬರಬೇಕೆಂದು ತಿಳಿಸಿದಳು. ೧೦ ಸಾವಿರ ದಂಡು ಬಂದಿತು. ಬಳ್ಳೋಡಿ ವೀರಣ್ಣನನ್ನು ಧ್ಯಾನಿಸಿ ಯುದ್ಧ ಆರಂಭಿಸಿದಳು. ಕ್ಯಾಮನ ಮಡ್ಡಿ ತೆಗೆದುಕೊಂಡು, ಯುದ್ಧ ಮುಂದುವರಿಸಿದಳು. ಹೆಬ್ಬಳ್ಳಿ ಪುಂಡಬಸವೇಶ್ವರ ಈ ಹಾಡು ರಚಿಸಿದ.

೧೨. ಚೆನ್ನಮ್ಮ ರಾಣಿಯ ಕೊನೆಯ ಕಾಳಗ : (ಕರ್ತೃ-?)

(ಇದು ಥ್ಯಾಕರೆ ಮರಣದ ಬಳಿಕ ನಡೆದ ಎರಡನೆಯ ಯುದ್ಧವನ್ನು ಕೇಂದ್ರವಾಗಿಟ್ಟುಕೊಂಡ ಹಾಡು). ಕಲೆಕ್ಟರ್ ಸಾಹೇಬ (ಥ್ಯಾಕರೆ) ಯುದ್ಧದಲ್ಲಿ ಮಡಿದ ಮತ್ತುಇಬ್ಬರು ಸರದಾರರು (ಸ್ಟೀವನ್ ಸನ್, ಇಲಿಯಟ್) ಕೈಸೆರೆಹೋದ ಸುದ್ದಿಯನ್ನು ಧಾರವಾಡದಿಂದ ವಿಲಾಯಿತಿಗೆ ಬರೆದು ತಿಳಿಸಲಾಯಿತು. ಆಗ ಕರ್ನಲ್ ಸಾಹೇಬ (ಡಿಕನ್)ನು ಸೈನ್ಯ ಜಮಾಯಿಸಿ ಮತ್ತೆ ಕಿತ್ತೂರ ಮೇಲೆ ಎರಗಲು ಸಜ್ಜಾದನು. ಇದನ್ನು ತಿಳಿದ ಚೆನ್ನಮ್ಮ ಮೊಗಲಾಯಿಗೆ ಪತ್ರ ಬರೆದು ನೆರವನ್ನು ಕೋರಿದಳು. ಆಗ ಚೆಂದೂಲಾಲನು ಹತ್ತು ಸಾವಿರ ಫೌಜನ್ನು ತನ್ನ ತಮ್ಮನ ನೇತೃತ್ವದಲ್ಲಿ ಕಳುಹಿಸಿದನು. ಸೈನ್ಯ ಬಾಗಡಕೋಟಿ(ಬಾಗಲಕೋಟಿ) ಮುಖಾಂತರ ಕಿತ್ತೂರಿಗೆ ಬಂದಿತು. ಆಗ ಆಂಗ್ಲರು ಬಳ್ಳಾರಿಯಿಂದ (ಕುಂಬಾರ ಅರಸನ) ದಂಡು ತರಿಸಿದರು. ಕಿತ್ತೂರಿನ ಸೈನಿಕರು ಒತ್ತಾಯದಿಂದ ಚೆನ್ನಮ್ಮನ ಅಪ್ಪಣೆ ಪಡೆದು, ವೈರಿ ಸೈನ್ಯದ ಮೇಲೆ ಎರಗಿ, ಅದನ್ನು ಕೊಂದು ಹಿಂದಿರುಗಿದರು. ಆಗ ಕುಂಬಾರ ಅರಸನ ದಂಡು, ಮೈಸೂರು ದಂಡು ಕೂಡಿಸಿಕೊಂಡು ಹುಬ್ಬಳ್ಳಿ ಮಾರ್ಗವಾಗಿ ಕರ್ನಲ್ ಆಲ್ಬರ್ಟ್

ಸಾಹೇಬ ಕಿತ್ತೂರಿಗೆ ಮುತ್ತಿಗೆ ಹಾಕಿದನು. ಚೆನ್ನವ್ವ ಶಕ್ತಿ ಅವತಾರ ತಾಳಿ, ಆಂಗ್ಲ ಸೈನ್ಯವನ್ನು ಹಿಂದಕ್ಕೆ ಅಟ್ಟಿ, ಸೆರೆಸಿಕ್ಕವರನ್ನು ಗೌರವದಿಂದ ಕಂಡಳು. ನಿರಾಶೆಯಿಂದ ಕೂಡಿದ ಆಂಗ್ಲರು ಕರಣಿಕ ನರಸಿಂಗರಾಯನಿಗೆ ಲಂಚಕೊಟ್ಟು ಕೋಟೆ ಒಳಗಿನ ರಹಸ್ಯ ತಿಳಿದುಕೊಂಡರು. ಆ ಮೇರೆಗೆ ಗರಗದ ಹಳ್ಳದಿಂದ ಹೊರಟು, ಕಿತ್ತೂರ ಸಮೀಪಕ್ಕೆ ಬಂದು, ಕೆಮ್ಮಣ್ಣುಮಡ್ಡಿಯಲ್ಲಿ ಕಾದಿದರು. ಕಿತ್ತೂರು ಮೋಸದಲ್ಲಿ ಸೋತು ಹೋಯಿತು. ಚೆನ್ನವ್ವ ಮಲ್ಲಸರ್ಜ, ವೀರಪ್ಪ ದೇಸಾಯಿ, ಶಿವಲಿಂಗಸರ್ಜರನ್ನು ನೆನೆದು, ಸೊಸೆಯಂದಿರನ್ನು ಮುಂದಿಟ್ಟುಕ್ಕೊಂಡು ಕಣ್ಣೀರು ಹಾಕಿದಳು.

೧೩. ಕಿತ್ತೂರು ರಾಣಿಯ ಅಂತ್ಯ : (ಕರ್ತೃ–?)

ಕಿತ್ತೂರಿನ (ಎರಡನೆಯ)ಯುದ್ಧದಲ್ಲಿ ಬ್ರಿಟಿಶರ ಸೈನ್ಯ ಹಿಮ್ಮೆಟ್ಟತೊಡಗಿತು. ಆಗ ಪಿತೂರಿ ಕಾರಣವಾಗಿ ಕಿತ್ತೂರ ಮದ್ದಿಗೆ ಎಣ್ಣೆ ಸೇರಿಸಲಾಯಿತು. ಬ್ರಿಟಿಷರ ಸೈನ್ಯ ಕೆಮ್ಮಣ್ಣಿನ ಮರಡಿಗೆ ಬಂದು, ಕೋಟೆಯನ್ನು ಭಗ್ನಗೊಳಿಸಿ, ಊರೊಳಗೆ ನುಗ್ಗಿತು. ಕಿತ್ತೂರು ಹಾಳಾಯಿತು. ೧೨ ಸಾವಿರ ಸೈನ್ಯ ಕಂಗೆಟ್ಟಿತು. ಬ್ರಟಿಶರು ಅರಮನೆಗೆ ಬಂದರು. ಚೆನ್ನಮ್ಮನನ್ನು, ಅವಳ ಸೊಸೆ ಈರವ್ವನನ್ನು ಹೊಂಗಲಕ್ಕೆ ಸಾಗಿಸಿದರು.

ಘಟ್ಟದ ಗಜವೀರ, ರಾಯಣ್ಣ ಬಂದು ಚೆನ್ನವ್ವನನ್ನು ಕಂಡರು. ಚೆನ್ನವ್ವ, ಸೊಸೆ ಜಾನಕೀಬಾಯಿ ಸೆರೆಮನೆಯಲ್ಲಿಯೇ ತೀರಿಕೊಂಡರು. ಈರವ್ವನನ್ನು ಆಂಗ್ಲರು ಕುಸುಗಲ್ಲಿಗೆ ಒಯ್ದರು.

೧೪.ಕಿತ್ತೂರ ಚೆನ್ನವ್ವನ ಸೊಸಿ : (ಕರ್ತೃ–ಹೆಬ್ಬಳ್ಳಿ ಬಸವ)

ಕಿತ್ತೂರ ಚೆನ್ನವ್ವನ ಸೊಸೆ (ಈರವ್ವ) ಹೊಂಗಲ ಬಿಟ್ಟು ಹೋಗುವಾಗ ದುಃಖ ತಪ್ತಳಾದಳು. ಆರು ಆನಿ, ಹದಿನಾರು ಒಂಟಿ, ಹನ್ನೆರಡು ಸಾವಿರ ಕಾಲ್ದಳ, ಎಲ್ಲ ಕೈಬಿಟ್ಟು ಹೋದವೆಂದು ಮರುಗಿದಳು. ಕಲ್ಲೂರ ಕಲಬಸಪ್ಪ, ಕನ್ನೂರ ಮಲ್ಲಪ್ಪ, ಅವರಾದಿ ವೀರಪ್ಪ ಇವರೆಲ್ಲ ಕುಸಿದು ಹೋದರೆಂದು ದುಃಖಿಸಿದಳು. ಹೆಣ್ಣುಮಕ್ಕಳ ಉಡಿಗೆ ತೊಡಿಗೆ, ಹೊದಿಕೆಗಳೆಲ್ಲ ಹರಿದು ಹಂಚಿಹೋದವೆಂದು ಮರುಗಿದಳು. ಅವಳನ್ನು ಒತ್ತಾಯದಿಂದ ಧಾರವಾಡಕ್ಕೆ ಸಾಗಿಸಿದರು. ಸಂಗೊಳ್ಳಿ ರಾಯನಾಯಕ ಅವಳ ಸಹಾಯಕ್ಕೆ ಬರಬಹುದೆಂದು ಅವಸರ ಮಾಡಿದರು. ಬಳಿಕ ಅವಳನ್ನು ಧಾರವಾಡದಿಂದ ಕುಸುಗಲ್ಲ ಕೋಟೆಗೆ ಸಾಗಿಸಿದರು. ಚಿಂತೆಯಲ್ಲಿ ಸಂಗ್ರಾಣಿ ಬೇನೆ ಆವರಿಸಿತು. ನವಲಗುಂದದ ಕಾಡಸಿದ್ಧೇಶ್ವರನಲ್ಲಿಗೆ ಹೋಗಿ, ನಮಸ್ಕರಿಸಿ, ಧಾರವಾಡಕ್ಕೆ ಬಂದು ಪ್ರಾಣಬಿಟ್ಟಳು. ಶವವನ್ನು ಶೃಂಗರಿಸಿ ಪರಿವಾರದವರೆಲ್ಲ ದುಃಖಿಸಿದರು. ವಿಮಾನ ಕಟ್ಟಿ, ಮೆರವಣಿಗೆಯಲ್ಲಿ ಶವವನ್ನು ಒಯ್ದು ಸಮಾಧಿ ಮಾಡಿದರು. ಹೆಬ್ಬಳ್ಳಿ ಬಸವ ಇದನ್ನು ಪದಮಾಡಿದನು.

೧೫. ಈರವ್ವನ ದುರಂತ ಮರಣ : (ಕರ್ತೃ–?)

(ಕುಸುಗಲ್ಲ ಕೋಟೆಯಿಂದ) ಈರವ್ವನನ್ನು ಧಾರವಾಡಕ್ಕೆ ಸಾಗಿಸಿದರು. ಧಾರವಾಡದ ಉಳವಿ ಚೆನ್ನಬಸವಣ್ಣನ ಗುಡಿಯೊಳಗ ಇವಳ ಮೇಣೆ ಇಳುಹಿಸಿ, ಬೇಬರ್ ಸಾಹೇಬ ಒಂದೊಂದೇ ವಿಷದ ಗುಳಿಗೆ ಕೊಡುತ್ತ ಹೋದ. ಗೌಳಿಗರಲ್ಲಿ ಹಾಲು ತಂದು ಗುಳಿಗೆ ಬೆರೆಸಿ ಕುಡಿಸಿದ. ಈರವ್ವ ನಿಚ್ಚಣಿಕೆ ಏರಿ, ತನ್ನ ಕಿತ್ತೂರ ನೋಡಿ ಅತ್ತಳು. ವಿಷ ಮೈಯ್ಯನ್ನೆಲ್ಲ ಆವರಿಸಲು ತೀರಿಕೊಂಡಳು.

೧೬. ಕಿತ್ತೂರಿನ ಕೊನೆಯ ಕಾಳಗ : (ಕರ್ತೃ–ಚೌಬಾರಿ ಅಡಿವೆಪ್ಪಗೌಡ)

(ಇದು ಸಂಗೊಳ್ಳಿ ರಾಯಣ್ಣನಿಗೆ ಸಂಬಂಧಿಸಿದ ಹಾಡು. ಹೀಗಿದ್ದೂ ಕಿತ್ತೂರಿನ ಇತಿಹಾಸ ಭಾಗಶಃ ಬರುವುದರಿಂದ ಇದನ್ನು ಇಲ್ಲಿ ಆಯ್ದುಕೊಳ್ಳಲಾಗಿದೆ). ಮಲ್ಲಸರ್ಜ ಆಳುವಾಗ ರಾಯಣ್ಣ ಸಣ್ಣವನಾಗಿದ್ದ. ದೇಶದೇಶ ತಿರುಗಿದ ರಾಯಣ್ಣ ಬೆಳಗಾವಿಗೆ ಬಂದು, ಅರಿವೆ ವ್ಯಾಪಾರದ ನೆವದಲ್ಲಿ ಬ್ರಿಟಿಶರ ವಿರುದ್ಧ ಜನರನ್ನು ಸಂಘಟಿಸತೊಡಗಿದ. ಈಗ ಖೊದಾನಪುರ ಲಿಂಗನಗೌಡ, ನೇಗಿನಹಾಳ ವೆಂಕಟಗೌಡ ಪಿತೂರಿ ನಡೆಸಿ ಆಂಗ್ಲರ ಪರವಾಗಿ ನಿಂತರು. ಚಾಪ್ಲಿನ್ ಮೊದಲಾದವರು ಕಿತ್ತೂರನ್ನು ಮುತ್ತಿ ನಾಶಮಾಡಿದರು.

ಸಂಗೊಳ್ಳಿ ಗ್ರಾಮದಲ್ಲಿ ರಾಯಣ್ಣನ ಕುಟುಂಬವಿದ್ದಿತು. ಪಾಚ್ಯಾನ ಕಾಲದಲ್ಲಿ ಈ ಮನೆತನಕ್ಕೆ ವತನ ಬಂದಿದ್ದಿತು. ಸಂಪಗಾವಿಯಲ್ಲಿ ಅಪ್ಪಾರಾವ್ ಕಂಠಿ ಸುಬೇದಾರನಾಗಿದ್ದ. ಆಗ ಸಂಗೊಳ್ಳಿಯಲ್ಲಿ ಬಾಳಪ್ಪ ಕುಲಕರ್ಣಿಯಾಗಿದ್ದ. ರಾಣಿ ಸರಕಾರದ ಆದೇಶದಂತೆ ರಾಯಪ್ಪನ ಮನೆತನದ ವತನ ಕಸಿದುಕೊಳ್ಳಲು ಕುಲಕರ್ಣಿ, ಪ್ರಯತ್ನಿಸಿದ. ರಾಯಣ್ಣನೊಡಗೂಡಿ ಮಲಪ್ರಭಾ ನದಿಗೆ ಹೋಗಿದ್ದ ಕುಲಕರ್ಣಿ ತನ್ನ ದೋತರ ಸೆಳೆದು ಒಣಗಿಸಲು ರಾಯಣ್ಣನಿಗೆ ಹೇಳಿದ. ಸಿಟ್ಟಿಗೆದ್ದ ಸ್ವಾಭಿಮಾನಿ ರಾಯಪ್ಪ ಕುಲಕರ್ಣಿಯನ್ನು ನಡುನೀರಿಗೆ ಒಯ್ದು ಮುಳುಗಿಸಲು ಆರಂಭಿಸಿದ. ಅಂಜಿದ ಕುಲಕರ್ಣಿ ಕ್ಷಮೆ ಕೇಳಿ ಜೀವ ಉಳಿಸಿಕೊಂಡನಾದರೂ ರಾಯಪ್ಪನ ವತನ ಕಸಿದುಕೊಳ್ಳುವುದನ್ನು ಇನ್ನೂ ತೀವ್ರಗೊಳಿಸಿದ. ವಿರೋಧ ಒಳಗೊಳಗೇ ಬೆಳೆದುನಿಂತಿತು. ರಾಯಪ್ಪ ಬಿಚ್ಚುಗತ್ತಿ ಚೆನ್ನಬಸವನನ್ನು ಕಂಡ. ಗೆಳೆಯರೆಲ್ಲ ಒಟ್ಟಾದರು. ಸೈನ್ಯ ಕೂಡಿಸಿದರು. ಕುಲಕರ್ಣಿ ಸಂಪಗಾವ ಸುಬೇದಾರನಲ್ಲಿಗೆ ಹೋಗಿ, ಈ ಸುದ್ದಿ ಒಪ್ಪಿಸಿದ. ಸುಬೇದಾರನ ಅಪ್ಪಣೆ ಮೇರೆಗೆ ಫಕರು ಜಮಾದಾರ ರಾಯಪ್ಪನ ಸದ್ದು ಅಡಗಿಸಲು ಸಿಪಾಯಿಗಳೊಂದಿಗೆ ಹೋದ. ರಾಯಪ್ಪ ಸಿಗಲಿಲ್ಲ. ಅವನ ತಾಯಿ ತಾಯವ್ವನನ್ನು ಕೇಳಿದ. ಕೊನೆಗೆ ಅವಳ ಬೆನ್ನಮೇಲೆ ಮಣದ ಕಲ್ಲು ಹೇರಿ ಕೇಳಿದ. ರಾಯಪ್ಪನಿಗೆ ಈ ಸುದ್ದಿ ಮುಟ್ಟಿತು. ಕದ್ದು ತಾಯಿಯ ಹತ್ತಿರ ಬಂದು ಮರಮರ ಮರುಗಿದ. ಅಂದೇ ರಾತ್ರಿ ಜಮಾದಾರನ ಡೇರೆ ಮೇಲೆ ಅವನೂ, ಅವನ ಗೆಳೆಯರೂ ದಾಳಿಮಾಡಿ, ಹಾಡುತ್ತ ಹಾಡುತ್ತ ಅಮಟೂರಿಗೆ ಹೋದರು. ಅಲ್ಲಿ ಜೋಳದ ಹಗೇಗಳನ್ನು ಲೂಟಿಮಾಡಿ ಬಡವರಿಗೆ ಹಂಚಿದರು.

ರಾಯಪ್ಪ ತಾಯಿಯ ಹತ್ತಿರ ಹೋಗಿ "ನನ್ನನ್ನು ಇನ್ನು ಮೇಲೆ ನೀನು ಮರೆಯಬೇಕು" ಎಂದು ಹೇಳಿ, ಅಲ್ಲಿಂದ ಮೊಗಲಾಯಿಗೆ ಸಾಗಿ, (ಸುರಪುರ) ಮಹಾರಾಜನನ್ನು ಕಂಡು, ಅವನ ಆದೇಶದಂತೆ ಹುಲಿಕಾಳಗ, ಶಸ್ತ್ರ–ಮಲಗಂಬಗಳಲ್ಲಿ ಗೆದ್ದು, ಚುಳಚವಾಡ ಭರಮಣ್ಣನ ರುಂಡ ಕತ್ತರಿಸಿದ. ಇದರಿಂದ ಸಂತುಷ್ಟನಾದ ಮಹಾರಾಜನಿಂದ ಸೈನ್ಯಪಡೆದು, ಬಿಚ್ಚುಗತ್ತಿ ಚೆನ್ನಬಸಪ್ಪ ಮೊದಲಾದ ವೀರರನ್ನು ಕರೆದುಕೊಂಡು, ಕಿತ್ತೂರ ಮುಖಾಂತರ ಸಂಗೊಳ್ಳಿಗೆ ಹೋದನು. ಅಲ್ಲಿಂದ ಮುನ್ನಡೆದು ಬೈಲಹೊಂಗಲದಲ್ಲಿ ಕಿತ್ತೂರ ಚೆನ್ನಮ್ಮನನ್ನು ಕಂಡು ಭಾಷೆಕೊಟ್ಟು, ಬ್ರಿಟಿಶರ ದಂಡನ್ನು ಹಲವು ಸಂದರ್ಭಗಳಲ್ಲಿ ಸಂಹಾರ ಮಾಡಿದನು. (ಇಲ್ಲಿಗೆ ಈ ಹಾಡು ಅಪೂರ್ಣ ಸ್ಥಿತಿಯಲ್ಲಿ ನಿಂತಿದೆ).

IV

ಶಿಷ್ಟಪದಕ್ಕೆ ಸಂಬಂಧಿಸಿದ ಮೊದಲಿನ ಏಳು ಪಠ್ಯಗಳಲ್ಲಿ ಮಲ್ಲೇಂದ್ರ ಮಾನಸೋಲ್ಲಾಸ, ಕಿತ್ತೂರು ಮಲ್ಲಸರ್ಜನ ಪದಗಳು– ಈ ಕೃತಿಗಳನ್ನು ಅಣ್ಣಿಗೆರೆಯ ಅಮೃತೇಶ್ವರದೇವರ ಭಕ್ತನಾದ ಕಾಶೀರಾಜ ಬರೆದಿದ್ದಾನೆ. ಮಲ್ಲೇಂದ್ರ ಭಕ್ತಿತರಂಗಿಣಿ, ಮಲ್ಲೇಂದ್ರ ಪೂಜಾವಿಲಾಸ, ಮಲ್ಲೇಂದ್ರ ಪೂಜಾವಿಲಾಸ ತಾರಾವಳಿ, ಮಲ್ಲೇಂದ್ರ ವಿಜಯ, ಗಣೇಶೋತ್ಸವಗಳ ಕೊನೆಗೆ ತಪ್ಪದೇ ಸಿದ್ಧೇಶನೆಂಬವನ ಸ್ತುತಿ ಬರುವುದರಿಂದ ಇವೆಲ್ಲವುಗಳನ್ನು ಒಬ್ಬನೇ ಬರೆದಿರಬಹುದು. ಕವಿ ಹೆಸರು ಶೋಧಿಸಬೇಕಾಗಿದೆ. ಇವುಗಳ ಕರ್ತೃ ಮುನವಳ್ಳಿ ನೀಲಕಂಠಾರ್ಯನೆಂದು ಆಸ್ಥಾನ ಸಾಹಿತ್ಯ ಭಾಗ–೨ ರಿಂದ ಇತ್ತೀಚೆ ತಿಳಿದುಬಂದಿದೆ.

ಜನಪದಕ್ಕೆ ಸಂಬಂಧಿಸಿದ ೨ನೆಯ ಭಾಗದ ೪ನೆಯ ನಂಬರಿನ "ಕಿತ್ತೂರ ಮಲ್ಲಸರ್ಜನ ಲಾವಣಿ" , ೫ನೆಯ ನಂಬರಿನ "ಸೂಳೆ–ಸರ್ಜರ ಪ್ರಣಯ" ಕೃತಿಗಳನ್ನು ರುದ್ರಕವಿ ಬರೆದಿರುವನೆಂದು "ಕಿತ್ತೂರ ಬಂಡಾಯ"ದ ಸಂಪಾದಕರು ಸೂಚಿಸಿದ್ದಾರೆ. ೯ನೆಯ ನಂಬರಿನ 'ವೀರರಾಣಿ ಚೆನ್ನವ್ವ' ಹಾಡನ್ನು ಮಾಗಡಿ ಬಸವ, ೧೧ನೆಯ 'ಕಿತ್ತೂರಿನ ಮುತ್ತಿಗೆ', ೧೪ನೆಯ 'ಕಿತ್ತೂರ ಚೆನ್ನವ್ವನ ಸೊಸಿ' ಪದಗಳನ್ನು ಹೆಬ್ಬಳ್ಳಿ ಬಸವ, ೧೬ನೆಯ 'ಕಿತ್ತೂರಿನ ಕೊನೆಯ ಕಾಳಗ'ವನ್ನು ನೇಸರಗಿ ಚೌಬಾರಿ ಅಡಿವೆಪ್ಪಗೌಡ ಬರೆದಿದ್ದು, ಮಿಕ್ಕವುಗಳನ್ನು ಬರೆದವರ ಹೆಸರು ಗೊತ್ತಾಗುವುದಿಲ್ಲ.

* * * * *

ಮೊದಲನೆಯ ಭಾಗದ ೭ ಕೃತಿಗಳಲ್ಲಿ ಮಲ್ಲೇಂದ್ರ ಪೂಜಾವಿಲಾಸ ಪರಿವರ್ಧಿನಿ ಷಟ್ಪದಿ, ಮಲ್ಲೇಂದ್ರ ವಿಜಯ ವಾರ್ಧಕ ಷಟ್ಪದಿಯಾಗಿವೆ. ಮಲ್ಲೇಂದ್ರ ಭಕ್ತಿತರಂಗಿಣಿ, ಮಲ್ಲೇಂದ್ರ ಮಾನಸೋಲ್ಲಾಸ, ಗಣೇಶೋತ್ಸವಗಳು ೪ ಮಾತ್ರೆಯ ೪ ಗಣವುಳ್ಳ ಮೊದಲನೆಯ ಪಾದ, ೪ ಮಾತ್ರೆಯ ೩ ಗಣ ಮೇಲೊಂದು ಗುರುವುಳ್ಳ ಎರಡನೆಯ ಪಾದ, ಇದೇ ರೀತಿ ಉತ್ತರಾರ್ಧವುಳ್ಳ ಚೌಪದಿಗಳಾಗಿವೆ. ಮಲ್ಲೇಂದ್ರ ಪೂಜಾ ವಿಲಾಸ ತಾರಾವಳಿಯು ತಾರಾವಳಿ ಪ್ರಕಾರವಾಗಿದೆ. ಕಿತ್ತೂರ ಮಲ್ಲಸರ್ಜನ ಪದಗಳು ಪಲ್ಲವಿ, ಅಂಕಿತಗಳನ್ನೊಳಗೊಂಡ ಹಾಡುಗಳಾಗಿವೆ.

ಶ್ರೀ ನಾಗಶೆಟ್ಟಿ ಮಾಸ್ತರರಿಗೆ ಸಂಬಂಧಿಸಿದ ಇಲ್ಲಿಯ ಒಂದು ಸುದೀರ್ಘ ಹಾಡಿನ ಕವರ್ ಮೇಲೆ "ಕಿತ್ತೂರ ಮಲ್ಲಸರ್ಜನ ಲಾವಣಿ" ಎಂದು, ಒಳಗೆ ಕೃತಿಯ ಆರಂಭದಲ್ಲಿ "ಕಿತ್ತೂರ ಮಲ್ಲಸರ್ಜನ ದುಂದುಭಿ ಹೋಳಿಪದ ಹಾಕಿ ಬರೆಯಲ್ಪಟ್ಟಿದೆ" ಎಂದು ಇದೆ. ಇನ್ನೊಂದನ್ನು 'ಮಲ್ಲಸರ್ಜನ ಕಾವ್ಯ' ಹೆಸರಿನಿಂದ ತಲ್ಲೂರು ರಾಯನಗೌಡರೂ "ಮಲ್ಲಸರ್ಜ ದುಂದುಮೆ" ಹೆಸರಿನಿಂದ ಡಾ. ಸುಂಕಾಪುರ ಅವರೂ ಪ್ರಕಟಿಸಿದ್ದಾರೆ. ಇಲ್ಲಿ ೧,೨,೭,೧೦,೧೩ ಕೋಲು ಪದಗಳಾಗಿವೆ. ೬,೧೫ ಸೋಬಾನೆ ಪದಗಳು. ೧೬ನೆಯ ಪದವನ್ನು ಕುರಿತು "ಇದು ಲಾವಣಿ ಪದ. ಮೊದಲು ಹೋಳಿ, ನಂತರ ದುಂದುಭಿ, ರಿಯಾಸತ, ಗುಜುಗುಜು ಮಾಮರೆ ಹೀಗೆ ನಾಲ್ಕು ವಿಧದ ದಾಟಿಯಲ್ಲಿ ಪದ ಹಾಡುತ್ತಾರೆ" ಎಂದು 'ಕಿತ್ತೂರ ಕಾಳಗ' ಕೃತಿಯಲ್ಲಿ ದಾಖಲಿಸಲಾಗಿದೆ. ಮಿಕ್ಕುವು ಲಾವಣಿ ಮತ್ತು ಸಾಮಾನ್ಯ ಹಾಡುಗಳಾಗಿವೆ.

* * * * *

ಈ ಸಂಪುಟದ ಶಿಷ್ಟಕೃತಿಗಳ ಮೂಲಕ ಒಂದಿಷ್ಟು ಹೊಸ ವಿಷಯಗಳು ಮೊದಲ ಸಲ ಬೆಳಕಿಗೆ ಬರುತ್ತವೆ. ಕಿತ್ತೂರ ಸಂಸ್ಥಾನದ ರಾಜಕೀಯ, ಇದಕ್ಕಿಂತ ಧಾರ್ಮಿಕ ವಿಷಯಗಳೇ ಇಲ್ಲಿ ಹೆಚ್ಚು ಪ್ರಮಾಣದಲ್ಲಿವೆ. "ಮಲ್ಲೇಂದ್ರ ವಿಜಯ" ರಾಜಕೀಯ ವಸ್ತುವನ್ನು, ಮಿಕ್ಕ "ಮಲ್ಲೇಂದ್ರ ಭಕ್ತಿತರಂಗಿಣಿ", "ಮಲ್ಲೇಂದ್ರ ಪೂಜಾ ವಿಲಾಸ", "ಮಲ್ಲೇಂದ್ರ ಪೂಜಾವಿಲಾಸ ತಾರಾವಳಿ", "ಗಣೇಶೋತ್ಸವ"ಗಳು ಧಾರ್ಮಿಕ ವಸ್ತುವನ್ನು ಆಶ್ರಯಿಸಿವೆ. ಮಲ್ಲೇಂದ್ರ ಮಾನಸೋಲ್ಲಾಸ, ಕಿತ್ತೂರ ಮಲ್ಲಸರ್ಜನ ಪದಗಳು ಅರಸನ ಧೀರೋದಾತ್ತ ಜೀವನವನ್ನು ವರ್ಣಿಸುತ್ತವೆ.

ಕಿತ್ತೂರ ಸಂಸ್ಥಾನವನ್ನು ಕುರಿತ ಜಾನಪದ ಸಾಹಿತ್ಯ ಸಮಕಾಲೀನ ಸಂದರ್ಭದಲ್ಲಿಯೇ ಹುಟ್ಟಿದೆ. ಆ ಮೇಲೆಯೂ ಹುಟ್ಟಿದೆ. ಈಗಲೂ ಹುಟ್ಟುತ್ತಲಿದೆ. ಈ ಮೂರು ಬಗೆಗಳಲ್ಲಿ ಇಲ್ಲಿ ಪ್ರಕಟವಾದುದು ಸಮಕಾಲೀನ ಜಾನಪದ ಸಾಹಿತ್ಯ. ಇದನ್ನು ಬರೆದವರಲ್ಲಿ ಒಬ್ಬಿಬ್ಬರು ಈ ಬಂಡಾಯವನ್ನು ಕಣ್ಣಾರೆ ಕಂಡವರು. ನೇಸರಗಿ ಚೌಬಾರಿ ಅಡಿವೆಪ್ಪನಂಥವರು ನೇರವಾಗಿ ಈ ಯುದ್ಧದಲ್ಲಿ ಭಾಗವಹಿಸಿದವರು. ಹೀಗಾಗಿ ಇದು ಹೆಚ್ಚು ವಿಶ್ವಸನೀಯವೆನಿಸುತ್ತದೆ. ಆದರೆ ಮೌಖಿಕ ಪರಂಪರೆ ಕಾರಣವಾಗಿ ಅಲ್ಲಲ್ಲಿ ಶಬ್ದ-ಸಾಲುಗಳಲ್ಲಿ ಲೋಪ ಆದೇಶ ಆಗಮ ಕ್ರಿಯೆ ಘಟಿಸಿವೆ. ಶಬ್ದಗಳು ರೂಪಾಂತರಗೊಂಡಿವೆ. ಶ್ರೀ ದೊಡ್ಡಭಾವೆಪ್ಪ ಮೂಗಿ ಮೊದಲಾದವರ ಪ್ರಕಟನೆಗಳಲ್ಲಿ ಚರಣವಿನ್ಯಾಸ ಅಸ್ತವ್ಯಸ್ತವಾಗಿದೆ. ಇದೆಲ್ಲವನ್ನು ನಾವು ತಕ್ಕಮಟ್ಟಿಗೆ ಸರಿಪಡಿಸಿದ್ದರೂ ಇನ್ನೂ ದೋಷ ಉಳಿದುಕೊಂಡಿದೆಯೆಂದು ಒಪ್ಪಿಕೊಳ್ಳುತ್ತೇವೆ. ಹೀಗಿದ್ದೂ ಈ ಜಾನಪದ ಸಾಮಗ್ರಿ ಅನೇಕ ಚಾರಿತ್ರಿಕ ಅಂಶಗಳನ್ನು ನಮಗೆ ಒದಗಿಸುತ್ತದೆ. ಅದರಲ್ಲಿಯೂ ಯುದ್ಧ-ದುರಂತಗಳ ವಿವರ ಇಲ್ಲಿ ಅಧಿಕ ಪ್ರಮಾಣದಲ್ಲಿ ಸಿಗುತ್ತದೆ. ಅನ್ಯ ಆಕರಗಳೊಂದಿಗೆ ಈ ಸಾಹಿತ್ಯದ ತೌಲನಿಕ ಅಧ್ಯಯನ ನಡೆಸಿ, ಪಾಠವನ್ನು ಸರಿಪಡಿಸುವ, ಸತ್ಯಾಸತ್ಯತೆಯನ್ನು ಕಂಡುಕೊಳ್ಳುವ ಕೆಲಸ ಇನ್ನು ಮುಂದೆ ನಡೆಯಬೇಕಾಗಿದೆ.

V

ಅಪ್ರಕಟಿತ ಸಾಹಿತ್ಯ ಪ್ರಕಟನೆ, ನಾವು ಅಗತ್ಯ ಮಾಡಬೇಕಾದ ಕೆಲಸವಾಗಿದೆ. ಈ ದಿಸೆಯಲ್ಲಿ ಈ ಸಂಪುಟ ಒಂದು ಚಾರಿತ್ರಿಕ ಪ್ರಯತ್ನವೆಂದೇ ಹೇಳಬೇಕು. ಶ್ರೀ ನಾಗಶೆಟ್ಟಿ ಮಾಸ್ತರರನ್ನು ಕುರಿತು ಎಂ.ಫಿಲ್. ಅಧ್ಯಯನ ನಡೆಸಿದ ನಮ್ಮ ವಿದ್ಯಾರ್ಥಿನಿ ಕುಮಾರಿ ಅನ್ನಪೂರ್ಣ ಹತ್ತಿಮತ್ತೂರ ಅವರ ಶ್ರಮದ ಫಲವಾಗಿ ನಾಗಶೆಟ್ಟಿ ಮಾಸ್ತರ ಸಂಗ್ರಹದ ಕೃತಿಗಳು ನಮಗೆ ಲಭ್ಯವಾದವು. ಹೀಗಾಗಿ ಲಿಂಗೈಕ್ಯ ಶ್ರೀ ನಾಗಶೆಟ್ಟಿ ಮಾಸ್ತರ ಅವರಿಗೂ ಕುಮಾರಿ ಅನ್ನಪೂರ್ಣ ಹತ್ತಿಮತ್ತೂರ ಅವರಿಗೆ ನಮ್ಮ ಪ್ರಥಮ ಕೃತಜ್ಞತೆಗಳು ಸಲ್ಲುತ್ತವೆ. ಪ್ರಕಟಿಸಲು ಒಪ್ಪಿಗೆ ನೀಡಿದ ಅವರ ಮೊಮ್ಮಕ್ಕಳಾದ ಶ್ರೀ ಸುಭಾಸ್ ನಾಗಶೆಟ್ಟಿ, ಸದಾನಂದ ನಾಗಶೆಟ್ಟಿ ಅವರಿಗೂ, ಇವುಗಳನ್ನು ದೊರಕಿಸಿಕೊಡುವಲ್ಲಿ ನೆರವಾದ ಪ್ರೊ. ವಿ.ಜಿ. ಮಾರಿಹಾಳ ಅವರಿಗೂ ಕೃತಿ ಪ್ರಕಟನೆಯಲ್ಲಿ ತೀವ್ರ ಆಸಕ್ತಿವಹಿಸಿದ ಶ್ರೀ ಬಿ.ಆರ್. ಜಕಾತಿ, ಶ್ರೀ ಎಸ್.ಜಿ. ರಣಗಟ್ಟಿಮಠ ಅವರಿಗೂ, ಮಲ್ಲೇಂದ್ರ ಪೂಜಾವಿಲಾಸ ತಾರಾವಳಿ ಪ್ರಕಟಿಸಿದ ಡಾ. ವೀರಣ್ಣ ರಾಜೂರ ಅವರಿಗೂ ನಾವು ಕೃತಜ್ಞರಾಗಿದ್ದೇವೆ.

ಎರಡನೆಯ ಭಾಗದ ಎಲ್ಲ ಜಾನಪದ ಹಾಡುಗಳನ್ನು ಶ್ರೀ ನಾಗಶೆಟ್ಟಿ ಮಾಸ್ತರ ಹಸ್ತಪ್ರತಿ, ಶ್ರೀ ದೊಡ್ಡಭಾವೆಪ್ಪ ಮೂಗಿ, ಶ್ರೀ ರಾಯನಗೌಡ ತಲ್ಲೂರು, ಡಾ. ಎಂ. ಎಸ್. ಸುಂಕಾಪುರ, ಶ್ರೀ ಕ್ಯಾತನಹಳ್ಳಿರಾಮಣ್ಣ, ಅವರ ಪ್ರಕಟಿತ ಸಾಮಗ್ರಿಯಿಂದ ಎತ್ತಿಕೊಳ್ಳಲಾಗಿದೆ. ಇವರೆಲ್ಲರಿಗೂ ನಾವು ಋಣಿಯಾಗಿದ್ದೇವೆ.

ಇಲ್ಲಿಯ ೧, ೬, ೭, ೧೦, ೧೨, ೧೩, ೧೬ ಈ ಜಾನಪದ ಹಾಡುಗಳನ್ನು ತಲೆಯ ಮೇಲಿರುವ ಟಿಪ್ಪಣಿ ಸಹಿತ ಸ್ವೀಕರಿಸಿದ್ದೇವೆ. ದೊಡ್ಡಭಾವೆಪ್ಪ ಮೂಗಿ ಅವರು ಬರೆದ ಈ ಟಿಪ್ಪಣಿಗಳು ತುಂಬ ಅಧಿಕೃತವಾಗಿದ್ದು, ಅವುಗಳ ಚಾರಿತ್ರಿಕ ಮಹತ್ವವನ್ನು ಮನಗಂಡು ಹೀಗೆ ಮಾಡಿದ್ದೇವೆ. ಮೇಲಾಗಿ ಈ ಟಿಪ್ಪಣಿಗಳು ಆಯಾ ಹಾಡುಗಳ ಅಭ್ಯಾಸಕ್ಕೆ ನೆರವಾಗುತ್ತವೆ. ಈ ಉಪಕ್ರಮಕ್ಕಾಗಿ ನಾವು ಶ್ರೀ ದೊಡ್ಡಭಾವೆಪ್ಪ ಮೂಗಿ ಅವರಿಗೆ ವಿಶೇಷ ಕೃತಜ್ಞರಾಗಿದ್ದೇವೆ.

ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯ ಮಠದ "ವೀರಶೈವ ಅಧ್ಯಯನ ಸಂಸ್ಥೆ" ನಮ್ಮ ನಾಡಿನ ಸುಪ್ರಸಿದ್ಧ ಗ್ರಂಥಪ್ರಕಾಶನ ಕೇಂದ್ರವಾಗಿದೆ. ಪೂಜ್ಯ ಶ್ರೀ ತೋಂಟದ ಸಿದ್ಧಲಿಂಗಮಹಾಸ್ವಾಮಿಗಳ ಪೀಠಾರೋಹಣದ ೨೫ನೆಯ ವರ್ಷ ಸಂದರ್ಭದಲ್ಲಿ ೨೫ ಗ್ರಂಥಗಳು ಪ್ರಕಟವಾಗುತ್ತಿರುವುದು, ಕನ್ನಡ ಪುಸ್ತಕ ಪ್ರಕಟಣೆಯ ಇತಿಹಾಸದಲ್ಲಿ ಒಂದು ವಿಶೇಷ ಘಟನೆ. ಇದರ ಅಂಗವಾಗಿ ಪ್ರಸ್ತುತ ಕೃತಿ ಬೆಳಕು ಕಾಣುತ್ತಲಿದೆ. ಕಿತ್ತೂರು ಸಂಸ್ಥಾನದ ಅಧ್ಯಯನದ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಎನಿಸುವ ಈ ಕೃತಿ 'ಪುಸ್ತಕದ ಸ್ವಾಮೀಜಿ' ಎಂದೇ ಪ್ರಸಿದ್ಧರಾಗಿರುವ ಪೂಜ್ಯ ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಪ್ರೇರಣೆಯಿಂದ ಪ್ರಕಟವಾಗುತ್ತಲಿದ್ದು, ಅವರಿಗೆ ನಮ್ಮ ಭಕ್ತಿಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ. ಈ ಕೃತಿ ಪ್ರಕಟಣೆಗೆ ಗ್ರಂಥದಾನ ನೀಡಿದ ಶ್ರೀ ಸಂಕಪ್ಪ ಬನಪ್ಪ ಸಂಕಣ್ಣನವರ, ಗದಗ ಅವರಿಗೂ, ಪೀಠಾರೋಹಣ ಸಮಾರಂಭ ಸಮಿತಿಯ ಸದಸ್ಯರಿಗೂ, ಅಂದವಾಗಿ ಮುದ್ರಿಸಿದ ಗದುಗಿನ ತ್ವರಿತ ಮುದ್ರಣಾಲಯದ ಶ್ರೀ ಕೆ. ಅಶೋಕ ಅವರಿಗೂ ನಾವು ಋಣಿಯಾಗಿದ್ದೇವೆ.

೧. ಮಾರ್ಚ್ ೧೯೯೯ —ಸಂಪಾದಕರು

❖❖

*

ಪರಿವಿಡಿ

ಭಾಗ : ಒಂದು

ಭಾಗ : ಎರಡು

ಭಾಗ : ಒಂದು

೧

ಮಲ್ಲೇಂದ್ರ ಭಕ್ತಿತರಂಗಿಣಿ

ಬಸವಪುರಾಣ ಶ್ರವಣಸುಖವನಾ
ನುಸುರಲಾರೆ ವಸುಮತಿಯೊಳಗೆ।
ರಸಿಕರಸಾಧಿಪ ಮಲ್ಲಸರ್ಜನೋ
ದಿಸಿದನು ಶ್ರೀ ಕಿತ್ತೂರೊಳಗೆ॥ ॥೧॥

ಶ್ರೀ ಗುರುವರ ಸುಖಸಾಗರ ಶಾಂತ ಶಿ
ವಾಗಮವಿನುತ ವಿಮಲಚರಿತ।
ಯೋಗನಿರತ ಮಹಿಮಾಗರಿಮಾಶ್ರಿತ
ಪೂಗವರದ ಪೊರೆಯನವರತ॥ ॥೨॥

ಶ್ರೀಕರದೇವ ದಯಾಕರ ಬಾಲಸು
ಧಾಕರಶೇಖರ ಶಂಕರನೆ।
ಮಾಕುಮಾರಹರ ಮಂಗಳವೀವುದು
ಶ್ರೀಕಂಧರ ಸಿದ್ಧೇಶ್ವರನೆ॥ ॥೩॥

ಖ್ಯಾತೆ, ಸುಗುಣಸಂಘಾತೆ ಸುರಾರ್ಚಿತ
ಪೂತೆ, ಪೂರ್ಣಪೂಜಾನಿರತೆ।
ಭೂತೇಶಾಂಕಸಮೇತೆ, ಭೂಮಿಧರ
ಜಾತೆ, ಸಲಹು ಜಗತೀಮಾತೆ॥ ॥೪॥

ಸರಸಿರುಹಾಸನನರಸಲ್ ಕಾಣದ
ಗಿರಿಶ ಶಿರಸ್ಥಾನದಿ ಮೆರೆವ।
ಸುರ ಗಂಗಾಂಬೆಯೆ ಚರಿಸಿ ಮಲ್ಲಭೂ
ವರ[೧][ಗೆ][೧] ಕಾಣಿಸಿದಿ ನಿಜಪುರವ॥ ॥೫॥

ಸುರರನು ಭೀಕರಗೊಳಿಸುವ ಗರಳವ
ಪರಮಾಮೃತವೆಂದದ ಸವಿದು।
ಪೊರೆದ ಜಗದ್ಗುರು ನಂಜುಂಡೇಶ್ವರ
ಕರುಣಾಕರ ಪಾಲಿಸು ಒಲಿದು॥ ॥೬॥

ಸರ್ವೇಶ್ವರನರ್ಧಾಂಗಿ ಸದಾಶಿವೆ
ಗೀರ್ವಾಣಾರ್ಚಿತ ಪದಯುಗಳೆ।
ಪರ್ವತರಾಜಕುಮಾರಿ ಭವಾನಿಯೆ
ಸರ್ವಮಂಗಳೆಯೆ ಪೊರೆ ವಿಮಳೆ॥ ॥೭॥

ಕ್ರೂರ ತಾರಕಾಸುರನ ವಧಿಸಿ ಸುರ
ವಾರವ ಸಲಹಿದ ಷಣ್ಮುಖನು।
ಸಾರ ಷಡಕ್ಷರ ಪೂರ ವಿಚಾರ ಕು
ಮಾರೇಶ್ವರ ಪೊರೆಯನೆ ತಾನು॥ ॥೮॥

ಗೌತಮ ಘಟಸಂಜಾತ ಶಿಲಾದ ಪು
ನೀತ ದಧೀಚಿ ಪುರೋಗಮರು।
ಪಾತಕಘನ ಜೀಮೂತರು ಶಿವಸಂ
ಪ್ರೀತರು ಸಲಹಲಿ ಸುಖಯುತರು॥ ॥೯॥

ವರದೇಕೋತ್ತರ ಪರಿವಿಡಿ ಸ್ಥಲಗಳ
ನರುಹಿ ಷಟ್ಸ್ಥಲಕೆ ವರನೆನಿಸಿ।

೧-೧ ನ(ಮೂ)

ಮೆರೆವ ಜಗದ್ಗುರು ಮುರಿಗೇಶ್ವರ ಸುಖ
ಕರ ರಕ್ಷಿಸು ತನಯನ ವಹಿಸಿ॥ ॥೧೦॥

ಹರಚರವೇಷವ ಧರಿಸಿ ಚರಿಸಿಯಾ
ಚರಿಸಿ ವಿರತಿ ವಿಭವದಿ ಬಂದು।
ದುರದುಂಡೀಶ್ವರನೆನಿಸಿದ ಮಹಿಮಾ
ಕರ ರಕ್ಷಿಸು ಕರುಣಾ ಸಿಂಧು॥ ॥೧೧॥

ಶ್ರೀಕಂಠಾಕೃತಿ ಲೋಕಪಾವನಾ
ರ್ಥಾ ಕಾರ್ಯಕೆ ಚರವೇಷವನು।
ಕೈಕೊಂಡವನಿಪ ಮಲ್ಲೇಂದ್ರಾನ್ವಯ
ಸಾಕುವ ಗುರುಸಿದ್ಧೇಶ್ವರನು॥ ॥೧೨॥

ಅರಿಗಳ ಭಯ ಪರಿಹರಿಸುವ ಕಾರಣ
ಪರಮವಿಭವ ಪೆಚ್ಚಿಸಲೆಂದು।
ಸಿರಿಗೆ ಲಕ್ಷಿಸದೆ [೧][ಹಿರಿಯ][೧] ಚೌಕಿಯೊಳು
ಗುರುಸಿದ್ಧೇಶ್ವರನೈತಂದು॥ ॥೧೩॥

ಮೆರೆವ ಮಹಿಮನಾ ಕರುಣಾಪಾಂಗದ
ಕಿರಣಕುಲಿಶ ಕವಚವದಾಗಿ।
ಧರಣೀಶ್ವರ ಮಲ್ಲೇಂದ್ರಗೆ ಚೌಕಿಯ
ಗುರುಸಿದ್ಧೇಶನೆನಿಪ ಯೋಗಿ॥ ॥೧೪॥

ಮಾಯಾಮರ್ದನ ಮಂಗಳವಿಗ್ರಹ
ಶ್ರೇಯಃಪದ ಕಾರಣಪುರುಷ।
ಅಯಾಸಾರ್ದನಜೇಯ ಶ್ರೀ ಪ್ರಭು
ರಾಯ ದೈವವಾಗಿರೆ ಸರಸ ॥ ॥೧೫॥

೧–೧ ದುರಿಗೆ(ಮೂ)

ಪ್ರಭುಪೀಠಕೆ ಪ್ರಭುವಾಗಿರಲವಿರತ
ಶುಭವೀವುದು ಸೋಜಿಗವೇನು।
ಅಭವನು ಭವಭವದೊಳು ಬಹ ಭೂಪರ
ವಿಭವಕೆ ವಿಭುವಾಗಿಹ ತಾನು॥ ॥೧೬॥

ದೇವ ಮಹೇಶ್ವರ ಭೂವಲಯದ ಭ
ಕ್ತಾವಳಿಯನು ಪಾಲಿಸಲೆಂದು।
ಸಾವಳಿಗಿಯ ಶಿಲಿಂಗಾಭಿದ ಗುರು
ದೇವನೀಗೆ ಶುಭ ಸುಖಸಿಂಧು॥ ॥೧೭॥

ಆದಿಯೊಳಂದು ಶಿಲಾದಗುದಿಸಿದ ಶು
ಭೋದಯ ಮಾದಾಂಬೆಯೊಳೊಗೆದು।
ಭೇದಿಸಿ ಪೂರ್ವವ ಮೇದಿನಿಯೊಳು ಶಿವ
ನಾದ ವೃಷೇಂದ್ರ ಸಲಹು ನಲಿದು॥ ॥೧೮॥

ಪಾಶಾಂಕುಶಧರ ಪಾವನಕರ ಕರು
ಣಾಸಮುದ್ರ ವಿದ್ಯಾಕೋಶ।
ವಾಸವಮುಖ ನಿಖಿಲಾಶಾಪಾಮರ
ಪೋಷ ಗಣೇಶ ಸಲಹಧೀಶ॥ ॥೧೯॥

ವೀರಕ ರೇಣುಕ ದಾರುಕ ಮುಖ ಸುಖ
ಸಾರ ಶಿವಪ್ರಮಥರು ನಲಿದು।
ತಾರಕರೂಪದ ತಾರಕ ವಿಜಯರು
ತಾರಿಸುವುದು ತನಯಗೆ ಒಲಿದು॥ ॥೨೦॥

ಮಲ್ಲಿಕಾರ್ಜುನನು ಮಲ್ಲನೃಪಗೆ ನಾ
ನಲ್ಲಿಹೆ ನೀನಿಹ ತಾಣದಲಿ।
ಅಲ್ಲಿಯೆ ಬಲ್ಲಿದನೆನಿಸುವೆನೆಂದ
ತ್ಯುಲ್ಲಾಸದೊಳಿಹ ಭವನದಲಿ॥ ॥೨೧॥

ಸ್ಥೈರ್ಯಕೆ ಕಾರ್ಯಕೆ ಚಾತುರ್ಯಕೆ ಗಾಂ
ಭೀರ್ಯಕೆ ಮಾಧುರ್ಯಕೆ ನಿರತಂ।
ಶೌರ್ಯಕೆ ಧೈರ್ಯೋದಾರ್ಯೈಶ್ವರ್ಯ
ಕ್ಕಾರ್ಯಂ ಬೆಳವಡಿಯೊಳಗಿರುತಂ॥ ॥೨೨॥

ಭಕ್ತಿಕಳಾವ್ಯಕ್ತೀಕರಿಸಿದ ಶಿವ
ಭಕ್ತಲಲಾಮಾದವನೀಪ।
ದಿಕ್ತಟಸುಯಶೋ ವ್ಯಕ್ತನಾಗಲೆಂ
ಬುಕ್ತಿಗೆ ವೀರವಿಜಿತತಾಪ॥ ॥೨೩॥

ರಿಪುಗಳ ಭಯವೀ ನೃಪಗೆ ಬರಲು ಬಹು
ಚಪಲಾಯುಧಗಳನೇ ಪಿಡಿದು।
ಅಪಹರಿಸಲು ನಿಂದ ಪರಾಕ್ರಮ ದೇ
ವಪ ವಿರೇಶನಿಹನು ತಡೆದು॥ ॥೨೪॥

ಸ್ಥಾವರದೇವರ ಭವಿಸುವ[ನೆ]ಮಾ
ದೇವರ ಸಮನೆಂದವನಿಪನು।
ಸ್ಥಾವರವದನ ಚರಾವಳಿಯೆಂದು ಸ
ದಾವಕಾಲದಲಿ ತಣಿಸುವನು॥ ॥೨೫॥

ಈ ಪರಿಯಿಂದಲಿ ಭೂಪಾನ್ವಯಮಣಿ
ದೀಪ ಧೀರ ಸುಗುಣೋದಾರ।
ಶ್ರೀ ಪರಿರಂಜಿತ ಕಾಪಥ ಖಂಡಿತ
ಕೋಪರಹಿತ ಕೌಶಲ ಧೀರ॥ ॥೨೬॥

ಪಿಡಿಬಡಿ ಜಡಿತಡಿ ಮಡಿಮುಡಿಯೆಂಬುವ
ನುಡಿಗಳ ನುಡಿಯರು ದೇಶದೊಳು।
ಕೊಡೆ ಕಡೆಯಡಿಪೊಡೆ ಕಡಿಯೆಂಬುವ ನಾ
ಣ್ನುಡಿ ಸಲ್ಲವು ನಾಡೊಳು ಕೇಳು॥ ॥೨೭॥

ವಿನಯ ವಿತರಣ ವಿನೋದ ಮೋದ ಸಂ
ಜನಿತ ವಿವೇಕ ವಿಜಯ ಶಾಂತಿ।
ತನುಜರನೇಕರಮನೆಯೊಳು ತನ್ನಯ
ಮನೆಯೆನಿಸಿ[೧][ದೆ][೧] ಭೂಪನ ಕಾಂತಿ॥ ॥೨೮॥

ಧನ[೨][ದಿನ][೨] ಲಿಂದ್ರನ ಮನೆ ಮ[೩][ನ][೩] ಚಂದ್ರನ
ಜನಕನ ತೆರ ಘನ ಗಾಂಭೀರ್ಯ।
ಮಿನುಗುವ ಧೈರ್ಯವು ಕನಕಾಚಲ ಸಮ
ತನಗೊದಗಿರಲನುಪನು ಶೌರ್ಯ॥ ॥೨೯॥

ವೀರಶೈವಮತ ವಾರಿಧಿವರ್ಧನ
ಸಾರಸಾರಿ ಸರಸಾಮೋದ।
ಶ್ರೀರಂಜಿತ ಮಣಿಹಾರ ಕಿರೀಟ ವಿ
ಹಾರವಿರಾಜಿತ ಸುವಿನೋದ॥ ॥೩೦॥

ಹಸಿತಾನನ ರಾಜಿಸುವ ಕೃಪಾರಸ
ಮೊಸರ್ವ ನಯನ ವಿಕಸಿತ ಕಮಲ।
ಮಿಸುವ ಕಪೋಲ ಕಳೇವರ ಕರ ವ
ರ್ಣಿಸೆ ಶೇಷಗೆ ತೀರದು ವಿಮಲ॥ ॥೩೧॥

ಹಾರ ತುಷಾರ ಪಟೀರ ಕ್ಷೀರ ಸು
ಹೀರ ಸಾರದಾಂಬುದ ಶೇಷ।
ನಾರದ ಪಾಂಡುರಸಾರಸ ವಿಧು ಸಮ
ಗೌರ ಯಶೋಧಿಕ ಭೂಮೀಶ॥ ॥೩೨॥

ಧೀರ ದಯಾರಸ ಪೂರಾತುಲ ಪರಿ
ವಾರ ವೀರರಸ ಸುಶರೀರ।

೧-೧ ದ(ಮೂ) ೨-೨ ದನೊ(ಮೂ) ೩-೩ನೆ(ಮೂ)

ವೈರಿ ವಿಜಯ ಮಾರಾರಿಪದಾರ್ಚಕ
ಭೂರಮಣೀವರ ಗಂಭೀರ॥ ॥೩೩॥

ವೀರಭದ್ರ ಬಹದರ ದೇಶಾಯಿ ಕು
ಮಾರ ಮಾರಸುಂದರ ಭೂಪ।
ಕಾರಣ ಪುರುಷ ಕಳಾಮಯ ಚಾರುವಿ
ಹಾರ ಸರಸ ಮಧುರಾಲಾಪ॥ ॥೩೪॥

ಮಲ್ಲ ಮಹೀವಲ್ಲಭಗೆಲ್ಲಿಯು ಸಮ
ನಿಲ್ಲ ಸದಯ ಸದ್ಗುಣಯೂಥ।
ಸಲ್ಲಲಿತಾತುಲಚರಿತ ಸತೀವ್ರತ
ಬಲ್ಲಿದ ಭುವನ ಪ್ರಖ್ಯಾತ॥ ॥೩೫॥

ಮಲಹರನೊಲಿಸಿದ ಮಲಯರಾಜನೊಲ್
ಮಲೆತರ ಮರ್ದಿಸಿ ಶಿವಭಕ್ತಿ।
ಫಲಿಸಿ ಸರ್ವರಿಗೆ ಕಲಿಸಿ ಬಲಿಸಿ ಹರ
ನೊಲವ ಪಡೆದು ಸಾಧಿಪ ಮುಕ್ತಿ॥ ॥೩೬॥

ಇಷ್ಟೋತ್ಕೃಷ್ಟಧನಿಷ್ಟಗೆ ಶಿವಧ
ರ್ಮಾಷ್ಟವಿಭವ ಸಮನಿಸಲೆಂದು।
ಸೃಷ್ಟಿಯೊಳೀಶಾಧಿಷ್ಟಗೆ ಶಿವಕುಲ
ಶಿಷ್ಟಗೆ ತಾ ಕರದಲಿ ಬಂದು॥ ।೩೭॥

ನೆಲಸಿದ ರಿಪುಗಳ ಗೆಲಿಸಿದ ಕಾಮಿತ
ಫಲಿಸಿದ ಪರಮಾನಂದವನು।
ಛಲದ ಚತುರ್ವಿಧ ಬಲದ ವಂದಿ ಕಲ
ಕಲವರಿದೆನಿಸುವ ಛಂದವನು॥ ॥೩೮॥

ಫೌಢನರೇಂದ್ರನು ಮಾಡುವ ಹಿಮಕರ
ಚೂಡಾರ್ಚನೆ ಲಸದಷ್ಟವಿಧ।

ಷೋಡಶವಿಧ ವಿವಿಧೋಪಚಾರವದ
ನಾಡಲೇನು ನಾನಾತೆರದ॥ ॥೩೯॥

ಕುಸುಮಗಳೆಲ್ಲವು ಸುಷಮಗಳೆನಿಸುತ
ಕುಶಲತೆಯನು ಪಡೆವುದಕಾಗಿ।
ವಸುಧೆಯೊಳುದಿಸುತ ವಸುಧಾಧಿಪ ಕರ
ಕಿಸಲಯ ಶ್ರೀಲಿಂಗಕೆ ಬಾಗಿ॥ ॥೪೦॥

ಮೂಲಾಗಿಯು ಬಹು ಸಾಲಾಗಿಯು ಸುವಿ
ಸಾಲಾಗಿಯು ಲಿಂಗಾಂಘ್ರಿಯನು।
ಓಲೈಸಲು ಸುಮಜಾಲವು ಮಸ್ತಕ
ಮೇಲಾಗಿಹವು ನುತಿಸಲೇನು॥ ॥೪೧॥

ತಾಪವ ಹರಿಸುವ ಶ್ರೀಫಲ ದಳಗಳು
ಭೂಪನ ಕರಲಿಂಗವ ಸಾರಿ।
ವ್ಯಾಪಿಸಿ ಲಿಂಗದ ರೂಪಕೆ ಮೋಹಿಸಿ
ಸ್ಯೆಪೆನಿಸಿದನಾ ಮದನಾರಿ॥ ॥೪೨॥

ಭೂರಮಣನ ಕರ ಸಾರಸ ಲಿಂಗವ
ಸಾರಿದ ಏರಿದ ಬಿಲ್ವದಳ।
ವಾರಣ ಹಯ ರಥವಾರ ಪತ್ತಿಗಳ
ತೋರಿದುದಾ ಮಾಲೂರ ಬಲ॥ ॥೪೩॥

ನಾನಾವಿಧದ ಪ್ರಸೂನಗಳೇರಿಸಿ
ದಾ ನರಪಾಲಗೆ ಸಂಪತ್ತಿ।
ಸೂನುಗಳತಿ ಸನ್ಮಾನಯಾನ ಸಂ
ಧಾನವು ಸಂತತ ಬೆಂಬತ್ತಿ॥ ॥೪೪॥

ಶಂಬ ಸುವರ್ಣದ ತುಂಬಿಯ ಸುಮಗಳು
ಶಂಬರಾರಿ ಸುಂದರ ನೃಪನ।

ಅಂಬುಜಕರದೊಳಗಿಂಬುಗೊಂಡು ಶ್ರೀ
ಸಾಂಬನ ಮುಸುಕಿದವದ್ರಿಪನ॥ ॥೪೫॥

ರೂಢಿಸಿ ಭೂವರ ಮಾಡುವ ಹಿಮಕರ
ಚೂಡಾರ್ಚನೆಯನು ಪಗಲಿರುಳು।
ನೋಡಿದವನ ಕೊಂಡಾಡಿದವನ ಭವ
ವೋಡುವುದೇನರಿದೇ ಕೇಳು॥ ॥೪೬॥

ಸುರಪಾಧಿಕ ಸಿರಿ ಪರಿರಂಜಿತ ಭೂ
ವರ ಮಲ್ಲೇಂದ್ರ ಮನೋಹರನು।
ಧರಣಿಯ ಧರ್ಮದಿ ಪೊರೆವೆಡೆಯೊಳು ಸುಖ
ಕರನೆಂದೆನಿಸಿದ ಸುಂದರನು॥ ॥೪೭॥

ಧರ್ಮದಿ ಪ್ರಜೆಗಳ ಶರ್ಮದಿ ಸಲಹುವ
ಮರ್ಮವನರಿದು ಮಹೀಪಾಲ।
ಬರ್ಮಧರಾಧರ ಧರ್ಮಾರ್ಚಕರಿಗೆ
ಸ್ವರ್ಮಣಿಯೆನಿಸುವ ಸುವಿಶಾಲ॥ ॥೪೮॥

ಖ್ಯಾತಿಯಲಿಂದ್ರ ಯಯಾತಿ ಭೋಜ ಮಾಂ
ಧಾತನು ದಾನದಿ ಕಲಿಕರ್ಣ।
ನೀತಿಯಲ್ಲಿ ಕರುಣಾತಿರೇಕದಲಿ
ವಾತಭುಗಿನ ವರ್ಣಿಸ ತೂರ್ಣ॥ ॥೪೯॥

ಈ ಪರಿಯಲಿ ಕರುಣಾಪಯೋಧಿಯಹ
ಭೂಪಗೆ ಚಿಚ್ಛಕ್ತಿಯವೋಲು।
ರೂಪವೆತ್ತ ರುದ್ರಾಂಬೆ ಮಾನಿನಿಯ
ಸೈಪನಾಪನಿತ ವರ್ಣಿಸಲು॥ ॥೫೦॥

ತೀರದು ಕವಿಮತಿ ತೋರದು ವರ್ಣಿಸ
ಬಾರದು ಶ್ರೀ ರುದ್ರಾಂಬಿಕೆಯ।

ಶಾರದೆ ಮತಿಯ ವಿಶಾರದೆ ಕರುಣಾ
ನೀರಧೆಯಹ ಮೀನಾಂಬಕಿಯ॥ ॥೫೧॥

ತನುರುಚಿ ಮಿಂಚಿನ ಮೊನೆಯಾಕಾರವೊ
ಕನಕಪುತ್ಥಳಿಯ ಕರುವಿಟ್ಟು।
ವನಜಜ ನಿರ್ಮಿಸಿ ಜನಪಮಹಿಷಿಯೆಂ
ದೆನಿಸಿದ ಬ್ರಹ್ಮ ನೋಡಂಬಟ್ಟು॥ ॥೫೨॥

ರತಿರೂಪೆಯ ಭಾರತಿಯ ಮತಿಯ ಚತು
ರತೆಯ ಪಾರ್ವತಿಯ ಕುಶಲತೆಯ।
ಸತಿಯ ಸುಗತಿಯ ಸುಕೃತಿ ನೀಲಾಂಬೆಯ
ಸುತೆಯ ಪ್ರತಿಗಾಣೆನು ಜತೆಯ॥ ॥೫೩॥

ಪತಿಮೋಹಿಯ ಸದ್ಗತಿ ಸೋಹಿಯ ಪ
ದ್ಧತಿಯ ಪಾವನತೆಯಾನತೆಯ।
ಸಿತಿಗಳರಹ ಚರತತಿ ದಾಸೋಹಿಯ
ಧೃತಿಯ ಪ್ರತಿಗಾಣೆನು ಜತೆಯ॥ ॥೫೪॥

ಹರಪೂಜಾರಂಭೆಯು ರಂಭೆಯ ತೆರ
ಸುರುಚಿರರೂಪದ ಸುಂದರಿಯು॥
ಸುರಪಾಲೋಪಮ ನರಪ ಮಲ್ಲಭೂ
ವರನಾದರಿಯು ಸುಧಾಧರಿಯು॥ ॥೫೫॥

ಚರಕುಲಪದ ಸರಸಿರುಹ ಮಧುವ್ರತೆ
ಸರಸಾಂಗಿಯು ಸಾರಸನೇತ್ರೆ।
ಸುರಕನ್ಯಾ ಸರಿ ಧರಣಿಯೊಳೀಪರಿ
ಪರಿರಂಜಿತ ಕರುಣಾಪಾತ್ರೆ॥ ॥೫೬॥

ಬಾಲೆ ಮುಕುರ ಸುಕಪೋಲೆ ದಿವ್ಯಮಣಿ
ಮಾಲೆ ಮನೋಜರತಿಯ ತೆರದಿ।
ತಾಳಿಹ ಭಕ್ತ್ಯನುಕೂಲೆಯು ಶಿವಕುಲ
ಪಾಲಸ಼ ಶೀಲೆಯೆನಿಸಿ ಭರದಿ॥ ॥೫೭॥

ರುದ್ರಕನ್ಯೆಯಾಗಿಹ ಕಾರಣ ಶ್ರೀ
ಮದ್ರಾಜಗೆ ಸಂಬಂಧಿಸಲು।
ಭದ್ರದೊಳಿರೆ ಮಲ್ಲೇಂದ್ರ ಪಿಚಂಡ ಸ
ಮುದ್ರದೊಳೊಗೆ[ದಿಹ]ಮಣಿಗಳೊಲು॥ ॥೫೮॥

ಸೇರಿಹ ಪರಿವಾರದ ದುಃಖವನತಿ
ದೂರ ಮಾಡುವಧಿಪತಿಯೆಂದು।
ಸೂರಿ ವಾರ ಶ್ರೀ ರುದ್ರಸರ್ಜ ಸುಕು
ಮಾರನೆಂದು ಕರೆದರು ಬಂದು॥ ॥೫೯॥

ಶಿವಲಿಂಗಾನಂದವೆ ಬುವಿಯೊಳು ಸಂ
ಭವಿಸಿದ ದುರದುಂಡೀಶ್ವರನ।
ತವೆ ಕರುಣಾಂಶವೆ ಅವಯವ ತಾಳಿದ
ಶಿವಲಿಂಗಾಧಿಪ ಬಹದರನ॥ ॥೬೦॥

ನಾಮವು ನೆನೆವರ ಕ್ಷೇಮವು ನೋಡಲ್
ಕ್ಷೇಮವು ಸೌಂದರ್ಯದ ಸಾರ।
ಧಾಮ ಸದ್ಗುಣೋದ್ದಾಮ ಸುಖಾಂಬುಧಿ
ಸೋಮ ಸಲಕ್ಷಣ ಸುಕುಮಾರ॥ ॥೬೧॥

ವೀರವಿಜಿತರಿಪುವಾರ ಸಲಕ್ಷಣ
ಸಾರಾ ಧೀರ ರೂಪದಿ ಮಾರ।
ಸಾರಸಾರವಿಚಾರಗೆ ಕರೆದರು
ವೀರ ಸರ್ಜನಾಗುವ ಶೂರ॥ ॥೬೨॥

ಈ ಪರಿಯಿಂದಲಿ ರೂಪದಿ ರುಚಿರಾ
ಲಾಪದಿ ಗುಹಗಣಪರ ತೆರದಿ।
ಭೂಪತಿಗೃಹಮಣಿದೀಪರು ನಿರ್ಜಿತ
ತಾಪರು ಶ್ರೀಪರಮರು ಭರದಿ॥ ॥೬೩॥

ಕುಶಲವರ್ಧನರು ಕುಶಲವರೋಲಿಹ
ಕುಶಜಾಸ್ತ್ರೋಪಮ ಸುಂದರರು।
ವಸುಧಾಕಾಂತರು ಸುಷಮಸ್ವಾಂತರು
ಶಶಿಧರಶಾಂತರು ಭುಜಬಲರು॥ ॥೬೪॥

ಶಿವಸಭೆಯಲಿ ವೀರಕ ವಿಜಯರು ಭೂ
ಧವ ಮಲ್ಲೇಂದ್ರ ತನೂಭವರು।
ಅವರಿವರಲ್ಲದೆ ಹವಣಿಸತೀರದು
ಸುವಿಚಾರರು ಸುಜನೋತ್ಸವರು॥ ॥೬೫॥

ನಂದನರನಿಶಾನಂದರು ಸದ್ಗುಣ
ವೃಂದರು ವೃಂದಾರಕ ಸಮರು।
ಸೌಂದರ್ಯಾಕೃತಿಯೊಂದೆರಡಾಗಿಯೆ
ಬಂದರು ಭಾಗ್ಯದಮಂದಿರರು॥ ॥೬೬॥

ಮತಿಯಲಿ ಯುಕ್ತಿಯಲತಿ ಚತುರತೆಯಲಿ
ಧೃತಿಯಲಿ ಪಿತೃಪದಭಕ್ತಿಯಲಿ।
ಕ್ಷಿತಿಯೊಳು ಮಲ್ಲನೃಪತಿ ಕುಮಾರರ
ಜತಿಗಾಣೆನು ಕೇಳ್ ಯಮಳರಲಿ॥ ॥೬೭॥

ವಿಮಲ ಚರಿತ್ರದ ಯಮಳರ ನೋಡುತ
ಶಮಶರಜಂಗವನೀಪಾಲ।
ಮಮತಾ ಕ್ರಮಿಸಿರೆ ಶಿವಲಿಂಗಾಧಿಪ
ನಮಿತೋತ್ಸವದಲಿ ಜಯಶೀಲ॥ ॥೬೮॥

ವಿವಾಹಕ್ಕೆ ಭೂಧವ ಮಲ್ಲೇಂದ್ರನು
ಭುವಿಯೊಳು ದಿವಿಜ[ಮೆ]ರೋಪಮನು।
ವಿವರಿಸಿ ಬಾಂಧವ ನಿವಹಕೆ ಬರೆಸಿದ
ಜವದಲ್ಲಿ ಭುಜಬಲವಿಕ್ರಮನು॥ ॥೬೯॥

ಬರೆಸಿದ ಪತ್ರವ ಕರೆಸಿದ ಭೂಪರ
ನೆರೆಸಿದ ನಾನಾ ವಸ್ತುಗಳ।
ತರಿಸಿದ ಮನೆಗಳ [1][ಮೆ][1]ರೆಸಿದ ನೆರಸಿದ
ವೆರಸಿದ ಶ್ರೀಮಂಟಪದಗಲ॥ ॥೭೦॥

ವೀರಾಗ್ರೇಸರ ವೀರಶೈವ ಪರಿ
ವಾರವ ಕರೆಸಿದ ವಿನಯದಲಿ।
ವೀರಮನೋಜಯವಾರವ ಬರಿಸಿದ
ಭೂರಮಣನು ಸದ್ಭಕ್ತಿಯಲಿ॥ ॥೭೧॥

ವಿರತಿವಿಭವದ ವಿರಕ್ತರು ಶಕ್ತರು
ಸುರಪೈಶ್ವರ್ಯವ ಜರೆವವರು।
ಬರಲಾ ಮಾಹೇಶ್ವರ ಗಜಗಳಲಿ
ಮೆರೆಸಿ ಕರೆದು ತರೆ ಗುರುವರರು॥ ॥೭೨॥

ಪರಸಿದರೀತೆರ ಬರುವವರಿರುವವ
ರರಿಯೆ ಮತಿಗೆ ಬಂದಿಹ ಮಿತಿಗೆ।
ಧರಣಿಯೊಳಗೆ ಬಹ ಸರಣಿಯೊಳಗೆ ಶಿವ
ಸ್ಮರಣಿಯೊಳಗೆ ಬಹ ಯತಿತತಿಗೆ॥ ॥೭೩॥

ಭೂವಲಯದ ಭೂಪಾವಳಿ ಮಾನಿತ
ಭಾವಿಕ ಶಿವಭಕ್ತಾಧಿಪನ।

೧-೧-ಮ(ಮೂ)

ಶ್ರೀ ವಿಲಾಸವಾ ವೀಕ್ಷಿಪ ಸಮಯದ
ದೈವೊದಗಿತೆನುತಾ ನೃಪನ॥ ॥೭೪॥

ಸನ್ನಿಧಿ ದೊರೆದುದ ಸನ್ನಿಧಿಯಂ ಬರ
ಮನ್ನಿಸಿ ಮಂಗಳ ಮಂಟಪದಿ।
ಸನ್ನುತ ಭೂವರ ಸನ್ನೆಯೊಳವರವ
ರುನ್ನತಿಯನು ನಡೆಸುವ ಮುದದಿ॥ ॥೭೫॥

ಆಡುವ ಪಾತ್ರವ ಮಾಡುವ ಸ್ತೋತ್ರವ
ಪಾಡುವ ಶೋಭನ ರವ ನುಡಿಗೆ।
ಕೂಡಲು ದೈವವ ನೋಡಲು ಗಣನೆಯ
ಮಾಡಲು ನೆರೆಯದು ಮನ್ಮತಿಗೆ॥ ॥೭೬॥

ಕವಿಗಮಕಿ ಸ್ತವರವ ಕೃತಿರಂಜಕ
ನಿವಹ ಗಾಯಕರ ಸಂದೋಹ।
ಅವನಿಪ ಮಂಗಳಭವನದಿ ನೆರೆದುದು
ಶಿವನೆ ಬಲ್ಲನವರೊಳು ಮೋಹ॥ ॥೭೭॥

ಶಿವಲಿಂಗಾಭಿದ ಕುವರವಿವಾಹಕೆ
ಶಿವವೈವಾಹೋಪಮ ಸರಿಯು।
ವಿವರಿಸ ತೀರದು ಶಿವಯೋಗಿವ್ರಜ
ಧವಲಾಂಗಗೆ ಸಮನಹ ಪರಿಯು॥ ॥೭೮॥

ಉಣಿಸಿಯುಡಿಸಿದುದನೆಣಿಸಲು ಗಣಿಸಲು
ಫಣಿರಾಜಗೆ ಪ್ರವಣಲ್ಲದಲೆ।
ಹಣವನು ತೃಣವನು ಮಾಡಿದ ಯಾಚಕ
ಗಣಕೆ ಗುಣಕೆ ಶಿವಗಣಲೀಲೆ॥ ॥೭೯॥

ಶಿವಭುವನವ ಪಾವನವನು ಮಾಡುವ
ನೆವದಿ ಬಂದ ಶಿವಯೋಗೀಶ।
ಭವಕಾಂತಾರ ದವಾನಲ ಕಲಿಮಲ
ನಿವಹವ‌ನೀಗಿದ ಜಿತಪಾಶ॥ ॥೮೦॥

ರಾಗದ್ವೇಷವ ನೀಗಿದ ಗುರುಭೂ
ಭಾಗವ ಪಾವನ ಮಾಡಲಿಕೆ।
ಸಾಗಿದ ಮಾರ್ಗದಿ ತಾಗಿತಡೆಯೆ ನೃಪ
ನಾಗತಿ ಕರೆಸಿದ ನೋಡಲಿಕೆ॥ ॥೮೧॥

ಅದರೊಳು ಜ್ಞಾನೋದಧಿ ವೈರಾಗ್ಯಾ
ಸ್ಪದ ಮದಹರ ಮಂಗಳರೂಪ।
ಸದಮಲ ಸಾರೂಪ್ಯದ ಪರಪದವಿಯ
ನೊದವಿಪ ವಿದಳಿತ ಭವತಾಪ॥ ॥೮೨॥

ನೂರೊಂದು ಸ್ಥಲ ಸಾರವಿಚಾರ ವಿ
ಶಾರದ ಶಿವಯೋಗೀಶ್ವರಗೆ।
ಧಾರವಾಡವೆಂಬೂರು ತ^೧ಳುವದೇ
ಭೂರಮಣನು ಕರೆಸಲು ಪರಗೆ॥ ॥೮೩॥

ದೀನದಯಾಳು ನದೀನಜಶಾಂತಾ
ಧೀನ ಸ್ವಾನುಭಾವದಿ ನಿಷ್ಠ।
ಆನತ ಮನುಜಾ ಜ್ಞಾನತಿಮಿರ ಚಿ
ದ್ಭಾನು ಭಾವಿಕಾವಳಿ ಶಿಷ್ಟ॥ ॥೮೪॥

ದೇಶಿಕವರ ಚಿತ್ಕೋಶವಿರಕ್ತಿ ವಿ
ಶೇಷ ಷಟ್ಸ್ಥಲಾಮೋದ ಗುರು।

೧-೧ ಡ(ಮೂ)

ದ್ವೇಷಾರಣ್ಯ ಹುತಾಶಣ ಕಲ್ಮಷ
ನಾಶನ ಮಜ್ಜನ ಕಲ್ಪಿತರು॥ ॥೮೫॥

ಪರಮರಹಸ್ಯದ ಪರಿವಿಡಿ ವಚನವ
ಶರಣಕೊರೆದ ಗೂಢಾರ್ಥವನು।
ಕರತಳನೆಲ್ಲಿಯೊಲರುಹುವ ಕಾರಣ
ಕರೆದರು ಟೀಕಿನ ನಾಮವನು॥ ॥೮೬॥

ಭದ್ರಪ್ರದ ಶ್ರೀ ರುದ್ರಾಕ್ಷೋದ್ಭವ
ರುದ್ರಾಕ್ಷಿಯ ಧಾರಣದಿಂದ।
ಕ್ಷುದ್ರೋಪದ್ರವ ವಿದ್ರಾವಣದಿಂ
ರುದ್ರಾಕ್ಷಿಯ ನಾಮವದೊಂದ॥ ॥೮೭॥

ಗುರುವರ ಗುರುತವ ನಿರುತ ನಿರೀಕ್ಷಿಸಿ
ಯರಿಯಲೊಡನೆ ಹುಬ್ಬಳ್ಳಿಯಲಿ।
ಮೆರೆವ ಪರಾತ್ಪರ ಪರಮಾನಂದವೆ
ಚರವೇಷವ ಧರಿಸಿದ ಶೂಲಿ॥ ॥೮೮॥

ಶ್ರೀಕರ ದೀನದಯಾಕರ ಭವಭಯ
ಭೀಕರ ಟೀಕಿನ ಚರಮೂರ್ತಿ।
ಟೀಕಿನ ಶ್ರೀ ವೃಷಲಿಂಗರ್ಯರು ಬರ
ಲಾ ಕಾಲದಿ ಭೂಪತಿಗರ್ತಿ॥ ॥೮೯॥

ಜನಿಸಿ ರಿಪುವ್ರಜವನು ಜಯಿಸಿದ ಚ
ದ್ವನವರ್ಯರು ದಯ ಮಾಡಿದಿರಿ।
ಎನುತ ವಿನೋದದ ವನಧಿಯೊಳಾಳುತ
ಜನಪ ಮನೋದಯ ಸಲಿಸಿದಿರಿ॥ ॥೯೦॥

---

೧. ದೇವ(ಮೂ) ೨–೨ಒ (ಮೂ)

ಎಂದಾನಂದಿಸಿ ವಂದಿಸಿ ಸಂಸ್ಕೃತಿ
ನಿಂದಿಸಿ ನಿಂದ ವಿರಕ್ತರಿಗೆ।
ಸಂದಿಸಿ ಲಿಂಗಾನಂದವ ಛಂದವ
ಹೊಂದಿಸಿ ವಿಷಯ ವಿಮುಕ್ತರಿಗೆ॥ ॥೯೧॥

ನಮಿಸುತಲೆತ್ತಲು ಗಮಿಸದಲಿರಿ ಸಂ
ಭ್ರಮದಲೆನುತ ವಿಜ್ಞಾಪಿಸಲು।
ಮಮತಾಭಕ್ತಿಯ ಕ್ರಮವನರಿದು ಚಿ
ದ್ರಮಣೀವರರಾನಂದಿಸಲು॥ ॥೯೨॥

ಶ್ರವಣಾನಂದ ವ್ಯವಹಾರಕೆ ದಿವ
ಸವೆ ದೀರ್ಘವ ಬಯಸುವರಿವರು।
ಶಿವಲಿಂಗಾರ್ಚನೆ ಶಿವರೂಪದ ಚರ
ನಿವಹವ ಕಂಡು ವಿನೋದಿಪರು॥ ॥೯೩॥

ಮಂಗಳತರ ಶ್ರೀ ಜಂಗಮವಾಗಿಯು
ಜಂಗಮಪುಂಗವರನು ನೋಡಿ।
ಲಿಂಗಾರ್ಚಕ ಭವಭಂಗರ ಕಾಣುತ
ಸಂಗಮೇಶರೆನುತಲಿ ಪಾಡಿ॥ ॥೯೪॥

ಶಿವಪೂಜೋತ್ಸವ ಸುವಿಲಾಸದಿ ಮಾ
ಡುವ ಮಲ್ಲೇಂದ್ರನ ನೋಡುತಲಿ।
ಶಿವಲೀಲಾ ಕಾಯವ ತಾಳಿದ ಶಾಂ
ಭವಭೂಪನ ಕೊಂಡಾಡುತಲಿ॥ ॥೯೫॥

ವೀರಶೈವ ಮತವಾರಿಧಿ ವರ್ಧಿಪ
ಸಾರಸಾರಿಸಮ ಭೂಪಾಲ।
ಮಾರಹರಾಜ್ಞಾಧಾರಕ ಪರಮತ
ವಾರಕನಹ ಶಿವಗಣಲೋಲ॥ ॥೯೬॥

ಶಿವಮತ ಸಿದ್ಧಾಂತವ ಮಾಡುವ ಭೂ
ಧವಗೆ ವಿಭೂತಿವಿಭೂಷಿತಗೆ।
ಅವಿಚಾರಭೇದವ ಮಾಡುವ ಶಂ
ಭುವನರ್ಚಿಸುವ ಸುಭಾಷಿತಗೆ॥ ॥೯೭॥

ಬಸವೇಶ್ವರನೋಲೆಸಗುವ ಭಕ್ತಿಯ
ವಸುಧಾಕಾಂತ ಶಿರೋಮಣಿಗೆ।
ಕುಶಲಕಳಾವಿದ ರಸಿಕ ಪಶುಪಮತ
ಕುಶಧಿ ಸುಧಾಕರ ಸದ್ಗುಣಿಗೆ॥ ॥೯೮॥

ಭೂತಳದಲಿ ದುರ್ನೀತಿಯ ಭೀತಿಯ
ರೀತಿಯ ಬಿಡಿಸಲು ಗಣಯೂಥ।
ತಾ ತಳುವದೆ ಬಹ ಮಾತಿಗೆ ಮೊದಲಿಗ
ನೀತನೆ ನಿಶ್ಚಯ ಪ್ರಖ್ಯಾತ॥ ॥೯೯॥

ಸ[illegible]ತ ಮಹಿಮಾಸನ್ನ ಶಿವಕುಲೋ
ತ್ಪನ್ನ ಗಣರು ಸನ್ನಾಹದಲಿ।
ಚಿನ್ನಿಧಿಯಾಗಿಹ ಚನ್ನಬಸವ ಗುರು
ವನ್ನೊಡಗೊಂಡವರರ್ತಿಯಲಿ॥ ॥೧೦೦॥

ಬರುವರು ಮಹಿಮೆಯ ಮೆರೆವರು ತಮ್ಮವ
ರಿರುವರ ಕರೆವರು ಕರುಣದಲಿ।
ಶರಣರ ಸರಣಿಯ ಪುರದೊಳಿರುವ ಭೂ
ವರಭೂಷಣಗೆ ವಿನೋದದಲಿ॥ ॥೧೦೧॥

ವಿಕಲರಹಿತರಹ ಸಕಲ ಮಹಿಮಾ
ಧಿಕವ ಸುಖವ ಸಂಗ್ರಹಿಸುತಲಿ।
ಸುಕರವೆನಿಸಿ ಗಣನಿಕರ ಮಹತ್ವವ
ಪ್ರಕಟಿಸಿದನು ತಾನಾಂಧ್ರದಲಿ॥ ॥೧೦೨॥

ಕಾಮಿತ ಸುರತರು ಸೋಮನಾಥಗುರು
ನೇಮಿಸಿ ಬರೆದ ಪುರಾಣವನು।
ಭೀಮಕವೀಶ್ವರ ಭಾಮಿನಿಯಿಂದಲಿ
ಕಾಮಿಸಿ ಬರೆದಾ ಸಾರವನು॥ ॥೧೦೩॥

ವೀರಾಚಾರಾಧಾರಧೀರ ಸುಖ
ಸಾರ ವಿವೇಕ ವಿನಯಾಪೂರ।
ವೀರಭದ್ರ ಭೂರಮಣಕುಮಾರ ಕು
ಮಾರ ಸದಾಶ್ರಿತ ಮಂದಾರ॥ ॥೧೦೪॥

ಭೂಪಗೆ ಕೀರ್ತಿಕಲಾಪಗೆ ಭಕ್ತಿಯ
ರೂಪವೆತ್ತ ರುಚಿರಾಧಿಪಗೆ।
ಶ್ರೀಪಗೆ ಮಧುರಾಲಾಪಗೆ ಜಯವ
ಣ್ಣೋಪಗೆ ಕಾಪಥ ಖಂಡಿತಗೆ॥ ॥೧೦೫॥

ಹೇಳುವ ಸಮಯವು ಕೇಳುವ ಹರ್ಷವ
ತಾಳುವನಾಳುವ ರಾಜ್ಯವನು।
ಕಾಲವೆನುತಲಾಲೋಚಿಸೆ ತನ್ನಯ
ಮೌಳಿ ಬಾಗಿದನುಭವವನು॥ ॥೧೦೬॥

ತಿಳಿದರು ಟೀಕಿನ ಮಲಹರ ಮಂಗಳ
ನಿಲಯರು ವೃಷಲಿಂಗಾಧಿಪರು।
ಕಳೆಯೇರುತ ಶ್ರಮ ಕಳೆವ ಮಹಾತ್ಮರು
ಬಳಿಕಾನಂದದಿ ಬೆಸಸಿದರು॥ ॥೧೦೭॥

ದೈವಿಕ ಪುರುಷಕಳಾವಿದ ಭೂವರ
ಕೋವಿದ ಮಲ್ಲನೃಪನ ಕಾರ್ಯ।
ಜೀವನನೆನಿಸಿದ ಭಕ್ತಿಯುಕ್ತಿ ಸಂ
ಭಾವನೀಯನೆಸಗಿದ ಚರ್ಯ॥ ॥೧೦೮॥

ರಾಜಗೆ ಬುಧಸುರಭೂಜಗೆ ನಿರುಪಮ
ತೇಜಗೆ ಶಾವಕರೂಪಾಗಿ।
ರಾಜಪ್ರಭೆಯೋಲ್ ರಾಜಿಸಲಾಶ್ರಿತ
ರಾಜಿಯೊಳೆನುತಲಿ ತಲೆಬಾಗಿ॥ ॥೧೦೯॥

ಪಾರನೈದಿಸುವ ತಾರತಮ್ಯ ಸುವಿ
ಚಾರವರಿವ ಕಾರಣದಿಂದ।
ಪಾರಪತ್ಯಗಾರರ ಪರಿವಾರದಿ
ಪಾರಮಾರ್ಥ ಸುಖದೊಳು ನಿಂದ॥ ॥೧೧೦॥

ವೀರಸಂಗ ತಾತಾಭಿದ ವಿಕ್ರಮ
ಭೂರಮಣಾಜ್ಞಾಧಾರಕನು।
ಸಾರಾಸಾರ ವಿಚಾರವನನುದಿನ
ಸಾರುವ ಸುಗುಣಪ್ರೇರಕನು॥ ॥೧೧೧॥

ಅಕ್ಷಿಯೊಳೀಕ್ಷಿಸಿ ಲಕ್ಷ ಕುಟುಂಬವ
ರಕ್ಷಿಸುವಧಿಪನ ಕಾರ್ಯದಲಿ।
ಪಕ್ಷ ಖಲರ್ಗೆ ವಿಪಕ್ಷಭೂಪ ಪದ
ಲಕ್ಷ್ಯ ನಿರೀಕ್ಷಣ ನೀತಿಯಲಿ॥ ॥೧೧೨॥

ದೀನನಾಗಿ ಸ್ವಾಧೀನನಾಗಿ ಕರು
ಣಾ ನದೀನ ನೃಪಕಾರ್ಯದಲಿ।
ಮೌನಿಯಾಗಿ ಸುಜ್ಞಾನಿಯಾಗಿ ಬಹು
ಮಾನಿಯಾಗಿ ಸಚಿವತ್ವದಲಿ॥ ॥೧೧೩॥

ಕುಶಲ ಕಳಾವಿದ ರಸಿಕರಾಜಮಣಿ
ಬಸವ-ಪುರಾಣ ಶ್ರವಣದಲಿ।
ಮಿಸುನಿಗೆ ಗಂಧವು ಪಸರಿಸಿದಂದವು
ವಸುಧಾವರನಾನಂದದಲಿ॥ ॥೧೧೪॥

ಕೇಳಲಿ ಹರ್ಷವ ತಾಳಲಿ ರಾಜ್ಯವ
ನಾಳಲಿ ಎಂಬಭಿಲಾಷೆಯಲಿ।
ಭಾಳಾಕ್ಷಾರ್ಚಕ ಜಾಲ ವಿನೋದದಿ
ಬಾಳಲ್ಕಿ ಎಂಬಾಕಾಂಕ್ಷೆಯಲಿ॥ ॥೧೧೫॥

ಶೀಲಾಶ್ರಿತ ಜನಪಾಲ ಸುಗುಣ ಭೂ
ಲೋಲ ಕೋಳಲಿಕೆ ತೊಡಗಿದುದು।
ಶಾಲಿವಾಹ ಭೂಪಾಲ ಶಕದ ಪದಿ
ನೇಳ ನೂರರಿಪ್ಪತ್ತೈದು॥ ॥೧೧೬॥

ರುಧಿರೋದ್ಗಾರೀ ವರ್ಷ ಮಾರ್ಗಶೀ
ರ್ಷದ ಮೇಚಕದ ಚತುರ್ದಶಿಯ।
ವಿಧುವಾರದಲಿ ಪುರಾಣವ ಚರಗಣ
ಪದದಲಿರಿಸಿಯರ್ಚಿಪ ಪರಿಯ॥ ॥೧೧೭॥

ಲಸಿತಭಸಿತ ಕುಸುಮಾಕ್ಷತೆ ಗಂಧದಿ
ದಶವಿಧ ಧೂಪದಿ ದೀಪದಲಿ।
ಬಸವಪುರಾಣವ ಪೂಜಿಸಿ ರಾಜಿಸಿ
ವಸುಧಾಧಿಪನತಿ ಭಕ್ತಿಯಲಿ॥ ॥೧೧೮॥

ಕೇಳಿದ ತಂತ್ರಿಯ ತಾಳಿದ ವೀಣಾ
ಮೇಳ ಮೃದಂಗ ನಿನಾದದಲಿ।
ತಾಳದ ಶಿವಚರ ಮೇಳದಿ ಕೂಡಿಹ
ಭಾಳಾಕ್ಷಾರ್ಚಕ ಜಾಲದಲಿ॥ ॥೧೧೯॥

ಶಿವಪೂಜಾಕಾಲವ ಸಾಧಿಸಿ ಕೇ
ಳುವನನವರತ ಪುರಾಣವನು।
ಶಿವಲಿಂಗಾರ್ಚನೆ ತವೆ ಮುಗಿಯಲು ಏ
ಳುವನು ಚರಾಂಘ್ರಿಗೆ ನಮಿಸುವನು॥ ॥೧೨೦॥

ಚರಪದ ಸರಸೀರುಹವ ಸಮರ್ಚಿಸಿ
ಹರಗಣವೆರಸಿ ವಿನೋದದಲಿ।
ಹರಕೀರ್ತನೆ ಶೋಭನರವ ತತ್ಸಭೆ
ಭರಿತವಾಗಲಾ ಸಮಯದಲಿ॥ ॥೧೨೧॥

ವೀರಸಂಗ ತಾತಾಭಿಧಾನ ರಜ
ತಾರತಿಯನು ಬೆಳಗುವ ನೇಮ।
ಗೌರ[ಚ]ಂದ ಘನಸಾರಾರತಿಯ ಕು
ಮಾರರೆತ್ತುವರು ಸುಕ್ಷೇಮ॥ ॥೧೨೨॥

ಭೂರಮಣನು ಕರಸಾರಸದೊಳು ಸುಮ
ವಾರವ ಪಿಡಿದು ಸುಭಕ್ತಿಯಲಿ।
ವೀರಮನೋಜಯರುಗಳ ಹಸ್ತಸರ
ಸೀರುಹಗಳಿಗೊಲಿದೀವುತಲಿ॥ ॥೧೨೩॥

ಸುರಗಿ ಬಕುಳ ಕರವೀರ ಯುಗಭದ
ಗಿರಿಕರ್ಣಿಕೆ ಸೇವಂತಿಗೆಯು।
ಸುರಹೊನ್ನೆಯು ನಿರ್ಜರ ಸುಮರಕ್ತಕ
ಕುರವಕ ಮುಖ ಸುಮಗಳ ಪರಿಯು॥ ॥೧೨೪॥

ಹರಸುಮ ಸುರುಚಿ ಸುಗಂಧ ಸುಜಾತಿಯು
ಪರಿಮಳಿಸುವ ನವಮಲ್ಲಿಗೆಯು।
ಸ್ಮರಗುಣಪರ ಪುನ್ನಾಗಾದ್ಯಲರವು
ಕರಕಮಲಗಳಿಂಬಹ ಬಗೆಯು॥ ॥೧೨೫॥

ಸುರಿವವು ಮೇಲಿಂ ಬರುವವು ಧರೆಯೊಳು
ಮೆರೆವವು ಪರಿಮಳಗರೆವಲರು।
ಮರುತ ಸರಣಿಯಿಂ ಸುರರು ಗರೆವ ಪೂ
ಸರಿಯಲ್ಲದೆ ವರ್ಣಿಪರಾರು॥ ॥೧೨೬॥

ಅವಿರತ ಭೂವರ ಭವನದಿ ಸಲಿಸುವ
ಶಿವಚರಗಣ ನಾನಾನೂರು।
ಶಿವಭಕ್ತಾವಳಿ ಕವಿದ್ಯೆದುವ ಚರ
ನಿವಹ ಧೀನಜನ ಬರುತಿಹರು॥ ॥೧೨೭॥

ಬಂದವರಿಗೆ ಇಲ್ಲೆಂದರೆ ನಮಗದು
ಕುಂದೆನುತಲಿ ಕುಶಲದಿ ಭೂಪ।
ಅಂದವರಿಗೆ ನಿಂದವರಿಗೆ ಶಿವಶಿವ
ಯೆಂದವರಿಗೆ ತಣಿಸುವ ಜನಪ॥ ॥೧೨೮॥

ಕಾಂಡ ಪ್ರಸ್ತವಕಾಂಡ ತಾಂಡವದ
ಕಂಡರಿಯೆವು ಭೂಮಂಡಲದಿ।
ತಂಡ ತಾಂಡವಷಿಯ ಮಂಡಲವಾ
ಖಂಡಲ ನೋಡುವನ್ಯೆ ಮುದದಿ॥ ॥೧೨೯॥

ಕಿತ್ತೂರೊಳು ಭೂಪೋತ್ತಮನೆಸಗುವ
ಹತ್ತೂರೊಳು ತಿರುಗಿದರಿಲ್ಲ।
ಇತ್ತಲೆ ಬಹುದಂದುತ್ತರದಿಂದಲಿ
ಒತ್ತರಿಸಿದ ಬಡಜನವೆಲ್ಲ॥ ॥೧೩೦॥

ಬರಲವರುಗಳನು ಕರುಣದೊಳೀಕ್ಷಿಸಿ
ಧರಣೀವರ ಶ್ರೀ ಮಲ್ಲೇಂದ್ರ।
ನೆರವಿಯ ಮನ್ನಿಸಿ ಬರುವ[ರ] ವರು ಬಿಡ
ದರಿಸಿ ಬೆರಸಿ ಸದ್ಗುಣ ಸಾಂದ್ರ॥ ॥೧೩೧॥

ಟೀಕಿನ ಗುರುವರರಾ ಕಾಲದಿ ಕರು
ಣಾಕಟಾಕ್ಷದಿಂದೀಕ್ಷಿಸುತ।
ಶ್ರೀಕಂಠಾರ್ಚನೆ ಶ್ರೀಕರ ಮಾಡಿಸ
ಬೇಕೆಂದೆನಲಾನಂದಿಸುತ॥ ॥೧೩೨॥

ಸರ್ವಗತಾತ್ಮನು ಸರ್ವೇಶ್ವರನು ಸು
ಪರ್ವಾವಳಿ ಸಂಸೇವಿತನು।
ಪರ್ವತವಾಸನು ತೋರ್ವನೆನಲ್ಕದ
ಕುರ್ವೀಶ್ವರ ಸಂಭಾವಿತನು ॥೧೩೩॥

ಪೊಡವಿಯ ಸಾರಿಸಿ ಮಡಿಯ ಪಾಸಿದಾ
ಯೆಡೆಯೊಳು ಬಡವರ ಸಾಲ್ಗೊಳಿಸಿ।
ಅಡೆತಡೆಯಿಲ್ಲದೆ ಮೃಡಲಿಂಗಾರ್ಚನೆ
ಗೆಡೆ ಮಾಡಿದರತ್ಯಾದರಿಸಿ॥ ॥೧೩೪॥

ಪರಿಮಿತಿ ನೋಡಲ್ಕೆಕಳ್ಪೂರ್ಸಾಸಿರ
ನೆರವಿಯು ಸ್ತ್ರೀಬಾಲರು ಸಹಿತ।
ಕರದಲಿ ಲಿಂಗವನಿರಿಸಿರಿ ಶಿವ[ನ]ನು
ಸ್ಮರಿಸಿರಿ ನೀವೆಲ್ಲರು ಎನುತ॥ ॥೧೩೫॥

ಸೌಧಾಗ್ರದೊಳತಿ ಮೋದದಿ ನೋಡುವ
ನಾ ಧರಣೀಶ್ವರನಾದರದಿ।
ಶ್ರೀದೋಪಮ ಶಿವಲಿಂಗಾರ್ಚನೆಗನು
ವಾದವರನು ಕಾಣುತ ಮುದದಿ॥ ॥೧೩೬॥

ಸಲಿಲ ಸ್ನಾನವಗೊಳಿಸಿ ಪಮಚವಿಧ
ಫಲ ಪಂಚಾಮೃತಗಳ ನೆರಿಸಿ।
ಮಲರು ಬಿಲ್ವಗಳನೇರಿಸಿಯಾರತಿ
ಬೆಳಗಿಸಿ ಘಂಟಾರವಗೊಳಿಸಿ॥ ॥೧೩೭॥

ಚಿತ್ತಜಸಮ ಭೂಪೋತ್ತಮಾಜ್ಞೆಯಿಂ
ದಿತ್ತರು ಸರ್ವರ ಕರಗಳಲಿ।
ಉತ್ತರಾಣಿ ಕಡ್ಡಿಗಳವು ಬೆಳಗಲು
ಸುತ್ತಲು ವಿದ್ಯುತ್ಪ್ರಭೆಗಳಲಿ॥ ॥೧೩೮॥

ಬೆಳಗಲು ತೊಳಗಲು ಮೊಳಗಲು ವಾದ್ಯವು
ಬೆಳಗಾಗುವ ಪರ್ಯಂತರವು।
ಎಳೆಯಾಳುವ ಮುದದಳೆವ ನೋಡೆ ಕಂ
ಗಳು ಸಾಳವು ಕಳಕಳ ರವವು॥ ॥೧೩೯॥

ವಸುಧಾವಲ್ಲಭ ರಸರಸಾಯನವ
ನಸಮಭಕ್ತಿಯಲಿ ನೀಡಿಸುತ।
ಶಶಿಶೇಖರಗಣ ವಿಸರವನಶನದಿ
ವಸನ ದಕ್ಷಿಣೆಗಳನು ಕೊಡುತ॥ ॥೧೪೦॥

ಮಾಡುವ ಭಕ್ತಿಯ ನೀಡುವ ಶಕ್ತಿಯ
ರೂಢಿಸಿರುವ ಸಂಪತ್ತತಿಯ।
ನೋಡಲು ಮಾತುಗಳಾಡಲು ಕೂಡದು
ಪ್ರೌಢ ಮಲ್ಲಸರ್ಜನ ಜತೆಯ॥ ॥೧೪೧॥

ಸಾನಂದನು ರವಿಸೂನು ಪತ್ತನಾ
ಧೀನರು ಸಿವಮಂತ್ರದೊಳವರ।
ತಾನುದ್ಧರಿಸಿದ ತೆರ ಭೂನಾಥನು
ಮಾನವರನು ಸಲಹಿದ ವಿವರ॥ ॥೧೪೨॥

ವಿವರಿಸಬಾರದು ಭುವನದಿ ಗಣಪುಂ
ಗವರೊಳು ಬಂದವನೀಶ್ವರನು।
ಶಿವಜಂಗಮದ ಶಿವಾನುಭವವ ಕೇ
ಳುವ ಬಾಳುವ ಭಾವಿಕವರನು॥ ॥೧೪೩॥

ಮೇಲೆ ಮೇಲೆ ಗಣಜಾಲವು ಬರೆ ಭೂ
ಲೋಲನಾಲಿಯಿಂದೀಕ್ಷಿಸುತ।
ಭಾಲಾಂಬಕ ಭವ ಮೂಲೋನ್ಮೂಲನ
ಶೀಲರ ಕಳಿಸಿದನೆಂದೆನುತೆ॥ ॥೧೪೪॥

ಸಮಯ ಸಮಯ ಚರ ಸಮುದಾಯವು ಬರೆ
ನಮಿಸುವನವರವರಂತಾಗಿ।
ಯಮಳಾರ್ಥವನುಳಿದುಮೆಯ್ಯಾಣ್ಮನು ಜಂ
ಗಮವೆಂಬುವ ಸಂಶಯ ನೀಗಿ॥ ॥೧೪೫॥

ಈ ಪರಿಯಿಂದಲಿ ಭೂಪ ಕಲಾಪ ಕ
ಲಾಪಾಕೃತಿ ಚರಮೂರ್ತಿಗಳ।
ಶ್ರೀಪಾದವ ಪೂಜೋಪಚಾರದಿಂ
ದಾ ಪರಮರ ಮನ್ನಿಪ ಬಹಳ॥ ॥೧೪೬॥

ಅಷ್ಟೈಶ್ವರ್ಯಾಭೀಷ್ಟಸಿದ್ಧಿಗಳ
ಸ್ಪಷ್ಟದೊಳೋದಿಸಿ ಕೇಳ್ದವರ।
ಕಷ್ಟ ಕಲುಷ ಕಡೆಗಾಗುವ ಕಾರಣ
ವಷ್ಟಕಾಂಡ ಕೊಡುವವು ಸುವರ॥ ॥೧೪೭॥

ಧಾತ್ರೀಪತಿ ಸತ್ಪಾತ್ರ ಜಂಗಮಕೆ
ಪಾತ್ರೆ ಕರಗ ಸದ್ವಸ್ತ್ರಗಳ।
ಧೋತ್ರೋಷ್ಣೀಷ ಪವಿತ್ರಗಾತ್ರಸುತ
ನುತ್ರಾಕೃತಿಯ ವಿಭೂತಿಗಳ॥ ॥೧೪೮॥

ಹರಿಣರಲ್ಲಕಗಳರುಣಾಂಬರಗಳ
ತರವರಿದೀವ ದುಕೂಲಗಳ।
ಹರನೇತ್ರೋದ್ಭವ ಸರಗಳ ಕಚ್ಚಟಿ
ಹರಸೂತ್ರಗಳ ಸುವಾಸಗಳ॥ ॥೧೪೯॥

ಪಾದತ್ರಾಣಗಳಾದಿಯಾದವಾ
ಮೋದದಿ ಜಂಗಮತತಿಗಿತ್ತು।
ಪಾದವೆ ರಾಜ್ಯವಿನೋದಕೆ ವಿಘ್ನ
ಛೇದೋನ್ಮೂಲನವಹ ಗೊತ್ತು॥ ॥೧೫೦॥

ಎಂಬ ಭಕ್ತಿ ಬಗೆಗಿಂಬಾಗಿಹ ಕರು
ಣಾಂಬುಧಿಯಹ ನ್ರಪಗೀಶ್ವರನು।
ನಂಬಿಗೆ ನಂಬಿಯು ಬೆಂಬಳಿಯಾದೋ
ಲೆಂಬುವ್ದೇನಚ್ಚರಿ ತಾನು॥ ॥೧೫೧॥

ಆರಂಭಿಸಿದಾರಭ್ಯ ಪುರಾಣವ
ಭೂರಮಣನು ಸದ್ಭಕ್ತಿಯಲಿ।
ಸಾರುವೆ ಬೀರುವ ಚಾರು ರಹಸ್ಯವ
ಸೂರಿಗಳಿಂದಲಿ ಕೇಳುತಲಿ॥ ॥೧೫೨॥

ಆ ತೆರ ಮಾಡುವ ತಾ ತವಕದಲಿ ಪು
ರಾತನ ಪುಂಗವರಂದದಲಿ।
ಭೂತಾಧಿಪ ಗಣಜಾತವ ತಣಿಸಿದ
ಭೂತಿಯವರದೆಂದೆನಿಸುತಲಿ॥ ॥೧೫೩॥

ಚಾತುರ್ಮಾಸದ ಮೇಲರೆದಿಂಗಳ
ನೂತನ ದಿವ್ಯಾಂಬರಗಳಲಿ।
ತಾ ತಣಿಸಿದ ಚರವ್ರತಕೆ ಸುರಭೂ
ಜಾತನೆನಿಸುತ ವಿನೋದದಲಿ॥ ॥೧೫೪॥

ರುಧಿರ ದೃಗಬ್ದದ ಮಧುಮಾಸದ ಶು
ಕ್ಲದ ಸದ್ದಶಮಿಯು ಗುರುವಾರ।
ಪದಪೂಜೆಯ ಮಾಡಿದ ಮಲ್ಲೇಂದ್ರನ
ಪದದ ವಿಧದ ಸಂಪದ ವಿವರ॥ ॥೧೫೫॥

ಹೊಟ್ಟಿಮಠದ ಕೊಟ್ಟೂರಾರ್ಯರ ಪೊಡ
ಮಟ್ಟು ಕರೆದು ತಂದಾಸನದೆ।
ಪಟ್ಟಾವಳಿಯನು ಕಟ್ಟಿ[ಸಿ] ಮಧ್ಯದೊ
ಳಿಟ್ಟರು ಮಣಿಪೀಠವ ಮುದದಿ॥ ॥೧೫೬॥

ಆಸನವೆಂಬುದ ಶಾಸನಗೊಳಿಸುತ
ದೇಶಿಕವರ್ಯರ ಪಾದಗಳ।
ಶ್ರೀ ಶಿವಪಾದ ಕುಶೇಶಯವೆನುತ ಮ
ಹೀಶ ಪೂಜಿಸುವ ರೀತಿಗಳ॥ ॥೧೫೭॥

ಅಷ್ಟವಿಧಾರ್ಚನೆಯಷ್ಟವನೆಲ್ಲವ
ಶಿಷ್ಟ ಶಿವಾರ್ಚಕನನುಗೊಳಿಸಿ।
ಹೃಷ್ಟನೆನಿಸಿ ಬಿಲ್ವಾಷ್ಟಕ ಪೂರ್ವಕ
ಮಿಷ್ಟದ ಶ್ರೀದಳಗಳ ಧರಿಸಿ॥ ॥೧೫೮॥

ಹರನಾಮವನುಚ್ಚರಿಸುತ ಧರಿಸುತ
ಸ್ಮರಿಸುತ ಶಿವಪಂಚಾಕ್ಷರಿಯ।
ಎರಡು ಲಕ್ಷ ಪರಿಮಿತಿಗೆ ಮೀರಿದುದ
ಪರಮೇಶ್ವರನರಿವಾ ಪರಿಯ॥ ॥೧೫೯॥

ಪತ್ರಿಗಳಿಂ ತಾಪತ್ರಯ ತೀರಿಸಿ
ಪುತ್ರಾದಿಗಳಿಂದೊಡಗೂಡಿ।
ಚಿತ್ರ ಚರಿತ್ರರ ಗಾತ್ರಕೆ ದಿವ್ಯತ
ನುತ್ರವೆನಿಸಿ ಭೂವರ ನೋಡಿ॥ ॥೧೬೦॥

ನಾನಾವಿಧದ ಪ್ರಸೂನ ಕೋಟಿಗಳ
ನಾನಂದದಿ ಕಾಯದಿ ಧರಿಸಿ।
ಮಾನಸೋತ್ಸವಕ್ಕೇನು ತೋರಿದುದ
ಮಾನನೀಯನಾಗುಪಚರಿಸಿ॥ ॥೧೬೧॥

ಶಿವವಂಶಧ್ವಜನವನಿವರೋತ್ತಮ
ಶಿವಜಂಗಮದ ಶಿವಾಂಗದಲಿ।
ನವವಂಶಧ್ವಜನಿವಹವ ನಿಲಿಸಿದ
ನವಯವ ಕಾಣದ ಭಾವದಲಿ॥ ॥೧೬೨॥

ತುದಿಗಳಲೊದಗಿದ ಕೇತಕಿ ದಳಗಳ
ನದರೊಳು ಸುಜಪಾ ಪುಷ್ಪಗಳ।
ಪುದಿದಿರೆ ರಾಜಾಭ್ಯುದಯ ಪತಾಕೆಗ
ಳಿದಿರ್ರೊಳೆನಿಸುತಿಹ ಭಾವಗಳ॥ ॥೧೬೩॥

ತೋರುವವಾಗಳೆ ಮಾರುತನ ಸಂ
ಚಾರದಿ ವಂಶಶಲಾಕೆಗಳು।
ಭೂರಮಣನ ಪರಿವಾರದಿ ನಾವೇ
ಸೇರುವೆವೆಂಬುವ ಬಿರುದುಗಳು॥ ॥೧೬೪॥

ಈ ಪರಿಯಿಂದಲಿ ಭೂಪಾಲೋತ್ತಮ
ಶ್ರೀಪಾದದ ಪೂಜೆಯ ಮಾಡಿ।
ಈ ಪದ ಮಹಿಮೆಯೊಳಾಪದ್ರಾಶಿಯು
ಪೋಪುದೆನುತ್ತಲಿ ಕೊಂಡಾಡಿ॥ ॥೧೬೫॥

ತಾಳ ಮೃದಂಗ ಸಮೇಳನದಲಿ ಕೈ
ತಾಳದ ತೆರ ವಾದನಗೈವ।
ಮೇಳದಿ ಕೀರ್ತಿಪ ಭಾಳಾಂಬಕ ನುತಿ
ಗೇಳಿ ತನ್ನ ಮೌಳಿಯನೊ[ಲೆ]ವ॥ ॥೧೬೬॥

ವೀರಮಹೇಶ್ವರ ವಾರವು ಸುತ್ತಲು
ತೋರಲು ಮಧ್ಯದಿ ದೇಶಿಕರು।
ವೀರಕಗಣ ಪರಿವಾರವು ಸೇರಿರೆ
ಮಾರಹರಾಕೃತಿದೋರುವರು॥ ॥೧೬೭॥

ನಿರವಯವಾತುಲ ನಿತ್ಯ ನಿರಾಮಯ
ಪರಿಪೂರ್ಣಾಖಂಡಾನಂದ।
ತರಣಿಕಿರಣದೋಲಲರುಣಂಬರಗಳ
ಧರಿಸಿ ಚರಿಸುವುದು ಚರವೃಂದ॥ ॥೧೬೮॥

ಭೂಲೋಕದಿ ಕೈಲಾಸವು ಮಲ್ಲ ನೃ
ಪಾಲ ಸದನವೆಂದೀಶ್ವರನು।
ಶ್ರೀ ಲಕ್ಷಣಗಣಜಾಲದಿ ಪ್ರಭು ಪೀ
ತಾಲಯ ಮಧ್ಯದೊಳೆಸೆದಿಹನು॥ ॥೧೬೯॥

ಅಸಮಾನರು ಚರ ವೃಷಲಿಂಗಾರ್ಯರು
ಬೆಸಸಿದ ತೆರ ಮಾಡುವ ಭೂಪ।
ಬಸವೇಶೋಪಮ ವಸುಧೆಯೊಳಲ್ಲದೆ
ಯುಸುರಲಾರೆನಾತನ ರೂಪ॥ ॥೧೭೦॥

ಕುಸುಮಶರೋಪಮ ಶಿಶುರತ್ನರು ಢಾ
ಳಿಸುವರು ಚಾಮರಗಳ ನಲಿದು।
ವಸುಧಾವಲ್ಲಭ ಕುಸುಮಾಂಜಲಿಗಳ
ನೆಸಗುವನಾನಂದದೊಳೊಲಿದು॥ ॥೧೭೧॥

ಜಿತಕಾಮಾದ್ಯರಿ ತತಿಯ ವಿರಕ್ತರ
ಶತಸಂಖ್ಯರ ಕರಕಲರಿತ್ತು।
ಕ್ಷಿತಿವಲ್ಲಭನಪ್ರತಿಮ ಸುಕೃತ ಪ
ದ್ಧತಿಯ ಸಾಧಿಸುವುದರ ಗೊತ್ತು॥ ॥೧೭೨॥

ಶತಮುಖವಿಭವಾಶ್ರಿತ ಕ್ಷಿತಿಪಾಲನು
ಶತ ಮಾಹೇಶ್ವರರೊಡಗೂಡಿ।
ಶತಕ ಪಾಡಿ ನುತಿಮಾಡಿ ಸುಪುಷ್ಪವಿ
ತತಿಯನು ಚೆಲ್ಲುತ ಕೊಂಡಾಡಿ॥ ॥೧೭೩॥

ಶಂಬರ ಪರಹರರೆಂಬರ ಶ್ರೀಕರ
ಶಂಬ ರಜಗಳಲಿ ತುಂಬಿರುವ।
ತುಂಬಿಯ ಕುಸುಮಗಳಂಬರದಿಂ ಭರ
ದಿಂ ಬರುವವು ಭಗಣಗಳಿರವ॥ ॥೧೭೪॥

ಮೆರೆದವು ಕರೆದವು ಸುರಿದವು ಮಾಹೇ
ಶ್ವರನ ಶಿರಸ್ಥಾನದಿ ಸುತ್ತಾ।
ಹರಿದವು ಮುಕ್ತಾಕರ ರಂಜಿತವೆನ
ಲರಿದವು ನೋಳ್ಪರಿಗೆತ್ತೆತ್ತಾ॥ ॥೧೭೫॥

ನಾರಿಕೇಳನೀರೈನೂರೊಡಿಸಿದ
ಭೂರಮಣನು ಕ್ಷಣಮಾತ್ರದಲಿ।
ಈ ರೀತಿಯೆ ಗಣವಾರ ತೃಪ್ತಿಯನು
ಪೂರೈಸೆಂಬುವ ಸ್ತೋತ್ರದಲಿ॥ ॥೧೭೬॥

ಬಸವಪುರಾಣವನಸಮಾನರ ಪದ
ಬಿಸಜಪೀಠದೊಳು ಮಂಡಿಸುತ।
ವಸು ದಕ್ಷಿಣೆ ನವ ವಸನೋಷ್ಣೀಶವ
ವಸುಧೇಶ್ವರನೀವುತ ತ್ವರಿತ॥ ॥೧೭೭॥

ಘನಸಾರಾತತಿಯನು ಬೆಳಗಿದರಾ
ಘನಮಹಿಮಗೆ ಚಿನ್ಮಯ ಶಿವಗೆ।
ಜನಪತನುಜರಿಂ ವಿನಮಿತನಾಗುತ
ನನಗಿದಾಗಲೆಂಬುವ ನೃಪಗೆ॥ ॥೧೭೮॥

ಹರಸಿದ ಶ್ರೀ ಗುರುವರರ ಚರಣಭವ
ಕರಣವ ಸೇವಿಸಿ ಪಂಕ್ತಿಯನು।
ವಿರಚಿಸಿ ಮಾಹೇಶ್ವರರ ಮನೋದಯ
ಸುರತರುವೆನಿಸುತ ಭೂವರನು॥ ॥೧೭೯॥

ಆಜ್ಯವೆರಸಿದ ಸುಭೋಜ್ಯದಿ ಪಸಿವನು
ತ್ಯಾಜ್ಯವೆನಿಸಿದ ನೃಪಾಲಕಗೆ।
ಪ್ರಾಜ್ಯತರದ ಸಾಮ್ರಾಜ್ಯನ ತ್ರಿಜಗ
ತ್ಪೂಜ್ಯನೀವುದರಿದೇ ತನಗೆ॥ ॥೧೮೦॥

ಆರಾರಿಚ್ಛಾಸಾರ ಭೋಜನವ
ನಾರುಸಾವಿರಕೆ ಮಾಡಿಸಿದ।
ವಾರಿಗಿಂತ ಘೃತಧಾರೆ ಮೀರಿದುದ
ನಾರು ಬಣ್ಣಿಸುವರುಂಡುದುದ॥ ॥೧೮೧॥

ಉಂಡುದ ಕಂಡುದ ಕೊಂಡುದ ಪರಿಮಿತಿ
ಗೊಂಡುದ ಬರೆದೆನಿದರ ಮೇಲೆ।
ಹಿಂಡಗಲದೆ ಬರೆ ಚಂಡಪರಾಕ್ರಮ
ಕಂಡು ಕರಸುವನು ಶಿವಲೀಲೆ॥ ॥೧೮೨॥

ನಾರೀಜನ ಹಳೆ ಸೀರೆಯನುಟ್ಟು ಕು
ಮಾರ ಕುಮಾರಿಯರೊಡವೆರಸಿ।
ವಾರಿಧಿ ಮೇರೆಯ ಮೀರಿದ ತೆರ ಬರೆ
ಭೂರಮಣೀವರ ಸತ್ಕರಿಸಿ॥ ॥೧೮೩॥

ಲಿಂಗಾರ್ಚನೆಯನು ಸಾಂಗದಿ ಮಾಡಿಸಿ
ಮಂಗಳಾರತಿಯನೆತ್ತಿಸುತ।
ಲಿಂಗಾಭಾವ ಜನಂಗಳ ಕಾಣುತ
ಲಿಂಗಕಾಯರನು ಮಾಡಿಸುತ॥ ॥೧೮೪॥

ಉಣಿಸುವ ತಣಿಸುವ ಕ್ಷಣವಗಲದೆ ಸಂ
ದಣಿಯ ನಿರೀಕ್ಷಿಪ ಸೌಧದಲಿ।
ಕ್ಷಣದಾ ಮಣಿಭೂಷಣರೂಪರ ಸುರ
ಮಣಿಯೆನಿಸುವ ನೃಪ ಮೋದದಲಿ॥ ॥೧೮೫॥

ಬಸವಪುರಾಣದ ವಸುಕಾಂಡಗಳಿಗೆ
ವಸುಧಾವಲ್ಲಭನೀ ಪರಿಯ।
ಅಶನದಿ ತೋಷಿಸಿ ವಸನ ದಕ್ಷಿಣೆಗ
ಳಸಮಾನನು ಕೊಡುತಿಹ ಸಿರಿಯ॥ ॥೧೮೬॥

ವಿತರಣಲೋಲ ಕ್ಷಿತಿನಾಥನು ಸ
ತ್ಸುತರು ಸಚಿವರು ಸಹಾಯಿಗಳಿಂ।
ಹಿತರಿಂ ನುತರಿಂ ಯುತನಾಗುತ ದ್ವಾ
ರತಳದಿ ಮಂಡಿಸಿ ಪಾಣಿಗಳಿಂ॥ ॥೧೮೭॥

ಆರೇಳ್ವಾಸಿರ ಸಾರರಸಾಯನ
ಪೂರದಿ ಸುಖಿಸಿದ ಗಣರುಗಳ।
ಬೇರೊಬ್ಬೊಬ್ಬರ ತೋರಿರಿರೆನಲು ಪರಿ
ಚಾರಕರಿಂ ಬರುತಿಹರುಗಳ॥ ॥೧೮೮॥

ಪೊಡವಿಪ ಕಾಣುತ ಪಿಡಿಪಿಡಿಯೆಂಬುತ
ಪಿಡಿಪಿಡಿ ತುಂಬಿದ ರೊಕ್ಕಗಳ।
ಎಡೆತಡೆಯಿಲ್ಲದಲೊಡನೊಡನೆಯೆ ಬರೆ
ಕೊಡುವನು ಕಾಮಿಸೆ ವಸನಗಳ॥ ॥೧೮೯॥

ನಾರೀಜನರಿಗೆ ಸೀರೆಗಳನು ಶಿಶು
ವಾರಕೆ ಚಿತ್ರಾಂಬರಗಳನು।
ಆರೇಳ್ವಾಸಿರ ಕೀರೀತಿಯಲಿ ಕು
ಮಾರರ ಕರದಲಿ ಕೊಡಿಸಿದನು॥ ॥೧೯೦॥

ಕಾಯಕಗಣರ ನಿಕಾಯವ ಕಾಣುತ
ಕಾಯಜಾಕೃತಿಯ ಭೂಪಾಲ।
ತೋಯಜೋಪಮಾದಾಯತ ಕರಗಳಿ
ಗಾಯಾಸಾಗದೆ ಜನಲೋಲ॥ ॥೧೯೧॥

ತುಂಬಿ ಕೊಡಲ್ಕಿವರಂಬರ ಬೇಡಲ್
ಬೆಂಬಿಡದೀವುತ ಭೂನಾಥ।
ಹಂಬಲ ಮರೆವುತ ಹರಸುತ ಪೋಗಲು
ಮುಂಬಲವೆಂಬನು ಪ್ರಖ್ಯಾತ॥ ॥೧೯೨॥

ಅರುಣೋದಯ ಮೊದಲರೆನಿಮಿಷವು ಭೂ
ವರನ ಕರಗಳಿಗೆ ತೆರವಿಲ್ಲ।
ದೊರಕಿಸಿದಂದದಿ ಚರರು ಬೇಡೆ ಬೇ
ಸರದೀವನು ಮನವೆರಡಿಲ್ಲ॥ ॥೧೯೩॥

ಭುವನನಯನ ಭೂಧವನೌದಾರ್ಯವ
ದಿವದಲಿ ತವೆ ಕಾಣುತ ಮರಳಿ।
ಶಿವಗಣಕೀ ವಿವರವ ವಿಸ್ತರಿಸುತ
ರವಿರುಚಿಯನು ಗಾಣದೆ ತೆರಳಿ॥ ॥೧೯೪॥

ವರುಣಾಶಾಗಿರಿಯಡರುವ ಸಮಯವ
ನರಿದು ಧರಾಧಿಪ ಯಾಚಕರ।
ನೆರವಿ ಹರಿಯೆ ಸುಖಕರ ಸುಮಶರ ಸುರ
ದರ ಪೊಕ್ಕನು ಸದನವ ಶೂರ॥ ॥೧೯೫॥

ತ್ಯಾಗದಿ ಭೋಗದಿ ಯೋಗದೊಳೀ ಭೂ
ಭಾಗದಿ ಕಾಣೆನು ತತ್ಸಮರ।
ಶ್ರೀಗಾಗರ ಸುಖಸಾಗರ ಭೂವರ
ಗೀಗಿಹರೆನೆ ಮಾಳ್ಪೆನು ಸಮರ॥ ॥೧೯೬॥

ಚೈತ್ರವ ಲಕ್ಷ ಚತುರ್ದಶಿ ತಿಥಿ ಜೈ
ವಾತೃಕಾಖ್ಯ ಶುಭವಾಸರದಿ।
ಗೋತ್ರಾಧಿಪನುತಿಪಾತ್ರ ಪುರಾಣವ
ಧಾತ್ರೀಶ್ವರ ಮುಗಿಸಿದ ಮುದದಿ॥ ॥೧೯೭॥

ಮುಗಿವೆಡೆಯೊಳ್ ಮುಗುಳಂಬಗೆ ಸಮನಹ
ಜಗೀವಲ್ಲಭ ದೇಶಿಕರ।
ಮಿಗೆ ಪೂಜಿಸಿ ಬಿಲ್ವಗಳಿಂ ಧರಿಸಿದ
ನಗಣಿತವಹ ಬಗೆಬಗೆಯಲರ॥ ॥೧೯೮॥

ಭೇರಿಮೃದಂಗ ಸಮೇಳತಾಳ ಕೈ
ವಾರಿಸುವ ಸ್ತುತಿಪಾಠಕರ।
ಆ ರಾವದಿ ಘನಸಾರದೀಪಗಳ
ನೂರ ಝುಟ್ಟಿಸಿದ ಸುಖಸಾರ॥ ॥೧೯೯॥

ಉತ್ತರೋತ್ತರಾರ್ಥ ಪ್ರದವೆನಿಸುವ
ಉತ್ತರಾಣಿಯಾ ಕಡ್ಡಿಗಳ।
ಮೊತ್ತವು ಬೆಳಗಿದವೆತ್ತಲು ಸುತ್ತಲು
ಒತ್ತರಿಸಿದ ಶಿವಗಣಮೇಳ॥ ॥೨೦೦॥

ಜಯನಾದದ ವಿನಯದಲೀಶಸ್ತುತಿ
ಮಯದ ಸುಮಾಂಜಲಿಯನು ಮಾಡಿ।
ನಯವಿದ ೧[ಸತಿ]೧ ಸಮುದಯ ನಿಜಸುತರಿಂ
ಭಯಭಕ್ತಿಗಳಲಿ ಕೊಂಡಾಡಿ॥ ॥೨೦೧॥

ವಂದಿಸಿ ಮುಂದಿಹ ಮಂದಿಯ ತೊಲಗಿಸಿ
ನಂದನರಿಂದವನೀಶ್ವರನು।
ಎಂದೆಂದಿಗೆ ಸಿರಿಯೊಂದಿಸಿ ನೀವಾ
ನಂದಿಸಿರೆಂಬುವ ಸುಖಕರನು॥ ॥೨೦೨॥

ಗೋಪಪುರಾಣವ ಭೂಪಾಲಾಗ್ರಣಿ
ತಾ ಪರಿತೋಷದಿ ಮುಗಿಸಿದುದು।
ಈ ಪರಿಯಂದು ಪ್ರತಾಪಯಂತ್ರಗಳ್
ತಾ ಪೇಳ್ವವೊ ಎಂಬೋಲ್ ಮೊರೆದು॥ ॥೨೦೩॥

ವಸುಧಾವಲ್ಲಭ ಬಸವಪುರಾಣವ
ಶಶಿವಾಸರ ಮೆರೆಸಿದ ಪರಿಯ।

೧–೧ ಸುತ (ಮೂ)

ಉಸುರಲಾರೆ ಸಾರಸಭವ ಸೃಷ್ಟಿಯೊ
ಳಸಮಾನನು ಮಾಡಿದ ಬಗೆಯ॥ ॥೨೦೪॥

ಬೀದಿಯ ಶೋಧಿಸಿ ಹಾದಿಯೊಳಗೆ ಮ
ತ್ತಾದಿಯೊಳಗೆ ಶಿವಗಣರಂದು।
ಹೋದಮಾರ್ಗವೆಂದಾದರಿಸುತ ತರು
ಣಾದಿತ್ಯೋದಯದೋಲ್ ಬಂದು॥ ॥೨೦೫॥

ನಿಂದು ತೋರಣವನಂದದಿ ಕಟ್ಟಿಸಿ
ಮಂದಾನಿಲ ಬರುವದಕಾಗಿ।
ಅಂದದಿ ಚಳೆಯವ ಸುಂದರ ಹಾಕಿಸ
ಲಿಂದಿರಪುರವೆಂದೆನಲಾಗಿ॥ ॥೨೦೬॥

ತೋ[೧][ರುತ][೧] ಶೋಭೆಯ ಬೀರಿತು ಬೀದಿಯು
ತೋರುವೇರು ಕುರುಜುಗಳಿಂದ।
ಸಾರುತ ಮಾರುತಪಥದೊಳು ನಿರ್ಜರ
ವಾರವನೀಕ್ಷಿಸಲಾನಂದ॥ ॥೨೦೭॥

ಭೂರಮಣಾಗ್ರಣಿಯಾ ರಣಮಾರಣ
ಕಾರಣ ವಾರಣ ಪಂಚಕವು।
ತೋರ ಸುಘಂಟಾ ಹಾರಪುಷ್ಪಕಾ
ಕಾರಗಳಿಂದಲಿ ಶೋಭಿಸಲು॥ ॥೨೦೮॥

ಮತ್ತಗಜಗಳ ನೃಪೋತ್ತಮ ಸಿಂಗರ
ವೆತ್ತವ ನೋಡುತಲ [೨][ರ್ತಿ][೨]ಯಲಿ।
ಚಿತ್ತಜಜಯ ಸದ್ವೃತ್ತವಿರಕ್ತರ
ಹತ್ತಿಸುವಾತುಲಭಕ್ತಿಯಲಿ॥ ॥೨೦೯॥

೧-೧ ರಿತು(ಮೂ) ೨-೨ ರ್ಥಿ(ಮೂ)

ವಾರುವಗಳ ಶೃಂಗಾರಗೊಳಿಸಿ ಮದ
ವಾರಣಗಳ ಮುಂದಕೆ ನಡೆಸಿ।
ಹೇರಿದ ಗಜದಲಿ ಭಾರಿಯ ಭೇರಿಯ
ಭೂರಮ್ಮಣನು ಭೋರನೆ ನಡೆಸಿ॥ ॥೨೧೦॥

ಪಾರಮಾರ್ಥ ಸುಖಸಾರರ ಧೀರರ
ವೀರವಿಜಯ ಮಾಹೇಶ್ವರರ।
ಪೌರ ಜನರ ಪರಿಜನರನು ಕರೆಸಿದ
ಸೂರಿಗಣಾನಂದದ ನೃಪರ॥ ॥೨೧೧॥

ವೀರರ ಸಂಗರ ಶೂರರ ಮುಕ್ತಾ
ಹಾರಕ ಬಹು ಬಿರುದಾಂಕಿತರ।
ಚಾರರ ತನ್ನ ಕುಮಾರರ ಬಹು ಶೃಂ
ಗಾರಗೊಓಳಿಸಿ ನಡೆಸಿದ ಧೀರ॥ ॥೨೧೨॥

ಸುತ್ತುಮುತ್ತಲೆತ್ತೆತ್ತಲು ನೋಡಲು
ಒತ್ತರಿಸುವ ತುರಗವ್ರಜನ।
ಪತ್ತಿಬಲವು ನೋಡುತ್ತಿರಲೆಮ್ಮಯ
ಗೊತ್ತಿಗಿಲ್ಲವೆಣಿಸಲು ದಳವ॥ ॥೨೧೩॥

ಪರಿಜನ ಪುರಜನ ನೆರವಿಯ ಜನಗಳ
ಬರವಿಗೆ ಹರವಿಗೆ ಸಾಲದಲೆ।
ಕರಿ ತುರಂಗ ರಥರಾಜಿಗೆ ನೋಡಲು
ಸರಿಯಾದುದು ಸರಣಿಯ ಮೇಲೆ॥ ॥೨೧೪॥

ಕೂಡಿದ ಜನವನು ನೋಡಲು ಲೆಕ್ಕವ
ಮಾಡಲು ಮಂಡಲ ಸಾಹಸ್ರ।
ಪ್ರೌಢ ನರೇಂದ್ರನ ಬೀಡಿನ ಮುಂದೆಸೆ
ಯಾಡಲೇನು ಬಹುಜನ ಮಿಶ್ರ॥ ॥೨೧೫॥

ವೀರಮಹೇಶ್ವರ ವಾರವ ಹಯಗಳ
ವಾರಣಗಳ ಮೇಲೇರಿಸುತ।
ಮೀರಿದ ವಿಷಯವಿದೂರರಿಗೀ ಸುಖ
ಸಾರವ ಗೌರವ ತೋರಿಸುತ॥ ॥೨೧೬॥

ನಿಂದ ವಿರಕ್ತರನಂದಣದೊಳಗಾ
ನಂದದೊಳೇರಿಸುತಾ ನ್ರಪನು।
ಹಿಂದಾದರು ನಿಮ್ಮಿಂದೈಶ್ವರ್ಯವು
ಮುಂದಾದರು ಸರಿಯೆಂಬುವನು॥ ॥೨೧೭॥

ಸುಂದರ ವಿಭವಪುರಂದರನೇರಿದ
ನಂದಶ್ವವನಾನಂದದಲಿ।
ಸಂದಿಸಿ ನಿಂದಿಹ ಮಂದಿಯ ತೊಲಗಿಸಿ
ಮುಂದಕೆ ನಡೆಸಿದನರ್ಥಿಯಲಿ॥ ॥೨೧೮॥

ಸಾಲಾಗಿಹ ಕೈ ಮೇಲಾಗಿಹ ಬೊಂ
ಬಾಳುಗಳುರಿವವು ನೂರಾರು।
ತಾಳವೆರಸಿದ ಸಮೇಳ ಮೇಳವನು
ಹೇಳಲೇನು ಮೂವತ್ತಾರು॥ ॥೨೧೯॥

ತಂಬಟ ಭೇರಿಯು ಚಂಬುಕ ಗಿಡಿಬಿಡಿ
ಕೊಂಬು ಕಹಳೆಗಳ ಕಳರವವ।
ಶಂಬಾಯುಧ ಸಮನೆಂಬ ನೃಪರ ನೀ
ನೆಂಬ ವಂದಿಗಳ ನಿಸ್ವನವ॥ ॥೨೨೦॥

ಚರಮೂರ್ತಿಗಳತಿ ಬಿರುದಿನ ಪಟ್ಟದ
ಗುರುಮೂರ್ತಿಗಳ ಶಿರದೊಳಲೆವ।
ಪರಿರಂಜಿತ ಚಾಮರಗಳ ಗಣನೆಯ
ನರಿಯೆನಾತಪತ್ರಗಳಿರವ॥ ॥೨೨೧॥

ವ್ಯಾಸ ಮುನೀಶ್ವರ ಕಾಶಿಯ ಕ್ಷೇತ್ರದಿ
ಕೇಶವ ಘನತೆಗೆ ಕೈಯೆತ್ತಿ।
ಘೋಷಿಸಲಾ ಶಬ್ದವ ನಂದೀಶ ಸ
ರೋಷನ್ನಾಗಿ ಕೇಳುತ ಮುತ್ತಿ॥ ॥೨೨೨॥

ಖಂಡಿಸಲಾ ಭುಜದಂಡದಿ ಕರ ಕರ
ದಂಡದೊಲೆಸೆವ ವೃಷಧ್ವಜದ।
ತಂಡದೊಳೆಸೆದವು ಖಂಡಕಳಾನಿಧಿ
ಮಂಡಿತಗೆತ್ತಿದ ಬಹುಬಿರುದ॥ ॥೨೨೩॥

ವೀರಭದ್ರ ವಿಕ್ರಮವನು ಸಾರುತ
ಹಾರುತ ಕುಣಿವ ಪುರಾತನರ।
ಶೌರಿಮುಖಾಮರವಾರಕಧೀಶ್ವರ
ಗೌರೀವರನೆಂದೆಂಬವರ॥ ॥೨೨೪॥

ಆ ರತಿಸಮ ಸುಕುಮಾರತೆಯರು ಪಿಡಿ
ದಾರತಿಗಳನಷ್ಟಿಷ್ಟೆಂದು।
ಅರೆಣಿಸುವರೀ ಕಾರಣ ಭವಭಯ
ಮಾರಣವೆಂಬವರರ್ಕೈ ತಂದು॥ ॥೨೨೫॥

ನೋಡುವವರು ಸ್ತುತಿಮಾಡುವರೀ ಪರಿ
ಯಾಡುವರಲ್ಲಲ್ಲಿಗೆ ನಿಂದು।
ನಾಡನು ಪಾವನಮಾಡಲು ಹಿಮಕರ
ಚೂಡ ಕಳಿಸಿದ ಗಣಪನೆಂದು॥ ॥೨೨೬॥

ರಾಜಧಾನಿಯಿಂ ರಾಜನು ಪೊರಡಲು
ರಾಜವೀಥಿಯೊಳು ರಾಜಿಸುವ।
ರಾಜಪ್ರಭೆಯೋಲ್ ತೇಜದೊಳೆಸೆವ ಸು
ರಾಜ ಜ್ಯೋತಿಗಳ್ ರುಚಿಗರೆವ॥ ॥೨೨೭॥

ಭೂರುಹವೇರಿದ ತಾರಾಗಣದೋಲ್
ತೋರುವವು ತಮ್ಮಯ ಪ್ರಭೆಯ।
ಹಾರುವ ಮೇಲಕ್ಕೇರುವ ಮರಳಿಯು
ಸಾರುವ ನೋಡಲಕೀ ಪ್ರಭೆಯ॥ ॥೨೨೮॥

ಕ್ಷೀಣವಾದ ಬಾಣಾಖ್ಯನ ಬಾಹು
ಶ್ರೇಣಿಗಳೀ ಕ್ಷೋಣೀವರನ।
ಕಾಣಲ್ ತ್ರಾಣವ ಮಾಣದೆ ಕೊಡಲವು
ಬಾಣಗಳಾದವು ಬಹದರನ॥ ॥೨೨೯॥

ಏರಿದ ಬಾಣವು ತೀರಿದಮೆಂಬುದು
ತೋರಿದುದಿಲ್ಲ ನಭಸ್ಥಳದಿ।
ಹಾರುತಲುಡು ಪರಿವಾರವೆನಲ್ ಕಿಡಿ
ಬೀರುತಲದ್ಭುತಗಳ ರವದಿ॥ ॥೨೩೦॥

ಬಿರಿಸಗಳಾಗಿವು ಸರಿಸವ ಸಾರ್ವವ
ನಿರಿಸಬಾರದೆಂದರಸಾಗ।
ಉರಿಸಲ್ ಕಿಡಿಗಳ ಕರೆವುತ ಪೊರೆವುತ
ಧರಣೀಶ್ವರ ಗತಿಯೆಮಗೀಗ॥ ॥೨೩೧॥

ಎಂಬವು ಕೊಂಬವು ತುಂಬುವವವು ತುಡ
ಕೆಂಬುವವವು ಬಿಡಬೇಡೆನುತ।
ನಂಬುವವು ಶಿವನ ನಡುಗಣ್ಣಾಹುತಿ
ಗೊಂಬವು ಕುಂಭನಿಯೊಳಗಿರುತ॥ ॥೨೩೨॥

ಕಡಿಸಿ ಕೆಡಿಸಿ ತಲೆಗಡಿಸಿ ಸುಡಿಸಿ ಶ್ರಮ
ಬಡಿಸುವರೆಮ್ಮನು ಪೊಡವೀಶ।
ಗಿಡಗಳೆನಿಸಿ ನೀ ನೆಡಸಲು ನ[ಡೆ]ಸಲು
ಕೊಡುವೆವು ಶೋಭೆಯ ಸುಜನೇಶ॥ ॥೨೩೩।

ಎನಲಾ ಗಿಡಗಳ ತನುವಿನ ಕೊನೆಗಳ
ಮೊನೆಗಳೊಳಗೆ ಬಾಣಾದಿಗಳ।
ಜನಪನಿರಿಸೆ ಶುಭವೆನಿಪೋತ್ಸವ ರಂ
ಜನೆಗೊಳಿಸಿದವು ಗಿಡಗಳತುಳ॥ ॥೨೩೪॥

ಉರಿಗಂಡವು ಸಿರಿಗೊಂಡವು ಮೇಲಕೆ
ಪರಿಪರಿಯಾರುತ ಹಾರಿದವು।
ಧರಣೀಶ್ವರಗರಿದೆನಿಸಿ ನೋಟಕರ
ಬೆರಗಾಗಿಸಿದವು ತಾವಿಹವು॥ ॥೨೩೫॥

ಮದ್ದಿನ ಸದ್ದಿನ ಹೃದ್ಯದ ವಾದ್ಯದ
ಮುದ್ದುಗರೆವ ತೌರ್ಯತ್ರಯದ।
ಗದ್ದಲವಿದ್ದುದ ಪದ್ಯವ ನೋಡಲು
ತದ್ದಿನ ರಾತ್ರಿಯು ಸಾಲದುದ॥ ॥೨೩೬॥

ಕನಕಾಚಲ ಧರ್ಮನ ರಜತಾಚಲ
ವನೆಯನ ಭಕ್ತಾಗ್ರಣಿಯಾದ।
ಜನಪ ಸುವರ್ಣರಜತಗಳ ಸುಮಗಳ
ನನಘರ ಶಿರದೊಳು ಪಾರಿಸಿದ॥ ॥೨೩೭॥

ದೈವವು ನಮ್ಮಯ ದೈವವದಾಗಿರೆ
ಭೂವಲ್ಲಭನ ಸುಕೃತದಿಂದ।
ನಾವು ಕಂಡೆವೀ ಪಾವನೋತ್ಸವವ
ದೈವಾರಾಧ್ಯನ ದಯದಿಂದ॥ ॥೨೩೮॥

ಎಂದು ಬಂದು ವಂದಿಸಿ ಫಲ ಸುಮಗಳ
ತಂದು ಪಾರಿಸುವರ[೧][ರ್ತಿ][೧]ಯಲಿ।

೧–೧ ರ್ಥಿ (ಮೂ)

ತಂದೆ ಮಲ್ಲಭೂಮೀಂದ್ರನಿಂದ ಗಣ
ವೃಂದವ ಕಂಡೆವು ಭಕ್ತಿಯಲಿ॥ ॥೨೩೯॥

ಎನುತ ನಮಿಸಿ ಭೂಪನ ಕೊಂಡಾಡುತ
ಮನೆಮನೆ ಮಾಳಿಗೆಗಳನೇರಿ।
ತನುವ ಮರೆದು ಮನವೆರೆದು ಸುಭಕ್ತಿಯ
ಲನಘರ ಶಿರದೊಳಲರ ತೂರಿ॥ ॥೨೪೦॥

ಸಾರುವರತ್ತಲು ನಾರೀಜನ ಸುಕು
ಮಾರರನೆತ್ತುತ ತಮತಮ್ಮ।
ಚಾರುಸೌಧಗಳನೇರಿ ನೋಡಿ ಭವ
ಮಾರಣ ಕಾರಣವೆನುತಮಮ॥ ॥೨೪೧॥

ಶ್ರೀ ಪುರಾಣವನು ಭೂಪತಿಯೋದಿಸು
ತೀ ಪುರದೊಳು ಮೆರೆಸಿದರಿಂದ।
ತಾಪಪಾಪ ಭವಲೋಪ ಮಾಡಿಸಿದ
ನೀ ಪುಣ್ಯಪ್ರಭುವಿನ ಚಂದ॥ ॥೨೪೨॥

ಎಂಬರು ತಮ್ಮ ಕರಾಂಬುರುಹದಿ ಪೂ
ದುಂಬಿ ಚಲ್ಲುವರು ನಿಲ್ಲುವರು।
ಶಂಬರಾರಿ ಸಮನೆಂಬ ಭವಾಚಲ
ಶಂಬ ನಮ್ಮ ದೊರೆಯೆಂಬುವರು॥ ॥೨೪೩॥

ಗುರುಸಿದ್ಧೇಶ್ವರನಿರುವ ಸರಣಿಯೊಳು
ವಿರಚಿಸಿದಾ ವೀಥಿಯ ಪೆಸರು।
ಗುರುವಾರದ ಪೇಟೆಂಬರು ಶೋಭಾ
ಕರ ರೀತಿಯ ವರ್ಣಿಪರಾರು॥ ॥೨೪೪॥

ಸಾಲದು ನೋಟಕಜಾಲಕೆ ರಾತ್ರಿಯು
ಸಾಲಭಂಜಿಕೆಗಳಂದದಲಿ।
ಆಲಿಯ ಎವೆಗಳು ತೇಲವು ಮೇಲವು
ಭೂಲೋಽಲೋತ್ಸವ ಮೌಲ್ಯದಲಿ॥ ॥೨೪೫॥

ಭುವನಸ್ತುತ ಬಸವೇಶ ಪುರಾಣೋ
ತ್ಸವ ಮಾಡುವನೀ ಭೂಮೀಶ।
ಶಿವಗಣರಿಂದಲಿ ತವೆ ನೊಂದವನಿಂ
ದವನೆಂದರಿದನು ದಿವಸೇಶ॥ ॥೨೪೬॥

ಮೂಡಿದ ಬೆಳಗನು ಮಾಡಿದ ಭಾಸ್ಕರ
ರೂಢಿಯರಿಯೆ ಉದಯಾದ್ರಿಯಲಿ।
ಪ್ರೌಢ ನರೇಂದ್ರನು ಗಾಢದಿ ವೈಭವ
ಗೂಡಿ ನಡೆದನತಿಭಕ್ತಿಯಲಿ॥ ॥೨೪೭॥

ನೆರವಿಯ ಸಂದಣಿವೆರಸಿ ನೃತ್ಯ ಮೊರೆ
ಮೊರೆವ ವಾದ್ಯಗಳನಾಲಿಸುತ।
ಕರಿತುರಂಗ ರಥ ರಾಜಿಯಿಂದ ಭೂ
ವರ ಚೂಡಾರತ್ನನು ಬರುತ॥ ॥೨೪೮॥

ವಾರಣವೇರಿದ ವೀರವಿರತಿಸುಖ
ವಾರ ಸಮೇತದಿ ಭೂಮೀಶ।
ತೋರಿಸಿ ನಾನಾ ಚಿತ್ರವ ಪಾತ್ರವ
ಕಾರಣ ಪುರುಷ ಕಳಾಧೀಶ॥ ॥೨೪೯॥

ಸಾರಿದ ಚಿತ್ಸುಖಸಾರ ವಿನುತ ಮಂ
ದಾರ ಮಹೇಶ್ವರರಿದ್ದೆಡೆಗೆ।
ದೂರದಿ ತಮ್ಮಯ ವಾರುವನಿಳಿದು ಕು
ಮಾರರ್‌ವೆರಸಿ ಚರಿಸಿ ಬಳಿಗೆ॥ ॥೨೫೦॥

ಗುರುಸಿದ್ಧೇಶ್ವರ ಗುರುವರ ನಿಮ್ಮಯ
ಚರಣಾನುಗ್ರಹ ಬಲದಿಂದ।
ಹರಮತ ರತ್ನಾಕರ ರಜನೀಕರ
ವರ ಬಸವೇಶ ಗಣಾನಂದ॥ ॥೨೫೧॥

ಚರಿತಾಮೃತ ರಸಭರಿತ ಪುರಾಣವ
ಪರಿಪೂರ್ಣತೆಯೈದಿದ ಕುರುಹು।
ಪರಿತೋಷದ ಮೆರವಣಿಗೆ ಬರವು ಬಂ
ದಿರುವು ನಿಮ್ಮ ಪದಗಳಿಗರುವು॥ ॥೨೫೨॥

ಕಾಯಬೇಕು ಕರುಣಾಯತೇಕ್ಷಣನೆ
ಮಾಯಾರಣ್ಯದವಾನಲನೆ।
ಕಾಯ ನಿಮ್ಮದೆಂದಾ ಯತಿವರರಿಗೆ
ಕಾಯಗಳೊಪ್ಪಿಸುತಾಗೊಡನೆ॥ ॥೨೫೩॥

ವೈಭವದಿಂದ ಮದೇಭವನೇರಿ
ದರ್ಾ ಭವ್ಯರ ಮೆರೆಸುತ ತಿರುಗಿ।
ಶೋಭಾಸದನ ಸುಧಾಭಪಾನಸುಖ
ಲಾಭವಾಯಿತೆಂದೆನುತೆರಗಿ॥ ॥೨೫೪॥

ಪರಮವೈಭವದಿ ಗುರುವರ[ರ]ನು ಭೂ
ವರನು ತಾ ಕಲ್ಮಠಕೆ ಕಳಿಸಿ।
ತಿರುಗಿದನಾಶಾಭರಿತ ಯಶೋಮಯ
ಪರಮ ಸುಕೃತವನು ತಾ ಗಳಿಸಿ॥ ॥೨೫೫॥

ಬಂದು ಮಹೇಶ್ವರ ನಂದನರೊಡನೈ
ತಂದು ರಾಜಸದನವ ಪೊಕ್ಕು।
ಇಂದೆಮ್ಮಿಷ್ಟಾನಂದವು ಫಲಿಸಿ
ತ್ತೆಂದು ಭೂಪ ಹರಿಸಂಮಿಕ್ಕು॥ ॥೨೫೬॥

ಬುಧವಾರದಿ ಬುಧವಾರವ [ತ]ಣಿಸಿದ
ನಧಿಕ ವಸನ ದಕ್ಷಿಣೆಗಳಲಿ।
ವಿಧವಿಧ ಚರ ಸಮುದಯ[ಕ]ಸಾಮ್ಯವಾ
ದುದನಿತ್ತನು ನೃಪ ಭಕ್ತಿಯಲಿ॥ ॥೨೫೭॥

ಆದಿತ್ಯೇಂದುಗಳೀ ಧರೆಯನ್ನಬ
ರಾದರದಿಂ ಪಾಲಿಪ ನೃಪನು।
ಭೂದಾನವ ಬಹು ಗೋದಾನವ ವಿಹಿ
ತಾದಾನವ ವೃಷಧರ್ಮವನು॥ ॥೨೫೮॥

ಮಾಡಿದ ಭೂವರ ಕೂಡಿದ ಚರಗಣ
ವಾಡಲೇನು ನಾನೂರಕ್ಕೆ।
ಬೇಡಿದ ವಸ್ತ್ರವ ನೀಡಿದ ವಿತ್ತವ
ಪಾಡಿದರೀ ನೃಪತ್ಯಾಗಕ್ಕೆ॥ ॥೨೫೯॥

ದೈವತ್ವಗಳನು ವೈವಾಹಗಳನು
ಭೂವನಿತಾವರ ಮಾಡಿಸಿದ।
ಪಾವನ ಚರಿತಗದಾವನು ಸರಿ ಕರು
ಣಾವನನಿಧಿ ಬಹು ರೂಢಿಸಿದ॥ ॥೨೬೦॥

ಭೀಮಕವೀಶ್ವರ ಭಾಮಿನಿಯಿಂದಲಿ
ಸೋಮನಾಥರನುಮತವಿಡಿದು।
ಶ್ರೀಮನ್ಮಂಗಳಧಾಮ ಪುರಾಣವ
ತಾ ಮಾಡಿದುದೀ ದಿನ ನಡೆದು॥ ॥೨೬೧॥

ಬಂದುದು ಕವಿತಾನಂದದ ಬುಧಕುಲ
ಕಂಧರ ಭೂಷಣವಾಗಿಹುದು।
ನಿಂದುದು ಕೀರ್ತಿಗೆ ತಂದುದು ಲಕ್ಷಗ
ಳಿಂದ ಮೀರಿದುದು ಸುಕೃತವದು॥ ॥೨೬೨॥

ಓದಿಸಿ ಸುಗತಿಯ ಸಾಧಿಸಿ ಭವವನು
ಭೇದಿಸಿ ತದ್ಗತ ಭಕ್ತಿಯನು।
ಬೋಧಿಸಿ ಕಲುಷವ ಭೇದಿಸಿ ತಾ ಪ್ರತಿ
ಪಾದಿಸಿ ಕೊಡುವದು ಮುಕ್ತಿಯನು॥ ॥೨೬೩॥

ಶ್ರೀ ಪುರಾಣ ಭವತಾಪನಿವಾರಣ
ಗೋಪಚರಿತ ಕಾರಣವೆಂದು।
ಶ್ರೀ ಪರಮಾರ್ಥ ಸುಧಾಪಯೋಧಿಸುಖ
ಭೂಪಗೆ ಸಮನಿಸಲೆಂದೆಂದು॥ ॥೨೬೪॥

ಟೀಕಿನ ಶ್ರೀವೃಷಲಿಂಗಾರ್ಯರು ಲೋ
ಕೈಕ ಶಾಂತರತಿ ಕರುಣದಲಿ।
ಭೂಕಾಂತಗೆ ಕರುಣಾಕರ ಶಾಂತಗೆ
ತಾ ಕರುಣಿಸಿದರು ವಿನಯದಲಿ॥ ॥೨೬೫॥

ಹೇಳಿದರಖಿಳಗಣಾಳಿ ಕಥಾಭವ
ಮೂಲೋನ್ಮೂಲನ ಸಂಗತಿಯ।
ಕೇಳಿದ ಭೂವರ ತಾಳಿದ ಮೌಳಿಯೊ
ಳಾಳಿದ ಧರ್ಮಕ್ಷಿತಿಸತಿಯ॥ ॥೨೬೬॥

ನುತ್ಯರ್ಥವ ಬಹು ಶ್ರುತ್ಯರ್ಥವನತಿ
ಸತ್ಯದಿ ಮಡಿವಳಶಾಸ್ತ್ರಿಗಳು।
ಪ್ರತ್ಯರ್ಥವ ಪ್ರತ್ಯರ್ಥಿವಿಜಯಗಾ
ದಿತ್ಯನಿಭಗೆ ಪೇಳ್ದರು ಕೇಳು॥ ॥೨೬೭॥

ಈ ಪರಿಯಾದುದ ಭೂಪ ಮಾಡಿದುದ
ನಾ ಪರಿತೋಷದಿ ಕಂಡುದುದ।
ಕ್ಷ್ಮಾಪಯಶವು ಭೂವ್ಯಾಪಿಸಲೆಂದು ಸ
ದಾ ಪರೇಶ ಶಿವ ಮಾಡಿಸಿದ॥ ॥೨೬೮॥

ಆರ್ಯಾಧವ ಭಜಶೌರ್ಯಭೂಪ ಶಿವ
ಕಾರ್ಯ ಮಲ್ಲ ನೃಪ ಚರಿತವನು।
ಆರ್ಯಾವೃತ್ತದೊಳಾರ್ಯರು ವೃಷಲಿಂ
ಗಾರ್ಯರ ಕೃಪೆಯಿಂದುಸುರಿದೆನು॥ ॥೨೯॥

ಬಸವಪುರಾಣದೊಳಸಮೇಶ್ವರಗಣ
ವಿಸರಕಥಾ ಶ್ರೇಣಿಗಳೊಳಗೆ।
ಪೆಸರ್ವಡೆದೊರ್ವ ಸುಗಣ ಸತ್ಯಥೆಯನು
ರಸಿಕತೆಯಿಂದ ಕೇಳಿದವರಿಗೆ॥ ॥೨೦॥

ಭಕ್ತಿ ಯುಕ್ತಿ ಸುವಿರಕ್ತಿ ಶಕ್ತಿ ಸರ
ನೋಕ್ತಿ ದಿಕ್ತಟಾಯತ ಕೀರ್ತಿ।
ಮುಕ್ತಿ ಪದದೊಳಾಸಕ್ತಿ ಜನಿಸಿ ಸು
ವ್ಯಕ್ತಿಯಾಗುವನು ಚಿತ್ತೂರ್ತಿ॥ ॥೨೧॥

ಆದಿವಿಡಿದು ಶೈಲಾದಿ ಪುರಾಣವ
ಮೇದಿನೀಶನೋದಿಸಿ ಕೇಳಿ।
ಮೋದದಿ ಸುಗಣಾರಾಧನೆಗೊಳಿಸಿ ದ
ಯೋದಧಿಯೆನಿಸಿದ ಮುದದಾಳಿ॥ ॥೨೨॥

ಒಟ್ಟಿಗೆ ನಮ್ಮಯ ದಿಟ್ಟಿಗೆ ಲಕ್ಷವು
ಕಟ್ಟಿಗೆ ನಿಲಿಸಲ್ ಕಾಣುದುದ।
ಕೊಟ್ಟ ತ್ಯಾಗವನ್ನುಟ್ಟ ವಸನವನು
ಪಟ್ಟ ವರ್ಧದನು ಮಾಡಿದುದ ॥೨೩॥

ಕಡೆಗಾಣೆವು ಪೊಡವಿಯೊಳೀ ನೆಲವೆ
ಣ್ಣೊಡೆಯ ಮಾಡಿದುದ ನೀಡಿದುದ।
ಕೊಡುವದ ಗಣರನು ತಡವದ ಕೀರ್ತಿಯ
ಪಡೆವುದ ಮೃಡನದ ಬಲ್ಲನಿದ॥ ॥೨೪॥

ಇಂತಲ್ಲದೆ ಭೂಕಾಂತಶಿರೋಮಣಿ
ಕಂತುವಿಜಯ ಕ್ಷೇತ್ರಗಳಲ್ಲಿ।
ಅಂತಲ್ಲಿಯ ಗಣತಿಂತಿಣಿ ತಣಿಸಿದ
ನೆಂತದ ಪೇಳುವೆನಲ್ಲಲ್ಲಿ॥ ॥೨೭೫॥

ಪರಶಿವ ಲೀಲಾಚರಿತ ಗುರೂತ್ತಮ
ದುರದುಂಡೀಶ ಮಹೇಶ್ವರರ।
ಚರಣಾಬ್ಜಾರ್ಪಿತಕೆರಳ್ಸಾಸಿರ ಸ
ಚ್ಚರಗಣವನು ತಣಿಸಿದ ಧೀರ॥ ॥೨೭೬॥

ಗುರುಸಿದ್ಧೇಶ್ವರನಿರುವ ಕ್ಷೇತ್ರದಿ
ಪರಿತೋಷದಿ ಮಲ್ಲಾವನಿಪ।
ಎರಳ್ಮೂರ್ಸಾಸಿರ ಹರಗಣ ತೃಪ್ತಿಯ
ನರಿದೆನಿಸಿದ ಧರಣಿಯೊಳು ನೃಪ॥ ॥೨೭೭॥

ಪ್ರಭು ತಾನಾಗಿಹ ಪ್ರಭುವಿನ ಪೀಠದಿ
ಶುಭರೂಪದ ಜಂಗಮ ತತಿಗೆ।
ವಿಭವದಿ ಶಿವಸನ್ನಿಭರನು ತಣಿಸಿದ
ರಭಸದಿ ಜತೆಯಾರೀ ಸ್ತಿತಿಗೆ॥ ॥೨೭೮॥

ಚಂಡಪರಾಕ್ರಮ ಹೊಂಡದ ಶ್ರೀವೃಷ
ದಂಡೇಶನ ಸುಕ್ಷೇತ್ರದಲಿ।
ಖಂಡಪರಶುಗಣ ತಂಡವುಂಡುದುದ
ಕಂಡೆವು ಸಾವಿರ ಗಣನೆಯಲಿ॥ ॥೨೭೯॥

ನಂದಿಹಳ್ಳಿಯೆಂದೆಂಬ ಗ್ರಾಮದಲಿ
ನಿಂದಿಹ ನಂದೀಶನ ಬಳಿಯ।
ಒಂದೆರಳ್ಸಾಸಿರ ಸುಂದರ ಗಣರಾ
ನಂದಗೊಳಿಸಿದನು ಪರಿಪರಿಯ॥ ॥೨೮೦॥

ಬೆಳೆವೊಡೆ, ರಿಪುಗಳ ಕಳೆವೊಡೆ, ಕಾಮಿತ
ಗಳ ಪಡೆವೊಡೆ ತಾನೆಡೆಯಾದ।
ಬೆಳವಡಿ ವಿರೇಶ್ವರನ ಸುತೃಪ್ತಿಗೆ
ಕಳುಹಿ ಚರ್ರಾರ್ಪಣ ಮಾಡಿಸಿದ॥ ॥೨೮೧॥

ಸ್ನಾನದಿ ತಜ್ಜಲಪಾನದಿ ದೋಷವಿ
ತಾನವ ಕಳೆವ ಮಲಾಪಹರಿ।
ಭೂನಾಥನ ಸೀಮಾನುಸರಣಿ ಸುಮ
ನೋನಂದಿನಿ ಸುರುಚಿರ ಲಹರಿ॥ ॥೨೮೨॥

ಈ ಧರಣಿಯೊಳು ಸುಖಾದರವಳ್ಳಿಯು
ಕಾದರವಳ್ಳಿಯ ಮುಂದೆಸೆವ।
ಹ್ರಾದಿನಿ ನಡುವೆ ವಿನೋದದೊಳಿಹ ಗಿರಿ
ಜಾಧವ ತೃಪ್ತಿಯ ಮಾಡಿಸಿದ॥ ॥೨೮೩॥

ಆ ಪೂತಾಪಗೆ ಮಧ್ಯದೊಳೆದ್ದ ಶಿ
ವಾಪರಿರಂಭಣ ಶಂಕರನು।
ಕೋಪೋತ್ತಾಪ ಗಣಪ ವೀರಪ್ರಮು
ಖಾಪರೇಶಗಣ ಪೊರಟುದನು॥ ॥೨೮೪॥

ಸುಂದರ ನಂದೀಶ್ವರನೊಂದೆಡೆಯೊಳು
ಮುಂದಿರುವನು ಮುದದೋರುವನು।
ವೃಂದ ಪ್ರತಿಮೆಗಳಂದವ ನೋಡಿ ಸು
ಖಂಡದಳೆದವನೀಶ್ವರ ತಾನು॥ ॥೨೮೫॥

ಶಿವಯೋಗದಿ ಭೂಧವ ಚತುರಂಗ ಬ
ಲವ ಗೂಡ್ಯಾ ಕ್ಷೇತ್ರದೊಳೈದಿ।
ಶಿವವಿವಹವನುತ್ಸವದಿಂದೆಸಗುತ
ಶಿವಗಣರನು ತಣಿಸುವ ಮುದದಿ॥ ॥೨೮೬॥

ಅಲ್ಲಿ ಗಣಾವಳಿಗುಲ್ಲಾಸದಿ ಭೂ
ವಲ್ಲಭನುಣಿಸಿದ ಸಾಸಿರವ।
ಬಲ್ಲುದೆ ಬರೆದೆನಿದಲ್ಲದೆ ಕ್ಷೇತ್ರಗ
ಳಲ್ಲಲ್ಲಿಗೆ ಕಳಿಸಿದ ವಿಧವ॥ ॥೨೮೭॥

ತೇರದಾಳದೊಳ್ ತೋರುವ ಮಹಿಮಾ
ಗಾರ ಶ್ರೀ ಪ್ರಭುವರನೆಡೆಗೆ।
ಧೀರನು ಕಳಹಿಲ ಗಣಾರಾಧನೆಯನು
ಮೀರಿ ಮಾಡಿಸಿದ ಚರ ಪಡೆಗೆ॥ ॥೨೮೮॥

ಮಂಗಳಕರ ಸುರಪುಂಗವನಿರುತಿಹ
ಇಂಗಳೇಶ್ವರದ ಸಂಗಮದ।
ತುಂಗ ಬಾಗವಾಡಿಗೆ ನೃಪ ಕಳಿಸುತ
ಜಂಗಮಾರ್ಚನೆಯ ಮಾಡಿಸಿದ॥ ॥೨೮೯॥

ರೂಢಿ[ಗೆ] ಭಕ್ತಿಯ ಮಾಡಿದ ಬಸವನ
ಕೂಡೆರಡಿಲ್ಲದೆ ಮೆರೆವವನು।
ಕೂಡಲಸಂಗಮದೇವ ಕ್ಷೇತ್ರದಿ
ಮಾಡಿಸಿದನು ಗಣತೃಪ್ತಿಯನು॥ ॥೨೯೦॥

ಎಡರಡಸಲು ಕೆಡಿಸುವ ಸುಖ ಬಡಿಸುವ
ನೆಡವೂರೊಳು ಶ್ರೀ ವೀರೇಶ।
ಮೃಡರೂಪಿಂದಾ ಎಡೆಯೊಳೊಡೆಯರನು
ಬಿಡದುಣಿಸಿದನೀ ಪೊಡವೀಶ॥ ॥೨೯೧॥

ಬಲು ಕಂಟಕ ಬರಲುಳಿವಿಕೊಂಬ ಗಣ
ಕುಲದಾವಾಸವುಳಿವಿಯೆಂದು।
ನಲಿದು ಕಳುಹಲಾ ಸ್ಥಳದಿ ಗಣಾವಳಿ
ಸಲಿಸಿತು ಬಸವನ ನೆನೆದಂದು॥ ॥೨೯೨॥

ಶ್ರೀಕರ ಕೈಲಾಸಾಕರದೊಳಿಹ
ಗೋಕರ್ಣ ಕ್ಷೇತ್ರದೊಳಿರುವ।
ಶ್ರೀಕಂಧರ ಸುಂದರನ ಮಹಾಬಲ
ಬೇಕೆಂದ್ದುಣಿಸಿದ ಸಾಸಿರವ॥ ॥೨೯೩॥

ತುಂಗಸರಿತ್ತೀರದ ಹಂಪಿಯೊಳಿಹ
ತುಂಗ ವಿರೂಪಾಕ್ಷೇಶ್ವರನ।
ಮಂಗಳಕ್ಷೇತ್ರಕೆ ಪಿಂಗದೆ ಕಳುಹಿಸಿ
ಜಂಗಮಗಣವನು ತಣಿಸಿ ಘನ॥ ॥೨೯೪॥

ಹರಿವಿಧಿಸುರಪಾದ್ಯರ ಭಯಗೊಳಿಸಿದ
ಗರಳವ ಸೇವಿಸಿ ಲೋಕವನು।
ಪೊರೆದ ಜಗದ್ಗುರು ನಂಜುಂಡೇಶ್ವರ
ಪರಿಹರಸುವುದೇನರಿದಿದನು॥ ॥೨೯೫॥

ಎಂದವನೀಶ್ವರನಂದಾಹ್ವಾನಿಸಿ
ದಂದದೊಳಾಶ್ರಮವನು ಕಳೆದು।
ತಂದದರಿಂ ತಾ ಬಂದದರಿಂದಂ
ದಿಂದಿಗೆ ವಿಶ್ವಾಸವ ತಳೆದು॥ ॥೨೯೬॥

ನಡೆವ ಮಹತ್ವವ ನುಡಿವ ಮಹೇಶ್ವರ
ಬಿಡದಾ ಸುಕ್ಷೇತ್ರಕೆ ಕಳಿಸಿ।
ಸಡಗರದಿಂದಲಿ ಒಡೆಯರನುಣಿಸಿದ
ಮೃಡ ನಂಜುಂಡಗೆ ಮುದ್ದೆನಿಸಿ॥ ॥೨೯೭॥

ಶ್ರೀಶೈಲದಿ ಗಣರಾಶಿಯನುಣಿಸಿ ಮ
ಹೇಶ ಮಲ್ಲಿಕಾರ್ಜುನ ಶಿವನ।
ಆಶೀರ್ವಾದ ವಿಶೇಷವ ಪಡೆದ ದ
ಯಾ ಸಮುದ್ರನಹ ಭೂಧವನ॥ ॥೨೯೮॥

ಭಕ್ತಿಯ ಮಾಡುವ ಶಕ್ತಿಯ ಸುಜನಾ
ಸಕ್ತಿಯ ವಿಬುಧೋಲ್ಲಾಸವನು।
ಮುಕ್ತಿ ಚರಿತ್ರದ ವ್ಯಕ್ತಿಯ ಕೀರ್ತಿಯ
ದಿಕ್ತಟ ಪೂರಿತ ಭಾವವನು॥ ॥೧೯೯॥

ಉಸುರುವೊಡಸದಳ ವಿಷಯದೊಳಿಹ ಶಿವ
ಬಸವೇಶ್ವರ ಮುಖಲಿಂಗಗಳ।
ಕುಸುಮಾದ್ಯಸಮಾರ್ಚನೆಗಳ ಮಾಡಿಸ
ಬೆಸಸಿದ ಭೂವರನಾಜ್ಞೆಗಳ॥ ॥೨೦೦॥

ತೆರದೊಳು ನಾಡೊಳಗಿರುವ ಶಿವಂಕರ
ಹರದೇವತೆಗಳ ಸತ್ಕರಿಸಿ।
ಚರಗಣವನು ಸಾದರದೊಳುಣಿಸಿ ಸುಖ
ಶರಧಿಯೆನಿಸಿದ ನೃವರ ವಹಿಸಿ॥ ॥೨೦೧॥

ಈ ಪರಿಯಿಂದಲಿ ಭೂಪಾಲಾಗ್ರಣಿ
ಶ್ರೀ ಪರಶಿವಲಿಂಗಗಳೆಡೆಗೆ।
ತಾ ಸಂತೋಷದಿ ಪೋಪರ ಕಳುಹಿಸಿ
ಕಾಪಾಲಿಗಳ ತಣಿಸಿದವಗೆ॥ ॥೨೦೨॥

ಸರಿಯಾದರ ನಾನರಿಯೆ ಧರಾತಳ
ವರಿಯಲ್ ಬಸವಪುರಾಣವನು।
ಪರಿತೋಷದಿ ಗುರುವರ ವೃಷಲಿಂಗಾ
ರ್ಯರ ಕರುಣದಿ ತಾ ಕೇಳಿದನು॥ ॥೨೦೩॥

ಶ್ರವಣಾನಂದಕೆ ಶಿವಗಣಲಕ್ಷವ
ನವನೀಶ್ವರನುಣಿಸಿದ ಫಲಕೆ।
ವಿವರಿಸುವದಕಹಿವರ ಸಾವಿರ ಮೊಗ
ವವಗಿರುವವು ಸಾರ್ಥಕ ಬಲಕೆ॥ ॥೨೦೪॥

ದೇಶಕೋಶ ಸಂತೋಷ ಸಮೃದ್ಧಿ ವಿ
ಶೇಷ ವಿಜಯ ವಿಭವಾನಂದ।
ಭೇಶ ವಿಭೂಷ ಮಹೇಶ ಸಿದ್ಧಲಿಂ
ಗೇಶ ಕೊಡುವನತಿಶಯದಿಂದ॥ ॥೩೦೫॥

ಬಸವಪುರಾಣವನೋದಿಸಿ ಜಗದೊಳ್
ಪೆಸರ್ವಡೆದವರಾರೀ ತೆರದಿ।
ರಸಿಕ ಪ್ರಭುವರ ಬಸವೇಶ್ವರನೋಲ್
ಎಸಗಿದ ಸದ್ಭಕ್ತಿಯ ಭರದಿ॥ ॥೩೦೬॥

ಓದಿಸಿ ಸುಗತಿಯ ಸಾಧಿಸಿ ಸನ್ನತ
ನಾದ ಮಲ್ಲಭೂಮೀಶ್ವರನ।
ಸ್ವಾದು ಚರಿತ್ರವನಾದರದಿಂ ಬರೆ
ದೋದಿದವಂಗಾನಂದ ಘನ॥ ॥೩೦೭॥

ಆಗುವುದಖಿಲಾರ್ಥವು ಸದ್ಭಕ್ತಿಯು
ಶ್ರೀಗುರು ಕರುಣಾಪಾಂಗದಲಿ।
ರಾಗದಿ ಬರೆದೆನಿದಾಗಮ ಸಮ್ಮತಿ
ಯಾಗಿಹುದತುಳಾನಂದದಲಿ॥ ॥೩೦೮॥

ಮದನಮಥನ ಗಜವದನಜನಕ ಯಮ
ಮದಹರ ಭವಹರ ನರಶರದ।
ಸದಯ ರಜತನಗ ಸದನ ಶರದಗಳ
ಪದಭಜಕದಯ ಶರಣವರದ॥ ॥೩೦೯॥

ಸಲಹು ಸದಾಶಿವ ಮಲಹರ ಮಂಗಳ
ನಿಲಯ ನಿಗಮ ಸನ್ನುತಿ ಪಾತ್ರ।
ಬಲಭಿದು ಪಲ ಸಮಗಲ ಶಂಕರ ಬೆಂ
ಬಲವಾಗಿರು ರುಚಿಶುಚಿ ಗಾತ್ರ॥ ॥೩೧೦॥

ಶೀತಕಿರಣಧರ ಶ್ರೀ ಸಿದ್ಧೇಶ್ವರ
ನೀ ತವಕದಿ ಪೇಳೆನುತಲಿದ।
ಪೂತ ಮಲ್ಲಭೂನಾಥ ಭಕ್ತಿವಿ
ಖ್ಯಾತ ಚರಿತ್ರವ ಪೇಳಿಸಿದ॥ ॥೩೧೧॥

ಕಂದರ ವದನದಿ ಮಂದದಿ ಬಹ ತೊದ
ಲೊಂದಿದ ನುಡಿಗಳನಾಲಿಸುವ।
ಅಂದದಿ ಕವಿತಾನಂದದ ಕುಂದನು
ಚಂದದಿ ತಿದ್ದುತ ಪಾಲಿಸುವ॥ ॥೩೧೨॥

ಪಂಡಿತರುಗಳ ಪದಾಂಭೋಜಾತಕೆ
ದಂಡ ಪ್ರಣತೆಯನೆಸಗುವೆನು।
ಖಂಡಕಳಾನಿಧಿ ಮಂಡಿತಗಣರಿದ
ಕಂಡು ಪೇಳಿಸಲಿಕುಸುರಿದೆನು॥ ॥೩೧೩॥

ಲಾಲಿಸುವುದು ಶಿವಶರಣರು ಸಂತತ
ಪಾಲಿಸುವುದು ಕಿಂಕರನೆಂದು।
ಬಾಲಕನೆಂದು ಸುಧೀಲರು ಸದ್ಗುಣ
ಜಾಲರು ಪೊರೆವುದು ಬಿಡದೆಂದು॥ ॥೩೧೪॥

ಇತಿ ಶ್ರೀ ಮಲ್ಲೇಂದ್ರ ಭಕ್ತಿ ತರಂಗಿಣಿ ಸಂಪೂರ್ಣ ಮಂಗಳಮಹಾ.

❖❖

೨

ಮಲ್ಲೇಂದ್ರ ಪೂಜಾವಿಲಾಸ

[೧]ಶ್ರಾವಣಮಾಸ ಸಮಗ್ರದಿ ಮಲ್ಲಮ
ಹೀವಲ್ಲಭ ಚರಪದಪೂಜೆಯ ಸ
ದ್ಭಾವದಿ ಮಾಡಿದ ನೋಡಿದ ವಿವರವ ಬರೆದೆನು ಸಂಕ್ಷೇಪ॥

ಶ್ರೀಮದಚಲಜಾವರ ಸುತ್ರಾಮ ಮು
ಖಾಮರ ನಿಕರಾಮಲ ಸುಕಿರೀಟ
ಸ್ತೋಮ ರುಚಿರ ಮಣಿಧಾಮ ವಿರಾಜಿತ ಕೋಮಲ ಪದಕಮಲ
ಸಾಮನಿನಾದಪ್ರೇಮ ಶುಭೋದಯ
ನಾಮ ಭೀಮಸೇನಾನುಜಶರದ ಸು
ಧಾಮಯೂಖಶೇಖರ ಸಿದ್ಧೇಶ್ವರ ಮಲ್ಲೇಂದ್ರನ ಸಲಹು ॥೧॥

ಮಲ್ಲಿಕಾಬ್ಜ ಮಂದಾರ ತುಹಿನ ಗಜ
ಮಲ್ಲ ಮರುದ್ಧುಗಿನಾಮೃತ ತಾರಾ
ವಲ್ಲಭ ವಾಕ್ಪಾಟೀರ ಹೀರ ಘನಸಾರ ಸಿತಶರೀರ
ಫುಲ್ಲಶರಾಸನ ಖಂಡನ ಪುರಹರ
ಸಲ್ಲಲಿತಾಚಲವಾಸ ಸದಾಶ್ರಿತ
ಮಲ್ಲಿಕಾರ್ಜುನಾಮರ ಚಕ್ರೇಶ್ವರ ಮಲ್ಲೇಂದ್ರನ ಸಲಹು ॥೨॥

(ಪರಿವರ್ಧಿನಿ ಷಟ್ಪದಿ) ಧ್ರುವಪದ॥ ಪ್ರಬಂಧಾಭಿಪ್ರಾಯ॥ (ಸೂಚನೆ) (ಮೂ)

ಗಂಗಾ ತುಂಗ ತರಂಗ ಕಪರ್ದಾ
ನಂಗಭಂಗ ಮಾತಂಗಾಜಿನಧರ
ತುಂಗಮಂಗಳಾ ತಟನೀ ತೀರದ ಪಂಪಾಕ್ಷೇತ್ರದಲಿ
ಲಿಂಗಾಕೃತಿಯಲಿ ಪಿಂಗದೆ ಶಕ್ತಿತ್ರ
ಯಾಂಗ ಸುಧಾಂಗ ಪತಂಗ ಪಾವಕಾ
ಕ್ಷಂಗಳ ಸಂಗ ವಿರೂಪಾಕ್ಷೇಶ್ವರ ಮಲ್ಲೇಂದ್ರನ ಸಲಹು ॥೩॥

ಅಸಮಜ್ವಾಲೆಯು ಪಸರಿಸೆ ದಿವಿಜ
ಪ್ರಸರದ ಕಾಂತಿಯು ಮಸುಳಿಸೆ ವಿಷ್ಟಪ
ವಿಸರವ ಬಾಧಿಪ ವಿಷವ ಬಿಡದೆ ಸಂತಸದಿ ಗಳದಿ ತಳೆದು
ಕುಶಲವನಿತ್ತುದರಿಂ ವಸುಮತಿಯೊಳ್
ಪೆಸರ್ವಡೆದಾ ಕಪಿಲೆಯ ತೀರದಿ ರಾ
ಜಿಸುವ ಶ್ರೀಕರ ನಂಜುಂಡೇಶ್ವರ ಮಲ್ಲೇಂದ್ರನ ಸಲಹು ॥೪॥

ಶಂಕರ, ಪದನತಕಿಂಕರಜನಕ್ಷೇ
ಮಂಕರ, ಲಸದಭಯಂಕರ ದಿವಿಜವ
ಶಂಕರ ವಿಬುಧವ್ರಾತಕ್ಕನಿಶ ಶಿವಂಕರ ಸರ್ವೇಶ
ಪಂಕರುಹಾಸನ ಮುಖನಿಖಿಲಾಮರ
ಸಂಕುಲಸೇವಿತ ನುತಸಂಕಟಹರ
ಸಂಕರ್ಷಣ ಸುಮಹಾದೇವೇಶ್ವರ ಮಲ್ಲೇಂದ್ರನ ಸಲಹು ॥೫॥

ಕ್ಷುದ್ರೋಪದ್ರವ ವಿದ್ರಾವಣ ಚಿ
ನ್ಮುದ್ರ ಕೃಪಾರ್ದ್ರಾಳಿಕಲೋಚನ ಸಂ
ಪದ್ರಂಜಿತ ಗಿರಿಶದ್ರೋಹಿಗಳನು ದಕ್ಷಾಧ್ವರದೊಳಗೆ
ಉದ್ರೇಕದ ಗರ್ವವ ಛಿದ್ರಿಸಿಯುಗ
ರುದ್ರನೆನಿಸಿ ಖಲರನು ಹತಿಸಿದ ವಿಲ
ಸದ್ರಾಗದ ಭದ್ರದ ವೀರೇಶ್ವರ ಮಲ್ಲೇಂದ್ರನ ಸಲಹು ॥೬॥

ಕ್ರೂರ ತಾರಕಾಸುರನ ಉಪದ್ರವ
ಕಾರದೆ ತೀರದೆ ಹರಿವಿಧಿಮುಖ ಸುರ
ವಾರವು ಮೊರೆಯಿಡಲಾರ್ಮೊಗದಿಂದಲಿ ಗೌರಿಯೊಳವತರಿಸಿ
ಸಾರಿ ಏಳನೆಯ ದಿವಸದಿ ಖಳನ ನಿ
ವಾರಣಗೆಯ್ದ ಮಹಾರಣಶೂರ ಕು
ಮಾರ ಗುರೂತ್ತಮ ಷಣ್ಮುಖ ಚಿತ್ಸುಖ ಮಲ್ಲೇಂದ್ರನ ಸಲಹು ॥೭॥

ಶಂಕರ ತನ್ನ ಕರದೊಳಿಹ ಲಿಂಗವ
ಲಂಕೇಶ್ವರಗೀಯಲು ದೇವಾಧಿಪ
ಭೋಂಕನೆ ಬಂದಾ ಲಿಂಗವ ಸ್ಥಾಪಿಸಿ
ಬಿಂಕವ ಮುರಿದ ವಿನಾಯಕ ವಿನಯದಿ ಮಲ್ಲೇಂದ್ರನ ಸಲಹು ॥೮॥

ಸರ್ವೇಶ್ವರನರ್ಧಾಂಗಿ ಸದಾಶಿವೆ
ಪರ್ವತರಾಜಕುಮಾರಿಯೆ ಗೌರಿಯೆ
ಸರ್ವಮಂಗಳೆಯೆ ಸುಕಳೆಯೆ ಸುಖಮಯನಿಳಯೆ ನಿರಾಮಯಳೆ
ಗರ್ವಾನ್ವಿತ ದಾನವಕುಲ ಮಥನೆ ಸು
ಪರ್ವಾವಳಿ ಸಂಸೇವಿತೆ ಭಾವಿತೆ
ನಿರ್ವಾಣಪ್ರದೆ ನಿತ್ಯ ಭವಾನಿಯೆ ಮಲ್ಲೇಂದ್ರನ ಸಲಹು ॥೯॥

ಅವಳ ಕರದೊಳ್ ಕಮಲವದಾ ಕಮ
ಲಾವಾಸದಿ ರಮೆಯಾ ರಮೆಯೆಡೆ ರಾ
ಜೀವಾಂಬಕನಾ ರಾಜೀವಾಂಬಕನಾಭಿಯೊಳಜನು
ಆ ವಿಧಿಯಾಸ್ಯದಿ ವೇದಗಳಾ ವೇ
ದಾವಳಿಯಿಂ ಯಾಗಗಳವರಿಂ ಸಲೆ
ಜೀವಿಪ ಸುರರನು ತೋಷಿಪ ಶಾರದೆ ಮಲ್ಲೇಂದ್ರನ ಸಲಹು ॥೧೦॥

ಭೂಷಾಪೇಟಿಯಧೋಭುವನಂ ಜಗ
ದೀಶ ನಿನ್ನ ಸುಮನೋವನ ಗಗನ ಸು
ರೇಶಾದ್ಯಾಶಾವರರಂಬರ ಪಿಡಿದಿಹರಂಗಜಗಂಧ

ಕೇಶವಶರ ಲೋಕೇಶಮುಖಾಶ್ವನಿ
ವೇಶ ಧನೇಶಸಖಾಮರಶೈಲ ಶ
ರಾಸನ ಗುರುಸಿದ್ಧೇಶ ಮಹೇಶ್ವರ ಮಲ್ಲೇಂದ್ರನ ಸಲಹು ॥೧೧॥

ಖಂಡಶಶಿಕಳಾಮಂಡನ ಭಕ್ತಿ ಕ
ರಂಡ ಬಾಲಮಾರ್ತಾಂಡ ಕಾಶ ಕರ
ದಂಡಜಾಂಡ ಸಂರಕ್ಷಕ ಖಲಜನಶಿಕ್ಷಕ ಶಿವವಾಹಾ
ಚಂಡಪರಾಕ್ರಮಿ ಕಲುಷನಳಿನವೇ
ತಂಡ ಜನ್ಮಭಯಸಾಗರತರಣ ತ
ರಂಡ ಬಸವದಂಡೇಶ್ವರ ಭಾಸ್ವರ ಮಲ್ಲೇಂದ್ರನ ಸಲಹು ॥೧೨॥

ಪ್ರಭುವರ ಶ್ರೀ ಮಲ್ಲೇಂದ್ರಾನ್ವಯಕತಿ
ಶುಭವ ಪ್ರಭವವನೆಸಗಲ್ ಭುವನ
ಪ್ರಭುವರ ಮಾಯಾಮರ್ದನ ಮಂಗಳವಿಗ್ರಹ ಮನೆದೈವ॥
ಅಭವನು ತಾನಾಗಿರೆ ಸರ್ವದ ಸ
ದ್ವಿಭವ ವಿಶೇಷವ ದೇಶವ ಕೋಶವ
ನಭಯಂಕರ ಪದನತಕಿಂಕರ ಶಂಕರ ತಾ ಪಾಲಿಸನೆ ॥೧೩॥

ಪರಿಪೂರ್ಣಾಖಂಡಾನಂದದ್ವಯ
ನಿರಘ ನಿರಾಮಯ ದೇಶಿಕ ಲೀಲಾ
ಚರಿತ ಗುರೂತ್ತಮ ಭಕ್ತಾನುಗ್ರಹಕಾರಣ ಸಗುಣವನು॥
ಧರಿಸಿ ಜಗತ್ಪಾವನ ಮಾಡಲು ಸಂ
ಚರಿಸಿದ ದುರದುಂಡೀಶ್ವರ ಮಹಿಮಾ
ಕರ ಶಿವಲಿಂಗೇಶ್ವರ ಚಿತ್ಸುಖಕರ ಮಲ್ಲೇಂದ್ರನ ಸಲಹು ॥೧೪॥

ಕೇವಲ ಬ್ರಹ್ಮಾನಂದ ಪರಾತ್ಪರ
ದೇವೇಶ್ವರ ಶಂಕರ ಶುಭಕರ ಮಹಿ
ಮಾವಲಂಬ ಭವ ಭೂಧರಶಂಖ ಸದಾಶಿವ ಭುವನವನು॥
ಪಾವನಮಾಡಲು ಬಂದ ವಿರತಿಸುಖ

ದೇವ ದಯಾರ್ಣವ ಭಾವಿಕ ಸೇವಿತ
ಸಾವಳಿಗಿಯ ಶಿವಲಿಂಗೇಶ್ವರ ಮಲ್ಲೇಂದ್ರನ ಸಲಹುವುದು ॥೧೫॥

ಪ್ರಮಥಸ್ತೋಮವು ನೂತನ ಶಿವಗಣ
ಸಮುದಾಯವು ಗೌತಮಮುಖ ತಾಪಸ
ಸಮವಾಯವು ಸಕಲಾಗಮಸಾರ ವಿಚಾರವ ಬಲ್ಲವರು॥
ಸಮವರ್ತಿಯ ಭಯವನು ಜಯಿಸಿದ ಶಿವ
ಸಮಯಾರ್ಣವ ಕುಮುದಾಪ್ತೋಪಮ ಶಿ
ಷ್ಟ ಮನೋರಮರನವರತ ಮಲ್ಲಭೂಪಾಲನ ರಕ್ಷಿಸಲಿ ॥೧೬॥

ಕಮಲಜಾಂಡದೊಳಗೈವತ್ತು ಕೋ
ಟ್ಯಮರ್ದ ಯೋಜನಾವನಿಯನು ಬಳಸಿಹ
ಕಮಲಧಿ ಸಪ್ತಗಳನು ಸುತ್ತಿಹ ಜಂಬೂದ್ವೀಪದ ನಡುವೆ॥
ಅಮರಾಚಲಮೊಪ್ಪಿರಲಾ ಶೈಲದ
ಯಮದಿಗ್ಭಾಗದಿ ಪುಣ್ಯಪ್ರಸರದ
ಕ್ಷಮೆಯೆನಿಸುವ ಪಂಪಾಕ್ಷೇತ್ರವು ಸುಪವಿತ್ರವು ಜಗವರಿಯೆ ॥೧೭॥

ಧರಣಿಗೆ ದಕ್ಷಿಣ ವಾರಣಾಸಿಪುರ
ಸರಿಯೆಂದೆನಿಸುವ ಪಂಪಾಕ್ಷೇತ್ರಕೆ
ವರುಣಾಶೆಯೊಳೊಪ್ಪುವ ಕುಂತಳದೇಶದ ಪರಿವೇಷದಲಿ
ಧರಣೀ ತರುಣಿಯ ಮುಖಮಂಡಲದೋಲ್
ಸಿರಿ ಪರಿತೋಷದ ಸಂಪತ್ಸಾರದ
ಕರಡಿಗೆಯೋಲ್ ಹರಶರಣರ ಸರಣಿಯ ಪುರವರ ರಂಜಿಸಿತು ॥೧೮॥

ಮೃತ್ಯುಂಜಯ ತನ್ನಯ ಸದ್ಭಕ್ತಿಯ
ಬಿತ್ತು ಬೆಳೆಯಲೆಂದಾನಂದಿಗಭಯ
ವಿತ್ತು ದಯಾರಸಗರೆಸಿ ಸುರಿಸಿ ಚಿರಫಲವನು ಕಿತ್ತೂರಿ
ಗೊತ್ತಿಗೆ ಸೇರಿಸಿ ಕಿತ್ತೂರಿದ ಫಲ
ಹತ್ತಿರಲದರಿಂ ಸುತ್ತಲು ಮುತ್ತಲು
ಕಿತ್ತೂರಾದುದು ಚಿತ್ತಜಹರನಿಂ ತತ್ಪುರರಂಜಿಸಿತು ॥೧೯॥

ಧನದಾಧಿಪನಲಕಾಪುರ ಗುಹ್ಯಕ
ಜನಕಾಸ್ಪದವಮರಾವತಿ ಭಾವಿಸ
ಲನವರತ ತ್ರಿದಶಾವಾಸವು ತತ್ತ್ರಿದಶರಿಗೆಂದೆಂದು॥
ಕನಸಿನೊಳರಿಯರು ಭಕ್ತಾಂಬುಗಳನು
ದಿನ ನಿದ್ರಾಸುಖವರಿಯದರೀ ಮೇ
ದಿನಿಯೊಳು ಕಿತ್ತೂರಿಗೆ ಸರಿಗಟ್ಟಲು ಬಲ್ಲರೆ ಕೋವಿದರು ॥೨೦॥

ಸಿತಿಕರಧರನಾ ಚತುರ್ದಶ ಭುವನದ
ಪತಿಯೆನಿಸುವೆನೆನ್ನಯ ಕಾರುಣ್ಯ
ದ್ಯುತಿಯಿಂದಾಗಿಹ ಪುರಕೆ ಚತುರ್ದಶ ಕರ್ಯಾತಿಗಳಿಹವು॥
ಶ್ರುತಿತತಿನುತಿದುರ್ಲಭ ಮಣಿಮಯರಾ
ಜಿತಮಂದಿರ ಸುಂದರ ಪೂರ್ಣಗೃಹ
ಜತಿಗೆ ನೋಡಲರಮನೆ ಕ್ಷಿತಿಗಿದು ಪೂರ್ಣಗೃಹಮೆನಿಸಿಹುದು ॥೨೧॥

ಈ ತೆರ ಸಂಪತ್ಸಾರದಿ ಪೂರದಿ
ಭೂತಲ ಕೈಲಾಸೋಪಮ ಭಕ್ತ ನಿ
ಕೇತನ ಯಾತನ ವಿರಹಿತ ನೂತನ ಪುರವರ ರಕ್ಷಣಕೆ॥
ಖ್ಯಾತರ ಸುಜನಪ್ರೀತರ ಸದ್ಗುಣ
ಜಾತರ ಕಳುಹಿಸಬೇಕೆಂದೆನುತಲಿ
ಭೂತೇಶ್ವರ ಕಾರುಣ್ಯದಿ ತನ್ನ ಸಭಾಪತಿಗಳ ನೋಡಿ ॥೨೨॥

ಕಳುಹಿದರಿಂ ಮರ್ತ್ಯದಿ ಎನ್ನಯ ಗಣ
ಕುಲವಾನಂದಿಸಿ ಎನ್ನಾಚಾರದ
ಬಲಕಿಗೆ ಕಾರಣವೆನಗೆ ರಹಸ್ಯಸ್ಥಾನವೆನುತ ತಿಳಿದು
ಇಳೆಗದು ಸಂಸ್ಥಾನೆನಿಸಿ ಸದಾ ಪ್ರ
ಜ್ವಳಿಸಲೆನುತಲೆನ್ನಷ್ಟಾಂಗವೆ ಮೈ
ವಳಿಗಷ್ಟಾವರಣೆಂದೆನಿಸಲಿಯ್ಯೆಮೊಗವೈದಾಚಾರಾ ॥೨೩॥

ನೆಲೆಯಾಗಲಿ ಬಲಿಯಾಗಲಿ ಭೂತಿಯೊ
ಕುಲಿಶ ತನುತ್ರವದಾಗಲಿ ನಾಮಾ
ವಳಿಗಳೆ ಬಾಣಗಳೆನಿಸಲಿ ಭುಜಬಲಯುತರೆಂದೆನಿಸಿರಲಿ॥
ಕಲಿಯೊಳ್ಗು ಕಲಿರಿಪುಗಳ ಜಯಿಸಲಿಕಿವು
ಬಲವಾಗಲಿಯೆನ್ನಕ್ಷಿಯ ಮಾಲೆಯ
ತಳೆಯಲಿ ಕಳೆಯಲಿ ಸರ್ವೋಪದ್ರವಗಳನೆನುತಲಿ ಶಿವನು ॥೨೪॥

ಶ್ರುತಿಸಮ್ಮತವೆನ್ನಯ ಮತ ಕುಂದನು
ಇತರ ವಿಶೇಷಸ್ಥಿತಿಯನು ಶತದಳ
ಸುತಸುತ ನಾರದ ಲೋಕವಿಹಾರ ವಿಶಾರದನುಸುರಿದರಿಂ॥
ಅತಿಜವದಿಂ ನಂದೀಶಾದ್ಯರನಾ
ಕ್ಷಿತಿಗೆ ಕಳುಹೆ ಕಲ್ಯಾಣವೆನಿಸಿದ
ಪ್ರತಿಮರು ಸಿದ್ಧಾಚಾರವೆನಿಸಿ ಬಹು ಮಹಿಮೆಗಳನು ಬೀರಿ ॥೨೫॥

ಕಾರ್ಯವ ತೀರಿಸಿ ಸಾರಿಸಿ ಕರಗಳು
ಸೂರ್ಯನ ಸಾರುವವೋಲ್ ಬರ್ಪಾಗಳ್
ಧೈರ್ಯದಿ ಬಿಜ್ಜಳನಾ ಚತುರಂಗಬಲವು ಬೆಂಬತ್ತಿ ಬರೆ॥
ಶೌರ್ಯದೊಳವನನವನ ಬಲ ಹರಿಸಲ್
ಚೌರ್ಯದಿ ಪೋದರ ಬದುಕಿಸಿದಾ ಗಾಂ
ಭೀರ್ಯಗಣರು ಬರುವೆಡೆಯೊಳಗೀಪುರವಿರಲೆಂದೀಶ್ವರನು ॥೨೬॥

ಎಂದಾ ಕುರುಹಿಗೆ ನಂದಿಹಳ್ಳಿಯಲಿ
ನಿಂದಿಹ ನಂದೀಶ್ವರನಂದಿಂದಿಗೆ
ಸಂದೇಹವೆ ರಣಗಟ್ಟಿಯಕೆರೆಯಲಿ ಖಡ್ಗಗಳನು ತೊಳೆಯೆ॥
ಹೊಂದಿಹ ಭಕ್ತರು ಬಂದರೆ ಉಳವಿಯಿ
ದೆಂದೆನುತಲಿಯಂದಂದಾಜ್ಞಾಪಿಸಿ
ಸಂದರು ಉಳವಿಗೆ ಬಂದರು ಹರಗಣವೃಂದವು ಚೆಂದದಲಿ ॥೨೭॥

ಅದರಿಂದಲಿ ಸಂಸ್ಥಾನದ ಮೊದಲಿಗ
ಮದಹರನಾಜ್ಞಾಧಾರಕ ಪ್ರೇರಕ
ಸದಮಲ ಲಿಂಗಾರ್ಚಕ ಸಾಂಬದಯಾಪೂರ್ಣ ತೂರ್ಣಕಾರ್ಯ॥
ಮದಗಜಾದಿ ಚತುರಂಗಬಲಾನ್ವಿತ
ಮುದಿಮಲ್ಲಾಭಿದ ಸರ್ಜಭೂಪ ಕೋ
ವಿದರುದರೋದ್ಭವ ರುದ್ರಸರ್ಜನಾಮದ ಸುಮಹೀವರನ ॥೨೮॥

ತುಂದಿಲಸಿಂಧು ವಿವರ್ಧನ ಚಂದಿರ
ನೆಂದೆನಿಸುವ ಶ್ರೀ ರುದ್ರಸರ್ಜಭೂ
ಪಂ ದಯದಿಂದಲಿ ನಂದನರೋಲ್ ಜನವೃಂದವನಾರೈದು॥
ಕುಂದ ಕುಲಿಶ ಹರಿಚಂದನದೊಲ್ ಜಸ
ದಿಂದ ತಂದೆಗಿಂ ಮಿಗಿಲೆನಿಸಿದ ಸುಖ
ಮಂದಿರರೆಂದೆನಿಸಿರ್ದ ರುದ್ರ ಧರಣೀಂದ್ರನ ಗರ್ಭದೊಳು ॥೨೯॥

ಅವತರಿಸಿದ ದಕ್ಷಾಧ್ವರ ಹರಣ
ವ್ಯವಹಾರಕೆ ಶಿವನಿಟಿಲಾಕ್ಷದಿ ಸಂ
ಭವರೌದ್ರಾಕೃತಿಯವಯವವಾಗಿಹ ವೀರಭದ್ರಸಮನು॥
ಭುವನಸ್ತುತ ಪರಮತಖಂಡನನು
ತ್ರವದೋರ್ದಂಡನು ಚಂಡನು ಶಿವಗಣ
ನಿವಹಾರಾಧಕ ಭಕ್ತಿಕರಂಡನು ಮಣಿತತಿ ಮಂಡನನು ॥೩೦॥

ವೀರಾಗ್ರೇಸರ ವಿಕ್ರಮ ವಿಜಯದಿ
ಹಾರ ಶೂರ ರಣಧೀರ ವೈರಿಮದ
ವಾರಣ ದಾರುಣ ಕಂಠೀರವ ಚತುರಂಗಬಲೋಪೇತ॥
ಸೂರಿ ಪಾರಿಜಾತೇಷ್ಟದ ಜಂಗಮ
ಚಾರು ಚರಣ ಸರಸೀರುಹ ಮಧುಕರ
ವೀರಶೈವಮತವರ್ಯ ವೀರಭದ್ರಾಧಿಪ ವಿಕ್ರಮರಿಂ ॥೩೧॥

ಉದಿಸಿದ ಗುರುಸಿದ್ಧೇಶ್ವರ ಕಾರು
ಣ್ಯದ ಕಮನೀಯ ಕಳಾವತಂಸ ಕುಶ
ಲದ ಪದಪದ್ಮದಿ ಪದ್ಮಚಕ್ರವಜ್ರಾಂಕಿತ ಲಕ್ಷಣವು॥
ಮದನನುರ್ಧೂಪದಿ ಸಾಂಗಮಹೇಶ್ವರ
ಪದಕಮಲಾರ್ಚಕ ಸದಮಲ ವಿಜಯಾ
ಭ್ಯುದಯ ವಿನಯ ವಿಭವಶ್ರೀರಂಜಿತ ಭೂಪಾಲೋತ್ತಮನು ॥೩೨॥

ಭೂಪ ಭುಜಬಲಾಟೋಪ ಮಾರಸಮ
ರೂಪ ಸುರುಚಿರಾಲಾಪ ಕಲಾಪ ಕ
ಲಾ ಪರಿರಂಜಿತ ಚಾಪ ಮುಕ್ತ ಬಹುಕೋಪ ರಿಪುವ್ರಜದಿ॥
ಕೋಪ ಜನಿತ ಹೃತ್ತಾಪಾಶ್ರಿತ ಸುಚ
ಮೂಪಾನ್ವಯ ಮಣಿದೀಪೈಶ್ವರ್ಯ
ಶ್ರೀಪಶಿವಪ್ರಮಥೋಪಮ ಶಿವಪೂಜಾ ಪರಿಣತೆಯಲ್ಲಿ ॥೩೩॥

ಮಲ್ಲ ಮಹೀವಲ್ಲಭಗೆಲ್ಲಿಯು ಸಮ
ನಿಲ್ಲವೆನಿಸಿ ಸದ್ಧರ್ಮದಿ ಶರ್ಮದಿ
ಬಲ್ಲಿದನೆನಿಸಿ ಯಮೋಪಮ ಭೂಪಾಟೋಪದಿ ಋಷಿವರ್ಷ
ಇಲ್ಲದ ಶ್ರಮವನು ನೋಡಿ ವೀರರಸ
ದಲ್ಲಿ ಧೈರ್ಯ ವೀರೇಶ್ವರ ತಾ ಕೊಡ
ಲಲ್ಲಿಗೆ ಬರೆ ಭುಜಬಲದಿಂ ಪೂಜಾಫಲದಿಂ ರಾಜ್ಯವನು ॥೩೪॥

'ಸಾಧಿಸಿ ಮೋದಿಸಿ ರಿಪುರಾಜಿಯನತಿ
ಬಾಧಿಸಿ ಭೇದಿಸಿ ಸತ್ಪದ್ಧತಿಯನು
ಬೋಧಿಸಿ ವಾದಿಸಿದವರನು ಶಿಕ್ಷಿಸಿ ಶಿಷ್ಟರ ರಕ್ಷಿಸುತ
ಬಾಧಾಹರಣವೆನಿಸಿ ಧೈರ್ಯದ ಸುರ
ಭೂಧರನೆನಿಸಿ ಭುವನನುತನಾಗಿ ವಿ
ರೋಧಿ ಮಥನ ಸತ್ಯಥನನ ಪುಣ್ಯವಗಾಧವದೇನುಸುರ್ವೆ' ॥೩೫॥

ರುದ್ರ ಕನ್ಯೆ ಸಮವಾಗಿಹ ರುಚಿ ಸಾ
ಮುದ್ರಿಕೆಯಾ ಸಲ್ಲಕ್ಷಣ ಸ್ತ್ರೀ ವಿಲ
ಸದ್ರಾಜಾಗಮವೀಕ್ಷಿಪ ಕುವಲಯದೃಕ್ ಸತಿಯಳ ನೋಡಿ॥
ಉದ್ರೇಕೋತ್ಸವದೊಳ್ ಕೂಡಲ್ಕೆ ಸ
ಮುದ್ರದೊಳೊಗೆದ ಸುರತ್ನಗಳೆನೆ ಸಮ
ವಿದ್ರುಮೋಷ್ಠೆ ರುದ್ರಾಂಬೆಯ ಗರ್ಭಪಯೋಧಿಯೊಳುದಿಸಿದರು ॥೩೬॥

ಸನ್ನುತ ಸದ್ಗುಣಗಣ ವಿಭ್ರಾಜಿತ
ಪನ್ನಗಭೂಷಣ ಭಕ್ತ ಶಿರೋಮಣಿ
ಪನ್ನಳಿನಾರಾಧಕ ಸೇವಕ ನಿಕುರುಂಬ ಕಲ್ಪಭೂಜ
ಮುನ್ನೀರೊಲ್ ಗಾಂಭೀರ್ಯ ಯಶಶ್ರೀ
ಜೊನ್ನದೊಲಾವರಿಸಲ್ ಜಗದೊಳ್ ಶ್ರೀ
ಚನ್ನಮಾಂಬೆ ಮಾನಿನಿಯೊಳ್‌ವೆರಸಲು ಜನಿಸಿದ ನಂದನನು ॥೩೭॥

ಕುಸುಮಾಸ್ತ್ರೋಪಮರಸಮಾನರು ರಾ
ಜ ಸಭಾಪತಿಗಳು ಭಸಿತಭೂಷಿತರು
ವಸುಧಾಕಾಂತರು ಶಶಿಧರ ಶಾಂತರು ರಸಿಕರನಾಮಯರು॥
ಕುಶಲವರ್ಧನರು ಕುಶಲವರಂದದ
ಶಿಶುಕುಲರತ್ನರು ಶ್ರೀಕರಚಿಹ್ನ
ಪ್ರಸರರು ಸರಸರು ಸಾಂಬಶಿವಾನುಗ್ರಹ ಪಾತ್ರರು ನೋಡೆ ॥೩೮॥

ಸಾರಸಭವಸೃಷ್ಟಿಯೊಳು ದೃಷ್ಟಿಯೊಳು
ಶೂರರು ಸುಭಗರು ಸುಗುಣರು ಸುರಪರಿ
ವಾರದಿ ಸಾಮ್ಯರು ಸೌಮ್ಯರು ಸುಕುಮಾರರು ಬಹುಸುಂದರರು
ವೀರಕ ರೇಣುಕ ದಾರುಕರೆಂಬರ್
ತೋರುವರಲ್ಲದೆ ಸಲ್ಲದು ಸದೃಶವಿ
ಚಾರಪರರ್ಗೆನೆ ಧಾರುಣಿಯೊಳು ಮೂವರರಿಂದಿಗೆ ತಿಳಿಯೆ ॥೩೯॥

ಗುರುವರ ದುರದುಂಡೀಶ್ವರ ಕರುಣಾ
ಕರ ಕಾಮದ ಕಲ್ಪಾವನಿರುಹ ಸಾ
ದರದ ವರದಲುದಿಸಿದ ಮಲ್ಲೇಂದ್ರಮಹೀವಲ್ಲಭಗರಿಯೆ॥
ಪಿರಿಯಣುಗ್ಗನು ಶಿವಲಿಂಗಸರ್ಜ ಬಹ
ದರ, ವೀರಾಧಿಪ ವೀರಸರ್ಜ ಸುಂ
ದರ ರುದ್ರಾಭಿದರೆಂಬರು ಮೂವರು ಮುಖ್ಯತನೂಭವರು ॥೪೦॥

ಭವನದಿ ಮಣಿದೀಪರು ಗತತಾಪರು
ಭುವನದಿ ಕೀರ್ತಿ ವಿರಾಜರು ತೇಜರು
ರವಿರುಚಿರತ್ನಾಲಂಕಾರರು ಶೂರರು ಪರಿಭಾವಿತರು॥
ಶಿವಕರುಣಾಮೃತಪಾತ್ರರು ಗಾತ್ರರು
ಇವರಲ್ಲದೆ ಸಾಕುವ ಪ್ರಭುವೆನುತಲಿ
ಕುವರರುದಿಸಿದರನೇಕರು ಕುವರರ ಸಮ ತೋರುವರಿಳೆಗೆ ॥೪೧॥

ಧನಕನಕಾದ್ಯೈಶ್ವರ್ಯದಿ ಶೌರ್ಯದಿ
ತನುಜರನೇಕರ ವಿಭವದಿ ಪ್ರಭವದಿ
ವಿನಯದಿ ವಿತರಣ ವಿಷಯದಿ ದೇಶದಿ ಕೋಶದಿ ಭಾವಿಪೊಡೆ
ಮನುಜಾಧಿಪ ಮಲ್ಲೇಂದ್ರಚಂದ್ರ ಸುಖ
ವನಧಿಯ ಪೆಚ್ಚಿಸಿ ಮೆಚ್ಚಿಸಿ ಪೂರ್ವದ
ಜನಕ ವೀರಭದ್ರಾಧಿಪಗಿಂ ಮಿಗಿಲೆನಿಸಿದನವನಿಯೊಳು ॥೪೨॥

ತಂದೆಗಿಂದ ನಂದನನಧಿಕೆನಿಸುವು
ದಿಂದು ಭೂಷಣನ ಕರುಣದೊಳಲ್ಲದೆ
ಬಂದಪುದೇ ನಿಂದಪುದೇ ಕೀರ್ತಿಗೆ ತಂದಪುದೇ ತಿಳಿಯೆ॥
ಸಂದಪುದೇ ಕುಂಭದೊಳುಸಿದ ಮುನಿ
ವೃಂದವರಾಗಸ್ತ್ಯಾಭಿದ ಶರಧಿಯ
ನೊಂದು ಕುಡುತೆಯನು ಮಾಡಿದ ನೋಡಿದನೆಂಬುದು ಜಗವರಿಯೆ ॥೪೩॥

ಆ ತೆರದಲಿ ಭರದಲಿ ಬಂಧುರದಿ ಪು
ರಾತನ ಭೂಪರೊಳೀತನೆ ಶಿಖರ ಯ
ಯಾತಿ ಭೋಜ ಮಾಂಧಾತರ ಸಾಮ್ಯದ ದಾತ ದಯಾನ್ವಿತನು
ಖ್ಯಾತನು ಸುಗುಣವ್ರಾತನು ನುತ ಸಂ
ಘಾತನು ಸುಜನಪ್ರೀತನು ಖಿಲಜೀ
ಮೂತಹರಣ ಘನವಾತನು ಶ್ರೀತನು ಮಲ್ಲಮಹೀವರನು ॥೪೪॥

ದಾನದಿ ಕರ್ಣ ಸಮಾನನೆನಲು ಕುರು
ಭೂನಾಥಾಶ್ರಯದಲಿ ಕೊಡುವವನವ
ನೀ ನರೇಂದ್ರ ಕನಕಾಚಲಧರ್ಮನ ಪೂಜಿಸಿ ಕೊಡುತಿಹನು॥
ಜ್ಞಾನದಿ ಬಹುಸನ್ಮಾನದಿಯಾ ನದಿ
ಸ್ಥಾನದಿ ಪ್ರತ್ಯತ್ಥಾನದಿ ವಿಬುಧವಿ
ತಾನವ ತಣಿಸುವ ಮಣಿಸುವ ರಿಪುಗಳ ಶಿವಪೂಜಾಬಲದಿ ॥೪೫॥

ಸರಿಗಟ್ಟಲು ಸದ್ಗುಣಗಣರತ್ನಕೆ
ಸುರಮಣಿ ಕಲ್ಲಾದುದು ನಿರ್ಜರತರು
ಮರನಾದುದು ವಿತರಣವನು ಕೇಳುತ ಕಾಮಧೇನು ತಾನು
ಧರಣಿಗೆ ಚಿತ್ರದಿ ತೋರ್ಪುದು ಸ್ವರ್ಗದೊ
ಳಿರುವುದು ಮರೆವುದು ನೃಪಪಂಚಾಂಗುಲಿ
ಕರೆವುದುರೋಜಗಳಾಗಿ ಕಾಮಿಸಿದ ಜನಗಳಿಗನವರತ ॥೪೬॥

ಧರ್ಮದಿ ಪ್ರಜೆಗಳ ಪಾಲಿಸಿ ಲಾಲಿಸಿ
ಶರ್ಮದಿ ನರ್ಮದಿ ನಲಿವವೊಲಿವ ಸ
ತ್ಕರ್ಮದಿ ನಿಷ್ಠ ನಿರಾಮಯ ಶಿಷ್ಟ ನಿಜಾನುಭವೋತ್ಕೃಷ್ಟ॥
ಭರ್ಮಾವನಿಧರ ಧರ್ಮಾರ್ಚಕರಿಗೆ
ಸ್ವರ್ಮಣಿಯೆನಿಸುವ ಸಪ್ತಾಂಗಾಧಿಪ
ಮರ್ಮವನರಿದು ಮಹಾನಿರ್ಮಲತೆಯಲಾಳುವ ರಾಜ್ಯವನು ॥೪೭॥

ತಾರಾಗಣದೊಳ್ ಚಂದ್ರನ ತೆರ ಪರಿ
ವಾರದಿ ತೋರ್ಪ ಯಶೋನಿಧಿ ನಿಖಿಲ ಕ
ಲಾರಂಜಿತ ಕಮನೀಯರೂಪ ಭೂಪಾಲಾವಳಿ ರತ್ನ
ಸೇರಿಹ ತ್ತೋರಿಹ ಸಚಿವ ಮುಖ್ಯದಳ
ಭಾರಾಧಿಪರ ಕುಮಾರರ ಸಲಹುವ
ಶೂರ ಸುಗುಣಮಣಿಹಾರ ವಿಹಾರ ವಿರೋಧಿಮಥನನೆನಿಸಿ ॥೪೮॥

ಮಲಯರಾಜ ತನ್ನಯ ವಶವರ್ತಿಯ
ಚೆಲುವ ತಳೆದ ನವಲಕ್ಷಾವನಿಯನು
ಸಲಹುವ ಮಲೆತರ ಮರ್ದಿಸಿ ವರ್ಧಿಸಿ ಶಿವಭಕ್ತಿಯನವರ್ಗೆ॥
ಕಲಿಸಿ ಫಲಿಸಿ ಕಲ್ಮಷವನು ಭೇದಿಸಿ
ಮಲಹರನಗರಿಗೆ ಸ್ವಾವನಿ ಸಹ ತಾ
ಚಲಿಸಿದ ತೆರನೀ ಮಲ್ಲೇಂದ್ರನು ವಿಷಯಸ್ಥಿತ ಜನಗಳಿಗೆ ॥೪೯॥

ಹರಭಕ್ತಿಯ ಯುಕ್ತಿಯ ಸರಸೋಕ್ತಿಯ
ಪರತರ ಮುಕ್ತಿಯ ಪಡೆವಾಸಕ್ತಿಯ
ನಿರದೆಸಗುವ ಭವದವದಾವಾನಲವೆನಿಸುವ ಶ್ರಾವಣದಿ॥
ಹರವೇಷದ ಚರಪದಪೂಜೆಗೆ ಸ
ರ್ವರ ಕರದಿಂ ಸೇವೆಯು ಘಟಿಸುವ ಸ
ತ್ವರಿಕರ ಪರಿಣತೆಗೊದಗಿದ ಸಂಭ್ರಮವದನಾನುಸುರುವೊಡೆ ॥೫೦॥

ಹರಿಹರೇಶ ಪದ್ಮರಸ ಸುರಸಕವಿ
ವರ ರಾಘವ ಮಲುಹಣ ನಿಜಗುಣ ಸುಂ
ದರ ಬಾಲೇಂದುನಗರದ ಷಡಕ್ಷರಿದೇವರು ಕಡೆಯಾದ॥
ಹರಕವಿವರರಿಂದಿರಲೀ ಭೂವರ
ವರ ಮಲ್ಲೇಂದ್ರ ಮನೋಹರನೆಸಗುವ
ಚರಪದಪೂಜೆಯ ಮಾಡುವ ವಿವರವ ವರ್ಣಿಸತಕ್ಕವರು ॥೫೧॥

ಹರಪದಪೂಜಾಬಲದಿಂ ಛಲದಿಂ
ದಿರದೆ ಸರಸ್ವತಿಪುರದಿ ಭರದಿ ತುಂ
ಬಿಡುವ ಸುವಿದ್ಯಾದ್ರವ್ಯವ ಭವ್ಯವ ತರುವೆಡೆಯೊಳು ನೆಲಕೆ॥
ಸುರಿದುದರೊಳಗಾರಿಸಿ ಕಲಿತಿಹ ಪಾ
ಮರನೆನ್ನಯ ಸರಿ ಕವಿಗಳು ವರ್ಣಿಸ
ಲರಿಯರು ವಿಭವಪುರಂಧರ ಸುಂದರ ಮಲ್ಲೇಂದ್ರನ ಸಿರಿಯ ॥೫೨॥

ಶ್ರಾವಣಮಾಸದೊಳಾದಿಯೊಳಾದ ಧ
ರಾವಲ್ಲಭರೊಳಗೀ ವಿಧಿಪೂರ್ವಕ
ನಾವ ಮಾಡಿದುದ ನೋಡಿದುದನುನಾನಾಡಿದುದನು ಅರಿಯೆ॥
ಸಾವಧಾನದಿಂ ಭೂವರ ಶ್ರೀ ಗುರು
ದೇವಕಾರ್ಯವೆಮಗಾವಗ ಫಲಪದ
ಜೀವನವೀವುದಿದೆಂದು ತಿಳಿದು ಮಲ್ಲೇಂದ್ರ ಸುಗುಣಸಾಂದ್ರ ॥೫೩॥

ಪ್ರಭುವರ ಶ್ರೀ ಮಲ್ಲೇಂದ್ರಮನೋಭವ
ನಭವೋಪಮರನು ಸಂಭ್ರಮದಿಂದಲಿ
ಶುಭಪೀಠಕೆ ಕರೆತರುವೆಡೆಯೊಳು ಭವಿಸುವನದೆಂತೆನಲು॥
ವಿಭುಕುಲವರ್ಯ ಮಹಾದೇವೇಶ್ವರ
ನಿಭ ನಿಖಿಲಾಶಾವರ್ಜಿತ ವಿನುತ ಸು
ಲಭ ಸುಖದಾಯಕ ಪರಮಪರಾತ್ಪರ ಪಾವನಮಯರೆಂದು ॥೫೪॥

ಮಾಯಾಮರ್ದನ ಮಂಗಳ ವಿಗ್ರಹ
ಶ್ರೇಯಃ ಪದಕಾರಣಗುರು ವಿಷಯ ನಿ
ಕಾಯಾರಣ್ಯರವಾನಲ ತತ್ವಮಸೀತಿ ಪದವಿಚಾರ॥
ಆಯಾ ಸಾರ್ದನವರ್ಧನ ಚಿನ್ಮಯ
ಕಾಯ ಕಾಯಭವಖಂಡನ ಸದ್ಗುರು
ರಾಯರ ಶ್ರೀಕರ ಪ್ರಭುವರ ಪ್ರಭುದೇಶಿಕರನು ಕರೆತಂದು ॥೫೫॥

ವಾಸವ ವಿಭವವ ಲೇಶಮಾಡಿ ಚಿ
ದ್ದೇಶದಿ ಚಿತ್ಸುಖಕೋಶದಿ ನಿಂದ ವಿ
ಲಾಸದ ವೀರಮಹೇಶರಿಗೀ ಸುಖ ತೋರಿಸಬೇಕೆನುತ॥
ಶ್ರೀ ಸಮರ್ಥ ಸುರುಚಿರ ಮಣಿಗಣ ಸಿಂ
ಹಾಸನ ಶಾಸನಗೊಳಿಸುತ ಪಾದಕು
ಶೇಶಯ ಯುಗಳಿಕೆ ನಮಿಸುವನಾನಂದಿಸುತ ನರೇಶ್ವರನು ॥೫೬॥

ಮದಹರ ಚಿರಸುಖಪದಕರ ಮೃದುಸ
ತ್ವದ ಪೂಜಾ ವಿಷಯದಿ ಚಂಚಲತೆಯ
ಮೊದಲರಿಯದ ಮಹದನುಭವಸಾರವ ಕೇಳಿದ ರಾಜಾಜ್ಞಾ॥
ಹೃದಯಜಪವ ಮಾಡಿದ ಕುವರರಿಗ
ಗ್ಗದ ಕಾರ್ಯವ ಕೈಗೊಳಿಸಿಹ ಬಹುಪಾ
ಕದ ದರ್ವಿಯೊಲಿಹ ವೀರಸಂಗ ತಾತಾಭಿದನಂ ಕರೆದು ॥೫೭॥

ನೇಮಿಸೆ ಸ್ವಾಮಿ ಹಸಾದವೆನುತ್ತ ನಿ
ರಾಮಯ ನಿತ್ಯ ನಿರಂಜನ ಗುರುಪದ
ತಾಮರಸದ್ವಯಕಷ್ಟಾಂಗದೊಳೊಲಿದೆರಗುವ ಪದಗಳನು॥
ಚಾಮೀಕರದೊಲ್ ಪಡಿಯಲ್ ಪದಪ
ಜಾಮಹಾಗಮದ ಸಮ್ಮತಿಯಂತಭಿ
ರಾಮದಿ ಮಡಿವಳಶಾಸ್ತ್ರಿಗಳು ಸುರವರಾಮ್ನಾಯೋದಿತವ ॥೫೮॥

ಆ ತೆರ ಲಿಂಗಾರ್ಚನೆ ಪದಪೂಜೆಯ
ತಾ ತೀರಿಸಿ ಧರಿಸುವ ಶ್ರೀಫಲದಳ
ಜಾತ ಮಹಾತ್ಮ್ಯೆಯನಭಿವರ್ಣಿಸುವೊಡೆ ವಾತಭುಗಿನಗರಿದು॥
ಗೌತಮಿ ಮಲಹಾರಿಣಿ ಶೋಣಾ ಭವ
ಧೂತೆ ಸುರಧುನೀ ಮುಖನದಿಗಳ ಸ್ನಾ
ನಾತಿಶಯದ ಫಲವೇತಕೆ ಸಲ್ಲವು ಭೂತಳವರಿಯಲ್ಕೆ ॥೫೯॥

ಕುಸುಮದ್ವಾದಶಕೋಟಿಗೆ ಮಿಗಿಲಹ
ಮಿಸುನಿಯ ಪೂವಧಿಕದಕೆ ಕೋಟಿಗುಣ
ವಸನು ಬಿಲ್ವದಳ ತ್ರಿದಳ ತ್ರಿಗುಣಾಕಾರ ತ್ರಿನೇತ್ರ ಸಮಂ॥
ಪಶುಪತಿಗೇರಿಸಲದರಿಂ ತ್ರಿಭವದಿ
ವಶಕಲ್ಮಷವನ್ನು ಕೆಡಿಸುವ ಪತ್ರಿಯ
ರಸಿಕರಾಜಮಣಿ ದಿವಸದಿ ಲಕ್ಷಾಧಿಕವನು ಧರಿಸುವನು ॥೬೦॥

ಶಿವಯೆಂಬುವ ನಾಮವೆ ಮಂಗಳಕರ
ವವಿರತಪಾವನ ವಾಕ್ಯದಲ್ಲಿ ಸಂ
ಭವಿಸೆ ಮಹಾಪಾತಕಕೋಟಿಗಳ ಕೆಡಿಸುವೆಂದಾಗಮವು॥
ವಿವರಿಸುವವು ಶಿವ ಹರ ಮೃಡ ಗಿರಿಜಾ
ಧವ ಶಂಕರ ಶರ್ವೇಶಾನೇಶ್ವರ
ಭವ ಮೃತ್ಯುಂಜಯ ಮುಖನಾಮಂಗಳನಂತವನುಸುರಲ್ಕೆ ॥೬೧॥

ಆಗುವ ಫಲವನು ಶ್ರೀಗುರುವರ ಸುಖ
ಸಾಗರ ಶಂಕರ ಬಲ್ಲನದಲ್ಲದೆ
ಮೇಗೆ ಮೇಗೆ ಶಿವನಾಮಪೂರ್ವಕದಿ ಧರಿಸುವ ದಳಗಳನು॥
ರಾಗದಿ ಕುಂದ ಬಕುಳ ಕುಶವಕ ಪು
ನ್ನಾಗಯುಗಚ್ಛದ ಪಾರಿಜಾತ ಸಿತ
ವಾಗಿಹ ನಂದ್ಯಾವರ್ತ ಮಲ್ಲಿಕಾ ಮುಖ್ಯ ಕುಸುಮಗಳನು ॥೬೨॥

ಧರಿಸುವರಾ ಹರಮೂರ್ತಿಗೆ ಪೂರ್ತಿಗೆ
ಶಿರದ ಕಿರೀಟವ ರುದ್ರಪುಷ್ಪದಿಂ
ದಿರದೆ ಮಣಿಗಣಾಭರಣವ ದಿವ್ಯಾಂಬರಗಳ ಸಿಂಗರಿಸಿ॥
ಗಿರಿಶ ರಜತಭೂಧರದೊಳು ಹರಿವಿ
ಷ್ಟರದಿ ಮೆರೆವನೀ ತೆರನೆಂದೆಂಬುದ
ಧರಣೀಶ್ವರ ಮಲ್ಲೇಂದ್ರ ಮಹೇಶ್ವರ ತೋರಿಸುವನು ನರರ್ಗೆ ॥೬೩॥

ರಂಗವಲ್ಲಿಯಾ ರೇಣುಗಳೆನಿತು ತ
ರಂಗೊಳಿಸುತ ಬೀಳ್ವಿನಿತು ವರ್ಷ ಸಾ
ರಂಗಪಾಣಿ ಪುರವಾಸದಿ ಪುಣ್ಯವಿಶೇಷದೊಳಿತಿರುಹರು।
ಮಂಗಳಮ್ಮಯ ಮಲ್ಲೇಂದ್ರನ ಸದನದಿ
ಕಂಗೊಳಿಸುವ ದಿನದಿನ ನೂತನವಹ
ತಿಂಗಳ ಪರಿಪರಿ ಚಿತ್ರದ ರಚನೆಗೆ ಕಂಗಳು ಸಾಲುವವೇ ॥೬೪॥

ಮೀನಾಂಕನ ಕರಬಾಣಗಳಾಗುತ
ಲೀ ನಳಿನಾದಿ ಪ್ರಸೂನಗ[1][ಳೆನ][1]ಲಿಹ
ಸ್ತ್ರೀನಾಯಕರನು ಮೌನಿಗಳನು ಮಾನಿಗಳನು ಸದೆದೀಗ॥
ಕಾನನ ಸೇರಿಹವಾ ಕುಸುಮಗಳ ವಿ
ತಾನವೆರಸಿ ತರವೇಳಲ್ ಪೋಗಿ ನಿ
ಧಾನದಿ ತತ್ಸುಮರಾಜಿಯ ತರಿದು ಹೆಡಿಗೆಗಳ ತುಂಬುತ್ತ ॥೬೫॥

ನಾನಾವಿಧದ ಪ್ರಸೂನಕೋಟಿಗಳ
ನಾನಂದದಿ ತಂದಿರಿಸಲ್ ನೋಡುತ
ಭೂನಾಥಾಗಣಿ ಮಲ್ಲಸರ್ಜ ಮನದಂದು ಮಹೋತ್ಸವದಿ॥
ಈ ನಳಿನಾದಿ ಕುಸುಮಗಳ್ ತಮ್ಮಯ
ಸ್ಥಾನವ ಬಿಟ್ಟೆಮ್ಮೊಡೆಗೈದಿವೆ ಬಹು
ಮಾನದ ತಾಣದಿ ಮೆರಿಸಲ್ಕಿರಿಸಲ್ವೇಕೆನುತಲಿ ನಲಿದು ॥೬೬॥

ಭೂಜದೊಳಿಹವಿವು ತೇಜದೊಳಿರಿಸಲು
ರಾಜಿಸುವವು ಎನುತೀ ಜಗತೀವರ
ತಾ ಜವದಲಿ ಬಹು ಗಿಡಗಳ ಮಾಡಿಸಿ ಸೇರಿಸವೇಳಲ್ಕೆ॥
ಮಾಜದಲಾ ತೆರ ಮಾಡಿದರಮರ ಸ
ಮಾಜವು ಮೆಚ್ಚುವ ತೆರದಲಿ ಭರದಲಿ
ಮಾಜ ಮನೋಹರ ಭೂವರ ಮಲ್ಲೇಂದ್ರನ ಯುಕ್ತಿಗೆ ಸರಿಯೆ ॥೬೭

೧-೧ ಳಗ(ಮೂ)

ಹರವೈರಿಗೆ ಶರವಾಗಿಹ ಕಾರಣ
ತರಿದು ತಂದರೀ ಪೂಗಳನೀಗಳು
ಸರಿಯಾದುದು ಮತ್ಸರವೇಕೆನುತಲಿ ಕರುಣದೊಳೀಕ್ಷಿಸುತ॥
ಸರಗೊಳಿಸುತ ಸಾದರದಲಿ ಪೂಗಳ
ನೆರವಿಯ ಗುಣವಜ್ಜನರೊಡನಾಡಿಸಿ
ತರಗೊಳಿಸುತ ವರ್ತುಳಕಂದುಕಗಳ ಮಾಡಿಸಿದನು ಭೂಪ ॥೬೮॥

ಖಂಡಕಳಾನಿಧಿಮಂಡನ ಮದನನ
ಕೆಂಡಗಣ್ಣಿ ನಿಂದುರುಹಲವನ ಕರ
ಪುಂಡರೀಕರದೊಳ್ ಪಡಿದಿಹ ಪೂಗಳ ಚಂಡುಗಳವನುಳಿಯೆ॥
ಕಂಡು ಶಿವಗಣರು ಕೊಂಡು ಬಂದು ಭೂ
ಮಂಡಲಾಧಿಪನ ಕಾಣಿಸೆ ಗುಣದಿಂ
ಹಿಂಡುಗೂಡಿಸಿದ ತೆರದಿಂ ಸರದಿಂ ತಂಡತಂಡ ಮೆರೆಯೆ ॥೬೯॥

ತೃಣಕೇತನ ಸುಶಲಾಕೆಗಳನು ಸ
ದ್ಗುಣದಿಂ ಕಟ್ಟುತ ನಿಟ್ಟಿಸಿ ದಿಟ್ಟಿಸಿ
ಕ್ಷಣದಾ ಮಣಿಭೂಷಣರೂಪರ ಪೂಜಾಮಂಟಪದೆಡೆಯ
ಗಣ ಸಂದೋಹದಿ ಗಿಡಗಳೆನಿಪ ಕಾ
ರಣವವಯವದೊಳಗಗಣಿತ ಪೂಗಳ
ನಣಕದ ಮಣಿಯೊಲ್ ಚಿತ್ರಕುಜಗಳನನೇಕವ ಮಾಡಿಸಿದ ॥೭೦॥

ನಲವಿಂ ಮಧುಮಾಧವ ಮಾಸಗಳೆರ
ಡಿಳೆಗೆ ವಸಂತಾಗಮ ಸಮಸಮಯೋ
ಜ್ವಲಮೆಂಬರು ವರ್ಷಾಗಮಸೂಚಕ ಶ್ರಾವಣದೊಳು ನೃಪನ॥
ನಿಳಯದಿ ನಿತ್ಯವಸಂತೋತ್ಸವ ಕಂ
ಗೊಳಿಸಿರೆ ನಾನಾವಿಧಪೂಗಳ ಗಿಡ
ಗಳನೆಳೆದಳಿರಿಂ ಕುಳಿರಿಂ ತಣ್ಣಿಸಬಡುವವು ಬಲವೆನಿತೋ ॥೭೧॥

ಸಾಲಾಗಿಹ ಬಹು ಮೇಲಾಗಿಹ ಸುವಿ
ಶಾಲಾಗಿಹ ಪುಗೋಲಿಗೆ ಶಿಕ್ಷೆಯ
ಭಾಲಾಂಬಕನೆಸಗಲ್ಕೆ ಭಯಾನಕದಿಂದ ವಸಂತನೃಪ॥
ಕಾಲಕಾಲ್ಗಗಣ ಜಾಲದಿ ಮೆರೆವ ದ
ಯಾಲವಾಲ ಭೂಪಾಲನ ಕಾಣುವ
ಕಾಲವೆನುತ ವನಮೂಲವೆರಸಿ ಬಂದಿಹನೆಂಬೊಲ್ ಮೆರೆಯೆ ॥೭೨॥

ಪರಿಮಳಚೂರ್ಣವೆರಸಿ ಸದ್ವಾಸನೆ
ವೆ ಶಿವ ಮೋಹರಸಗರೆವ ಕಾಷ್ಟಗಳ
ಪರಿಲೇಪಿಸಲಾ ಸದ್ವಾಸನೆಯನು ಭೂವರ ಕೇಳುತ್ತ॥
ತಿರಿಸಿ ಕುಜಗಳೋಲಿರಿಸಿ ಭೇದವನು
ಮರೆಸಿ ಮಹೇಶಾಳಿಕದೃಗ್ಜ್ವಾಲೆಗೆ
ಯರಿದಾದಾಹುತಿಗೊಳಿಸಿದ ತಿಳಿಸಿದ ದಿವ್ಯಮರಂದವನು ॥೭೩॥

ಪ್ರತಿಬಿಂಬಾತ್ಮನು ವಿತತಯೋಗಿ ಸಂ
ತತಿಯೊಳು ಹೃತ್ಪದ್ಮದೊಳು ತೋರ್ಪ ಪ
ದ್ಧತಿಯನು ಸ್ಥಿತಿಯನಿದೆಂದರುಪುವ ಬಿಲ್ವದ್ವಾರದಿ ಸಮೆದ॥
ಕ್ಷಿತಿರುಹಾಗ್ರದೊಳ್ ಮೇಣಬತ್ತಿಗಳ
ಯುತದಿಂ ರಂಜಿಸುವತಿ ಚಿತ್ರತೆಯನು
ಶತದಳಸುತ ಸೃಷ್ಟಿಯೊಳಭಿನವ ಮಲ್ಲೇಂದ್ರಕೃತ ವಿಲಾಸ ॥೭೪॥

ಗಿರಿವಾಸೇಶ್ವರರೂಪ ವಿರತಿಸುಖ
ಭರಿತರ ಪೂಜಾವಿಧಿ ಪುಷ್ಪಾಂಜಲಿ
ಗಿರವೇಳ್ಕಾ ನಗದೊಳ್ ಸಂಜನಿಸಿದ ಪೂಗಳು ಬೇಕೆನುತ॥
ತರಿಸಲ್ ಪೂಜಾವಿಧಿ ಮುಗಿಯಲ್ ಭೂ
ವರಶೇಖರ ಮಲ್ಲೇಂದ್ರ ಮನೋಹರ
ಚರಗಣ ಹರಭಕ್ತರ ಕರೆಕರೆದೀವುತ ಲಕ್ಷಾಧಿಕವ ॥೭೫॥

ಚತುರಂಗಾಧಿಪ ಚತುರಕ್ಷಿತಿವರ
ನುತಪಂಚಾಂಗ ಸ ಮಂತ್ರಾಲೋಚನ
ಯುತ ಷಟ್ಕಾಯಾಯತ ಬಲ ಸತ್ಸಪ್ತಾಂಗ ಸಭಾಸಾಮ್ಯ
ಕೃತಮಷ್ಟಾಂಗ ಸುಯೋಗಾನ್ವಿತ ಸ
ದ್ವ್ರತರಿಂ ತೋರ್ಪದರೊಳಗೆ ದಶಾಂಗ
ಸ್ಥಿತಿಯನು ಕಾಣದಿರಲು ಪುಡಿ ಮಾಡಿಸಿ ಸುಡಿಸಿದನವನೀಶ॥೭೬॥

ವಾಸನೆಗರೆದು ಹುತಾಶನನೊಳು ಮಾ
ಹೇಶ ಸಭಾ ಸಂತೋಷವಾದೆವವ
ನೀಶನ ಕತದಿಂದಾಸರ ಬೇಸರವೆಮಗಿಲ್ಲೆಂದೆನುತ॥
ವಾಸಿಸಿದಾ ಪರಿಮಳ ಧೂಮೋತ್ಕರ
ವಾಸವ ವಿಭವಾ ವಾಸವ ಪಿಡಿದಾ
ಕಾಶಕೇಶ ಗೌರೀಶಗಣರ ಘನ ಘೋಷವ ಕೂಡಿದುದು ॥೭೭॥

ಘನಸಾರಾರತಿಯನಿತು ಬೆಳಗು ಚಿ
ದ್ಘನರ ತನುವಿನೊಳು ಮಿನುಗದು ಮಿಂಚಿನ
ಕೊನೆಯೋಲ್ ತೋರ್ಪುದು ದೀಪೋತ್ಸವಗಳೊಳೇಕಾರತಿ ಮೊದಲು
ಇನಿತಾರತಿಯೆಂದೆಂಬುವ ವಿವರವ
ನನಘನ ನಾಮಯ ಬೆಳಗಿಸಿಕೊಂಬುವ
ನನಲಾಕ್ಷೋಪಮ ಬಲ್ಲನಲ್ಲದಾ ತೇಜೋರಾಶಿಯನು ॥೭೮॥

ಮಂಗಳವಾದ್ಯ ಮೃದಂಗ ಘೋಷತಾ
ಳಂಗಳ ರವ ವೀಣಾಸ್ವರ ಪಾಡುವ
ಜಂಗಮ ತಿಂಥಿಣಿ ಜಯನಿನಾದ ನೃತ್ಯಂಗಳ ಕುಶಲತೆಯು॥
ಭೃಂಗಿಗೆ ಸರಿ ಗಂಗಾಧರ ಕೀರ್ತನೆ
ಪಿಂಗದೆಸಗುವ ರಾವ ಪ್ರಮಥಗ
ಣಂಗಳ ಸಭೆಯನು ಮರೆಸಿತು ಪರಸಿತು ಪಾರಮಾರ್ಥ ಸುಖವ ॥೭೯॥

ಕರದಿಂ ತೂರುವ ತೋರುವ ಪೂಗಳು
ಭರದಿಂ ಭೂಮಿಗೆ ಬರುವವು ಮೆರೆವವು
ಸುರಿವವು ಸುರರು ಕರೆವ ಪೂಮಳೆ ಊಸರಿಯೆಂಬಂದದಲಿ ॥
ಧರಣೀಶ್ವರೆ ಮಲ್ಲೇಂದ್ರನ ಕರಸರ
ಸಿರುಹವ ತುಂಬಿಹ ತುಂಬಿಯ ಪೂಗಳು
ಗುರುವರ ಪ್ರಭುವರ ದೇಶಿಕರಡಿದಾವರೆಗವು ಸಾರುವವು ॥೮೦॥

ಈ ತೆರ ಪುಷ್ಪಾಂಜಲಿಯನು ಮಾಡಿ ಮ
ಹೀತಳೋದರೀಯುತನಾಗುವ ತನು
ಜಾತರ್ವೆರಸಿಯವನಿಪನಷ್ಟಾಂಗ ಸಮೇತದಿ ನಲಸುವನು
ಚೇತಸ್ಸದನದಿ ಧರ್ಮಾಂತಕರಭಿ
ಯಾತಿಗಳಧಮರ ಭೀತಿಯ್ನು ಬಿಡಿಸಿ ನಿ
ಕೇತನ ನಿಮ್ಮದೆನಿಸಿಯಾಮೋದಿಸಿ ಸಂಪತ್ಸಾರದಲಿ ॥೮೧॥

ಎನುತ ವಂದಿಸುವ ಕಾಲದಿ ಜಯರವ
ಘನ ಘೋಷದ ತೆರ ತೋರಲ್ ನುತಿ ಸು
ಸ್ತುನಿತವಾಗಲಾರತಿಯ ಮಿನುಗು ಮಿಂಚಾಗಲು ಶಿವಗಣರ ॥
ವನಜೋಪನು ಕರವಾರಿದಗಳು ನೂ
ತನ ಜಲಬಿಂದುಗಳನೆ ಕರೆವಂದದಿ
ವನದ ಪೂಗಳವು ಸುರಿವವು ಭೂಪಾಲನ ಕೆಲಬಲದೊಳಗೆ ॥೮೨॥

ಅಲ್ಲಿಂದೇಳುವ ತಾಳುವ ಹರ್ಷವ
ಬಲ್ಲಿದ ಭೂವರ ಸ್ಥಾವರ ಮರಗಳ
ನೆಲ್ಲನಡಸುವ ಕರವಿಡಿಯಲ್ ಕಮನೀಯತೆಯಾಗಿಸುವ ॥
ಎಲ್ಲಿಯು ಕಾಣೆನು ಮಾಡುವ ಚಿತ್ರವು
ಮಲ್ಲೇಂದ್ರನೆ ಮಲ್ಲೇಂದ್ರಗೆ ಸಮ್ಮತಿ
ಯಲ್ಲದಿಲ್ಲ ಕರಪಲ್ಲವ ಕುಶಲತೆಯಾದಿಯೊಳಾನರಿಯೆ ॥೮೩॥

ಸ್ಥಿರಚಿತ್ತದಿ ಹರಿವಿಷ್ಟರದಲಿ ದಿನ
ಕರಕಳೆಯಂ ಸೂಸುವ ಶುಭಲಕ್ಷಣ
ಗರೆವನನೇಕ ವಿಧಾರ್ಚನೆಯನು ಕೈಕೊಂಬುವ ವಿಷಯದಲಿ ॥
ಅರುಣೋದಯವಾಗಲು ಬೇಸರಿಕೆಯ
ಮರವೆಯ ಮರೆದು ಮನೋಮಧ್ಯದಿ ಶಿರ
ಕರಪೂಜಾರತನಾಗಿಹ ಶಿವಯೋಗೀಶ್ವರ ಪ್ರಭುರಾಯ ॥೮೪॥

ಪಾದವೆ ಪರಮಾದೋದವನೀವ ಶು
ಭೋದಯ ಕಾರಣಕಾದಿಯೆನಿಪ ಸು
ಪಾದಪ ಸಮವಿಷ್ಟವ ಕೈಗೊಳಿಸುವವಿದೆ ಸರಿಯೆಂದೆನುತ ॥
ಆದರದಿಂ ದಿವಸಾದರು ಪಿಡಿದ ನಿ
ನಾದವನುಡುಗಿ ಮಹಾದೇವೆನುತಲಿ
ಕೈದಳವನು ಬಿಟ್ಟಗಲದಿಹನು ಶ್ರೀವೀರಸಂಗ ಸಚಿವ ॥೮೫॥

ಪೂಜೆಯ ಕೈಕೊಂಬೆಡೆಯೊಳು ಮಾಯಾ
ಭೂಜಕುಠಾರ ಪ್ರಭುದೇಶಿಕರೆ ವಿ
ರಾಜಮಾನರವರಲ್ಲದೆ ಕಾಣೆನು ವಸುಧಾಮಂಡಲದಿ ॥
ಪೂಜಿಸುವಾ ವಿಷಯದಿ ಮಲ್ಲೇಂದ್ರ ಮ
ನೋಜಯಾಜ್ಞೆಯಿಂ ಸ್ಥಿರಚಿತ್ತದಿ ನೋ
ಡೀ ಜಗತೀತಳವರಿಯಲ್ಕೀರ್ವರೊಳಲ್ಲದೆ ಸಮಗಾಣೆ ॥೮೬॥

ಅಷ್ಟವಿಧಾರ್ಚನೆ ಷೋಡಶವಿಧವಾ
ದಿಷ್ಟುಪಚಾರವಿದೆಂಬರು ಮಿತಿಯಿಂ
ಶಿಷ್ಟ ಶಿವಾರ್ಚಕ ಶ್ರೀ ಮಲ್ಲೇಂದ್ರ ಮನೋಹರನೆಸಗುವರ ॥
ಅಷ್ಟಿಷ್ಟೆಂದುಸುರುವಡೆನಗದು ಬಹು
ಕಷ್ಟ ತೋರುವದು ಸೃಷ್ಟಿಯೊಳತ್ಯು
ತ್ಕೃಷ್ಟವ ನಿಷ್ಠಾಭಾವವ ಭಾವಜದರ್ಪಭಂಗ ಬಲ್ಲ ॥ ॥೮೭॥

ವೈರಾಗ್ಯೈಶ್ವರ್ಯರ ಶೀಕರ ಪದ
ಸಾರಸಯುಗಳಕ್ಕೇರಿಸಿದಾ ಮಾ
ಲೂರ ಪಲಾಶಾರಾಶಿಯ ಸುಮನೋಹಾರವ ಭಕ್ತಿಯೊಳು ॥
ಹಾರೈಸುತ್ತಲೊಂದನು ಬಿಡದಖಿಳವ
ಶ್ರೀರಂಜಿತ ಶಿವಲಿಂಗಕೆ ಕರಸರ
ಸೀರುಹದಿಂದೇರಿಸುವನು ಶಿವಗಣನಾಮಸಹಸ್ರದಲಿ ॥ ॥೮೮॥

ದಿವದಿವಸಕೆ ನೂತನವಲ್ಲದೆ ಭೂ
ಧವ ಮಲ್ಲೇಂದ್ರ ಮಹೋತ್ಸವ ಪೂಜಾ
ಸ್ತವರವ ಶಿವಭವನಾಯತ ಗಣ ಸಂದೋಹದಿ ಸುವಿನೋದ ॥
ನವನವಭೋಜನ ಬಹುಗಣತೃಪ್ತಿಯ
ಹವಣಿಸಬಾರದು ತೀರದು ವರ್ಣಿಸು
ಶಿವಲೀಲಾವಿಗ್ರಹ ಸುಂದರ ಮಲ್ಲೇಂದ್ರ ಮನೋದಯವ ॥ ॥೮೯॥

ಈ ಪರಿ ತಿಂಗಳು ನಡೆದುದ ಪಡೆದುದ
ಶ್ರೀ ಪುಣ್ಯವ ಶ್ರೀಫಲದಳವೇರಿಸು
ವಾ ಪರಮಾರ್ಥ ಸುಖವನುತ್ಸಕಂದನನಾರತ ನೂತನವ ॥
ಗೋಪಕೇತನನು ಬಲ್ಲನು ಮಲ್ಲ ಮ
ಹೀಪನಿಕೇತನದೊಳು ಗಣಯುತ ಚರ
ರೂಪದಿ ನೆಲಸಿಹನಲ್ಲದೆ ವರ್ಣಿಸಲಕ್ಕುಮ ಜಡಮತಿಗೆ ॥೯೦॥

ಮೃಡರೂಪರ ಚರಣಾಂಭೋಜಾತಕೆ ।
ಬಿಡದೇರಿಸಿದಾ ಬಿಲ್ವದಳಗಳನು
ಪೊಡವಿಯಾಣ್ಮತಾನೇರಿಸಿ ತೀವ್ರದಿ ಫಲಪದವ ।
ಪಡಕೊಂಬುವದೇನಂದೆ ನಿರಂತರ
ದೃಢದಿಂದೆಸಗುವ ಶಿಷ್ಟಾಚಾರವ
ಬಿಡದೊಡಗಿಪ ಪುಣ್ಯಾತ್ಮಗೆ ಶಂಕರ ಕೊಡುವುದನದನರಿಯೆ॥ ॥೯೧॥

ಶಶಿಧರರೂಪದೊಳಸಮಾನಕ ಪದ
ಬಿಸಜವನರ್ಚಿಪ ವಿಷಯದಿ ತನ್ನಯ
ವಿಷಯದ ಗಿರಿಗಂಹರಕಾನನದೊಳು ವನದೊಳು ಜನಿಸಿರ್ದ ॥
ಕುಸುಮಗಳೆಲ್ಲವ ಪೂಜಾಕಾರ್ಯಕೆ
ವಸುಧಾವಲ್ಲಭ ತರಿಸು ಧರಿಸುವ
ವಶಗತಲೋಕರ ಪಾವನಗೊಳಿಸುವ ತಿಳಿಸುವ ನಿಜಸುಖವ ॥ ॥೯೨॥

ಶ್ರಾವಣಮಾಸ ವಿಶೇಷದಿ ಮಲ್ಲಮ
ಹೀವರನೆಸಗುವ ಕೀರ್ತಿ ದಿಗಂತದಿ
ತೀವಿರೆ ಮಾಹೇಶ್ವರರು ಮಹೋತ್ಸವದಿಂದ ನಾಲ್ಕು ಕಡೆಯ
ಕೋವಿದರತುಳರು ಭಾವಿಕ ಭಕ್ತಜ
ನಾವಳಿ ಬಡಜೀವಿಗಳು ಬರಲು ಕರು
ಣಾವನನಿಧಿ ಘನದೃಷ್ಟಿಯೊಳೀಕ್ಷಿಸಿ ಸರ್ವರ ತೋಷಿಸುವ ॥೯೩॥

ಕೂಡಿಹ ದಶಸಾಹಸ್ರಕೆ ಭೂವರ
ಮಾಡಿಸಿ ಲಿಂಗಾರ್ಚನೆಯನು ಮೇಲೆಯು
ನೀಡಿಸಿದನು ನಾನಾ ವಿಧ ಪಕ್ವಾನ್ನಗಳಿಂದಲಿ ತಣಿಸಿ ।
ಬೇಡ ಬಂದವರನೊಂದುಗೂಡಿ ಮಾ
ತಾಡದಂತೆ ಮರುದಿವಸದಿ ತನ್ನಯ
ಪ್ರೌಢಕುಮಾರರ್ವೆರಸಿ ಕೊಡಲ್ ಮುದವಟ್ಟುದನೇವೇಳ್ವೆ ॥೯೪॥

ತನಗಿಂದದೀಕಾತ್ಮಜರು ಕೊಡಲಿ ಬಡ
ಜನವನು ನೋಡಲಿ ಮಾಡಲಿ ದಾನವ
ನೆನುತಲಪೇಕ್ಷಿಸಿ ಸುತರಾನನ ಚಂದಿರಗಳ ಕಾಣುತ್ತ
ವನನಿಧಿಯಂದದಿ ಪೆಚ್ಚುವ ಮೆಚ್ಚುವ
ಜನಕಗಿಂದ ಕೊಡುವೆಡೆಯೊಳು ನಡೆಯೊಳು
ಮನುಜಾಧಿಪ ಮಲ್ಲೇಂದ್ರನ ಪುಣ್ಯಾಕೃತಿಗಳಾತ್ಮಭವರು ॥೯೫॥

ವಸನರಾಶಿ ಇಕ್ಕಲದೊಳಗೊಟ್ಟಿಹ
ವಸಮಾನರ ಮುಂದೆಸೆಯೊಳು ಸುರಿದಿಹ
ಮಿಸುಪ ರೌಪ್ಯಖಂಡಗಳು ತಾಮ್ರಖಂಡಗಳಖಂಡರಾಶಿ ॥
ಶಿಶಿಕುಲರತ್ನರು ತಮ್ಮ ಹಸ್ತ ಸಾ
ಹಸದೊಳು ಪಿಡಿಪಿಡಿದಷ್ಟೀವರು ಮಾ
ನಸಭವರೂಪರು ಮಂಗಳಕಾಯರು ದಣಿವನೆಣಿಸದಿಹರು ॥೯೬॥

ನಾರೀಜನ ಹಳೆಸೀರೆಯನುಟ್ಟು ಕು
ಮಾರರ ಕೈವಿಡಿದಾನತರಾಗಿ
ಲೀ ರಸಾಧಿಪಾತ್ಮಜರು ನೋಡುತಾನಂದಿಸಿಯವರವರ ॥
ತಾರತಮ್ಯಾಸಾರವನರಿದಿತ್ತು ದ
ಯಾರಸಗರೆವುತ ದಕ್ಷಿಣೆಯಿಂದವ
ರಾರೈವುತ ವಿತರಣದಲಿ ಕರ್ಣನ ಮರೆಸಿದವರವರಿಳೆಗೆ ॥೯೭॥

ಕೊಡುವೆಡೆಯೊಳಗೆಡೆತಡೆ ಮುನ್ನಿಲ್ಲವು
ಮೃಡ ತನ್ನಯ ಮತಸಾಗರವರ್ಧನ
ಕಡುಪನನಿತ್ಯನೆನಿಸಿ ನಿರ್ಮಾಣವ ಮಾಡಿಹನೆಂಬಂತೆ
ಪೊಡವಿಯೋಳಿತನ ಕೀರ್ತಿ ದಿಗಂತರ
ನಡೆದುದು ಬಹುದಿಗ್ಭಾಗದಿಂದ ಬಂ
ದಡೆ ನೋಡುತಲವರಿಷ್ಟವನೀವ ನರೇಂದ್ರ ಶಿರೋರತ್ನ ॥೯೮॥

ಘನದೋಲ್ ಫಲತೃಣಗಳನೋಡದೆ ಸು
ಮ್ಮನೆ ಸಾಧಾರಣ ಕರೆವಂದದಿ ಕರ
ವನಜಾತವು ಮಾನಿಗಳನು ದೀನರ ನೋಡದೆ ಸಮವೆಂದು ॥
ಧನದನಾಗಿ ದಾನದಿ ರಾಧೇಯನ
ನೆನಹ ಮಾಡಿ ಸರ್ವರ ಸಂತೋಷಿಸಿ
ಜನಪದವನು ಚಿದ್ಘನಪದಸಾಧನಗೊಳಿಸಿದ ಮಲ್ಲೇಂದ್ರ ॥೯೯॥

ಚತುರ್ದಶ ಕರ್ಯಾತದೊಳಿಹ ವಳಿತದ
ಶತಕತ್ರಯ ಷಷ್ಠಿಯ ಮಿತಯಾಗಿಹ
ಯುತ ಗ್ರಾಮಗಳಿಗೆ ಶ್ರಾವಣಮಾಸ ಮಹಾಪೂಜೆಗೆ ನೀವು
ಸಿತಕಂಧರ ಪ್ರೀತ್ಯರ್ಥ ಪ್ರಯತ್ನದಿ
ಶತಪತ್ರಾದಿ ಕುಸುಮರಾಜಿಯ ಮಾ
ರುತವೇಗದಿ ಮಾಲೂರಲಕ್ಷವನು ತರುವದು ತಡೆಯದಲೆ ॥೧೦೦॥

ಎನುತ ನಿಯಮಿಸಲಾ ತೆರ ಪಳ್ಳಿಯ
ಜನ ಮುಖ್ಯಾರ್ಥವಿದೆಂದು ಭಕ್ತಿಯೊಳು
ವನಗತಪುಷ್ಪಗಳನು ವನಜಗಳನು ಬಿಲ್ವಪಲಾಶಗಳ ॥
ತನತನಗೆಯು ತಲೆಯೊಳು ಪೊತ್ತಾಜನ
ಜನನಾಥನ ನಿಲಯಕೆ ತಂದೊಪ್ಪಿಸ
ಲನಿತನು ನೋಡಿ ಮನೋಮಧ್ಯದಲಿ ವಿನೋದಿಪ ಭೂಪಾಲ ॥೧೦೧॥

ಕೇತಕಿಗಳು ತನ್ನಯ ದೇಶದ ಸಂ
ಜಾತವಾದವನುಳಿದನ್ಯಸ್ಥಲ
ವಾತಳದಿಂ ಬಹ ವನಿತಾಯುತ ಸಂಖ್ಯಾಸಾಮ್ಯವು ನೋಡೆ ॥
ನೂತನ ಸುಮಸಂಪೂತವ ಶ್ರೀಫಲ
ಪೂತಚ್ಛದಗಳ ಭಾರಸಹಸ್ರವ
ನೋತು ತರುವರೆಡವಿಡದೆ ಮಹಾಪೂಜೆಗೆಯವಸರದಿಂದ ॥೧೦೨॥

ಸರ್ವರು ನೋಡಲು ಧನ್ಯರಾಗಲೆ
ನ್ನುರ್ವಿಯ ಜನ ಶಿವಕಾರ್ಯದೊಳಗೆ ಗತ
ಗರ್ವರಾಗಿ ಸೇವಿಸಲಿ ಭಾವಿಸಲು ಪಾರಮಾರ್ಥ (ದ) ಸುಖವ ॥
ನಿರ್ವಾಣವ ಪಡೆಯಲಿ ನಿಷ್ಠೆಯಲಿ ಪೆ
ಸರ್ವಡೆಯಲಿ ಪೆರುತುಳಿಯಲಿಯೆನಲು ಮು
ಗುರ್ವರು ಮುಖ್ಯಪ್ರಯೋಜನವೆನುತಲಿ ಭೂಪಾಲಾಜ್ಞೆಯಲಿ ॥೧೦೩॥

ಸುರಪಾಲೋಪಮ ಸುಂದರ ಭೂವರ
ವರ ಮಲ್ಲೇಂದ್ರ ಸಭಾಸದನಕೆ ಸಾ
ದರದಿಂ ಪಡಿಗಟ್ಟುವಡೆ ಸಮಾನವ ಕಾಣೆ ಮಹೀತಳದಿ ॥
ವರ ಚಿತ್ರಾಂಬರ ಸ್ಥಣಾವೇಷ್ಟಿತ
ಸುರುಚಿರ ಚೀನಾಂಬರಗಳ ಮಧ್ಯದಿ
ಹರಿವಿಷ್ಟರದಿ ವಿನೋದಿಪ ಶ್ರೀ ಪ್ರಭುದೇಶಿಕರನು ಕಂಡೆ ॥೧೦೪॥

ಜಂಭದ್ವಿದ್ವಿಭವ ಪ್ರವಿರಾಜಿತ
ರಂಭಾಸ್ತಂಭ ಶತಕಗಳ ಫಲ ಭಾ
ರಂ ಭರದಿಂ ತಾಳಿಹವ ತರಿಸಿ ಕಟ್ಟಿಸಿದನು ಮಂಟಪವ ॥
ಶಂಭು ಸಮಾನರ ಪೂಜೆಗೆಯೊದಗಿದ
ವಂಭೋಜಾದ್ಯಾಮೋದಕೆ ಮುಸುಕಿಹ
ಬಂಭರ ರಾಜಿಯು ಬಲಭಿದುಪಲಮಣಿಯಂತೆ ವಿರಾಜಿಸಲು ॥೧೦೫॥

ಬಾಳೆಯಗಿಡಗಳು ಧರಣೀಸತಿ ತಾ
ಬಾಳಿಸಿದಳು ಬಹುಶ್ರಮದಿಂದಲಿ ಕರು
ಣಾಳು ಮಲ್ಲಭೂಲೋಲ ಫಲಾವಳಿಯನು ಸಂತತಭುವಿಗೆ ॥
ಕೇಳಿ ಕೊಡುವೆವೆ [ಂ]ದೈತಂದವೊ ಫಲ
ದಾಳಿದ ಗೊನೆಗೈ[ಗ]ಳ್ ಬಾಗಿರೆ ವಂ
ಶಾಳಿಯ ಫಲವಾಗಲು ಪರಿಣಾಮಿಪ ಬಯಕೆಯು ತಮಗೆಂದು ॥೧೦೬॥

ಧರಣೀವರ ತದ್ಧರಣಿಯ ಮಕ್ಕಳು
ಮ[ರಿ]ಗಳು ಸೇವೆಯ ಮಾಡಲಿ ನೋಡಲಿ
ಯುರಿಗೊಂಬುವ ಪರಶುವಿನುಪಟಳವನು ನೀಗಲಿದೀಗೆನುತ ॥
ಕರುಣಾರಸ ಸಂಜನಿಸುತ ವಂಶೋ
ತ್ಕರವನು ತರಿಸುತ ಬಾಳೆಯ ಗಿಡಗಳ
ಮರೆಯೊಳಗಡಗಿಸಿ ಕಂಟಕಗಳಿಗಲರುಗಳನು ಸೇರಿಸುತ ॥೧೦೭॥

ಕೇತಕಿಗಳು ಕಂಟಕಿಗಳು ಕಂಟಕ
ಭೀತಿಯ ಬಿಡಲೆಂದಲ್ಲಿ ಸೇರಿಸುತ
ನೂತನವೆನಿಸಿದ ನಾನಾವಿಧ ಪುಷ್ಪಾಳಿಗಳಿಂದಿಳೆಗೆ
ಈ ತೆರ ಕುಜಗಳ ನೋಡಿದುದಿಲ್ಲ ಪು
ರಾತನದೊಳು ಕೃತ ಲೀಲಾಚರ್ಯವ
ಭೂತನಾಥ ತನ್ನಯ ಪೂಜೋತ್ಸವವೀತನಿಂದ ಕೊಂಬ ॥೧೦೮॥

ಕ್ಷೋಣೀವರನಾ ದಿವಸದಿ ಚರಪರ
ಕಾಣತಿಯಿಲ್ಲದೆ ಧರಿಸಿದ ಬಿಲ್ವ
ಶ್ರೇಣಿಯದಕ್ಷೋಹಿಣಿ ಸಂಖ್ಯಕೆ ಸಮಗಾಣೆ ಪದ್ಮವೆನಲು ॥
ಮಾಣದೆ ನೋಡಿದರಹುದೆಂಬುವ ಗೀ
ರ್ವಾಣಾಧಿಪ ರಂಭಾಯುತ ಬರಲಾ
ತಾಣದ ನಂದನವನ ಬಂದಂದದಿ ತೋರ್ಪುದು ತತ್ಸದನ ॥೧೦೯॥

ಶಾತಕುಂಭಗರ್ಭನು ಶಪಥದಿ ವೃಷ
ಕೇತನ ಮಸ್ತಕ ನೋಳ್ಪಡ ನಡೆಯ
ಲ್ಕಾತನು ಕಾಣದಿರಲು ಮಧ್ಯದೊಳಿವ ಕಂಡುದ ನುಡಿಯೆನಲು ॥
ಧಾತನು ಕಂಡುದು ಸತ್ಯವೆನುತ ಪುಸಿ
ವಾತನು ಕೇತಕಿ ಪಾತಕಿ ತಾ ನುಡಿ
ದಾತಂಕತೆ ಪಾಶದೊಳವ ಬಂಧಿಸಿಯುವ ಶವ ಕಟ್ಟಿಹರು ॥೧೧೦॥

ಹರಪೂಜಾರ್ಥಕೆ ಜನಿಸಿದ ಪೂಗಳು
ಸ್ಮರಶರವೈರವ ನೀಗುವ ಕಾರಣ
ಚರಪದ ಪೂಜೆಗೆ ಗಿರಿಗಂಹರ ಕಾಂತಾರದೊಳಿರುತಿರುವ ॥
ಪರಿ ಪರಿಯಲರ್ಗಳ ನೋಡುತ ಧರಣೀ
ವರ ಮಲ್ಲೇಂದ್ರನು ಸರಗೊಳಿಸುವ ಸಾ
ದರದಿ ಚಂಡುಗಳ ಕಟ್ಟಿಸಿ ನಿಟ್ಟಿಸುವಂಗರಿದಾಗಿಸುವ ॥೧೧೧॥

ಸಮಯವಲ್ಲದಾ ಸಮಯದಿ ಸಂತತ
ಸಮಯವೆಂಬರೆಮಗೆಂದು ನೊಂದಿರಲ್
ಸಮಯ ಬರಲು ಸಮುದಾಯವೆರಸಿ ಶತಸಮಯವು ಸಾಲಾಗಿ ॥
ದ್ಯುಮಣಿ ಧ್ವಂತಹೀನಾಘುವ ಕಳೆಯಲ್
ಭ್ರಮಿಸಿ ಬಂದಿರಲ್ ಸಾಸಿರ ಕದಿರುಗ
ಳಮರ್ದವು ದೀಪಾಕೃತಿಗಳಂತೆ ಸುಕೃತಿಗಳ ಕಣ್ಗೆ ತೋರೆ ॥ ॥೧೧೨॥

ದಶವಿಧಧೂಪಮರಂದ ಧೂಮಮಾ
ಮಸಕದೊಳಂಬರವೆಂಬೊಲ್ ತೋರಿರ
ಲಸಮಾನದಿ ಕಟ್ಟಿಹ ಮಾಪೆಗಳಂತರದೊಳು ರಾಜಿಸುವ ।
ಬಿಸಿಗದಿರರ್ ದ್ವಾದಶರೊಂದೆಸೆಯೊಳ್
ಪಸರಿಸಿ ನಿಂದಿಹರೆಂಬೊಲ್ ನೋಟಕ
ವಿಸರಕೆ ತೋರ್ಪುದು ಚಿತ್ರತೆಯಿಂ ಮಲ್ಲೇಂದ್ರಕೃತಕದಿಂದ ॥೧೧೩॥

ಸಿಂಗರಿಸಿದ ಮಂಟಪ ಮಧ್ಯದಲಿ ಭು
ಜಂಗಮಭೂಷಣ ಜಂಗಮವೇಷವ
ನಂಗೀಕರಿಸೇರಿರಲು ಪ್ರಮಥಗಣಂಗಳು ತಿಳಿದಾಗ ॥
ಪುಂಗವರೆಡೆವಿಡಿದೇರಿದ ಮಣಿಪು
ಷ್ಪಂಗಳ ದಿವ್ಯವಿಮಾನವೆನಲು ಚಿ
ತ್ರಂಗರೆವಾಮರ ಜಂಗುಳಿ ನಿಂದ ಗಣಂಗಳೊ ಹರಗಣರೋ ॥೧೧೪॥

ಮುಂದೆಸೆಯಲಿ ರಂಜಿಸುವ ವಿನೂತನ
ದಿಂದ ರಂಗವಲ್ಲಿಯ ರಚನೆಯೊಳು ಪು
ರಂದರ ನಂದನ ದಿವ್ಯಲತಾಕೃತಿಯೆಂದೆಂಬಂದದಲಿ ॥
ಒಂದೊಂದುಪಮೆಗೆ ತಂದರೆ ಸಾಲದು
ಸುಂದರನಾಸ್ಥಾನದಿ ಕರ್ಪೂರಮ
ರಂದಗರೆವ ಶತದೀಪೋತ್ಸವಗಳು ತೋರ್ಪವನೇನೆಂಬೆ ॥೧೧೫॥

ಏರಿಸಿದಲರುಗಳಗಣಿತವಗ್ರದಿ
ತೋರುವ ಸುಮವಾರಮ ಸುಮನೋವರ
ಮಾರಮದಾಪಹ ಪೂಜಾಪ್ರಾಂತಕೆ ಪುಷ್ಪಾಂಜಲಿಗೆಂದು ॥
ಸೇರಿಸಿರುವ ತೆರ ತೋರಲ್ ವರಮಂ
ದಾರ ಬಕುಳ ಕರವೀರ ಕುಂದ ಕ
ಲ್ಹಾರ ಚಂಪಕಾದಿಗಳವು ತೋರ್ಪುವಪಾರ ಶಂಕೆಯಿಂದ ॥೧೧೬॥

ನಾರದ ವೀಣಾರವ ತುಂಬರ ವರ
ಸಾರಗಾನ ಮಾಧುರ್ಯಕೆ ಮೋಹಿಸಿ
ಚಾರುಭೃಂಗಿ ನಾಟ್ಯವನಾಡಿದ ತೆರ ತೋರುವುದಲ್ಲದಲೆ ॥
ಬೇರೊಂದುಪಮಿಸಬಾರದು ತೋರದು
ಭೂರಮಣ ಶ್ರೀ ಮಲ್ಲೇಂದ್ರನ ಕರು
ಣಾರಸಪೂರ ಪ್ರವಾಹದಿ ಮೋಹದಿ ಭಾವಿಕರಿಗೆ ತೋರ್ಕು ॥೧೧೭॥

ಹಾವಭಾವ ವಿಭ್ರಮ ಸುವಿಲಾಸದ
ರಾವನರಿದು ಭರತಾದ್ಯಭಿನಯ ಸಾ
ರಾವಗತ ಶ್ರೀ ಸೌಂದರ್ಯಾಕೃತಿಯಾಂತ ರೂಪವೆತ್ತು ॥
ಭಾವಜಾತ ಮಂತ್ರಾದೀದೇವತೆಯ
ರೀ ವಸುಧಾತಳ ಕಿಳಿದರೆನಲ್ ರಂ
ಭಾ ವಧುಗಳ್ ನರ್ತಿಸುವರೆನಲ್ ನರ್ತನ ವಿಭ್ರಾಜಿಪುದು ॥೧೧೮॥

ಭಾರತಿಸಮ ಸುಕುಮಾರತೆಯರು ಪಿಡಿ
ದಾರತಿಗಳನಷ್ಟಿಷ್ಟೆಂದುಪಮಿಸ
ಬಾರದು ಬೆಳಗುವರಿನಶತಕೋಟಿ ಕರಾವಯವಾಂತಂಗೆ ॥
ವಾರಿಧಿಯುದಕವು ವಾರಿಧಿಗೆಂಬೋಲ್
ಸೂ (ರ್ಯ)ಗೆ ದೀಪವ ಬೆಳಗಿದ ತೆರ ಮಹಿ
ಮಾರಂಜಿತರಡಿದಾವರೆಗಾ ನಾರಿಯರು ಭಕ್ತಿಯಿಂದ ॥೧೧೯॥

ಭಾರಿಯ ಭೇರಿಯ ನಾದವು ಕರ್ಣಕ
ಠೋರ ಕರಡಿವಾದ್ಯವು ಕೈತಾಳದೆ
ಬಾರಿಪ ಸಾಲ್ವಿಡಿದೇಕಾವರ್ತಿಯೊಳಾರಾವಂಗೊಳಿಪ ॥
ಭೂರಿ ಸಷೇಳ ನಿನಾದವದೊಂದೇ
ಬಾರೆ ಬಾಜಿಸಲು ನಾದಗಳೇಕಾ
ಕಾರವಾದವೆಂಬೋಲ್ ತೋರುವ ಗಂಭೀರತೆಯಾ ಘನತೆ ॥೧೨೦॥

ಘನಸಾರದಿ ಕೃತ ಕಲಶಾರತಿ ನೂ
ತನ ಚಟಕಾರತಿ ಸ್ವರ್ಣಾರತಿ ಸೊಂ
ಪಿನ ಮಣಿಮಯದಾರತಿ ಶತಸಂವಿದ ವರ್ತಿಕಾರತಿಗಳ ॥
ತನತನಗೆಯು ಬೆಳಗುವರಗಣಿತ ಚಿ
ದ್ಘನ ದಿನಕರ ಸಂಕಾಶ ಮಹೇಶಗೆ
ಮನಸಿಜಮದನಾಶಗೆ ಮಂಜುಳವೇಷಗೆ ಮಹಿಮಾರ್ಣವಗೆ ॥೧೨೧॥

ಪಾಡುವ ಮಂಗಳ ಮಾಡುವ ಸ್ತೋತ್ರವ
ನಾಡಲು ನೋಡಲು ಕಂಗಳು ಸಾಲವು
ಕೂಡಿಹ ಮಾಹೇಶ್ವರ ಸಮುದಾಯವು ಜಯರವಗೊಡುತಿಹರು ॥
ಆಡುವ ಪಾತ್ರವಖಿಲವಾದ್ಯಗಳಿಂ
ದೀಡಿರಿದಿಹ ನಾದಾತ್ಮಕನಂ ಕೊಂ
ಡಾಡುವ ಪಾಠಕ ನೆರವಿಯ ಫಲಪದ ಬೇಡುವರೊಂದೆಸೆಯ ॥೧೨೨॥

ರಾಜಕಳೆಯನಂಬರಕಿಡಲಾ ದ್ವಿಜ
ರಾಜ ಕ್ಷಯವನು ಕಳೆವ ನೆವದಿ ಬಂ
ದೀ ಜಗತೀವರನಂತರಸೌಧದಿ ರಾಜಗುಂದದಾಗಿ
ರಾಜಿಸಲಾ ತಾರಾಗಣ ಪರಿಪರಿ
ಭೂಜವನೇರಿದ ತೆರದಲಿ ಕುಸುಮಸ
ಮಾಜ ತೋರಿದವು ಬೀರಿದವಖಿಳರ ಕಣ್ಗೆ ರಮ್ಯವೆನಿಸಿ ॥೧೨೩॥

ಮಾಡಿಹ ದೋಷವ ಕಳೆಯಲ್ ಸಿತಕರ
ಮೂಡಿಹ ಮೂರ್ದ್ನಿಯೊಳಿಟ್ಟ ಮಹೇಶಾ
ರೂಢ ಜಂಗಮಾಕೃತಿಯಾಗಿಹ ಸೌಂದರ್ಯವನು ತನು
ನೋಡಿಯಗಲದಂಶುವ ಚಲ್ಲುತ ಪರಿ
ದಾಡದೆ ರಾಜಾಲಯವದು ತನ್ನಯ
ಬೀಡೆನಿಸಿದ ಧವಲಾಂಬರ ಧೌತ ಪರಿಸ್ತರಣದಿ ಮೆರೆವ ॥೧೨೪॥

ಶಶಿ ಮೂಡದದ ಮುನ್ನವೆ ಪದಪೂಜಾ
ವಿಷಯಕೆ ತೊಡಗಿದ ಶಿಷ್ಟರನಿಷ್ಟರ
ನಸಮರ ನೋಡದಿರಲು ಜಗದಂಬಕ ಮಿತ್ರನೆಂಬಯೆನ್ನ
ಪೆಸರಿಗೆ ಕುಂದೆನಿಸದೆಯೆನುತಲಿ ಸಾ
ರಸಬಾಂಧವನುದಯಾದ್ರಿಯೊಳಗೆ ರಾ
ಜಿಸಿದನು ತನ್ನ ಕಿರಣವನು ಚೆಲ್ಲಿದ ಚರವರ ಚರಣದಲಿ ॥೧೨೫॥

ಸೂರ್ಯೋದಯವಾಗಲು ಪದಪೂಜಾ
ಕಾರ್ಯ ತೀರದಾನಂದದಿ ತೊಳಗುವ
ತೂರ್ಯತ್ರಯ ಪುಷ್ಪಾಂಜಲಿ ಸಂಭ್ರಮ ಮಂಗಳರವಮೆಸೆಯೆ ॥
ಶೌರ್ಯಾನ್ವಿತ ಭೂಪಾಲನ ಚಿತ್ತದ
ಸ್ಥೈರ್ಯವಹರ್ನಿಶಿ ನಿದ್ರಾರಹಿತಾ
ದಾರ್ಯಧಿಕ ಗಾಂಭೀರ್ಯ ಚರ್ಯವದಾವನಿಪರೊಳಗೆ ॥೧೨೬॥

ಏಕಾದಶ ರುದ್ರ ಪ್ರೀತ್ಯರ್ಥ
ಕೇಕಾದಶಶತ ನಾರಿಕೇಳಗಳ
ನೇಕಕಾಲದೊಳು ತ್ರ್ಯಂಬಕಗರ್ಪಿಸಲಾ ಕಾಯ್ಗಳನೊಡೆದು॥
ನಾಕಕಡೆಯ ತಜ್ಜಲವದಕಿಂದಲಿ
ಭೂಕಾಂತೆಯು ಮಧುರಾಂಬುವಿನಿಂದಿ ದಿ
ವೌಕಸ ಸುಖವನು ಕಂಡೆನೆನುತ್ತಚಲಾಮೋದದೊಳಿಹಳು ॥೧೨೭॥

ಶ್ರಾವಣಪೂರ್ಣ ಮಹಾಪೂಜಾಕ್ರಮ
ಶ್ರೀ ವಿಲಾಸದಿಂದ ತೀರಲು ತೋರಲು

ಭೂವಲ್ಲಭ ಚರಪದಪೂಜಾವಿಧಿಗಾವರಿಸುವ ಮತ್ತೆ
ಸಾವಧಾನ ಚಿತ್ತವ ತಾಳುತ ಸ
ದ್ಭಾವದಿ ಭಜಿಸುವ ಭಾಲಾಂಬಕನಂ
ಕೇವಲ ಜಂಗಮವೆಂಬೀ ಚಿತ್ಸುಖವಾವಗಿದೊಪ್ಪುವದೇ ॥೧೨೮॥

ಗುರುವಾರದಿ ಚರಗುರುವಾರವ ಸ
ತ್ಕರಿಸಿ ದಿವ್ಯವಸನಂಗಳಿಂದಲಾ
ದರಿಸಿ ಪುರವ ಸಿಂಗರಿಸಿದನಮರಾವತಿಯೆನೆ ವೀಥಿಯನು
ಪರಿ ಸಮ್ಮಾರ್ಜನಗೈಸಿ ತೋರಣವ
ನಿರದೆ ಕಟ್ಟಿಸುತ ನಿಟ್ಟಿಸುತಲಿ ಶ್ರೀ
ಕರ ಪ್ರಭುದೇವರ ಮೆರವಣಿಗೆಯ ಸಂಭ್ರಮಗೊಳಿಸುತ ನೃಪನು ॥೧೨೯॥

ಸಮಧಿಗತಾಖಿಲ ರಾಜ್ಯಭಾರ ಸಂ
ಭ್ರಮವು ಸದಾಶಿವಬಲವೆಂದೀ ಚರ
ಸಮುದಾಯದ ಸೇವಾ ವಿಶ್ವಾಕೃತಿ ತಾಳಿದ ಶಿವಸೇನಾ
ನಮಗೆಂಬುವ ರಾಜೋಪಚಾರ ಸಾ
ಧು ಮನೋಹರ ಪ್ರಭುದೇಶಿಕವರ್ಯರ
ಸಮದಾಲಂಕೃತ ಗಜಪುಷ್ಪಕದೊಳು ಕುಳ್ಳಿರಿಸಿದನವರ ॥೧೩೦॥

ಭಾರಿಯ ಭೇರಿಯ ಹೇರಿಹ ಸಮ್ಮದ
ವಾರಣದೊಳು ತೋರಣಗಟ್ಟಿಹ ಶೃಂ
ಗಾರವೀಧಿಯೊಳು ವಾರುವಗಳ ನಡೆಸುವನುಚ್ಚೈಶ್ರವಕೆ ॥
ಸಾತಿ ಸಮಾನತೆಯಿಂ ಬಹು ಛತ್ರವಿ
ಹಾರ ಚಾಮರಾಂದೋಳಿಕೆಯಲಿ ಚರ
ವಾರವ ಮೆರೆಸಿ ಕುಮಾರರ್ವೆರಸಿ ವಿನೋದದಿ ಭೂಪಾಲ ॥೧೩೧॥

ಮತ್ತೆ ಮದಸ್ತಂಬೇರಮ ನಾಲ್ಕವ
ನುತ್ತಮ ಮಣಿ ಪುಷ್ಪಕವೆನೆಯದರೊಳು
ಚಿತ್ತಜವಿಜಯ ವಿರಕ್ತಿ ವಿಭವ ವಿಭ್ರಾಜಮಾನರಾದ ॥
ವೃತ್ತರ ಹತ್ತಿಸಿ ಸತ್ತಿಗಿ ಮೊತ್ತವ

ರೋತ್ತಮಾಂಗದೊಳಗಿತ್ತರದಿಂ ಕಳೆ
ಬಿತ್ತರಿಸಿದುದು ಮಹತ್ತಾಗಲಿ ಜನಪಾಲಗೆಂಬರವರು ॥೧೩೨॥

ಕರಿತುರಂಗರಥ ಪತ್ತಿ ಚತುರ್ಬಲ
ಪರಮ ವಿಭವ ಪರಮೇಶ್ವರ ಕರುಣಾ
ಕರದಯಮಾಡಿದರ್ಶಂಕರ ರೂಪರೆ ಇವರೆನುತಲಿ ತಿಳಿದು ॥
ಧರಣೀಶ್ವರ ಭೂತರುಣಿಗೆ ತನ್ನಯ
ಚರಣದರ್ಶನವ ಕೊಡುತ ನಡೆದನಾ
ದರದ ಭುಕ್ತಿಪೂರ್ವಕದಿ ಮಾನ್ಯೆಯರ ಗಡಣದ ಗಮಕದಲಿ ॥೧೩೩॥

ತಾರಾವರಧರ ರೂಪರ ಭೂವರ
ವಾರಣವೇರಿಸಿ ಮೆರವಣಿಗೆಯನು ಆ
ಪಾರೋತ್ಸವರಿಂದೆಸಗುವನೆಂಬುದ ದೂರುವನೆವದಿಂದ ॥
ಸಾರಿ ಸದಾಶಿವಗರುಹುವ ಕಾರಣ
ವೇರುತ ಮೇಲಕೆ ಮಾರುತಪಥದಲಿ
ಯಾರುತ ಬಾಣಗಳಾಗಿ ಕಿಡಿಗಳನು ಕರೆವುತ ಬರುತಿಹವು ॥೧೩೪॥

ನಾನಾವಿಧ ಮದ್ದಿನ ಚಿತ್ರತೆಯ ಸ
ಮಾನತೆಯನು ನಾನರಿಯೆನೆಲ್ಲಿ ಸಂ
ಧಾನಗೊಳಿಸಿದ ಲತಾವೇಷ್ಟಿತ ಭೂಜಾತಗಳೆಂಬಂತೆ ॥
ತಾ ನೆರೆ ರಂಜಿಸೆ ಸರಣಿಯೊಳಗೆ ಸರ
ಸಾನುರಾಗ ಪಾವಕಯೋಗದಿ ತೋ
ರ್ಪಾನರೇಂದ್ರ ಶಿವಸಮಯಾರ್ಣವಚಂದ್ರನ ವ್ಯಾಜದಿ ಭರದಿ ॥೧೩೫॥

ಧರಣೀಶ್ವರನೆಸಗುವ ಚರಗುರುವರ
ಮೆರವಣಿಗೆಯ ಸತ್ಕಾರ್ಯವ ನೋಡ
ಲ್ಕುರವಣಿಸುತ ನಾಲ್ದೆಸೆಯಿಂ ಬಂದಿಹ ಜನರಿಗೆ ತನ್ಮಾರ್ಗ ॥
ಹರವಿಯು ಸಾಲದಿರಲು ತೌರ್ಯತ್ರಯ
ಭರಿತ ನಿನಾದ ವಿನೋದ ಸಮೇಳದ
ಪರಿರಂಜಿತ ರವ ಭೇರಿಧ್ವಾನನಿನಾದ ಪೂರ್ಣಮೆಸೆಯೆ ॥೧೩೬॥

ಹಿಡಿದಿಹ ಶತ ದೀವಟಿಗೆಗಳೆತ್ತಲು
ಕೊಡುವವು ಕಾಂತಿಯ ಸುತ್ತಲು ಸಂಭ್ರಮ
ದೊಡನೆ ಕುಮಾರರು ನಡೆವರು ಕಾಲ್ನಡೆಯೊಳು ಭೂಪನ ಕೂಡೆ ॥
ಕಿಡಿಗೆದರ್ವ ವು ಬಿರಿಸಾಗಿರಲವನಿಪ
ಪೊಡವಿಯ ನಿಮ್ನದೊಳಿರಿಸಲೀಶ್ವರನ
ನಡುಗಣ್ಣಾಹುತಿಗೊಂಬವು ಕೊಂಬವು ಕೊಡುವವು ಶೋಭೆಯನು ॥೧೩೭॥

ಹೇಮಭೂಮಿಧರ ಧರ್ಮ ರಜತಧರ
ಧಾಮ ಮಹೇಶ್ವರ ರೂಪರ ಮೂರ್ದ್ನಿಯೊ
ಳೀ ಮಹೀಶ ಚಾಮೀಕರ ಕಾವ್ಯ ಸುಮಂಗಳ ಪಾಠಿಸುವ ।
ನೇಮದಿ ಫಲಗಳ ರಾಶಿಗಳನು ಕರ
ತಾಮರಸದಿ ತೂರುವ ಬೀರುವ ಸು
ಕ್ಷೇಮದಿ ಗ್ರಾಮದಿ ಬಾಳಲಿ ಎನ್ನಯ ರಾಷ್ಟ್ರದ ಜನವೆನುತ ॥೧೩೮॥

ದೇಶಕೋಶ ಸುವಿಶೇಷವಾಗಿ ಸಂ
ತೋಷದಿ ನಿರ್ವಿಘ್ನದಲಿ ನಿರುತಮಗ
ಜೇಶಾರ್ಚನೆಯಲಿ ತತ್ಪರರಾಗಿರಲೆಂಬಭಿಲಾಷೆಯದು ॥
ವಾಸವ ವಿಭವ ವಿಲಾಸದ ಮಲ್ಲ ಮ
ಹೀಶನ ಚರ್ಯ ಮಹೇಶನೆ ಬಲ್ಲ ಸ
ದಾಶಿವ ಪೂಜಾಲೋಲನ ವಿಸ್ಮಯಲೀಲಾಸಂಭ್ರಮವ ॥೧೩೯॥

ರಾಜಧಾನಿಯಿಂ ರಾಜನು ಪೊರಡಲು
ರಾಜ ವೀಥಿಯೊಳು ರಾಜಿಸುವಮಲ ಸು
ರಾಜ ಜ್ಯೋತಿಗಳೀ ಜಗತೀವರನಾಜ್ಞಾ ಮಾತ್ರದಲಿ ॥
ಈ ಜಗಕತಿ ಶೋಭಾ ಜನರಂಜನೆ
ಮಾಜದಲೀವೆವು ಭೂಜದಿ ಹಸ್ತ ಸ
ರೋಜದಿ ಪಿಡಿಯಲ್ ತೇಜದಿ ಮೆರೆದವು ಸೋಜಿಗವಾಗಿಸುತ ॥೧೪೦॥

ಗುರುವಾರದಿ ಗುರುವಾರ ಪೇಟೆಯೊಳು
ಗುರುಕರುಣಾ ಬಲದಿಂದಲಿ ಶೋಭಾ

ಕರ ಭೂವರ ಚತುರಂಗ ಬಲಾಯತ ಪರಿ ಪುರಜನರಿಂದ ॥
ಗುರು ಸಿದ್ದೇಶ್ವರನಿರುವಾ ಸ್ಥಾನಕೆ
ಬರುವಲ್ಲಿಗೆ ತನ್ನಯ ಬೆಳಗನು ಭಾ
ಸ್ಕರ ತೋರಿಸುವನೆನುತಲುದಯಾಚಲವಡರಿದನಿನನಾಗ ॥೧೪೧॥

ನಿಶಿಯಲಿ ನಿದ್ರಾವಿರಹತವಾಗಿಹ
ಪೆಸರಿಲ್ಲವು ಪೆರ್ಮೆಯ ಬಿಡದಾನಂ
ದಿಸುವ ಪೌರಜನ ಬರಲಿ ನೋಡಲಿ ಕೂಡಲಿಯೆಂದೆಂಬ ॥
ವಿಷಯವದಲ್ಲದೆ ಪ್ರತಿಪದದಲಿ ತೋ
ರಿಸುವ ವಿಚಿತ್ರವ ಪಾತ್ರವ ಸ್ತೋತ್ರ
ನೆಸಗುವ ಪಾಠಕರನು ನೋಟಕರನು ಕಾಣುತ ಹಿಗ್ಗುವನು ॥೧೪೨॥

ವೀರಶೈವಮತವಾರಿಧಿ ವರ್ಧಿಪ
ಕಾರಣಕೀಶ್ವರ ನಿತ್ಯಪೂರ್ಣ ಸುಕ
ಳಾರಂಜಿತ ಚಂದ್ರನ ನಿರ್ಮಾಣವೊ ಶಿವಗಣರೈದುವಡೆ ॥
ದಾರಿಯೊಳೆಮಗಾಧಾರವಂಶ ವಿ
ಸ್ತಾರವಿರಲಿ ಭೂಪಾಲರೆನಿಸಲಿ ಪು
ರಾರಿಗಣವ್ರಜವಿರಿಸಿದ ವೀರಾಧಿಪನೊ ವಿಚಾರಿಪೊಡೆ ॥೧೪೩॥

ರೂಢಿಯೊಳಿಹ ಸದ್ಭಕ್ತರ ಮುಕ್ತರ
ಮಾಡಲಿ ನೋಡಲಿಕೀಶ್ವರನೈತರೆ
ಕ್ರೀಡಾವನವನು ಮಾಡಿಸಲಾ ಗುರುಸಿದ್ಧೇಶ್ವರ ಬಂದು
ನಾಡೆರೆಯನ ಭಕ್ತಿಯ ಕೈಕೊಂಡಾ
ಕಾಡನು ವನವೆನಿಸುತ ಭೂಪಾಲರ
ಪೀಡಾಹರಣಕೆ ಚೌಕಿಯೊಳಿಹನಂದಿಂದಾ ಗುರವರರ ॥೧೪೪॥

ಚರಣವು ತಮಗೆಯು ಹರಣವಾಗಿ ಚಿ
ತ್ಮರಣವಾಗಿ ತತ್ಸ್ಮರಣವೆ ಭಯಸಂ
ಹರಣವಾಗಿ ಕುಲಿಶಾಯತ ಕವಚವು ಕರುಣವದಾಗಿರಲು ।

ತರುಣಾರುಣ ಶತಕಿರಣ ದೇಶೀಕರ
ಧರಣೀಶ್ವರ ಕಾಣಲ್ಕೆ ಚತುರ್ಬಲ
ವೆರಸಿ ಬಂದ ಸಪ್ತಾಂಗವೈಭವದಿ ಪರಮಾನಂದದಲಿ ॥೧೪೫॥

ವಾರಣವೇರಿದ ವೀರವಿರತಿ ಸುಖ
ಸಾರರ ಧೀರರನಿಳಿಸುತ್ತಾ ಕರು
ಣಾರಸಾದ್ರ ಚಿನ್ಮುದ್ರರ ಭದ್ರರ ಗುರುಸಿದ್ಧೇಶ್ವರನ ॥
ಕಾರುಣ್ಯಾಗಾರವ ಕಾಣಿಸುತ ಕ
ಲಾ ರಂಜಿತನವರಡಿದಾವರೆಗೆ ಶ
ರೀರಾಷ್ಟಕದಿಂದೆರಗುತ ನಂದನರಿಂದೊಡಗೂಡುತಲಿ ॥೧೪೬॥

ನಮಿಸಿ ನಿಮ್ಮ ಪದಕಮಲಾನುಗ್ರಹ
ವಮರ್ದಿರೆ ಶ್ರಾವಣಮಾಸದ ಪೂಜಾ
ಕ್ರಮವನು ಕೈಕೊಂಡಖಿಳಗಣಂಗಳು ನಿಮ್ಮಯ ಸನ್ನಿಧಿಗೆ ॥
ಸುಮನೋವೃತ್ತಿಯೊಳೈತಂದಿಹ ತ
ದ್ವಿಮಲಾಂಗರು ನಿಮಗವಗತವಾಗಲು
ನಮಗೆ ಚೌಕಿ ಸಿದ್ಧೇಶ್ವರ ನೀನಲ್ಲದೆ ಪೆರತುಂಟೇ ॥೧೪೭॥

ಎಂದು ಭಕ್ತಿಯೊಳು ಕಾಯಗಳೊಪ್ಪಿಸಿ
ನಿಂದು ಚಂದ್ರಸಂರಜ್ಞಾರತಿಗಳನಾ
ನಂದದಿ ಮಾಡಿಸಿ ರೂಢಿಸಿ ಚಿತ್ತವು ಪಾದದಿ ಕ್ರೀಡಿಸುತ ॥
ಎಂದೆಂದಿಗೆ ಗಣವೃಂದವು ಛಂದವು
ಮಂದಿರವವರದೆನಿಸಿ ನಿತ್ಯೋತ್ಸವ
ದಿಂದ ವಿರಾಜಿಪ ಭಕ್ತಿಯ ಪಾಲಿಸು ಗುರುಸಿದ್ಧೇಶ್ವರನೇ ॥೧೪೮॥

ಎನುತ ಪ್ರಾರ್ಥಿಸುತ್ತೀ ಜನಪದ ಸುಖ
ವನು ನಡೆಸಲು ನಿಮ್ಮಯ ದಿವ್ಯಾಕೃತಿ
ಘನಗಣರಾನಂದವು ಬಹುಛಂದವು ನಿತ್ಯಾರಾಧನವು ॥
ನನಗಾಗಲಿ ತತ್ಸಿದ್ಧಿಯು ಬುದ್ದಿಯು

ಜನಿಸಲು ತನುಜರೊಳನುದಿನ ದೀನಾ
ವನರೆಂದೆನಿಸಲಿ ಶಿಷ್ಟಾಚಾರವು ಘಟಿಸಲಿಯೆಂಬುವನು ॥೧೪೯॥

ಈ ಪರಿಯಿಂದಲಿಯಾ ಪರಮಾಕೃತಿ
ರೂಪರ ಪಾದಪಯೋಜವನರ್ಚಿಸಿ
ಭೂಪಾಲೋತ್ತಮನಾ ಪೂತರ ಕರದಿಂದ ನಿರೂಪವನು ॥
ತಾ ಪಡೆವುತ್ತ ಸಭಾಪತಿ ಹಸ್ತಿ ಚ
ಮೂಪ ಪುಷ್ಪಕವನೇರುತ ವಿಭವಾ
ಲಾಪದಿ ವೇಗದಿ ಗಣಕಾರ್ಯೋತ್ಸವ ಪೂರ್ಣಾನಂದದಲಿ ॥೧೫೦॥

ಬಂದು ರಾಜ ಸದನವ ಪೊಕ್ಕಾಕ್ಷಣ
ಬಂದಿಹ ನಿಂದಿಹ ಸಚಿವಮುಖ್ಯಸುತ
ವೃಂದದ ಮನ್ನಿಸಿ ಶ್ರಾವಣಮಾಸ ಮಹಾಪೂಜೋತ್ಸವದ ॥
ಇಂದು ಕಳಾಧರ ಮಾಡಸಿದನು ನಿ
ಮ್ಮಿಂದ ಸೇವೆ ಘಟಿಸಿತ್ತೆನುತವರನು
ಮಂದಿರಕಪ್ಪಣೆಪಾಲಿಸಿ ಕಳಿಸಿದನಾ ನರೇಂದ್ರನೆ ಬಲಕೆ ॥೧೫೧॥

ಪರಿಜನ ಪುರಜನ ಕರವ ಮುಗಿದು ಪದ
ಸರಸಿಜಕೆರಗುವವರ ಪಿಡಿದೆತ್ತುತೆ
ಕರುಣದಿ ಹರಭಕ್ತಿಯ ಚರತೃಪ್ತಿಯನಿರದೆಸಗುವುದೆಂದೂ ॥
ಮರೆಯದೆ ಮಾಡಿರಿ ಮುಕ್ತಿಯ ಬೇಡಿರಿ
ನಿರುತದಿ ನೀತಿ ನಿಪುಣರಾಗುತ ಶ್ರೀ
ಕರ ಗುರುಸಿದ್ಧೇಶ್ವರನ ಭಜಿಸಿ ಭಮಾಲೆಯ ಪರಿಹರಿಸಿ ॥೧೫೨॥

ಎಂದು ತನ್ನ ದೇಶದೊಳಿಹ ಜನರಿಗೆ
ನಂದನರೆಂದೆನಿಸಿರ್ದವರಿಗೆ ಮಾ
ನಂದನ ಸುಂದರ ಶ್ರೀ ಮಲ್ಲೇಂದ್ರಮಹೀಶ ನಿರೂಪಿಸಲು
ಇಂದಿಗೆ ಶಿವಭಕ್ತಿಯ ನಡೆಸುತ ಸಾ

ನಂದದೊಳಿರುವರ ಲಾಲಿಸಿ ಪಾಲಿಸಿ
ವಂದನೀಯನೆಂದೆನಿಸಿ ವಿನೋದದೊಳಾಲುವ ರಾಜ್ಯವನು ॥೧೫೩॥

ದಿವಿಜವರ್ಗೋಪಮ ವಿಭವ ವಿರಾಜಿತ
ನವನಿಪ ಭಕ್ತಿಗೆ ಜೀವನ ಲಸದವ
ಯುವವಾಗುತ ವೀರಶೈವಮತ ಚಂದ್ರನೆನಿಸಿ ಸುಖದಿ ॥
ಕುವರರಿಂದ ಸಂಪತ್ಸತ್ಯಾದಿಗ
ಳವಿರತಮೆಸೆದಿರಲೀಶಾನುಗ್ರಹ
ಕವಚಮದಾಗಿರೆ ಸಕಲರ ಸೌಖ್ಯದಿ ಪೊರೆವ ಪುಣ್ಯನೃಪನು ॥೧೫೪॥

ಚತುರ್ವಿಧ ಶ್ರುತಿಪಾರಂಗತ ಕ್ಷಿತಿಸುರ
ತತಿಕೋಟಿಗೆ ಮೃಷ್ಟಾನ್ನವ ನೀಡಿದ
ಕತಿಶಯ ಫಲ ಭಿಕ್ಷಾಮಾತ್ರದಿ ಶಿವಯೋಗಿಯನುಣಿಸಿದರಿಂ ॥
ಮಿತಿಯಿಲ್ಲದ ಚರವಿತತಿಯ ಸಂತತ
ರತಿಯಿಂದಾರಾಧಿಸಿ ತೃಪ್ತಿಯ ಮಾ
ಡುತಲಿಹ ಶ್ರೀ ಮಲ್ಲೇಂದ್ರನ ಪುಣ್ಯ ವಿಶೇಷವನುಸುರುವೊಡೆ ॥೧೫೫॥

ಸಾಲದು ಸದ್ವರ್ತನೆಯ ಕೀರ್ತನೆಯ
ಕಾಲ ಕಾಲಗಣ ಜಾಲಾಶ್ರಿತ ಸುರ
ಶಾಲ ವಿಶಾಲ ದಯಾಲವಾಲ ಮಲ್ಲೇಂದ್ರನ ವರ್ಣಿಪೊಡೆ
ವ್ಯಾಲಾಧಿಪನಾನನಗಳಿಗಲ್ಲದೆ
ಭೂಲೋಕದ ಕವಿಗಳ ಮತಿ ತೊರೆದು
ದಾಲಕ್ಷಣವ ವಿಚಕ್ಷಣ ದಿಬುಧರು ಬರೆದಾನಂದಿಪರು ॥೧೫೬॥

ಹರಪೂಜಾಬಲಯುತ ಭೂಪಾಲಗೆ
ಗರಳಾಮೃತ ದುಷ್ಟರು ನಷ್ಟರು ಭೀ
ಕರ ಶಾರ್ದೂಲ ಕುರಂಗ ತರಂಗ ತರಲ ಶರನಿಧಿ ಕುಲ್ಯ
ಅರಿಗಳಾಪ್ತರುರಿ ಶೀತಲ ಕಾಕೋ
ದರ ಸ್ರಕ್ಕುಸುಮವಾಗದೆ ಭಯನೀಗದೆ
ಪರಮಪರುಷ ಮಲ್ಲೇಂದ್ರಗೆ ಸದ್ಗುಣಸಾಂದ್ರಗೆ ಸಾಮ್ಯವಿದು ॥೧೫೭॥

ಈಶಾರ್ಚನೆ ಚರಕೋಶ ಭಜನೆ ಸುವಿ
ಲಾಸ ವಿರತಿ ಸುಖವಾಸರೊಡನೆ ಪರಿ
ಹಾಸ ಪುತ್ರಮಿತ್ರಾದಿಗಳೊಳು ಸಂತೋಷ ಸದಾಮೋದ ॥
ವಾಸವ ವಿಭವ ಶ್ರೀ ಸಮರ್ಥ ಭೂ
ಮೀಶವರ್ಯನೆಸಗುವ ಶ್ರಾವಣ ಪೂ
ಜಾ ಸಮಗ್ರವನು ನೋಡಿದವನ ಸಕಲಾಶಾಪೂರಣವು ॥೧೫೮॥

ಭಸಿತ ವಿಭೂಷಿತ ಬಾಲಸ್ಥಲ ಸಾಂ
ಬ ಶಿವಾಂಬಕ ಮಾಲಾಗಳ ಶಿವಮನು
ರಸನಾಯತ ಗುರುಕರುಣಾನುಗ್ರಹ ಪಾತ್ರ ದಿವ್ಯಗಾತ್ರ
ವಸುಧಾಧಿಪ ಮಲ್ಲೇಂದ್ರ ಚಂದ್ರ ಪದ
ಕುಶಜದರ್ಶನ ಸುದರ್ಶನವಾಗದೆ
ಕುಶಲವಿವರ್ಧನವೆನಿಸದೆ ನುತಿಸಿದ ಲೋಕರಿಗನವರತ ॥೧೫೯॥

ರುದ್ರಲೋಕದಿಂದವತರಿಸಿದರಾ
ರುದ್ರರು ಸಚ್ಚಿನ್ಮುದ್ರರು ಲೋಕೋ
ಪದ್ರವ ವಿದ್ರಾವಣರು ಮನುಷ್ಯಾಕೃತಿಯೊಳು ಸಂಚರಿಸಿ ॥
ಚಿದ್ರವಂಜಿತರಾಗುತ ನಾನಾಸಂ
ಪದ್ರಾಗದೊಳಿಹರೆಂಬಾದ್ಯರ ನುಡಿ
ಭದ್ರವಾಯ್ತು ಮಲ್ಲೇಂದ್ರನೃಪನ ನೋಡಲ್ಕುರ್ವಿಯೊಳಿಂದು ॥೧೬೦॥

ಕಾಲವಿಜಯ ಭವಮೂಲೋನ್ಮೂಲನ
ಶೀಲ ಷಟ್ಸ್ಥಲಾಚಾರ ವಿವರ್ಧನ
ಶ್ರೀ ಲಕ್ಷಣ ಕರುಣೇಕ್ಷಣ ದಿವ್ಯ ನಿರೀಕ್ಷಣ ಮಾತ್ರದಲಿ ॥
ಪಾಲಿಸುವಾ ಪರಮಾರ್ಥಸುಖವ ನತ
ಜಾಲಕನಾರತ ನಿತ್ಯವ ಸತ್ಯವ
ನೀಲಕಂಡ ಗುರುವರನಾಜ್ಞೆಯೊಳಿದ ನುಸುರಿದೆ ಬಡಮತಿಯಿಂ ॥೧೬೧॥

ಶ್ರಾವಣಮಾಸದಿ ಕಂಡುದನುಂಡುದ
ಭೂವಲ್ಲಭ ಮಲ್ಲೇಂದ್ರ ಮಾಡಿದುದ

ನಾವು ನೋಡಿದುದ ಬರೆದೆನು ಕವಿತಾ ವರ್ಣನೀಯವೆಂದು ॥
ಕೋವಿದರಿದರೊಳು ತಪ್ಪಿರಲೊಪ್ಪುತ
ಶಾವಕ ಸೇವಕನೆಂದು ನಿರಂತರ
ಜೀವನದ ಘುದಧಿ ಕ್ಷಾರಾಂಬುವ ಮಧುರತೆಗೊಳಿಸುವ ತೆರದಿ ॥೧೬೨॥

ಮೆರೆವುದು ಸದ್ಗುಣಗಣವನು ರಸಿಕರು
ಕರುಣಾಮೃತರಸಗರೆಸಿ ತಾಪವನು
ಪರಿಹರಿಸಿದ ಶಾಂತಿಯ ಕಾಂತಿಯನುಂಟೆನಿಸಿದ ಘನರಂಜಾ ॥
ಧರಣೀಶ್ವರ ಪೂಜಾವಿಲಾಸ ಸ
ಚ್ಚರಿತವು ಸತ್ಸುಖಭರಿತವು ವಿಧುಭಾ
ಸ್ಕರರುಳ್ಳನ್ನಬರಂ ಸ್ಥಿರವಾಗಲಿ ಸಿದ್ಧೇಶನ ದಯದಿ ॥೧೬೩॥

ರಾಜದಾಜಕಳಾಧರ ರೂಪ ವಿ
ರಾಜತ್ಪ್ರಭುದೇವರ ಸತ್ಪಾದ ಸ
ರೋಜಿಯುಗ್ಮ ಪೂಜಾ ವಿಲಾಸವನು ಭಕ್ತಿಪೂರ್ವಕದಲಿ ॥
ರಾಜಲಲಾಮ ಶ್ರೀ ಮಲ್ಲೇಂದ್ರ ಮ
ನೋಜ ಮನೋಹರ ಮಾಡಿದುದನು ಬಿಡ
ದೀ ಜಗತೀವಲಯದ ಶಿವಭಕ್ತರು ಲಾಲಿಸಿ ಪಾಲಿಪುದು ॥೧೬೪॥

ಶಾಲಿವಾಹಭೂಪಾಲ ಶಕದ ಪದಿ
ನೋಳನೂರರಿಂ ಮೇಲಾದಿಪ್ಪ
ತ್ತೇಳನೆ ಕ್ರೋಧನವರ್ಷ ಭಾದ್ರಪದ ಶುದ್ಧ ಚೌತಿಯಲ್ಲಿ ॥
ಪ್ರಾಲೀಯಾಂಶುತನಯವಾರದಿ ಗಣ
ಜಾಲಲಿವಿನೋದಿಸಲೀ ಷಟ್ಪದಿಯನು
ಲೀಲೆಯಿಂದ ಲಿಖಿಸುತ ಸಿದ್ಧೇಶ ಪದಾಬ್ಜಕೊಪ್ಪಿಸಿದೆನು ॥೧೬೫॥

ಇತಿ ಶ್ರೀ ಮಲ್ಲೇಂದ್ರ ಪೂಜಾವಿಲಾಸ ಪರಿವರ್ಧಿನಿ ಷಟ್ಪದಿ
ಪರಿಸಮಾಪ್ತ ಮಂಗಳಮಹಾ
❖❖

೩

ಮಲ್ಲೇಂದ್ರ ಪೂಜಾವಿಲಾಸ ತಾರಾವಳಿ

ನೋಡಿರಿ ಕಿತ್ತೂರ ನಾಡಿಗೊಡೆಯ ಚಂದ್ರಚೂಡಾರ್ಚಕ ಮಲ್ಲೇಂದ್ರನ ।
ನೃಪಕುಲಚಂದ್ರನ । ಸದ್ಗುಣಸಾಂದ್ರನ ।
ಕೀರ್ತಿಪಾತ್ರನ । ಸಚ್ಚರಿತ್ರನ । ಪುಣ್ಯಗಾತ್ರನ ।
ಭಕ್ತಿಗೀಡಾಗಿ ಶ್ರಾವಣದೊಳು ಪಾದಪೂಜೆಯ ಮಾಡುವ ಮಹಾನಂದವ ।
ನಾನಾವಿಧ ಛಂದವ । ಚಮತ್ಕಾರದಂದವ । ಕೂಡಿಹ ಗಣವೃಂದವ ॥ಪಲ್ಲ॥

೧

ಧರೆಗೆ ದಕ್ಷಿಣಕಾಶಿ ಸರಿಯಾದ ಪಂಪಾಖ್ಯಪುರಕೆ ಪಶ್ಚಿಮದಿಸೆಯೊಳಗಿರುವ
ಹರಶರಣರ ಸ್ಮರಣೆಯೊಳು ಕಲ್ಯಾಣವ ಮರಸುವ ಭಕ್ತಿಭಾವದಿ ಮೆರೆವ
ಸುರಪುರದಮಲ । ಸಿರಯನು ಜರಿವ ಪರಿಪರಿಯ ಸೌಭಾಗ್ಯಸಾಧನದಿರವ ।
ತತ್ಪುರವ ಪಾಲನಗೈವ । ಕಾಮಿಸಿದರ್ಥವನೀವ । ಕಳಾಕೋವಿದಭಾವ ।
ಸರಸ ಸುಂದರ । ಸುಖಮಂದಿರ । ಭೂಪುರಂದರ ।
ಗಿರಿಶ ಪೂಜ [೧][ಧುರಂದರ][೧] । ರಿಪುಕುಲ ಭಯಂಕರ । ಸತ್ಕೀರ್ತಿ ಕಲಾಪನ ।
ಶಾಂತಿಯಲಿ ನಿಶಾಪನ । ಶಮಶರಜಂಗ ಭೂಪನ ॥

೨

ಶ್ರಾವಣ ಬರೆ ಪೂರ್ವಾವವನಿವರರು ಸದ್ಭಾವದಿ ಪಾದಪೂಜೆಯ ಮಾಡುವರು
ಕೇವಲ ಶ್ರೀ ಜಂಗಮಾವಳಿ ಸನ್ಮಹಿಮಾವಲಂಬನರೆಂದು ನೋಡುವರು
ಸೇವಿಸಿ ಶಿವರೆಂದು ಭಾವಿಸಿ ಸದ್ಭಕ್ತಿ ತೀವಿ ಮೃಷ್ಟಾನ್ನವ ನೀಡುವರು ।

ವಸ್ತ್ರಾದಿಗಳ ಕೊಡುವರು । ಸತ್ಕೀರ್ತಿಯ ಪಡೆವರು । ವೀರತ್ವದಿ ನಡೆವರು ।
ಶಿವಭಕ್ತರು । ಸತ್ಯಾಸಕ್ತರು । ಜೀವನ್ಮುಕ್ತರು ।
ಈ ವಿಧವಾದ ಭೂವಲಯದಿ ವಿನೋದವನಾವ ಮೊದಲು ಮಾಡಿದುದಿಲ್ಲ
ನೋಡಿದವರ್‌ು ಮುನ್ನಿಲ್ಲ । ಪ್ರೌಢಗೆ ನಾಡೆ ಸರಿಯಿಲ್ಲ ।

೩

ತರಣಿಜಸವು ದಷ್ಟ ಪರಿಪಂಥಿಕರದೊಳು ದೊರೆಯಲು ದೊರೆ ಮಲ್ಲೇಂದ್ರನು
ಗಿರಿಶನ ಕರಸರಸಿರುಹ ಕಪಾಲದೊಳಿರಲತ್ತಲು ಭೂಮೀಂದ್ರನು
ಕರತಳಲಿಂಗದಿ ಬೆರೆದ ನೀಲಾಂಬೆಯ ತೆರದ ನೀಲಾಂಬೆಯಾತ್ಮಜಿ ತಾನು ।
ರುದ್ರಾಂಬೆ ರೂಪದ ರಂಭೆ । ಚರಪದ ಕಂಜರೋಲಂಬೆ । ವಿಮಲಸದ್ಗುಣ ನಿಕುರಂಬೆ ।
ಪತಿ ಬರಲೆಂದು ಶ್ರುತಿಯೊಳು ಸಂದು । ವ್ರತದೊಳು ೧[ನಿಂದು]೧
ಬರಲು ಕಿತ್ತೂರಿಗೆ ವರ ಮಡಿವಾಳಾಖ್ಯ ಗುರುಪಾದಪೂಜಿಸೆ ನಲವಿಂದ
ಗುರುತವ ಪೇಳಲದರಂದ । ಗುಣಾರ್ಣವ ತಾ ಬಂದ ॥

೪

ದೇವ ಮಹೇಶ್ವರ ಭೂವಲಯದ ಭಕ್ತಾವಳಿಯನು ಪಾಲಿಸಲೆಂದು
ಕೇವಲ ಬ್ರಹ್ಮ ನಿರಾವರಣವೆ ಜಂಗಮವೇಷದಿ ಸಗುಣದೊಳಂದು
ಸಾವಯವದಿಂದ ಸಾವಧಾನದಿ ಗುರುದೇವ ದೇಶಿಕನೆನಿಸುತ ಬಂದು ।
ವಿರಕ್ತಿ ಸುಖದಿ ನಿಂದು । ಕರುಣಾಮೃತರಸಸಿಂಧು । ನಿಶ್ಚಯವೆಂದು ಮನದಂದು ।
ಭೂಪಶೇಖರ । ಭವಭೀಕರ । ಆಶ್ರಿತ ಶ್ರೀಕರ ।
ಭಾವಜಾಂತಕನೆಂದು ಭಾವಿಸಿ । ಕರದುಂತಂದಾ ವಿಮಲ ಪ್ರಭುರಾಯನ ।
ಚಿನ್ಮಯ ನಿರ್ಮಾಯನ. । ಶೋಭನ ನಾಮಧೇಯನ ॥

೫

ಶ್ರೀ ಗುರುಪದ ಪೂಜೆಗಾಗಮೋಕ್ತವನನುರಾಗದಿ ಮಡಿವಾಳಶಾಸ್ತ್ರಿಗಳು
ಆಗ ಪೇಳಿದ ತೆರನಾಗ ಮಾಳ್ಪನು ಮಂತ್ರಿಪೂಗಾಗ್ರಣಿ ಪೂತಾಂಘ್ರಿಯೊಳು
ಮ್ಯಾಗ ದ್ವಾದಶ ಕೋಟಿ ಪೂಗಳಿಗೆ ಮಿಗಿಲಾಗಿಹ ಸ್ವರ್ಣಪುಷ್ಪವು ಕೇಳು ।

೧–೧ ಸಂದು(ಮೂಲ)

ತಕ್ಕೋಟಿಗಧಿಕವೆಂದು । ಶ್ರೀ ಬಿಲ್ವದಳವನೊಂದು । ಧರಿಸಲಿಷ್ಟವಹುದೆಂದು ।
ದೋಷರಕ್ಷವ [1][ಸೂ][1] ಡುವ ಲಕ್ಷವ । ನಿತ್ಯಮೋಕ್ಷವ ।
ರಾಗದಿಂದೀವ ಜಿಲ್ವಗಳನು ಧರಿಸಿಹ ಶ್ರೀಗಾಗರ ಭೂಪಾಲಗೆ ।
ಶಂಕರನೀವದನಿಗೆ । ತಿಳಿಯದ ಸತ್ಯಶೀಲಗೆ ॥

೬

ಸುರುಚಿರತ ಮಣಿಮಯ ಹರಿವಿಷ್ಟರದಲಿ ಸದ್ಗುರುವರನನು ಕುಳ್ಳಿರಿಸುತಲಿ
ಚರಣಚಾಮೀಕರ ಸರಸಿಜರುಹವನಾದರದಿಂದಲಿ ಸಮರ್ಚಿಸುತಲಿ
ಪರತರ ಪಾವನಚರಿತರ ಪೂಜೆಗೆ ಸರಿ ವೀರಸಂಗಪ್ಪನೆನುತಲಿ ।
ಸ್ಥಿರತರಚಿತ್ತಗೆ । ನಿರುತ ನಿರ್ಮತ್ತಗೆ । ನಿರುಪಮ ಸದ್ವೃತ್ತಗೆ ।
ನೇಮಿಸಲಾಗ । ಕಾಮಿಸಿ ಬೇಗ । ಸ್ವಾಮಿಯೆನುತಾಗ ।
ಚರಣದ್ವಯವ ಯುಗಕರದಿ ಪಿಡಿದು ಪಗಲಿರುಳೆನ್ನದಲೊಂದೆ ಭಾವದಿ ।
ಶ್ರೀ ವೀರಶೈವ । ಪೂಜಿಪ ಜಾವಜಾವದಿ ॥

೭

ಕುಂದ ಬಕುಳ ಕರವೀರ (ಚಂಪಕ) ಮಂದಾರ ಕಲ್ಹಾರ ಪುನ್ನಾಗ
ನಂದ್ಯಾವರ್ತ ಮಂದಾರ ವಿಧೌಘ ಸುಮನೋಪೂಗ
ಕುಂದದ ಪೂಗಳ ವೃಂದವ ತರಿಸಿದನಂದಪ ಭೂವಲ್ಲಭನಾಗ
ಮನ್ಮಥನ ಬಾಣಗಳಾಗಿ । ಬಾಧಿಸಿದವೆನುತ ಯೋಗಿ ।
ಸಂದೋಹನೊಂದಿರಲಾಗಿ ।
ಸಮಸ್ತೋಮದ । ಸುಮಾರಾಮವ । ಮಾಡಿ ಕ್ಷೇಮವ ।
ಹೊಂದಿರಲೆಂದು ದೇಶಿಕರ ಪಾದದ್ವಯಕೊಂದೆ ಭಾವದಲಿ ಏರಿಸಿ ನೋಡಿ
ಶಿವಗಣದೊಡಗೂಡಿ । ಸತ್ಕೀರ್ತನೆಯನು ಮಾಡಿ ॥

೮

ಸೂಳೈಸಿ ಹೊಡೆವ ನಿಸ್ಸಾಳ ಕಂಸಾಳ ಕೈತಾಳದ ಕೌತುಕ ನಾದವ
ತಾಳ ಮೃದಂಗ ಸಮೇಳ ಮೇಳದ ರವ ಕೇಳುವ ಭೇರಿ ನಿನಾದವ

೨–೨ ಸು(ಮೂಲ)

ಭಾಳಲೋಚನ ರೂಪದಾಳಿದ ವೈರಾಗ್ಯಶೀಲರು ಮಾಳ್ಪಾಶೀರ್ವಾದವ ।
ಪಡಿದಿಹ ಗುರುಪಾದವ । ಶಿವತತ್ವಾನುಭೋಧವ । ಹೇಳಲು ಕೇಳಿ ಮೋದವ ।
ತಾಳ್ವ ರಾಜನು । ನತ ಸಮಾಜನು । ನಿರುಪಮ ತೇಜನು ।
ಬಾಳುವ ಭ್ಹಾಲಕರಿಂದೆ ಪುಷ್ಪಾಂಜಲಿಗೇಳಲು ಗಣಜಾಲವು ಸುತ್ತ ।
ಜಯ ರವಗೊಳಿಸುತ್ತ । ತೂರಿದರು ಪೂಗಳನತ್ತ ॥

೯

ಮಂಗಳಾತ್ಮಕ ಶಿವ ಜಂಗಮ ಪಾದಪೂಜೆ ತಿಂಗಳಮಾಡಿದ ಚಿತ್ರದಿ
ರಂಗವಾಲಿಯ ಚಿತ್ರಗಳ ನೂತನ ಶೃಂಗಾರಗೊಳಿಸಿದ ಚೈತ್ರದಿ
ಕಂಗೊಳಿಸುವವರ ಜಂಗುಳಿಯಂತೆ ಬೆಡಗಾಗಿಸಿ ಕ್ಷಣಮಾತ್ರದಿ ।
ತೋರಿಸಿದ ಭೂನಾಥನು । ವಿಜಯವರೂಥನು । ವಿಲಸದ್ಗುಣಯೂಥನು ।
ಧರಿಸಿದ ಶ್ರೀಪಾಲ । ದಲಸಂಕುಲ । ತನ್ನ ಕರತಲ ।
ಲಿಂಗಕ್ಕೇರಿಸಿ ಮಂಗಳಾರತಿಯಿಂ ಗಣಪುಂಗವರನು ತೃಪ್ತಿಗೊಳಿಸುವ ।
ಈ ಪರಿಯೆಂದು ತಿಳಿಸುವ ಸುಕೃತರಾಶಿ ಗಳಿಸುವ ॥

೧೦

ವಸುಧೀಶ ತನ್ನಯ ವಶಗತರಾಜ್ಯದೊಳೆಸೆವ ಗ್ರಾಮಾನುಗ್ರಾಮಗಳಿಂದ
ಕುಸುಮಬಿಲ್ವಗಳ ರಾಜಿಸುವ ಕೇತಕಿಗಳ ಸಸಿನೆಯಿಂದ ತರವೇಳೆ ನಲವಿಂದ
ತಂದವರ ನಂದದಿ ನೋಡಿ । ಕಂದರ ತೆರ ದಯಮಾಡಿ ।
ಸಂತಸದೊಳೊಡಗೂಡಿ ।
ಸರಗಟ್ಟಿಸಿ । ಚಂಡನಿಟ್ಟಿಸಿ । ಸೌಧ ಮುಟ್ಟಿಸಿ ।
ಬಿಸಜಸಂಭವ ಶಶಿಧರನ ನೋಡಿದೆನೆಂದು ಪುಸಿವಾತ ನುಡಿವ[೧]
ಬಹು ಪಾತಕಿಗಳನು । ಕಟ್ಟಿಸಿದನತುಳಬಲನು ॥

೧೧

ಇದು ಮಹಾಪೂಜೆ ಸಂಪದದ ಸಾಧನ ಸಭೆಸದನ ಸಿಂಹಾಸನವರದೆಂದು
ಕದಲದ ಕದಳಿಯ ಕಂಭ ಶತಗಳ ಕಟ್ಟಿಸಿದನಲ್ಲಲ್ಲಿಗಾಕ್ಷಣಕಂದು

೧-೧ ಪಾತಕಿಗಳು(ಮೂಲ)

ಮಧುನೃಪವನ ಸಹವಿದಿಗೋರ್ಂಬಂದದೊಳೊದವಿದ ಮರಣಗಳೆಷ್ಟೆಷ್ಟೆಂದು।
ವರ್ಣಿಸುವವನವನಾರೆ। ಮಾಪೆಗಳಂತರದಿ ತೋರೆ। ದಿನಪಕದಿರ್ಗಳು ತೋರೆ।
ದೀಪಗಳಿಂದ। ತ್ತೋರ್ಪುವು ಛಂದ। ಗಾಯಕವೃಂದ।
[1][ತ್ರೀವಿದ][1] ರಂಭಾದಿ ಸದ್ವಧುಗಳೆನಿಸುವ ನಾಟ್ಯದ ಸುದತಿಯರ ಚಮತ್ಕಾರ।
ತೋರಿಸುವಭಿನಯಸಾರ। ನೋಡುವ ರೂಪದಿ ಮಾರ॥

೧೨

ಮಾರ ತ್ರಿಲೋಕದವೀರ ವಿರಹಿಗಳ [2][ಸೂರೆ][2] ಗೊಂಬುವ ಕಾರಣಕೆಂದು
ಸಾರ ಸಭವಗವಸಾರೆ ಸೌಂದರ್ಯ ಸಾಕಾರಮೂರ್ತಿಗಳ ಮಾಡಿದನಂದು
ಆ ರತಿವರಶಿವವೈರವ ಕಳೆಯಲಿಕೀ ರಮಣಿಯರನಿಡಲು ಬಂದು।
ಆರತಿಗಳ ಪಿಡಿದವರು ಆ ರತಿರೂಪ ಪಡದವರು। ಬೇರೆನಿಸದೆ ನಡೆದವರು
ಭಾವಕಿಯರು। ತಮ್ಮ ಸಖಿಯರು। ಸಖಿಯರು। ಶಶಿಮುಖಿಯರು।
ನಾರಿಯರು ಮದನಾರಿಗೆ ಬೆಳಗಿದರಾ ರವಿಕೋಟಿ ಪ್ರಕಾಶಗೆ।
ವಿಭೂತಿ ವಿಭೂಷಗೆ। ಮಲ್ಲೇಂದ್ರಿಷ್ಟಕೋಶಗೆ॥

೧೩

ದೇಶದೇಶದಿ ಭಕ್ತಿಕೋಶ ಶ್ರೀ ಮಲ್ಲಮಹೇಶ ವೃಷೇಶನೆಂಬುದ ಕೇಳಿ
ಶ್ರೀ ಸದಾಶಿವ ಚರವೇಷ ವಿರತಿಸುಖದೇಶಿಕರೈತರೆ ಮುದದಾಳಿ
ಕೂಸುಗಳೆತ್ತುತ ಸ್ತ್ರೀಸಮೂಹವು ಬರೆ ತೋಷಿಸುವುದ ಸುತರಿಗೆ ಹೇಳಿ।
ಲಿಂಗಾರ್ಚನೆಯ ಮಾಡಿಸಿ। ಮೃಷ್ಟಾನ್ನವ ನೀಡಿಸಿ। ಕ್ಷುತ್ಪೀಡೆಯನೋಡಿಸಿ
ಇಷ್ಟ ಕೊಡುವನು। ಕಷ್ಟ ಕೊಡುವನು। ಸ್ಪಷ್ಟ ನುಡಿವನು।
ಈಶಾಕೃತಿಯ ಮಹೇಶಾಳಿಗೆ [3][ವಸನಾದಿ][3] ದಕ್ಷಿಣೆಗಳ ಕೊಟ್ಟು।
ಸುತರು ಸಹ ಪೊಡಮಟ್ಟು। ಭಕ್ತಿಯೊಳಿಂದು ರತಿಯಿಟ್ಟು॥

೧೪

ಪುರವ ಸಿಂಗರಿಸಿದ ಪರಮ ವೈಭವದಿ ಶಂಕರ ರಜತಾದ್ರಿಯೆಂಬಂದದಿ
ಹರಪರಕರಶರ ತರುಗಳ ತಳಿರ್ಗಳ ತರಿಸಿ ತೋರಣಗಟ್ಟಿ ಛಂದದಿ

೧-೧ ತ್ರಿವಿಧ(ಮೂಲ) ೨-೨ ಸೂರೆ(ಮೂಲ) ೩-೩ ವಸನಾಕಾ(ಮೂಲ)

ಪರಿಮಳಗರೆವ ಪೂಸರಗಳ ಸರಣಿಯೊಳಿರದೆ ಕಟ್ಟಿಸಿದನಾನಂದದಿ ।
ಮೆರೆಸಿ ಈಶ ರೂಪರ । ಸುಚ್ಚಿತ್ಸುಖಲಾಪರ । ವಿರತಿಬಲಶ್ರೀಪರ ।
ಭೂಪಾಲನು । ಭಕ್ತಿಶೀಲನು । ಸುವಿಶಾಲನು ।
ಚರಣ ನಡೆಯೊಳಗಾದರದಿ ಬರಲು ಸುಖಕರನ ಸುತ್ತಿರೆ ಚತುರಂಗಬಲ ।
ನಾನಾವಾದ್ಯ ಕಲಕಲ । ಚರಿಸುವನು ವೀರೋಜ್ವಲ ॥

೧೫

ಸಾಮಜರೂಢ ಸುತ್ರಾಮಪದವನೊಮ್ಮೆ ಕಾಮಿಸದ ಮಹೇಶ್ವರರ
ಸ್ತೋಮವ ಪ್ರೇಮವಗೊಳಿಸಲು ರಜತಾದ್ರಿಧಾಮಾರ್ಚಕನವನೀಶ್ವರ
ನೇಮದಿ ರಜತಚಾಮೀಕರ ಪೂಗಳ ತಾ ಮಾಡಿಸಿದನವ ಭಾಸ್ಕರ ।
ಹಸ್ತಗಳಿಂದ ತೂಗಿದ । ಸೊಸ್ತದ ಮಳೆ ತೋರಿದ । ವಿಸ್ತಾರವ ಬೀರಿದ ।
ಬಲವಂತನು । ಗೆಲವಂತನು । ನಿತ್ಯಶಾಂತನು ।
ಕ್ಷೇಮವಾಗಲಿ ಕ್ಷಾಮವಡಗಲಿ ವಿಷಯಜನಾಮೋದದಿಂದ ಬಾಳಲಿಯೆಂದು ।
ಕಲಾವಿದ ಮನದಂದು । ಶಂಕರ ಮೃಡಶಿವಗೆಂದು ॥

೧೬

ವೀರವಿಕ್ರಮ ಗುರುವಾರದಿ ಶ್ರೀ ಗುರುವಾರ ವನರಾಜವೀಧಿಯೊಳು
ವಾರಣಗಳನೇರಿದಾ ರಮ್ಯಮಹಿಮರ ತಾರಾಗವಾಸ ದೀಧಿರಿತಿಗಳು
ತೂರುವವಮರರು ತೂರುವಲರ ಮಳೆಯಾರಯ್ಯಲಾ ಬಾಣ ಬಿರುಸುಗಳು ।
ಬೀಳುವ ಕಿಡಿಧಾರೆಗಳು । ನೂರಾರುದೀವಟಿಗೆಗಳು । ಹಚ್ಚಿ ಚಂದ್ರಜ್ಯೋತಿಗಳು ।
ಪಗಲೆನಿಸುವ । ಮಿಗೆ ಸೊಗಸುವ । ಝಗಝಗಿಸುವ ।
ಸುರ್ಯೋದಯವಾಗಲು ರಾಜನಡದ ವಿಹಾರದಿ ಗುರುಸಿದ್ಧೇಶ್ವರನ ।
ಸುಕೃತಮಯವಹ ಭವನ । ತೋರಿದನರ್ತಿಯಾದಿನ ॥

೧೭

ಗುರುಸಿದ್ಧೇಶ್ವರ ಪರಮಪ್ರಭಾಕರ ಕರುಣಾಕರ ನಿಮ್ಮ ದಯದಿಂದೆ
ಪರಿಪೂರ್ಣ ಶ್ರಾವಣ ಚರಣಪೂಜೆಯ ಶ್ರೀಚರಣಾಂಭೋಜಕೊಪ್ಪಿಸ ಬಂದೆ
[1][ಶರಣು][1] ನಿಮಗೆ ಸುಖಕರನೆ ಕಾಯೆಂದು ಶ್ರೀಕರನು ಕಿಂಕರಭಾವದಿ ನಿಂದು ।

೧–೧ ದಾವು(ಮೂಲ)

ತೋರಿದನತಿ ಚಿತ್ರವ । ರಂಭಾಸಮ ಪಾತ್ರವ । ಮಾಡುವ ಗಣಸ್ತೋತ್ರವ ।
ಪಾಡುವರಿಗೆ । ನೋಡುವರಿಗೆ । ಬೇಡುವರಿಗೆ ।
ಧರಣಿಯೊಳ್ ಚೌಕಿಯ ಗುರುಸಿದ್ಧೇಶ್ವರನಿರಿಸಿದ ಸ್ಥಿರವಾದ ಸುರಭೂಜ ।
ಮಲ್ಲೇಂದ್ರ ಮಹಾರಾಜ । ಚರಿತದಿಂದ ಘನತೇಜ ॥

೧೮

ಶ್ರೀಗುರುವರ ಸರಾಗದಿ ಕಳಿಸಿ ಮಹಗಜಮಣಿ ಪುಷ್ಪಕವನೇರಿ
ತೂಗುವ ಪಾಠಕರಾಗತ ಭಟಮಾನ್ಯರಾಗ ಬರಲು ಹೊಡಸುತ ಭೇರಿ
ಸಾಗಿಯಲ್ಲಿ ಸೊಗಸಾಗಿ ರಾಜಾಲಯವಾಗ ಪೊಕ್ಕಾನಂದ ಕಳೆದೋರಿ ।
ಕಲಾನಿಧಿಶೇಖರ । ಮಾಡಿಸಿದ ಶ್ರಾವಣಪೂರ । ಭಕ್ತೇಷ್ಟದ ಮಂದಾರ ।
ಹರ್ಷದಾಳುವ । ರಾಜನಾಳುವ ಸುಖದಿ ಬಾಳುವ ।
ತ್ಯಾಗದಿ ಭೋಗದಿ ಯೋಗದಿ ನೃಪವರನೀಗಿಲ್ಲಿ ಸಿದ್ಧೇಶನ ದಯದಿ ।
ಕಿತ್ತೂರೊಳಗತಿಶಯದಿ । ಒಪ್ಪಿರುವ ರಾಜನು ನಯದಿ ॥
ಮಲ್ಲೇಂದ್ರ ಪೂಜಾವಿಲಾಸ ತಾರಾವಳಿ ಸಮಾಪ್ತ ಮಂಗಳಮಹಾ

❖❖

೪

ಮಲ್ಲೇಂದ್ರ ಮಾನಸೋಲ್ಲಾಸ

ಶ್ರೀಕರ ಸುಜನಕೃಪಾಕರ ಕೇಕರ
ಸಾಕಾರ ನಿರಾಕಾರಪರಾ ॥
ಲೋಕಾನೇಕಾವನಕರ ಜಯರವಿ
ಶತಕೋಟಿ ಕೋಟಿ ರುಚಿರತರಾ ॥ ॥೧॥

ಶ್ರೀ ಶಿವಜಯ ಪರಮೇಶ ಪರಾತ್ಪರ
ಕಾಶಿಕಾಪುರಾಧೀಶಭವಾ ॥
ನಾಶಿತ ಭವ ಪರಮಾಮೃತೇಶ
ದಿವಿಜೇಶ ವಿಕೀರ್ಣಾಮಿತ ವಿಭವಾ ॥ ॥೨॥

ಸರ್ವನದಿಯೊಳು ಸುಪರ್ವಸಿಂಧುವೊಲ್
ಪರ್ವತಂಗಳೊಳ್ ಮೇರುವೊಲ್
ಸರ್ವಗೋಗಳೊಳ್ ಕಾಮಧೇನುವೋಲ್
ಸರ್ವದೇವರೊಳ್ ಶಿವಮಿಗಿಲು ॥ ॥೩॥

ಶಿವಸರ್ವೋತ್ತಮ, ದಿವಿಜರೊಳೆಂದೋ
ದುವವು ವೇದವೇದಾಂತಗಳು ॥
ಭವಿಗಳುಳಿದ ಸುರ ನಿವಹಗಳೆನೆ ಕೂ
ಗುವವಾಗಮವು ಪುರಾಣಗಳು ॥ ॥೪॥

ಅದು ನಿಮಿತ್ತ ಲೋಕದಿ ಪುಣ್ಯತಗಳೊ॥
ಳಧಿಕ ವೀರಶೈವಾಖ್ಯವಿದು ॥
ಇದಕೆ ಮುಖ್ಯಗುರು ಪದವು ತತ್ವದವೆ ।
ಸದಮಳ ಶಿವರೂಪದಲಿಹುದು ॥೫॥

ಗುರುವೇ ಬ್ರಹ್ಮನು, ಗುರುವೆ ಜನಾರ್ದನ
ಗುರುವೆ ತಾನು ಪರಶಿವನಹನು ॥
ಗುರುವಿಲ್ಲದೆಮಗೆ । ದೊರೆಯದು ಮುಕ್ತಿಯು ।
ನರಸುರೋರಗರೊಳನುಪಮನು ॥೬॥

ಹರ ಮುನಿದರೆ ಗುರು ಕಾವನು ಗುರು ಮುನಿ
ದಿರೆ ಕಾಲಕಾಲ ಕಾವವನೆ ॥
ಪರಿಕಿಸೆ ಹಂಪೆಯ ರಾಘವಾಂಕ ತಾಂ
ತಿರುಗಿ ಗುರುಪದಕೆ ಬಾಗಿರನೆ ॥ ॥೭॥

ಗುರುವಿನೊಳಾಲಿಂಗದೊಳು ಜಂಗಮದೊ ।
ಳೆರಕಗೊಂಡ ಭಾವನೆಯಿಂದ ॥
ಇರುವ ಭಕ್ತನಿಗೆ ಪುರುಷಾರ್ಥಂಗಳು
ದೊರೆವುತಿಪ್ಪವತಿ ಜವದಿಂದ ॥ ॥೮॥

ಗುರುಲಿಂಗಜಂಗಮರ ಭಕ್ತಿಗೆ ತಾಂ
ಸರಿಗಾಣೆನೆಂದು ನಂದೀಶಾ ॥
ಧರಣಿಯೊಳಂದವತರಿಸಿ ಭಕ್ತಿಯಿಂ
ಮೆರೆವುತಿರ್ದನು ವೃಷಾಧೀಶಾ ॥ ॥೯॥

ದಾಸೋಹವ ಮಾಡುತ್ತೆ ಗಣಂಗಳ
ದಾಸಭಾವದಿಂ ಬಗೆಬಗೆಯ ॥
ಈಶಭಕ್ತರಾಶಾ ಸಮೃದ್ಧಿಯಿಂ ।
ಪೋಷಿಸುತಿರ್ದನು ಸದ್ವಿನಯ ॥ ॥೧೦॥

ಆ ನಂದೀಶ್ವರನಾನಂದದದೆ ಲ
ಕ್ಷಾನುಲಕ್ಷಗಣ ತರ್ಪಣವ ॥
ತಾನೊಂದೊಂದು ದಿನಕೆ ಮಾಡಿ ನಿಯಮ ।
ನೂನವಾದ್ದುದೆಂಬನು ಬಸವಾ ॥ ॥೧೧॥

ಬಸವೇಶ್ವರನಿಗೆ ಬೆಸಸಿದನಭವನು
ವಸುಮತೀತಳದೊಳವತರಿಸಿ ॥
ಅಸದೃಶಭಕ್ತಿಯುನೆಸಗಲಾನೊಲಿದೆ ।
ಶಿಶುವೆ ಬೇಡು ಬಯಕೆಯ ಬಯಸಿ ॥ ॥೧೨॥

ಎನಲಭವನ ಮಾತನು ಕೇಳುತೆ ಬಸ
ವನು ನಮಸ್ಕರಿಸಿ ವಿನಯದಲಿ ।
ಗನಹ ನಿನ್ನಡಿಯ । ನೆನಹಲ್ಲದಲೇ
ನನು ಕಾಮಿಸೆನನುರಾಗದಲಿ ॥ ॥೧೩॥

ಅಂದ ವಚನಕಾನಂದದಿಂದೆ ಶಿವ
ನಂದೀಶ್ವರನಾಲಿಂಗಿಸುತಾ ।
ಕಂದ ನೀಂ ಪ್ರಮಥ । ಬಂಧುವಾಗಿ ಸಾ
ನಂದ ಭಕ್ತಿಯಿಂದಿರು ನಿರುತಾ ॥ ॥೧೪॥

ಈ ಪರಿ ಪೇಳಲ್ಕಾ ಪಶುಪತಿಯಾ
ಜ್ಞಾಪರ ನಂದಿ ನಿಜಾಂಶವನು ॥
ಭೂಪ ಮಲ್ಲಸರ್ಜೋಪನಾಮದಿಂ
ದೀ ಪವಿತ್ರನನು ಸೃಜಿಸಿದನು ॥ ॥೧೫॥

ಸೃಜಿಸಲಾಗಿ ಸರ್ವಜನಪ್ರಿಯಕರ
ವಿಜಿತಶಾತ್ರವ ಪರಾಕ್ರಮನು ॥
ತ್ರಿಜಗತ್ಕೀರ್ತಿ ದ್ವಿಜರಾಜನವೋಲ್ ।
ಮಝಭಾಪೆನಲೋವನಿಳೆಯನು ॥ ॥೧೬॥

ನಳನಹುಷರ ತರನಿಳೆಯ ಧರ್ಮಮತಿ
ದಳೆದು ಪಾಲಿಪನು ನೃಪವರನು ॥
ಕಳವು ಕೊಲೆ ಪಿಸುಣ ಪಳಿವು ಪಾದರವು ।
ಸುಳಿಯಗೊಡನು ನಿಜೋರ್ವಿಯೊಳಿವನು ॥ ॥೧೭॥

ವೀರ್ಯ ಶೌರ್ಯ ಗಾಂಭೀರ್ಯ ಧೈರ್ಯ ಚಾ
ತುರೌದಾರ್ಯ ಗುಣಗಳಿಂದ ॥
ಆರ್ಯಾಚಾರ್ಯ ಸಪರ್ಯಾಚರ್ಯಾ
ಮರ್ಯಾದಾಜ್ಞನು ಮಲ್ಲೇಂದ್ರಾ ॥ ॥೧೮॥

ವಾಸವನೊಲ್ ವಿಭುದಾಶ್ರಯಿ ಗುರುಯುತ
ಗಂಧರ್ವ ಸೇವಿತನು ನೃಪನು ॥
ಭಾಸಮಾನನಂದನ ನಿರೀಕ್ಷಣೋ
ಲ್ಲಾಸ ನಿರ್ಭರನು ವಸುಯುತನು ॥ ॥೧೯॥

ಶಶಿಯಂತೆ ಕಳಾ ನಿಧಿ ರವಿಯಂತೆವೊ
ಲಸಮ ತೇಜದಿಂ ಮಿನುಗುವನು ॥
ಪಶುಪನಂದದಿ ವಿಭೂತಿ ಭೂಷಣನು
ಬಿಸಜಾಕ್ಷನಂತೆ ಬಲಯುತನು ॥ ॥೨೦॥

ಶ್ರೀದನುತ್ತರಾಧಿಪನೋಲಿಭದೊಲ್
ದಾನಾಢ್ಯನನೇಕಪ ನೃಪನು ॥
ಮಾಧವನೊಲ್ ನಂದನ ಸುಭೋದಯನು
ಮೋದಿನಿಯೊಳ್ ಸಲೆ ಶೋಭಿಪನು ॥ ॥೨೧॥

ಈ ನೃಪನ ರಾಜಧಾನಿಯೆನಿಪುದುಪ
ಮಾನರಹಿತ ಕಿತ್ತೂರಪುರ ॥
ಆ ನಳಿನಾಕ್ಷನ ಮಾನಿನಿಗೆ ತವರ್
ತಾನೆನಿಸಿದುದತಿ ಸೌಖ್ಯಕರ ॥ ॥೨೨॥

ಕರಿತುರಗರಥ ಪದಾತಿಜಾತದಿಂ
ಭರಿತಮಾಗಿಹುದು ಕಿತ್ತೂರು ॥
ದೊರೆ ಮಲ್ಲನೃಪನದರೊಳು ಶೋಭಿಪನು ।
ಸುರಪನೊಲ್ ಸಪತ್ನಶರೀರಂ ॥೨೩॥

ಪದಿನಾಲ್ಕುಂ ನಗರದ ಕರ್ಯಾತಿಯು
ಪದಿನಾಲ್ಕು ಲೋಕದಂತೆ ವೊಲು
ಸದಮಳನೃಪಸಂಪದತಿಶಯಕೆ ತವ
ನಿಧಿ ಯಾಗಿಪ್ಪುದು ಸಿರಿವಿಗಿಲು ॥ ॥೨೪॥

ಸತಿಸುತರಿಂ ಶಿವಮತಕತಿಹಿತಮತಿ
ಯುತ ಮಲ್ಲಸರ್ಜ ಭೂವರನು
ಕೃತವಿತತ ಸುಕೃತ ನೇಮಿಸಿದನು ಸಚಿ
ವತೆಗೆ ವೀರಸಂಗಪ್ಪನನು ॥ ॥೨೫॥

ಶಿವಗೆ ನಂದಿಯೆಂಬವೊಲಚ್ಯುತಗು
ದ್ಧವನಂತೆ ಸ್ವಾಮಿಕಾರ್ಯದೊಳು ॥
ಕವಲಿಲ್ಲದ ಸೇವೆಯೊಳು ತತ್ಪರ ಸ
ಚಿವನಿರ್ದನೇಕ ಚಿತ್ತದೊಳು ॥೨೬॥

ಶ್ಲೋಕ : ಪಂಚಚಾಮರ
ವೀರವಲ್ಲಭೇಂದ್ರ ಮಲ್ಲಸರ್ಜಪಾರ್ಥಿವಾಂಗಣೇ !
ಪಾರಪತ್ಯಗಾರ ವೀರಸಂಗತುಂಗಸಾಮಜಃ
ಚಾರುಲಿಂಗಸಂಗಿ ಜಂಗಮಾಂಘ್ರಿಪಾಂಸುಸಂಚಯಂ
ಸ್ವೈರಮಾತ್ಮ ಮೂರ್ದ್ನಿಸಂದಧಾತ್ಯ ಸೌಕರೋದ್ಗತಮ್ ॥ ॥೨೭॥

ಶಮಶರಜಂಗ ಬಹದ್ದರ ಮಲ್ಲಸ
ರ್ಜಮಹಿಂದ್ರ, ದಾನಘನಕೀರ್ತಿ ॥
ಕ್ರಮಿಸಿದುದಖಿಳವ, ಸುಮತೀ ತಳದೊಳು
ಪಮೆಗಾಣೆನೆಂದು ಶುಭವಾರ್ತಿ ॥ ॥೨೮॥

ಕೀರ್ತಿಗೇಳಿ ಶಿವಮೂರ್ತಿಗಳತಿ ವಿ
ಸ್ಫೂರ್ತಿಗಳೀ ನೃಪಭಕ್ತಿಯನು
ಪ್ರಾರ್ಥಿಸಿ ಬರುವಾ ವಾರ್ತೆಗೇಳಿಸ
ರ್ವಾರ್ಥವೆತ್ತಿ ಪಿಡಿದಿಹ ನೃಪನು ॥ ॥೨೯॥

ವೀರ ಮಲ್ಲಸರ್ಜನೃಪ ಪ್ರತಾಪ
ವಾರು ಬಣ್ಣಿಪರು ಭುವನದೊಳು
ತೀರದೆಂದಿಗು ಮಹೋರಗ ವರ್ಣಿಸ
ಲಾರೆನೆಂದಿಳಿದ ಭೂಮಿಯೊಳು ॥ ॥೩೦॥

ವೃತ್ತ : ವಸಂತತಿಲಕಂ
ಪ್ರಾಚ್ಯಾದಿದಿಕ್ಷು ಚತಸೃಷ್ವಮಹೇಂದ್ರವಾಹಾ ।
ದ್ಯಾ : ಸ್ವಸ್ವ ಸನ್ಮುಖರಿ ಪೌನಯುತ್ಸವಃ ಸ್ಯುಃ ॥
ಅಭ್ಯಂತರೋಜ್ವಲ ಪರಂತಪ ಮಲ್ಲಸರ್ಜ ।
ಕ್ಷ್ಮಾಪ ಪ್ರತಾಪ ತಪನಾಂಶು ನಿಮೀಲಿತಾಕ್ಷಃ ॥ ॥೩೧॥

ವಿದ್ವಾಂಸರ್ಗಾಯಕ ಪಾಠಕ ಸುಕ
ವಿನಿವಹಸುಕಾವ್ಯ ಕೋವಿದರು ॥
ಅದ್ವೈತದ ಸಿದ್ಧಾಂತಿಗಳರಸನ ।
ಸದ್ವಿನಯದಿಂದೆ ಹರಸುವರು ॥ ॥೩೨॥

ಅನುಷ್ಟುಪ್ :
ರಾಜಂ ತಂ ಮಲ್ಲರಾಜಂ ತ್ವಾಂ ।
ತಾವಕಾ ಭಾವಕಾನಪಿ ॥
ಸಭಾಯೋಃ ಯಃ ಸಭಾರ್ಯಾಂಶುಃ ।
ಸ ಶಿವಃ ಸ ಶಿವೋವತು ॥ ॥೩೩॥

ಗೂಢಪಾದಃ :
ಶರ್ಮಪ್ರದೋಲ್ಲ ಸದ್ಭಾಸ ।

ಭೋ ನಿರ್ಜರ ನಮಸ್ಕೃತಃ ॥
ವೀರಭಾವ ಶಿವಾರಂತರ್ ।
ಮಲ್ಲಸರ್ಜ ಮಹೀವರಮ್ ॥ ॥೩೪॥

ಈ ಪರಿ ನೃಪನು ಮಹಾಪರಾಕ್ರಮದೆ
ಭೂಪರಿಪಾಲನ ತತ್ಪರನು ॥
ಶ್ರೀಪತಿಸಖಪೂಜಾಪರಾಯಣನು ।
ಭೂಪುರಂದರನೆನಿಸುತಿಹನು ॥ ॥೩೫॥

ಶಿವಕೀರ್ತನದೊಳು ಶಿವಧ್ಯಾನದೊಳು
ಶಿವಮೂರ್ತಿಗಳನುಸರಣದೊಳು ॥
ಶಿವಭಕ್ತಿಯೊಳು ಕಳೆವನು ಸರ್ವಕಾ
ಲವನು ವೀರಶೈವಮತದೊಳು ॥ ॥೩೬॥

ಗದ್ಯ । ಇತಿ ಶ್ರೀಮದನ್ನಗಿರಿಪುರವರಾಧೀಶ್ವರಾಮೃತೇಶ್ವರ ಪದಕಂಜ ಕಿಂಜಲ್ಕ ಚಂಚಚ್ಚಂಚರೀಕ ಕಾಶೀರಾಜಪ್ರಣೀತ ಮಲ್ಲೇಂದ್ರ ಮಾನ ಸೋಲ್ಲಾಸೇ ಪ್ರಥಮೋಲ್ಲಾಸಃ*

ದ್ವಿತೀಯೋಲ್ಲಾಸಂ

ಶ್ರೀ ಮದಮೃತ ಲಿಂಗಾಯ ನಮಸ್ತೇ ।
ಶ್ರೀ ದಾಪ್ತ ಗುಪ್ತ ಭೂವನಾಳೆ ॥
ವಾಮತನು ವಿಧೃತ ರಾಮರಣೀಯಂ
ಪಾರಾವಾರ ಶಿಶುಮೊಳೆ ॥ ॥೧॥

ಅಂತಖಿಳ ಗುಣನಿತಾಂತನೆನಿಪ ಭೂ
ಕಾಂತ ಮಲ್ಲಸರ್ಜನ ನೃಪನು ॥
ಕಂತುರಿಪುವಿನತ್ಯಂತ ಭಕ್ತನು ದಿ
ಗಂತಕೀರ್ತಿ ರಾಜಿಸುತಿಹನು ॥ ॥೨॥

– ॥ ಶ್ರೀ ಶಿವಾರ್ಪಣಮಸ್ತು ॥

ನಿತ್ಯೋತ್ಸವದಿಂ ನಿತ್ಯಮಂಗಳದಿ
ಸತ್ಯೇಂದ್ರ ಚೋಳನಿಗೆ ಸಮನು
ಸತ್ಯ ಪರಾಯಣ ಸತ್ಯನುರಕ್ತನ
ಪತ್ಯಾಮಾತ್ಯ ಸಮನ್ವಿತನು ॥ ॥೩॥

ಪ್ರತಿವರ್ಷವು ನೃಪನತಿಹರ್ಷದೆ ಶಿವ
ಮತಸಿದ್ಧ ಪಾದಪೂಜನವ
ವಿತತ ವಿಭವಸಂಯುತನು ಮಾಳ್ಪನು ನಿ
ಯುತ ಚಿತ್ತನು ಸಂತರ್ಪಣವ ॥ ॥೪॥

ಶಿವಗಣಂಗಳೊಪ್ಪುವ ಪಾದದೊಳಾ
ಶಿವಸಾನ್ನಿಧ್ಯದ ಭಾವನೆಯು
ಅವಿರಳವಾಗಿರಲವನು ವೀರಶೈ
ವ ವರೀಯನೆನಿಪ ಶುಭಮತಿಯು ॥ ॥೫॥

ಓದುವವಾಗಮ ವೇದಗಳೀಚರ
ನೂರ್ಧ್ವಮೂಲ ಶಿವದೇಹವದು
ಪಾದದೆ ಗಿರಿಶನುರೋದೇಶದಿ ಹರಿ
ಮೂರ್ಧದೊಳಜನಶ್ವತ್ಥವಿದು ॥೬॥

ಊರ್ಧ್ವಮೂಲಮಧಶ್ಶಾಖಂ
ಆಶ್ವತ್ಥಂ ಪ್ರಾಹುರವ್ಯಯಮ್ ।
ಛಂದಾಸಿ ಯಸ್ಯ ಪರ್ಣಾನಿ
ಯಸ್ತವೇದ ಸವೇದವಿತ್ ॥ ॥೭॥

ಮೂಲತೋ ಬ್ರಹ್ಮರೂಪಾಯ ।
ಮಧ್ಯತೋ ವಿಷ್ಣುರೂಪಿಣೇ ॥
ಅಗ್ರತಃ ಶಿವರೂಪಾಯ ।
ವೃಕ್ಷ ರಾಜಾಯ ತೇ ನಮಃ ॥ ॥೮॥

ಇದು ಕಾರಣ ಚರಪದವು ಪೂಜ್ಯ ಶಿವ ।
ನದರೊಳೆಂಬ ಭಾವನೆಯಿಂದ
ಸದುಪಚಾರದಿಂದೊದಗಿ ಪೂಜಿಸಲ್
ವಿಧುಮೌಳಿಯೊಲಿವ ಮುದದಿಂದ ॥ ॥೯॥

ಈ ನಿಯಮವರಿತು ಸಾನುರಾಗದಿಂ
ಶ್ರೀ ನೃಪನು ಜಂಗಮೌಘವನು
ತಾ ನಮಿಸುತೆ ಪದ ರೇಣುವಂ ತಳೆದು
ಸ್ನಾನದಿಂ ಪ್ರಯತನಾಗಿಹನು ॥ ॥೧೦॥

ಶ್ರಾವಣೋತ್ಸವವ ಭಾವಶುದ್ಧಿಯಿಂ
ಭೂವರ ಮಾಳ್ಪನು ಮಲ್ಲೇಂದ್ರ
ಈ ವೃತ್ತಾಂತವು ತೀವಿರೆ ಭುವನದೆ
ಧಾವಿಸಿ ಬರ್ಪುದು ಗಣವೃಂದ ॥೧೧॥

ಬಂದ ಗಣಂಗಳನಂದಣದೊಳು ಸಾ
ನಂದದೆ ಮೂರ್ತಿಗೊಳಿಸಿಕೊಂಡು
ತಂದರಮನೆಯೊಳು ಛಂದದಿಂದಡಿಗೆ
ವಂದಿಸುವನು ನೃಪ ಮುಂಕೊಂಡು ॥೧೨॥

ಅರಮನೆಯೊಳು ಶಂಕರನೆ ಬರ್ಪನೆಂ
ದುರುತರ ಹರ್ಷದೆ ಸಿಂಗರಿಸಿ
ವರ ಕೈಲಾಸದ ತೆರನಾದುದು ಮನೆ
ಪರಿಪರಿ ಕೌಶಲ್ಯವ ರಚಿಸಿ ॥೧೩॥

ಚರಮೂರ್ತಿಗಳೈತರುವ ಕಾಲದೊಳ್
ಔರದೆ ನಿಂದ ರಂಭಾದಿಗಳಾ
ಭರದ ಕೋಪದಿಂದ ತರಿಸಿ ಕಂಭಗಳಿ
ಗಿರದೆ ಕಟ್ಟಿಸಿದನತಿ ಚಪಳಾ ॥ ॥೧೪॥

ಶಿವದ್ವೇಷಿಯಭಿನವ ಕೇತಕಿಯೆಂ
ದವನು ಹುಡುಹುಡುಕಿ ತರಹೇಳಿ
ತವಕದೆ ತಲೆ ಕೆಳಗಾಗಿ ತೋರಣದೊ
ಳವನು ಕಟ್ಟಿಸಿದ ನೃಪಮೌಳಿ ॥ ॥೧೫॥

ಘನ ಕುಜಾತಿಸಂಗವು ಸುಮನಸ್ತತಿ
ಗನುಚಿತವೆಂದು ತರಿತರಿಸಿ
ಮಿನುಗುವ ಸೌಧಾಗ್ರವನೇರಿಸುವನು
ಘನವಂಶ ಸಂಗವ [ನ] ನುಗೊಳಿಸಿ ॥೧೬॥

ಅಸಮಾಕ್ಷನಹಿತ ಕುಸುಮಾಸ್ತ್ರನಿವನ
ವಿಶಿಖವೊಂದುಳಿಯದೆಲ್ಲವನು ॥
ಪ್ರಸಭದಿಂ ತರಿಸಿ ಪಂತಿಗಟ್ಟಿಸಿದ
ವಸುಮತೀಶನತಿ ಸಂಭ್ರಮನು ॥ ॥೧೭॥

ಸುರಗಿಯು ಸೇವಂತಿಗೆಯು ಮೊಲ್ಲೆಗಳು
ಸುರ ಚಂಪಕವು ಶಿರೀಷಗಳು
ದರದಳದರವಿಂದಗಳು ಕುಂದಗಳು
ಸುರಹೊನ್ನೆ ಕರ್ಣಕಾರಗಳು ॥ ॥೧೮॥

ಸೂಜಿಮಲ್ಲಿಗೆಯು ಜಾಜಿ ಮಲ್ಲಿ ಕೆಂ
ಜಾಜಿ ಮಲ್ಲಿಗೆಯು ಚಂಡುಗಳು
ರಾಜಿಪ ಸೌಗಂಧಿಕ ಸುಗಂಧಿಗಳು
ಸೋಜಿಗದ ರುದ್ರಪುಷ್ಪಗಳು ॥ ॥೧೯॥

ಕೆಂದಾವರೆ ಬೆಳ್ದಾವರೆಗಳು ಪೊಳೆ
ವಿಂದೀವರ ಪ್ರಸೂನಗಳು
ಮಂದಾರವು ಶಿವಮಲ್ಲಿಕೆಗಳು ಮಕ
ರಂದ ನಿರ್ಭರದ ಪುಷ್ಪಗಳು ॥ ॥೨೦॥

ಕರವೀರ ಬಕುಲ ಪಾಟಲಾದಿಗಳು
ಸುರಸಾಲ ಮಾಲತಿಯಶೋಕ
ಅರಸಿಯಕಾಲ ಸುಮಂಗಳ ಮಂಗಳ
ಕರವೆನೆ ತಂದುದು ನೃಪಲೋಕ ॥ ॥೨೧॥

ಮಾಲಗಾರರು ವಿಶಾಲಪುಷ್ಪಗಳ
ಸಾಲುಗೊಂಡು ಕೌಶಲದಲಿ
ಲೋಲಮಲ್ಲಭೂಪಾಲ ಮೆಚ್ಚುವೊಲ್
ಮಾಲಿಕಾದಿಗಳ ರಚಿಸುತಲಿ ॥ ॥೨೨॥

ಗಗನಗಸೌಧಾಗ್ರಾವಧಿ ನೆಲದಿಂದ
ಚಿಗಿದು ಪುಷ್ಪಗಳೆ ನಿಂದವೊಲು
ಸೊಗಯಿಪುದುಡುತತಿ ಜಗುಳ್ದು ಬೀಳ್ವ ಧಾ
ರೆಗಳಂತಿಳುಪಿದ ಮಾಲೆಗಳು ॥ ॥೨೩॥

ದಿಟ್ಟಗಚ್ಚರಂಗೊಟ್ಟು ನಗುವ ಮಣಿ
ಕುಟ್ಟಿಮದ ರಂಗವಲ್ಲಿಗಳಾ
ದಿಟ್ಟವಾಗಿ ಬರೆದಿಟ್ಟ ಜಾಣತನವೆಷ್ಟು
ವರ್ಣಿಪೆನು ಸುರುಚಿಗಳಾ ॥ ॥೨೪॥

ಸುರಧೇನು ಕಲ್ಪತರು ಚಿಂತಾಮಣಿ
ಬರೆದ ಚಿತ್ರಪಟವೇ ಅಹುದೋ
ಪರಿಕಿಸ್ಕುವಿಂದ ರಚಿತ ದಿವ್ಯಾಂ
ಬರಮಮಮ ರಂಗವಲ್ಲಿಯಿದೋ ॥ ॥೨೫॥

ಪಂಚವರ್ಣ ಸುಸಮಂಚಿತ ಚೂರ್ಣಗ
ಳಿಂ ಚಿತ್ರರಂಗವಲ್ಲಿಯನು
ಚಂಚಲಾತಿ ರುಚಿ ಸಂಚಯಮೆನಿಸಿದು
ದೇ ಚಮತ್ಕೃತಿಯ ವರ್ಣಿಪೆನು ॥ ॥೨೬॥

ಶಶಿಕಾಂತದ ಕಲಶ ಶತ ಸಂಖ್ಯೆಗಳು
ದಿಶದ ದೀಪಿಕಾ ಗರ್ಭಗಳು
ಎಸೆದವು ಸಾಲ್ಗೊಂಡಸಮ ವಿಸ್ಮಯವ
ಪಸರಿಸಿದವು ಹರ್ಮ್ಯಾಗ್ರದೊಳು॥ ॥೨೭॥

ತೊಳಗುವಭ್ರದೊಳಿಳುಪಿದ ಪೂಗೊಂ
ಚಲು ಫಲೋತ್ಕರದ ಗುಚ್ಚಗಳು
ಇಳೆಯರಸಗಿಂದ್ರ ಕಳುಹಿದ ಸುರತರು
ಗಳ ಫಲಪುಷ್ಪಗಳಂತೆವೊಲು ॥ ॥೨೮॥

ಬಹುವಿಧ ಪಲ್ಲವ ನಿವಹ ತೋರಣಗ
ಳಹಹ ವರ್ಣಿಸುವಡಳವಲ್ಲಾ
ಅಹಿಪತಿಗೆಯು ನಿರ್ವಹಿಸಲೆಂತುಟೋ
ಮಹಿಪತಿಯ ಮಹೋತ್ಸವವೆಲ್ಲಾ ॥ ॥೨೯॥

ಸದಮಳ ಚಿತ್ರದ ಸದರಗಟ್ಟದೊಳ್
ಪದುಳದಿಂದೆ ಗದ್ದುಗೆಯಿಟ್ಟು
ಸದನಾಂಗಣಕ್ಕೈದಿದ ಗುರುಮೂರ್ತಿಯ
ಪದಕೆ ಮಲ್ಲನೃಪ ಪೊಡಮಟ್ಟು ॥ ॥೩೦॥

ಸಾವಧದಿಂ ಪ್ರಭುದೇವರ ಮೃದುಳ ಕ
ರಾವಲಂಬನದೆ ಕರತಂದು
ದೇವ ಶಿವ ಮಹಾದೇವ ಗುರುಗಳಿ
ಲ್ಲೇವೆ ಮೂರ್ತಮಾಡುವದೆಂದು ॥ ॥೩೧॥

ಸವಿನಯೋಕ್ತಿಯಿಂದ ವಿರಳ ಸದ್ಭ
ಕ್ತಿವಶನಾಗಿ ನೃಪ ನಿಂದಿರಲು
ತವಕದಲುಪಚರಿಸುವರವರ್ಗಳ ಸ
ಚಿವರು ವೀರಸಂಗಪ್ಪಗಳು ॥ ॥೩೨॥

ಕರಪಲ್ಲವದೊಳು ಗುರುಮೂರ್ತಿಗಳ ಸು
ಚರಣ ಪಲ್ಲವ (ನಿ)ರಿಸಿಕೊಂಡು
ಇರುಳು ಹಗಲು ಕುಳ್ಳಿರುವವನು ಸಚಿವನು
ಗುರುನಿ [ವೇ]ಶದಿಂ ಬಳಿಗೊಂಡು ॥ ॥೩೩॥

ಚಾರುತರದ ಪದಿನಾರುಪಚಾರವ
ವೀರಶೈವಮತದನುಮತದಿ
ಭೂರಮಣನು ಪರಿವಾರ ಸಹಿತ ಪೂ
ಜಾರತನಾದನು ಸಂಭ್ರಮದಿಂ॥ ॥೩೪॥

ಶಿವಸಹಸ್ರನಾಮವನು ಕೀರ್ತಿಸುತೆ
ನವಬಿಲ್ವ ಪಲ್ಲವಗಳಿಂದ ॥
ಶಿವಕರ ಗುರುಪಾದವನು ಪೂಜಿಪನು
ಲಕ್ಷಕೋಟಿ ಸಂಖ್ಯೆಗಳಿಂದ ॥ ॥೩೫॥

ಒಂದು ಬಿಲ್ವದಳವಿಂದುಶೇಖರಗೆ
ತಂದರ್ಪಿ[ಸುವ] ಸುಕೃತ ತತಿಯಾ
ಛಂದದೆ ವರ್ಣಿಪೆನೆಂದೊಡೆ ತೀರದ
ಹೀಂದ್ರ ಪೇಳನದರುಪಮಿತಿಮಾ ॥ ॥೩೬॥

ಶ್ರೀಶಗರ್ಪಿಸಿರೆ ಸಾಸಿರ ತುಲಸಿಯ
ಸಾಸಿರ ಪ್ರದಕ್ಷಣದಿಂದ ॥
ಏಸು ಪುಣ್ಯಗಳ ರಾಶಿ ಬರ್ಪವು ಮ
ಹೇಶಗೊಂದು ಬಿಲ್ವದಲೆಂದ ॥ ॥೩೭॥

ಪಚ್ಚದದ್ರಿಯೋಲಚ್ಚರಿಪುದು ಬಿ
ಲ್ವೋಚ್ಚಯ ಪ್ರಭಾವಳಿಯಂದಾ
ಸಚ್ಚರಿತ ಗುರು ತನುಚ್ಚದಿಯದು
ಸಾಕ್ಷಾಚ್ಛಿವನೆಂಬ ಪರಿಯು ಚೆಂದಾ ॥ ॥೩೮॥

ಮಲ್ಲಿಕಾದಿ ಸುಮವೆಲ್ಲರ್ಪಿಸಿರೆ
ಚೆಲ್ಲಿರ್ದ ತಾರೆಗಳ ತೆರನು ॥
ಸೊಲ್ಲಿಪೆನೆನಲಳವಲ್ಲ ಸೌಮ್ಯವಿದ
ಕಿಲ್ಲ ಬಲ್ಲನು ಸದಾಶಿವನು ॥ ॥೩೯॥

ಅಗರು ಚಂದನಾದಿಗಳ ಧೂಪಗಳು
ಮಗಮಗಿಸಿಹುದೆಲ್ಲ ಕಡೆಯು
ಝುಗಝುಗಿಸುವ ದೀಪಗಳು ಕೋಟಿಸಂ
ಖ್ಯೆಗಳು ಬೆಳಗುತಿರ್ಪ್ಪಿಟ್ಟಡಿಯು ॥ ॥೪೦॥

ಸರಸ ಫಲಂಗಳ ತರಿಸಿ ನಿವೇದನ
ಕಿರಿಸಿರ್ಪರ ಸಂಖ್ಯಾಕಗಳಿಂ ॥
ಅರಸ ಮಲ್ಲಭೂವರ ನಿ[ರ್ದೇ]ಶದಿಂ
ಕರಕ ನಾರಿಕೇಳಾದಿಗಳಾ ॥ ॥೪೧॥

ಚರಸಮಾಜಕಚ್ಚರಿವೆನಿಸಿರೆ ಪರಿ
ಪರಿಪಾಕ ಷಡ್ರಸಾನ್ನಗಳಾ ॥
ಪರಮಭಕ್ತಿಯಿಂ ಪರಿವೇಷಿಸಿ ಗುರು
ಚರತೃಪ್ತಿಯ ಮಾಳ್ಪನು ವಿಮಳಾ ॥ ॥೪೨॥

ಲಕ್ಷಜಂಗಮಕೆ ಭಿಕ್ಷವನಿತ್ತು ಸ
ದಕ್ಷಿಣ ತಾಂಬೂಲವನಿತ್ತು
ತ್ರ್ಯಕ್ಷನೊಲಿಸಿಕೊಂಡೀ ಕ್ಷಿತಿಪಾಲಕ
ಗಕ್ಷಯಮಾದುದು ಸಂಪತ್ತು ॥ ॥೪೩॥

ಗದ್ಯ ॥ ಇತಿ ಶ್ರೀಮದನ್ನಗಿರಿಪುರವರಾಧೀಶ್ವರಾಮೃತೇಶ್ವರ ಪದಕಂಜ ಕಿಂಜಲ್ಕ ಚಂಚಚ್ಚಂಚರೀಕ ಕಾಶೀರಾಜಪ್ರಣೀತ ಮಲ್ಲೇಂದ್ರ ಮಾನಸೋಲ್ಲಾಸೇ ದ್ವಿತೀಯೋಲ್ಲಾಸಃ*

- ॥ ಶ್ರೀ ಶಿವಾರ್ಪಣಮಸ್ತು ॥

ತೃತೀಯೋಲ್ಲಾಸಂ

ಶ್ರೀಮದನ್ನಗಿರಿಧಾಮ ನಿರಾಮಯ
ರಾಮಣೀಯ ಸುಗುಣೋಲ್ಲಾಸಾ ॥
ಪಾಮರ ಪಾವನಕರ ಜಯ ಸೋಮಕೃ
ಪಾಮಯಾಮೃತೇಶಗಿರೀಶ ॥ ॥೧॥

ಅಂತು ನೃಪಾಲ ನಿತಾಂತಭಕ್ತಿಯಿಂ
ಸಂತತ ಜಂಗಮಮೂರ್ತಿಗಳಾ
ಸಂತರ್ಪಣವ ನಿಶಾಂತದೊಳೆಸಗಿ ದಿ
ಗಂತ ಕೀರ್ತಿವಡೆದನು ವಿಮಳಾ ॥ ॥೨॥

ರಾಜೋಪಚಾರ ಪೂಜೆಯನಖಿಳರು
ಸೋಜಿಗಮೆನೆ ಪ್ರಭುದೇವರಿಗೆ
ರಾಜೇಂದ್ರ ಕಲ್ಪಭೂಜ ಮಾಡಿದ ಸ
ಮಾಜ ಸಂಯುತದಿ ಮೆರವಣಿಗೆ ॥ ॥೩॥

ಛತ್ರ ಚಾಮರ ಪವಿತ್ರ ....
.... ದಿ ಸಂಭ್ರಮದಿ ॥
ಧಾತ್ರಿಶನು ನಯನ ....
.... ತ್ರ ಜಂಗಮಕೆ ಸಾದರದಿ ॥ ॥೪॥

ಸತ್ಕಾರ ಮಾಳ್ಪ ತತ್ಕಾಲಕೆ ಹರ್ಷೊ
ತ್ಕರದ ನರ್ತಕೀ ಜನವು ॥
ಉತ್ತಮನದೆ ಧಿಮ್ಮಿತ್ತಧ್ಧಿಕಿತಯೆ
ನುತ್ತೆ ನೆರಸುತಿರ್ಪುದು ಘನವು ॥ ॥೫॥

ಘನ ರಾಗರಾಗಿಣೀ ನಿಪುಣರು ತತ್ತನ
ನನಂ ತನಂ ರಿರಿಯೆಂದು ॥

ಜನಹೃದಯಕೆ ತಂಪೆನೆ ಪಾಡುವರು ನೃ
ಪನ ಸದ್ಗುರು ನಿಕಟದೆ ನಿಂದು॥ ॥೬॥

ಭೇರಿ ತುತೂರಿ ನಪೂರಿ ಕಹಳೆ ಕಂ
ಸಾಳ ತಾಳ ಸುಮೃದಂಗಗಳಾ
ಭೂರಿ ನಿನಾದವು ಭೋರೆನೆ ದಿಕ್ಕರಿ
ಚೀರುವಂತೆ ತೋರ್ಪುದು ಸಕಳಾ ॥ ॥೭॥

ಆ ವೇಳೆಯೊಳು ದಶಾವತಾರರತಿ
ಹಾವಭಾವ ವಿಭ್ರಮದಿಂದ ॥
ಕೋವಿದ ಜನರಿಗತೀವ ಹರ್ಷವನು
ತೀವಿದರು ನರ್ತನಗಳಿಂದ ॥ ॥೮॥

ಭೂತನಾಥ ಸುಪ್ರೀತಿಕಾರಕ ಪು
ರಾತನರ್ಕಲಹಕೇತುಗಳು ॥
ನೀತಿಕೋವಿದರು ಚಾತುರ್ಯದೆ ಗುಹ
ತಾತ ಕಥೆಯ ಕೇಳಿಪರಿರುಳು ॥ ॥೯॥

ಶಿವಲೀಲೆಯ ಪಾಡುವರು ಕೆಲಂಬರು
ಅವನೀಶನಾಜ್ಞೆಯನು ಪಡೆದು
ಶಿವಶಿವಶಿವಶಿವ ಸಾಂಬಯೆಂದು ನಾ
ಮವನಡಿಗಡಿಗೆ ನುಡಿದು ನುಡಿದು ॥ ॥೧೦॥

ಈ ಪರಿ ಗುರುಪೂಜಾ ಪರಾಯಣನು
ಭೂಪನುಳಿದ ಶಿವಮೂರ್ತಿಗಳಾ
ಶ್ರೀಪಾದಗಳ ಮಹೋಪಚಾರದಿಂ
ಭಾಪೆನೆ ಪೂಜಿಪನತಿ ವಿಮಳಾ ॥ ॥೧೧॥

ರುಚಿರ ಸುವಸ್ತ್ರ ಪ್ರಚಯವ ಜಂಗಮ
ಕುಚಿತವಿತ್ತು ಸತ್ಕರಿಸಿದನು
ಶುಚಿಮಂತನು ಸರ್ವಚರರಿನಾಶೀ
ರ್ವಚನವ ಪಡೆದನು ॥ ॥೧೨॥

• ಮೆರವಣಿಗೆಯ ಜಗವರಿಯೆ ಮಾಡಿಸಿದ
ಗುರು..... ಪ್ರಭುದೇವರಿಗೆ
ಪರಮಮುದದಿ ಸಿಂಗರಿಸಿ ಚತುರ್ಬಲ
ವೆರಸಿ ನಡೆದನರಿದೆನೆ ಧರೆಗೆ ॥ ॥೧೩॥

ಹಗಲ್ಬತ್ತಿ ಬಾಣಗಳ ಬಿರುಸು ಕೊಂ
ಬುಗಳ ಕೋಟಿ ಶತಕೋಟಿಯೊಳು
ಝುಗಝುಗಿಸುತೆ ಪೊಗರೊಗೆವುತಿರ್ದವಾ
ಶುಗತಿಯಿಂ ತದುತ್ಸವದಿರುಳು ॥ ॥೧೪॥

ಸರಳಬಾಣಗಳ್ ತ್ವರಿತದಭ್ರದೊಳ್
ಸ್ವರರವೆನುತೆ ಸಂಚರಿಸಿದವು ॥
ಬಿರಿಸಿನಾರ್ಭಟಕೆ ಬಿರಿಯೆ ಭೂಮಿ ಖೇ
ಚರರು ತಾರೆಗಳು ಕಳಚುವವು ॥ ॥೧೫॥

ಹಗಲ್ಬತ್ತಿ ಬೆಳಗಿಗೆ ಚಂದಿರನೆದೆ
ಧಿಗಿಲೆನಲ್ ಸುಧಾಸಾರವದು
ಗಗನದಿಂದ ಭೂಮಿಗಿಳಿದು ಮಡುಗ
ಟ್ಟುಗುಮೆನೆ ಪಂಜು ಬೆಳಗುತಿಹುದು ॥ ॥೧೬॥

ಇದನು ನೋಳ್ಪೆನೆಂದುದಯಾದ್ರಿಯನೇರಿ
ದನು ಲೋಕಬಾಂಧವ ಜವದಿ
ಚದುರ ನೃಪನು ಕರಿಸಿದ ಮಿತ್ರನು ತಾ
ನೊದಗಿ ಬಂದನೆಂಬೊಲ್ಮುದದಿ ॥ ॥೧೭॥

ಚೂರ್ಣಿಕಾ ॥ ಶ್ರೀಮದಖಿಳ ನಿಲಿಂಪ ಸಂಪದತಿ ಕಂಪದಪೂರ್ವ ಸುಪರ್ವ ಗರ್ವ ನಿರ್ವಾಪಣಚಣಚಕ್ರಿ ಪರಿಕ್ರಾಂತಕಾಂಡ ಮಧ್ಯಮಂಡಲಮಂಡಿತ ವಿಗ್ರಹಃ॥ ಅಮಂದಮಂದಾರವಿಂದಲುಭೋಪಲಬ್ಧಿಲಬ್ಧವಧ ವಿಧಾಯಕ ವಿಕಟ ವಿಧುಕರ ಮಧುಕರ ನಿರ್ಯಾತ ದುರ್ಯಾತನಾರ್ತಸ್ವರ ವಿಚ್ಛೇದಕ ಸ್ವಚ್ಛನಿಜಭವಿ ಕಾರ್ಯ ಧುರ್ಯಕರಾನುಗ್ರಹಃ ॥ ಪ್ರಯತ ನಿಯತೇಂದ್ರಿಯಯಿವ ಭೂಷಾಯಮಾನ ಕಿಂಕರ ಕಷಾಂಯಾಂಬರಃ ॥ ನಂದನಂದನಯಿವಪಯೋ ಧಿಜಾತ ರುಚಿಸ್ತೇಯರೇಯಃ ॥ ನಾರಾಯಣಯಿವ ಪದ್ಮಾಪೋದ ವಿನೋ......... (ಅಪೂರ್ಣ)

❖❖

೫

ಮಲ್ಲೇಂದ್ರ ವಿಜಯ

ಶ್ರೀಮದಚಲೇಂದ್ರಕನ್ಯಾಂಬಕೋತ್ಪಲಚಂದ್ರ ।
ಕಾಮಮದಸಾಮಜ ಮೃಗೇಂದ್ರ, ಸದ್ಗುಣಸಾಂದ್ರ ।
ಹೇಮಗರ್ಭ ಪ್ರಮುಖ ವೈಮಾನಿಕ ಪ್ರತತಿ ಮುಕುಟಮಣಿರಂಜಿತ ಪದ ॥
ಭೀಮಾನುಜೇಷುದ, ಶ್ಯಾಮಲಗ್ರೀವ, ಕರು
ಣಾಮಹಿತ ಹಿತನತಶ್ಯಾಮಾರುಣಾಭ ನಿ ।
ಸ್ಸೀಮ ಮುನಿ ಹೃದ್ಧಾಮ ಕ್ಷೇಮಕರ ಶ್ರೀ ಸಿದ್ಧಲಿಂಗ ಭವಭಂಗ ಸಲಹು ॥೧॥

ಶ್ರೀಮಚ್ಛತಾನಂದ ಸಂಕ್ರಂದನ ಪ್ರಮುಖ ।
ವೈಮಾನಿಕ ಪ್ರತತಿ ಮಕುಟತತಟ ಘಟಿತಮಣಿ ।
ಧಾಮರಂಜಿತ ಚರಣ ತಾಮರಸಯುಗಳಾಭಿರಾಮ ಶಂಕರ ಪೂಜಕಂ ॥
ಭೂಮೀಶವರ್ಯ ಕಾಮಿತಭರ್ಯ ಸುರಭೂಜ
ಸಾಮಜಾರೂಢ ಸುತ್ರಾಮ ಸಂಪತ್ರೌಢ
ಕಾಮಸುಂದರ ಕಳಾಭಿಜ್ಞ ವಿದ್ವಜ್ಜನಾವೋದ ವಿತರಣವಿನೋದ ॥ ॥೨॥

ಗುರುಮುಖಾಷ್ಟಾವರಣ ಸುರುಚಿರಾಭರಣ ಶಂ ।
ಕರಸಮಯವಾರ್ಧಿವರ್ಧನ ಸುಧಾಕಿರಣನೀ ।
ಶ್ವರಮುಖ ಪ್ರವರ ಪಂಚಾಚಾರ ಸುಪ್ರತಿಷ್ಠಾಚಾರ್ಯ ಶೌರ್ಯಧೈರ್ಯಂ ॥
ಶರಣಾಗತೌಘ ಪರಿಪಾಲನ ತ್ರಾಣ ಸುಮ
ಶರಹರ ಪದಾಬ್ಜ ಷಟ್ಚರಣ ಮಂಗಳ ಮಹೇ
ಶ್ವರ ಗಣಾನಂದ ನಂದೀಶಾವತಾರ ಶಮಶರಜಂಗ ವರ ಬಹದರಂ॥ ॥೩॥

ಫುಲ್ಲಶರಹರ ಪಾದಪಲ್ಲವಾರ್ಚಕ ಭೂಮಿ ।
ವಲ್ಲಭರೊಳಿಲ್ಲನೀತಿಯಲಿ ನಯದಲ್ಲಿ ಜಗ ।
ದಲ್ಲಿ ಭರಿತಾಮಲ ಯಶೋಮಯಾಮೃತ ಕರೋಪಮ ಶಾಂತ ಶತ್ರುಮಥನಂ ॥
ಮಲ್ಲಿಕಾರ್ಜುನ ಕೃಪಾಪಾತ್ರ ಪಾವನಗಾತ್ರ ।
ಮಲ್ಲೇಂದ್ರ ರುಚಿರುಂದ್ರ ಸಲ್ಲಲಿತ ಚರಿತ ವಿಬು
ಧೋಲ್ಲಾಸ ಚತುರಂಗ ಬಲದೊಡನೆ ಚಲದೊಡನೆ ಸೌಖ್ಯದಿಂದಾಳುತಿರಲು ॥೪॥

ದಕ್ಷಿಣಾಶಾವರೋಪಮ ದುಷ್ಟಭೂಮಿಪಾ?
ಧ್ಯಕ್ಷ ದುರ್ಲಕ್ಷಣಾನ್ವಿತ ಚಿತ್ರದುರ್ಗಮಂ
ಲಕ್ಷಿಯಿಲ್ಲದೆ ತೆಗೆದುಕೊಂಡಾಗ ನೋಡಲಾ ಧಾರವಾಡದ ತೆರದಲಿ ॥
ಅಕ್ಷಿಯಿಂದೀಕ್ಷಿಸಲ್ ಬಲಗೂಡಿ ತೆಗೆದುಕೊಂ
ಡಕ್ಷಣವೆ ಕಿತ್ತೂರ ಕೊಂಡು ಶಿವಭಕ್ತಕುಲ
ಪಕ್ಷನಂ ಪ್ರತ್ಯಕ್ಷ ಪಿಡಿಯಬೇಕೆಂದಪೇಕ್ಷಿಸಲು ಮಹಿಮೋತ್ಕರ್ಷಕೆ ॥೫॥

ಧರಣಿರಥಮಾಡಿ ಸುರಗಿರಿಧರ್ಮ ವಿಡಿದು ಹರಿ
ಶರಗೂಡಿ ನಿಗಮಗಳ ತುರಗಗಳ ಪೂಡಿ ಶಶಿ ।
ತರಣಿಗಳ ಚಕ್ರಗಳ ಮಾಡಿ ಶರನಿಧಿ ಶರಧಿಯಾಗಿ ಸುರಬಲವಗೂಡಿ ॥
ಶರಜನ್ಮ ಸೇನಾನಿಯಾಗಲಾಗಿರದೆ ಸಾ
ಸಿರ ಬರಿಸ ಲಕ್ಷಿಸುತ್ತಾ ತ್ರಿಪುರಮಂ ಸುಟ್ಟ
ಗಿರಿಶಗೇನರಿದು ಸುಡಲೆನಲುರಿಯದಾ ತ್ರಿಪುರಹರ ತನ್ನ ಭಜಕರುಗಳು ॥೬॥

ರಿಪುಗಳ್ಗೆ ದೊರೆಯಲವರುಗಳ ನಿಷ್ಠಾಭಾವ ।
ನಿಪುಣತೆಯ ರಾಜಸುಖಮಂ ತ್ಯಜಿಸಿ ಬಿಡದೆ ಪಾ
ದಪಯೋಜಮರ್ಚಿಸುವದಂ ನೋಡಬೇಕೆಂದು ಶಂಕರ ಜಗದ್ವಲ್ಲಭಂ ॥
ಅಪಗತೈಶ್ವರ್ಯರಂ ಮಾಡಿ ಮುಕ್ತ್ಯಂಗನೆಗೆ ।
ಯುಪಮೆಗೊಡುವಾ ಲಲಿತಗಾತ್ರೆ ರುದ್ರವ್ವನವ
ರ ಪರಶಿವಶಕ್ತಿಯೆಂಬುದ ಜಗಕೆ ತೋರಬೇಕೆಂದುಳುಹಿಯವರ ಕಳುಹಿ ॥೭॥

ಸೋಮಶೇಖರ ಪಾದತಾಮರಸವರ್ಚಿಸುವ
ಸೀಮಂತಿನೀರತ್ನ ಪತಿಪಾದಕಮಲ ಧ್ಯಾ
ನಾಮರಾಹಾರ ತನಗಾಗಿ ರುದ್ರವ್ವನವರರ್ಚಿಸಿದರೆಂತೆನಲ್ಕೆ ॥
ಸೀಮಂತಿಗೀ ಸೌಖ್ಯದಿಂದ ಚಂದ್ರಾಂಗದ ನಿ
ರಾಮಯ ಕುಮಾರ ಮಾವನ ಮನೆಯೊಳಿರೆ ಬಂದು
ದಾ ಮಾಧವದೊಳಂಬು ಕೇಳಿಗಾ ಮೋದದಿಂದಾಯಮುನೆಯಂ ಸಾರಲು ॥೮॥

ನಾವೆಯಂ ಪತ್ತಿ ನಾನಾವಿಧವಿಲಾಸದಿ ಜ
ಲಾವರ್ತದೊಳ್ ಕೇಳಿಯಾವರಿಸಿ ಮುಳುಗಲಾ
ಭಾವೆ ರೋಧಿಸಧಿ ಋಷಿಪತ್ನಿಯಂ ಕೇಳೆ ಶ್ರೀ ಸೋಮವಾರ ವ್ರತವನು ॥
ಆವಗಂ ಮಾಡಲಾ ದೇವದೇವಾರಾಧ್ಯ ।
ಪಾವನಾತ್ಮಕ ನಿನ್ನ ಪತಿಯ ತಂದೀವನೆನ
ಲಾ ವಿಮಲಚರಿತೆ ತದ್ವ್ರತವನಾಚರಿಸುತ್ತಲಿರಲಿತ್ತಲಾ ಕುವರನ ॥೯॥

ನಾಗಾಂಗನೆಯರು ಮದನಾಗಮಪ್ರೌಢ ನೀ ।
ನಾಗದಿರುವರೆ ಬೆದರಬೇಡೆಂದು ಕರೆದೊಯ್ದು ।
ನಾಗರಾಜನ ತೋರಿಸಲ್ಕಾಗ ನಿನ್ನಿಷ್ಟದೈವಮಂ ಪೇಳೆನಲ್ಕೆ ॥
ರಾಗದಿಂ ವಿಷ್ಣುವಿಧಿಗಳ್ ಪುಡುಕಿ ಕಾಣದ ಮ ।
ಹಾಗಮಾಮ್ನಾಯಗಳ್ ಬಣ್ಣಿಸಲ್ ದೊರೆಯದ ಸು ।
ರಾಗಧರ್ಮ ಮಹೇಶನೆಂದೆನಲ್ ಕೇಳಿ ನಡನಡುಗಿಯಾ ಶೇಷರಾಜಂ ॥೧೦॥

ಸರ್ವಲೋಕೇಶ್ವರಂ ಭಕ್ತೇಷ್ಟದಾಯಕಂ
ಶರ್ವನೆಮ್ಮಾಭರಣಗೆಯ್ದವನ ಭಕ್ತಪೆ
ಸರ್ವಡೆದನೆಂದನರ್ಘ್ಯಾಭರಣವನುಪಮ ಸುವಸ್ತುಗಳನಿತ್ತು ಕಳುಹೆ ॥
ದರ್ವೀಕರಾಧಿಪಾಜ್ಞಾ ಮಾತ್ರದಿಂದಲಾ ।
ಗುರ್ವೀಶನಾ ನದೀಮಧ್ಯದಿಂದೆದ್ದುದನು ।
ಸುರ್ವೇನೇರನೆಡನೆಯ ಸೂರ್ಯನನೆ ಕಂಡಳಾ ಸೀಮಂತಿನೀ ದೇವಿಯು ॥೧೧॥

ಪತಿಯ ಶಶಿವಾರವ್ರತದಿಂದ ಬರಿಸಿದ ತೆರದಿ
ಮತಿವಂತೆ ಮಂಗಳೋದಯೆಯಹರ್ನಿಶೆಯೊಳಾ
ನತೆಯಾಗಿ ಗುರುಮುಖದೊಳರಿದನುಷ್ಠಿಸಲಾಜಗದ್ವಾಪಿಯಾದ ಶಿವನು ॥
ಸಿತಿಕಂಠನಾ ಪತಿವ್ರತೆಯ ಮಾನಿತೆಯ ಭೂ
ಪತಿಯ ಭಾಗ್ಯಾಧಿದೇವತೆಯ ರೂಪದಿ ರತಿಯ
ಪರಿಯು ಮದ್ಭಕ್ತಕುಲವರ್ಯನೆನ್ನಯ ಕರದೊಳಿಹನೆಂದು ಸಂತವಿಸಿದ ॥೧೨॥

ಕಮಲಂ ಸಹಸ್ರಮರ್ಚಿಸುವೆಡೆಯೊಳಾ ರಮಾ
ರಮಣನ ಭಕ್ತ್ಯುದ್ರೇಕಗೊಳಿಸಲೋಸುಗವೊಂದು
ಸುಮವನಡಗಿಸಲೊಡನೆ ನಯನಾಬ್ಜಮಂಬುಜವನೀಯಲೊಲಿದುಮೆಯರಸ ಚಕ್ರಮಂ॥
ಕ್ರಮವನರಿದರಿದು ಬಿಡುಯಂದಿತ್ತನಾ ಜಗ ।
ತ್ಸಮುದಯಾಧೀಶ್ವರತ್ವವನಿತ್ತ ಕಾರಣಂ ।
ಕಮಲಾಮನೋಹರನ ಶ್ರೀರಂಗಪಟ್ಟಣವ ಕಾಣಿಸಿದರೀ ಭೂಪನ ॥೧೩॥

ಶ್ರೀರಂಗನರಿದೀಶಭಕ್ತನೀತನ ತಂದ ।
ನೀ ರಾಯನೆಂದರಿದು ಮಾರಾರಿಯಾಜ್ಞಾನು ।
ಸಾರದಿಂದಾತನ ಕರಾರವಿಂದ ಕಪಾಲಕೀವ ಬುದ್ಧಿಯನೆಸೆಗಲು ॥
ಕ್ರೂರ ಶ್ರೀರಂಗದಿಂ ಪೊರಡಿಸಲ್ಕಲ್ಲಿ ಗಿರಿ
ಜಾರಮಣ ಪೂಜಾನಿರತನಾಗಿಲ್ಕೃಪಾ
ಪೂರ ಜಗದಾಧಾರನೊಲಿಯೆ ಪರರಾಪ್ತರಾಗುವದು ತತ್ಸತ್ಯಮೆಂಬ ॥೧೪॥

ದೃಷ್ಟಾಂತಕೆಡೆಯಾಟ ಮಾಡಲಾ ನಿರ್ಜರೋ ।
ತ್ಕೃಷ್ಟ ಕಷ್ಟವ ಬಿಡಿಸಲಾ ಗಿರೀಶ್ವರ ನೃಪನ ।
ನಿಷ್ಠಾಪರತ್ವಮಂ ತಿಳಿದು ಭೂಪತಿಗೆ ಧೈರ್ಯವನಿತ್ತ ಭೂತಿಪ್ರದಂ ॥
ದುಷ್ಟಪಟ್ಟಣದಿಂದ ಪೊಡೆಯೆಂದ ನಿಯಮಿಸಲ್
ಷಷ್ಠ ಸಂಖ್ಯಾಬಂಧನಾಲಯದೊಳಿರುವರ್ಗೆ
ಶಿಷ್ಟ ಮಲ್ಲೇಂದ್ರನಾಲೋಚನೆಯನುಸುರಿದಂ ವೀರಭದ್ರಾಜ್ಞೆಯಿಂದಂ ॥೧೫॥

ಧೈರ್ಯ ಸರ್ವತುಸಾಧನಮೆಂಬುದೇ ಮುಖ್ಯ ।
ಕಾರ್ಯಮಲ್ಲವೆ ಕಡಿವರಿವರದರೆಳಿಂದೆಮ್ಮ ।
ಶೌರ್ಯಮಂ ತೋರಿಸಲ್ಕಾರ್ಯಾಥವಂ ಮೆಚ್ಚನೇ ಎಂದು ಹುರಿಗೊಳಿಸುತ ॥
ಚೌರ್ಯಮಂ ಮಾಡಿ ಪೋಗಲ್ಕೆನ್ನಮಿಲ್ಲ ಗಾಂ
ಭೀರ್ಯದಿಂ ಕಾದುವದೆ ಮುಖ್ಯಾರ್ಥಮೆಂದು ಮಾ
ಧುರ್ಯವಾಕ್ಯಗಳಿಂದೊಡಬಡಿಸಿ ನುಡಿಸಿ ಕಷ್ಟಗಳೆಲ್ಲ ಕೂಡೆ ನೋಡಿ ॥೧೬॥

ಶಿಲೆಗಳಂ ಪಿಡಿದೆದೆ ಶಿಲೆಗಳಾಗಿ ಮುಂದೆ ನಿಲೆ ।
ಕಲಿತನವನಾ ಕಾಲಕೊಲಿದಿತ್ತನೀಶ್ವರಂ ।
ಛಲದಾಳಿ ದುಷ್ಟಾಳಿ ಕವಿಯೆ ಕಲ್ಗುಂಡು ದಂಡಗಳಿಂದ ಸದೆದು ಒದೆದು ॥
ಬಲುಗೈದುಗಳ ಕೊಂಡು ಬಲಿಯಾಗಿ ನೆಲಿಯಾಗಿ
ಕೊಳಗುಳದಿ ಜಯಿಸಿ ದುರ್ಗವು ತಮ್ಮದೆನಿಸಿ ಬೆಂ
ಬಲವಾಗಿ ಸಪ್ತಾವೃತದ ದುರ್ಗಮಂ ದಾಂಟಿ ಬೇಡಿಗಳ ಕಡಿದು ನಡೆದು ॥೧೭॥

ಕರದಿ ಚಕ್ರಗಳಂತೆ ಥರಥರದಿ ತಮ್ಮ ಪದ
ದರಿಗಳಂ ಕರಗಳಿ ಪಿಡಿದೊಬ್ಬರೊಂದೆಸೆಗೆ
ಗುರಿಯಾಗಿ ಸರಿಯಾಗಿ ಹುರಿಯಾಗಿ ಪರಿಯಾಗಿ ಇರಲಿವರ್ ದುರ್ಗಾಧಿಪಂ ॥
ಅಂದಿವರ ಶೌರ್ಯಮಂ ಧೈರ್ಯಮಂ ಕಾರ್ಯಮಂ
ಮುರಿವೆನೆಂದೈನೂರ ಖಡ್ಗಪಾಣಿಗಳಿಂದ
ಲುರವಣಿಸಿ ಮುತ್ತಲಿವರಂಜದವರೊಳ್ ಕಾದಿ ಬಾಧೆಗೊಳಿಸಲ್ ನಿಲ್ಲದೆ ॥೧೮॥

ಓಡಿದರ್ ನಿಲಲಾರದಖಿಲರ್ ಪಲಾಯನವ ।
ಮಾಡಿದರ್ ನಮ್ಮನುಳುಹೆಂದೆನುತಲಭಯಮಂ ।
ಬೇಡಿದರ್ ಕೂಡಿದರ್ ಕೋಡಿದರ್ ಮುಖ್ಯದುರ್ಗಾಧಿಪಂ ಸರಿಯಲೊಡನೆ ॥
ಕಾಡಿದರ್ ಸಿಕ್ಕವರ ತಕ್ಕವರ ಮಿಕ್ಕವರ
ನೋಡಿದರ್ ಕೈದುಗಳ ಕೊಂಡು ಮನಗಂಡು ಮಾ
ತಾಡಿದರಿದೇ ಸಮಯಮೆಂದವನ ಜೀವಿತವ ಸೆಳಕೊಂಡು ಸತ್ವರದಲಿ ॥೧೯॥

ಮಲ್ಲೇಂದ್ರನೆಲ್ಲರ್ಗೆ ಬಲ್ಲಿದನೆನಿಸಿ ಧೈರ್ಯ।
ದಲ್ಲಿ ಮುಂದಡಿಯಿಡಲ್ಕಖಿಳರೈತರೆ ಪರಿದ।
ಖುಲ್ಲರೊಂದಾಗಿ ಪರಿದವರೊಂದುಗೂಡಿ ಬೆಂಬತ್ತಲವರುಗಳ ಸದೆದು ॥
ನಿಲ್ಲದಡಿಯಿಡಲಲ್ಲಿಗಲ್ಲಿಗಶನಾಭಾವ
ದಲ್ಲಿ ಕರಚರಣದೊಳ್ ತ್ರಾಣವಿಲ್ಲದೆ ಬೀಳ್ವ
ರೆಲ್ಲರನ್ನೆಬ್ಬಿಸುತಲೊಟ್ಟಾಗಿ ಬೆಟ್ಟ ಮಾರ್ಗವ ಪಿಡಿದು ನಡೆದು ಬಳಲಿ ॥೨೦॥

ಧರಣೀಶ ಮಲ್ಲೇಂದ್ರ ಹರ ಮಹಾದೇವ ಶಂ।
ಕರಮಹೇಶಾನ ಕಿಂಕರವರದ ಶಂಭು ಶುಭ।
ಕರ ಸುರೇಂದ್ರಾದ್ಯಮರಸೇವಿತ ಪದಾಂಭೋಜ ಧ್ಯಾನಾಮೃತವ ಸೇವಿಸಿ ॥
ಕರಿತುರಂಗಮರಥಾರೂಢಾವನೀಶ ಭೂ।
ವರ ಭೂಮಿಯೊಳ್ ಚರಣವಿಡದವರ ನಡೆಸಿ ಭ।
ಕ್ತರ ನೈಷ್ಠಿಯಂ ನಿರೀಕ್ಷಿಸಿ ಪೊರೆವ ಭಕ್ತಾಭಿಮಾನಿ ಶಂಕರನಲ್ಲವೇ ॥೨೧॥

ಅಶನವಿಲ್ಲದೆಯಹರ್ನಿಶಯೆನ್ನದೇ ಪಥದ
ಪೆಸರಿಲ್ಲದೇ ಘಸಣಿಯಾಗಿ ಬಸವಳಿಯದೇ
ದೆಸೆಗಾಣದೇ ದಕ್ಷಶಿಕ್ಷ ವೀರೇಶ್ವರಾಂಘ್ರಿಧ್ಯಾನಮಂ ಮಾಡುತ ॥
ಉಸುರಲಸದಳಮಾದ ಕರ್ಕಶವನನುಭವಿಸಿ
ಪಸಿವನೀಕ್ಷಿಸದೆ ಪರಮೇಶ್ವರನೇ ಗತಿಯೆಂದು।
ರಸಿಕ ರಾಜೇಂದ್ರನೆಲ್ಲರನಗಲಿ ಮಡಿವಳಪ್ಪಾಖ್ಯನೊರ್ವನೆ ಸಂಗತಿ ॥೨೨॥

ಈ ತೆರದೊಳಿವರಿತ್ತ। ತೆರಳುವವರಾಗಿರ।
ಲ್ಕಾ ತಳದ ವಾರ್ತೆಯಂ ಪಟ್ಟಣಕೆ ಕಳುಹಲವ।
ನಾತುರದಿ ಯಮದೂತರೋಪಮರ ನಾಲ್ಕಾರು ಸಾವಿರವ ಕಳಿಸಲೊಡನೆ ॥
ಪಾತಕರ್ ಘಾತಕರ್ ಪುಡುಕುತ್ತೈತರೆ ದೊರೆದ।
ಮಾತದೇನುಸುರುವೆನು ಭೂತೇಶ ಕರುಣದಿಂ।
ದಾತ ರಿಪುಗಳೆ, ಗರಹೊಡೆದಂತೆ ಮಾಡಿಸಿದ ಮಾಸಾರ್ಧ ಮಾರ್ಗ ನಡೆದು ॥೨೩॥

ಅನ್ನವೆಂಬುವ ಮಾತನೆನ್ನದೀ ದೇಹಮಿದ ।
ಮೆನ್ನದೇ ಪನ್ನಗವಿಭೂಷಣನೆ ಪಾಲಿಸುವ ।
ತನ್ನ ನಾಮವ ನೆನೆದರನ್ಯನೆನ್ನನಿದೆಂಬ ಭಿನ್ನಭಾವವ ಭಾವಿಸಿ ॥
ಬನ್ನಕೊಳಗಾದರೇ ಬಾಯಾರಿ ನದಿನದವ ।
ನುನ್ನತೋನ್ನತ ಬೆಟ್ಟಗಳ ದಾಟಿ ಬಂದರಿವ ।
ರಿನ್ನುಸುರಲೇನು ರಿಪುರಾಜ್ಯಮಂ ತ್ಯಾಜ್ಯಮಂ ಮಾಡಿ ಭೋಜ್ಯವನು ಮೆರೆದು ॥೨೪॥

ಬರುವರವರತ್ತಿತ್ತ ಪರಮಪ್ರವೀಣ ಸುಂ
ದರ ಶೂರ ಶಿಪದಾಂಬುರುಹ ಭಜನಾಸಕ್ತ
ಧರಣೀಶ ಮಲ್ಲೇಂದ್ರನಗಲಿದಾರಭ್ಯ ಗುರುಮುಖದೊಳರಿದಿಷ್ಟಾರ್ಥವ ॥
ಕರುಣಿಸುವ ಲಿಂಗಪೂಜಾನಿರತರಾಗಿ ತಾ
ವಿರುತಿರಲ್ ತಪವನಾಚರಿಸಲ್ಕೆ ಮಾಲೂರ
ತರು ಶೋಷಣಾಗದೇ ಚಿಗುರುತಲೆ ಭೂಪನಂ ಸರಣಿಗಾಣಿಸಲಿತ್ತಲು ॥೨೫॥

ನೀಲಾಂಬೆ ಜಂಗಮಪದಾಂಭೋಜ ಮಕರಂದ ।
ಲೋಲುಪ ಸುಕೋಲಂಬೆಯಾನತ ಕುಟುಂಬೆ ಕರು ।
ಣಾಲಂಬೆಯಾತ್ಮಭವೆ ರುದ್ರಾಂಬೆ ರೂಪದಲಿ ರಂಭೆ ಸದ್ಗುಣಕದಂಬೆ ॥
ಭಾಲಾಕ್ಷಪೂಜನಾ ರಂಭೆಯವರೀರ್ವರಂ
ದಾಲಸ್ಯಮಿಲ್ಲದೆಸಗಿದ ತಪಃಫಲದ ಬಲ
ಕಾ ಲಕ್ಷಣಾಂಗ ಮಲ್ಲೇಂದ್ರ ರುಚಿರುಂದ್ರ ಸದ್ಗುಣಸಾಂದ್ರನೈತಂದನು ॥೨೬॥

ಬರುವನಿತರೊಳ್ ಮಂತ್ರಿಮಂಡಲಿಕ ಸಾಮಂತ
ಚರರ ಮೇಳೈಸಿ ನೀಲಾಂಬೆಯಾಲೋಚನಾ
ದರಗೊಳಿಸಿ ರುದ್ರಾಂಬೆ ದೇಶಕೋಶವ ವಿಶೇಷವ ಸಾಧಿಸಲ್ ಭೂವರಂ ॥
ಪರಿತೋಷವಟ್ಟು ಹರಪೂಜಾಬಲದಲೆಮ್ಮ
ಕರೆಸಿಕೊಂಡಿರಿಯೆಂದು ಸುಕೃತಿಗಳ ಸಂತೈಸಿ
ಪರಶಿವ ಸಗುಣದಿ ಶಕ್ತಿಯ ಬೆರಸಿದಂತೆ ಸತಿಯೊಡವೆರೆದ ಮಲ್ಲೇಂದ್ರನು ॥೨೭॥

ರಜತಾದ್ರಿವಾಸ ಶಂಕರ ಮಹಾದೇವೇಶ ।
ಭಜಕರಂ ತನ್ನಂತೆ ಮಾಡುವಾಸಕ್ತಿಯಿಂ ।

ಗಜವದನ ಷಣ್ಮುಖರ ಸದೃಶವಾದಾತ್ಮಜರನೀರ್ವರಂ ಕೊಟ್ಟು ನೃಪನ ॥
ಯಜಮಾನನೆನಿಸಿ ಎನ್ನಂತೆ ಮಾಡಿದನೆನಲ
ಗಜೆಯೆನ್ನ ತನುಜೆಯಂ ನಾ ನೋಳ್ಪೆನೆನಲಾಗ
ರಜನೀಶಭೂಷ ರುದ್ರವ್ವನವರಂ ಕರೆಸಿಕೊಂಬೆಡೆಯೊಳಂದುಸುರ್ದರು ॥೨೮॥

ಎನ್ನೊಡೆಯ ಮಲ್ಲೇಂದ್ರನಗನ್ಯೋನ್ಯಭಾವದಿಂ ।
ಭಿನ್ನಭಾವವ ನೀಗಿ ನಾನೆ ನೀನಾಗಿ ಗುಣ ।
ರನ್ನ ಮಲ್ಲೇಂದ್ರ ಭೂಪಾಲನನುಮತದಂತೆ ಸುಖಿಸು ಸುತರೀರ್ವರುಗಳು ॥
ನಿನ್ನ ತನುಭವರೆಂದು ನೋಡಿ ಮೋಹವ ಮಾಡಿ
ನನ್ನವ್ವ ಚೆನ್ನವ್ವ ಎಂದರುಹಿ ಲೋಕಸುಖ
ಮಂ ನಿವಾರಿಸಿ ಶಂಭುಸಾಯುಜ್ಯಮಂ ಪಡೆದ ಪುಣ್ಯವದನೇಂ ಪೊಗಳ್ವೆನು ॥೨೯॥

ಜೋಡಾಗಿ ಮಲ್ಲೇಂದ್ರ ಭೂವರನ ಸಂಪತ್ತಿ ।
ಗೀಡಾಗಿಯುಭಯತರು ಬಾಹುಬಲವಾಗಿ ಬಹು ।
ಪ್ರೌಢಿಯಿಂ ಗಾಢಿಯಿಂ ರೂಢಿ ಸಂದೀಶ್ವರಾಜ್ಞಾನುಸಾರದಿ ಬೆಳೆವರು ॥
ನಾಡ ನಿಜಭುಜಬಲದಿ ಸಾಧಿಸುತ ಮೋದಿಸುತ ।
ಪಾಡುವರನಾಡುವರ ನೋಡುತಂ ಚತುರಂಗ ।
ಗೂಡಿ ಮಲ್ಲೇಂದ್ರ ರುಚಿರುಂದ್ರ ಸಿಂಹಾಸನಾರೂಢನಾಗಿರುತಿರ್ದನು ॥ ॥೩೦॥

ಹರವೇಷಧರಿಸಿ ಸಂಚರಿಪ ಮಾಹೇಶ್ವರರಿ
ಗೆರಡನೆಯ ಕಲ್ಯಾಣಮೆನಿಸಿ ಸದ್ಧರ್ಮದೊಳ್
ಪಿರಿದಾಗಿ ಬಸವೇಶನೆನಿಸಿ ಶಿವಭಕ್ತಿಮತ ಶರಧಿಚಂದಿರನೆನಿಸುತ ॥
ಧರಣೀಶವರ್ಯ ಧೀರೋದಾರ ಮಲ್ಲಬೂ
ವರನ ಸತ್ಕೀರ್ತಿ ಜಗದೊಳ್ ವ್ಯಾಪಿಸಿಲ್ ದಯಾ
ಕರನ ದಾನದಿ ಧಿವಿಜಮಣಿ ಧೇನು ವೃಕ್ಷಗಳ್ ಕರದಿ ಕರೆದವು ನಾಚಿಸೆ ॥೩೧॥

ಮುದಿಮಲ್ಲಸರ್ಜರಾಡ್ರುದ್ರ ಬಹದರರ ಪು ॥
ಣ್ಯದ ಪುಂಜವೇ ಘಟ್ಟಿಗೊಂಡು ಸಂಜನಿಸಿದಂ ।
ಕದನಕೋಳಾಹಳಂ ರಿಪು ಕುಧರಭಿದುರವರ ವೀರಭದ್ರಾವನಿಪನ ॥
ಉದರಸಾಗರೆವರ್ಧನೇಂದು ನತಬಂಧು ದೀ

ನದಯಾನದೀನ ರೂಪದಿ ಮದನ ಮಾಂಗಲ್ಯ
ಸದನ ಸದಮಲ ಶಿವಾರ್ಚಕ ಶಿರೋಮಣಿ ಎಂದು ಮಲ್ಲೇಂದ್ರನಂ ಪೊಗಳ್ದರು ॥೩೨॥

ವನದಲ್ಲಿ ರಣದಲ್ಲಿ ಶತ್ರುಗಳ ಮಧ್ಯದಲಿ ।
ಯನಲಕಾನಲಿ ಪರ್ವತದ ಕೊನೆಯಲ್ಲಿ ವಿಷಪಾನ ।
ತನಗೆ ಬಂದೆಡೆಯಲ್ಲಿ ಪೂರ್ವಪುಣ್ಯಂ ಪ್ರಬಲವಾಗೆ ರಕ್ಷಿಪುದೆಂಬರು ॥
ಇನಜೋಪಮಾನ ಭೂಪನ ಕಾವಲಿಯ ಕಳೆದು ।
ಮನುಜೇಂದ್ರ ಮಲ್ಲೇಂದ್ರ ಶಮನಾಂಕರುಣದಿಂ ।
ಜನಪದಕೆ ತನ್ನ ಪದವನಜಮಂ ತೋರಿಸಿದ ಭೂಪ ದೈವಿಕನಲ್ಲವೆ ॥೩೩॥

ಭೂಪನಂ ಪುಣ್ಯಪ್ರತಾಪನಂ ಮಣಿಗಣ ಕ ।
ಲಾಪನಂ ಕರಧೃತಸುಚಾಪನಂ ಮುಕ್ತ ಬಹು ।
ರೋಪನಂ ಪರಬಲಕೆ ತಾಪನಂ ದೋಷಾಳಿ ಲೋಪನಂ ಶಿವಸಮಯಕೆ ॥
ದೀಪನಂ ಮಂಜುಳಾಲಾಪನಂ ಶಾಂತದೆನಿ
ಶಾಪನಂ ಜಯವೆಣ್ಣಿನೋಪನಂ ದುಷ್ಟರೊಳ್
ಕೋಪನಂ ಸಾಮ್ರಾಜ್ಯ ಶ್ರೀಪನಂ ಮಲ್ಲೇಂದ್ರ ನೃಪನೇವಣ್ಣಿಸುವೆನು ॥೩೪॥

ಇಷ್ಟಾರ್ಥ ಪಡೆವೆಡೆಯೊಳಪ್ಪಮಹದೈಶ್ವರ್ಯ
ಶಿಷ್ಟಗೆ ನಿರಂತರೋತ್ಕೃಷ್ಟನಂ ಮಾಳ್ಪೆನೆಂ
ದಿಷ್ಟಲಿಂಗಾಕೃತಿಯ ತಾಳಿ ಶಂಕರನು ತಾ ಕರದಲ್ಲಿ ಬಂದು ನೆಲಸಿ ॥
ನಿಷ್ಠಾ ನಿಪುಣತಾಂ ಯಥೇಷ್ಟಸಮರಥವ ತಾ ।
ನಷ್ಟಾಪದಾಗ ಧರ್ಮಗೆ ಸ್ಪಷ್ಟದಿಂದೆಸಗಿ ।
ಕಷ್ಟಕರ್ಮವ ನೀಗಿ ಪುಷ್ಟಿವರ್ಧನನಾಗಿ ಮಲ್ಲೇಂದ್ರನಿರುತಿರ್ದನು ॥೩೫॥

ವೀರಶೈವ ಕ್ರಿಯಾಚಾರಮಂ ಸಾರಮಂ ।
ಚಾರುಲಿಂಗಾರ್ಚನಾ ನಿಷ್ಠೆಯಂ ಪುಷ್ಟಿಯಂ ।
ಗೌರವ ಗಣಾನಂದ ಭಕ್ತಿಯಂ ಯುಕ್ತಿಯಂ ತೋರಿಸುವ ವಿಷಯದಲ್ಲಿ ।
ಕಾರಣಪುರುಷನೀತ ಪ್ರಖ್ಯಾತ ಗುಣಯೂಥ ।
ವೀರವಿಕ್ರಮವಿಜಯ ರಣಶೂರ ಬಹುಧೀರ ।
ಭೂರಮಣ ಮಲ್ಲೇಂದ್ರನೆಂದು ದಿಶೆದಿಶೇಯೊಳ್ಳೆತಂದು ನೋಳ್ಪರು ಭಕ್ತಿಯಿಂ ॥೩೬॥

ಕವಿ ಗಮಕಿ ವಾದಿ ವಾಗ್ಮಿಗಳಿಗತ್ಯಾಹ್ಲಾದ
ಭವನ ಸಪ್ತಾಂಗ ಸಮ್ಮೇಳನಾನಂದ ಭೂ
ಧವವರ್ಯ ವಿಬುಧ ಪರಿಚರ್ಯ ಮಲ್ಲೇಂದ್ರ ರುಚಿರುಂದ್ರ ಸದ್ಗುಣ ಸಾಂದ್ರನ ॥
ಶಿವಭಕ್ತಿಯಂ ಕೇಳಿ ಕುವಲಯದೊಳಿರ್ದ ಶಾಂ
ಭವಗಣರು ಬಸವೇಶ ಭವನಾಶವೆಂದು ಬಗೆ
ದವಿರತಂ ಬರುವರವರಂ ನೋಡಿಯವರಿಷ್ಟವಿತ್ತು ತಣಿಸುವ ಭೂವರಂ ॥೩೭॥

ಗಿರಿಜೆಯೊಳ್ ಸೆಣಸಿ ಸುಜ್ಞಾನ ನಿರಹಂಕಾರ ।
ರರಿವಿನೊಳಗವತರಿಸಿ ಮಮಕಾರ ಮೋಹಿನಿಯ ।
ಸಿರಿಯಾದ ಮಾಯೆಯಂ ಜಯಿಸಿ ಬಸವಾದ್ಯರಿಷ್ಟವನಿತ್ತ ವಿಮಲಚಿತ್ತಂ ॥
ನಿರಘ ನಿತ್ಯಾನಂದ ಗುರುವರ ಪ್ರಭುರಾಯ ।
ನಿರುತ ಮನೆದೈವ ತಾನಾಗಿ ಪೂಜೆಯನು ಶಮ ।
ಶರಜಂಗ ಬಹದರನ ಕರದಿ ಕೊಂಬವನಿಪಗೆ ಸರಿಗಾಣೆ ಭೂತಳದೊಳು ॥೩೮॥

ಚಿತ್ರದುರ್ಗ ತ್ರಿಕೂಟಾದ್ರಿಯೊಳ್ ಮೆರೆವ ಸುಚ
ರಿತ್ರ ಪಾವನಗಾತ್ರ ಮುರುಘೇಶ ಹಸ್ತ ಶತ
ಪತ್ರಭವ ದೇಶಿಕವರೇಣ್ಯ ಮಹಿಮಾಗಣ್ಯ ಭೂಪವಿತ್ರಾರ್ಥಕೆಂದು ॥
ಅತ್ರಿ ಪುತ್ರೇನಾಗ್ನಿ ನೇತ್ರನವತರಿಸಿದ ಧ
ರಿತ್ರಿಯೊಳಗರೆಭಾವಿಯದ್ರಿಯೊಳು ರಂಜಿಪ ಪ
ವಿತ್ರ ದುರದುಂಡೀಶ ಮಾಹೇಶ ಕರುಣಾತನುತ್ರ ಮಲ್ಲೇಂದ್ರಗೆಣೆಯೆ ॥೩೯॥

ತಿಳಿವೊಡೆ ಸದಾನಂದ ಹೊಳೆವೊಡೆ ತದಾಕಾರ ।
ಕಳೆಯಕಾಂಬೊಡೆ ಇಳೆಯ ಬೆಳಯ ಸೌಭಾಗ್ಯಮಯ ।
ನಿಳಯ ತನ್ನಯ ಬಳಿಯವಳಯ ಬಹುವೀರರೇ ಗೆಳೆಯರಾಗೆರಡಿಲ್ಲದೆ ॥
ಸುಳಿಯೆ ಮುನಿವರ ಮನಕೆ ಪಳಿವನಾವರಿಸುವೊಡೆ ।
ಕೊಳಗುಳದಿ ಮಲೆತವರ ಗೆಲುವ ಭುಜಬಲಕೆಲ್ಲ ।
ಬೆಳವಡಿಯ ವೀರೇಶ ಮನೆದೈವ ಮಲ್ಲೇಂದ್ರಗುಳಿದ ನೃಪರೆಣಕೆಯಹರೇ ॥೪೦॥

ವಾಸವಾದ್ಯಮರ ಸಂಸೇವಿತ ಮಹೇಶ ಕರು ।
ಣಾ ಸಮುದ್ರಾಮ್ನಾಯ ವೇದ್ಯ ಭೂಲೋಕ ಕೈ ।
ಲಾಸಸಮವೆನಿಸಿ ನತರಾಶೆಯಂ ಸಲಿಸೆಂದು ಪರ್ವತಾಭಿದ ಮುನಿವರಂ ॥
ಭೇಶಚೂಡನ ಬೇಡಿಕೊಳಲೊಡನೆ ತುಹಿನಗಿರಿ ।
ಜಾಸಮೇತದಿ ನೆಲಸಿ ಭ್ರಮರಾಂಬಿಕಾವರ ।
ಶ್ರೀಶೈಲ ಮಲ್ಲಿಕಾರ್ಜುನ ದಯಾಪಾತ್ರ ಶುಭಗಾತ್ರ ಮಲ್ಲೇಂದ್ರಗೆಣೆಯೇ ॥೪೧॥

ವಾಸವಾದ್ಯಮರ ವಿಭವವ ತೃಣೀಕರಿಸಿ ಹೃ ।
ದ್ದೇಶದೊಳ್ ಭಾಸಮಾನಾಶಾರಹಿತ ಚಿದಾ ।
ಕಾಶಮಣಿಯಂತೆ ಪ್ರಕಾಶಿಸುವ ದೇಶಿಕೋತ್ತಮ ವಿರತಿಯಿಂದ ಚರಿಸಿ ॥
ಶ್ರೀ ಸದಾಶಿವ ವೇಷವಾಂತು ಕಿತ್ತೂರಧರ
ಣೀಶ ವರ್ಯರ ಮೇಲೆ ದ್ವೇಷಿಸುವರಾತಿಗಳ
ನಾಶಮಾಡಲು ಚೌಕಿವಾಸ ಗುರುಸಿದ್ಧೇಶನಂದಿಂದು ಕಾವುದರಿದೇ ॥೪೨॥

ಉಕ್ಷವಾಹನ ಮಹಾದೇವ ಶಂಕರ ಜಗ ।
ದ್ರಕ್ಷ ಮುನಿಪತ್ತನಾಧ್ಯಕ್ಷ ಸಿದ್ಧೇಶ ಸ ।
ಲ್ಲಕ್ಷಣ ವಿಚಕ್ಷಣ ವಿಜಯ ಶೂರ ಧೀರ ಮಲ್ಲೇಂದ್ರ ಸದ್ಗುಣಸಾಂದ್ರನು ॥
ಲಕ್ಷಸಂಖ್ಯಾ ಕುಟುಂಬವ ಪೊರೆವ ಶಿವಭಕ್ತ ।
ಪಕ್ಷ ಪರಮತ ಕುಂಭಿಹರ್ಯಕ್ಷ ಖಲಗರ್ವ ।
ಶಿಕ್ಷನೆಂದಾತನಂ ದಾತನಂ ಕರೆತಂದು ಸುಕ್ಷೇಮದಿಂದಿಟ್ಟನು ॥ ॥೪೩॥

ಕಾಲಕಾಲ ಕೃಪಾವಿಲೋಲ ದುರಿತಾವನಿಜ
ಮೂಲಕುದ್ದಾಲ ಸುವಿಶಾಲ ಲೀಲಾಚರಿತ
ನೀಲಗಳ ಭಕ್ತಾನುಪಾಲ ಲಿಂಗಾರ್ಚನಾಶೀಲ ಶಿಷ್ಟಾಚಾರದ ॥
ಶ್ರೀಲಶ್ರಿತ ಜನಕಲ್ಪಶಾಲ ಸನ್ನಿಷ್ಠಾನು
ಕೂಲ ಮಣಿಮಂಜುಲ ಸುಮಾಲ ಶಿವಧರ್ಮಾಲ
ವಾಲ ಶ್ರೀಮಲ್ಲ ಭೂಪಾಲ ಚರಪದಕಂಜರೋಲಂಬನೆಂಬುದರಿದು ॥೪೪॥

ಶಿವನೆನ್ನ ಭಕ್ತನೆನಗಧಿಕನೆಂದೀ ವಾಕ್ಯ
ವಿವರಿಸಿದ ಕಾರಣಂ ರವಿಜೋಪಮಾನ ಭೂ
ಧವನ ಬಾಧಾಹರಣ ಶಿವಭಕ್ತವರ್ಯ ಸದಸಮಾನ ಚರಿಮೆಂದು ॥
ಶ್ರವಣಾಧಿಕಾನಂದ ಭವಭಂಗ ಕಾರಣೋ ।
ತ್ಸವ ಕೇಳ್ದ ಮಾನವರ್ಗವಿರತಂ ಘಟಿಪುದೆಂ ।
ದವನೀಶ ಮಲ್ಲೇಂದ್ರ ವಿಜಯ ಸಂಕ್ಷೇಪದಿಂದ ಸಿದ್ಧೇಶ್ವರಂ ನುಡಿಸಿದಂ ॥೪೫॥

ಶ್ರೀ ಮಲ್ಲೇಂದ್ರ ವಿಜಯ ಸಂಪೂರ್ಣಂ

೬

ಗಣೇಶೋತ್ಸವ

ಗಣಪತ್ಯುತ್ಸವ ಮಾಡಿದ ಸದ್ಗುಣ
ಗಣಪತ್ಯಾಗ್ರಣಿ ಮಲ್ಲೇಂದ್ರ ॥
ಫಣಿಗಣಭೂಷಣಮತ ರತ್ನಾಕರ
ಕ್ಷಣದಾಕರ ಸತ್ಸುಖಸಾಂದ್ರ ॥ ॥೧॥

ಶ್ರೀ ಶಂಕರ ಜಗದೀಶ ದಯಾಕರ
ಕೇಶವಶರ ಕೀನಾಶಹರ ॥
ಭೇಶಕಳಾಧರ ಶೇಷಹಾರ ಸಿ
ದ್ದೇಶ ಸಲಹು ಶ್ರೀ ಶಾಂತಿಕರ ॥ ॥೨॥

ತ್ರಿಪುರವ ಜಯಿಸುವ ಕಾಲದಿ ಶಂಕರ
ದ್ವಿಪರಾದ್ವದನನ ಧ್ಯಾನಿಸಿದ ॥
ಅಪವರ್ಗಾರ್ಥಕೆ ಸಿದ್ಧಾದ್ಯಮರರು
ಜಪಿಸಿದರವರಿಷ್ಟಾರ್ಥಪದ ॥ ॥೩॥

ಮಹಿಷಮುಖಾಸುರರನು ಮರ್ದಿಸಿದಳು
ತುಹಿನಾಗಾತ್ಮಜೆ ಧ್ಯಾನಿಸುತ ॥
ವಿಹಿತದಿ ಭಾವಿಸಿ ಮಹಿಯನು ತಾಳಿದ
ನಹಿವಲ್ಲಭನಾರಾಧಿಸುತ ॥ ॥೪॥

ವಾರಣವದನನ ಚಾರುಪದವನಾ
ಧಾರವಿಡಿದು ಭಜಿಸಿದರಿಂದ
ವಾರಿಜಭವನೀ ಸೃಷ್ಟಿಯ ಸೃಜಿಸುವ
ಕಾರಣವೆನಿಸಿದನದರಿಂದ ॥ ॥೫॥

ಬಲಿಯನು ಜಯಿಸುವ ಬಲವನು ಪಡೆದನು
ಸಲಿಲಜಾಂಬಕನು ಪೂಜಿಸುತ ॥
ಬಲಮರ್ದನನೊಲಿದರ್ಚಿಸಿ ಭೋಗಾ
ವಳಿಯನು ಪಡೆದವ ರಾಜಿಸುತ ॥ ॥೬॥

ಕುಸುಮಶರಾಸನ ವಿಶ್ವವ ಜಯಿಸುವ
ವಿಷಯದಿ ವಿಘ್ನೇಶ್ವರ ನಿನ್ನ ॥
ಸುಷಮಪದವನರ್ಚಿಸೆ ಪಂಚಾಸ್ತ್ರಕೆ
ವಶವಾಯಿತು ಲೋಕವು ತನ್ನ ॥ ॥೭॥

ಸಿದ್ಧಿ ವಿನಾಯಕ ಸಕಲಾರ್ಥದ ಸಂ
ಬುದ್ಧಿ ವಿವರ್ಧಕ
ಶುದ್ಧದಿ ಸರ್ವಸಮೃದ್ಧಿಗೆ ಮುಖ್ಯ ಜ
ಗದ್ದಿತನೆಂದ ನೃಪರಗಿಂದು ॥ ॥೮॥

ತಿಳಿದು ಭಾದ್ರಪದ ಶುದ್ಧ ಚತುರ್ಥಿಯೊ
ಳೊಲಿದು ಸುರಗಣಾಧೀಶ್ವರನ ॥
ನಲಿದು ಚಿತ್ರಮಯ ಮಂಟಪಕುತ್ಸವ
ತಳೆದು ತರುವ ಚತುರ್ಭಜಬಲನ ॥ ॥೯॥

ವಾರಣವಾರು ವಿಹಾರದ ಹಯ ನೂ
ರಾರು ಪದಾತಿಗೆ ಮಿತಿಯಿಲ್ಲ ॥
ಚಾರು ಸ್ಯಂದನವಾರವು ಬಳಸಿರೆ
ತೋರಿಕೆಯೊಳು ಕಡಿಮೇನಿಲ್ಲ ॥ ॥೧೦॥

ಸೋಮವಾರ ಪೇಟೆಯೊಳು ನೇಮಿಸಿಹ
ಸಾಮಜವದನನ ಸಂಭ್ರಮದಿ ॥
ಭೂಮೀಶ್ವರ ಶೌರ್ಯತ್ರಯದಿಂದ ಮ
ಹಾ ಮಹಿಮನ ತಂದನು ಮುದದಿ ॥ ॥೧೧॥

ಆಂದೋಲಿಕೆಯೊಳು ಸಿಂಧುರವದನನ
ಸುಂದರಮೂರ್ತಿ ವಿರಾಜಿಸಲು ॥
ವೃಂದಾರಕವೃಂದದಿ ಶಿವಸಭೆಯಿಂ
ಬಂದ ಗಣಾಧೀಶ್ವರನವೊಲು ॥ ॥೧೨॥

ಸುರಪಾಲೋಪಮ ಸರಪ ಮಲ್ಲಭೂ
ವರನು ಸಭಾಸದನಕೆ ತಂದು ॥
ಬರುವ ವಿಘ್ನವನು ಪರಿಹರಿಸುವ ಶಂ
ಕರತನುಜಾತನೆನುತಲಂದು ॥ ॥೧೩॥

ಚಿತ್ರ ಪತ್ರ ರಾಜಿತ ಮಂಟಪದಿ ಪ
ವಿತ್ರ ಮಣಿಮಯೂಖಾಸನದಿ ॥
ಮಿತ್ರಕೋಟಿಕರ ಶುಭಮೂರ್ತಿಯನು ಧ
ರಿತ್ರೀ ಸುರರುಸುರಿದ ತೆರದಿ ॥ ॥೧೪॥

ಸ್ಥಾಪಿಸವೇಳ್ದನು ಭೂಪಾಲಾಗ್ರಣಿ
ಯಾ ಪಾಶಾಂಕುಶಧರ ಮೆರೆಯೆ ॥
ಶ್ರೀ ಪರಿರಂಜಿತನೆಸಗುವ ಚರ್ಯದ
ನೇ ಪೇಳ್ವೆನು ವಿಪ್ಪಪವರಿಯೆ ॥ ॥೧೫॥

ಹೇರಂಭೋತ್ಸವ ಮೀರಿ ಮಾಡುವದು
ತೋರಿ ನಾಲ್ದೆಸೆಗಳಿಂ ಬಂದ ॥
ಸೂರಿವಾರ ಭರತಾದ್ಯಭಿನಯರಸ
ಸಾರವರಿದ ನಾರೀವೃಂದ ॥ ॥೧೬॥

ಬರಲು ಪಲವು ತೆರದಾಟದವರು ಭೋ
ರ್ಗರೆವ ವಾದ್ಯವನು ನುಡಿಸುವರು ॥
ಹರಿಯವತಾರದ ಮೇಳದವರು ಬಂ
ದರ್ಝದಶಸಂಖ್ಯಾ ಮೀರಿದರು ॥ ॥೧೭॥

ಪಾತ್ರದವರ ಮೇಳವು ಪಂಡಿತ ನುತಿ
ಪಾತ್ರನ ಸನ್ನಿಧಿ ಕಂಡವರು ॥
ರಾತ್ರಿಯು ದಿವಸವು ಜಾತ್ರೆಯು ನಿರಿಕ್ಷಣ
ಮಾತ್ರವು ಚಲಿಸರು ನೋಟಕರು ॥ ॥೧೮॥

ಅನಿಮಿಷರನು ಮಾಡಿದ ನೋಡುವ ಜನ
ರನು ವಿಸ್ಮಯದೊಳವನಿಪಾಲ ॥
ಇನನುದಯವು ಮರುದಿನವಾಗಲು ಲೋ
ಚನಗಳ ಮುಚ್ಚರು ಜನಜಾಲ ॥ ॥೧೯॥

ಕೋಟಿ ಬರಲ್ಕವರೂಟಕೆ ಕೊಡಿಸುವ
ಕೋಟಿಯ ಮನೆಯನು ಮಾಡಿರುವ ॥
ಮೀಟಿನ ಭೂಮಿವಧೂಟೀಶಗೆ ಪರಿ
ಪಾಟಿಯೆ ದ್ವಿಸಹಸ್ರಕೆ ಕೊಡುವ ॥ ॥೨೦॥

ಅರಿದೆನದೆ ಭೂವರನ ತ್ಯಾಗಕೆ
ಸುರಮಣಿ ಕಲ್ಲಾದುದು ನಾಡೆ ॥
ಮರನಾದುದು ನಿರ್ಜರತರು ಪಶುವಾ
ಗಿರುವದು ದಿವಧೇನುವು ನೋಡೆ ॥ ॥೨೧॥

ತ್ರಿದಶಾರ್ಚಿತ ಪದಪದ್ಮ ಗಣೇಶನ
ತ್ರಿದಶ ದಿವಸವತ್ಯುತ್ಸವದಿ ॥
ಹೃದಯದಣಿವ ತೆರ ಮಾಡಿದ ವಿತರವ
ನದನುಸುರುವನಾವನು ಜವದಿ ॥ ॥೨೨॥

ಭೋಜೋಪಮ ಸದ್ರಾಜಭವನದೊಳು
ಭೋಜನಮಾಡುವ ಗಣವರರು ॥
ತೇಜೋಮೂರ್ತಿಗಳೀ ಜಗದೊಳ್ ಶಿಶು
ರಾಜಮೌಳಿ ಸಮನಾಗಿಹರು ॥ ॥೨೩॥

ಶತಸಂಖ್ಯಾಯತ ಸಿತಿಕಂಧರ ತ
ತ್ರ್ರಿಮಾನರ ವಸನಾಶನದಿ
ಅತಿ ಸಂತೋಷಿತರನು ಮಾಡಿದ ಭೂ
ಪತಿಯವರನುಮತದಿಂ ಮುದದಿ ॥ ॥೨೪॥

ಚತುರ ಚತುರ್ವಿಧ ಬಲಯುತ ನೃಪ ಸುರ
ತತಿ ಸೇವಿತ ಗಣನಾಯಕನ ॥
ಕ್ಷಿತಿಯೊಳಗರಿದೆನಿಸುವ ಕಳಿಸುವ ಸಂ
ತತ ಕಾಮಿತ ಫಲದಾಯಕನ ॥ ॥೨೫॥

ವಾರಣವದನಗೆ ತಾರಾಪಥದಿಂ
ತೂರುವಲರ ಮಳೆಯೆನೆ ಸುರರು ॥
ಹಾರುವ ಬಾಣಗಳಾರುತ ಕಿಡಿಗಳು
ತೋರುವವೆಂಬರು ನೋಟಕರು ॥ ॥೨೬॥

ತರಣಿಕೋಟಿಸಂಕಾಶ ಗಣೇಶನ
ಪರಿವೇಷ್ಟಿತ ವಿಧುಜ್ಯೋತಿಗಳು ॥
ಕಿರಣವ ಕರೆವವು ಸಾಲ್ದೀವಟಿಗೆಗ
ಳಿರುವವು ನೂರಾರಕೆ ಮಿಗಿಲು ॥ ॥೨೭॥

ನರ್ತಕಿಯರ ಮೇಳವು ವಿಂಶತಿ ಸಮ
ವರ್ತಿ ಜಯಾರ್ಭಕ ಸಮ್ಮುಖದಿ ॥
ನರ್ತಿಸುವದು ದಶಲೀಲಾ ವೇಷದಿ
ನರ್ತಿಸುವರು ಕುಣಿವರು ಭರದಿ ॥ ॥೨೮॥

ಅಡಿಗಡಿಗರ್ತಿಯನೊಡರಿಸಿ ಪೊಡವಿಪ
ಸಡಗರದಲಿ ಸಾಮಜಮುಖನ ॥
ಉಡುಪವೀಥಿಯೊಳ್ ಬಿಡದೆ ವಿನೋದಿಸಿ
ದೃಢದಿ ಕಳಿಸಿದ ಚಿದಾತ್ಮಕನ ॥ ॥೨೯॥

ಬೆಳಗಾಗಿಸಿದ ನಳಿನಬಾಂಧವನು
ಕಳೆದೋರಿದನುದಯಾದ್ರಿಯಲಿ ॥
ಇಳೆಯಾಣ್ಮನು ಮುದದಳೆದು ಮಹೋತ್ಸವ
ಗೊಳಿಸಿದನತ್ಯಾನಂದದಲಿ ॥ ॥೩೦॥

ಪಣಗಟ್ಟುತ ಕಾದುವ ರಿಪುಗಣವದು
ಹಣೆದಟ್ಟುತ ನಿಲಲಾರದಲೆ ॥
ರಣಗಟ್ಯಾಗುತಲೋಡಿದುದರಿಂ
ರಣಗಟ್ಯಾದುದಿದರ ಮೇಲೆ ॥ ॥೩೧॥

ಆ ರಣಗಟ್ಟಿಗೆ ಗೌರೀಸುತನ ವಿ
ಹಾರದಿ ಗಂಗಾಗರ್ಭದೊಳು ॥
ಸೇರಲಿ ಸೌಖ್ಯವ ಬೀರಲಿಯೆನುತ ದ
ಯಾರಸ ಕಳಿಸಿದನರ್ತಿಯೊಳು ॥ ॥೩೨॥

ಕಳಸಿ ಕಳಾವಿದ ಕೋವಿದ ತನ್ನಯ
ಬಲಪಾಠಕರಿಂದೊಡಗೂಡಿ ॥
ನಿಳಯದಿ ನಿತ್ಯೋತ್ಸಹದೊಳಿಹನು ಭುಜ
ಬಲ ಸಿದ್ಧೇಶನ ಕೊಂಡಾಡಿ ॥ ॥೩೩॥

❖❖

೭

ಕಿತ್ತೂರ ಮಲ್ಲಸರ್ಜನ ಪದಗಳು

೧

ರಾಗ : ರೇಗುಪ್ತಿ

ಈತ ನೋಡಬಲೆ ಮಲ್ಲೇಂದ್ರಽ । ವಿ
ಖ್ಯಾತನಿಳೆಯೊಳು ನೃಪೇಂದ್ರಽ ॥ಪಲ್ಲ॥

ಚೂತನಾಯಕ ತನುವಾಂತುಮೆಯರಸನ ।
ಪ್ರೀತಿವಡೆಯಲೆಂದು ಭೂತಳದೊಳು ಬಂದ ॥ಅನುಪಲ್ಲ॥

ಸಕಳಕಳಾವಿದನೆನಿಪಽ । ಸಖಿ
ಯಕಳಂಕತೇಜನವನೀಪಽ ।
ಸುಕವಿಬಾಂಧವ ಶೈವ ಜನಪ । ಪರ
ಮುಕುತಿಯಂಗನೆಯ [ನ] ವ್ವಳಿಪ ॥೧॥

ಅಕುಟಿಲಮನದ ಸೇವಕಜನಜಲಜ ದಿ
ನಕರನೆಂದೆನಿಪ ಭಾವುಕಗುಣ ಸಾಂದ್ರನು ।
ಚದುರ ಚೆಲ್ವಿಕೆಯಿಂದೆ ಸ್ಮರನ । ಕಣೆ
ಗಿದಿರು ಮಾಳ್ಪನು ಸಖಿಯರನಽ ॥೨॥

ಪದುಳದೆ ನೋಡಿ ಮೊಗವನs । ಬಗೆ
ಗೊದಗದೆಯವರ ನಾಚಿಪನs ।
ಸುದತಿಗದಾವ ಜನ್ಮದ ಪುಣ್ಯಫಲವೊ ಸಂ ।
ಗದೆ ಸುಖಿಸುವೆನೆಂಬುದಿದು ಸಿದ್ಧಿಸುವರೆ ॥೩॥

ಪರಮಪಾವನಪುಣ್ಯಚರಿತ । ಗುರು
ಚರಲಿಂಗ ಪೂಜನ ನಿರತ ।
ಸರಸಸದ್ಭಕ್ತಿಭಾವಯುತ । ಶಮ
ಶರಜಂಗಬಹದರ ದಯಿತs ।
ಧರಣಿಗಧಿಕವನ್ನಗಿರಿಯಮೃತೇಶನ
ಕರುಣಾಪಾತ್ರನು ಕಾರುಣ್ಯನೇತ್ರನು ॥೪॥

೨

ರಾಗ : ಸಾವೇರಿ

ಮಾನಿನೀ ಮಲ್ಲಸರ್ಜನs ।
ಕಾಣದೆ ನಿಲ್ಲದು ಮನವು ಸುಂದರನs ॥ಧ್ರುವ॥

ಶಮಶರಜಂಗ ಬಹದರನೆನಿಪನ
ಸುಮ ಸುಕುಮಾರನಸಮಬಲ ನೃಪನs ॥೧॥

ಸುಂದರಿಯರ ಮನ ಸೂರೆಗೊಳ್ಳುವನs ।
ಮಂದಹಾಸದೆ ಮಿಗೆ ಮೋಹವುಳ್ಳವನs ॥೨॥

ಜಂಗಮ ಗುರು ಶಿವಲಿಂಗ ಪೂಜಕನs
ತುಂಗ ಪರಾಮೃತಲಿಂಗ ಸೇವಕನs ॥೩॥

೩

ರಾಗ : ನೀಲಾಂಬರಿ

ಚೆಲುವೆ । ನಿನ್ನs ನಂಬಿದ *[ರೀ]* ಫಲವೇ ।
ವಿರಹದಿಂದವಳಾ ಕೊಲುವೆ ॥
ಮಲ್ಲೇಂದ್ರ ನಿನಗೀ ಛಲವೇ
ಈ ಲಲನೆಗೊಲಿವೆ ॥ಧ್ರುವಪದ॥

ಎಳೆಯs । ಪ್ರಾಯsವೆಳ್ಳನಿತಚ್ಚಳಿಯs
ದಿರ್ಪ ಮನ್ಮಥನರಗಿಳಿಯs ॥
ಪೋಲುವ ಪೊಸಪುತ್ಥಳಿಯs ।
ಅಂಥವಳು ತಿಳಿಯs ॥೧॥

ತರಳೆ । ತುಂಬಿಗಳಂದದ ಮುಂಗುರುಳೆ ।
ಮಾರನ ಮಸೆದಾ ಸರಳೆ ॥
ನಿನ್ನನಗಲಿ ಪಗಲಿರುಳೆ
ಜೋಡಗಲಿದೆರಳೆ ॥೨॥

ಬರಿದೆ । ಭಾವಕಿ ರನ್ನೆಯ ಜರಿದೆ ।
ಒಂದಾರೂ ತಪ್ಪುಗಳಿರದೆ ॥
ಅಮೃತೇಶನನು ಸಾದರದೆ
ಪೂಜಿಪಳ ಮೆರೆದೆ ॥೩॥

೪

ರಾಗ : ಸೋಹನಿ

ರಾಜೇಂದ್ರs । ರಾಜ್ಯಧುರಂಧರs ॥
ರಾಜಿಸುವ ಮಲ್ಲೇಂದ್ರ ನೃಪಸುಂದರs ॥ಧ್ರು॥

---

* ರೇ (ಮೂಲ)

ಶಮಶರಜಂಗ ಬಹದರ ವಿನಿರ್ಜಿತ ।
ಸುಮಶರಗುಣ ಮಂದಿರs ॥
ಅಮಿತ ಪರಾಕ್ರಮ ಸುಮತಿ ಶಿವಾಗಮ
ಕುಮುದಾವಳಿ ಪೂರ್ಣಚಂದಿರs ॥೧॥

ವೀರಮಹೇಶಾಚಾರ ನಿರತ ಪರಿ
ವಾರ ಪೋಷಣ ತತ್ಪರs ।
ಧೀರನುದರಗಭೀರ ಯಶೋರುಚಿ ।
ದೂರೀಕೃತ ದೇವಸಿಂಧುರs ॥ ॥೨॥

ಶಿವಲಿಂಗಾರ್ಚಕ ನಿವಹನಿಷೇವಣ
ಶಿವಕರ ವಿಭವೋತ್ಕರs
ನವವಿಧಭಕ್ತಿ ವಶೀಕೃತ ಶಾಂಭವ ।
ನವಿರಳತರ ಧೈರ್ಯಮಂದರs ॥೩॥

ನಟವಿಟ ಗಾಯಕ ಚಟುಲ ಸುಭಾಷಿತ
ಪಠಿತಸ್ತುತಿ ನಿರ್ಭರs ॥
ಪಟುಭಟ ಪಾಟಿತದಸ್ಯುಮದೋತ್ಕಟ ।
ಕಟತಟಘಟ ಶೌರ್ಯಬಂಧುರs ॥ ॥೪॥

ಸುಂದರ ದಳದರವಿಂದ ವಿಲೋಚನ ।
ಮಂದಸ್ಮಿತ ಭಾಸುರ ॥
ಇಂದುವರದ ಸಾನಂದಾಮೃತಪತಿ
ನಂದನಹೃದಯಾನಂದಕರ ॥೫॥

೫

ರಾಗ : ಜಂಗಲ

ಪಾಲಯ ಸಾಂಬ ಕೃಪಾಲಯಹೃದಯ ।
ಫಾಲನಯನ ಯಮಘಾಲನ ವಿಲಯ ॥ಪಲ್ಲ॥

ಗಗನಧುನೀಧರ ವಿಗಳಿತಮೋಹ ।
ನಗನವಚಾಪ ನಗಾಧಿಪ ಗೇಹ ॥೧॥

ಶರಣಜನೇಹಿತ ವರಕಲ್ಪಭೂಜಽ ।
ಸ್ಮರಹರ ಶಾಸಿತ ಸುರರಿಪುರಾಜಾ ॥೨॥

ಮಂಜುಮೃದುಳ ಕರಕಂಜ ಸುಚರಣಽ
ಕುಂಜರ ಸುರರಿಪು ಭಂಜನಕರಣಽ ॥ ॥೩॥

ಸ್ಕಂಧಜನಕ ಸುರವೃಂದ ಸುಪೂಜ್ಯಽ ॥
ಇಂದು ತಿಲಕ ಪಶುವೃಂದ ಸಮಾಜ್ಯಾ ॥ ॥೪॥

ಹೈಮವತೀಮುಖಸೋಮಚಕೋರ ।
ಭೀಮಪರಾಮೃತಧಾಮಶರೀರ ॥ ॥೫॥

೬

ರಾಗ : ಶ್ಯಾಮಕಲ್ಯಾಣಿ

ಮಲ್ಲೇಂದ್ರ ನೃಪನ ಕರೆತಾರೆ ॥ಪಲ್ಲ॥

ನಂದನ ನಂದನ ನಂದನ ಶರಭರ ।
ದಿಂದಸು ನೊಂದುದು ನೀರೆ ॥ ॥೧॥

ಶುಕಪಿಕ ನಿಕರ ಕಳಕಳಕೆ ವಿಕಳಿತೆ ।
ಯಕಟಕಟ ಸಹಿಸಲಾರೆ ॥ ॥೨॥

ಅಂಗನೆ ಅಂಗಜಭಂಗ ಪರಾಮೃತ ।
ಲಿಂಗಭಜಕನನು ತೋರೆ ॥ ॥೩॥

೭

ರಾಗ : ಭೈರವಿ, ತಾಳ ಆದಿ

ರಾಜಬಿಂಬಮುಖಿಯೇ ।
ರಾಜ ಮಲ್ಲೇಂದ್ರನs, ರಮಣೀ ನೀ ತೋರಿಸೆ ॥ಪಲ್ಲ॥

ಮಾರಸುಂದರ ಸುಕುಮಾರ ಶರೀರನು
ಬಾರದ ಬಗೆಯ ವಿಚಾರಿಸಿ ಪೇಳ್ವೀನು ॥ ॥೧॥

ನಲ್ಲನನಗಲಿ ಮನ ತಲ್ಲಣಿಸುತಲಿದೆ
ಕೊಲ್ಲಲೋಸುಗ ಸ್ಮರ ಬಿಲ್ಲನೇರಿಪ ಹದೆ ॥ ॥೨॥

ತುಂಗ ಪರಾಮೃತಲಿಂಗವ ಪೂಜಿಪೆ ।
ಸಂಗಸುಖಕೆ ಪ್ರಿಯನಂಗವ ಕಾಮಿಪೆ ॥ ॥೩॥

೮

ರಾಗ : ಶಂಕರಾಭರಣ
ಕೋಪವೇ ಆ ಚದುರೆಯೊಳ್ಕೋಪವೇ
ಕೋಪವೆ ಬಿಡು ನಿನಗೋಪ, ಕೃಪಾಪರ
ಭೂಪ ಮಲ್ಲೇಂದ್ರ ಶಮಶರಜಂಗ ಬಹದರ ॥ಪ॥

ದೂರದಿ ನೀನು ಬಾಹುದನು । ಕಂಡು
ನೀರೆ ತಾನೆದ್ದು ನಿಂದುದನು ।
ಸಾರ ವಿನಯದುಪಚಾರವೆಂದರಿಯದೆ
ಸೇರದಿವಳಿಗೆನ್ನ ಸೇರುವೆಯೆಂದತಿ ಕೋಪವೇ ॥೧॥

ನಿಂದ ನಾಯಕಿಯ ತೆಕ್ಕೆಯೊಳು । ನಲು
ವಿಂದಲಪ್ಪುವ ಸಮಯದೊಳು ॥
ಗಂಧ ತಾಂಬೂಲವ ತಂದುಪಚರಿಸುವೆ ।
ನೆಂದು ಪೋಗಿರಲದರಿಂದವಳೊಡನತಿ ಕೋಪವೇ ॥ ॥೨॥

ಕೆಳದಿ ತನ್ನಯ ಪರಿಜನಕೆ । ಕಾರ್ಯ ।
ಗಳ ಬೆಸಸುತ್ತಿರಲದಕೆ
ಲಲನೆ ನಿನ್ನನು ನುಡಿಸಳುಯೆಂದು ಮುನಿವರೆ
ಚೆಲುವಾಮೃತೇಶ್ವರನೊಲಿಸಬಲ್ಲವಳೊಳು ॥೩॥

೬

ರಾಗ : ಶಂಕರಾಭರಣ, ಆದಿತಾಳ

ಭೂರಮಣ ಮಲ್ಲೇಂದ್ರನನು ತೋರೆ ।
ವೀರಾಧಿವೀರನುದಾರಗುಣಗಂಭೀರನನು ಧೀರೆ ।
ಮಾರಶಾಸ್ತ್ರ ವಿಚಾರಸಾರವಿಹಾರನನು ಕಣ್ಣಾರೆ ಕಾಣಲು
ನೀರೆ ನಿನಗೀ ಸಾರೆ ಕೊಡುವೆನು ತೋರ ಮುತ್ತಿನ ಹಾರವನು ಸಖಿ ॥ಪಲ್ಲ॥

ಮಂಗಳಾವಹ ತುಂಗತರ ಚತುರಂಗ ಸೇವಿತನs ಗುರುಚರ
ಲಿಂಗಪೂಜಾಸಂಗಿ ಸಾಂಗೋಪಾಂಗವೈಭವನs । ಸಮದ ವ
ರಾಂಗರಿಪುಮಾತಂಸಿಂಹನ ಭಂಗ ವಿಕ್ರಮನs ಸುಂದರಿ
ಕಂಗೊಳಿಪ ಘನಸಿಂಗರದ ಸುಭುಜಂಗ ಜನಹೃದಯಂಗಮಾಕೃತಿ
ಯುಗಭವರಣರಂಗ ವಿಜಯೋತ್ತುಂಗ ಶಮಶರಜಂಗ ಬಹದರ ॥೧॥

ಶಾಂತಸದ್ಗುಣವಂತನಖಿಳರ ಸಂತವಿಟ್ಟವನs । ಕವಿಜನ
ಚಿಂತಿತಾರ್ಥಗಳಂ ತಿಳಿದು ತಣೀವಂತೆ ಕೊಟ್ಟವನs । ಸಕಲ ದಿ
ಗಂತ ಕೀರ್ತಿಯನಾಂತನವನಿ ಜಯಂತನಂತಿಹನs ಮನ್ನಿಸಿ
ಕಂತುಕೋಟಿಗಳಂತೆ ಪೊಳೆವತ್ಯಂತ ಸುಂದರ ಕಾಂತನೊಡನೇ
ಕಾಂತ ರತಿಸುಖವಾಂತು ನಿಬಿಡನಿಶಾಂತವನು ಕಳೆವಂತೆ ಸುಂದರಿ ॥೨॥

ವಾಸವ ಪ್ರತಿಕಾಶ ವಿಭವ ನಿವಾಸ ಮಂದಿರನs । ಕ್ಷಣರುಚಿ ।
ಭಾಸಮಾನವಿಭೂಷಣ ಸದುಷ್ಪೋಷ ಸುಂದರನs । ಕರುಣಾ
ರಾಶಿ ಪರಮವಿಲಾಸ ವಿಭ್ರಮವೇಷವುಳ್ಳವನs । ಮಣಿಮಯ
ಹಾಸುಮಂಚದೊಳಾಸೆ ಮಿಗೆ ತರ್ಕೈಸಿ ಘನಸುಖಸೂಸಿ ಮದನ ವಿ ।
ಲಾಸದೊಳು ಸಂತೋಷಿಸುವನಮೃತೇಶ ಭಕ್ತನ ॥

೧೦

ರಾಗ : ಯರಕಲ ಕಾಂಬೋದಿ

ಒಲಿದು ವೆಂಚಿಪನಲ್ಲೇ । ಪ್ರೀ [೧][ಯೆ][೧] ಗವಳ
[೨][ಗ][೨] ಲಿಕೆ ಘನವು, ಬಾಲೆ ॥
ಚೆಲುವ ಮಲ್ಲೇಂದ್ರನೊಳು ನಾ ನೇಹದಿನೋ [೩][ವಿ][೩]
ಸಲುಗೆಯಲಿ ಸ್ಮರಕಲಹದೊಳು ಕಲೆ
ನೆಲೆಗಳನು ಮುಟ್ಟಲು ಸೊಗಸುಗೊಡ [೪][ನೋ][೪] ॥ಧ್ರುವ॥

ಬರಲು ಮನೆಗೆ ಕಾಂತನು । ಮನ್ನಿಸಿ ಘನ
ಹರುಷ ಮನದೊಳಾಂತನು ॥
ಸರಸಗೀತವ ಪಾಡಿ । ಸುರಭಿಗಂಧವ ತೀಡಿ
ಪರಿಮಳ ಪೂಗಳ । ಸರಗಳ ಸೂಡಿಸಿ ॥
ಗುರುಕುಚದಿ ತಾಂ ಬರೆದ ಪತ್ರಿಕೆ ।
ಯುರದಿ ಮುದ್ರಿಪ ತೆರದಿನಪ್ಪುವ ।
ಭರದೊಳಿರ್ಪವಸರದೆ ತನ್ನಯ ಕರದ ಕೊನೆ ಕುಚ
ಕಿರಿದು ಜಾರುವನೊಲಿದು ॥ ॥೧॥

ತಡೆದು ಬರುವ ಘನಕೆ । ಚಾದಗೆಯು ನೀ
ರಡಿಸಿ ನಿಂದಿರಲದಕೆ ॥
ಕಡೆಗೆ ಗೋಚರಿಪಂತೆ । ನಡೆದು ಬಂದಿರೆ ಕಾಂತ
ನಡಿಯನು ಕಾಣುತ । ಪಡೆದೆನು ಸುಖವನು ॥
ಸಡಗರದೆ ಪೊಡಮಡುತೆ ರತಿಸುಖ
ಗೊಡುವೆಡೆಯೊಳಡಿಗಡಿಗೆಯಧರವ
ತುಡುಕಲದಕೆಡೆಗೊಡದೆ ಮುಡಿವಿಡಿ
ದೊಡನೆ ಚುಂಬನಗೊಡುತೆ ಸಿಡಿವನು ॥೨॥

೧–೧ ಯ(ಮೂ) ೨–೨ ಕ(ಮೂ) ೩–೩ ಡಿ(ಮೂ)೪–೪ ದೋ(ಮೂ)

ಸರಸಿಜಾಸ್ತ್ರ [1][ನ][1] ಕೋಪದಿ । ತಲ್ಲಣಿಸಿ ಝು
ರ್ಝುರಿತಳಾಗಿರೆ ತಾಪದಿ ॥
ಮರುಗಿ ಪ್ರಿಯನ ಮನ । ವರದ ಮನ್ನಣೆಯನು
ಚರಿಸುತ್ತಃ ಅಮೃತೇಶ್ವರ ಹಿತವೆನ್ನುತ ॥
ಪರಿಪರಿಯ ರತಿಕರಣ ಚತುರತೆ
ವೆರಸಿ ನೆರೆವವಸರದೆ ಪ್ರಿಯಗ
ಕ್ಕರದೆ ಖರನಖ ಬರೆವೆನೆನಲುಂ
ಗುರುವ ಬೆರಳೊಳಗಿರಿಸಿ ಮ[2][ರೆ][2] ಸುವ । ನೊಲಿದು ॥೩॥

೧೧

ರಾಗ : ಅಸಾವೇರಿ ಆದಿತಾಳ

ಸುದತೀ ಕೇಳು ಎನ್ನS । ಹೃದಯದಿಚ್ಛೆ ಕೈ
ಗೊದಗಲಿಲ್ಲವಲ್ಲೇ । ಎನಗೆ ।
ಚದುರ ಮಲ್ಲನೃಪನೊಡನೆ ಕೇಳಿಯೊಳು ।
ಪದುಳ ತೀರದಲ್ಲೇ । ಆ ಬ್ರಹ್ಮನು
ಮೊದಲೆ ಮಾಡಲಿಲ್ಲೇ ॥ ॥ಪಲ್ಲ॥

ಪ್ರಿಯನ ನೋಡುವನುನಯದ ವೆಗ್ಗಳದ
ಬಯಕೆ ತೀರದಲ್ಲೇ । ಆ ನೋಟಕೀ
ನಯನ ಸಾಲಲಿಲ್ಲೇ । ಈ ಅಹೀಂದ್ರನೋಲ್
ದ್ವಯ ಸಹಸ್ರವಿಲ್ಲೇ ॥ ॥೧॥

ಉಕ್ಕಿ ಮೋಹ ಮಿಗೆ ತೆಕ್ಕೆಗೊಂಬ ಬಗೆ
ಗಕ್ಕರಧಿಕವಲ್ಲೇ । ಈ ಬಾಹುಯು
ಗಕ್ಕೆ ತೀರದಲ್ಲೇ । ಕೃತವೀರ್ಯಜ
ಗಕ್ಕನಾಗಲಿಲ್ಲೇ ॥ ॥೨॥

೧–೧ ವ(ಮೂ) ೨–೨ ರ(ಮೂ)

ಸಕ್ಕರೆದುಟಿಗೆ ಮುದ್ದಿಕ್ಕಿ ಚಪ್ಪರಿಸೆ ।
ಮಿಕ್ಕುದಮೃತ ಕಾಣೆ । ಒಂದು ಮು
ಖಕ್ಕೆ ಬಾಹುದೇನೇ । ಸುರಗಂಗೆಯೊಲ್ ।
ವಕ್ತ್ರವಿಲ್ಲ ಜಾಣೆ ॥ ॥೩॥

೧೨

ರಾಗ : ಜಿಂಜಾವತಿ

ಜಾಣರರಸ ಜಗತೀಂದ್ರ ಮಲ್ಲೇಂದ್ರನ ।
ಜಾಣೆ ನೀ ಕರತಾರೆ ॥
ಬಾಣಪಂಚಕ ಕೊಲೆಗಾಣಿಪನೆನ್ನಯ
ಪ್ರಾಣದೆರೆಯನಡಿಗಾಣದೆ ಮಾಣದೆ ॥ ॥ಪಲ್ಲ॥

ಚಂದನಗಂಧ ವಿಷವು ಮಂದಮಾರುತ
ನಿಂದು ವಜ್ರವಹುದೆ ॥
ಇಂದುವೆ ಯಮ ಸುಮವೃಂದ ಸುಮಾಲಿಕೆ
ದಂದಶೂಕವಹುದೆ ॥
ಪೊಂದೊಡಿಗೆಯು ಭಾರವೆಂದೆನಿಪುದು ಮನ
ಕಂದಿಕುಂದುತಿಹುದೆ ।
ಸುಂದರನಗಲಿರಲೊಂದು ಸೊಗಸುಗೊಡ
ದಂದವ ೧[ಪ್ಪ]೧ ದರವಿಂದ ಸುಲೋಚನೆ ॥ ॥೧॥

ಅರಗಿಳಿಗಳ ಮಧುಕರ ಕೋಗಿಲೆಗಳ
ಸ್ವರವು ಶಲ್ಯ ಕಾಣೆ ।
ಅರಸಂಚೆಗಳಿಂಚರಕೆನ್ನಯ ಮನ
ತರಹರಿಸದು ಜಾಣೆ ॥
ಎರೆಯನಗಲಿ ಒಂದರೆ ನಿಮಿಷಕೆ ಘನ

೧-೧ ರ(ಮೂ)

ತರ ಯುಗ ಸರಿಗಾಣೆ ॥
ಸ್ಮರನುರುತರ ಶರ ಉರಕೆರಗಿರೆ ನೆರೆ
ಮರಮರ ಮರುಗಿ ಕರಗಿ ಕೊರಗುವೆ ಸಖಿ ॥ ॥೨॥

ಬಾರದು ಮಾರಗೆ ಕಾರುಣ್ಯವಿನಿತು
ಗಾರುಗೆಡಿಸುತಿಹನೆ ।
ನೀರೆ ನಿನ್ನೊಲೆನಗಾರು ಹಿತರು ಸಖಿ
ಸಾರಸಾರಿವದನೆ ॥
ಧೀರ ಪರಾಮೃತಲಿಂಗ ದಯಾಕರ
ಬಾರನೇಕೆ ಲಲನೆ ।
ಸಾರಸ ಶರ ರಣಧೀರನ ನೀ ಕ ೧[ರೆ]೧
ತಾರದೆ ತೀರದು ನಾರಿ ಶಿರೋಮಣಿ ॥ ॥೩॥

೧೩

ರಾಗ :

ಇಂದು ಸಖಿಯೆ ಮಲ್ಲಸರ್ಜಭೂವರನs ।
ತಂದು ತೋರೆನಗೆ ಪೂಗೋಲಸುಂದರನs ॥ ॥ಪಲ್ಲ॥

ಕಂದುಗೊರಲನ ಪೂಜನದಲಿ ಚದುರs ।
ಸುಂದರಿ ಶಮಶರಜಂಗ ಬಹದರs ॥ ॥೧॥

ಸಾರಸಾರವಿಚಾರವ ಬಲ್ಲs
ಧೀರತನದೆ ನೃಪನಿಗೆ ಸಮವಿಲ್ಲs ॥ ॥೨॥

ಕಲೆನೆಲೆಗಳ ಬಲ್ಲ ಕವಿಕಲ್ಪ ಭೂಜs
ಲಲನೆ ಕೇಳಿವನ ಪೋಲುವ ನೃಪಭೋಜs ॥ ॥೩॥

೧–೧ ರ(ಮೂ)

ಮಣಿಗ[೧][ಳ][೧] ಹಾರಮಾನಿತ ಪರಿವಾರಽ।
ಕ್ಷಣರುಚಿ ರುಚಿರ ಮಂಡನ ಸುಶರೀರಽ ॥ ॥೪॥

ಮಂಗಲಕರ ಚತುರಂಗ ಸೇವಿತನಽ।
ತುಂಗ ಪರಾಮೃತಲಿಂಗ ಪೂಜಕನಽ ॥ ॥೫॥

೧೪

ರಾಗ : ಶ್ಯಾಮಕಲ್ಯಾಣಿ

ಕಾಂತಽನಗಲಿಽರಲಾರೆ । ಕಾಂತೇ ಕರತಾರೆ ನೀರೇ ॥ ॥ಪಲ್ಲ॥

ಸ್ಮೇರಮುಖದ ಸವಿಗಾರಬಾರದ ವಿ
ಚಾರವಿದನುಸುರೆ ನೀರೆ ನೀರೆ ನೀರೆ ನೀರೇ ॥ ॥೧॥

ಮಾರನು ಸುಮಧನುವೇರಿಸಿ ಶರಗಳ
ತೂರಿ ಕೊಲುವ ಪ್ರಿಯ ಬಾರ ಬಾರ ಬಾರ ನೀರೇ ॥ ॥೨॥

ನಾರಿ ಅಮೃತಪತಿ ಬಾರದಿರಲು ಸುಖ
ದೋರದು ಸತ್ವರ ಸಾರೆ ಸಾರೆ ಸಾರೆ ನೀರೇ ॥ ॥೩॥

೧೫

ರಾಗ : ಹಮೀರ ಕಲ್ಯಾಣಿ

ಚದುರ । ಮಲ್ಲೇಂದ್ರನೃಪನಽ।
ಕರೆತಾ । ಪ್ರಿಯನ । ತ್ವರಿತಽ ॥
ಚಂದಿರವದನೆ ಚಂದನಗಂಧಿ ನೀ ಪೋಗಿ । ॥ಪಲ್ಲ॥

೧-೧ ರ(ಮೂ)

ಮಾರಸಾರ ಸುಕುಮಾರನ ಶಮಶರ
ಬಹಾದರ ಶೂರನs । ಸುಗುಣಗಂಭೀರನs
ಕರೆತಾರೆ ನೀರೆ ॥ ॥೧॥

ಅಂಗಜ ತುಂಗರಣಾಂಗಣ ಧೀರನ
ಶೃಂಗಾರ ಶರೀರನಾ । ಸೊಗಸುದೋರುವನಾ ।
ಕರೆತಾರೆ ನೀರೆ ॥ ॥೨॥

ರಾಮನೀಯ ಗುಣಧಾಮ ಪರಾಮೃತ
ಭಜನ ನಿರತನ ॥ ಶಮಿತವಿರಹನs ।
ಕರೆತಾರೆ ನೀರೆ ॥ ॥೩॥

೧೬

ರಾಗ : ಕನ್ನಡ ಕಾಂಬೋದಿ

ಮರೆದು ಜೀವಿಸಲಾರೆನೆ । ಮಲಸರ್ಜನ ।
ಮರೆದು ಜೀವಿಸಲಾರೆನೆ ॥
ಮರೆದು ಜೀವಿಸಲಾರೆ । ನೆರೆಯನ ಕರೆತಂದು ತೋರೆ ।
ಸ್ಮರನುರುತರ ಶರದುರಿ ಪರಿಹರಿಸುತೆ
ಪರಿಪರಿಮೋಹದೆ ಪೊರೆವ ರಮಣನs ॥ ॥ಪಲ್ಲ॥

ಚಂದನಗಂಧಿ ನೀ ಕೇಳೆ । ಚಂದಿರಬಿಂಬಮುಖಿಯಳೆ
ಬಂದುಗೆದುಟಿಯ ಹೆಂಗಳೆ । ಎಂದು ಬಣ್ಣನೆ ಮಾಡುವs
ಮಾಡಿ ಮುದ್ದಾಡುವs ॥
ಮಂದಸ್ಮಿತದರವಿಂದನಯನೆ ಸಾ
ನಂದದ ಸಖಿ ಬಾಬಾಯೆಂದು
ಮುಂದುಗರೆದು ಮೀರದಿರೆಂದು ।

ಗಂಧ ಸುಕುಮ ಹಾರಗಳಿಂದು ।
ಸುಂದರಿ ನಿನಗೊಪ್ಪುವವೆಂದು ॥
ತಂದು ಮುಡಿಸಿ ಮುದದಿಂದೆ ರತಿಕಳಾ
ವೃಂದದಿ ನೆರೆದಾನಂದಿಪ ಪ್ರಿಯನಽ ॥ ॥೧॥

ಅಂಗಜ ಚಾಪವ ತೀಡೆ । ತಂಗಾಳಿ ಬಂದು ಸುಳಿದಾಡೆ ।
ಭೃಂಗಾಳಿ ಝೇಂಕೃತಿಯ ಮಾಡೆ ।
ತಿಂಗಳು ತಡೆಯದೆ ಮೂಡಲು । ಮೂಡಿ ಕಾಡಲು ॥
ಕಂಗೆಡದಿರು ಸಖಿಯಂಗಭವನ ರಣ
ರಂಗವಿಜಯ ನಿನಗಹುದೆಂದು ।
ಹೆಂಗಳೆ ಹೊಣೆ ನಾನಿಹೆನೆಂದು ।
ಹಿಂಗದಿರುವ ಪ್ರೇಮದಲಂದು ।
ಮುಂಗುರುಳವು ತಿದ್ದುತೆ ನಿಂದು ।
ರಂಗದುಟಿಯ ಸವಿದಿಂಗಿತವರಿದು
ತ್ಸಂಗದೊಳಿಟ್ಟಾಲಿಂಗಿಪ ಪ್ರಿಯನಽ ॥ ॥೨॥

ಮಾರನ ತಂತ್ರವ ಬಲ್ಲಽ । ಧೀರನು ಮೋಹದ ನಲ್ಲಽ ।
ಕೀರರವ ಸೋಲಿಪ ಸೊಲ್ಲಽ।
ಸೂರಿ ಸರಸವಾಡುವಽ । ಸಂತೋಬಡುವಽ ॥
ಸಾರ ಸುಭಗ ಕರ್ಪೂರವೀಳ್ಯಗಳ
ಸೌರಭ ಸೂಸುವಧರದಿಂದಽ
ಪಾರಾವತ ಕೂಜನದಂದಽ
ದೋರಿ ಚುಂಬಿಸುತ್ತೊಲವಿಂದಽ ।
ತೋರ ಕುಚಕೆ ಕೊನೆಯುಗುರಿಂದಽ ।
ಊರಿ ಕಲೆಯ ನೆಲೆದೋರಿ ರಮಿಸುವ ಪ
ರಾಮೃತಲಿಂಗ ಕೃಪಾರಸನಿಧಿಯಽ ॥೩॥

೧೭

ರಾಗ : ಶಂಕರಾಭರಣ

ಆದೂದೆ[1] ಸದ್ಗತಿ ತಮಗಾದೂದೆ ॥
ಆದೂದೆ ಬರಿದೆ ವಿವಾದವ ಮಾಡಿ ಮ
ಹಾದೇವರನು ಪಳಿದೋದಿ ಕಾದಿದುದರಿಂದಾದೂದೆ ॥ ॥ಪಲ್ಲ॥

ಹರಿಗೆ ಮೊಮ್ಮನು ಹರನೆಂದು । ಪರಿ ।
ಪರಿ ತಾರತಮ್ಯದೆ ನಿಂದು ॥
ಮರಗುವರಿಗೆ ನರಹರಿಯ ಮಸ್ತಕವನು
ಕೊರೆದು ಚಂಡಾಡಿದ ಶರಭ ರುದ್ರನ ಜರೆದಾದೂದೆ ॥೧॥

ವೃಂದೆಯೆಂಬಳು ಪತಿವೆರಸಿ । ಚಿ [ತೆ]
ಬೆಂದು ಹೋಗಿರಲದ ಸ್ಮರಿಸಿ ॥
ಕಂದಿಕುಂದುವ ಗೋವಿಂದಗೆ ಬೀಜಗ
ಳಿಂದೆ ಚಿಂತೆಯ ಕಳೆದಿಂದುಧರನ ಜರೆದಾದೂದೆ ॥೨॥

ತಾಯಿಯ ಮೂಗು ಮೇಲೆಂಬೀ । ಪರಿ ।
ನ್ಯಾಯವ ಮಾಡಿ ಪಲುಂಬಿ ॥
ಸಾಯದೆ ಕಾದಿ ನಾರಾಯಣಿಯರಸ ನ
ಮ್ಮೀಯಮೃತೇಶ ಕನೀಯನೆಂಬರಿಗೆ ತಾನಾದೂದೆ ॥೩॥

೧೮

ರಾಗ : ಅಸಾವೇರಿ

ಶಿವಶಿವ ಮಲ್ಲನೃಪೇಂದ್ರ । ಜಯಜಯ ಮಲ್ಲಮಹೀಂದ್ರ ॥ಪಲ್ಲ॥

ಶಿವಶಿವ ಮಲ್ಲನೃಪೇಂದ್ರ ಮಹೀಂದ್ರ ।
ಶಿವಭಕ್ತಿಯೊಳು ವೃಷೇಂದ್ರ ॥ಅನುಪಲ್ಲ॥

೧-೧ ತಿ(ಮೂ)

ದಿನವೊಂದಕೆ ತನುವನು ಮನವನು ಧನ ।
ವನು ಭಕ್ತಿಭಾವದಿಂದs ॥ ॥೧॥

ತೆತ್ತು ಜಂಗಮಕೆ ಸತ್ಯವ ಮೆರೆಸಿದ
ನತ್ಯುತ್ಸವ ವ್ರತದಿಂದs ॥ ॥೨॥

ಏರಡು ಲಕ್ಷಕೀರೆರಡು ಸಾಸಿರವು ।
ಕೊರತೆಯಾದ ಬಗೆಯಿಂದs ॥ ॥೩॥

ಬಸವೇಶ್ವರ ಸಂತಸದೆ ಭಕ್ತಿಪರ
ವಶನಾಗಿ ತಾನೆ ಬಂದs ॥೪॥

ವೀರಶೈವಕಾಧಾರವಾಗಿ ಕಿ
ತ್ತೂರ ನಾಡೊಳಗೆ ನಿಂದs ॥೫॥

ಅಲ್ಲಿ ಸದ್ಗುಣ ಸಮುಲ್ಲಸಿತ ನೃಪತಿ
ಮಲ್ಲೇಂದ್ರ ನಾಮದಿಂದs ॥೬॥

ತ್ಯಾಗದೆ ಕರ್ಣನ ಬಾಗಿಸಿದನಖಿಳ
ಭೋಗದಲ್ಲಿ ದೇವೇಂದ್ರ । ॥೭॥

ಹರಿಶ್ಚಂದ್ರನನು ತಿರಸ್ಕರಿಪನುರು
ತರ ಸತ್ಯಕೀರ್ತಿಯಿಂದs ॥೮॥

ನಳ ನಹುಷರುಪಮೆದಳೆದು ಪಾಲಿಸುವ
ನಿಳೆಯನಮಳ ಗುಣರಿಂದs ॥ ॥೯॥

ಶೌರ್ಯದಿಂದೆ ಸೌಂದರ್ಯದಿಂದೆ ಶುಭ
ಚರ್ಯದಿಂದೆ ನಯದಿಂದs ॥೧೦॥

ಸರಿಗಾಣೆನು ಭೂವರನ ಸದ್ಗುಣಕೆ
ಧರಣಿಗಹುದು ಬಹುಚಂದs ॥೧೧॥

ನೃಪನ ಕೀರ್ತಿ ಸಪ್ತಪಯೋಧಿಯು ದು
ಗ್ಧಪಯೋಧಿಯಪ್ಪುವಂದs ॥ ॥೧೨॥

ಬಳೆದಿರಲ್ಕೆ ಭೂವಳಯದಲ್ಲಿರುವ
ಖಿಳಕಳಾವಿದರ ವೃಂದs ॥ ॥೧೩॥

ಬಂದು ನೃಪನ ಮುದದಿಂದೆ ನೋಡಿ ಸಾ
ನಂದ ಚಿತ್ತರಲ್ಲಿಂದs ॥ ॥೧೪॥

ಪಡೆದಿಷ್ಟಾರ್ಥವನಡಿಗಡಿಗೊದಗಿತು
ಕಡಲಂತೆ ಘನಾನಂದs ॥೧೫॥

ಶ್ರಾವಣೋತ್ಸವಕೆ ಧಾವಿಸಿರ್ದ ಘನ
ಶೈವರೋವಿ ಮುದದಿಂದs ॥ ॥೧೬॥

ಬಡವ ಬಲ್ಲಿದರ ಬಿಡತೆಗಾಣದೋಲ್
ಮೃಡಪದಕೆ ನಮ್ರದಿಂದs ॥ ॥೧೭॥

ನುಡಿದುಪಚರಿಸುತೆ ಷಡುರಸಾನ್ನಗಳ
ನೆಡೆಮಾಡಿವರ್ಗಳಿಗೆಂದs ॥ ॥೧೮॥

ಚರಮೂರ್ತಿಗಳs ಚರಣವನೀಕ್ಷಿಸಿ
ಚರಣಧೂಳಿಯಿಂ ಮಿಂದs ॥೧೯॥

ಸಾದರದಿಂ ಚರಪಾದಮಂ ಪರಿಮ
ಳೋದಕದಿಂ ಜವದಿಂದs ॥ ॥೨೦॥

ತೊಳೆದು ತೀರ್ಥಮಂ ತಳೆದಿಷ್ಟಲಿಂಗ
ದೊಲುಮೆಗೂಡಿ ಮುಗಿವಂದs ॥ ॥೨೧॥

ವೀರಮಹೇಶಾಚಾರ ಸತ್ಕ್ರಿಯಾ
ಸಾರಭಕ್ತಿಭಯದಿಂದs ॥ ॥೨೨॥

ಪಾದಪೂಜನ ಮಹೋದಯ ವರ್ಣನೆ
ಯೋದಲಾರನುರಗೇಂದ್ರs ॥೨೩॥

ನೃಪನ ಭಕ್ತಿಗೆಂದಪರಿಮಿತ ಚರರು
ಸಪದಿ ಬಂದರೊಲವಿಂದs ॥೨೪॥

ಪರಮಾಮೃತವನು ಸುರಿಸಿ ಸತ್ಕರಿಸಿ
ಪೊರೆದನವರ ಮಲ್ಲೇಂದ್ರs ॥೨೫॥

೧೯

ರಾಗ : ಶ್ಯಾಮಕಲ್ಯಾಣಿ ಆದಿತಾಳ

ಮನಾ ಶಿವಸಾಂಭ ಭಜಾವಾ ॥ಧ್ರುವ॥

ದುರ್ವಿಷಯಾ । ಪಾಸುನಿ ಪರತುನಿ ಮಗ ।
ಸರ್ವಹಿ ಕಾಮತ್ಯಜಾವಾ ॥ ॥೧॥

ಮಾವುಲಿ ಅಣಿಕ ಬಾಪಹಿ ಅಪಲಾ ।
ದೇವಮ್ಹಣುನಿ ಸಮಜಾವಾ ॥ ॥೨॥

ನಿತ್ಯ ಅನಿತ್ಯ ವಿಚಾರ ಕರುನಿಯಾ ।
ಸತ್ಯಾಚಾರ ಕರಾವಾ ॥ ॥೩॥

ಅಪತ್ಕಾಳೀ ಜೋ ನರ ಹಿತಕರ
ತೋ ಪುಣ್ಯಾತ್ಮ ಸ್ಮರಾವಾ ॥ ॥೪॥

ದೇವ ಪರಾಮೃತಲಿಂಗ ಪದಾಚಿ
ಹೋವೀ ಸಂತತ ಸೇವಾ ॥ ॥೫॥

೨೦

ರಾಗ : ಹಮೀರಕಲ್ಯಾಣಿ

ಶಿವನಾಥ ಪಾಹಿ । ದಯಾವಾ [1][ನ][1] ಸಾಂಬಾ । ಜಗದವಲಂಬಾ ।
ಶಂಕರನತ ಶಿವಶಂಕರದೇವ ದೇವೇಶ ಶಿವಾನಾಥ
ರಾಜರಾಜಸಖ ರಾಜಕಳಾಧರ ॥ಪಲ್ಲ॥

ನಿಜಜನಸುರತರೋ । ವೃಜಿನಹರಗುರೋ ।
ಗಿರೀಶಾನ ಪಾಹಿ । ॥೧॥

ಧೀರವೀರಪುರ ಮಾರಣ ಕಾರಣ ।
ಸುರಜನತಾದಿಭೋ । ಸ್ಮರಹರ ಹರಭೋ । ಮಹದೇವ ಪಾಹಿ ॥ ॥೨॥

ಕಾಲಕಾಲಸುವಿಶಾಲ ದಿಶಾಂಬರ
ದಲಿತರಿಪುತತೇ । ಮಿಲದಮೃತಮತೇ । ಸುಧಾಧೀಶ ಪಾಹಿ ॥ ॥೩॥

೨೧

ರಾಗ : ಭೈರವಿ

ಸಾಂಬ ಜಗದವಲಂಬ ಜಯ ಶಂಭೋ । ಹೇರಂಬ ತಾತ ದ
ಯಾಂಬುದೇವ ಭವಾಂಬುವಿವ ಶಂಭೋ ॥

೧-೧ ಇತಿ ಶಿವಭಕ್ತಿ ಪಂಚವಿಂಶತಿಃ ಸಮಾಪ್ತ
೧-೧ ರ(ಮೂಲ)

ಅಂಬುಜಾಕ್ಷಕಲಂಬ ಸುರನಿಕುರಂಬಪಾಲಕ
ಶಂಬರಾರಿ ಹರಾಂಬಿಕಾನನ ಚುಂಬನೋತ್ಕನ
ವಾಂಬರಾಲಕ ಶಂಬಧರನುತ ॥ಪಲ್ಲ॥

ಇಂದು ಕೋಟ್ಯರವಿಂದಬಾಂಧವ ವೃಂದರುಚಿಪೂರ । ತ್ರಿಭುವನ ।
ತುಂದ ಮುನಿಪಽನಂದದ ಶತಾನಂದನುತವೀರ । ವಿಧಿಮುಖ
ಮಂದರಶ್ರುತಿ ಎಂದು ಜನತಾ ವಂದಿತಾಚಾರ । ಸೇವಕ ॥
ನಂದಿಹೃದಯಾನಂದಕರ ಗೋವಿಂದ ಮಿತ್ರಽರಿಂದ ಮಾಶ್ರಿತ
ವೃಂದಕರುಣಾಮಂದಿರ ಸ್ಮಿತ ಸುಂದರಾನನ ಕಂಬುಕಂಧರ ॥ ॥೧॥

ಕಾಲಿಕಾಕೃತಿನೀಲವಾಮ ನಿರಾಳ ನಿರ್ಮಾಯಾ । ಭವ ನಿ ।
ರ್ಮೂಲಕಾರಣ ಕಾಲಕೂಟಧೃಗ್ಯೈಲಬಿಲಗೇಯಾ । ದಿವಿಜಾ ।
ಭೀಲನಾಶನ ಮೌಲಿಗೋದಧಿಬಾಲಕೆ ವಿಧೇಯಾ । ಲಲಿತ ।
ವ್ಯಾಲಮಾಲಸುಖಾಲವಾಲ ವಿಶಾಲಭಾಲಜ್ವಾಲ ಲೋಚನ ।
ಕಾಲಕಾಲ ಕರಾಲಶೂ [ಲ] ಕಪಾಲ ಕಾಲಘು ಲೀಲ ಪಾಲಯ ॥೨॥

ಗಾಂಗ ವಿಪುಲತರಂಗ ಶಾಲಿವರಾಂಗ ಜಟಿಲೇಂದ್ರ । ವಿಧೃತ ಕು
ರಂಗ ಕರುಣಾಪಾಂಗ ಗಾಢಾಲಿಂಗಿತ ಗಣೇಂದ್ರ । ಪರತರ
ಮಂಗಲಾತ್ಮಕ ಭೃಂಗಿರಿಟಿವಿನುತಾಂಗ ರುಚಿರುಂದ್ರ । ಪ್ರಮದಿತ
ಪುಂಗವ ಪಟುತರಂಗ ಧರಣಿಶತಾಂಗ ಸೋಮಪ
ತಂಗ ದಿವ್ಯರಥಾಂಗ ರಿಪುಮಾತಂಗ
ದುರ್ಮದ ಭಂಗ ಕೃದಮೃತ ಲಿಂಗಪಾಲಯ ॥ ॥೩॥

೨೨

ರಾಗ : ಭೈರವಿ ಆದಿತಾಳ

ಶೈವಾಮಾಜೀ ವೃಷೇಂದ್ರಾಪರೀ
ಭಾವೇ ಮಲ್ಲೇಂದ್ರನೃಪಾಲ ॥ಪಲ್ಲ॥

ದಂಡಿತ ಸುಮಕೋದಂಡಮನ್ಮಥಾಚಂಡೀನಾಥಾ ಶಂ ಸೂನ ।
ಸಾಂಡುನಿ ವಿಷಯಾಖಂಡವಾಸನಾ ಮಾಂಡೀ ದಾಸೋಹ ಭಜನ ।
ದಂಡನಾಥ ದೋರ್ದಂಡ ಬಳೇ ಉದ್ದಂಡಾಮಿತ್ರಾ ಜಿಂಕೂನ ॥
ಚಂಡತೇಜ ಭೂಮಂಡಳೀ ಮಹಾ ।
ಪಂಡಿತ ವಿನುತಾಂಡಕೀರ್ತಿ ಹಾ ।
ಪುಂಡರೀಕರಿಪು ಮಂಡಲರುಚಿ ಹಾ ।
ಸಾಸ್ಯಜಲರುಹಾ । ಸಮಮುದಾವಹಾ ।
ಮಳಗುಣ ನಿವಹಾ । ತೋಹಾ ಮಲ್ಲೇಂದ್ರ ಮಹೀಂದ್ರ ರಾಜಾ ॥ ॥೧॥

ಶ್ರಾವಣೀ ಮಹಾಶೈವಭಕ್ತಿನೇ ಭಾವೇ ಶ್ರೀ ಸಾಂಬ ಭಜೀನ ।
ಸಾವಧಾನ ಮನಭಾವಶುದ್ಧಿನೇ ದೇವಾ ಅಭಿಷೇಕ ಕರೂನ ।
೧[ಧಾ]೧ ವುನಿ ಅಲ್ಯಾ ಶೈವಕೋವಿದಾ ಜೇವೂ ಘಾಲುನಿ ರಾಜಾನ್ನ ।
ಭೂವಧೂವರ ಪಾವನಚರಿತ
ಸೇವಕಾಂಸಿ ಬಹು ಲಾಲನಕರಿತ ।
೨[ಸೇ]೨ ವಕಾ ಪರೀ ಪಾಲನ ನಿರತ ।
ಶುಭಗುಣಭರಿತ । ಶಿವಭಜನ ರತ । ಜಾಳುನಿ ದುರಿತ ।
ತೋಹಾ ಮಲ್ಲೇಂದ್ರ ಮಹೀಂದ್ರ । ॥೨॥

ಭೇದಭಾವಪಂಕ್ತೀ ನ ಪಾಹತಾ ಸಾಧೂಶಿವಮೂರ್ತಿಜನಾಸಿ
ಶ್ರೀ ದೇಶಿಕವರ ಪಾದಪೂಜನೀ ಮೋದಾಧಿಷ್ಠಾನಮನಸ್ಯ।
ವಾದ್ಯಗೀತನೃತ್ಯಾದ್ಯುಪಚಾರೇ ಸಾಧೀ ಸಮ್ಯಕ್ಪುರುಷಾರ್ಥ
ಮೇದಿನೀಳೀ ಸಾಧುಪಾಲಕ।
ಸಾದರೇ ಪ್ರಜಾ ಮೋದದಾಯಕ।
ವೋದನಾದ್ರ್ಯಮೃತಲಿಂಗ ಬಾಲಕ।
ನೃಪಕುಲತಿಲಕ। ಗುರುಪದಭಜಕ । ಕವಿಸುಖಜನಕ
ತೋಹಾ ಮಲ್ಲೇಂದ್ರ ॥ ॥೩॥

೧-೧ ಥಾ(ಮೂ), ೨-೨ ಕಾ(ಮೂ)

೨೩

ರಾಗ : ಅಸಾವೇರಿ

ಕರುಣಾ ಕರೀಗಾ । ಮಜವರಿ ಶಂಕರಾ ಸತತ ॥ಧ್ರುವ॥

ಭವಜಲಮಗ್ನಾಲಾ । ಮಜ ದೇ ದಯಾಳಾ ।
ಲವಕರ ಕರ ನಕರಿ ಉಸೀರ ಬಹು ಕಾತರಾಲಾ ॥ ॥೧॥

ಮಾಯೇ ನಿಜಶಿಶುಚ್ಯಾ ದೋಷಗುಣಾಚಾ ।
ನ್ಯಾಯ ಕರೂನಿ ಕಾಯ ತ್ಯಜನಿ ಜಾಯೀಲ ತ್ಯಾಲಾ ॥೨॥

ದೋಷಾಕರ ಸುರುಚೀ ಭೂಷಾ ತಮಚೀ ।
ಪೋಷ್ಯತ ಸ್ವಾಮೀಸೇವಕ । ಈಶಾಮೃತೇಶಾ ॥ ॥೩॥

೨೪

ರಾಗ : ಶಾಮಕಲ್ಯಾಣಿ

ಶಂಭೋ ಸುಧಾಗೌರ ಭೋ ಶರಭೋ ಸುಧಾಗೌರ ॥ಪಲ್ಲ॥

ಮಾರಮಹಾಮದವಾರಣ ವರಕಂಠೀರವ ರಿಪುರಣ
ಧೀರಧೀರ ಧೀರ ಭೋ ॥ ॥೧॥

ಸಾರಸಭವಹರಿ ಶೌರಿವಿನುತಪದ ನೀರಜನಿಗಮವಿ
ದೂರ ದೂರ ದೂರ ಭೋ ॥ ॥೨॥

ಪುಂಗವಪದಧೃತ ಗಂಗ ಪರಾಮೃತಲಿಂಗ ಜಯಜಯ ಸು
ವೀರ ವೀರ ವೀರ ಭೋ ॥

೨೫

ರಾಗ : ಕನ್ನಡ ಕಾಂಬೋದಿ

ದೇವದಯಾವರುಣಾಲಯ । ಪರಿಪಾಲಯ । ಶಂಭೋ
ಸುಗುಣಾಲಯ । ಸೇವಕ ಘನಮಮತೋದಯ । ಶಿ
ಷ್ಟಾಭಯ । ದಾನಾಢ್ಯ ನಿರಾಮಯ ॥ ॥ಪಲ್ಲ॥

ಶ್ಲೋಕ :
ಭಕ್ತಾಂಭೋಜಮಿಳಿಂದ ಸುಂದರ ಮನೋ ವ್ಯಕ್ತಾಂಗನಾ ಲಾಲನೋ
ದ್ಯುಕ್ತಾಂಗೀಕೃತನಾಮರೂಪ ಸುತನೋ ಮುಕ್ತಾಂಗರಾಗಾವ್ಯಯಾ ।
ರಕ್ತಾಂಭೋರುಹಶತ್ರುಮಿತ್ರಹುತಭುಗ್ದಕ್ತಾಂಡವ ಪ್ರಕ್ರಿಯಾ
ಯುಕ್ತಾಂಗಾವಗವೇಂದ್ರವಾಹವಿನುತಾ ಸಕ್ತಾಂಬುಭೃತ್ಕಂದರಾ ॥ ॥೧॥

ಪದ :
ಮದನಮದೇಭ ಪಂಚಾನನ । ಪಂಚಾನನ ದೂರೀಕೃತ ವಂಚನ ।
ಪದವಿರ ಪೂತ ಪದ್ಮಾಲಯ । ಪೂಜಿತ ಜಿತವಿಲಯಾ ।
ವಿದಳಿತ ದುಷ್ಟ ಚಿತ್ಸಾಮಜ । ಸತ್ಸಾಮಜ । ಗಾನಾದೃತಶೈಲಜ ।
ಮುದತಿ ನಿಧಾನಗಜಾನ । ಗಜಾನನ ಚುಂಬನಕೃತ ಮನನ ॥

ಶ್ಲೋಕ :
ಪಾರಾವಾರನಿಷಂಗಪಾತಕಮಹಾವಾರಾಶಿ ಕುಂಭೋದ್ಭವ
ಸ್ವಾರಾಜ್ಯಪ್ರದಪಾವನಾಮರಧುನೀ ಭಾರಾವಹೋದ್ಯಜ್ಜಟಾ
ಸ್ವೈರಾಚಾರವಿಹಾರ ಸರ್ವಜಗದಾಧಾರಾಭಿಳಾರಾಧಿತಾ ।
ಪಾರಾತ್ಮೀಯ ಚರಿತ್ರ ಪಾಲಯ ವಿಭೋ ವೀರಾಧಿವೀರ ಪ್ರಭೋ ॥

ಪದ :
ಮಾರಮಣೀವರಸಾಯಿಕ । ಶುಭದಾಯಕ । ಶಾಂಭವ ಗಣನಾಯಕ ।
ಮೇರುಶರಾಸನ ಧರಾರಥ । ಸುಮ ನೋರಥ । ತೋಷಿತಸುಭಗೀರಥ ।
ಭೂರಿಸುಖಪ್ರದ । ಪಾವನ । ಸುರಪಾವನ । ರಾಜ ತನಗಭವನ ।
ಚಾರು ಶುಧಾಕರಭೂಷಣ । ರಿಪುಭೀಷಣ । ಸಾಧೂದಯ ಪೋಷಣ ॥೨॥

ಶ್ಲೋಕ :

ವಂದಾರುವ್ರಜ ಕಲ್ಪಭೂಜ ಮುನಿಪಾನಂದಾಬ್ಧಿ ಚಂದ್ರೋದಯಾ
ಮಂದಾನನ್ಯಸುಖಾಮೃತೈಕ ಶರಧೇ ವೃಂದಾರಕ ಪ್ರೇಮಧುಕ್
ಛಂದೋಭಾಗ ಗಭೀರಭಾಷಣಮಹಾಮಂದಾರಮಾಲಾಂಚಿತ
ದ್ವಂದ್ವಾತೀತ ಕಳಾನಿಧಾನಚರಣ ದ್ವಂದ್ವಾನಿಶಂ ಪಾಹಿಮಾಂ ॥೩॥

ಪದ :

ಮಂದಹಸನಜಿತ ಚಂದಿರ । ರುಚಿಮಂದಿರ ಭಾನುಕೋಟಿ ಸುಸುಂದರ ।
ದಂದ ಶೂಕಾವಳಿ ಮಂಡನ । ಭವಖಂಡನ । ದೂಷಕ ಜನದಂಡನ
ನಂದನಂದನ । ಸಖಶಂಕರ । ಕ್ಷೇಮಂಕರ । ಪೋಷಿತನತನಕಿಂಕರ ।
ವೃಂದಭ ಕ್ರಾದ್ರ್ಯಮೃತೇಶ್ವರ । ಪರಮೇಶ್ವರ ಪಾಲಯ ಭುವನೇಶ್ವರ ॥೪॥

೨೬

ರಾಗ : ಸಾರಂಗ

ಶ್ರೀ ಗಣಪ ಮಾಂ ಪಾಹಿ । ಮಲ್ಲೇಂದ್ರ ಮಷ್ಯನು
ರಾಗಿಣಂ ಸ್ವಮವೇಹಿ । ಸೌಖ್ಯಾನಿದೇಹಿ ॥

ನಾಗಮುಖ ಪುನ್ನಾಗಮುಖ ಸಮನೋಗಣ ಪ್ರಮ
ನೋಗಣಪ್ರಿಯ । ಭೋಗದಾಯಕ ಭೋಗದಾ
ಗ್ರಜವಾಗಧೀಶ ಶಿವಾಗಮಸ್ತುತ ॥ಪಲ್ಲ॥

ವಿಘ್ನಗಜ ಹರ್ಯಕ್ಷಾ । ಭಕ್ತಾವಳೀ ದುರಿತಘ್ನ
ಸಕಲಾಧ್ಯಕ್ಷ । ಮೋಹಾಂಧಕಾರ ತಮೋಘ್ನ
ದುಷ್ಟವಿಪಕ್ಷ । ಕರುಣಾಕಟಾಕ್ಷ ॥ ನಿಘ್ನಜನ
ತೋಪಘ್ನಹರವಕ್ತ್ರಘ್ನ ವರದಕೃತಘ್ನಜನ
ಕಾ । ರ್ಯಘ್ನ ಜಯಜಯವಿಘ್ನ ರಾಜಭವ
ಘ್ನನತ ನಿರ್ವಿಘ್ನ ಸೌಖ್ಯದ ॥ ॥೧॥

ಮಂಗಲ ಪ್ರದಮೂರ್ತೇ ಮೂಷಕಲಲಾಮಶ । ತಾಂ
ಗ ಸುರುಚಿರಕೀರ್ತೆ । ದಾನದ್ರವೋ ಧೃತ ।
ಭೃಂಗಘನ ಚಿತ್ಸ್ಪೂರ್ತೆ । ನಾಶಿತನತಾರ್ತೆ ।
ತುಂಗಚರ್ಚಿತ ಪತಂಗಕೋಟನಿಭಾಂಗ ಮ
ಣಿ ಖಚಿತಾಂಗುಲೀಯಕ । ರಿಂಗದಂಶುತ
ರಂಗಮಣಿ ಮಕುಟಾಂಗ ಪಾಹಿ ಸುಧಾಂಗ ಭಾಲಶ್ರೀ ॥೨॥

ಶೈಲಜಾಪ್ರಿಯಬಾಲ । ಮೋದಕ ರುಚಿಪ್ರಿಯ ।
ಪಾಲಿತಾಶ್ರಿತಜಾಲ । ಸ್ಕಂದಾಗ್ರಜಾತದ ।
ಯಾಲವಾಲ ಸುಲೀಲ । ವಿದ್ಯಾವಿಲೋಲ ।
ವ್ಯಾಲಬದ್ಧವಿಶಾಲ ತುಂಡದುರಾಲಭಾಮೃತಮೂಲಕಂದ ।
ಮದಾಲಿ ಘನಹರಿ ನೀಲಮಣಿರುಚಿಶಾಲಿ ದಿವ್ಯಕಪೋಲಪಾಲ ॥೩॥

೨೭

ರಾಗ : ಪೂರ್ವಿ

ಶಿವ ಭೋಳಾ ಶಿವ ಭೋಳಾ ನ ಕಳೇ ಶಿವಲೀಳಾ ॥ಧ್ರುವ॥

ಕೋದಂಡೇನ [೧][ರಾಹೀಣೀ][೧] ತ್ಯಾಲಾ । ಮೋದಭರೇ
ಕಾಮದಿಲಾ ಪ್ರಾಣಿ ॥೧॥

ಕೋಣೀ ಏಕ ಶಿಳೇನೇ ಮಾರೀ । ತ್ಯಾಣೀ ತೋ
ವಿಲೇ ಕಾಮಾರಿ ॥೨॥

ಅಮೃತಪ್ರದ ಅವಘ್ಯಾ ಅಮರಾಲಾ । ಅಮರ
ಆಪಣ ವಿಷಘೇವು ನಿ ಝಾಲಾ ॥೩॥

೧-೧ ರ ಹಾಣಿ(ಮೂ)

೨೮

ರಾಗ : ಭೈರವಿ

ಹೇರಂಬಾ ದೇಯಿ ಮನೋರಥಾ ॥
ತೂಂ ಕರಿಕರುಣಾ ಮೂಷಕ ಮಹಾರಾಥಾ ॥ಧ್ರುವ॥

ವಿಷಯಾ ವಿರತೀ । ವಿಪುಳತರಮತೀ ದೇ [೧][ವಾ][೧]
ವೀ ಸತ್ಪಥಾ ॥ ವಿಷಮಾಕ್ಷಸುತಾ ಮಜವರಿ ॥೨॥

ಮಮತಾ । ಕರೀ [೨][ಸಿ][೨] ಮುನಿ ಹೇ ಭವವ್ಯಥಾ
ಮೋದಕವಿನುತಾ । ವೈದಿಕವಿನುತಾ । ಆಗಮ

ನುತ ನಿಜಕಥಾ ಸಾಧಕ ಸುಖದಾತಾರ
ದಯಾಕರ ಆದಿಪೂಜ್ಯ ತೂಂ ಚತುಷ್ಪ [೩][ದಾ][೩] ॥೩॥
❖❖

೧–೧ ವಾ(ಮೂಲ) ೨–೨ ಶಿ(ಮೂ) ೩–೩ ಥಾ (ಮೂ)

ಭಾಗ : ಎರಡು

೧

ಈರಪ್ಪ ದೇಸಾಯಿ

ಈರಪ್ಪ ದೇಸಾಯಿಯು, ಕಿತ್ತೂರ ದೊರೆ ಮಲ್ಲಸರ್ಜನ ತಂದೆ, ಶಕೆ ೧೭೪೯ ರಿಂದ ೧೭೮೨ರ ವರೆಗೆ ಅಂದರೆ ೩೩ ವರ್ಷ ಕಿತ್ತೂರ ಸಂಸ್ಥಾನದ ಅಧಿಪತಿಯಾಗಿದ್ದನು. ಶೌರ್ಯ, ಸಾಹಸಗಳಿಗಾಗಿ ಖ್ಯಾತಿ ಪಡೆದಿದ್ದನು. ತನ್ನ ಸಂಸ್ಥಾನವನ್ನು ವಿಸ್ತಾರಗೊಳಿಸಿದನು. ತಾಸಗಾಂವದ ಪಟವರ್ಧನನ ವಶದಲ್ಲಿದ್ದ ಪರಸಗಡ. ಶಹಾಪೂರ, ಗೋಕಾಕ ತಾಲೂಕಗಳನ್ನು ಗೆದ್ದುಕೊಂಡಿದ್ದನು. ಮುಂದೆ ಪರಶರಾಮಭಾವು ಘಟವರ್ಧನ ಎಂಬವನು ಈರಪ್ಪ ದೇಸಾಯಿಯನ್ನು ಗೋಕಾಕ ಕಾಳಗದಲ್ಲಿ ಸೋಲಿಸಿ, ಅವನನ್ನು ಸೆರೆ ಹಿಡಿದುಕೊಂಡು ಹೋಗಿ, ಮಿರಜಿಯಲ್ಲಿ ವಿಷಹಾಕಿ ಕೊಂದ ಸಂಗತಿಯು ಈ ಪದದಲ್ಲಿ ಬಂದಿದೆ. ವಿರೂಪಾಕ್ಷಪಂತ ಮಹಿಪತ ಎಂಬುವನು, ಈರಪ್ಪ ದೇಸಾಯಿಯ ನಂಬಿಗೆಯ ಕಾರಭಾರಿಗಳಲ್ಲಿ ಒಬ್ಬನು. ಈತನು ಬ್ರಾಹ್ಮಣನು. ಅವನೇ ಈರಪ್ಪ ದೇಸಾಯಿಯ ಶವವನ್ನು ಕಿತ್ತೂರಿಗೆ ತೆಗೆದುಕೊಂಡು ಬಂದನು. ಕಲ್ಮಠದಲ್ಲಿ ಸಮಾಧಿಯನ್ನು ಮಾಡಿದ್ದು ಅವರ ಮೇಲೆ ಒಂದು ಸುಂದರ ಕಟ್ಟಡ ಕಟ್ಟಲಾಗಿದೆ. ಮಹಿಪತನ ಮನೆತನದವರು ತಿಗಡಿಯಲ್ಲಿ ಈಗಲೂ ಇದ್ದು ಅವರಿಗೆ ಕಾರಭಾರಿಗಳೆಂದು ಕರೆಯುತ್ತಾರೆ.

ಈ ಹಾಡಿನ ಇನ್ನೊಂದು ಪಾಠಾಂತರವನ್ನು ಬೆಳವಡಿಯಲ್ಲಿ ಮಲ್ಲಮ್ಮ ಪೂಜೇರಿ ಎಂಬವಳು ಹಾಡುತ್ತಾಳೆ. ಶ್ರೀ ಸಿದ್ಧರಾಮಜಿ ಇವರು ಪ್ರತಿ ಮಾಡಿಕೊಟ್ಟಿದ್ದಾರೆ. ಈ ಹಾಡನ್ನು ಮರಕುಂಬಿ ಹಿರಿಕೊಪ್ಪದಲ್ಲಿ ಹೆಣ್ಣುಮಕ್ಕಳು ಹಾಡುತ್ತಾರೆ. ಗೋಕಾಕ ತಡಸಲದ ಮೇಲೆ ಮಹಾಲಿಂಗೇಶ್ವರನ ಸಣ್ಣ ಗುಡಿಯೊಂದು ಉತ್ತರ ಮುಖವಾಗಿ ಇದೆ. ಗೋಕಾಕ ಕಾಳಗವು ಅಲ್ಲಿಯೇ ಆಗಿದ್ದರಿಂದ ಈ ಕೋಲು ಪದದಲ್ಲಿ "ಸಣ್ಣ ಸಣ್ಣ ಗುಡಿಯ ಸಣ್ಣ ಮಹಾಲಿಂಗಪ್ಪ" ಎಂಬ ಪಲ್ಲವಿಯಿಂದ ಪ್ರಾರಂಭವಾಗುತ್ತದೆ.

ಸಣ್ಣ ಸಣ್ಣ ಗುಡಿಯ ! ಸಣ್ಣ ಮಹಾಲಿಂಗಪ್ಪ ।
ಅಣ್ಣ ಈರಪ್ಪ ಪಗಡಿಯ
ಅಣ್ಣ ಈರಪ್ಪ ಪಗಡಿಯಾಡು ಹೊತ್ತಿಗೆ
ಬಂದಾವು ಈರಪ್ಪಗೆ ಅವಸುದ್ದಿ ॥ಕೋಲ॥

ದೊಡ್ಡ ದೊಡ್ಡ ಗುಡಿಯ ದೊಡ್ಡ ಮಹಲಿಂಗಪ್ಪ।
ಅಪ್ಪ ಈರಪ್ಪ ಪಗಡಿಯ
ಅಪ್ಪ ಈರಪ್ಪ ಪಗಡಿಯಾಡು ಹೊತ್ತಿಗೆ।
ಬಂದವು ಈರಪ್ಪಗ ಅವಸುದ್ದಿ

ಬಂದಂಥ ಕಾಗದ ಬಲಗೈಯ್ಯಾಗ ಹಿಡಕೊಂಡ
ಓದುತ ನಮ್ಮ ದೊರಿಯ ಕೈಯ ಬಿಟ್ಟಾ
ಹರುವ ನೀರಾಗ ಹವಳದುಂಗರ ಚಲ್ಲಿ।
ಆಗ ನಮ್ಮ ದೊರಿಯ ನೆಲಿಯ ನೋಡಿ
ಆಗ ನಮ್ಮ ದೊರಿಯ ನೆಲಿ ನೋಡಿ ನಿಂತಾನ।
ಹೊಳ್ಳಿ ಬಂದೂರ ಹೊಗೆನೆಂದಾ

ನಿಂತಿರು ನೀರಾಗ। ಮುತ್ತಿನುಂಗರ ಚಲ್ಲಿ।
ಮತ್ತ ನಮ್ಮ ದೊರಿಯ ನೆಲಿ ನೋಡಿ
ಮತ್ತ ನಮ್ಮ ದೊರಿಯ ನೆಲಿ ನೋಡಿ ನಿಂತಾನ।
ಇನ್ನ ಬಂದು ಊರ ಹೊಗೆನೆಂದಾ

ಎತ್ಲೋದಿರಿ ಬಂಟರ್ಯಾ ಎತ್ಲೋದ್ರಿ ಹಳಬರ್ಯಾ।
ಕರಸರಿ ನ್ಯಾಸರಗಿ ದ್ಯಾವಪ್ಪನ
ನನ್ನ ಹೆಂಡರು ಮಕ್ಕಳು ಬಲು ಜ್ವಾಕ್ಯೋ।

ಎತ್ಲೋದಿರಿ ಬಂಟರ್ಯಾ ಎತ್ಲೋದಿರಿ ನಂಟರ್ಯಾ
ಕರಸರಿ ವಣ್ಣೂರ ದೇಸಾಯಿನ್ನ।
ದೇಸಾಯಿ ಪ್ಯಾಟಿ ಪಟ್ಟಣ ಬಲು ಜ್ವಾಕ್ಯೋ

ದೊಡ್ಡ ದೊಡ್ಡವರಿಗೆ ಗಿದ್ದನಕ್ಕಿ ಕೊಟ್ಟು।
ಒಡ್ಯಾಣ ಕೊಟ್ಟ ನಡುವೀಗಿ
ಒಡ್ಯಾಣ ಕೊಟ್ಟ ನಡುವೀಗೆ ನೀವು ನನ್ನ।
ಆನೆಯ ಮುಂದೆ ನಡಿರೆಂದ
ಸಣ್ಣ ಸಣ್ಣವರಿಗೆ ಸೊಲಿಗೆ ಅಕ್ಕಿ ಕೊಟ್ಟು।

ಸೆಲ್ಲೇವ ಕೊಟ್ಟ ನಡುವೀಗೆ
ಸೆಲ್ಲೇವ ಕೊಟ್ಟ ನಡುವೀಗೆ ನೀವು ನನ್ನ
ಕುದುರ್‍ಇಯ ಮುಂದೆ ನಡಿರೆಂದ

ಹೆಂಡರಿದ್ದವರು ನಿಮ್ಮನಿಗ್ಹೋಗಿರೊ।
ಹೆಂಡರಿಲ್ಲದ ಬಂಟರು ನನ್ನ ಒಂಟಿಯ ಮುಂದೆ ನಡಿರೆಂದ
ಮಕ್ಕಳು ಇದ್ದವರು ನಿಮ್ಮನಿಗೆ ಹೋಗಿರೋ।
ಮಕ್ಕಳಿಲ್ಲದ ಒಂಟಿಗರು ನೀವು ನನ್ನ ತೇಜಿಯ ಮುಂದೆ ನಡಿರೆಂದ

ಬ್ಯಾಳಿಯ ತಿನ್ನೂದು ಲ್ವಾಳಿಯ ಉಗುಳುದು।
ಸೋಮ ನೀ ಸಾಲ್ಯಾಗ ನಲಿವುದು
ಸೋಮ ನೀ ಸಾಲ್ಯಾಗ ನಲಗುವ ಈರಪ್ಪನ
ಕುದುರಿಗೆ ಬಂತೊ ವನದೇಸಾ

ತುಪ್ಪವ ತಿನ್ನುದು ಹಿಪ್ಪೆಯ ಉಗಳುದು।
ಪಟ್ಟ ಸಾಲ್ಯಾಗ ನಲಿವುದು
ಪಟ್ಟ ಸಾಲ್ಯಾಗ ನಲಿವು ಈರಪ್ಪನ।
ತೇಜಿಗೆ ಬಂತೋ ವನದೇಶ

ಉದ್ದನ್ನ ಕರಸಬ್ಯಾ ಗಿಡ್ಡನ ಬೂಸಿ ಬಸ್ಯಾ।
ಉದ್ದಿನ ಕಾಳಷ್ಟು ಚನಬಸ್ಯಾ
ಉದ್ದಿನ ಕಾಳಷ್ಟು ಚನಬಸ್ಯಾ ಇವರೆಲ್ಲ।
ಸುದ್ಧಿ ಮಾಡ್ಯಾರೊ ನಮ್ಮ ದೊರಿಯ

ಹೇಸಿಗಿಲ್ಲದ ಸರಕಾರ ಮೀಸಿಲ್ಲದ ಪಟವರ್ಧನ।
ಹಾಸಗಲ್ಲ ಮೇಲೆ ಒಲಿ ಹೂಡಿ
ಹಾಸಗಲ್ಲ ಮೇಲೆ ಒಲಿ ಹೂಡಿ ಈರಪ್ಪ।
ದೇಸಾಯಿನ ಸೆರೆಯ ಹಿಡದಾರ
ಅಡ್ಡಿಲ್ಲದ ಅರೆಕಾರ ಗಡ್ಡಿಲ್ಲದ ಸರಕಾರ।

ಒಡ್ಡಗಲ್ಲ ಮೇಲೆ ಒಲಿ ಹೂಡಿ
ಒಡ್ಡಗಲ್ಲ ಮೇಲೆ ಒಲಿ ಹೂಡಿ ಈರಪ್ಪನ।
ದೊಡ್ಡವನ ಸೆರೆಯ ಹಿಡದಾರ।

ಎರಿಯ ಹೊಲದಾಗ ಎಳಿಯ ಸೌತೆಕಾಯಿ।
ಬಿಸಲಿಗೆ ಬಾಯಿ ಬಿಡತಾವು
ಬಿಸಲಿಗೆ ಬಾಯಿ ಬಿಡತಾವ ಈರಪ್ಪನ।
ಹಸಮಗನ ಸೆರೆಯ ಹಿಡದಾರ

ಅಂಗಳ ಸಾರಿಸಿ ಗಂಧದ ಚಳಿಯ ಕೊಟ್ಟು।
ಒಂದ ಪಾಲಕಿ ಹೊರಗಿಟ್ಟ
ಒಂದ ಪಾಲಕಿ ಹೊರಗಿಟ್ಟ ಈರಪ್ಪಗ।
ಹೊತ್ತಾರೊ ಬೋಯಾರೊ ಇರುಳೆಲ್ಲ

ಹೊಸ್ತಿಲ ಸಾರಿಸಿ ಹೊಸ ಮುತ್ತ ಏರಿಸಿ।
ಹೊತ್ತಾರ ಬೋಯಾರೊ ಇರುಳೆಲ್ಲ
ಹೊತ್ತಾರೊ ಹೊತ್ತಾರೊ ಎಲ್ಲಿ ಮಟ ಹೊತ್ತಾರೊ।
ಹೋದಾರ ಬ್ಯಾಸಿಗಿಯ ಝರಿಗಳಿಗೆ

ಬ್ಯಾಸಿಗೆಯ ಝರಿಯಾಗ ತಾಸ್ಹೊತ್ತು ನಿಲಲಿಲ್ಲಾ।
ಹೋದಾರೊ ಗೋಕಾಂವಿ ತಡಸಲಕ
ಗೋಕಾಂವಿ ತಡಸಲಕ ತಾಸ್ಹೊತ್ತ ನಿಲಲಿಲ್ಲಾ ।
ಹೋದಾರ ಮಿರಜೀಯ ಅಗಸೀಗೆ

ಮಿರಜೀಯ ಅಗಸಿಗೆ ಬೇಸ್ಯಾಗಿ ಇಳಿವ್ಯಾರ ।
ಇಸ ಮದ್ದು ಕುಡಿಸಿ ಕೊಂದಾರೊ

ಉದ್ದನ್ನ ಕರಬಸ್ಯಾ ಗಿಡ್ಡನ ಬೂಸಿ ಬಸ್ಯಾ ।
ಉದ್ದಿನ ಕಾಳಷ್ಟು ಚನಬಸ್ಯಾ

ಉದ್ದೀನ ಕಾಳಷ್ಟು ಚನಬಸ್ಯಾ । ಮೂರು ಕೂಡಿ
ಸುದ್ಧ ಮಾಡಿದರೊ ನಮ್ಮ ದೊರೆಯ

ಬಿದ್ದಾನೊ ಬಿದ್ದಾನೊ ಬಿಳಿ ಅಂಗಿ ಮೇಲಾಗಿ ।
ರುದ್ರ ಜೋಡಂಗಿ ಕಳಚ್ಯಾವ
ರುದ್ರ ಜೋಡಂಗಿ ಕಳಚ್ಯಾವ ನಮ ದೊರೆಯ ।
ಬಿದ್ದಾನೊ ಸೂರ್ಯನ ಇದುರಿಗೆ

ಬಿದ್ದಾನೊ ಸೂರ್ಯನ ಇದುರಿಗೆ ಈರಪ್ಪನ ।
ಹೊತ್ತಾರೊ ಬೋಯಾರ ಇರುಳೆಲ್ಲ
ಹೊತ್ತಾರೊ ಹೊತ್ತಾರೆ ಎಲ್ಲಮಟ ಹೊತ್ತಾರೆ ।
ಹೊತ್ತಾರೆ ಸಂಗೊಳ್ಳಿ ಹೊಳಿಗಳಿಗೆ

ಸಂಗೊಳ್ಳಿ ಹೊಳಿಯಾಗ ಚಂದಮಾಡಿಳುವ್ಯಾರ ।
ಮುಂದಕ ಸುದ್ದಿ ಕಳುವ್ಯಾರ
ಸುದ್ದಿ ಹೇಳೊ ಅಣ್ಣಾಗ ಮಜ್ಜಿಗೆ ಬಾನಾ ನೀಡಿ ।
ಸುದ್ದಿ ಹೇಳಣ್ಣ ಸಾವುಕಾಶ

ಏನು ಸುದ್ದಿಯಿಲ್ಲಾ ಎಂತೂ ಸುದ್ದಿ ಇಲ್ಲಾ ।
ಅಪ್ಪ ಈರಪ್ಪ ಮಡದಾನ
ಹಾವಳಿ ತಂದಣ್ಣಗ ಹಾಲೂ ಬಾನವ ನೀಡಿ ।
ಹಾವಳಿ ಹೇಳಣ್ಣ ಸಾವಕಾಶ
ಹಾವಳಿ ನಮ್ಮಲ್ಲಿಲ್ಲ ಗೀವಳಿ ನಮ್ಮಲ್ಲಿಲ್ಲಾ ।
ಅಪ್ಪ ಈರಪ್ಪ ಮಡದಾನ

ಅಪ್ಪ ಈರಪ್ಪ ಮಡದಾನ *ಪಾರ್ವತೆವ್ವ ।
ಕುಟ್ಟಿಕೊಂಡಾಳೊ ತನ್ನ ಎದೆ ಬಾಯಿ
ಹಾದ್ಯಾನ ಕಲ್ಲ ಪಾದದಲೇ ತಕ್ಕೊಂಡು ।
ಹೇರಿಕೊಂಡಳೋ ತನ್ನ ಎದೆ ಬಾಯಿ

ಹೇರಿಕೊಂಡಳೊ ಎದೆ ಬಾಯಿ ಪಾರ್ವತೆವ್ವನ ।
ದಾರಿಲಿದ್ದವರು ಹಿಡಿರವ್ವ

ಬಟ್ಟನ್ನ ಕಲ್ಲ ಬಟ್ಟೀಲೆ ತಕ್ಕೊಂಡು ।
ಕುಟ್ಟಿಕೊಂಡಳೊ ತನ್ನ ಎದೆಯ ಬಾಯಿ
ಕುಟ್ಟಿಕೊಂಡಳೊ ತನ್ನ ಎದೆ ಬಾಯಿ ಪಾರ್ವತೆವ್ವನ ।
ಹತ್ತೀಲಿದ್ದವರು ಹಿಡಿರವ್ವ

ಹೊಳಿ ಮೆಟ್ಟಿದ ಕಾಗಿ ಧೂಳವ ಕಾರಿದ್ಹಾಂಗ।
ಆರ ಲಕ್ಕಸ ನಿನ್ನ ಎಡಬಲಕ
ಆರ ಲಕ್ಕಸ ನಿನ್ನ ಎಡಬಲಕ ನಮ್ಮ ದೊರಿಯೆ ।
ಯಾರ್‍ಯಾರಿಲ್ಲೇನೋ ಜನುಮಕ

ಹುತ್ತ ಮೆಟ್ಟಿದ ಕಾಗಿ ನೆತ್ತರವ ಕಾರಿದ್ಹಾಂಗ ।
ಹತ್ತ ಲಕ್ಕಸ ನಿನ್ನ ಎಡಬಲಕ
ಹತ್ತ ಲಕ್ಕಸ ನಿನ್ನ ಎಡಬಲಕ ನಮ ದೊರಿಯೆ ।
ಯಾರ್‍ಯಾರಿಲ್ಲೇನೊ ಎಡಬಲ

ತಾಯಿ ಇದ್ದರೆಷ್ಟು ಮರಿಗ್ಯಾಳೊ ।
ಕಿತ್ತೂರ ಕೊತ್ತಲಕ ಉತ್ರೀಕರ್‍ಯಾರಿಲ್ಲಾ
ನಿಂತಿರು ಜನರು ಅಳತಾರೊ ।

ಕಿಲ್ಲೇವ ಹಳಹಳ ಮಾಲೆಲ್ಲ ಬಣಬಣ
ಸಾಲ ಕೊತ್ತಲ ರಣರಣ ।
ಇಷ್ಟ ಐಶ್ವರ್ಯ ಎಲ್ಲಾ ನೀವು ಬಿಟ್ಹೋಗುದು ಧರ್ಮೆನೊ

*ಉದ್ದನ್ನ ಕರಬಸ್ಯಾ ಗಿಡ್ಡನ್ನ ಬೂಸಿ ಬಸ್ಯಾ ।
ಉದ್ದೀನ ಕಾಳಪ್ಪಾ ಚನಬಸ್ಯಾ ಇವರೆಲ್ಲ
ಸುದ್ದ ಮಾಡಿದರೊ ನಮ್ಮ ದೊರಿಯ ।
ಗುಡಿ ಕಟ್ಟಿ ಕಲ್ಲಮಠಕ್ಕೆ ದಪನಗೊಳಿಸ್ಯಾರ ॥

❖❖

* ಈ ಸಾಲಿನಲ್ಲಿ ಬರುವ ಹೆಸರಿನವರು ಮೂವರು ಫಿತೂರಿ ಮಾಡಿದರೊ ಇಲ್ಲವೆ ಅವನ ಜತೆಗಿದ್ದರೊ ತಿಳಿದು ಬಂದಿಲ್ಲ.

೨

ಕಿತ್ತೂರ ಅರಸರ ಕೋಲುಪದ*

ಕೋಲು ಕೋಲಿನ ಕೋಲ ಮುತ್ತಿನ
ಕೋಲ ಕೋಲು ಕೋಲಿನ ಕೋಲ॥
ಕೋಲಪದನ ಕೇಳ ಬಾಲಿ ಕಿತ್ತೂರ
ಮಲ್ಲಪ್ಪ ದೊರೆಗಳ ಮೇಲ॥

ಕಿತ್ತೂರ ದೇಸಾಯಿ ಕಿರದು।
ಕತ್ತಿ ಹೊರೆಗಳ ಹಿರಿದು
ಅವರ ಕಾಲಿಗಿ ಹಾಕ್ಯಾರ ಹಿಡಿದು।
ಟೀಪೂನ್ನ ಕೈ ಬೀಸಿ ಜಗಳಕ್ಕ ಕರೆದು
ಕಿತ್ತೂರ ಮುಂದೊದಗಲಿ।
ಅಲ್ಲಿ ಬಂದ ತುಂಬಿದ ಹೊಳಿ ಬಂದೊದಗಲಿ॥

ಅವರಿಬ್ಬರೆದಿ ಬುಗಲಿ।
ಅಲ್ಲೊಂದು ಜಾಲಿಯ ಕೊರಡ ಸಿಗಲಿ॥

ಕಿತ್ತೂರ ದೇಸಾಯಿ ಟಕ್ಕೂ।
ಅವರ ಕೈಯೊಳಗೆ ಸಿಕ್ಕು।

---

* ಗಂಗವ್ವ ಕಲ್ಲಪ್ಪ ಮಳಕೂರೆ, ತುರ್ಕರ ಶೀಗೀಹಳ್ಳಿ ಇವರ ಹಾಡಿನ ಸಂಗ್ರಹದಿಂದ.

ರೈತರಿಗಾಗುವ ದುಃಖ।
ವೆಂಕಟರಂಗಯ್ಯ ತಾ ಕುಂತ ನಕ್ಕ।
ಕಿತ್ತೂರ ದೇಸಾಯಿ ಅಲ್ಲಾ।
ಅವರು ಊಟವ ಬೇಡಿದರಿಲ್ಲಾ।
ಚೌಥ ಓದರೂ ತಿರುಗಲಿಲ್ಲ।
ರಾಗಿಯ ಚೆಂಡಿಯ ಮೆದ್ದಾರಲ್ಲಾ॥

ಕಿತ್ತೂರ ದೇಸಾಯಿ ತಂದಿ।
ತಂದಾರು ಟೀಪೂನ ಮಂದಿ
ಊಟ ಬೇಡಿದರಿಲ್ಲ
ಹುಣಸಿಯ ತಪ್ಪಲ ಮೆದ್ದಾರಲ್ಲಾ।

ಏರಲಾರದ ಗುಡ್ಡವನೇರಿ।
ದೊರೆಗಳ ಕಾಲಮೇಲ ಕಲ್ಲ ಹೊರಳಿ।
ಪಾದಕ ಬಂದಿತೋ ನೆತ್ತರ।
ಮಡಿವಾಳಪ್ಪ ರಟ್ಯಾಗ ಕೈಹಾಕಿ ಎತ್ತಿ॥

ಕೋಟಿ ಕೋಟಿ ಸುತ್ತ ಕಾಟಕರು ಮಡಿದಾರು
ಬಾಲೆ ರುದ್ರವ್ವ ಅಳದಿರ।
ಏ ನಿನ್ನ ಮಾತಿನ ಮಗನ ಕೈಸೇರಿ॥
ಕೋಟಿ ಕೋಟಿ ಸುತ್ತ ಸುತ್ತ ಕಾಟಕರು ಮಡದಾರು।
ಬಾಲೆ ಚೆನ್ನವ್ವ ಅಳದಿರ।
ಏ ನಿನ್ನ ಬಾಲನೊಯ್ದಾರ ಕೈಸೆರಿ॥

ಹತ್ತು ಬೆರಳಿಗೆ ಚುಂಚ್ಯಾರ ಸೂಜಿಯ
ಮೇಗ ತಂದಿಟ್ಟಾರ ಗಿರಕಿಯ।
ಚೆನ್ನವ್ವ ನಿನ್ನ ಬಾಲನೊಯ್ದಾರ ಕೈಸೆರಿ॥

ಆರು ಬೆರಳಿಗಿ ಚುಂಚ್ಯಾಂರ ಸೂಜಿಯ।
ಮೇಗ ತಂದಿಟ್ಟಾರ ಗಿರಕಿಯ॥

ರುದ್ರವ್ವೆ ನಿನ್ನ ಮಾತಿನ ಮಗನ ಕೈ ಸೆರಿಯ।
ರೊಕ್ಕ ಕಳುಹು ಅಂದರ ಗೊಳಗೊಳಕಿ ಕಳುಹ್ಯಾರ।
ರೊಕ್ಕದ ಗಲ್ಲೇಕ ಒಡಿಯಳ ಚೆನ್ನವ್ವ
ನಿನ್ನ ಬಾಲಗಲ್ಲದನೇನ ಸುಡಬೇಕ॥

ಹಣವ ಕಳುಹಂದರ ಹಣ್ಣನ ಕಳುಹ್ಯಾರ।
ಹಣ್ಣಿನ ಗಲ್ಲೇಕ ಒಡೆಯಳ ರುದ್ರವ್ವ
ನಿನ್ನ ಬಾಲಗಲ್ಲದನೇನ ಸುಡಬೇಕ॥

❖❖

೩

ಮಲ್ಲಸರ್ಜನ ಕಾವ್ಯ

ದುಂದುಭಿ ಪದಗಳ ಚಂದಾಗಿ ಕೇಳಿರಿ ।
ಕಂದುಗೊರಳ ಭಕ್ತ ಮಲ್ಲೇಂದ್ರನ ॥
ಸಿಂಧುರವಾಹನನೆಂದು ಮರ್ತ್ಯದಲ್ಲಿ ।
ಬಂದು ರಾಜಿಸುವಂಥ ದೇವೇಂದ್ರನ ॥ ॥೧॥

ಛಪ್ಪನ್ನ ದೇಶದೊಳೊಪ್ಪುವ ಕಿತ್ತೂರ ।
ಮುಪ್ಪಿನ ಮಡಿವಾಳಸ್ವಾಮಿಯವರ ॥
ಸರ್ಪಭೂಷಣಭಕ್ತ ಮಲ್ಲೇಂದ್ರರ ।
ತಪ್ಪದೆ ಸಲಹುವ ಹರಭಕ್ತರ ॥ ॥೨॥

ಅರಸು ಮಲ್ಲೇಂದ್ರನ ಸರಸವ ಕಂಡು ।
ಧರೆಯೊಳು ಕಿತ್ತೂರಪುರದೊಳು ದಂಡು ॥
ಮೂರು ಪಂಚೇರಿನ ತೋಫಿನ ಗುಂಡು ।
ಅದರ ವಿಸ್ತಾರವು ಅಗಣಿತವೆಂದು ॥ ॥೩॥

ಛತ್ರಚಾಮರ ನಿತ್ಯ ಆನೆ ಅಂಬಾರಿ ।
ಚಿತ್ರದ ಪಾಲಕಿ ಸುತ್ತು ಪರಿಪರಿ ॥
ಮುತ್ತಿನ ಪಾಲಿ ಹತ್ತುವರಾರು ।
ಸತ್ಯುಳ್ಳ ಮಲ್ಲೇಂದ್ರ ಭೂಪನೆಂಬವರು ॥ ॥೪॥

ಸವಳಗಟ್ಟಿಯ ಸಾಲು ಕುದುರೆಯ ಮುಂದೆ ।
ನಿವುಳಾಗಿ ಮಾರ್ಬಲ ಎಡಬಲದಿಂದೆ ॥
ಭೂವರ ಮಲ್ಲೇಂದ್ರ ಬರುವದು ಚಂದ ।
ತವೆ ಪುಣ್ಯವಿಸ್ತಾರ ಹೇಳುವೆ ಮುಂದ ॥ ॥೫॥

ಶಿವಪೂಜೆ ಸಂಭ್ರಮ ಕೇಳಿರೆಲ್ಲಾರು ।
ತಾವರಿ ಪುಷ್ಪವು ಮೂರು ಸಾವಿsರು ॥
ದೇವರ ಅಭಿಷೇಕ ಪರಿಪರಿ ಕ್ಷೀರು ।
ದೇವಸೇವೆಯ ಮಾಡುವಂಥ ಶರಣರು ॥ ॥೬॥

ಪರಸ್ತ್ರೀಯರೆಲ್ಲರು ತಾಯಿ ಸಮಾನ ।
ಹರವ್ರತ ಆಚಾರ ನಡಿಸುವ ನೇಮ ॥
ಶರಧಿಯ ಧರಿಸಿದ ಭಕ್ತನು ತನ್ನ ।
ಗುರುಸಿದ್ಧ ಚವಕಿಯ ಗುರುವಿನ ಧ್ಯಾನ ॥ ॥೭॥

ಆಷಾಢ ಮುಂದಿನ ಮಾಸದ ಭಕ್ತಿಯ ।
ಲೇಸಾಗಿ ಪೇಳುವೆ ಕೇಳಿರಯ್ಯ ॥
ಸಾಸಿರ ಹೊನ್ನಿನ ಭಿಕ್ಷವ ನೀಡುವ ।
ಭಾಸುರಭವಭಕ್ತ ಕಾಣಿರಯ್ಯ ॥ ॥೮॥

ಶ್ರಾವಣಮಾಸದ ಭಕ್ತಿಯ ನೋಡು ।
ದೇವ ಜಂಗಮ ಕೂಡಿ ಸಾವಿರ ಹನ್ನೆರಡು ॥
ಭಾವಶುದ್ಧಾಶೀರ್ವಾದವ ಕೊಂಡು ।
ಭೂವರ ಮಲ್ಲೇಂದ್ರಗಿನ್ನಾರು ಜೋಡು ॥ ॥೯॥

ಮಾರಾರಿಭಕ್ತ ಮಲ್ಲೇಂದ್ರನು ಧೀರಾ ।
ಭೂರಿ ಭೂದಾನವ ಕೊಟ್ಟಾನು ಶೂರ ॥
ಧರೆಯೊಳು ಮಲ್ಲೇಂದ್ರ ವರಪುಣ್ಯಾಗಾರ ।
ಶಿರವೈದು ಉಳ್ಳನ ದಯ ಪರಿಪೂರ ॥ ॥೧೦॥

ಪೇಶ್ವೆ ದಂಡಿನ ಪಯಣ

ಚೆನ್ನಿಗ ಚೆಲ್ವನ ಭ [ಕ್ತಿ] ಪ್ರತಾಪ ।
ಪುಣೇದ ಶ್ರೀಮಂತ ಕೇಳಿದ ಭೂಪ ॥
ಮಾನ್ಯ ಮಾನ್ಯರೊಳು ನುಡಿದ ಶ್ರೀಮಂತ ।
ಧನ್ಯ ಕಿತ್ತೂರ ಭೂಪ ಸಗ್ಗದ ಸುರಪ ॥ ॥೧೧॥

ಕಿತ್ತೋರನಗರಕ್ಕೆ ಹೋಗಿ ಬಾರೆಂದು ।
ಮುತ್ತಿನ ಮಾಲೆಯ ಸರವನು ತಂದು ॥
ಕಿತ್ತೂರಭೂಪನ ಬರಮಾಡಿರೆಂದು ।
ಹತ್ತುಸಾವಿರ ಹೊನ್ನ ಹರಿಸುವೆನೆಂದು ॥ ॥೧೨॥

ಪಟ್ಟದ ಹಿರಿಬಾಜೀರಾಯನು ಬೇಗ ।
ಶ್ರೇಷ್ಠಕಾರಭಾರಿ ಮಾಣೀಕೇಶ್ವರನಾಗ ॥
ಸೃಷ್ಟಿಯೊಳಗೆ ಕಿತ್ತೂರರಸನದೀಗ ।
ಎಷ್ಟು ಹೇಳಲಿ ಅವನ ಪುಣ್ಯದ ಭೋಗ ॥ ॥೧೩॥

ಕಾರ್ತಿಕಸ್ವಾಮಿಯ ಭೆಟ್ಟಿ ನೆವಮಾಡಿ ।
ಹೊರಟಾನು ಪುಣೆ ಶಹರ ಬಿಟ್ಟು ॥
ಅರ್ತಿಯಿಂ ಎಡಬಲ ಮಾರ್ಬಲಗೂಡಿ ।
ಬರಮಾಡಲರಸನ ಆಭಯವ ಕೊಟ್ಟು ॥ ॥೧೪॥

ರಾಸ್ತೆ ಮಾಧವರಾಯ ಬಂದನು ಮುಂಡ ।
ವಿಸ್ತಾರದಿ ಅಲ್ಲೆ ತಂದನು ದಂಡ ॥
ಹಸ್ತಿ ಕುದುರೆ ಮಂದಿ ಕೂಡಿತ ಹಿಂಡ
ಶಿಸ್ತಾಗಿ ಸಾಲಾಗಿ ನಡಿದ ಪ್ರಚಂಡ ॥ ॥೧೫॥

ಹೊರಟಿತು ಐವತ್ತು ಸಾವಿರ ಫೌಜ ।
ನೆರೆದರು ಪಟವರ್ಧನೆರಡೂ ಬಾಜು ॥

ಕರಿ ತುರಗ ಒಂಟಿ ಕಟ್ಟಿತು ರೇಜ ।
ಸಿರಿವಂತ ಮಾಡಿದ ತಾನೊಂದು ಮೋಜ ॥ ॥೧೬॥

ಪಂಢೆರಪುರದೊಳು ಕೂಡಿತು ದಂಡು ।
ಮಂಡಲ ಕುದುರೆಯ ಕೂಡಿತಾಖಂಡು ॥
ಹೆಂಡರು ಮಕ್ಕಳು ತಾ ಕೂಡಿಕೊಂಡು ।
ಝುಂಢೆ ಕಟ್ಟಿತು ಹಿರಿ ಹೊಳೆಯೊಳು ದಂಡು ॥ ॥೧೭॥

ನಾಕಾರು ದಿನ ಅಲ್ಲಿ ಛಾವಣೆಮಾಡಿ ।
ಏಕ ಚಿಂತಾಮಣಿ ರಾಯನ ಕೂಡಿ ॥
ಪಾಕವ ಮಾಡಿ ಹೋಳಿಗಿ ತುಪ್ಪ ನೀಡಿ ।
ರೊಕ್ಕ ರೂಪಾಯಿ ವರ ಭಿಕ್ಷವ ನೀಡಿ ॥ ॥೧೮॥

ಅಪ್ಪ ದೇಸಾಯಿ ತಾ ಬಂದನು ಧೀರಾ ।
ತೋಪವ ತಂದಾನು ನೋಡು ಹದಿನಾರ ॥
ಅಪ್ಪ ನಿಪ್ಪಾಣಿಯ ಅವ ಶಮಶೂರ ।
ಒಪ್ಪಿತು ಫೌಜೂ ಹತ್ತುಸಾವಿರ ॥ ॥೧೯॥

ನಣದಿಯ ಹಳ್ಳದೊಳಿಳಿಸಿದ ತಂದು ।
ಧನಿಯನು ತನ್ನಯ ದಂಡಿಗೆ ಇಂದು ॥
ಹಣಗಳ ಸೂರೆಯ ಮಾಡಿದನೆಂದು ।
ಜಾಣ ದೇಸಾಯಪ್ಪಾಸಾಹೇಬ ಬಂದು ॥ ॥೨೦॥

ಎಲ್ಲರು ಒಂದಾಗಿ ಮುಂದಕೆ ಸಾಗಿ ।
ನಿಲ್ಲದೆ ಗೋಡಗೇರಿಗೆ ಇದರಾಗಿ ॥
ಬಲ್ಲಿದ ಚಂದಿರ ಬಲ ಸಹಿತಾಗಿ
ನಿಲ್ಲದೆ ಇಳಿದೀತು ಹೊಂಗಲಕ್ಹೋಗಿ ॥ ॥೨೧॥

ಹೊಂಗಲಪುರದೊಳು ಕಂಡನು ತೋಟಾ ।
ಮಂಗಲಕರವಾಗಿ ಕಂಡಿತು ನೋಟಾ ॥

ಶೃಂಗಾರ ವನದೊಳು ಹಾಕಿದ ಊಟಾ ।
ಗಂಗೆಯೊಳವ ಬೇಗ ಆಡಿದ ಆಟ ॥ ॥೨೨॥

ಒಂದು ದಿನ ಅಲ್ಲೆ ಭಾವಣಿಯ ಮಾಡಿ ।
ಮುಂದಿರುತಿಹ ಕೆರಿ ಪಾಳೆವ ನೋಡಿ ॥
ಬಂದಿತು ಬಾಜೀರಾಯನ ದಳ ಕೂಡಿ ।
ಚಂದದಿ ಕುದುರೆಯ ರಥಗಳ ಹೂಡಿ ॥ ॥೨೩॥

ಬಾಜೀರಾಯನ ಪಯಣ

ಮರುದಿನ ಹೊತ್ತೇರಿದುದಂ ಕಂಡು ।
ಕರೆದು ದೈವದವರ ಶೆಟ್ಟರ ಹಿಂಡು ॥
ಹರದಾರಿ ಅಂಗಡಿ ಜವಳಿಯ ದಿಂಡು ।
ಬೆರಗಾದ ಬಾಜೀರಾಯ ಪ್ಯಾಟಿಯ ಕಂಡು ॥ ॥೨೪॥

ಎಲ್ಲ ದೈವಕೆ ಕೊಡಿಸಿ ವಸ್ತ್ರ ಪಾತ್ರಗಳ ।
ನಿಲ್ಲದೆ ನುಡಿಸಿದ ಭೇರಿ ಕಹಳೆಗಳ ॥
ಅಲ್ಲಿಂದ ಸೊಂಡೂರ ಎಲ್ಲ ದೇವತೆಗಳ ।
ಬಲ್ಲಿದ ಕಾರ್ತಿಕಸ್ವಾಮಿಯ ಜಾತ್ರೆಗಳ ॥ ॥೨೫॥

ಪಾರ್ವತೀಪುತ್ರನ ಕಂಡು ಶ್ರೀಮಂತ ।
ಪರ್ವತಗಿರಿಯನು ಹತ್ತಿ ಸಮರ್ಥ ॥
ಉರಗಭೂಷಣ ರೂಪ ಕಾರ್ತಿಕ ಕರ್ತ ।
ಧರ್ಮವ ಮಾಡಿದನವ ಬಹಳರ್ಥ ॥ ॥೨೬॥

ಬಾಜೀರಾಯನು ಭಕ್ತಿಮಾಡಿದ ಬಾಳ ।
ಮೂಜಗದೊಡೆಯನ ಮುಂದೆ ಧರ್ಮಗಳ ॥
ರಾಜ ಬ್ರಾಹ್ಮಣರಿಗೆ ಅನ್ನದಾನಗಳ ।
ಪೂಜೆಗಟ್ಟಿದಾ ಮುತ್ತುಮಾಲೆ ರತ್ನಗಳ ॥ ॥೨೭॥

ಅಕ್ಷರ ಮೂರುಳ್ಳ ಶಿಖರಕ್ಕೆ ಒಂದು ।
ಲಕ್ಷ ವರದ ಕಳಸಿಟ್ಟನು ತಂದು ॥
ಸಾಕ್ಷಾತ ಕಾರ್ತಿಕೇಶ್ವರಗ ಮತ್ತೊಂದ ।
ಪೇಕ್ಷೆಯ ಮಾಡಿದ ಸುತರು ಬೇಕೆಂದು ॥ ॥೨೮॥

ಅರ್ಭಕ ಬಯಸಿದ ಬಾಜೀರಾಯ ।
ಕಾರ್ತಿಕೇಶ್ವರಗ ಉಡುಗರೆ ತುರಾಯ ॥
ಪ್ರಾರ್ಥನೆ ಮಾಡಿದ ಭಕ್ತಿ ಸಾರಾಯ ।
ಪರ್ವತಗಿರಿಯಿಂದ ಇಳಿದ ಮಾರಾಯ ॥ ॥೨೯॥

ರಂಗಮಂಟಪ ಚಂದ್ರಸಾಲ ಗೋಪುರವ ।
ಬಂಗಾರ ಎರಕಿನ ಹೊಳೆವ ದೇವರವ ॥
ಗಂಗಾಧರನ ವರಪುತ್ರನ ಕರೆವ ।
ಮಂಗಲ ಪದವಿಯ ಕೊಡುವನು ವರವ ॥೩೦॥

ಪಂಪಾಸಾಗರ ನಡು ಗೂಡೂರ ದಾಟಿ ।
ಕಂಪಲಿ ಕನಕಗಿರಿಯ ಹೊಸಪ್ಯಾಟಿ ॥
ಅಪರಿಮಿತವ ಆದ ಬಾಗಲಕೋಟಿ ॥
ತಪದೂರವಾಯಿತು ಬಾದಾಮಿಕೋಟಿ ॥ ॥೩೧॥

ಬೂದಿಹಾಳದ ಆಚಾರಿಯ ಕಂಡು
ಬಾದಾಮಿ ತಳದೊಳು ಇಳಿಸಿದ ದಂಡು ॥
ಆ ದಿನ ಶರಣರ ಭೆಟ್ಟಿ ತಕ್ಕೊಂಡು ।
ಹೋದನು ದೀಕ್ಷಿತ ಪಾದಕೆ ಎಂದು ॥ ॥೩೨॥

ಗುರುಲಹೊಸೂರವ ಹೊಕ್ಕ ಶ್ರೀಮಂತ ।
ಹರುಷವ ತಾಳಿದ ತಾ ಬಲವಂತ ॥
ಧರೆಯೊಳು ದೀಕ್ಷಿತರ ಪಾದ ಪವಿತ್ರಾ ।
ಭರಜರಿ ತಸರಿಪ ಕೊಡಿಸಿದ ವಸ್ತ್ರ ॥ ॥೩೩॥

ಕಿತ್ತೂರ ಮಲ್ಲೇಂದ್ರಭೂಪನು ಕೇಳಿ ।
ಹತ್ತು ಸಾವಿರ ಮಂದಿ ಹಿಡಿಸಿದ ಕಾಳಿ ॥
ಅತ್ತಿ ನೀಲವ್ವಗ ಸುದ್ದಿಯ ಪೇಳಿ ।
ಪುತ್ರರ ಜೋಕೆಂದ ಧೈರ್ಯವ ತಾಳಿ ॥ ॥೩೪॥

ಅತ್ತಿಯ ಪಾದಕ ವಂದನೆ ಮಾಡಿ ।
ಸತ್ಯುಳ್ಳ ತಾಯಿ ನೀಲವ್ವನ ಕೊಂಡಾಡಿ ॥
ಅತ್ತ ಶ್ರೀಮಂತ ಬಾಜೀರಾಯನ ನೋಡಿ ।
ಪ್ರೀತಿಲೆ ಇರಬೇಕ ಸತಿಯರು ಕೂಡಿ ॥ ॥೩೫॥

ಹಿರಿಯ ಬಾಪುವಿನ ಕರೆದು ಮಲ್ಲೇಂದ್ರ ।
ಮರುಗಬೇಡೆನ್ನ ಮಗನೆ ದೇವೇಂದ್ರ ॥
ಬರುವೆನು ಕೇಳು ಬೇಗನೆ ಸುರಸುಂದ್ರ ।
ಧರೆಗೆ ಒಪ್ಪುವ ದೊರೆ ಸೂರ್ಯಚಂದ್ರ ॥ ॥೩೬॥

ತರಿಸಿದ ಅರಮನಿ ಬೊಕ್ಕಸ ಬದಕ ।
ವರ ವಜ್ರ ಮುತ್ತು ಮಾಣಿಕ ದೊಡ್ಡ ಪದಕ ॥
ಹರುಷದಿ ಗಳಿಸಿದ ಅರಮನಿ ಬದಕ ।
ಕರೆದೊಪ್ಪಿಸಿದ ಬಾಪೂಸಾಹೇಬಗ ಜನಕಾ ॥ ॥೩೭॥

ಆನೆ ಕುದುರಿ ಮಂದಿ ತೋಪೆಲ್ಲ ತರಿಸಿ ।
ನೀನು ಸಲಹು ಎಂದು ಹಸ್ತವ ಇರಿಸಿ ॥
ಜ್ಞಾನವುಳ್ಳ ಬಾಪೂಸಾಹೇಬನ ಹರಸಿ ।
ಅನುವಾಗಿ ಮಗನಿಗೆ ಬುದ್ಧಿಯ ಸುರಸಿ ॥ ॥೩೮॥

ಮಲ್ಲಸರ್ಜನ ಸೈನ್ಯಸಿದ್ಧತೆ

ಚಿಕ್ಕ ತಮ್ಮರೊಳು ಪ್ರೀತಿಲಿ ಕೂಡಿ ।
ಅಕ್ಕರ ದಿನದಲ್ಲಿ ಕೂಡಿ ಮಾತಾಡಿ ॥

ಮಕ್ಕಳು ನೀವಿಬ್ಬರು ಒಡಗೂಡಿ ।
ದುಃಖ ಸೈರಿಸೋ ನಿನ್ನ ಹಡದಾಕಿ ನೋಡಿ ॥ ॥೩೯॥

ಸತಿಯ ಚೆನ್ನವನ ಪ್ರೀತಿಯ ಗಂಡ ।
ಅತಿ ದುಃಖವ ಮಾಡಿದ ಮಲ್ಲೇಂದ್ರ ॥
ಸತಿಯರು ಭೂಮಿಗೆ ಹೊರಳಿದ ಕಂಡು ।
ಪತಿ ಮಲ್ಲೇಂದ್ರ ಭೂಪ ತಾನೆತ್ತಿಕೊಂಡ ॥ ॥೪೦॥

ಅಳಬ್ಯಾಡ ನೀನೆನ್ನ ಕಳೆಯುಳ್ಳ ಸತಿಯೇ ।
ಎಳೆಯ ಮಕ್ಕಳ ಮ್ಯಾಲ ಇರಬೇಕ ರತಿಯ ॥
ಬಳಗಕ್ಕ ಕೊಡುತಿರು ನೀ ಮೇಲು ಮತಿಯೇ ।
ಬಾಳಲೋಚನ ಶಿವನ ಪಾದವೇ ಗತಿಯ ॥ ॥೪೧॥

ರಾಜಲಕ್ಷ್ಮಿಯನಾಳಿಕೊಂಡಿರು ನೀನು ।
ಬಾಜೀರಾಯನ ಕೂಡ ಹೋಗುವೆ ನಾನು ॥
ಮೋಜಿನ ಹಿರಿ ಅತ್ತಿ ನೀಲವ್ವನು ।
ಭುಜಬಲ ಐದನು ಭಾಪುಸಾಹೇಬನು ॥ ॥೪೨॥

ಮಡದಿ ಕರೆದು ಅತ್ತಿ ಕೈಯೊಳು ಕೊಟ್ಟು ।
ಗಡ ಕಿಲ್ಲೇದೊಳು ಶಿವಬಸಪ್ಪನ ಇಟ್ಟು ॥
ನಡುವಿನ ಪುತ್ರನ ಕರಕೊಂಡ ಹೊರಟ ।
ಎಡಬಲ ಮಕ್ಕಳರೊಳು ನೀನು ಶ್ರೇಷ್ಠ ॥ ॥೪೩॥

ಗುರುಪುತ್ರ ವೀರಪ್ಪಗ್ಹೇಳಿದ ಬುದ್ಧಿ ।
ಬರೆಬರೆದು ಕಳಿಸಯ್ಯ ಅರಮನಿ ಸುದ್ದಿ ॥
ಪರ ದಂಡು ಬಂದರೆ ಹಾಕಯ್ಯ ಗುದ್ದಿ ।
ಕರೆದು ಹೇಳಿದ ಕಾರಭಾರಿಗೆ ಬುದ್ಧಿ ॥ ॥೪೪॥

ಅರಮನಿ ಅಂಗಳ ಹೊರೆಯಕ್ಕ ಬಂದು ।
ಹಿರಿಪುತ್ರ ಬಾಪುಸಾಹೇಬನ ಕರತಂದು ॥

ಹಿರಿಯಳ ವಾಕ್ಯವ ಮೀರಬೇಡೆಂದು ।
ಗುರುತದೆ ವಚನವ ತಕ್ಕೊಂಡನೊಂದು ॥ ॥೪೫॥

ನೂರು ಸಾವಿರ ಫೌಜ ಕೂಡಿ ಮಲ್ಲೇಂದ್ರ ।
ಸ್ವಾರಿ ಹೊರಟಿತು ಅಮರಾವತಿಯ ದೇವೇಂದ್ರ ॥
ಏರಿದನಾನೆ ಅಂಬಾರಿ ಸುಂದ್ರ ।
ಭರದಿಂದ ಹೊಂಗಲಕ ಬಂದ ಮಲ್ಲೇಂದ್ರ ॥ ॥೪೬॥

ಶೇಗುಣಸಿ ಗೌಡರ ಕುಟಿಲ ರಾಯಭಾರ

ಹರಿಭಕ್ತ ಬಾಜೀರಾಯನು ಲೇಸಾಗಿ ।
ಮಾರಿಹಾಳ ದಾಟಿ ಇಳಿದಾನು ಹೋಗಿ ॥
ದೊರೆ ಮಲ್ಲಸರ್ಜನು ತಾ ಇದಿರಾಗಿ ।
ಪರಿಗಟ್ಟಿ ನಿಂತಾನು ತಾ ಚೆಲುವಾಗಿ ॥ ॥೪೭॥

ಕಿತ್ತೂರ ದೇಸಾಯಿ ಬಂದುದ ಕಂಡು ।
ಹತ್ತರಿದ್ದವರನು ತಾ ಕರಿಸಿಕೊಂಡು ॥
ಉತ್ತರದೇಶಕ್ಕೆ ನಡಿಸಿದ ದಂಡು ।
ಬಿತ್ತರ ಬೆಳಗಾಂವಿ ಕಿಲ್ಲೇವ ಕಂಡು ॥ ॥೪೮॥

ಪುಣೇದ ಮಾರ್ಗವ ಹಿಡಿಸಿದ ಫೌಜು ।
ಮಾನ್ಯ ಮಾನ್ಯರೆಲ್ಲರು ಬಂದಾರು ಬಾಜು ॥
ಆನೆ ಕುದುರೆ ಒಂಟಿಗಟ್ಟಿತು ರೇಜು ।
ತಾನೊಂದು ಶ್ರೀಮಂತ ಮಾಡಿದ ಮೋಜು ॥ ॥೪೯॥

ಎಡವೂರ ಕೃಷ್ಣೆಯ ಹೊಳೆಯೊಳಗೆಲ್ಲ ।
ಬಿಡದೆ ನಮ್ಮವರಿಗೆ ಮಾಡಿದ ಗುಲ್ಲ ॥
ನಡುಗಾಡ ಹೊಂಗಲದೊಳು ಬರಲಿಲ್ಲ ।
ಗೌಡ ಶೇಗುಣಸಿ ತಾ ಬಂದಾನಲ್ಲ ॥ ॥೫೦॥

ಮುಂದಕೆ ಮಿರ್ಜಿಯ ಪುರವನು ದಾಟಿ ।
ತಂದನು ಶೇಗುಣಿಸಿ, ಗೌಡನು ಚೀಟಿ ॥
ಚೆಂದುಳ್ಳ ತುರಾಯಿ ಮುತ್ತಿನ ಕಂಠಿ ।
ಒಂದು ಸಾವಿರ ಬಿದ್ದ ಜರದ ದುಪ್ಪಟ್ಟಿ ॥ ॥೫೧॥

ಅಲ್ಲಪ್ಪ ಗೌಡನು ಹೇಳಿದ ವಾರ್ತೆ ।
ಬಲ್ಲಿದ ಕಿತ್ತೂರ ದೊರೆಗಳ ಕೀರ್ತಿ ॥
ಎಲ್ಲರೊಳು ದಯವಿರಬೇಕು ಪೂರ್ತಿ ।
ಮಲ್ಲಸರ್ಜಗೆ ರೊಕ್ಕವಿಲ್ಲೆಂದ ಕೊರ್ತಿ ॥ ॥೫೨॥

ಶ್ರೀಮಂತ ನುಡಿದಾನು ಶೇಗುಣಿಸಿಗೌಡ ।
ಜುಮೇದಾರನಾಗಿ ಹೋದಾನು ನೋಡ ॥
ಬೊಮ್ಮರು ಮರುಗುವ ಮಾಡಿದ ಕೇಡ ।
ನಮ್ಮ ಜೋಯಿಸರ ಬಡತಾನ ನೋಡಾ ॥ ॥೫೩॥

ಸರಕಾರ ವಜೀರನ ಬಾಕಿಯ ರಸ್ತಾ ।
ದರಕಾರ ಇಲ್ಲವಗೆ ಇಟ್ಟುಕೊಂಡ ಸ್ವಸ್ತಾ ॥
ಹಿರಿ ಮಾಣಿಕೇಶಿನೊಳು ಮಾಡಿದ ಕಸ್ತಾ ।
ದೊರೆ ಮಲ್ಲಸರ್ಜನು ಮಾಡಿದ ಮಸ್ತಾ ॥ ॥೫೪॥

ಬಾಕಿಯ ನಾಲ್ಕಾರು ಲಕ್ಷವ ಹೊರಿಸಿ ।
ವಕೀಲ ಮಾಡಿದ ರಸ್ತಾವ ತರಿಸಿ ॥
ಹಾಕಿದ ಅಲ್ಲಪ್ಪ ಕತಬಿಯ ಬರಸಿ ।
ಜೋಕಿಲೆ ಹೇಳಿದ ಮಲ್ಲಸರ್ಜನ ಕರಿಸಿ ॥ ॥೫೫॥

ಆರು ಲಕ್ಷಕೆ ಗೌಡ ಜಾಮೀನ ಆದ ।
ವೀರಪ್ಪದೇಸಾಯಿ ಭೆಟ್ಟಿಗೆ ಹೋದ ॥
ಶೂರ ಬಾಜೀರಾಯ ಕೇಳಿದ ಭೇದ ।
ಬಾರೆಂದು ಹಸ್ತವ ಪಿಡಿದವನಾದ ॥ ॥೫೬॥

ಮಲ್ಲೇಂದ್ರ ಮಗನಿಗೆ ವಸ್ತ್ರವ ಕೊಡಿಸಿ ।
ನೆಲ್ಲಿಯ ಕಾಯಂತಹ ಮುತ್ತುಗಳಿಡಿಸಿ ।
ಅಲ್ಲಾಬ ಜರತರ ಡಗಲಿಯ ತೊಡಿಸಿ ।
ಜಲ್ಲಿ ಸತ್ತಿಗೆ ಮುತ್ತಿನ ಗೊಂಡೆವ ವಹಿಸಿ ॥ ॥೫೭॥

ಮಲ್ಲೇಂದ್ರ ಮಗನಿಗೆ ಮೆಚ್ಚಿ ಶ್ರೀಮಂತ ।
ಪಾಲಕಿ ಚಾಮರ ಹಿಡಿಸಿದ ಛತ್ರ ॥
ಇಲ್ಲಿಂದ ತಿರುಗಿ ನೀ ನಡಿಯಲೋ ಪುತ್ರಾ ।
ಬಲ್ಲಿದ ಶ್ರೀಮಂತ ಹೇಳಿದ ಉತ್ರಾ ॥ ॥೫೮॥

ಕಿತ್ತೂರ ದೊರೆಗಳಿಗಪ್ಪಣೆ ಕೊಟ್ಟು ।
ಉತ್ತಮ ಬಾಜೀರಾಯನು ದಯವಿಟ್ಟು ॥
ಕುತ್ತಿಗೆ ಕೋದು ತಾ ಹಿಂದಕೆ ಹೊರಟಾ ।
ಮತ್ತೊಂದು ಗೌಡ ಮಾಡಿದ ಕೆಟ್ಟಾ ॥ ॥೫೯॥

ಆರು ಲಕ್ಷಕೆ ಎನ್ನ ಜಾಮೀನ ಕೊಟ್ಟು ।
ದಾರಿಯೊಳು ಹಿಂದಕ್ಕೆ ತಿರುಗುವಿ ಹೊಂಟು ॥
ಬಾರಯ್ಯ ಶ್ರೀಮಂತ ಸ್ವಾರಿಯ ಗುಂಟ ।
ಬರುವಂತೆ ಶ್ರೀಮಂತಗಭಯವ ಕೊಟ್ಟು ॥ ॥೬೦॥

ಅಲ್ಲಪ್ಪಗೌಡನ ಮಾತವ ಮೀರಿ ।
ಮಲ್ಲೇಂದ್ರ ಹಿಂದಕ್ಕೆ ಬರಲಿಲ್ಲ ಸಾರಿ ॥
ನಿಲ್ಲದೆ ಪಟ್ಟದ ಆನೆಯನೇರಿ ।
ಎಲ್ಲಿಂದ ಒದಗಿತು ಬಂದಿ ಇದಿಮಾರಿ ॥ ॥೬೧॥

ಅರವತ್ತು ಸಾವಿರ ಫೌಜವ ಕೂಡಿ ।
ಹರಿಭಕ್ತ ಬಾಜೀರಾಯನ ಒಡಗೂಡಿ ॥
ಶಾರ ಹೊಕ್ಕನು ಪುಣೇದರಮನಿ ನೋಡಿ ।
ಭೇರಿ ದುಂದುಭಿ ಕಾಳಿ ತೋಫಿನ ಗಾಡಿ ॥ ॥೬೨॥

ಊರ ಬಿಟ್ಟು ದೂರ ಇಳದೀತು ದಂಡು ।
ಘೋರಾಗಿ ಫೌಜೆಲ್ಲ ಆದೀತು ಬಂಡು
ನೂರಾರು ವೈರಿಯ ಕಣ್ಣೀಲೆ ಕಂಡು ।
ಪೂರಾ ಘಾತವ ಮಾಡಿದಲ್ಲಪ್ಪನೆಂದು ॥ ॥೬೩॥

ಮಲ್ಲಸರ್ಜನ ಮೇಲೆ ಕಾವಲು

ಸುತ್ತಿನ ದೇಶಪಾಂಡೆರೆಲ್ಲರೂ ಕೂಡಿ ।
ಹತ್ತು ವರ್ಷದ ಬಾಕಿ ಲೆಕ್ಕವ ಮಾಡಿ ॥
ಹೆಂತ ಹೆಂತವರಿಗೆ ಹಾಕಿದ ಬೇಡಿ ।
ಸತ್ತರ ಬಿಡಲಿಲ್ಲ ಕಟ್ಟಳೆ ಮಾಡಿ ॥ ॥೬೪॥

ಬೈಲೂರ ದೇಶಪಾಂಡೆ ಮನದೊಳು ಹೇಸಿ ।
ಬಲ್ಲಿದ ಬಾಜೀರಾಯನ ವಾಲೈಸಿ ॥
ತಲೆಯ ಮೇಲಿನ ಕಳಸ ನೆಲಕೆ ಅಪ್ಪಳಿಸಿ ।
ಮಲ್ಲೇಂದ್ರ ಮಾಡಿದುಪದ್ರವ ನೆನಿಸಿ ॥ ॥೬೫॥

ಕೇಳಿ ಶ್ರೀಮಂತನು ಆದಾನು ಸಿಟ್ಟ ।
ಒಳಗ ಮುಧೋಳದವರ ಮನೆ ಕೊಟ್ಟ ॥
ತಿಳಿಯದಂತೆ ಕುದುರಿ ಚವಕಿಯಿಟ್ಟ ।
ಕಳೆಗುಂದಿ ಮಲ್ಲೇಂದ್ರ, ಕೈಲಾಲು ಬಿಟ್ಟ ॥ ॥೬೬॥

ಕಿತ್ತೂರಪುರದೊಳು ನೀಲವ್ವ ತಾಯಿ ।
ಸತ್ತ್ಯುಳ್ಳ ಮಲ್ಲೇಂದ್ರ, ಭೂಪಗೆ ಮಾಯಿ ॥
ಮತ್ತವ ಬರಲಿಲ್ಲ ಬಿಡತಾಳ ಬಾಯಿ ।
ಅತ್ತ ಹೋದನು ಮಲ್ಲಸರ್ಜ ದೇಸಾಯಿ ॥ ॥೬೭॥

ಮಡದಿ ಚನ್ನವ್ವನು ಚಿಂತಿಸಿ ಮನದೊಳು ।
ಸಡಗರ ಸಂಪತ್ತು ಬಿಟ್ಟು ಮನೆಯೊಳು ॥

ಒಡೆಯ ಮಲ್ಲೇಂದ್ರನ ತಾ ನೆನಿಸಿದಳು ।
ಒಡನೆ ಮಾತಾಡಿ ದುಃಖವ ಮಾಡಿದಳು ॥ ॥೧೮॥

ಗಂಡಮಾಲೆ ಹುಣ್ಣು ಹುಟ್ಟಿತು ಬೇಗ
ಬೆಂಡಾಗಿ ಒಣಗಿದ ಗೌಡನು ಆಗ ॥
ಕಂಡೇನು ಸೇಗುಣಿಶಿ ಪುರವನು ಹ್ಯಾಗ
ಗಂಡು ಮಕ್ಕಳ ಕಾಣದಾಂಗಾದೀತೀಗೆ ॥ ॥೧೯॥

ಡೋಲಿಯೊಳಗೆ ಕುಳಿತು ಪುಣೇವ ಬಿಟ್ಟು ।
ಮಲ್ಲೇಂದ್ರ ಭೂಪನ ಪುಣೆದೂಳಿಟ್ಟು ॥
ನಿಲ್ಲದೆ ಸೇಗುಣಸೀ ಪುರಕೆ ತಾ ಹೊರಟು ।
ಗಲ್ಲ ಒಡೆದು ಗೌಡ ಪ್ರಾಣವ ಬಿಟ್ಟು ॥ ॥೨೦॥

ಶೇಗುಣಸೀ ಗೌಡನು ಎಂಥೆಂಥ ಕುಹಕ ।
ಆಗ ಮಲ್ಲೇಂದ್ರನು ಮಾಡಿದ ದುಃಖ ॥
ಈಗ ಖರ್ಚವ ಮಾಡಬೇಕೆಂದು ರೊಕ್ಕಾ ।
ಆಗಲಿ ತಾ ಹೋದನು ಕಾರಭಾರಿ ಪಕ್ಕಾ ॥ ॥೨೧॥

ವೀರಸಂಗಪ್ಪನ ಕರಿದಾನು ಭೂಪ ।
ತೆರಿದಾನು ಕಣ್ಣು ಕೆಂಪಗೆ ಮಾಡಿ ಕೋಪ ॥
ದೊರೆ ಮಲಸರ್ಜನು ಹೇಳಿದ ಸಾಪ ।
ದರಬಾರಕ್ಹೋಗಂದ ದಿನ ಹತ್ತು ಕೇಪ ॥ ॥೨೨॥

ಮಾಣೀಕೇಶ್ವರನಲ್ಲಿ ಮುನಿದಾರು ಅವರು ।
ಪ್ರಾಣಸಂಕಟವನ್ನು ಮಾಡಿದರವರು ॥
ಜಾಣ ಕಾರಕೂನರು ಕೊಡಲಿಲ್ಲಾರು ।
ಕ್ಷೋಣಿ ಕ್ಷೋಣಿ ದ್ರವ್ಯ ಸೂರೆ ಮಾಡಿದರು ॥ ॥೨೩॥

ಬಾಜೀರಾಯನ ಭೆಟ್ಟಿ ಮಾಡ್ಸವರಿಲ್ಲಾ ।
ರಾಜ ರಾಜರು ಕೂಡಿ ಬೆರಗಾದರೆಲ್ಲಾ ॥
ತೇಜಿ ಏರಿ ಹೋದರೂ ಪರವಾನಿಗಿಲ್ಲಾ ।
ರಾಜ ಮಲ್ಲೇಂದ್ರನು ಸೊರಗಿದನಲ್ಲಾ ॥ ॥೭೪॥

ವೀರಸಂಗಪ್ಪಗ ಹೇಳಿದ ಅರಸು ।
ಕಾರಾಗೃಹದೊಳು ಆಗಿ ತಾ ತುರಸ
ವೀರಸಂಗಪ್ಪಗ ಮಾಡಿದ ಬಿರಸ ।
ಇರಬೇಕು ಮತ್ತಿನ್ನು ಏಸು ವರುಷ ॥ ॥೭೫॥

ಬಾಜೀರಾಯನ ಮೇಜವಾನಿ ಸಮಾರಂಭ

ಬಾಜೀರಾಯ ಬಂದು ಹೊಕ್ಕಾನು ತೋಟ ।
ರಾಜರಾಜನು ಕೂಡಿ ಆಡಿ ನೀರಾಟ ॥
ಮೋಜಿಲೆ ಮಲ್ಲೇಂದ್ರಗ್ಹೇಳಿದ ಊಟ ।
ರಾಜಾಧಿಪತಿ ಬಾಜೀರಾಯನು ಶ್ರೇಷ್ಠ ॥ ॥೭೬॥

ಶೀಲವಂತನು ಮಲ್ಲಸರ್ಜನು ಭೂಪ ।
ಒಲ್ಲೆನೊಟಕಂದರ ಬಂದಿತು ತಾಪ ॥
ಬಲ್ಲಿದ ಶ್ರೀಮಂತ ಮಾಡ್ಯಾನು ಕೋಪ ।
ಮಲ್ಲಸರ್ಜನು ಮುಂದಕ್ಹಾಕಿದ ಸಾಪ ॥ ॥೭೭॥

ಕಾಂತ ಶ್ರೀಮಂತನಿಗೆ ಹೇಳಿದರಲ್ಲಾ ।
ಕಿತ್ತೂರ ದೇಸಾಯಿ ಊಟಕ್ಕೆ ಒಲ್ಲಾ ॥
ಸತ್ತ್ಯುಳ್ಳ ಶಿವಭಕ್ತ ಉತ್ತಮ ಶೀಲ ।
ಮತ್ತೆ ಫಲಹಾರಕ್ಕೆ ಬರುವ ಕುಶಲ ॥ ॥೭೮॥

ಅರಮನಿ ರಂಗಮಂಟಪವನು ಸಾರಿಸಿ ।
ಪರಿಪರಿ ಹಣ್ಣು ಸಕ್ಕರಿ ಪೇಡೆ ತರಿಸಿ ॥

ದೊರೆ ಮಲ್ಲಸರ್ಜನ ಬೇಗನೆ ಕರಿಸಿ ।
ಪರಿಪೂರ್ಣ ಪಂಚ ಘರಾಳವ ತರಿಸಿ ॥ ॥೭೯॥

ನಾಲ್ಕು ಸಾವಿರ ಜನ ಮಾಡಿ ಫಳಾರ ।
ಪಕ್ಕಾ ಕಾರಕೂನಗೆ ಹೇಳಿ ಕಿವಿಯೋಳ ॥
ಗಕ್ಕನೆ ತರಿಸಿದ ಪಾತರ ಮ್ಯಾಳ ।
ಲೆಕ್ಕವಿಲ್ಲದೆ ಜನ ಕೂಡಿತು ಬಾಳ ॥ ॥೮೦॥

ಭರಝುರಿ ತಸರೀಪ ತರಿಸಿದ ಪ್ಯಾಟಿ ।
ಮೂರು ಸಾವಿರ ಬಿದ್ದ ಜರದ ದುಪ್ಪಟ್ಟಿ ॥
ಸೂರ್ತಿ ಜೋಡಿನೆಳೆ ಮುತ್ತಿನ ಕಂಠಿ ।
ತುರ್ತು ಮಾಡಿದ ಮಲ್ಲಸರ್ಜಗ ಕೈ ಮುಟ್ಟಿ ॥ ॥೮೧॥

ಅತ್ತೆಯ ಮರಣ ವಾರ್ತೆ

ಕನಸಿನೊಳಗೆ ಬಾಪುಸಾಹೇಬನ ಕಂಡು ।
ತೊನಸಿಹಾಳ ಗೌಡನ ಮಗಳ ತಕ್ಕೊಂಡು ॥
ಮುನಿಸು ಮಾಡಬೇಡ ಮಗನೇ ಪ್ರಚಂಡ ।
ಅನುವಾಗಿ ಮದುವೆ ಮಾಡ ತಗೊಂಡ ॥ ॥೮೨॥

ಸುಂದ್ರ ಮಲ್ಲೇಂದ್ರನ ನಡುವಿನ ಪುತ್ರ ।
ಚಂದ್ರಮನಕಿಂತ ಚೆಲುವ ಸಮರ್ಥ ॥
ಅಂದಳದೊಳು ತಾ ಮಾಡಿದ ಮೂರ್ತ ।
ತಂದನು ಕಿತ್ತೂರಪುರಕೊಂದು ಗುರ್ತಾ ॥ ॥೮೩॥

ವೀರಪ್ಪ ದೊರೆಗಳು ಬಂದದ್ದು ಕೇಳಿ ।
ಅರಮನಿ ಹಿರಿಯರು ಹರುಷವ ತಾಳಿ ॥
ದೊರೆಮಲ್ಲಸರ್ಜನು ಬರಲಿಲ್ಲ ಹೊರಳಿ ।
ಹಿರಿಯಣ್ಣ ಭಾಪುಸಾಹೇಬನು ಕೇಳಿ ॥ ॥೮೪॥

ಅಳಿಯನ ಕಾಣದೆ ಅತ್ತೆವ್ವ ಮರುಗಿ ।
ಕಳೆಗುಂದಿ ಕೈಕಾಲು ಶರೀರವು ಸೊರಗಿ ॥
ಬಳಗ ನೋಡಲಿಕ್ಕೆ ಬರಲಿಲ್ಲ ತಿರುಗಿ ।
ಹೊಳೆವ ಚಂದರಸಾಲಿ ಮೇಲ ಉಪ್ಪರಗಿ ॥ ॥೮೫॥

ದೊಡ್ಡವ್ವನು ಧನಿಯನು ಕಾಣದೆ ಮತ್ತೆ ।
ಹಿಂಡ ಮಂದಿಯ ಮುಂದೆ ನುಡಿದಳು ಕುಂತ ॥
ಕೆಂಡಗಣ್ಣಿನ ಶಿವ ಕರೆದಾನು ಅತ್ತ ।
ಮಾಡಿದಳು ಪ್ರಭುವಿನ ಪಾದಗಳ ಸ್ತುತ್ಯ ॥ ॥೮೬॥

ಅಪ್ಪ ಮಲ್ಲೇಂದ್ರಗೆ ಪ್ರೀತಿ ಇಟ್ಟಾಳು ।
ಭಾಪುಸಾಹೇಬನಿಗೆ ಧೈರ್ಯಕೊಟ್ಟಾಳು ॥
ಚಪ್ಪಳಿಕ್ಕಿ ಚಲೋ ತೊಟ್ಲ ಕಟ್ಟಿದಳು ।
ಮುಪ್ಪಿನತ್ತೆವ್ವನು ಪ್ರಾಣ ಬಿಟ್ಟಳು ॥ ॥೮೭॥

ರುದ್ರವ್ವನ ಹೆಸರು ಅಡಗಿತು ಇಂದು ।
ಚಂದ್ರಕಾಂತಿಯುಳ್ಳ ಪುತ್ರರು ಬಂದು ॥
ಸುಂದ್ರ ಮಲ್ಲೇಂದ್ರಗೆ ಕಾಗದ ಒಂದು ।
ಮಲ್ಲೇಂದ್ರನ ಕೈಯಾಗ ಕೊಟ್ಟರು ತಂದು ॥ ॥೮೮॥

ಬರೆದ ಕಾಗದವನು ಮಲ್ಲೇಂದ್ರ ನೋಡಿ ।
ಧರಣೀ ಮೇಲೆ ಬಿದ್ದು ತಾನು ಹೊರಳಾಡಿ ॥
ಮೂರು ಮಕ್ಕಳನು ಪರದೇಶಿ ಮಾಡಿ ।
ಹರನೊಳು ಅತ್ತೆವ್ವ ಹೋದಳು ಕೂಡಿ ॥ ॥೮೯॥

ಬಾದುರ ಸಿರಿಯನು ಐದಾಗ ಅತ್ತೆ ।
ಸಾಧಿಸಿ ಜಪತಪ ಮಾಡಿದಿ ನಿತ್ತೆ ॥
ಮಾದೇವನ ಪೂಜೆ ಮಾಡಿದಿ ಅತ್ತೆ ।
ಹೋದಂತ ದೇಸಗತಿ ನಿಲ್ಲಿಸಿದಿ ಮತ್ತೆ ॥ ॥೯೦॥

ಅತ್ತತ್ತ ಮಲ್ಲೇಂದ್ರ ಬಿದ್ದನು ನೆಲಕೆ ।
ಮುತ್ತಿನ ಸರಗಳು ಹರಿದಾವು ಪದಕ ॥
ಉತ್ತಮ ಶುಭಗಳು ಅಗಲಲು ಅದಕೆ ।
ಹತ್ತೀತು ಮಲಸರ್ಜನ ಜೀವಕ್ಕೆ ॥ ॥೯೧॥

ಚಿಂತಿಲೆ ಸೊರಗಿದ ಮಲ್ಲೇಂದ್ರ ಭೂಪ ।
ನಿತ್ಯ ದಿನ ದಿನಕೊಂದಾದನು ರೂಪ ॥
ಹತ್ತೀತು ಶರೀರಕೆ ಹಿಮಜರ ತಾಪ ।
ಹಂತೇಲಿದ್ದವರಿಗೆ ಮಾಡಿದ ಕೋಪ ॥ ॥೯೨॥

ಮಲ್ಲಸರ್ಜನ ವ್ಯವಸ್ಥಾಪತ್ರ

ಮೂರು ವರ್ಷ ಕೂತು ಮಲ್ಲೇಂದ್ರ ಪುಂಡ ।
ಮರಣಗಾಲ ಗತಿ ಬರುವದು ಕಂಡ ॥
ದೊರೆ ಮಲ್ಲಸರ್ಜನು ಯೋಚನೆಗೊಂಡ ।
ಬರೆದ ಸಿಕ್ಕೇದ ಪತ್ರ ಕಳಿಸಿದ ದಂಡ ॥ ॥೯೩॥

ನೇಮದಿ ಪುಣೇದ ಶಾರವ ಬಿಟ್ಟು ।
ರಾಮಲಿಂಗಪ್ಪನು ಅಲ್ಲಿಂದ ಹೊರಟು ॥
ತಮ್ಮಗಳಿಗೆ ತಿಗಡಿ ಹೊಂಗಲ ಕೊಟ್ಟು ।
ತಮ್ಮ ಗಾದಿಯ ಬಾಪೂಸಾಹೇಬಗ ಕೊಟ್ಟು ॥ ॥೯೪॥

ಆರು ದಿನಕ ಬಂದು ರಾಮಲಿಂಗಪ್ಪ ।
ಅರಸಿ ಚೆನ್ನವ್ವಗ ಹೇಳಿದ ಸಾಪ ॥
ಧರೆಗೆ ಅರಸು ಬಾಪುಸಾಹೇಬ ಭೂಪ ।
ಬಾರವ್ವ ಸಿಕ್ಕೆ ಹಾಕಿ ಹಾರಿಸುನು ತೋಪ ॥ ॥೯೫॥

ಹಸ್ತನಕ್ಷತ್ರದಲಿ ಸದರವ ಮಾಡಿ ।
ಸಿಸ್ತಾಗಿ ಮಕ್ಕಳು ಬಂದಾರು ಕೂಡಿ ॥

ಪ್ರಸ್ತುತ ತಾಯಿ ಚೆನ್ನವ್ವ ದಯಮಾಡಿ ।
ಸ್ವಸ್ತಾಗಿ ಸಿಕ್ಕೆಹಾಕಿ ಮಗನ ಕೊಂಡಾಡಿ ॥ ॥೯೬॥

ಆ ರಾಮಲಿಂಗಪ್ಪ ಕೇಳ್ಯಾಳು ಸುದ್ದಿ ।
ದೊರೆಗೆಳಿಗ್ಯಾಕ ಹುಟ್ಟಿತಿಂತಾ ಬುದ್ಧಿ ॥
ಮರದಾಳು ಮಹಾಪ್ರಸಾದವ ನೀಡಿ ।
ತರಿಸಬೇಕಂದಾಳು ಪುರುಷನ ಸುದ್ದಿ ॥ ॥೯೭॥

ಸಕ್ಕರಿ ಹಂಚಿ ಸಿಕ್ಕೇವ ಹಾಕ್ಯದಕ ।
ದುಃಖಮಾಡುತ ನಡೆದಾರು ಪುಣೇಕ ॥
ಸುಖದಿಂದ ಅರಮನ್ಯಾಗಿರುವದಿನ್ಯಾಕ ।
ಗಕ್ಕನೆ ಬಂದಾರು ತಿಗಡಿಯ ಪುರಕ ॥ ॥೯೮॥

ಮಲ್ಲಸರ್ಜನ ಬಿಡುಗಡೆ

ಅರ್ಥ ಖರ್ಚು ಮಾಡಿ ಬೆಳದೀತು ವಿಘ್ನ ।
ಕಾರ್ತಿಕಮಾಸದಿ ತುಳಸಿಯ ಲಗ್ನ ॥
ಕರ್ತು ಬಾಜೀರಾಯ ಮಾಡಿದ ಆಜ್ಞಾ।
ತುರ್ತ ಪ್ರಮುಖರು ಬರುವುದು ಸಂಜ್ಞಾ॥ ॥೯೯॥

ಹತ್ತುಸಾವಿರ ಜನ ಬಂದಿತು ಎಲ್ಲಾ ।
ಕಿತ್ತೂರ ದೊರೆ ತಾ ನೋಡು ಬರಲಿಲ್ಲಾ ॥
ಮತ್ತ ಶ್ರೀಮಂತನು ಮಾಡಿದ ಗುಲ್ಲಾ ।
ಛತ್ರ ಚಾಮರ ಬಲ ಕಳುಹಿದನಲ್ಲಾ ॥ ॥೧೦೦॥

ಕರೆಯ ಬಂದವರೆಲ್ಲಾ ಬೆರಗಾಗಿ ನೋಡಿ ।
ಶರೀರದ ನಾಡಿನ ಹಿಡಿದು ಮಾತಾಡಿ ॥
ಭರದಿಂದ ಬಂದಾರು ಅರಮನಿಗೋಡಿ ।
ದೊರೆ ಮಲ್ಲಸರ್ಜನ ಕಳಹು ದಯಮಾಡಿ ॥ ॥೧೦೧॥

ಹೇಳಲಿಲ್ಲ್ಯಾಕೆಂದು ಮಾಡಿದ ಸಿಟ್ಟಾ ।
ಒಳ್ಳೇ ಬಣ್ಣದ ಮೇಣೇವ ತಾ ಕೊಟ್ಟ ॥
ಬಾಳ ರಾತ್ರಿಯೊಳು ಪುಣೇವ ಬಿಟ್ಟು ।
ಇಳಿದು ಬಂದಾರವರು ಕಾತ್ರಿಯಘಟ್ಟಾ ॥ ॥೧೦೨॥

ಸಕ್ಕರಿ ನೀರಿನ ಆಧಾರ ಮಾಡಿ ।
ಬಕ್ಕನೆ ಬಂದಾರು ಎಡೂರ ನೋಡಿ ॥
ಮುಕ್ಕಣ್ಣ ವೀರಭದ್ರನ ಕೊಂಡಾಡಿ ।
ಲೆಕ್ಕವಿಲ್ಲದೆ ಅಯ್ಯನವರಿಗೆ ನೀಡಿ ॥ ॥೧೦೩॥

ಅರಸು ಮಲ್ಲೇಂದ್ರನು ಹರುಷವ ಕಂಡು ।
ತರಿಸಿದ ಕಿತ್ತೂರ ಅರಮನಿ ದಂಡು ॥
ವರ ಸುತ ಸತಿಯರು ಸೊಸ್ತೇರ ಹಿಂಡು ।
ಗುರುಸಿದ್ದಪ್ಪ ನೀ ಬಾರೋ ಕರೆದುಕೊಂಡು ॥ ॥೧೦೪॥

ಗುರುಸಿದ್ದಪ್ಪನ ಪತ್ರವ ನೋಡಿ ।
ದೊರೆ ಬಾಪೂಸಾಹೇಬ ಒತ್ತರ ಮಾಡಿ ॥
ಹರುಷದಿ ಅಣ್ಣ ತಮ್ಮರು ಒಡಗೂಡಿ ।
ಹರ ದುರದುಂಡಿಯ ಪಾದ ಕೊಂಡಾಡಿ ॥ ॥೧೦೫॥

ಮಡದಿ ಚೆನ್ನವ್ವನು ಪಾಲಕಿನೇರಿ ।
ತಡೆಯದೆ ಕುದುರೆಯ ತಿರುವುತ ಭಾರಿ ॥
ಹಿಡಿದಾರು ದುರದುಂಡಿ ಅರಭಾಂವಿ ದಾರಿ
ಒಡೆಯ ಮಲ್ಲೇಂದ್ರನ ಬಂದಿತು ಸ್ವಾರಿ ॥೧೦೬॥

ಮಕ್ಕಳ ಪಾಲಕಿ ಕಂಡು ಮಲ್ಲೇಂದ್ರ ।
ಗಕ್ಕನೆ ಮೇಣೇವ ಇಳಿಸಿ ದೇವೇಂದ್ರ ॥
ದುಃಖ ಮಾಡಿದ ಬಾಪುಸಾಹೇಬ ಸುಂಧ್ರ ।
ತೆಕ್ಕೆಯೊಳಗೆ ಬಿಗಿದಪ್ಪಿ ಮಲ್ಲೇಂದ್ರ ॥ ॥೧೦೭॥

ಪುತ್ರರ ಮೂವರ ಮಕ್ಕಳ ಹರಸಿ ।
ಹೊತ್ತ ಶಲ್ಲೇದಿಂದ ಕಣ್ಣೀರ ಒರಸಿ ॥
ಮುತ್ತು ಮಾಣಿಕದೊಂದು ಮಾಲೆಯ ತರಿಸಿ ।
ಪೃಥ್ವಿಪತಿ ಬಾಪುಸಾಹೇಬಗ ಧರಿಸಿ ॥ ॥೧೦೮॥

ದುರದುಂಡಿ ಪಾದವ ಕಂಡೆವು ಇಂದು ।
ಹರ ಹರ ಎನುತಲಿ ಒಳಿಯಕ ಬಂದು ॥
ವರಗಳ ಎಣಿಸಿ ಕೊಟ್ಟಾರು ನೂರೊಂದು ।
ಹರ ದುರದುಂಡಿಗ ಕಾಣಿಕೆ ತಂದು ॥ ॥೧೦೯॥

ಕಷ್ಟಬಟ್ಟು ತಾನು ಬಂದಂಥ ವಾರ್ತಿ ।
ಅಷ್ಟುರ ಮುಂದ ತಾ ಹೇಳಿದ ಪೂರ್ತಿ ॥
ಪಟ್ಟದ ಚೆನ್ನವ್ವ ತಂದಾಳು ಆರ್ತಿ
ಇಟ್ಟರು ಮುತ್ತು ಮಾಣಿಕ ಮನಪೂರ್ತಿ ॥೧೧೦॥

ಮಡದಿ ಮಕ್ಕಳು ಮಾತನಾಡುತ ಕುಳಿತು ।
ಮಡದಿ ಚನ್ನವ್ವನು ಹೇಳ್ಯಾಳು ನಿಂತು ॥
ಒಡೆಯ ಲಾಲಿಸು ಎನ್ನ ಕನಸಿನ ಗೊತ್ತು ।
ಒಡದಿತು ನತ್ತಿನ ಮೇಲಿನ ಮುತ್ತು ॥ ॥೧೧೧॥

ಸತಿಯ ಚೆನ್ನವ್ವನ ಪ್ರೀತಿಯ ಅರಸ ।
ಮತಿವಂತಿ ಕೇಳು ನಾ ಹೋಗಿ ಮೂರುವರುಷ ॥
ಮುತ್ತು ಒಡದೀತಂದರ ಕನಸಿನ ಸರಸ ।
ಚಿತ್ತಕ್ಕೆ ತಾರದೆ ಮಾಡಿದ ಹರುಷ ॥ ॥೧೧೨॥

ಹತ್ತು ಸಾವಿರ ನಿತ್ಯ ಜಂಗಮಕುಣಿಸಿ ।
ಬತ್ತಾಸ ಹಣ್ಣು ಸಕ್ಕರಿ ತಣಿತಣಿಸಿ ॥
ಮತ್ತೊಂದು ರೂಪಾಯಿ ಎಣಿಸಿ ಎಣಿಸಿ ।
ಭಕ್ತಿಮಾಡಿದ ಜಂಗಮ ತತಿಗೆ ತಾ ಉಣಿಸಿ ॥ ॥೧೧೩॥

ಬೇಡಿದ ಬಯಕಿಯ ಮನಸಿನ ಇಚ್ಛೆ ।
ಕೂಡಿಸಿಕೊಟ್ಟ ಮಹಾದೇವರು ಮೆಚ್ಚಿ ॥
ನೋಡಿ ಬಂದರು ಹೊಂಗಲವನು ಮೆಚ್ಚಿ ।
ಓಡಿ ಹೋದವು ಇಲ್ಲಿಗೆ ಇದಿಗಳು ಬಿಚ್ಚಿ ॥ ॥೧೧೪॥

ಹೊಂಗಲ ಹೊಕ್ಕಾನು ಮಲ್ಲೇಂದ್ರ ಪುಂಡ ।
ಜಂಗಮರು ಎಡಬಲ ಮಾರ್ಬಲ ದಂಡ ॥
ಸಂಗನಬಸವನ ಶರಣರ ಹಿಂಡ ।
ಮಾಂಗಲ್ಯ ಆಶೀರ್ವಾದವನು ಕೈಕೊಂಡ ॥ ॥೧೧೫॥

ಬೆಳ್ಳೋಡಿ ವೀರನ ಪಾದಕ್ಕೆ ಬಂದು ।
ಬೆಳ್ಳಿ ಬಂಗಾರ ಮುತ್ತು ಕಾಣಿಕೆ ತಂದು ॥
ಒಳ್ಳೇ ವಜ್ರದ ಮಾಲೆಹಾಕಿದ ಒಂದು ।
ಭಾಳಲೋಚನ ಎನ್ನ ಸಲಹು ನೀ ಎಂದು ॥ ॥೧೧೬॥

ನಾಕಾರು ಸಾವಿರ ಮೂರ್ತಿಗೆ ನೀಡಿ ।
ರೊಕ್ಕ ರೂಪಾಯಿ ವರಭಿಕ್ಷವ ನೀಡಿ ॥
ಮುಕ್ಕಣ್ಣ ವೀರಭದ್ರನ ಕೊಂಡಾಡಿ ।
ದುಃಖ ಅಳಿಯಲೆಂದು ಮಲ್ಲಸರ್ಜಗೆ ಬೇಡಿ ॥ ॥೧೧೭॥

ಮಲ್ಲಸರ್ಜನ ಕಾಯಿಲೆ ಹಾಗೂ ಮರಣ

ಶರೀರದ ವ್ಯಾಧಿಯು ದಿನ ದಿನ ಪ್ರಬಲ ।
ದೊರೆ ಮಲ್ಲಸರ್ಜ ಆದನು ಗಾಲಮೇಲ ॥
ಕರಜೂರ ಪಾನ ಸಕ್ಕರಿ ತಾನು ಒಲ್ಲ ।
ಎರಡು ದದ್ದರಿಸ್ಯಾವ ಅರಸನ ಕಾಲ ॥ ॥೧೧೮॥

ಹತ್ತು ಸಾವಿರ ಜನ ದುಃಖಿಸಿಕೊಂಡು ।
ಕಿತ್ತೂರ ಮಾರ್ಗವ ಹಿಡದೀತು ದಂಡು ॥

ಮತ್ತ ಶಿವಬಸಪ್ಪ ಹಣ್ಣ ತಕ್ಕೊಂಡು ।
ಬತ್ತಾಸ ಕಜ್ಜೂರ ಸಕ್ಕರಿ ಬೆಂಡು ॥ ॥೧೧೯॥

ಮಲ್ಲೇಂದ್ರಗೆರಗಿದ ಶಿವಬಸಪ್ಪ ।
ಮೆಲ್ಲನೆ ಎಚ್ಚತ್ತು ಮಲ್ಲೇಂದ್ರಭೂಪ ॥
ಅಲ್ಲೆ ಕೇಳಿದ ಶಿವಬಸವನ ಸಾಪಾ ।
ಕಿಲ್ಲೇದ ಮೇಲ್ಯಾಕ ಹಾರ್ಯಾವ ತೋಪ ॥ ॥೧೨೦॥

ಒಡೆಯಗ ಕುರ್ನಿಸ ಮಾಡಿದ ಬೊಗ್ಗಿ ।
ಒಡೆಯ ಬಂದಿರೆಂದು ನಾಡೆಲ್ಲ ಹಿಗ್ಗಿ ॥
ಬಡ ಜಂಗಮರಿಗೆ ಆದಿತು ಸುಗ್ಗಿ ।
ಹೊಡೆದರು ಐದು ತೋಪವನು ಹಿಗ್ಗಿಗ್ಗಿ ॥ ॥೧೨೧॥

ಅಂತ್ಯಕಾಲಕ ಭೆಟ್ಟಿ ಆದಿತು ನಿನ್ನ ।
ಸತ್ಯುಳ್ಳ ಬುದ್ಧಿ ಹಿಂದಾದಿತು ಎನ್ನ ॥
ಸುತರ ಸಂಚಯಕ್ಕಾಗೋ ನೀ ಬೆನ್ನ ।
ಹಿಡಿತದಿಂದ ದೇಸ್ಗತಿ ನಡಿಸೋ ನೀ ಮುನ್ನ ॥ ॥೧೨೨॥

ಬಂದಿತು ಶನಿವಾರ ಸಂಜೆಗೆ ಸ್ವಾರಿ ।
ಚೆಂದುಳ್ಳ ಹೊಂಡೇದ ಬಸವನನೇರಿ ॥
ಕಂದರ ಕಾಣದಂಗಾದಿತು ಮೋರಿ ।
ಇಂದ್ಯಾರಿಗ್ಹೇಳಲಿ ಅಂದಿನ ಸೂರಿ ॥ ॥೧೨೩॥

ಒಡೆಯರ ಚೌಕಿಮಠದೊಳು ಬಂದು ।
ನುಡಿದಾನು ಮಕ್ಕಳ ಕೂಡಿ ಮತ್ತೊಂದು ॥
ಸಡಗರ ಅರಮನಿ ಹೊಗಲಿಲ್ಲ ಬಂದು ।
ಹಿಡಿದು ಆಕಳ ದಾನ ಕೊಟ್ಟು ನೂರೊಂದು ॥ ॥೧೨೪॥

ಮೂರು ತಾಸಿಗೆ ಬಂದು ಅರಮನಿ ಹೊಕ್ಕಾ ।
ಬೋರ್ಯಾಡಿ ಚೆನ್ನವ್ವ ಮಾಡ್ಯಾಳು ದುಃಖ ॥

ಮಾರಾರಿ ಮಲ್ಲೇಂದ್ರಗ್ಹತ್ತಿತು ಬಿಕ್ಕ ।
ಅರಮನಿಯರಿಗೆಲ್ಲ ತಪ್ಪಿತು ದಿಕ್ಕ ॥ ॥೧೨೫॥

ದುಃಖ ಮಾಡಲಿ ಬ್ಯಾಡ ಚೆನ್ನವ್ವ ತಾಯಿ ।
ಮುಕ್ಕಣ್ಣ ಮುನಿದ ಮ್ಯಾಲಿಲ್ಲ ಉಪಾಯಿ ॥
ಭಿಕ್ಷ ಕೊಡಿಸು ವಿರಕ್ತರಿಗೆ ರೂಪಾಯಿ ।
ಮೋಕ್ಷವಾಗಲಿ ಮಲ್ಲಸರ್ಜ ದೇಸಾಯಿ ॥ ॥೧೨೬॥

ಅಳಬ್ಯಾಡೋ ನೀ ನನ್ನ ಒಡಹುಟ್ಟಿದಣ್ಣಾ ।
ಹೊಳೆವ ಗಲ್ಲ ಮೋರೆಯ ತೀರಿತು ಬಣ್ಣಾ ॥
ತಳಮಳಗೊಳುತಲಿ ತಿರುವ್ಯಾರೋ ಕಣ್ಣಾ ।
ಬಳಗಕ್ಕ ಬ್ಯಾಗಿ ಇಕ್ಕಿದೋ ನಮ್ಮಣ್ಣಾ ॥ ॥೧೨೭॥

ಎಡಬಲ ಪುತ್ರರು ಬಿಡತಾರೋ ಬಾಯಿ ।
ನಡುವಿನ ಮಗ ವೀರಪ್ಪ ದೇಸಾಯಿ ॥
ಬಡಕೋ ಬ್ಯಾಡ ಎನ್ನ ಹಡೆದಂಥ ತಾಯಿ ।
ಬಿಡತಾರು ಪ್ರಾಣ ಮಲ್ಲೇಂದ್ರ ದೇಸಾಯಿ ॥ ॥೧೨೮॥

ಅರಣೋದಯ ಕಾಲಕ್ಕೆ ಶರಣಮಲ್ಲೇಂದ್ರ ।
ಮರಣದ ಮಾರ್ಗವ ಹಿಡಿದ ದೇವೇಂದ್ರ ॥
ಹರಣ ಹಾರುವ ಕಂಡು ಮಗ ಮಾರ ಸುಂದ್ರ ।
ಧರೆಗೆ ಎರಗಿದನು ಪೂರ್ಣಮಿ ಚಂದ್ರ ॥ ॥೧೨೯॥

ಒಡೆಯ ಮಲ್ಲೇಂದ್ರನು ಸತ್ತಾನು ಭೂಪ ।
ಹೊಡೆದಾರು ಎಣಿ ಎಣಿಸಿ ಐವತ್ತು ತೋಪ ॥
ಅಡಗಿತು ಮಲ್ಲೇಂದ್ರ ಭೂಪನ ರೂಪ ।
ಒಡೆಯ ಶ್ರೀ ವೀರೇಶ ಮಾಡಿದ ಕೋಪ ॥ ॥೧೩೦॥*

* ಇಲ್ಲಿಂದ ಮುಂದೆ "ಮುತ್ತಿನ ಸೆರಗಿನ ಸೀರಿಜರತಾರ....................." ಪದ್ಯವೂ ಒಳಗೊಂಡ ಭಾಗವನ್ನು "ಜೀವನ ಜೋಕಾಲಿ"(ಡಾ. ಎಂ.ಎಸ್. ಸುಂಕಾಪುರ) ಕೃತಿಯಿಂದ ಎತ್ತಿಕೊಳ್ಳಲಾಗಿದೆ.

ಶವ ಶೃಂಗಾರ

ಸದರಿಗೆ ತಂದಾರು ಮಲ್ಲೇಂದ್ರ ದೊರೆಯ
ಎದೆಯು ಒಡೆದು ಬಾಪುಸಾಹೇಬನು ಹಿರಿಯ
ಮದನಾರಿ ಮಹಾದೇವ ಹೋಯಿತು ಸಿರಿಯು
ಒದಗೀತು ನಿಮಗೀಗ ಮರಣದ ಪರಿಯು ॥೧೩೧॥

ಕೋರಿಮೀಸಿ ಮುತ್ತು ವಜ್ರವ ಇಡಿಸಿ
ನೂರವರದೊಂದು ಡಗಲಿಯ ತೊಡಿಸಿ
ಸೂರತಿ ಮುತ್ತಿನ ತುರಾಯ ಮುಡಿಸಿ
ಮಾರಾಯ ಧಾಲಪಟ್ಟಿ ತಾನವ ಕೊಡಿಸಿ ॥೧೩೨॥

ಭರಿಜರಿ ಪೈಠಣಿ ಶೆಲ್ಲೇವ ಹೊಚ್ಚಿ
ಜರದ ಮುಂಡಾಸದ ಮೇಲೆ ಶಿರಪೇಚ ಹಚ್ಚಿ
ಕರದ ಮುಂಗೈಗೆ ಕಟ್ಟ್ಯಾರೊ ಪೋಚಿ
ಗುರದ ಕೊಟ್ಟ್ಯಾರು ಬಲಗೈಯಗವಚಿ ॥೧೩೩॥

ಹಾರ ಹೂವಿನ ಮಾಲಿ ವಿಭೂತಿಯ ಧರಿಸಿ
ಬೆರಿಸಿ ಕಸ್ತೂರಿ ಪರಿಮಳವ ಹರಿಸಿ
ತರತರ ಪುದಿನ ಗಿಡವಾನು ಇರಿಸಿ
ದೊರಿ ಕದಕದ ನಗುಹಾಂಗ ಶೃಂಗರಿಸಿ ॥೧೩೪॥

ನೆರೆದ ಜಂಗಮರೆಲ್ಲಾ ಪಾದವ ಇಟ್ಟು
ದೊರೆ ಮಲ್ಲಸರ್ಜನಗಾಶೀರ್ವಾದ ಕೊಟ್ಟು
ವರವಸ್ತ್ರ ವರಗಳ ಭಿಕ್ಷವ ಕೊಟ್ಟು
ವರಸುತ ಸತಿಯರು ಹೋಗುವರು ಬಿಟ್ಟು ॥೧೩೫॥

ಕಲ್ಲುಮಠದ ಪ್ರಭುದೇವರು ಬಂದು
ಎಲ್ಲ ಮಕ್ಕಳನು ಒಳಿಯಕ್ಕ ತಂದು

ಎಲ್ಲರಿಗೆ ಬುದ್ದಿ ಹೇಳಿದರೊಂದು
ಮಲ್ಲಸರ್ಜನು ಮುಕ್ತಿಪಡೆದನು ಇಂದು ॥೧೩೬॥

ಮುತ್ತಿನ ಸೆರಗಿನ ಸೀರೆಯನುಟ್ಟು ।
ಹತ್ತು ಹೊನ್ನಿನ ಜರದ ಕುಪ್ಪಸ ತೊಟ್ಟು॥
ಕಸ್ತೂರಿ ತಿಲಕದ ಬೊಟ್ಟುಗಳಿಟ್ಟು।
ವಸ್ತ್ರ ಆಭರಣ ಜೋಡಿಸಿ ಇಟ್ಟು॥ ॥೧೩೭॥

ಮುತ್ತಿನ ಆರತಿ ಕೈಯಾಗ ಹಿಡಿದು।
ಮತ್ತೆ ಮಲ್ಲೇಂದ್ರಗ ಬಂದಾಳೋ ನಡೆದು॥
ಎತ್ತಿದಳಾರುತಿ ಕೈಯಾಗ ಹಿಡಿದು।
ಸತಿಯು ಸುತರ ಬಿಟ್ಟು ಹೋಗುವರೆ ಮಡಿದು॥ ॥೧೩೮॥

ಪುರುಷನ ಬಿಗಿದಪ್ಪಿ ಸತಿಯು ಮುಂಡಾಡಿ।
ಅರಸನ ಸ್ಥಿತಿಗತಿ ಆಗ ಕೊಂಡಾಡಿ॥
ವರಪುತ್ರ ಬಾಳಾಸಾಹೇಬನ ಮುಖನೋಡಿ।
ಮರಣಾಗಲಿಲ್ಲವನ ಲಗ್ನವ ಮಾಡಿ॥ ॥೧೩೯॥

ಮುತ್ತಿನ ಸೆರಗಿನ ಸೀರಿ ಜರತಾರ।
ರತ್ನ ಖಚಿತವಾದ ಹೆಳಲ ಭಂಗಾರ॥
ಪತಿಯ ಕಳಿಸಿಕೊಟ್ಟ ವಸ್ತ್ರ ಮನಾರ।
ಹಿತದಿಂದ ಇಡುವಾಭರಣ ವಿಸ್ತಾರ॥ ॥೧೪೦॥

ಚೆನ್ನಮ್ಮ ರಾಣಿಯ ಪ್ರಳಾಪ

ಮದುವಿಯ ಸಂಭ್ರಮ ಮಾಡಿದಿ ಬಹಳ ।
ಸುದತಿಯ ತಕ್ಕೊಂಡಿ ಸೊಲ್ಲಾಪುರದೊಳು ॥
ಮದುವೆಯ ಮಾಡೊಂದು ಮಾರ್ಗಶಿರದೋಳ ।
ಇದನೆಲ್ಲಾ ಹೇಳಿದಿ ಶ್ರೀಮಂತರೊಳು ॥ ॥೧೪೧॥

ಮತದಾಗ ಹೇಳಿದಿ ಪ್ರೀತಿಲೆ ಪತಿಯೇ ।
ಸಿಟ್ಟು ಬಿಡಿಸಿ ಬಾಳ ಮಾಡಿದಿ ರತಿಯೇ ॥
ಸೆಟ್ಟಿ ಸೊಲ್ಲಾಪುರದ ಪಟ್ಟಣದ ಸತಿಯೇ ।
ಗಟ್ಟಿಮಾಡಿಸಿದೆನು ಕೇಳೆಂದು ಸತಿಯೇ ॥ ॥೧೪೨॥

ಬಂದಿರಿ ದುರದುಂಡಿಸ್ವಾಮಿಯ ತಳಕ ।
ಚೆಂದುಳ್ಳ ಬಳಗವ ಕೂಡಿದ ಬಳಿಕ ॥
ಚಂದ್ರಸಮಾನ ಪ್ರತಿಭೆ ಕಂಡೆನು ಬೆಳಕ ।
ಒಂದೊಂದು ನೇತ್ರವು ತಾರಿಯ ಜುಳಕ ॥ ॥೧೪೩॥

ವಂಟಮುರಿ ಪ್ರಭುವಾದ ದೇಸಾಯಿ ಬಂದು ।
ಪೈಠಣ ಶಲ್ಲೇವ ತಸರೀಪ ತಂದು ॥
ದಿಟವಾಗಿ ಮತ್ತು ಕೇಳಿದನು ಒಂದೊಂದು ।
ಪಟ್ಟದ ವರ್ತಮಾನ್ಯಾಂಗೆಂದು ಮುಂದು ॥ ॥೧೪೪॥

ವೀರಪ್ಪ ದೇಸಾಯಿಗ್ಯೊಂಗಲ ಕೊಟ್ಟಿ ।
ದೊರೆ ಬಾಳಾಸಾಹೇಬಗ ತಿಗಡಿ ಕೊಟ್ಟಿ ॥
ಧರೆಗೆ ಅರಸು ಬಾಪುಸಾಹೇಬ ಹುಟ್ಟಿ ।
ಹರದಿ ಶಿಕ್ಕೇವ ಹಾಕಿದಳು ಕೈ ಮುಟ್ಟಿ ॥ ॥೧೪೫॥

ಕಲ್ಲೂರ ಚನಬಸಪ್ಪ ಕಳುಹಿಕೊಟ್ಟು ।
ಸೊಲ್ಲಾಪುರದ ನಿಬ್ಬಣ ಬರಬೇಡೋ ॥
ಅಲ್ಲಿಂದ ಮುಂದಕ್ಕೆ ಬಾರೋ ನೀ ಹೊರಟು ।
ಓಲೆಯ ಬರೆದಿರಿ ಶಿವಬಸವಗೆಂಟು ॥ ॥೧೪೬॥

ಮದುವಿಗೆ ಬರಬೇಕು ವಂಟಮುರಿ ದೊರೆಯೆ ।
ದಾದಾ ಸುಬ್ಬನರಾವ ಪರಿವಾರ ಪ್ರಜೆಯೇ ॥
ಮುದದಿಂದ ಕಳುಹುವೆನೆಲ್ಲರ ಕರಿಯೆ ।
ಕದ ಕದ ನಗುತಲಿ ಹೇಳಿದನು ದೊರೆಯೆ ॥ ॥೧೪೭॥

ಕಿತ್ತೂರಿಗೆ ಹೋಗಿ ಮುಹೂರ್ತವ ತೆಗೆಸಿ ।
ಉತ್ತರ ಕಳಿವೇನು ವಂಟಮುರಿಗೆ ಬರೆಸಿ ॥
ಪಾತ್ರವ ಕೇಳಿನ್ನು ಪುಣೇದೆಂಕಟನರಿಸಿ ।
ಅರ್ತಿ ಮಾಡಿನು ಪುಣೇದಾಕಿಯ ತರಿಸಿ ॥ ॥೧೪೮॥

ಅರ್ತಿಂದ ಮಠದಾಗ ಹೇಳಿದಿ ಭೂಪಾ ।
ವ್ಯರ್ಥಮಾಡಿ ಎನ್ನ ಜನ್ಮವ ಸಾಪಾ ॥
ಗುರ್ತ ಮರೆಯಲಾರೆ ದೊರೆ ನಿನ್ನ ರೂಪ ।
ಕರ್ತ ಮಲ್ಲೇಂದ್ರ ನೀ ಮಾಡಿದಿ ಕೋಪ ॥ ॥೧೪೯॥*

ಒಡೆಯ ಚೆನ್ನವ್ವನ ಅರ್ಭಾಟ ಬಹಳ ।
ನಡುವಿನ ಪುತ್ರನು ಹಿಡಿದನು ಕೈಗಳ ॥
ಬಡಕೋಬ್ಯಾಡ ತಾಯಿ ಎದೆ ಬಾಯಿಗಳ ।
ನೋಡು ಮಲ್ಲಸರ್ಜನ ಮೋರಿಗಳ ॥ ॥೧೫೦॥

ಸತಿಯು ಚೆನ್ನವ್ವನು ದುಃಖವ ಮಾಡಿ ।
ಪತಿಯ ಪಾದದ ಮೇಲೆ ಬಿದ್ದು ಹೊರಳಾಡಿ ॥
ಕ್ಷಿತಿಯೊಳು ಎನ್ನನು ಪರದೇಶಿ ಮಾಡಿ ।
ಹಿತದಿಂದ ಹರನೊಳು ಹೋದಿರಿ ಕೂಡಿ ॥ ॥೧೫೧॥

ನೆರೆದ ಜನರೆಲ್ಲಾ ಮರ ಮರನೆ ಮರುಗಿ ।
ಪರಿವಾರ ಪ್ರಜೆಯೆಲ್ಲಾ ಬಂದೀತು ಎರಗಿ ॥
ದೊರೆ ಮಲ್ಲಸರ್ಜನ ಶವದ ಉಪ್ಪರಗಿ ।
ಹರದಿ ಚೆನ್ನವ್ವ ಕಂಡು ಶವದ ಮೇಲೆರಗಿ ॥ ॥೧೫೨॥

ಸತಿಯ ಚೆನ್ನವ್ವನು ಕಳವಳಗೊಂಡು ।
ಸತಿಯರು ಒಯ್ದಾರು ಒಳಗೆತ್ತಿಕೊಂಡು ॥

* ಇಲ್ಲಿಂದ ಮುಂದೆ "ಕಸ್ತುರಿ ಸಾಗಣಿ.........." ಪದ್ಯವೂ ಒಳಗೊಂಡ ಭಾಗ "ಜೀವನ ಜೋಕಾಲಿ" (ಡಾ. ಎಂ. ಎಸ್. ಸಂಕಾಪುರ) ಯಲ್ಲಿ ಇಲ್ಲ.

ಪತಿ ಮಲ್ಲೇಂದ್ರನ ಮೋರೆಯ ಕಂಡು ।
ಘಾತವಾದೀತೆಂದು ಎದೆಯ ಬಡಕೊಂಡು ॥ ॥೧೫೩॥

ಕರಣಿಕ-ಕುಲಕರ್ಣಿ ಕಾರಭಾರಿಗಳು ।
ವರ ಮಕ್ಕಳೆಂಬುವ ನಿಸ್ಪತಿಗಳು ॥
ಬೋರ್‍ಯಾಡಿ ಅಳತಾರೋ ಪುಣೇದವರು ।
ದೊರೆ ಮಲ್ಲಸರ್ಜನ ಮಕ್ಕಳೆಂಬವರು ॥ ॥೧೫೪॥

ಹತ್ತು ಸಾವಿರ ಜನ ಮಾಡಿ ಆಳಾಪ ।
ಸತ್ತನು ಕಿತ್ತೂರ ಮಲ್ಲೇಂದ್ರಭೂಪ ॥
ಪುತ್ರರ ಅಗಲಿ ಹೋಗುವದು ತಾಪ ।
ಎಂತಹ ನೀಚರು ನಿನಗೆ ಕೊಟ್ಟರು ಶಾಪ ॥ ॥೧೫೫॥

ಮಲ್ಲಸರ್ಜನನ ಸ್ಮಶಾನಯಾತ್ರೆ

ಪರದೇಶಿ ವಿರಕ್ತ ಮೂರ್ತಿಗಳೆಲ್ಲ ।
ದೂರ ಮಲ್ಲಸರ್ಜನಿಗಿದಿರಾರು ಇಲ್ಲ ॥
ಶರಣ ಸದ್ಭಕ್ತರ ಭಕ್ತಿಯ ಬಲ್ಲ ।
ಮರೆಯಾದವಿಂದಿಗೆ ಧರ್ಮಗಳೆಲ್ಲ ॥ ॥೧೫೬॥

ಏಳು ಉಪ್ಪರಿಗೆ ವಿಮಾನವ ಕಟ್ಟಿ ।
ಬಿಳಿಯ ಜರದ ಶಲ್ಲೆ ತಗೆದಾರು ಪಟ್ಟಿ ॥
ಮೇಲೆ ಮುಚ್ಚಿದರು ಜರದ ದುಪ್ಪಟ್ಟಿ ।
ಬೆಳ್ಳಿಯ ಮುತ್ತಿನ ಗಂಟಿ ಸರಗಳ ಕಟ್ಟಿ ॥ ॥೧೫೭॥

ಕಳಸ ಇಟ್ಟನು ಸೂರ್ಯ ಚಂದ್ರ ಸಮಾನ ।
ಒಳಗ ಕಟ್ಟಿದ ನಾಕಾರು ಕಮಾನ ॥
ಇಳಿದು ಬಂದಿತೋನೋ ಕೈಲಾಸ ವಿಮಾನ ।
ನಳಿನಾಕ್ಷಿಯರು ಪಾಡಿದರು ಸೋಬಾನ ॥ ॥೧೫೮॥

ಕಲ್ಲಮಠದೊಳು ನೆಲವನು ಅಗಿದು ।
ಮಲ್ಲಸರ್ಜನ ಸಮಾಧಿಯ ತೆಗೆದು ॥
ಬಲ್ಲಿದ ಬಸವನು ತೆಗಿದಾನು ಆಗಿದು ।
ಮಲ್ಲಸರ್ಜನ ಸಮಾಧಿಯು ಮುಗಿದು ॥ ॥೧೫೯॥

ಬಾಳಿ ಕಂಬಗಳಿಂದ ಹಾಕಿ ಹಂದರವ ।
ತಳಿಗಿ ತೋರಣಗಟ್ಟಿ ಅದರ ಸುಂದರವ ॥
ಹೊಳೆವ ನಂದಿಯ ಮಾಡಿ ಮುಂದ ತಂದಿರುವ ।
ತಳತಳ ರಂಗವಾಲಿಯನು ತುಂಬಿರುವ ॥ ॥೧೬೦॥

ಸುತ್ತಲೆ ರುದ್ರಾಕ್ಷಿ ಸರವನು ಕಟ್ಟಿ ।
ಮತ್ತೆ ಬರೆದಾರೊ ಕೈಲಾಸದ ಸೃಷ್ಟಿ॥
ಚಿತ್ರ ಬಸವಲಿಂಗ ಕಾಗದ ಪಟ್ಟಿ।
ಪತ್ರಿ ವಿಭೂತಿಯು ನೂರಾರು ಬುಟ್ಟಿ ॥ ॥೧೬೧॥

ಕಸ್ತುರಿ ಸಾರಣಿ ಸುತ್ತಿನ ಗೋಡಿ ।
ವಿಸ್ತಾರ ಪುನಗ ರಜದಿಂದ ತೀಡಿ ॥
ಸಿಸ್ತಿಲೆ ನಂದಿಮುಖ ಸುತ್ತಲೆ ಹೂಡಿ ।
ಮಸ್ತ ಜನರು ಕ್ರಿಯೆ ಸಮಾಧಿಯ ಮಾಡಿ ॥ ॥೧೬೨॥

ಹರಹರವೆನುತಲಿ ಜನರೆಲ್ಲ ಬಂದು ।
ದೊರೆ ಮಲ್ಲಸರ್ಜನ ವಿಮಾನಕ್ಕೆ ತಂದು ॥
ಗುರುಲಿಂಗಪ್ಪನು ಬಲಭಾಗದಿ ಬಂದು ।
ನೆರೆದ ಜನರೆಲ್ಲಾ ಉಘೇ ಉಘೇ ಎಂದು ॥ ॥೧೬೩॥

ಹಿಡಿ ತೇಜ ಎಡಬಲ ಚಾಮರ ಸುತ್ತ ।
ಕಿಡಿಬಿಡಿ ಭೇರಿ ದುಂದುಭಿ ಬಾರಿಸುತ್ತ ॥
ನುಡಿವ ನೌಬತ್ತುಗಳ ಮೇಲೆ ಏರಿಸುತ ।
ನುಡಿವ ನೌಭಾಜಿಯ ಬಿಡದೆ ಬಾರಿಸುತ ॥ ॥೧೬೪॥

ಅರ್ಭಾಟ ಇಕ್ಕೀತು ವಾದ್ಯವು ಎಲ್ಲಾ ।
ಶರ್ಭಾವತಾರದ್ಹಾಂಗ ವಾದ್ಯೇದ ಗುಲ್ಲಾ ॥
ಹರ್ದಾರಿ ಕೇಳುವದು ವಾದ್ಯದ ಸೊಲ್ಲಾ ।
ಮಾರ್ಬಲ ಫೌಜವು ದೊರಿ ಎಡಬಲ ॥ ॥೧೬೫॥

ಒಡೆಯ ಚೆನ್ನವ್ವನ ಹಿಡಿದಾರು ಮತ್ತೆ ।
ಒಡೆಯರು ಬಾಪುಸಾಹೇಬರು ಸುತ್ತ ॥
ಬಿಡಿ ಮುತ್ತು ವಿಮಾನ ಮೆಲೆ ಹಾರಿಸುತ್ತ ।
ಎಡ ಬಲ ಭಟ್ಟಂಗಿ ಆಗ ಸಾರಿಸುತ್ತ ॥ ॥೧೬೬॥

ವಿಳೇದ ಮುಸಕಿಲೆ ಮುಚ್ಚೀತೋ ದಾರಿ ।
ಬೆಳ್ಳಿಬಂಗಾರ ಹುವ್ವ ಮಾಡ್ಯಾರು ಸೂರಿ ॥
ಬೆಳ್ಳಿ ಬೆತ್ತವ ಭಟ್ಟಂಗಿ ಚೀರಿ ।
ಮಲ್ಲಸರ್ಜಗ ಇದಿರಿಲ್ಲೆಂದು ಸಾರಿ ॥ ॥೧೬೭॥

ನೇಮದಿ ಹಡದಿಯ ಹಾಸುತ ಜನರು ।
ಸಮಾಧಿಯ ಕಟ್ಟಿಗೆ ಬಂದು ಎಲ್ಲರು ॥
ದಮ್ಮಯ್ಯಗೋಳು ಒಳಗಿಳಿದೈವರು ।
ಶಂಬರಾರಿಯ ಶತಕವೆನುತ ಓದಿದರು ॥ ॥೧೬೮॥

ಮಲ್ಲೇಂದ್ರ ಭೂಪನ ಇಳಿವ್ಯಾರು ಕೆಳಗೆ ।
ಶಲ್ಲೆ ಮುಂಡಸು ಅಂಗಿ ಕಳಿದಾರು ಒಳಗ ॥
ಬೆಲ್ಲಪತ್ರಿ ಧರಿಸಿ ಪೂಜೆಗೊಂಡಾಗ ।
ಮಲ್ಲಸರ್ಜನ ಮೋರಿ ನೋಡಿತು ಬಳಗ ॥ ॥೧೬೯॥

ಸತಿಯು ಚೆನ್ನವ್ವನು ಪತಿ ಮೋರೆ ಕಂಡು ।
ಪತಿಯ ಮುಂದೆ ಎದೆ ಬಡಬಡಕೊಂಡು ॥
ರತುನದ ಗುಳದಾಳಿ ಕರಿಮಣಿ ಗುಂಡು ।
ಹಿತವಾದ ಕಾಜಿನ ಬಳಿ ಒಡಕೊಂಡು ॥ ॥೧೭೦॥

ಉಡಿಯಕ್ಕಿ ಚಲ್ಲ್ಯಾಳು ದೊರೆಗಳ ಮ್ಯಾಲೆ ।
ಹಿಡಿದು ಜಗ್ಗ್ಯಾಳು ಹೂವಿನ ದಂಡಿಯ ಮಾಲೆ ॥
ಸಡಗರದ ಕಾಲುಂಗ್ರಾ ಅಣುವಟಕಿ ಪಿಲ್ಲೆ ।
ಒಡದ ಹಾಕ್ಯಾಳು ಮಲ್ಲಸರ್ಜನ ಬಾಲೆ ॥ ॥೧೭೧॥

ಅರಸನ ಹೊಟ್ಟೆಲ್ಹುಟ್ಟಿ ರಾಜ್ಯವ ಪಡೆದಿ ।
ಮೂರು ವರುಷ ಹೋಗಿ ಪುಣೇವ ಹಿಡಿದಿ ॥
ಎರವ ಮಾಡಿ ಈಗ ಹರನೊಳು ನಡೆದಿ ।
ಮೂರು ಬೊಗಸಿ ಮಣ್ಣು ಒಗದಾಳು ಮಡದಿ ॥ ॥೧೭೨॥

ಬಾಪುಸಾಹೇಬ ಕಂಡ ತಂದಿಯ ಮೋರಿ ।
ಇಪ್ಪತ್ತು ಮಂದಿ ಹಿಡಿದರೂ ಮೀರಿ ॥
ಅಪ್ಪನ ಹಂತೀಲೆ ಬೀಳಲು ಹಾರಿ ।
ಬಾಪುಸಾಹೇಬನ ಪ್ರಾಣ ಹೋದ್ಹಾಂಗತೋ ಮೀರಿ ॥ ॥೧೭೩॥

ನಡುವಿನ ಪುತ್ರನು ಮೋರೆಯ ಕಂಡ ।
ಒಡೆಯಾಗ ಮಾಡಿದ ನವ ದೀರ್ಘದಂಡ ॥
ಬಿಡದೆ ಕಣ್ಣೀರು ಉದರಿಸಿಕೊಂಡ ।
ಬಿಡಕೊಳ್ಳತಿಹ ತಾಯಿ ಕೈಯ್ಯ ಹಿಡಕೊಂಡ ॥ ॥೧೭೪॥

ಚಿಕ್ಕ ಮಗನ ದುಃಖ ಹೇಳಲಿನ್ನೆಷ್ಟು ।
ಮಕ್ಕಳೆಲ್ಲರನು ಕಳುಹಿ ತಾ ಕೊಟ್ಟು ॥
ಮಕ್ಕಳೊಳಗೆ ಶಿವಬಸಪ್ಪ ಶ್ರೇಷ್ಠ ।
ಬಕ್ಕನೆ ಮಲ್ಲೇಂದ್ರಗ ಮಣ್ಣವ ಕೊಟ್ಟಾ ॥ ॥೧೭೫॥

ಆಕಳು ನೂರೊಂದು ದಾನವ ಕೊಟ್ಟು ।
ಮಕ್ಕಳ ಸಹಿತಾಗಿ ಅರಮನಿಗೆ ಹೊರಟು ॥
ಚಿಕ್ಕ ತಮ್ಮಗೊಳ ಕೈಯೊಳು ಕೊಟ್ಟು ।
ದುಃಖ ಸೈರಿಸು ಬಾಪುಸಾಹೇಬ ಅಷ್ಟು ॥ ॥೧೭೬॥

ಹರ ಹರ ಎನುತಲಿ ಹರಿಸಿದರಾಗ ।
ಹರನೊಳು ಮಲ್ಲೇಂದ್ರ ಬೆರೆದನು ಬೇಗ ॥
ದೊರೆ ಮಲ್ಲೇಂದ್ರ ಮರಣೈದನು ಹೀಗೆ ।
ಗುರುಶಾಂತವೀರನು ಹೇಳಿದನೀಗ ॥ ॥೧೭೭॥

ಮಲ್ಲೇಂದ್ರ ಸ್ವರ್ಗಕ್ಕೆ ಕೂಡಿದನೆಂದು ।
ಎಲ್ಲ ದೇವತೆಗಳು ಹರುಷದಿ ಬಂದು ॥
ನಿಲ್ಲದೆ ರತ್ನದ ಆರುತಿ ತಂದು ।
ಅಲ್ಲಿ ಶ್ರೀ ಸಾಂಬಗೆ ಬೆಳಗೇರು ಬಂದು ॥ ॥೧೭೮॥*

ಧರಣಿಯೊಳಗೆ ಮಲ್ಲಸರ್ಜನೆ ಶ್ರೇಷ್ಠ ।
ಬರೆದು ಹೇಳಿದ ಶೀಗೀಹಳ್ಳಿಯ ಶೆಟ್ಟಿ ॥
ನಿರಂಜಪ್ಪನ ಹೃದಯದಿ ಹುಟ್ಟಿ ।
ಬರೆದು ಹಾಕಿರಿ ಪ್ರಾಸ ಇದ್ದರೆ ಕೊಟ್ಟಿ ॥ ॥೧೭೯॥*

❖❖

* ಈ ಎರಡು ಪದ್ಯಗಳನ್ನು ಮಲ್ಲಸರ್ಜಕಾವ್ಯ (ಸಂ: ತಲ್ಲೂರು ರಾಯನಗೌಡರು)ದ ಅನುಬಂಧದಿಂದ ಎತ್ತಿಕೊಂಡು ಸೇರಿಸಲಾಗಿದೆ.

೪

ಕಿತ್ತೂರ ಮಲ್ಲಸರ್ಜನ ಲಾವಣಿ*

ಗುರುವೆ ನಿಮ್ಮ ಕರುಣದಲಿ । ಸರುವರನು ಪೊಗಳುವೆನು ।
ವರದ ಕರ ಪೊರೆವುದೀಗೆನುತೆ ॥
ಸ್ಮರಿಸುವೆ ಮೂಲೋಕದರಸನಡಿಗಳೆಂಬ ।
ಸರಸಿಃರುಹದೊಳೆನ್ನ ಶಿರವನು । ಇಟ್ಟು ।
ಪರಶಿವನರಸಿಯ ಸ್ಮರಿಸುವೆನು । ಸುಖ ।
ವೆರಸಿ ತೋರುವ ಗಂಗಾನ್ನಿರಿಸುವೆನು ॥
ಗಣನಾಥನ । ಗುಣಯುತನ । ಷಣ್ಮುಖದಾತನ । ದಕ್ಷನ
ನೊರಸಿ ಶಿರವನಿತ್ತು ಹರಸಿದನ । ಇವ
ರ್ನರಸಿ ಬಲವಗೊಂಡು ಗರಿಸುವೆನು । ಕೃತಿ
ಸರಸದಿಂದಲಿ ಮನ । ವೆರಸಿ ಪೇಳುವೆ ಕಿತ್ತೂ
[ರ] ರಸನ ವರಣ ವಿಸ್ತರಿಸುವೆ ಮುಂದೆ ॥ ದುಂದುಮಿ ॥

ವರದಕರ ಪೊರೆವುದೀಗೆನುತೆ ಮಲ್ಲೆಂದ್ರನ
ವರನ ಸಂಪದವನರಿಸುವೆನು ॥
ಆಲಿಸುವುದು ಬುಧರೀಗ । ಪೇಳ್ವು[ದ]
ಲೀಲೆಯಿಂದಲಿ ಕೇಳಿರೀಗ ॥ ॥೧॥

* ಈ ಕಾಗದ ಪ್ರತಿಯ ಕವ್ವರ ಮೇಲೆ 'ಕಿತ್ತೂರ ಮಲ್ಲಸರ್ಜನ ಲಾವಣಿ' ಎಂದೂ, ಕೃತಿಯ ಆರಂಭದಲ್ಲಿ "ಕಿತ್ತೂರ ಮಲ್ಲಸರ್ಜನ ದುಂದುಮಿ ಹೋಳಿಪದ ಹಾಕಿ ಬರೆಯಲ್ಪಟ್ಟಿದೆ" ಎಂದೂ ಬರೆಯಲಾಗಿದೆ.

ಅರಸ ಸತಿಪುತ್ರರನು । ಸರಸ ಸವಿ ಮಾತಿನಲಿ ।
ಒರೆವೆನೀಗವರ ಪರಿಯನ್ನು ॥
ವಸುಧಿಯೊಳಗೆ ಮಿಗಿಲೆಸೆವ ಪುರಗಳುಡು
ವಿಸರಗಳಿಗೆ ಪುರ್ಣಶಶಿಯಂದದಿ । ತೋರಿ ॥
ಪೆಸರಿಂದೊಪ್ಪುವ ಕಿತ್ತೂರೆಸೆವಂದದಿ । ಭೂಪ
ನಸಮನಿ । ರುವ ಸಾಗರದ ಚಂದದಿ
ಆ ಮಲ್ಲೇಂದ್ರನು । ಭೂದೇವೇಂದ್ರನು । ಅತಿ ಸುಂದ್ರನು ॥ ಅರಸ
ರರಸಿಯರುಭಯರಾಗ ತೋರುವರು । ರವಿ

ಶಶಿ ರತಿವರನಂತೆಯೆನಿಸುವರು । ತ್ರೈಪು
(ರ್ಷ) ಸಮರಿರುವರಿನ್ನೀ । ರಸೆಯೊಳವರ ಸರಿ ।
ವಸುಧಿಪರಾರಾರಿಲ್ಲೆಂ । ದುಸುರುವೆನೀಗ ॥ ದುಂದುಮಿ ॥
ಒರೆವೆನೀಗವರ ಪರಿಯನ್ನು ಲೋಕದೊಳು
ಅರಿಯರಾರ್ಥಿಂತ ಸಂಪದವ ॥
ಕ್ಷೀರಸಾಗರದ ದ್ವಾರಕೀsಯ । ಪುರದಂತೆ
ಮೆರೆವುದೀತನ್ನೈಶ್ವರಿಯ ॥ ॥೨॥

ಪರಿಪರಿಯ ಸಡಗರರಮನೆಯೊಳಿರುತಿರೆ ಮುಂದೆ ।
ಸುರಿವ ಮೌಕ್ತಿಕದ ಮಣಿಗಳವು
ತರತರದಲಿ ಅರಮನೆಯೊಳು । ಕಾರಂಜಿ
ಸುರಿಸುರಿವುತೆ ಧ್ವನಿ ಭೇರಿಗಳು । ಗಾಯ
ಕರು ಪಾಡುತಿರುವ ತಂಬೂರಿಗಳು । ಚಾರು
ತರಮಂದಿರದಿ ತೋರ್ಪ ಕಾರ್ಯಗಳು
ತೆತ್ತ ಮಡಗಿಯು । ಚಿತ್ರ ಗಡಿಗಿಯು । ಮತ್ತೆ ಕಿಡಿಕಿಯು ॥ ಎದು
ರಿರುವ ಸುಪ್ಪತ್ತಿ ಶಯ್ಯಾಲಗಳು ಸುತ್ತ
ಸರಮುತ್ತು ಧರಿಸಿ ಜಾಲಾರಗಳು । ಒತ್ತಿ
ಮಿರುಗುತಿರುವ ತಾರಕಿಗಳಂತೆ ದೀಪಿಕೆ
ಉರಿವುರಿವುತಲಾಗಚ್ಚರಿಯವಾದಂತೆ ॥ ದುಂದುಮಿ ॥

ಸುರಿವ ಮೌಕ್ತಿಕದ ಮಣಿಗಳವು ಮಂಚದೊಳು
ವೆರೆಸಿದವು ಶಶಿಯ ಕಿರಣದಲಿ ।
ಪರಿಮಳಬೀರ್‍ವ ಸದ್ಗಂಧ । ಎಸೆವುದು
ಜನನಾಸಿಕದಿ ಮಕರಂದ ॥ ॥೩॥

ಚತುರಂಗ ಸೈನ್ಯ ಮಾರ್ಬಲದೊಳರಸನು ಕೂಡಿ
ಮಿತಿಯಿಲ್ಲದೊದಗಿ ಬರುತಿರಲು ॥
ದೊರೆಯು ತಯ್ಯಾರಾಗಿ ಹೊರಡುವ ಸವಾರಿ ಮುಂದೈ
ಬರುತೆಡ। ಬಲಪುತ್ರ ರೊಲಿವುತಲಿ ॥ ನಿ
ಷ್ಟತ್ತರು ಮಂತ್ರಿಗಳು ಸಹವೆರಸುತಲಿ । ಫೌಜು
ನೆರೆಯಲಾನೆಯ ಕುದುರೆಗಳ ತರಿಸುತಲಿ ॥
ರೇಜುಗಟ್ಟಿತು । ಮೌಜು ಹುಟ್ಟಿತು । ಭುಜ ತಟ್ಟಿತು ॥ ಸರಿ
ಸರಿಯೆಂದು ಸವಳಗಟ್ಟಿಗೆಯ ಮುಂದೆ । ಸಾಲು
ವರಿಯಲು ರಣಬಾಜಿಧ್ವನಿಯು ಚಂದ । ಸಿತಿ ।
ದಾರ ಸಿಪಾಯ ಪ್ಯಾದೆ ರಾಹುತ ಚೋಪದಾರರು
ಸಾರುವ ಸೈನ್ಯ ಭಟ್ಟಂಗಿಗಳಿಂದ ॥ ದುಂದುಮಿ ॥

ಮಿತಿಯಿಲ್ಲದೊದಗಿ ಬರುತಿರಲು ಕಾಳಿಗಳ
ಜತಿಗೂಡೊದರಿದವು ಛತ್ರಗಳು ॥
ಹಾರ್ವವು ಮೂರ್ಭಾಲು ಪಂಕೆ । ಕುದುರೆಗೆ ।
ಹೇರ್‍ವರು ವಾದ್ಯದ ಡಂಕೆ ॥ ॥೪॥

ಪಾತ್ರದವರ ಪದದ ಸೂತ್ರವಿಡಿದ್ದಾಡುತಲಿ ।
ನೇತ್ರದೊಳು ಭಾವ ತೋರಿಸುತೆ ॥
ಏರುವರಾನಿ ಕುದುರೆಗಳು ತೋಪುಗ
ಳ್ಹಾರುವವು ಧಡಧಡೆಂದೆನುತಲಿ । ಆಗ
ಬಾರಿನ ಜನರು ಕವಾಯತ್ತದಲಿ । ಇದ್ದು
ಸೂರ್ಯಗಡರುವ ಬಾಣ ಬಿಡುವುತಲಿ ।
ತರಿಕಿಟವೆಂದು । ತದ್ದಿಮಿತವೆಂದು ಜಣಜಣತೆಂದು ಪಾಡಿ

ವಾರಿಜಾಕ್ಷಿಯರು ಒಯ್ಯಾರದಲಿ । ನೃತ್ಯ
ಚಾರುತರದ ನಾಟ್ಯವಾಢುತಲಿ । ಸೀಗೆ
ತೋರಿ ತೆರಳುವಸೈನ್ಯ ಮೀರಿ ಶೋಭಿಸುತೆ ಶೃಂ
ಗಾರವಾಗಲು ನೋಡ್ಯುಲ್ಲಾಸದಿ ದೊರೆಯು ॥ ದುಂದುಮಿ ॥

ನೇತ್ರದೊಳು ಭಾವ ತೋರಿಸುವೆ ವೈಭವದಲಿ
ಚಿತ್ರಗಳಿಗೊಲಿದು ನಲಿವುತಲಿ ॥
ಹತ್ತುವರ್ ಪಲ್ಲಕ್ಕಿ ಮುಂದೆ । ತಲಿಮ್ಯಾಲೆ
ಸತ್ತಿಗ್ಹಿಡಿಸುವರು ಚಂದದಿಂದೆ ॥ ॥೫॥

ಅರಸು ಮಕ್ಕಳನಾಗ । ಸರಸ ಸತಿಯರನೀಗ
ಹರುಷದಲಿ ಒರೆವೆ ಕೃತಿಯಿಂದೆ ॥
ಬಿದಿಗಿ ಚಂದಿರನಂತೆ ಒದಗಿ ಕಳೆಗಳುಕ್ಕಿ
ಮದನ ಸುಂದರ ಬಾಪುಸಾಹೇಬನು । ಇವನಿ
ಗಧಿಕನೆನಿಸುವ ಬಾಬಾಸಾಹೇಬನು । ಚಿಕ್ಕ
ಹೃದಯವುಳ್ಳವ ಬಾಳಾಸಾಹೇಬನು ॥
ಬಹು ಚದುರರು ॥ ಮಾತು ಮಧುರರು । ಇವರಿದಿರಾರು ಚಂದ್ರ ॥
ವದನೆ ಮೊದಲು ತಾಯ ರುದ್ರವ್ವನು । ತೆಳ್ಪ
ಉದರ ಮಧುರವಾಣಿ ಚೆನ್ನವ್ವನು । ಇವ
ರೊದಗಿ ಪುತ್ರರ ನೋಡಿ । ಸದರಿಗಿವರೆ ಧಣಿ
ಅಧಿಕಾರಿಗಳು ಎಂದು ವದನ ತೂಗುವರು । ದುಂದುಮಿ ।

ಹರುಷದಲಿ ಒರೆವೆ ಕೃತಿಯಿಂದೆ ಕೇಳುತಲಿ
ಗರಿಸಬೇಕಿದಕೆ ರತಿಯನ್ನು ॥
ಎಷ್ಟು ವರ್ಣಿಸಲಷ್ಟಭೋಗ । ಮಿತಿಯಿಲ್ಲ
ದಷ್ಟಿರುವುದೈಶ್ವರ್ಯಾಗ ॥ ॥೬॥

ಚಂದುಳ್ಳರಸನ ಉದರ ಕಂದರನು ವಲ್ಲಭೆಯ
ರ್ಹೊಂದಿರುವವರರಮನೆಯೊಳಾಗ ॥

ಮುಖವು ಚಂದಿರನ ಜುಳಕವು ನೇತ್ರದಲಿ ನಾ
ಸಿಕವು ಚಂಪಕ ಚೆಲ್ವ ಶುಕನುಡಿಯು ॥ ಒಪ್ಪು
ಪಿಕವು ಧ್ವನಿಯು ಗಲ್ಲ ಕನ್ನಡಿಯು ॥ ದೇಹ
ಮಿಕವು ಕಸ್ತುರಿಗಂಧ ತಳಿರಡಿಯು ॥
ಕೆಂಪುಧರಿಯರು । ಗುಂಪುಗುರುಳೆಯರು ।
ಸೊಂಪು ತರಳೆಯರು । ತಕ
ತಕವು ಹೊಳೆಯು ಕಂಬುಗೊರಳಿಯರು । ಪಕ
ಪಕವು ನಗುವ ನಾಭಿಸುರಳಿಯರು । ಈಗ
ಮಕವುಳ್ಳ ಸೊಸ್ತೇರು । ಲಕಿಲಕಿಸುವ ಮಾಣಿಕವೊ
ಮಾತುಗಳೆಂಬ ಸುಖದಿಂದಿರುವರು ॥ ದುಂದುಮಿ ॥

ಹೊಂದಿರುವರರಮನೆಯೊಳಾಗ ಪತಿಗಳಿಗೆ
ಸುಂದರಿಯರಾಗಿ ಒಪ್ಪಿಹರು ॥
ಕಾಮರತಿಯರಂತೆ ನಲಿದು ॥ ಇರುತಿಹರ್
ರಾಮಸೀತೆಯರಂತೆ ಒಲಿದು ॥ ॥೭॥

ಅರಸಿಯರಾಭರಣ ಧರಿಸಿ ಶಶಿಕಿರಣದಂತೆ
ಕಿರಿನಗೆಯ ತೋರಿ ಹರುಷದಲಿ ॥
ಅರಳುಮಲ್ಲಿಗಿ ದಂಡಿ । ಸರವು ರ್‍ಯಾಗುವಿ ಚೌರಿ
ಜರದ ಗೊಂಡೆವು ಕೇತಕಿಯ ಗರಿಯು । ಹೆಳಲೊಳ್
ಕಿರಿಯ ಮುತ್ತಿನ ಜೋಡು ಬೈತಲಿಯು ॥ ಅಲ್ಲಿ
ಮೆರೆವ ಫಣಿಯೊಳಾಗ ಕಸ್ತೂರಿಯು ॥
ಕರ್ಣದೋಲೆಯು । ಮೋಹನ್ಮಾಲಿಯು । ನತ್ತು ಜೋಲಿಯು ॥ ಇದ್ದು
ಸರಿಗಿ ಪುತ್ಥಳಿ ನೆಲ್ಲೀಸರ ಪದಕ । ವಜ್ರ
ಬೆರಳೊಳುಂಗುರ ತೆತ್ತಿಸಿರುವದಕ । ತೋಳೋ
ಳೆರಡು ಒಂಕಿಯು ಬಂಗಾರ್ ಬಳಿ ಬಾಜುಬಂದು ಉಲಿ
ಪುರಿಯು ಸರ್ಪಳಿ ಕಾಲಂದುಗಿ ಝಣರೆನುತ । ದುಂದುಮಿ ॥

ಕಿರಿನಗೆಯ ತೋರಿ ಹರುಷದಲಿ ಮನ್ಮಥನ
ಅರಗಿಳಿಗಳಂತೆ ನುಡಿಯುತಲಿ ॥
ಅತ್ತಿ ಸೊಸೆಗಳಾಗ ಕೂಡಿ । ನಲಿವುತೆ
ಅತ್ತಿಗಿಯರು ಲೀಲೆಯನಾಡಿ॥ ॥೮॥

ಮಧುರ ಮಾತಿಗೆ ರಾಜ। ರೊದಗಿ ತಮ್ಮ ಸುದತಿಯರ ।
ಪದುಳದಲಿ ಮದನಸುಂದರರು ॥
ಮಾಲು ಮಂಟಪವೆಂಬ । ಮೇಲುಪ್ಪರಿಗಿ ಕೋಣೆ
ಮಲಗುವ ಮಂಚದಿ ಹಾಸಿಗೆಯ । ಹಾಸಿ
ತಲೆಗಿಂಬು ಗಿರ್ದೆ ಸುಪ್ಪತ್ತಿಗೆಯ । ಜರದ
ಶಾಲುಗಳ್ ಹೊದೆವ ಕಲಂದ್ರಿಕಿಯ ।
ತೈಲಗಂಧವು । ಪರಿಮಳಂದವು । ಮಕರಂದವು । ಸಾಲು
ನಿಲುವುಗನ್ನಡಿ ಚಂದ್ರಜ್ಯೋತಿಗಳು । ಪುಷ್ಪ ।
ಮಾಲ್ಯೆಷ್ಟಗಂಧದ ಜಾತಿಗಳು । ಈಸ
ಖೇಲದಿ ರಾಜ ವಿಲಾಸನಾಳುತೆ ತಮ್ಮ ।
ಲೋಲರೊಡನೆ ರಾಜಾಲಯದೊಳಿರುವರು । ದುಂದುಮಿ ।

ಪದುಳದಲಿ ಮದನಸುಂದರರು ಬೆಳೆದರು ಮುಂದೆ
ಬಿದಿಗಿ ಶಶಿಯಂತೆಯೆಸೆಯುವರು ।
ಪತಿಗಳಿಗೊಲಿದೊಲಿದಿರುವರ್ ಮನದೊಳು ।
ಪತಿವ್ರತ ಶೀಲದ ಸತಿಯರ್ ॥ ॥೯॥

ಪೃಥ್ವಿಪತಿಯರ ಮನೆಯೊಳ್ಳೊತ್ತು ತಿಳಿಸುವ ಗಡಿಯಾ
ಳೆತ್ತ ನೋಡಿದರು ಹೊಳೆಯುವವು ।
ಎತ್ತ ನೋಡಿದರು ಚತುರಂಗ ಸೈನ್ಯ ವಾದ್ಯ
ಎತ್ತ ನೋಡಲು ದಪ್ತರ್ ಮುನಿಸಿಗಳು । ಮಸ
ಲತ್ತ ಕೊಡುವ ಪುತ್ರ ಪಾತ್ರಗಳು । ಕಾಗದ
ಪತ್ರಗಳ ಬರೆವ ದಿವಾನಗಳು ।
ಜಮದರಖಾನಿಯರು । ಹೌದೆದಾನಿಯು । ರಾಜಧಾನಿಯು । ಜನ

ಸುತ್ತಿರುವ ಚಿತ್ರ ಕಚೇರಿಗಳು । ಆ । ನಿ
ಸ್ವತ್ತರು ನೃತ್ಯದ ತೊತ್ತುಗಳು । ನಿತ್ಯ
ಮುತ್ತುರತ್ನವ ತೆತ್ತಿಸಿರುವ ಪಲ್ಲಕ್ಕಿಯ ಸೇರುವ
ಕಿತ್ತೂರರರಸನ ಸಂಪತ್ತನೇಂ ಪೇಳ್ವೆ । ದುಂದುಮಿ ॥

ಎತ್ತ ನೋಡಿದರತ್ತ ಹೊಳೆಯುವವು ತಳತಳಿಸಿ
ಸತ್ಕೀರ್ತಿ ಪ್ರಭೆಯು ಪಸರಿಸುತೆ ॥
ಹಗಲಿರುಳಿರದೆ ತೋರುವದು । ರಂಜನವಾಗಿ
ಬಗೆಬಗೆಯಿಂದೆ ಬೀರುವದು ॥ ॥೧೦॥

ಲಿಂಗವಂತನು ದೊರೆಯು । ಅಂಗಜಾರಿಯ ಸರಿಯು
ಜಂಗಮರ ಪೊರೆವ ನತನಾಗಿ
ಪರನಾರಿಯರ ಸಹೋದರರನೆಂಬ ಬಿರುದಿರು
ತಿರಲು ವ್ರತದಿ ಶಿವಪೂಜೆಯಲಿ । ನೇಮ
ಚರಜಂಗಮರ ಗುರುಧ್ಯಾನದಲಿ ॥ ಇದ್ದ
ರೆರಸುತ್ಯೆಗಳ ಶ್ರಾವಣಮಾಸದಲಿ ।
ಭಕ್ತಿಗುಣಿಸುತೆ । ನೀಡಿ ದಣಿಸುತೆ ॥ ಭಿಕ್ಷೆಯೆಣಿಸುತೆ ಹೊನ್ನ ।
ಸ್ಮರಹರಭಕ್ತ ಮಲ್ಲೇಂದ್ರನಾಗ । ಕರಿ ।
ತುರಗದಾನವ ಕೊಟ್ಟು ಪಡೆದನಾಗ । ಐದು
ಶಿರವುಳ್ಳವನ ದಯೆಗಳಿಸಿಕೊಳ್ಳುತೆ ಪುಣ್ಯ
ಸರಿಯಿಲ್ಲೀತನ ಕೀರ್ತಿ ಪರಿಯೆ ಲೋಕದಲಿ । ದುಂದುಮಿ

ಜಂಗಮರ ಪೊರೆವ ನತನಾಗಿ । ಜಗದೊಳಗಿವ
ನಿಂಗಿತವನರಿವುದರಿದೆನಿಸಿ ॥
ಹಬ್ಬಿತು ದೇಶದೇಶದಲಿ । ದೊರೆ ಕೀರ್ತಿ ।
ಶುಭ್ರಚಂದ್ರನ ಕಿರಣದಲಿ ॥ ॥೧೧॥

ಮಾನ್ಯಮಾನ್ಯರೊಳ್ಗಿಂತ ಚೆನ್ನಿಗರು ಇಲ್ಲೆನುತೆ ।
ಪುಣ್ಯ ನಗರದೊಳು ಕೇಳುತಲಿ

ಅಪ್ಪ ಮಲ್ಲೇಂದ್ರನು । ಒಪ್ಪಿರುವ ಸುದ್ದಿಯು ।
ತಪ್ಪದೆ ಶ್ರೀಮಂತಗರುಹಿದರು । ಕೇಳೆ
ನ್ನಪ್ಪ ರಾಜನೆ ಕಿತ್ತೂರರಸೆಂಬರು । ದೇಶ
ಚಪ್ಪನ್ನದೊಳು ಸರಿಯಿರ್ಪರಾರು ।
ಪಂಥ ಧರಿಸಿರು । ಇಂಥ ದೊರಿ ತೋರು । ಪ್ರಾಂತದಲಿ ಜೋರ । ಮಾಡಿ
ಕಪ್ಪಗಾಣಿಕಿ ತಾರದಿರ್ಪವನು । ನಿನ್ನ
ಉಪ್ಪುಂಡು ಸಪ್ಪಗೆಯೆಂಬವನು । ಇಂಥ
ತಪ್ಪಿನಿಂದಿರು ರಾಜ । ಕಪ್ಪುಗೊರಳಭಕ್ತ । ನಿಪ್ಪನೆನುತೆ
ರಾಜಗೊರೆದರ್ಧಿಂಗೆನುತೆ ॥ ದುಂದುಮಿ ॥

ಪುನ್ನೆ ನಗರದೊಳು ಕೇಳುತಲಿ । ಶ್ರೀಮಂತರು ।
ಇನ್ನಿವರ ವಿವರ ತಿಳಿವೆನೆಂದು
ಕಾರ್ಭಾರಿಯವರನ್ನು ಕರಿಸಿ । ಚತುರಂಗ
ಮಾರ್ಬಲ ಸುತ್ತಲು ನೆರಿಸಿ ॥ ॥೧೨॥

ಮಾಣಿಕೇಶ್ವರನೆಂಬ । ಜಾಣ ಕಾರ್ಭಾರಿ ಬರಲು ।
ಕ್ಷೋಣಿಯೊಳರಸ ಸಂದಣಿಸಿ ।
ಸೊಂಡೂರದೇವರ । ಕಂಡುಬರುವೆನೆಂದು
ಹಿಂಡುಗಟ್ಟಿಸಿ ಸೈನ್ಯ ಚರಿಸುತಲಿ । ರಾಸ್ತೆ
ಪುಂಡ ಮಾಧವರಾಯನ ನೆರಿಸುತಲಿ । ತಂಡ
ತಂಡ ರಾಹುತಜನ ಕರೆಸುತಲಿ
ಗಟ್ಟಿತು ರೇಜು । ಹೊಂಟಿತು ಫೌಜು । ಪುಟ್ಟಿತು ಮೌಜು । ಮಾಡಿ
ಪಂಡರಪುರದೊಳು ಗಂಡ ಹೆಂಡಿರೊಳು । ದಂಡು
ಹಿಂಡುಗಟ್ಟಲು ಪುತ್ರ ತಾಂಡೆಗಳು । ಈ ಬ್ರ
ಹ್ಮಾಂಡ ತುಂಬಲು ಮದ್ದು । ಗುಂಡು ಪರಾರಿಗಳ್
ಝುಂಡೆ ನಿಶಾನಿ ಮಂಡಲಿ ಚೋಪದಾರರ್ । ದುಂದುಮಿ ॥

ಕ್ಷೋಣಿಯೊಳರಸ ಸಂದಣಿಸಿ ತಾ ಚಿಂತಾ
ಮಣಿರಾಯ ಕೂಡಿ ಬರುವುತಲಿ

ನಾಲ್ಕಾರು ದಿನ ಭಾವಣಿಟ್ಟು । ಉಣಸುಣಿ
ಸೈಕ್ಕರದ ಭಿಕ್ಷಾ ಕೊಟ್ಟು ॥ ॥೧೩॥

ಅಪ್ಪಾಸಾಹೇಬನೆಂಬ ನಿಪ್ಪಾಣಿ ದೊರಿ ಬರಲು
ಒಪ್ಪಿತೊಂದ್ಹತ್ತಸಾಸಿರವು ।
ಅರುವತ್ತು ಸಾವಿರ ಸೈನ್ಯದೊಳಗೆ ನಿಪ್ಪಾ
ಣೆರು ತರತರದ ಪೋಷಾಕಿನಲಿ । ಭಯಂ
ಕರ ತುರಗದ ತುರುಪಿನ ಸಾಲು । ಮೈಯೊ
ಗ್ಗ್ಗರಿವ ಮೋರ್ಚ್ಯಾಲಾಗ ಹಾಕುತಲಿ ।
ನಣದಿಗಿಯೊಳು ಎಣಿಸ್ಹಣಗಳು । ದ್ರವ್ಯಖಣಿಗಳು । ಅಲ್ಲಿ ।
ಸೂರಿಗೊಳ್ಳುತೆ ಘೋಡಗೇರಿಯೊಳು । ಬಂದು
ತೆರಳಿದರ್ ಚಂದಿರ ಕಣವಿಯೊಳು । ನೋಡಿ
ಧಾರಿಗಳ ಹಿಡಿದು ಬರಲು ಮುಂದೆ ಮಂಗಲ
ಕರವಾಗಿ ತೋರಿತಾ ಪುರವ ಬಣ್ಣಿಪರ್ ॥ ದುಂದುಮಿ ॥

ಒಪ್ಪಿತೊಂದ್ಹತ್ತುಸಾವಿರದ ಪೌಜಾಗ
ತಪ್ಪದಲೆ ಈ ನಗರದೊಳಗೆಕುತ
ತರತರದಲಿ ಬಂದು ಕೂಡಿ । ಶ್ರೀಮಂತರು
ಪರಿಪರಿ ದೃಷ್ಟಿನಲ್ಲಾಡಿ ॥೧೪॥

ರಾಜರಾಜರ ಕೂಡ ಬಾಜಿರಾಯರು ತನ್ನ
ತೇಜದೊಡನಿಳಿದನೀ ಪುರದೊಳಗೆ
ಮಂಗಲಕರವಾದ ಹೊಂಗಲಪುರದೊಳು
ಗಂಗಾಧರನ ಭಕ್ತರಂಗದೊಳು । ಪಣಿ
ತುಂಗದೊಳ್ ಭಸಿತ ಸುಸಂಗದೊಳು ಇದ್ದು
ಜಂಗಮರೆಡಬಲಾನಂದದೊಳು
ಸಾಧು ಸಂಗರು । ದುರಿತಭಂಗರು । ಕರುಣಾಪಾಂಗರು । ಅಂತ
ರಂಗದೊಳ್ ಶಿವನ ಧ್ಯಾ(ನ)ಂಗಳನು ಇಷ್ಟ ।

ಲಿಂಗ ಪೂಜಿಸುವ ಪುಷ್ಪಂಗಳನು । ತಂದು ।
ಅಂಗಜಾರಿಯ ಕಮಲಾಂಘ್ರಿಪರಾಗಕೆ
ಭೃಂಗರಾಗಿರುವ ಜನಂಗಳ ನೋಡಿ ॥ ದುಂದುಮಿ ॥

ತೇಜದೊಡನಿಳಿದು ಪುರದೊಳಗೆ ಶ್ರೀಮಂತರು
ಭೂಜಗಳಿರುವ ವನವ ನೋಡುತಲಿ
ತೋಟದಿ ಫಲವು ಪುಷ್ಪಗಳು । ಕಣ್ಣಿಗೆ
ನೀಟಾಗೆಸೆದವಾ ಬಾಳೆಗಳು ॥ ॥೧೫॥

ನೋಡಿದನು ಮಲ್ಲೇಂದ್ರ ಪಾಡಾಗಿರುವದನ್ನು
ಬಿಡಬಾರದಿವನನೆನ್ನುತಲಿ
ಒಂದು ದಿವಸ ಅಲ್ಲಿ ವಸ್ತಿ ತೆಗೆದು ಪೌಜ
ಮುಂದೆ ಬಂದಿಳಿದಾನು ಬೆಟಗೇರಿಯು । ಮೇಣೆ
ಮಂದಿ ರಥವು ಗಾಡಿ ಪಲ್ಲಕ್ಕಿಯು । ಹಿಂದ
ಮುಂದೆ ದೊರೆಗಳ ಬರುವ ಸಂದಣಿಯು ।
ಸಿಪಾಯಿಗಳ ಹಿಂಡು । ಸವಾರರ ದಂಡು ।
ಈ ಅಬ್ಬರ ಕಂಡು । ಆ ಕಿ ।
ಷ್ಕಿಂಥವಿ ಬಾಜು ಬಾಜೆಂದರಾಗ ರವಸೆ ।
ಷ್ಟೊಂದು ಕವಾಯ್ತು ಬಂದೂಕವಾಗ । ಬಾಳ ।
ದುಂದು ಸರ್ಕಾರ ಕಾಯ್ದೆ ದುಂದುಭಿ ಭೇರಿ ಭೋ
ರೆಂದವು ಹುಬ್ಬಳ್ಳಿ ಮುಂದೆ ಸವಾರಿಯು ॥ ದುಂದುಮಿ ॥

ಬಿಡಬಾರದಿವನ ಎಂಬುತಲಿ ನಗರವನು
ಸಡಗರದಿ ನೋಡಿ ನಡೆಯುತಲಿ ।
ಶ್ರಿಂಗರಿಸಿದರಾ ಪುರವನು । ಜರತರ
ಬಂಗಾರದಿಂದ ಸರ್ವರನು ॥ ॥೧೬॥

ಭೂಪುರವನಾ ಧರಣಿ । ಯೋಪನೋರ್ಡಲು ನೇತ್ರ
ತಾಪವನು ಕಳೆದರರಸುಗಳು ॥

ಹೊಂದಿ ತೋರುವ ರಾಯದಿಂದ ಹುಬ್ಬಳ್ಳಿಮ
ರೇಂದ್ರಪುರದ ಪರಿ ತೋರುವದು ॥ ಬಾಜಾ
ರಿಂದು ಕುಂದಣರತ್ನ ಹೇಮುವದು । ಸವಿ
ವೃಂದದಂಜೂರ ದ್ರಾಕ್ಷಿ ಮಾರುವರು ।
ಗಂಧಭರದಿಂದ । ಮಲ್ಲಿಗಿಗಳಿಂದ । ಪುಷ್ಪಾವಳಿ ಚಂದ । ಸಾಲು
ಹೊಂದಿಲಿರ್ಪುವ ಜವಳಿ ಮಳಿಗೆಗಳು । ಕೆಂಪಿ
ನಂದ ಜರದ ಕಿನಕಾಪುಗಳು । ಪೂರ್ಣ
ಚಂದಿರ ಕಿರಣ ಪೀತಾಂಬರ್ಧಮಲಿರು ಶಾಲು ॥
ಚಂದದಂಗಡಿಗಳಾನಂದ ತೋರುವವು ॥ ದುಂದುಮಿ ॥

ತಾಪವನುಗಳದರರಸುಗಳು ಶ್ರೀಮಂತರ ।
ಭೂಪನಿದಿರಿನೊಳಾಗೆಸೆಯುವರು
ದೈವದವರ ಸೆಟ್ಟರ್ಧಿಂಡು । ಕರಸಿ ತಾ
ನಿವಳ್ವೊಸ್ತ್ರ ಕೊಡಿಸಿದ ದಿಂಡು ॥ ॥೧೭॥

ಉಡುಗರೆಗಳನು ಮಾಡಿ । ಸಡಗರದಿ ಪೊರಮಟ್ಟು ।
ಅಡರಿದನು ಮುಂದೆ ಪರ್ವತವ ॥
ಪಥದ ಪಿಡಿದು ಶೋಭಿತನಾಗಿ ನಡೆದು ದವ
ಲತದಿ ಪೋಗ್ಯಂಬಿಕಾ ಸುತನನ್ನು । ನೋಡಿ
ಸ್ತುತಿಸಿ ನಮಿಸಿ ಪಾಡಿ ಸುತರನ್ನು । ಬೇಡಿ
ರತುನ ಕೇವಣಿಸಿದ ಕಲಶವನ್ನು ।
ಭರಣಗಳಿಂದೆ । ತೋರಣಗಳಿಂದೆ । ಕಾರಣಗಳಿಂದೆ । ಸುಶೋ
ಭಿತ ಮಾಡಿ ಘೃತಪಾಲಮೃತಗಳಿಂದೆ । ಆ ನ
ಬತು ಕಲ್ಲ ಸರ್ಕ್ಕರುನತಗಳಿಂದೆ । ನೀಡಿ
ಮಿತಿಯಿಲ್ಲದೆ ಬ್ರಾಮರ ವ್ರತದಿ ಉಣಿಸಿ ಗೌರೀ
ಸುತನ ವರವನು ಪಡೆದತಿಶಯದಿಂದೆ ॥ ದುಂದುಮಿ ॥

ಅಡರಿವನು ಮುಂದೆ ಪರ್ವತವನಿಳಿಯುತಲಿ
ಒಡೆಯ ನೀ ಪಾಲಿಸೆಂದೆನುತ ।

ಚಂದ್ರಶಾಲಿಯ ಗೋಪುರಗಳ । ಸುಳಿದು ತಾ
ಬಂದು ನೋಡಿದನಾ ಪುರಗಳ ॥ ॥೧೮॥

ಕಂಪಲಿಯು ಕನಕೇರಿ ಹಂಪಸಾಗರ ದಾಂಟಿ
ತಂಪಿಲಿರು ಬೂದಿಹಾಳ ಕಂಡು ।
ಪುರದಾಚಾರಿಯ ಕಾಣುತೆರಗಿ ತೆರಳಿ ಮುಂದೆ
ಗುರಲ ಹೊಸೂರ ಹೊಕ್ಕು ಶರಣು ಮಾಡಿ । ದೀಕ್ಷಿ
ತರ ಅಡಿದಾವರೆಗಳನು ಪಾಡಿ । ಉಡು
ಗಿರ ವಸ್ತ್ರಾಭರಣಗಳನು ನೀಡಿ ।
ವಾದ್ಯಬ್ಬರಗಳು । ಕರಿತುರಗಗಳು । ಭೇಂಭೂರಗಳು । ನಿಂದೆ
ಹೊರಡು ಸವಾರಿಯೊಳ್ ರಾಹುತರು । ಲಕ್ಷ
ಬಾರಿನ ತುರಪು ತಾರಿಪದಾರರು । ಧ್ವನಿ
ಚೀರುವ ಕಾಳಿಯು ಕರ್ನಿ ನೌಬಾಜಿಗಳು ಭಟ್ಟಂ
ಗಿರದೊದರಿದವು ಶ್ರೀಮಂತರ ಮುಂದೆ । ದುಂದುಮಿ ॥

ತಂಪಿಲಿರು ಬೂದಿಹಾಳಕಂಡು ನಡದೀತು
ಗುಂಪು ಪಟವರ್ಧರೆಡಬಲದಿ ॥
ಸುದ್ದಿ ತಿಳಿದನಾಗ ದೊರಿಯು । ಮಲ್ಲೇಂದ್ರ
ಎದ್ದು ಬರುವರೆಂದು ಪ್ರಜೆಯು ॥ ॥೧೯॥

ಕಿತ್ತೂರ ಪುರದೊಳಗೆ ಹತ್ತಿತು ಸುದ್ದಿಯು
ಇತ್ತ ಶ್ರೀಮಂತ ಬರುವುದನು ॥
ಅತ್ತಿ ನೀಲವ್ವನ ಕರೆದು ಪೇಳಿ ರಾಜ ।
ಪುತ್ರರ ಜೋಕೆಂದು ಧೈರ್ಯವನು । ದಾಳಿ
ಬಂತು ಶ್ರೀಮಂತರು ಕೋಪವನು । ತಾಳಿ
ರುತ್ತರವರ ಕೂಡ ಪೋಗುವೆನು ।
ಸತಿ ಸುತರನ್ನು । ಅತಿ ಜತನಿನ್ನು । ಮತಿಯುತವನ್ನು । ಲೇಶ
ತೃಪ್ತಿ ಬಡುತೆ ಚಿತ್ರಮಾಲಿನೊಳು । ಕೂಡಿ
ಹೊತ್ತುಗಳೆವುದೀ ಸಂಪತ್ತಿನೊಳು । ನೀನೆ

ಕರ್ತೃತ್ವವನು ತಾಳಿ ಪುತ್ಥಳಿಬೊಂಬಿ ಸು
ಪುತ್ರರ ಪತ್ನಿಯರ ಸಲಹೆಂದು ಪೇಳಿ ॥ ದುಂದುಮಿ ॥

ಇತ್ತ ಶ್ರೀಮಂತ ಬರುವುದನು ತಿಳಿದವರ ।
ಜತ್ತಿಲ್ಹೋಗುವೆನು ದಯವಿರಲಿ
ಅರ್ತಿಲಿ ಸೋಸ್ತೇರ ಹಿಂಡು । ಸುಖವಾಳಿ
ರುತ್ತಿರುವದು ಕೂಡಿಕೊಂಡು ॥ ॥೨೦॥

ಸದರಿನೊಳಗೆ ಬಂದು ಮಧುರ ಮಾತುಗಳಿಂದೆ
ವದನ ನೋಡುತಲಿ ಮಗನಿಗೆ ॥
ಪುತ್ರ ನಿನ್ನಯ ಮುಖ ಬತ್ತಿ ಬಾಡುತೆ ಕಳೆ
ವೆತ್ತು ತೋರದೆ ನಿನ್ನ ಚಿತ್ರದಲಿ । ಮರು
ಗುತ್ತಿರಬ್ಯಾಡೀ ಸಂಪತ್ತಿನಲಿ । ನಿನ್ನ
ಹೆತ್ತವಳನು ಕೂಡಿ ಅರ್ತಿಯಲಿ ।
ರಾಜ್ಯವಾಳಿರು । ವ್ಯಾಜ್ಯವುಳಿದಿರು । ಮರ್ಜಿ ತಳೆದಿರು । ಯೆಂದು
ಸತ್ತಿಗ್ಹವುದೆ ಆನೆ ಕುದುರೆಗಳು । ಹೊಳೆ
ವುತ್ತಿರುವ ರತ್ನವು ಮುತ್ತುಗಳು । ದವ
ಲತ್ತು ಜಾಗ್ರತೆ ಸಲಹುತ್ತಿರು ಪರಿವಾರ
ಚಿತ್ರಗಲದೆ ಪುತ್ರ ಪೃಥ್ವೀಪನೆನಿಸಿ ॥ ದುಂದುಮಿ ॥

ವದನ ನೋಡುತಲಿ ಮಗನಿಗೆ ಬುದ್ದಿಯನು
ಉದಿಸಿದನು ಮಂತ್ರಿಗಳನೊಡನೆ ॥
ತುಂಬಿದೋಲಗವನ್ನು ಮಾಡಿ । ಚಂದ್ರನ
ಬಿಂಬದ ಪರಿಯಂತೆ ಕೊಡಿ ॥ ॥೨೧॥

ಬಾಪುಸಾಹೇಬಗ್ಹೇಳಿ ತಾ ಪೊರಡ್ವ ಸಮಯದಲಿ
ಅಪರಿಮಿತವಾದ ದುಃಖದಲಿ ॥
ಚಿಕ್ಕಮಕ್ಕಳು ನೀವು ಸಕ್ಕರಿ ಕೆನೆ ಹಾಲು
ಮಿಕ್ಕುದೆಲ್ಲವ ರುಚಿ ಸೇವಿಸುತೆ । ಕೂಡಿ
ಸೌಖ್ಯದಿ ಸರ್ವರು ಮಾತಾಡುತೆ । ಕಳೆ

ವುಕ್ಕಿ ತೋರುವ ಸತಿಯರ ನೋಡುತೆ ।
ಹೊರಳಿ ಬೀಳ್ವಳು । ನೆರಳಿ ಏಳ್ವಳು । ಮರಳಿ ತಾಳ್ವಳು । ಚಿಂತಿ
ಲಕ್ಷಣವನು ನೋಡಿ ತೆಕ್ಕೆಯೊಳು । ಅಪ್ಪಿ
ತಕ್ತ ಸಿಂಹಾಸನ ಮಕ್ಕಳೊಳು । ಪ್ರೀತಿ
ದಕ್ಕಿಸಿರು ನೀನೀ ಕಾಲಕ್ಕೆನಗೆ ಮುಂದೆ
ದಿಕ್ಕಿಲ್ಲದ್ಹೋಗುವೆ ಮಕ್ಕಳನಗಲಿ ॥ ದುಂದುಮಿ ॥

ಅಪರಿಮಿತವಾದ ದುಃಖದಲಿ ಮಲ್ಲೇಂದ್ರ
ಭೂಪತಿಯ ನೋಡಿ ಬಳಲಿದಳು ॥
ಪಗಲಿರುಳ್ಗಳೆಯದೆ ಗಂಡ । ನಿನ್ನ
ನಗುಲಿರುವಳೆ ನಾನು ಪುಂಡ ॥ ॥೨೨॥

ರಾಜ ಲಕ್ಷವನಾಳಿ ಮೋಜಿಲಿರುವುದು ನೀನು
ಬಾಜಿರಾಯನ ಒಡಗೂಡಿ ॥
ಮಡದಿಯ ಕರೆದು ತಾ ಬಿಡದೆ ಪೇಳಿದ ಬುದ್ದಿ ।
ನಡೆವುದತ್ತೆಯ ಮಾತು ನಡಿಸುತಲಿ । ತಾಯಿ
ಯೊಡನಾಡಿರುವುದೆಂದು ಪೇಳುತಲಿ । ಆಗ
ನಡುವಿನ ಮಗನ ಹೊರಡಿಸುತಲಿ ।
ನಿಸ್ಪತ್ತರನ । ಕಲ್ಲೂರವರನ । ದಿವಾನರನ । ಇಟ್ಟು
ಗಡ ಕಿಲ್ಲೆದೊಳು ಗುರುಪುತ್ರ ವೀರಪ್ಪಗ । ಪೇಳಿ
ಬಿಡದೆ ಬರಿವುದರಮನೆಯೊಳಗೆ । ಸುದ್ದಿ ।
ಎಡಬಲಿರುವ ಪರಬಲ ಬರಲವರನ್ನು
ಕೆಡವಿಳೆಯಾಳು ನೀ ಸಡಗರಲೆನುತ ॥ ದುಂದುಮಿ ॥

ಬಾಜಿರಾಯನ ಒಡಗೂಡಿ ಪೋಗುವೆನು
ಭುಜಬಲಿರು ಬಾಪುಸಾಹೇಬನ ॥
ಮಂತ್ರಿಸುತರುಗಳಿಗ್ಹೇಳೆ । ಮಲ್ಲೇಂದ್ರ
ಕಾಂತೆ ಹೊರಳಿದಳು ಕೇಳಿ ॥ ॥೨೩॥

ಎತ್ತ ನೋಡಲು ಪೌಜು ಮುತ್ತಿತು ಎಡಬಲದಿ
ಪುತ್ರರಳಲಿದರು ಜತ್ತಿನಲಿ ॥
ತಂದು ಮೋರೆಯ ನಾವಿನ್ನೆಂದು ಕಾಣುವವೆಂದು
ಬಂಧುಬಳಗ ಕೂಡಿ ನೆರೆವುತಲಿ । ಆ ಮ
ಲ್ಲೇಂದ್ರ ಕರೆದ ಮಗನೆಂಬುತಲಿ । ಕೇಳಿ
ರೆಂದು ಹಿರಿಯಳ ಮಾತು ಮೀರದಲೆ ॥
ಕಳೆ ಚಂದಿರ । ಎಳೆ ಕಂದರ । ರಾಜಮಂದಿರ । ಸಲ
ಹೆಂದು ಗಲ್ಲವ ಪಡಿವುತೆ ಮಲ್ಲೇಂದ್ರ । ಪೇಳಿ
ಅಂದಳಾನಿಯನೇರಿದಮರೇಂದ್ರ । ಕಾಳಿ
ದುಂದುಭೀ ಭೇರಿ ಭೋರೆಂದು ಬಾಜು ಬಾ
ಜೆಂದು ಹೊರಟಿತು ಕಿಷ್ಕಿಂಧದಿ ಜನರು ॥ ದುಂದುಮಿ ॥

ಪುತ್ರರಳಲಿದರು ಜತ್ತಿನಲಿ ಹೊಂಗಲದಿ ।
ಬಂತು ಮಾರ್ಬಲವನೊಡಗೂಡಿ ॥
ಸತ್ತಿಗಿ ನೆರಳು ಛತ್ರಗಳು । ಪಿಡಿಯಲು
ಕತ್ತಲಾದಿತು ಸಂಪತ್ತಿನೊಳು ॥ ॥೨೪॥

ಹರಿಭಕ್ತ ಬಾಜಿರಾಯನು ಹೋಗಿ ಇಳಿದಾನು
ಮಾರಿಹಾಳ ದಾಂಟಿ ನೇಮಿಸಿದ ॥
ಹರನ ಸ್ಮರಿಸಿ ಸಾಗಿ ದೊರಿ ಮಲ್ಲಸರ್ಜನು
ಪರಿಗಟ್ಟಿದುರನಾಗಿ ನಿಂತಿರಲು । ನೋಡಿ
ದರಜಿಲ್ಲದಿರದೆ ತಾ ಪೋಗುತಲಿ । ಮುಂದೆ
ಪುರ ಬೆಳಗಾಂವಿಯ ದಾಂಟುತಲಿ
ಪುಣೆ ಪಥವಾಗ । ಹಿಡಿವುತಲಾಗ । ಈ ದವಲತ ಬ್ಯಾಗ ಎಡ
ವೂರ ನದಿಸ್ಥಲದಿ ಶ್ರೀಮಂತರೊಳು ಕಿತ್ತೂ
ರರಸು ಸೇಗುಣಿಸಲ್ಲಗೌಡನೊಳು ಕೂಡಿ
ತೆರಳಿದರ್ ಮಿರ್ಜಿ ಸಾಂಗಲಿ ತಾಸಗಾಂವಿ
ಪುರವನುಳಿದು ಶ್ರೀಮಂತರನೊಡಗೂಡಿ । ದುಂದುಮಿ॥

ಮಾರಿಹಾಳ ಸ್ಥಲದಿ ನೇಮಿಸಿದ ಶ್ರೀಮಂತರಿ
ಗೇರಿಸಿಡಿಸಿದನೊಸ್ತ್ರಾಭರಣಗಳ ॥
ಮುತ್ತು ರತ್ನದ ಮಾಲೆ ಕೊಡು । ನಜರಾಣಿ
ಹತ್ತು ಸಾವಿರ ದ್ರವ್ಯವಿಟ್ಟು ॥ ॥೨೫॥

ಗೌಡ ಹೇಳಿದ ಕಿತ್ತೂರ ನಾಡದಾಗಿವನ ಸಿರಿಯು
ಜೋಡಿಲ್ಲ ದೊರೆಗಳೊಳಗೆಲ್ಲ ॥
ಹಿರಿಯ ಬಾಜಿರಾಯನು ಒರೆದ ಗೌಡನ ಕೂಡೆ
ದರಕಾರಿಲ್ಲದೆ ರಾಜ್ಯವಾಳುವನು । ನಮ್ಮ
ಸರಕಾರೆಂದರೆ ಮಾರ್ಮಲೆಯುವನು । ಜುಮೇ
ದರನಾಗಿ ಹಣಗಳ ಗಳಿಸುವನು ॥
ಉಳಿಸಿದ ಬಾಕಿ । ಬಳಸಿಲ್ಲ ಪಾಕಿ । ಕಳಸಿದ ನೂಕಿ । ಯೆಂದು
ಆರು ಲಕ್ಷಗಳಾಗಲು ಹೊರಿಸಿ । ಕಿತ್ತೂ
ರರಸು ಜಾಮಿನುಪತ್ರಗಳ ಬರೆಸಿ । ನಡು
ವಿರಸಿದಲ್ಲನಗೌಡನ್ನೊರ ಮಲ್ಲಸರ್ಜನ
ವರಪುತ್ರನ ನೋಡಿ ಕರೆದು ಮನ್ನಿಸಿದ । ದುಂದುಮಿ ॥

ಜೋಡಿಲ್ಲ ದೊರೆಗಳೊಳಗೆಲ್ಲ ಶ್ರೀಮಂತರು
ಬಿಡದೆ ಕರವಿಡಿದು ಹರಸುತಲಿ
ಬಾಜಿರಾಯವನಿಗೆ ಮೆಚ್ಚಿ ಉಡುಗೊರೆ
ಭೂಜದಿಂದ್ದೊದಿಸಿದ ಬಿಚ್ಚಿ ॥ ॥೨೬॥

ಮಲ್ಲೇಂದ್ರನ ಮಗನಿಗೆ ಜಲ್ಲಿ ಕಾದರಿಗಳ್ಹಿಡಿಸಿ
ಪಲ್ಲಕ್ಕಿಯೇರಿಸುತಲಾಗ ॥
ಮುತ್ತಿನ ಮಾಲೆಯ ಧರಿಸಿ ಮಸ್ತಕದೊಳು
ಎತ್ತಿರುವ ಸತ್ತಿಗಿ ಛತ್ರಗಳು ॥ ಹಿಡಿ
ಸುತ್ತಲಾಡುವ ಮುಂದೆ ಪಾತ್ರಗಳು । ಒ
ತ್ತಿರುವ ಕಾಳಿ ವಿಚಿತ್ರಗಳು ।
ಕೊಟ್ಟು ಚೆಲುವಿಂದ

ಹೊರಟು ನಲುವಿಂದ
ಬಿಟ್ಟು ಸ್ಥಳದಿಂದ ॥ ಅಪ್ಪಣೆ
ಯಿತ್ತು ಮಗನೆ ಪೋಗೆಂದ್ಹೇಳುತಲಿ । ತಂದಿ
ಜತ್ತಿಲ್ಹೋಗುವದೆಂದು ಹೇಳುತಲಿ । ಜಾಮೀ
ನಿತ್ತು ಪೋಗುರೆಯೆಂದು ಅತ್ತು ಬಿಡದೆ ಗೌಡ
ನಿತ್ತ ಬಾರೆನುತೆ ತನ್ನೊತ್ತಿಲಿರಿಸುತೆ ॥ ದುಂದುಮಿ ॥

ಪಲ್ಲಕ್ಕಿಯೇರಿಸುತಲಾಗ ಕಳುಹಿದನು
ನಿಲ್ಲದೆ ದೊರೆಯು ಮಗನನ್ನು ।
ಕಿತ್ತೂರ ದಾರಿಯ ಹಿಡಿದು । ಬಾಬಾಸಾಹೇ
ಬೋತ್ತರ ಬಂದವರೊಡಿದು ॥ ॥೨೭॥

ಜಾಮೀನು ಪತ್ರಗಳ ಕೊಟ್ಟು ಶ್ರೀಮಂತರೊಡಗೂಡಿ ।
ಆ ಮಲ್ಲಸರ್ಜ ಪೋಗುತಲಿ ॥
ಅರುವತ್ತು ಸಾವಿರದಳ ಪಟವರ್ಧನರ್
ನೆರೆದು ಶ್ರೀಮಂತ ಸವಾರಿ ಕೂಡಿ । ಪುಣೇ
ಪುರವ ಪೊಗಲು ರಥ ತುರಗ ಗಾಡಿ । ಪೊಕ್ಕು
ಅರಮನೆಯೊಳು ವಿಸ್ತಾರಗಳ ನೋಡಿ ।
ರಾಜರಾಜರು ಮಹಾತೇಜರು ರಾಜಭೂಜರು । ಪುಣೇ
ದೂರ ಸುತ್ತ್ಹುರದಾರಿಯಿಳಿಯಲು ದಂಡು । ಕುದರಿ
ಸಾರವಾಟ ನೂಕನುಗ್ಮಂದಿ ಕಂಡು ಶ್ರೀಮಂ
ತರು ಸರದೇಸಾಯಿ ದೇಶ್ಪಾಂಡೆರವರಿಗೆ
ಹೊರಸಿದ್ಧಣಗಳ ಬೇರೀಜ ಲೆಕ್ಕಮಾಡಿ ॥ ದುಂದುಮಿ ॥

ಆ ಮಲ್ಲಸರ್ಜ ಪೋಗುತಲೆವನ ಹಿಡಿದು
ನೇಮಿಸಿದ ಪಹರೆ ಚೌಕಿಯನು ॥
ಎಡಬಲ ಕುದುರೆಗಳ ಪಾರ್‍ಯ ॥ ಮಲ್ಲೇಂದ್ರ
ನಡುಗಿಬಿಟ್ಟನು ತನ್ನ ಧೈರ್ಯ ॥ ॥೨೮॥

ಕಿತ್ತೂರಪುರದೊಳಗೆ ಅತ್ತಿ ನೀಲವ್ವನು
ಇತ್ತುಸುರಗಳೆದು ಅಳಲುವಳು ॥
ಮಡದಿ ಚೆನ್ನವ್ವನು ಒಡೆಯ ಪೋದನುಯೆಂದು
ಸಡಗರ್ರ್ಃಸಂಪತ್ತು ಸುಡು ಬದಕ । ಆವ
ರೊಡನೆ ಪೋಗದೆ ಜೀವಿಸುವುದೇತಕ ।
ಪೊಡೆಯಲಜನು ಬರೆದ್ದಿಂತದಕಾ
ಮುತ್ತು ಮಾಣಿಕ
ರತ್ನವರ ಪದಕ
ನತ್ತು ನಾಸಿಕ । ತೆಗೆ
ದಿಡುತೆ ಕಾಂತನು ಇದ್ದೆಡೆಗೆ ಪೋಗಲೋ ಅಲ್ಲಿ
ತಡೆದನ್ಯಾತಕೆ ಪ್ರಾಣವ ಬಿಡಲೋ । ಯಾರ
ಗೊಡಿವೇನು ಮಗನೆ ನೀ ನಡೆಯೆಂದು । ಗಲ್ಲವ
ಪಿಡಿದು ಪೇಳುತೆ ಗಡಬಿಡಿಸಿದಳಾಗ ॥ ದುಂದುಮಿ ॥

ಇತ್ತು ಸುರುಗಳೆದು ಅಳಲುವಳು ಅರಮನೆಯೊಳ್
ಪುತ್ರರ್‍ದ್ದೊರಳಿದರು ದುಃಖದಲಿ ॥
ಯತ್ನ ಮಾಡುವದೇನು ಮುಂದು । ಮಲ್ಲೇಂದ್ರ
ಯಿತ್ತ ಮೋರೆಯ ತೋರ್ವನೆಂದು ॥ ॥೨೯॥

ಗಂಡಮಾಲಿಯ ಹುಣ್ಣು ಹುಟ್ಟೀತು ಗೌಡಗ
ಕಂಡೇನಿನ್ಹ್ಯಾಂಗ ಪುರವನ್ನು ॥
ಇಲ್ಲಿರುವ ಸೇಗುಣಸಿ ಅಲ್ಲಗೌಡನು ಡೋಲಿ
ಯಲ್ಲಿ ಕುಳಿತುಕೊಂಡು ನಿಲ್ಲದಲಿ । ಮಂದಿರ
ದಲ್ಲಿ ಬರಲು ನೋಡಿ ಶೋಕದಲಿ । ಮಕ್ಕ
ಳೊಲ್ಲಭೆಯರು ಬಂದು ಕೂಡುತಲಿ ।
ಗಂಡುಮಾಲಿಯೂ ।
ತಂಡ ಶೂಲಿಯು ।
ಕೆಂಡ ಜ್ವಾಲಿಯೂ । ಎಂತೆ
ಗಲ್ಲೊಳೊಡೆದು ರಕ್ತ ಹರಿಯಲಾಗ । ಪ್ರಾಣ

ನಿಲ್ಲದ್ಹೋಗಲು ಜೀವ ಸರಿಯಲಾಗ । ಮನೆ
ಯಲ್ಲಿ ಜನರು ದುಃಖದಲ್ಲಿರಲಿತ್ತಲು ।
ಮಲ್ಲೇಂದ್ರ, ಧರ್ಮವ ಸಲ್ಲಿಸಿದಾಗ ॥ ದುಂದುಮಿ ।

ಕಂಡೆನಿಸ್ಹಾಂಗೆ ಪುರವನ್ನು ಯೆನ್ನುತಲಿ
ಪುಂಡಗೌಡಾಗ ಸಾಗಿದನು ॥
ಆ ಕ್ಷಣ ಪುರದಿ ಕಾರ್ಕುನರು । ಹಣಗಳು ।
ಲಕ್ಷಾವಧಿಯ ಸೂರ್‍ಯಾಡಿದರು ॥ ॥೩೦॥

ರಾಜರಾಜರ ಕೂಡ ಬಾಜಿರಾಯನು ವನದೊಳ್
ಭೋಜನವ ಮಾಡಿಸಿದನಾಗ ॥
ಮಲಸರ್ಜಗುಣಿಸುದ ಕಲಸದೆ ಕರೆಸಲು
ಶೀಲತನದಿ ಬಾರದಿರುವದನ್ನು । ಕೇಳಿ
ಮೇಲಾದ್ಹಣ್ಣುಗಳ ಸಕ್ಕರೆಗಳನ್ನು । ಹಾಲು
ನಾಲಗಿ ರುಚಿ ಸುಜೀನಸುಗಳನ್ನು ।
ಕಿತ್ತೂರ್ ದೊರೆಗಳು ।
ಬತ್ತಾಸಿವಗಳು
ಇತ್ತು ಜನಗಳು । ಅನು
ಕೂಲ ಫಳಾರವ ಸಲಿಸುತಲಿ । ಅಲ್ಲಿ
ಲೋಲಾಡಿ ಶ್ರೀಮಂತರೊಲಿವುತಲಿ । ಬಂದು
ಪಾಲಿಕಿ ಮೌಕ್ತಿಕ ಮಾಲಿ ಜರತಾರಿಯ
ಶಾಲು ಮಲ್ಲೇಂದ್ರಗೆ ಕೊಡಿಸಿ ಸರ್ವರೊಳು ॥ ದುಂದುಮಿ ॥

ಭೋಜನವ ಮಾಡಿಸಿದನಾಗ ಶ್ರೀಮಂತನು
ಮೋಜಿಲ್ಯಾ ಮಂದಿರದೊಳಿಡಿಸಿ ॥
ಮಲ್ಲೇಂದ್ರ ಸತಿಸುತರನ್ನು ! ನೆನೆವುತೆ ।
ಒಲ್ಲದಾದನು ಆಹಾರವನ್ನು ॥ ॥೩೧॥

ಕಿತ್ತೂರಪುರದೊಳಗ ಬತ್ತಿತು ಬಳಗೆಲ್ಲ
ಎತ್ತ ನೋಡಿದರು ಚಿಂತೆಯಲಿ ॥
ಬಂದನು ನಡುವಿನ ಮಗ ಬಾಬಾಸಾಹೇಬ
ಅಂದಳ ಛತ್ರ ಚಾಮರಗಳಿಂದೆ । ನೋಡಿ
ತಂದೆಯನುಳಿದು ಬರುವುದು ಚೆಂದೆ । ತನ್ನ
ಚಂದುಳ್ಳ ಮುಖವ ತೋರಿಸುವೆನೆಂದ ।
        ಬಂಧು ಬಳಗೆಲ್ಲ
        ಮಂದಿ ಒಳಗೆಲ್ಲ
        ತಂದಿ ಸುಳಿವಿಲ್ಲ । ಯೆಂದು
ಸುಂದರಾಂಗನು ಹಿರಿಯಣ್ಣನಾಗ । ದುಃಖ
ದಿಂದ್ಹೊರಳಲು ತಾಯಿ ಕೇಳಿ ಬ್ಯಾಗ । ಎನ್ನ
ಚೆಂದುಳ್ಳರಸ ಬಾರ । ನೆಂದು ಪುತ್ರನ ಕೇಳಿ
ಬಂದಪ್ಪಿಯಳಲುವಳುಳಿಯದೆ ಜನರು । ದುಂದುಮಿ ॥

ಎತ್ತ ನೋಡಿದರು ಚಿಂತೆಯಲಿ ಮಲ್ಲೇಂದ್ರನ ।
ಗೊತ್ತರಿಯದಾಯ್ತೀ ಸಭೆಯೊಳಗೆ ।
ಅಳಿಯನ ಕಾಣದೆ ಸೊರಗಿ । ಅತ್ತೆವ್ವ
ಉಳಿದನು ಬರಲಿಲ್ಲ ತಿರುಗಿ ॥ ॥೩೨॥

ಮಾಲಿನ ಮೇಲೇರಿ ನೋಡಿದರು ದಾರಿಯನು ।
ಲೋಲ ಮಲ್ಲೇಂದ್ರ ಬರುವುದನು ॥
ಪಟ್ಟದರಸಿಯಳು ನಿಟ್ಟುಸಿರುಗಳಿಂದೆ
ಪಟ್ಟೆ ಮಂಚದಿ ಹೊರಳುತ್ತಿರಲು ಎನ್ನ
ದೃಷ್ಟವ ಸುಡುಸುಡು ಬಳಗದೊಳು । ಕಿಚ್ಚ
ಕೊಟ್ಟು ತಾನುಳಿವರೆ ಪುಣೇದೊಳು ।
        ಬಾಯ ಬಿಡುವಳು ।
        ದೇಹ ಸುಡುವಳು ।
        ಮಾಯೆಯಿಡುವಳು । ಪ್ರೀತಿ

ಯಿಟ್ಟು ನೀಲವ್ವನು ಸೊರಗಿದಳು ರೋಗ
ಹುಟ್ಟಿ ದೇಹವು ಕಂದಿ ಕೊರಗಿದಳು । ಪ್ರಾಣ
ಬಿಟ್ಟಳು ಮಲ್ಲೇಂದ್ರಗಿಟ್ಟಳು ಮಮತೆಯ
ನೆಟ್ಟಗೆ ಶಿವನೊಲವಿಟ್ಟು ಸಾಗಿದಳು ॥ ದುಂದುಮಿ ॥

ಲೋಲ ಮಲ್ಲೇಂದ್ರ ಬರುವದನು ಕಾಣದಲೆ
ಬಾಲರಿದ ನೋಡಿ ಅಳಲುತಲಿ ॥
ಅತ್ತಿ ನೀಲವ್ವನ ನೋಡಿ । ಬಳಗೆಲ್ಲ
ಮುತ್ತಿ ಅಳಲುತೆ ಮುಖಬಾಡಿ ॥ ॥೩೩॥

ಹೊಂದಿದಳು ಶಿವನೊಳಗಯೆಂದು ಉತ್ತರ ಬರೆದು
ತಂದಿ ಮಲ್ಲೇಂದ್ರಗೆ ಕಳಿಸುತಲಿ ॥
ಬರೆದ ಕಾಗದ ನೋಡಿ । ದೊರೆ ಮಲ್ಲಸರ್ಜನು
ಧರೆಯೊಳುರುಳಿ ತಾಯಿ ಪೋದೇನವ್ವಾ । ಪುತ್ರರ
ಪರದೇಶಿಗಳ ಮಾಡಿ ಮರತೇನವ್ವ । ನಾನು
ಮರುಗುವೆನೆಂಬುದ ತಿಳಿಯದಿರುವರವ್ವಾ ॥
ಸೆರೆಯೊಳು ಅತ್ತೆ
ನಾನಿರಲು ಮತ್ತೆ
ಜಪತಪ ನಿತ್ಯೆ । ಮಾಡಿ
ದೊರಿತನ ನಿಲಿಸಿ ರಾಜ್ಯ ಗೆಲಿದಿರಲ್ಲ । ನೃಪಮಂ
ದಿರದೊಳು ಸತಿಸುತರ ಸಲಹಿದಿರಲ್ಲ । ಹೀಂಗೆ
ಇರಲು ಎನ್ನಯ ಶಿರ । ಕೊರೆದು ಪೋದರೆ ಜೀವ ।
ಯಿರುವುದಿನ್ನಾವ ಪರಿಯ ಪೇಳೆನಲು ॥ ದುಂದುಮಿ ॥

ತಂದಿ ಮಲ್ಲೇಂದ್ರಗೊದವುತಲೀ ಪರಿಯಿಂದೆ
ಕಂದೀತು ಮುಖವು ನೆನೆನೆನೆದು ॥
ಅತ್ತತ್ತು ಬಿದ್ದನು ನೆಲಕೆ । ಹರಿದವು
ಮುತ್ತಿನ ಸರಗಳು ಪದಕ ॥ ॥೩೪॥

ಚಿಂತಿ ಹತ್ತಲು ದೇಹ, ಕಾಂತಿಹೋಗಲು ಮನದ ।
ಅಂತ ತಿಳಿಸದಲೆ ದೊರಿಯಾಗ
ಸೊರಗಿಡ; ಮನದಲ್ಲಿ ಮರುಗಿದ, ದೇಹವ
ಕರಗಿದ, ಹಿಂವಜ್ವರ ನೆರೆದು ತಾಪ । ಮೂರು
ವರುಷವಿರಲು ಪುಣೇದಲ್ಲಿ ಭೂಪ । ತರ
ತರ ರೋಗಾಗಲು ಆದನೊಂದು ರೂಪ ॥
          ತಿಳಿದನು ತನ್ನ ।
          ಮರಣದ ಚಿಹ್ನ ।
          ಯೋಚನೆಗಳನ್ನು । ಮಾಡಿ
ಹಿರಿಮಗ ಬಾಪುಸಾಹೇಬಗ ಪಟ್ಟ । ಉಳಿದ ।
ತರಳರಿಗ್ವೊಂಗಲ ತಿಗಡಿ ಕೊಟ್ಟು । ಉತ್ರಾ
ಬರೆದಾಗ ರಾಮಲಿಂಗಪ್ಪನ ಕಳುಹಲು ।
ಬರಲು ಪುರದೊಳು ತಯ್ಯಾರ ಮಾಡಿದರಾಗ ॥ ದುಂದುಮಿ ॥

ಅಂತ ತಿಳಿಸದಲೆ ದೊರಿಯಾಗಬೇಕೆನುತೆ
ಬರೆದ ಪತ್ರವನು ತೋರಿಸುತೆ ॥
ಸುದ್ದಿ ತಿಳಿಯಿರೆಂದು ಪೇಳೆ । ಬಳಗೆಲ್ಲ ।
ಮುದ್ದ್ಯಾಯಿತವನನ್ನು ಕೇಳಿ ॥ ॥೩೫॥

ರೋಗ ಹತ್ತಿತು । ದೊರೆಗೆ । ಬ್ಯಾಗದಲಿ ಶಿಕೆಯನ್ನು
ಆಗುವದು ಬಾಪುಸಾಹೇಬಗ ॥
ಕರೆಸಿದರೆಲ್ಲರ ಬರಿಸಿದರ್ ಪುತ್ರರ
ತರಿಸಿದರ್ ತುರಗಾನಿ ತೋಪುಗಳು । ಆಗ
ನೆರಸಿದರ್ ಫೌಜುಪತಾಕಿಗಳು । ಝುಂಡೇ
ನಿರಿಸಿದರ್ ವರ ನಿಷ್ಪತ್ತುರಸುಗಳು ।
          ಕಲ್ಲೂರವರಾಗ ।
          ಕನ್ನೂರವರಾಗ ।

ಗುರುಪುತ್ರವರೀಗ । ಕೂಡಿ
ಅರಸಿ ಚೆನ್ನವ್ವನು ಸರಸದಲಿ । ಪುತ್ರ
ಗರಸಮಾಲೆಯನಾಗ ಧರಿಸುತಲಿ । ಸರ್ವ
ರ್ಥರಸಲು ತೋಪುಗಳ್ ಬಿರಸು ಬಾಣಗಳ್ವಾರಲ್
ವರಿಸಲು ಬಿರುದು ಭಟ್ಟಂಗಿ ಕಾಳಿಗಳು ॥ ದುಂದುಮಿ ॥

ಆಗುವದು ಬಾಪುಸಾಹೇಬಗ ದೊರಿತಾನ ।
ಸಾಗಿತವನೀಗೆ ಸಂಪದವು ॥
ಮಗನಿಗ್ಹೇಳುತಲಾಗ ಬುದ್ದಿ । ಚೆನ್ನವ್ವ
ಬಿಗಿ ತಿಳಿವಳು ಗಂಡನ ಸುದ್ದಿ ॥ ॥೩೬॥

ಪುರುಷನಿಲ್ಲದ ವ್ಯಾಳೆ ಅರಸುತನವಿನ್ಯಾಕೆ
ತೆರಳಬೇಕೆನುತೆ ದೊರಿಗಳನು ॥
ಬಕ್ಕನೆ ಪುಣೇದ ದಿಕ್ಕುನೋಡುತರಸು
ಮಕ್ಕಳ ಸೊಸ್ತೇರ ಬಳಗದ್ಹಿಂಡು । ಸೇರಿ
ಇಕ್ಕಿ ಶ್ರೀಮಂತ ಮಾಡಿದನು ಬಂಡು । ಇಂದು
ಲಕ್ಕಿಸುತ್ಹಿಡಿದಾರು ದಾರಿ ದಂಡು ॥
ಶ್ರೀಮಂತನು ಸೌಗ್ನ
ತುಳಸಿಯ ಲಗ್ನ
ಮಾಡಿದನು ಆಜ್ಞಾ॥ ಅಲ್ಲಿ
ತಕ್ಕ ರಾಜರನೆಲ್ಲ ಬರಿಸುತಲಿ । ಲಗ್ನ
ಇಕ್ಕಿ ಮಲ್ಲೇಂದ್ರನ ಕರಿಸುತಲಿ । ಮನಿ
ಪೊಕ್ಕು ನೋಡಲು ದೊರಿ ಸೌಖ್ಯಗಾಣದೆ ದೇಹ
ಶುಷ್ಕವಾಗಲು ನೋಡ್ಹಿಂದಕ್ಕೆ ಬರುವರು ॥ ದುಂದುಮಿ ॥

ತೆರಳಬೇಕೆನುತೆ ದೊರೆಗಳನು ಲಗ್ನದೊಳು
ಕರಿಸದಿರುಯೆನುತೆ ಪೇಳಿದರು ॥
ಚರರ್ಹೇಳಿದರು ಮಲ್ಲೇಂದ್ರನನು ಕಳುವೋ । ನೀ

ಮರುಗುವನು ರೋಗದಿಂದವನು ॥ ॥೩೭॥

ನಾಡಿಗಳ ನೋಡಿದರ ಬಾಡಿಹವು ಕಳೆಯಿಗ
ಪಾಡಿಲ್ಲಪ್ಪಣೆಯ ಕೊಡು ॥ ಯೆನಲು
ಕೇಳಿ ಶ್ರೀಮಂತನು ತಿಳಿಯದಾಯಿತುಯೆಂದು
ಕಳುಹಿದನು ಮೇಣೆಯೊಳ್ ಗಳಿಗೆಯಲಿ । ಬಂದು
ಇಳಿದರೆಡವೂರ ವೀರನ ಪಾದದಲಿ । ಅಲ್ಲಿ
ಇಳೆಯೊಳಿಲ್ಲದ ದಾನ ನೀಡುತಲಿ
ಕಣ್ಣು ತೆರೆವುತೆ ।
ತಣ್ಣಗಿರುವುತೆ ।
ಬಣ್ಣಿ ಸ್ಥೇಳುತೆ । ಮನಿ ।
ಬಳಗ ನೋಡುವೆನೆಂದು ಯೇಳುತಲಿ । ದಾರಿ
ಉಳಿಯದಿರುಳಿಯೊಳು ಬರವುತಲಿ । ರಾತ್ರಿ
ಗಳಿಯಲಾ ದುರದುಂಡಿ ಇಳೆಯ ಪಾವನಮೂರ್ತಿ
ಬಳಿಯೊಳ್ ಬರಲು ಪಾದ । ನಳಿನ ಕಾಣುತಲಿ ॥ ದುಂದುಮಿ ॥

ಪಾಡಿಲ್ಲಪ್ಪಣೆಯ ಕೊಡುಯೆನಲವರ ನೋಡಿ
ಮೃಡನೆ ಸಲಹೆಂದು ನಮಿಸುತಲಿ ॥
ಬಂಧನಗಳನೆಲ್ಲ ಬಿಟ್ಟು । ಸನ್ನಿಧಿಯೊಳು
ಬಂದೆ ಸಲಹು ಕೃಪೆಯಿಟ್ಟು ॥ ॥೩೮॥

ಚರಣಕೆರಗುತ ದೊರೆಯು ಶರಣು ಮಾಡುತಲಾಗ
ಕರುಣ ಹಡೆವುದರೊಳಗೆ ಬರಲು ॥
ಮಡದಿ ಚೆನ್ನವ್ವನು ಪಡೆದ ಪುತ್ರರು ಸೊಸ್ತೇರು
ಸಡಗರದಲಿ ಬಂಧು ಬಳಗವೆಲ್ಲ । ಛತ್ರ
ಕೊಡೆ ಚಾಮರ ಪಾಲಕಿಯನೇರುತಲಿ । ಬಂದ
ರೊಡೆಯ ಶ್ರೀ ಅರಭಾಂವಿ ಸ್ಥಾನದಲಿ ।
ದೊರಿ ನೋಡಲು
ಮುಖ ಬಾಡಲು

ದುಃಖ ಕೂಡಲು । ಕಯ್ಯ
ಹಿಡಿದು ಪುತ್ರರ ಬಿಗಿದಪ್ಪಿದನು । ನಾರಿ
ಮಡದಿಯ ಕಣ್ಣೀರನೊರಸಿದನು । ದುಃಖ
ಬಿಡು ಮಕ್ಕಳಿರಯೆಂದು ಒಡೆಯ ದುರದುಂಡಿಯ
ಮೃಡನವರೊಡಗೂಡಿ ಅಡಿಗೆರಗಿದನು । ದುಂದುಮಿ ॥

ಕರುಣ ಪಡೆವುದರೊಳಗೆ ಬರಲುಳಿದ ಜನರು
ಹರಹರೆಂದೆನುತೆ ಸ್ತುತಿಸಿದರು ॥
ಎಣಿಸೆಣಿಸಿದರು ಹಣಗಳ ಪಾದದಲಿಟ್ಟ
ರೆಣಿಕೆಯಿಲ್ಲದೆ ವರಗಳನು ॥ ॥೩೯॥

ಕಷ್ಟಬಡಿಸಿದ ವಾರ್ತೆ ಅಷ್ಟರೊಳು ಪೇಳುತಲಿ
ಪಟ್ಟದ ಚೆನ್ನವ್ವನು ತಾನು ॥
ಸತಿಸುತರೊಳು ತನಗತಿ ಪ್ರೀತಾಡುತಲಾಗ
ನಿತರೊಳ್‌ಮತಿಯುತೆ ಸತಿಯಳಾಗ । ತಂದಾ
ರತಿಯೆತ್ತಿ ಪತಿ ಪಾದ ಸ್ತುತಿಸ್ಯಾಳಾಗ । ಕೇಳೆಂದು
ಮತಿವಂತುನ್ನತ ಸ್ವಪ್ನ ತಿಳಿಸ್ಯಾಳಾಗ ॥
ನತ್ತಿನೊಳು ಮುತ್ತು
ಸುತ್ತಲೊಡೆದಿತ್ತು
ಚಿತ್ರಗಲಿಸಿತ್ತು । ನಾನು
ಮತಿಯೊಳ್ ತಿಳಿದು ಸಂತೋಷಿತಳಾಗುತೆ । ಹೀಂಗೆ
ನುತೆ ಪೇಳಿ ಪತಿಯ ಸಮ್ಮತಮಾಡುತೆ । ಅಲ್ಲಿ
ಘೃತಪಾಲು ಪಣ್ಣು ನಾಬತು ಕಲ್ಲುಸಕ್ಕರಿಂ ।
ದಲೆವುಣಿಸಿದರಯ್ಗಳ ಮಿತಿಯಿಲ್ಲದಾಗ ॥ ದುಂದುಮಿ ॥

ಪಟ್ಟದಾ ಚೆನ್ನವ್ವನು ತಾನು ದಾನವನು
ಕೊಟ್ಟಳಗಣಿತವಾದ್ಧಣಗಳನು ॥
ಬೇಡಿದ ಮನಸಿನ ಇಚ್ಚೇ । ಶಿವ ತಾನು
ಕೂಡಿಸಿ ಕೊಟ್ಟನು ಮೆಚ್ಚಿ ॥ ॥೪೦॥

ದುರುದುಂಡಿಯತಿವರನ ಶರಣುಮಾಡುತೆ ನಡೆದಾ
ರ್ಥರನ ನೆನೆವುತಲಿ ಹೊಂಗಲವ ॥
ಬಂದರಾ ಪುರದೊಳು ತಂದಿ ಮಕ್ಕಳು ಸತಿ
ಹೊಂದಿ ಜಂಗಮರೆಡ ಬಲದೊಳಗ। ದೈವ
ಹಿಂದೆ ಮುಂದೊದಗಲು ನೋಡಲಾಗ । ದೊರಿ
ಬಂದರೆನುತೆ ದೈವ ಕೂಡಲಾಗ ॥
ಜತಿಗೂಡಲು ।
ಪಥ ಹಿಡಿಯಲು
ಮುಂದೆ ನಡೆಯಲು ಬೆಳ್ಳೋ
ಡ್ಡೊಂದಿರು ವೀರನ ಸ್ತುತಿಸುತಲಿ ಸಲ
ಹೆಂದು ಬಂಗಾರ ಬೆಳ್ಳಿ ಇಡುವುತಲಿ । ಈ ಆ
ನಂದದಿ ಬರಲು ಮಲ್ಲೇಂದ್ರನ ದೇಹದೊ ।
ಳೊಂದಿತು ವ್ಯಾಧಿಯೆಷ್ಟೋಂದುಳಿಯದೆಲೆ ॥ ದುಂದುಮಿ ॥

ಹರನ ನೆನೆವುತಲಿ ಹೊಂಗಲವ ಬಿಡುವುತಲಿ
ಶರೀರದಲಿ ರೋಗ ಹೆಚ್ಚುತಲಿ ॥
ತಿಳಿಯವಲ್ಲದು ವ್ಯಾಧಿಮೂಲ । ಅರಸನ
ಯೆರಡು ದದ್ದರಿಸ್ಯಾವು ಕಾಲ ॥ ॥೪೧॥

ಹತ್ತುಸಾವಿರ ಜನರು ದುಃಖಿಸಿಕೊಳುತಾಗ
ಕಿತ್ತೂರಪುರವ ಕಾಣುತಲಿ ॥
ಓಡಿಬರಲು ದಾರಿವಿಡಿದು ದಿವಾನರು
ನಾಡಿವಿಡಿದು ತಾನು ನೋಡುತಲಿ । ಎನ್ನ
ಒಡೆಯನ ಬಲ ತೀರಿತೆನ್ನುತಲಿ । ಮುಖ
ಬಾಡಿ ಕಣ್ಣುಗಳಾಗ ತೆರೆವುತಲಿ ।
ಮುಜರಿ ಮಾಡಿದಾ
ದೊರಿ ನೋಡಿದಾ
ಮಾತನಾಡಿದಾ । ತೋಫ
ಜೋಡಿಲ್ಲಾರುವವೇಕೆ ಸದರಿನೊಳು । ದಡ

ದಡಲೆನ್ನುವ ಸಪ್ಪಳೆನ್ನಿದಿರೊಳು । ಕೇಳು
ತೊಡೆಯನೆ ಲಾಲಿಸು ಹೊಡೆವನು ಪೇದ್ರು ನಿ
ಮ್ಮಡಿಗಳ ನೋಡಲು ಬಿಡದೆ ತೋಪುಗಳು ॥ ದುಂದುಮಿ ॥

ಕಿತ್ತೂರಪುರವ ಕಾಣುತಲಿ ದೊರೆಯಾಗ
ಮತ್ತೆ ದಿವಾನರನು ನೋಡಿ ॥
ಕಣ್ಣಿರುದುರಿಸಿ ಪೇಳಿದನು । ಮಲ್ಲೇಂದ್ರ
ಸಣ್ಣ ಮಕ್ಕಳ ಜೋಕಿವರನು ॥ ॥೪೨॥

ದುಃಖಮಾಡುತೆಯೆಲ್ಲರ್ಹೊಕ್ಕರೊಡೆಯರ ಚೌಕಿ
ಮುಕ್ಕಣ್ಣ ಗುರುವ ಮಠದೊಳಗೆ ॥
ಮುತ್ತಿತು ಬಲ ಸತಿಪುತ್ರರು ದೊರಿ ಮುಖ ।
ಯೆತ್ತಿ ನೋಡಲು ದಶಾವಸ್ಥೆಗಳು । ಆಗಿ
ರುತ್ತಿರಲೆದೆ ಬಾಯಿ ಬಿಡುತೆ ದಳ । ವೊದ
ರುತ್ತಳಲುತೆ ತೊತ್ತು ಹಿಂಡುಗಳ ।
ಅರಮನಿ ಪೊಕ್ಕು
ಮಲ್ಲೇಂದ್ರಗ ಬಿಕ್ಕು
ಹತ್ತುತಲಿ ದಿಕ್ಕು । ತಪ್ಪಿ
ತೆತ್ತ ಪೋಗಲಿ ಚೆನ್ನವ್ವ ಸೋಸ್ತೇರಾಗ । ದೊರಿ
ಸುತ್ತ ಪುತ್ರರು ಮುತ್ತಿ ಬಳಗವಾಗ । ನೋಡಿ
ರಿತ್ತ ಕಣ್ಗಳ ತಿರುವುತ್ತಾರೆನುತೆ ಸರ್ವರ್
ಜತ್ತಾಗಿ ದುಃಖದ ಪಾತ್ರರಾಗುತಲಿ ॥ ದುಂದುಮಿ ॥
ಮುಕ್ಕಣ್ಣ ಗುರುವು ಮಠದೊಳಗೆ ಬರಲವರು
ತಕ್ಕ ಸಮ್ಮತವಗೊಳಿಸಿದರು ॥
ಬಡಕೊಳ್ಳಬೇಡೆನ್ನ ತಾಯಿ । ಪ್ರಾಣವ
ಬಿಡತಾರು ಮಲ್ಲದೇಸಾಯಿ ॥ ॥೪೩॥

ಮರುದಿವಸದೊಳು ದೊರಿಯು ಅರುಣೋದಯ ಕಾಲಕ್ಕೆ
ಮರಣ ಹೊಂದಿದನರಸು ಮಲ್ಲಸರ್ಜ ಬೆಳಗಿನೊಳು

ಚಂದಿರನನು ರಾಹು ಹೊಂದಿ ತೋರದಂತೆ ।
ಕಂದಿತು ಮುಖವು ಮಲ್ಲೇಂದ್ರನನು । ಶಿವ
ನ್ಹೊಂದಿದ ಲೋಕದೊಳಮರೇಂದ್ರನು । ರಾಜ
ತಂದೆ ತೀರಲು ಮಾರಸುಂದರನು ।
ಭೂಪ ಮಡಿಯಲು ।
ತೋಪು ಹೊಡೆಯಲು
ರೂಪ ಅಡಗಲು । ದೊರಿಯ
ತಂದರಾ ಸದರಿನೊಳಗೆ ಪುತ್ರರು । ಬಂದು
ತಂದಿ ಅಪ್ಪಲು ಸುಂದರಗಾತ್ರರು । ಯೆಂದ
ರಿಂದು ಶಿವನು ಹೊತ್ತು ತಂದಾನೆನುತೆ ಬಳಗ
ಬಂಧುಗಳುಳಿಯದೆ ಮಂದಿ ದುಃಖಿಸಲು ॥ ದುಂದುಮಿ ॥

ಮರಣ ಹೊಂದಿದನರಸು ಆಗ ಹರಹರಯೆನುತೆ
ಮರುಗಿದರು ನಿಸ್ಸತ್ತರು ನೆರೆದು
ಮುಕ್ಕಣ್ಣ ಮುನಿದನಿಂದೀಗೆ । ನಮಗೀಗ
ದಿಕ್ಕು ತಪ್ಪಿತು ಮುಂದಿನ್ಹ್ಯಾಂಗ ॥ ॥೪೪॥

ದೊರಿಯ ಸಿಂಗರಿಸಿದರು ಶರಣಜನ ಕೂಡ್ಯಾಗ
ಪರಿಪರಿಯ ತಾರಿಪವ ಮಾಡಿ ॥
ಕೋರಿ ಮೀಸಿಯು ನೂರು ವರದ ಕವಚವನಿಟ್ಟು ।
ಸುರತಿ ಮುತ್ತಿನ ಕಂಟಿ ಕೊರಳೊಳಗೆ । ತಲಿಗೆ
ಶಿರಪೇಚೋಜ್ರದ ವುಂಗರ ಬೆರಳೊಳಗೆ । ಬರಿ
ಜರತಾರಿ ಮುಂಡಾಸ ಶಿರದೊಳಗೆ ।
ಶಾಲುಗಳ ಹೊಚ್ಚಿ
ಹಸ್ತದೊಳು ಪೋಚಿ
ಧರಸಿದರುಚ್ಚಿ । ಹೂವಿನ
ಹಾರಮಾಲಿಯು ಭಸಿತವ ಧರಿಸಿ । ತರ
ತರದ ಪರಿಮಳ ಕಸ್ತೂರಿಯು ಸುರಿಸಿ । ಥಾಲು

ಸುರಗಿ ಕೊಡಲು ಜಂಗಮರು ಹರಸಲು ಭಿಕ್ಷ
ವರಗಳಿಡಲು ಜನ ಸರಿದು ನಿಲ್ಲಿಸುತ । ದುಂದುಮಿ ।

ಪರಿಪರಿಯ ತಾರಿಪವ ಮಾಡಿ ಮಲ್ಲಸರ್ಜನ
ಸರಿಯಿಲ್ಲೆನುತ್ತೊಗಳಿ ಬಿರುದುಗಳು ॥
ತುರಗಾನಿ ರಥ ಪತಾಕಿಗಳು । ಎಡಬಲ
ಪರೆಗಟ್ಟಿ ಒದರಿ ಭೇರಿಗಳು । ॥೪೫॥

ಪಟ್ಟದರಸಿಯ ದುಃಖ ಎಷ್ಟು ಹೇಳಲಿ ಸದರ
ಕಟ್ಟಿಗ್ಗಣಿ ಬಡಿದುರುಳಿ ಬಿದ್ದು ॥
ಸತಿಯು ಚೆನ್ನವ್ವನು ಪತಿಯ ಪಾದದಿ ಹೊರ
ಳುತ ಪರದೇಶಿ ಮಾಡಿ ಕ್ಷಿತಿಯೊಳಗೆ । ಇಟ್ಟು ॥
ಹಿತದಿಂದ ಕೂಡಿದಿ ಹರನೊಳಗೆ । ಮುಂದೆ
ಗತಿಯೇನೆನಗೆ ಸರಿ ಸತಿಯರೊಳಗೆ ।
ಮುಖ ಬಾಗಿತು
ಸುಖ ನೀಗಿತು
ದುಃಖ ಸಾಗಿತು । ಯೆಂದು ।
ಸುತರ ತೆಕ್ಕಿಸಿ ನೆಲಕುರುಳುತಲಿ । ದೇಹ
ಸ್ಮೃತಿ ತಪ್ಪಲೊಳಗೊಯ್ದು ಇರಿಸುತಲಿ । ಅಲ್ಲಿ
ಪತಿ ಬಾರೆನುತೆ ಮಂದಮತಿಯಿಂದಾಡುತೆ ಇದ್ದ
ಸತಿಯರು ಉಪಚರಿಸುತಲೆ ನೋಡಿದಳು । ದುಂದುಮಿ ॥

ಕಟ್ಟಿಗ್ಗಣಿಬಡಿದುರುಳಿ ಬಿದ್ದೆಚ್ಚರವಾಗಿ
ನಿಟ್ಟುಸುರುಗಳೆದು ಪೇಳಿದಳು ॥
ಗಂಡನಿಲ್ದಿರುವುದು ಕಷ್ಟ । ಮಂದಿರದೊಳು
ಭಂಡಾಗಿರುದೆನ್ನದೃಷ್ಟಾ ॥ ॥೪೬॥

ಎಲ್ಲ ಮಕ್ಕಳ ಕರೆದು ಕಲ್ಲುಮಠದ ಪ್ರಭುದೇವ

ನಿಲ್ಲದೊಳಿಯಕ್ಕೆ ಕರೆದೊಯಿದು
ತಾಯಿಮಕ್ಕಳು ಕೂಡಿ ಬಾಯಿಬಿಡುವುದ ಕಂಡು
ಮಾಯಾ ಬಿಡಿರಿ ದೊರಿ ಹರನೊಳಗ । ಕೂಡಿ
ಕಾಯಬ್ಬೆಳಸಿ ಮುಕ್ತಿ ಗಳಿಸಿದೀಗ । ಬಾಳ
ಸಾಯಸಮಾಡ್ವೇಳಿ ನಮಿಸ್ಯಾರಾಗ ।
ದೂತಿಯರು ಬಂದು
ತಾಯೆ ಕೇಳೆಂದು
ಶಾಂತಿ ತಾಳೆಂದು । ಪೇಳಿ
ದೇಹದೊಳಿಡುವ ವಸ್ತ್ರಾಭರಣಿಡಿಸಿ । ಎತ್ತಿ
ಕೈಯೊಳು ಕರ್ಪೂರಾರತಿ ಪಿಡಿಸಿ । ಬಂದು
ಸುಯ್ಯಗರಿದು ಪತಿ ಬಾಯ ನೋಡುತೆ ಹೊಂದಿ
ಬಾಯಿಬಿಡುತೆ ನೀ ಸಾಯುವರೆ ಎನುತೆ ॥ ದುಂದುಮಿ ॥

ನಿಲ್ಲದೊಳಿಯಕ್ಕೆ ಕರೆದೊಯ್ದು ಪುತ್ರರು ಬಂದು
ನಿಲ್ಲುವರು ತಂದಿಯಿದುರಿನಲಿ ॥
ಎತ್ತಿದಳಾರತಿ ಪಿಡಿದು । ಪೋಗುವರೇ ?
ಸತಿಸುತರನು ಬಿಟ್ಟು ಮಡಿದು ॥ ॥೪೭॥

ಪರದೇಶಿತನ ಮಾಡಿ ಹರನೊಳಗೆ ಕೂಡುವದು
ತರವೆ ನಿನಗಿಂಥ ದೊರಿತನವು ॥
ಒಡತಿ ಚೆನ್ನವ್ವ ಆರ್ಭಡಿಸ್ಯಳುವುದ ಕಂಡು
ನಡುವಿನ ಪುತ್ರನು ಪಿಡಿದನಾಗ । ಕಯ್ಯ
ಬಡಕೋಬ್ಯಾಡ ತಾಯಿ ನೋಡಿರೀಗ । ಮೋರಿ
ಬಿಡದಡಗುವದು ಮೈತ್ರಿಕೆಯೊಳಗ ।
ಧರ್ಮ ಮುಳುಗೀತು ।
ಕರ್ಮ ಬೆಳೆದೀತು
ಮರ್ಮ ತಿಳಿದೀತು । ಯೆಂದು
ಕೂಡಿದರರಸು ನಿಸ್ಸತ್ತರಾಗ । ತಾ ಬೋ
ರ್‍ಯಾಡಳುವರು ಪುಣೇದವರು ಆಗ । ಎಂದ

ರೊಡೆಯ ನಿನಗೆ ಶಾಪಕೊಡುವರಾರೆನುತೀಗ ।
ಮಡದಿ ಚೆನ್ನವ್ವನು ಗಡಬಡಿಸಿದಳು ॥ ದುಂದುಮಿ ॥

ತರವೆ ನಿನಗ್ಹಿಂತ ದೊರಿತನವು ನನ್ನ ಬಿಟ್ಟು
ಪರಶಿವನೊಳಡಗಿ ಪೋಗುವದು ॥
ಮೋರಿ ನೋಡುತೆ ಮುಂದೆ ಬಾಗಿ । ಶವದ ಮ್ಯಾ
ಲೊರಗಿ ಬೀಳಲು ತಾನು ಸಾಗಿ ॥ ॥೪೮॥

ಪುರುಷನನು ಬಿಗಿದಪ್ಪಿ । ಅರಸ ನಿನ ಗುಣಗಳನು ।
ಒರೆದರೆ ಷ್ಟೂತೀರದೆನುತಾಗ ॥
ಮುತ್ತಿನ ಸೆರಗಿನ ಸೀರಿಯೊಳ್ ಜರತಾರಿ
ರತ್ನಖಚಿತ ಹೆಳಲು ಬಂಗಾರವ । ಹಾರ
ಪುತ್ತಳಿ ನೆಲ್ಲಿ ಮುತ್ತಿನ ಸರವ । ಪತಿ
ವಸ್ತುಗಳುಳಿಯದೆ ಶ್ರಿಂಗಾರವ ।
ಮಾಡಿ ನೋಡುವಿ
ಸುಖ ಆಡುವಿ
ರತಿಗೊಡುವಿ । ಲಗ್ನ
ಮೂರ್ತ ತೆಗಿಸಿ ಆರ್ತಿ ಆಗಲೆಂದು । ಈ ಸಾ
ಹಿತ್ಯವ ಮಾಡಿಸಿ ಕನ್ಯಾ ತಗದಿರೆಂದು ಸಣ್ಣ
ಪುತ್ರನ ವಿವಾಹಮಾಡದೆ ಈಗ ಶಿವನೊಳು ।
ಸತ್ತು ಹೋಹರೆಯೆನ್ನ ಕುತ್ತಿಗೆ ಕೊರೆದೂ ॥ ದುಂದುಮಿ ॥

ಒರೆದರೆಷ್ಟೂ ತೀರದೆನುತಾಗ ಚೆನ್ನವ್ವನು ।
ತರತರದಿ ನೆನೆದು ಅಳಲುವಳು ॥
ಅರಭಾಂವಿ ಮಠದೊಳು ಕೂಡಿ ಮಾತಾಡಿದಿರಿ ।
ಸರಿ ಸುಮ್ಮನಾದಿರಿ ನೋಡಿ । ॥೪೯॥

ಕಣ್ಣು ತೆರೆದೀಗ ನೋಡೆನ್ನ ಸುಂದರದೇಹ
ಮಣ್ಣು ಪಾಲಾಗಿ ಪೋಗುವದು ॥

ಹೊರಳುವಳ್ಳೆಣದ ಮ್ಯಾಲ್ನೆರಳುವಳ್ ನೆನಿನೆನಿ
ದುರುಳುವಳ್ ಧರೆಯೊಳು ಮರಳಿ ತಾನು । ಸುತ್ತಿ
ಸುರಳಿಗ್ಹೊಳ್ಳುತಲೊಮ್ಮೆ ತೆರಳಗಣ್ಣು । ವಜ್ರ
ದ್ಧರಳಿನಾಭರಣಗಳ ಹರಿವಳಿನ್ನು ।
ಕಂಬುಗೊರಳಿಯೊ ।
ಈ ಗುಂಗುರಗುರುಳಿಯೊ ।
ಮನಮರಳಿಯೋ । ಹೊಟ್ಟಿ
ಕರುಳು ಬಿಗಿದಿಡುತೆಚ್ಚರ ಮರೆದು । ಹಗ
ಲಿರುಳೆಂಬುದರಿಯದೆ ದೊರೆಯಕರೆದುಕೊಂಬ
ಳೊರಲುತೆ ಪರಿಯಗಲಿರಲಾರೆನೀ ಜನದಾ ।
ಗ್ಹರಲಿ ಹೊತ್ತೆನು ಹರಹರಯೆಂದಳಾಗ ॥ ದುಂದುಮಿ ।

ಮಣ್ಣು ಪಾಲಾಗಿ ಹೋಗುವದು ನಿನ್ನನು ಬಿಟ್ಟು
ತಣ್ಣಗಾದೀತು ನಿಮಗೆನುತ ।
ಸುಳವು ಕಾಣದೆ ಹೋಯಿತವ್ವಾ । ಪುರುಷಗ
ಅಳಿವು ತಂದವರ್ಯಾರ್ಹೇಳವ್ವಾ ॥ ॥೫೦॥

ವ್ಯೋಮಯಾನವ ಕಟ್ಟಿ ಸಾಮಾನುಗಳ ಮಾಡಿ
ಹಮರು ಬರ್ಜರಿಗಳಿಂದಾಗ ।
ಏಳು ನೆಲೆಗಳು ನಿವಳವಾಗಿ ತರತರದ
ಹಳದಿ ಹಸುರು ಕೆಂಪು ಬಿಳಿದರಿಂದ ॥ ಬಣ್ಣ
ವಳಿ ಮುತ್ತು ಜಾಲಾರ ಸುಳುವಿನಿಂದ । ಮೇಲಿಂ
ದಿಳಿಯಿತೆಂಬಂತ್ಹೊಳ ಹೊಳವುದರಿಂದ ॥
ಜಳಜಳಿಸುತೆ ।
ತಳತಳಿಸುತೆ ।
ಕಳಸಿಡವುತೆ । ಅಲ್ಲಿಂ
ದುಳಿದು ಸಮಾಧಿಯೊಳ್ಹಂದರವ । ಹಾಕಿ
ತಳಿರು ತೋರಣ ಕಟ್ಟಿ ಸುಂದರವ । ರಂಗ

ವಾಲಿಯಿಕ್ಕುತೆ ಪತ್ರಿ ವಿಭೂತಿ ರುದ್ರಾಕ್ಷಿ
ಮಾಲೆಗಳ ಧರಿಸಿ ವಿಶಾಲಮಾಡಿದರು । ದುಂದುಮಿ ॥

ಹಮರು ಜರ್ಜರಿಗಳಿಂದಾಗ ವಿಸ್ತರಿಸು
ಸಮಾದಿ ಕಸ್ತುರಿ ಜವಾದಿ ತೀಡಿ ।
ಚಿತ್ರ ಬರೆದರು ಸುತ್ತಗಟ್ಟಿ । ಒಳಹೊರ
ಗೆತ್ತಲು ಕೈಲಾಸ ಸೃಷ್ಟಿ ॥ ॥೫೧॥

ಮಲ್ಲದೊರೆಯ ವಿಮಾನದಲ್ಲಿಡಲು ಎಡಬಲದಿ
ಜಲ್ಲಿ ಕುದರಿಗಳಾಗ ಹೊರಡಿಸಲು ।
ಮರಮರ ಮರಗುತೆ ಹರದಿ ಚೆನ್ನವ್ವನು
ವರ ಮಕ್ಕಳ್ ನಿಸ್ಪತ್ತರರಸರ್ಧಿಂಡು । ಆನಿ
ತುರಗ ರಥವು ಪರಿವಾರ ದಂಡು । ತೋಪು
ಕರವೂಲಿ ಬಂದೂಕ ಮದ್ದು ಗುಂಡು ॥
ವಾದ್ಯದಬ್ಬರವೆಲ್ಲ ।
ಹರ್ದಾರಿಯು ಸೊಲ್ಲ ।
ಕೇಳುವದು ಎಲ್ಲ । ಮೋರ್ಚಾ
ಲ್ಹಾರುವವು ಭಟ್ಟಂಗಿ ಬೀರುತಲಿ । ಮುತ್ತು
ಹಾರಿಸುವರು ಮೇಲಕ್ಕೇರುತಲಿ । ವೀಳ್ಯ
ದಾರಿ ಮುಚ್ಚಲು ಹೂವು ಸೂರಿಗೊಡಲು ನಡೆ
ದಾರು ಸರ್ವರು ಪರಿವಾರ ಆಗವುಳಿಯದೆ ॥ ದುಂದುಮಿ ॥

ಜಲ್ಲಿ ಕುದುರಿಗಳಾಗ ಹೊರಡಿಸಲು ಮಠದೊಳಗೆ
ಮಲ್ಲೇಂದ್ರನನಾಗ ತರುವುತಲಿ ॥
ಗುರುದೈವ ಹರಸುತೆ ಬಂದು । ಸಮಾಧಿಯೊಳ್
ದೊರೆಯನಿಳುವಿದರು ತಂದು ॥ ॥೫೨॥

ಉಳಿದ ಜನರು ಸಮಾಧಿಯೊಳಗೊಯ್ದು ದೊರಿ ಮೂರ್ತ
ಗೊಳಿಸಿದರಾಭರಣಗಳ ತೆಗೆದು

ಚಂದದಿ ಮುಖನೋಡಿರೆಂದೆನಲಾ ಸತಿ
ಬಂದು ಹವ್ವನೆ ಹಾರಿ ಇದಿರಿನೊಳು । ನಿಂತು
ಇಂದು ತೀರಿತೆ ನಿನ್ನ ರಿಣ ಎನ್ನೊಳು । ಪುಣೇ
ದಿಂದ ಬಂದೆನ್ನಯ ಸುರಿತದೊಳು ।
ಕೂಡಿ ಇರಲಿಲ್ಲ
ರತಿ ಬೆರಿಲಿಲ್ಲ
ಶಿವ ಬಿಡಲಿಲ್ಲ । ನಿನ್ನ
ಕೊಂದು ಬಾಳುವ ನನ್ನ ಜನ್ಮವನು । ಸುಡು
ಎಂದು ಕಾಣುವೆ ನಿನ್ನ ಸಂಗವನು । ನಮ್ಮ
ತಂದೆ ತಾಯ್ಗಳು ನಿನ್ನ ಸುಂದರತನ ನೋಡಿ
ಹೊಂದಿಸಿದರುಯೆನಗೊರವಾಗಲೆನುತ ॥ ದುಂದುಮಿ ॥

ಗೊಳಿಸಿದರಾಭರಣಗಳ ತೆಗೆದು ಬಿಸುಟಿದಳು
ಕಳೆವರನೆನಗಲಿರುವದಾಯ್ತೇ ॥
ಪಡೆದಿದ್ದೆನವ್ವ ಹಿಂತದನು । ಹಗಲಿರು
ಳೊಡೆಯನ ಕಾಣದಿರುವುದನು ॥ ॥೫೩॥

ಅರಸನ್ನೊಟ್ಟಿಲೆ ಹುಟ್ಟಿ ಪುರುಷನೆನಿಸುತೆ ಮೂರು
ವರುಷ ತಡೆದಿರುವಿ ಪುಣೆಯದೊಳು ॥
ಪಡೆದು ಬಂದಿರಿ ರಾಜ್ಯ ಕಡಿಮಿಲ್ಲ ದವಲತ್ತು
ಸಡಗರವನು ಬಿಟ್ಟು ಮೃಡನೊಳಗ । ಕೂಡೆ
ನ್ನೊಡನಿರುವ ಹಂಬಲ ಬಿಡುವಿರೀಗ । ನಾನು
ಕಡಲೊಳ್ ಧುಮುಕಿ ಪ್ರಾಣ ಬಿಡುವೆನೀಗ ॥
ಬಂತೆನಗ ದಾಳಿ ।
ರತ್ನದ ಗುಳದಾಳಿ
ಮೂಗಿನ ಜುಳಜುಳಿ । ಹರಿ
ದಿಡುತ ಕಾಜಿನ ಬಳಿ ಒಡಿದಳಾಗ । ಆ
ರ್ಭಡಿಸಿ ಹಾಯಲು ಜನ ಹಿಡಿದರಾಗ । ಕಟ್ಟಿ

ಕಡಿಗೆ ಪ್ರಾಣಕಾಂತನಡಿಗೆರಗುತೆ ಮಣ್ಣು
ಬಿಡದೊಗಿದಳು ದೊರಿ ಮಡದಿಯಳಾಗ । ದುಂದುಮಿ ।

ವರುಷ ತಡೆದಿರುವಿ ಪುಣೆಯೊಳು ಬಂದೀಗ
ಮರೆತು ಪೋಗುವರೆ ಬಳಗವನು ॥
ಆರುತಿ ಬೆಳಗುತೆ ತಿರುಗಿ । ನಡೆದಾಳು
ಅರುಮನೆಯೊಳು ಬಂದು ಮರುಗಿ ॥ ॥೫೪॥

ಮೂರು ಮಕ್ಕಳ ತಂದಿ ಮೀರಿ ಪೋದನುಯೆನುತೆ ।
ಭೋರಿಡುವರಗಲಿದೀಗೆನುತೆ ॥
ಪುತ್ರರೆಸೆವ ನಿಸ್ವತ್ತರು ಶಿಪಾಯ್ಗಳ ಹಿಂಡು
ಮುತ್ತಿತು ಬಲ ಸುತ್ತು ಮುತ್ತಲಾಗ ॥ ಮೋರಿ
ಯೆತ್ತಿ ದೊರೆಯ ನೋಡಿರೆಂದಾಗ । ದವ
ಲತ್ತು ಮುಳುಗಿ ಹೋಯಿತಿಂದಿಗೀಗ ।
ಬಾಪುಸಾಹೇಬ
ಬಾಬಾಸಾಹೇಬ
ಬಾಳಾಸಾಹೇಬ । ತಂದೆ
ಕುತ್ತಗಿ ಕೊಯಿದ್ಹೋಗೂದುತ್ತಮವೆ । ಹೀಂಗ
ಳುತ್ತಣ್ಣ ತಮ್ಮರಿನ್ನೆಲ್ಲಿರುವೆ । ಇಂದು
ಹೊತ್ತು ತಂದನು ಶಿವನೆನುತ್ತ ಎಲ್ಲರು ಮರು
ಗುತ್ತೆ ಸಮಾಧಿಗೆ ಮೈತ್ರಿಕೆ ತುಂಬಿ ॥ ದುಂದುಮಿ ॥

ಭೋರಿಡುವರಗಲಿದೀಗೆನುತೆ ಭಿಕ್ಷೆಗಳ
ಸೂರಿಗೊಡುತೊರಗಳ್ಣಣಗಳನು ॥
ಮುತ್ತು ರತ್ನವ ತುರಗಾನಿ ದಾನವ ನೀ
ಯುತ್ತೆ ನಡೆದರು ರಾಜಧಾನಿ ॥ ॥೫೫॥

ಅರಮನೆಯೊಳಗೆ ಬಂದು ನೆರೆದರೆಲ್ಲರು ತಾಯಿ
ಧರೆಯೊಳುರುಳ್ವುದನು ಕಾಣುತಲಿ ॥

ನಡುವಿನ ಮಗನೆನ್ನ ಹಡದಿರುವ ತಾಯಿಯೆ
ಬಡಕೋ ಬೇಡವ್ವೀಗ ತಂದೆಯರು । ಹರ
ನೊಡನೆ ಬೆರೆದು ತಾವು ಹೊಂದಿಹರು । ಚಿಂತೆ
ಬಿಡು ಪುತ್ರರಿರುವೆವು ಸುಮ್ಮನಿರು
        ಎಂದು ಶಮಿಸುತೆ
        ಶಾಂತಿಗೊಳಿಸುತೆ
        ದೊರಿ ಮರೆಸುತೆ । ಸೊಸ್ತೇರು
ಅಡಿಗಳಿಗೆರಗಿ ಅತ್ತೇ ಶೋಕವನು । ಕೂಡಿ
ಬಿಡಿಸೆ ತೊತ್ತುಗಳ ಬಾಪೂಸಾಹೇಬನು । ತಾಯಿ
ಹಡೆದವ್ವ ನೀಯೆನ್ನೊಳೊಡನೆ ರಾಜ್ಯವನಾಳಿ
ಬಿಡದೆ ಸಲಹು ಸಣ್ಣ ಹುಡುಗರನಿನ್ನು ॥ ದುಂದುಮಿ ॥

ಧರೆಯೊಳುರುಳುದನು ಕಾಣುತಲಿ ಚನ್ನವ್ವನು
ಹರಸಿದಳು ಮಗನ ದೊರೆತನವ ।
ಆಲಿರುವದು ರಾಜ್ಯ ಮುಂದ । ಸಾಧಿಸಿ
ಗಳಿಸಿಕೋ ಹಣಗಳಾನಂದ ॥ ॥೫೬॥

ಮಲ್ಲಸರ್ಜಗಧಿಕೆನಿಸಿ ಬೆಳೆಸಿದರು ದವಲತವ
ಇಳಿಯೊಳೆಣೆಯಿಲ್ಲದಿರುತಿರಲು ॥
ಕುಂಪಣಿ ಶಕವಾಗ ಗುಂಪಾಗಿ ಸಾಹೇಬರ್
ಕೆಂಪು ಮೋರಿಯವರು ಜಂಪಿನಲಿ । ರಾಜ್ಯ
ಗುಂಪುಗಳಿಸುತಾಗ ಬರವುತಲಿ । ಸ್ಥಲ
ತಂಪು ಕಾಣುತೆ ಡೇರೆ ಹೊಡೆಯುತಲಿ ।
        ಇಳಿಯಲು ದಂಡು
        ಸೋಲ್ಜರರ ಹಿಂಡು
        ಭಯವನು ಕಂಡು । ಜನ
ಕಂಪಿಸ್ಯೋಡುತ್ತವರಿಂಪು ನೋಡಿ । ರಥ
ತೋಪು ಬಂದೂಕವು ತುರಗ ಗಾಡಿ । ತಂಬು
ಸಂಪಿಲೊದಗಲು ಬಣ್ಣಿಂಪದುಡುಗೆಗಳು

ಕೆಂಪು ಕರಿದು ಭಯಂಕರದಿ ತೋರುವುದು ॥ ದುಂದುಮಿ ॥

ಇಳೆಯೊಳೆಣೆಯಿಲ್ಲದಿರುತಿರಲು ಇಂಗ್ರಜರಾಗ ।
ಬೆಳವಡಿಯ ಸ್ಥಳದಿ ಇಳಿವುತಲಿ ॥
ಎತ್ತೆತ್ತ ನೋಡಲು ಫೌಜು । ನೆರೆವುತೆ ।
ಮುತ್ತಿತು ಸರದಾರ ಬಾಜು ॥ ॥೫೭॥

ಧರ್ಮಪದ್ಧತಿವಿಡಿದು ಮರ್ಮ ತಿಳಿದಾಳುವರೂ
ಕರ್ಮವೆಳ್ಳನಿತು ತೋರದಲೆ ॥
ಜಾನ ಮಂಡಲ ಸಾಹೇಬನೆಂಬ ಸರದಾರ
ಕೂನವರಿದು ದೈವ ಪಾಲಿಸುತೆ । ರೈತ
ಜನರ ಮಾತುಗಳನ್ನು ಲಾಲಿಸುತೆ । ದುಃಖ
ವೇನು ತೋರದೆ ಸುಖ ತೋರಿಸುತೆ ।
ಸಾಧಿಸಲು ನಾಡು
ಆಳುವರು ಪಾಡು ।
ಇನ್ನಿವರ ಜೋಡು । ಕಾಣೆ
ನೇನು ಜುಲುಮಿ ದಂಡ ದ್ರೋಹಗಳು । ಇಲ್ಲ
ದನುಮತ ನಡಿಸು ವಿಸ್ತಾರಗಳು । ನೋಡಿ
ನೆನಿಸುವರ್ ಸರಕಾರ ಅನುವ ತಿಳಿದು ನಾಡ
ಜನರ್ಥರಸುತೆ ಹಿಂತಾದನು ಕಾಣೆವೆನುತ ॥ ದುಂದುಮಿ ॥

ಕರ್ಮಯೆಳ್ಳನಿತು ತೋರದಲೆ ನಡಿಸುವರು ।
ಅಮ್ಮ ರಾಣಿಯರ ಹುಕುಮಿನಲಿ ॥
ಸತ್ಯವೆಂಬುಧ ತಾವು ತಿಳಿದು । ನ್ಯಾಯದ
ಇತ್ಯರ್ಥಾಗುವದನ್ಯಾಯಳಿದು ॥ ॥೫೮॥

ಕಿತ್ತೂರಪುರದರಸು ಪುತ್ರ ಬಾಪೂಸಾಹೇಬ
ವರ್ತಮಾನವನು ತಿಳಿದಾಗ ॥
ತಟ್ಟನೆ ಕಿತ್ತೂರ ಪಟ್ಟಣ ನಿಸ್ಪತ್ತ

ರಷ್ಟು ಜನರಿಗಾಗಷ್ಟೊತ್ತಿನೊಳು । ಸುದ್ದಿ
ಮುಟ್ಟಲವರು ಪಟ್ಟದರಸಿನೊಳು । ಶರಣು
ಗೊಟ್ಟು ತುರಗ ಪಟ್ಟದಾನಿಗಳು ।
ಬಲ ಮುತ್ತಲು
ಛತ್ರಯೆತ್ತಲು
ಪಾಲಕಿ ಹತ್ತಲು । ಕೂಡಿ
ಹೋಯಿತು ಸವಳಗಟ್ಟಿಗಿಯು ಮುಂದ । ಪುರ
ಬಿಟ್ಟರರಸುಮಕ್ಕಳೆಷ್ಟು ಚೆಂದ । ಪೇಳ
ಲೆಷ್ಟು ವರ್ಣಿಸಲವರಷ್ಟೈಶ್ವರ್ಯದಿ ಬಂದು
ದಿಟ್ಟ ಸಾಹೇಬರಿದರಿಟ್ಟು ನಿಲ್ಲುತಲಿ ॥ ದುಂದುಮಿ ॥

ವರ್ತಮಾನವನು ತಿಳಿದಾಗ ಸರದಾರರು
ಪುತ್ರರನು ನೋಡಿ ಮನ್ನಿಸುತೆ ।
ಬೆಟ್ಟಿಗೊಡಲು ಹೂವಿನ ಹಾರ । ಕೊರಳೊಳು
ಮುಟ್ಟಿ ಹಾಕಲು ಮುತ್ತಿನ ಸರ ॥ ॥೫೯॥

ಕುರಿಸಿ ಮೇಜಿನ ಮಣೆಯೊಳರಸ ಪುತ್ರರನಾಗ
ಯಿರಿಸೆವರ ಮಧುರ ಮಾತಿನಲಿ ॥
ಚದುರ ಮಕ್ಕಳ ನೋಡಿ ಯಿದುರಲಿ ಸಾಹೇಬ
ಹೆದರದಿರುವದೆಂದವರಿಗೆ ಪೇಳಿ । ನೀವು
ಬೆದರದೀ ದವಲತ್ತೆಲ್ಲವನು ಆಳಿ । ನಮ್ಮ
ನದರಾಣೇಡುತಿರುತುಲ್ಹಾಸ ತಾಳಿ ।
ಎಂದು ನುಡಿವುತೆ
ಭಯ ಬಿಡಿಸುತೆ ।
ಧೈರ್ಯ ಗೊಳಿಸುತೆ । ಒಳ್ಳೇ
ಚದುರ ಸಿಪಾಯಿಗಳೊದಗಿ ಕೂಡಿ । ಆನಿ ।
ಕುದುರಿ ರಥವು ಪಲ್ಲಕ್ಕಿಗಳು ಗಾಡಿ । ಕಿತ್ತೂರ ।
ಸದರನಾಳುತೆ ಜನ ನದರಿನೊಳಿರಿಸುತೆ ।
ಮಧುರನಾಡುತೆ ದಯವೊದಗಿರುವದೆನುತೆ ॥ ದುಂದುಮಿ ॥

ಇರಿಸ್ಯವರ ಮಧುರ ಮಾತಿನಲಿ ಸರದಾರರು
ಸರಸದಲಿ ಒರೆದರಸರಿಗೆ ॥
ಒಪ್ಪಿಕೊಂಡಿರುವುದೆಂದು ಪೇಳಿ ॥ ದೊರೆಗಳ
ಗಪ್ಪಣ್ಯಾಗಲು ಬಂದರ್ ತೆರಳಿ ॥ ॥೬೦॥

ಕೇಳಿ ಕಿತ್ತೂರ ದೊರೆಗಳ್ ತಾಳಿ ಸಂತೋಷವನು
ಮೇಳೈಸಿ ಹೊರಡಲರಸುಗಳು ॥
ಬರೆಯಲ್ಹುಕುಮವೆಲ್ಲರರಿಯಲು ನಿಸ್ವತ್ತ
ಹೊರೆಯಲರಸು ರಥ ತುರಗಗಳು । ಫೌಜು
ಬೆರೆಯಲು ಡಂಕೆ ನಿಶಾನಿಗಳು । ಧ್ವನಿ
ಸುರಿಯಲಾ ಭೇರಿ ಮೃದಂಗಗಳು ।
ಪಾತ್ರವಾಡಲು
ಸೂತ್ರ ಪಿಡಿಯಲು
ನೇತ್ರ ನೋಡಲು । ಜನ
ನೆರೆಯಲಾ ಪಾಲಕಿಯೇರುತಲಿ । ದೊರಿ
ಕರೆಯಲೆಲ್ಲರು ಬಂದು ಕೂಡುತಲಿ । ದಾರಿ
ಸರಿಯಲು ಕಿತ್ತೂರು ಬರಲರಮನೆಯೊಳ
ಚ್ಚರಿಯವಾಗಲು ಭಯ ಜರೆಯಲವರಿಗೆ ॥ ದುಂದುಮಿ ॥

ಮೇಳೈಸಿ ಹೊರಡಲರಸುಗಳಾ ಪುರವನ್ನು ।
ಆಳಿರುವರಭಯಗಳ ಕೊಡುತೆ ॥
ಹದಿನಾಲ್ಕು ಕರ್ಯಾತಿ ನಾಡ । ಗಳಿಸುತೆ
ಪದಳದಿಂದಿರುವರು ಪಾಡ ॥ ॥೬೧॥

ಸಪ್ತ ವರುಷವು ರಾಜ್ಯ ಗುಪ್ತದಲಿ ಆಳಿದರು ।
ಜಾಪ್ತಿ ಕುಂಪನೀಯರ್ಹುಕುಮಿನಲಿ ।
ಪೊಡವಿಪ ಬಾಪುಸಾಹೇಬನೆಂಬನನುಜನು
ನಡುವಿನ ಮಗ ಬಾಬಾ ಸಾಹೇಬಗ । ರೋಗ
ಬಿಡದೆ ಸೇರಲು ಜ್ವರ ತಾಪವಾಗ । ಕೂಡಿ ।

ಬಡವಾಗಲಾದೇಹ ಮೃಡನೊಳಗ ।
ಕೂಡಿ ಬೆರೆದನು
ತಾಯಿ ಮರೆದನು
ಮುಕ್ತಿಯರಿದನು । ತಮ್ಮ
ಮಡಿದನೆಂಬುತೆ ತಾಯಿಯೊಡಗೂಡುತೆ । ದುಃಖ
ಕಡಲೊಳುರುಳಿ – ಬಿದ್ದು ತೇಲ್ಯಾಡುತೆ । ಚಿಂತಿ
ಬಡುತಿರುತಿರಲು ಬಾಳಾಸಾಹೇಬನು ಶಿವ
ನೊಡನೆ ಕೂಡಲು ಚನ್ನವ್ವನೊಡಲ ಪುತ್ರನು । ದುಂದುಮಿ ॥

ಜಾಪ್ತಿಕುಂಪಣಿಯರ್‍ಹುಕುಮಿನಲಿ ನಡೆಯುವ ಮಗನ
ಅಪ್ಪಿದಳು ತಾಯಿ ಬಳಲುತಲಿ ॥
ಮುದ್ದು ಕೊಡುತೆ ಎನ್ನ ಪುತ್ರಾ । ಅಗಲಿದೆಯೆಂ
ದೆದ್ದು ಬೀಳ್ವಳು ಮುಚ್ಚಿ ನೇತ್ರಾ ॥ ॥೬॥

ಹಿಂಡು ಮಂದಿಯೊಳ್ ನಾನು ರಂಡಿತನವನು ತೆಗೆದೆ ।
ಗಂಡನಿದಿರಿನೊಳು ಮಡಿಯದಲೆ ।
ಮಗನೆ ನಿನ್ನಗಲಿ ನಾ ನಗೆಗೇಡಾಗಿರಲಾರೆ
ಜಗದೊಳು ನಿನ್ನಂತ ಸುಗುಣರಾರು ? । ಕಾಣೆ
ಮಿಗಿಲುಳ್ಳ ನಗಿಮುಖ ಸೊಗಸುದೋರು । ಹೊಟ್ಟಿ
ಬಿಗಿದುದಿಸಿರದೆ ನೀ ಪೋಗುವರೇ ? ।
ಇಚ್ಚೇ ತೀರಿತು
ಎಚ್ಚರ್‍ಹಾರಿತು
ಕಿಚ್ಚು ಸುರವೀತು । ಒಡಲೊಳ್
ಹಗಲಿರುಳ್ ತಗಬಗಿಗೊಳಿಸಿರಲ್ಯೋ ಅಗ್ನಿ
ಬಿಗಿದು । ದುಮುಕಿಸ್ಯದರೊಳು ಬೀಳಲ್ಯೋ । ಜೀವ
ಗಗನಕ್ಹಾರುವದ್ಯಾವ ಬಗೆ ಮಾಡಲೆನುತಾಗ
ಸುಗುಣಿ ಚೆನ್ನವ್ವನು ಮಗನನಪ್ಪಿದಳು ॥ ದುಂದುಮಿ ॥

ಗಂಡನಿದಿರಿನೊಳು ಮಡಿಯದಲೆ ಉಳಿದಿಲ್ಲಿ ॥

ಭಂಡಾದೆ ಸರಿಯ ಸತಿಯರೊಳು ॥
ಕಣ್ಣೀರುದುರಿಸ್ಯಳುತಾಗ । ಮಗನನ್ನು
ಮಣ್ಣೊಳು ಮರೆಮಾಡ್ಯಾಳಾಗ ॥ ॥೬೩॥

ಬಾಪುಸಾಹೇಬ ತಾಯಿ ತಾಪ ಬಿಡಿಸುತೆ ಮನೆಯೊಳ್
ಚೋಪನದಿ ಮಗನ ಮರೆವುತಲಿ ॥
ಹಡೆದವ್ವ ಚಿಂತಿಯ ಪಡುವರೆ ದವಲತ್ತು
ಒಡೆತನವಾಳಿರು ಎನ್ನ ಒಡಗೂಡುತೆ ॥ ರಾಜ್ಯ
ನಡಿಸು ಸುಖದಿ ಹರುಷವ ಪಡುತೆ । ಪ್ರೀತಿ
ಯಿಡು ನಿಸ್ವತ್ತರರೊಳು ಕೂಡಿರುತೆ ॥
ಶಾಂತಿ ತಳೆಸಿದ
ಭ್ರಾಂತಿ ಗಳಿಸಿದ
ಚಿಂತಿಯಳಿಸಿದ । ತಾಯಿ
ಅಡಗಲ್ಹಿಡಿದು ರಾಜ್ಯವಾಳಿದನು । ಮಾತು
ನಡಿಸಿಕೊಳುತ ಭಾರ ತಾಳಿದನು । ಸುಖ
ಬಿಡುತಿರುತಿರಲಾಗ ಬಾಪುಸಾಹೇಬಗೊಳ್ಳೆ
ಒಡಲೊಳು ಘನ ರೋಗವಿಡಿಯಲವನಿಗೆ ॥ ದುಂದುಮಿ ॥

ಜೋಪನದಿ ಮಗನ ಮರೆಸುತಲ್ಹಿರಿಯ ಮಗನ
ತಾಪ ನೋಡುತಲಿ ಬಳಲಿದಳು ॥
ಎರಡು ಮಕ್ಕಳು ಹೋದ ಚಿಂತಿ । ನಿನ್ನನು ನೋಡಿ
ಮರೆತಿದ್ದೆನಿದೇನಾಯ್ತು ಭ್ರಾಂತಿ ॥ ॥೬೪॥

ಕರಗಳನು ಹಿಡಿದ್ಹಿಡಿದು ಜ್ವರಗಳನು ನೋಡಿದಳು
ಸುರಗಳೆವ ಮಗನ ಮುಖವನ್ನು ॥
ತರಳರೆ ನಿಮಗ್ಹೆಂತ ದುರುಳೆರ ಸೆರಗಿಂದೆ
ನೆರಳು ಸೋಂಕಿತು ನಮ್ಮ ಬಳಗದಲಿ ಹಣೇ
ಬರಹ ಬರೆದ ಬ್ರಹ್ಮಲೋಕದಲಿ । ಮಕ್ಕ

ಳಿರಬಾರದೆಂತೆಂದು ಶೋಕದಲಿ ।
ಮಗನನಪ್ಪುತೆ ।
ದುಖ್ಖವಪ್ಪುತೆ ।
ದಿಕ್ಕು ತಪ್ಪುತೆ । ದೇಹ
ಸ್ಮರಣೆ ತಪ್ಪಲು ಜನ ನೆರೆದಿತೆಲ್ಲ । ಮುಂದೆ
ಮರಣಗತಿಯ ಚಿಹ್ನ ತೋರಿತಲ್ಲ । ಯೆಂದು
ಮರುಗಿದರ್ ನಿಸ್ವತ್ತರರಸುಮಕ್ಕಳು ಕಿತ್ತೂರ್
ದೊರೆತನವಳಿವುದೆಂದು ದೊರೆ ನೋಡ್ಯಳುವರು ॥ ದುಂದುಂಮಿ॥

ಉಸುರುಗಳೆಯುವ ಮಗನ ಮುಖವನ್ನು ನೋಡುತಲಿ
ಅರಸಿ ಚೆನ್ನವ್ವ ಹೊರಳಿದಳು ॥
ಮಗನೆ ಬಾ ಮಾರನಸುಂದ್ರ । ಮುದ್ದಿಸಿ ಮುಖ
ಹೊಗರುಳ್ಳ ಪೂರ್ಣಮಿ ಚಂದ್ರ ॥ ॥೬೫॥

ದುಃಖ ಮಾಡಲು ದೊರೆಗೆ ಬಿಕ್ಕು ಹತ್ತಿತು ಆಗ
ಮುಕ್ಕಣ್ಣ ಮುನಿದನೀ ಕಾಲದಲಿ ।
ದೊರೆ ಮಲ್ಲಸರ್ಜನ ಹಿರಿಯಮಗನು ದೇಹ
ದರುವಿಲ್ಲದ್ಹೊರಳ್ಹೊರಳಿ ಬೀಳುತಲಿ । ಜೀವ
ಶರೀರವಗಲಿ ತಾನು ಬ್ಯಾರ್ಹಾರಲು । ಪೋಗಿ
ಎರಕಿನಂದದಿ ಶಿವನೊಳು ಸೇರಲು ।
ಸ್ವರ್ಗವಾದಿತು
ಮಾರ್ಗದೊರದಿತು
ಭರ್ಗಗರಿದಿತು । ತಾಯಿ ।
ಹರದಿ ಚೆನ್ನವ್ವ ಸೊಸ್ತೆರರಸಿಯರು । ತೊತ್ತು
ನೆರೆದರಗಣಿತ ಗುಮಾಸ್ತೆಯರು । ಕೂಡಿ
ಮರುಗುತೆ ನಿಸ್ಪಾತ್ತರ್ ಬೆರಗುಬಡುತೆ ನಿಂತು ॥
ದೊರಿ ನೋಡ್ಯಳುವರ್ಯಾವ ॥ ಪರಿಮಾಡಲೆನುತೆ ॥ ದುಂದುಮಿ ॥

ಮುಕ್ಕಣ್ಣ ಮುನಿದೀ ಕಾಲದಲಿ ಚನ್ನವ್ವನು

ತೆಕ್ಕಿಸ್ಯಳುತಿರಲು ಮಗನನ್ನು ॥
ಮುಂದೆನ್ನ ಗತಿಯೇನು ಪುತ್ರ । ತಲಿಯಾ ಮೇಲೆ
ಹಿಡಿಸಲ್ಯಾರಿಗೆ ನಾನು ಛತ್ರ ॥ ॥೬೬॥

ಮಡದಿ ವೀರವ್ವನು ಒಡೆಯನಿದಿರಿನೊಳಿಂತು
ಬಡಿದಳ್ಹಗಿ ನೆಲದಿ ಉರುಳುತಲಿ ॥
ಪತಿಯೇ ಬಾಯೆನ್ನ ಸುರತಾಲಯದೊಳು ನೀನೆ
ರತಿಯೆ ಬಾ ಮಾರನಸುಂದರನೆ । ಈಸಂ
ಗತಿಯ ಬಾ ಕಳೆವರ ಚಂದಿರನೆ । ವಸು
ಮತಿ ವರಶುಭಕರ ಮಂದಿರನೆ ।
ಎನ್ನ ನಲ್ಲನೆ ।
ಗುಣ ಬಲ್ಲನೆ ।
ಎದಿ ಕಲ್ಲನೆ । ಮಾಡಿ
ಮತಿಯಿಲ್ಲೆನ್ನೆಗಲಿ ನೀ ಹರನೊಳಗೆ । ಪೋಗಿ
ಜತಿಗೂಡಿದರೆ ಮುಂದೆ ಸುರರೊಳಗೆ । ಮಾತು
ಮಥನಿಸುವರು ನಿನ್ನ ಸತಿಯನಗಲಿದರ್‍ಯಾವ
ಗತಿಯಹುದೆನುತ್ಹಿಂಡಿನ ಪಥವ ಹಿಡಿಸುವರು ॥ ದುಂದುಮಿ ॥

ಬಡಿದ್ಹಳಣಿ ನೆಲದಿ ಉರುಳುತಲಿ ವೀರವ್ವನು
ಸುಡಲೆಂದಳೆನ್ನ ಜನ್ಮವನು ।
ಬರಬಾರದ್ಹೆಣ್ಣಾಗಿ ಹುಟ್ಟಿ । ಪತಿ ನಿನ್ನ
ವಿರಹದಿಂದುರಿದೀತು ಹೊಟ್ಟಿ ॥ ॥೬೭॥

ಕಿತ್ತೂರಪುರಕಿನ್ನು ಮತ್ತ್ಯಾರು ದೊರೆಯಾಗಿ
ಚಿತ್ರದ ಮಾಲಿನೊಳು ಕುಳಿತು
ಒರೆಯಲಿನ್ನೇನು ನಾ ಸರಿಗಿ ಚಿಂತಾಕ ಮುತ್ತು
ಮೆರೆವ ರ್‍ಯಾಗುಟಿ ಚೌರಿ ತಲೆಯೊಳಗೆ । ನೆಲ್ಲೀ
ಸರ ಮುತ್ತಳಿಯ ಮಾಲಿ ಕೊರಳೊಳಗೆ । ಹಾರ

ವರರತ್ನ ಖಚಿತುಂಗ್ರ ಬೆರಳೊಳಗೆ ।
ಬಂಗಾರ ಬಳಿಗಳು
ಶೃಂಗಾರ ಮಣಿಗಳು
ದ್ರವ್ಯಖಣಿಗಳು । ಹರಿ
ದ್ಧರಿದೊಗೆವುತೆ ಗಂಡಗೆರಗಿದಳು । ನಿನ್ನ
ಸರಿದೊರೆಯಾರೆಂದು ಕರಗಿದಳು । ಇನ್ನಾವ
ಪರಿಯ ಮಾಡಲಿ ಮುಂದೆ ಕೆರಿಬಾಂವಿ ಮುಳುಗಿ । ಆ
ಲ್ಲಿರುವ ಜೀವಪ್ರಾಣಿಗಾಹುತಿಯಾಗಲ್ಯಾ ಎನುತೆ । ದುಂದುಮಿ ॥

ಚಿತ್ರದ ಮಾಲಿನೊಳು ಕುಳಿತು ಆಳುವರು
ಗೊತ್ತಿಲ್ಲದಾಯ್ತೀ । ನಗರದೊಳು
ಅನಿಕುದರಿ ರಥ ದಂಡು । ಪಾಲಕಿ
ಕೂನಿಲ್ಲದಾಗದು ಬಂಡು ॥ ॥೭೮॥

ಎಷ್ಟು ವರ್ಣಿಸಲಿ ನಾ ಅಷ್ಟೈಶ್ವರ್ಯವನೀಗ ।
ಬಿಟ್ಟು ಹೋಗುವರರಸರೆನ್ನ ॥
ಪೇಳಲಿನ್ನೇನವ್ವ ಗೆಳತಿಗಳಿರ್ಯಾ ಪ್ರಾಣ ।
ವುಳಿಯದೆನ್ನಯ ಕಾಂತನಗಲಲಾರೆ । ದೊರೆಯ
ಸುಳವುಗಾಣದೆ ಎಲ್ಲಿ ಬಾಳಲಾರೆ । ಚಂದ್ರ
ಕಳೆಯುಳ್ಳ ರಾಜನ ನೋಡಲಾರೆ ॥
ವ್ಯಾಳ್ಯೆಗಳೆವುದು ।
ಗಳಿಗುಳಿಯದು ।
ಪ್ರಾಣವಳಿವುದು । ಇಲ್ಲಿ
ಬಳಿಯೊಳೆಲ್ಲರು ಬಂದು ಕೂಡಿರೆವ್ವ । ಎನ್ನ ।
ಕುಳಿಯೊಳ್ದೂಳಿಸಿ ಪೋಗಿ ಬಾಳಿರೆವ್ವ । ಇಳೆ
ಯಾಳುವ ರಾಜರನಳಿದುಳಿದರೆ ನನ್ನ
ಬಾಳ್ವೆಗೆ ಅಧಿಕಾರಿಗಳಾಗ್ಯಾಳ್ವರಾರೆನುತ ॥ ದುಂದುಮಿ ॥

ಬಿಟ್ಟು ಹೋಗುವರರಸಯೆನ್ನ ಕಿತ್ತೂರ ।

ಪಟ್ಟಣದ ಪತಿಯೆಂದಳಿಲಿದಳು ॥
ಕರಿಮಣಿ ಕಾಜಿನ ಬಳಿಯ । ಒಡಿವುತೆ
ಸರದಾಳಿ ಪದಕಗಳ್ಹರಿಯೆ ॥ ॥೧೯॥

ಬಾಪುಸಾಹೇಬನ ರೂಪಡಗೆ ಭೂಮಿಯೊಳು
ತಾಪಡರಿ ದುಃಖ ಬಳಗದೊಳು
ಸುಂದರರಾದ ಮೂರ್ ಮಂದಿ ಮಕ್ಕಳು ಪೋದ
ರೆಂದು ಚಿಂತಿಸಿ ಬಂಧು ಬಳಗವೆಲ್ಲ । ಅತಿಶೋಕ
ಬಂದು ಸೊಸ್ತೇರ ನಮಿಸಿರುವಳಲ್ಲ ।
ಕಂದು ಗೊರಳನಾದ ಶಿವನೆ ಬಲ್ಲ ।
ದಿವಾನರು ಬಂದು
ನಿಸ್ವತ್ತರರಂದು ।
ದಪ್ತರ್ದಾರ ತಂದು । ಲೆಕ್ಕ
ಹೊಂದಿಸಿದರು ಬೆಳ್ಳಿ ಬಂಗಾರವ । ಫೌಜು
ಬಂದೂಕ ತುರಗಾನಿ ಶೃಂಗಾರವ । ಚಂದಾ
ಚಂದ ಜೀನಸುಗಳ ಹೊಂದಿಸಿಡುತೆ ಅರ
ಮಂದಿರದೊಳಗೆ ಕಿಷ್ಕಿಂಧದಿ ಜನರು ॥ ದುಂದುಮಿ ॥

ತಾಪಡರಿ ದುಃಖ ಬಳಗದೊಳು ನಮಿಸುತಲಿ
ಭೂಪತಿಯಳೆನುತೆ ನಮಿಸಿದರು ॥
ಮಾರ್ಬಲ ಚತುರಂಗ ಬರಲು ಚನ್ನವ್ವನು
ಕಾರ್ಬಾರಗಳ ಮಾಡುತಿರಲು ॥ ॥೨೦॥

ಎಲ್ಲ ಜನಗೊಲಿಸುತಲಿ ಬಲ್ಲಿದಳು ದವಲತವ
ನಿಲ್ಲದಾಳಿದಳು ನೀತಿಯಲಿ ॥
ವಸುಧಿಯೊಳಗೆ ಮಿಗಿಲೆಸೆವುತಾಳಲು ರಾಜ್ಯ
ರಸಿಕಳೆಂದೆನಿಸುತೆ ಪಸರಿಸಲು । ಅತ್ತಿ
ಸೊಸೆಗೆ ಬೇಸರದಿ ಕದನ ಬರಲು । ಮುಂದೆ
ಎಸಗಲ್ಯೋರವು ನಿಸ್ವತ್ತರು ಕೇಳಲು
ಅತ್ತಿ ಒಲವನು

ಮತ್ತೆ ಕಲಹನು ।
ಎತ್ತಿ ಛಲವನು । ಮಾಡಿ
ಮಸಲತ್ತೆಸಗಿ ಜನ ಸೊಸಿ ಕಡಿಗೆ । ನೆರೆ
ದುಸುರಿ ವಂದಿಸಿ ಮುಖ ಹಸಿತರಾಗಿ । ಮೊಕ
ದೆಸೆಯುಳ್ಳವರ ಕೂಡಿ ಹಸಗೆಡಿಸುತೆ ಅತ್ತಿ
ಸೊಸಿದೆರ । ಗಲವುದ್ಯೋಗಿಸಿದರಾಕ್ಷಣದಿ ॥ ದುಂದುಮಿ ॥

ನಿಲ್ಲದಾಳಿದಳು ನೀತಿಯಲಿ ಚನ್ನವ್ವನು ।
ಎಲ್ಲರನು ಕರೆಸಿ ಪೇಳಿದಳು ॥
ಚಂದಾಗಿರುವ ದವಲತ್ತು । ಕೊರತೆಯ
ಹೊಂದುವದೀ ಮಸಲತ್ತು ॥ ॥೭೧॥

ಪುಣ್ಯ ತೀರಿದ ಮ್ಯಾಲೆ ತಣ್ಣಗಿರದಲೆ ಲೋಕ
ದಣ್ಣಗಳು ಕೂಡಿ ಮಾಡಿದರು ॥
ಮಕ್ಕಳೆಲ್ಲರು ಹೋದ ಪಕ್ಕಾ ಸುದ್ದಿಯ ತಿಳಿ ।
ದಕ್ಕರದಲಿ ಬಂದು ಕೂಡಿದರು । ಕಿತ್ತೂರ್
ಬೊಕ್ಕಸದೊಳು ದ್ರವ್ಯ ನೋಡಿದರು । ಇಷ್ಟು
ದಕ್ಕಿಸಿಕೊಳ್ಳುವ ಮಾತನಾಡಿದರು ॥
ಕುಂಪಣಿಯರಾಗ
ಕೆಂಪು ಮೋರೀಗ
ಜಂಪು ತೋರ್‍ಯಾಗ । ಸರದಾರ್
ಹೊಕ್ಕಾರಾ ಕಿತ್ತೂರ ಸೀಮೆಯಲಿ । ಸೋಜ
ರಕ್ಕರದಲಿ ಬಂದು ನೆರೆವುತಲಿ । ಫೌಜು
ಲೆಕ್ಕವಿಲ್ಲದೆ ಮದ್ದು ಗುಂಡು ತೋಪವು ಕಣ್ಣ
ಕುಕ್ಕುವ ಕರವೂಲಿ ಬಂದೂಕದವರು ॥ ದುಂದುಮಿ ॥

ಅಣ್ಣಗಳ ಕೂಡಿ ಮಾಡಿದರು ಸಾಹೇಬರು ।
ಬಣ್ಣಿಸುತ ಫಿತೂರ ನಡಿಸುತಲಿ ॥

ಮುನಿಸಿ ದಪ್ತರ ಗುಮಾಸ್ತೆಯರು ॥ ಬರೆ ಬರೆ
ದನಿತಾನ್ಹುಕುಮ ನಡಿಸುವರು ॥ ॥೭॥

ಕುರಿಸಿ ಮೇಜಿನ ಮಣಿಯೊಳ್ ಸರಸದಲಿ ಸರದಾರರು
ತರತರದಿ ಬರೆವ ಹುಕುಮುಗಳು ॥
ಒರೆದರಾ ಕಿತ್ತೂರಪುರದ ಕಾರ್ಕುನರನ್ನು
ಕರೆದು ಪೇಳಿದರ್ ನಿಮ್ಮ ದೊರೆಸಾನಿಗೆ । ಪೇಳಿ
ರರಸುತನವಾಳಿರುವದೆಂದಾಕೆಗೆ । ದ್ರವ್ಯ
ಸುರಿಸಿ ಚಾಕರರಾಗಿರುವೆ ನಾವೀಗ ।
ತಾನು ಸ್ವಸ್ಥಾಗಿ
ರಾಜ್ಯ ಸಿಸ್ತಾಗಿ
ಆಳಿ ಗೋತ್ತಾಗಿ । ಇದ್ದ
ರರಸಿ ಚೆನ್ನವ್ವಗ ನಡಿಸುವೆವು । ತನ್ನ
ಕಾರಬಾರದಿ ಸುಖಬಡಿಸುವೆವು । ಯೆಂದು
ಒರೆದ ಮಾತನು ಕೇಳಿ ಕಾರಕೂನನು ಪೋಗಿ
ಅರಸಿ ಚೆನ್ನವ್ವಗ ಅರುಹಿದನೀ ನುಡಿಯ ॥ ದುಂದುಮಿ ॥

ತರತರದಿ ಬರೆವ ಹುಕುಮುಗಳ ನೋಡಿದೆನು
ದೊರೆಯಳ್ಹಿಂತ ಸರಕಾರರಿಯೆಂದು ॥
ಇಂಗ್ರಜರು ಸಾಧಿಸಿಕೊಳುತ । ರಾಜ್ಯವ
ಸಂಗ್ರಹಿಸಿದರು ಲೋಕದ್ದೋರತ ॥ ॥೭೩॥

ಕರಿಸಿದಳು ನಿಸ್ವತ್ತ ದೊರೆಮಕ್ಕಳೆಂಬವರಿ ।
ಗೊರೆದಳಿಂಗ್ರಜರ ಪರಿಯನ್ನ ॥
ನೆರೆದರು ಸಿಲೇದಾರ್ರು ವರಮಿತ್ರ ನಿಸ್ವತ್ತ
ದೊರಿನಾಯಕರು ದಪ್ತರ್ ಮುನಸಿಯರು । ಅವರಾದಿ
ವೀರಪ್ಪ ಸರದಾರ ಮನೆಯವರು । ದಳ
ನೆರೆಯಲು ಸವಳಗಟ್ಟಿಗಿಯವರು ।
ಕೂಡಿ ನೆರೆಯಲು

ಚೆನ್ನವ್ವರಿಯಲು
ಸರ್ವರರಿಯಲು । ಇಂಗ್ರ
ಜರ ಮಾತು ಮನಸಿನೊಳ್ ತಾರದಲೆ । ಪರಿ
ಪರಿಯಿಂದ್ಹೇಳಿದುದೆಲ್ಲ ಸೇರದಲೆ । ಕೂಡಿ
ಬರೆದರವರಿಗಿಲ್ಲಿ ಬರಬಾರದೆನುತ್ಹಿಂಗ
ತಿರುಗಿ ಪೋಗ್ವುದು ನೀವಿನ್ನಿರದೀ ಸೀಮೆಯೊಳು ॥ ದುಂದುಮಿ ॥

ಒರೆದ ಇಂಗ್ರಜರ ಪರಿಯನ್ನು ನಾಡೊಳಗೆ
ತರವಲ್ಲೆಂದುತ್ತ, ಕಳವಿದರು ।
ಥಾವಣಿ ತಗೀರೆಂದು ಉತ್ರಾ । ಪೇಳುತಲೋರ್ವ
ಹವಣಿಸಿ ಕೊಡಲಾಗ ಪತ್ರಾ ॥ ॥೭೪॥

ಆ ಪತ್ರ ನೋಡುತಲಿ ತಾಪಡರಿ ಸರದಾರರು
ಕೋಪದಲಿ ಸೋಜರನು ಕರೆದು ॥
ಬಂದರಾ ಪುರ ಸುತ್ತ ಬಂದೂಕ ತೋಪಿನ
ಮಂದಿ ಸಾಹೇಬ ಜನ ಹೊಂದಿದರು । ಹಿಂದೆ
ಮುಂದೆ ಬಾರಿನ ಜನ ತಂದಿಹರು । ಈ ಬಾ
ಜೆಂದು ತೋಪುಗಳ್ಹೂಡಿ ನಿಂದಿಹರು ।
ಕಿಲೆದ್ಹಿಂದ್ಹಿಂದ ।
ಫೌಜು ಬಂದ ಬಂದ ।
ಬಲು ಚಂದ ಚಂದ । ಸೋಜ
ರ್ಹೊಂದಿ ತೋಪಿನ ಗಾಡಿ ಸರಳಮಾಡಲು । ನೋಡಿ
ಬಂದೂಕದೊಳು ನೀಟ ಬೆರಳ ತೀಡಲು । ತಂಬು
ದುಂದುಭಿ ಭೇರಿ ಭೋರೆಂದ ಧ್ವನಿಯು ಅರ ॥
ಮಂದಿರದೊಳು ಜನ ಬಂದು ಕೂಡಿದರು ॥ ದುಂದುಮಿ ॥

ಕೋಪದಲಿ ಸೋಜರನು ಕರೆದು ಪೇಳಿದರು
ಕಪಟ ರೀತಿಯನು ತಿಳಿವುತಲಿ ॥
ಕಿತ್ತೂರ ಗಡಿ ಕಿಲ್ಲೆದೊಳಗೆ । ಬಂದು ಬಂದು
ಮುತ್ತಿತು ದಳ ಭಟರೊಳಗೆ ॥ ॥೭೫॥

ಆಳವಾರಿಯ ಮ್ಯಾಲೆ ಬಾಳ ತೋಪುಗಳ್ಹೇರಿ
ಸಾಲ್ವಿಡಿದು ಬಂದುಕದ ಜನರು ॥
ತಂಡ ತಂಡದಿ ಮದ್ದು ಗುಂಡು ರೋಹಿಲಿ ಗಾಡಿ
ಪೆಂಡಾರಿ ರಾಹುತ ಜನಗಳಾಗ । ತೋಪು
ಗುಂಡು ಬಂದೂಕ ಪಿಸ್ತೂಲೆದೆಯೊಳಗ । ಹೇರಿ
ಕೊಂಡು ನಿಂತಿಹರಾಗ ಭಟರೊಳಗ ।
ಕೋರಿ ಮೀಸಿಯು
ರಣಕೇಸಿಯು ।
ಸುರಗಿ ರಾಶಿಯು । ಹಿಡ
ಕೊಂಡು ಭಯದಿ ಹಿಂಡುಗಟ್ಟುತಲಿ । ಯುದ್ಧ
ಝುಂಡೆ ಪರಾರಿಗಳ ಕಟ್ಟುತಲಿ । ಕುಂಪಣಿ
ಕೆಂಡದಂತವರಿದ ಕಂಡು ಇವರು ಎಂಥಾ
ಪುಂಡರೆನುತೆ ತಮ್ಮ ದಂಡುಯೆಬ್ಬಿಸುತೆ ॥ ದುಂದುಮಿ ॥

ಸಾಲ್ವಿಡಿದು ಬಂದೂಕದ ಜನರ ನಿಲ್ಲಿಸುತೆ
ಕಾಲು ಮುಂದಿಡುತೆ ಹೊಡೆವುತಲಿ ॥
ಮದ್ದಿನ ಹೋಗಿ ಮುಸುಕುತಲಿ । ಕೆಮ್ಮಣ್ಣ ಮಡ್ಡಿ
ಜಿದ್ದಿನವರೋಡಿದರು ಬಳಲಿ ॥ ॥೭೬॥

ಗಡದ ಮ್ಯಾಲ್ಹೋಗಿ ತಮ್ಮೊಡೆಯಳಪ್ಪಣಿಗೊಂಡು
ತಡೆಯದಲೆ ಗುಂಡು ಹೊಡೆವುತಲಿ ॥
ತರತರದಲಿ ಕುಂಪಣಿ ಸರದಾರ ಸೋಜರು
ಸರಿಯದೆ ಕರವೂಲಿ ಒರೆಗಳನು । ಕೈಲೆ ।
ಹಿರಿಹಿರಿದೊಗಿ ತೋಪು ತರಗಳನು । ಮಾಡಿ
ಸರರೆಂಬಧ್ವನಿಗೂಡಿ ಶರಗಳನು ।
ಬಾರ ಬಿಡುವರು
ಯೇರಿ ಕಡಿವರು
ಮುಂದೆ ನಡೆವರು । ನೋಡಿ

ಕರಕರ್ಥಲ್ಲುಗಳ್ ಮಸಿದ್ದೊಡಿವುತಲಿ । ತೋಪು
ತಿರುತಿರುವುತೆ ಮದ್ದು ಜಡಿಯುತಲಿ । ಪರಿ
ಪರಿಯಿಂದ ತೋಪ್ಹಾರಲ್ ಸುರಿದವು ಗುಂಡುಗಳ್
ಅರಮನೆ ಪರಿವಾರ ಬೆರಗಾಗುವಂತೆ ॥ ದುಂದುಮಿ ॥

ತಡೆಯದಲೆ ಗುಂಡು ಹೊಡಿವುತಲಿ ಒಳಗಿರುವ ।
ಗಡ ಕಿಲ್ಲೆ ಜನರು ನಡುಗುತಲಿ ॥
ಚಂಡನಾಡಿನ ಪರಿಯಂತೆ । ತೋಪಿನ
ಗುಂಡುಗಳು ಬರುತಿಹವಂತೆ ॥ ॥೭೭॥

ಬುರುಜು ಮ್ಯಾಲಾಳವಾರಿಯ ಸುತ್ತ ತೋಪುಗಳು ।
ಹಾರಿದವು ಇಂಗ್ರಜರ ಬಲವ ॥
ಸಿಕ್ಕಿತು ಎಡಬಲ ದಿಕ್ಕಿಲ್ಲ ಸರದಾರು
ಲೆಕ್ಕಿಲ್ಲ ಸೋಜರ ಮಡಿಯುತಲಿ । ಮತ್ತು
ಚೊಕ್ಕ ತೋಪಿನ ಗುಂಡು ಬರವುತಲಿ । ಸೋಜರ
ಬಿಕ್ಕು ಬಿಕ್ಕುತೆ ಪ್ರಾಣ ಬಿಡುವುತಲಿ ॥
ಗಾಬರಿಗೊಂಡು
ಮುಳುಗಿತು ದಂಡು
ಸರದಾರ ಹಿಂಡು । ನೆಲ
ಕಕ್ಕುತೆ ಬೀಳಲು ರಣದೊಳಗೆ । ಹದ್ದು
ಹಕ್ಕಿಯಾಡಲು ಕುಂಪಣಿ ಹೆಣದೊಳಗೆ । ಈ ಕಾ
ಲಕ್ಕೆದೆಯೊಳು ಗುಂಡು ಪೊಕ್ಕುಳಿಯದೆ ರಕ್ತ
ಕಿಕ್ಕಿರಿವುತೆ ಸುರಿವುತ್ತಿರೆ ಧರೆಗೆ ॥ ದುಂದುಮಿ ॥

ಹಾರಿದವು ಇಂಗ್ರಜರ ಬಲವ ಮುರಿದಾಗ
ಕಾರಿದರು ರಣದೊಳುಳಿಯದಲೆ ॥
ಮುಂಬಾಯಿಯೊಳು ಸುದ್ದಿ ತಿಳಿದು । ಫೌಜಿಗೆ
ತಂಬು ಮಾಡಲು ಕೋಪ ತಳೆದು ॥ ॥೭೮॥

ಗಳಿಗೆ ತಡೆಯದೆ ಬಂದು ಬೆಳಗಾವಿಗಿಳಿವುತಲಿ ।
ತಳಬೇತು ತರಿಸಿ ನಡಿವುತಲಿ ॥
ಎತ್ತ ನೋಡಲು ದಾರಿ ಸುತ್ತ ಮುಚ್ಚಲು ದಳ
ಒತ್ತರ ಬರುವ ಮದ್ದು ಗುಂಡುಗಳು । ಹೋಗಿ
ಕಿತ್ತೂರ ಸೀಮೆಗೆ ದಂಡುಗಳು । ಇಳಿ
ವುತ್ತೇರಿಸಲು ರಣಝುಂಡೆಗಳು ॥
ಡೇರೆ ಹೊಡೆಯಲು ।
ಪಾರೆ ಮಾಡಲು
ದಳ ಕೂಡಲು । ಕಿಲೇದ
ಸುತ್ತ ಸೋಜರು ಬಂದು ಮುತ್ತುತಲಿ । ಹೊಡೆ
ಯುತ್ತ ತೋಪುಗಳ್ಹೂಡಿ ಒತ್ತುತಲಿ । ಗಾಡಿ
ಯೆತ್ತೆತ್ತಿ ಕಡಿಯಲು ಕತ್ತಿಯಿಟಿಗಳಿಂದೆ
ಕೊತ್ತಲುದರಿ ತೋಪಿನೊತ್ತರವಾಗಿ ॥ ದುಂದುಮಿ ॥

ತಳಬೇತು ತರಿಸಿ ನಡೆವುತಲಿ ಅರಮನೆಯ ।
ಒಳಗೆ ಪಿತೂರಿಗಳ ನಡಿಸುತಲಿ ॥
ಏರೇರಿ ಹೊಡೆಯಲು ತೋಪು । ಪಟಾಲಂಬು
ಭಾರ ಮಾಡಲು ಒಂದೇ ಕೇಪು ॥ ॥೭॥

ಸಿಡಿಲೆರಗಿದಂತೊಳಗೆ ಬಡಿಯಲದ ಕಾಣುತಲಿ
ಜಡಿದರಿಂಗ್ರಜರು ಬಲವೇರಿ ।
ಅರಮನೆಯೊಳು ಗುಂಡು ಸುರಿಯಲು ಜನ ಬಾಯಿ
ತೆರೆದು ನೆಲದೊಳಾಗ ವುರುಳುತಲಿ । ಹೊಟ್ಟಿ
ಕರುಳುದೆಗೆಯಲಾಗ ನೆರಳುತಲಿ । ದಳ
ಹುರಪಳಿಸಲು ಬಿದ್ದು ಒರಲುತಲಿ ।
ದಂಡು ಮುರಿಯಲು
ಬಂಡು ಆಗಲು
ಕಂಡು ಓಡಲು । ಸೋಜ

ರೇರಿ ಬರಲು ಅರಮನೆಯೊಳಗೆ । ಕಂಡು
ಸರದಾರ್ಥಿಂದಕೆ ಸರಿಸಿದರೊಳಗೆ । ಇದ್ದ
ಅರಿಸಿ ಚೆನ್ನವ್ವ ಸೊಸ್ತೇರ ಕರೆದೊರೆದರಾ ।
ಹಿರಿ ಸರೆದಾರ ದಿರಿಯೆಂದು ಪೇಳಿ ॥ ದುಂದುಮಿ ॥

ಜಡಿದರಿಂಗ್ರಜರು ಬಲವೇರಿಸಿದರೆಂದು
ಒಡಿಯಳೇ ಭಯವ ಪಿಡಿಯುವರೆ ॥
ಪರಿಪರಿಯಿಂದೆ ಸಾಹೇಬರು । ಚೆನ್ನವ್ವಗ
ಒರೆ ಒರೆವುತ ಸಮಿಸಿದರು ॥ ॥೮೦॥

ಹೆದರದಿರಿ ಕದನ ನಡಿಸಿದೆವೆಂದು ಸರದಾರರು
ಮಧುರದಲಿ ಒರೆದರವರಿಗೆ ॥
ಅರಮನೆಯೊಳಗಿರುವ ಸರಮುತ್ತು ಚಿಂತಾಕ
ಭರಣದ ದ್ರವ್ಯದ ಹಣಗಳನು । ರತ್ನ
ತರತರದಲಿ ತೆತ್ತಿ ಸೊರಗಳನು । ಪೀತಾಂ
ಬರ ಜರತರ ಉಡುಗರೆಗಳನು
ಹರಳಿನುಂಗುರ ।
ಚೆಲ್ವ ಬಂಗಾರ ।
ಒಳ್ಳೇ ಶ್ರೀಂಗಾರ । ವಾದ
ತುರಗಾನಿ ಬುರಕಿ ಪಲ್ಲಕ್ಕಿಗಳು । ವಾಲೀ
ಕಾರ ಶಿಪಾಯ್ಗಳು ಕುಂಪಣಿ ಬಾರಗಳು । ಪರಿ
ಪರಿ ಸರಂಜಾಮಕೊಟ್ಟು ಹೊರಡಿಸಿದರು ಹೊಂಗ
ಲರಮನೆಯೊಳಿರುಯೆಂದು ಸರಸದಿ ಪೇಳಿ ॥ ದುಂದುಮಿ ॥

ಮದುರದಲಿ ಒರೆದರವರಿಗೆ ಸರದಾರರು
ಬರುವರದ ಕೇಳಿ ಹೊಂಗಲದಿ
ಅತ್ತಿ ಸೊಸಿಯರಾಗ ಬಂದು । ಮನೆಯೊಳು
ಜತ್ತಿಲಿರುವರು ದುಃಖದಿಂದ ॥ ॥೮೧॥

ಕಿತ್ತೂರರಮನಿ ಬದುಕು ಮುತ್ತಿ ಹೇರಿದರಾಗ ।
ಒತ್ತರಲಿ ಬೆಳಗಾಂವಿಯ ಸ್ಥಳಕ ॥
ಒರೆಯಲಿನ್ನೆಷ್ಟು ನಾ ದೊರಿ ಮಲ್ಲೇಂದ್ರನ ದ್ರವ್ಯ
ಸರಿಯಿಲ್ಲೀತನ ಸಂಪತ್ತರಸರೊಳು । ಜಮ
ದರಖಾನಿ ವರಹಣ ಮೊಹರುಗಳು । ಮುತ್ತು
ಸರವಜ್ರ ರತ್ನದ ಹಾರಗಳು ।
ನಾರಿಯರ ವಸ್ತ
ಇರುವವು ಮಸ್ತ
ದೊರಿದವು ಸಿಸ್ತ । ತರ
ತರ ಹೊಂದಿಸಿರುವ ಬಂಗಾರ ಗಟ್ಟಿಗಳು । ಮುತ್ತು
ಸರಗೊಳಿಸಿರುವ ಚಿಂತಾಪಟ್ಟಿಗಳು । ನೆಲ್ಲೀ
ಸರ ಪುತ್ಥಳಿಯ ಬಂಗಾರ ಬಳಿ ವಂಕಿ ಬಾಜುಬಂ
ದ್ಧರಡೆ ಸರಿಗಿ ತೋಡೆ ವರ ಪದಕಗಳು । ದುಂದುಮಿ ॥

ಒತ್ತರದಿ ಬೆಳಗಾಂವಿಯ ಸ್ಥಳಕ ದೊರಿಗಳ್ ಸಂ
ಪತ್ತುಳಿಯದ್ಧೇರಿ ಕಳುವಿದರು ॥
ತುರಗಾನಿ ಒಂಟಿ ಗಾಡಿಗಳು । ತುಂಬಲು ಮತ್ತೆ
ತೀರದುಳಿದವು ಸಾಮಾನು ॥ ॥೮೨॥

ಇಂಗ್ರಜರೀ ಸಂಪತ್ತು ತಿಂಗಳದಿ ಒಯ್ದಾರು
ಶ್ರೀಂಗರದ ಜಿನಸುಗಳನ್ನು ॥
ಸೀರಿಗಳ್ ಜರತಾರಿ ಸರ ಹೂವು ಸ್ಯಾವಂತಿ
ಸುರತಿ ಹಳದಿ ಕೆಂಪು ಹಮರುಗಳು । ರೇಸ್ಮಿ
ಕಿರಿಮಂಜಿ ಕುತನಿ ಅಂಬೂರಿಗಳು । ಭರ್ಜ
ರಿರುವ ಮದರಿ ಚಾದರ ಶಾಲುಗಳು ।
ಅಂದಳಾನಿಯು
ಮಂದಿ ಮೇಣೆಯು ॥
ಚಂದ ಕುದರಿಯು । ಮೋರ್ಚಾ

ಲ್ಹಾರಿಸುವ ಭತಾಪ್ತಾಗೀರಿಗಳು । ಕಾಳಿ
ಚೀರುವ ಡಂಕೆ ನಿಶಾನಿಗಳು । ಒಳ್ಳೇ
ತಾರೀಪ ರಣಬಾಜಿ ನೌಭತ್ತು । ಡಣಲೆಂಬಿ
ಸ್ತರವೆಲ್ಲ ನುಳಿಯದ್ಧೇರಲು ಗಾಡಿಗಳನು ॥ ದುಂದುಮಿ ॥

ಶ್ರಿಂಗರದ ಜೀನಸುಗಳನ್ನು ರಥದ ತು
ರಂಗದೊಡನೊಯ್ದರ್‍ಥಗಲಿರುಳು
ರಾಶಿ ರಾಶಿ ದ್ರವ್ಯಸಾಗಿ । ಪೋಗಲು
ದೇಶ ದೇಶವು ಬೆರಗಾಗಿ ॥ ॥೮೩॥

ಅರಮನೆಯೊಳಿರುವ ಬದುಕು ತೆರವು ಮಾಡುತೆ ಸೋಜ
ರರನು ಕಾವಲದ ಮಾಡುತಲಿ ॥
ಸಿಕ್ಕಿರುವ ಜನವಾಗ ಲೆಕ್ಕವಿಡಿದು ಬೇಡಿ
ಬಕ್ಕನೆ ಕಾಲಿನೊಳ್ ಹಾಕುತಲಿ। ನದ
ರಿಕ್ಕುತೆ ಪಾರ್‍ಯದೊಳ್ ತರುವುತಲಿ । ಧಾರ್‍ವಾ
ಡಕ್ಕೋಯ್ದು ಬಂದಿನೊಳಿರಿಸುತಲಿ ।
ತಿರುಗಲು ದಂಡು
ಹೊಂಗಲವ ಕಂಡು
ಸರದಿಂದ ಹಿಂಡು । ಕೂಡಿ
ದುಃಖಿಸುವ ಚೆನ್ನವ್ವಗಕ್ಕರದಿ । ಪೇಳಿ
ಸೌಖ್ಯದಿಂದಿರಿಸಿದರ್ ಮಂದಿರದಿ । ಸುತ್ತ
ಸೊಕ್ಕಿದರ್ಬರ ಕಾವಲಿಕ್ಕಿ ಕುದರಿ ಮಂದಿ
ತಕ್ಕಷ್ಟಿಡಲು ಫೌಜು ಮಿಕ್ಕಾದೊಯ್ಯುವತಲಿ ॥ ದುಂದುಮಿ ॥

ಸೋಜರರ ಕಾವಲವ ಮಾಡಿ ಕಿತ್ತೂರ
ರಾಜ್ಯವಂ ಪಾಲಿಸ್ಯಾಳುತಲಿ ॥
ತಾಲೂಕ ಮಾಲುಗಳ್ ಮಾಡಿ ಕಚೇರಿಯೊಳ್
ಮಾಲ್ಕರ್‍ಯಾರಮಲ್ದಾರರು ಕೂಡಿ ॥೮೪॥

ಹೊಂಗಲದ ಪುರದೊಳಗ ಸಂಗತಿಯತ್ತಿಯು ಸೊಸೆಯ
ರಂಗಜಾರಿಯನು ಭಜಿಸುತಲಿ ॥
ಮೂರೆರಡೊರುಷವು ಅರಮನೆಯೊಳು ಸೊಸೆ
ಯರ ಕೂಡಿ ಮನದೊಳು ಮರುಗುತಲಿ । ಪತಿ
ದೊರೆ ಮಲ್ಲಸರ್ಜನ ನೆನೆಯುತಲಿ । ಕಿತ್ತೂ
ರರಮನಿ ದವಲತ್ತುಗಳಿವುತಲಿ ।
ದುಖ್ಖಿಸಿರುವುತೆ ।
ಮಕ್ಕಳ ಮರೆವುತೆ ।
ಲೆಕ್ಕಿಸಳವುತೆ । ಇಷ್ಟು
ಮರುಗ ನೋಡಲು ರಾಯಣ್ಣೆಂಬವನು । ತಾಯಿ ।
ಚರಣಕೆರಗಿ ಹಲ್ಲು ತಿಂಬುವನು । ಕುಂಪಣಿ
ಸರದಾರೆಲ್ಲರ ಶಿರ ಕೊರೆಯದಿರ್ದರೆ ನಾನು
ಕುರುಬನಲ್ಲೆನುತಾಗ ಹಿರಿದ ಖಡ್ಗವನು ॥ ದುಂದುಮಿ ॥

ಅಂಗಜಾರಿಯನು ಭಜಿಸುತಲಿ ನಡೆದಾನು
ಕಂಗಳಲಿ ಕಿಡಿಗಳುದುರಿಸುತೆ ॥
ಉಪ್ಪುಂಡಿವರನಿನ್ನು ನೋಡಿ । ಇರಬೇಕಂ
ದಪ್ಪನೆದೆಯ ಬಡಿದಾಡಿ ॥ ॥೮೫॥

ಮಂದಿ ಕೂಡಿಸಿ ಜನರ ಹೊಂದುಗೂಡುತೆ ನಡೆದ
ದಂದಲವ ನಡಿಸಿ ಲೋಕದೊಳು ॥
ಎಡಬಲ ನೋಡುತೆ ನಡೆದ ಕಿತ್ತೂರಪುರ
ದೊಡೆಯನಡಿಗಳನ್ನು ಸ್ತುತಿಮಾಡುತೆ । ನಂದ
ಗಡ ಖಾನಾಪುರದಿ ದಳವು ಕೂಡುತೆ । ಅವ
ರೊಡಗೂಡಿ ವೂರುಗಳನು ಸುಡುತೆ ।
ಗಡಬಡಿಸುತೆ
ನಾಡ ನಡುಗುತೆ ।
ಕೇಡ ಮಾಡುತೆ । ಹೊಂಟ
ರಡವಿವೂರೊಳು ಮಂದಿ ಕಡಿವುತಲಿ । ಬಂದೂ

ಕಡರಿಸೆದೆಯೊಳ್ ಮದ್ದು ಜಡಿವುತಲಿ। ನಿಂತು
ಹೊಡೆಯಲೊಡಲ ರಕ್ತ ಸಡಲಿ ನೆಲದಿ ಬಿದ್ದು
ಬಡಕೊಂಡೊದರಿ ಬಾಯಿ ಬಿಡುತಳಲುತಲಿ ॥ ದುಂದುಮಿ ॥

ದಂದಲವ ನಡಿಸಿ ಲೋಕದೊಳು ರಾಯಣ್ಣನು
ಬಂದಿಯೊಳಿರಿಸಿ ಜನರನ್ನು ॥
ಕುಂಪಣ ಸರದಾರ್ರು ಕೇಳಿ। ಹುಡುಕುತೆ
ಗುಂಪಾಗ್ಹೋಗಲು ಕೋಪ ತಾಳಿ ॥ ॥೮೬॥

ಬಂಡು ನಡೆದೀತುಯೆಂದು ದಂಡು ಸರದಾರರ ಕೂಡಿ
ಕೊಂಡು ಹೊಂಗಲದಿ ಬರವುತಲಿ ॥
ಬಂದ ಕ್ಷಣದಿ ಅಗ್ಹೊಂಡೆಂದೀರವ್ವಗ ಒಳ್ಳೇ
ಚಂದ ಮೇಣೇವ ತಂದು ಮುಂದಿಡಲು। ಕುದುರಿ
ಹಿಂದು ಮುಂದೆಡಬಲ ಹೊಂದಿರಲು। ಪಹರೇ
ಬಂದೂಕ ಕವಾಯ್ತದ ಬಾರಿರಲು ॥
ಅತ್ತೀ ನೋಡ್ವಳು
ದುಖ್ಖ ಮಾಡ್ವಳು
ಕಿತ್ತೂರ್ನಾಡೊಳು। ಬೇಡಿ
ಬಂದೆನ್ಹಿಂತದ ನಾನು ಬಂದಿನೊಳು। ಹೋಗೂ
ದೆಂದಳಲುತೆ ಈ ಕಿಷ್ಕಂಧದೊಳು। ಯೆಷ್ಟು।
ಹಿಂದೆ ಮಾಡಿದ ಪಾಪ ಬಂದಿತೆನಗೆ ಭೋ
ರೆಂದೆನುತಳುತೆ ತಾ ಬಂದಳಂಗಣಕೆ। ದುಂದುಮಿ ॥

ಕೊಂಡು ಹೊಂಗಲದಿ ಬರವುತಲಲಿ ಮೇಣೆದೊಳಾಗ
ಗಂಡನನು ನೆನೆವುತಡರಿದಳು ॥
ತಿರುಗಿ ನೋಡಿದಳತ್ತೀ ಮುಖವ। ಸೊಸಿಯಾಗಿ
ಕಾಣಲಿಲ್ಲೆಳ್ಳಷ್ಟು ಸುಖವ ॥ ॥೮೭॥

ಬಾಯಿದೆರೆದ್ಹೇಳಿದಳು ತಾಯಿ ಚೆನ್ನವ್ವನು
ದಯ ಮಾಡಿರೆಂದಳವರಿಗೆ ।
ಎತ್ತ ಒಯ್ವಿರಿ ನಾವಿನ್ನತ್ತಿ ಸೊಸಿಗಳಿಲ್ಲಿ ।
ಜತ್ತಿಲಿರುವೆವ್ಹತ್ತೆಗರೆವುತಲಿ । ಹಸ್ತ
ಎತ್ತಿ ಪೇಳುವೆ ನಿಮ್ಮ ಗೊತ್ತಿನಲಿ । ಈಗಿ
ರುತ್ತೇವೆಮಗೆ ಬಲು ವತ್ತರಲಿ ।
        ಅಗಲಿಸಿರುವದು ।
        ತಗಿಬಗಿಗೊಳಿಸುದು
        ಹಗಲಿರುಳಳಿಸುದು । ಸರದಾ
ರುತ್ತಮರೆನ್ನ ಕಾಯ್ವದ್ಹೊತ್ತಿನಲಿ । ಧ್ಯಾನಿ
ಸುತ್ತೊದರಿದಳವರೊತ್ತಿನಲಿ । ಕೇಳ ।
ದೆತ್ತಿ ಮೇಣೆವ ಬೊಯ್ಯಾರ್ಹೋತ್ತರವರ ಸುತ್ತು
ಮುತ್ತು ಕುದುರಿ ಮಂದಿ ಒತ್ತರದಿ ನಡೆದು ॥ ದುಂದುಮಿ ॥

ದಯಮಾಡಿ ಬಿಡಿರೆಂದವರಿಗೆ ಪೇಳಿದರೆ
ನಯಗುಣ ದಿಸದಲೆ ತೆರಳಿದರು ।
ಬಂದರ್ಹೊಂಗಲವನ್ನು ಬಿಟ್ಟು । ವೀರವ್ವನ
ತಂದರಭಯವನು ಕೊಟ್ಟು ॥ ॥೮೮॥

ಗಂಡ ಮಾವರ ಭಾಗ್ಯ ಉಂಡೇನೆಂದರೆ ಕುಂಪಣಿ
ದಂಡಿನೊಳು ಸಿಕ್ಕೆನೆನ್ನುತಲಿ ।
ಬರೆಯಲಿನ್ನೆಷ್ಟು ನಾ ಹಿಡಿಯ ಮಾವನು ಗಳಿ
ಸಿರುವ ದೌಲತ್ತು ಈ ನರರೊಳಗೆ । ಕಾಣೆ
ಸುರಪ ದಾನವರೊಳು ಸುರರೊಳಗೆ । ಮಲ್ಲೇಂ
ದ್ರರ ಸರಿಯಿಲ್ಲೀ ಭೂತಳದೊಳಗೆ ।
        ಮುತ್ತು ಮಾಣಿಕ ।
        ರತ್ನವರ ಪದಕ
        ತೆತ್ತಿಸಿರುವದಕ । ದೊಡ್ಡ

ಸರಿಗಿ ಪುತ್ಥಳಿನೆಲ್ಲೀ । ಸರ ಜೋಮಾಲಿ । ತರ
ತರ ಮೋಹನ್ಮಾಲಿಗಳ್ ಕೊರಳ ತಾಳಿ । ಒಂಕಿ
ಹರಡೆ ತೋಳ್ ಬಾಪುರಿ ಸರಮುತ್ತು । ಚಿಂತಾಕ
ಸಿರಪೇಚೊಜ್ರವು ಕಂಠಿಸರ ತುರಾಯಿಗಳು ॥ ದುಂದುಮಿ ॥

ದಂಡಿನೊಳು ಸಿಕ್ಕೆನೆನ್ನುತಲಿ ವೀರವ್ವನು
ಗಂಡನೈಶ್ವರ್ಯ ಹೊಗಳುತಲಿ ॥
ದುಕ್ಕ ಮಾಡುತ ನಡೆದಾಳು । ಧಾರ್ವಾ
ಡಕ್ಕೋಗಿಳಿದು ಕುಳಿತಾಳು ॥ ॥೮೯॥

ತಡವು ಮಾಡದಲೆ ತಾ ಜಡಜ ಸಾಹೇಬರಲ್ಲಿ
ಇಡದೆ ಅಪ್ಪಣೆಯ ಕೊಡುವುತಲಿ
ನಿಲ್ಲದೆ ಮೇಣೆದೊಳಲ್ಲಿ ಕುಳಿತೀರವ್ವ
ಮಲ್ಲಸರ್ಜನ ನೆನೆನೆನೆದಳುತೆ । ತನ್ನ
ವಲ್ಲಭ ಮೈದನರಿಲ್ಲೆನುತೆ । ಹೊಂಗಲ
ದಲ್ಲಿ ಬಿಟ್ಟನು ಅತ್ತೀ ಒಲೆನುತೆ ।
ಇವರೆಲ್ಲರು
ಶಿವನ್ಹೊಂದ್ಯಾರು
ನನಗೆ ಮುಂದ್ಯಾರು । ಗತಿ
ಇಲ್ಲೆನುತಾ ಮೇಣೆದಲ್ಲ್ಯಳಲು । ಕುಸೂ
ಗಲ್ಲಿಗೊಯ್ಯಲು ಬಾಯಿ ಬಿಡುತಿರಲು । ಕಿಲೇ
ದಲ್ಲಿಡಲೆಡಬಲ ಜೆಲ್ಲಿ ಕುದುರಿ ಸುತ್ತ
ಅಲ್ಲಲ್ಲಿ ಕಾವಲ ನಿಲ್ಲಿಸುತಾಗ । ದುಂದುಮಿ ॥

ಇಡದೆ ಅಪ್ಪಣೆಯ ಕೊಡುತಲೀರವ್ವನು ।
ಗಡ ಕೀಲೆದೊಳ್ಹೊರಳಿ ಬೀಳುತಲಿ ॥
ತಪ್ಪಿಲ್ಲದೆನ್ನನಿಲ್ಲಿಟ್ಟ । ರೆಂದೆದೆ
ದಪ್ಪನೆ ಬಡಕೊಂಡಳೆಷ್ಟ ॥ ॥೯೦॥

ತಂದೆ ತಾಯಿಗಳು ಮಲ್ಲೇಂದ್ರನೈಶ್ವರ್ಯ ನೋಡಿ
ಹೊಂದಿಸಿದರಿವರು ಕಾಣಿಸಿದೆ ॥
ಪ್ರಥಮದೊಳ್ ಕಿತ್ತೂರ ಪತಿ ಮಲ್ಲಸರ್ಜನ
ಸತಿಯು ಸುತರು ಸೊಸ್ತೆರ್ಹಿಂಡುಗಳು । ಮೇಲು
ಮತಿಯುಳ್ಳ ನಿಸ್ವತ್ತರ ತಂಡೆಗಳು । ಎರಡಾ
ರಲೆ ಸಹಸ್ರ ಕಾಲಬಲ ದಂಡುಗಳು ।
        ಕೊಡಿಗಳು ಛತ್ರ
        ಆಡುವರು ಪಾತ್ರ
        ನೋಡುವರು ನೇತ್ರ । ತೆರಿ
ದಪ್ತಾಗೆರಿಯು ಪಲ್ಲಕ್ಹುತ್ತುತಲಿ । ಮುನಿಸಿ ।
ದಪ್ತರ ದಿವಾನರು ಮುತ್ತುತಲಿ । ಚಾಮ ।
ರೆತ್ತಿ ಥಾಳಿಸುತಿರೆ ಹಸ್ತಿ ಕುದುರಿ ಡಂಕೆ
ಒತ್ತಿ ಚೀರುವ ಕಾಳಿ ರಣಬಾಜಿ ಧ್ವನಿಯು ॥ ದುಂದುಮಿ ॥

ಹೊಂದಿಸಿದರಿವರ ಕಾಣಿಸದೆ ಇಂಗ್ರಜರ
ಬಂದಿನೊಳಗಿರುವದಾಯ್ತೆನಗೆ ॥
ಅತ್ತಿ ಮಾವನ ಪುಣ್ಯತೀರಿ । ತಿಂದಿಗೆ
ಸುತ್ತಲಿಟ್ಟರೆನಗೆ ಪಹರಿ ॥೯೧॥

ನಲ್ಲ ಮೈದುನರಿದ್ದರಿಲ್ಲಿ ಬಿಡುವರೆ ಎನ್ನ
ಸಲ್ಲಿದೆನಿಂಗ್ರಜಂಗೀಗೆನುತ ॥
ಸೃಷ್ಟಿ ಯೊಳ್ಹೆಣ್ಣಾಗಿ ಹುಟ್ಟಬಾರದು ಬ್ರಹ್ಮ
ಮುಟ್ಟಿ ಬರೆದ ಎನ್ನದೃಷ್ಟವನು । ಬರೆ
ದಿಟ್ಟನೇನಿದಕ್ಕಾಗಿ ಬೃಷ್ಟವನು । ಬಳಗ
ಸುಟ್ಹೋಗಲೆನುತ್ಹಿಂಗ ಕೊಟ್ಟವನು ।
ಜನ್ಮ ಜರಿವೆನು
ಎನ್ನ ಪರಿವೆನು
ಅನ್ನ ತೊರೆವೆನು । ನಾನು
ಹುಟ್ಟಿ ಬಂದುದನರ್ಥ ಕೆಟ್ಟಿತಲ್ಲ । ಕುಂಪಣಿ
ದಿಟ್ಟರ ದಯವೇನು ಹುಟ್ಟಲಿಲ್ಲ । ಬಿಡು ।

ಒಟ್ಟಿಗಿನ್ನೇನಾದುದ್ದೊಟ್ಟಿಯೊಳಗೆ ಕಿಚ್ಚು
ಹುಟ್ಟಿತು ಜೀವವ ಬಿಟ್ಟರೆ ಲೇಸು ॥ ದುಂದುಮಿ ॥

ಸಲ್ಲಿದೆ ಇಂಗ್ರಜಂಗೀಗೆನುತ ವೀರವ್ವನು
ಬಲ್ಹಾಂಗ ದುಃಖ ಮಾಡಿದಳು
ಎರವಾದೆನೆಲ್ಲರಿಗೀಗ । ಒಬ್ಬಳೇ
ಪರದೇಶಾದೆನು ಕಿಲೇದಾಗ । ॥೯೨॥

ಎಷ್ಟು ಬಳಲಿದರೆನ್ನ ಕಷ್ಟ ಬಿಡಿಸುವರಿಲ್ಲ
ಸೃಷ್ಟಿಪತಿ ಪಾಲಿಸುವದೆಂದು ॥
ಹರನೆ ಸಕಲ ಲೋಕೋದ್ಧರನೆ ಕೈಲಾಸ ಮಂ
ದಿರನೆ ಗಿರಿಜಾವರನೆ ಎನುತ ಕೃಪಾ
ಕರ ಶಂಕರನೆ ಜಿತಸ್ಮರ ಎನುತ । ಅಜ
ಶಿರವ ಮಾಲೆಯೊಳ್ ಧರಿಸಿರುವನೆನುತ
ಹರಹರ ಎಂದು
ಮರುಗುತಲಂದು
ಉರಿಯೊಳು ಬೆಂದು । ಚಿಂತಿ
ಬೆರಸಿತೆನ್ನೊಳು ಪರಿಹರಿಸುವದು । ಜೀವ
ವಿರದೆ ನಿನ್ನಡಿಗಳ ಸ್ಮರಿಸುವದು । ನಿನ್ನೊಳ್
ನೆರವಿಕೋ ಹೊಂಗಲದರಸು ವೃಷಭರಾಜ
ಸರಿ ನಿನ್ಹೊರತು ಮತ್ತ್ಯಾರರಿಯೆ ಲೋಕದಲಿ ॥ ದುಂದುಮಿ ॥

ಸೃಷ್ಟಿ ಪತಿ ಪಾಲಿಸುವದೆಂದು ಆಕೆ ಮನ
ಮುಟ್ಟಿ ಸ್ತುತಿಸಿದಳು ಹಗಲಿರುಳು ॥
ಹಸಿವು ತೃಷೆಗಳನು ಬಿಟ್ಟು । ಇರುವಳು
ಕುಸುಗಲ್ಲಿನೊಳು ಧ್ಯಾನಗೊಟ್ಟು ॥೯೩॥

॥ ಶ್ರೀ ಕಿತ್ತೂರ ಮಲ್ಲಸರ್ಜ ದುಂದುಮಿ ಸಮಾಪ್ತ ॥

❖❖

೫

ಸೂಳೆ – ಸರ್ಜರ ಪ್ರಣಯ

ತರುಣೀ ರನ್ನಳೆ ಕೇಳು ಸ್ಮರನ ಅರಸಿ ಸಮ ।
ಮೆರೆವ ನಾಯಕಿ ರವಿಕಿರಣದಿಂದೊಪ್ಪುವ ಆ ।
ಭರಣಗಳ್ಹೇಹದಲ್ಲಿ ಧರಿಸಲೊಲ್ಲದೆ ನೀ ಧಿ ।
ಕ್ಕರಿಸುವ ಕಾರಣವೇನು ಎನಗರುಹದೀ ಮೌನದಿ ।
ಧರಣಿಯ ಲಿಖಿಸುವ ನೀನು ॥ ॥ಪಲ್ಲ॥

೧

ಚಕ್ರವಾಕ ಕಾಳೋರಗ ಲೆಕ್ಕಿಸದಿಹುದು ನಿನ್ನ ।
ತಕ್ಕ ಮಾತಿದಲ್ಲವು ಕೇಳು ಸೊಕ್ಕು ಜವ್ವನೆಯ ನೀ ಧ್ಯಾ ।
ನಕ್ಕೆ ತಾ ನೀಯೆನ್ನ ಮಾತು ಪಕ್ಕ ಸೋತ ಪಕ್ಷಿಗಳಿಗೆ ।
ಸಿಕ್ಕಿದಂತೆ ಮನಸ್ಸಿಗೆ ಸೌಖ್ಯವದೋರದೆ ನಾಲ್ಕು ।
ದಿಕ್ಕಿಗೆ ಬಾಯ್‌ದೆರೆಯುವರೇ ನಕ್ಕು ಕೇಳ್ವನ್ನೈದು ದಿವಸ ।
ಲೆಕ್ಕ ಮೀರಗೊಡದೆ ನಾ ನಿನ್ನಕ್ಕರ ಕೈಗೂಡಿಸುವೆನೆ ।
ಚೊಕ್ಕ ಮೃಷ್ಟಾನ್ನವ ಘೃತ ಶರ್ಕರಿ ಪಂಚಾಮೃತದೊ ।
ಳಿಕ್ಕುವಲ್ಲಿ ಹಸ್ತ ನೀ ಮೃದುವಾಕ್ಯವಾಡದಿರುವಿ ಈಗ ।
ಬಕ್ಕನೆ ಪೇಳೆನಗೆ ನೀನದ ಸಿಕ್ಕಿದ ಪುರುಷನ ಕೂನ ।
ಮುಕ್ಕಣ್ಣ ಹರನಾದೊಡೇನು ಸಿಕ್ಕಿದ ಮೇಲ್ಬಿಡೆನು ಶ್ರೀಚರ ।
ಣಕ್ಕೆ ನಮಿಸಿನ್ನಾತನೊಡಲ ಪೊಕ್ಕುನಾ ಬಿನ್ನೈಸಿ ಕರತರುವೆ ಕೇಳು ।
ಮಿಕ್ಕ ಮಾತಿನ್ನೇನು ಗಿಡದ ಪಕ್ಷಿಯಂದಲಿ ಪೋಗಿಬರುವೆ ॥

೨

ಹರಿಣಾಕ್ಷಿ ಕೇಳೆ ನಿನ್ನಿನಿರುಳ ಕನಸಿನಲ್ಲಿ ।
ವರ ಸುಪ್ರತಾಪರಾವ ಸಮಶರಜಂಗ ಬಹದ್ದೂರ ।
ದೊರೆ ಶಿವಲಿಂಗ ರುದ್ರಸರ್ಜ ಸ್ಮರನ ತಂತ್ರವ ತೋರಿ ।
ತೆರಳಿದನಲ್ಲವೆ ಬಿರದಂಕ ರಾಜ ಭೂಮೀ ।
ಶ್ವರನ ಚರಣಾಂಬುರುಹ ದರುಶನಿಲ್ಲದೆ ನಾ ಗಂ ।
ಹರದೊಳ್ ಜೀವಿಸುವೆ ಅರೆನಿಮಿಷವ ನಾನಿ ।
ಲ್ಲಿರದೆ ಚಿತ್ತೈಸಿ ಬೇಗ ಪೋಗಿ ಬರಹೋಗ ಕಿತ್ತೂರರಸನಂಘ್ರೀಯ ಬಳಿಗೆ ।
ಸರಗಿ ಚಿಂತಾಕದೋರೆ ಹರಡಿ ಕಂಕಣ ತೋಳ್ ಬಾ ।
ಪುರಿಯು ಜಾಗುಟಿ ಚೌರಿ ವರ ನವರತ್ನ ಖಚಿತ ।
ಹಾರಗಳೊಡ್ಯಾಣ ನಿನ್ನ ಶರೀರಕ್ಕ ತಕ್ಕಂತ ಆ ।
ಭರಣಗಳಿಟ್ಟುಕೊಂಡು ಕಿರಿಮಂಜಿ ಕುತನಿ ಜರತಾರಗಳ್ಳಮರು ಕಿನಿಕಾಪು ।
ದೊರಂಗಿಯ ದಟ್ಟಿ ಪೀತಾಂಬರವ ನೀನುಟ್ಟುಕೊಂಡು ।
ದೊರೆ ಕುಲಚಂದ್ರನ ಶ್ರೀ ಚರಣಕ್ಕೆರಗಿ ಚಮತ್ಕಾರದಿಂದ ।
ಕರತಾರೆ ಲಲನೆ ನಿನ್ನ ದಾರಿಯ ನೋಡುತ ಕುಳಿತಿರುವೆ ಕುಂಜರಗಮನೆ ॥

೩

ಸುರವೃಕ್ಷ ಕಾಮಧೇನು ಪರುಷ ಪೀಯೂಷ ಮಿಂಚು ।
ನೆರಳು ಸೀಮಂತಮಣಿ ಕರಿಯ ಮಲ್ಲಿಗೆ ಪುಷ್ಪ ।
ಪಾರಿಜಾತ ವಜ್ರಾಯುಧ ದೊರೆಯುದಷ್ಟೈಶ್ವರ್ಯವೇ ಈ ।
ಶ್ವರನೆ ಬಲ್ಲ ಈ ಮಾತು ಧರೆಯೊಳ್ಳಪನ್ನ ದೇಶ ।
ದರಸುಗಳ್ ಶ್ರೀಶೈಲ ಗಿರಿಯ ಮಲ್ಲೇಶನಂತೆ ।
ಮೆರೆಯುವ ರಾಜ ನಿನ್ನೊಳ್ ಸುರತ [ದ] ್ರೀಡೆಗೆ ಬಂದು
ಬೆರೆದುದುಂಟೇನೆ ಆತಾ ಪರಮ ಐಶ್ವರ್ಯವಂತಾ ।
ನರ ವಾಹನವು ಕರಿ ತುರಗ ಚಾಮರ – ಛತ್ರ ।
ಹಾರುವ ಮೋರ್ಚಲ್ಲು ಮುಂದೆ ಮೆರೆವ ಕೊತ್ತಲ ತೇಜಿ ।
ಪಿರಿದು ಕಿತಾಜು ಸಾರುತಿರುವ ಭಟ್ಟಂಗಿ ಘನ ।
ಧೀರ ವೀರ ಶೂರ ಪಗೆಸಂಹಾರದಳ ಶೃಂಗಾರನೆಂದು ।
ಚೀರುವ ಕಾಳಿಯು ಕರ್ನಿ ಭೇರಿ ಬುರುಗು ತಮ್ಮಟ ನ ।

ಗಾರಿಯು ನಿಶಾನಿ ಢಂಕೆ ಬಾರಿಸುವ ನೌಬತ್ತು ಪ್ರಜೆ ।
ಪರಿವಾರವು ಸದರಲ್ಲಿ ಕಿತ್ತೂರ ಭೂಪತಿಯ ತಂದು ।
ತೋರಂದರಲ್ಲಿಯ ಚೌಕಿ ಪಾರಾದವರ ದಾಂಟಿ ಪೋಗ ।
ಲಾರೆನೆ ಶಿವಶರಣರಕ್ಷಕನೆಂಬ ಧೊರೆಯೀ ಮಾತಿಗೆಂದಿಗೆ ಸೇರನೆ ॥
ಬಟ್ಟಕುಚಯಳ ಮಾತು ತಟ್ಟನೆ ಕೇಳುತ ನಾಂ ।
ಕೃಷ್ಣನರಸಿ ರುಕ್ಮಿಣಿಯಂತಿಟ್ಟಾಳು ಮಣಿ ಭಂಗಾರಾಭರಣ ।
ಸಿಟ್ಟಿಲಿ ತೆಗೆತೆಗೆದು ತಾ ಒಕ್ಕೊಟ್ಟಾಳು ತನ್ನಯ ಫಣಿಯ ।
ಮುಟ್ಟಿಮುಟ್ಟಿ ವಿಧಿಗೆ ಶಾಪಕೊಟ್ಟಾಳು ಹೆಣ್ಣಿನ ಜನ್ಮ ।
ಸುಟ್ಟುಪೋಗಲಿ ಜಗದೊಳು ಪುಟ್ಟಬಂಧುದನರ್ಥ ನಾನೆ ।
ಳೆಷ್ಟು ಸುಖವ ಕಾಣಲಿಲ್ಲ ಶ್ರೇಷ್ಠ ಮದನಬಾಣ ಎದೆಯೊಳ್ ।
ನಟ್ಟು ಗಾಸಿಗೊಳುವೆನೆ ಅದರುಷ್ಟ ಸಾಕುಸಾಕು ಎನಗ ।
ಪಟ್ಟ ಮಂಚಿನ್ನಾಕ ಮೇಲುಕಟ್ಟು ಲೋಡು ತಲಿಗಿಂಬು ಗಿರ್ದೆ ।
ಸ್ವಷ್ಟಿಗ್ಹೊಳೆವ ಸುಪ್ಪತ್ತಿಗೆ ಬುಟ್ಟೆ ಜರಲೇಪು ತಿವ್ವಾಸಿಗೆ ।
ಅಷ್ಟಗಂಧ ಪಾತ್ರೆಯೊಳ್ತುಂಬಿಟ್ಟೇನು ಪರಿಮಳ ದ್ರವ್ಯ ।
ಎಷ್ಟು ಕೇಳ್ ಕಮ್ಮೆಣ್ಣಿ ಕಸ್ತೂರಿ ಬಟ್ಟಲ ಜವ್ವಾದಿ ಪುನಗು ।
ಪೊಟ್ಟಣಗಳಲ್ಲಲ್ಲಿಗೆ ಬುಕ್ಕಿಟ್ಟು ಚಂಪಕ ಮಲ್ಲಿಗಿ ।
ಕಟ್ಟಳಿಲ್ಲದೆ ಸಾಹಿತ್ಯ ಸೃಷ್ಟಿಪತಿಗೆ ತೋರಿಸುವದು ।
ಅಷ್ಟು ಮಾರ್ಗ ನೋಡುವೆನು ಪಟ್ಟದರಸಿಯೊಳು ಮೋಹ ।
ಇಟ್ಟು ತಾ ದಯದೋರದಿರೆ ಪುಟ್ಟಿತು ವೈರಾಗ್ಯ ಪ್ರಾಣ ।
ನಷ್ಟಮಾಡಿಕೊಳ್ಳುವೆ ಪೋಗಿ ಬೆಟ್ಟದಲ್ಲಿ ಕುಳಿತು ಬಂದು ।
ಕೆಟ್ಟ ಹಾವಿನ ಹುತ್ತಿನೊಳ್ ಕೈ ಹೆಟ್ಟುವೆನು ವಾಘ್ರಗಡ್ಡ
ಗಟ್ಟುವೆನು ನಿನ್ನ ಕೊರಳು ಮುಟ್ಟಿನಾ ಪೇಳುವೆ ಪುಸಿಯಲ್ಲವೆ ದೊರೆಯ
ಬೆಟ್ಟಿಮಾಡಿಸಿದರೆ ನಿನಗೆ ಸೃಷ್ಟಿಯೊಳಿನ್ನಾರು ಸರಿಯಿಲ್ಲವೇ ॥

೫

ಕೆಳದಿ ನಾಯಕಿ ವಾಕ್ಯಗಳನು ಮನ್ನಿಸಿ ಕೇಳಿ ।
ಗಳಿಗಿ ತುಂಬಿಸದೆ ಬಂದಿಳಿವರನಿಗೀ ಮಾತು ।
ತಿಳಿಸುತಿರ್ದಳು ದೂತೆ ಕೇಳೊ ಶ್ರೀಮಹಾರಾಜ ನಿಮ್ಮ ।
ಸುಳಿವಗಾಣದೆ ನಾರಿಯು ಉಳಿವಳಿಲ್ಲವಳು ಭೂ ।

ವಳಯದೊಳ್ ಪೌರ್ಣಮಿ ಚಂದ್ರಕಳೆಯುಳ್ಳ ರಾಜ ನಿಮ್ಮಾ ।
ತೋಳಿಗೆ ತೋಳ್ತಳ್ಕಿಸಿ ಕಳಶಕುಚದ ಮಧ್ಯ ।
ದೊಳಗ ಕುಂಕುಮದ ಚಿತ್ರಂಗಳನು ಲಿಖಿಸಿ ಮುಂದ ।
ಕ್ಕೆಳೆದಮರ್ದಪ್ಪಿ ಮಾರಕೇಳಿಯೊಳ್ ದಣಿಯುತ್ತ ಕಂಬು ।
ಗಳವು ಬೆವರಲಾಗರ್ದುಳಿಯ ಲೇಪಿಸಿ ಮುತ್ತು ನೀ ।
ವಾಳಿಸಿ ತಾ ಚೆಲ್ಲಿ ಪರಿಮಳಗಾಳಿಯೊಳ್ ತೃಪ್ತಿಸಿ ಕರ್ಪುರ ।
ವೀಳ್ಯವ ಮೆಲ್ಲುತ್ತ ಭೇದವಳಿದು ಮನ್ಮಥನ ಓ ।
ಕುಳಿಯನಾಡುತ ನಿತ್ಯ ಬೆಳಗುಗಳಿಯುದಕ್ಕೆ
ಕಳುಹಿದಳೊ ತಮ್ಮ ಬಳಿಗೆನ್ನಲಿಕ್ಕೆ ಪ್ರೇಮ ।
ತಾಳಿ ಬಾಪುಸಾಹೇಬರು ಮುಗುಳು ನಗೆ ನಕ್ಕು ಬಾಳಿ ।
ಸುಳಿನಾಭಿಯಳಿಗಿನ್ನಿದೊಳ್ಳಿತೆ ಈ ಬುದ್ಧಿ ಪರಸ್ತ್ರೀ ।
ಯಾಳಿಯೊಳು ನಾವ್ ಸ್ನೇಹ ತಿಳಿಸುವಣಿಲ್ಲ ಪೋಗಿ ।
ತಿಳಿಸೆಂದು ದೂತೆಯನ್ನು ಕಳುಹಿದನು ಹಿಂದಕ್ಕೆ ಭೂನಾಥ ಕವಿ ।
ಬೆಳೆಸುವನು ನೀತಿ ಜಗದೊಳು ಪರರಾಜರಲ್ಲಿಯೀ ಮಾತ ॥

❖❖

೬

ಶಿವಲಿಂಗ ರುದ್ರಸರ್ಜ

[ಶಿವಲಿಂಗ ರುದ್ರ ಸರ್ಜನು ದೊರೆ ಮಲ್ಲಸರ್ಜನ ಮಗನು. ೧೮೧೩ರಲ್ಲಿ ೨ನೆಯ ಬಾಜೀರಾಯನು ಸೊಂಡೂರಿನ ಕಾರ್ತಿಕಸ್ವಾಮಿಯ ದರ್ಶನ ತೆಗೆದುಕೊಂಡು ಮರಳಿ ಬಯಲುಹೊಂಗಲಕ್ಕೆ ಬಂದು, ಮಲ್ಲಸರ್ಜನನನ್ನು ಕರೆಸಿಕೊಂಡು ಪುಣೆಗೆ ಕರೆದುಕೊಂಡು ಹೋಗಿ, ಅಲ್ಲಿಯೇ ಅವನ ಮೇಲೆ ಕಾವಲಿಟ್ಟನು. ಮುಧೋಳಕರ ವಾಡೆಯಲ್ಲಿ ಮಲ್ಲಸರ್ಜನು ೩ ವರುಷ ಕಳೆದನು. ಕಡೆಗೆ ಬಹಳ ಕೃಶನಾದ್ದರಿಂದ ಪೇಶ್ವೆಯು ಮರಳಿ ಕಿತ್ತೂರಿಗೆ ಕಳಿಸುವ ಏರ್ಪಾಡ ಮಾಡಿದನು. ಕಿತ್ತೂರು ಮುಟ್ಟಿದ ಮರುದಿನ ಮರಣ ಹೊಂದಿದನು (೧೮೧೬)

ಮಲ್ಲಸರ್ಜನ ನಂತರ ಶಿವಲಿಂಗರುದ್ರಸರ್ಜ(ಬಾಪುರಾಯ)ನು ಅಧಿಪತಿಯಾದನು. ಇವನು ಲಿಂಗಪೂಜಾನಿಷ್ಠನಾಗಿದ್ದನು. ಇವನು ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯವನ್ನು ಗಳಿಸಿದ್ದನು. ೩. ಗ್ರಂಥಗಳನ್ನು ಬರೆದಿದ್ದನೆಂದು ತಿಳಿದು ಬಂದಿದೆ. ಆದರೆ ಅವಾವವು ಉಪಲಬ್ಧವಿಲ್ಲ. ಇವನು ಬರೆದ ಕೆಲವು ಹಾಡುಗಳು, ಮಂಗಲಾಚರಣಗಳು ಮಾತ್ರ ನಮ್ಮಲ್ಲಿವೆ.

ಬೇಟೆಗೆ ಕರೆದುಕೊಂಡು ಹೋಗಿ ಥ್ಯಾಕರೆಯು ಇವನಿಗೆ ವಿಷಪಾನ ಮಾಡಿಸಿದ ಸಂಗತಿಯು ಈ ಹಾಡಿನಲ್ಲಿ ಬರುತ್ತದೆ. ಸಿಂಧೆ ಮುನವಳ್ಳಿಯ ಸಾಲುಟಗಿಮಠದ ಶ್ರೀ ಶಿವಲಿಂಗಸ್ವಾಮಿಗಳು ಶಿವಲಿಂಗ ರುದ್ರಸರ್ಜನ ಸಮಕಾಲಿನರು. ಅವರು ಬರೆದ ನಿರ್ಣಯ ಪುರಾಣದಲ್ಲಿ (ಡೈರಿ ಇದ್ದ ಹಾಗೆ ಇದೆ) "ಭವಿಗಳೆಸಗಿದ ಗುಳಿಗೆಗಳು । ಗಳಗಳನೆ ನುಂಗಿ ದೇಹವಳಿದನು ಬಲ್ಲವರೆ ಬಲ್ಲರು" ಎಂದು ಬರೆದಿದ್ದರೆ. (ನಿರ್ಣಯ ಪುರಾಣವು ನಮ್ಮ ಕಡೆಗೆ ಇದೆ.) ಶಿವಲಿಂಗ ರುದ್ರಸರ್ಜನ ಹೆಂಡತಿ ವೀರಮ್ಮ ರಾಣಿಯು ಹೈದರಾಬಾದದ ಸಮೀಪದಲ್ಲಿದ್ದ ಶಮಶೇದಾಬಾದದ ಸಣ್ಣ ಸಂಸ್ಥಾನಿಕನ ಮಗಳು. ಆಕೆಯ ಪತಿನಿಷ್ಠೆ ಹಾಗೂ ಸೌಂದರ್ಯದ ವರ್ಣನೆಯ ಅನೇಕ ಹಾಡುಗಳು ನಮ್ಮಲ್ಲಿ ಇವೆ. ಇದು ಸೋಬಾನ ಪದ, ಕಿತ್ತೂರ ನಾಡಿನಲ್ಲಿ ವಿಶೇಷ ಪ್ರಚಲಿತವಿದೆ.]

ಕಿತ್ತೂರ ನಾಡಿಗಿ । ಹತ್ತಿತು ಹಾವಳಿ । ಸೋವನ್ನಿರೇ
ಸುತ್ತೆಲ್ಲಾ ಮೃಗಗಳ ಮಿಕದ ಹಾವಳಿ

ಬಾಳಗುಂದ ಗುಡ್ಡಕ । ಬೆಳದಾವು ಹುಲಿಗಳು
ಬಾಳೇ ಮಾಡುವದು ಬಲು ಗೋಳಾ
ಬಾಳೇ ಮಾಡುವದು ಬಲು ಗೋಳಾ । ನಮ್ಮ ದೊರಿಯ
ಬಲಿಗಳು ನೀವು ಕಳವರೆಯ್ಯಾ । ಸೋ ॥

ಹುಲಿಯ ಕೊತ್ತಲಕ । ಹುಲಿಗಳು ಬಹಳಾಗೆ
ಬೆಲಿಯುಳ್ಳ ದನಗಳ ಮುರಿಯತಾವೋ । ಸೋ ॥

ಹಂದೂರ ಊರಿಗೆ । ಹಂದಿ ಉಪದ್ರ ಬಹಳ
ಬಂದ ಬಂದ ಊರ ಹೋಗತಾವೋ । ಸೋ ॥ ನಮ್ಮ ದೊರಿಯೆ
ಒಂದೂ ಪೈರುಗಳು ಉಳಿಯಾವೋ । ಸೋ ॥

ಎಲ್ಲಾ ಊರ ಜನರು । ನಿಲ್ಲದಲೆ ಬರತಾರೋ
ಬೇಟಿನಾಡಕ ಕರಿಯತಾರೋ । ಸೋ ॥

ಸುತ್ತಿನ ರಾಜೇಕ । ಪತ್ತರ ಬಿಡತಾರು
ಒತ್ತರಲೇ ಬೇಟಿಗೆ ಬರಬೇಕೋ । ಸೋ ॥

ಬೇಟಿಯ ಆಡುವರು । ಈಟಿ ಬರ್ಚಿಯ ಕೊಂಡು
ನೀಟಾಗ್ಯರಮನಿಗೆ ಬರತಾರೋ । ಸೋ ॥

ಬಂದ ಬಂದವರೆಲ್ಲಾ । ಹೊಂದ್ಯಾರೋ ಅರಮನಿ
ತಂದೆ ಏನಪ್ಪಣಿ ಕೊಡಬೇಕೋ । ಸೋ ॥ ಹಿಂಗಂದ
ಬಂದವರೆಲ್ಲಾ ನುಡದಾರು । ಸೋ ॥

ಅವರು ಬಂದು ಶಲ್ಲೆವ ಹಾಸಿ ಶರಣಂದ್ಯಾ । ಸೋ
ಅವರು ಬಂದು ಹಚ್ಚಡ ಹಾಸಿ ಶರಣಂದ್ಯಾ । ಸೋ ॥
ಕಿತ್ತೂರ ದೇಸಾಯಿ ಎಲ್ಲರಿಗೆ ಶರಣು ಕೊಡತಾರ । ಸೋ ॥

ನಾಳಿಗಿ ಹೋಗೂನ ಉಳಿಯಿರಿ ನೀವೆಂದು
ಹೇಳಿದ ಬಂದ ಜನಕೆಲ್ಲಾ । ಸೋ ॥

ಹರಿಯಾಗೆದ್ದ ನಮ್ಮ ಕಿತ್ತೂರ ದೇಸಾಯಿ
ಆಳ ಮಕ್ಕಳನ ಎಬ್ಬಿಸ್ಯಾನ । ಸೋ ॥
ಆಳ ಮಕ್ಕಳಿಗ ಎಬ್ಬಿಸಿ ಹೇಳತಾರ ನೀವು
ಕಮ್ಮಾರ ಸಾಲಿಗೆ ಹೋಗೆಂದಾ । ಸೋ ॥

ಕೈಯೊಳಗಿನ ಹತಿಯಾರ ಸುದ್ದ ಮಾಡಿಸಿರೆಂದಾ । ಸೋ ॥
ಹತ್ಯಾರ ಸುದ್ದ ಮಾಡಿಸಿಕೊಂಡ ಬಂದಾರು ತಮ್ಮ ವಾಡೇಕ । ಸೋ

ಜಳಕ ಜಂತಾವಳಿ ಮಾಡಿ ಜರದ ಮಡಿನುಟ್ಟ
ತಮ್ಮ ಪೂಜಿ ಮುಗಿಸ್ಯಾರ । ಸೋ ॥
ಬಂದವರಿಗೆ ಊಟ ನಡಿಸ್ಯಾರ । ಸೋ ॥
ತಮ್ಮ ಊಟುಗಳ ಮುಗಿಸ್ಯಾರ । ಸೋ ॥
ಬೇಟಿಗಾರ ಮಂದೆಲ್ಲಾ । ಬೇಟಿ ಆಡಾಕ ಹೊರಟಾರ । ಸೋ ॥

ಚನ್ನಮ್ಮ ನೋಡ್ಯಾಳೋ ಕಡಿಯಗಣ್ಣಾ । ಸೋ ॥
ನನ್ನ ಮಗನ ಬೇಟಿಗೆ ನೀನು ಹೋಗಬೇಡಾ । ಸೋ ॥
ನನ್ನ ಮಗನ ಬೇಟಿ ಆಡು ಬೊಮ್ಮ ನಮಗಿಲ್ಲಾ । ಸೋ ॥

ಬಾಪುಸಾಬ ಬಗ್ಗಿ ಕೋಣ್ಯಾಗ ಹೋಗತಾರ । ಸೋ ॥
ಬಾಪುಸಾಬನ ಮುಂಡಾಸ ಬಾಗಿಲಕ ಬಡದಾವಯ್ಯಾ
ಬಾಪುಸಾಬನ ಮುಂಡಾಸ ಬಾಗಿಲಕ ಬಡದ ಬಿದ್ದಾವಯ್ಯಾ
ನನ್ನ ಮಗನ ಬೇಟಿ ಆಡಾಕ ನೀನು ಹೋಗಬೇಡಾ

ಹಡದವ್ವ ಅಪಣಿಕೊಡ ನಮಗ ಅವಸಕಣಾ । ಇವಸಕಣಾ
ಅವು ನಮ್ಮ ತಲಿಮೇಲೆ । ಹೋದೇವ ಅಪ್ಪಣಿಕೊಂಡ ನಮಗೆ । ಸೋ ॥

ಬಾಪುಸಾಬ ಅಗಸಿಬಾಗಿಲಿಗೆ ಬರತಾರ । ಸೋ ॥
ಅಗಸ್ಯಾಗ ಗೂಳಿಗಳೆಲ್ಲ ಕಾದ ಹಿಡದಾವ । ಸೋ ॥
ಅಲ್ಲಿ ಅವಸಕಣಾ ಅದಾವಯ್ಯಾ । ಸೋ ॥

ಅವಸಕಣಾ । ಇವಸಕಣಾ ಅವು ನಮ್ಮ ತಲಿಮೇಲೆ ಇರಲೆಂದ
ಬೇಟಿ ನಾದಿಗೆ ನಡದಾರ । ಸೋ ॥

ಮುಂದಕ ಸಾಗ್ಯಾರು । ಹಂದೂರಿಗೆ ಬಂದಾರು
ಹಂದಿಯ ಬೇಟಿಗೊಳತಾರ । ಸೋ ॥

ಹುಲಿಯ ಕೊತ್ತಲಕ್ಹೋಗೆ । ಹುಲಿಗಳು ಹೊಡಿದಾರು
ಬಲಿಗಳು ಆ ಊರಿಗೆ ಕೊಡತಾರ । ಸೋ ॥

ಮುಂದೆರಡು ಗಾವುದ । ಬಂದಾರು ಅವರಲ್ಲೆ
ಬಂದಾರ ಬಾಲಿಗುಂದ ಕೊಳ್ಳಕ್ಕ । ಸೋ ॥

ಅತ್ತಿನವರು ಅತ್ತನಾದ್ಯಾ । ಇತ್ತನವರು ಇತ್ತನಾದ್ಯಾ
ತೆಗ್ಗಿಗೆ ತೆಂಬ ಮರಿಯನಾದ್ಯಾ । ಸೋ ॥

ಅಗಡಿ ದಿಗಡಿಹಳ್ಳಿ । ತಿಗಡಿ ತಿಮ್ಮನಹಳ್ಳಿ
ಕೋಗಿಲ ದಿಮ್ಮ ದಿಮಿಕಿಲೇ । ಸೋ॥

ಅಟ್ಟಂಬಾರ್‍ಯಾಣದಾಗ । ಕೆಟ್ಟಂಬು ಮದ್ಯಾನ ಬಿಸಿಲಾಗ
ಹೊಕ್ಕಾರೋ ನಡು ಗುಡ್ಡದಾಗ । ಸೋ ॥

ಬಾಪುಸಾಬ ಕಾನಂತ ಗುಡ್ಡದಾಗ ನಡದಾರಯ್ಯಾ । ಸೋ ॥
ಬಾಪುಸಾಬ ಹೊಕ್ಕ ಬೇಟಿಯ ಆಡತಾರು । ಸೋ ॥

ಹುಲಿಗಳು ಒಗದಾರು । ಕರಡಿಯ ಒಗದಾರ
ಚಿಗರಿ ಸಾರಂಗ ಒಗದಾರು । ಸೋ ॥ ಅವರಲ್ಲೆ
ನೂರೊಂದ ಬೇಟಿ ಒಗದಾರ । ಸೋ ॥

ಅಷ್ಟೊತ್ತಿಗೆ ಥ್ಯಾಕರೆಸಾಬ ಬಂದಾನವ್ವ । ಸೋ ॥
ತಮ್ಮ ಮಂದಿ ಕರಕೊಂಡ ಬಂದಾನವ್ವ । ಸೋ ॥

ಬಾಪುಸಾಬ ಬೇಟಿ ಆಡಿ ಅವರು ಬೇಸರಗೊಂಡಾ । ಸೋ ॥
ಬಾಪುಸಾಬ ಬೇಸತ್ತ ಬಂಗಲೇಕ ಹೋದಾರಯ್ಯ । ಸೋ ॥
ಬಾಪುಸಾಬ ಬೇಟ್ಯಾಡಿ ಅವರು ಬಳಲ್ಯಾರಯ್ಯಾ । ಸೋ

ಅಷ್ಟೊಂದು ಬೇಟಿ ಆಡು ಹೊತ್ತಿಗೆ ನೀರಡಿಸಿ ಗಂಟಲ ಒಣಗ್ಯಾವ । ಸೋ ॥
ಬಾಪುಸಾಬಗ ಎಲ್ಲೆಲ್ಲಿ ಸೆರಿ ನೀರಾ ಸಿಗಲಿಲ್ಲಾ । ಸೋ ॥
ಬಾಪುಸಾಬಗ ನೀರಡಿಕಿ ಬಹಳ ಆದಾವಯ್ಯ । ಸೋ ॥
ಥ್ಯಾಕರೆಸಾಬ ಕೋಲ್ಯಾಗ ಅಲ್ಲೆ ಹೋದಾರಯ್ಯಾ । ಸೋ ॥

ನೀರಡಿಕಿ ಹೋಗುವಂತ । ಮದ್ದುಗಳು ಕೊಡತೇವು
ನೀರುಗಳು ನೀವು ಕುಡಿಯಬೇಡಿರೋ । ಸೋ ॥ ಹಿಂಗದ
ಅಡಿವ್ಯಾನ ಆಕಳ ಹಾಲ ಕುಡಿಸ್ಯಾರ ಸೋ ॥

ಬಂದಾನ ಥ್ಯಾಕರೆ ತಂದಾನ ವಿಷವನು । ಮಳಲಿಸಿ ಹಾಲ ಕುಡಿಸ್ಯಾರ । ಸೋ ॥
ಕೋಲಿಗೆ ಕೀಲಿ ಜಡದಾರ ॥ ಸೋ ॥

ಬಾಪುಸಾಬನ ದನಿ ಬೆಕ್ಕಿನಂಗ ದನಿ ಅದಾವಯ್ಯ ।
ಬಾಗಿಲಕ ಕಾವಲಿಟ್ಟಿ ನಡದಾರಯ್ಯ ॥ ಸೋ ।

ಇಲ್ಲಿ ಈರವ್ವಗ ಸ್ವಪ್ನ ಇರುಳೆಲ್ಲಾ ಗವದಾವ ॥ ಸೋ ।
ಸೋಮನಾ ಸಾಲ್ಯಾಗ ಸೆಳಿಯ ಮಂಚದ ಮೇಗ
ಸಣ್ಣ ವೀರವ್ವ ಮಲಗ್ಯಾಳ ॥ ಸೋ ॥
ಮಲಗಿದ ವೇಳೆದಾಗ । ಸ್ವಪ್ನಗಳವರಿಗೆ ಬಿದ್ದಾವವ್ವ ॥ ಸೋ ॥

ಬಿದ್ದಂಥ ಸ್ವಪ್ನವ । ಎದ್ದು ತಾ ಹೋದಾಳು
ತಮ್ಮ ಅತ್ತಿ ಬಳಿಗ್ಹೋಗಿ ಅರುಹಿದಳು ॥ ಸೋ ॥

ಅತ್ತಿ ರುದ್ರವ್ವನ । ಅತ್ತಿ ಹೂವಿನ ಸೀರಿ
ನಾನ ಉಟ್ಟಿನ್ನಿ ನನ್ನ ಹಡದವ್ವ ॥ ಸೋ ॥
ಮುತ್ತಿನ ಸೆರಗಿಗೆ । ಬೆಂಕ್ಯಾರ ಹತ್ತ್ಯಾವು
ಎಷ್ಟು ನಂದಸಿದರು ನಂದಲಿಲ್ಲಾ ॥ ಸೋ ॥

ಅತ್ತಿ ರುದ್ರವ್ವನ । ಮುತ್ತೀನ ನೀ ದಂಡಿ
ನಾನ ಕಟ್ಟಿನ್ನಿ ನನ್ನ ತಾಯವ್ವ ॥ ಸೋ ॥
ಮುತ್ತೀನ ತೊಂಡಲಾ । ಕತ್ತರಿಸಿ ಬಿದ್ದಾವು
ಎಷ್ಟು ಹುಡಿಕಿದರೂ ಸಿಗಲಿಲ್ಲಾ ॥ ಸೋ ॥

ಸೊಪ್ನ ಬಿದ್ದಾವು ನೋಡಿರ್‍ಯಾ ದೊರಿಸಾನೀರಮ್ಮಾಗ
ಸೊಪ್ನ ಬಿದ್ದಾವ ನೋಡಿರ್‍ಯಾ ।

ಅರಮನಿಯ ಮುಂದೊಂದು । ಹಿರಿದಾದ ಮಂಟಪ
ಬರಜರಿಕಿನ ಕಾಪು । ಬರದಿಂದ ಹಾಸೂತ । ಕರೂತಿ ಜನರೆಲ್ಲಾ
ನೆರೆದು ಸಂಭ್ರಮಕೆ ಕೂಡಿದಂತೆ । ಸೊಪ್ನ ಬಿದ್ದಾವು ನೋಡಿರ್‍ಯಾ

ತಾಯವ್ವ ನಮ್ಮ ರಾಯರಿದ್ದಲ್ಲೇ
ಹೋಗೂನು ನಡಿಯೆ ॥ ಸೋ ॥

ಬಾಳಗುಂದ ಗುಡ್ಡಕ್ಕ । ಬೇಟಿನಾಡಾಕ ಹೋಗುವಾಗ
ಆಗಾರ ನನ್ನ ಮಾತು ಕೇಳಲಿಲ್ಲಾ ॥ ಸೋ ॥
ನಾನು ಬರುದಿಲ್ಲಾ ಹೋಗವ್ವ ॥ ಸೋ ॥

ಅವರ ಮಾತು । ಅವರ ಸಂಗಾಟ
ನಮ್ಮ ಮಾತು ನಮ್ಮ ಸಂಗಾಟ । ನಾವು ಹೋಗೂನು
ನಡಿ ನನ್ನ ಹಡದವ್ವ ॥ ಸೋ ॥

ಮಂದಿಯ ಕರಸ್ಯಾರು । ಅಂದಳನೇರ್ಯಾರು
ಬಂದರ ಬಾಳಗುಂದ ಕೊಳ್ಳಕ ॥ ಸೋ ॥

ಮುಂದ ಮುಂದ ಚನ್ನವ್ವ । ಹಿಂದ ಹಿಂದ ಈರವ್ವ
ಅದಕ ಹಿಂದ ಹಿಂದ ಜಾನಕಾಬಾಯಿ* ॥ ಸೋ ॥

ಎಲ್ಲರೂ ಅಂದಳನೇರ ಬರತಾರ ॥ ಸೋ ॥
ಕೋಲಿಗೆ ಕೀಲಿ ಜಡದಾರ ॥ ಸೋ ॥

ಚನ್ನವ್ವ ಕೀಲಿ ನೋಡಿದಳು ನದರೀಲೆ ॥ ಸೋ ॥
ಕಲ್ಲು ತಗೊಂಡು ಮುದ್ದರಿಗೆ ಜಡದಾಳಯ್ಯಾ ॥ ಸೋ ॥

ಅವರ ಕೀಲಿ ಮುರಿದೊಳಗ ಹೋದಾಳಯ್ಯಾ ॥ ಸೋ ॥
ಅವರೆಲ್ಲಾ ಹೋಗಿ ನೋಡ್ಯಾರಯ್ಯಾ ॥ ಸೋ ॥
ಅವರಲ್ಲೆ ತರುಳ । ಮರುಳಾಗ ಒರಿಗಿದ್ದಾರ ॥ ಸೋ ॥

ತಾಯವ್ವ ನನ್ನ ಹೊಟ್ಟ್ಯಾಗ ಸಂಕಟ ಬಹಳಾ ॥ ಸೋ ॥
ತಾಯವ್ವ ತಾನು ಉಳಿವಂಥ ಬಗೆನಿಲ್ಲಾ ॥ ಸೋ ॥

ತನ್ನ ಹೆಂಡತಿಯನ್ನು । ತಾ ತೊಡಿಮೇಗ ಕರಕೊಂಡಾ ॥ ಸೋ ॥
ಆನಿ ಕಟ್ಟಿದ್ದಾರ । ಅಂಬಾರಿ ಬಿಗದಿದ್ದಾರ
ನಾವಿಬ್ಬರು ಕೂಡಿ ಮೆರವಣಿಗೆ ॥ ಸೋ ॥
ಇಂಥ ಸ್ವಪ್ನ ನಮಗ ಬಿದಿದ್ದಾವರೆ ॥ ಸೋ ॥

ಸುರಳಿಗೂದಲ ಮೇಲೆ ಹರಳಿನುಂಗರನಿಟ್ಟ
ಹರದಿಗೆ ಹೂವ ಮುಡಿಸಿದಾ ॥ ಸೋ ॥

---

* ಜಾನಕಬಾಯಿ, ಚೆನ್ನಮ್ಮನ ಸೊಸೆ

ಗುಂಗರಗೂದಲ ಮೇಲೆ । ಉಂಗರದ ಬೆರಳಿಟ್ಟ
ರಂಬಿಗೆ ಹೂವ ಮುಡಿಸಿದಾ ॥ ಸೋ ॥

ಇಂದಿಗೆ ಹಡದಾಳೆನ್ನೆ । ನಾಳಿಗೆ ಹಡದಾಳೆನ್ನೆ
ಒಂದರ ದಿನ ತಾಯಿ ಆದಾಳೆನ್ನೆ ॥ ಸೋ ॥

ನನ್ನ ಸತಿಯಳ । ನಿನ್ನ ಬಿಟ್ಹೋಗುದು ಧರಮಲ್ಲಾ ॥ ಸೋ ॥
ಕಾಡ ಆಕಳ ಹಾಲಾ । ಕರಿ ಅಗ್ಗರಾಗ್ಯಾವಂದ
ಕರದ ನನಗವರು ಕುಡಿಸಿದ್ದಾರ ॥ ಸೋ ॥
ನಾನು ಉಳಿವಂಥಾ ಬಗೆನಿಲ್ಲಾ ॥ ಸೋ ॥
ಅರಮನೆಗೆ ನನ್ನ ಕರದೊಯಿರೋ ॥ ಸೋ ॥

ಮಂದಿಯ ಕರಿಸ್ಯಾರು । ಅಂದಳನೇರ್‍ಯಾರು
ಬಂದಾರು ಬಾಳಗುಂದ ಕಿತ್ತೂರ ದುರಗಾಕ । ಸೋ ।

ಮೇಲಮಾಡಿ ಮೇಲೆ । ಮೇಲಸುಪತ್ತಿಗಿಗೆ
ತಂದು ಕೋಲಿಗೆ ಒಲಿಸ್ಯಾರ । ಸೋ ॥

ತಾಯವ್ವ ಮಸರಾರ ಸೋಸಿ ಕೊಡ ನನಗ । ಸೋ ॥
ತಾಯವ್ವ ಹಾಲರ ತಂದು ಕೂಡ ನನಗ । ಸೋ ॥

ಅತ್ತಿ ಸೋಸ್ತ್ಯಾರು ಬಡಕೊಂಡಾರ ತಮ್ಮ ಎದಿಯ ಬಾಯಾ । ಸೋ ॥
ಹಕ್ಕ್ಯಾಗ ಅವರು ಹ್ವಾದಾರಯ್ಯ

ಕೆಂದಾಕಳ ಹಿಂಡಾಕ ಹ್ವಾದಾರ । ಕೆಂದ ಆಕಳ ಕರ ಒದ್ದ
ಅವರು ಬಿಳಿ ಆಕಳ ಕರ ಬಿಡತಾರಯ್ಯ । ಸೋ ॥

ಅಲ್ಲಿ ಇನ್ನು ಬಳಿ ಆಕಳ ತರವ ಬಿಡವಲ್ಲದ
ಅವರಿನ್ನು ಕರಿ ಆಕಳ ಹಾಲ ಹಿಂಡತಾರ । ಸೋ ॥

ಅವರಿನ್ನು ಹೂಜಿಯ ಹಾಲ ತುಂಬಿಕೊಂಡು
ಅವರು ಸಕ್ಕರಿ ಬೆರಸಿ ಹಿಡಕೊಂಡು
ಅತ್ತಿ ಸೊಸ್ತ್ಯಾರು ಅಳವೂತ ಕರೆವೂತ ನಡದಾರಯ್ಯ । ಸೋ ॥

ಅವರು ಕೋಲಿ ಒಳಗೆ ಹೋಗಿ ಹಾಲ ಕುಡಿಸಾಕ ಹ್ವಾದಾರಯ್ಯ
ಹಾಲಾರ ಒಳಗ ಹೋಗಲಿಲ್ಲ.
ತಾಯೀ ತೊಡಿಮ್ಯಾಲ ಹರಹರನೆಂದು ಪ್ರಾಣ ಹಾರ್‍ಯಾವಯ್ಯ

ಅತ್ತಿ ಸೊಸ್ತ್ಯಾರು ಬಡಕೊಂಡಾರ ತಮ್ಮ ಎದಿಯ ಬಾಯಾ
ಚೆನ್ನವ್ವ ನೂರೊಂದು ಬೊಬ್ಬಿ ಹೊಡದಾಳು

ಈರವ್ವ ತನ್ನ ಗಂಡನ ಶಿರವ ತಾ ತೊಡಿಮ್ಯಾಲ ಇಟಕೊಂಡು
ದೇವಾ । ಮಾತನಾಡು ದೇವಾ ಮಾತನಾಡೊ
ಮಾಲಿಂಗಸ್ವಾಮಿ[೧] ಮಾತನಾಡೊ

ಗಂಡು ಮಕ್ಕಳ ಬೇಡಿ । ಹೊಂಡೇದ ಬಸವಗ
ಗುಂಡುಗಡಿಗಿ ಮಾಡಿಸಿ ಕೊಡುವೆನೆಂದು । ಬೇಡಿಕೊಂಡಿದ್ದೀರಾ
ಗಂಡ ಮಕ್ಕಳ ಫಲವು ಮೊದಲಿಲ್ಲ

ಹೆಣ್ಣು ಮಕ್ಕಳ ಬೇಡಿ। ಕನ್ನೆ ದ್ಯಾಮವ್ವಗ
ಹೊನ್ನೀನ ಮೂಗುತಿ ಮಾಡಿಸಿಕೊಡುವೆನಂದು ಬೇಡಿಕೊಂಡಿದ್ದೀರಾ
ಹೆಣ್ಣು ಮಕ್ಕಳ ಫಲವು ನಮಗಿಲ್ಲ । ದೇವಾ ಮಾತನಾಡೋ

ಹೆಣ್ಣು ಮಕ್ಕಳ ಬೇಡಿ । ಮೂಗುತಿ ಕೋಣೆ ತುಂಬಿದ್ದೀರಾ
ಗಂಡುಮಕ್ಕಳ ಬೇಡಿ । ಕೈಕಡಗದ ಕೋಣಿ ತುಂಬಿದ್ದಿರಾ
ಗಂಡುಮಕ್ಕಳ ಫಲವು ನಮಗಿಲ್ಲ । ಹೆಣ್ಣು ಮಕ್ಕಳ ಫಲವು ನಮಗಿಲ್ಲಾ

---

೧. ಲಿಂಗೈಕ್ಯನಾದ್ದರಿಂದ ಮಾಲಿಂಗನಾದನೆಂಬ ಭಾವನೆ.

ಅವರಾದಿ ಈರಪ್ಪ ಅಂಬಡಗಟ್ಟಿ ಗುರುಸಿದ್ದಪ್ಪ ನೀವು ಬರ್‍ರ್ರ್ಯ
ನನ್ನ ಮಕ್ಕಳಿರಾ । ಪಟ್ಟಣಶೆಟ್ಟಿ ಗುರುಸಿದ್ದಪ್ಪ, ಹುರಕಡ್ಲಿ ಮಲ್ಲೇಶಪ್ಪ
ಕನ್ನೂರ ಮಲ್ಲಪ್ಪ ನೀವು ಬರ್‍ರ್ರ್ಯ ಮನಿ ಮಕ್ಕಳಿರಾ[೧]

ನಾವಿನ್ನು ಇದಕೇನ ಹಂಚಿಕೆ ಮಾಡೂನು ಹೇಳಿರೊ
ನಾವಿನ್ನು ಇದಕೇನ ಯುಗತಿ ಮಾಡೂನು ಹೇಳಿರೊ

ನಟ್ಟನಡು ಬಟ್ಟಲೆ ಬಳ್ಳೊಡಿ ಈರಣ್ಣ ।
ಅವರಿಗೆ ತುಪ್ಪದ ದೀವಿಗಿ ಉರಿಯತಾವ

ಸತ್ತಂಥ ಸುದ್ದಿ ಹತ್ತಿತು ಧಾರವಾಡಕ
ಮತ್ತೆ ಥ್ಯಾಕರೆಸಾಬ ಬರತಾನ । ಸೋ ಅನ್ನಿರೆ

ಥ್ಯಾಕರೆಸಾಬ ಮಾಲಿನ ಮ್ಯಾಲೆ ನಿಲಿನಿಂತ
ಅವ ಇನ್ನ ಮೂಗತಿ ಕೋಣಿ ತಗದಾನ ।

ಅದರ ಕೀಲಿ ತಗದು ತನ್ನ ಕೀಲಿಯ ಜೋಡಿಸ್ಯಾನ ।
ಅವ ಮತ್ತೊಂದು ಕೋಣಿಗೆ ನಡದಾನ

ಖಜಾನಿ ಕೋಲಿಗೆ ನಡದಾನ । ಅದಕೊಂದು ಕೀಲಿ ಜೋಡಿಸ್ಯಾನ
ಥ್ಯಾಕರೆ ಮುಸುವ ಬೂಟಗಾಲಿಲಿ ಒಳಗ ಹೊಕ್ಕಾನವ್ವ
ನೋಡಿದ ಚನ್ನವ್ವಗ ತಡೆಯಾವು ತಾಪುಗಳು
ಒಳಗೊಳಗ ಹಲ್ಲು ಕಡದಾಳೊ ।

ಥ್ಯಾಕರೆ ಸಾಹೇಬ ಆ ಕೀಲಿ ತಗದ ತನ್ನ ಕೀಲಿ ಜೋಡಿಸ್ಯಾನ
ಹತ್ತು ತಿಂಗಳ ನಾನು ಗುತ್ತಿನಾಡಗ್ಹೋಗಿನ್ನಿ । ಇಂಥ ದೌಲತ ಕಂಡಿಲ್ಲ
ಅವ ಇನ್ನ ಮಾಲಿನ ಮ್ಯಾಲನಿಂತು ಕಿಲಿಕಿಲಿ ತಾನು ನಗತಾನ
ಈ ಸಂಸ್ಥಾನ ನಮ್ಮ ಸ್ವಾಧೀನ ಆದೀತಂದಾನ

---

೧. ಈ ಮೂರು ಸಾಲಿನಲ್ಲಿ ಬರುವ ಹೆಸರಿನವರ ವಂಶಜರು ಈಗಲೂ ಇದ್ದಾರೆ.

ರಾಜ ರಾಜರ ಮಂದಿ ರೇಜಗಟ್ಟಿ ಬರತಾರು
ರಾಜೆದಾಗೊಬ್ಬರುಳಿದ್ಹಂಗ
ಹನ್ನೆರಡು ಸಾವಿರ ದಂಡು ಇನ್ನೆರಸು ಸಾವಿರ ಶಿಲೆದಾರು
ಮನ್ನಿಸಿ ಸಲಾಮು ಕೊಡತಾರ ।
ಇಪ್ಪತ್ತು ತೋಫಗಳು ತಪ್ಪದೆ ಹೊಡದಾರ ಅಪ್ಪದೇಸಾಯಿಗ ಸಲಾಮು

ಒಂಟಿಯ ಬಂಟರು ಡಂಕೇವ ಹೇರ್‍ಯಾರು । ತೇರಿನ ಮುಂದ ನಡದಾರು
ಆನಿಯ ಮಾವುತ ಅಂಬಾರಿ ಬಿಗದಾರು । ತೇರಿನ ಮುಂದ ನಡದಾರು

ಬಾಪುಸಾಹೇಬನ ತೇರುಕಟುವಂಥ ಸಡಗರ
ಬಾಪುಸಾಹೇಬನ ತೇರಿನ ಕಳಸ ಇಡುವಂಥ ಸಡಗರ

ಅವರನ್ನ ತೇರಿನ ಒಳಗ ಕುಂದ್ರಿಸ್ಯಾರ । ಸೋಮವಾರ ಪೇಟಿಗಿ ನಡದಾರ
ಊರವರು ನೀರು ನೀಡುವಂಥ ಸಡಗರ ಕಾಯಿ ಒಡಿಯುವಂಥ ಸಡಗರ

ಆ ತೇರ ಹೊತ್ತ ಬೇಸ್ತಾರ ಪ್ಯಾಟೀಗೆ ತರತಾರ
ಕಾಯ ಒಡಿವಂಥ ಸಡಗರ । ನೀರು ನೀಡುವಂಥ ಸಡಗರ

ಅವರಿನ್ನು ಕಲಮಠಕ ಸಾಗಿ ಬರತಾರ
ಹೈದರಾಬಾದ ನನ್ನಪ್ಪ ಕೊಟ್ಟ ಬುಗಡಿ ಬಿಚ್ಚಬ್ಯಾಡಿರೆ

ನನ್ನಪ್ಪ ಕೊಟ್ಟ ನತ್ತ ನೀವು ಬಿಚ್ಚಬ್ಯಾಡಿರೆ
ನನ್ನಪ್ಪ ಕೊಟ್ಟ ಕಾಲುಂಗರ ಇನ್ನ ಬಿಚ್ಚಬ್ಯಾಡಿರೆ

ಈರವ್ವ ಚೀರ್‍ಯಾಳ ಮಕ್ಕಳಿದ್ದವ್ವಗಳಿರಾ ಇದರಿಗೆ ಬರಬ್ಯಾಡ್ರೆ
ಮುತ್ತೊದಿ ನೀ ಅಮ್ಮಗಳಿರಾ ನನ್ನ ಚಾಂಡಾಳಿ ಇದರಿಗೆ ಬರಬ್ಯಾಡ್ರೆ
ಮಣ್ಣಕೊಟ್ಟ ಎಲ್ಲಾರು । ಅರಮನಿಗೆ ಸಾಗಿ ಬರತಾರ ॥

❖❖

೭

ಕರಿಯಾತಿ ಕಾಳಗ

[ಶಿವಲಿಂಗ ರುದ್ರಸರ್ಜನ ಮರಣದ ನಂತರ ಬಳ್ಳೋಡಿಯಲ್ಲಿ ತುರುಕಾರರು ದಂಗೆ ಹೂಡಿದರು. ಅವರನ್ನು ಸದೆ ಬಡೆಯಲು ಚನ್ನಮ್ಮರಾಣಿಯು ತನ್ನ ಸೇನಾಧಿಕಾರಿಯಾದ ರಾಮಯ್ಯನನ್ನು ಕಳಿಸಿದಳು. ರಾಮಯ್ಯನನ್ನು ತುರುಕಾರರು ಸೆರೆ ಹಿಡಿದರು. ಅಲ್ಲಿಗೆ ಚೆನ್ನಮ್ಮ ರಾಣಿಯು ಸ್ವತಃ ಹೋಗಿ ಅವರನ್ನು ಸದೆ ಬಡೆದು ರಾಮಸ್ವಾಮಿಯನ್ನು ಬಿಡಿಸಿಕೊಂಡು ಬರುವಳು. ಇದಕ್ಕೆ 'ಕರಿಯಾತಿ ಕಾಳಗ' ವೆಂದು ಅನ್ನುವರು; ಇದು ಕೋಲು ಪದ. ಇದನ್ನು ಉಡಿಕೇರಿಯಲ್ಲಿ ನಬೆವ್ವ ಪಿಂಜಾರ ಎಂಬುವಳು ಹಾಡುತ್ತಾಳೆ]

ಬಳ್ಳೋಡಿ ಗ್ರಾಮಕ ಬಂದಾಳ ಚನ್ನವ್ವ । ಚೌಬಾರಿಗೆ ಡೇರೆ ಹೊಡಿಸ್ಯಾಳ ॥ ಕೋಲ
ಚೌಬಾರಿಗೆ ಡೇರೆ ಹೊಡಿಸ್ಯಾಳ ಚನ್ನವ್ವನ । ಹತ್ತನೂರ ಹಳಬರ ಬಂದಾರ ॥
ಹತ್ತನೂರ ಹಳಬರ ಒತ್ತಿಲಿ ಐದಾರ । ಏಳಸಾವಿರ ಬಂಟರ ಬರತಾರ ॥
ಏಳಸಾವಿರ ಬಂಟರು ಬರತಾರೊ । ಬಂಟರು ಕತ್ತಿ ಕಂಡೇವ ಹಿರದಾರ ॥

ಕತ್ತಿ ಕಂಡೇವ ಹಿಡದಾರ ಬಂಟರ । ಬಂದ ಬೈಲಿಗೆ ನಿಲ ನೀಂತ್ಯಾ ॥
ಬಂದ ಬೈಲಿಗಿ ನೀಲ ನಿಂತು ಬಂಟರು । ಸೆಲ್ಲೆವ ನಡುವಿಗೆ ಸುತ್ತಾತಾರ ॥
ಸೆಲ್ಲೇದ ಸೆರಗ ನಡುವಿಗೆ ಸುತ್ತಿಕೊಂಡ । ಬಂದ ಬೈಲಿಗೆ ನಿಲತಾರ ॥

ಬಳ್ಳೋಡಿ ಗ್ರಾಮಕ ನಿಂತಾಳ ಚನ್ನವ್ವ । ಎಲ್ಲ ಮಕ್ಕಳನ ಕರಿಸ್ಯಾರ ॥
ದೊಡ್ಡ ದೊಡ್ಡ ಮಕ್ಕಳಿಗೆ ದೊಡ್ಡಕ್ಕಿ ಪಡಿ ಕೊಡಿರಿ । ಒಡ್ಯಾಣ ಕೊಡಿರಿ ನಡುವೀಗೆ
ಸಣ್ಣ ಸಣ್ಣ ಮಕ್ಕಳಿಗೆ ಸಣ್ಣಕ್ಕಿ ಪಡಿ ಕೊಡಿರಿ । ಸೆಲ್ಲೇವ ಕೊಡಿರಿ ನಡುವೀಗೆ

ಹತ್ತಲಾರದ ಗುಡ್ಡ ಹತ್ತೇತಿ ನಿನ ದಂಡು ॥ ಕಟ್ಟಿ ಸರಪಣಿ ಜಲ್ಲಿ ಎಳೆಯೂತವ್ವ ।
ಕಟ್ಟಿ ಸರಪಣಿ ಜಲ್ಲಿ ಎಳೆಯೂತ ರಾಮಸ್ವಾಮಿ* ಹೊಕ್ಕ ಮಾಡಂದ ಸವ ಜಗಳವ್ವ ।
ಏರಲಾರದ ಗುಡ್ಡ ಏರಿತು ನಿನ ದಂಡು॥ ಸಣ್ಣ ಸರಪಣಿ ಜಲ್ಲಿ ಎಳೆಯೂತವ್ವ
ಸಣ್ಣ ಸರಪಣಿ ಜಲ್ಲಿ ಎಳೆಯೂತ ರಾಮಸ್ವಾಮಿ ಸಾಗಿ ಮಾಡಂದ ಸವ ಜಗಳವ್ವ

ಹಾಲ ಕಾಯಲಿಲ್ಲ ಬ್ಯಾಳಿ ಬೇಯಲಿಲ್ಲ । ಸೊಸಿ ನೀರಿಗೆ ಹೋಗಿ ಬರಲಿಲ್ಲ ।
ಹಸಮಕ್ಕಳ ತಲಿಯ ಹೊಡದಾರವ್ವ

ತುಪ್ಪ ಕಾಯಲಿಲ್ಲ ಅಕ್ಕಿ ಬೆಯ್ಯಲಿಲ್ಲಾ । ಅಕ್ಕಾ ನೀರಿಗೆ ಹೋಗಿ ಬರಲಿಲ್ಲ ॥
ಚಿಕ್ಕಮಕ್ಕಳ ತಲೆಯ ಹೊಡದಾರವ್ವ ।

ಅಡ್ಡದಾಗ ಹೊಂದಾರೊ ದೊಡ್ಡವರು ತುರಕಾರು ।
ಸಬ್ಬಗಲ್ಲಾಗ ಒಲಿ ಹೊಡೆ । ರಾಮಸ್ವಾಮಿ
ದೊಡ್ಡವನ ಸೆರೆಯ ಹಿಡಿದಾರವ್ವ ।

ಕಾಸದಾಗ ಹೊಂದಾರ ದೇಶಕರು ತುರಕಾರು
ನಟ್ಟಗಲ್ಲಾಗ ಒಲಿ ಹೊಡೆ ರಾಮಸ್ವಾಮಿ ।
ದೇಶಕನ ಸೆರೆಯ ಹಿಡದಾರವ್ವ ॥

ಸೆರೆಯ ಹಿಡದವರನ್ನು ತರದಳೋ ರುಂಡವ । ಭರದಿಂದ ಬಿಡಿಸಿ ತರತಾಳೊ
ಕರಿಸ್ಯಾಳೋ ಮಂದಿನ್ನ ಕೊರಿಸ್ಯಾಳೊ ಕೈಕಾಲು । ತ್ವರದಿಂದ ಕಿತ್ತೂರಕ ಸಾಗ್ಯಾಳೊ ॥

❖❖

* ರಾಮಸ್ವಾಮಿ, ಚನ್ನಮ್ಮ ರಾಣಿಯ ಸೈನ್ಯದೊಳಗಿನ ಓರ್ವ ಅಧಿಕಾರಿ ಬಡಾದ ಅಂಕಲಗಿಯ ಮಠದವರು. ಆ ಮನೆತನದವರು ಈಗಲೂ ಇದ್ದು ಅವರಿಗೆ ಹವಾಲ್ದಾರ ಎಂದು ಕರೆಯುತ್ತಾರೆ.

೮

ಕಿತ್ತೂರ ಮಿಂಚಿನ ಕಾಳಗ*

ಪಟ್ಟಗಟ್ಟತ್ತೆವ್ವ ಪಾದಕ ಎರಗುವೆನು ಹಿಮ್ಮತ ಬಾಳ ಹಿಡಿದಾಳೋ ।
ಹಿಮ್ಮತ್ತಬಾಳ ಹಿಡಿದಾಳಣ್ಣಾ ।
ಹಿಂದ ಮುಂದ ನೋಡಲಿಲ್ಲ ಮಂದಿ ನುಣ್ಣಗೆ ಕೂಡ್ವಾಕೆ ।
ಸದರಿನ ಮುಂದೆ ಸಾಲ ಹಂದರ ಬಾಜೂಕೆ ।
ಹಿರಿಯರಿಗೆ ಹಚ್ಚಡ ಮುಂಡಾಸ ಮುಯ್ಯಹಾಕಿ ।
ಅರಸಗ ಗಂಧದೆಣ್ಣಿ ಪರಿಮಳ ಧರಿಸಿ ।
ಸದರಿನ ಮೇಲ್ಹತ್ತಿ ಬುರಕಿನಾ ಹಾಕಿ ।
ಪಟ್ಟಾಕ ಆದನಣ್ಣಾ ಇವ ಮುಖ್ಯ ।
ಹೊರಗೆ ಹೋಗಿ ನಗಾರಿ ಮೇಲೆ ಕೈ ಹಾಕಿ
ಹುಸಿಮದ್ದ ಹಾಕಿ ಫರಂಗಿ ಜಡಿಸಿ ।
ಹಿಮ್ಮತ ಬಹಳ ಹಿಡದಾಳೊ ।
ಚೆನ್ನವ್ವ ಮೊಮ್ಮಗ್ಗ ಪಟ್ಟಗಟ್ಟ್ಯಾಳೋ ॥೩॥

ಪಟ್ಟಗಟ್ಟಿದ ಸುದ್ದಿ ಮುಟ್ಟಿತೋ ಧಾರವಾಡಕ
ಸಿಟ್ಟಾಗಿ ಹೊಂಟೋ ಕಿತ್ತೂರಿಗೆ ।
ಸಿಟ್ಟಿಗೆದ್ದ ಠಾಕೂರಸಾಬ ಬಿಟ್ಟಾನಣ್ಣಾ ಧಾರವಾಡ ।
ನಡಿದಾನಣ್ಣಾ ಕಿತ್ತೂರ ದಾರಿಪಿಡಿದ ।
ನಡದಾನಂಣ್ಣಾ ಕಿತ್ತೂರ ದಾರಿಹಿಡಿದ ।

* ಹೊಸಟ್ಟಿ ಶ್ರೀ ಗೂಳಪ್ಪ ಲಕ್ಕಪ್ಪ ಮಡಿವಾಳರ ಲಾವಣಿಯಿಂದ ಆಯ್ದುದು.

ದಂಡೆಲ್ಲ ಮುಂದಕ ಜಾಡಿಸಿ ನಡಿದ
ಆನಿ, ಒಂಟಿ, ಕುದುರಿ, ಕಾಲಾಳ ನಡೆದ ।
ಹಿಂದ ಮುಂದ ಫಿರಂಗಿ ಚಕ್ಕಡಿ ನಡೆದ ।
ದಂಡ ನಡದೀತೋ ಕಿತ್ತೂರ ಬೈಲಿಡದ ।
ಸಾಬ ನಡದಾನೋ ಕಿಲ್ಲೇದ ಹೊಂದ್ಹಿಡಿದ ।
ಅಗಸಿಯ ಬಾಗಿಲಕ ಧಣದಣ ನಡದ ।
ಒಳಗಿನ ಮಂದಿಗಿದಿರಾಗಿ ನಡದ ।
ಒಳಗಿನ ಬಾಗಿಲಕ ಧಣ ಧಣ ನಡದ ।
ಅಗಸಿಯ ಬಾಗಿಲ ನುಣ್ಣಗೆ ಜಡಿದಾ ।
ಸಾಹೇಬ ಹೋಗಿ ಕುಂತಾನೋ ಸದರಿಗಿ ಆಸೇವ ತೊರೆದ ।
ಒಳಗಿನ ಚೆನ್ನವ್ವನ ಹುಕುಮಾಗಿ ಹೊರಬಿದ್ದ ಕಡದಾರೋ ।
ಠಾಕೂರಸಾಬ ಬಿದ್ದಾನೋ ಗುಂಡ ಬಡಿದ ।
ಮುಂದೆ ಹೋಗಿ ತುರುಕರನ ಕಡಿದ ।
ಆ ದಿವ್ಸ ಮುನ್ನೂರು ಕಾಲಾಳು ಮಡಿದ ।
ಕಾಳಗ ಆದಿತೋ ಕತ್ತಲಗಡದ ।
ಜಗಳದ ವಿಪರೀತ ಎಂದೆಂದಿಗೂ ತೀರದೆಂದಾ ।
ಹೊರಗಿನ ಮಂದಿಗಿ ಕರಮರಿ ಕವದಂಗ
ಮುರದ ಹೋಗಿದಾರೋ ಒಡಕಿಳಿದ ।
ವ್ಯರ್ಥ ನಮ್ಮ ದೊರೆ ಸತ್ತಾನಂತಾ ತೋಫಿನವರು
ಕುಂತಾರಣಣಾ ಕುದರಿ ಇಳಿದ ।
ಸಿಟ್ಟಾಗಿ ಹೊಂಟೋ ಕಿತ್ತೂರಿಗೆ ಠಾಕೂರಸಾಬನ
ಇಟ್ಟು ಕೊಂದಾರೋ ಗುಂಡೀಲಿ ॥೪॥

ಸಾಬ ಸತ್ತಾನಂತಾ ಗಾಬಾದ ಮಂಡಲಿಸಾಬಾ
ಕಾಗದ ಬರದ ಕೆಂಪನಿಗೆ ।
ಕಾಗದ ಬರದ ಕಂಪನಿಗೆ ।
ಕಾಗದ ಬರದ ನನ್ನ ಕಾರ್ನಿಕ ಠಾಕೂರಸಾಬ
ಕಾಳಗಕ ಹೋಗಿ ಮಡಿದಾ ನೆಂದ ।
ಹತ್ತೆಂಟ ಫಿರಂಗಿ ಪಾರಾದವರ ।

ಮುನ್ನೂರ ಟೆಪ್ಪಗಿ ಮುಳುಗಿದವಂದ ।
ಇಬ್ಬರ ಸರದಾರ ಕೈಸೆರಿಯಂದ ।
ಕಿತ್ತೂರ ಬಲಾ ಬಾಳೈತೆಂದ ।
ನಮ್ಮ ಕತ್ತಿ ನಾಟುವಂಗಿಲ್ಲೆಂದ ।
ಒತ್ತರದಿ ದಂಡು ಬೇಗಬರಲೆಂದ ।
ಅಲ್ಲಿ ಉಂಡ ಇಲ್ಲಿ ಕೈ ತೊಳಿಯೆಂದ ।
ಕಾಗದ ಬರೆದು ಕಂಪನಿಗಿ ಗವರ್ನರಸಾಬ
ಹತ್ತು ಸಾವಿರದ ಫೌಜಿಗೆ ॥೬॥

ಮಿಂಚಿನ ಕಾಳಗ ಮೆಚ್ಚಿದಳೊ ಚೆನ್ನವ್ವ।
ಊಚ ಬೆಳ್ಳಿಯ ಕೊಡತಾಳೋ ।
ಊಚ ಬೆಳ್ಳಿವರಿ ಮುಂಗೈ ಸರಪಣಿ
ಹೆಚ್ಚಿನ ಬಂಟರಿಗೆಲ್ಲಾ ಹಚ್ಚಡ ಮುಂಡಾಸ ಹೆಚ್ಚಿನ್ನೊದಿಕ್ಯಾಗೆ ।
ಮಾವನ ಮುಖ ಮನೆಗುಂಡಾಗೇ ।
ಒಪ್ಪುಳ್ಳ ಸಿಪಾಯಿಗೆ ಅಪ್ತಾಗಿರಿಯಾಗೆ ।
ಕಂಠಿಯ ಸರಾ ಕರಕಿ ತುರಾಯಿಂಗೆ
ಕಾಲಾಳು ತಲಿಯ ಮೇಲೆ ಚೂರಾಗೆ ।
ಕಾಳಿ ಹೊಲ್ಯಾ ಕಡೇಕ ಆಗಿ ಕಾರ್ನಿಕ ಮೊದಲಾಗಿ
ವಿಳೇವ ಕೊಟ್ಟಾಳ ಚೆನ್ನವ್ವ ಪೋಗಿ ।
ಊಚ ಬೆಳ್ಳಿವರಿ ಮುಂಗೈ ಸರಪಣಿ ಹೆಚ್ಚಿನ ಬಂಟರಿಗೆಲ್ಲ
ಹಚ್ಚಡ ಮುಂಡಾಸ ಹೆಚ್ಚಿನ ಹೊದ್ದಿಕ್ಯಾಗೇ ।
ಕೊಡ ತಾಳೋ ಚೆನ್ನವ್ವ ಒಪ್ಪಿಸಿಕೊಟ್ಟ ನಡದಾಳೋ ॥೯॥

ಸತ್ತಂಥ ಕಾಂತರಿಗೆ ಅಳವುರೇನತ್ತೆವ್ವ
ಗೊತ್ತಿನ ಪರಿಯ ಹಿಡಿಯವ್ವ।
ಸತ್ತಂಥ ಕಾಂತರಿಗೆ ಅಳವುದೇ ಸತ್ತೆವ್ವ
ಈರಪ್ಪ ದೇಸಾಯಿ ಇರಲಿಲ್ಲ ಈ ಹೊತ್ತಿಗೆ ।
ಮಲ್ಲಪ್ಪ ದೇಸಾಯಿ ಮಣ್ಣಿಗಿ ಮರಿಯಾದ ।
ಶಿವಲಿಂಗ ರುದ್ರಸರ್ಜನು ಶಿವನ ಹತ್ತರ ಹೋದಾ ।

ಬಾಪೂಸಾಹೇಬ ತಾನು ಬಾರದ ಹಾದಿಗೆ ಹೋದಾ ।
ಪಾಪಿ ಫಿರಂಗ್ಯಾರು ಶ್ರಾಪಗೊಳಗಾದರು ।
ಬಿಕ್ಕುತ ಬಿದರುತ ಕಣ್ಣೀರ ಉದರಿಸುತ್ತ ಸಣ್ಣ ಸೆರಗಿಲೆ ಒರಸುತ ।
ಅಕ್ಕ ಚೆನ್ನವ್ವನ ಅತ್ತಂಥ ಕಂಣೀರು
ಚಿಕ್ಕ ಹೊಳೆಯಾಗಿ ಹರಿದಾವೊ ॥೧೩॥*

❖❖

* ೧. ಈ ಹಾಡಿನ ಪದ್ಯಸಂಖ್ಯೆ ಮುದ್ರಿತ ಪ್ರತಿಯಲ್ಲಿಯೇ ಅಸ್ತವ್ಯಸ್ತವಾಗಿದ್ದು, ನಾವು ಅದನ್ನೇ ಇಟ್ಟುಕೊಂಡಿದ್ದೇವೆ.

೯

ವೀರರಾಣಿ ಚೆನ್ನವ್ವ

ದುಂದುಮ ದುಮ್ಮಿ ಸೊಲ್ಲಿಗೆನ್ನಿರಿ
ದುಂದುಮೆ ಬಸವಂತನ ಹಬ್ಬ ॥ಪಲ್ಲ॥

ಹಿತದಿಂದ ಸರ್ವರಿಗ್ಹೇಳುವೆ ಬ್ರಹ್ಮನ
ಸತಿ ಗಣನಾಥನ ಬಲಗೊಂಡು । ಮಾ
ಮತಿಯ ಪಾಲಿಸೆಂದು ತ್ರಿಜಗದೀಶನ
ಸ್ತುತಿ ಮಾಡುವೆನು ದುಂದುಮಿ ಪದದಿ ॥೧॥

ಕಥೆಯ [೧][ಲ್ಲ][೧] ಸರ್ವರು ಕಂಡಂಥ ಮಾತನು
ರತಿಯಿಟ್ಟು ಲಾಲಿಸಬೇಕೆಂದು । ಮಾ
ಕ್ಷಿತಿಯೊಳು ಕಿತ್ತೂರ ಮೇಲೆ ಹುಟ್ಟಿದಂಥ
ಮಥನದ ಪರಿಯನು ಪೇಳ್ವೆನು ಮುಂದೆ ॥೨॥

ಮೊದಲು ಥ್ಯಾಕರೆಸಾಯ್ಪ ರಾಜ್ಯ ನಮ್ಮದೆಂದು
ಮುದದಿಂದ ಕಿತ್ತೂರಿಗೆ ಬರಲು । ಮಾ
ಹದುಳಪ್ಪಗೆ ಪಟ್ಟಗಟ್ಟಿ ಅವರು ತಮ್ಮ
ಸದನದಿ ಸುಖದಿಂದ ಇರುತಿರಲು ॥೩॥

೧–೧ ಲ್ಲಿ (ಮೂ)

ಅದ ಕಂಡು ಸಾಯ್ಬ ಕೋಪವ ತಾಳುತ್ತೈದಾನು
ಇದಕ್ಯಾರಪ್ಪಣೆ ಕೊಟ್ಟರೆಂದು । ಮಾ
ಇದಿರೋಳಿರುವಂಥ ಬಲ್ಲಾಳು ಮುರಿದಾವು
ಸದರ ಬಿಟ್ಟಳಿಯೆಂದು ಸಾಯ್ಬ ನುಡಿದ ॥೪॥

ಬಾಲೆ ಬಾ ಮುಂದಕ್ಕೆ ನಿನ್ನ ಗಂಡ ಎನ್ನ
ಪಾಲಿಗೆ ಬದುಕು ಬರೆದುಕೊಟ್ಟನು । ಮಾ
ಕಾಲವಾದ ಮಾತು ಸಡೆಯೆನೆ ನೀ ಬಾಲೆ
ವಾಲಿ ನೋಡೆಂದೊಗೆದನು ಮುಂದೆ ॥೫॥

ಆಲಸ್ಯವ್ಯಾತಕ್ಕೆ ಕೇಳೆನ್ನ ಮಾತನು
ವಾಲಿಸಿ ಹೇಳತಾರೆ ಸುಮ್ಮನೆ । ಮಾ
ಮೇಲೆ ಸುತ್ತಲ ದೇಶ ನಮ್ಮದು ಇದರೊಳು
ಕಾಲಿಟ್ಟು ಧಕ್ಕೆ ತಿನಬ್ಯಾಡ ನೀ ॥೬॥

ಆ ಕ್ಷಣ ಅವನೆಂದ ಮಾತನು ಕೇಳುತ
ಕುಕ್ಷಿಯೊಳಗೆ ಬ್ಯಾಗಿ ಜನಿಸಿತು । ಮಾ
ದಾಕ್ಷಿಣ್ಯ ಇಂದಿಗೆ ತೋರಬಾರದೆಂದು
ಸೂಕ್ಷ್ಮದ ಸೊನ್ನೆಯ ಮಾಡಿದಳಾಗ ॥೭॥

ನೂಕಿವನ ಎದೆ ಹಿಡಿದು ಹಿಂದಕ್ಕೆ ಇದರಿಂದ
ಕಕ್ಸ ಬಂದರೆ ನೋಡಬಹುದೆಂದು । ಮಾ
ಅಕ್ಸಿ ಬಾಗಿಲವನ್ನು ಅನುಮಾನವಿಲ್ಲದೆ
ಹಾಕ್ಸ್ಯಾಳು ಕದನಕ್ಕೆ ಮುಖವಾದಿತಿನ್ನು ॥೮॥

ಜಗಳದ ಪರಿಯನು ಪೇಳುವೆ ಮನಸಿಟ್ಟು
ಸುಗುಣರು ಚೆಂದಾಗಿ ಕೇಳಿರಿ । ಮಾ
ಮಗಿಮಳಿಯಂತೆ ಗುಂಡ್ಹಾರುತಿರೆ ಮದ್ದಿನ
ಹೊಗೆ ಮುಸುಕಿತು ಕಣ್ಣಮುಂದೆ ॥೯॥

ಮಿಗಿಲಾದ ಥ್ಯಾಕರೆಸಾಯ್ಬ ತಾ ಮಡಿದಾನು
ಸಿಗಲಾಗಿ ಉಳಿದವರು ಕೈಸೆರೆಯ। ಮಾ
ನಗೆಯಲ್ಲ ನಾಲ್ಕು ದಿಕ್ಕಿನ ದಂಡು ಮುರಿದು
ಹೆಗಲ ಮ್ಯಾಲಿನ ಕೋವಿ ಒಗದೋಡಿತು ॥೧೦॥

ಸತ್ತ ಥ್ಯಾಕರೆಸಾಯ್ಬ ಎಂಬಂಥ ಸುದ್ದಿಯು
ಹತ್ತಿತ್ತು ಧಾರವಾಡ ಪುರಕಿನ್ನು । ಮಾ
ವ್ಯರ್ಥವಾಯಿತೆಂದು ಎಲ್ಲಾರು ಮಾತಾಡಿ
ಉತ್ತರ ಬರೆದಾರು ವಿಲಾಯ್ತಿಗೆ ॥೧೧॥

ಅತ್ತಲಾ ಸುದ್ದಿಯು ಹೋದಾಕ್ಷಣದಲ್ಲಿ
ಕಿತ್ತೂರನಾಳ್ವಂಥ ಜಾಣೆಯು । ಮಾ
ಮುತ್ತಿಗೆ ಬರುತದೆ ಬೇಗನೇಳಿರೆಂದು
ಸಾಹಿತ್ಯ ಪೂರೈಸು ಪುತ್ರಿಯೇನೆಂಬೆ ॥೧೨॥

ಮುಚ್ಚಗಾವಿಯ ಚಣ್ಣ ಮುಂಗೈಯ ಸರಪಳಿ
ಬಿಚ್ಚುಗತ್ತಿಯ ಸಾರ ಕ್ಷತ್ರಿಯರು । ಮಾ
ಹುಚ್ಚನ್ನ ಮುಂಡಾಸ ಮೇಲೆ ಸುಮಾನ ಗರಿ
ಹೆಚ್ಚೀsನ ಬಂಟರ ಕರೆಸಿ ದಳಕೆ ॥೧೩॥

ಮುಚ್ಚಿ ಹೇಳುವದಿಲ್ಲ ಕೇಳಿರಿ ಮುಂದಿನ್ನು
ಕಿಚ್ಚಿನಂಥ ದಂಡು ಬರುತೈತಿ । ಮಾ
ಎಚ್ಚತ್ತುಕೊಳ್ಳಿರಿ ಎನ್ನ ಮಾತ್ರ ನೀವು
ಬಚ್ಚಿಟ್ಟು ಮಾನವ ಕಾಯಬೇಕು ॥೧೪॥

ಕ್ಷೀಣರ ಕೈಯಲ್ಲಿ ಸಿಲ್ಕಿ ಕಟ್ಟಿಗೆ ಎನ್ನ
ಪ್ರಾಣವ ನೀಗುವದು ಹಸನಲ್ಲ । ಮಾ
ಜಾಣತನದಿಂದೆ ಮೊದಲಿಗೆ ಮದ್ದಿನ
ಕೋಣೆಯ ಹೋಗುವದು ಉತ್ತಮವು ॥೧೫॥

ರಾಣಿಯಳಾಡಿದ ನುಡಿಕೇಳಿ ಬಂಟರ
ತ್ರಾಣವಿನ್ನೆಂತು ಹೇಳಲಿ ನಾ । ಮಾ
ಕ್ಷೀಣರೆಲ್ಲರ ತಲೆ ಬೀಳುವನಕ ನಿನ್ನ
ಕಾಣಗೊಡೆವು ಚಿಂತಿ ಬ್ಯಾಡೆಂದು ಸಾರೆ ॥೧೬॥

ಕಡೆಗು ನಿಮ್ಮನ್ನವನುಂಡು ಇಂದಿಗೆ ನಾವು
ಬಿಡಬಲ್ಲೆವೇ ಸುಮ್ಮನಿರು ಎಂದು । ಮಾ
ತೊಡೆಯ ಚಪ್ಪರಿಸಿ ಮೀಸೆಯ ತಿದ್ದಿ ಮುಂಗೈಯ
ಕಡಿವುತ ಮಾತನಾಡಿದರಿನ್ನು ॥೧೭॥

ಬಿಡು ಬೇಗ ಮನದಾನ ಚಿಂತೆಯ ಇಂದಿಗೆ
ಮಡದಿ ಮಕ್ಕಳ ಆಸೆ ನಮಗಿಲ್ಲ । ಮಾ
ಕಡು ಸಿಟ್ಟಿನಿಂದ ಕಾಟಕರೆಲ್ಲ ಒಂದಾಗಿ
ನುಡಿದದ್ದು ಕೇಳಿ ಹಿಗ್ಗುತ ಮನದಿ ॥೧೮॥

ಆಡಿದ ಮಾತನು ಕೇಳುತ ಮನದೊಳು
ಪ್ರೌಢೆ ಸಂತೋಷದ ತಾಳುತ । ಮಾ
ಗಾಡಿ ಕುದುರಿ ಮಂದಿ ಇರುವಂಥ ಠಾವನು
ನೋಡಬೇಕೆಂದು ಅಪ್ಪಣೆಗೊಟ್ಟಳಾಗ ॥೧೯॥

ಬೇಡಿದ್ದ ಕೊಡುತಿಹಳೆಂಬಂಥ ಸುದ್ದಿಯು
ನಾಡೊಳು ಬೀರುತ ನಡೆದೀತು । ಮಾ
ಜಾಡಿಸಿ ಅವಳೆಂದ ಮಾತನು ಕೇಳುತ
ಕೂಡಿತು ಹದಿನಾರು ಸಾಸಿರ ದಂಡು ॥೨೦॥

ಕಾಳಿ ಕರ್ಣಿಯು ನಪೂರಿ ನಗಾರಿ ನಿ
ಸ್ಸಾಳದ ಅಬ್ಬರ ಧ್ವನಿಯೆಂದು । ಮಾ
ಆಳವೇರಿಯ ಮ್ಯಾಲೆ ಆರ್ಭಟ ಮಾಡುವದ
ಹೇಳಲಿನ್ನೇನು ಕಿತ್ತೂರಿನೈಸಿರಿಯ ॥೨೧॥

ನಾಳಿನ ಮರಣಿಂದೆ ಬರಲಿ ನಮಗೆ ಎಂದು
ಸೋಳಾ ಸಾಸಿರ ದಂಡು ಪುರದಲ್ಲಿ । ಮಾ
ವ್ಯಾಳೆ ವ್ಯಾಳೆಕೆ ಪಾರಿ ತಿರುಗುತಿರಲು ಮತ್ತೆ
ಕೇಳಿರಿ ಮುಂದಾದ ಕಥೆಯ ಜನರು ॥೨೨॥

ಕುಣಿಯುತ ಕುದುರೆಯು ಮಾರ್ಬಲವೊಂದಾಗಿ
ಹಣಿದಟ್ಟಬೇಕಿನ್ನು ಜಗಳಕ್ಕೆ । ಮಾ
ಕಣಗಂಡ ಸುದ್ದಿಯು ಆದಾ ಕ್ಷಣದಲ್ಲಿ
ದಣಿವುತ್ತ ಬಂದಿತು ಧಾರ್ವಾಡ ಪುರಕೆ ॥೨೩॥

ಕ್ಷಣಮಾತ್ರ ಆಲಸ್ಯ ಮಾಡಲಾಗದು ಎಂದು
ಗುಣವಂತರೆಲ್ಲರು ತಲೆಗೂಡಿ । ಮಾ
ಒಣ ಮಾತಿನಿಂದೇನು ಫಲವಿಲ್ಲವೆನುತಲ
ಪ್ಪಣೆಗೊಟ್ಟರು ಜಾನ ಮಂಡಲ್‌ಗೆ ಬೇಗ ॥೨೪॥

ಹಿಂದು ಮಂದಿಯೊಳಗೆ ಧೀರನಾದ ಜಾನ
ಮಂಡಲ್ ಸಾಯ್ಬನ ಕರಿಸ್ಯಾರು । ಮಾ
ದಂಡಿಗೆ ಹೋಗೆಂದು ಆತಗಪ್ಪಣೆ ಕೊಟ್ಟು
ಹೊಂಡಿಸ್ಯಾರು ಬೀಳುಕೊಟ್ಟಾರು ಬೇಗ ॥೨೫॥

ಗುಂಡು ಮದ್ದಿಗೇನು ಕಡಿಮಿಲ್ಲ ತೋಪಿನ
ಬಂಡಿಗಳ ತಯ್ಯಾರ ಮಾಡೆಂದು । ಮಾ
ಹೊಂಡಬೇಕು ನಾಳ್ಗೆಂದು ಚಮತ್ಕಾರ
ಝುಂಡೇವ ಹೊರೆಯಕ್ಕೆ ನಿಲಿಸಿದರಾಗ ॥೨೬॥

ಮುಂಗಾರಿ ಸಿಡಿಲಿಗೆ ಸಾದೃಶ್ಯವಾದ ಫಿ
ರಂಗಿಯ ಚಕ್ಕಡಿ ಇನ್ನೂರು । ಮಾ
ಮುಂಗಡೆ ಏರಿ ಬಾರೊ ನಡುವೆ ಕುದರಿ ಮಂದಿ
ಹಿಂಗಡೆಯಲಿ ಪರಂಗೇರ ಘೋರ ॥೨೭॥

ಹೀಂಗಾಗೆ ಜಾನ ಮಂಡಲ್ ಸಾಯ್ಬ ದಂಡೀನ
ಸಿಂಗಾರ ಮಾಡಿದ ಪರಿಯೆಂತು । ಮಾ
ಮಂಗಳವಾರ ಸಂಜೀ ವ್ಯಾಳೆದಲ್ಲಿ ಬೆಳ
ದಿಂಗಳ ಬೆಳಕೀಲಿ ಇಳದೀತು ಫೌಜು ॥೨೮॥

ಒಂಬತ್ತು ಒಂಟೆಯ ಮೇಲೆ ನಗಾರಿಯು
ಅಂಬಾರಿ ಆನೆಗೆ ಬಿಗಿದಾರು । ಮಾ
ಸಂಭ್ರಮದಿಂದಲಿ ಜಾನ ಮಂಡಲ್ ಸಾಯ್ಬ
ಬೆಂಬತ್ತಿ ಜೋರ್ದಾರ ಜಗಳಕ್ಕೆ ಬಂದ ॥೨೯॥

ಕುಂಭಿನಿಯೊಳು ಬಾಳ ಚೆಲುವಾಗಿ ಮೆರೆವ ಕು
ಸುಂಬೆಯ ಚಾಯದ ದಂಡಿನ್ನು । ಮಾ
ಇಂಬಾಗಿ ಕಿತ್ತೂರ ಬಿಟ್ಟು ಹರದಾರೀ
ತೆಂಬಕ್ಕೆ ಇಳಿದೀತು ಕೇಳಿರಿ ದಂಡು ॥೩೦॥

ಇಳಿದಂಥ ಫೌಜನು ಕಾಣುತ ಕಿತ್ತೂರ
ಒಳಗಿರ್ದ ಸರ್ಧಾರರೊಂದಾಗಿ । ಮಾ
ಬೆಳೆದಂಥ ಆರ್ಭಟೆ ಹೊರಬಿದ್ದು ಮಾಡಿದ ಜ
ಗಳದ ಪರಿಯೆಂತು ವಣಿಸಲಿನ್ನು ॥೩೧॥

ಮಳೆಯಂತೆ ನಾಲ್ಕು ದಿಕ್ಕಿಲಿ ಗುಂಡು ಸುರಿಯಲು
ಅಳಿದು ಬಿದ್ದೆಣಗಳ ತುಳಿಯುತ । ಮಾ
ತಳಮಳಗೊಳ್ಳುತ ನಿಲ್ಲದೆ ಸಾಯ್ಬನ
ದಳ ಮುರಿದೋಡಿತು ದಾರಿಯ ತಪ್ಪಿ ॥೩೨॥

ಸರದಾರರಳಿದಾರು ಜಾನ ಮಂಡಲ್ ಸಾಯ್ಬ
ಇರಿದಂಥ ಈಟಿಯ ಗಾಯದಿ । ಮಾ
ಮರಗೂತ ಬಿದ್ದಾನೆಂಬುವ ಸುದ್ದಿ ಧಾರ್ವಾಡ
ಪುರದೊಳು ಮುಂದಾಗಿ ಹತ್ತಿದಾಕ್ಷಣದಿ ॥೩೩॥

ಮರುದಿನ ಮೈಸೂರ ದಂಡು ಕೂಡಿಕೊಂಡು
ಭರದಿಂದ ಚಾಪಾಲಿ ಸಾಯ್ಬನು । ಮಾ
ಗುರಿ ಮಾಡಿ ಇನ್ನೂರ ತೋಪೊಮ್ಮೆ ಹೂಡಿದ
ಪರಿಯನು ಲಾಲಿಸಿ ಕೇಳಿರಿ ಜನರು ॥೨೪॥

ನೇತ್ರಗಳಿಂದಲಿ ಕೋಟೆಯ ನೋಡಿ ಭಾರಿ
ಶಸ್ತ್ರಗಳ ತರಿಸಿದರೊಳಗಿಂದ । ಮಾ
ರಾತ್ರಿ ಹಗಲೆನ್ನದೆ ರಭಸದಿಂದ್ಹೊಡೆಯಲು
ಧಾತ್ರಿಯು ನಡಗೀತು ತೋಪಿನ ಭರಕೆ ॥೨೫॥

ಒತ್ರವಾಗಿ ಗುಂಡುಮದ್ದು ಒಮ್ಮೆಗೆ ಹಾರಲು
ಕತ್ರಿಸಿ ಹೂಡೇವು ಬೀಳುತಲಿ । ಮಾ
ತತ್ರಿಸಿ ಒಳಗಿರ್ದ ದಂಡೆಲ್ಲ ನಡಗೀತು
ಸೂತ್ರ ಹರಿದ ಮೇಲೆ ಕಾದುವರುಂಟೆ ॥೨೬॥

ನಡುಗುತ್ತ ಉಳಿದ ಕಾಟಕರೆಲ್ಲ ಒಂದಾಗಿ
ಕಡಿದಾಡೋ ಯತ್ನವು ಮೀರಿತು । ಮಾ
ಪಿಡಿದಂಥ ಕತ್ತಿಯ ನೆಲಕೊಗೆದಾಕ್ಷಣ
ತಡವೇನು ಠಾಣೇವು ಬೀಳ್ವದು ಎನ್ನು ॥೨೭॥

ಹೊಡೆವ ಫರಂಗಿಯ ರಭಸಿಗೆ ತಾಳದೆ
ಸಡಲಿತು ಸುತ್ತಣ ಗೋಡೆಯು । ಮಾ
ಮಡಿದಂಥ ಮಂದಿಯ ಎಣಿಕೆಯಗೊಳ್ಳದೆ
ನಡೆಯಿತು ಇಂಗ್ರೇಜಿ ದಳ ಮುಂದಕೊತ್ತಿ ॥೨೮॥

ಹೊಕ್ಕಿತು ಕೇಳಿರಿ ಒಂದಾರು ತಾಸಿಲಿ
ನಾಲ್ಕು ದಿಕ್ಕಿನ ದಂಡು ಏಕಾಗಿ । ಮಾ
ಮುಂಕೋಟೆ ಅಗಸಿಯ ಬಾಗಿಲ ಕಾಯ್ವಂಥ
ಸೊಕ್ಕಿದ ಹಬ್ಸೇನ ಜಗಳವ ಕೇಳಿ ॥೨೯॥

ತೆಕ್ಕಿಯೊಳವಚಿ ಕೊಂದನು ನೂರುಮಂದಿಯ
ಮಿಕ್ಕಿ ಬಂದವರನ್ನು ಕಡಿವುತ । ಮಾ
ಜಕ್ಕನೆ ಜರಿದು ಚಾಪಲಿ ಸಾಯ್ಬ ಮುಂದೆ
ಇಕ್ಕದೆ ಹೆಜ್ಜೆಯ ನಿಂತು ನೋಡಿದ ॥೪೦॥

ಬಲ್ಲಿದ ಹುಬ್ಸೆನ ಬಲ ಮುರಿಯಬೇಕೆಂದು
ಎಲ್ಲ ದಂಡನು ಸುತ್ತಗಟ್ಟುತ । ಮಾ
ನಿಲ್ಲದೆ ಎಡಬಲ ಗುಂಡ್ಹಾರಿದಾಕ್ಷಣ
ತಲ್ಲಣಿಸುತ ಬೀಳೆ ನಡೆದನು ಸಾಯ್ಬ ॥೪೧॥

ಹುಲ್ಲುಕಡ್ಡಿಯ ಕಚ್ಚಿದಂಥ ಕಾಟಕರಿಗೆ
ಚಲ್ಲಣ ಕಡಿದು ಲಂಗುಟಿ ಹಾಕಿ । ಮಾ
ನಿಲ್ಲದೆ ಸರ್ದಾರ ಧರ್ಮಸಾಲೆಯ ಬಿಟ್ಟು
ಅಲ್ಲಿಂದ ಅರಮನೆ ಹೊಕ್ಕಾನು ತಾ ॥೪೨॥

ಮಂದಿರದೊಳಗಿರ್ದ ಮಾನಿನಿ ಪೆಸರ್ಗೊಂಡು
ಚೆಂದದಿ ಸಾಯ್ಬನ ಇದರಿಗೆ । ಮಾ
ಮುಂದಕ್ಕೆ ಬಾರೆಂದು ರಾಣಿಯ ಕರೆದಾನು
ಸಂದೇಹ ಬೇಡ ಮನದೊಳಗೆನುತ ॥೪೩॥

ಎಂದ ಮಾತನು ಕೇಳಿ ಆ ಜಾಣೆ ಪೌರುಷದಿ
ಛಂದದಿ ಸಾಯ್ಬನ ಇದರಿಗೆ । ಮಾ
ಸಂದಂಥ ಕಾಂತನ ಕರುಣದಿ ನೀ ಎನ್ನ
ತಂದೆಯ ಸರಿ ಎಂದು ಶಿರಬಾಗಲು ॥೪೪॥

ಸೀಮೆಯೆಲ್ಲವ ಜಾಣೆ ಉಂಭೋಗ ಬರಕೊಟ್ಟು
ನೇಮದಿ ಅಪ್ಪಣೆಗೊಂಡಾಳು । ಮಾ
ಗ್ರಾಮದೊಳಿರುವಂಥ ಬದುಕೆಲ್ಲ ಒಪ್ಪಿಸಿ
ತಾ ಮಾತ್ರ ಹೊಂಗಲಕೆ ನಡೆದಾಳು ॥೪೫॥

ಕುಸುಮಬಾಣನ ಮಾತು ಪೆಸರಿನ ಪುರದೊಳು
ವಶವಾದ ಮಾಗಡಿ ಬಸವನು । ಮಾ
ವಸುಧೆಯೊಳು ತನ್ನ ಕುಶಲದಿ ಪಾಡಿರುತ
ಉಸುರಿಧ ಕವಿತೆ ಪೊಸತು ಕೇಳಿ ॥೪೬॥

❖❖

೧೦

ಚನ್ನಮ್ಮ ರಾಣಿ

[ಚನ್ನಮ್ಮ ರಾಣಿಯು ದೊರೆ ಮಲ್ಲಸರ್ಜನ ಹೆಂಡತಿ ಕಾಗತಿ ದೇಸಾಯರ ಮಗಳು. ೧೮೧೬ರಲ್ಲಿ ಮಲ್ಲಸರ್ಜನು ತೀರಿಕೊಂಡನು. ೧೮೨೪ರಲ್ಲಿ ಮಗ ಶಿವಲಿಂಗರುದ್ರಸರ್ಜನೂ ಲಿಂಗೈಕ್ಯನಾದನು. ಆಗ ಚನ್ನಮ್ಮನಿಗೆ ೪೬ ವರುಷ. ಇಂಗ್ಲೀಷರು ಕಿತ್ತೂರ ಸಂಸ್ಥಾನದವನ್ನು ವಶಪಡಿಸಿಕೊಳ್ಳಲು ಹವಣಿಸಿದರು. ಹಿಂದೀಯರ ರಾಜ್ಯಕಾರಭಾರದಲ್ಲಿ ಕೈಯ ಹಾಕುವ ಅಧಿಕಾರವು ಬ್ರಿಟಿಷರಿಗೆ ಇಲ್ಲವೆಂದು ರಾಣಿಯು ಗುಡುಗಿದಳು. ಇಂಗ್ಲೀಷರನ್ನು ಹೊಡೆದೋಡಿಸುವ ಒಂದು ದೊಡ್ಡ ಸಾಹಸವನ್ನು ೧೮೨೪ರಲ್ಲಿ ಮಾಡಿ, ಸುತ್ತಲಿನ ರಾಜರಿಗೆಲ್ಲ ಪತ್ರ ಬರೆದಳು. (ಆ ಸಾಹಸದ ಕತೆಯನ್ನು ಪೂರ್ಣ ಇತಿಹಾಸ ಬರೆಯುವಾಗ ಉಲ್ಲೇಖಿಸಲಾಗುವುದು).

ಈ ಕೋಲಿನ ಪದದಲ್ಲಿ ಹೆಗ್ಗೇರಿ ಮಾಳದ ಮೇಲೆ ಭೀಕರ ಕಾಳಗವಾದ ವರ್ಣನೆ ಇದೆ. ಕ್ಯಾಪ್ಟನ್ ಥ್ಯಾಕರೆನನ್ನು ಎದುರಿಸಿ ಅವನೊಡನೆ ಕೈಯ ಕೈಯ ಹೋರಾಡಿ ಅವನ ರುಂಡವನ್ನು ಹಾರಿಸಿದ ಸಂಗತಿ ಬಂದಿದೆ. ಪುಣೆಯ ಹಿಂದಿನ ಇತಿಹಾಸಕಾರರೂ "ಶೂರ ಅಬಲಾ ಚನ್ನಮ್ಮನೇ ಥ್ಯಾಕರೇನ ರುಂಡು ಹಾರಿಸಿದಳೆ"ಂದು ಅಭಿಪ್ರಾಯ ಪಟ್ಟಿದ್ದಾರೆ. ಇದು ಕಿತ್ತೂರ ಕಾಳಗವೆಂದು ಪ್ರಸಿದ್ಧವಿದೆ. ಚನ್ನಮ್ಮ ರಾಣಿಯು ೧೮೨೪ರಲ್ಲಿಯೇ ಬ್ರಿಟಿಷರನ್ನು ಹಿಂದುಸ್ತಾನ ದಿಂದ ಹೊರಗೆ ಹಾಕಲು ಹೋರಾಡಿದ ಭಾರತದ ಪ್ರಥಮ ಮಹಿಳೆ. ಥ್ಯಾಕರೆನ ಮರಣದ ನಂತರ ಅವನ ಮಕ್ಕಳನ್ನು ಜಕಾತಿ ಬಸಲಿಂಗಪ್ಪನ ಹಿರಿತನದಲ್ಲಿ ಜೋಕೆ ಮಾಡಿದಳು. ಈ ಹಾಡಿನಲ್ಲಿ ಬರುವ ತೇಲಗಿ, ಹೆಗ್ಗೇರಿ, ಮರಿಕಟ್ಟಿ ಗೌಡರು, ಹುಣಶಿಕಟ್ಟಿ, ಜಮದರಖಾನೆ, ತಿಗಡಿ ಜಕಾತಿ, ಮಣ್ಣೂರ, ತಲ್ಲೂರ ದೇಸಾಯಿಯರು, ಮಾಸ್ತ ಮರಡಿ ಗೌಡರು ಕಿತ್ತೂರ ಸಂಸ್ಥಾನಕ್ಕೆ ತೀರ ಸಮೀಪದವರು, ಅವರ ಮನೆತನದ ಜನರು ಇಂದಿಗೂ ಇದ್ದಾರೆ.

ಇದು ಕೋಲಿನ ಪದ, ಪಾರಿಶ್ವಾಡದಲ್ಲಿ ಚಲವಾದಿಯ ಹೆಣ್ಣುಮಕ್ಕಳು ಹಾಡುವರು.]

ಆರ ಆವಿನ ಹಾಲ ಆಗದಲೆ ಸಲಿಸುವಳು ।
ಅಪ್ಪ ಮಲಸರ್ಜ್ಯಾನ ಮಡದೀಯು
ಅವರಿನ್ನ ಗಂಡನ ಧ್ಯಾನದಲ್ಲಿ ಇರುವುಳ ।

ಹತ್ತ ಆವಿನ ಹಾಲ ಒಪ್ಪತ್ತ ಸಲಿಸುವಳು
ಅಪ್ಪ ಮಲ್ಲಸರಜ್ಜಾನ ಮಡದೀಯು ।
ಗಂಡನ ದರಬಾರ ನಡಿಸ್ಯಾಳೊ
ಆಕಿ ಇನ್ನ ತನ್ನ ಗಂಡನ ದರಬಾರ ನಡಿಸ್ಯಾಳೊ । ಕೋ. ಕೋ

ನೀವಿನ್ನ ಬೇಗನೆ ದಂಡ ತೈಯಾರ ಮಾಡಬೇಕು
ಊಟನ ಉಣ್ಣುವರಿಗೆ ಊಟಾನ ಕೊಡಿರೆಪ್ಪ
ಊಟ ಉಣ್ಣದವರಿಗೆ ಒಣ ಉಲಿಪೆ ಕೊಡಿರೆಪ್ಪ

"ಏಳ ಹಳ್ಳಿ ಇನಾಮ ಕೊಡತೇನು ।
ಲಡಾಯಕ ನನ್ನಗೂಡ ಬರಬೇಕು"
ಹಿಂಗ ಅಂದ ಠಾಕರೆ ಡಂಗುರ ಹೊಡಿಸ್ಯಾನ
ಒಂಟಿ ಬಾಲ್ಯದವರು ಕುದರಿ ಸವಾರದವರು ।
ಒಂದೊಂದು ಮಾರಿಯ ಫಿರಂಗ್ಯಾರು
ಕತ್ತೀಯ ಹಿಡಿದಾರು ಡಾಲವ ಹಿಡಿದಾರ ।
ತೋಪು ತುಬಾಕಿ ಹಿಡದಾರ
ಅವರಿನ್ನ ಬಂದ ಹುಲಿವರದ ನಿಲತಾರ । ಕೋ. ಕೋ

ಸಾಹೇಬ ದೊರಿಯು ಕುದರಿ ಪಾಗಾಕ ನಡಿದಾನ
ಕುದುರಿಗೆ ದಾಣಿ ತಿನಿಸ್ಯಾನ । ಕುದುರಿಗೆ ನೀರು ಕುಡಿಸ್ಯಾನ
ನೀ ಇನ್ನ ಚಲುವೊಂದ ನುಡಿಯ ನುಡಿಯವ್ವ ।
ನೀ ಇಲ್ಲಿ ಬಲಗಾಲ ಇನ್ನ ತೂಗಬೇಕ
ಆ ಕುದರಿ ಎಡಗಾಲ ಇನ್ನ ತೂಗತಾಳ

ಕೆಂದ ನೀ ಕುದುರಿಗೆ ತಂದ ಜೀನನ ಬಿಗಿದು ।
ತಂದ ಅಂಗಳ ನಿಲಗಟ್ಟಿ
ಬಿಳಿಯ ನೀ ಕುದುರಿಗೆ ಬೆಳ್ಳಿ ಜೀನನ ಬಿಗಿದು ।
ತಂದ ಅಂಗಳಕ ನಿಲಗಟ್ಟಿ
ಸಾಹೇಬ ದೊರಿಯು ಕಾಲಿಗೆ ಗಗ್ಗರಿ ಇಡಿಸಿದ
ಅವ ತಂದ ಕುದರೀಗೆ ಜೀನ ಬಿಗಿದಾನ

ಆನೊಂದು ಐನೂರು ಕುದುರೊಂದು ಸಾವಿರ ।
ಕಾಲಾಳ ಮಂದಿ ಕಡಿಮಿಲ್ಲ
ಸಾಹೇಬನ ನೀ ಕುದುರಿ ಮುಂದ ಮುಂದ ನಡದಾವ ।
ಹಿಂದ ಹಿಂದ ದಂಡ ನಡದಾವ
ಸಾಹೇಬನ ನೀ ದಂಡ ಮುಂದಕ್ಕ ಸಾಗ್ಯಾವು ।
ಬೆಳಗಾಂವಿ ಪಟ್ಟಣ ಬಿಡತಾರೊ
ಅವರಿನ್ನ ಆವಾಜ ಮಾಡುವದು ಸಡಗರ ।
ಅವರಿನ್ನ ದಾರಿ ದಣಿಸೂವದು

ಎಳ್ಳೂರ ಮಾರಗ ಹಿಡಿಸ್ಯಾರ ।
ಎಳ್ಳೂರ ಕಿಲ್ಲೇದ ಒಳಗ ಹೊಗತಾರ
ಕತ್ತಿಯ ಹಿಡಿದಾರ ಕಾಯರ ಒಡದಾರ
ಕಪ್ಪರ ಬೆಳಿಗ್ಯಾರ ಶರಣೆಂದು ತಾವು ನಡದಾರ
ಅವರಿನ್ನ ಕಾನಾಪೂರ ದಾರಿ ದಣಸ್ಯಾರ
ಮಲಪೂರ ನೀ ಹೊಳಿಗೆ ಇಳದಾರೊ ಅವರಲ್ಲೆ ।
ಕುದರೀಗೆ ದಾಣಿ ತಿನಿಸ್ಯಾರೊ ।
ಅವರಿನ್ನ ಕುದುರಿಗೆ ನೀರ ಕುಡಿಸ್ಯಾರೊ

ಜಳಕಾಕ ಸಾಗಿ ನಡೆದಾರ ।
ಜಳಕಾ ಜಾಪತ್ತಿಮಾಡಿ ನಿಲಕಸಿ ಚೊಣ್ಣ ತೊಟ್ಟು
ನೀವಿನ್ನ ಊಟಕ್ಕ ಸಾಗಿ ನಡಿರೆಂದ ।

ಊಟನ ಉಣ್ಣವರ ಊಟನ ಮಾಡಿರೊ
ಊಟವ ಮಾಡದವರಿಗೆ ಒಣ ಉಲಿಪಿ
ಉಂಡಾರು ಉಟ್ಟಾರು ಒಣ ಉಲಿಪಿ

ಉಂಡಾರು ಉಟ್ಟಾರು ಒಡನೆ ಕೈ ತೊಳೆದಾರು ।
ನೀವಿನ್ನ ದಂಡಿಗಪ್ಪಣಿ ಕೊಡಬೇಕು
ನೀವಿನ್ನ ಮುಂದಕ್ಕ ಸಾಗಿ ನಡಿರಂದ ।
ನೀವಿನ್ನ ಗಡದ ಎಡಬಲಕ ನಡಿರೆಂದ

ಅವರಿನ್ನ ದಾರಿಯ ದಣಿಸೂತ ಆವಾಜ । ಮಾಡೂತ ನಡದಾರೊ
ಅವರಿನ್ನ ರಾಮನ ಕೆರೆಗೆ ಬರತಾರು । ಬಂದ ಕೆರಿಮ್ಯಾಗ ಇಳಿದಾರೊ

ಸಾಹೇಬ-ದೊರಿ ಕಿತ್ತೂರ ದಾರಿ ಹಿಡಿಸಿದಾ ।
ಸಾಹೇಬ ದೊರಿ ಕೆಂಪಗೆರಿಯನ್ನ ನೋಡತಾನೊ
ಸಾಹೇಬ ದೊರೆಯು ಮುಂಗೈಯ ನೋಡಿಕೊಂಡ ।
ಸಾಹೇಬ ದೊರಿಯು ಡೇರೆವ ತಾನು ಹೊಡಸತಾನು
ಇಲ್ಲೀಗೆ ಹರ ಹರ ಇಲ್ಲೀಗೆ ಶಿವ ಶಿವ ।
ಇಲ್ಲೀಗೆ ಸಂದು ಕತೆ ಮುಂದು

ಸಟ್ಟನ್ನ ಸರ್ವತ್ತು ನಟ್ಟಿರುಳು ರಾತರಿ । ಕಾಗೆ ಗುಬ್ಬೀಯ ಸುಳುವಿಲ್ಲ
ಚಾಕರರ ಸುಳವಿಲ್ಲ ನೌಕರರ ಸುಳವಿಲ್ಲ । ಮಂದಿ ಮಾನವರ ಸುಳವಿಲ್ಲ
ಚನ್ನವ್ವ ಮಂಚದ ಮ್ಯಾಲ ಸುಖನಿದ್ದಿ ಮಾಡೂತ । ಎಚ್ಚರಂಬುದು ಮೊದಲಿಲ್ಲ

ಮಲಗಿದೆಯಾ ನನ್ನ ಮಡದಿ ಕುಂತಿದಿಯಾ ನನ್ನ ಮಡದಿ
ಲಾಲಿಸಿ ಕೇಳ ನನ್ನ ಮಾತು । ನನ್ನ ಸತಿಯಳು ಚಿತ್ತಿಟ್ಟ ಕೇಳ ನನ್ನ ಮಾತ

ನನ್ನ ಮಡದಿ ಹೊಟ್ಟೀಯ ಬಾಲಾ ।
ನಿನಗೊಂದ ಇದ್ದರ ರಣದಾಗ ಈಸ ಬೀಳತಿದ್ದಾ

ಮಾಲನೀ ಅರಮನಿ ಮೇಲ ತೇಜಿಗಳು । ಸೋಪಾನವೆಲ್ಲಾ ಮಡಿಮಡಿಯೇ
ನೀ ಇನ್ನ ಗಂಡ ಉಡುಗರಿ ಉಡಬೇಕು ।

ನೀ ಇನ್ನ ಗುಂಡಿ ಮುಂಡಾಸ ಸುತ್ತಬೇಕು
ನೀ ಇನ್ನ ಗುಳಗಿ ಚಣ್ಣಾವ ತೊಡಬೇಕು ।
ನೀ ಇನ್ನ ಕಸಿಯ ಅಂಗಿಯ ತೊಡಬೇಕು
ನನ್ನ ಮಡದಿ ನೂರ ಅಲಗ ಕತ್ತಿ ಕಟ್ಟಬೇಕು
ನನ್ನ ಮಡದಿ ಮುತ್ತಿನ ಟೊಪ್ಪಗೆ ತಲಿ ಮ್ಯಾಲ
ನನ್ನ ಕೈಯನ್ನ ಕತ್ತಿ ಹಿಡಿಯಬೇಕು ।

ನೀ ಇನ್ನ ರಣಗೂದಲ ಬಿಡಬೇಕು
ನೀ ಇನ್ನ ಬರಿಗಾಲಿನಿಂದ ಹೋಗಬೇಕು ।
ನನ್ನ ಮಡದಿ ಲಡಾಯಿ ಮಾಡಾಕ ಹೋಗಬೇಕು

ಚನ್ನವ್ವಗ ಹೀಗೆಂದ ಸ್ವಪ್ನ ಬೀಳತಾವ । ಚನ್ನವ್ವ ಅಡರಾಸಿ ತಾನು ಏಳತಾಳ
ಮಂದೀಯ ಸುಳವಿಲ್ಲ ಮಕ್ಕಳ ಸುಳವಿಲ್ಲ । ಕಾಗಿ ಗುಬ್ಬಿಯ ಸುಳುವಿಲ್ಲ
ಚನ್ನವ್ವಗ ಹೀಗೆಂದ ಸ್ವಪ್ನ ಬೀಳತಾವ । ಚನ್ನವ್ವ ಅಡರಾಸಿ ಮಂಚದಿಂದ ಏಳತಾಳ

ಸುತ್ತೆಲ್ಲ ನೋಡ್ಯಾಳ ಚನ್ನವ್ವ । ಅಲಗ ಕಟ್ಟಿ ಅಲಗ ಹಾಯಲೇನ
ಚನ್ನವ್ವ ಗ್ವಾಡಿಗೆ ಹಾಯ್ದು ಆಳತಾಳ । ಮಲ್ಲಸರಜ್ಯಾ ಗುಂಗೀ ಹುಳವಾಗಿ ಹಾರಿದನ

ಕುಲದಲ್ಲಿ ಕುರಬನು ಸಂಗೊಳ್ಳಿ ರಾಯಪ್ಪ । ಬೇಗನೆ ಬಂದು ಒದಗಯ್ಯಾ
ಬಾಯನ್ನ ಈ ನುಡಿಯು । ಬಾಯಾಗ ಇರುವ ಹೊತ್ತಿಗೆ ।
ದೀನ್ ದೀನ್ ಅಂತ ಬಂದ ಇಳದಾನು
ಹಡದವ್ವ ಕರೆಸಿದ ಕಾರಣ ನಮಗ್ಹೇಳ ।
ಮಾಲ ಈ ಅರಮನಿ ಮೇಲ ತೇಜಿಗಳು । ಸೋಪಾನವೆಲ್ಲ ಮಡಿ ಮಡಿಯೊ ।
ಮೂರ ಮಳ ಇದ್ದೇನು ಆರ ಮಳ ನಿಲಗತ್ತಿ ಹನ್ನೆರಡು ಮಳ ಜಿಗಿಯತೀನ ।
ಹಡದವ್ವ ಬೆನ್ನ ಮ್ಯಾಲ ನೀನು ಹತ್ತ ಬಾರ

ಅಂಕಲಗಿ ಅಡವೆಪ್ಪ ಮಡಿವಾಳ ಮಹಾದೇವಪ್ಪ
ಬಾಯನ್ನ ಈ ನುಡಿಯು ಬಾಯಾಗಿರುವಾಗ ।
ದೀನ್ ಅಂತ ಬಂದು ಇಳದಾರ ನನ್ನ ಮಗಳ ಬಂದಿರು ಚಿಂತಿ ನಮಗ್ಹೇಳ ।
ಮಾಲ ಈ ಅರಮನಿ ಮೇಲ ತೇಜಿಗಳು ಸೋಪಾನವೆಲ್ಲ ಮಡಿ ಮಡಿಯಾ ।
ಮೂರು ಮಳ ಇದ್ದೇವ ಅರ ಮಳ ನಿಲಗತ್ತಿ ಹನ್ನೆರಡು ಮೊಳ ಜಿಗದೇವ ।
ನನ್ನ ಮಗಳ ಬೆನ್ನ ಮ್ಯಾಲ ನೀ ಹತ್ತ ಬಾರ ಅವರಿನ್ನ ನಿಂತಲ್ಲೆ ಮಾಯ ಆದಾರೊ ।
ಕಲಮಠದ ಮಡಿವಾಳ ಸ್ವಾಮಿ ಬೇಗನೆ ಬಂದು ಒದಗಯ್ಯಾ ।
ಬಾಯನ್ನ ಈ ನುಡಿಯು ಬಾಯಾಗ ಇರುವಾಗ
ಬೇಗನೆ ಬಂದು ಒದಿಗ್ಯಾನ । ತಳವಾರ ಫಕೀರ ನೀ ಬಾರೊ ನನ್ ಮಗನ
ನೀ ಬಂದ ಬೇಗನೆ ಒದಗಯ್ಯಾ । ನೀವಿನ್ನ ಗೌಡರ ಬಸಪ್ಪನ ಕರಿರಯ್ಯಾ

ತಳವಾರ ಫಕೀರಾ ನೀ ಬಾರೊ ನನ್ನ ಮಗನ
ಅಂಬಡಗಟ್ಟಿ ಗುರುಸಿದ್ದಪ್ಪನ ಕರಸಯ್ಯಾ

ಕಾಗಿಯ ಸುಳವಿಲ್ಲ ಗುಬ್ಬಿಯ ಸುಳವಿಲ್ಲ ಹಡದವ್ವ।
ಕರಸಿದ ಕಾರಣ ನಮಗ್ಹೇಳ
ನನ್ನ ಮಕ್ಕಳೀರಾ ದಂಡ ಬೇಗನೆ ತಯಾರ ಮಾಡಬೇಕು

ಏಳ ಹಳ್ಳಿ ಇನಾಮ ಕೊಡತೇನು। ಮಕ್ಕಳೀರಾ ಬೇಗನೆ ದಂಡ ತಯಾರೊ
ಮಾಲ ನೀ ಅರಮನಿಯ ಮೇಲ ತೇಜಿಗಳು। ಸೋಪಾನವೆಲ್ಲ ಪುಡಿ ಪುಡಿಯಾ
ಚನ್ನವ್ವ ನಿಂತ ಪತ್ತರ ಬರದಾಳೊ ಊರೂರಿಗೆ ಒಯ್ದು ಕೊಡಿರೆಂದಳು
ಅವರಿನ್ನ ದಂಡ ತಯಾರ ಮಾಡತಾರೊ

ಒಂಟಿ ಬಾಲದವರು ಕುದುರಿ ಸವಾರದವರು। ಒಂಟಿ ಕುದರಿಗೆ ಮುಖವಾಡ
ಕತ್ತೀನ ಹಿಡಿದಾರ ಡಾಲನ್ನ ಹಿಡಿದಾರ। ತೋಪು ತುಬಾಕಿ ಹಿಡಿದಾರ

ನೀವಿನ್ನ ಊಟಾನ ಉಣ್ಣವರಿಗೆ ಊಟಾನ ಕೊಡಿರೆಪ್ಪ
ಉಣ್ಣದವರಿಗೆ ಒಣ ಉಲಪಿ ಕೊಡಿರೆಪ್ಪ

ಆ ದಂಡ ಬಂದು ಹುಲಿವರಿದು ನಿಲ ನಿಂತ್ಯಾ
ಚನ್ನವ್ವ ನೋಡ್ಯಾಳೋ ತನ್ನ ಕಡೆಯಗಣ್ಣಿ

ಚನ್ನವ್ವ ತನ್ನ ಉಡುಗರಿಯ ಉಡತಾಳೊ। ತೊಳಗ್ಯಾಳೊ ಬೆಳಗ್ಯಾಳೊ
ಜೋಡೆರಡ ಬುತ್ತಿ ಹೊಸದಾಳೊ। ಚನ್ನವ್ವ ಮುತ್ತಿನ ಆರತಿ ಪುಟಮಾಡಿ
ಚನ್ನವ್ವ ಗಂಧದ ಆರಿತಿ ಪುಟಮಾಡೆ। ಚನ್ನವ್ವ ಹೊನ್ನಿನಾರತಿ ಪುಟಮಾಡೆ
ಚನ್ನವ್ವ ಐದು ಆರತಿ ತುಂಬತಾಳೊ। ಚನ್ನವ್ವ ದೇವರ ಕೋಣೆಗೆ ನಡದಾಳೊ
ಚನ್ನವ್ವ ಗುಳಗಿ ಚಣ್ಣವ ತೊಡತಾಳೊ। ಚನ್ನವ್ವ ಕಾಶೆಯ ಅಂಗಿ ತೊಡತಾಳೊ
ಚನ್ನವ್ವ ಗೊಂಡೇದ ನಡಕಟ್ಟ ಬಿಗದಾಳೊ। ಚನ್ನವ್ವ ನೂರ ಅಲಗತ್ತಿಕಟ್ಟತಾಳೊ
ಚನ್ನವ್ವ ಮುತ್ತೀನ ಟೊಪ್ಪಿಗೆ ತಲೆಗೆ ಹಾಕತಾಳೊ
ಚನ್ನವ್ವ ಐದೂ ಆರತಿ ಬೆಳಗ್ಯಾಳೊ
ಚನ್ನವ್ವ ಕಾಯಿ ಒಡೆದು ಕಪ್ಪುರ ಬೆಳಗ್ಯಾಳೊ

ಚನ್ನವ್ವ ಶರಣೆಂದು ಕತ್ತಿ ಹಿಡಿದಾಳೊ । ಶರಣೆಂದು ನೀ ಕತ್ತಿ ಹಿಡಿದಾಳೊ ಚೆನ್ನವ್ವ
ಕೋಣೆಯ ತಾನು ಬಿಡತಾಳೊ । ಚನ್ನವ್ವ ಅರಮನಿ ಅಂಗಳಕ ಬರತಾಳೊ

ನೆರಮನಿ ಅಪ್ಪಗಳಿರಾ ಹೊರಮನಿ ಅಪ್ಪಗಳಿರಾ ಲಡಾಯಿಕ ನಾನು ಹೋಗತೇನೊ
ಮ್ಯಾಲ ಅರಮನಿ ಜತನವ

ಊರನ್ನವ್ವಗಳಿರಾ ಕೇರನ್ನವ್ವಗಳಿರಾ ಲಡಾಯಿ ಮಾಡಾಕ ಹೋಗತೇನ
ನೀವಿನ್ನ ಮಾಲ ಅರಮನಿ ಜತನಾವ । ಚನ್ನವ್ವಗ ಮೇಣೇವ ಇಡತಾರೋ
ಜಾತ್ರಿಗ ಹೊಂಟಿಲ್ಲ ನಿಬ್ಬಣಕ ಹೊಂಟಿಲ್ಲ ಲಡಾಯಿ ಮಾಡಾಕ ಹೊಂಟೇನ
ಕುದುರಿಯ ತಂದು ಕಟ್ಟ್ಯಾರಯ್ಯ ಅವರಿನ್ನು ಕುದುರಿಯ ಸಿಂಗರಸ್ಯಾರ
ಸಾಹೇಬನ ದಂಡ ಮುಂದಕ ಸಾಗಿತು ಚನ್ನವ್ವನ ದಂಡು ಹಿಂದ ಹಿಂದ
ಅವರಿನ್ನು ಅವಾಜಮಾಡೂತ ನಡೆದಾರೊ ಅವರಿನ್ನು ದಾರಿ ದಣಿಸೂರ

ಈ ಸುದ್ದಿ ಹೆಗ್ಗೇರಿ ಗೌಡಗ ಹೋದಿತಯ್ಯ ನನ ಮಗಳ ನಿನಗೂಡ ಯಾರ ಲಡಾಯಿ
ಹೆಗ್ಗೇರಿ ಗೌಡ ವಕ್ಕುಂದಕ ಪತ್ತರ ಬಿಡತಾನ ನಿಮ ನಿಮ ಮಂದಿ ಬರಬೇಕ

ಹೂಲಿ ಚನಬಸಗೌಡ ಹೂಲಿಗಾಳಿಯು ಕಳಿಸಿದಾ ಊರೂರಿಗೆ ಸುದ್ದಿ ಮಾಡೀದ
ಆ ಸುದ್ದಿ ಹೊಂಗಲಕ ಹೋಗ್ಯಾವ ಶಿಲೆದಾರ ಚನ್ನಪ್ಪ ದಳವಾಯಿ ದೇವಪ್ಪ
ಕೊರಿಕೊಪ್ಪದೆಲ್ಲಪ್ಪ. ಗೌಡರ ಸಂಕಪ್ಪ ಇವರೆಲ್ಲ ತಾವು ಬರತಾರ

ಮೂಗಬಸವದ ಹುದ್ದಾರ, ನಾಯಕರ ಶಿವನಗೌಡ ನಾವಲಗಟ್ಟಿ ಭಾವಿಹಾಳ
ಮೊಖಾಶಿ ಗಜಪತಿ ಮರಿಕಟ್ಟಿ ತೋಲಗಿ ಗೌಡರು ಬಂದಾರ
ಹುಣಶಿಕಟ್ಟಿ ವಣ್ಣೂರ ಬಂಟರು ಬಂದಾರ ನಿಲ್ಲದಲೆ

ಎಲ್ಲಾರ ದಂಡ ತಯಾರ ಗುಂಡ ತಲವಾರ ಬರ್ಚಿ ಒಗೆವರ
ಚನ್ನವ್ವ ಲಡಾಯಿ ಮಾಡಾಕ ಬರತಾಳೊ ಬಂಟರಿಗೆಲ್ಲ ಕರದಾಳೊ

ಚನ್ನವ್ವನ ದಂಡು ಆರುಗಾವುದ ಹಾದಿ ಮೂರು ಗಾವುದ ಮಾಡಿ
ಹೆಗ್ಗೇರಿ ಹೆಗ್ಗೇರಿ ಗೌಡ ಆರಸಾವಿರ ದಂಡ ತಯಾರ

ಅವರಿನ್ನ ಚನ್ನವ್ವನ ಹಿಂಬಾಲೆ ನಡದಾರೊ
ಸುದ್ದಿ ಗರಗಕ್ಕ ಮುಟ್ಯಾವ ಗರಗದ ಗೌಡರು ಮುಮ್ಮಿಗಟ್ಟಿಗೆ ಸುದ್ದಿ ಮುಟ್ಟಿಸ್ಯಾರ
ಗೌಡರ ಬಸಪ್ಪ ಕೂಡಿಸ್ಯಾನ ಗಳಿಗ್ಯಾಗ ದಂಡ

ಊರನ್ನ ಅಣ್ಣಗಳಿರಾ ಕೇರ್ಯಾನ ತಮ್ಮಗಳಿರಾ । ದನ ಕರ ನೀವು ಬಿಡಬ್ಯಾಡಿರೊ
ಚನ್ನವ್ವ ಲಡಾಯಿ ಮಾಡಾಕ ಬರತಾಳೊ
ನನ್ನ ಮಗಳ ಎಂಥಾ ವ್ಯಾಳೇವು ಬಂದೀತವ್ವ

ಬಸಪ್ಪ ಐದುಸಾವಿರ ದಂಡು ತಯಾರ ಮಾಡ್ಯಾನೊ
ಎಲ್ಲಾರು ಕೂಡುತ ಆವಾಜ ಮಾಡುತ । ಸಡಗರಿಲೆ ಸಾಗಿ ನಡದಾರೊ
ಈ ದಂಡ ಧಾರವಾಡ ಮಾಳಕ್ಕ ನಡದಾವೊ ।
ಆ ದಂಡ ಹುಲಿವರಿದ ನಿಲ ನಿಂತ್ಯಾ
ಸಾಹೇಬನ ದಂಡ ಹುಲಿವರಿದ ನಿಲ ನಿಂತ್ಯಾ

ಹೆಂಗಸ ಬಾಲಿ ನಿನ್ನ ಲಡಾಯಿ ತೀರಲೆಂದ
ಸಾಹೇಬ ದೊರಿ ನಿನ್ನ ಲಡಾಯಿ ಆಗಲೆಂದಳೊ
ಚೆನ್ನವ್ವ ಹೋಗಿ ದಂಡಿನೊಳಗೆ ನಿಲ ನಿಂತ ಕೈಯ ಮುಗದಾಳೊ
ಕತ್ತಿಯ ಹಿಡದಾರ ಡಾಲವ ಹಿಡಿದಾರೊ । ತೋಪ ತುಬಾಕಿ ಹಿಡಿದಾರೊ
ಚನ್ನವ್ವಗ ನೆದರ್ಹಚ್ಚಿ ಅವರು ಒಗೆದಾರೊ ।
ಆಕಿಗೆ ತಾಕದಲೆ ನೆಲಕಾರ ಬೀಳತಾವು
ಕತ್ತಿಯ ಹಿಡಿದಾರೊ ಡಾಲವ ಹಿಡಿದಾರೊ । ಚನ್ನವನ ಚಂಡಿಗೆ ಹೊಡೆಯತಾರೊ
ಆ ಕತ್ತಿ ಮುರದ ತುಂಡಾಗಿ ಬೀಳತಾವೊ
ಸಾಹೇಬ ದೊರೆ ನಿನ್ನ ಲಡಾಯಿ ತೀರ್ಯಾವೇನೊ
ಹೆಂಗಸ ಬಾಲಿ ಕುದರಿ ಲಡಾಯಿ ಮಾಡತೇನೊ
ಕುದರಿ ನೀ ಲಡಾಯಿ ಮಾಡ್ಯಾನೋ ಆವ ಇನ್ನನ
ಕುದುರೀ ಪೇರಿಯ ತಿರುವ್ಯಾನೊ ।
ಕುದುರಿ ಬಾಯಾಗ ಜೊಲ್ಲುಬಿಡತಾವೊ
ಆ ಕುದುರೆ ಚನ್ನವ್ವನ ಹೊಟ್ಯಾಗ ತಗೊಂಡ ಜಿಗದಾವೊ

ಸಾಹೇಬ ದೊರೆ ನಿನ್ನ ಲಡಾಯಿ ತೀರ್ಯಾವೇನೊ
ಹೆಂಗಲ ಬಾಲಿ ಕತ್ತಿ ಲಡಾಯಿ ಮಾತತೇನಂತಾಳೊ
ಕತ್ತಿಯ ತೊಗೊಂಡು ಚನ್ನವ್ವನ ಚಂಡು ಹೊಡೆಯತಾನು
ಸಾಹೇಬನ ಕತ್ತಿ ಮುರಿಯತಾವೊ । ಆ ಕತ್ತಿ ಚಲುವಿ ಚನ್ನವ್ವಗ ತಾಕಲಿಲ್ಲ

ಥ್ಯಾಕರೆ ಹೆಂಗಸ ಬಾಲಿ ನಿನ್ನ ಲಡಾಯಿ ತೀರಲೆಂದು
ಸಾಹೇಬ ಕೈ ಮುಕ್ಕೊಂಡ ನಿಲ ನಿಂತ । ಚನ್ನವ್ವ ದಂಡಿನೊಳಗ ಹೋಗತಾಳೊ
ಸಾಹೇಬನ ದಂಡ ಕಡಕಡದ ಕೆಡವತಾಳೊ । ಕುರಿಹಾಂಗ ಕೊಯ್ದು ಒಟ್ಟತಾಳೊ
ಚನ್ನವ್ವ ಹಿಂದಕ್ಕ ಹೊಳ್ಳಿ ಬರತಾಳೊ । ಚನ್ನವ್ವ ಸಾಹೇಬನ ಹಂತೇಲಿ ಬರತಾಳೊ
ಚನ್ನವ್ವ ಶರಣೆಂದು ಕತ್ತಿ ಹಿರಿದಾಳೊ । ಮಲಸರಜ್ಜಾ ನಿನ್ನ ಪುಣ್ಯವು ಇರಲೆಂದಳು
ಚನ್ನವ್ವ ಗಂಡನ ಕತ್ತಿ ಹಿಡಿದಾಳೊ ।
ಚನ್ನವ್ವ ಸಾಹೇಬನ ಚಂಡ ಚಟ್ಟನೆ ಹೊಡದಾಳೊ

ಹಿಂದಕ್ಕ ಹೊರಳಿ ನೋಡತಾಳೊ । ಹಿಂದಕ್ಕ ನೀ ಹೊರಳಿ ನೋಡ್ಯಾಳೊ ಚನ್ನವ್ವ
ಸಾಹೇಬನ ಮಕ್ಕಳನ ನೋಡತಾಳೊ । ಹಡದವ್ವ ನಮ್ಮನ್ನ ಚಂಡ ಹೊಡಿಯ ಬ್ಯಾಡ
ಹಡದವ್ವ ನಮ್ಮನ್ನ ಸೆರಿಯ ಹಿಡಿಯಬ್ಯಾಡ । ನೀ ಹೇಳಿದ್ಹಾಂಗ ಕೇಳತೇವು

ತಳವಾರ ಫಕೀರಾ ನೀ ಬಾರೋ ನನ್ನ ಮಗನ । ಜಕಾತಿ ಬಸಲಿಂಗಪ್ಪನ ಕರಿರಯ್ಯಾ
ಬಾಯನ್ನ ಈ ಮಾತು ಬಾಯಾಗ ಇರುಹೊತ್ತಿಗೆ । ಬೇಗನೆ ಬಸಲಿಂಗಪ್ಪ ಬರತಾನೊ
ಬಸಲಿಂಗಪ್ಪ ಇವರನ್ನು ಮಕ್ಕಳ ಸರಿಮಾಡಿ ಜ್ವಾಕಿ ಮಾಡಬೇಕೊ
ಚನ್ನವ್ವ ಹೀಂಗಂದಪ್ಪಣಿ ಕೊಡತಾಳೊ ಹರಹರ ॥

❖❖

೧೧

ಕಿತ್ತೂರಿನ ಮುತ್ತಿಗೆ

[ಕ್ಯಾಪ್ಟನ್ ಥ್ಯಾಕರನ ಮರಣದ ನಂತರ ಬ್ರಿಟಿಷರ ೨ನೆಯ ದಂಡು ಬೆಳಗಾಂವದಿಂದ ಧಾವಿಸಿ ಕಿತ್ತೂರಿಗೆ ಮುತ್ತಿಗೆ ಹಾಕಿದ ವರ್ಣನೆ ಈ ಪದದಲ್ಲಿ ಬಂದಿದೆ. ಬೆಳಗಾಂವಿಯ ಕರ್ನಲ್‌ನು ಸೋತು ತಿರುಗಿಹೋದನು. ಈ ಪದ ಮಾಡಿದವನು "ಪುಂಡ ಹುಬ್ಬಳ್ಳಿ ಪುಂಡ ಬಸವನು ಕಂಡು ಕವಿಮಾಡಿದ ವಿಸ್ತಾರ" ಎಂದು ಹೇಳಿಕೊಂಡಿದ್ದಾನೆ. ಇದನ್ನು ಕಡಚಗಟ್ಟಿಯ ಮಲ್ಲಪ್ಪ ದೊಡವಾಡ ಎಂಬವನ ಮಕ್ಕಳು ಹಾಡುತ್ತಾರೆ.]

ಕಿರಿದಿನೊಳಗೆ ಕಿತ್ತೂರ ಗ್ವಾಡಿದೊಂದು ಅರದ ಎಷ್ಟಂತ ಹೇಳಲಿ
ಬಂದ ಸರದಾರನ ತಲಿ ಹೊಡಿಸ್ಯಾಳ ತಳಿ ಹರಿಸ್ಯಾಳ ನೆತ್ತರ ಕಾವಲಿ

ಅಗಳತ ಗಚ್ಚ ಕಿಲೇವ ನೋಡ । ಮುತ್ತ ಸದರ ಬ್ಯಾಗಡಿ
ನಿಚ್ಚಳಾಗಿ ನಿಂತಾವ ಐದ ತೋಪ ಹೂಡಿ
ಮದ್ದು ಗುಂಡು ಬಿಗದ ನಿಂತಾವ ಚಕ್ಕಡಿ ।
ಮೂಡಲ ದಿಕ್ಕಿಗೆ ಮೋರೆಯ ಮಾಡಿ
ಹಸರ ಕೆಂಪು ಬಣ್ಣದ ಚಾವಡಿ ।
ಕುದುರೆಗೆ ಹಾಕಿದಾರ ಕುತನೀಯ ತಡಿ ।
ಪಾಲಕಿಯ ಮ್ಯಾಲ ಬೆಳ್ಳಿ ಕಾವಿನ ಕೊಡಿ
ಬಿರಸ ಬಾಣ ಹಾರತಾವ ಕಿಡಿ ಕಿಡಿ ।
ಸದರಿನ ಮುಂದ ನಗಾರಿ ನುಡಿ ಹಿಂದ ಕತ್ತೀಯ ಪಾರವ ಮಾಡಿ
ಇದ್ದ ಬದಕ ನೋಡಃ ಇರಲೆಂತ ಗ್ವಾಡಿಗೆ

ದಂಡ ತಯಾರ ಮಾಡಿ ನಡದಾ ।
ಸದರಿನ ಮುಂದ ಕೆಟ್ಟ ನುಡಿ ನುಡದಾ
ಬ್ಯಾಡಂದರ ಸಿಟ್ಟವನ್ಹಿಡಿದಾ ।
ಅಗಸಿಗೆ ಮೂರ ತೋಪ ಹಚ್ಚಿ ಹೊಡೆದ

ಕರ್ನಲ್ ಹಲ್ಲ ತಿಂತಾನೋ ಕರಕರ ।
ಕರ್ನಾಟಕಿ ಕೂಡಿತೊ ಬಲ್ ಬರ
ಒಬ್ಬೊಬ್ಬಗ ಐದು ಮೂರು ಹತಿಯಾರ ।

ಬಿರುಸು ಬಾಣ ಬಿಡತಾರ ಬರಾಬರಾ
ಬಂದ ಇಳದಾರ ಮದನಬಾವಿ ತಳ । ತರಿಸ್ಯಾರ ಒಳಗಿನ ಪಿತುರ
ಕಾಳಗ ಹತ್ತೆತಿ ಕಡಿ ಮೊದಲಿಲ್ಲದ । ಹೇಳಿನ್ನಾವ ಪತಿ
ಮಡಿದು ಹ್ವಾದ ಕಿತ್ತೂರ ದೊರಿ । ನಮಗ ಬಂದಿತು ರಣ ರಾತರಿ
ಅವರಾದಿ ಈರಪ್ಪನ ಕರಿ । ನಿಪ್ಪಾಣಿಗೆ ಕಾಗದ ಬರಿ
ದಂಡು ಮಂದಿ ಬರಲು ಕುದುರಿ । ಕಡದಾವಗ ಕೊಡತಾಳು ಬೆಳ್ಳಿವರಿ

ಹಲ್ಲ ತಿಂತಾಳೊ ಕರಕರ । ಹಬ್ಬಾದ ಮರುದಿನ ಸಬ್ಬ ರಾಜಕ ಬರದಾಳೊ ಲಕ್ಕುಟಿ
ಒಕ್ಕುಂದ ಬೆಳ್ಳೊಡಿ ದೇಮಟ್ಟಿ ಎಡಾಲ ಸಾನಿಕೊಪ್ಪ ನಾವಲಗಟ್ಟಿ
ಕುರಗುಂದ ಕಾದರೊಳ್ಳಿ ಕರ್ಚಲಗಟ್ಟಿ ಹಣ್ಣಿಕೇರಿ ಬನ್ನಿಕೊಪ್ಪ ಅಂಬಡಗಟ್ಟಿ
ಸವಣೂರ ಸಿರಹಟ್ಟಿ ಸೀಗಿಗಟ್ಟಿ । ಬೈಲೂರ ಬಸರಕೋಡ ಗುಂಡ್ಯಾನಟ್ಟಿ
ಕೊಟಬಾಗಿ ಹೊನ್ನಿದಿಬ್ಬ ಹೂಲಿಕಟ್ಟಿ । ಸೀಗಿಹಳ್ಳಿ ಮೇಟ್ಯಾಲ ದೇಮಟ್ಟಿ
ಕೊದಾನಪುರ ನಂದಿಹಳ್ಳಿ ಬೆಳ್ಳಿಕಟ್ಟಿ । ಬೆಳವಡಿ ಕರಿಯಾತಿಗೆಲ್ಲಾ ಸುದ್ದಿ ಮುಟ್ಟಿ
ಇಷ್ಟೂ ಮಂದಿ ಬರಲೋ ನಡಾಕಟ್ಟಿ । ಕಟ್ಟಿಮ್ಯಾಲ ಕುಂತ ಲೆಕ್ಕ ಹಾಕತಾಳ
ಹತ್ತುಸಾವಿರ ಕರ್ನಾಟಕಿ । ಹತ್ತು ಸಾವಿರ ದಂಡು ಸುತ್ತಲೆ ಇಳದಿತು
ಕತ್ತಲಗವಿದಿತು ಊರ । ಜೀರ ಮಾಡಿದರ ಬುಲ್‌ಬಾರಾ
ಅಲ್ಲಿಗೆ ಬಂದಾರ ಪಿರಂಗ್ಯಾರs ಹೊಕ್ಕ ಹೊಡುವತಾರ ಒಡ್ಡ ಕೊರವರ
ಗೂಳೇವ ತಗಿ ಅಂತಾಳು ರೈತರs। ಅಂಗಡಿ ಬಿಟ್ಟು ಎದ್ದರ ಬಣಿಜಿಗೆರ
ಅಲ್ಲಿಂದ ನೆನಸ್ಯಾಳ ತಮ್ಮ ದೇವರs । ಬಂದ ಮಾರಿ ಪಾರ ಮಾಡೋ

*ಬಳ್ಳೋಡಿವೀರಾ
ಇಲ್ಲಿಗೆ ಬಂದಾರೊ ಪಿರಂಗ್ಯಾರ । ಗೌಡ ಕುಲಕರಣಿಯವರಿಗೆ ಹೇಳತಾಳ

ಕುದುರ್ಹಿ ಮಾಡಿರೊ ತೈಯಾರ । ಹಾರಿತು ಗುಂಡು ಕೂಡಿತು ದಂಡ
ಕ್ಯಾಮನಮಡ್ಡಿ ತಕ್ಕೊಂಡು । ಚಿಂತಾಮಣಿ ನಿಪ್ಪಾಣಿಯ ಕೂಡಿಕೊಂಡು
ಕಿಲೇದ ಒತ್ತಿಲಿ ಬಂದ ಇಳಕೊಂಡು । ಹಳಬರ ಕೈಯನ ಕತ್ತಿಯ ಕಸಗೊಂಡು
ತಿರುವಿ ಹಿಡದ ಬಡದಾರ ನೋಡs ಒಂದು ತುಂಡು ।
ಕುರಿಹಾಂಗ ಹೆಣ ಬಿದ್ದಾವ ಹಿಂಡು ಹಿಂಡು
ಪುಂಡ ಹೆಬ್ಬಳ್ಳಿ ಪುಂಡ ಬಸವೇಶ್ವರ ಪದಾ ಮಾಡಿದಾನ ಕಂಡು
ಕಿರಿದಿನೊಳಗ ಕಿತ್ತೂರ ಗ್ವಾಡಿದೊಂದು ಅರದ ಎಷ್ಟಂತ ಹೇಳಲಿ ।
ಸುತ್ತೆಲ್ಲ ಅಗಳತ ಗಚ್ಚ ಕಿಲೇವ ನೋಡs ಮುತ್ತ ಸದರ ಬ್ಯಾಗಡಿ

❖❖

* ಬೆಳವಡಿ ವೀರಭದ್ರ ದೇವರಿಗೆ ಕಿತ್ತೂರ ಅರಸರು ಭಕ್ತಿಯಿಂದ ನಡೆದು ಕೊಳ್ಳುತ್ತಿದ್ದರು.

೧೨

ಚನ್ನಮ್ಮರಾಣಿಯ ಕೊನೆಯ ಕಾಳಗ

[ಚನ್ನಮ್ಮರಾಣಿಯ ಶೌರ್ಯವನ್ನು ಕಂಡು ಕಂಪನಿ ಸರಕಾರವು ಗಾಬರಿಗೊಂಡಿತು. ಥ್ಯಾಕರೆನನ್ನು ಕೊಂದಳಲ್ಲದೆ, ಅವನ ಕೆಳಗಿನ ಅಧಿಕಾರಿಗಳಾದ ಮಿಸ್ಟರ್ ಸ್ಟೀವನಸನ್ ಮತ್ತು ಮಿಸ್ಟರ್ ಇಲಿಯಟ್ ಎಂಬುವರನ್ನು ಸೆರೆ ಹಿಡಿದಳು. ಇದರಿಂದ ಬ್ರಿಟಿಶರು ರೊಚ್ಚಿಗೆದ್ದು ಎಲ್ಲ ಕಡೆಯಿಂದಲೂ ತಮ್ಮ ಸೈನ್ಯವನ್ನು ಅಣಿಗೊಳಿಸಿದರು. ಬ್ರಿಟಿಶರ ಕಲಾಳು, ಕುದುರೆಯಾಳು ಅಲ್ಲದೆ ಅವರ ವಶಕ್ಕಿದ್ದ ಹಿಂದೀ ಸೈನ್ಯವನ್ನು ಕೂಡಲೇ ಕಲೆಹಾಕಿ ಲೆಫ್ಟನೆಂಟ ಕರ್ನಲ ಡೀಕನ್ ಎಂಬವನು ಕಿತ್ತೂರ ಕಡೆಗೆ ಧಾವಿಸಿದನು. ಆಗ ದಕ್ಷಿಣ ಭಾಗದ ಕಮೀಶನರನಾದ ಚಾಪ್ಲಿನ್ ಸಾಹೇಬರು ಈ ಕಾಳಗದ ಮೇಲ್ವಿಚಾರಣೆಯ ಅಧಿಕಾರಿಯಾಗಿದ್ದನು.

ಇತ್ತ ಚನ್ನಮ್ಮರಾಣಿಯು ಹಿಂದೀ ರಾಜರಿಗೆಲ್ಲರ ಕಡೆಗೂ ತನ್ನ ವಿಶ್ವಾಸಿಕರನ್ನು ಕಳಿಸಿ ಸೈನ್ಯ ಬಲವನ್ನು ಕಲೆಹಾಕಿದಳು. ಸ್ವಾಭಿಮಾನಿಗಳು ನೆರವಾದರು. ಕೆಲರು ಫಿತೂರಿ ಮಾಡಿದರು. ಆದರೂ ರಾಣಿಯು ತನ್ನ ಬ್ರಿಟಿಶರನ್ನು ಹೊಡೆದೋಡಿಸುವ ನಿರ್ಧಾರದಲ್ಲಿ ಎದೆ ಗುಂದಲಿಲ್ಲ. ಯಾವ ಯಾವ ಭಾಗದಿಂದ ಜನರು ರಾಣಿಯ ನೆರವಿಗೆ ನಿಂತರೆಂಬುದು ಈ ಪದದಲ್ಲಿ ಬಂದಿದೆ. ಚಂದುಲಾಲನೆಂಬ ಓರ್ವ ದೇಶಾಭಿಮಾನಿಯು ಹತ್ತುಸಾವಿರ ಸೈನ್ಯ ಕಳಿಸಿದನು. ಅವನ ಬಗ್ಗೆ ಅಧಿಕೃತ ಐತಿಹಾಸಿಕ ಸಂಗತಿಗಳು ತಿಳಿದು ಬಂದಿಲ್ಲ. ಚನ್ನಮ್ಮ ರಾಣಿಯ ಸೈನ್ಯದ ಅಧಿಪತ್ಯವನ್ನು ಗುರುಸಿದ್ದಪ್ಪನೆಂಬವನು ವಹಿಸಿಕೊಂಡಿದ್ದನು. (ಆ ಸರದಾರ ಮನೆತನದವರು ಅಂಬಡಗಟ್ಟಿಯಲ್ಲಿ ಇದ್ದಾರೆ).

ಅಂತೂ ಕೊನೆಗೊಮ್ಮೆ ಚನ್ನಮ್ಮರಾಣಿಯು ಸೋತಳು. ಅವಳನ್ನು ಬಯಲು ಹೊಂಗಲದ ಕೋಟೆಯಲ್ಲಿ ಇಟ್ಟು ಬ್ರಿಟಿಶ ಸೈನಿಕರ ಕಾವಲನ್ನಿಟ್ಟರು. ಚನ್ನಮ್ಮನು ಅಲ್ಲಿಯೇ ವೀರ ಮರಣವನ್ನು ಹೊಂದಿದಳು. ರಾಣಿಯ ಸಹಾಯಕ್ಕೆ ನಿಂತ ಅನೇಕ ಕನ್ನಡ ವೀರರು ಹತರಾದರು. ಚನ್ನಮ್ಮನ ಸಮಾಧಿಯು ಕಲ್ಮಠದಲ್ಲಿ ಇದ್ದು ಅಲ್ಲಿ ಸ್ವಾಮಿಗಳು ಒಂದು ಸ್ಮಾರಕ ಕಟ್ಟಿರುವರು.

ಕಂಪನಿ ದಂಡಿನ ನೆರವಿಗೆ ಬಂದ (ಆಗಿನ ಕಾಲಕ್ಕೆ ಸೊಲ್ಲಾಪುರದ ಸಬ್‌ಕಲೆಕ್ಟರ್) ಸರ್ ಥಾಮಸ್ ಮನ್ರೊನ ಅಣ್ಣ ಮಗನಾದ ಮಿ. ಮನ್ರೊ ಎಂಬುವನು ಈ ಕಾಳಗದಲ್ಲಿ ಹತನಾದನು.]

ಈ ಪದವು ಶಹಪೂರಮಠ ಮಾಸ್ತರ ಮತ್ತು ಇಟಗಿಯ ಕಂತಿ ಬಸಯ್ಯ ಅವರ ಕಡೆಗೆ ಸಿಕ್ಕಿದ್ದು.

ಕಾಗದ ಬರದನು ಕಲೆಕ್ಟರ್ ಸಾಹೇಬ ಕಾಳಗಕ್ಹೋಗಿ ಮಡಿದನೆಂದು
ಹೊಳ್ಳಿ ಬಂದಾವೊ ಬೆಳಗಾವಿ ಫಿರಂಗಿ ಎರಡು ಪಡಾವ ಆದವೆಂದು
ಸರದಾರರಿಬ್ಬರು ಕೈಸೆರೆ ಎಂದು ನಮ್ಮ ಕತ್ತಿ ನಾಟುವದಿಲ್ಲೆಂದು
ಕಿತ್ತೂರ ಬಲವು ಬಾಳೈತೆಂದು ಮೂರೆಂಟು ಒತ್ತರದಿಂದ ಬೇಗ ಬರಲೆಂದು
ಫಿರಂಗಿ ಬರಲಿ ಎಂದು । ಆರ ತಾಸ ರಾತ್ರಿಗಿ ಕಾಗದ ಹೊಂಟಾವು ಧಾರವಾಡದಿಂದ
ಆಗ ಕಾಗದ ಬರದ ಇಲಾಯತಿಗೆ ಬೇಗನೆ ದಂಡು ಬರಲೆಂದು
ಅಂಚಿಯ ಸ್ವಾರರು ಅವರೆಂಥ ಶೂರರು ಧರಿ ಯಾದವಾಡ ತುಳವೂರ ದಾರಿ ಹಿಡಿದು
ಅವ ಏರ್‍ಯಾನು ಕುದುರೆಯಾ ಸ್ವಾರ ಹೊಂಟ ತಯಾರಾಗಿ
ಮೂರು ಮಜಲು ಮುರಿದು ಮುಂದಕ್ಕೆ ಹೋಗಿ
ಕಾಗದ ಮುಟ್ಟಿತು ಒತ್ತರಾಗಿ ಅಲ್ಲಲ್ಲಿಗೆ ಅಂಚಿ ಮೇಲೆ ಸಾಗಿ
ಐದು ದಿವಸಕ ಸಮೀಪಕ ಹೋಗಿ
ಮುಂದೊಂದು ಮಜಲು ತೇಜಿದಣಿದ್ಹೋಗಿ ನಿಂತನು ಸಾಯಬಗ ಹಾಜರಾಗಿ
ಕುಂಪನಿ ಮೆಚ್ಚಿ ನೂರು ರೂಪಾಯಿ ಕೊಟ್ಟಿತು
ಸಿಪಾಯಿ ಸಂತೋಷವಾಗಿ ದಾರಿಯ ತುಳಿದ ದೌಡಿಲೆ
ಹೋದಂಥ ಕಾಗದ ಓದಿ ವಕೀಲರು ಒಂದಕ್ಕನ್ನೆರಡು ಹೇಳಿದರು
ಒಂದಕನ್ನೆರಡು ಹೇಳುತ ಕುಂಪನಿಗೆ ಸಿಟ್ಟು ಆಯಿತು ಬಹು ಭಾರ
ಕಿತ್ತೂರ ಜೋರು ನಮ್ಮ ಮೇಲೆ ಭಾರ ಎನುತ ಹಲ್ಲು ತಿಂದಿತು ಕರಕರಾ
ಸಾಯೆಬ ಆದ ಬೆಂಕಿಯ ಚೂರ ಟಕರ ಸಾಹೇಬ ಸತ್ತನೆನುತ ಸರದಾರ
ಎನುತಲಿ ಮರಗಿದ ಮರ ಮರ ನಮ್ಮವನೆ ಕಾಳದ ಸದರಕಂಚೆ ಕೆಲಸ ಇಷ್ಟು ಬಾರ
ಎನುತ ಕರಸಿದ ಕರ್ನಲ್ ಸಾಹೇಬರು
ತಳ ಜಾಡಿಸಿ ಹೋಗಲಿ ನಿನ್ನ ದಂಡೆಲ್ಲ ತಯಾರ ಬಂದೂಕನ್ನೆರಡು ಹೇಳಿದರು
ಆ ಕುಪಣಿ ಕೋಪಾಗಿ ದಂಡು ಕಳುವಿದರ
ಪುಂಡ ಕರ್ನಲ್ ಸಾಹೇಬ ದಂಡಿಗಪ್ಪಣಿ ಮಾಡಿ ಹೆಂಡಿತಿಯ ಬಳಿಯ ಒಡೆಸಿದನು
ಮದ್ದು ಗುಂಡು ಮಸ್ತದಿ ಮಾಡಿಕೊಂಡು ತೈಯಾರಾದನು ಸರದಾರ
ಬಾಣ ಹೇರಿ ಒಂಟಿ ಹೊಂಟವು ಐನೂರ ಇಲಾಯತಿ ದಂಡು ಚಮತ್ಕಾರ
ದಣುವಿಲ್ಲದ ದಾರಿ ತುಳಸಿದ ಸರದಾರ
ಕಿತ್ತೂರ ತಕ್ಕೊಳ್ಳುವದಕ ಭರ ಒತ್ತರ
ಮಾಡಿ ಉಣಗೊಡದ ದಂಡನು ಕಿತ್ತೂರ ಸುತ್ತ ಇಳವಿದರ
ಹೆಂಡರ ಬಳಿಯ ಒಡಸಿ ಕರ್ನಲ್ ಸಾಹೇಬ ದಂಡ ತಂದನು ಕಿತ್ತೂರಿಗೆ

ಇತ್ತ ಕಿತ್ತೂರವರು ಮತ್ತ ಮೊಗಲಾಯಿಗೆ
ಒತ್ತರ ಕಾಗದವ ಕಳವಿದರು ಮತ್ತ ಮೊಗಲಾಯಿಗೆ
ಒತ್ತರಮಾಡಿ ಅವರು ಪತ್ರ ಬರೆದ ಆದ ವರ್ತಮಾನಗಳಿಗೆ
ಸುತ್ತಲೇ ಕಂಪ ಅದುವೆ ನಮಗೆ ಆಸರೆಂಬುದು ಯಾರದು ಇಲ್ಲಾ ಸ್ವಾಮಿ
ರೋಸ ತಂದ ಇಟ್ಟನಲ್ಲಾ । ಶಿವತ್ತಿ ವಶ ನಿಮ್ಮದಲ್ಲಾ ॥
ಈ ಸಮಯಕ ಒಡಗೂಡಿರೆಲ್ಲಾ ಇದ ಒಂದು ಬಾರಿ ಗೆದಿಯಬೇಕು ।
ಮುಂದೆ ನಾವು ನೀವು ತಣ್ಣಗಿದ್ದರ ನಿಮ್ಮ ಕೆಲಸದ ಮೇಲೆ ಹಚ್ಚಿದೇವಲ್ಲ
ಹಾಗೆಂದು ಮೊಗಲಿಗ ಕಾಗದ ಬರೆದಳು ಇದು ಈ ಮಾತು ನಿಮ್ಮದಲ್ಲ
ಒತ್ತರಮಾಡಿ ಬರದಾರು ಚಂದುಲಾಲನ ಹತ್ತುಸಾವಿರ ಫೌಜಿಗೆ
ಮತ್ತ ಕಿತ್ತೂರವರು ಸ್ವಾರ ತಯಾರಾಗಿ
ದಾರಿ ಹಿಡಿದು ಆ ಸ್ವಾರ ಹೊಂಟನು ಊರ ಬಿಟ್ಟು ಒತ್ತರಮಾಡಿ
ಒಂದು ಗಾವುದೊಂದು ಹರದಾರಿ ಮಾಡಿ
ಹವಣಿಸಿ ನಡದನು ನಾಜುಕ ನೋಡಿ ರಾತ್ರಿ ಹಗಲಿ ಎರಡು ಗಾವುದ ಮಾಡಿ
ಮಗಲಾಯಿ ಸೀಮೆಗೆ ಹೋದಾನು ಓಡಿ
ಚಂದುಲಾಲನ ಮುಂದೆ ನಿಂತು ಚೀಲನು ಮುಂದ ನಿಂತು ಮಜುರಿಯ ಮಾಡಿ
ದಾರಿಯ ಹಿಡಿದು ಹೊರಟನೊ
ಮಗಲಾಯಿಗೆ ಎಂಟು ದಿವಸಕ ಮುಟ್ಟಿದನು

ಹೋದಂಥ ಕಾಗದವ ಓದಿ ವಕೀಲರು ಬೋಧನೆಯ ಮಾಡಿ ಹೇಳಿದರು
ಓದಿ ವಕೀಲರು ಬೋಧನೆಯ ಮಾಡಲು ಎಂಥವರಿಗ್ಹೇಳ ಬರಲುಂಟು
ಚಂದಾಗಿ ಶಾಸ್ತ್ರಪುರಾಣಮಾಡಿ ಹೇಳ್ಯಾರು ಚಂದುಲಾಲಗಿಷ್ಟು
ಬೋಧನೆಯ ಬಾಳ ಹೇಳಿದರು ಚಂದುಲಾಲಗ
ಬೋಧ ತುಂಬಿದರು ಬಗೆ ಬಗೆಯಾಗಿ
ಆಗ ಚಂದುಲಾಲ ಹೌದೆಂದು ಈ ಮಾತು ಹಮ್ಮ ತಾಳಿದನು ಒಳಗ

ಹಮ್ಮು ತಾಳಿ ತಾನು ತಮ್ಮನ ಕರೆದು ನಿಮ್ಮ ದಂಡು ತೈಯ್ಯಾರಾಗಲೆಂದು
ಕಿತ್ತೂರ ಕುಮಕ ಹೋಗಲೆಂದು । ಸುತ್ತೆಲ್ಲ ಕಂಪನಿ ದರಬಾರೆಂದು
ಆಕೆ ಅವಸರಿಕಿರಿಲೆಂದು ಆಲಪರಿಯಿಂದ ಕಾಗದ ಬರಿದಳೆಂದು
ತನ್ನ ತಮ್ಮಗ ಹೇಳಿ ನಿಂದು ಹತ್ತು ಸಾವಿರ ದಂಡು

ಹತ್ಯಾರ ಮುಸ್ತೋದಿಯಾಗಿ ಕಿತ್ತೂರವರ ಹೊತ್ತಿಗಾಗಬೇಕೆಂದು
ಆ ಕ್ಷಣ ತಮ್ಮಗ ಸೂಕ್ಷ್ಮ ಹೇಳಿದ ಜಾಣತನದಿ ಜಗಳ ಮಾಡಲೆಂದು

ಹಮ್ಮು ತಾಳಿದನು ಮನದೊಳಗೆ ಚಂದುಲಾಲ
ತಮ್ಮಗ ಹುಕುಮ ಮಾಡಿದನು
ಹತ್ತು ಸಾವಿರ ದಂಡು ಮತ್ತ ತಯಾರಾಗಿ
ಒತ್ತರಲೆ ದಾರಿ ಹಿಡದಿತ್ತು ಹತ್ತು ಸಾವಿರ ದಂಡು
ಹತ್ಯಾರ ಮುಸ್ತೋದಿ ಕೇಳಿ ಭಾಲೆ ಬಾಕ್ಡಿಡಕೊಂಡು
ಗತ್ತಿ ಕಠಾರಿ ಪಿಸ್ತೂಲ ಹಿಡಕೊಂಡು
ಮಸ್ತ ಮದ್ದು ಗುಂಡು ಮಾಡಿಕೊಂಡು ಭಾಲೆ ಬರ್ಚಿ ಹಿಡಕೊಂಡು
ಚಂದಾಯುಧ ಚಿಲ್ಕತ್ತ ತೊಟಕೊಂಡ
ಬಂದೊಬಸ್ತ ನಡವಬಾರನು ಬಿಕ್ಕೊಂಡು
ಸಿಸ್ತಾಗಿ ತಯಾರಾಗಿ ನಡದವು ಕಟ್ಟಿಗೆ
ಹತ್ತು ಸಾವಿರ ದಂಡು ಒತ್ತರ ಮಾಡಿ ಕಿತ್ತೂರಿಗೆ ಬೀಳಬೇಕೆಂದು
ಮತ್ತ ದರಿಯಿಲ್ಲದ ಬಗಡಕೋಟಿಗೆ ಇಳಿದು ಬಂದು
ಒತ್ತರಮಾಡಿ ಹೊಂಟಿತು ಕಿತ್ತೂರಕ

ಕಳ್ಳ ಬದಿಯಿಂದ ಮೊಗಲ ಬರತಾನಂತ ಬಳ್ಳಾಗಿ ದಂಡು ಬರ ಬರ ಮಾಡಿ
ಬಳ್ಳಾರಿ ಮೇಲಿನ ದಂಡೆಲ್ಲಾ ಬಂದಿತು ಥಳ ಥಳ ಸನ್ನಾಲ ಹೊಳೆವುತ
ಫಿರಂಗಿ ತುರಂಗ ಚಿಯಾಸುತ । ಕರೆದರೀಗ ಚಿಟ್ ಬರವುತ
ಬಳಿ ಕುದುರಿ ಲಗಾಮಗಟ್ಟಿ ಹೋಗೂತ ಬೂದ ಕುದರಿ ದಿನ್ನಿ ತುಳವುತ

ದಂಡೆಲ್ಲ ಜಾಗ ಜಾಗ ಅಂತ ಕಾಲಾಳು ಚಿತ್ತವಿಟ್ಟು ಬರವುತ
ಕಾಳಗಕ್ಕ ದಂಡ ಕಾಲ ಕೆದರುತ ಕೇಳಲು ವಿಪರೀತ
ಹೇಳಲಿನ್ನೇನು ಕಾಳಗವ ಮಾಡ ಬಂದಂಥ ಕೇಡಿಗೆ ಮಂದಿ ।
ಕಿತ್ತೂರ ಮೇಲೆ ಒತ್ತರಕ ಮಡಿ ಕೆತ್ತಿ ಮಾಡುವರಂತ ಬಳ್ಳಾರಿ ದಂಡು
ಬರಮಾಡಿ ಫಿರಂಗೇರು ಜಳವಡಿಸಿದರು ಕಿತ್ತೂರನ್ನಾ
ಮತ್ತ ಕಿತ್ತೂರವರು ಮುತ್ತ ಕಡಿದೆವೆನ್ನು
ಈ ಹೊತ್ತಿಗೆ ಸಮ ಕೊಡು ತಾಯಿ

ಈವತ್ತಿಗೆ ಹುಕುಮ ಕೊಡು ತಾಯಿ
ಜಾಗಳ ದಂಡು ಕೂಡಿತು ಬಂದು
ಬಳ್ಳಾರಿಂದ ಸರದಾರ ಬಂದನಂತ । ಕುಂಬಾರರಸು ಬರತಾನಂತ ಕಿತ್ತೂರಿಗೆ
ಮುತ್ತಿಗೆ ಮಾಡತಾನಂತ ಕುತ್ತಿಗೆ ಕೊಯತಾನಂತ
ಸುತ್ತದ ಸೀಮೆಯಾ ಭೇದ ಇತ್ತಂಥ ಹೇಳವ್ವ
ಹುಕಮ ಕಾಲ ಮಾಡೆನುತ ಕರಿಮರಿ ಬಿದ್ದ ಕತ್ತಿನ ಮದಗಾಳಿ ।
ಮುಂಗೈ ಸರಪಳಿ ಹೆಚ್ಚಿನ ಬಂಟರಿಗೆ ಕೇಳಲ್ಕೆ ಕಾಲ್ಕೆದುರುತ
ಈ ಹೊತ್ತಿಗೆ ಹುಕುಮ ಮಾಡ ಚನ್ನವ್ವ ಮಗಳ ಜಗಳ ನೋಡುವ ॥

ಬಾಯಿ ಚನ್ನವ್ವನವರು ಬಂಟರಿಗೆ ಹೇಳಿದಳು ಬಾಯಿಲೆ ಬಾಳ ಪರಿಯಂತ
ಇಂದು ಕೇಳು ಕೇಳು ಮನೀವೆಂದು । ದಣಿಯಾರ ಕತ್ತಿಯು ಮುಂಚೆ ಆಗಲಿಯೆಂದು
ಆ ಮೇಲೆ ಕತ್ತಿಯಾ ನಾವು ಮಾಡೋಣವೆಂದು ಅದಕಾಗಿ ತಲಿಗೊಟ್ಟು ನಿಂತೆವೆಂದು
ಇದರೊಳಗೆ ನಮ್ಮದೇನೈತೆಂದು ಸ್ವಾಮಿ ನಡಸಿಕೊಟ್ಟರವೆಂದು
ಸನಮಂತ ಹೇಳ್ಯಾಳು ಮಂದಿಗಿಂದು
ಕಾದು ಕೆಲಸವ ಮಾಡಿರಿ ಕವಾಯ್ತು ಎಂದು ।
ಕಾಲ ತುಳಿದು ಜಗಳ ಬೇಡವೆಂದು
ಬಾಲಿ ಚನ್ನವ್ವನವರು ಬಲ್ಲಂತ ಹೇಳಿದಳ ವ್ಯರ್ಥ ಜೀವ ಕೊಡಬೇಡಿರೆಂದು
ಬಾಲೆ ಚನ್ನವ್ವನವರು ಹೇಳ್ಯಾರು ದಣಿಯಾರ ಕತ್ತಿ ನಮ್ಮ ಮೇಲೆ ಆಗಲಿಲ್ಲ ॥
ಕಡುವದಿಲ್ಲ ತಾಯಿ ಕತ್ತಿ ಮಾಡೋದಿಲ್ಲ ನೋಡಿ ಬರತೇವು ।
ಜಗಳವ ನೋಡಿ ಬರತೇವು
ಅಪ್ಪಣಿ ಮಾಡುನುವು ಹೊಡಿವು ಎಂದು ಚನ್ನವ್ವ ಕೇಳಾಕ ಚಂದದಿಂದು
ತಾಯವ್ವ ನಮಗ ಹುಕುಮು ಹೇಳೆಂದು । ಕಾಳಗ ಮಾಡಿ ಕತ್ತಿಯಾ ಹಚರೆಂದು
ದೂರಿನಿಂದ ನೋಡಿ ತಿರುಗಿ ಬರೆಂದು ಮಾಡೇಳು

ಅಪ್ಪಣೆ ಕಡಿಗ ಕಟಕರ ಕಡಿಯಬೇಕು ಪಡಯಿತು ನಾಡಿ ಎಂದು ಕಲ್ಲಗೀ ।
ಕರಿ ಕಿತ್ತೂರಾಯಿ ಕತ್ತಿಗೆ ವರಿ ಹುಲ್ಲ ಸರವಿ ಮಂದಿ ಹೊರಬಿದ್ದ ಬಂದು
ನೋಡಿ ಬರತೇವು ಕಾಳಗವ ಎನುತಲಿ ಮಾಡಿಕೊಂಡರು ಅಪ್ಪಣೆಯಾ
ಕಡಿಯಬೇಕೆಂದು ಕಸ್ತಿ ಮನದೊಳಗ್ಹಿಡಿದು ನಡರೋಗಿ ಮಾತಾಡಿ
ಉಡಸ ರುಮಾಲ ಒಂಟಿ ಮುತ್ತು ಕಂಠಿ ಸರ ಮೋಹನ । ಕಂಠಿ ಸರ ಮೋಹನ್ನಲು

ಕಾಲ್ತೊಡರು ತೋಡೇದ ಹಿಡಿದು । ದಂಡಿಗೆ ಹೋದರು ನಡಿದು ।
ದಂಡಿನಾಗ ಗುಲ್ಲಾಗಿ
ಹೂಲಿಗಾಳಿ ಹಿಡಿದು ಬೇಟಿಕಾರರು ಚೆಪ್ಪಿ ಬಂದೂಕ ಹಿಡಿದು ನೆಗವಿ ಹೊಡದ । ಇವರಿಗೆ
ನಿರತಿಡಿದ್ಧು ಕಿತ್ತೂರವರಿಗೆ ಗುಂಡ್ಹೊಡದು ದಾಟಿ ಬಿತ್ತೊ ಭೂಮಿಯಾ ಹಿಡಿದು
ಕಿತ್ತೂರವರಿಗೆ ಕಿಚ್ಚುಯೆಂದು
ಒಳಿಯಾತನಕೂ ಹೊಡದು ಹುರಿಗೆದ್ದು ಆರಮಂದಿ ಸರದಾರ ಕಡದು
ಹನ್ನೆರಡು ಕುದರಿ ಫಿರಂಗಿ ಹಿಡಿದು । ಅವರಿವ ಕಲಕ್ಯಾಡಿ ಜನ ಮಡಿದು
ಕತ್ತಿ ಬೆಳಗಿ ದಾರಿ ಹಿಡಿದು ಕಿತ್ತೂರಿಗೆ ಬಂದು ಮುಜರಿಯಾ ಹೊಡದು ।

ಕೇಳು ಚನ್ನವ್ವ ತಾಯಿ ಕಾಳಗದ್ಯೆಸುವಿಯೆಂದು ಹೇಳ್ಯಾರು ಚಂದದಿಂದ
ಕೇಳಿ ಚನ್ನವ್ವನವರು ಕಾಳಗ ಮಾಡಿದ ಬಂಟರಿಗೆ ಕೊಟ್ಟಳು ವೀಳೇವ
ಹಿಡಿದು ನಡತಿತೊ ದಂಡಿನ ಇದಿರಾಗಿ ಪರಂಗೇರ ಕಡದು ಹಿಂದಕ ಸರಿಸಿದರು
ಆಗ ಪರಂಗೇರು ಕೂಡಿ ಮಾತಾಡಿಕೊಂಡು ಕುಂಬಾರರಸಿನ ಬರಮಾಡಿ
ಕುಂಬರರಸಿನ ದಂಡು ಕುಚಿಯಾಗಿ ಹೊಂಡಿತು ।
ಊಚ ದಂಡು ಮೈಸೂರಿಲಿಂದ
ಕಚೇರಿ ಬುನುಗು ಬಜಾರ ಹಿಂದ ।
ಖಾಸ ಕುದುರಿ ದಿನ್ನಿ ತುಳುವುತ ಮುಂದ
ಕಿತ್ತೂರ ತಕ್ಕೊಳ್ಳು ಅಬ್ಬರದಿಂದ
ಹುಬ್ಬಳ್ಳಿ ಮೇಲೆ ಹಾದು ಬಂದು ಕಿತ್ತೂರ ಗೋಡಿ ಮತ್ತು ನಮ್ಮ ತೆಲಿ ಕೊಡಬೇಕೆಂದು
ಒಳ್ಳೆ ಒಳ್ಳೆ ಸಿಪಾಯಿಗಳಿಗೆ ವೀಳ್ಯೆವ ತುಂಬಿಸಿ ಮೈಸೂರವರು ಬಂಬು
ಕುಂಬರರಸಿನ ಬರಮಾಡಿ ಪರಂಗೇರು ದಂಡು ತಂದರು ಕಿತ್ತೂರಿಗೆ
ಕುಂಬರರಸಿನ ದಂಡು ಕುಮಕ ಮಾಡಿಕೊಂಡುದು ಮರೆತು ಕಿತ್ತೂರಪುರಕಾಗಿ
ಕುಂಬರರಸಿನ ದಂಡು ಕುಮಕಾಯಿತು ತಡವೇಕ । ತಕ್ಕೊಳ್ಳು ನಡಿ ಕಿತ್ತೂರ
ಮುಂಗಡಿ ಥಳಥಳಿಸಿ ಕರ್ನಲ ಸಾಯಿಬರು । ಪಿಚಡಿಯಿಟ್ಟ ಆಲ್ಬರ್ಟ ಸಾಯಿಬರು
ನಡ ಮಧ್ಯ ದಂಡ ಹತ್ತಸಾವಿರು ತಳ ಜಾಡಿಸಿ
ಕಿತ್ತ ನಡಿಯಿತರಿ ಕಿತ್ತೂರ ತಕ್ಕೊಬೇಕು ಒತ್ತರ
ಪಡಿ ತೈಯಾರ ಹೊಡಿಯಾಗ ಆಗ ನಿಂತ ಗುದಿರಿ ಗೋಲಂದಾಜ ಅರಮನಿ ಹೊಡದ.
..... ಚನ್ನವ್ವನ ಮಾಲಿಗೆವಿತ್ತ ತಿರ ಸಿಟ್ಟು ಆದಳು ಬಹುಭಾರ
ಚನ್ನವ್ವ ತಾಳಿ ಶಕ್ತಿ ಅವತಾರ । ಉಗ್ರ ಕೋಪ ತಾಳ್ಯಾರು ಬಹು ಭಾರ

ತೋಫ ಇತ್ತು ಐನೂರ ಸರಬತ್ತಿ ಮಾಡಲೆಣ್ಣಿ ಭರಭರ
ತುಂಬಿದ ಬಾಣವ ಬಿಟ್ಟರೊಂದು ಐನೂರ । ಬೆಂಕಿ ಮಳಿಗರಿಸಿದ ಪರಮೇಶ್ವರ
ಕಾವಲಿ ತುಂಬಿ ಹರಿದು ನೆತ್ತರ ಭೂತಗಳುಂಡ ಡೇಗ್ಯಾವು ಥರಥರ
ಮರಿ ಮರಿಗೆನೆ ಫರಂಗೇರ ಓಡುತರಂತೆ ಆದಿತು । ತರ ತರ ಒಳಗಿಂದ ಕುದರಿ ಮಂದಿ
ಹೊರಬಿದ್ದ ಕಡಿದರ ಮಡದೀತು ಮಂದಿ ಐನೂರು
ಹರನ ದಯದಿಂದ ಅವರು ಉಳದು ಹೋದ ದಿವಸ ದಂಡ ಮುಣಗೀತು ತೀರ
ಧುಮುಕೀತು ಕಿತ್ತೂರ ಪುರಕ್ಹೋಗಿ ಫರಂಗೇರು ಮುರಿದು ಹಿಂದಕ ಸರಿದಾರು

ದೊರಿಯು ಚನ್ನವ್ವನವರು ಸೆರೆಬಿಟ್ಟು ಸುರರ ಕರಸಿದಳು ತಮ್ಮ ಸಮೀಪಕ
ದೊರಿಯು ಚನ್ನವ್ವನವರು ಧರ್ಮದ ಮಾತಿಡಿದು ಕರ್ಮಕ ಒಳಗಾಗಬಾರದೆಂದು
ಕೈಯಲ್ಲಿ ಸಿಕ್ಕವರ ಕೊಲಬಾರದೆಂದು ಮುಂದ ಸ್ವಾಮಿ ನಮಗ ಮೆಚ್ಚಾಕಿಲ್ಲೆಂದು
ಜರದ ಶಲ್ಲೆ ಮುಂಡಸ ತಂದು
ಉಡುಗರೆ ಮಾಡಿದಳು ಚಂದದಿಂದ ಸರದಾರರಿಗೆ ಅಪ್ಪಣೆ ಆದಿತೆಂದು
ಆಗ ಸರದಾರರು ಹೋಗಿ ಚನ್ನವ್ವನವರ ಪಾದಕ ಬಿದ್ದ ಹೇಳೆಂದು
ಮತ್ತ ನಮ್ಮ ಜೀವ ಸತ್ತರೊಂದ್ಹೋಯಿತು । ಉಳಿದರ ನಿನ್ನ ಹೊತ್ತಿನಾದೆವು
ತಗಸಿದಳು ಮುಂದಕ ತಗಸಿದಳು ಹೊರಿಯಕ ಅವರ ದಂಡಿಗೆ ಜಗಳ
ಜಗಳ ಕೈಗೂಡಿದಳಾಗುಗುದಿಲ್ಲೆಂದು ತಳದ ಸುದ್ದಿಯಾ ತರಬೇಕು
ಕಾಗದ ಬರದಾರು ಕರಣಿಕಗ ಕಿತ್ತೂರ ಗೋಡಿ ನಮಗೆ ಎಂದು
ಹತ್ತ ಲಕ್ಷ ರೂಪಾಯಿ ಕೊಡತಾರೆಂದು । ಐದಳ್ಳಿ ಉಂಬಳಿ ಕೊಡತೇವೆಂದು
ಹಾಸಿ ಹಂಚಿ ಕಾಗದ ಬರಿದಾರಿಂದು.
ಕಳ್ಳ ಬಂಟರ ಕರಿಸಿ ಕೊಟ್ಟರು ಕಾಗದ ಮುಟ್ಟಲಿ ಕಾರಕೂನ ಸಹ ಎಂದು
ಕೊಟ್ಟಂಥ ಕಾಗದ ಠಕ್ಕುತನದಿ ಹೋಗಿ ಮುಟ್ಟಿತು ಕಾರಕೂನಗ ಬಂದು
ತಳದ ಸುದ್ದಿಯಾ ತರಬೇಕು ಎನುತಲಿ ಬರೆದ ಕಾಗದವ ಕಳಿವಿದರು
ಹೋದಂಥ ಕಾಗದ ಓದಿ ನರಸಿಂಗರಾಯಾ[೧] ಮಾಡಬೇಕೆಂದ ಮಸಲತ್ತ
ಮಸಲತ್ತ ಮಾಡೇರು ಮಂದಿಗೆಂಟು ಮಂದಿ ಕಾರಕೂನರೆಲ್ಲರು ಕೂಡಿ
ತಮ್ಮೊಳಗೆ ತಿಳಿದು ತಾವು ಮಾತಾಡಿ
ಈ ಹೆಣ್ಣಿ ಬೊಡೆರ ಸಂಗಾತಾಡಿ ಲಜ್ಜಗೆಡದೆವು ನೋಡಿ

---

೧. ನರಸಿಂಗರಾಯ ಇಂಗ್ಲೀಷರಿಗೆ ಫಿತೂರಿ ಮಾಡಿದ ಕಿತ್ತೂರ ಕಾರಭಾರಿಗಳಲ್ಲಿ ಒಬ್ಬನು.

ಹತ್ತು ಮಂದಿ ಕೂಡಿ ಫಿತೂರ ಮಾಡಿ ಫಿರಂಗೇರಿಗೆ ಕೊಟ್ಟು ಕಿತ್ತೂರ ಗೋಡಿ
ಅವರು ದುಡ್ಡಿಗೆ ಆಶೆಮಾಡಿದರ ಉದಯಾಕ ಬರಮಾಡಿ
ಸಾಹೇಬರಿಗೆ ಕಿತ್ತೂರ ಗೋಡಿ ಮಾಡಬೇಕೆಂದು
ಮಸಲತ್ತು ಫಿರಂಗೇರಿಗೆ ಸೋಲಬೇಕೆಂದು । ಗೋಡಿಯನು

ಮತ್ತ ಕಿತ್ತೂರ ಕಾರಕೂನ ಕಾಗದ ಬರದು ದಂಡಿಗೆ ಕೊಟ್ಟು ಕಳುಹಿದನು
ಕಾಗದ ಬರದನು ಕರಣಿಕ ಕಾರಕೂನ ನಿಮ್ಮ ಮನುಶ್ಯಾನ ಕೊಟ್ಟು ಕಳುವೆಂದು
ಲಗು ಬೇಗ ದಂಡ ತಯಾರ ಬರಲೆಂದು ಕಾಳಗದ ಮರಿ ನೀವು ಹಚ್ಚೆಂದು
ನಿಶಾನಿ ಮೊಳಗವುದೆಂದು ಬಾತಮಿ ಕಾಗದ ರಾತುರಿ ಬಂದಿತು

ಆ ಸಾಹೇಬ ನೋಡಿಕೊಂಡು ಸಬ್ಬದಂಡಿಗೆ ಹುಷಾರ ಹೇಳಿದ
ಸಾಹೇಬರು ಕುಳಿತುಕೊಂಡು ಕಾಗದ ಬರದು
ದಂಡಿಗೆ ಕಿತ್ತೂರಿಗೆ ಮುತ್ತಿಗಿ ಮಾಡಿ ದವಡೀಲೆ
ಆಗ ಫಿರಂಗೇರು ಬೇಗನೆ ದಂಡಿಗೆ ಕೂಚಿಮಾಡಿದರು ಕೂಗ್ಯಾಡಿ
ತಂಬು ಮಾಡಿ ಅವರು ಸಬ್ಬ ದಂಡೆನೆಲ್ಲ ಎಬ್ಬಿಸಿ
ಗರಗದ ಹಳ್ಳಬಿಟ್ಟು ಹೊಂಟಿತು ಕಿತ್ತೂರಿಗೆ ತಲಿಯಿಟ್ಟು
ರಜಕ ಎರಡು ಬಂದೂಕ ಹೆಗಲೊಳಿಟ್ಟು
ಕವಾತುಮಾಡಿ ಕಾಲಾಳಕ ಜತೆಲಿಟ್ಟು । ತುರುಪಿನ ಕುದುರೆಯಾ ಹತ್ತಿ ಹೊಂಟು
ಪಹರೆಯೆಳಸುತ ಸಲಯಿಟ್ಟ ಸಂಸಾರದ ಆಶೆಯ ನುಣ್ಣಗ ಬಿಟ್ಟು
ಮೂರು ಕಣ್ಣುಳ್ಳ ಮುಕ್ಕಣ್ಣಗ ಮೊರೆಯಿಟ್ಟು
ಇಂದು ಕಿತ್ತೂರ ಬಂದರ ಚಂದಾಯಿತು
ಬರದಿದ್ದರ ಅದಕ ನಮಗ ಗಂಟು ।
ಮಾರಾಯಾ ಸರದಾರರು ಮನಿಯಾ ಮಂಗಳ ಸೂತ್ರಗಳೆಲ್ಲ ಹರಿದಿಟ್ಟು
ಕೂಚಿಮಾಡಿದರೊ ಕೂಗ್ಯಾಡಿ
ಕರ್ನಿಕಾಳಿ ಭೇರಿಯಾ ಶಬ್ದದ ನೆವದಿ
ಹತ್ತು ಸಾವಿರ ದಂಡು ಮತ್ತೆ ತಯಾರಾಗಿ ಕತ್ತಿಯಾ ಕಿತ್ತು ಹೊಂಟಿತು

ಕತ್ತಿಯಾ ಕಿತ್ತು ಅವರು ಒತ್ತರ ಮಾಡುತ ಕಿತ್ತೂರ ಸಮೀಪಕ ಬಂದು
ಫಿರಂಗಿ ಹಚ್ಚಿ ಅಗಸಿಗೆ ಹೊಡಿಯೆಂದು ಫರಂಗಿ ಆಗಿ ನಿಂತನು ದುಂದು

ಕಿತ್ತೂರ ಮಂದಿ ಹೊರಬಿದ್ದು ಸಂಗಾತ ಎರಡು ಫಿರಂಗಿ ತಂದು
ಕೆಮ್ಮಣ್ಣ ಮಡ್ಡಿ ಮೇಲೆ ಹೊಡಿ ಎಂದು ಘುರಿಹೊಡದು ಫರಂಗೇಗ ಬಾ ಎಂದು

ಇಂಗ್ರೇಜ ಸಾಗಿ ಮುಂದಕ ಬಂದು ಕಾಳಗ ಹಚ್ಚಾನೊ ಬಲುದುಂದು
ಕಿಲ್ಲೇದ ಮೇಲೆ ಹತ್ತಿ ಬಂದು । ನಿಶಾನಿ ಹಚ್ಚ್ಯಾರ ಘಾತಕದಿಂದು
ಇಂಗ್ರೇಜ ಕಂಡನು ಚಂದದಿಂದು ।
ಕಡಿ ಎನುತ ಬಿಡದಿರೆಂದು । ದುಮುಕಿ ಕುದುರಿಲೆ ತಾನೊಂದು
ಫಿರಂಗಿ ಅಗ್ಗಣಿಗೆ ಹಚ್ಚಿ ಹೊಡಿಯೆಂದು
ಒಳಗಿನ ಮಂದಿ ಸಾಲ ಸಾಲ ಎಂದು ಬಾಗಲ ತೆಗೆದ ಒಳಿಯಾಕ ಬಾಯೆಂದು

ದೇಶದೊಳು ಕಿತ್ತೂರಿಗೆ ಮೋಸವಾದಿತು
ಈಶ್ವರ ಮುನಿದಾನು ಚನ್ನವ್ವಗ । ಬಾಲೆ ಚನ್ನವ್ವನು ಬಲದೊಳಗ ಸಿಕ್ಕಳು
ಕಿಲ್ಲೇಕ ಕೊಟ್ಟರು ಫರಂಗಿರಿಂದು
ಕತ್ತಿಯಾ ಕಿತ್ತು ಹೊಂಟಿತು ಕಿತ್ತೂರಿಗೆ
ಮುತ್ತಿ ಠಾಣ್ಯೇವ ಮಾಡಿದರು

ಆಗ ಚನ್ನವ್ವನವರು ಚಿಂತೆಗೊಳಗಾಗಿ ಕಾಂತನ ನೆನಸಿ ಅಳತಾರೊ
ದೊರೆ ಮಲ್ಲಸರಜ್ಯಾ ಮರಿಯಾದ ಮಣ್ಣಿಗೆ
ವೀರಪ್ಪ ದೇಸಾಯಿ ಇರಲಿಲ್ಲ
ಹೋಗಿ ಶಿವಲಿಂಗಸರಜ್ಯಾ ಮೂವರಿಂದಿಗೆ ಕೇಡು ಬಂದಿತೊ ನಮಗ
ಹಬ್ಬದ ಅಮಾಸೆಗೆ ಆಹಾ ಹ್ಯಾಂಗೆಂದು ತಾಯವ್ವ ಭೋಗಿ ತಾ ಅಳತಾಳೊ
ತಾಯಿ ಚೆನ್ನವ್ವನವರು ಬಾ ಎಂದು ಸೊಸೆಯರ ಕರೆದು
ಕಣ್ಣಿಲೆ ನೋಡಿ ಮುಂದ ಕುಳ್ಳಿರಿಸಿ
ಕಾಂತನ ನೆನೆಸಿ ಅಳತಾಳೊ
ಚನ್ನವ್ವನ ಚಿಂತಿಗೆ ಭರಿ ಬಳಲಿತು.

❖❖

೧೩

ಕಿತ್ತೂರ ರಾಣಿಯ ಅಂತ್ಯ

[ಕಿತ್ತೂರ ಸಂಸ್ಥಾನವು ಬ್ರಿಟಿಷರ ಕೈವಶವಾದನಂತರ ಚನ್ನಮ್ಮ ರಾಣಿಯ ವೀರಮ್ಮ, ಜಾನಕಾಬಾಯಿ ಇಬ್ಬರೂ ಸೊಸಿಯಂದಿರನ್ನು ಬಯಲುಹೊಂಗಲಕ್ಕೆ ಒಯ್ದರು. (ಜಾನಕಾಬಾಯಿಯು ಚೆನ್ನಮ್ಮನ ಸೊಸಿ. ಶೇಗುಣಿಸಿ ಗೌಡರ ಮಗಳು), ಆಕೆಯು ಸಹ ಬಯಲುಹೊಂಗಲದಲ್ಲಿ ತೀರಿಕೊಂಡಳು. ವೀರಮ್ಮ ರಾಣಿಯನ್ನು ಧಾರವಾಡಕ್ಕೆ ತಂದರು. ತರುವಾಗ ದಾರಿಯಲ್ಲಿ ಆನಿಗೋಳದ ಹತ್ತರ ಇಂಗ್ಲೀಷರನ್ನು ಕಿತ್ತೂರಿನ ದಂಡಾಳುಗಳು ಎದುರಿಸಿದರು. ಅವರ ಆಟ ನಡೆಯಲಿಲ್ಲ ಮುಂದೆ ವೀರಮ್ಮ ರಾಣಿಯನ್ನು ಕುಸುಗಲ್ಲ ಕಿಲ್ಲೆಯಲ್ಲಿ ಇಟ್ಟರು. ಬಹಳ ಕೃಶಳಾದ್ದರಿಂದ ಮುಂದೆ ಧಾರವಾಡದ ಯಾಲಕ್ಕಿಶೆಟ್ಟರ ಮನೆಗೆ ತಂದರು. ಅಲ್ಲಿಯೇ ಕೆಲವು ದಿವಸಗಳ ನಂತರ ಮರಣ ಹೊಂದಿದಳು. (ಮುಂಬಯಿ ಗ್ಯಾಝಿಟಿಯರದಲ್ಲಿ ವಿಷದಿಂದ ಸತ್ತಳೆಂದು ಉಲ್ಲೇಖ ಬಂದಿದೆ).

ಇದು ಕೋಲಿನ ಪದ. ತೋಲಗಿ, ಬಸಾಪುರ, ಪಾರಿಶ್ವಾಡದಲ್ಲಿ ಹೆಣ್ಣು ಮಕ್ಕಳು ಹಾಡುತ್ತಾರೆ.]

ಆಳವಾರಿಯ ಮೇಲೆ ಬಹಳ ತೋಪುಗಳ್ಹೇರಿ । ವ್ಯಾಳೆ ವ್ಯಾಳೇಕ ಹಾರಿಸ್ಯಾರವ್ವ
ಗುಂಡುಗಳು ಬಿದ್ದಲ್ಲಿ ದುಂಡ್ಮುತ್ತ ಸುರಿವಿದ್ಹಾಂಗ । ದಂಡ ನಿಂದ್ರಲ್ಲೆ ಮುರsದೋಡೆ
ತೋಪುಗಳು ಹಾರಿದಲ್ಲಿ ವಿಪರೀತ ಜನಸತ್ತ । ಕುಪಣಿ ದಂಡೆಲ್ಲಾ ಮುಳಗೀತವ್ವ

ರದ್ದನಿ ಮಾಡುತ ಗದ್ದಲ ಕೂಡುತ
ಮದ್ದ ಪುಟಗೊಳಿಸಿ ಹೊಡದಾರವ್ವ ।
ಮದ್ದು ಪುಟಗೊಳಿಸಿ ಹೊಡೆಯುವ ಹೊತ್ತಿಗೆ
ಇದ್ದ ಜನರೆಲ್ಲ ಮುರದೋಡ್ಯಾರವ್ವ

ಇನ್ನ ಮೇಲೆ ನಾವು ಸುಮ್ಮನೆ ಇದ್ದರೆ
ಗಮ್ಮನೆ ಜಯ ಸಿಗದಯ್ಯಾ । ಹಂತೇಲಿನ ಜನರ

ಅಂತರಂಗ ತಿಳಿದು ಸಂತೋಷ ನೀವು ಗೊಳಿಸಿರಯ್ಯಾ
ಅಂತರಂಗದ ಜನರು ಸಂತೋಷಗೊಂಡರ ಚಿಂತಿಲ್ಲದೆ ಕಿಲ್ಲೆ ಒದಗೀತಯ್ಯಾ

ಫಿತುರಗಾರರಿಗೆ ಪತ್ರ ಬರೆದಾರ ಒತ್ತರ ಮಾಡಿ ಬರಬೇಕಯ್ಯಾ
ಪತ್ತರ ಹೋಗಿ ಒತ್ತರಲೆ ಮುಟ್ಟ್ಯಾವ ಜತ್ತುಗೂಡಿ ಅವರು ಬಂದಾರಯ್ಯಾ

ಬಂದಾರ ಬಂದಾರ ಹೊಂದಿಲೆ ನಿಂತಾರೆ । ತಂದೆಯೆ ಅಪ್ಪಣೆ ಕೊಡಿರಯ್ಯಾ
ಸಂದೇಹಗೊಳ್ಳದೆ ಒಂದೂ ಉಳಿಯದೆ । ಚಂದಾಗಿ ಅಪ್ಪಣೆ ಕೊಡಿರಯ್ಯಾ

ಹೊನ್ನು ಹಣಗಳ ಬೇಕು? ಮಾನ್ಯ ಮರ್ಯಾದೆ ಬೇಕು? ಇನ್ನೇನು ಬೇಕು? ತಿಳುಹುರಯ್ಯಾ
ಹೊನ್ನು ಹಣಗಳನೀವೆ ಮಾನ್ಯ ಮರ್ಯಾದೆಗೈವೆ । ಇನ್ನೇನು ಬೇಕು? ತಿಳುಹುರಯ್ಯಾ
ಹೊನ್ನು ಹಣಗಳು ಬ್ಯಾಡಾ ಇನ್ನೇನು ನಮಗ ಬೇಡಾ
ಮಾನ್ಯ ಮಾನ್ಯತಾ ಕೊಡಿರಯ್ಯಾ ।
ಮಾನ್ಯ ಮಾನ್ಯತಾ ಬೇಕಾದರೆ ಚೆನ್ನಾಗಿ ಮದ್ದೀಗೇಣ್ಣಿ ಉಗ್ಗರಯ್ಯಾ ।
ಚನ್ನವ್ವನ ಮದ್ದಿಗೆ ಎಣ್ಣಿಯ ಉಗ್ಯಾರೊ ತಣ್ಣಗಾದವು ತೋಪುಗಳೆಲ್ಲಾ ।
ತಣ್ಣಗಾದ ಸುದ್ದಿ ಅಣ್ಣಗಳು ನೋಡ್ಯಾರು ಬಿಳಿಯ ಬಣ್ಣದ ಅಣ್ಣಗಳಯ್ಯಾ ।
ಬಲದ ಅಣ್ಣಗಳೆಲ್ಲ ಅಳವು ಹಚ್ಚೊಂನಂತ
ಜಲದಿಲೆ ಬಂದ ಕೂಡ್ಯಾರಯ್ಯಾ
ಕರಿಯ ಕೋಟಿನವರು ಕೈಯಾಗ ಬಂದೂಕಿನವರು । ಬಂದ ತೋಟಕ ಇಳದಾರಯ್ಯಾ

ಬಂದಾರ ಬಂದಾರ । ಎಲ್ಲಿಗೆ ಬಂದಾರ । ಬಂದಾರ ಕೆಮ್ಮಣಿನ ಮಡ್ಡಿಗೆ
ಬಂದಾರ ಮರಡಿಗೆ ತಂದಾರ ತೋಪೆಲ್ಲ । ಒಂದೂ ಉಳಿಯದೆ ಬಾರ ಮಾಡ್ಯಾರವ್ವ
ಲೆಗ್ಗಿಯ ಹೂಡ್ಯಾರೊ ಲಗ್ಗನೆ ಬಾರಮಾಡೆ । ಕಗ್ಗತ್ತಲದಾಗ ತೋಪು ಹಾರ್ಯಾವವ್ವ

ಮೀಳಿದ ತೋಪೆಲ್ಲಬಾರಮಾಡಿ ಹೊಡೆದರ । ಬಾರಿ ಬಾರಿ ತೋಪು ಹೂಡೆ ಬಿರತಾವವ್ವ
ಒತ್ತರಮಾಡಿ ಗುಂಡು ಕುಂಬಿಗೆ ಹಾರಲು । ಕತ್ತಿರಿಸಿ ಹೂಡೇವ ಬಿದ್ದಾವವ್ವ
ತತ್ತರಿಸಿ ಒಳಗಿನ । ಮಂದೆಲ್ಲ ಬೆದರಿ । ಸೂತ್ರ ತಪ್ಪಿದ ಮೇಲೆ ಕಾದ್ಯಾರೇನವ್ವ

ಮಲ್ಲಸರ್ಜನ ಮಾಲಿಗೆ ಬ್ಯಾಗಿ ಉರಿಯಲೆಂದು । ಯಾರ ಸರಾಪ ಕೊಟ್ಟಾರವ್ವ ।
ಬ್ಯಾಗಿ ಉರಿಯ್ಯಾಕ ಬಂದಾರವ್ವ । ಕಿತ್ತೂರ ಕಿಲ್ಲೇಕ ಬೆಂಕಿ ಹತ್ತಲೆಂದ
ಮತ್ತ್ಯಾರ ಸರಾಪ ಕೊಟ್ಟಿದ್ದಾರವ್ವ । ಮತ್ತ ಕಿತ್ತೂರ ಹಾಳಾತವ್ವ

ಅಂಗಳ ಉಡುಗು ಹೊತ್ತಿಗೆ ಗಂಗಳ ಬೆಳಗುವ ಹೊತ್ತಿಗೆ ಜಂಗು ಜಂಗುಳಿ ಜನರು
ಬರತಾರವ್ವ
ಮೂರು ಸಂಜಿಲೆ ದೀಪ ಹತ್ತು ಹೊತ್ತಿಗೆ । ದುಯ್ಯ ದುಯ್ಯ ಎಂದೊಳಗ ಹೊಕ್ಕಾರವ್ವ
ದುಯ್ಯ ದುಯ್ಯ ಎಂದು ಹೋಗುವ ವ್ಯಾಳೇಕ । ಕೆಂದೂಳ ಗಗನಕ ಅಡರ್ಯಾವವ್ವ
ಗಂಜಿಯ ಹಚ್ಚಡ ಮಣ್ಣಾಗ ಎಳವೂತ ಗಂಡು ಮಕ್ಕಳೆಲ್ಲ ಗರಡಿನವ್ವ ।
ಗರಡಿನಾಡ ಬರುವಾಗ ಅಯ್ಯಯ್ಯೊ ಕಿತ್ತೂರ ಅಳದೆಲ್ಲ ।
ಬಣ್ಣದ ಹಚ್ಚಡ ಮಣ್ಣಾಗ ಎಳವುತ ಹೆಣ್ಣುಮಕ್ಕಳೆಲ್ಲ ಗೌರಿನವ್ವ ।
ಗೌರಿನಾಡು ಹೊತ್ತಿಗೆ ಮುತ್ತು ಕಿತ್ತೂರ ಹಾಳಾತವ್ವ ।
ಹೂವಿನ ಹಚ್ಚಡ ಹುಡಿಯಾಗ ಎಳವುತ ಹುಡುಗರೆಲ್ಲ ಹುಡಿದೆವ್ವ ।
ಹುಡಿದಿನಾಡು ಹೊತ್ತಿಗೆ । ಅಯ್ಯಯ್ಯೊ ಕಿತ್ತೂರ ಹಾಳಾದೆಲ್ಲ

ಗಂಗಾಳ ಬಿದ್ದಲ್ಲಿ ದುಂಡ್ಮುತ್ತು ಸುರವಿದ್ಹಾಂಗ । ತೋಪಿನ ಗುಂಡ ಸುರದಾವವ್ವ ।
ಬಟ್ಟಲ ಬಿದ್ದಲ್ಲಿ ಗಟ್ಟುತ್ತ ಸುರವಿದ್ಹಾಂಗ । ತಟ್ಟನೆ ಗುಂಡ ಸುರಿದಾವವ್ವ ।
ಸುರಿದರ ಚಂದ್ರಸಾಲಿ ಬೆನ್‌ಗ್ವಾಡಿ ಬಿರತಾವವ್ವ ।
ತೋಪಿನ ಗುಂಡ ಸುರಿದಾವ ಚನ್ನವ್ವನ ಒಪ್ಪುಳ್ಳ ಹೂಡೆ ಅಪ್ಪಳಿಸ್ಯಾವವ್ವ ।
ದುಯ್ಯ ದಯ್ಯಂತ ಹೊಕ್ಕಾರವ್ವ ದುಯ್ಯ ದುಯ್ಯಂತ ಕಿತ್ತೂರ ಕಿಲೆ ಮುರಿದಾರವ್ವ ।
ಕಿತ್ತೂರ ರಾಜಕ ಉತ್ರಿಕರ್‍ಯಾರಿಲ್ಲ ಉಕ್ಕಿನ ಗುಂಡೀಲೆ ಒಗದಾರವ್ವ ।
ಒಗೆಯುವ ಹೊತ್ತಿಗೆ ಬಿಕ್ಕಿ ಬಿಕ್ಕಿ ಬಾಯಿ ಬಿಡುವುಳವ್ವ
ಕಿತ್ತೂರ ಕಿಲ್ಲೇಕ ಉತ್ರಿಕರ್‍ಯಾರಿಲ್ಲ । ಉಕ್ಕಿನ ಗುಂಡ್ಹಚ್ಚಿ ಒಗದಾರ । ಚನ್ನವ್ವ
ಹಕ್ಕಾಗಿ ಬಾಯಿ ಬಿಡತಾಳವ್ವ ।
ಉಕ್ಕಿನ ಗುಂಡಿಕ್ಕಿ ಒಗೆಯುವ ಹೊತ್ತಿಗೆ ನಿಂತಿರು ಆನಿ ಬಳಿಲ್ಯಾವವ್ವ ।
ಹಾಲ ಕಾಸೊತ್ತಿಗೆ ಹಾಳಾದ್ಯಾ ಕಿತ್ತೂರು ಹಾದಿ ಬಿದ್ದಾದ ಅರಮನಿ ಚನ್ನವ್ವನ ।
ರಾಜಮಕ್ಕಳಿಗೆ ವನದೇಶವ್ವ ಓದು ಮಕ್ಕಳಿಗೆ ವನದೇಶವ್ವ ।
ಹೊನ್ನಿನ ರಾಶಿ ಚೆನ್ನಾಗಿ ಒಯ್ದಾರ ಕಣ್ಣುಗಳಿಟ್ಟಂಥ ಅಣ್ಣಗಳಯ್ಯ ।
ಬಿಚ್ಚಗತ್ತಿಯವರು ಹೆಚ್ಚಿನ ಬಂಟರು ಹುಚ್ಚಾಗಿ ಓಡಿ ಹೋದಾರವ್ವ ।
ಕತ್ತಿಯ ಒರೆಯವರು ನೆತ್ತಿಗೂದಲದವರು ಸುತ್ತೆಲ್ಲ ಓಡಿ ಹೋದಾರವ್ವ ।
ಅನೆಯ ಮಾವುತರು ಒಂಟಿಯ ಸಾರ್‍ವಾನರು ಕುದುರೆಯ ರಾಹುತರು ಎಲ್ಲಾರು ಬೋರಾಡಿ

ಅಳತಾರವ್ವ ಅವರಿಗೆ ಹನ್ನೆರಡು ಸಾವಿರ ಹಳಬರವ್ವ। ಹನ್ನೆರಡು ಸಾವಿರ ಹಳಬರಿಗೆಲ್ಲ
ಚನ್ನಾಗಿ ವನದೇಶ ಬಂದೀತವ್ವ।
ಕತ್ತಿ ಡಾಲಿನವರು ಬಕ್ಕ ನೆತ್ತಿಯವರು ನೆತ್ತಿಗೂದಲದ ಬಂಟರವರವ್ವ।
ತಾವು ಎತ್ತ ಹೋದರೆಂದು ತಿಳಿಯದವ್ವ
ಸವಳಗಟಗಿಯವರು ಸಾಲಾಗಿ ನಿಂತಾರ। ನಿವಳಾಗಿ ಮೋರಚಾಲ ಹಿಡಿಯರವ್ವ
ನಿಸ್ಪತ್ತದಾರ ಜನರು ನಿಂದ್ರದಲೆ ಇವರೆಲ್ಲರು
ಓಡ್ಯಾರ ತಮ್ಮ ಬಿಡಾರಕವ್ವ।

ಚಂದಾಗಿ ಸಾಹೇಬರು ಬಂದಾರ ಅರಮನಿಗೆ
ನಿಂತಾರ ಚನ್ನವ್ವನ ಇದುರಿಗೆ।
ಇಲ್ಲಿ ನೀವು ಇನ್ನ ನಿಲ್ಲಬೇಡಿರಿ ಸಲ್ಲದು ನಿಮ್ಮ ಮಾನ।
ಇಲ್ಲಿಂದ ಹೊಂಗಲಕ ನಡಿರವ್ವ
ಕಿತ್ತೂರ ಚನ್ನವ್ವ ಕಿತ್ತೂರ ಬಿಡವಳ್ಳು। ಏಳನೂರ ಎಮ್ಮೆ ಎಳೆಗರ ಹೊಡಕೊಂಡು
ಹೊಂಗಲದ ಹಾದಿ ಹಿಡಿದಾಳಯ್ಯ। ಹೊಂಗಲ ಬಂದು ಹೊಗತಾಳವ್ವ
ಅತ್ತಿ ಸೊಸೆದೇರೆಲ್ಲ ಜತ್ತುಗೂಡಿ ಅವರು ಬರತಾರವ್ವ।

ಆರ ತಾಸ ರಾತ್ರಿಗೆ ಯಾರ್‍ಯಾರು ಉಳಿಲಿಲ್ಲ
ಏರಿ ಹಚ್ಚ್ಯಾರ ಬಾವುಟವವ್ವ। ಪಿರಂಗ್ಯಾರು। ನಾರಿ ಹೋದಾಳ ಹೊಂಗಲಕ

ಕಿತ್ತೂರ ಹಾಳಾತಂತ ಯಾಕಳತಿ ಚನ್ನವ್ವ
ಲೋಕದಂತವನ ನಿನ್ನ ಮಗ। ಶಿವನಲ್ಲಿ ಚನ್ನವ್ವ ಚಾಕರಿ ಹೋಗ್ಯಾನವ್ವ
ಮಾಳೀಗಿ ಮ್ಯಾಲಿನ ಹೂವು ಗಾಳಿಗೆ ಹಾರಿದರೇನು।
ವ್ಯಾಳೆ ಬಂದಾಗ ಯಾರಿಲ್ಲವ್ವ। ಚನ್ನವ್ವ
ಗಾಳಿಗೆ ಬಾಯಿ ಬಿಡತಾಳವ್ವ।

ನಡಿ ನಡಿ ಈರವ್ವ ನೋಡಿತನ ನಿನ್ನ ಕಾಲ
ಎಡಗಾಲ ಮೇಲೆ ಪದ್ಮಾವವ್ವ। ಈರವನ ಸುಡಗಾಡಕ ದಾರಿ ಎರದಂಗವ್ವ

ಘಟ್ಟದ ಗಜಬೀರಾ ಧಿಟ್ಟ ರಾಯಣ್ಣನು। ಬಿಚ್ಚಗತ್ತಿಯ ಚನ್ನ ಬಂದಾರವ್ವ ಕೋ. ಕೊ.
ಏನು ಹೇಳಲಿ ನನ್ನ ಬಾಳೆದ ಗೋಳನು। ಹಾಳಮಾಡ್ಯಾರ ನನ್ನ ದೌಲತ್ತಯ್ಯಾ

ಹಾಳುಮಾಡಿದವರ ಗೋಳ ಮಾಡಿರಂತ । ಹೇಳತೀನ ಬೀಜ ಮಂತರಯ್ಯಾ
ಹೇಳಿದ ಚನ್ನವ್ವಗ ವ್ಯಾಳೇವ ಬಂದಿತು । ಸೇರ್‍ಯಾಳ ವೀರಸ್ವರ್ಗವವ್ವಾ
ಜಾಣಳೆಂದೆನಿಸಿದ ಜಾನಕ್ಕಬಾಯಿಯು । ಮಾಣದೆ ಸೇರ್‍ಯಾಳ ಶಿವನ ಪಾದವವ್ವ

ಹಸಮಗಳ ಈರವ್ವನ । ಕುಸುಗಲ್ಲಿಗೆ ಒಯದಾರ
ಪಾರಾ ಇಟ್ಟಾರ ಎಡಬಲಕ । ಕೋಲು ಮಲ್ಲಿಗಿ ಕೋಲು

ಶಿವಲಿಂಗ ಸರ್ಜನ ಸಿಕೇವು ಹೋದೀತು । ಶಿವಮತದ ಭೀತಿ ಉಳಿಲಿಲ್ಲ
ಕಿತ್ತೂರ ಚನ್ನವ್ವನ ಕಿಲೆ ಮತ್ಯಾರ ಹೊಕ್ಕಾರ
ಹೊಕ್ಕು ನೋಡ್ಯಾರ ಹೊಲಿಯಾರವ್ವ ।
ಹತ್ತೂರ ಜೋಡಿಸಿ ಕಿತ್ತೂರ ಕಿಲೇವ ಕಟ್ಟ್ಯಾರವ್ವ ।
ಎಂಥಾ ಪುಣ್ಯವಂತರು ಹುಟ್ಟ್ಯಾರವ್ವ
ಕಂಚಿನ ಹರಿವಾಣದಾಗ ಮಿಂಚ ಮುತ್ತಸುರುವಿದ್ಹಾಂಗ
ನಿಂತಿರುವ ಗ್ವಾಡಿ ಬಿಡಿಯಾಲವ್ವ । ಈರವ್ವನ
ಒಯಿದವರ ಓಸ ಹುರಿಯಾಲವ್ವ ।
ಬೆಳ್ಳಿ ಹರಿವಾಣದಾಗ ಬಿಳಿ ಮುತ್ತ ಸುರವಿದ್ಹಾಂಗ
ಚಂದ್ರಸಾಲಿ ಬೆನ್ನ ಗ್ವಾಡಿ ಬಿರಿಯಾಲವ್ವ । ಚನ್ನವ್ವನ
ಒಯ್ದಿವರ ಓಸ ಹುರಿಯಾಲವ್ವ ।
ಅವರ ಕೈಗೆ ಹಾವು ಚೇಳು ಹರಿಯಾಲವ್ವ
ಕಿತ್ತೂರ ಚನ್ನವ್ವನ ಸೊಸಿ ಈರವ್ವ ಹೊಂಗಲ ಬಿಟ್ಟ । ಹೋಗುವಾಗ
ನಿಂತವರು ಜನರು ಆಳತಾರವ್ವ । ಆ ಹೊತ್ತಿಗೆ
ಕುಸುಗಲ್ಲಿಗೆ ಹೆಡಕ ಬಡಿದವರ ಓಸ ಹುರಿಯಾಲವ್ವ

ಎಂಥಾದು ಕಿತ್ತೂರ ಅಂಥಲ್ಲಿ ಹಾಳಾತ ।
ಕೆಂಪು ಮೋತಿಯರ ಒಲಿ ಹೂಡಿ । ಚನ್ನವ್ವನ
ಚಿತ್ರದ ಮಾಲ ಅಳಿದಾರವ್ವ ।
ಎಂಥಾದು ಕಿತ್ತೂರ ಚೆಂತೀಲಿ ಬೆಳಗಾದ್ಯಾ
ಕೆಂಪು ಮಾರ್‍ಯವರು ಒಲಿ ಹೂಡಿ । ಚನ್ನವ್ವನ
ಸಂತೋಷದ ಮಾಲ ಅಳಿದಾರವ್ವ

❖❖

೧೪

ಕಿತ್ತೂರ ಚೆನ್ನವ್ವನ ಸೊಸಿ

ಪಲ್ಲ

ಕಿತ್ತೂರ ಚೆನ್ನವ್ವನ ಸೊಸಿ ಹೊಂಗಲ ಬಿಟ್ಟು ಹೋಗುವಾಗ
ಮಾಡುತಿದ್ದಳಣ್ಣ ಮಹ ದುಖ್ಖ
ಮತ್ತ ನಮ್ಮ ಮಲ್ಲಸರ್ಜ ಸತ್ತು ಹೋಗದಿದ್ದರ
ಹೊತ್ತು ಹೋಗುದ್ಯಾಕ ನಮ್ಮ ಬದಕಾ

೧ನೆಯ ನುಡಿ

ಆರು ಆನಿ ಹದಿನಾರು ಒಂಟಿ ಹನ್ನೆರಡ ಸಾವಿರ
ಕಾಲಬಲಾ ಮಾರಾಯ ತೋಪ ಹೋದವು ಹೇರಿ
ಹತ್ತುವಂತಾ ಮುತ್ತಿನ ಪಾಲಕಿ ಸುತ್ತಲ್ ಹಿಡುವ
ಹತ್ತು ಎಂಟು ಬೆಳ್ಳಿಕಾವಿನ ಅಪ್ತಾಗೇರಿ
ಚಂದದಿಂದ ಚಕ್ಕಡಿಗಳು ಒಂದು ಉಳಿಯದ್ಹೋದವು
ತುರಂಗರಥದ ಚವರಿ

ಸಿಟ್ಟಿನ ಶಿಪಾಯಿಗಳು ದಿಟ್ಟತನದಲ್ಲಿ
ಹತ್ತುವಂತಾ ಎಷ್ಟು ಇದ್ದವಲ್ಲಿ ಜರದ ಮರಿ
ಕಲ್ಲೂರ ಕಲಬಸಪ್ಪ ಕನ್ನೂರ ಮಲ್ಲಪ್ಪ
ಅವರಾದಿ ವೀರಪ್ಪ ಇದ್ದರ ಕಾರ್ಬಾರಿ
ಹಿಂತಿಂತಾ ಸರದಾರು ಕುಂತರ ಬಿದ್ದ ಹೋದಾರು
ಹೆಂತಾ ಬಂದಿತೊ ನಮಗ ಮಾರಿ ||ಚಾಲ||

ಪಾಂಡವರಿಗೊನದೇಸ ಬಂದಂತೆ ಆದಿತು
ಪಾಪಿ ದುಸ್ವಾಸ ದ್ರೌಪತಿ ಸೀರಿ ಸೆಳೆದೊಯ್ವವಾಗ
ಭೂಪತಿಗಳೈವರು ಇದ್ದೇನು ಮಾಡುವರು
ಪಾಪಿ ಕೇಳೆ ನಮ್ಮಂತಾ ಪಾತಕರ್ಯಾರಿಲ್ಲ
ಪನ್ನಂಗಧರನ ಸ್ತುತಿಸುತ ಈರವ್ವಾ
ಪಾರ್ವತಿ ಅರಸನ ನೆನಸಿದಳೊ ॥ಏರ॥

ಪೂರ್ವ ಜನ್ಮದ ಲಿಖಿತ ಪುಣ್ಣೆ ನಮ್ಮದು ತಪ್ಪಿತೆಂದು
ಬರದಾನ್ಯಾಕ ಬ್ರಹ್ಮ ಹಿಂತಾ ಬರಿ

೨ ನೆಯ ನುಡಿ

ಹೆಣ್ಣಮಕ್ಕಳಿಡುವ ವಸ್ತಾ ಬಣ್ಣಿಸಿ ವಾ ಪೇಳ್ವೆನು
ಸಣ್ಣ ನಡುವಿನ ದಾಬ ಬಂಗಾರಾ
ಬುಗಡಿ ಬಾವಲಿ ಜಮಿಕಿ ವಾಲಿ ಚಳೆತುಂಬು
ಚೆಂದಾದಲ್ಲಿಡುವ ರ್‍ಯಾಗುಟಿ ಚೆವರಿ ಹೆಳಲ ಬಂಗಾರಾ
ಸಾವರಿದ್ಹೊನ್ನಿನ ಸರದಾಳಿಗಳು ಮೊಹರದ ಮುತ್ತಿನ
ಮೂಗತಿ ಮೇಲೆ ಕೆತ್ತಿಸಿದಂತಾ ವಜ್ಜರಾ
ಕಂಠಕ ದರಿಸುವ ಕರಿಡಿಗಿ ಸರಪಣಿ ಕಟ್ಟಣಿ
ಕರಿಮಣಿ ಪಟ್ಟಿಗಿ ಮುತ್ತು ಡೊರೆ
ಚಿಂತಾಕ್ಷರಡೆ ಹವಳಸರಾ
ಪಿರಿಪಿಲ್ಲಿಗಳು ಕಿರಿಪಿಲ್ಲಿಗಳು ಲುಲ್ಲುಮಿಂಟಿಕಿ
ರುಳ್ಳಿಯ ಗೆಜ್ಜಿ ಕಾಲ್ಕಡಗಾ ಸರಪಳಿ ಕಾಲುಂಗರಾ
ಮಂದರಧರನ ಕರುಣ ತಪ್ಪಿ ಒಂದ ಉಳಿಯದ
ಹೋದವು ಮುಂದ ಇಲ್ಲೊ ನಮಗ ಅಸರಾ ॥ಚಾಲ॥

ಒಕ್ಕಲಗಿತ್ತೆರು
ಸಕಲಕ ಶಹಣೆರು
ಸತ್ಯಕ ಶರಣರಾ
ಸಾಕ್ಷಿಯ ಹೇಳುವರೇನು

ಅಕ್ಕ ನಿಲ್ಲಿಸಾ ದುಖ್ಖಯೆನುತ
ರಾಮ ಲಕ್ಷ್ಮಣ ಪ್ರೇಮದಿಂದಿರುವಾಗ
ಕೆಟ್ಟ ರಾವಣ ಜಾನಕಿವೋದು ವನದೊಳಗಿಟ್ಟಾ
ಹನುಮಂತ ಹೋಗಿ ಲಂಕಾ ಸುಟ್ಟಾ
ವಿಭೀಷಣಗ ಕಟ್ಟ್ಯಾರು ಪಟ್ಟಾ
ಗಟ್ಟಿ ಶಿಕೆವು ಹಾಕಿ ಹಿಂಡ ದೈತ್ಯರನೆಲ್ಲ
ಬಂಡು ಮಾಡಿದ ಭೂಪ
ತಾಯಿ ತಂದನೊ ಕುಲದೀಪಾ ॥೫೮॥

ಹೋದಂತಾ ಮಗ ನಿಮಗ ಆದಾನು ಪೇಳವ್ವಾ ತಾಯಿ
ಭೇದಿಸಿ ಹೇಳುರು ಎಲ್ಲರು

ಹನೆಯ ನುಡಿ

ಹೊದುವಹಂತಾ ಹೊದಿಕಿಗೋಳು ಭೇದಿಸಿ ನಾ ಪೇಳ್ವೆನು
ಹೋದವು ಎಷ್ಟೊ ರಾಜದ ಮೇಲೆ ಹೇರಿ
ಮಕ್ಕಳ ಉಡುವ ಮಂದಿಲಸೀರಿ
ತೊತ್ತುಗಳುಡುವ ತೋಪಿನಸೀರಿ
ಉತ್ತಮರುಡುವ ಉಳ್ಳಿಗಣಿಸೀರಿ
ರಾಣಿಯವರುಡುವ ರಾಗಾವಳಿಸೀರಿ
ಬಾಲೆಯರುಡುವ ಬಾಳಿಪಟ್ಟಸೀರಿ
ಚೆದರೆರುಡುವ ಚಂದ್ರಕಾಳಿಸೀರಿ
ಹುಡಿಗಿಯರುಡುವ ಹೂವಿನಸೀರಿ
ಸಣ್ಣವರುಡುವ ಸಾಸಿಬಣ್ಣದಸೀರಿ
ಕನ್ಯೆರುಡುವ ಕಂಬಾವತಿಸೀರಿ
ಕೂಸಿಗೆ ಹೊಚ್ಚುವ ಕುಲಾಯಿ ಕೊಂಚಿಗಿ
ಏಸೊಂದು ನಾ ಪೇಳಲಿ
ಅರಳೆಲಿ ಬಿಂದಲಿ ತೊಪ್ಪಿಗೆ ನಾಗಮುರಿ
ಸೆಲ್ಯವ ಮುಂಡಸ ಶೇಲು ಶಕಲಾತಿ
ಪಚ್ಚೆದ ಅಂಗಿ ಪರಿಮಳ ಪಾವಡ

ಹೊದುವಂತಾ ದೋತರ ನಾಕ್ಪುರಿ
ಎಲ್ಲ ಹೋಗಿ ಇಲ್ಲದಾಯ್ತು ಮಲ್ಲಸರ್ಜ ಮಾಡಿದ ಬದಕು
ಬಲ್ಲಷ್ಟು ಹೇಳುವೆನದರ ಸೂರಿ ॥ಚಾಲ॥

ಅಷ್ಟು ಹೋಗಿ ನಮ್ಮ ಕಷ್ಟ ಬಿಡಲಿಲ್ಲಯ್ಯ ಪಟ್ಟನೆ
ನೆಲಕ್ಹಣಿಯ ಬಡವುತ ಈರವ್ವ ಕಟ್ಟಿ ಹಾಯುವೆನಲಗೆನುತ
ತೊತ್ತುಗಳೆಲ್ಲರು ಸುತ್ತಲೆ ಮುತ್ತಿದರು
ತಾಯಿ ನಿಮಗ ಬಂದದ್ದೇನು
ಉಮ್ಮಾಯದಿಂದಲೆ ಹೇಳೆರೀರವ್ವಗ
ಸುಮ್ಮನಿರದ ಅಳುತಿಹಳು ॥ಏರ॥

ಹನ್ನೆರಡಸಾವಿರ ದಂಡು ಹರದ ಹೋತಿ ನಮ್ಮನ ಬಿಟ್ಟು
ಒಡದಾಂಗ ಆದಿತು ತುಂಬಿದ ಕೆರಿ

೪ನೆಯ ನುಡಿ

ಹೆಂತಾ ದೊರಿಗಳು ಹೆಂತಾದಾಯಿತ ಕಂತುಹರನೆ ಕೇಳವರಿಗೆ
ಹೆಂತಾ ಹೊತ್ತ ತಂದ ಈಶ್ವರಾ
ನಾಡನಾಳುವ ದೊರಿಗಳಿಗ್ಹಿಂತಾ ಕೇಡ ಬರಬಾರದಂದು
ಕಿತ್ತೂರ ನಾಡೆಲ್ಲ ಮರಿಗಿತೊ ಮರ್‌ಮರಾ
ಮಾನ್ಯೇಮಾನ್ಯೆರ ಅಳುಹಂತಾ ಹನ್ನೆರಡು ಕರೂತಿ ಹಳ್ಳಿ ಹೊನ್ನು
ಎತ್ತುಗಳು ಹೇರಿ ಹೋದವು ಇನ್ನೂರ
ಸತ್ಯಕ ಶ್ರಾವಣಮಾಸಕ ಎಪ್ಪತ್ತೇಳನೂರ ಮಂದಿ
ತೃಪ್ತಿಬಡುಹಂತಾ ಜಂಗಮರ
ಹಸ್ದೇನಂದರ ಕಿವಿಯಲಿ ಕೇಳದ
ಹಣ್ಣು ಹಾಲು ಸಕ್ಕರಿ ನೀಡಿ
ದಾನಾ ಕೊಡುವರಣ್ಣಾ ವಸ್ತರಾ
ಧರ್ಮಾ ಹೋಗಿ ಕರ್ಮಾ ಹೆಚ್ಚಿ ವರ್ಮಾವೆತ್ತಿ
ಪೇಳುವೆನು ಮರ್ಮ ಸಾಗವದು ಮಡದರು ಮೂವರು ॥ಚಾಲ॥

ರಾಜ್ಜೆಕ ರಾಯನಾಯಕ ಗೋಜ ಹಚ್ಚದಿದ್ದರ
ಮೋಜಾಗಿ ದವಲತ್ತು ಸಾಗತಿತ್ತೆನ್ನುತಲಿ
ಮೂಜನರೆಲ್ಲ ಮರಗುವರು
ಪಟ್ಟಗಟ್ಟಿ ದೇಸಾಯಿಗೆ ಗಟ್ಟಿ ಶಿಕೆವ ಹಾಕಿ
ಅತ್ತಿ ಚನ್ನವ್ವಾನೊಯ್ದು ಹೊಂಗಲದಾಗ ಹಾಕಿದರೂ
ಸಾಕಿದ ಮಗನೆಂಬುವರು
ಟಾಕುರ್‌ಸಾಬ್ ಬಂದು ಟಾರ್ ಆಗಿ ಮಡದನು
ಧೀರರಿದರೊಳು ಹುಟ್ಟಿ ಊರು ತೊಗೊಳರೆಂದು
ಭೋರಿಡುತ ಜನರಳುತಿಹರು ॥ಏರ॥

ಆಕಾಶದ ಮೇಗಿನ ಚಂದ್ರ ಲೇಸಾಗಿ ಬೆಳಕಿಲ್ಲದಿದ್ರ
ಏಸೊಂದಿದ್ದರೇನ ನಕ್ಷತ್ರ

೫ನೆಯ ನುಡಿ

ವ್ಯಾಳೇವ್ಯಾಳೆಕ ಉತ್ತರ ಹೇಳಿಹೇಳಿ ಬರದಾರು
ನಾಳಿ ಹೊಂಡಂಬುವ ಪತ್ತರಾ
ವಸ್ತಾವಡವಿ ಎಲ್ಲಾ ಉಚ್ಚಿ
ಪೊಡವಿಗೆ ಒಗದಾಳೊ ಬಡವಿ
ಉದರಸ್ತಾಳೊ ಕಣ್ಣೀರಾ
ಸಂಗಡೆಲ್ಲ ಹೇರಿ ಬಂಡಿ
ಎತ್ತು ಸಾಗಲಿ ಮುಂದಕಯೆಂದು
ಬಿಚ್ಚಿ ಹೊಡೆದಾರೆಲ್ಲ ದನಕರಾ
ಗುರುವಿನ ಕರಿಸಿ ಪಾಲಿಕಿ ತರಸಿ
ಮೇಲೆ ಅಪ್ತಾಗೇರಿ ಹಿಡಸಿ
ಹಾರಸ್ತ ಹೊಂಟರ ಚತ್ತರ ಚಾಮರಾ
ಸಣ್ಣ ಮಗಳಯ್ಯಾ
ನಾನು ಸಾರಿ ನಿಮಗೆ ಪೇಳುವೆನು
ತಪ್ಪ ಕೇಳೊ ಅಪ್ಪ ಸರದಾರಾ ॥ಚಾಲ॥

ಹೊಂಡ ಹೊಂಡಂದರ ಮಂಡಾಟ ಹಿಡದಾಳೊ
ಬಂಡ ಮಾಡಿ ಅವರು ಎಳಿಯಕ ಹೋದರ
ಕಂಡವರ ಕಾಲ ಹಿಡಿದಾಳೊ
ಮಂಡಲಸಾಳುವ ಪುಂಡನು ಮಡಿದಲ್ಲೆ
ಕೆಂಡ ಹಾದು ನಾನು ಪ್ರಾಣ ಕೊಡಲಿಲ್ಲೆಂದು
ಗಂಡನ ನೆನಿಸಿ ಅಳತಾಳೊ
ದಿಕ್ಕಿನೊಳು ನಮ್ಮಂತ ದೆಶಿಗೇಡಿ ಯಾರಿಲ್ಲ
ನಮ್ಮ ಹೊಟ್ಟಿಲಿ ಒಂದು ಪುತ್ರನು ಇದ್ದರ
ದೇಸ್ಗತಿ ಯಾಕ ಮುಣಗುವದು ॥ಏರ॥

ನೀರ ಇಲ್ಲದ ಮಲ್ಲಿಗಿ ಬೇರ ಒಣಗಿ ಹೋದಂತೆ
ಆತಂತ್ರವಾಯಿತು ಸಂಸಾರ

೬ನೆಯ ನುಡಿ

ಎಷ್ಟು ಮಾಡಿದರ ನಮ್ಮನ ಬಿಟ್ಟ ಹೋಗುವದಿಲ್ಲವೆಂದು
ನಿಷ್ಟದಿಂದ ಮಾಡ್ಯೆಳ ವೀರನ ಸ್ತುತಿ
ಅತ್ತಿ ಮಾವನ ನೆನದು ಹತ್ತಿದಳು ಡೋಲಿಯ
ಹೊತ್ತರಣ್ಣ ಬೋವೆರು ಎತ್ತಿ
ಮುಂದ ಮುನ್ನೂರ ಕುದುರಿ ಮಂದಿ
ಇಂದ ಇನ್ನೂರ ಬಾರಿನ ಮಂದಿ
ಮಾಡುತ್ಹೊಂಟರಣ್ಣ ಪಾರಾ ಗಸ್ತಿ
ರಾಯನಾಯಕ ಬರತಾನೆಂದು
ದೌಡ ಮಾಡಿ ನಡಿರೆಂದು
ಎಡಬಲ ಹತ್ತೆಂಟು ಹಿರದ ಕತ್ತಿ
ದಾಸೊಕದಿಂದ ದಾರಿ ಹಿಡಿದು
ಧಾರ್ವಾಡಕ ತಾಂವು ಹೋಗಿ
ಸರದಾರ ಕೇಳಿದ ಅವರ ಸ್ತಿತಿ
ಕೊಟ್ಟ ಅನ್ನ ಬಿಟ್ಟಕೇರ
ಕೆಟ್ಟ ಬುದ್ದಿಯನ್ನು ಇಷ್ಟು

ಮಾಡತಿದ್ದಿ ನಮ್ಮ ಮೇಗ ಜ್ಯಾಸ್ತಿ
ರಾತ್ರಿಲಿ ರಾಯನಾಯಕನ್ನಚ್ಚಿ ರೌಡ ಮಾಡಿ
ಸುತ್ತಿನ ಹಳ್ಳಿ ಅವನ ಕೈಲಿಂದ ಸುಽಡಿಸ್ತಿ
ಕೊಲಬ್ಯಾಡರಿ ಕುಸುಗಲ್ಲ ಗೋಡಿಯೊಳಗ
ಈಕಿನ ಒಯ್ದು ಒಬ್ಬಳಿಡರೆಂದನಲ್ಲ ವಸ್ತಿ ॥ಚಾಲ॥

ಹೊತ್ತರು ಬೋವೆರು ಕುಸುಗಲ್ಲಿಗೆ ಒಯ್ದರು
ಮೆಲ್ಲಕ ಕಿಲ್ಲೆಯವ ಪೋಗುವಾಗ
ಈರವ್ವ ಬಲ್ಹಾಂಗ ದುಖ್ಖ ಮಾಡಿದಳು
ತಾಯಿಲ್ಲದ ಮಕ್ಕಳಿಗೆ ಆಯಿಲ್ಲೊ ಸಿರಿಯಿಲ್ಲ
ಕಾಯ ಇಡಬಾರದೆಂದು ಬಾಯ ಬಿಡುತೀರವ್ವಾ
ಸಾವ ಬೇಡಿದಳು ಶಿವನಲ್ಲಿ
ಅಕ್ಕ ತಾ ಈರವ್ವಾ ದುಖ್ಖವು ಮಾಡ್ಯಾಳೊ
ಬಕ್ಕನ ಬಾಯವ ಬಿಡುವುತಲೀರವ್ವಾ
ಜಕ್ಕನೆ ಜೇರಿಗಿಳದಾಳೊ ॥ಏರ॥

ನೀರವೊಳಗಿನ ಮೀನ ತಗಿದು ಬ್ಯಾರಿ ಚೆಲ್ಲಿದ್ಹಾಂಗ । ನಮ್ಮದು
ಸೂರಿ ಆತಿ ನಮ್ಮ ಅವಸ್ತಿ

೭ನೆಯ ನುಡಿ

ಇನ್ನು ಈ ಧರೆಯಲ್ಲಿ ಮುನ್ನ ಇರಬಾರದೆಂದು
ಅನ್ನ ಉದಕ ಎಲ್ಲ ಬಿಟ್ಟಳೂ
ಸಣ್ಣವಾದವು ಕೈಕಾಲು
ಮಣ್ಣಪಾಲವಾಗಲಿಯೆಂದು
ಬಣ್ಣ ಒಣಗಿಸಿ ಬಿಟ್ಟಳೂ
ಸಂಗ್ರಾಣಿಬ್ಯಾನಂತ ಸರ್ವಾಂಗವೆಲ್ಲ
ಒಣಗಿಸಿ ಸುಣ್ಣದ್ಹಾಂಗ ದೇಹ ಸುಟ್ಟಳೂ
ನಾಡವೊಳಗ ನವಲಗುಂದ ಕಾಡಿಸಿದ್ದನ್ಹಂತೆಲಿ ಹೋಗಿ
ನೀರ ಮಿನದು ಮಡಿಯನುಟ್ಟಳೂ

ಜಂಗಮತೀರ್ಥವ ಪಡೆದು
ಅಂಗದ ಮೇಲಿನ ಸ್ಮರಣಿ ಮರೆದು
ಲಿಂಗದ ಮೇಲೆ ಧ್ಯಾನ ಇಟ್ಟಳೂ
ಭಕ್ತಿಲಿ ವಿರಕ್ತರ ಕರಸಿ
ತಕ್ಕಡಿ ತುಂಬ ಭಂಗಾರ ತರಿಸಿ
ತೂಕಾ ಮಾಡಿ ದಾನ ಕೊಟ್ಟಳೂ
ಮುಕ್ತಿ ಕೊಡೊ ನಮಗ ನೀನು
ಮುಕ್ಕಣ್ಣ ಹರ ಗುರುವೆಯೆಂದು
ಧಾರ್ವಾಡಕ ಹೊಂಟ ಬಂದಳೂ ॥ಚಾಲ॥

ಚಿಕ್ಕ ಮಗ ಮಲ್ಲಸರ್ಜ ಸಿಕ್ಕನೆಂಬುದು ಕೇಳಿ
ಜಕ್ಕನ ಜೀರಿಗೆ ಇಳದಳೊ ಈರವ್ವಾ
ಮುಕ್ಕಣ್ಣ ಹರನ ನೆನದಾಳೊ
ಕೊಡ ಹೊನ್ನಿದ್ದರೇನು ಬಡಿವ್ಯಾಗಿರುವುದು ಲೇಸು
ಮಡದಿಗಿ ರಾಯರು ಮನಿವೊಳಗಿದ್ದರ
ಒಡವಿ ವಸ್ತಗಳಿಡ ಲೇಸು
ಒಡವಿ ವಸ್ತುಗಳೆಲ್ಲಾ ಬಿಡದೆ ದಾನವ ಕೊಟ್ಟು
ಕಿತ್ತೂರ ದವಲತ್ತು ಕಿರದಾಡಿತೆಂಬುತಲಿ
ಭರದಿಂದೀರವ್ವಾ ಅಳುತಾಳೊ ॥ಏರ॥

ಧಾರ್ವಾಡಕ ಬಂದು ತಾನು ಮೂರಾರ ದಿನಿದ್ದು
ಮರಣಕಾಲ ಬಂದ ಪ್ರಾಣ ಬಿಟ್ಟಳೂ

ಲನೆಯ ನುಡಿ

ಸತ್ತಂತ ಶ್ರವನೆಲ್ಲ ಎತ್ತಿ ಕುಂಡ್ರಿಸಿ
ಮುಖವ ದೊಳಿದು ವಿಭೂತಿ ಮೇಲೆ ಧರಿಶಾರೂ
ಅತ್ತಿ ಚನ್ನವ್ವಾ ಉಡುವ ಮುತ್ತಿನ ಸೆರಗಿನ ಸೀರಿ
ಉತ್ತುಮರು ನೀರಿಗ್ಹೊದ ಉಡಸ್ಯಾರೂ
ಕಸ್ತೂರಿಗಂಧವ ಪೂಸಿ ವಸ್ತ್ರದ ಪೆಟ್ಟಿಗೆ ತರಿಸಿ

ವಿಸ್ತರಿಸಿ ಮೈಮೇಲೆ ಇಡಸ್ಯಾರೂ
ಹತ್ತುಯೆಂಟು ಸಾವಿರದ್ದೊನ್ನಿನ ರತ್ನವ
ತೆತ್ತಿಸಿದ ನತ್ತು ಮತ್ತ ಮೂಗಿನೊಳಗ ಇಡಿಸ್ಯಾರೂ
ಬುಕ್ಕಿಟ್ಟ ಊದಿನಕಡ್ಡಿ
ಲೆಖ್ಖವಿಲ್ಲದ ಸುಡುವುತಲೆ ಕಂಚಾರ್ತಿ
ಕಳಸ್ಗಿಂಡಿ ತುಂಬಿಟ್ಟರೂ
ಪುರಾಣ ಪುಸ್ತಕ ಓದುವಂಥ
ಶಾಸ್ತರ ಕಥಿಯ ನಡಸುವಂಥ
ನಾಡನಾಡ ಜಂಗಮರ ನೆರದಾರೂ
ಮಾಯವಾದ ಮರಣವೆಂದು
ಮಾಹನಾಡ ಜನರು ಕೂಡಿ
ನಿಂತ ಸುರುಸ್ಯಾರೊ ಕಣ್ಣೀರೂ ॥ಚಾಲ॥

ಅತ್ತಿಮಾಂವರು ಇಲ್ಲ ಅತ್ತಿಗಿನಾದನೆರು ಇಲ್ಲ
ಹೊತ್ತ ಬಂದಾಗ ಮರಗು ಹೆತ್ತವ್ವ ನೀ ಇಲ್ಲೆಂದು
ತೊತ್ತುಗಳೆಲ್ಲ ಅಳುತಿಹರೂ
ಅಣ್ಣ ಅಕ್ಕಗಳಿಲ್ಲ ತಂಗಿ ತಮ್ಮಗಳಿಲ್ಲ
ಅರಮನಿವೊಳಗೆ ಇನ್ನ ಅಡ್ಡಾಡವರಿಲ್ಲೆಂದು
ಆಲಿಪರಿವುತ ಅಳುತಿಹರೂ
ಪುರುಷನ ಕೂಡೊಂದು ಕಾಲ ಸರಸವು ಆಡಲಿಲ್ಲಾ
ಅರಸು ಬಾಪುಸಾಬ್ ಇನ್ನೊಂದೊರುಷವಿರಲಿಲ್ಲೆಂದು
ರಾಹುತರೆಲ್ಲಾ ಮರಗಿದರೂ ॥ಏರ॥

ಉಪ್ಪವುಂಡ ಮಕ್ಕಳು ಎಲ್ಲಾ ದಪ್ಪನ ನೆಲಕ ಬಿದ್ದು
ಬಾಪುಸಾಹೇಬನ ಮಡದಿ ನೆನೆದಳುವರು

೯ನೆಯ ನುಡಿ

ರಾಜರಾಜೆದ ಜನರೆಲ್ಲಾ ರೇಜಗಟ್ಟಲ್ಲಿಗೆ ಬಂದು
ನೆರದಾರು ರಾಹುತ ರಾಣೆರೂ

ಬಲ್ಲಂಥ ಬಡಿಗೇನ ಕರಿಸಿ ಎಲ್ಲ ಸಾಹಿತ ಕೊಡಿಸಿ
ಮಾಡೆರು ವಿಮಾನ ವಿಸ್ತಾರಾ
ತರತರಕ ಕನ್ನಡಿ ನಿರತ ನೋಡಿ
ಹೊಂದಿಸಿ-ಸರತ ನೋಡಿ ಹಾಕೆರ ಹೂವಿನ ಹಾರಾ
ಹತ್ತುಯೆಂಟು ಸಾವಿರದ್ವೊನ್ನಿನ ಮುತ್ತಿನ ಗೊಂಡೆಗಳು
ಸುತ್ತಲಿ ಬಿಗಿದರು ಶೇಲು ಜರತರಾ
ಸತ್ತಂಥ ಶ್ರವವು ತಾಂವು ಹೊತ್ತುಕೊಂಡು ನಡೆದರು
ಹಾರಸ್ತ ಮೇಲೆ ಛತ್ರ ಚ್ಯಾಮರ
ಬುಟ್ಟಿಬುಟ್ಟಿಲಿ ಬುಕ್ಕಿಟ್ಟ ಕಟ್ಟವಿಲ್ಲದ
ಹಾರಸ್ತ ಹಿಡದ ಹೊಂಟರ ಮಳಿಗಿ ಬಾಜರ
ಹಲಿಗಿ ಕಾಳಿ ಕರ್ನಿ ಕರಡಿ ಸಂಬಾಳ ಸಂಪರದಾನಿ
ಬಾರಸ್ತ ಹೊಂಟ ಮುಂದ ಸರದಾರಾ
ದಿಕ್ಕದಿಕ್ಕಿನ ಮಂದಿಯೆಲ್ಲಾ
ಅಕ್ಕಾ ಈರವ್ವನ ನೋಡಿ
ದುಖ್ಖ ಮಾಡ್ಯಾರೆಷ್ಟು ಜನರು ॥೨೭॥

ಧಾರ್ವಾಡದ ಮಂದಿ ಭೋರಿಡುತಳುವಾಗ
ಪಹರದಾಗಿದ್ದ ಮಗ ಶಂಕರನ
ಸ್ತುತಿಸುತ್ತ ನೂರೊಂದು ದುಖ್ಖ ಮಾಡಿದನೂ
ಎತ್ತು ಭಂಡಿಗಳು ಹತ್ತುವ ಕುದುರಿಗಳು
ಸತ್ತ ಶ್ರವದ ಮುಂದ ಸಾಗಿ ಹೋಗುದು ಕಂಡು
ಶೋಧಿಸಿ ದುಖ್ಖ ಮಾಡಿದನೂ
ದಾನಧರ್ಮವ ಕೊಟ್ಟು ನೇಮನಿತ್ತೆವ ತೀರ್ಸಿ
ಮುಂದೆ ಮುಕ್ತಿಯ ಕೊಡುವ ಬಸವನ ಸ್ತುತಿಸುತ
ಮಣ್ಣೊಳಗಿಟ್ಟ ತಿರಗಿದರೂ ॥೨೮॥

ಸುಂದರ ಹೆಬ್ಬಳ್ಳಿ ಬಸವ ಕಂಡಷ್ಟು
ಕವಿಯ ಹೊಂದಿಸಿ ಮಾಡಿದ ವಿಸ್ತಾರಾ

❖❖

೧೫

ಈರವ್ವನ ದುರಂತ ಮರಣ*

ಅಂಗಳ ಹೂಡಿ ಹೊತ್ತಿಗೆ ಗಂಗಾಳ ಬೆಳಗು ಹೊತ್ತಿಗೆ
ಬಂದಾರ ಈರವ್ವನ ಕರಿಯಾಕ । ಸುವಿ । ಸೋ ॥
ಫಿರಂಗ್ಯಾರು ಮೂಲಾಗಿ ಬಂದಾರ ನಮ್ಮ ಈರವ್ವಗ ।
ಹೊಕ್ಕಾರ ಈರವ್ವನ ಅರಮನಿನ ॥ ಸೋ ॥

ನಾನ ಹೇಳಿದ ನೀ ಕೇಳ ಈರವ್ವ
ಆಳುವ ರಾಜ್ಯ ನಿನಗೆಂದ ।
ನೀ ಹೇಳಿದ ಮಾತ ನಾ ನಾರಿ ಕೇಳಿದರ
ತಂದೆ ಮಲ್ಲಸರ್ಜನ ಮಗಳಲ್ಲ ।
ನೀನು ಹೇಳಿದ ಮಾತ ನಾ ನಾರಿ ಕೇಳಿದರ
ತಾಯಿ ಚೆನ್ನವ್ವನ ಮಗಳಲ್ಲ ।

ಈರವ್ವ ನಿರಕ ತೊಟ್ಟ ನೆಲಿನಿಂತ್ಲ ।
ಈರವ್ವ ಕೈಮುಗಿದ ಮೇಣೇವ ಹತ್ಯಾಳ ।
ಹಿಂದೆ ಎಂಟು ಮಂದಿ ಮುಂದೆ ಎಂಟು ಮಂದಿ
ಹೊತ್ತಾರ ಭೋವ್ಯಾರು ಧಾರವಾಡಕ ।

---

* ಶ್ರೀಮತಿ [illegible]ಮವ್ವ ಮಡಿವಾಳಪ್ಪ, ಮಡವಾಳರ, ಲೋಕೂರ, ಜಿಲ್ಹಾ ಧಾರವಾಡ ಇವರ ಹಾಡಿನೊಳಗಿಂದ ಅರಸಿದ್ದು

ಧಾರವಾಡದಾಗ ಲೈನದ ಪೇಟ ಒಳಗ
ಉಳಿವಿ ಚನ್ನಬಸವನ ಗುಡಿಯಾಗ ।
ಈರವ್ವನ ಮೇಣೇವ ಒಯ್ದು ಇಳಿವ್ಯಾರ ।
ಅಂದ ಚಂದದ ಗುಳಿಗಿ ಚಂದದಿ ತಂದು
ಒಂದೊಂದು ಈರವ್ವಗ ಕೊಡತಾನ ।

ಬೇಬರ ಸಾಹೇಬ ಒಂದೊಂದ ಈರವ್ವಗ ಕೊಡತಾನ ।
ಈರವ್ವ ನಾಲಿಗಿ ಬುಡಕಿಟ್ಟು ಸರಿಸ್ಯಾಳ
ಅತ್ತಲಾಗ ಆರು ತಾಸು ಇತ್ತಲಾಗ ಆರು ತಾಸು
ಈರಾ ಈರಾ ಅಂತಾ ಕರಿತಾನ ।

ಈರವ್ವ ಯಾಕಪ್ಪ ಅನ್ನುವ ದನಿದೋರೆ ।
ಬೇಬರ ಸಾಹೇಬ ಸತ್ತಿಲವಳಂತ ನಗತಾನ ।
ಧಾರವಾಡದಾಗ ಲೈನದ ಪೇಟವಳಗ
ಅಲ್ಲೇ ಗವಳಿಗ್ಯಾರ ಮನಿಯಾಗ
ಬೇಬರ ಸಾಹೇಬ ದುಡ್ಡ ಕೊಟ್ಟ ಹಾಲ ತರಿಸ್ಯಾನ ।
ಒಂದೊಂದ ಗುಳಿಗಿ ಚಂದದಿಂದ ಹಾಲಾಗ
ಬಟ್ಟಿಲೆ ಮದಡಿಸೆ ಈರವ್ವಗ
ಎದುರಿಗೆ ಕುಂತ ಕುಡಿಸ್ಯಾನ ।
ಹತ್ತ ಕಾಲ ನಿಚ್ಚಣಿಕೆ ಹತ್ಯಾಳ ಈರವ್ವ
ಹತ್ತಿ ನೋಡ್ಯಾಳ ತನ್ನ ಸೀಮೆ ।
ಕಿತ್ತೂರ ವಾಡೇಕ ದಿಕ್ಕ ಇಲ್ಲದ್ಹಾಂಗ ಆತೆ
ನಮ್ಮಪ್ಪ ನನಗ ಹೇಳಿ ಹೋಗಲಿಲ್ಲ ।
ಆರು ಕಾಲಿನ ನಿಚ್ಚಣಿಕಿ ಏರ್ಯಾಳ ಈರವ್ವ
ಏರಿ ನೋಡತಾಳ ತನ್ನ ಸೀಮೆ ।
ಕಿತ್ತೂರ ವಾಡೇಕ ದಿಕ್ಕ ಇಲ್ಲದ್ಹಾಂಗ ಆತೆ
ನಮ್ಮವ್ವ ನನಗೆ ಹೇಳಿ ಹೋಗಲಿಲ್ಲ ।
ಕಿತ್ತೂರ ವಾಡೇವು ಇಂದಿಗೆ ಹಾಳಾಯ್ತು ।
ಮಲ್ಲಸರ್ಜನ ಮಹಲಿನಾಗ ಮಂಗ್ಯಾ ಮನಿಗಟ್ಯಾವು ।

ಈರವ್ವ ಗೋಡಿಗೆ ಹಾಯ್ದು ಅಳತಾಳ ।
ನನ್ನ ಬೆನ್ನಿಲೊಬ್ಬ ಅಣ್ಣನಿದ್ದರೆ ನನ್ನಂತ ನ್ಯಾಯ ನುಡಿಶಿದ್ದ ।
ನನ್ನ ಬೆನ್ನಿಲೊಬ್ಬ ತಮ್ಮನಿರಬಾರದೇನ
ನಮ್ಮಪ್ಪನ ವಂಶ ಉಳಿತಿತ್ತು
ಈರವ್ವ ಕಂಬಕ ಹಾಯ್ದು ಅಳತಾಳ ।
ಅತ್ತಲಾಗ ಆರುತಾಸ ಇತ್ತಲಾಗ ಆರುತಾಸ
ಈರವ್ವ ಜೀವ ಬಿಡತಾಳ ।
ಬೇಬರ ಸಾಹೇಬ ಈರಾ ಈರಾ ಅಂತ ಕರಿತಾನ ।
ಈರವ್ವ ಯಾಕಪ್ಪ ಅನ್ನು ದನಿಯಿಲ್ಲ
ಬೇಬರ ಸಾಹೇಬ ಕದಗಳ ತಗದ । ನಗತಾನ ।
ಬೇಬರ ಸಾಹೇಬ ಸತ್ತಾಳವಳಂದ ನಗತಾನ ।

❖❖

೧೬

ಕಿತ್ತೂರಿನ ಕೊನೆಯ ಕಾಳಗ

[ಕಿತ್ತೂರ ಸಂಸ್ಥಾನವು ಬ್ರಿಟಿಷರ ಕೈವಶವಾದನಂತರ ಆ ನಾಡಿನ ಅಭಿಮಾನಿಗಳು ಸೇರಿ ಬ್ರಿಟಿಷರನ್ನು ಎದುರಿಸುವ ಸಾಹಸವನ್ನು ಮಾಡಿದರು. ಕನ್ನಡದ ಬಂಟರೆಲ್ಲರೂ ಕೂಡಿದರು. ರಾಯಣ್ಣನು ಆ ಕಾಲದ ಕನ್ನಡ ನಾಡಿನ ಕೆಚ್ಚೆದೆಯ ವೀರರ ಪ್ರತೀಕನು. ಅವನ ಸಾಹಸ ಅಪ್ರತಿಮಾದದ್ದು. ಬೆಳಗಾವಿಯ ಕಿಲ್ಲೆಯನ್ನು ವಶಪಡಿಸಿಕೊಂಡು ಕಾಳಗವನ್ನು ಹೂಡಿ ಬ್ರಿಟಿಷರನ್ನು ಹೊರದೋಡಿಸುವ ಕೊನೆಯ ಯತ್ನಮಾಡಿದನು. ಆ ಎಲ್ಲ ವಿಷಯವನ್ನು ಸವಿಸ್ತಾರವಾಗಿ ಈ ಕೆಳಗಿನ ಪದದಲ್ಲಿ ಅವನ ಸಮಕಾಲಿನನಾದ ಹಾಗೂ ಅವನ ದಂಡಿಗೆ ವೀರರನ್ನು ಕಲೆಹಾಕಿದ ನೇಸರಗಿ ಚೌಬಾರಿ ಅಡಿವೆಪ್ಪಗೌಡನು ಕತೆಮಾಡಿ ಬರೆದಿದ್ದಾನೆ. ಈ ಪದದಲ್ಲಿ ಅನೇಕ ಐತಿಹಾಸಿಕ ಸಂಗತಿಗಳು ಆಧಾರ ಪೂರ್ವರ ದೊರೆಯುವಂತಿವೆ.

ರಾಯಣ್ಣನ ಅಜ್ಜನಾದ ರಾಗಪ್ಪನು ವೀರಪ್ಪ ದೇಸಾಯಿಯ ವತಿಯಿಂದ 'ಚಿಣಗಿ ಕೋವಾಡ'ದ ಯುದ್ಧದಲ್ಲಿ ತನ್ನ ಶೌರ್ಯವನ್ನು ತೋರಿಸಿದ್ದರಿಂದ, ಇವರ ಮನೆತನಕ್ಕೆ 'ಸಾವಿರ ಒಂಟಿ ಸರದಾರ' ಎಂದು ಬಿರುದು ಸಿಕ್ಕಿತ್ತು. ಸರದಾರ ರಾಯಣ್ಣನ ಆಪ್ತ ಭರಮಪ್ಪ. ಇವನು ಸಂಗೊಳ್ಳಿಯವನು. ಇವನ ಅಜ್ಜಹ ಹೆಸರಿನಿಂದ ಇವನ ಮನೆತನಕ್ಕೆ ರಾಗಣ್ಣವರ ಎಂದು ಹೆಸರು ಬಂದಿತು. ಈಗ ಸಂಗೊಳ್ಳಿಯಲ್ಲಿ 'ರೋಗಣ್ಣನವರ' ಎಂದು ಕರೆಯುತ್ತಾರೆ. ಇವನ ಹೆಂಡತಿ ಮಲ್ಲವ್ವ, ಮಗ ಹನುಮಂತ. ಮಲ್ಲವ್ವನು ನೇಗಿನಹಾಳದ ಲಕ್ಕಪ್ಪ ಹಳಬನ ತಂಗಿ. (ಕಡೆಗೆ ಲಕ್ಕಪ್ಪನೇ ಇವನನ್ನು ಕಂಬಳಿ ಮುಸುಕು ಹಾಕಿ ಹಿಡಿದುಕೊಡುತ್ತಾನೆ). ವಿಕ್ಟೋರಿಯಾ ಮಹಾರಾಣಿಗೆ ರಾಯಣ್ಣನ ಬಂಡಾಯದ ಸುದ್ದಿಯು ತಿಳಿದು ಅವನನ್ನು ಜೀವಂತ ಹಿಡಿದು ತಂದರೆ, ಧೀರ ಹೆಣ್ಣುಮಕ್ಕಳ ಪಕ್ಷಕಟ್ಟಿ ಹೋರಾಡುವ ವೀರನನ್ನು ಕಾಣಬೇಕೆಂಬ ಕುತೂಹಲ ವುಳ್ಳವಳಾಗಿದ್ದಳೆಂದು ತಿಳಿದು ಬರುತ್ತದೆ. ಕೊನೆಗೊಮ್ಮೆ ರಾಯಣ್ಣನಿಗೆ ಮೋಸ ಮಾಡಿದರು. ಕೈಯಗೆ ಸಿಕ್ಕ ಜೀವಂತವಾಗಿ ವಿಕ್ಟೋರಿಯಾ ಮಹಾರಾಣಿಯ ಎದುರಿಗೆ ಒಯ್ದರೆ ಜೀವದಾನ ಕೊಡಬಹುದೆಂದು ಆಗಿನ ಬ್ರಿಟಿಷ ಮತ್ತು ಅವರ ಕೈಯಕೆಳಗಿನ ಹಿಂದೀಯ ಸರಕಾರಿ ನೌಕರರು ತಡಮಾಡದೆ ರಾಯಣ್ಣನಿಗೆ ಗಲ್ಲು ಹಾಕಿದರೆಂದು ತಿಳಿದುಬರುತ್ತದೆ. ನಂದಗಡದ ವ್ಯಾಪಾರಿಗಳು ಇವನಿಗೆ ದುಡ್ಡಿನ ಸಹಾಯ ಮಾಡುತ್ತಿದ್ದರು. ಅವರಿಗೆ ಅಂಜಿಕೆ ಹಾಕುವುದಕ್ಕಾಗಿ ನಂದಗಡದಲ್ಲಿ ಗಲ್ಲು ಹಾಕಿದರು. ಸರದಾರ ರಾಯಣ್ಣನನ್ನು ಹಿಡಿದು ಕೊಡುವುದರಲ್ಲಿ ಖೊದಾನಪುರ ಲಿಂಗನಗೌಡ, ನೇಗಿನಹಾಳ ವೆಂಕಪ್ಪಗೌಡ ಮತ್ತು ಸಂಗೊಳ್ಳಿ ಕುಲಕರಣಿ ಬಾಳಪ್ಪ ಹಾಗೂ ರಾಯಚೂರ ಜಿಲ್ಲೆಯ ಹಚ್ಚೊಳ್ಳಿ ಕೃಷ್ಣರಾವ ಇವರು ಫಿತೂರಿ ಮಾಡಿದರಂತೆ. ಬೇವಿನಕೊಪ್ಪದ ಬಿಚ್ಚಗತ್ತಿ ಚನಬಸಪ್ಪ ಮತ್ತು ಗೋಧೂಳಿ ಗಜವೀರ

ರಾಯಣ್ಣನ ಹೆಗಲಿಗೆ ಹೆಗಲುಕೊಟ್ಟು ನಿಂತರು. ಗಜವೀರನು ಆನೆಯನ್ನು ತಡೆದು ನಿಲ್ಲಿಸುವಷ್ಟು ಗಟ್ಟಿಗ. ಬಿಚ್ಚುಗತ್ತಿ ಚನಬಸಪ್ಪ ತಲವಾರ ಎಂದೂ ಒರೆಗಾಣಿಸಿದವನಲ್ಲ. ನೆಲಕೆ ಕಿವಿಹಚ್ಚಿ ಎಷ್ಟು ಅಂತರದ ಮೇಲೆ ಎಷ್ಟು ಸೈನ್ಯವು ಬರುತ್ತದೆಂದು ಹೇಳಬಲ್ಲವನು!

ಉಳಿದ ಎಲ್ಲ ವಿಷಯ ಈ ಪದದಲ್ಲಿ ಸಂಪೂರ್ಣ ಬಂದಿದೆ. ಇದು ಲಾವಣಿ ಪದ. ಮೊದಲು ಹೋಳಿ, ನಂತರ ದುಂದುಭಿ, ರಿಯಾಸತ, ಗುಜುಗುಜು ಮಾಪುರ ಹೀಗೆ ನಾಲ್ಕು ವಿವಿಧ ದಾಟಿಯಲ್ಲಿ ಪದ ಹಾಡುತ್ತಾರೆ. ಇದು ಕರಿಯಪ್ಪ ವಣ್ಣೂರ ಮತ್ತು ನೇಸರಗಿಯ ಹೊಡೆದವರ ಮನೆಯಲ್ಲಿ ಶ್ರೀ ಕರಡಿ ಮಾಸ್ತರರ ಸಹಾಯದಿಂದ ದೊರೆತಿದೆ.]

ಚನ್ನಪ್ಪ ದೇಶಕ ಒಪ್ಪುವ ಕಿತ್ತೂರ್ರೋ । ಅಪ್ಪ ಮಲ್ಲಸರ್ಜಾನ ದೊರಿತಾನೋ
ಮುತ್ತಿನ ಪಲ್ಲಕ್ಕಿ ಸುತ್ತ । ಛತ್ತರ ಚ್ಯಾಮರ ಚೌರಿಗಳು । ಸುತ್ತಗಟ್ಟಿ ಹಿಡಿವ ಅಪ್ತಾಗಿರಿ
ಒತ್ತಿ ಮುಂಡಾಸ ಸುತ್ತುವಂಥ ಬಂಟರು ಬೇರೆ ಬೇರೆ
ಬತ್ತಲಗುದರೆ ಹತ್ತುವಂಥ ಬಾರಿನ ಮಂದಿ ಐತ್ಯೋ ಬಹಳ
ಕತ್ತಿ ಡಾಲ ಪಟ್ಟ ಕೈಚೂರಿ ತೋಪು ತುಬಾಕಿ ಪಿಸ್ತೂಲ ಮಂದಿ ಐತ್ಯೋ ಬೇರೆ ಬೇರೆ

ಧರೆಯೊಳು ಮೆರೆಯುವ ನೇಸರಗಿ । ಕರವೀರಭದ್ರಗ ನಾ ಹೋಗಿ
ಕರವೀರಭದ್ರಗ ನಾ ಹೋಗಿ । ವರನ ಬೇಡೆನಪ್ಪ ಶಿರಬಾಗಿ
ಸರದಾರ ರಾಯಣ್ಣನ್ನಾಡಿಗಿ । ॥೧॥

ಅಪ್ಪ ಮಲ್ಲಸರ್ಜಾನ ದೊರಿತನ ಇರುವಾಗ
ಸರದಾರ ರಾಯಣ್ಣ ಸಣ್ಣವನೋ
ಕಿತ್ತೂರ ನಾಡಿಗಿ ಮತ್ತ್ಯಾವ ಬಂದಾನೋ
ಮುತ್ತಿನ ಟೊಪ್ಪಿಗಿ ಇಂಗ್ರೇಜೋ
ದೇಶ ದೇಶವನೆಲ್ಲಾ ತಿರುಗಿ ನಾಶವಾಯ್ತೋ ಅವನ ದೇಹ
ಬೇಸತ್ತು ಬಂದಾನೊ ಬೆಳಗಾಂವಿಗೆ ।
ಬೆಳಗಾಂವ ನೋಡಿ ಖುಶಾಲ ಆದಾನು ತನ್ನ ಮನದಾಗ
ಮೂರ ದಿನಾ ಮುಕ್ಕಾಮು ಮಾಡ್ಯಾನೋ ಬೆಳಗಾಂವ್ಯಾಗ ।
ಅರಿವಿ ವ್ಯಾಪಾರ ಇಟ್ಟು ಆ ದಿನ ।
ದೊಡ್ಡ ದೊಡ್ಡ ಪಾಳೇಗಾರರಿಗೆ ಸುದ್ದಿ ಮುಟ್ಟ್ಯಾವಿನ್ನ ।
ಮುತ್ತಿನ ಟೊಪ್ಪಿಗಿ ಇಂಗ್ರೇಜ್ಯಾ ತಾ ಬಂದು
ಪಟ್ಟಗಟ್ಟ್ಯಾನೋ ಬೆಳಗಾಂವಿ ॥೨॥

ಇಲ್ಲದ್ಹಂಚಿಕಿ ತಗದ ಇಂಗ್ರೇಜ್ಯಾ ತಾ ಕೇಳೆ
ಖೊದಾನಪೂರ ಲಿಂಗನಗೌಡಾ
ನೇಗಿನ್ನಾಳ ವೆಂಕನಗೌಡಾ
ಫಿತೂರ ಮಾಡಿದರೊ ತೋಡಾ
ಕಿತ್ತೂರ ನಾಡಾಗ ಮಲ್ಲಸರ್ಜನ ಜಬರ ಬಹಳ ಜಾಡಾ
ಅಬ್ಬರತೋ ಕೋಡಾ
ಮುರದ ಮಾಡೋ ಮೂಢಾ
ಮೋಸಗಾರರ ಕೈಕಾಲ ಕಡಿದು ನಾಶಮಾಡಿದ ನೋಡಾ
ಸಂಸ್ಥಾನ ಪಾಡ ಗಳಸಬೇಕೋ ನಾಡಾ
ಮೂರು ಕುಪನಿ ದಂಡ ತಯ್ಯಾರ ಭರತಿ ಬಾರ ಮಾಡೋ
ಜ್ಯಾಣೆಕೆವ್ವ ಅಂದ ಜಗದೊಳಗ ಇಂಗರೇಜ್ಯಾ
ಠಾಣೆ ಹೊಡದಾನೋ ಕಿತ್ತೂರಿಗೆ ॥೩॥

ದಂಡ ಕೂಡೂ ಹೊತ್ತಿಗೆ । ಡಂಗುರ ಹೊಡದ್ಹಾಂಗೆ ಆತ್ಯೊ
ದುಂಡರುಟಿಗ್ಯಾತ್ಯೊ ಅವರಿಗೆ
ಎಂತೆಂಥ ಕಲ್ಲಪಡಿಯೋ
ಅವನೆಲ್ಲಾ ತೋಪ ಹಚ್ಚಿ ಹೊಡಿಯೋ
ಮದ್ದಿನ ಮನಿಗೆ ಬೆಂಕಿ ಬಡಿಯೋ
ಕಾರ್ಬಾರಿ ಫಿತೂರಿ ನಡಿಯೋ
ಬಾಕಿ ಪಿಸ್ತೂಲ ಹಿಡಿಯೋ
ಬಾಕು ಬಂದೂಕ ಬರ್ಚಿಯ ಹಿಡಿಯೋ
ದುಂಡುರುಟಿಗ್ಯಾತ್ಯೋ ಅವರಿಗೆ ಕಿತ್ತೂರಾ
ಗೊತ್ತಿಲ್ಲದ ಹೋತೊ ಗಳಿಗ್ಯಾಗೋ ॥೪॥

ದಂಡ ಕೆರಿಗಿಳದೀತೊ । ಕೆಂಡಕೊರದ್ಹಂಗಾತೋ
ಕೆಂದೂಳ ಗಂವಿತೋ ಕಿತ್ತೂರಿಗೆ
ಓಡಿ ಹೋತೊ ಸರ್ಜಾನ ದಂಡ
ಉಮೇದಾದಿತು ಇಂಗ್ರೇಜಿ ಮುಂಡ
ಚ್ಯಾಪಲಿನ ತಾ ಒಳೆ ಮಂಟ

ತೋಪ ಹಚ್ಚಿ ಹೊಡದಾನೋ ಗುಂಡ
ಹಾಳಾತೋ ಕಿತ್ತೂರಾನ ದಂಡ
ಕೈಸೆರಿ ತಾ ತೊಗೊಂಡ
ಕೆಂದೂಳ ಗಂವಿತೋ ಕಿತ್ತೂರಿಗೆ ಮಲ್ಲಸರ್ಜ ಸವಾಯಿ
ಅತ್ತಾನೋ ತನ್ನ 'ವತನ'ಕ ॥೫॥

ಮುಂದಿನ ಪದಗಳನು ಚಂದಾಗಿ ಕೇಳಿರಿ । ಸಂದ ರಾಯಣ್ಣನ ಕಥಿ ಸಾರ
ರಾಯಣ್ಣಂಬು ನಾಮಕರಣ
ಚಾಯವಾಗಿ ಒಪ್ಪಿದವವಗ
ನ್ಯಾಯದಲ್ಲಿ ಬಹಳ ಬಂಟಾ ಶೂರಾ
ಕೈಯಾಗ ಕತ್ತಿ ಡಾಲ ಹತಿಯಾರಾ
ಅಜ್ಜ ಮುತ್ತ್ಯಾ ಆರ ತೆಲಿ ಅಂತು ಇಂತು ನಡಕೊಂತ ಬಂತು
ಎಂಥಾ ಬಂಟ ಜನರು ಇದ್ದಾರಪಾ ಅವರಾ
ಕುಂತ ಕೇಳರಿ ಬಡ್ಡಿ ಮಜಕೂರಾ ।
ಸಂದ ರಾಯಣ್ಣನ ಕಥಿಸಾರ । ಸಂದ ರಾಯಣ್ಣ
ಹೇಳುವೆನೋ ಮುಂದ ನಡದಂಥ ಮಜಕೂರಾ ॥೬॥

ಸರದಾರ ರಾಯಣ್ಣಗ ಸಂಗೊಳ್ಳಿ ಊರಾಗ
ಬರೆದು ಕೊಟ್ಟಾರೋ ವತನವನು
ಹೆಚ್ಚಿನ ಮನೆತಾನಂತ ಪಾಚ್ಯಾನ ಕಾಲಕಿರ್ದಿಲವಗ
ಮೆಚ್ಚಿ ಕೊಟ್ಟಾರಪ್ಪ । ಆ ವತನವನು
ಹಚ್ಚಿ ತಿರುಗುವರು ತುರಾಯಿ ಶಮನವನು
ಬತ್ತಿ ಮುಂಡಾಸ ಒತ್ತಿ ಸುತ್ತಿ ಕತ್ತಿ ಡಾಲ ಬಗಲಿಗೆ ಹಾಕಿ
ಮತ್ತ ಮಾಡುವರಪ್ಪಾ । ತಳ್ಳಿಯನು
ಚಿತ್ತವಿಟ್ಟು ಕೇಳರಿ ನೀವು ಇನ್ನು
ಬರೆದುಕೊಟ್ಟಂಥ ವತನವನು ಇಂಗ್ರೇಜಾ
ಇಲ್ಲಿ ತನಕ ತಾನು ನಡೆಸಿದನೋ ॥೭॥

ಕಿತ್ತೂರ ನಾಡಾಗ ಉತ್ತಮ ದೇಸಾಯಿ
ಮುತ್ತಿನಂಥವನು ಮಲಸರಜ್ಯಾ
ದೇಸಾಯಿ ದೇಶಪಾಂಡೆ ನಾಡಗೌಡಾ ಅಂತ ಅವಗ
ದೇಶದ ತುಂಬ ಹೊಗಳಿ ಬಟ್ಟಂಗಿ
ಓಸ ಉಳಿಯಲಿಲ್ಲ ಹೋತು ಇಂದೀಗೆ
ಮುತ್ತಿನಂಥ ಮಲ್ಲಸರಜ್ಯಾ ಸತ್ತನೆಂಬ ಸುದ್ದಿ ಕೇಳಿ
ಅತ್ತುಕೊಂತ ಅಡಗ್ಯಾರೋ ಬಂಟರು ಹೋಗಿ
ಕತ್ತಿ ಡಾಲ ಚಲ್ಲಿ ಹೊರಸಿಗೆ ತಲಿಬಾಗಿ
ಮುತ್ತಿನಂಥವನೊ ಮಲಸರಜ್ಯಾ ಸತ್ತಿಂದ
ಸತ್ತಿಗಿ ನೆರಳು ಬಯಲಾಯಿತು ॥೮॥

ಹಾಳಾತೋ ಕಿಲೇವು ಗೀಳಾತೊ ಕಿತ್ತೂರು
ಗೋಳ ಬಂತು ಇದ್ದ ಬಂಟರಿಗೆ
ಬಿಚ್ಚಗತ್ತಿ ಹಿಡಿಯುವಂಥ ಹೆಚ್ಚಿನ ಬಂಟರು ಇದ್ದವರು
ಮುಚ್ಚಿಕೊಂಡು ಕುಂತ್ರೋ ಮುಸುಕು ಹಾಕಿ
ಎಚ್ಚರಾದಾಗ ಅಳತಾರೋ ಬಿಕ್ಕಿ ಬಿಕ್ಕಿ
ಡಾಲಪಟ್ಟಿ ತಿರುವುವಂಥ ಕಾಲಮಂದಿ ಹಳಬರೆಲ್ಲಾ
ಕೋಲ ಹಿಡಿದು ಕುಂತಾರೋ ಉಸುರು ಹಾಕಿ
ಕೊಳಿಲ್ಲದೆ ಬೇಡತಾರೊ ಬಿಕ್ಕಿ
ಗೋಳ ಬಂತೋ ಇದ್ದ ಬಂಟರಿಗೆ ರಾಯಣ್ಣ
ತಾಳದೆ ತಂಟೆ ಮಾಡಿದನೊ
ಸಂಪಗಾವಿಯ ಸಭೆಯು ಕುಪನಿಯು ಮಾಡಿತು
ಅಪ್ಪರವ ಕಂಠಿ ಸುಭೆದಾರೋ ॥೯॥

ಹಳ್ಳಿಯೊಳಗ ಗೌಡ ಕುಲಕರ್ಣಿ
ಪಳ್ಳಿನೊಳಗೆ ಮಾಡಿ ಇಟ್ಟಳೊ
ತಳ್ಳಿ ಅಗದ್ಹಾಂಗ ಬಂದೋಬಸ್ತಾ । ರಾಣಿ
ಸುಳ್ಳ ಕಾಯ್ದೆಮಾಡಿ ಇಟ್ಟಾಳಪ್ಪಾ ಶಿಸ್ತಾ
ಮಾಡಿರಿ ನಮ್ಮ ವಿಚಾರಗಳಾ । ಜೂಡಿ ಕೊಡತಾ ಹೋಗಿರಂತ
ಕಾಡದ್ಹಾಂಗ ಮಾಡಿ ಬಂದೊಬಸ್ತಾ । ಹುಕುಮ

ನಡಿಸ್ಯಾಳೊ ರಾಣಿ ಬಹಳ ಶಿಸ್ತಾ
ಅಪ್ಪರವ[೧] ಕಂಠಿ ಸುಭೇದಾರನ ಸದರಿಗೆ
ಕಂಪನಿ ಹುಕುಮ ಬರದಾಳೋ ॥೧೦॥
ಜಿಲ್ಲೆ ಜಿಲ್ಹೇಕ ಸಲ್ಹೇದ ದಂಡಿಟ್ಟು ಕಿಲ್ಲೆಗಳ ಹಾಳು ಮಾಡಿದಳೋ
ಕೆಂಪಮಾರಿ ಫಿರಂಗೇರು ಗುಂಪವಾಗಿ ಬಂದಾರವರು
ಸಂಪುವಾಗಿ ಎಲ್ಲಾ ರಾಜ್ಯದ । ಮ್ಯಾಲ
ಕೆಂಪು ಕುಂಪನಿ ಆದಿತೋ ಸುತ್ತೆಲ್ಲಾ
ತೋಪು ತುಬಾಕಿ ಮದ್ದು ಗುಂಡು ತೋಟೆ ಗೀಟೆ ಮಾಡಲಿಲ್ಲ
ಭೂಮ ಮಂದಿ ಮುಂದ ಕಾಲ್ಬಲಾ
ಛಾಪ ಹಾಸುತ ಬಂದರೋ ರಾಜ್ಯದ ಮ್ಯಾಲ
ಕಿಲ್ಲೆಗಳು ಹಾಳು ಮಾಡಿದಳೋ । ವೈರಿಗಳ
ಹಲ್ಲು ಮುರಿದಾಳೋ ಗಳಿಗ್ಯಾಗ
ಕಾರಭಾರದ ಶಿಸ್ತಾ ಕಾರಕೂನಗ ಇಟ್ಟಳೊ ಕಾಗದ ಲಕೂಟಿ ನಡಿಸ್ಯಾಳೊ ॥೧೧॥

ಮಾಲಕರಿ ಮಾಮಲೇದಾರ ತಾಲೂಕಿನಲ್ಲಿ ಅಮಲದಾರ
ಮೇಲ ಪದವಿ ಕಂಪ ಸೋಲ್ಜರ
ಜಿಲ್ಹೇಕೊಬ್ಬಬ್ಬರಾದರೊ ಕಲೆಕಟರ
ಶಿಸ್ತಮಾಡಿ ಒಬ್ಬೊಬ್ಬರನ ಬಿಸ್ತಮಾಡಿ ಇಟ್ಟಿದಾಳೊ
ಕಸ್ತ ಮಾಡಿ ಕಾಯ್ದೆದ । ಜೋರಾ
ಮಸ್ತ ಮಂದಿ ಕೈಕೆಳಗ ಸಿಪಾಯಿರಾ ॥೧೨॥

ಕಾಗದ ಲಕೂಟಿ ನಡಿಸ್ಯಾಳೋ ಒಬ್ಬರಿಗೂ ।
ಕಾಯಮದ ಕೆಲಸ ಕೊಡಲಿಲ್ಲ
ರಾಣಿಯರ ಚಾಕರಿಗೆ ರಾಯಪ್ಪ ನಿಂತಾನು ನ್ಯಾಯ ತಂದಾನು ಕುಲಕರ್ಣಿ
ತಾಲೂಕಿಗೆ ಬಂದೆ ಹುಕುಮಾ ಮಾಲಕರಿ ಮಾಮೇಲೆದಾರರು
ನೋಡಿ ಕರಿಸ್ಯಾರೊ ಹಳ್ಳಿ ಕುಲಕರ್ಣೀಯವರನಾ
ದೌಡಮಾಡಿ ಬಂದು ನಿಂತಾರೋ ಕಚೇರಿಗೆ

---

೧. ಇದರ ಶುದ್ಧರೂಪ ಅಪ್ಪಾರಾವ ಇರಬಹುದೆ?

ಸಂಗವಳ್ಳಿ ಕುಲಕರ್ಣೀ ಸಂಗಾಟ ಬಂದೋ ರಾಯಪ್ಪ
ಮಂಗಾಟದಿಂದ ಹೊಕ್ಕೋ ಕಚೇರಿನ
ಹೆಂಗ ಮುಜರಿ ಹೊಡದ ನಿಂತಾನೊ ರಾಯಪ್ಪ ಸದರಿಗೆ
ನಡಿತ್ರಪ್ಪ-ಪಾಳೇದ ವಸೂಲಾ
ಗಡಿಬಿಡಿ ಬಿತ್ತು ಭೂಮಿಯ ಮ್ಯಾಲ
ಬಿಡದ ಮಾಡ್ಯರಪ್ಪ ಸಾಲ ಸಾಲ
ಕೊಡಬಾರದಂತ ತಗದಾರ ಅಕಲ
ನ್ಯಾಯ ತಂದಾನೋ ಕುಲಕರ್ಣಿ ಬಾಳಪ್ಪ
ಬಾಯಿ ಮಾಡಿದನೋ ಬಲ್ಹಾಂಗ ॥೧೩॥

ರಾಣಿ ಹಳುಹಿದ ಹುಕುಮ ಪಾಣಿ ಮಾಡರೆಂತ ಭೂಮಿಗೆ
ಜಾಣ ಮಾಮಲೇದಾರಗ ಹೇಳಿದಳೋ
ರಾಣಿ ಕಳಿವಿದ ಮಜಕೂರಾ
ತಿರಿಗಿ ಅವರು ಬರದಾರೋ
ಬಹಳ ಮಂದಿ ಆದಾರುಮ್ಮೇದಾರಾ
ನಾಳಿಗಿ ಮಾಡುನಂತಾರೋ ಪಾಣಿಪತ್ತರಾ
ಮಥನದಿಂದ ಗಳಿಸಿದ ಭೂಮಿ
ವತನ ಬಾಬ ಕಸಕೊಂತಾರೋ
ಜತನದಿಂದ ಭೂಮಿ ಆಕಾರಾ
ಯತನ ಮೀರಿತಂತಾರೋ ಕುಲಕರಣ್ಯಾರಾ
ಸರಕಾರ ಮಾಡಿರೆಪ್ಪ ನೇಮಾ
ತೆರಿಗಿದ ಮಾಡಿರೆಪ್ಪ ನೀವು ಕಾಯಮಾ
ಇರಗೊಡಬಾರದು ಇನಾಮಾ
ಮುರದ ಒಗಿರೆಪ್ಪ ಹಿಂದಿನ ನೇಮಾ ॥೧೪॥

ಕುಲಕರ್ಣಿ ಬಾಳಪ್ಪ ಕುಲು ಕುಲು ನಕ್ಕೊಂತ
ಹೊಲಕ ಹೋಗೂನ ನಡಿರೆಂದೋ
ಏಸೋ ಹೊಲೊ ರಾಯಾ ನಿಮಗ
ಮೋಸದಿಂದ ಗಳಿಸಿದ ಭೂಮಿ

ಖಾಸ ನಿಮ್ಮ ಅಜ್ಜ ಮುತ್ತ್ಯಾಗಳಾ
ಇಷ್ಟು ದಿವಸ ಉಣತ ಬಂದಿರೋ ಭೂಮಿ ಬಹಳ
ನಾವು ಮಾತ್ರ ಕುಲಕರಣ್ಯಾರಾ
ನಾವು ನಮ್ಮ ಚಾಕರಿಮಾನರು
ನಮಗ ಇಲ್ಲೋ ಭೂಮಿ ಹೊಲಗಳಾ
ಯಾವ ಬುದ್ದಿಗೇಡಿ ಕೊಟ್ಟದ್ದಾನೋ ಸುಳ್ಳ ಸುಳ್ಳಾ
ಏಸೋ ಹೊಲಾ ರಾಯ ಕಾಯಿಮ
ಕೊಟ್ಟದ್ದಾರೋ ಸರಕಾರ ಇನಾಮ
ಇಷ್ಟು ದಿನಾ ಉಂಡಿರಿ ತಮ್ಮಾ
ಕಷ್ಟ ಬಂತೋ ಹಚ್ಚೂದು ನೇಮಾ
ಹೊಲಕ ಹೋಗೂನು ನಡಿರೆಂದ ಮಾತಿಗೆ
ಕಲಮ ತಿಳಿದಾನೋ ರಾಯಪ್ಪ ॥೧೫॥

ತುಂಟ ಕುಲಕರ್ಣಿ ತಾನು ತಂಟೇವ ತಗದಾನಪಾ
ತಂಟೇದ ಕುಲಕರಣಿ ತಂಟೆ ತಗದಾನು ತಾನು
ಬಂಟರ ಮನಿತನ ಹೌದೇನೋ
ಲೆಂಡಗುರಬಾ ರಾಯ ನನ್ನ
ಗಂಡಗುದುರಿ ಹೊಡುತೇನೋ
ಪುಂಡನಾದರ ಬಾರೋ ಬೆನ್ನ ಹತ್ತಿ
ರಂಡೆಗಂಡ ಓಂದಕ ಸರದರ ತಿಂದಿ ನೋಡೋ ಲತ್ತಿ
ದೌಡಮಾಡಿ ಹೊಡದಾನ ಕುದರಿ
ರೌಡ ಮಾಡಿ ಮುಂದ ರಾಯಪ್ಪ
ತೌಡ ತಿನ್ನು ಕುದರಿ ಅಲ್ಲೊ ಕತ್ತಿ ನನ್ನ
ಕೊಡ್ಡದ್ಹಂಗ ಕಾಣಸತತ್ಯೋ ಇದರ ಮೋತಿ
ಓಡಿ ಮುಂದಕ್ಹೋದೋ ರಾಯಣ್ಣಾ
ನೋಡಿ ಸಿಟ್ಟಿಗೆದ್ದೋ ಬಾಳಣ್ಣಾ
ಕಾಡಬೇಕೋ ಬಿಡಬಾರದಿವನಾ
ಮಾಡಬೇಕಂತಾನ ಶಾಸನ ॥೧೬॥

ಕಾಸ್ಯಾಡಿದ ಮಾತಿಗೆ । ವಾಸಡಿದೋ ಕುಲಕರಣಿ
ಮೀಸಿ ತಿದ್ದಿದನೋ ರಾಯಪ್ಪಗ
ಒಳ್ಳೇದಲೆ ಕುರಬಾ ನೀನು ಊರ ಒಳಗ ಬಾಳೆ ಮಾಡೋ
ಹೇರತೇನೋ ಡುಬ್ಬದ ಮ್ಯಾಲ ಕಲ್ಲಾ
ತೊಗೊಂತೇನೋ ಇನ್ನ ಪಾಳೆ ನಿನ್ನ ಇನಾಮದ್ದೊಲಕೆಲ್ಲಾ
ರಾವಸಾಹೇಬ ಮಾಮಲೇದಾರಾ
ನಾವು ಮಾತ್ರ ಕುಲಕರಣ್ಯಾರಾ
ಠೇವ ಬಂದಿಲ್ಲಪ್ಪ ಇನ್ನು ಪಾಳೇದ ವಸೂಲಾ
ರಾಯಪ್ಪ ಅಂತಾನ ಮಾತಿಗೆ
ನ್ಯಾಯ ಪಾಳೆದ ಸಲುವಾಗೆ
ನಾವು ಕೊಟ್ಟಿಲ್ಲಪ್ಪ ಎಂದೆಂದಿಗೆ
ನೀವು ತಗೊಳ್ಳುವುದು ಬಹಳ ಬಿಗಿ
ಮೀಸಿ ತಿದ್ದಿದನೋ ರಾಯಪ್ಪಗ ಕುಲಕರ್ಣಿ
ಬೇಸಿ ಹೇಳಿದನೋ ಬೆದರಿಕೆ ॥೧೭॥

ಕುಲಕರಣಿ ಬಾಳಪ್ಪ ಕುಲು ಕುಲು ನಕ್ಕೊಂತ
ಮಲಪುರಿ ಮಲ್ಲವಗ ನಡದಾರೋ
ಹುಳಕಮನಸಾ ಬಿಡರಿ ನಿಮ್ಮದು
ಜಳಕಾನಾದರ ಮಾಡುವ ನಡಿರಿ
ತಳಕ ಹರದ ಹೊಟ್ಟಿ ಹಸದಾವು ಬಹಳ
ಬೆಳಕ ನಿಮ್ಮದು ಬಿದ್ದಿತಿರೆಪ್ಪ ಸಂಗೊಳ್ಳಿ ಊರ ಮೇಲಾ
ದೂಸತುಂಬಿ ರಾಯಪ್ಪ
ಈಸಬಿದ್ದೋ ಮಡದಾಗ
ತಾಸೊತ್ತನಕ ಬರಲಿಲ್ಲೋ ದಂಡಿತನಕಾ
ಹಾರಿ ಅಂತಾನೋ ಹೊಳಿ ಗಂಗವ್ವ
ಬೇರೆ ಇಲ್ಲ ನಿನ್ನ ಮಗನವ್ವ
ಸಾರಿ ಹೇಳತೇನ ನಿನಗವ್ವ
ಮೀರಿದ ಕಾಲಕ ನಮ್ಮವ್ವ
ಮಲಪುರಿ ಮಲ್ಲವ್ವಗ ನಡದಾನೋ ರಾಯಪ್ಪ
ಅಲಕಂತ ಹೊಳಿಯ ಜಿಗದಾನೋ ॥೧೮॥

ಬಂಡ ಕುಲಕರಣಿ ತಾನು ದಂಡ್ಯಾಗ ಜಳಕನ ಮಾಡಿ
ಪುಂಡ ರಾಯಪ್ಪನ ಕರದಾನೋ
ಧೋತರಾನಾದರ ಸೆಳಿಯೋ ರಾಯಾ
ಒತ್ತರಾಗಲೋ ರಂಡೆಗಂಡ
ಕಾತರದಾಗ ಇಲ್ಲೋ ನಾವು ನಿಮಗ
ಮೇತರಮಳ್ಳಿ ಹಂಗಮಾಡತಿಯೋ ಒಣಾ ಸೋಗ
ಧೋತರಾನಾದರ ಸೆಳಿಯೋ ಅಂತಿ
ಯಾತರಾಗದಿಯೋ ಗೂಳಿ ತಮ್ಮಾ
ಯಾತರದೇನು ನೀ ತಿನ್ನುವ ಬಾಡ
ನೆತ್ತರಾ ಕೀಳಿಸಿ ಒಗಿಸೇನೋ
ಹತ್ತಾಕಿಲ್ಲೋ ತಡಾ
ಹಮ್ಮ ಬಂದಿತಪ್ಪ ಕುಲಕರಣಿಗೆ
ಮಲತನಿಂತೋ ರಾಯಪ್ಪ ಸುಮ್ಮ
ಬಲಿತನ ಬಂದಿತೋ ಏನ ಹಮ್ಮಾ
ಹೋತಿಹಂಥ ಹುಚ್ಚ ತಮ್ಮಾ ॥೧೯॥

ಸಿಟ್ಟಿಗೆದ್ದ ರಾಯಪ್ಪ । ರಟ್ಟಿನ ಹಿಡದಾನೋ
ನಟ್ಟನಡು ನೀರಿಗೆ ವೈದಾನೋ
ನಟ್ಟನಡು ನೀರಿಗೆ ವೈದರ ಕುಲಕರ್ಣಿ
ಬಟ್ಟಲದ್ಹಂಥ ಕಣ್ಣ ಬಿಡತಾನೋ
ಒಟ್ಟಿಗೊಂದ ಮಾತ ಹೇಳತೇನೋ ನಿನಗ । ಕಳದ
ಬಟ್ಟಿ ಹಿಂಡಲಾಕ ಹೆಂಗಸ ನಾ ಹೆಂಗ
ರಟ್ಟಿ ಹಿಡಿದ ಮುಣಗಸತಾನೋ
ಜುಟ್ಟಲಾ ಹಿಡಿದು ಎಬ್ಬಸತಾನೋ
ನೀರ ಕಡದ ಹೊಟ್ಟಿ ಆತ್ಯೋ ಜಡಾ
ಮೆಟ್ಟಿ ತುಳದರ ಹೋದಿ ಅಂತಾನೋ ಹೊಳಿಗೂಡಾ
ಬಾಳಪ್ಪ ನಿಂತಾನ ನಡಗುತ
ಗೋಳಬಂತೋ ನನ್ನ ಸುತ್ತಂತ । ಎರಡಾವರ್ತಿ
ಹೇಳತಾನ ಕೈಮುಕ್ಕೊಂತ
ತಾಳಲಾರದವ ನಡಗೂತ ॥೨೦॥

ಬಡವ ಹಾರುವ ನಾನು । ಬಡಿಬೇಡೋ ರಾಯಪ್ಪ
ತಡವಬಾರಿದತ್ತೋ ತಡವಿದೇನೋ
ತಡವಬಾರದಿತ್ತು । ತಡಿವಿದೇನೋ ರಾಯಪ್ಪ
ಬಡವನಾಗಿ ಬಾಳೇ ಮಾಡಲಿಲ್ಲೋ
ಒಟ್ಟಿಗೊಂದ ಮಾತ ಹೇಳತೇನೋ ನಿನಗ । ನಿನ್ನ
ಹೊಟ್ಟಿಲಿ ಹುಟ್ಟಿದ ಮಗನ ಸರಿಯೋ ರಾಯಪ್ಪ ನಾನಾ
ಕಕಲಾತಿ ಬಂತೋ ರಾಯಪ್ಪಗ
ಕರಕೊಂಡ ಹೋದೋ ದಂಡಿತನಕಾ
ಹರಕ ಹಾರವಾ ಇವ ಮಾಡುದೇನಾ
ಮರುಕ ಬರತತಿ ಕೊಲ್ಲಬಾರದೋ ನಾನಾ
ನಾ ಯಾಕ ತಗದೇನ ಚವಕಾಸಿ
ನಮ್ಮವರಿಗೆ ಹತ್ತಿತೋ ಮಸಿ
ಇನ್ನ ಮಾಡಬೇಡಪ್ಪ ಬಹಳ ಗಾಸಿ
ನಿನ್ನ ಮನಕ ಬರಲೆಪ್ಪ ಖುಸಿ ॥೨೧॥

ಹೇಸಿ ಹೆಂಗಸಿನಂಥ ಖೋಡಿಜಾತಿ ಬಾಳಪ್ಪ
ನೋಡಿಕೊಳ್ಳೊ ನಿನ್ನ ಮನಿಮಾರಾ
ಬೆದರಿಸಿ ತಿಂದ್ಯೋ ರೈತರನೆಲ್ಲಾ
ಉದರಿಸಿಕೊಂಡು ಇಲ್ಲಿ ತನಕಾ
ಒದರಸತಿನ್ಯೋ ಬಿಡತೇನ ಜೀವದಾನಾ
ನನ್ನ ಪದರಿಗೆ ಬಿದ್ದವರನ್ನ ನಾ ಮಾಡುದೇನಾ
ನನ್ನ ಸರಿಯು ಅಲ್ಲೋ ನೀನಾ
ಹುಲ್ಲಕಚ್ಚಿ ಕಲ್ಲಹೊತ್ತ ಬುಡಮೇಲಾಗಿ ಹೋದ್ಯೋ ನೀನಾ
ನಿನ್ನ ಹಲ್ಲ ಮುರಿವೂದು ನನಗಾಗದೇನಾ
ಅನ್ನ ಬಿಟ್ಟ ರಾಯಪ್ಪನಿಂತ
ಏಸ ಬರೆ ಸಾವೂವದಂತ
ಹೇಸಿ ಕುಲಕರ್ಣಿಗೂಡ ಪಂತ
ಬೇಸಿತೊಟ್ಟ ನಿರಕಿಗೆ ನಿಂತ
ನೋಡಿ ಕೊಳ್ಳೊ ನಿನ್ನ ಮನಿಮಾರೋ
ನಾ ಇನ್ನ ತಳ್ಳಿ ಸರಕಾರಕ ಮಾಡುವೆನೋ ॥೨೨॥

ತಾಯಿ ಮಲಪುರಿ ಗಂಗಾ । ಮಾಯ ನನ್ನ ಮೇಲಿರಲೇ
ನ್ಯಾಯ ಬಂತಿನ್ನ ಕಡಿಬೆಟ್ಟ
ಮಾಯಕಾರತಿ ಮಲ್ಲವ್ವ
ಮಾಡಲ್ಹೆಂಗ ನಾ ಇನ್ನ
ಹೋಗಿ ನೋಡಲ್ಹೆಂಗ ತಾಯಿ ಮೋರಿನ
ಕೊಡು ವರವ ಬೇಡಲ್ಹೆಂಗ ಇಲ್ಲ ನಿನ್ನ ಸರಿ
ಬಿಚ್ಚಗತ್ತಿ ಚನಬಸಣ್ಣಾ
ಹೆಚ್ಚಿನವ ಜೀವದ ಗೆಳಿಯಾ
ಮುಂಚೆ ಹೋಗಿ ಮಾತಾಡಿಸಿನ್ಯೋ ಅವನ್ನ
ಕಚ್ಚಿ ಹಾರುವ ಹೆಚ್ಚಿನ ಮಾರಿ ತಂದಾನೋ ನನಗ
ಬಾಳಪ್ಪ ಮಾಡಿದ ಮಜಕೂರಾ
ಗೆಳಿಯಾರಿಗ್ಹೇಳಿದೋ ಆಸರಾ
ತಾಳಲಾರೆನಪ್ಪ ಉಪದ್ರ
ಗೋಳ ಬಂತ ಹೋಗತೇನ ದೂರಾ
ನ್ಯಾಯ ಬಂತಿನ್ನ ಕಡಿಬೆಟ್ಟ ಹಡದವ್ವ
ಕಾಯು ಸಲುವಾಗೆ ಕೊಡು ವರವ ॥೨೩॥

ಖಾಸ ಜೀವದ ಗೆಳಿಯಾ । ಬೇಸ್ಯಾಗಿ ಹೇಳಿದನೋ
ಮೀಸಿ ಹುರಿ ಮಾಡಿ ನಕ್ಕೊಂತಾ
ಏಸ ತಲಿಗಂಡವಂದ
ಖಾಸ ಸರಕಾರ ತಗೊಂಡಿಲ್ಲಾ
ಹೇಸಿ ಹಂಗ ಕೊಡಬೇಕೇನೋ ದುಡ್ಡ
ರಾಸರೋಸ ಕೊಡಬೇಡಪ್ಪ ನೋಡೋನು ಬಾಳ್ಯಾನ ಎಡ್ಡಾ
ಈಗ ಪಾಳೇ ಕೊಟ್ಟರ ನಮಗ
ಮ್ಯಾಗ ಗಂಟ ಹೇರತಾರೊ
ಹೋಗಿ ಜಂಗಮ ಬೇಡ ಬೇಕೋ ದುಡ್ಡ
ಲಾಗ ತಪ್ಪಿದ ಮೇಲೆ ನಾವು ಆದೇವೋ ಬಂಡಾ
ಅಳ್ಳಗಚ್ಚಿ ಹಾರುವ ತಾನು
ಸುಳ್ಳಮಾಡಿ ಅಂಜಿಸಿದಾನೊ

ಮುಳ್ಳಗುರಬಾ ರಾಯಪ್ಪ ನೀನು
ತಳ್ಳಿ ಮಾಡುವಾ ಇನ್ನ ಏನು
ಮೀಸಿ ಹುರಿಮಾಡಿ ನಕ್ಕೊಂತ ರಾಯಪ್ಪ
ಹಾಸಿ ಬಿಡವೂನೋ ಕಡತವನು ॥೨೪॥

ಕೂಡಿದರೋ ಗೆಣಿಯಾರು । ಮಾಡಿದರೊ ಮಸಲತ್ತು
ನೋಡಬೇಕಿವರ ಗಮ್ಮತ್ತು
ತಾಯಿ ಹೊಟ್ಟಿಲಿ ಹುಟ್ಟಿ ನಾವು
ತಾಯಿ ಮೊಲಿ ಹಾಲ ಕುಡಿಲಿಲ್ಲರೆಪ್ಪ
ಬಾಯಿ ಇಸವರದ ಬಳಲಿ ಸಾಯವ ನಾವು
ಅವರಿಗೆ ನಮಗ ಆಗಲೆರೆಪ್ಪ ರಾಜೇದ ಮ್ಯಾಗ ಇನ್ನ
ನೋಡಬೇಕಿವರ ಗಮ್ಮತ್ತು ರಾಯಪ್ಪ
ಕೂಡಿಸಲೆ ದಂಡ ಬೆಳತನಕಾ
ಹೊತ್ತ ಮುಣಿಗಿ ರಾಯಪ್ಪ ಹೊರಬಿದ್ದ ನಡದಾನೋ
ಮಸ್ತ ಕೂಡಿಸ್ಯಾನೋ ಮಂದಿನ್ನ
ತಳ್ಳಿಕಾರ ತಳವಾರ ಹಿಂಡ
ಮೆಲ್ಲಕ ಬಂದಾರೋ ಬೆನ್ನ ಹತ್ತಿ ॥೨೫॥

ಹುಲಿಯನ್ನ ಹಿಡದಂತಾರೋ ಹದಿನೆಂಟ ಜಾತಿ
ಹಳ್ಳಿಗ್ಹತ್ತಮಂದಿ ಬಂಟರು
ಪಳ್ಳಿನೊಳಗೆ ಇದ್ದಾರೊ
ತಳ್ಳಿ ಗೂಡ ಬಂದರೊ ಮೆಲ್ಲಕ
ಸುಳ್ಳ ಹುಟ್ಟಿ ಸಾವುದ್ಯಾಕೊ ಮಳ್ಳರ ಗತಿ
ಮಸ್ತ ಕೊಡಿಸ್ಯಾನೋ ಮಂದಿನ್ನೊ ರಾಯಪ್ಪ
ಸುಸ್ತಿ ಮಾಡಲಿಲ್ಲೋ ಬೆಳತನಕಾ
ಸುದ್ದಿ ಹತ್ತಿ ಕುಲಕರ್ಣಿ । ಎದ್ದು ತಾ ಓಡಿದನೋ
ಖುದ್ದ ಸಿಂಪಗಾಂವಿ ತಳದಲ್ಲಿ
ಘಾತವಾತೋ ರಾವಸಾಹೇಬ
ಮಾತ ಬಾಯಿಲಿ ಬರವಲ್ಲವೋ

ಬೇತ ಮಾಡಿದಾನೋ ರಾಯಾ ಪುಂಡ
ಊರ ಒಳಗ ಎಲ್ಲಾ ತಳ್ಳಿ
ಹೇಳಾಕ್ಹೋದರ ಕಡದೇನಂತಾನೋ ಎರಡು ತುಂಡ
ಇಬ್ಬರು ಮಂದಿ ಕೂಡಿ ಮಾಡಿದಾರೋ ಬಹಳ ಬಂಡ
ಖುದ್ದ ಸಂಪಗಾಂವಿ ತಳದಲ್ಲೇ ಕುಲಕರಣಿ
ಚಾಡಾ ಹೇಳಿದನೋ ಸುಭೇದಾರಗ ॥೨೬॥

ಸರಕಾರ ಸಂಪಗಾಂವಿ । ಸುದ್ದಿಮುಟ್ಟಿ ಸುಭೇದಾರ
ಫಕರು ಜಮಾದಾರನ ಕರಸಿದನೋ
ಬಂಡ ಜಮಾದಾರಾ ಸದರಿನ ಮುಂದ
ಮುಜರಿಹೊಡದ ನಮ್ಮನ್ನ ಇಂದ
ಕರಸಿದ ಕಾರಣವೇನಾ
ಯಾವನ ಕಡದ ಕೊಂದ ಬರಲೋ
ಸರಕಾರ ಹುಕುಮೇನಾ
ಅಂದಮಾತಿಗೆ ಸುಭೇಧಾರ
ಚಂದವಾಗಿ ಹೇಳತಾನೋ
ಬಂದೆ ಮಾಡೋ ರಾಯನ ತಳ್ಳಿನಾ
ಸುಂದ ಮಾಡಬೇಡ ಇಂದೋ ಹೋಗೋ ಜಲದಿನಾ
ಫಕರು ಜಮಾದಾರನ ಕರಸಿದನೋ ಸುಭೇದಾರ
ಕಾವಲಕ ಮಂದಿ ಕಳಿವಿದನೋ ॥೨೭॥

ಬಂಡ ಜಮಾದಾರ । ದಂಡ ತಾ ತಗೊಂಡ
ಪುಂಡ ರಾಯಪ್ಪನ ಹುಡುಕೂತ
ಸಂಗೊಳ್ಳಿ ಸೀಮಿಯೊಳಗ
ಸಂದಿಗೊಂದಿ ಹುಡುಕತಾರೋ
ಬಂದ ಇಳದಾರ ಊರತೆಳಗ ಸಿಸ್ತಾ
ಪುಂಡ ರಾಯನ ತಂದಕೊಡಂತ ಮಾಡಿದಾರೋ ಬಿಸ್ತಾ
ರಾಯಪ್ಪನ ಬಾಗಿಲಕ್ಹೋಗೊ ಬಾಯಿಮಾಡಿ
ಕರವತಾರೋ ತಾಯವ್ವ ಇದ್ದಾಳ ಬಾಗಿಲ ಬಂದುಬಸ್ತಾ

ಎತ್ತಹೋದ ನಿನ್ನ ಮಗ ಅಂತಾರ ಕಣ್ಣ ಕಿಸ್ತಾ
ಪುಂಡ ರಾಯಪ್ಪನ ಹುಡಕೂತ ತಾಯವ್ವನ
ಚಂಡಮ್ಮೇಗ ಕೈಯ ಕೊಟ್ಟಾರೋ ॥೨೮॥

ಎತ್ತ ಹೋದ ನಿನ್ನ ಮಗ । ಎತ್ತ ಕಳಿವಿದಿ ಹೇಳ
ಹಲ್ಲ ಮುರದೇವ ಹಳಿ ಮುದಕಿ
ಎತ್ತ ಹೋಗ್ಯಾನ್ರೆಪ್ಪ ಮಗ
ಗೊತ್ತ ಇಲ್ಲದ್ಹಂಗ ನನಗ
ಸುತ್ತಗಟ್ಟಿ ಹುಡಕರಿ ಭೂಮಿಮ್ಯಾಗ
ಸತ್ತಹೋದ ನನ್ನ ಪದರಿಗಿಲ್ಲರಿ ಮಗ
ಅಣ್ಣ ಅಪ್ಪಗಳಿರ್ರ್ಯಾ ನಿಮ್ಮ
ಹೆಣ್ಣುಮಗಳ ಸರಿಯೋ ನಾನಾ
ಪುಣ್ಯಕಟ್ಟಿಕೊಂಡ ಬಿಡಸರಿ ಪದರಾ
ಹೆಣ್ಣ ಮಕ್ಕಳ ಮೇಗ್ಯಾಕಪ್ಪ ನಿಮ್ಮ ಜೋರಾ
ಹಲ್ಲ ಮುರದೇವ ಹಳ ಮುದಿಕಿ ನಾ ನಿನ್ನ
ಮೇಲೊಂದ ಕಲ್ಲ ಹೇರೇವ ॥೨೯॥

ಜಗ್ಗಿ ಜಮಾದಾರ । ಬಗ್ಗಿಸಿ ಮುದಕಿನ್ನ
ಮೇಲೊಂದ ಕಲ್ಲ ಹೇರಿದನೋ
ಮಣದ ಕಲ್ಲ ಹೇರಿದಾನೋ
ಹೊಲದ ಹಣಾ ಕೊಡಂತಾನೋ
ತಿನ್ನೂತ ಬಂದಿರಿ ಸರಕಾರನ್ನಾ
ಚಣಾ ಹೊತ್ತ ತಡದರ ಬಿಡುದಿಲ್ಲ ಇನ್ನಾ
ರೂಪಾಯಿ ಇಲ್ಲಾ ರೊಕ್ಕ ಇಲ್ಲಾ
ನನ್ನ ಕೈಯ್ಯಾಗೇನೇನಿಲ್ಲಾ
ನಮಗ್ಯಾರು ಕೊಡತಾರೋ ಸಾಲನ
ಹೊಲಾ ಮನಿ ಸುಲಿಗಿ ಮಾಡಾರೆಪ್ಪ ನಂದು ಇನ್ನಾ
ಮೇಲೊಂದ ಕಲ್ಲ ಹೇರಿದರ ತಾಯವ್ವ
ತಾ ಜಾಮೀನ ಕೊಟ್ಟು ನಡದಾಳೋ ॥೩೦॥

ಸುದ್ದಿ ಹತ್ತಿ ರಾಯಪ್ಪ । ತಿದ್ದ್ಯಾನೋ ಮೀಸಿನಾ
ಕದ್ದಿಲೆ ಬಂದಾನೋ ತನ್ನ ಮನಿಗೆ
ಕಂದಾ ಬಂದಾನಂತ ತಾಯವ್ವ
ಕಣ್ಣೀರ್ಹಾಕಿ ಅಳತಾಳೋ
ಸಣ್ಣವನ ದೊಡ್ಡವನ ಮಾಡಿನ್ನೆಲ್ಲೊ ನಿನ್ನ
ನಿನ್ನ ಕಣ್ಣ ಮುಂದ ಸತ್ತ ಹೋಗಲಿಲ್ಲೋ ನಾನಾ
ಮಲಿ ಕುಡಿಸಿ ನಿನ್ನ ಮಾಯಾ ಹಚ್ಚಿ
ಮಗ್ಗಲದಾಗ ಮಲಿಗಿಸಿ ನಿನ್ನ
ತಲಿಗೆ ಎಣ್ಣಿ ಹಚ್ಚಿ ಎರದಿನ್ಯೊ ಏ ನಾ
ಇಂಥಾದಕಾಗೆ ಹಡದಿನ್ಯೊ ನಿನ್ನ ಕೊಲಿಗೆ ನಾನಾ
ಕದ್ದಿಲಿ ಬಂದಾನೋ ತನ್ನ ಮನಿಗೆ । ತಾಯವ್ವನ
ಸುದ್ದಿ ಕೇಳಿ ಬಹಳ ಮರಿಗಿದನೋ ॥೩೧॥

ಹಡದವ್ವನ ನುಡಿ ಕೇಳಿ । ಅಡರಾಸಿ ರಾಯಪ್ಪ
ಗಡಬಡಸಿ ನೆಲಕ ಎರಗಿದನೋ
ಹಡದ ನಮ್ಮನ ಸಲಿವಿದೆವ್ವ
ದುಡದ ಅನ್ನಾ ಹಾಕಲಿಲ್ಲ
ಪಡದ ಬಂದುದೆವ್ವ ಶಿವನಲ್ಲೆ
ನನ್ನ ವೈರಿ ಕಡದ ರಗತಾ ಕುಡುತೇನಿ ನಾ ಇಲ್ಲೆ
ಕೂಸ ನಿನ್ನ ಕಂದಾ ನಾನು
ಮೋಸಮಾಡಿದ ಜಮಾದಾರನ
ತಾಸ್ಹೊತ್ತಿನ್ಯಾಗ ತರತೇನವನ ಗೋಣಾ
ಯಾವ ಸೂಳಿ ತಮ್ಮನ ಮಗ ನಮ್ಮನ ಮಾಡುದೇನಾ
ಗಡಬಡಸಿ ನೆಲಕ । ಎರಗಿದನೋ ರಾಯಪ್ಪ
ಅಡರಾಸಿ ಮಂದಿ ಕೂಡಿಸಿದನೋ ॥೩೨॥

ಊರಬಿಟ್ಟ ಜಮಾದಾರ । ದೂರ ಹೋಗಿ ಇಳದಿದ್ದರೋ
ಪಾರಾ ಮಾಡತಿದ್ದರೋ ಸುತ್ತೆಲ್ಲ
ಆರ ತಾಸ ರಾತ್ರಿ ತನಕ

ಧೀರಮಾಡಿ ಪಾರಾ ಕಾದ
ನಿದ್ದಿ ಅಮಲ ಬಹಳ ಹತ್ತಿತು ಜೋರಾ
ರಾಯಪ್ಪನ ದಂಡ ಹೋಗಿ ಹಾಕಿತು ಮುತ್ತಿಗಿ ಜೇರಾ
ಗುಡಸಲದಾಗ ಜಮಾದಾರ
ಅಡಸರ ಬಡಸರ ಅಡಿಗಿಕೊಂಡೋ
ಅಡರಾಸಿ ಬಿಟ್ಟಾನೋ ಫಕರೂಸಾ
ಕೊಲ್ಲಬೇಡೋ ರಾಯಪ್ಪ ನಾ ನಿನ್ನ ಕೂಸಾ
ಮೊದಲ ಇತ್ತೋ ಒಲ್ಲದ ಮನಸಾ
ವಾಲಿಕಾರಾ ಕರ್ಯಾಕ ಬಂದೋ
ಮಾಲಿಹಾಕಿ ಬಿಟ್ಟೋ ಮಾಮಲೇದಾರ
ನಿನ್ನ ಮೇಲೆ ಎರಡಿದ್ದರ ನೋಡಿಕೊಳ್ಳಲೋ ದೇವರ ॥೩೩॥

ರಾಯಪ್ಪ ನಡಿಸ್ಯಾನೋ ರಾಮ ವಚನವ ತಾನು
ಜೀವ ಹೊಡಿಲಿಲ್ಲ ಜಮಾದಾರಂದು
ಇಷ್ಟ ಆತ್ಯೊ ಜಮಾದಾರಾ
ನೆಟ್ಟಗ್ಹೋದೋ ಕಚೇರಿಗೆ । ಕೈ
ಮುಟ್ಟಿ ಹಿಡಿಲಿಲ್ಲೋ ಸದರಾ
ಅಬ್ಬರ ಬಹಳೋ ರಾಯಪ್ಪಗ
ಒಬ್ಬರಿಲ್ಲೋ ಇದರ
ಜೀವ ಹೊಡಿಲಿಲ್ಲ ಜಮಾದಾರನ । ರಾಯಪ್ಪನ
ಹ್ಯಾವದ ಬಳ್ಳಿ ಹಬ್ಬಲೋ । ॥೩೪॥

ಮೆಟ್ಟ ಹತ್ತಿದ ನೋಡಿ । ಸಿಟ್ಟಿಗೆದ್ದ ಪಾರ್ಟಿವರು
ರಟ್ಟಿನ ಹಿಡದ ಒಗದಾರೋ
ರಾಯಪ್ಪ ಆದಾನ ಸಣ್ಣಾ
ನನ್ನ ಬಡಿಬೇಡೋ ನಮ್ಮಣ್ಣಾ
ಮೆಲ್ಲಕ ಇಳುತೇನೋ ನಾನು ಮೆಟ್ಟಾ
ಅಂತ ರಾಯಪ್ಪ ಮನದಾಗ ಆಗಿದಾನ ಸಿಟ್ಟಾ
ಸಣ್ಣವಾಗಿ ಮೆಟ್ಟನಿಳದೋ

ಟಣ್ಣನೆ ಗುಡಿಸಲಕ ಜಿಗದೋ
ಟೊಣ್ಣೆ ಚಲ್ಲಿದಾನೋ ಮುಕ್ಕಟ್ಟ
ಪಾರ್ಟಿ ಮಂದಿ ಬಾಯ ಹಿಡದಿತೊ ಬಿಟ್ಟ ಬಿಟ್ಟ
ಸಿಟ್ಟು ಬಂತೋ ರಾಯಪ್ಪಗ
ಅಷ್ಟು ಮಂದಿನ ಸವರಿಬಿಟ್ಟಾ
ಜೀವದರಿಸೀಲೆ ತಾ ಒಬ್ಬನ ಬಿಟ್ಟ
ರಾಯಪ್ಪ ಚಂಡ ಕೋದೊ ತನ್ನ ಕೈಯ ಮುಟ್ಟಿ
ರಟ್ಟಿನ ಹಿಡದ ಒಗೆದು ಹೋದದ್ದು ನೋಡಿ
ಸಿಟ್ಟಿಗೆದ್ದ ಶಿರವ ಸವರಿದನೋ ॥೩೫॥

ಮುದ್ದಾಮ ಬಂದಾವೊ ಎಳಿಯ ಗಬ್ಬದ ಬೇಟ್ಯೊ
ಬುದ್ಧ ಕರಿಯವ್ವಗ ಕಡಿಯದಕ
ಇನ್ನೊಂದ ಗಂತಿ ಜನರಿಗೆಲ್ಲಾ
ಪರಾಳ ಜೀನಸಾ ತರಸಿದಾನೋ
ಉಂಡಿ ಬೆಂಡು ಬೆನಕಾ ಬೇಕಾದಷ್ಟ
ಚಿನ್ನಿ ಸಕ್ಕರಿ ಎಮ್ಮಿ ಹಾಲಾ ಬುಂದೇ ಹತ್ತಿದಷ್ಟ
ಊಟಾ ಮಾಡಿ ರಾಶಿ ತಿರುವಿದಾನೋ ಮುಕ್ಕಟ್ಟಾ
ರಾಯಪ್ಪ ಮುತ್ತೊದ್ಯಾರನ ಕಳಿವಿದೋ ಮನಿಮುಟ್ಟಾ
ಖುದ್ದ ಕರಿಯವ್ವಗ ಬೇಟಿ ಕಡಿಯೂದಕ
ಹೋಗಿ ಇದ್ದಪ್ಪ ವರವ ಬೇಡಿದನೋ ॥೩೬॥

ದುಂಡ ರುಟಗಿನ ಮಾಡಿ
ಜೋಡ ಬಂಡಿನ ಹೂಡಿ
ಹಾಡೂತ ಥಾದಿ ಹಿಡಿದಾರೊ
ವಾರಿಗಿ ಗೆಣಿಯಾರು ಕೂಡಿ ವಾದ ಹಾಕೂತ ನಡದಾರೋ
ಭೇದ ಇಲ್ಲದ್ಹಂಗ
ಒಬ್ಬರಿಗೆ ಅಂಜ ಬೇಡೋ ರಾಯಪ್ಪ ನೀನು ಹಿಂದಕ ತಿರಿಗಿ
ಸೂರಿಮಾಡೋ ಸೋಲ್ಜರನೆಲ್ಲಾ ಸಾರಿ ಹೇಳಿ ಹೊಳ್ಳಿ ನಿಂತ
ಕುಲಕರ್ಣಿ ಆದಾನೆನೋ ನಮಗ್ದ ಮತ್ತ

ಈಗಿನ ವೇಳೇಕ ಭಗವಾನ ತಂದಾನೋ ಎಂಥ ಹೊತ್ತ
ಹಾಡೂತ ಹಾದಿ ಹಿಡಿದು ಅಮಟೂರಿಗ್ಹೋಗೆ
ಜೋಡೆ ಹ್ಗೆಯವನು ತುಂಬಿದರೋ ॥೩೭॥

ತಳ್ಳಿ ಮಾಡೂತ ರಾಯಾ
ಹಳ್ಳಿ ಹಳ್ಳಿಗೆ ನಡದಾನೋ
ಕೊಳ್ಳಿ ಕೊಟ್ಟಾನೋ ಕುಲಕಣ್ಣಿಗೆ
ಬಾಳಪ್ಪ ಕುಲಕರಣಿ ಬಡಕೊಂತಾನೊ ಬಾಯ ಬಾಯ
ಹಾಳ ಮಾಡಿದ ಜೋಳದ ಪಡವನೆಲ್ಲಾ
ಕಾಳ ತಿನ್ನಾಕಿಲ್ಲೋ ಹೋಗಿ ಸೇರೂನ್ಯಾವ ನಾಡಾ
ಅಗಸಿ ಮುಂದಿನ ಹಗೆನೆಲ್ಲಾ ಯುಗತಿಲಿಂದ ತಗಿಸ್ಯಾನಪ್ಪ
ನುಗುಸಿಕೊಟ್ಟೊ ಮಂದಿಗೂಡ ನನ್ನ
ಬಗಿಸಿಲೆ ಬಗಿಸಿಲೆ ಕೊಟ್ಟು ಹಾಳಮಾಡಿದ ಎನ್ನೆಲ್ಲಾ ಪಡಾ
ಕೊಳ್ಳಿ ಕೊಟ್ಟಾನೊ ಕುಲಕರ್ಣಿಗೆ ರಾಯಪ್ಪ
ಹೊಳ್ಳಿ ಜ್ವಾಕೆಂತ ಹೇಳಿದನೋ ॥೩೮॥

ತಾಯಿ ಪಾದಕ ಬಿದ್ದ ಅಳತಾನೋ ರಾಯಪ್ಪ
ನನ್ನ ಮರಿ ತಾಯಿ ಹಡದವ್ವ
ಹಡೆದು ನಮ್ಮನ್ನ ಸಲುವಿದೆವ್ವ
ದುಡದ ಅನ್ನಾ ಹಾಕಲಿಲ್ಲ
ಪಡೆದ ಬಂದಿದೆವ್ವ ಶಿವನಲ್ಲಿ ಇಂಥಾದನ್ನ
ನಿನ್ನ ಕಂದ ಹೋಗತೀನೊ ನಾನು ಕೈಮೀರಿ
ತಕ್ಕಿಯೊಳಗ ಹಿಡಕೊಂಡು । ಬಿಕ್ಕಿ ಬಿಕ್ಕಿ ಅಳತಾಳೊ
ಉಕ್ಕಿಹೋದ್ಹಾಂಗ ಹಾಲ ಸ್ವಾರಿ
ನನ್ನ ಅಕ್ಕರತಿ ತೀರಲಿಲ್ಲೊ
ಇನ್ನ ಉಮೆದಾರಾ
ನನ್ನ ಮರಿ ತಾಯಿ ಹಡದವ್ವ ನಾ ಇನ್ನ
ಮಡಿದೆಂತ ತಿಳಿಯ ಮನಸೀಗೆ ॥೩೯॥

ಮಗನ ಮಾತ ಕೇಳಿ ತಾಯಿ ಗಗನಕ್ಕ ಹಾರಿದಳೊ
ಅಗಣಿತ ದುಃಖ ಮಾಡಿದಳೊ
ಅಯ್ಯೊ ಮಗನೇ ರಾಯಾ ನಿನ್ನ
ಕೈಯ್ಯಾಗ ಹಿಡದ ಆಡಿಸಿ ನಾನು
ಬಾಯಿಗೆ ಹಾಕಿದಿನೆ ಹಾಲು ಸಕ್ಕರಿ ಬೆಲ್ಲಾ
ನನ್ನ ಕೈ ಮೀರಿ ಹೋಗತೀಯೋ ನನ್ನ ಬಾಲಾ
ಮಲಿಕುಡಿಸಿ ಮಾಯಾ ಹಚ್ಚಿ ಮಗ್ಗಲದಾಗ ಮಲಗಿಸಿ ನಿನ್ನ
ತೆಲಿಗೆ ಎಣ್ಣಿ ಹಚ್ಚಿ ಎರದಿದ್ನೋ
ನನ್ನ ಕಣ್ಣಮುಂದ ಆಡಿ ಉಂಡು ಕಳೆಯೋ ಕಾಲಾ
ಇನ್ನ ತಳ್ಳಿ ಮಾಡಬ್ಯಾಡೋ ಸರಕಾರದ ಮ್ಯಾಲಾ
ಅಗಣಿತ ದುಃಖ ಮಾಡಿದಾಳೋ ತಾಯವ್ವ
ಮಗನ ಮಗನಂತ ಹಲಬಿದಳೋ ॥೪೦॥

ಹಡದವ್ವಗ್ಹೇಳಿ ನಡದಾನೋ ರಾಯಪ್ಪ
ನಡುವಿನ್ಯಾಗ ಕತ್ತಿಸಿಗಸಿದನೋ
ಬಾಕು ಚೂರಿ ಪಿಸ್ತೂಲ ಬಂದೂಕ
ಕೈಯಾಗ ಹಿಡಕೊಂಡ ಡಾಲಪಟ್ಟ ಬಗಲಾಗ ಸಿಸ್ತಾ
ಮೇಲ ನಟಕಟ್ಟ ಸುತ್ತಿದನೋ ಬಂದೋಬಸ್ತಾ
ವಾರಿಕಟ್ಟಾ ಗೀರ ಗಂಧ ಕ್ವಾರಿ ಮೀಸಿ ತಿದ್ದಿದನು
ಮಾರಿನೋಡಿ ಮರಗಿತು ಮಂದಿ ಮಸ್ತಾ
ವಾರಿಗಿ ಗೆಳಿಯಾರು ಮಾಡುವ ಹೊಂಟಾರೊ ಕಸ್ತಾ
ನಡುವಿನ್ಯಾಗ ಕತ್ತಿ ಸಿಗಿಸಿದನೋ ರಾಯಪ್ಪ
ತಡುವಿದರ ಮ್ಯಾಲ ಹೋಗತಾನೋ ॥೪೧॥

ದಂಡ ಕಟ್ಟಾಕ ರಾಯ ಮುಂಡಾಗಿ ನಡದಾನೊ
ಬಂಡಾಯದ ನಾಡ ಮೊಗಲಾಯೋ
ಹನ್ನೆರಡುಗಾವುದ ಹಾದಿ
ಹನ್ನೊಂದ ತಾಸಿಗಿ ಮೊದಲಾಯಿಕ್ಹೋಗಿ
ಮಹಾರಾಜನ ಮುಂದ ಹೋಗಿ ನಿಂತಾನೋ ಬೇಸಿ

ಎಲ್ಲ್ಯಾವ ಯಾವ ತಮ್ಮ ಕೂನಾ ಹೇಳೋ ನಿಮ್ಮದ್ಯಾವ ದೇಶ
ಪುಂಡ ಕಿತ್ತೂರ ನಾಡ ಒಳಗ
ರಂಡಿಮುಂಡಿ ಮಗ ನಾನು
ಸಂಗೊಳ್ಳಿ ರಾಯಪ್ಪ ಇದ್ದಾನ ಬೇಸಿ
ದಂಡಿಗಾಸೆ ಮಾಡಿ ಬಂದೇನಪ್ಪ ಅಡರಾಸಿ ॥೪೨॥

ಬಂಡಾಯದ ನಾಡ ಮೊಗಲಾಯೋ
ಮೊಗಲಾಯದ ಮಹಾರಾಜಾ
ಕಣ್ಣಿ ಕೊಡತಿದ್ದೋ ಚುಳಿಚೊಡಕ ರಾಯಣ್ಣನ ನುಡಿ ಕೇಳೆ
ನಕ್ಕಾನೋ ಮಹಾರಾಜಾ ಏನ ಬಗೆ ನಡದ ಬಂದಿಲ್ಲ್ಯೋ
ಇರಬೇಕ ಚಾಕರಿ ಅಂತ ಬಂದೇನ ಶ್ರೀಮಂತ
ಕಿತ್ತೂರ ನಾಡಾಗ ರಾಣಿ ಕಾಯಿದೇವ ಜಬರ ಬಹಳ ಬಂತೋ
ಬೇತ ಮಾಡ್ಯಾರ ಗಾತ ನನಗ ಬಂತೊ ಶೇಕ
ಮೂರು ಹೊಲದ ಪಾಳೆ ಕೊಡಬಾರದಂತ ಮಾಡೇನೋ ಮಸಲತ್ತ
ನೋಡಬೇಕೋ ಕಸರತ್ತ
ಇಂಗರೇಜವರ ಓಸ ಹುರದ ನಾಸ ಮಾಡೇನಂತಾ
ಏನ ಬಗೆ ನಡದ ಬಂದಿಲ್ಲಿ ರಾಯಪ್ಪ ಚಾಕರಿ ಇರುವ ರಕಮೇನೋ ॥೪೩॥

ಚಾಕರಿ ಇರವೂದಕ ನಾಕ ದಿನ ಮುದ್ದತ್ತೊ
ಬಿಡ ನೋಡೋನ ಹೆಬ್ಬುಲಿ ಕಸರತ್ತೋ
ಬೇಡ ಬೇಡೋ ರಾಯಪ್ಪ
ನಾಡ ಮೇಗಿನ ಜನರೆಲ್ಲಾ
ಮೋಗ ಆಗಿ ಹೋಗಿದಾರದರಿಂದ
ಮಣ್ಣ ತಿಂದಿಯೋ ರಾಯಪ್ಪ ಹುಲಿ ಸಂಗಟ ಬಿದ್ದು
ಖನಗಾಂವಿ ಕನ್ನವ್ವಗ ಶರಣಾ
ಕಕ್ಕೇರಿ ಬಿಷ್ಟವ್ವಗ ಶರಣಾ
ಬಾಲದಂಡ ಬಂಗಾರಿ ಗಿರಿಗೆ ಶರಣಾ
ಅರಸ ನಿಮ್ಮ ಅಂತಃ ಕರುಣಾ
ಬಿಡ ನೋಡೂನ ಹೆಬ್ಬುಲಿ ಕಸರತ್ತೋ ಮಹಾರಾಜಾ
ಡಂಗುರ ಹೊಡಿಸೋ ಜನಕೆಲ್ಲಾ ॥೪೪॥

ನಾಳೆ ಮೂರ ತಾಸ ಸಂಜಿ ವೇಳೆದಲ್ಲೇ
ರಣಗಂಬ ಹೊಡೆ ರಾಯಣ್ಣಂದು
ನಾಡ ಮೇಗಿನ ಜನರೆಲ್ಲಾ ನೋಡಬೇಕೆಂತ ಬಂದಾರೋ
ಮಾಡಿದ್ಹಾಂಗ ಅತ್ಯೋ ಕುಸ್ತಿ ಕಣಾ
ನಡಕ ರಣಗಂಬಾ ಹೂಡೆ ಬೇಡ್ಯಾನ ಅಂತಃಕರಣ
ಚಣಾ ಹೊತ್ತ ಹತ್ತಲಿಲ್ಲೋ ಕಣದಾಗ ಬಿಟ್ಟಾರ ಹುಲಿ
ಟಣಾ ಟಣಾ ಜಿಗಿದ ಬಂತೋ ಮೇಲಿ
ಕಡತ ಬಿತ್ತೊ ಹೆಬ್ಬುಲಿ ಎಡಗಡಿ ಕಿವಿ ಮೇಲಿ
ರಣಗಂಬ ಹೂಡಿ ರಾಯಣ್ಣ ಮಾಡಿದ ಕಾಳಗ
ಕಸ್ತೂರಿಯೊಳಗ ಕಸರಿಲ್ಲೊ ॥೪೫॥

ಹೊಡದ ಹೆಬ್ಬುಲಿ ಉಬ್ಬಿ ತಾ ನಿಂತಾನೋ
ಅಬ್ಬರ ಬಹಳೊ ರಾಯಣ್ಣಂದು
ಹುಚ್ಚ ಆದಿತೊ ಜನರೆಲ್ಲಾ
ಮುಂದೆ ಎದ್ದೋ ಮಹರಾಜಾ
ಹೆಚ್ಚಿನವ ರಾಯಾ ನೀ ಮಂಡ
ರಾಯಪ್ಪಗ ಬಲಿ ಬಿತ್ತೋ ಜಲದಂಡಂದ
ಏನ ಬೇಡತಿ ಬೇಡೋ ನೀನು
ಹತ್ತಿದಷ್ಟು ಭೂಮಿ ತಗೋ
ಮತ್ತ ಕೊಡತೇನ ಬಂಗಾರ ಬೆಳ್ಳಿನಾ
ಇದರ ಮೀರಿ ಇನಾಮ ಉಣ್ಣೊ ಐದ ಹಳ್ಳಿನಾ
ತಳ್ಳಿ ಮಾಡು ರಾಯಾ ನನಗ ಹಳ್ಳಿ ಗಳಸೂದಾಗದೇನು
ಮತ್ತ ಹೇಳೋ ಮಾಡೇನೋ ತಳ್ಳಿನಾ
ಹುಕುಮ ಕೊಡೊ ಕಣ್ಣಕಟ್ಟ ಮಾಡತೇನೋ ಇನ್ನ
ಅಬ್ಬರ ಬಹಳೋ ರಾಯಪ್ಪನ ಮಸಲತ್ತು
ಕಣ್ಣಿ ಕಟ್ಟ ಮಾಡು ಬಲು ಬೇತಾ ॥೪೬॥

ಶಸ್ತ್ರ ಮಲಗಂಬ ಸಿಸ್ತಾಗಿ ಹುಗದಾರೊ
ಉಚ್ಚಿ ಬಿಳೋ ರಾಯಾ ಬಡ್ಡಿಂದ

ನೊಣ ಕುಂತರ ನವ ಚಿದ್ದರಾತೋ
ಹೆಣಾ ಏನು ಉಳ್ಯಾಕಿಲ್ಲಾ
ಹಂಚಿಕಿ ತಗದೋ ರಾಯಪ್ಪ ತಾ ಜಾಣಾ
ಶಸ್ತ್ರದ ಕೆಂಬ ಇತ್ತೋ ಮೂವತ್ತೆರಡು ಮಣಾ
ಖನಗಾಂವಿ ಕನ್ನವ್ವಗ ಶರಣಾ ಕಕ್ಕೇರಿ ಬಿಷ್ಟವ್ವಗ ಶರಣಾ
ಇದರ ಒಳಗ ಉಳದ ಬಂದು ಹರದೇನು ನಿಮ್ಮ ರಿಣಾ
ಹುಲಿಯಂಥ ರಾಯಪ್ಪ ಬಲಿಯೊಳಗ ದಾಟುವದಕಾಗಿ
ಇಲಿಯಾಗಿ ಸರದ ನಿಂತೋ ಅಲ್ಲೆ
ರಾಯಪ್ಪ ಉಚ್ಚ ಹಾದೊ ಜೋಡ ಇಮ್ಮಡಿಕೀಲೆ
ಉಚ್ಚಿಬೀಳು ರಯ ಬಡ್ಡಿಂದ ಹಾಯ್ದಿರ ॥೪೭॥

ಸರಿ ಬಂತೊ ಸದರೀಗೆ ಕುರ್ಚಿ ಇಳದಾನೋ ತಾನು
ಅರದೇನೋ ನಿನ್ನ ಸಲುಹೂದ
ಚುಳಚವಾಡ ಬರಮರುಖಾಡ[೧] ಗಳಿಸಿದಾನೋ ನಾಡ
ಹುಕುಮ ಕೊಟ್ಟೆನೋ ನೋಡೋ ಕಣ್ಣಿಕಟ್ಟ ಮಾಡೊ
ಚುಳಚವಾಡ ಭರಮನ ಚಂಡ ತೊಗೊಂಡ ಬಂದ ನನ್ನ ಕೈಯಾಗ ಕೊಡೊ
ಇಷ್ಟು ಅದರ ಪಾಡೋ ಹೆಚ್ಚಿನ್ನು ನನಗ ಬ್ಯಾಡೊ
ಇಷ್ಟು ಹರಕಿ ಕೈಗೂಡಿ ಬಂದ ನೀನು ನಾನು ಜೋಡೊ
ಅರಿದೇನೊ ನಿನ್ನ ಸಲಹೂದ ಹಿಂಗಾದರ
ಬಿರುದಿನ ಕಾಳಿ ಹಿಡಿಸುವೆನೋ ॥೪೮॥

ರಣದಾಗ ರಾಯಪ್ಪ ಈಸಾಡಬೇಕೆಂತ
ಬೀಸಿ ಹೇಳಿ ನಿಂತೋ ತಲಿಗೊಟ್ಟೊ
ಮೂರ ದಿನ ಮುಕ್ಕಾಮ ಆತೊ । ನೀರ ರಾಯಪ್ಪ ಹಿಡಿಯಲಿಲ್ಲಾ
ಮುನ್ನೂರ ಲಕ್ಕಸ ಕಣ್ಣ ಆತೋ ಕಟ್ಟಾ
ಉಮೇದಾತೊ ರಾಯಪ್ಪಗ ಉಂಡಕಿಂತ ಗಟ್ಟ್ಯೋ
ಹರಕ ಸೀರಿ ಉಟ್ಟುದಾನ ಮುರಕ ಹಡ್ಡಲಗಿ ಹಿಡಿದಾನು

---

೧. ಇದರ ಶುದ್ಧರೂಪ ಭರಮಗೌಡ ಇರಬಹುದೇ?

ಸೋಗ ಆದ ಜೋಗಮ್ಮನ್ಹಾಂಗ
ಕತ್ತಿ ನಡುವಿಗೆ ಸುತ್ತಿದಾನೋ ಗೊತ್ತ ಹತ್ತದ್ಹಾಂಗ
ಬೀಸಿ ಹೇಳಿ ನಿಂತೊ ತಲಿಗೊಟ್ಟ ರಾಯಪ್ಪ
ಚುಳಚವಾಡದ ದಾರಿ ಮೆಟ್ಟಿದನು ॥೪೯॥

ಎಚ್ಚರಾತೋ ಭರಮಗ । ಎದ್ದು ನೋಡ್ಯಾನು ತಾನು
ಮುದ್ದಾಮ ಕಣ್ಣ ಬರಲಿಲ್ಲೋ
ಸ್ವಪ್ನ ಬಿತ್ತೋ ಭರಮಣ್ಣಾಗ । ಸಾರಿ ತಾನು ಹೇಳತಾನೋ
ಸಾವಿರ ನಿಕ್ಕಸ ದಂಡ ಐತೊ ನಂದಾ ।
ಸಾರಿ ಹೇಳಿ ತರ ತರ್ರಿ ಅಂತಾನೋ ಮೊಗಲಾಯಿದವನ ಚಂಡ
ಉಮೇದಾತೋ ಬಂಟರಿಗೆಲ್ಲಾ ಉಂಡಂಕಿಂತ ಹೆಚ್ಚಿನದಾತೋ
ಪುಂಡರೆಲ್ಲಾ ಹೊಂಡೋನಂತಾರಿಂದ ।
ತಯಾರಾಗರಿ ಕತ್ತಿ ಡಾಲ ಬರ್ಚಿಲಿಂದ
ಮುದ್ದಾಮ ಕಣ್ಣ ಬರಲಿಲ್ಲೊ ಬಂಟರಿರಾ
ಎದ್ದು ಮೊಗಲಾಯಿ ಬಡತರ್ರಿ ॥೫೦॥

ಕೆಂಡದಂಥ ಬರಮಣ್ಣಾ ದಂಡಿಗೆ ಅಪ್ಪಣಿ ಮಾಡಿ
ಬಂಡಾಯ ಮಾಡುದಕ ನಡದಾನೋ
ಚುಳಚವಾಡ ಭರಮನ ದಂಡ ದಾರಿ ಹಿಡದ ಬರುವಾಗ
ಕೆಂದೂಳ ಹಾರಿತ ಆಕಾಶಕ ಅಬ್ಬರದಿಂದ
ಕಬರಿಲ್ಲೋ ರಾಯಪ್ಪಗ ನಿಂತೋ ಮುಂದ
ಕೂನಾ ತಪ್ಪಿಸಿ ರಾಯಪ್ಪ ತಾನಾಗಿ ಕೇಳತಾನೊ
ಏನ ಬಗೆ ಬಂದಿರಪ್ಪಾ ನೀವು ।
ಹುಲ್ಲು ಕಡ್ಡಿ ಆಗೇತೇನೊ ನಿನ್ನ ದಂಡಿನ ಜೀವ
ದಂಡಿಗೆ ದೊಡ್ಡವ ಭರಮಣ್ಣ ಪುಂಡನಾಗಿ ಇದ್ದ ಮುಂದ
ಚಂಡ ಹಿಡದ ಒಗೆಯಿರಿ ಅಂತಾನೋ ಇಂದ
ಹೇಸಿ ರಂಡಿ ಯಾಸಿ ಮಾತ ಆಡ್ಯಾಳ ನನ್ನ ಮುಂದ
ಬಂಡಾಯ ಮಾಡಾಕ ನಡದಾನೊ ಭರಮಣ್ಣಾ
ರಾಯಪ್ಪನ ಗುರತಾ ಅರಿಯಾನೊ ॥೫೧॥

ಘಟ್ಟೆದಿ ರಾಮಪ್ಪ ಭೆಟ್ಟ್ಯಾಗಿ ಭರಮಣ್ಣನ
ಬಿಟ್ಟು ಹೋದಾನೋ ಮಂದಿನ್ನ
ಚುಳಚವಾಡ ಗುಡಾಗ್ಹೋಗಿ ಸೋಗನೆಲ್ಲ ಗತದ ಒಗೆದು
ಅವತಾರಮೋ ರಾಯಪ್ಪ ಮುಂಚಿನ್ಹಂಗ
ರಾಯಪ್ಪ ಸಾಗಿ ಬಂದೋ ಭರಮನ ದಂಡಿನ್ಹಿಂದ
ಹಿಂದ ಮಾರ್ಯಾಗಿ ಹೊಡದರ ನನ್ನ ಕಸರತ್ತ ಅದ್ಹಾಂಗಲ್ಲಂದ
ಆದರ ಆಗಲಿ ಇಬ್ಬರ ಮಾರಿ ಮುಂದ ಅಂತ
ರಾಯಪ್ಪ ತಟ್ಟ ಹಾದ ಬಂದೊ ಭರಮನ ಮುಂದ
ಕುದುರಿ ತರಬಿ ರಾಯಪ್ಪ ನದರಿಲದ್ಹಾಂಗ ಕೇಳತಾನೋ
ಬೆದರಿ ಹೋದಿತೋ ನಿನ್ನ ದಂಡಗಟ್ಟಿ
ದಂಡಿಗೆಲ್ಲ ಹೇಳತಾನ ನಿಂದರಿ ಕಣಕಟ್ಟಿ
ಬಿಟ್ಟು ಹೋದಾನೋ ಮಂದಿನ್ನ ರಾಯಪ್ಪ
ಘಟ್ಟ್ಯಾಗಿ ಕುದರಿ ತರಬಿದನೋ ॥೫೨॥

ಪರನಾಡ ಪಕ್ಷಿ ಬಂದೇನೋ ತಪ್ಪಿಸಿ
ಕಾಳಗಾಗಲೋ ಪುರಮಾಸಿ
ನಡಕ ಹೂಡೋ ರಣಗಂಬ ಕಣದಾಗೊಬ್ಬರೂ ಬ್ಯಾಡೋ
ತೀರಲೋ ನಂದು ನಿಂದು ಭೆಟ್ಟಿ
ರಾಯಪ್ಪ ಹೇಳತಾನೊ ಕಡತ ಮೂರ ಮೂರ ಘಟ್ಟಿ
ಕಾಳಗಾಗಲಿ ಪುರಮಾಸಿ ರಾಯಪ್ಪ
ಹೇಳಿ ಬಿಟ್ಟಾನೋ ತಳ ಸೋಸಿ ॥೫೩॥

ಕಟ್ಟಿದ ಕೂದಲ ಬಿಟ್ಟಾನೋ ಭರಮಣ್ಣ
ಕುಂಡಿ ಚಪ್ಪಳಕ ಬಡದಾವೊ
ಭರಮಣ್ಣ ನಿಂತಾನ ಕಡಿಲಾಕ ರಾಯಣ್ಣ ನಿಂತಾನ ಹಿಡಿಲಾಕ
ಹೊಡದಾನೋ ಭರಮಣ್ಣ ಪುರಮಾಸಿ
ಹಿಂಗಾಣಿ ಲಾಗ ಒಗದ ನಿಂತೊ ರಾಯಣ್ಣ ತಾ ಖುಷಿ
ಒಂದ ಕಡತ ಹೋತೋ ಹುಸಿ ಮತ್ತೊಂದು ಹೊಡದಾನೋ ಪುರಮಾಸಿ
ಮುಂಗಾಣಿ ಲಾಗ ಒಗದಾನೊ ಬೇಸಿ

ಭರಮಣ್ಣನ ಮೋರಿ ಮ್ಯಾಲ ಇಲ್ಲದಾತೊ ಆಶೆ
ಕುಂಡಿ ಚಪ್ಪಳಕ ಬಡದಾವೊ ಭರಮಣ್ಣ
ಮೊರೆ ಸಣ್ಣ ಮಾಡಿ ಮರುಗಿದನು ॥೫೪॥

ಹೊಳ್ಳಿ ಬಂದ ರಾಯಪ್ಪ ಬಾಯ ಮಾಡಿ ಹೇಳಿದಾನೊ
ಕೈಯ ಬಿಡದ ನಾನು ಓಡುವೆನು
ಭರಮಣ್ಣ ಅದಾನ ಖುಷಿ ಮಳ್ಳಗುರುಬ ರಾಯಾ ಹೇಸಿ
ಓಡಿ ಹೋಗುವವನ ಒಗೆಯುತೇನೋ ಗೀಸಿ
ಅಂತ ಭರಮಣ್ಣಾ ಮನದಾಗ ಆಗಿದ್ದಾನ ಖುಷಿ
ಓಡುತ ಓಡುತ ರಾಯಪ್ಪ ಅಂತರಿಲೆ ಹಾರಿದನೊ
ಜಂತರ ಲಾಗ ಒಗದಾನೋ ಬೇಸಿ
ಕಡತದೊಳಗ ಮುಂದ ಹೋದ ಭರಮಣ್ಣ ಅಡರಾಸಿ
ಮುಂದ ಹೋಗು ಭರಮಣ್ಣನ ಹಿಂದ ಹಿಂದ ರಾಯಪ್ಪ ಸಾಗಿ ಹೋಗಿ
ಜಾಡಿಸಿ ಒದ್ದೊ ಟೊಂಕಕ್ಕನುಸರಿಸಿ
ಭರಮಣ್ಣ ಮುಂದಕ ಬಿದ್ದ ಕಚ್ಚಿದ ಅರ್ಧ ತುಟಿ
ಸಾರಿ ಹೇಳಿ ಜನಕೆಲ್ಲಾ ಈರಗಾಲ ಎದಿಮ್ಯಾಗ ಕೊಟ್ಟ
ಎಡಗೈಲೆ ಹಿಡದಾನೋ ಅವನ ಜುಟ್ಟಾ
ರಾಯಪ್ಪ ಚಂಡ ಕೊಯ್ದೋ ತನ್ನ ಕೈಯ ಮುಟ್ಟ
ಕೈಯ ಬಡದ ನಾನು ಓಡುವೆನೋ ರಾಯಪ್ಪ
ಭಯವಿಲ್ಲದೆ ಶಿರವ ಕೊಯ್ದಾನೋ ॥೫೫॥

ಪುಂಡ ಭರಮನ ದಂಡು ಕುರಿ ಹಂಥಾ ಹಿಂಡು
ಆಗಿ ನಿಂತಿತೋ ಬಲು ಬಂಡು
ರಾಯಪ್ಪಗ ಬಂತೋ ಬರಿ ಭರಮನ ದಂಡ ಕುರಿ ಸರಿ
ಅಂತ ತಿಳಿದು ನಿಂತೋ ರಾಯಣ್ಣ ದೋರಿ
ಇಷ್ಟು ಮಂದ್ಯಾಗ ಕಾಣಲ್ಲೊ ನನ್ನ ಸರಿ
ಅನ್ನಕಾಶೆ ಮಾಡಿ ಇವರು ಬೆನ್ನುಹತ್ತಿ ಬಂದಿರುವರು
ಪುಣ್ಯ ಮುಟ್ಟಾಕಿಲ್ಲೊ ಏಕ ಸರಿ

ಇಷ್ಟು ಮಂದಿ ಹತಾರ ಕಸಿದ ಕಟ್ಟಬೇಕಂತಾನ ಹೊರಿ
ಆಗಿ ನಿಂತಿತು ಬಲಿ ಭಂಡ ಭರಮನ ದಂಡ
ಕತ್ತಿ ಚಲ್ಲಿ ಕೈಯ ಮುಗದೀತೊ ॥೫೬॥

ಚಂಡ ತಾ ತಗೊಂಡ ದಂಡಿಗಪ್ಪಣಿ ಮಾಡಿ
ಹಿಂದಕ ನಾಲ್ವರನ ಕರದಾನೋ
ಕಟ್ಟಿದ ಕತ್ತಿಯ ಹೊರಿಗೋಳ ಹೊರಸಿಗೊಂಡ ರಾಯಪ್ಪ
ಹುರುಪೀಲೆ ಬಂದೋ ತಾನು ಅಗಸ್ಯಾಗ್ಹಾದ
ರಾಯಪ್ಪ ಚಂಡ ಓದ ಇಟ್ಟೋ ಅರಸನ ಮುಂದ
ಚಂಡ ನೋಡಿ ಮಹಾರಾಜ ಚಂದವಾಗಿ ಹೇಳತಾನು
ಏನ ಬೇಡತಿ ಬೇಡೋ ನೀ ಇಂದ
ಹಿಂದಕ ನಾಲ್ವರನ ಕರದಾನೋ ರಾಯಪ್ಪ
ಮೊಗಲಾಯದ ಸೇರಿಯ ಹರದಾನೋ ॥೫೭॥

ಚಂಡ ನೋಡಿ ಮಹಾರಾಜಾ ಚಂದಾಗಿ ಹೇಳಿದನೋ
ಬಂದೂಬಸ್ತಪ್ಪ ನಿನ್ನ ತಳ್ಳ್ಯೋ ಕೇಳಪ್ಪ ನೀ ರಾಯಾ
ಎಳೆಮ್ಮಿ ಹೈನಾ ನಾ ಉಣಿಸೇನೋ ಗುಣಾ ಬೆಳಸತೇನೋ
ನಿಂತಪಟ್ಟ ನಿಂದು । ಕುಂತ ಪಟ್ಟ ನಂದು ನಿನಗ ಕೊಟೆನೋ ಬರದಿಟ್ಟುದೇನೋ
ಸಿಟ್ಟ ಬಂತೋ ರಾಯಪ್ಪ ಸದರಿನ ಕಟ್ಟಿ ನಾ ಬಿಟ್ಟೇನೋ ದಂಡ ಕಟ್ಟತೇನೋ
ನನ್ನಮುಂಡ ಕಿತ್ತೂರ ನಾಡಾಗ ಮುತ್ತಿನ್ಹಂಥ ದಂಡ ಬಿಟ್ಟೇನೋ ನದರ ಇಟ್ಟುದೇನೊ
ಎಂಥೆಂಥ ಬಂಟರು ಒಂಟಗೆ ಸಬರ ಹಾಕಿ ಗಂಟಿ ಸರಪಣಿ ನಾನು ಕೊಟ್ಟೇನೋ
ಬೆಳಸಿ ಇಟ್ಟುದೇನೋ ಇಷ್ಟು ದಂಡ
ಇದ್ದು ರಾಯಪ್ಪ ಅಂಜಿಕೊಂಡ
ಒಳಗಿದ್ದೇನೋ ಬೆನ್ನ ಬಿದ್ದುದೇನೋ
ಬಂದುಬಸ್ತಪ್ಪ ನೀ ತಳ್ಳಿ ಮಾಡಿದರ ಇಂದಿಗಿ
ಮೊಗಲಾಯ ಮುಂದಾತೋ ॥೫೮॥

ಆರಿಸಿ ಕೊಡುವೆನೋ ರಾಯಾ ಬೇಕಾದಷ್ಟು ದಂಡೊ
ಅರಸುಕಿನಾಳೋ ನನ್ನಲ್ಲೆ

ಸಾವಿರ ದಂಡ ಅತಿ ನಾಡ ಸಾಸಮಾಡಿ ಕೊಡುವೆನಪ್ಪ
ಮೀರಿದ ಮಂದಿ ತಗೋ ಒಂದ ನೂರಾ
ದಂಡ ಕಟ್ಟಿ ನಿನ್ನ ನಾಡಿಗೆ ಹೋಗೊ ಬಹಳ ದೂರಾ
ಸದ್ಯದಲ್ಲಿ ಸಾವಿರ ಮಂದಿ ಸರಾರಾರ
ಹೊರಗ ತಗದ ಹತಿಯಾರ ಕೊಟ್ಟನ ತಾರಬಾರ
ರಾಯಪ್ಪಂತಾನ ಬಡಿಗಿ ತಾರೋ ನನಗೊಂದ ಹೆಂಥಾದಾರಾ
ಬಡಗಿ ಹಿಡದ ರಾಯಾ ದಡಗಮಾಡಿ ತಾ
ಗುಡಗ ಮಿಂಚಿದ್ಧಂಗ ಮಾಡಿದನೋ
ರೋಮುಬ್ಬಿ ರಾಯಾ ತಾ ನಿಂತಾನೋ
ಒಬ್ಬನ ಕಾಲ ಕಳದಾನೋ
ಅಷ್ಟು ದಂಡಿಗೆಲ್ಲಾ ಅಂಜಲಿಲ್ಲಾ ರಾಯಾ
ಮಂದಿ ಬೆದರಿಸ್ಯಾನೊ ಹೆಂಗ ಮದ್ದ ಜಡದ್ಧಂಗ
ಅರಸೂಕಿ ಆಳೋ ನನ್ನಲ್ಲಿ ಅಂದರ
ಬಿರಸ ಮಾತಾತೊ ಬಿಗದಾನೋ ॥೫೯॥

ನನಗ ಬೇಕೊ ರಾಜಾ ಕೆಡದಂತ ದಂಡು
ನನಗ ಹೆಚ್ಚಿನವರ ಪುಂಡೊ
ಬೇವಿನಕೊಪ್ಪದ ಚನಬಸಪ್ಪಗ ಬೇಸಿಮಾಡಿ ಪತ್ತರ ಬರಿಯೋ
[illegible]ಸಮಾಡಿ ರಾಯನ ಕೂಡಂತ ಒಳಗಿಂದೊಳಗ ಪತ್ರ ಬರಿಯೋ
ಪತ್ಥಂಗ ಅರಿತ ಬರದಾನೊ ಪತ್ತರ ರಾಜಾ ಕರದಾನ
ಸರಪೀರ ಸ್ವಾರನ್ನ ಮೀರಿದ ಕುದರಿ ಜೀನ ಬಿಗದ ಹತ್ತೊ
ನೂರ ಪತ್ರ ತೀರುತನಕಾ ಇಲ್ಲೋ ಪುರಸೊತ್ತು
ನೀ ಬಾರೋ ನನ್ನ ಚನ್ನಬಸು ಕೆಂಪ ಮೋತಿ ಸೊಲ್ಜರನ ಸೂರಿ ಮಾಡಿಸು
ನೀ ಬಂದ ಕೂಡಿದರ ನನ್ನ ಮನಸು ಹರಸೊ
ಲಗುಮಾಡಿ ನನ್ನ ಕೂಡ ನಿನ್ನ ಶಕ್ತಿ ತೋರಸೊ
ನನಕ ಹೆಚ್ಚಿನ ಕೆಂಡದಂಥ ದಂಡ ಐತ್ಯೊ ಕಿತ್ತೂರ ನಾಡಾಗೋ ॥೬೦॥

ಬಿಚ್ಚಗತ್ತಿ ಚನಬಸು ಕಿಚ್ಚಿಗಂಜವನಲ್ಲೊ
ಪಚ್ಚಗ ಕಣ್ಣ ತಗಿಲಿಲ್ಲೊ

ಪತ್ತರ ನೋಡಿ ಚನಬಸಣ್ಣ ಒತ್ತರದಿಂದ ಓಡಿಹೋದೋ
ನೀ ನಮ್ಮನ್ನ ಕರಸಿದ ಬಗಿ ಏನಾ
ಓಡಿ ಬಂದ ಈ ನಾಡ ಬಿದ್ಯೊ ನಿನಗ ನೀಗದ್ದೇನೋ
ಕೂಡಿಸಪ್ಪ ನಿನ್ನ ದಂಡ ಕುಣಿಸ್ಯಾಡೊನೋ
ಸೋಲ್ಜರನೆಲ್ಲಾ ಸುರಾಯಿ ಸಿಕಲಿ ಮಾಡಸೋ
ತಯಾರ ನಾನು ನೀನು ಕೂಡಿದರ ಮಾಡಾಣೇನೋ ನದರ
ಪಚ್ಚಗ ಕಣ್ಣ ತಗಿಲಿಲ್ಲೋ ತನ್ನ ಸತಿಯಾಳ
ಮದಿವಿ ಗುಳದಾಳಿ ಹರಕೊಂಡೋ
ರೋಮುಬ್ಬಿ ರಾಯಪ್ಪ ನಿಂತ ಕಣಕ ತಾ ತಲಿಗೊಟ್ಟ ।
ಸೋಲ್ಜರ ಓಸಾ ಹುರಿಯುದು ನನ ಗಟ್ಟಿ
ನೂರ ಮಂದಿ ಗೆಣಿಯಾರೆಲ್ಲ ಆಗರೋ ನನಗೆ ಬೆಟ್ಟಿ
ಹೆಚ್ಚಿನ ಬಂದೂಕ ಹೆಗಲಿನ ಮೇಲೆ ।
ಮಾತಾಡತಾರೋ ಜನ ತಮ್ಮ ಬಾಯಲೆ
ಬಂದೂಕತ್ಯೋ ಜೋಡಜಾಜೂಲಿ । ವೀರನ ॥೬೧॥

ಹಬಸ್ಯಾರ ಗಜವೀರಾ ಹಾರಿಹಂಥ ಹುಡಗೋ
ಮೀರಿ ನಿಂತಾನೊ ಬಂದೂಕಿಗೆ
ಬರಿಯೋ ರಾಜಾ ಪತ್ರ ಅವಗ ಸರವೀರಂಬು ಸ್ವಾರನ ಕರಿಯೋ
ವೀರನ ತರಿಸಿ ಕೊಟ್ಟರ ಉಮ್ಮೆದೊರಿಯೋ
ಎಷ್ಟೊ ದಂಡ ಕೂಡಿದರ ಹೊಡಿಯುತಾನ ಡರಿಯೋ
ಮದ್ದಿಂದಲೆ ಬಹಳ ಕೊಲಿಯೋ ಜಾಹಿರಾತಿ ನಾಡ
ಮೇಲೋ ಗದ್ದನಿ ಹೊಡದಂಗ ಗವಿಯನ್ನ ಹುಲಿಯೋ
ನಾವು ಮೂವರು ಕೂಡಿದರ ತಿಳಿಯಲಿಲ್ಲೋ ನೆಲಿಯೋ
ಗೂಡ ವಾದ ಹಾಕಿದರ ಹೊಡದನಪ್ಪ ತಲಿ
ಮೀರಿ ನಿಂತಾಸೋ ಬಂದೂಕಿಗೆ ಗಜವೀರನಾ
ಸಾರಿ ಹೇಳಿ ತರಸೋ ಸದ್ಯದಲಿ ॥೬೨॥

ಮುಳ್ಳಗಸಿ ಲಗಮಣ್ಣಾ ಮುಂಚಾಗಿ ನಡದಾನೋ
ಹೆಚ್ಚಿನ ಗುಳದಾಳಿ ಹರದಾನೊ

ನೋಡಲಿಲ್ಲೋ ಮಕ್ಕಳ ಮಾರಿ ಕತ್ತಿಗ್ಹಾಕಲಿಲ್ಲೋ ಒರಿ
ಕತ್ತಿಗೆ ಬಂಟೊ ಒಬ್ಬರಿಲ್ಲ ಲಗಮಣ್ಣಗ ಸರಿ
ದೇಶನೂರ ಸುದ್ದಿ ಹೇಳ್ಯಾನ ಸುಮ್ಮನ ಹೋಗಿ
ಸೋಮನಹಟ್ಟಿ ತಮ್ಮಣ್ಣಾಗ ಕರಕೊಂಡ ಬಾ ಅಂದ
ಬಾಲಣ್ಣಾಗ ಹಣಬರ್ಹಟ್ಟಿ ಬಿಟ್ಟ ಬಂದ ಕೂಡಂದೋ ಅದರಾಗ
ಹೆಚ್ಚಿನ ಗುಳದಾಳಿ ಹರದಾನೋ ಲಗಮಣ್ಣಾ
ಮುಂಚ್ಯಾಗಿ ದಾರಿ ಹಿಡದಾನೋ ॥೬೩॥

ಸಂಜೀಮಪ್ಪ ಗಾಡಿಕೊಪ್ಪ ಸಂಜೀಲೆ ಬಿಟ್ಟಾನೋ
ಮುಂಜಾಲೆ ಮೊಗಲಾಯಿ ಮೆಟ್ಟ್ಯಾನೋ
ಕಡ್ಡಿಗುದ್ದಿ ನಿಂಗನಾಯಿಕ ಹೆಗಲಿಗ್ಹಚ್ಚಿದಾನ ಬಾಕ ಹೋಗೂನಪ್ಪ
ಹೊಂಟ ಕಾಲ ಇಡಬಾರದೋ ನಾವು ಹಿಂದಕ
ಕಣ್ಣಿಗೆ ಬಂದಿತೋ ಚೋಕ
ಮಲಿಗ್ಯಾನೋ ಮಾವಿನ ಮರಕ
ಸ್ವಪನ ಬಿದ್ದಿತಲ್ಲೊ ಒಂದ ಸೋಕ
ಚಟ್ಟನೆದ್ದು ಹೋದಾನಪ್ಪ ತಾನ ಬಸ್ತೊಡಕ
ಬಸ್ತೊಡ ಬಾಲೇ ನಾಯಿಕ
ಗಡ್ಡಿಗುದ್ದಿನಿಂದ ನಾಯಿಕ ತಾವಿಬ್ಬರು ಹೊಂಟರೋ ಕದನಕ
ದೇವಲತ್ತಿ ಕಾಳಿಸಿಂಗ್ಯಾನ ತರಸೋ ಸದ್ಯಕ
ಮುಂಜಾಲೆ ಮೊಗಲಾಯಿ ಮೆಟ್ಟ್ಯಾನೋ ಸಂಜೀಮ
ರಾಯಣ್ಣನ ಬೆಟ್ಟಿಗೊಂಡಾನೋ ॥೬೪॥

ಒಡ್ಡರ ಗಿಡ್ಡಣ್ಣಾ ಲಗ್ಗಮಾಡಿ ಕೂಡಿದನೋ ಹೂಲಿಗಾಳಿ ಲಬ್ಬಿ ಹಿಡಿಸ್ಯಾನೋ
ಕೂಡಿತಪ್ಪ ರಾಯಾನ ದಂಡ ಕುಣಿದಾಡಿದ್ಹಂಗ ಕುದರಿ ಹಿಂಡ
ಅಷ್ಟರೊಳಗ ಸಂಜೀಮ ಬೆಂಕಿ ಕೆಂಡ ।
ಆ ಮಂದಿ ನೋಡಿ ಹುಚ್ಚ್ಯಾದೀತ ಮೊಗಲಾಯಿ ದಂಡ
ಅಪ್ಪಣಿ ಕೊಡೋ ರಾಜಾ ಪುಂಡ ಪ್ರಚಂಡ
ಸೂರಿ ಮಾಡೇನೋ ಸೋಲ್ಜರ ದಂಡ
ಹೊಡುವೂತೇನೊ ಜ್ಯಾಪಲಿನ ಸಾಹೇಬನ

ಚಂಡ ಸಹಜ ಮಾಡಿ ತಗೋಂತೇನ ಸೋಲ್ಜರದೆಲ್ಲಾ ದಂಡ
ಹೂಲಿಗಾಳಿ ಲಬ್ಬಿ ಹಿಡಿಸ್ಯಾನೋ ಗಿಡ್ಡಣ್ಣಾ
ಲಗೂನ ಮಾಡಿ ದಂಡ ಕೂಡಿಸ್ಯಾನೋ ॥೬೫॥

ಕೂಡಿ ರಾಯಾನ ದಂಡು ಸಾಗಿ ತಾ ನಡದೀತೋ
ಕಿತ್ತೂರ ಚನ್ನವ್ವನರಮನಿಗೆ
ದಾರಿ ಹಿಡದ ರಾಯಾನ ದಂಡ ಆಡಿದ್ಹಂಗ ಲೆಗ್ಗಿ ಚಂಡ
ಕಿತ್ತೂರ ಹನಮಪ್ಪ ದೇವರ ಬಾಲ ದಂಡ
ರಾಯಪ್ಪ ಹೋಗಿ ಅವನ ಪಾದಾ ತಾನು ಬಲಗೊಂಡ
ಕಟ್ಟೇನಪ್ಪ ನಾನು ದಂಡ ನಿನ್ನ ಪಾದ ಬಲಗೊಂಡ
ನನ್ನ ಒಡಿಯಾ ನೀನು ಬೆಂಕಿಯ ಕೆಂಡ
ಸಹಸ ಮಾಡಿ ಕೊಡಬೇಕಪ್ಪ ಸೋಲ್ಜರದೆಲ್ಲಾ ದಂಡ
ಕಿತ್ತೂರ ಚನ್ನವ್ವನ ಅರಮನಿಗೆ ಹೋದಾರ
ಅರದಾ ಅವತಾರ ದೊರದಾವ ॥೬೬॥

ಸುದ್ದಿ ಹತ್ತಿ ಶೆಟ್ಟರು ಮುದ್ದಾಮ ಬಂದಾರೊ
ದಂಡಿಗ ವತನವ ಹೇಳಿದರೊ
ಹೇರಿ ಹೋತ್ಯೋ ಸಕ್ಕರಿ ಬೆಲ್ಲ ಅವರಿಗ್ಹತ್ತಿದಷ್ಟ ಹಾಲ
ತುಪ್ಪದ ಕೊಡಕೊ ಕಳಿಸ್ಯಾರ ಮೇಲಿಂದ ಮೇಲೆ
ಪ್ಯಾಟಿ ಶೆಟ್ಟರ ಪಾನ ಸುಪಾರಿ । ಮೇಲಿಂದ ಮೇಲ
ಸಣ್ಣಕ್ಕಿ ಶ್ಯಾವಿಗಿ ಸುರಳಿ ಮೊದಲ
ಹಂಡೆ ಬಾಂಡೆ ತಾಬಾಣಿ ಚರಿಗಿ ಕೂಡಿಸ್ಯಾರೋ
ಕಲ್ಲಮಠದವರು ಎಲ್ಲಾ ಪಡದಯ್ಯನವರು
ಪಂತಿ ಮಾಡಿ ಪಾದಾ ಬಡಿಸ್ಯಾರಲ್ಲಾ
ದಂಡಿಗ ವತನವ ಹೇಳಿ ಶೆಟ್ಟರ ತಾವು
ಕೂಳ ಹಾಕಿ ಕೋಳ ತರಬಿದರೋ ॥೬೭॥

ಬಹಳ ಹೊತ್ತಿಲೇ ಎದ್ದ ಕಾಳಿಸಿಂಗ್ಯಾ ತಾನು
ಹೂಲಿಗಾಳಿ ಲಬ್ಬಿ ಹಿಡಿದಾನೋ

ಎಚ್ಚರಾತೋ ದಂಡಿಗೆಲ್ಲಾ ತಾವು ಹೊಂಟಾರ ಕೆರಿಯ ಮೇಲಾ
ಜಳಕಾ ಮಾಡಿದರ ಅಷ್ಟುರೆಲ್ಲಾ
ಜಳಕಾ ಮಾಡಿ ಬರುವಾಗ ತಕ್ಕೊಂಡಾರೊ ತಾವು ಕೊಬ್ಬರಿ ಬೆಲ್ಲಾ
ಅಷ್ಟು ಮಂದಿ ತಾವು ಅವಲಾ ಕಟ್ಟಿಸಿದ್ದಾರಪ್ಪ ಕವಲಾ
ಅಪ್ಪಣಿ ಕೊಡೋ ನನ್ನ ಲೆಂಕಿ ಬಾಲಾ
ನಿನ್ನ ಆಸರ ನನಗ ಇದ್ದರ ಕೋದ್ಹಾಂಗ ಮಾಡೇನೋ ಹುಲ್ಲಾ
ಕೌಲ ಕೊಟ್ಟಾನ ಕತ್ತಿ ಮೇಲ ನಾನು ಇರತೇನೋ ಹಿಂಬಾಲಾ
ನಿಮ್ಮನದರ ನಾರ್‍ಯಾರ ಮೇಲೆ
ಪೂರ ಆದ ಹೊತ್ತಿಗೆ ಹರದೀತಪ್ಪ ನಿಮ್ಮ ಆಯುಷ್ಯದಾರ ಹಿಡದ ಕಾಳಿ
ಹೂಲಿಗಾಳಿ ಸಿಂಗ್ಯಾ ತಾನು
ನಡು ಪೇಟೆಗೆ ಬಿದ್ದ ನಡದಾನೋ ॥೬೮॥

ಮಾಲ ಕಿತ್ತೂರ ಬಿಟ್ಟ ಕಾವಲ ಮೇಟ್ಯಾಲಕ್ಷಾದ ಸಾಲ ಸಂಗೊಳ್ಳಿಗೆ ಇಳದಾರೋ
ತಪ್ಪಿಸಿಕೊಂಡೊ ಚಿಪ್ಪಾಡ್ಯಾಗ
ಜುಟ್ಟದ ಹಾರವಾ ಬಿದ್ದೊಸತ್ಹ್ಹಂಗ
ಯಾವ ದೇವರಿಗೆ ಬೇಡಿಕೊಳ್ಳಲೊ ನನ್ನ ಉಳಿಸುಹಂಗ
ಹುಡುಕತಾರ ಹಿತ್ತಲದಾಗ ಬುಡಕ ಬಿದ್ದ ನೋಡತಾನ
ಚಿಪ್ಪಾಡಿಗೆ ಬೆಂಕಿ ಹಚ್ಚ್ಯಾನೇನೋ ಅಂತ
ಬಹಳ ಬಾಳಪ್ಪ ಮನದೊಳಗ ಚಿಂತಿ ಮಾಡತನಾ ಎದ್ದರ ಜನ್ಮ ಉಳಿಯೋಣಿಲ್ಲೊ
ಇದ್ದರ ಬದಕ ಒಯ್ಯುವಲ್ಲರೋ ಜಲಮದಕ್ಕಿಂತ ಜಿಂದಗಿ ಹೆಚ್ಚಿಂದೇನೋ
ರುದ್ದರ ಭೂಮಿ ಮೇಗ ರಾಯಾನ ಹೆಜ್ಜಿ ಮಾಜ್ಯಾವೇನೋ
ಸಾಲ ಸಂಗೊಳ್ಳಿಗೆ ಇಳದ ಕುಲಕರಣಿನ್ನ
ಬೆಳ್ಳ ಬೆಳತನಕ ಹುಡಿಕಿದರೊ
ಹಿಂಡುವ ಎಮ್ಮಿಗಳನಾ ಮುಂದಾಗಿ ಹೊಡಿರೆಂದೋ ಪುಂಡ ದಂಡಿಗೆ ಗಜವೀರಾ
ಸಿಂಬಿ ಅರಿವಿ ಸಹಿತ ಸುದ್ದಾ ಬಿಡಬಾರದೊ ಕಬ್ಬಿಣದ ಚೂರಾ ॥೬೯॥

ಬಿಚ್ಚಗತ್ತಿ ಚನಬಸು ನಿತ್ತ ಹೇಳಿದ ತಾನು
ಕಚ್ಚಿ ಹಾರವಾನ್ನ ಕೋಯತೇನೋ
ರಾಯಪ್ಪ ನಿಂತ ಹೇಳ್ಯಾನಾಗ ಬಾಳ್ಯಾ ನಮಗ ಸಿಗಲಿಲ್ಲಾಗ

ಆ ಹೂಡುವೆಂಟು ಎತ್ತುಗೋಳ ಸಂತಿಗೆ ಹೂಡಿರೆಂದ ಬಂಟ ದಂಡಿಗೆ ಗಜವೀರಾ
ನನ್ನ ಯಾವ ಕೇಳತಾನ ಕಡದೇನಂತಾನ ಎರಡು ಚೂರಾ
ಉಣಸುವ ಕರಗೋಳನ ಕುಣಿಸೂತ ಹೂಡಿದಾನ ಸೂರಿ ಮಾಡ್ಯಾನೋ
ಹೊಂಗಲ ಪ್ಯಾಟಿ ಒಳಗ ನಿಂತ ಲೂಟಿ ಮಾಡಿದೋ ದನಕರಾ
ಆ ಕಚ್ಚಿ ಹಾರವನ್ನ ಕೋವತಿನೋ ರಾಯಪ್ಪ
ಮುಂಚೆ ಅಮಟೂರಿಗೆ ನಡಿರೆಂದೋ ॥೭೦॥
ಕಿತ್ತೂರ ಚನ್ನವ್ವಗ ಬೆಟ್ಟೀಗಿ ನಡದಾರೋ
ಮೆಟ್ಟ ಮಾಡಿದರೋ ಆಮಟೂರೋ
ಕಿತ್ತೂರ ಚನ್ನವ್ವ ಹೊಂಗಲದೂರಾಗ
ಕುಂತಗೊಂಡ ಮಾಡತಿದ್ದಾಳೊ ಮಾದುಃಖ
ಮತ್ತ ನಮ್ಮ ಮಲಸರಜ್ಯಾ ಸತ್ತ ಹೋದನಂತ
ಹೇರಿ ಹೋತ್ಯೊ ಅವನ ಬದಕಾ
ಆರ ಆನಿ ಹನ್ನೆರಡೊಂಟಿ ಹದಿನಾರ ಸಾವಿರ ಕಾಲಬಲಾ
ನಮ್ಮ ಮದ್ದಾನಿಗೊಪ್ಪು ಚೌಡಾ ಚಂದ ಚಂದ ಚಿಕ್ಕಡಿಗೋಳ
ತುಂಬಿಕೊಂಡ ಒಯ್ದಾರವರು ಪಿರಂಗ್ಯಾರಾ
ಒಪ್ಪು ಚವರಾ ಮತ್ತ ನಮ್ಮ ಮಜಲಿಗೆ ಒಪ್ಪುವ ಅಪ್ತಾಗಿರಿ
ಮೆಟ್ಟ ಮಾಡಿದರೋ ಅಮಟೂರಕ ರಾಯಪ್ಪ
ತಾಯವ್ವನ ಭೆಟ್ಟಿಗೊಂಡಾನೋ ॥೭೧॥

ಹಡದವ್ವ ನಿನ್ನ ಪಾದ ಹಿಡದ ಹೇಳತೇನು ನಾನು
ಪೊಡವಿ ಪತಿ ನಮ್ಮ ತಂದಿ ಆಡಿಗ್ಯಾನ
ಯಾಕ ಅಳತೆ ನನ್ನ ತಾಯೆ ನನ್ನ ಮೇಲಿರಲಿ ನಿನ್ನ ಮಾಯೆ
ವತನಕ ಬಂದದ್ದೇನ ಮನ್ನಾಯಿ ।
ಹರದ್ಹಂಗ ಮಾಡತೇನ ಹಿಟ್ಟಿನ ಚೀಲ ನಾಯಿ
ಕರಣಾ ಇರಲೆವ್ವ ತಾಯಿ ಕಾಡಿದಾನ ಕುಲಕರಣೆವ
ಮಾಡತೇನ ನನ್ನ ಕೈ ಮುಟ್ಟಿ
ಬೇಗಿ ಬಡದ ಹೋಗತೇನ ಅವನ ಗೂಡ ಸುಟ್ಟು
ಪೊಡವಿ ಪತಿ ನಮ್ಮ ತಂದಿ ಅಡಗ್ಯಾನ ಹಡದವ್ವ
ಕಡಿ ಬೆಟ್ಟಿಗೆ ಕಾಲ ಬೀಳುವೆನು ॥೭೨॥

ಸಟ್ಟನ್ನ ಸರಹೊತ್ತಿನ್ಯಾಗ ನೆಟ್ಟಗ ಸಂಗೊಳ್ಳಿಗ್ಹೋಗೆ
ಸೀಮಿ ಹೊಲದಾಗ ಸುಳದಾರೋ
ಬೇಗಿ ಬಡದಾರ ಗೂಡಿಗೆಲ್ಲಾ ನಿಂತ ಕ್ಯಾಗ್ಯಾರ ಒಂದ ಸಲ್ಲಾ
ಬೆಳಕ ಬಿತ್ತೋ ಸಂಗೊಳ್ಳಿ ಊರ ಮೇಲಾ ।
ಚಾವಡಿ ಕಟ್ಟಿ ಮೇಲಾ ಕಮತಿಗ್ಯಾರ್ಯಾ ಹೋಯಿಕೊಂತಾರ
ಕಣ್ಣ ಕಿಸದೋ ಹಳಬರ ಮೇಲಾ ।
ಹೋಗಿ ಹಿಡಕೊಂಡ ಬರ್ರ್ಯ್ರಾ ದಂಡನೆಲ್ಲಾ
ಹಿಡದ ತಂದುಕೊಟ್ಟ ಬಂದಿ ಹಾಕಸತೇನೋ ತಡಿ ಎಲ್ಲಾ
ಸೀಮಿ ಹೊಲದಾಗ ಸುಳದಾನೋ ರಾಯಪ್ಪ
ಸುಣ್ಣದ ಹಳ್ಳದಾಗ ಸರದಾನೋ ॥೭೩॥

ಬಾಳಪ್ಪನ ನುಡಿ ಕೇಳಿ ಬಹಳ ಉಮ್ಮೇದಾತ್ಯೋ
ತಾಳಗೇಡಿ ಫಕೀರ ತಯ್ಯಾರೋ
ಸಟ್ಟನ್ನ ಸರಹೊತ್ತಿನ್ಯಾಗ ಸೊಟ್ಟಕತ್ತಿ ಹಿಡಕೊಂಡ
ಸುಟ್ಟ ಗೂಡ ಸುತ್ತಿರಿಗ್ಯಾನೋ ಬಂಟ
ಈಗಿನ ವೇಳೇಕ ರಾಯಾ ಸಿಕ್ಕರ ಮುರುತಿನ್ನೆವನ ಸೊಂಟಾ
ಆ ಸುದ್ದಿ ಕೇಳಿ ರಾಯಪ್ಪ ಸುಮ್ಮನ ಬಂದ ಮುಂದ ನಿಂತ
ಯಾರನ್ನ ಬೆವತಿಯೋ ದೊಡ್ಡ ಬಂಟಾ
ಮದತ ಆಗಿ ಬಂದ್ಯೋ ಕುಲಕಣ್ಣಿಗೆ ಆವ ನಿಮ್ಮವ್ವನ ನೆಂಟಾ
ನಿನ್ನ ಅಲ್ಲೋ ನಮ್ಮ ಕಾಕಾ ಕುಲಕಣ್ಣಿನ ಬೇದೇನೋ ಭೂಪ
ಆಣಿ ಕೊಡಲೋ ನಿನಗೊಂದೇಳೆಂಟಾ
ಇದರಂತೆ ಮಾಡು ಇನ್ನೊಂದ ತಿಂಗಳಿಗೆ ಹೋಗತಾನೊ ಹೊಂಟ
ತಾಳಗೇಡಿ ಫಕೀರಾ ತಯಾರಾಗಿ ತಾ ಹೋಗೆ
ಬಾಳ ಸುಳ್ಳ ಹೇಳಿ ಉಳದಾನೋ ॥೭೪॥

ಗೂಡ ಸುಟ್ಟ ಗೆಣಿಯಾರು ಕೂಡಿ ಮಾತಾಡತಾರೋ
ಮತ್ತೊಂದ ಯುಗತಿ ತಗದಾರೋ

ಮಾತಡತರೋ ಅವರನ್ನವರಾ ।
ಮರತ ಬಿಡವೂನೋ ಮನಿಮಾರಾ
ಲಡಾಯಿ ಮಾಡೂನೊ ಅಪರಂಪಾರ ।
ಮ್ಯಾಗ ನೋಡೊ ಆರಂಬಾರಾ
ಹಳವದಾಗ ಹೋಗೂನಾ ದೂರಾ
ಮೋಸಕೋರ ಇಂಗ್ರೇಜರ ಮೂರ ಕುಪ್ಪಿ ತಯಾರ
ಅಪರಂಪಾರಾ ಕೊಳ್ಳ ಇರವುದೋ
ಸಿಳ್ಳ ಹಾಕುದುಲ್ಲೋ ಯಾರ್‍ಯಾರಾ
ಹೋಗೂನ ನಡಿರೊ ಬರರಾರಾ
ಅಪ್ಪಣಿ ಕೊಟ್ಟ ಬಲುದೂರಾ ।
ಅಪ್ಪಣಿ ಕೊಟ್ಟ ಬಲು ದೂರಾ
ಕತ್ತಿ ಬೆಸನ ಆಗೂದ ಪೂರಾ
ಮತ್ತೊಂದ ಯುಗತಿ ತಗದಾರೋ ಗೆಣಿಯಾರು
ಮೂರು ಕುಂಪಿಗೆ ನಡದಾರೋ ॥೭೫॥

ಮೂರ ಕುಂಪಿ ಬಹಳ ಆರಾಮ ಕಂಡಿತೋ ಆರ ತಿಂಗಳ ಇರವೂನೋ
ಚಂದ ಕಂಡೀತ ಚನಬಸೂಗ । ದಂಡ ಬರಲೋ ಇನ್ನ ಮೇಗ
ದಂಡ ಬರಲೋ ಇನ್ನ ಮೇಗ । ರುಂಡ ಆಡುವೆನೋ ಗಳಿಗ್ಯಾಗ
ಎಷ್ಟು ಹಳ್ಳವ ಇಲ್ಲಿಂಗ ತೆಳಗ ಹತ್ತಾವ
ಇಟ್ಟಾರ ಒಂದ ಪಡಿ ಬುಡಕ ಅಡಗಿ ಸಂಗ್ರಾಮ ನಡಿಸ್ಯಾರ ಕಡಕ
ಡೇರೆ ಹೊಡದಾರೋ ತೇಗಿನ ಗಿಡಕಾ ಆ ರಿಯಾತ
ಆರ ತಿಂಗಳ ಇರವೂನೋ ರಾಯಪ್ಪ
ಬಂದ ಪರಸಂಗ ಕಳವೂನೋ ॥೭೬॥

ಎದ್ದಾನೋ ಕುಲಕರಣ್ಯೋ ವಿದ್ಯ ನಡಿಸ್ಯಾನೋ ವಿಪರೀತೋ
ಆದ ಕೇಡ ಒಂದ ಪಾಲ ।
ಕೂಡ್ಸಿ ಬರದಾನೋ ಎರಡ ಪಾಲ ಪತ್ತರ ಕಳಿವ್ಯಾನೋ
ಹುಜರಿಗೆ ದಾದ ಮಾಡರಿ ಪುಣ್ಯ ಬರಲಿ ನಿಮ್ಮ ಸದರಿಗೆ
ಸಿಟ್ಟ ಬರುಹಂಗ ಬಾಳಪ್ಪ ಕೆಟ್ಟ ನುಡಿ ಕೂಡಿಸಿಕೊಂಡ

ಘಟ್ಟಿ ಮುಟ್ಟ ಪತ್ರ ಬರದಾನಲ್ಲಾ
ಆ ಬರದ ಪತ್ರ ಕಳಿವ್ಯಾನ ಕೊಟ್ಟ ಹಳಬನ ಮೇಲ
ವಿದ್ಯ ನಡಿಸ್ಯಾನೋ ವಿಪರೀತೋ ಕಲಕರಣೀ
ಮುದ್ದಾಮ ದಂಡ ಬರಲೆಂದೋ ॥೭೭॥

ಕಂಪನಿ ಪತ್ತರ ನೋಡಿ ರವಸೀಲೆ ಎದ್ದಿತೊ
ಲಸ್ಕರಕ ಸುದ್ದಿ ಕಳವಿದರೋ
ಆ ಸುದ್ದಿ ಕೇಳಿ ಸರದಾರ ಮಾಡಿದಾನ
ಅಪರಂಪಾರ ಲಸ್ಕರ ತಗದಾನೋ
ಪರಭರೆ ಆ ರಾಯನ ಹಾವಳಿ ಬಹಳ ಐತಿ
ಚಂಡ ಕೋಕೊಂಡ ಬರ್‍ರಿ ಬಿಗಲ್ ಮಾಡಿದಾನ ಮೀರಿ
ದಂಡಗ್ಹಿಡಿಸ್ಯಾನ ಕಿತ್ತೂರ ದಾರಿ ಎಡಕ ಬಲಕ ಕಾವಲ ಬಹಳ ಜೋರಿ
ನೀರಿನ ತಪ್ಪೆ ನೋಡಿ ಇಳದಾನ ಕಿತ್ತೂರಾ ತುಂಬಗೆರಿ
ಬಸ್ತಿ ಮಾಡು ತೀಬರ ಬ್ಯಾರಿ ।
ಊಟಕ ತರಿಸ್ಯಾರ ಕೋಳಿ ಕುರಿ
ಅಡಗಿ ಮಾಡಿದಾರ ಸರಹೊತ್ತ ಮೀರಿ
ಊಟಾಮಾಡಿ ಮಲಿಗ್ಯಾರವರು ತಿರಗತಾರೊ ಪೇರಿ
ಮುರುದಿವಸ ಎದ್ದಾರ ಹೊತ್ತ ಏರಿ ಕತ್ತಿಗೆ ಹಾಕಲಿಲ್ಲ ಒರಿ
ಬಲ್ಹಾಂಗ ತುಳದಾರವರು ದಾರಿ
ಮೂರ ತಾಸಿಗೆ ಹೋಗಿ ಕಂಡಾರ ಗೋದಳ್ಳಿ ಕೆರಿ
ಲಸ್ಕರ ಸುದ್ದಿ ಕಳಿವಿದನೋ ತಾ ರಾಣಿ
ಹಿಡಿರೆಂತ ಹುಕುಮ ಕೊಟ್ಟಾಳೋ ॥೭೮॥

ಪುಂಡ ರಾಯನ ದಂಡ ಮಾಡಿದ ಮಸಲತ್ತೋ
ದಂಡ ನೋಡೂವ ಅಜಮಾಸೋ
ಆ ರಾಯಪ್ಪ ಹೇಳ್ಯಾನ ತನ್ನ ಜನಕ ।
ಅಡಗಿ ಮಾಡಿರಿ ಈ ಚಣಕ
ಹೋಗಿ ಬರತೇವ ನಾವು ಅಲ್ಲಿ ತನಕ
ಬಂದ ಮೇಲೆ ಊಟಾಮಾಡಿ ಹೋಗೂನರೆಪ್ಪ ರಣಕ

ಕಟ್ಟ್ಯಾರ ಹೊರಿಗೋಳ ಕಟಗಿ ತುಣುಕ ।
ಹುಲ್ಲು ಹೋರಿ ಬಂದ ಆಗಿನ ಚಣಕ
ಸೊಂಪಿ ಮಾಡಿದಾರ ಕೋರಿ ಕಂಬಳಿ ಹರಕ ।
ದಾಣಿ ಹೇಳ್ಯಾರ ಒಂದಕೊಂದ ಹೋರಿಗಳ ಚಲ್ಲುದಕ
ತಿಳದೀತು ದಂಡಿನ ಆ ವಂಕ ಹತ್ಯಾರ ಅಡಗಿ ಮಾಡಲಿಕ
ತಿರಿಗಿ ಬಂದಾರ ಇಬ್ಬರು ಹಿಂದಕ
ಎರಡು ಹೊರಿಗೋಳ ಓದ ಚಲ್ಲ್ಯಾರ ದೊಡ್ಡದೊಂದ ಸರಕ
ದಂಡ ನೋಡೂವ ಆಜಮಾಸಕ ತಾವ ಹೋಗೆ
ಚಂಡ ಕೊಯ್ಯುವದಕ । ತಯಾರೋ ॥೭೯॥

ಗಟ್ಟಿ ಗಜವೀರ ನಿಂತ ಹೇಳ್ಯಾನೋ ರಾಯಪ್ಪಗ
ಬಾರ ಮಾಡೇನೋ ಬಂದೂಕ
ಗಜವೀರ ಹೇಳ್ಯಾನೋ ರಾಯಪ್ಪಗ ಗುಂಡ ಹಾಕುವೆನೋ ಈಗ
ಮುಂಡ ರಾಯಪ್ಪ ನೀ ಹೋಗೋ ದಂಡಿನ್ಯಾಗ ।
ಗುಂಡ ಹೊಡದೊ ಡೇರೇದ ಒಳಗ
ಚಂಡ ಹಾರಿತೋ ಸಾಹೇಬಂದಾಗ
ಮುಂಡ ರಾಯಪ್ಪ ಹೊಕ್ಕೊ ದಂಡಿನ್ಯಾಗ । ಹೊಗಿಗವಿತೊ ಕಾಣಲಿಲ್ಲೋ
ಬೆಳಕಗೂಡಿ ಹಚ್ಚಿದರೋ ಬಾಕು ಬಂದೂಕ ।
ತೆಕ್ಕಿಲ್ಲೊಗದೊ ಕೆರ‍್ಯಾನ ಮಡಕ ।
ಸೋಲ್ಜರೆದ್ದಾರ ಕವ್ ಬವ್ವ ಅಂತ ಹುಡುಕತಾರೋ ಬಾಕ ಬಂದೂಕ
ನಿಂತರೋ ಸಿಟ್ಟಿಗೆ ಬರಸೂತ । ರಾಯಪ್ಪ ನಿಂತಾನೋ ನಕ್ಕೊಂತ
ಹೆಂತಾ ಮಳ್ಳ ಸೋಲ್ಜರಂತ । ಹೆಂತಾ ಮಳ್ಳ ಸೋಲ್ಜರಂತ
ಒಳಗ ಹೊಕ್ಕೊ ಚಂಡ ಕಡಕೊಂತ । ಹರಿತೋ ನೆತ್ತರ ವಿಪರೀತ
ಹದ್ದು ಕಾಗಿ ಕೂಡ್ಯಾವ ಮಸ್ತ । ಹದ್ದು ಕಾಗಿ ಕೂಡ್ಯಾವ ಮಸ್ತ
ದಂಡ ಮುಣಗೀತು ಅನರ್ಥ । ಬಾರ ಮಾಡ್ಯಾರೋ ಬಂದೂಕ
ಇಬ್ಬರೂ ಕೂಡೆ ದಂಡು ಮುಣಿಗೀಸಿ ನಡದಾರೋ
ರುಂಡ ಆಡಿ ಗೇಣಿಯಾರು ನಡದಾರೊ ಬರಾಬರಾ
ಹೆಗಲಿಗ್ಹಚ್ಚ್ಯಾರೋ ಹತಿಯಾರ ॥೮೦॥

ಸರ್ವದಂಡ ಮುಣಗಿದ ಸುದ್ದಿ ಮುಂದಾಗಿ ಮುಟ್ಟಿತೊ ಮಂದಿಗೆಲ್ಲಾ
ಸಿಟ್ಟಾತೋ ಚನಬಸುಗ ಕೆಟ್ಟಾತೋ
ಆ ಚನಬಸು ನಿಂತಾನೋ ಹೇಳಿದ ತುರತೋ
ನಮ್ಮ ಮನಿಮಾರ ಮರತೋ । ಬಂದದ್ದಾತೋ ಅನರ್ಥೋ
ನೀವಿಬ್ಬರೂ ಸಮರ್ಥೋ । ನೀವಿಬ್ಬರು ಮಡಿದರಾತೀ ತಗೋಳೋ
ನಮಗ ಹಾಕಿದ್ಹಂಗ ಗೋಳೋ । ಮುಂದ ಯುದ್ಧ ಐತಿ ಬಹಳೋ
ಎಚ್ಚರಲೇ ತಿಳಕೋಳೋ । ನಾವಿಷ್ಟು ಮನುಷ್ಯಾಗೊಂದ ಕೋಳೋ
ಕಡದರಾಗುದು ಹಾಳೋ । ಹತ್ತೂರ ಹಲ್ಲಗಡಿ ಬಹಳೋ
ಈ ಮಾತು ಎಚ್ಚರಿಲೇ ಇಟಕೋಳೋ । ಮಂದಿ ಇದ್ದೇವಿ ಬಹಳೋ
ಹಗಲಿಗ್ಹಚ್ಚ್ಯಾರೋ ಹತಿಯಾರೆಲ್ಲರೂ ಕೂಡಿ
ಸಲ್ಲರಿಂದ ಊಟ ಮಾಡಿದರೋ ॥೮೧॥

ದಂಡಿನ ಸರದಾರಾ ಬುಡಕ ಸಿಕ್ಕಿದ್ಯೋ ಪೂರಾ
ಎದ್ದ ನೋಡಿದನ ಮನಹಾರಾ
ಸರದಾರ ಚಲ್ಲಿ ನಿಂತಾನೋ ಮಾಡೂತ ದುಃಖ
ಏನ ಹೇಳಲೋ ರಾಣಿ ಸರಕಾರಕ
ಎರಡು ದಿವಸದಲ್ಲಿ ಎಷ್ಟು ಬೆಳಕ ತಿಳಿಯಲಿಲ್ಲೋ ಮಳ್ಳ ಮಂದಿ ಈ ಜನಕ
ಒಂದ ಹತ್ಯಾರೊ ಹಂತೇಕ ಗೂಡ ಹಚ್ಚಿದ್ದರೋ ಬಾಕ ಬಂದೂಕ
ತೆಕ್ಕಿಲೊಗದೋ ಕೆರಿಯಾನ ಮಡಕ ಅವರಿಗೆ ಸಾಧಿಸಿತೊ ಒಳ್ಳೇ ಕಡಕ
ಒಬ್ಬ ಹೊಕ್ಕೊ ದಂಡಿನ ನಡಕ ನಿಂತ ಕಡದ ಮಾಡಿದ ತುಣಕ
ದಿಕ್ಕಿ ಇಲ್ಲದ್ಹಂಗ ಈ ಹೆಣಕ ಹೆಂಗ ಹೋಗಲಿ ನಾ ಹಿಂದಕ
ದಸ್ತೂರಿ ಒಗದನ ನೆಲಕ ಗುಂಪಿ ಮಾಡಿದ ಕಂಬಳಿ ಹರಕ
ಮರುದಿನ ನಡದಾನ ಸಂಚೆ ತನಕ ಚಿಂತಿ ಹತ್ತಿ ಮಾಡಿದೋ
ಹತ್ತರವಾಡಕ । ದಾರಿ ಸಾಗದಕ
ಎದ್ದ ನೋಡಿದನೋ ಸರದಾರಾ
ಅನ್ನಿಲ್ಲದ ಬಿದ್ದೊ ನಿರಾಧಾರ ॥೮೨॥

ಮರುದಿನ ಸರದಾರಾ ದಾರಿ ಹಿಡದಾನೋ ಪೂರಾ

ಬಂತ ಸನಿಯಾಕ ಬೆಳಗಾಂವಿ ಶಹರಾ
ಸರದಾರ ಚಲ್ಲ್ಯಾನ ಕಣ್ಣೀರಾ ಕಲೆಕ್ಟರ ಸಾಹೇಬ ಬಹದ್ದೂರಾ
ಏನ ಹ್ಹೇಳಲಿ ಅವಗುತ್ತರಾ ದಂಡ ಮುಣೀಗಿತೋ ಸಂಹಾರಾ
ಇಬ್ಬರೂ ಮಾಡಲಿಲ್ಲೋ ದರಕಾರಾ ನಿಂತ ಕಡದ ಮಾಡ್ಯಾರ ಚೂರಾ
ದಂಡ ಮುಣಿಗಿ ಆತೊ ಸಂಹಾರಾ ಹೇಳತಾನೋ ಸಾಹೇಬನ ಹುಜರಾ
ಕೇಳಿ ಸಾಹೇಬ ಹಾಕಿದ ಉಸರಾ ತಾರ ಮಾಡಿದನೋ ಬಹದ್ದೂರಾ
ಓದಿ ನೋಡಿಕೊಂಡೋ *ಮಾಸ್ತರ ಮುಂದ ಆಗುವ ಮಜಕೂರಾ
ಚಂದಾಗಿ ಹೇಳೋ ಇದರ ವಿಸ್ತಾರಾ
ಬಂತೋ ಸನಿಯಾಕ ಸರದಾರ ಸಾಹೇಬಗ್ಹೇಳೊ
ತಾರ ಮಾಡೆ ದಂಡ ತೈಯಾರೋ ॥೮೩॥

ರಾಣಿ ಸಿಟ್ಟಿಗೆ ಬಂದು ರಾಜ್ಯ ಹೋಗಲಿ ನಂದು
ಬಿಡಬೇಡವರನ್ನು ಹಿಡಿರೆಂದು
ಬರಲೆಂದಳು ಹನ್ನೆರಡು ಕುಪಣಿ ದಂಡ । ಹಗಲಿ ಹಿಡತರ್‍ರಿ ರಾಯಾ ಮುಂಡ
ಯುದ್ದ ಮಾಡ್ಯಾರ ಹಿಂಡಿಗಿಂಡ ಹೊಡತ ಹಾಕಿದ ರಾಯಣ್ಣ ಮುಂಡ
ತೀರಿ ಹೋಗಲಿ ಎರಡರೊಳಗೊಂದ । ಹೇಳಿಬಿಟ್ಟಾಳ ರಾಣಿಯು ಬಂದ
ಬಿರದ ಹೋತ್ಯೋ ಇಂಗರೇಜಂದ
ಒಬ್ಬ ರಾಯಣ್ಣ ಆದಾನ ಮುಂದ । ಹೋದ ದಂಡ ಹಾಕ್ಯಾನ ಕೊಂದ
ಬಿಡಬೇಡರವರನ್ನು ಹಿಡಿರೆಂದ ಹುಕುಮಿಗೆ
ತಡವಿಲ್ಲದ ದಂಡ ತೈಯಾರೋ ॥೮೪॥

ಬಾಲದಂಡ ಹನುಮಂತ ಬಲಕ ಬಂದ ನಿಂತೋ
ಮಾಡ್ಯಾರಿಂಗರಾಜರು ಮಸಲತ್ತೋ
ಏಳರಿನ್ನ ಬೆಳತನಕ ಹಳವ ಕಡಿದ ಮಾಡರಿ ತುಣಕಾ
ಪಂಜ ಕಟ್ಟಬೇಕೋ ಹಳವಕ
ಸುಣ್ಣದ ಸ್ವಾರಿ ಬೆಚ್ಚಗಿಡಿರೊ ಕಾಣುಹಂಗ ಜಳಕ
ಸೋಲ್ಜರ ಬರತಾರ ನೋಡಿ ಬೆಳಕ ದಂಡ ಅತಿ ಇರುವದು
ಈ ಕೊಳ್ಳಕ ಜಾಗಾ ಬಿಡರೋ ನೀವು ಒಂದು ಜುಳಕ

*ಪೋಸ್ಟ ಮಾಸ್ತರ

ಆರ ತಾಸ ರಾತ್ರಿಯೊಳಗ ಲಡಾಯಿ ಆಗೂದ ಚಣಕ
ಮಾಡ್ಯಾರಿಂಗರೇಜರು ಮಸಲತ್ತು ರಾಯಪ್ಪ
ಲಗು ಮಾಡಿ ದಂಡ ತಗಿರೆಂದೊ ॥೮೫॥

ಊಟಾ ಮಾಡಿ ಇಂಗರಜರು ಯುದ್ದಕ ನಡದಾರೊ
ಸುದ್ದಿ ಇಲ್ಲದ್ಹಂಗ ಯಾರ‍್ಯಾರಿಗೆ
ಊಟಾ ಮಾಡ್ಯಾರ ಮೂರ ತಾಸಿನ್ಯಾಗ ।
ಬೆಳಕ ನೋಡ್ಯಾರೋ ಹವಳದಂಗ
ಕರಕರ ಹಲ್ಲ ತಿಂದಾರು । ಕಾಲ ಕೆದರ‍್ಯಾರು ಮೀಸಿ ತಿದ್ಯಾರು
ಒಳ್ಳೇ ಯುಕ್ತಿ ಮಾಡ್ಯಾರು ಬೇತ ಮಾಡಿ
ನಾವು ಎಲ್ಲಾರಾಗೂನೋ ಸುತ್ತೂಕಡಿ
ಆ ದಂಡ ನಡುವಕ ಮಾಡಿ । ಹೊಡವೂನೋ ದಂಡ ತೂರ‍್ಯಾಡಿ
ಬಂದೂಕ ಭರತಿ ಮಾಡಿ ಹೊಡಿರೋ ದಡಬಡ
ಬಾರ ಮಾಡ್ಯಾರೊ ಮದ್ದಿನ ಪುಡಿ ಗುಂಡ ಗಡಬಡಿ ।
ಹೊಡದಾರೋ ದೀದ ನೋಡಿ ದಂಡ ಸಂಹಾರಾದೀತೋ ಸುತ್ತು ಕಡಿ
ಹೋಗಲಿಲ್ಲ ಓಡಿ ಸತ್ತಾರೋ ರಿಣಿಗೇಡಿ
ದಂಡ ಸಂಹಾರಾದೀತ ಲಗುಮಾಡಿ ।
ಸುದ್ದಿಲ್ಲದ್ಹಂಗ ಸತ್ತಾರೋ ಕೋಡಿ ಸಾರೇವ ಸತ್ತಿಕರ ನುಡಿ ।
ಬಂಗಾರದ ಛಡಿ ನಿಮಗ ದಯ ಮಾಡಿ
ಸುದ್ದಿ ಇಲ್ಲದ್ಹಂಗ ಯಾರ‍್ಯಾರಿಗೆ ಇಂಗ್ರಜರು
ಮದ್ದು ಗುಂಡ ಸುಟ್ಟ ನಿಂತಾರೋ ॥೮೬॥

ಮದ್ದು ಸುಟ್ಟ ಇಂಗ್ರಜರು ಮದವೇರಿ ನಿಂತಾರೋ
ಖಬರ ಇಲ್ಲ ಯಾರ‍್ಯಾರಗಿ
ಉಲ್ಹಾಸಾದಾರ ತಮ್ಮ ಮನದಾಗ । ಸ್ವಾರ ಹತ್ತ್ಯಾನ ಕುದರಿ ಮೇಗ
ಸ್ವಾರ ಹತ್ಯಾನ ಕುದರಿ ಮೇಗ । ತಾರ ಮಾಡೂನು ನಾಳಿ ಲಗು ಬೇಗ
ಮದ್ದು ಸುಟ್ಟಾರ ಮೂರ ತಾಸಿನ್ಯಾಗ । ಬಂದೂಕ ಹಿಡದಾರೋ ಬಡಗಿಹಂಗ
ಬಂದೂಕ ಹಿಡದಾರೋ ಬಡಗಿಹಂಗ । ಕುಣದಾಡತಾರೋ ತಾವು ಬಲ್ಲಬಲ್ಹ್ಹಂಗ

ರಾಯಪ್ಪ ಎದ್ದಾನೋ ಆವಾಗ । ಏಳಂದ ಎಬ್ಬಿಸ್ಯಾರ ಗಜವೀರಗ
ಏಳಂದ ಎಬ್ಬಿಸ್ಯಾರ ಗಜವೀರಗ ।
ಯುದ್ಧ ಸ್ವಾಧೀನಾಗೇತಿ ನನಗ । ತನ್ನ ದಂಡ ಕರದಾನ ಕೂಗ್ಯಾಡಿ
ಮಹದೇವ ತಂದಾನೋ ಎಡಿಮಾಡಿ । ಬಂಟರೆಲ್ಲರು ಬಲ್ಲಂಗ ಕಡಿ
ಚನಬಸು ಎದ್ದಾನ ಖೋ ಆಡಿ । ಹೊಡುವತಾನ ಅಂತಾರ ಲಾಡಿ
ಹೋ । ದಂಡಿಗ್ಹೇಳ್ಯಾನ ಗುಲ್ಲವ ಮಾಡಿ । ರಾಯಪ್ಪ ನಿಂತ ಕೋವರ
ಒಡ್ಡಗ ಹೇಳ್ಯಾನ ಹಾರಿಕೋಲ ಹಿಡಿ । ಬಾಕಿ ಮಂದಿ ಹೊಡದಿತ ಬೋರ್‍ಯಾಡಿ
ಸೋಲ್ಜರರಾಗತಾರ ಚಿಪ್ಪಾಡಿ । ಬಲಿ ಮಂದಿ ಹೋದಿತೋ ಓಡೋಡಿ
ಎಳದ ಕೋದಾರ ಕುತ್ತೀಗಿ ನೋಡಿ । ಅವರ ಚೊಣ್ಣ ಕಂಟಿಗೆ ಸಿಕ್ಕ ಚಿಪ್ಪಾಡಿ॥[೧] ॥೮೭॥

❖❖

---

೧. ಈ ಪದದ ಮುಂದಿನ ಭಾಗವು ನಮಗೆ ತಿಳಿದು ಬಂದ ನಾಲ್ಕಾರು ಊರುಗಳಲ್ಲಿ ತಿರುಗಿದರೂ ದೊರೆಯಲಿಲ್ಲ. ರಾಯಣ್ಣನ ಸಮಕಾಲೀನದವನೇ ಬರೆದದ್ದರಿಂದ ಇಷ್ಟನ್ನಾದರೂ ಪ್ರಕಟಿಸಿದ್ದೇವೆ.

ಈ ಹಾಡಿನಲ್ಲಿ ಬರುವ 'ಸುಭೇದಾರ' ಎಂದರೆ ಹಚ್ಚೊಳ್ಳಿ ಕೃಷ್ಣರಾವ. ಆಗ ಸಂಪಗಾಂವಿ ತಾಲೂಕಿನ ಮಾಮಲೇದಾರ.

'ಮೊಗಲಾಯಿಯ ರಾಜ'ನೆಂದರೆ ಸುರಪುರದ ವೆಂಕಪ್ಪನಾಯಕ ಒಳ್ಳೇ ದೇಶಾಭಿಮಾನಿಯಾಗಿದ್ದನು. ರಾಯಣ್ಣನಿಗೆ ಬಹಳ ವಿಧದಿಂದ ನೆರವಾಗಿದ್ದಾನೆ.

"ನಿಂತ ಪಟ್ಟ ನಿಂದು, ಕುಂತ ಪಟ್ಟ ನಂದು, ಕೊಟ್ಟುದೇನೋ ನಿನಗ ಬರೆದಿಟ್ಟು ದೇನೋ" ಎಂಬುದನ್ನು ನೆನಸಿಕೊಂಡರೆ ತನ್ನ ರಾಜ್ಯವನ್ನೇ ರಾಯಪ್ಪನ ಧ್ಯೇಯ ಸಾಧನೆಗಾಗಿ ಪಣ ಪಚ್ಚಿದನೆಂಬುದು ತಿಳಿದುಬರುತ್ತದೆ.

ಈ ಹಾಡಿನಲ್ಲಿ ಬರುವ 'ರಾಣಿ' ಸರಕಾರ ಅಂದರೆ ವಿಕ್ಟೋರಿಯಾ ರಾಣಿಯು.

ಸಮಗ್ರ ಲಿಂಗಾಯತ ಅಪ್ರಕಟಿತ ಪ್ರಾಚೀನಸಾಹಿತ್ಯ ಪ್ರಕಟನಮಾಲೆ : ೬೨

ಕಿತ್ತೂರ ಸಂಸ್ಥಾನ ಸಾಹಿತ್ಯ

[ಭಾಗ : ಎರಡು]

ಸಂಪಾದಕರು

ಎಂ. ಎಂ. ಕಲಬುರ್ಗಿ

ಚೆನ್ನಕ್ಕ ಪಾವಟೆ

ಅನ್ನಪೂರ್ಣ ಹತ್ತಿಮತ್ತೂರ

೨೦೦೫

ಪ್ರಕಾಶಕರು

ಲಿಂಗಾಯತ ಅಧ್ಯಯನ ಸಂಸ್ಥೆ

ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ

*

ಪ್ರಸ್ತಾವನೆ

ವ್ಯಕ್ತಿಯ ಮುಂದೆ ಎರಡು ಆಯ್ಕೆಗಳಿರುತ್ತವೆ. ಒಂದು: ವರ್ತಮಾನದಲ್ಲಿ ಬದುಕುವುದಕ್ಕಾಗಿ ಭವಿಷ್ಯತ್ತಿನಲ್ಲಿ ಶಾಶ್ವತ ಸಾಯುವುದು. ಇನ್ನೊಂದು: ಭವಿಷ್ಯತ್ತಿನಲ್ಲಿ ಶಾಶ್ವತ ಬದುಕುವುದಕ್ಕಾಗಿ ವರ್ತಮಾನದಲ್ಲಿ ಸಾಯುವುದು. ಈ ಹಿನ್ನೆಲೆಯಲ್ಲಿ ಹೇಳುವುದಾದರೆ, ಕಿತ್ತೂರ ಅರಸುಮನೆತನದ ಸಮಕಾಲೀನ ಅನೇಕ ಸಂಸ್ಥಾನಗಳು ವರ್ತಮಾನದಲ್ಲಿ ಬದುಕುವ ಆಸೆಮಾಡಿ, ಭವಿಷ್ಯತ್ತಿನಲ್ಲಿ ಶಾಶ್ವತ ಸತ್ತುಹೋದವು. ಕಿತ್ತೂರು ಸಂಸ್ಥಾನ ಮಾತ್ರ 'ಸ್ವಾತಂತ್ರ್ಯ'ವೆಂಬ ಮೌಲ್ಯಕ್ಕಾಗಿ ವರ್ತಮಾನದಲ್ಲಿ ಸತ್ತು, ಭವಿಷ್ಯತ್ತಿನಲ್ಲಿ ಶಾಶ್ವತ ಬದುಕಿ ಉಳಿಯಿತು.

ಆರ್ಯರ ರಾಜಶಾಹಿ, ಮುಸಲ್ಮಾನರ ಬಾದಶಾಹಿಗಳ ಬಳಿಕ, ಇಂಗ್ಲಿಷ್ ವಸಾಹತುಶಾಹಿಯ ಆಕ್ರಮಣಕ್ಕೆ ಗುರಿಯಾಯಿತು, ಕರ್ನಾಟಕ. ಇವುಗಳಲ್ಲಿ ವಸಾಹತುಶಾಹಿಯ ವಿರುದ್ಧ ಅಂದಿನ ಕರ್ನಾಟಕದ ಕೆಲವು ಸಂಸ್ಥಾನಿಕರು ಹೋರಾಟ ನಡೆಸಿದರೂ, ದೊಡ್ಡ ರೀತಿಯಲ್ಲಿ ಈ ಕಾರ್ಯಮಾಡಿದವರು, ಕರ್ನಾಟಕದ ಉತ್ತರದಲ್ಲಿ ಸುರಪುರ ವೆಂಕಟಪ್ಪ ನಾಯಕ, ಮಧ್ಯದಲ್ಲಿ ಕಿತ್ತೂರು ಚೆನ್ನಮ್ಮರಾಣಿ, ದಕ್ಷಿಣದಲ್ಲಿ ಮೈಸೂರು ಟಿಪ್ಪುಸುಲ್ತಾನ. ಇವರಲ್ಲಿ ಟಿಪ್ಪುಸುಲ್ತಾನನ ಬಗ್ಗೆ ಒಂದಿಷ್ಟು ಅಭ್ಯಾಸವಾಗಿದ್ದರೂ ಅವನ ಆಸ್ಥಾನದ ಪರ್ಶಿಯನ್ ಸಾಹಿತ್ಯ ಪ್ರಕಟವಾಗಿಲ್ಲ. ಕಿತ್ತೂರು ಚೆನ್ನಮ್ಮ, ಸುರಪುರ ವೆಂಕಟಪ್ಪ ನಾಯಕರ ಬಗ್ಗೆ ಅಭ್ಯಾಸವೂ ಆಗಿಲ್ಲ, ಇವರ ಆಸ್ಥಾನದ ಸಾಹಿತ್ಯವೂ ಪ್ರಕಟವಾಗಿಲ್ಲ.

ಚಾಲುಕ್ಯ, ಹೊಯ್ಸಳ ಮೊದಲಾದ ಸಾಮ್ರಾಟದ ಆಸ್ಥಾನದಲ್ಲಿ ಹುಟ್ಟಿದ ಸಾಹಿತ್ಯವನ್ನು ಈ ವರೆಗೆ ನಾವು ಶೋಧಿಸುತ್ತ, ಪರಿಷ್ಕರಿಸಿ ಪ್ರಕಟಿಸುತ್ತ, ಅಭ್ಯಾಸ ಮಾಡುತ್ತ ಬಂದಿದ್ದೇವೆ. ಈ ಕೆಲಸವನ್ನು ವಿಜಯನಗರ ವರೆಗಿನ ರಾಜಾಶ್ರಯ ಸಾಹಿತ್ಯದ ವರೆಗೆ ಪೂರೈಸಿದ್ದೇವೆ. ಆ ತರುವಾಯ ನಮ್ಮಲ್ಲಿ ಸಾಮ್ರಾಜ್ಯ ಒಡೆದು ಸಂಸ್ಥಾನಗಳು ಬೆಳೆದವು. ಇವುಗಳ ಆಶ್ರಯದಲ್ಲಿ ಹುಟ್ಟಿದ ಸಾಹಿತ್ಯದ ಬಗ್ಗೆ ಯಾರೂ ಅಷ್ಟಾಗಿ ಗಮನಕೊಡಲಿಲ್ಲ. ಕರ್ನಾಟಕದಲ್ಲಿ ಅಚ್ಚುಕೂಟ ಪ್ರವೇಶಿಸುವ ವರೆಗೂ ಬದುಕಿದ್ದ ಕಾರಣ, ಮೈಸೂರು ಸಂಸ್ಥಾನದಲ್ಲಿ ತಿರುಮಲಾರ್ಯ, ಚಿಕುಪಾಧ್ಯಾಯ ಮೊದಲಾದವರು ಬರೆದ ಸಾಹಿತ್ಯ ವಿಪುಲ ಪ್ರಮಾಣದಲ್ಲಿಯೇ ಬೆಳಕು ಕಂಡಿತು. ಆದರೆ ಅಚ್ಚುಕೂಟ ಪ್ರವೇಶಿಸುವ ಮೊದಲೇನೇ ಅಸ್ತಂಗತವಾದ ಮಿಕ್ಕ ಸಂಸ್ಥಾನಗಳಲ್ಲಿ ಹುಟ್ಟಿದ ಸಾಹಿತ್ಯದ ಶೋಧ-ಪ್ರಕಟನೆ ಉಪೇಕ್ಷೆಗೆ ಗುರಿಯಾಯಿತು. ಇಂಥ ಸಂದರ್ಭದಲ್ಲಿ ಮದ್ದಗಿರಿಯ ಮಹಾನಾಡ ಪ್ರಭುಗಳಿಗೆ ಸಂಬಂಧಿಸಿದ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ಶ್ರೀರಾಮಪುರದ ಸಿರುಮನಿಗೆ ಸಂಬಂಧಿಸಿದ ಸಿರುಮಣನಾಯಕನ ಸಾಂಗತ್ಯ-ಸಿರುಮನ ಚರಿತೆ-ಗೊಲ್ಲ ಸಿರುಮನ ಚರಿತೆ, ಕುಮ್ಮಟದುರ್ಗದ ಕುಮಾರ ರಾಮನಿಗೆ ಸಂಬಂಧಿಸಿದ ಹೊಸಕುಮಾರ ರಾಮನ ಸಾಂಗತ್ಯ-ಕುಮಾರ ರಾಮಯ್ಯನ ಚರಿತೆ, ಕಿತ್ತೂರಿಗೆ ಸಂಬಂಧಿಸಿದ "ಕಿತ್ತೂರು ಸಂಸ್ಥಾನ ಸಾಹಿತ್ಯ" ಮೊದಲಾದ ಚಾರಿತ್ರಿಕ ಕೃತಿಗಳು ಪರಿಷ್ಕಾರಗೊಂಡು ಪ್ರಕಟವಾಗಿವೆ. ಈ ದಾರಿಯಲ್ಲಿ ಪ್ರಸ್ತುತ ಕೃತಿ ಬೆಳಕು ಕಾಣುತ್ತಲಿದೆ.

ಕರ್ನಾಟಕದ ಗರ್ಭದಲ್ಲಿ ಅನೇಕ ರಾಜಮನೆತನಗಳು ಲೀನವಾಗಿ ಹೋಗಿವೆ. ಇವುಗಳಲ್ಲಿ ವಿಜಯನಗರದ ಪತನ ದೊಡ್ಡ ನೆನಪಾಗಿ ಉಳಿದಿದೆ. ಆ ಬಳಿಕ ಅನೇಕ ಸಂಸ್ಥಾನಗಳು ಪತನವಾಗಿ ಹೋಗಿದ್ದರೂ ವಿಜಯನಗರದಂತೆ ದೊಡ್ಡ ನೆನಪಾಗಿ ಉಳಿದುದು ಕಿತ್ತೂರು ಅರಸುಮನೆತನ. ಹೀಗೆ ನಮ್ಮ ಭಾವನೆಯ ಭಾಗವಾಗಿ ಉಳಿದಿರುವ ಈ ಮನೆತನದ ಬಗ್ಗೆ ಸಿಗುವ ಯಾವುದೇ ಸಣ್ಣ ದಾಖಲೆಯೂ ನಮಗೆ ಮುಖ್ಯವೆನಿಸುತ್ತದೆ. ಈ ದೃಷ್ಟಿಯಿಂದ ಕಿತ್ತೂರು ಸಂಸ್ಥಾನದ ಆಶ್ರಯದಲ್ಲಿ ಹುಟ್ಟಿದ ಕೃತಿಗಳನ್ನು "ಕಿತ್ತೂರು ಸಂಸ್ಥಾನದ ಸಾಹಿತ್ಯ"ಹೆಸರಿನಿಂದ ಪ್ರಕಟಿಸಿದ ನಾವು, ಈಗ ಅದೇ ಹೆಸರಿನಿಂದ ಈ ಗ್ರಂಥವನ್ನು ಎರಡನೆಯ ಭಾಗವಾಗಿ ಪ್ರಕಟಿಸುತ್ತಿದ್ದೇವೆ. ಮೊದಲಿನದನ್ನು ಭಾಗ-೧ ಎಂದು ಪರಿಭಾವಿಸಲು ಸೂಚಿಸುತ್ತೇವೆ.

ಕಿತ್ತೂರ ಸಂಸ್ಥಾನವನ್ನು ಕುರಿತ ಸಾಹಿತ್ಯ ಎರಡು ತೆರನಾಗಿದೆ. ಒಂದು: ಆಸ್ಥಾನ ಕವಿಸಾಹಿತ್ಯ. ಎರಡು : ಜನಪದಸಾಹಿತ್ಯ. ಈ ಮೊದಲು (೧೯೯೯) ಪ್ರಕಟವಾದ "ಕಿತ್ತೂರು ಸಂಸ್ಥಾನ ಸಾಹಿತ್ಯ:ಭಾಗ-೧"ರಲ್ಲಿ ಕವಿಸಾಹಿತ್ಯದ ೭ ರಚನೆಗಳು, ಜನಪದಸಾಹಿತ್ಯದ ೧೬ ರಚನೆಗಳು- ಹೀಗೆ ೨೩ ರಚನೆಗಳು ಸೇರಿವೆ. ಪ್ರಸ್ತುತಕೃತಿ ಕೇವಲ ಕವಿಸಾಹಿತ್ಯದ ೧೩೧ ಹಾಡುಗಳನ್ನೊಳಗೊಂಡಿದೆ.

'ಭಾಗ-೧'ರ 'ಅಮೃತಲಿಂಗ' ಮುದ್ರಿಕೆಯ ೪ ಮತ್ತು ೭ನೆಯ ರಚನೆಗಳು ಅಣ್ಣಿಗೆರೆಯ ಅಮೃತೇಶ* ಕೃತವೆಂದು ಗುರುತಿಸಿದ್ದ ನಾವು, ಮಿಕ್ಕ 'ಸಿದ್ಧೇಶ' ಮುದ್ರಿಕೆಯ ೧,೨,೩,೫,೬ ಈ ರಚನೆಗಳ ಕರ್ತೃ ಗೊತ್ತಿಲ್ಲವೆಂದು ಸೂಚಿಸಿದ್ದೆವು. ಈಗ 'ಭಾಗ-೨'ಕ್ಕೆ ಬಳಸಿದ ಎರಡನೆಯ ವಹಿಯ ಆರಂಭದಲ್ಲಿ, ಅದನ್ನು ಸಿದ್ಧಪಡಿಸಿದ ಶ್ರೀ ತಲ್ಲೂರು ರಾಯನಗೌಡರು ಈ ರಚನೆಗಳ ಕರ್ತೃ ನೀಲಕಂಠಾರ್ಯ, ಮುನಿಪುರದ ನೀಲಕಂಠಾರ್ಯನೆಂದು ದಾಖಲಿಸಿದ್ದಾರೆ. ಕಿತ್ತೂರ ಸಾಹಿತ್ಯಶೋಧ ವಿಷಯವಾಗಿ ಕಳೆದ ಶತಮಾನದಲ್ಲಿ ದೊಡ್ಡ ಕೆಲಸ ಮಾಡಿದ ಇವರ ಈ ಹೇಳಿಕೆ ನಂಬಲರ್ಹವಾಗಿದೆ. ಪ್ರಸ್ತುತ ಕೃತಿಯಲ್ಲಿ 'ಸಿದ್ಧೇಶ' ಮುದ್ರಿಕೆಯೊಂದಿಗೆ ಕೆಲವೊಮ್ಮೆ 'ಮುನಿಪುರದ ಸಿದ್ಧೇಶ' ಎಂಬುದೂ ಕಾಣಿಸಿಕೊಂಡಿರುವುದು ಈ ಹೇಳಿಕೆಯನ್ನು ಬೆಂಬಲಿಸುತ್ತದೆ. ಹೀಗಾಗಿ ನೀಲಕಂಠಾರ್ಯನು ಮುನಿಪುರ ಅಂದರೆ ಈಗಿನ ಬೆಳಗಾವ ಜಿಲ್ಲೆಯ ಮುನವಳ್ಳಿಯವನೆಂದು ವಿದಿತವಾಗುತ್ತದೆ.

ತನ್ನ ರಚನೆಯಲ್ಲಿ ಮಲ್ಲಸರ್ಜ ಮತ್ತು ಅವನ ಮಕ್ಕಳನ್ನು ತನ್ನ ಸಮಕಾಲೀನರೆಂಬಂತೆ ಉಲ್ಲೇಖ ಮಾಡಿರುವುದರಿಂದ, ಇಷ್ಟೇ ಏಕೆ ಕಾಮದಹನ ಲೀಲೆಯ ಕಥೆಯನ್ನು ತಾನು ಮಲ್ಲಸರ್ಜನಿಗೆ ವಿವರಿಸಿದುದನ್ನು ೧೧೭ನೆಯ ಹಾಡಿನಲ್ಲಿ ಪ್ರಸ್ತಾಪ ಮಾಡಿರುವುದರಿಂದ ಮತ್ತು ಶಿವಲಿಂಗರುದ್ರಸರ್ಜನು ತನ್ನ ಮಗನ ಮದುವೆಗೆ ಆರ್ಥಿಕ ಸಹಾಯ ಮಾಡಿದನೆಂದು ಹೇಳಿರುವುದರಿಂದ, ನೀಲಕಂಠಾರ್ಯನು ಮಲ್ಲಸರ್ಜನ ಸಮಕಾಲೀನನೆಂದು ಸ್ಪಷ್ಟವಾಗುತ್ತದೆ. ಶಕೆ ೧೭೨೫ (ಕ್ರಿ.ಶ. ೧೮೦೩)ರಲ್ಲಿ ಮಲ್ಲಸರ್ಜನ ಅರಮನೆಯಲ್ಲಿ ಜರುಗಿದ ಬಸವಪುರಾಣಪ್ರವಚನವನ್ನು ಈತ ಕಣ್ಣಾರೆ ಕಂಡು ತನ್ನ 'ಮಲ್ಲೇಂದ್ರ ಭಕ್ತಿತರಂಗಿಣಿ'ಯಲ್ಲಿ ವರ್ಣಿಸಿದ್ದಾನೆ. 'ಮಲ್ಲೇಂದ್ರ ಪೂಜಾವಿಲಾಸ' ಕೃತಿಯನ್ನು ತಾನು ಶಕೆ ೧೭೨೭(ಕ್ರಿ.ಶ. ೧೮೦೫)ರಲ್ಲಿ ಮುಕ್ತಾಯಗೊಳಿಸಿರುವುದಾಗಿ ಹೇಳಿಕೊಂಡಿದ್ದಾನೆ. 'ಮಲ್ಲೇಂದ್ರವಿಜಯ' ಕೃತಿಯಲ್ಲಿ ಮಲ್ಲಸರ್ಜನ ಹೆಂಡತಿ ರುದ್ರವ್ವನ ಮರಣದ ಪ್ರಸ್ತಾಪವಿದೆ. ಹೀಗಾಗಿ ಈ ಕವಿಯು ೧೮ ಮತ್ತು ೧೯ನೆಯ ಶತಮಾನಗಳ ಮಧ್ಯ ಬದುಕಿದವನಾಗಿದ್ದಾನೆ. ಇಷ್ಟನ್ನು ಬಿಟ್ಟರೆ ಇತರ ವಿವರಗಳು ಸಿಗುವುದಿಲ್ಲ.

---

* ಈ ಹೆಸರಿನಲ್ಲಿ ಕೆಲವರು ಅಮೃತೇಶಕವಿ, ಕಾಶಿರಾಜ ಎಂಬ ಎರಡು ಹೆಸರುಗಳನ್ನು ಭಾವಿಸಿದ್ದಾರೆ. ಆದರೆ ಇವನು ಅಣ್ಣಿಗೆರೆಯ ಅಮೃತೇಶನ ಭಕ್ತ ಕೇಶಿರಾಜ. ಹೀಗಾಗಿ ಇಲ್ಲಿರುವುದು ಒಂದು ಹೆಸರು ಮಾತ್ರ. ನೋಡಿ, ಭಾಗ ೧ ಪು. ೯೨ರ ಗದ್ಯ.

ಪ್ರಸ್ತುತ ಕೃತಿಯಲ್ಲಿ 'ಮುಚಖಂಡಿವೀರ' ಮುದ್ರಿಕೆಯ ಹಾಡುಗಳೂ ಇವೆ. ಈ ಮುದ್ರಿಕೆಯ ಕವಿ ಹೆಸರು ಗೊತ್ತಾಗದಿದ್ದರೂ ಈತನ ಊರು ಮಾತ್ರ ಬಾಗಿಲಕೋಟ ತಾಲೂಕಿನ ಮುಚಖಂಡಿಯೆಂದು, ಈತನು ಅಲ್ಲಿಯ ವೀರಭದ್ರನ ಭಕ್ತನೆಂದು ತಿಳಿದುಬರುತ್ತದೆ.

ಒಟ್ಟಾರೆ, ಕಿತ್ತೂರು ಸಂಸ್ಥಾನದ ಆಶ್ರಯದಲ್ಲಿ ಅಣ್ಣಿಗೆರೆ ಅಮೃತೇಶ, ಮುನಿಪುರದ ನೀಲಕಂಠಾರ್ಯ, 'ಮುಚಖಂಡಿ ವೀರ' ಮುದ್ರಿಕೆಯ ಕವಿ-ಹೀಗೆ ಮೂವರಿದ್ದುದು ಗೊತ್ತಾಗುತ್ತದೆ. ೭ನೆಯ ಹಾಡಿನಲ್ಲಿ ಬರುವ "ಸರಸಕವಿಗಳೈವರು" ಎಂಬ ಮಾತು ಈ ಆಸ್ಥಾನದಲ್ಲಿದ್ದ ೫ ಜನ ಕವಿಗಳನ್ನು ಸೂಚಿಸುವಂತಿದೆ. ಇದು ನಿಜವಿದ್ದಲ್ಲಿ ಇನ್ನೂ ಇಬ್ಬರು ಕವಿಗಳನ್ನು, ಅವರ ಕೃತಿಗಳನ್ನು ನಾವು ಶೋಧಿಸಬೇಕಿದೆ.

ಈ ಕೃತಿಯಲ್ಲಿ ಮುನವಳ್ಳಿ ನೀಲಕಂಠಾರ್ಯನ ೧೨೧, ಮುಚಖಂಡಿವೀರ ಮುದ್ರಿಕೆಯ ೧೦-ಹೀಗೆ ೧೩೧ ಹಾಡುಗಳಿವೆ. ರಾಜಭಕ್ತಿ, ದೈವಭಕ್ತಿಗಳನ್ನು ಕೇಂದ್ರವಸ್ತುವಾಗಿಟ್ಟುಕೊಂಡು ಬರೆದ ಪಾಂಡಿತ್ಯಪ್ರಧಾನ ರಚನೆಗಳಿವು. ೧೮-೧೯ನೆಯ ಶತಮಾನಗಳ ಮಧ್ಯಕಾಲದಲ್ಲಿ ಕನ್ನಡಭಾಷೆ-ಸಾಹಿತ್ಯಗಳಿಗೆ ಗ್ರಹಣ ಆವರಿಸಿದ್ದಿತು. ಉರ್ದು ಭಾಷೆ, ಮರಾಠಿ ಭಾಷೆ- ಸಾಹಿತ್ಯಗಳು ಕರ್ನಾಟಕದಲ್ಲಿ ಗಟ್ಟಿಯಾಗಿ ಕಾಲೂರಿದ್ದವು. ಸಾಹಿತ್ಯದಲ್ಲಿ ಹೊಸ ಪ್ರಯೋಗಗಳು ನಿಂತುಹೋಗಿ, ಪಾಂಡಿತ್ಯಪ್ರದರ್ಶನವೇ ನಿಜವಾದ ಕಾವ್ಯವೆಂಬ ಭಾವನೆ ಬೆಳೆದಿದ್ದಿತು. ಹೀಗಾಗಿ ಈ ಆಸ್ಥಾನದಲ್ಲಿಯೂ ಸಂಸ್ಕೃತಭೂಯಿಷ್ಠ ಪ್ರಾಸಾನುಪ್ರಾಸ ರಚನೆಗಳೇ ಹುಟ್ಟಿಕೊಂಡವು. ತತ್ವಪದಗಳ ವಿನ್ಯಾಸವೇ ಈ ಹಾಡುಗಳಲ್ಲಿ ಪ್ರಧಾನವಾಗಿದ್ದರೂ ಅಲ್ಲಲ್ಲಿ ಜನಪದ ಛಂದೋವಿನ್ಯಾಸದ ರಚನೆಗಳೂ ಇವೆ.

ಇದು ಓದುವ ಸಾಹಿತ್ಯವಲ್ಲ, ಕೇಳುವ ಸಾಹಿತ್ಯ. ಇಲ್ಲಿ ಸೂಚಿತವಾದ ರಾಗ, ತಾಳಗಳೇ ಇದಕ್ಕೆ ನಿದರ್ಶನ. ಆದುದರಿಂದ ಇವುಗಳನ್ನು ಹಾಡಿ ವಿಮರ್ಶೆ ಮಾಡುವುದು ನ್ಯಾಯವೆಂದು ತೋರುತ್ತದೆ. ಅದೇನೇ ಇರಲಿ, ಸಮಕಾಲೀನ ರಚನೆಗಳಾಗಿರುವ ಇವು ಚಾರಿತ್ರಿಕ, ಸಾಂಸ್ಕೃತಿಕ ದೃಷ್ಟಿಯಿಂದ ಈ ಕೆಳಗಿನಂತೆ ನಮ್ಮ ಗಮನ ಸೆಳೆಯುತ್ತವೆ.

ಹಸ್ತಪ್ರತಿಯಲ್ಲಿಯೇ ಕಿತ್ತೂರ ದೇಸಾಯಿಯರ ಪದಗಳು, ಸ್ತೋತ್ರಪದಗಳು, ಆರತಿಪದಗಳು ಎಂಬ ಉಪಶೀರ್ಷಿಕೆಗಳಿದ್ದು, ಇವು ಈ ಹಾಡುಗಳ ಧೋರಣೆಯನ್ನು ಸೂಚಿಸುತ್ತವೆ. ಕನ್ನಡದಲ್ಲಿ ರಾಜರ ರೂಪ-ಲಾವಣ್ಯ-ಶೌರ್ಯಗಳನ್ನು ವರ್ಣಿಸುವ, ಅವರಿಗೆ ಶುಭ ಹಾರೈಸುವ, ಅವರನ್ನು ಪುರಾಣಪುರುಷರೊಂದಿಗೆ ಹೋಲಿಸಿ ಬರೆಯುವ ಪದ್ಧತಿ ತುಂಬ ಪ್ರಾಚೀನವಾದುದು. ಇಲ್ಲಿ ಈ ಮೂರೂ ರೀತಿಗಳಿವೆ. ಕೆಲವು ಹಾಡುಗಳು ರಾಜನಿಗಾಗಿ ಹಂಬಲಿಸುವ ಪ್ರೇಯಸಿಯ ವಿರಹದ ನಿರೂಪಣೆಯಲ್ಲಿ ಆರಂಭವಾಗಿ, ಕೊನೆಯಲ್ಲಿ ದೇವನಿಗಾಗಿ ಹಂಬಲಿಸುವ ಭಕ್ತನ ಆರ್ತನಾದದ ತಿರುವು ಪಡೆಯುತ್ತವೆ. ಈ ದೃಷ್ಟಿಯಿಂದ ನೋಡಿದರೆ ಮಾತ್ರ ಈ ಹಾಡುಗಳಿಗೆ ನ್ಯಾಯ ಸಿಗುತ್ತದೆ.

ಕಿತ್ತೂರು ಸಂಸ್ಥಾನದ ಚರಿತ್ರೆಗೆ ಸಂಬಂಧಪಟ್ಟಂತೆ ದಾಖಲೆಗಳು ಕಡಿಮೆ. ಇಂಥ ಸಂದರ್ಭದಲ್ಲಿ ಕಿತ್ತೂರು ಸಂಸ್ಥಾನ ಸಾಹಿತ್ಯ:ಭಾಗ-೧ ರಂತೆ, ಈ ಭಾಗ-೨ ಕೂಡ ಚಾರಿತ್ರಿಕ ಸಾಮಗ್ರಿಯನ್ನು ಹೀಗೆ ಒದಗಿಸುತ್ತದೆ:

ಕಿತ್ತೂರು ದೇಶ ಮತ್ತು ಸಂಸ್ಥಾನಗಳ ಬಗ್ಗೆ ಈ ಕವಿಗಳಿಗೆ ವಿಶೇಷ ಹೆಮ್ಮೆ, ಭಕ್ತಿ. "ಭೂಸತಿಯ ವದನ ಕುಶೇಶಯ ಭಕ್ತಿಯ ಕೋಶ" (ಹಾಡು ೮೪) ವೆಂದು, "ಹರಶರಣರ ಸರಣಿಯೊಳು ಕಲ್ಯಾಣವ ಮೆರೆಸುವ, ಭಕ್ತಿಭಾವದಿ ಮೆರೆವ" (೬೮) ರಾಜಧಾನಿಯೆಂದು ಕಿತ್ತೂರನ್ನು ವರ್ಣಿಸಲಾಗಿದೆ. ಈ ರಾಜ್ಯ ೧೪ ರಾಜಕೀಯ ವಿಭಾಗಗಳನ್ನೊಳಗೊಂಡುದನ್ನು "ಕರ್ಯಾತಿ ಪದಿನಾಲ್ಕು(೪೨)", ಚತುರ್ದಶ ಸಂಖ್ಯಾಯುತ ಮಹಲು " (೪೮) ಎಂಬ ಮಾತುಗಳು ಸ್ಪಷ್ಟಪಡಿಸುತ್ತವೆ. ಈ ಅರಸರ ವಿವರಗಳು ಈ ಹಾಡುಗಳಲ್ಲಿ ಹೀಗೆ ಬರುತ್ತವೆ: ಮಹಾದೇವನ ಕೃಪೆಯಿಂದ ಈ ರಾಜ್ಯ ಅಸ್ತಿತ್ವಕ್ಕೆ ಬಂದಿತು. ಆಮೇಲೆ "ಪಾದಶಹ ತಾನಿತ್ತ ಮೇಲಾದ ಬಿರುದುಗಳ"ನ್ನು ಈ

ರಾಜರು ಪಡೆದರು. ದುರ್ಜನರ ಚಾಡಿಯಿಂದಾಗಿ ಪೇಶವೆಯವರಿಗೂ ಕಿತ್ತೂರ ಅರಸರಿಗೂ ಕಾಳಗವೇರ್ಪಟ್ಟು, ಒಪ್ಪಂದದಲ್ಲಿ ಬಗೆಹರಿಯಿತು. ಅನಾರೋಗ್ಯ ಕಾರಣವಾಗಿ ಮಲ್ಲಸರ್ಜನು ಪುಣೆ (ಪುಣ್ಯ)ಯಿಂದ ಬಿಡುಗಡೆ ಹೊಂದಿ, ದಾರಿಯಲ್ಲಿದುರದುಂಡೀಶನ ದರ್ಶನ ಪಡೆದು, ಕಿತ್ತೂರಿನಲ್ಲಿ ಗುರುಸಿದ್ಧೇಶನ ಪಾದ ಕಂಡು, ಶಿವೈಕ್ಯನಾದನು. ಇಷ್ಟು ವಿಷಯ ೭೧ನೆಯ ಹಾಡಿನಲ್ಲಿದೆ. ೪೫ ನುಡಿಗಳ ೧೧೭ನೆಯ ಹಾಡು "ಶ್ರೀಮನ್ಮಲ್ಲನೃಪಾಲ ಚರಿತ್ರೆ" ಎಂದೇ ಆರಂಭವಾಗಿ ಹೀಗೆ ಮುಂದುವರಿಯುತ್ತದೆ. ಕಿತ್ತೂರು ಧರಣೀಸ್ತ್ರೀಮುಖಕಮಲದಂತಿದೆ. ಇಲ್ಲಿ ಅಷ್ಟಾವರಣ ತತ್ವನಿಷ್ಠನಾದ ಮಲ್ಲಸರ್ಜನು ಆಳುತ್ತಿದ್ದನು. ಮತ್ತಗಜವೇರಿ ರಾಜಧಾನಿಯಲ್ಲಿ ದೇವೇಂದ್ರನೇ ಭೂಮಿ ನೋಡಲು ಬಂದಂತೆ ವಿಹರಿಸುತ್ತಿದ್ದನು. ಇವನಿಗೆ ಶಿವಲಿಂಗಸರ್ಜ, ರುದ್ರಸರ್ಜ, ವೀರಭದ್ರಸರ್ಜ ಎಂದು ಮೂವರು ಮಕ್ಕಳು. ಫಾಲ್ಗುಣ ಮಾಸದಲ್ಲಿ ಈತನು ಕಾಮದಹನ ಹಬ್ಬವನ್ನು ಆಚರಿಸುತ್ತಿದ್ದನು.

ಈ ರಾಜನಿಗೆ ಶಮಶರಜಂಗಬಹದ್ದೂರ ಬಿರುದಿದ್ದಿತು (೩೧, ೪೬, ೫೭). ೪೮ನೆಯ ಹಾಡು ರಾಜನು ಸದರವನ್ನೇರಿದ ದೃಶ್ಯವನ್ನೊಳಗೊಂಡಿದ್ದು, ಹದಿನಾಲ್ಕು ಮಹಲಿನವರು ಕಾಣಿಕೆ ನೀಡುವ, ಕವಿ, ನರ್ತಕಿ, ಚತುರಂಗದಳ ನೆರೆದ, ವಿವರ ಇಲ್ಲಿದೆ. ಆಸ್ಥಾನದಲ್ಲಿ ಬಹುಶಃ ಐದುಜನ ಕವಿಗಳಿದ್ದರು (೬೯). ವೀರಭದ್ರ ಭೂರಮಣಾತ್ಮಜನಾದ (೪೮) ಮಲ್ಲಸರ್ಜನು 'ಕವಿತಾಸ್ತವ ಶ್ರವಣವಿನೋದ(೪)ನಾಗಿದ್ದನು. ಅವನ ಈ ಅಭಿರುಚಿಯನ್ನು, ಗಾನಶ್ರವಣವಿಶಾರದ, ವೀಣಾವಿಷಯದಿ ನಾರದ (೪೪), ಕವಿತಾಮೋದ, ಶ್ರವಣವಿನೋದ (೪೮) ಎಂಬ ಹೇಳಿಕೆಗಳು ಬೆಂಬಲಿಸುತ್ತವೆ. ಇದರಿಂದಾಗಿ ಮಲ್ಲಸರ್ಜನು "ಭೋಜನೋಲ್ ಪಂಡಿತರಾಜಿಯೊಳ್" (೪೯) ಶೋಭಿಸುತ್ತಿದ್ದನು. ಜನಹಿತಕ್ಕಾಗಿ ವಾಪಿ, ಕೂಪ ನಿರ್ಮಿಸಿದ್ದನು (೮೩).

ಮಲ್ಲಸರ್ಜನ ರಾಣಿ ರುದ್ರಾಂಬೆ. ಇವಳ ಮಕ್ಕಳ ವಿವರ ೧೧೭ನೆಯ ಹಾಡಿನಲ್ಲಿದೆ. ಬಹುಶಃ ಇವಳ ಸಮಾಧಿ ಮಲಪಹಾರಿ ನದೀತೀರದಲ್ಲಿರುವ ಸೂಚನೆಯೂ ಇಲ್ಲಿದೆ. ಈಕೆ 'ರೂಪದಿರಂಭೆ, ಚರಪದ ಕಂಜ ರೋಲಂಬೆ। ವಿಲಸದ್ಗುಣ ನಿಕುರುಂಬೆ" ಎಂದು ೬೮ನೆಯ ಹಾಡಿನಲ್ಲಿ ಚಿತ್ರಿತಳಾಗಿದ್ದಾಳೆ. ಸೆರೆಯಿಂದ ಗಂಡ ಮರಳುವ ಸಲುವಾಗಿ ಇವಳು ಹಿಡಿದ ವ್ರತದ ಉಲ್ಲೇಖ ಈ ಹಾಡಿನಲ್ಲಿದೆ. ೮೮ನೆಯ ಹಾಡಿನಲ್ಲಿಯೂ ಇದೆ. ರುದ್ರಾಂಬೆಯ ತಾಯಿ ನೀಲಾಂಬೆ. ೮೯ನೆಯ ಹಾಡು "ನೀಲಾಂಬೆ ಕರುಣಾರಸಾಲಂಬೆ" ಎಂದು ಆರಂಭವಾಗುತ್ತಿದ್ದು, ಇವಳ "ವೀರಶೈವ ಕ್ರಿಯಾಚಾರ" ತತ್ಪರತೆಯನ್ನು ಸೂಚಿಸುತ್ತದೆ. "ಕರತಳ ಲಿಂಗದಿ ಬೆರೆದ ನೀಲಾಂಬೆಯ ತೆರದಿ ನೀಲಾಂಬೆ" ಎಂದು ೬೮ನೆಯ ಪದ್ಯ ಇವಳನ್ನು ವರ್ಣಿಸಿದುದು ತುಂಬ ವಿಶೇಷವೆನಿಸಿದೆ. ಶಿವಲಿಂಗ ರುದ್ರಸರ್ಜರ ಉಲ್ಲೇಖ ೩೩, ೫೯-೬೭, ೭೨-೮೩, ೮೭, ೯೦-೯೩, ಇಷ್ಟು ಪದ್ಯಗಳಲ್ಲಿದೆ. ಶಿವಲಿಂಗರುದ್ರಸರ್ಜನನ್ನು, "ಶಿವಪದಾಂಬುಜ ಪೂಜನೋತ್ಸವ" ಎಂದು ಮುಂತಾಗಿ ೬೨ನೆಯ ಹಾಡು, "ಕರದ ಲಸದಿಷ್ಟ ಮಂಗಲ ಲಿಂಗದೊಳು ಮನಂ, ಕೊರಳೊಳು ಶಿವಾಕ್ಷಿಮಾಲಾಜಾಲ, ಮೆರೆವ ಫಾಲದಿ ವಿಧಿಯ ಬರಹವನೊರೆಸುವ ರುಚಿವೆರಸಿದ ಭಸಿತಾಲೇಪ" ಎಂದು ೬೬ನೆಯ ಹಾಡು ವರ್ಣಿಸಿವೆ. ೭೨ನೆಯ ಹಾಡು ಶಿವಲಿಂಗರುದ್ರ "ಸದರವೇರಿದ" ವಿವರವನ್ನೊಳಗೊಂಡಿದೆ. ೭೪ರಿಂದ ಮುಂದಿನ ಕೆಲವು ಹಾಡುಗಳು ಗುರುಸಿದ್ಧೇಶ, ದುರದುಂಡೀಶ್ವರ, ಬಸವಲಿಂಗಾರ್ಯ, ವೀರೇಶ ಮೊದಲಾದವರು ಈ ರಾಜಕುಮಾರನನ್ನು ಪಾಲಿಸಲೆಂದು ಹಾರೈಸುತ್ತವೆ. ೬೫ನೆಯ ಹಾಡು ಕವಿ ನೀಲಕಂಠಾರ್ಯನ ಮಗನ ಮದುವೆಗೆ ಶಿವಲಿಂಗರುದ್ರನು ಸಹಾಯ ಮಾಡಿದುದನ್ನು ಸೂಚಿಸುತ್ತದೆ.

ಈ ಸಂಕಲದ ಮುಖ್ಯವಿಷಯ ಧಾರ್ಮಿಕ ಆಚರಣೆ, ದೈವಭಕ್ತಿ. ೩೦,೬೯,೧೧೭ನೆಯ ಹಾಡುಗಳು ಕಿತ್ತೂರಿನಲ್ಲಿ ಮಲ್ಲಸರ್ಜನು ಆಚರಿಸುತ್ತಲಿದ್ದ ಹೋಳಿಹಬ್ಬವನ್ನು ವಿವರಿಸುತ್ತವೆ. ರಾಜನೇ ಬೀದಿಗಿಳಿದು ಅಧಿಕಾರಿಗಳು, ಮಕ್ಕಳು, ಪ್ರಜೆಗಳೊಡನೆ ಆಟವಾಡುತ್ತಿದ್ದನೆಂದೂ, ಆಗ ಸಂಗೀತ, ಸಾಹಿತ್ಯ, ನೃತ್ಯ ಪ್ರದರ್ಶನಗಳು

ಜರುಗುತ್ತಿದ್ದವೆಂದೂ ಹೇಳಲಾಗಿದೆ.ಈತನು ಬಸವಪುರಾಣ ಪ್ರವಚನವೇರ್ಪಡಿಸಿದ ಸಂಗತಿ ೩೧, ೭೬ನೆಯ ಹಾಡುಗಳಲ್ಲಿದೆ. ಈ ಪ್ರವಚನ ಮಾಡಿದವನು ಬಸವಲಿಂಗಾರ್ಯ. ಈತನಿಗೆ ಟೀಕಿನ ಬಸವಲಿಂಗಾರ್ಯನೆಂದು ಕರೆಯುತ್ತಿದ್ದರು. ಬಹುಶಃ ಇವನು ಹುಬ್ಬಳ್ಳಿ ಮಠದಲ್ಲಿ ಐಕ್ಯವಾದುದನ್ನು ೭೬ನೆಯ ಹಾಡು ತಿಳಿಸುತ್ತದೆ. ಯುಗಾದಿ, ಕಾರ್ತಿಕ ಮಾಸಗಳಲ್ಲಿ ಉತ್ಸವ ಏರ್ಪಡಿಸುತ್ತಿದ್ದ ವಿಷಯ ೪೮ನೆಯ ಹಾಡಿನಲ್ಲಿದೆ.

ಶ್ರಾವಣಮಾಸದ ಜಂಗಮ ಪಾದಪೂಜಾ ಕಾರ್ಯಕ್ರಮದ ವಿವರವನ್ನೊಳಗೊಂಡಿದೆ, ೬೮ನೆಯ ಸುದೀರ್ಘ ಹಾಡು. ಪ್ರಸಾದ, ವಸ್ತ್ರದಾನಗಳು ಈ ಕಾರ್ಯಕ್ರಮದ ಮುಖ್ಯಭಾಗವೆನಿಸಿದ್ದವು. ಹೆಂಡತಿ ರುದ್ರಾಂಬೆಯೊಡನೆ ರಾಜನು ಗುರು ಮಡಿವಾಳ (ಶಾಸ್ತ್ರಿ)ನ ನಿರ್ದೇಶನದಂತೆ ಇದನ್ನು ಆಚರಿಸುತ್ತಿದ್ದನು. ಸಚಿವ ವೀರಸಂಗಪ್ಪನದೇ ಇಲ್ಲಿಯ ವ್ಯವಸ್ಥೆ. ಹೂವು ಹಣ್ಣುಗಳ ರಾಶಿ, ವಾದ್ಯಗಳ ಧ್ವನಿ, ಗಾಯಕರ ಸಂಗೀತ, ನರ್ತಕಿಯರ ನರ್ತನ ಇತ್ಯಾದಿಗಳಿಂದ ಈ ಪಾದಪೂಜೆ ಒಂದು ತಿಂಗಳು ಜರುಗುತ್ತಲಿದ್ದಿತು. ರಾಜನು ಈಗ ವಿಶೇಷ ಕರತಲ ಲಿಂಗಪೂಜೆ ನೆರವೇರಿಸುತ್ತಿದ್ದನು. ಕೊನೆಯ ದಿನ ಚೌಕಿಮಠದ ಗುರುಸಿದ್ಧಸ್ವಾಮಿಗಳ ಪಾದಪೂಜೆ ಸಲ್ಲಿಸುತ್ತಿದ್ದನು.

ಇಂಥ ಇನ್ನೊಂದು ವಿಷಯವೆಂದರೆ ಬೇರೆ ಬೇರೆ ಗ್ರಾಮಗಳ, ದೇವತೆಗಳ ಮತ್ತು ಗುರುಗಳ ಸ್ತುತಿ. ಕಾದರವಳ್ಳಿಯ ಜಾತ್ರೆ (೫೪)ಯ ವರ್ಣನೆಯನ್ನೊಳಗೊಂಡ ಸುದೀರ್ಘ ಹಾಡು ಅಲ್ಲಿಯ ದೇವತೆಗಳನ್ನು, ವೀರಭದ್ರನನ್ನು ಸೂಚಿಸುತ್ತದೆ. ಮಲ್ಲಸರ್ಜನು ಇಲ್ಲಿಗೆ ಆಗಮಿಸಿ ಶಿವ-ಪಾರ್ವತಿಯರ ಮದುವೆ ನೆರವೇರಿಸುತ್ತಿದ್ದನು. ಇದೇ ರೀತಿ ನಂದಿಹಳ್ಳಿಯ ನಂದಿಕೇಶ(೧೦೦), ಜಾಲಿಕಟ್ಟಿ ಬಸವೇಶ (೧೦೧), ಬೆಳುವಡಿ ವೀರ (೮೪) ಇವರ ಸ್ತುತಿ ಇಲ್ಲಿದೆ. ಗುರುಗಳನ್ನು ಕುರಿತು ಹೇಳುವುದಾದರೆ ಶಿರಹಟ್ಟಿ ಫಕೀರೇಶ್ವರ (೧೧೦), ಪಟ್ಟದಾರ್ಯ (೧೦೮), ಅಲ್ಲಮಪ್ರಭು (೯೭), ಬಸವಲಿಂಗಾರ್ಯ(೭೬) ರನ್ನು ಕೆಲವು ಹಾಡುಗಳು ಉಲ್ಲೇಖಿಸುತ್ತವೆ. ಚೌಕಿಯ ಗುರುಸಿದ್ಧೇಶ್ವರ (೫೫, ೭೪, ೧೦೬, ೧೧೫, ದುರದುಂಡೀಶ್ವರ (೧೦೪, ೧೦೭, ೧೧೯, ೯೨, ೭೫, ೫೫), ಮುರಿಗಾಜಗದ್ಗುರು (೯೫, ೯೬)ಗಳ ಉಲ್ಲೇಖ ಅನೇಕ ಸಲ ಕಂಡುಬರುತ್ತದೆ. ೯೬ನೆಯ ಹಾಡು ತೋಂಟದ ಸಿದ್ಧಲಿಂಗನನ್ನು, ಅವನ ಪರಂಪರೆಯ ಬೋಳಬಸವ, ಗುಮ್ಮಳಾಪುರ ಸಿದ್ಧವೀರ, ಗೂಳೂರು ಸಿದ್ಧೇಶ, ಗಗನದಾರ್ಯ, ಕಟ್ಟಿಗೆಹಳ್ಳಿ ಗುರು, ಮುರುಗಾ ಶಾಂತವೀರ, ಮುರುಗಾ ಗುರುಸಿದ್ಧ, ಸೋದೆ ಚೆನ್ನಬಸವ, ಶಿರಪುರ ಸಿದ್ಧಲಿಂಗ, ನಾಯಕಪಲ್ಲಿ ಗುರುಪಾದಯತಿ, ಇಮ್ಮಡಿ ಗುರುಪಾದ, ಮೂರುಸಾವಿರ ಶಿವಲಿಂಗ, ಸದಾಶಿವ ಚೆನ್ನವೀರ, ವ್ಯಾಕರಣ ಸಿದ್ಧಲಿಂಗ, ಸಿದ್ಧವೃಷಭ, ರಾಚವಟ್ಟಿ ಮುರುಗೇಂದ್ರರನ್ನು ಸ್ತುತಿಸುತ್ತದೆ. ೫೫ನೆಯ ಹಾಡಿನಲ್ಲಿ ಹೊಂಡದ ಬಸವೇಶ್ವರ, ಕೆಂಡಗಣ್ಣಿನ ವೀರೇಶ್ವರ, ನಂದಿಹಳ್ಳಿ ಬಸವೇಶ್ವರ, ತಿಗಡಿಯ ಸಿದ್ಧವೃಷೇಶ್ವರ, ಕಾದರವಳ್ಳಿಯ ಶಿವಾಪರಮೇಶ್ವರ, ಸಾವಳಗಿಯ ದೇವ, ಪಂಪಾವಿರೂಪಾಕ್ಷ (ಕೂಡಲ) ಸಂಗಮಶಿವ, ನಂಜುಂಡೇಶ್ವರರು ಮಲ್ಲಸರ್ಜಾದಿಗಳನ್ನು ರಕ್ಷಿಸಲೆಂದು ಹಾರೈಸಲಾಗಿದೆ. ೧೦೨ನೆಯ ಹಾಡು ಮುರಗೋಡ ವೀರಭದ್ರನನ್ನು ಸ್ತುತಿಸುತ್ತ, ಕಲ್ಯಾಣದಿಂದ ಉಳಿವೆಗೆ ಶರಣರು ಈ ಗ್ರಾಮದ ಮೂಲಕ ಹೋದರೆಂದು ತಿಳಿಸುತ್ತದೆ.

ಇಂಥ ಧಾರ್ಮಿಕ ವಾತಾವರಣವನ್ನು ಬದುಕುತ್ತಲಿದ್ದ ಮಲ್ಲಸರ್ಜನನ್ನು "ಗಣ ವಿಸರವನುವಣಿಸಿದಿ ವೃಷಭೇಂದ್ರನ ತೆರ ನೀನು (೩೧) ಎಂದೂ, 'ಮಲ್ಲಮಹೇಶ ವೃಷೇಶ'ನೆಂದೂ ಕೀರ್ತಿಸುವ ಮೂಲಕ ಕಲ್ಯಾಣದ ಬಸವಣ್ಣನೊಂದಿಗೆ ಹೋಲಿಸಲಾಗಿದೆ. ಇದಲ್ಲದೆ ಕಲ್ಯಾಣ ಬಸವಣ್ಣನನ್ನು "ವೀರಶೈವಾಚಾರ ಸಂಸ್ಥಾಪನಾ ಕಾರಣ " (೧೦೧) ಎಂದು ಕರೆದುದು ವಿಶೇಷವೆನಿಸಿದೆ. ಹೀಗೆ ಈ ಕೃತಿ ಕಳೆದುಹೋದ ಕಿತ್ತೂರು ಸಂಸ್ಥಾನದ ಚಾರಿತ್ರಿಕ ಸಣ್ಣ ಸಣ್ಣ ಕೊಂಡಿಗಳನ್ನು ಒದಗಿಸುತ್ತದೆ. ಇತಿಹಾಸ ರಚನೆಯಲ್ಲಿ ಖಂಡಿತ ನೆರವಾಗುತ್ತದೆ.

ಈ ಎರಡೂ ಸಂಪುಟಗಳ ಕವಿಸಾಹಿತ್ಯದಲ್ಲಿ ರುದ್ರವ್ವನ ಹೆಸರು ಪ್ರಧಾನ, ಜನಪದ ಸಾಹಿತ್ಯದಲ್ಲಿ ಚೆನ್ನವ್ವನ ಹೆಸರು ಪ್ರಧಾನ. ಈ ಕವಿಸಾಹಿತ್ಯದಲ್ಲಿ ಚೆನ್ನವ್ವನ ಹೆಸರು ಎರಡು ಸಲ (ಭಾಗ-೧, ಪು ೫೦, ೧೦೧) ಮಾತ್ರ ಬಂದಿದೆ. ಬಹುಶಃ ಪಟ್ಟದ ರಾಣಿಯಾದ ರುದ್ರವ್ವನ ಮುಂದೆ ಚೆನ್ನವ್ವ ಈ ಕವಿಗಳ ಅವಗಣನೆಗೆ ಗುರಿಯಾದಂತಿದೆ. ಚೆನ್ನವ್ವನ ವ್ಯಕ್ತಿತ್ವ ಪೂರ್ಣಪ್ರಮಾಣದಲ್ಲಿ ಬಿಚ್ಚಿಕೊಂಡುದು ಮಲ್ಲಸರ್ಜ ಸತ್ತ ಬಳಿಕ. ಅಂದರೆ ರಾಜ್ಯದ ಎಲ್ಲ ಹೊಣೆ ಅವಳ ಹೆಗಲೇರಿದ ಸಂದರ್ಭದಲ್ಲಿ. ಇದನ್ನು ನೋಡಿದರೆ ಮಲ್ಲಸರ್ಜ ಬದುಕಿದ್ದರೆ ಚೆನ್ನವ್ವನ ಸ್ವಾಭಿಮಾನಿ ವ್ಯಕ್ತಿತ್ವ ಇತಿಹಾಸದಲ್ಲಿ ಎಲೆಯ ಮರೆಯ ಕಾಯಿಯಾಗಿ ಉಳಿಯುತ್ತಿದ್ದಿತೇನೋ ಎನಿಸುತ್ತದೆ.

ಪರಿಷ್ಕರಣ

ಅಲಕ್ಷಿತ ವಿಷಯದ ಬಗ್ಗೆ ಸಂಶೋಧಕನಿಗೆ ತುಂಬ ಪ್ರೀತಿ. ಹೀಗಾಗಿ ಉಪೇಕ್ಷೆಗೆ ಗುರಿಯಾಗಿದ್ದ ಲಭ್ಯಕೃತಿಗಳನ್ನು ಪ್ರಕಟಿಸಿ, ಅವುಗಳ ಮಹತ್ವವನ್ನು ಎತ್ತಿ ಹೇಳುವುದು ಅವನ ಕರ್ತವ್ಯವಾಗಿದೆ. ಈ ದಾರಿಯಲ್ಲಿ 'ಕಿತ್ತೂರು ಸಂಸ್ಥಾನ ಸಾಹಿತ್ಯ ಭಾಗ -೨" ಪ್ರಕಟವಾಗುತ್ತಲಿದೆ.

ಧಾರವಾಡ ಪ್ರದೇಶವನ್ನು ಸಾಂಸ್ಕೃತಿಕವಾಗಿ ರೂಪಿಸಿದ ಆದ್ಯರಲ್ಲಿ ಆಗಿನ ಕಾಲದ ಕನ್ನಡ ಶಾಲಾಶಿಕ್ಷಕರ ಪಾತ್ರ ತುಂಬ ಮುಖ್ಯವಾದುದು. ಈ ಶ್ರೇಣಿಯ ಮಹತ್ವದ ಶಿಕ್ಷಕರು ಶ್ರೀ ವೀರಪ್ಪ ನಾಗಶೆಟ್ಟಿ ಮಾಸ್ತರರು. ಸಾಹಿತ್ಯರಚನೆ, ಗ್ರಂಥಸಂಗ್ರಹ ಇತ್ಯಾದಿ ಕೆಲಸಗಳಲ್ಲಿ ಮಗ್ನರಾಗಿದ್ದ ಇವರು, ಕಿತ್ತೂರು ದೇಶಗತಿಗೆ ಸಂಬಂಧಿಸಿದ ಕವಿಸಾಹಿತ್ಯವನ್ನು ಯಾವುದೋ ಮೂಲದಿಂದ ಸಂಗ್ರಹಿಸಿ, ವಹಿರೂಪದಲ್ಲಿ ಬರೆದಿಟ್ಟಿರುವರು. ಶ್ರೀ ನಾಗಶೆಟ್ಟಿ ಮಾಸ್ತರರನ್ನು ಕುರಿತು ಎಂ.ಫಿಲ್ ಅಭ್ಯಾಸ ಮಾಡುತ್ತಲಿದ್ದ ಅನ್ನಪೂರ್ಣ ಹತ್ತಿಮತ್ತೂರ ಅವರು ಮಾಸ್ತರರ ಮನೆಯಲ್ಲಿ ಮೇಲೆ ಹೇಳಿದ ವಹಿಗಳನ್ನು ಶೋಧಿಸಿದರು. ಅವುಗಳನ್ನು ಆಧಾರವಾಗಿಟ್ಟುಕೊಂಡು "ಕಿತ್ತೂರು ಸಂಸ್ಥಾನ ಸಾಹಿತ್ಯ" ೧೯೯೯ರಲ್ಲಿ ಬೆಳಕು ಕಂಡಿತು (ಇದರ ಉತ್ತರಾರ್ಧ ಬೇರೆ ಬೇರೆಯವರು ಸಂಗ್ರಹಿಸಿದ್ದ ಲಾವಣಿಗಳನ್ನೊಳಗೊಂಡಿದೆ).

ಆ ಬಳಿಕ ಅನ್ನಪೂರ್ಣ ಅವರು ಶ್ರೀ ನಾಗಶೆಟ್ಟಿ ಅವರ ಮನೆಯಲ್ಲಿ ಶ್ರೀ ನಾಗಶೆಟ್ಟಿ ಮಾಸ್ತರ ಹಸ್ತಾಕ್ಷರ ಪ್ರತಿ, ಶ್ರೀ ತಲ್ಲೂರ ರಾಯನಗೌಡರ ಹಸ್ತಾಕ್ಷರ ಪ್ರತಿ-ಹೀಗೆ ಎರಡು ಕಾಗದ ಪ್ರತಿಗಳನ್ನು ಹುಡುಕಿದರು. ಡಾ. ಚೆನ್ನಕ್ಕ ಎಲಿಗಾರ ಇವುಗಳ ಶುದ್ಧ ಪ್ರತಿ ಸಿದ್ಧಪಡಿಸಿದರು. ನಾನು ಪರಿಷ್ಕರಿಸಿ, ಪ್ರಸ್ತಾವನೆ ಬರೆದು, ಮುದ್ರಣಕಾರ್ಯ ನಿರ್ವಹಿಸಿದೆನು. ಹೀಗಾಗಿ ಈ ಕೃತಿ ಮೂವರ ಹೆಸರಿನಲ್ಲಿ ಪ್ರಕಟವಾಗುತ್ತಲಿದೆ. ಈ ಪ್ರತಿಗಳ ವಿವರ ಹೀಗಿದೆ:

೧. ನಾಗಶೆಟ್ಟಿ ಮಾಸ್ತರ ಪ್ರತಿ: ಇದು ೧೭ ಸೆಂ.ಮೀ. X೧೨ ಸೆಂ.ಮೀ. ಆಕಾರದ ಕಾಗದ ಪ್ರತಿ. ೧೯೫೧ರಲ್ಲಿ ಸಿದ್ಧಗೊಂಡ ಇದು ಆರಂಭದಲ್ಲಿ ಪರಿವಿಡಿ (ಹಾಡಿನ ಮೊದಲ ಸಾಲು) ಆಮೇಲೆ "ಕಿತ್ತೂರು ದೇಸಾಯಿಯರ ಪದಗಳು" ಶೀರ್ಷಿಕೆಯ ಕೆಳಗೆ ೧-೭೩ ಹಾಡುಗಳು, ಸ್ತೋತ್ರಪದಗಳು, ಶೀರ್ಷಿಕೆಯ ಕೆಳಗೆ ೧-೨೮ ಹಾಡುಗಳು, ಗುರುನಾಥ ಕುಮಾರ ಸಿದ್ಧೇಶ್ವರ ಮುದ್ರಿಕೆಯ ೨ ನೀತಿಪದ್ಯಗಳು, ಬಳಿಕ "ಆರತಿ ಪದಗಳು" ಶೀರ್ಷಿಕೆಯ ಕೆಳಗೆ ೧-೧೭ ಹಾಡುಗಳು, ಸಿದ್ಧೇಶ್ವರ ಮುದ್ರಿಕೆಯ ವಾರ್ಧಕಪದ, ಗೌರೀಶ ಮುದ್ರಿಕೆಯ ೧-೪ ಹಾಡುಗಳು, ಚೂರ್ಣಿಕಾ-ಇಷ್ಟು ರಚನೆಗಳನ್ನೊಳಗೊಂಡಿದೆ. ಮುನವಳ್ಳಿ ನೀಲಕಂಠಾರ್ಯನ ಮುದ್ರಿಕೆ 'ಸಿದ್ಧೇಶ'. ಇದನ್ನು ಆಧರಿಸಿ ಈ ಪ್ರತಿಯಿಂದ "ಮುನವಳ್ಳಿ ನೀಲಕಂಠಾರ್ಯನ ಪದಗಳು ವಹಿ-೧" ಶೀರ್ಷಿಕೆಯ ಕೆಳಗೆ ೧೧೨ ಹಾಡುಗಳನ್ನು ಸ್ವೀಕರಿಸಿ, ಮಿಕ್ಕುವುಗಳನ್ನು ಅಡಿಯಲ್ಲಿ ಕೊಡಲಾಗಿದೆ. ಭಾಷೆ, ಲಿಪಿ ದೃಷ್ಟಿಯಿಂದ ಇದು ತುಂಬ ಶುದ್ಧ ಬರಹ.

೨. ತಲ್ಲೂರ ರಾಯನಗೌಡರ ಪ್ರತಿ: ಇದು ೨೧ ಸೆಂ.ಮೀ.X೧೬ ಸೆಂ.ಮೀ. ಆಕಾರದ ಎಕ್ಸರ್‌ಸೈಜ್. ಇದರಲ್ಲಿ ಎರಡು ಭಾಗಗಳಿವೆ. ಮೊದಲಭಾಗದಲ್ಲಿ ಮುಚಖಂಡಿವೀರ, ಸಿದ್ಧೇಶ್ವರನ ಮುದ್ರಿಕೆಗಳ ಒಟ್ಟು ೧೨ ಹಾಡುಗಳಿವೆ. ಎರಡನೆಯ ಭಾಗದಲ್ಲಿ 'ಸಿದ್ಧೇಶ್ವರ' ಮುದ್ರಿಕೆಯ ೧೩ ಹಾಡುಗಳಿವೆ. ಈ ಎರಡೂ ಭಾಗಗಳಿಂದ ಸಿದ್ಧೇಶ್ವರ ಮುದ್ರಿಕೆಯ ಹಾಡುಗಳನ್ನು ಆಯ್ದುಕೊಂಡು "ಮುನವಳ್ಳಿ ನೀಲಕಂಠಾರ್ಯನ ಪದಗಳು: ವಹಿ-೨" ಹೆಸರಿನ ಕೆಳಗೆ ಮುದ್ರಿಸಲಾಗಿದೆ. ಮತ್ತು 'ವಹಿ-೧'ರ ಹಾಡುಗಳ ಕ್ರಮಾಂಕನ್ನು ಇಲ್ಲಿ ಮುಂದುವರಿಸಲಾಗಿದೆ. ಮಿಕ್ಕವುಗಳನ್ನು "ಮುಚಖಂಡಿವೀರ" ಮುದ್ರಿಕೆಯ ಪದಗಳು ವಹಿ-೨" ಹೆಸರಿನ ಕೆಳಗೆ ಮುದ್ರಿಸಲಾಗಿದೆ. ಈ ಹಸ್ತಪ್ರತಿಯ ಕೊನೆಗೆ ಕಿತ್ತೂರನ್ನು ಕುರಿತು ಆಧುನಿಕರು ಬರೆದ ಎರಡು ಹಾಡುಗಳಿದ್ದು, ಅವುಗಳನ್ನು ಕೈಬಿಡಲಾಗಿದೆ.

ಒಟ್ಟಿನಲ್ಲಿ ೧ನೆಯ ವಹಿಯಿಂದ 'ಸಿದ್ಧೇಶ್ವರ' ಮುದ್ರಿಕೆಯ ೧೧೨ ಹಾಡು, ೨ ನೆಯ ವಹಿಯಿಂದ ಸಿದ್ಧೇಶ್ವರ ಮುದ್ರಿಕೆಯ ೯ ಹಾಡು ಮತ್ತು 'ಮುಚಖಂಡಿವೀರ' ಮುದ್ರಿಕೆಯ ೧೦ ಹಾಡು - ಹೀಗೆ ೧೩೧ ಹಾಡುಗಳನ್ನು ಇಲ್ಲಿ ಸಂಕಲಿಸಲಾಗಿದೆ.

* * * *

ಈ ಎರಡೂ ಹಸ್ತಪ್ರತಿಗಳನ್ನು ಈವರೆಗೆ ಕಾಪಾಡಿಕೊಂಡು ಬಂದುದಲ್ಲದೆ, ಪರಿಷ್ಕರಿಸಿ ಪ್ರಕಟಿಸಲು ಅವುಗಳನ್ನು ನಮಗೆ ನೀಡಿದ ಶ್ರೀ ವೀರಪ್ಪ ನಾಗಶೆಟ್ಟಿ ಮಾಸ್ತರರ ಮೊಮ್ಮಕ್ಕಳಾದ ಶ್ರೀ ಸುಭಾಸ್ ನಾಗಶೆಟ್ಟಿ, ಸದಾನಂದ ನಾಗಶೆಟ್ಟಿ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

'ಕಿತ್ತೂರು ಸಂಸ್ಥಾನ' ಸಾಹಿತ್ಯ ಭಾಗ-೧ನ್ನು ಪ್ರಕಟಿಸಿದ ಗದುಗಿನ ಶ್ರೀ ತೋಂಟದಾರ್ಯಮಠದ 'ಲಿಂಗಾಯತ ಅಧ್ಯಯನ ಸಂಸ್ಥೆ' ಈ 'ಭಾಗ-೨'ನ್ನು ಪ್ರಕಟಿಸುತ್ತಲಿದೆ. ಈ ಎರಡೂ ಸಂಪುಟ ಸೇರಿ ಕಿತ್ತೂರು ಸಂಸ್ಥಾನಕ್ಕೆ ಸಂಬಂಧಿಸಿದಂತೆ ೩೦೦ ಪುಟ ಸಾಹಿತ್ಯ ಹೊರಬರಲು ಕಾರಣರಾದ ಪೂಜ್ಯ ಶ್ರೀ ತೋಂಟದ ಸಿದ್ಧಲಿಂಗಮಹಾಸ್ವಾಮಿಗಳವರಿಗೆ ನಮ್ಮ ಭಕ್ತಿಪೂರ್ವಕ ಪ್ರಣಾಮಗಳು. ಡಿ.ಟಿ.ಪಿ. ಕಾರ್ಯ ಪೂರೈಸಿದ 'ವಚನ ಗ್ರಾಫಿಕ್ಸ'ನ ಶ್ರೀ ದೇವರಾಜ ನಾಡಿಗ ಅವರಿಗೂ, ಅಂದವಾಗಿ ಮುದ್ರಿಸಿದ ಗದುಗಿನ ಪ್ರಭು ಗ್ರಾಫಿಕ್ಸ್ ಅವರಿಗೂ ಧನ್ಯವಾದಗಳು.

❖❖

I

ಮುನವಳ್ಳಿ ನೀಲಕಂಠಾರ್ಯನ ಪದಗಳು

ವಹಿ : ಒಂದು

ಕಿತ್ತೂರ ದೇಸಾಯಿಯರ ಪದಗಳು

೧

ನೋಡಿದೆ ಮಲ್ಲಮಹೀಶನ ಮಾನಿನಿ।
ರೂಢಿಯೊಳತಿಶಯ ಪ್ರೌಢನರೇಂದ್ರನ ||ಪಲ್ಲ||

ವೀರಶೈವಾನ್ವಯವಾರಿಧಿ ಚಂದ್ರನ
ಧೀರ ದೀನೋದ್ಧಾರ ದೀರ್ಘದಯಾಕ್ಷನ ||೧||

ಭುಜಬಲವಿಕ್ರಮ ವಿಜಯ ವಿಬುಧನುತ
ಸುಜನರಕ್ಷ[ನ] ಕುಜನಾಗಕುಠಾರನ ||೨||

ಮಂಗಳಕರ ಸಿದ್ಧಲಿಂಗ ಪದಾಂಭೋಜ
ಭೃಂಗ ಭೂಪನ ಚತುರಂಗ ರಂಜಿತನ ||೩||

೨

ರಾಗ-ಕನ್ನಡ ಕಾಂಬೋದಿ

ಮಾಡಿದ್ಯಾ । ಪ್ರಿಯಗೆ ಸವಿ। ಮಾಡಿದ್ಯಾ।।
ಪ್ರೌಢನೊಡನೆ ಜತಿಗೂಡಿಯಗಲದೆ ||ಪಲ್ಲ||

ವದನಸುಧಾನಿಧಿ ಸ್ವರ್ಣಪಾತ್ರೆಯೊಳು।
ಮಧುರಾಧರ ಪೀಯೂಷವನುಣಿಸಿ ||೧||

ಅಂಗಜಾತ ರಣರಂಗದಿ ಗಾಢಾ
ಲಿಂಗನದೊಳು ನಿನ್ನಂಗವನೊಪ್ಪಿಸಿ ||೨||

ವರದ ಪುರದ ಶ್ರೀಕರ ಸಿದ್ಧೇಶ್ವರ।
ದೊರೆ[ತ] ಭಾಗ್ಯಕೆ ಸರಿಗಾಣದ ತೆರ ನೀ ||೩||

೩

ರಾಗ-ಭೈರವಿ

ಮಲ್ಲೇಂದ್ರ ಮನೋಜ ಮನೋಹರ । ಸರಿ
ಯಿಲ್ಲ ಸಖಿಯೆ ಕ್ಷಣ ಬಾರದಿರ ||ಪಲ್ಲ||

ಮಣಿಗಣಮಾಲಾಲಂಕೃತ ಕಂಧರ।
ಗುಣಮಣಿರತ್ನಾಕರ ||
ಕ್ಷಣದಾ ಮಣಿಭೂಷಣ ಪೂಜಾಕ್ರಮ।
ಗಣಿಸ ಫಣೀಶ ನಿರಂತರ ||೧||
ಸುಂದರ ವಿಭವಪುರಂದರ ಕಾರ್ಯಧು
ರಂಧರ ನೃಪಶೇಖರ||
ಮಂದರನಿಭ ಮದಸಿಂಧು[ರ]ನೇರುವ
ಬಂಧುರ ದೀನ ದಯಾಕರ ||೨||

ಯಮಿಪುರ ಸಿದ್ಧೇಶ್ವರ ಪಾದಾಬ್ಜ
ಭ್ರಮರ ಯಶಶ್ರೀಕರ||
ರಮಣನೊಡನೆ ನಾ ರಮಿಸುವೆ ನೀಮುಖ
ಕಮಲ ವಿಕಾಸ ದಿವಾಕರ ||೩||

೪

ನೋಡಿದೆ । ಮಲ್ಲೇಂದ್ರನ ||
ನೋಡಿದೆ ಕಿತ್ತೂರ । ನಾಡಿಗೊಡೆಯ ಚಂದ್ರ।
ಚೂಡಾರ್ಚಕ ಮಣಿ ಪ್ರೌಢನರೇಂದ್ರನ ||ಪಲ್ಲ||

ಗುರುಮುಖ್ಯಾಷ್ಟಾವರಣ ದಿವ್ಯಾ।
ಭರಣ ಪಂಚಾಚಾರ ಪ್ರಾಣ||
ಸುರುಚಿರಮಣಿ ಸೃಗ್ಧರ ಕಂಧರ ಪುರಂ
ದರವೈಭವ ಸುಂದರ ಭೂಪಾಲನ ||೧||

ಚತುರಂಗಬಲದಿಂದ ಮೆರೆವಾ।ಚತು
ರತೆಯಲಿ ಚತುರ್ಮುಖನಿರವಾ।ಸತಿ

ಸುತರತಿ ಹಿತರು ಸಮ್ಮತರು ಸದಾಶ್ರಿತ।
ನುತರು ಕಾಮಿತ ಕಲ್ಪತರು ಭೂತಳದೊಳು ||೨||

ರಾಜಾಧಿರಾಜ ಮಾನಿತನು। ರಾಜ
ರಾಜ ಸಮ ಶ್ರೀಯುತನು। ಪೂರ್ಣ
ರಾಜಮಂಡಲತುಲ ರಾಜಮಾನನ।
ತೇಜನ ಸುಗುಣಸಮಾಜನ ಭೋಜನ ||೩||

ಭುವನಭರಿತ ಕೀರ್ತಿವಂತ। ಮಾ
ಧವ ಭವನವಯುವವಾಂತ। ರೂ
ಪವನುಳ್ಳ ರಾಜೇಂದ್ರನವನಿಯೊಳೆಸೆದಿಹ
ನವ ಕವಿತಾಸ್ತವ ಶ್ರವಣವಿನೋದ ||೪||

ಮುನಿಪುರವಾಸ ಸಿದ್ಧೇಶ।ನನ್ನ
ಮನೆಯೆಂದು ಕಳುಹಲು ತೋಷ।ಸಂ
ಜನಿಸಿ ಮೋಹದಿ ತನ್ನ ತನುಜರಂದದಿ ನೋಡಿ
ನೆನೆದಿಷ್ಟವೀವ ನೂತನ ಘನ ಮಹಿಮನ ||೫||

೬

ರಾಗ-ಯರಕಲು ಕಾಂಬೋದಿ

ಸುಳಿಯಲು ಸುಖವಲ್ಲವೇ। ಮಲ್ಲೇಂದ್ರ ಸಖಿಯು।।
ಸುಳಿಯಲವಳ ಭಾವ । ತಿಳಿಯಲುಳಿದು ಹೇವ ।
ಗಳರವವನು ಬಿಟ್ಟು । ತನ್ನಯ ಸ್ನೇಹ।
ಗಳಿಸಲು ಮನವಿಟ್ಟು।
ಕಳವಳದಿಂದೊಂದು।ಗಳಿಗೆ ತಿಂಗಳವಾಗಿ
ಕಳೆಯಲಾರದೆ ನಿನ್ನ। ನಿಳಯದಂಗಳದೊಳು ||ಪಲ್ಲ||

ಮೊದಲು ಸ್ನೇಹವಮಾಡಿ। ಮೋಹದೊಳೆನ್ನ।
ಸುದತಿಯೆಂದೊಡಗೂಡಿ।
ಮದನಯುದ್ಧದಿ ಕಾಂತೆ। ಮಾಡಿದ ಲೀಲೆ।
ಯದನು ನೆನಿಸಿ ಚಿಂತೆ।
ಒದಗಿರಲನುಚಿತವದನೆಸಗನು ತನ್ನ
ಪದವಿಯೆ ಪಥವೆಂದು ಪದವನರಸುತಿಂದು ||೧||

ಕುವಲಯದಲನೇತ್ರೆ। ಕುಶಲತೆಯಲಿ।
ಕುವಲಯದೊಳು ಚಿತ್ರೆ।
ಯುವತಿಯೊಡನೆ ಕೋಪ। ಸಲ್ಲದು ನಿನ್ನ
ಭವನ ಕಯ್ಯಲು ಲೋಪ।
ನವಯೌವನಾಂಗ ಮಾಧವಮಾಸ ಬರೆ ಪಿಕ
ರವಗೆಯ್ಯ ತೆರದಿ ಸಮಯವ ಸಾಧಿಸುತ ಸುತ್ತ ॥೨॥

ಸುಂದರ ಶುಭವೇಷ।ಶ್ರೀ ಮುನಿವೃಂದ।
ಮಂದಿರ ಸಿದ್ಧೇಶ।
ಹೊಂದಿದವಳ ಲೇಶ।ವಂಚಿಸಲದ।
ರಿಂದ ನೊಂದರೆ ದೋಷ॥
ಕುಂದಾರವಿಂದ ಮರಂದವಿದ್ದೆಡೆಗೆ ಮಿ
ಲಿಂದವೆರಗುವಂತೆ ಒಂದೆ ಭಾವದಿ ಬಂದು ॥೩॥

೭

ರಾಗ-ಪುನ್ನಾಗತೋಡಿ
ಮನದನ್ನ ಮಲ್ಲೇಂದ್ರ ಮನದನುವನರಿದು ಸು
ಮ್ಮನೆ ಸುಗುಣ ಬಂದನೀ ಮನೆ ತನ್ನದೆಂದೆನುತ ॥ಪಲ್ಲ॥

ಮುಗುಳಂಬನುಪಟಳಕೆ ಮುಗಿದ ತಾವರೆಯ ತೆರ।
ಮೊಗವಿರಲ್ ಬಗೆಯನರಿದಗಿದು ಹಾಯೆನುತ॥
ಗಗನಮಣಿಯಂತೆ ಝಗಝಗಿಪ ತೊಡವಿಟ್ಟು ಚಾ।
ದಗೆಗೆ ಸ್ವಾತಿಯ ವೃಷ್ಟಿಯೊಗೆದಂತೆ ಕಾಂತೆ ॥೧॥

ಗಳಿಗೆ ಯುಗವೊಂದಾಗಿ ಕಳೆಯಲಾ ಕಳೆಯನಾ।
ಗೆಳೆಯ ನಿಳಯದಿ ಕನಸಿನೊಳಗೆ ಹೊಳೆಯೆ॥
ಉಳಿಯಲಿವಳುಳಿಯಳೆನ್ನೆಳೆಯಳಿಳೆಯೊಳು ಕುಸುಮ
ಗಳ ನೋಡಿ ನಳಿನದೆಡೆಗಳಿಯು ಸುಳಿಸುಳಿದಂತೆ ॥೨॥

ಸುಂದರಪ್ರಿಯನಾನನೇಂದು ಸಮುದಿತ ಸುಧಾ
ನಂದ ಧಾರಾಮಂದದಂದ ವಾಗ್ಝರಿಯ॥
ಎಂದಿನಂದದಿ ಕೇಳ್ವೆನೆಂದಿರಲು ಬಂದ ಮುನಿ
ವೃಂದ ಮಂದಿರ ಸಿದ್ಧಲಿಂಗ ಕರುಣಾಪಾಂಗ ॥೩॥

೮

ರಾಗ-ಕೇದಾರಗೌಳ

ಮಲ್ಲೇಂದ್ರ ಸುಖಸಾಂದ್ರ ಮಾರಸುಂದರ ಧೀರ।
ನಲ್ಲ ನೀನಿಲ್ಲದೆ ತಲ್ಲಣಿಸುವಳು ತರುಣಿ ॥ಪಲ್ಲ॥

ಚಂದ್ರಾಭಮುಖಿ ಚಾರು ಚಂದ್ರಶಾಲೆಯೊಳಿರಲು
ಚಂದ್ರನುದ್ಭವಮಾಗೆ ಚಕಿತಳಾಗುವಳು ॥
ಚಂದ್ರ ಚಂದನ ಶೀತ ಚಂದ್ರಿಕೆಗಳುರಿಯೆಂಬ
ಳಿಂದ್ರ ಮಣಿಹಾರ ಶಿಲೆಯೆಂದು ಚೆಲ್ಲುವಳು ॥೧॥

ಉರಿಯೊಡನೆ ಕೆಳೆಗೊಂಡು ಬರುವ ಮಾರುತ ಬೀಸೆ ।
ಸುರಪನಾಯುಧಮೆಂದು ಸುದತಿ ತಾ ಸುಯ್ವಳೊ॥
ಸುರಗಿ ಮಾಲೆಯು ಗಳದಿ ಸುರಗಿಯೆಂಬಳು ಸಖಿಯು।
ಸೊರಗಿ ಶೋಕಿಸಿ ನಿನ್ನ ಬರವ ಹಾರೈಸುವಳು ॥೨॥

ಕಂದರ್ಪತಾಪದಲಿ ಕಂದಿದಬಲೆಯ ನೋಡಿ।
ಮುಂದುವರಿವಾನಂದದಿಂದ ನೀ ಹೊಂದು ॥
ಇಂದುಶೇಖರ ಮೌನಿವೃಂದ ಸಿದ್ಧೇಶ್ವರನ।
ಚೆಂದದಿಂ ಸೇವಿಸುವ ಚದುರ ರಾಜೇಂದ್ರ॥೩॥

೯

ರಾಗ-ಬ್ಯಾಗಡಾ

ಕಾಂತನ ಕರೆತಾರೇ । ಶ್ರೀ ಮಲ್ಲ ಭೂಮಿಕಾಂತನ ಕರೆತಾರೆ।
ಕಾಂತನ ಕರೆತಂದೇಕಾಂತಕೊದಗಿಸೆ ನಿ
ಶಾಂತದಿ ಬಿಡದೆ ನಿಶಾಂತಪರ್ಯಂತ।
ಶಾಂತಮಾನಸಳಾಗಿ ಬಿಡದಾ।
ಶಾಂತಕೀರ್ತಿಪ್ರವರನೊಡನೆ ಲ।
ತಾಂತ ಶರಕೇಳಿಯೊಳು ನೀರೆ ನಿ।
ತಾಂತ ರಮಿಸುವೆನಂತರಿಸದೆ ॥ಪಲ್ಲ॥

ಕೈರವ ಕೋಕ ಮಯೂರಗಳಿಂದ್ವಿನ।
ನೀರದಗಳ ಬರವ । ಹಾರೈಸುವಂ।

ತಾ ರಮಣನು ಬರುವ । ದಾರಿಯ ನೋಡಿ।
ಮಾರಮಾರ್ಗಣ ಸುಕುಮಾರ ಶರೀರವ।
ಮಾರಗೊಳಲಾಗಾರ ಭಯ ಕಾಂ।
ತಾರ ಶೋಭಾಕಾರ ಭೀಕರ।
ಹಾರ ಮರುದಾಹಾರವಾಗಿರ।
ಲಾರಿಗುಸುರಲು ತೀರದೇ ಸಖಿ ॥೧॥

ಕ್ಷಣದೇಶಮುಖಿ ಕೇಳೀ ಕ್ಷಣದಿ ಸುಂದರನ ಲ
ಕ್ಷಣವನೀಕ್ಷಣದಿ ನೋಡಿ। ಮಾತುಗಳಾಡಿ।
ಮಣಿದವನೊಳು ಕೂಡಿ। ಮಾಡುವೆ ಪ್ರೌಢಿ।
ಮಣಿಗಣಖಚಿತ ಕಂಕಣಯುತ ಕರಗಳಿಂ।
ದಣಿಯದಪ್ಪುತ ರತಿಕಳೆಯ ಸಂ।
ದಣಿಯೊಳಾತನ ಚಿತ್ತವೃತ್ತಿಯ।
ದಣಿಸಿ ಮಧುರಾಧರಸುಧೆಯ ನಾ।
ಸುಣಿಸಿ ಮತ್ತೊಂದೆಣಿಸೆನೇ ಸಖಿ ॥೨॥

ನಾಯಕನೊಡನೆ ನಾನಾಯಾಸಬಟ್ಟುದ।
ನಾಯತಾಕ್ಷಿಯಳೆ ಕೇಳು । ನೀನರಿದೆನ್ನ।
ನೀಯವಸ್ಥೆಯ ಪೇಳು । ಪೇಳಲು ಬರ್ಪ।
ಕಾಯಜಾಕಾರಗೀ ಕಾಯವನೊಪ್ಪಿಸೆ॥
ಕಾಯದುಳಿವನೆ ಕಾಮತಂತ್ರ।
ಶ್ರೀಯೊಳಾನಂದಿಸನೆ ಮುನಿ ಸಮು।
ದಾಯಪುರ ಸಿದ್ಧೇಶ ಬರುವಾ।
ದಾಯಕಧಿಕವ ಕಾಣೆ ಜಾಣೆ ॥೩॥

೧೦

ರಾಗ-ಯರಕಲ ಕಾಂಬೋದಿ

ನೋಡಿ ಮುದ್ದಿಸಿ ಮೋಹಗೂಡಿ ಸೆಳೆಸೆಳೆದಪ್ಪಿ।
ಪ್ರೌಢ ಮಲ್ಲೇಂದ್ರನೊಡಗೂಡಿ ಮಚ್ಚಿಸಲಾರೆ ॥ಪಲ್ಲ॥

ಕುಂದ ಹೊಂದದ ಪೂರ್ಣೇಂದುವದನ ರುಚಿ
ಮಂದಹಾಸಾನಂದ ಚಂದ್ರಿಕೆಯ ಬೆಳಗು।

ಕುಂದರದನದ ಕಾಂತೆ ಸುಂದರನ ನೋಡೆ ಪು
ರಂದರನ ನಯನಗಳಿಂದೆನಗಿಲ್ಲದೆ ||೧||

ಮ್ಧುಡಿಯ ಕೈಗೊಳಿಸಿ ಎನ್ನೊಡೆಯನೆಡೆಯೆಡೆಯ ಸಂ
ಗಡದಿ ಚುಂಬಿಸುವೆನೆಂದಡೆಯೊಂದೆ ಮುಖದಿ।
ಕಡೆಯ ಕಾಣದಲಿರೆ ಪೊಡವಿಪೋತ್ತಮನ ಸೊಂ।
ಪಡರ್ದ ಮೊಗಗಳೆನಗೆ ಜಡಜಜ ಕೊಡದಿರೆ ||೨||

ಪೊಳೆವ ಕಾಯವನು ನಳನಳಿಪ ತೋಳುಗಳಿಂದ।
ಲೆಳೆದಾಲಿಂಗಿಸಿ ಮೋಹಗೊಳಿಸುವನೆನಲಿಂದು॥
ಕೆಳದಿ ಬಾಣನ ಬಾಹುಗಳನು ಶ್ರೀಮುನಿವೃಂದ।
ನಿಳಯ ಸಿದ್ಧೇಶನೀಗಳೆ ಮಾಡದಿರಲು ||೩||

೧೧

ರಾಗ-ಯರಕಲ ಕಾಂಬೋದಿ

ಏನು ಮಾಡಲಿ ನೀರೆ ನಾನವಗೆ ಮೋಹಿಸಲು
ತಾನಾಗಿ ಮನಸೋಲ ತಿಳಿಯದವನ ಜಾಲ ||ಪಲ್ಲ||

ಕಡು ಚೆಲ್ವನಾಂತ ಸೊಂಪಡರ್ದ ಸೌಂದರ್ಯರಸ।
ದೊಡವೆರೆದ ಮುದ್ದುಮೊಗದೆಡೆಯೊಳೆಡೆವಿಡದೆ॥
ಕಡೆಗಣ್ಣಕಾಂತಿ ಸಂಗಡಿಸೆ ನೋಡುವನು ಬೆಂ।
ಬಿಡದೆ ಮೈಸಾರ್ಚಿದಡೆ ನುಡಿವನೊಂದೊಂದಾಗಿ ||೧||

ನಳಿನಮುಖಿ ಕೇಳವನ ನಲಿದು ನಳಿತೋಳ್ಗಳಿಂ।
ಸೆಳೆದು ವಕ್ಷಸ್ಥಳಕೆ ಕಳಶಕುಚಗಳು ಸೋಂಕೆ।
ಬಳಿಕ ನಾಯಕನಪ್ಪಿಕೊಳುವ ತೊಡೆ ಕಂಪನವ।
ತಳೆದಲ್ಲದೊಡವೆರೆ[ವ] ಗೆಳೆಯ ಮಾಡುವ ಪರಿಯ ||೨||

ಕಾಮರಸ ಕೈಮೀರಿ ತಾನೆ ಸನಿಯಕೆ ಸರಿಯ
ಲಾ ಮನೋಹರ ಪಿಡಿದು ಪ್ರೇಮದಲಿ ನೆರೆವ॥
ಭೂಮಿಯೊಳ್ ಮುನಿವೃಂದಧಾಮ ಶ್ರೀ ಸಿದ್ಧೇಶ।
ಕಾಮಿನಿಯೆ ತಾನಾಗಿ ಕಾಮಿಸುವ ಬಗೆಗೆ ||೩||

೧೨

ರಾಗ-ನಾಟಿ ಕೊರವಂಜಿ

ಏ ಕೆಳದೀ! ಏಕೆ ಬಾರನೆ ಕಾಂತ ।
ಲೋಕದಂಥವನಲ್ಲವೇ। ಲೋಭ ಬಿಡದೆ।
ಬೇಕೆಂದು ಬಯಸಿದೆನೇ। ಏ ಕೆಳದೀ ॥ಪಲ್ಲ॥

ಒತ್ತರಿಸಿ ಒಲಿದೆನ್ನ ನೋಡುವನೇ।ಒಮ್ಮಿಂದಲೊಮ್ಮೆ।
ಹತ್ತೆ ಸೇರಿ ಎನ್ನೊಡಪಾಡುವನೇ। ಏ ಕೆಳದೀ
ಎತ್ತ ಪೋಗದೆ ಗುಪ್ತ ಮಾಡುವನೇ । ಪಾಡಿ ಮೋಹಿಸಿ ।
ಚಿತ್ತಜಾಹವದೊಳಗೆ ಕೂಡುವನೇ ॥೧॥

ಎಂದಿನಂದದಿ ಬಂದರೆ ನಾನು। ಆ ಸುಂದರಗೆ ಏ।
ನೊಂದ ನುಡಿದೆನಾದರೆ ನೀನು। ಏ ಕೆಳದೀ
ಕುಂದ ಹೊಂದಿಸು ಕುಶಲಗೆ ತಾನು। ಎನ್ನವಳೆಂದು।
ಹೊಂದುವಂತೆಸಗುವೆನು ಮೋಹವನು ॥೨॥

ಅಗಲಿ ಜೀವಿಸಲಾರೆನೇ ನೀರೆ। ಅವನ ಗಳಿಗೆ ।
ಯುಗ ಸಮಾಸಾಗುವದೆನಗೆ ಸಾರೆ । ಏ ಕೆಳದೀ
ಮಿಗಿಲು ವಿರಹದ ಬಗೆಯ ನೀ ದೂರೆ । ಬರುವನೆನ್ನಯ ।
ಸುಗುಣ ಸಿದ್ಧೇಶ್ವರನ ಕರೆತಾರೆ ॥೩॥

೧೩

ರಾಗ-ಪುನ್ನಾಗ ತೋಡಿ

ಕ್ಷೋಣಿಯು ಮೇಲಿಂಥಾ । ಮಲ್ಲೇಂದ್ರನಂಥಾ ।
ಜಾಣ ಜನಿಸುವದಿಲ್ಲವೆ।
ಕಾಣೆ ತನ್ನ ಕ್ಷಣ ಕಾಣದಿರಲು ತಾ।
ಮಾಣದೆ ಬಂದೆನ್ನಾಣತಿ ನಡೆಸುವ ॥ಪಲ್ಲ॥

ಒಲಿವನೇ । ಒಲಿದೆನ್ನನೀಕ್ಷಿಸಿ ನಲಿವನೇ।
ನಲಿದಲಸದ ಸ್ನೇಹವ ಬಲಿವನೇ।
ಬಲು ಮೋಹದ ನುಡಿಗಳನುಲಿವನೇ।
ಲಲನೆ ನಿನ್ನ ಕೋಮಲ ಶರೀರಭುಜ।
ಬಲವ ಗೆಲುವದೆಂದೆಳೆನಗೆ ನಗುವ ॥೧॥

ಸುಂದರ। ಸುರುಚಿರವಿಭವ ಪುರಂದರ।
ಪೂರ್ಣಾಂಗಜ ಕಾರ್ಯಧುರಂಧರ।
ಮಣಿಮಾಲಾಲಂಕೃತ ಕಂಧರ।
ಕುಂದರದನೆ ನಯನೇಂದೀವರಗಳಿ।
ಗಂದಗೊಳಿಪ ಮುಖ ಚಂದಿರದೋರುವ ॥೨॥

ಕ್ಷೇಮದಿ । ಸೆಳೆಸೆಳೆದಪ್ಪುತ ನೇಮದಿ।
ಚುಂಬಿಸಿ ಪರಮ ಪ್ರೇಮದಿ ।
ರತಿಸಾಮ್ರಾಜ್ಯಗ್ರಾಮದಿ ॥
ಭೂಮಿಯೊಳ್ ಮುನಿಪುರಧಾಮ ಸಿದ್ಧೇಶ್ವರ।
ಕಾಮದ ಕಾಮಿಸಿ ತಾ ಮನಸೋತಾ ॥೩॥

೧೪

ರಾಗ-ಸೋನಿ

ಸುಗುಣನ ನೀ ಕರೆತಾರೆ ಸಾರೆ ।
ಜಗದೊಳು ಮುಗುಳಂಬನ ಸರಿ ಸಾರೆ ॥ಪಲ್ಲ॥

ಪ್ರಣಯಕಲಹವನು ಮಾಡಿ। ಮೋಹದೊ
ಳಣಕವನಾಡಿ ಮರಳಿ ಮೊಗನೋಡಿ।
ಗುಣವತಿ ಬಾರೆನುತಲಿ ಕೊಂಡಾಡಿ।
ಮಣಿಗಣಮಾಲೆಯ ನೀಡುವ ಪ್ರೌಢಿ ॥೧॥
ಪರಿರಂಭದಿ ಬಂಧಗಳಿಂದ। ಪರಿ
ಪರಿದೋರುವ ಪರಮಾನಂದ।
ಗುರುಕುಚಕುಗುರೂರುತಲೆನ್ನಂದ।
ವರಿದಧರವ ಸವಿವನು ಸುಖದಿಂದ ॥೨॥

ಮನಸಿಜತಂತ್ರ ವಿಚಾರವಿಹಾರ।
ಮನದನ್ನನು ಕೋವಿದ ಸುಖಸಾರ।
ಕನಕೋಪಮ ಕಮನೀಯ ಶರೀರ।
ಮುನಿಪುರವರ ಸಿದ್ಧೇಶ್ವರ ಬಾರ ॥೩॥

೧೫

ರಾಗ-ಸೊರಟ

ತಾಳಲಾರೆ ನೀರೆ । ವೇದನೆ।
ಹೇಳಲಾರೆ ಬಾರೆ।
ಕೇಳೆ ಕೇಳಿದಾಲಾಪವನಾತಗೆ।
ಹೇಳೆ ಹೇಳಲೊಡನೇಳಿಲ ಮಾಡನು ॥ಪಲ್ಲ॥

ಕುಂದರದನೆ ಕೇಳೆ। ಸಖಿನಿರೆ।
ಕುಂದುವೆನೇ ಹೇಳೆ।
ಒಂದು ನಿಮಿಷ ಯುಗದಂದವಾಗಿ ಎನ।
ಗಿಂದು ತೋರ್ಪುದಿಂದೀವರಲೋಚನೆ ॥೧॥

ಕಾಂತೆ ಕುಶಲನುಡಿಯ। ಸುಧೆಯ ಸು
ಕಾಂತಿಯಿಂದ ಭಿಡೆಯ॥
ಕಾಂತಹೃದಯ ವಿಧುಕಾಂತವ ಕರಗಿಸಿ
ಸಾಂತ್ವನ ಮಾಡಿ ನಿಶಾಂತಕೊದಗಿಸೆ ॥೨॥

ತೋರ ಕುಚದ ಬಾಲೆ। ನಾ ಬಳಲಲು।
ತೋರದು ಸುಖ ಮೇಲೆ॥
ಧೀರ ದಯಾರಸಪೂರ ಮುನಿಪುರಾ।
ಗಾರ ಸಿದ್ಧೇಶ್ವರ ಬಾರದಿರಲು ನಾ ॥೩॥

೧೬

ರಾಗ-ರೇಗುಪ್ತಿ

ಕರೆದು ತಾರೆ ಕರೆದು ತಾರೆ ಕಮಲೋಚನೆ। ಕಾಂತ।
ಬರುವ ಬಾರದಿರನೆ ಬಲ್ಲನೇಕೆ ಯೋಚನೆ ॥ಪಲ್ಲ॥

ಸರಸಗುಣಗಭೀರ ಸ್ವರ್ಣವರ್ಣಗಾತ್ರನೆ ।ಸಖಿಯೇ।
ಸರಸಿಜಾರಿಸಮ ಕಳಾಪ್ರಪೂರ್ಣವಕ್ತ್ರನೆ।
ಸ್ಮರಶರೀರ ಮೋಹನೀಯ ಸಚ್ಚರಿತ್ರನೆ ।ಪ್ರಿಯನ।
ಸ್ಮರಣೆ ಮರೆಯಲಾರೆ ಸಾರ ಸಾರನೇತ್ರನೆ ॥೧॥

ಮಲ್ಲಿಕಾದಿ ಮಾಲೆಗಳನು ಮುಡಿಗೆ ಮುಡಿಸುವ |ಕುಚಗ
ಳಲ್ಲಿ ಚಿತ್ರಪತ್ರ ಗಲ್ಲದಲ್ಲಿ ಲಿಖಿಸುವಾ|
ಉಲ್ಲಸಿತ ಲಲಾಮ ವಲಿಕದಲ್ಲಿ ಲಿಖಿಸುವ | ರತ್ನ
ದಲ್ಲಿ ಸಮೆದ ತೊಡವನಿಟ್ಟು ನಲ್ಲೆ ಸುಖಿಸುವಾ ||೨||

ನಳ ಜಯಂತರಂತೆ ಭೂತಳದಿ ತೋರ್ಪನೆ| ಕಾಮ
ಕಲೆಯ ನೆಲೆಯ ತಿಳಿಸಿ ಮರುಳುಗೊಳಿಸುತಿರ್ಪನೆ|
ಸುಳಿಯಲನ್ಯ ಕೆಳದಿಯರನು ಬಳಿಗೆ ಕರೆಯನೆ ಸಿದ್ಧಿ
ಗಳನು ಕೊಡುವೆಡೆಯೊಳು ಸಿದ್ಧೇಶನೆನಿಪನೆ ||೩||

೧೭

ರಾಗ-ಭೈರವಿ

ಸರಸಿರುಹ ನಯನೆ ಸೌಂದರಿ ಸಾರೆ ನೀರೆ|
ಸರಸಾಂಗ ಮಲ್ಲೇಂದ್ರನೊಡನೆ ನೆರೆದು ಬಾರೆ ||ಪಲ್ಲ||

ಅಸಿತ ವಸನವನುಟ್ಟು | ಮಿಸುನಿ ತೊಡಗಳ ತೊಟ್ಟು |
ಶಶಿಮುಖಿಕೆ ಮುಸುಕಿಟ್ಟು | ನಿಶಿಯೊಳಡಿಯಿಟ್ಟು|
ಪುಸಿಯನಿಲ್ಲಿಯೆ ಬಿಟ್ಟು | ರಸಿಕನಲ್ಲಿಗೆ ಮುಟ್ಟು|
ಕುಶಲತೆಯನಳವಟ್ಟು | ಕೂಡಿ ಸುಖಿಸು ಸುದತಿ ||೧||

ಉಳಿಯದಿರೊಂದುಲಿಯದಿರು|ಸುಳಿಯದಿರು ಸುತ್ತೆತ್ತ|
ಬಳಿಯವರು ತಿಳಿಯದಿರು| ಗೆಳೆಯನೊಡನೈದಿ|
ಮುಳಿಯದಿರು ಮುದವೇರು | ಕಳೆಯದಿರುಟ್ಟುಗೆಯನು|
ತಳೆಯದಿರು ನಖ ರದನ|ಗಳ ಕ್ಷತಗಳನು ಸಖಿಯೆ ||೨||

ಕ್ಷಿತಿಯೊಳಗೆ ಮುನಿವೃಂದಪತಿ ಸಿದ್ಧೇಶಗಾನಂದ|
ರತಿಯದೋರಿಸು ಚೆಂದ|ವತಿ ವಿನಯದಿಂದ|
ಜತಿಯನಗಲದೆ ನಿನ್ನ ಪತಿಯ ಹಿತಸಮ್ಮತಕೆ
ಸಿತಕರೋದಯ ಮುನ್ನ ಶೀಘ್ರದಿಂ ಬಂದೊದಗು ||೩||

೧೮

ರಾಗ-ಸೌರಾಷ್ಟ್ರ

ದೂತಿ ನೀ ಮಾಡಿದ ರೀತಿಯು ನಿನಗದು ।
ಪ್ರೀತಿದೋರುತ್ತಲಿದೆ।
ಭೀತಿಯ ತೊರೆದು ನೀನಾತನೊಳ್ ನೆರೆದು ಗು।
ಣಾತಿಶಯ ಮೆರೆದೆ ||ಪಲ್ಲ||

ವಿರಹದಿ ದಿನವ ಸಾವಿರಮಾಡಿ ಕಳೆವಾ।
ತುರದ ಪರಿಯನರಿದು
ಕರುಣದಿ ಕಾಂತನ ಕರೆದು ತರುವೆನೆಂದು ।
ಭರದಿ ಪೋಗುತ ಮರೆದು ।
ಸ್ಮರರೂಪ ಧೀರ ಸುಂದರನ ಮೊಗವ ನೋಡಿ।
ಸರಸ ಲಲ್ಲೆಯಗರೆದು ।
ಕರವ ಪಿಡಿದು ಸುಖಕರನನೇಕಾಂತಕೆ।
ಕರೆದವನೊಳ್ ಬೆರೆದೆ ||೧||

ಖಲನೊಳೇಕಾಂತವ ಜಲದೊಳು ತೈಲವ
ಕಲಸಲು ಮುಚ್ಚುವದೇ?!
ಹೊಲಬುದಪ್ಪುತ ಸಖನೊಳು ಕೂಡಿದ ಕಾಮ
ಕಲೆಯದು ಚುಚ್ಚುವದೇ।
ಅಲರಂಬನಾಟದೊಳಲಸದೆ ಸೊಗಸಿದ
ಬಲುಹಿಗೆ ಬೆಚ್ಚುವದೇ।
ಶಿಲೆಯೆದೆಯಾದುದ ತಿಳಿದೆನಾಳಿಯರೊಳು
ಒಲುಮೆ ತಾ ಪೆಚ್ಚುವದೇ ||೨||

ಎನಗಾಪ್ತಸಖಿಯೆಂದು ವಿನಯದಿ ಕಳುಹಲೆ
ನ್ನಿನಿಯ ರನ್ನನ ನೋಡಿದೆ।
ತನುಸುಖಕೆಳಸಿ ವಂಚನೆಯನೆಸಗಿ ಮಾನ
ಧನವ ನೀನೀಡ್ಯಾಡಿದೆ।
ಅನುದಿನವೆನ್ನಯ ಮನದನುಕೂಲನ
ಮನೆಗೆರವನು ಮಾಡಿದೆ।
ಜನೋಪದವಾದವ ನೆನೆಯದೆ ಸಿದ್ಧೇ
ಶನ ಶೀಘ್ರದಿ ಕೂಡಿದೆ ||೩||

೧೯

ರಾಗ-ತೆಲುಗ ಕಾಂಬೋದಿ

ದೂತಿ ನೀನವನ ಸಂಪ್ರೀತಿಗೊಳಗಾದ ಬಗೆ
ತಾ ತಿಳಿಸುತದೆ ತವಕದಿ ।
ಶೀತಕರ ವದನ ಸಂಜಾತ ಘರ್ಮಾಂಬುಗಳಿ
ವೇತಕುಸುರೆನಗೆ ನೀರೆ। ಧೀರೆ ॥ಪಲ್ಲ॥

ತರುಣಿ ಸ್ಮರತಾಪದಿಂ ತರಹರಿಸಳೆಂದು ನಾ
ನರಿದಾತುರದಿ ಚರಿಸಿದೆ।
ಸರಣಿವಿಡಿಯಲು ಭಾಸ್ಕರನ ಕರಗಳಿಂದ ಮುಖ
ಸರಸಿಜವು ಬೆಮರಾದುದೆ!
ಕರದ ಕಂಕಣಕೆ ರುಚಿವೆರೆದ ಕೈಪಿಡಿಯೇ ಸುಂ
ದರನನೊಡಗೂಡದಿರಲು।
ಸ್ಫುರಿಸುವ ವಿಲೋಚನಗಳರುಣತೆಯನಾಳ್ವವೇ।
ಮರೆ ಮಾಡಬೇಡ ನಲ್ಲೇ । ಬಲ್ಲೆ ॥೧॥

ಮುಗುಳಂಬನುಪಟಳದಿ ಮಿಗೆ ನೊಂದಳೆಂದು ಬಗೆ
ಬಗೆಯಿಂದ ನಾನುಸುರಿದೆ।
ಮೊಗದಿರುಹಿ ಮಾತ ಮನಸಿಗೆ ತಾರದಿರೆ ಕೋಪ
ಮೊಗೆಯೆ ಕಣ್ ಕೆಂಪಾದುದೆ ।
ಬಿಗಿದ ಮುಡಿ ಸಡಿಲಿಯಲರುಗಳುದುರಿ ನವಿರು ಮೊಗ
ದಗಲವಾಗಿಹವೇತಕೆ।
ಮೃಗಮದ ವಿಲೇಪನಾದಿಗಳಳಿದ ರೀತಿಯನೆ
ನಗೆ ಮಾಜಬೇಡ ಬಾಲೆ। ಮೇಲೆ ॥೨॥

ಮಾರುತನು ತೀಡೆ ಕಚಭಾರ ಬಿಚ್ಚಲು ಚಿಕುರ
ವಾರ ವದನದಿ ಪರಿದಿವೆ।
ದಾರಿಯೊಳ್ ನಡೆಯೆ ಶ್ರಮ ತೋರಿ ಸೀರೆಯ ಸೆರಗು
ಜಾರಿ ಸುರಭಿಗಳಳಿದವೆ।
ಮೀರಿ ಮಾತಾಡಲು ನಿವಾರಿಪುದೆ ಮುನಿಪುರಾ
ಗಾರ ಸಿದ್ಧೇಶನೊಡನೆ।
ಸೇರಿ ಮುದವೇರಿ ರತಿದೋರಿದಾನಂದರಸ
ಬೀರುತಿದೆ ಬಿಡದಲೀಗ ।ಬೇಗ ॥೩॥

೨೦

ರಾಗ-ನೀಲಾಂಬರಿ

ಮರಳುಗೊಂಡಳು ಸಖಿಯು । ಮೋಹಿಸಿ ಪ್ರಾಣೇ।
ಶ್ವರನೆ ನೀನಿರೆ ಸುಖಿಯು ।
ವಿರಹತಾಪದಿ ತನ್ನಿ ಪರವಶಳಾಗಿ ಮೈ।
ಮರೆದಿರುವದನು ನಾನರಿದು ಕರೆಯ ಬಂದೆ ॥ಪಲ್ಲ॥

ಅಲರುಗಳನು ಸೂಡದೆ।ಅಲಕವ ತಿದ್ದಿ।
ಕೊಳದೆ ಕೈಪಿಡಿ ನೋಡದೆ ।
ತಿಲಕವನಿಡದೆ ಕಲಗಲ ಕಲರವ ಕೇಳಿ ।
ಪುಲಿಯೆಂದು ಸುಮಮಾಲೆ ಬಲಿಯೆಂದು ಭಾವಿಸಿ ।
ಬಳಲಿ ಬಾಯಾರುವಳು । ಪನ್ನೀರನು।
ತಳೆಯಲುರಿ ಮಳೆಯೆಂಬಳು ।
ಉಳಿಯಲುಳಿಯಳವಳಳಿಯಳು ನೀ ಬರ।
ಲೆಳೆಯಳು ಕಳೆಯಳು ಕಳೆಯಳಿಂದಿನ ದಿನ ॥೧॥

ಹರಿಣಶಾವಕ ಲೋಚನೆ। ಧರಣಿಯೊಳೊರ।
ಗಿರುತ ನಿನ್ನಯ ಯೋಚನೆ।
ಹರಣವಿಡಿದು ಸಖಿಯರ ಮಾತ ಮನಸಿಗೆ।
ತರಳು ನಿನ್ನಿರಳು ತಾನಿರಳು ತರಳಳಾಗಿ।
ಪುರುಷ ಬಂದಿಹನೆಂಬಳು । ಬಯಲಿಗೆ ಬಾ।
ಯ್ದೆರೆದಪ್ಪಿಕೊಂಬುವಳು ।
ಮರವೆಗೆ ಗುರಿಯಾಗಿ ಮರುಕವೆಗ್ಗಳಾಗಿ ।
ಸರಣಿ ನೋಡುವಳು ಬಾಡುವಳು ಸರಸಿಜಗಂಧಿ ॥೨॥

ಕುಂದಕುಟ್ಮಳ ರದನೆ। ಕುವಲಯಕತ್ಯಾ
ನಂದ ಚಂದಿರವದನೆ।
ಮಂದಾನಿಲೇಂದು ಕಂದರ್ಪರುರಿ ಭುಜಗೇಶ
ರಿಂದ ನೊಂದುಳಿದವರಿಂದು ಪೆಣ್ಗೊಲೆಗಳ್ಕಿ।
ಪಿಂದುಳಿವರೆಕಾಂತ। ವಿಮಲಸ್ವಾಂತ।
ಬಂದರಿಂದೇಕಾಂತ।

ಮಂದಿರವಿಂದಿರ ಸುಂದರಪುರವಾಸ
ವೆಂದೆನಿಸದೆ ಮುನಿವೃಂದ ಸಿದ್ಧೇಶ್ವರ ||೩||

೨೧

ರಾಗ-ಯರಕಲ ಕಾಂಬೋದಿ

ಎಲ್ಲಿ ಬಚ್ಚಿಡಲಲ್ಲಿ ನಿಲ್ಲ ನಿನ್ನಯ ನಲ್ಲ
ಗುಲ್ಲಾಸ ತೋರಿದೆಡೆಯಲ್ಲಿ ರಮಿಸುವನ ||ಪಲ್ಲ||

ವಿಮಲ ಸರಸಿಯೊಳಿರ್ಪ ಕಮಲ ಕರೆಸುವದೇನೆ।
ಭ್ರಮರವನು ತಾ ಬಂದು ಭ್ರಮಿಸಿ ಸುರಭಿಯನುಂಡು ।
ಗಮಿಸದೊಳಗಿರುವಂತೆ ರಮಣನೊಳ್ ಕಂದರ್ಪ
ಸಮರದೊಳ್ ಸವಿದೋರಿ ಮಮತೆ ಮಿಗಿಲೆನಿಸದೆ ||೧||

ನೀರೆ ಕೇಳ್ ಹಿಮಕರಗೆ ಕೈರವಗಳೆನಿತವಕೆ
ಬೇರೆ ಚಂದ್ರಮರುಂಟೆ ಸಾರಸಾಂಬಕಿಯೆ।
ಆ ರೀತಿಯಲ್ಲಿ ಸುಖಸಾರ ಸದ್ಗುಣಪೂರ
ದೂರಿರಲು ಸೇರಿರಲು ಮೀರದಿರು ಸಖನ ನೀ ||೨||

ರತಿಯಲಾ ರತಿಯಾಗಿ ಸತತ ಜತಿಯಾಗಿ ಸಂ
ಮತಿಯಾಗಿ ಸಂಶಯವ ನೀಗಿ ಸುಸ್ಥಿತಿಯಾಗಿ।
ಕ್ಷಿತಿಯೊಳಗೆ ಮುನಿವೃಂದಪತಿ ಸಿದ್ಧಲಿಂಗೇಶ
ಗತಿ ಹಿತಳಾಗಿ ನತಳಾಗಿರದೆ ಬರಿದೆ ||೩||

೨೨

ರಾಗ-ಮಾಂದಿ

ತಿಳಿದುಪಚರಿಸುವದು। ಕಾಮಿನಿಗೆ।।
ಕೆಳದಿಯರೀ ತಿಳಿಗೊಳನ ತೀರದೊಳು ||ಪಲ್ಲ||

ಇಂದುನಿಭಾನನೆಗಿಂದಲರ್ಜೊಂಪಗ
ಳಿಂದ ಬೀಸಲು ಜೊನ್ನಮೆಂದಳವಳಿವಳು ||೧||

ಪಲ್ಲವಪಾಣಿಗೆ ಪಲ್ಲವಾವಲಿ ಶಯ್ಯ
ವಲ್ಲ ದಳ್ಳುರಿಯೆಂದು ತಲ್ಲಣಿಸುವಳಿಗೆ ||೨||

ಸ್ಮರಶರಲೋಚನೆಗರಲ ಸೂಸಲನಂಗ
ಶರಗಳೆ ಸಿದ್ಧೇಶ್ವರನಿರದಿರಲಿಂದು ||೩||

೨೩

ರಾಗ-ಶಂಕರಾಭರಣ

ಕೂಡಲಿಲ್ಲವೇ|ರಮಣಿ |ಪ್ರೌಢ ಬರಲು ನೋಡಿ ಹರ್ಷ
ಮಾಡಿ ಮೋಹಮಾಡುವದಕೆ ||ಪಲ್ಲ||

ನಂದನಂದನೋಪಮಾ|ನಂದ ಸುಂದರಾಂಗನಾನ
ನೇಂದು ನೋಡಿ ನಿನ್ನ ಚಿತ್ತೇಂದುಕಾಂತಶಿಲೆಯು ಕರಗಿ ||೧||

ಎಳೆಯನಂಗ ಕಲ್ಪಕುಜವ|ನೊಲಿದು ನಿನ್ನ ಬಾಹುವಲ್ಲಿ
ಗಳು ವಿನೋದದಿಂದಲಪ್ಪಿ| ಗಳದ ರವವನೆಸಗುವದಕೆ ||೨||

ಹಿತದಿ ಕಾಮಶಾಸ್ತ್ರಾನು| ಮತದಿ ಸಿದ್ಧಲಿಂಗನೊಡನೆ|
ರತಿಕಳಾ ವಿಳಾಸ ಪ್ರಾಣ|ಪತಿಯ ಜತಿಯನಗಲದಂತೆ ||೩||

೨೪

ರಾಗ-ಸಾರಂಗ

ನೀರೆ ನಾ ಸೈರಿಸಲಾರೆ|ಶೃಂಗಾರೆ ನೀ|
ಸೇರಿ ಸೊಗಸು ರತಿದೋರೆ|
ಮಾರನ ಮದಕರಿ ಮನದನ್ನಳೆ ಒ
ಯ್ಯಾರಿ ನೀ ಒಲಿಯದಲಸಿದರೆ ನಿಮಿಷ ||ಪಲ್ಲ||

ತರುಣಿ ನಿನ್ನಯ ಕಣ್ಬುದಿಯ | ತೀವ್ರ
ಶರ ಭರದಿಂದ ಬಂದೀಗೆನ್ನೆದೆಯ|
ಕರುಣವಿಲ್ಲದೆ ಭೇದಿಸಲು ನೀನದ ಪರಿ
ಹರಿಪೌಷಧಿಯ ಬಲ್ಲಾಕೆಯಾಗಿರಲು |
ಪರಮ ತೋಷಿತನಾದೆ ಮಧುರಾಧರ ಸುಧೆಯನಿತ್ತೆನ್ನ ಬದುಕಿಸಿ |
ಗುರು ಕುಚಗಳಿಂದಪ್ಪಿ ಧರಿಸಿದ ಪರಿಮಳ ದ್ರವ್ಯವನು ಲೇಪಿಸೆ ||೧||

ಸುಂದರಿ ನಿನ್ನಯ ವದನ | ಅರ
ವಿಂದದಿ ಕುಂದಕುಟ್ಮಳದಿಂದ ರದನ ||

ಇಂದೀವರದಿಂದ ನಯನವ ಪಲ್ಲವ।
ದಂದದೊಳಧರ ಸರ್ವಾಂಗ ಚಂಪಕದಿಂದ ।
ಚಂದದಿಂದಜನನಿತು ಮೃದುತರದಿಂದ ನಿರ್ಮಿಸಿ ವಿಮಲಚಿತ್ತವ
ನೊಂದು ಶಿಲೆಯನು ಮಾಡಿರಲು ಕರುಣೆಂದಿಗಾಗುವದಿಂದು ಮನ್ನಿಸು ॥೨॥

ಹರಿಣಾಕ್ಷಿ ನೀನಿಲ್ಲದಿರಲು ।ಬಲು
ವಿರಹವ ತಾಳಲಾರದಲೆ ಕಂಠದೊಳು ।
ಧರಿಸಿದ ನೈದಿಲೆ ಮಾಲೆ ಗರಳಮೆಂ।
ದುರದ ಹಾರವೆ ಸರ್ಪ ಸರಿಯೆಂದು ಚಂದನ ।
ವರ ಸುಲೇಪನ ಭಸಿತವೆನುತಲಿ ಸ್ಮರನು ಭ್ರಾಂತಿಯ ವಹಿಸಿ ಸಿದ್ಧೇ
ಶ್ವರನೆನುತ ಸುಮಶರಗಳೆಚ್ಚತಿ। ಭರದಿ ಕಾಡಲು ತರಹರಿಪೆನೆ ॥೩॥

೨೫

ವಟಫಲಾಧರೆ ।ನೀನೊಲಿದು ಬರೆ।
ಸಟೆಯಲ್ಲ ಸುಖಿಸುವೆನೆ ಕೇಳ್ ಚದುರೆ ॥ಪಲ್ಲ॥

ಗಗನದಿ ಮೇಘದಿ ಮೃಗಲಕ್ಷಣನಿರೆ।
ಮುಗಿಸುವನೇ ಕೈರವಗಳನು ।
ಸುಗಮದೊಳಾ ತೆರದೊಗುಮಿಗೆ ಮಿಗಿಲಿರೆ।
ಮುಗುಳಂಬನು ಪಗೆಯಾಗುವನೇ? ನಾ ಬಗೆವೆನೆ ಕೇಳ್ ಚದುರೆ ॥೧॥

ಕುರುಳನು ತಿದ್ದುತ ಮರಳಿ ಮರಳಿ ಮೊಗ
ದಿರುಹಿ ತೆರಳಿ ಎನ್ನನು ನೋಡಿ।
ಸರಳ ತರಳ ದೃಕ್‌ಶರವೆಸೆಯಲ್ಕದು
ಮರು ಮೊನೆಗೊಳೆ ಹರಿಸುವರ್‍ಯಾರೆ। ನೀನಿರೆ ಕೇಳ್ ಚದುರೆ ॥೨॥

ಶಶಿನಿಭಮುಖಿ ದರಹಸನ ಜೊನ್ನ ತಾ
ಮಸವನೋಡಿಸದೆ ರೂಢಿಸದೆ।
ಕುಶಲತೆಯಲಿ ಸುಸಿಲೆಸಗು ಸುದತಿಮಣಿ
ಋಷಿಪುರ ಸಿದ್ಧೇಶನ ದಯದಿ। ವಿನಯದಿ ಕೇಳ್ ಚದುರೆ ॥೩॥

೨೬

ರಾಗ-ಪುನ್ನಾಗ ತೋಡಿ

ಲಾಲಿಸು ಪ್ರಿಯ! ನನ್ನ ನುಡಿಯ। ನಿನ್ನ
ನೋಲೈಸಿದವಳಿಳಿ ಮುಡಿಯ।
ಪಾಲಿಸು ಬಂದೆನ್ನ ಭಿಡೆಯ। ನಡಿ
ಸಾಲಿಸು ಪಿಡಿವೆ ನಿನ್ನಡಿಯ।
ಬಾಲೆ ನಿನಗನುಕೂಲೆ ಮಂಜುಳ।
ಲೀಲೆ ಮಣಿಗಣಮಾಲೆ ಮುಕುರ ಕ।
ಪೋಲೆಯನುಪಮಶೀಲೆಯನು ಪೂ।
ಗೋಲಗೊಪ್ಪಿಸಿ ಬಿಡುವರೇ ನೀ ||ಪಲ್ಲ||

ಮಾರತಾಪದಿ ನೀನಂದು । ಸುಕು
ಮಾರ ಕಳೇವರ ಬೆಂದು ।
ಮಾರ ಹೋಗಲು ಮೂರ್ಛೆಸಂದು। ಸದು
ಮಾರಮಣನೆ ಹಾ! ಎಂದು ॥
ಭಾರಿ ಚಿಂತೆಯಲಿರೆ ಬಾರಿಬಾರಿಗೆ ಬಂದು।
ಭಾರವ ವಹಿಸಿ ಮುಂಭಾರಳಾಗದೆ ನಿನ್ನ।
ಸೇರಿ ರತಿಸುಖದೋರಿ ಸವಿಯನು।
ಬೀರಿ ತಾ ಹದಮೀರಿ ವಿರಹ ನೀ।
ವಾರಿಸಿ ತನ್ನಂಗ ಭಾಗ್ಯವ ।
ಸೂರೆಗೊಟ್ಟುಪಕಾರಿ ನಾರಿ ||೧||

ಚಾಮೀಕರ ಚಾರುಗಾತ್ರೆ । ಮೃದು।
ತಾಮರಸಾಯತ ನೇತ್ರೆ।
ಸಾಮಜಸಮ ಮಂದಯಾತ್ರೆ।ಪೂರ್ಣ
ಸೋಮಸದೃಶ ಸಮವಕ್ತ್ರೆ।
ಕಾಮಿನಿಯನುದಿನ ಕಾಮಿಸಿ ತನ್ನಯ
ಕಾಮ ಪ್ರಪೂರಣ ಕಾಮಾಂಗ ನಿನ್ನಿಂದ।
ಪ್ರೇಮಪಥ ಪರಿಣಾಮವೆನ್ನಯ।
ನಾಮ ನಾಯಕ ನೀ ಮುಳಿಯಲೀ ।
ಧಾಮ ಭೂಮಿಯ ಭೋಗ ಸರಿಯೆಂ
ಬಾ ಮನೋಜಾಮಯ ನಿವಾರಿಸು ||೨||

ಸುಂದರ ಸುಗುಣ ಸಂಪನ್ನ। ನಿನ್ನ
ನೆಂದಗಲದ ಮೋಹನ್ನ।
ಸುಂದರಿಯೊಳು ಬೇಡ ಭಿನ್ನ।ಬುದ್ಧಿ।
ಯೆಂದವಲ್ಲವು ಸುಪ್ರಸನ್ನ।
ಹಿಂದವಳಿಂದಲಿ ಬಂದ ಕುಂದುಗಳವೇ
ನೆಂದೆಣಿಸುವದಿದು ಚಂದವೆ ಚದುರ।
ಮುಂದೆ ಮುನಿಯಳಮಂದ ಸೌಖ್ಯದಿ
ಹೊಂದುವಳು ಸಂದೇಹವಿಲ್ಲಿದ
ಕಿಂದು ಸಿದ್ಧೇಶ್ವರನೆ ಸಾಕ್ಷಿ! ಪು
ರಂದರೋಪಮ ವಂದಿಸುವೆ ನಾ ||೩||

೨೭

ರಾಗ-ವರಾಳಿ ಅಥವಾ ಪೂರ್ವಿ

ಬಾರೆ ನೀರೆ! ನೀರಜಾನನೇ! ಏ ಸುಖನಿದಾನೆ।
ಬಾರೆ ನೀರೆ ಬಂದು ಹತ್ತೆ ಸೇರೆ ತೋರೆ ರತಿಕಳಾ ವಿ
ಹಾರೆ ಧೀರೆ ನಿನ್ನ ಪೋಲ್ವರ್‍ಯಾರೆ ಸಾರೆ ಸಾರಸಾಕ್ಷಿ ||ಪಲ್ಲ||

ಮಾರವೀರ ಮೋಹನಾಕಾರಪೂರ ಸಾರ ಸೌಕು।
ಮಾರ ಚಾರುತರ ಶರೀರದಾ ರಮಣೀಯ ರಚಿಸಲೆಂದು ।
ಭಾರತೀಶಗರುಹಿ ನಿರ್ಮಿಸಿ । ಪದಮುಖಾಕ್ಷಿ।
ಹಾರವಧರಗಳಲಿ ಸೇರಿಸಿ। ಪಂಚಬಾಣ।
ಕ್ರೂರವಾಗೆ ಭ್ರೂಶರಾಸಕೇರಿಸಳಿಯಗುಣದಿ ರಣದಿ।
ಮೀರಿ ಪೊಡೆವ ವ್ರಣವ ತವಿಪ ಕಾರಣಾವತಾರೆ ಧೀರೆ ||೧||

ಭರ್ಮಗಾತ್ರೆ ಕೇಳನಂಗಧರ್ಮ ತನ್ನ ಧರ್ಮವಿಡಿದು।
ಮರ್ಮನೋಡಿ ಮಾರ್ಮಲೆವ ಕರ್ಮನೀಗುವಂತೆ ಕಣೆಗ।
ಳೊರ್ಮೆ ಪೆರ್ಮಳೆಯನು ಗರೆಸುತ।ಕಾಯ ಘಾಯ।
ಚರ್ಮವೇಳದಂತೆ ಸುರಿಸುತ।ಸ್ಮರಿಸುತ।
ವರ್ಮ ಹೆಚ್ಚಿ ವರ್ಮ ಬಿಚ್ಚಿ। ಶರ್ಮ ನರ್ಮ ನೀಗಲಂ
ತರ್ಮನೋವಿಕಾರಗೊಳಿಸಲಾರ್ಮಣಿಯರು ಕಾಣೆ ಜಾಣೆ ||೨||

ಕುಂದರದನೆ ನಿನ್ನ ಮಂಜು ಮಂದಹಾಸ ಚಂದ್ರಿಕಾಂಶು।
ಬಂದು ಬೀಳೆ ಹೃದಯ ಸಂಶಯಾಂಧಕಾರವಳಿಯೆ ತಿಳಿಯೆ।

ಮುಂದೆ ಕಿನಿಸು ಜನಿಸಿತಾದರೆ। ಬಾಹುಪಾಶ।
ದಿಂದ ಬಂಧಿಸೆಂಬಗಲಿದರೆ । ರದನ ಖಡ್ಗ।
ದಿಂದ ಕಡಿದುರೋಜ ದುರ್ಗಸಂಧಿಗೆಳಸಿ ವೇಣಿಕಶದಿ।
ಕೊಂದರೇನು ನೊಂದೆನೆಂದರಿಂದು ಸಿದ್ಧೇಶಗನ್ನ ||೩||

೨೮

ತೋಯಜಲೋಚನೆ ತೋರಿಸು ಸಖಿನ ||ಪಲ್ಲ||
ಮಾನಂದನ ಸಮ ಮಂಜುಳವೇಷ।
ಭೇನ ಮುಖಾಮೃತ ಭಾಷ।
ಗಾನ ವಿಲೋಲಾತುಲ ಸುಖಕೋಶ।
ಸಾನಂದದ ಪ್ರಾಣೇಶ ||೧||

ಕಾಂಚನ ಸನ್ನಿಭ ಕಾಯದ ನಲ್ಲ।
ಮಿಂಚುವ ತೊಡವಿಡಬಲ್ಲ|| ಸಖಿಯೇ
ಪಂಚೇಷ್ವಾಜಿಯೊಳಾಲಿಪ ಸೊಲ್ಲ।
ವಂಚನೆ ಎನ್ನೊಳಗಿಲ್ಲ||೨||
ಕರುಣಾಪಾಂಗದ ಕಿರಣವಗರೆವ।
ತರುಣಿಯೆ ತವಕದಿ ಕರೆವ ।
ವರದ ಪುರದ ಸಿದ್ಧೇಶ್ವರ ಬರುವ।
ಪರಿತೋಷದಲಿ ಬೆರೆವ ||೩||

೨೯

ರಾಗ-ಯರಕಲ ಕಾಂಬೋದಿ

ರೀತಿ ಎಂಥಾದು। ಉತ್ತಮಳ ಸಂ।
ಪ್ರೀತಿ ಎಂಥಾದು ।
ಜಾತಿನಾಯಕಿ ರನ್ನೆ ನಾಥನು। ನೀತವಲ್ಲದ ನಡೆಯೊಳಿರೆ ಮನ।
ಸೋತು ಸೊಬಗಿಂದಾತುರದಿ ಸೌ।
ಖ್ಯಾತಿಶಯವನು ತೋರ್ಪ ಸುಗುಣೆಯ ||ಪಲ್ಲ||

ನಾಯಕಿಯಳೆ ಕೇಳು । ನಿನ್ನಯ ನಲ್ಲ।
ನಾ ಯುವತಿಯರೊಳು । ಕೂಡಿರುವನೆಂ।
ಬಾಯವನು ನೀ ಪೇಳಲು । ಕೇಳುತಲಾಗ।
ಹಾಯೆನದಲತಿ ಹರುಷದಿಂದಾ ।
ತೋಯಜಾಕ್ಷಿಯರೊಡನೆ ಕೂಡುತ।
ಕಾಯಜಾಗಮದಲ್ಲಿ ಸುಖಿಸಲ್
ಪ್ರೀಯೆ ನನಗದು ಹಿತವದೆಂಬಳ ॥೧॥

ಇಂದೆನ್ನಿನಿಯ ರನ್ನನು। ಎನ್ನಯ ಕಣ್ಣ।
ಮುಂದಾ ಸಖಿಯರನು । ಕೈವಿಡಿದತಿ।
ಚಂದದಿಂದಿರುವದನು । ನಾ ಕಾಣಲು ।
ಸುಂದರಗೆ ನಾನೊಂದ ನುಡಿಯೆನು ।
ಹೊಂದಲೆನಗಾನಂದ ಮತ್ತವ ।
ರಿಂದ ಸುಖಿಸುತ್ತಿಂದು ಬಂದರೆ।
ಒಂದುಗೂಡುವೆನೆಂಬ ಸುದತಿಯ ॥೨॥

ಪುರುಷ ತಾನ್ಯೆತರುವ । ವೇಳೆಯೆಂ।
ದರಸಿ ಪರಿಮಳದ್ರವ್ಯವ ತಂದಿರಿಸಲ
ಷ್ಟರೊಳ್ಬರೆ ಪ್ರಿಯನಂಗವ। ನೋಡಲು ಚಿಹ್ನ।
ವಿರಲು ಮರುಗದೆ ಹರುಷದಿಂ ಮುನಿ
ಪುರದ ಸಿದ್ಧೇಶ್ವರನಿಗೆ ಮೋಹನ ।
ಗರೆಸಿ ಚಿಂತೆಯ ಮರೆಸಿ ನಾನಿ ।
ನ್ನರಸಿ ಸರಿ ರಮಿಸೆಂಬ ತರುಣಿಯ ॥೩॥

೩೦

ರಾಗ-ಜಂಗಲ

ಹೋಳಿಯಾಡುವ ಮಲ್ಲೇಂದ್ರನ ತೋರೆ ॥ಪಲ್ಲ॥

ಆನಂದದಿ ಮದದಾನೆಯನೇರಿ
ಸೂನುಗಳಿಗೆ ಸುಖದೋರಿ ।ಸಖಿಯೇ।
ಮೀನಾಂಕೋಪಮ ರೂಪವ ಬೀರಿ ।
ಭೂನುತ ಭೂಪನ ಸಾರಿ ॥೧॥

ಪರಿಮಳ ದ್ರವ್ಯದ ಪೊಟ್ಟಣವೆರಸಿ ।
ಸರಸಾಂಗರ ಸತ್ಕರಿಸಿ ।ಸಖಿಯೆ।
ಕರಿತುರಂಗರಥ ಚಾರರ್ವೆರಸಿ ।
ವರ ಸಖಿಯರ ಸಾದರಿಸಿ ॥೨॥

ಗೀತವನಾಲಿಸಿ ನೃತ್ಯವ ನೋಡಿ
ಶಾತಕುಂಭವನೆ ನೀಡಿ ।
ಮಾತುಗಳಾಲಿಸಿ ಮೋಹವ ಮಾಡಿ।
ದಾತ ಸಿದ್ಧೇಶನ ಪಾಡಿ ॥೩॥

೩೧

ರಾಗ-ಮಾರವಿ

ಮರೆವೆನೆಂದಿಗೆ ಸುಮಶರ ಸುಂದರ ಶಮ।
ಶರಜಂಗ ಮಲ್ಲೇಂದ್ರ ದೊರೆಯೆ।
ತರಣಿಜನೋಲ್ ವಿತರಣದಿ ಮೆರೆವ ದಿ
ಗ್ಭರಿತಯಶ ಶ್ರೀಕರ ಜಗವರಿಯೆ ॥ಪಲ್ಲ॥

ಕೊಳನೋಳೊಗೆದ ಕಂಜಗಳ ಕರುಣದಿ ಜಲ
ಬೆಳಿಸುವದದು ತನ್ನದೆಂದು
ಕಳೆ ವಿಕಸನ ಪರಿಮಳ ಸಿರಿ ನೆಲೆಗಳು
ನಳಿನಾಳಿಗಿನ ಮೂಡಲಂದು।
ಬೆಳಗಿದೋಲ್ ಪೆಣ್ಮಕ್ಕಳಿರಲಪರ ಲಗ್ನ
ಗಳು ತಡೆಯಲು ಕಡು ನೊಂದು ।
ಇಳೆಯಾಣ್ಮ ನಿನ್ನಯ । ಬಳಿಗೆ ಬರಲು ಭಾವ।
ತಿಳಿದು ದ್ರವ್ಯವನಿತ್ತು । ಕಳುಹಿದ ರಾಜೇಂದ್ರ ॥೧॥

ಧರೆಯ ಧೂಳಿಗಳಿಷ್ಟೆ ಸರಿಯೆನ್ನಬಹುದಾ
ದರೆ ಮೇಘದಿಂದಲಿ ಬರುವ।
ಸುರಿವ ಪೆರ್ವನಿಗಳ ಪರಿಗಣಿಸಲಿಬಹು
ದಿರದೆ ಕನ್ಯಾದಾನದಿರವ।
ಅರವಿಂದ ಭವನದನರಿಯನಾ ಪರಿಯನಾ
ದ್ಯರ ಶ್ಲೋಕದ ತೆರ ಮೆರೆವ।

ಕರುಣಾಕರ ಪುಣ್ಯಪುರುಷ ಶಂಕರಮತ।
ಶರಧಿ ಸುಧಾಕರ। ಪರಮ ಪ್ರವೀಣ ||೨||

ಬಿಸವಪುರಾಣವನಸಮ ಭಕ್ತಿಯೊಳೋ।
ದಿಸಿ ಸಾಧಿಸಿದಿ ಮುಕ್ತಿಯನು ।
ಪಶುಪೋಪಮ ಗಣ ವಿಸರವನುಣಿಸಿದಿ ।
ವೃಷಭೇಂದ್ರನ ತೆರ ನೀನು।
ಕುಸುಮಾಂಬರಗಳ ವಸುದಕ್ಷಿಣೆಗಳೆ
ಣಿಸಲಿಲ್ಲವವನಿತ್ತುದನು ।
ಕುಶಲದ ಸಿದ್ಧೇಶ ಶಶಿಯ ಬೆಳೆಸಿದಂತೆ
ಶಿಶುವೆಂದು ನೋಡಿ ಲಾಲಿಸಿ ಪಾಲಿಸಿದುದ ||೩||

೩.೨

ರಾಗ-ಬೇಗಡ

ನಲ್ಲ ನೀ ಬಾ ಮನೆಗಿಂದು । ನಿಲ್ಲದೆ ಬಂದು । ಸುಖಿಸಿಂದು ।
ಇಲ್ಲದ ರತಿದೋರುವ ಸಖಿಯೆಂದು ||ಪಲ್ಲ||

ಕರುಣದಿ ನೋಡೊ ಮಾತಾಡೊ।
ನಿರುತದಿ ನಿನಗೆನಗೀಡೊ। ದಯಮಾಡೊ ||೧||

ನಂಬಿದ ಬಾಲೆ ಸುಕಪೋಲೆ।
ಎಂಬುದ ತಿಳಿದಾ ಮ್ಯಾಲೆ। ನಿಲ್ಲದಲೆ||೨||
ಮುನಿಪುರವಾಸ ಸಿದ್ಧೇಶ।
ಮನಸಿಜಕೇಳಿಗುಲ್ಲಾಸ। ಶುಭವೇಷ||೩||

೩.೩

ರಾಗ-ಪುನ್ನಾಗ ತೋಡಿ

ಶಿವಲಿಂಗರುದ್ರ ಭೂಧವ ಸವಿಲಾಸದೊಳೆನ್ನ।
ಭವನಕೈತಂದನುತ್ಸವದಿ ತನ್ನವಳೆಂದು ||ಪಲ್ಲ||

ಸಾರಸಾಕ್ಷಿಯೆ ಕೇಳು ಸಾರಾಸಾರವ ಬಲ್ಲ।
ಚಾರುಕಾಂತನ ಚಮತ್ಕಾರಕ್ಕೆ ಬರವ ।

ಹಾರೈಸುತಿರೆ ಕೃಪಾಪೂರ ಗಂಭೀರ ತಾ।
ಕೈರವಗಳಿಗೆ ಸುಧಾರೋಚಿಎಯ್ದಂತೆ ॥೧॥

ಸುಗುಣನೊಡವೆರೆದ ಸೊಂಪೊಗೆದ ರತಿಸುಖವ
ಪಗಲಿರುಳು ಧ್ಯಾನಿಸುವ ಬಗೆಯ ಪ್ರಿಯನರಿದೂ
ಸೊಗಸಿನಿಂ ಮೀರಿ ಝುಗಝುಗಿಪ ತೊಡವಿಂ ಕೋಕ।
ಕಗಲದರ್ಥಿಯೊಳಿಂದು ಗಗನಮಣಿ ಬಂದಂತೆ ॥೨॥

ಸ್ಮರತಾಪದಿಂದ ಮೈಮರೆದು ಚೇತರಿಸಿ ಸ
ತ್ವರದಿ ನಾ ನೆನೆಯೆ ಸುಂದರನಾಗಾನಂದಿಸುತ।
ಪರಮ ಸುಕೃತಿಯ ಕಂಡು ಧರಣಿಯೊಳ್ ಮುನಿವೃಂದ।
ಪುರದ ಸಿದ್ಧೇಶನಾದರದಿ ತಾನೊಲಿದಂತೆ ॥೩॥

೩೪

ರಾಗ-ಮೋಹನಕಲ್ಯಾಣಿ

ಮಾರಸನ್ನಿಭ ಸುಕುಮಾರ ಸುಂದರಗಾತ್ರ।
ನೀರೆಯನೀಕ್ಷಿಪುದು । ಶ್ರೀ ಮಲ್ಲಸರ್ಜಾ॥
ಸೇರಿ ತನ್ನಂಗವ ಸೂರೆಗೊಡುತ ಹೊಂತ।
ಕಾರಿ ವೈಯಾರಿ ವಿಹಾರಿ ವಿಲಾಸದಿ ॥
ಓರಿಗೆಯವರೊಳಗೀ ರೀತಿಯ ಸೊಬ
ಗ್ಯಾರಿಲ್ಲೆನಿಸು ಗಭೀರ ಶ್ರೀಕರ ॥ಪಲ್ಲ॥

ರಾಜೇಂದ್ರ ಚಂದ್ರ ವಿರಾಜಮಾನೋಪೇಂದ್ರ।
ಮಾಜಶಾಸ್ತ್ರವ ಬಲ್ಲ। ಕೇಳೆನ್ನ ಸೊಲ್ಲ।
ರಾಜಾಧಿರಾಜ ಸಮಾಜಮಾನಿತ ದಿವ್ಯ।
ತೇಜ ಪೋಲುವರಿಲ್ಲ। ನೀನಲ್ಲದಿಲ್ಲ।
ವಾಜಿಯನೇರಿ ಮತ್ತಾಜಿಯೊಳಗೆ ರಿಪು।
ರಾಜಿಯ ಮಣಿಸಿದ ರಾಜಸಮಾನನ।
ಭೋಜವಿನುತ ಸುರಭೂಜನ ಭೋಜನ।
ರಾಜ ವಿಭವ ವಿಭ್ರಾಜಮಾನ ಘನ ॥೧॥

ಕಾಮಕಲಾವಿದ ಕ್ಷೇಮದ ಕೋವಿದ।
ಕೋಮಲೆಯಳ ಪ್ರಾಂತ। ನಿನ್ನಿಂದ ಕಾಂತ।

ಭೀಮ ಸಮಾನ ನಿಸ್ಸೀಮ ಪರಾಕ್ರಮ
ಪ್ರೇಮಭರ ಸ್ವಾಂತ। ಸದ್ಗುಣವಂತ।
ಸಾಮಾನ್ಯಳೆ ಮದಸಾಮಜಗಾಮಿನಿ
ಭೂಮಿನಿ ನಂಬಿದ ಕಾಮಿನಿ ಕಾಮದ।
ಧಾಮದಿ ಸುಖಿಸಾ ಭಾಮಾಮಣಿ ಕರು
ಣಾಮಂದಿರ ಸತತಾಮೋದಕರ ॥೨॥

ಕೀರ ರಸಾಲವ ನೀರದ ಶಿಖಿಯು ಚ
ಕೋರ ಚಂದ್ರನ ಬರವ । ಹಾರೈಸಿರುವ ।
ಈ ರೀತಿಯಿಂ ನಿನ್ನ ವಾರಿಜಾಕ್ಷಿಯು ಬಾ
ಯಾರಿ ದಾರಿಯ ನೋಡಿ । ಬಳಲಿ ಪ್ರೌಢಿ।
ಸಾರಾಸಾರ ವಿಚಾರ ರುಚಿರ ಮಣಿ
ಹಾರ ವೀರ ಮುನಿವಾರಪುರಾಲಯ
ಶ್ರೀರಂಜಿತ ಸಿದ್ಧೇಶ್ವರ ಪದ ಸರ
ಸೀರುಹ ಸೌರಭ ಲೋಲುಪ ಮಧುಪ ॥೩॥

೩೫

ರಾಗ-ಸಾವೇರಿ

ನಡೆ ನಡೆ ಬೇಗನೆ ಸುಂದರ ॥ಪಲ್ಲ॥

ಕಡೆಹಾಯಿಸರಾ ಕಾಮಿನಿಯರು ಕಂ
ಗೆಡುವರೆ ಕಾರ್ಯಧುರಂಧರ ॥೧॥

ತೋರಿದ ವಾರಿದ ಮಾರುತಯೋಗದಿ
ಹಾರುವ ತೆರ ನಿನಗಸ್ಥಿರ ॥೨॥

ತನ್ನವರೇ ತನಗಾಗುವರಲ್ಲದೆ
ಚೆನ್ನಿಗ ಶ್ರೀ ಸಿದ್ಧೇಶ್ವರ ॥೩॥

೩೬

ರಾಗ

ನೋಡಿದೆ ನೋಡಿದೆ ಮಲ್ಲೇಂದ್ರನ ॥
ರೂಢಿಯೊಳರಿದಾದ ಪ್ರಾಣನಾಯಕನ ॥ಪಲ್ಲ॥

ಸರಸಸುಂದರ ಶುಭಕರ ಕರುಣಾರಸ।
ಪರಿಪೂರ್ಣ ದಿವ್ಯಶರೀರ।
ಸ್ಮರಶಾಸ್ತ್ರದ ಪರಿಯನರಿದ ಪರ
ತರ ಶೃಂಗಾರ ವಿಚಾರ।
ಸುರುಚಿ ಮಣಿಗಣ ಹಾರಗಳ ಭಾ
ಸುರಚರಿತ ಸುಖಭರಿತ ಸುರತದಿ
ಸುರಸ ಸಭಾವವ ತಿಳಿವ ವಿಷಯದಿ
ಸುರ ಸಭಾಂತರ ಸುಗುಣಕಾಂತನ ॥೧॥

ಕುಂದರದನೆ ಸುಧೆಯಿಂದ ಮಧುರವಾಗಾ
ನಂದ ಮಂದಸ್ಮಿತಗರೆವ।
ಚಂದಿರವದನ ಮರಂದಸುರಿವ ಸುಮ
ವೃಂದವ ಸೂಡಿದ ಗರುವ।
ನಂದನಂದನ ನಂದನನೊ ಸುರ
ನಂದನಾರಾಮದಿ ಚರಿಪ ಸಂ
ಕ್ರಂದನನೊ ನಾನರಿಯೆ ಪುಣ್ಯದಿ
ದೊಂದು ರೂಪದಿ ನಿಂದೊಲೆಸೆವನ ॥೨॥

ನಾನೆಂದು ನಂಬಿದಳೀ ನೀರೆಯೆಂದೆನ್ನ
ಮಾನವ ನಡಿಸಿ ರಾಜಿಸಲು ।
ಶ್ರೀನಾಥೋಪಮನಾನನರುಚಿಗನ್ಯ
ಮಾನಿನಿಯರು ಮೋಹಿಸಲು
ತಾನವರನೀಕ್ಷಿಸದೆ ಬಂದ ನಿ
ದಾನ ದೀನಗೆ ದೊರೆದ ತೆರದಲಿ
ಮೌನಿಪುರ ಸಿದ್ಧೇಶ ದೊರೆದ ದ
ಯಾನ ದೀನನ ಸಾನುರಾಗದಿ ॥೩॥

೩೭

ರಾಗ-ಯರಕಲ ಕಾಂಬೋದಿ

ಯಾರೆ ಸಖಿ ಈ ರೀತಾದೋರಿ ಸುಖಿಸುವ ಕಾಂತ।
ಮಾರನಲ್ಲದೆ ಮನುಜನೇ?।

ಮಾರಸದ್ಗುಣ ಸಾರಶೃಂಗಾರ ವಿಷಯದ ವಿ
ಚಾರವನು ತಿಳಿಯಬಲ್ಲ ।ನಲ್ಲ ॥ಪಲ್ಲ॥

ನಳಿನಾಸ್ತ್ರನಾಟದೊಳ್ ನಲಿದು ನಳಿತೋಳ್ಗಳಿಂ
ದೊಲಿದು ಬಿಗಿಬಿಗಿದಪ್ಪುವಾ।
ಚೆಲುವ ಮುಡಿವಿಡಿದು ಮುದದಳೆದು ವಿಚಿಕಿಲ ಮಾಲೆ
ಗಳ ಲೀಲೆಯಿಂ ಹಾಕುವಾ।
ಅಲಕವನು ತಿದ್ದಿ ಥಳಥಳಿಸುವ ಕಪೋಲಯುಗ
ಗಳಿಗೊಲಿದು ಮುದ್ದನಿಡುವಾ।
ಬಲುನೊಂದಳೆಂದು ವಿಲಸಿತ ಚಿತ್ರವನೆ ಬರೆದು
ಭಲರೆ ಭಲರೆಂಬುವಂಥಾ । ಕಾಂತಾ ॥೧॥

ವದನಾಬ್ಜವೆರಸಿ ಮಧುರಾಧರಾಮೃತ ಸವಿದು
ಮುದದಿ ತಾಂಬೂಲವೀವಾ।
ಕದುಬಿದ ಪಯೋಧರವ ಮುಟ್ಟಿ ನಖವಿಕ್ಕಿ ಚಿ
ತ್ರದ ಗೆರೆಯ ತಾ ಲಿಖಿಸುವಾ ॥
ಮದನ ಕದನದಲಿ ಕಲೆ ನೆಲೆದೋರದಪ್ಪಲದ
ರದರ ಭಾವವನರುಹುವಾ।
ಚದುರನೊಳ್ ಕೂಡಿದಾ ಸುದತಿ ತಾ ಧನ್ಯಳಾ
ಗದೆ ಇಹಳೆ ಕಲಿಯುಗದೊಳು। ಕೇಳು ॥೨॥

ಸ್ಮರತಾಪವನು ಹರಿಪ ಪರಮೌಷಧಿಯೆ ನಿನ್ನ
ಹೊರತು ಮತ್ತ್ಯಾರೆಂಬುವ ।
ಕರವಿಡಿದು ಬೆರಳಿಗುಂಗುರವಿತ್ತು ನನ್ನ ಮೈ
ಸಿರಿ ನಿನ್ನದೆಂದೆಂಬುವ ।
ಪುರುಷರನ್ನನ ಕೂಡೆ ನೆರೆದ ಸಖಿ ರಂಭೆಯಾ
ಗಿರಳೆ ಮತ್ತುದಿಸಿ ಬರುವ ।
ಪರಿಯಲ್ಲೆ ಈಗ ಮುನಿಪುರದ ಸಿದ್ಧೇಶನಾ
ಗಿರುವಾತನಲ್ಲದಲೆ । ಮೇಲೆ ॥೩॥

೩೮

ಸೋಜಿಗವೇನೆ ಸೋತವನೊಳು ಕೂಡಲು ।
ರಾಜವದನೆ ಸರಸಿಜದಳೇಕ್ಷಣೆ ॥ಪಲ್ಲ॥

ಕರೆಯಲೊಡನೆ ಸುಖ ಕರೆಯೆ ಬಂದೆನಿದೆಂದು।
ಕರವ ಪಿಡಿಯಲತ್ತ ಸರಿಯೆ ಸರಸವೆಂದ ॥೧॥

ಕುಮುದಗಳಿಗೆ ಚಂದ್ರಮರು ಬೇರೊಬ್ಬನೆ ।
ರಮಣಗಾ ತೆರ ಬಂದು ರಮಿಸುವರೆಂಬದು ॥೨॥

ನೋಡಿದಾಕ್ಷಣ ನಿನ್ನ ಪ್ರೌಢ ಸಿದ್ಧೇಶ್ವರ
ಕ್ರೀಡಿಸಲೊಡನೆ ನಾ ಮಾಡುವದೇನಿದು ॥೩॥

೩೯

ರಾಗ-ಭೈರವಿ

ನೀರೆ ಸಾರೆ । ನಿಲ್ಲದೆ । ಬಾರೆ ಧೀರೆ ।
ನೀರೆ ನಿಲ್ಲದೆ ಸಾರೆ ಎನಗಾಧಾರೆ ಸವಿರುಚಿ
ದೋರೆ ಬಲ್ಲ ವಿಚಾರೆ ಮೋಹನ
ಕಾರೆ ಸೈರಿಸಲಾರೆ ನೀ ಕರೆತಾರೆ ಕಾಂತನ ॥ಪಲ್ಲ॥

ಧೀರ ಸುಗುಣಗಭೀರ ಮಣಿಗಣ
ಹಾರ ದಿವ್ಯಾಹಾರ ಸುಜನೋ
ದಾರ ಸುಖಮಂದಾರ ಸುಂದರ ಸುಂದರ
ಬಾರ ವದನವ ತೋರದಿರಲಾ।
ಮಾರವೀರ ಕ್ರೂರ ಮಾರ್ಗಣ
ವಾರವೆಸೆಯೆ ಶರೀರ ಗತ ಸುಕು
ಮಾರತೆಯ ತಾ ಮಾರಗೊಳಲಾ
ಗಾರ ಕಾರಾಗಾರವಾಗಿರೆ ॥೧॥

ಶೀತಕರ ಖದ್ಯೋತ ಮಲಯ ಸು
ವಾತವಶನೀಘಾತ ಸುಮಸಂ
ಘಾತ ಬಾಣವ್ರಾತ ಶುಕವಾ
ಗ್ಭೂತ ಭೀತೋತ್ಪಾತವಾಗಿರೆ ।

ನಾ ತಳೆವೆನೆಂತೇ ತಳೋದರಿ
ನೀ ತವಕದಿಂದಾತಗಿಂತಿದು
ನೀತವಲ್ಲ ನಿಕೇತನಕೆ ಬಾ
ನಾಥ ಎನಲಾ ಮಾತ ಮೀರನು ||೨||

ಶೇಷವೇಣಿ ವಿಶೇಷವಾಣಿ ರ
ತೀಶ ವೇಷಾತ್ಮೇಶಗಾ ನಾ
ಶೇಷ ಸುಕಲಾಕೋಶವೆನ್ನ ನಿ
ವೇಶವೆನಿಸುವೆನಾಶು ಪೋಪುದು ||
ಭೂಷಣವು ತನಗೀ ಸಮಯದಿ ಕು
ಶೇಶಯೋತ್ಕರ ಕೋಶಕಿಂದು ದಿ
ನೇಶನೊಲ್ ಕರುಣಾಶರಧಿ ಸಿ
ದ್ಧೇಶ ಬರೆ ಸಂತೋಷಿಸುವೆ ಸಖಿ ||೩||

೪೦

ರಾಗ - ಶ್ಯಾಮಕಲ್ಯಾಣಿ

ಪ್ರೌಢಿ ನೋಡೆ ರತಿಗೂಡಿ ಮಾಡಿದುದ|
ಆಡಲೇನದ್ಭುತರಸಕೀಡಾದುದ ||ಪಲ್ಲ||

ತಿಮಿರಸ್ತೋಮವು ಗಮಿಸಿ ಹೆಚ್ಚಿದುದ
ಹಿಮಕರ ಮಂಡಲವನು ಮುಚ್ಚಿದುದ ||೧||

ಗಿರಿಗಳು ಕಾಂಚೀಪುರಕೆ ನಡೆದುದ|
ಅರಿಗಳು ಮೋಹವನಿರದೆ ಪಡೆದುದ ||೨||

ಲತೆಗಳು ಕರಿಕರಗಳನಪ್ಪಿದುದ|
ಯತಿಪುರ ಸಿದ್ಧೇಶ್ವರನೊಪ್ಪಿದುದ ||೩||

೪೧

ರಾಗ-ಕಲ್ಯಾಣಿ

ಬಾರೋ ಪ್ರಾಣೇಶ | ಬೇಗನೆ | ಬಾರೋ ಪ್ರಾಣೇಶ|
ಬಾರೋ ಬೇಗನೆ ಹತ್ತೆ ಸೇರೊ ಸೇರದಂಥಾದ|

ತೋರೊ ತೋರಿದರತ್ತ ಸಾರೊ ಸಾರವ ಬಲ್ಲ।
ಶೂರ ಸನ್ಮಣಿಹಾರ ಶೋಭಾಕಾರ ವಸುಧಾ ಮಾರಸುಂದರ ||ಪಲ್ಲ||

ನಲ್ಲ ।ನಯನೀತಿಗಳಲಿ ತಪ್ಪಿಲ್ಲ।
ವಲ್ಲಭ ವನಿತೆಯ ಸೊಲ್ಲ।ನಾಲಿಸಿ ಪಾಲಿಸಿ ಬಲ್ಲ।
ಭೇದವೆನಿತಿಲ್ಲ||
ಫುಲ್ಲಲೋಚನೆಯಲ್ಲಿ ಯೋಚನೆ
ಸಲ್ಲದಿದು ಸರಸಲ್ಲ ಸುಮ್ಮನೆ ||೧||

ಕಾಂತ। ಕಮನೀಯ ಸುಗುಣ ನಿಶಾಂತ।
ಕಾಂತೆಯೊಳಿಂದೇಕಾಂತ।ವಾಗಲು ವಿರಹಶ್ರಾಂತ।
ಬೇಡವೀ ಪಂಥ||
ಪ್ರಾಂತವಿಲ್ಲದೆ ಭ್ರಾಂತಳಾಗೆ ಲ
ತಾಂತ ವಿಶಿಖ ಕೃತಾಂತನಾಗಿಹ ||೨||

ಧೀರ।ದೀನಳೊ ದಯಾಪಾರ।
ಪಾರಗಾಣಿಸು ಪೂರ। ಪುರದ ಸಿದ್ಧೇಶ ಗಭೀರ।
ಸುವಿಚಾರ||
ಸಾರಸಾಕ್ಷಿಗೆ ಸಾರಸೌಖ್ಯ
ಸಾರಗರೆಸಿ ವಿಹಾರಗೊಳಿಸಲು ||೩||

೪೨

ರಾಗ-ಜಂಗಲ

ನೋಡಿದೆ ಮಲ್ಲೇಂದ್ರನ । ಸಖಿಯೇ ||ಪಲ್ಲ||

ತ್ಯಾಗದಿ ಭೋಗದಿ ಯೋಗದೊಳೀ ಭೂ
ಭಾಗದಿ ಭೂಪಾಲವರನ ।
ರಾಗದಿ ಧೈರ್ಯಸುರಾಗ ಧೀರೋದಾರ
ನಾಗಿ ರಂಜಿಸುವ ರಾಜೇಂದ್ರಚಂದ್ರಮನ ||೧||

ಆರ್ಯಾಧವಾಜ್ಞೆಯಿಂ ಕರ್ಯಾತಿ ಪದಿನಾಲ್ಕ
ಶೌರ್ಯದಿಂದಾಳುವ ದೊರೆಯ।

ಸ್ಥೈರ್ಯ ಚಾತುರ್ಯ ಗಾಂಭೀರ್ಯದ ಪರಮೈ
ಶ್ವರ್ಯದ ಕಾರ್ಯದ ಪರಮಸುಂದರನ ||೨||

ವೀರಕ ರೇಣುಕ ದಾರುಕರೋಲ್ ಸುಕು
ಮಾರ ಶರೀರದ ಸುತರಿಂ||
ಚಾರುಸಭಾವೃಂದಾರಕರೆನೆ ಶೃಂ
ಗಾರ ಪೀಠದಿ ತೋರುವಾ ರಮ್ಯ ನೃಪನ ||೩||

ಬಂಧುರ ವಿಭವ ಧುರಂಧರ ಮೇಚಕ
ಕಂಧರ ಪೂಜಾಲೋಲ||
ಸಿಂಧುರಪೀಠದೊಳಂದದ ಚತುರಂಗ
ದಿಂದ ಬರಲು ಭೂಪುರಂದರ ಸಮನ ||೪||

ಕರಿತುರಂಗಮ ರಥಚರರು ಸಪ್ತಾಂಗದಿ
ಕರಿಬೇಟೆಯ ಪೋಗಿ ಬರಲು ||
ದೊರೆಯ ಸರಿಯ ನಾನರಿಯೆ ಸಿದ್ಧೇಶ್ವರ
ಕರುಣಾಪಾತ್ರನ ಕಮನೀಯ ಗಾತ್ರನ ||೫||

೪೩

ರಾಗ-ಕಲ್ಯಾಣಿ

ಸಲಹು ಮಲ್ಲಸರ್ಜಾ| ಸಂತತ|
ಇಳೆಯೊಡೆಯನೆ ನಿನ್ನ |ಬಳಿಯಲಿ ದಿವಸವ
ಕಳೆಯಲು ವದನದಿ ಕಳೆಯೇರುವದು ||ಪಲ್ಲ||

ನಂಬಿದೆ ನಾ ನಿನ್ನ |ಲಕ್ಷ ಕು
ಟುಂಬ ಪೋಷ ನಿನ್ನ|
ಸಾಂಬ ಕೃಪಾಬಲ ಬೆಂಬಲ ಮುಂಬಲ
ಹಂಬಲ ಬಿಡಿಸು ದಯಾಂಬುಧಿ ಭೂವರ ||೧||

ಕಮಲಮಧುವನುಂಡು | ಸೊಕ್ಕಿಹ
ಭ್ರಮರವನ್ನ ಕಂಡು |
ಗಮಿಪುದೆ ಚಂಪಕ ಸುಮಕೆ ಸುರದ್ರುಮ
ಸಮ ಕಾಮಿತ ಸಂಭ್ರಮದಿ ಪಾಲಿಸಿದಿ ||೨||

ಶ್ರೀ ಸಿದ್ಧಲಿಂಗ । ಪೂಜಾ
ಲೋಲ ಭಾಸುರಾಂಗ ।
ಕಾಲಕಾಲ ನಿನ್ನಾಲಯವೇ ಮೋ
ಕ್ಷಾಲಯವೆಮಗೆ ವಿಶಾಲ ವಿಭವನೆ ||೩||

೪೪

ರಾಗ

ಲಲನೆ ಕರೆತಾರೆ ಬೇಗನೆ ।ಶ್ರೀ ಮಲ್ಲನೃಪನ।
ಲಲನೆ ಕರೆತಾರೆ ಬೇಗ। ಅನಿಲವೇಗದಿಂದಲಿ ಈಗ ||ಪಲ್ಲ||
ಬಲವರ್ಧನ ಖಲಕುಲಮರ್ದನ ಭೂ
ಲಲನಾಧಿಪನುಜ್ವಲ ಗುಣಗಣನ || ಅನುಪಲ್ಲ||

ಸುಂದರ ಸದ್ರತ್ನಹಾರ।
ಕಂಧರ ಕಮನೀಯ ಸುಕಳಾ ।
ಚಂದಿರ ಸ್ಥಾನೀಯ ಭೂಪು ।
ರಂದರ ಪುಣ್ಯಪ್ರಸಂಗನೆ । ಕರುಣಾಪಾಂಗನೆ ।
ಮಂದಿರದೊಳಗೊಂದರಗಳಿಗಿರದಲೆ ।
ಬಂದೆನ್ನನು ಮನ್ನಿಪ ಧೀರ ।
ಇಂದೆನ್ನಯ ಮಾತನು ಮೀರ।
ಮಂದಹಾಸ ಮಾನಿತ ವೀರ ।
ಕಂದರ್ಪೋಪಮ ಸುಶರೀರ।।
ನಂದನಂದನ ನಂದನನಾತುರದಲಿ ।
ನೊಂದಳೆನಲು ಜವದಿಂದಲಿ ಬರುವಾ ||೧||

ನಾನಲ್ಲದನ್ಯಳ ನೋಡ।
ಮಾನಸದೊಳ್ ನೆನೆಯ ಗಾಢ।
ನಾನಾ ವಿಧ ರತಿಯೆನ್ನ ಕೂಡ।
ತಾನೆಸಗುವಂಥಾ ಪ್ರೌಢನೆ । ಹಸ್ತ್ಯಾರೂಢನೆ ||
ಭಾನು ಸಮಾನಾನೂನ ಕಳಾಮಯ
ಗಾನ ಶ್ರವಣವಿಶಾರದನೆ ।

ವೀಣಾ ವಿಷಯದಿ ನಾರದನೆ ।
ನಾನರಿದಿಹೆ ದಾಡಿಮ ರದನೆ ।
ತ್ವಾನೆನ್ನೊಳು ಸವಿದೋರದನೆ॥
ಸಾನುರಾಗದಿಂದಾನನದೋರಲು
ಮಾನಿನಿ ಮೌನವ್ರತವನು ಬಿಡುವೆ ॥೨॥

ರತಿಯಲಿ ರತಿಯಾಗಿ ಪತಿಯ।
ಜತಿಯನಗಲದಂತಸ್ಥಿತಿಯ।
ಹಿತೆಯಾಗಿ ತೋರ್ಪೆನು ಚಮತ್ಕೃತಿಯ।
ಪ್ರತಿದಿನವಾತನ ಸನ್ನುತಿಯ । ಮಾಡುವ ಮತಿಯ॥
ಚತುರತೆಯನು ತೋರಲು ಹಿಗ್ಗುತ ಸಂ
ತತವೆನ್ನಾಜ್ಞೆಯ ಸಲಿಸುವನೆ ।
ಅತಿಶಯ ಸ್ನೇಹವ ಬಲಿಸುವನೆ ।
ಮತವನು ನಡೆಸುತ ನಲಿಸುವನೆ।
ಖತಿಯನುದೋರದೆ ನಲಿಸುವನೆ॥
ಕ್ಷಿತಿಯೊಳು ಯತಿಪುರಪತಿ ಸಿದ್ಧೇಶನ
ಸತತಾರಾಧಿಪ ಶತದಳನೇತ್ರೇ ॥೩॥

೪೫

ರಾಗ-ಶ್ಯಾಮಕಲ್ಯಾಣಿ

ಇಂದು ಬಹ ಸುಖಸಿಂಧುವಿಗೆ ಪೂರ್ಣೇಂದುಸಮ ಮಲ್ಲೇಂದ್ರನು ॥ಪಲ್ಲ॥

ಮದಗಜದ ಮೇಲೊದಗಿ ಬಹ ಸಂಪದದ ನೃಪಕುಲಚಂದ್ರನು ।
ಉದಯಶೈಲದ ತುದಿಯೊಳಿಹ ಚೆಂಗದಿರನೋಲ್ ರುಚಿರುಂದ್ರನು ॥೧॥

ರಾಜಮುಖಿ ನೋಡಿ ಜಗದಿ ಸುರರಾಜನಂದದ ಕಾಂತನು ।
ತೇಜ ಬುಧಸುರಭೂಜ ಸುಗುಣಸಮಾಜ ವಿಮಲಸ್ವಾಂತನು ॥೨॥

ಮುನಿಪುರಾಧಿಪನೆನಿಪ ಸಿದ್ಧೇಶನ ದಯಾರಸ ಪಾತ್ರನು ।
ತನುಮನವ ನೀನಿನಿಯಗೊಪ್ಪಿಸಲನಿಶ ಹೃದ್ವನ ಚೈತ್ರನು ॥೩॥

೪೬

ರಾಗ-ಸಾರಂಗ

ಎಂತುಸುರುವೆನೆ ನೀರೆ । ಶ್ರೀಮಲ್ಲ ಭೂಮಿಪ
ನಂತವರ ನೀ ತೋರೆ । ಕಂಡಿರಲು ನಿರ್ಜರ
ಸಂತತಿಯೊಳು ಗಭೀರೆ। ಶೃಂಗಾರಸಾರೆ।।
ಪಿಂತೆಮಾಡಿದನಂತ ಸುಕೃತ ಫ
ಲಂ ತನಗೆ ಮೆಯ್ಯಾಂತಿರಲ್ ಗುಣ
ವಂತ ಚೆಲುವಿಕೆಯಾಂತ ಕಾಂತಗೆ।
ಕಾಂತೆಯೆನಿಸುವಳೆಂಥ ಸುದತಿಯೊ ।।ಪಲ್ಲ।।

ಧೀರ ಶಮಶರಜಂಗ।ಬಹದರನು ಭರದೊಳ
ಗೇರಲತುಳ ತುರಂಗ। ನಾ [ಶಿಲೀ] ಮುಖದಿಂ
ಸಾರಲೊಡನೆ ತರಂಗ। ವೆನೆ ವಿಹಂಗ।।
ಹಾರುವಂದದಿ ಕ್ರೂರ ಖುರಪುಟ
ಭಾರ ಕುದ್ದಾಲೋತ್ಥಿತ ಧರಾ
ಭೂರಿ ಧೂಳಿಗಳಾಗ ಪಾರಾ
ವಾರವೇಳವು ಪೂರವಾಗಲು ।।
ಶ್ರೀರಮಣ ಕೋಶದಲಿ ನಿರ್ಜರ
ಭೂರುಹವು ಪಾಣಿಯೊಳಮೃತ ವಾ
ಕ್ಸಾರದಲಿ ಸಿರಿ ಕಣ್ಣೊಳೊಪ್ಪಿರೆ
ವೈರಿ ವಾರದೊಳೌರ್ವ ತೋರಿರಲೆಂತುಸುರುವೆನೆ ।।೧।।

ಭೂವಧೂವರ ನಿನ್ನ । ಸತ್ಕೀರ್ತಿಮಯ ಮು
ಕ್ತಾವಳಿಯೊಳೀ ಜೊನ್ನ। ವಾವರಿಸೆ ದಿವಿಯೊಳು
ದೇವಸ್ತ್ರೀಯರ ಭಿನ್ನ। ಭಾವದಲಿ ತನ್ನ।।
ಶ್ರೀ ವಿರಾಜಿತಗುಣದಿ ಪೋಣಿಸ
ಲಾ ವನಿತೆಯರು ಕಡೆಯ ಗಾಣದ
ಲಾ ವಿಮಲ ಮುಕ್ತಾಳಿ ಛಿದ್ರದ
ಠಾವನರಿಯದೆ ಭ್ರಾಂತರಾಗುತ।।
ನಾವು ಮಾಡಿದ ಯತ್ನ ಹಾರಾ
ಭಾವವಾದುದು ಭಾವ ತಿಳಿಯದು

ಭಾವೆಯರು ನಗುವರು ವಿಚಿತ್ರ ಸು
ಧಾವಲಂಬನ ವಾಗ್ವಿಲಾಸದಿ ||೨||

ಅರ್ಜಿಜಯಾರ್ಥದಿ ವೀರ। ತಾನೆರಡಡಿಯನಿಡ
ಲರಿದು ರಿಪು ಪರಿವಾರ। ಧರಣಿಯನು ಬಿಡುವರು
ಕರದಿ ಶರ ನಾಲ್ಕಾರ। ಬಿಡಲಸ್ತ್ರವಾರ॥
ಧರೆಗಿರಿಸುವರು ನಿನ್ನ ವಿಜಯೋ
ತ್ಕರ ಶಿಲೀಮುಖ ನಿಕರಹತ ನಿ
ಷ್ಠುರ ಪರಾವಳಿ ದೇವತಾಸ್ತ್ರೀ
ಯರೊಳನಾರತ ಸುಖಿಸುವರು ಕೇಳ್ ||
ತರುಣಿ ನಿಂದಾಸ್ತುತಿಗಳೆರಡರ
ಪರಿಯ ತಿಳಿವುದು ಪರಮ ಕುಶಲತೆ
ಪುರದ ಸಿದ್ಧೇಶ್ವರನ ಪದಸರ
ಸಿರುಹ ಸೌರಭ ಲೋಭ ಮಧುಪನ ||೩||

೪೭

ರಾಗ-ಭೈರವೀ

ವಿಜಯದಶಮಿಯ ಮಹೋತ್ಸವ ತೋರಿದ
ವಿಜಯ ಮಲ್ಲೇಂದ್ರನೀಗ ||ಪಲ್ಲ||

ನವರಾತ್ರಿಯ ಪಾಡ್ಯವು ಬರೆ ನೃಪನು ।
ತ್ಸವದಿ ಚತುರಂಗವೆರಸಿ ।
ಸುವಿನೋದದ ವಾದ್ಯವನಾಲಿಸಿ ನಾ
ಟ್ಯವನಾಡಿಸುತ್ತ ಚರಿಸಿ।
ಶಿವಭವನಾದಿ ದಿವಿಜ ಭವನಗಳಿರ
ಲವನೆಲ್ಲಾವನು ಬರೆಸಿ ।
ರವಿರುಚಿ ದೀವಿಗೆಗಳನನುಗೊಳಿಸಿ ।
ವಿವರಿಸುತಲಿ ಕಡೆಗೀವುದ ತಿಳಿಸಿ ।
ಬವರದ ಕಡುಗಲಿಗಳ್ ಬರೆ ಬಳಸಿ ।
ಕುವರರು ಸಹಿತ ।
ಜವದಿಂ ಬರುತ ।

ಅವನಿಪ ನಿರತ।
ಧೀರ ಮಲ್ಲೇಂದ್ರ ಗಭೀರ ॥೧॥

ಪುತ್ರರು ಶೋಭನಗಾತ್ರರು ಪರಮಪ
ವಿತ್ರರಾದಾತ್ಮಭವರು ।
ಗಾತ್ರವೆರಸಿದಾ ಪುತ್ರರನೇಕರು
ಛತ್ರಾದಿಗಳ ಪಿಡಿದವರು ।
ಮಿತ್ರದ್ಯುತಿಯ ಸುರತ್ನಗಳಿಂದ ವಿ
ಚಿತ್ರಾಲಂಕಾರಾಯತರು ।
ಗೋತ್ರೇಶಾರ್ಚನೆಯಲಿ ಬಹುನಿಷ್ಠ।
ಗೋತ್ರೋದ್ಧಾರಕನೆನಿಸುವ ಶಿಷ್ಟ।
ಗೋತ್ರಾಧಿಪರೊಳಗತ್ಯುತ್ಕೃಷ್ಟ।
ಚಿತ್ರಚರಿತ್ರ।
ರಾತ್ರಿಪ ವಕ್ತ್ರ।
ಸ್ತೋತ್ರ ಸುಪಾತ್ರ॥
ಧೀರ ಮಲ್ಲೇಂದ್ರ ಗಭೀರ ॥೨॥

ಕವಿ ಗುರು ಸುಕಳಾಧರರೋರ್ರೋರ್ವರು।
ದಿವಿಜಾಧೀಶನ ಸಭೆಯಲ್ಲಿ ।
ವಿವರಿಸೆ ಕವಿಗಳು ಗುರುಗಳು ಸುಕಳಾ
ಧವರು ಪಲರ್ ತೋರುವರಿಲ್ಲಿ ।
ಅವರವರಿಷ್ಟದ ನೃವರಗೆ ಸಮ ನೋ
ಡುವರೆ ಕಾಣರೆಲ್ಲೆಲ್ಲಿ।
ಪವಿಧರ ವಿಭವ ವಿರಾಜಿತನೀತ।
ಭವನ ಸಭಾ ಸಪ್ತಾಂಗಸಮೇತ।
ರವಿಜೋಪಮ ವಿತರಣ ವಿಖ್ಯಾತ॥
ಕವಿತಾಮೋದ।
ಶ್ರವಣವಿನೋದ।
ಸುವಚೋವಾದ।
ಧೀರ ಮಲ್ಲೇಂದ್ರ ಗಭೀರ ॥೩॥

ಕಡೆಯ ಪೂಜೆಗೆ ಕಡಿಗಸಿಗಳ ತೆಗೆ ।
ದಿಡಲು ಸಾಲ್ಗೊಂಡುವಾಗ।
ಪೊಡವಿಯಾಣ್ಮನಡೆ ಕಡಿವೆವು ರಿಪುಗಳ
ಹೊಡೆವೆವೆನುತಾಗ ಬೇಗ।
ದೃಢದಿ ನಿಂದವೋಲ್ ಮುಡಿದ ಪೂಗಳಿಂ
ಬಿಡದೆ ಶಸ್ತ್ರಾಸ್ತ್ರಪೂಗ।
ಸಡಗರದಲಿ ಗಜಹಯರಥಗಳನು ।
ನಡೆಸಿ ಸ್ನಾನಗೊಳಿಸಿದ ಪೂಗಳನು ।
ಮುಡಿಸಿ ಹೊದಿಸಿ ದಿವ್ಯಾಂಬರಗಳನು ॥
ತೊಡಿಸಿ ತೊಡಗಳ ।
ಒಡಿಸಿ ಕಾಯ್ಗಳ।
ಕೊಡಿಸಿದ ಕವಳ॥
ಧೀರ ಮಲ್ಲೇಂದ್ರ ಗಭೀರ ॥೪॥

ದಶಮಿಯೊಳಸಮನು ಜಸದಿಂ ಸುಭಟ
ಪ್ರಸರ ರಾವುತರ ಕರೆದು ।
ಮಿಸುನಿಯ ತೊಡಗಳ ವಸನಗಳಿಂ ಮ।
ನ್ನಿಸಿ ಮಹಬಲದೊಳ್ ಬೆರೆದು।
ವಸುಧಾವಾಸವನೆನೆ ಭದ್ರೇಭದೊ ।
ಳೆಸೆವನು ಅವರೊಳು ಮೆರೆದು ॥
ಕುಶಲದ ಶಮಿಯ ಸಮೀಪಕೆ ನಡೆದು ।
ಒಸೆದರ್ಚಿಸಲಾ ಶಮಿಯನು ಪಡೆದು ।
ರಸಿಕ ಸಿದ್ಧೇಶನ ದಯದಿಂ ಮುಡಿದು ॥
ವಶರನು ನೋಡಿ।
ಒಲೆದುದ ನೀಡಿ।
ಒಸಗೆಯ ಮಾಡಿ॥
ಧೀರ ಮಲ್ಲೇಂದ್ರ ಗಭೀರ ॥೫॥

೪೮

ರಾಗ-ಕನ್ನಡ ಕಾಂಬೋದಿ

ಸದರನೇರಿದ ಸಕಲೈಶ್ವರ್ಯದಿ
ಚದುರ ಮಲ್ಲಭೂಪ।

ಉದಯಾದ್ರಿಯ ಚೆಂಗದಿರನೆನಲು ಪೀ
ಠದಿ ತೋರ್ಪನು ಮಣಿಗಣ ಸುಕಲಾಪ ||ಪಲ್ಲ||

ವೀರವಿಜಯ ರಣಧೀರ ಸುಭಟ ಪರಿ
ವಾರವು ಮುಂದಿರಲು।
ಮಾರೋಪಮ ಸುಕುಮಾರ ಶರೀರ ಕು
ಮಾರರು ಬಳಸಿರಲು।
ಚಾರು ಸಭಾ ವೃಂದಾರಕರೆನೆ ಶೃಂ
ಗಾರವ ಬೀರಿರಲು।
ವೀರಭದ್ರ ಭೂರಮಣಾತ್ಮಜ ಸುಖ
ಸಾರ ಧರೇಂದ್ರನೆನುತ ಕೊಂಡಾಡಲು ||೧||

ಚತುರ್ದಶ ವಿಷ್ಟಪ ಪತಿ ಶಿವನಡಿಗಳಿ
ಗತಿ ಜವದಿಂ ಸುರರು ।
ಹಿತ ಜವದಿ ಬರ ಚತುರ್ದಶ ಸಂಖ್ಯಾ
ಯತ ಮಹಾಲಿನವರು ।
ರತಿಯಿಂ ಕಾಣಿಕೆಯುತರಾಗುತ ಕಾ
ಣುತ ನತರಾಗಿರಲು ।
ಧೃತಿಮತಿಗತಿ ಕ್ಷಿತಿಪತಿ ನೀನೆಮ್ಮನು
ಪಿತನೋಲ್ ಪೊರೆವನೆನುತ ನುತಿಸುತಲಿರೆ ||೨||

ಕವಿಕೃತಿ ರಂಜಕ ರವರಸವನರ ಜಯ
ರವಗೊಳಿಸುತಲಿರಲು ।
ಭುವನದಿ ಶಿವಪದ ಭುವನ ಭವಾರ್ಚಕ
ನವನಿಪನೆಂದೆನಲು।
ದಿವಿಭವ ರಂಭಾಯುವತಿ ಮೇನಕೆಯ
ರಿವರೆನೆ ನರ್ತಿಸಲು ।
ಶಿವಸಭೆಯೋಲ್ ಗಣ ನಿವಹವಿರಲ್ ನಮಿ
ಸುವನವರಾಶೀರ್ವಾದವ ಪಡೆಯುತ ||೩||

ಸುರುಚಿರ ಹರಿವಿಷ್ಟರದಿ ರಾಜಶೇ
ಖರವರನೆಸೆದಿರಲು ।

ಹರಗೀ ವಾರ್ತೆಯನರುಹುವ ತೆರ ಸ
ತ್ವರ ಬಾಣಗಳಿರಲು ।
ಸುರರುಗರೆವ ಪೂಸರಿಯೆನೆ ಬಿರಿಸುಗ
ಳೆರದಾರುತ ಬರಲು ।
ಕರಿ ತುರಂಗ ರಥ ಪತ್ತಿ ಚತುರ್ಬಲ
ನೆರವಿಯ ನೆರೆದಿರೆ ಕರುಣದೊಳೀಕ್ಷಿಸಿ ||೪||

ಮುದದಿ ಯುಗಾದಿಯೊಳಧಿಕತೆಯಿಂ ಕಾ
ರ್ತಿಕ ಸಿತ ಪಾಡ್ಯದಲಿ।
ಒದಗಿದ ಪ್ರತ್ಯಬ್ದದಲಿ ಯುಗೋತ್ಸವ
ನದ ನಡೆಸುವ ಶೂಲಿ ।
ಬುಧಜನಕಾಮ ತ್ರಿದಶದ್ರುಮನೆಂ
ಬುದು ಸರಿ ಭೂಮಿಯಲಿ ।
ಮದಹರ ಮುನಿಪುರಸದನ ಸಿದ್ಧೇಶ್ವರ
ಪದಪದ್ಮಾರಾಧಕ ಪುಣ್ಯಾಧಿಕ ||೫||

೪೯

ರಾಗ-ದ್ವಿಜಾವಂತಿ

ಮಾರಸದೃಶ ಮಲ್ಲೇಂದ್ರ ಮಹೀಶನ
ತೋರೆ ತೋಯಜವದನೆ।
ನೀರೆ ನಿನಗೆ ಮಣಿಹಾರವನೀವೆನ
ಪಾರ ಸುಕೃತ ಶುಭಾಕಾರನ ನೋಡುವೆ ||ಪಲ್ಲ||

ರಾಜಕಳಾಮುಖ ರಾಜದಿ ತೋರ್ಪ ಸ
ರೋಜಮಿತ್ರನು ಕಾಣೆ ।
ವಾಜಿಯನೇರಿ ಸಮಾಜದಿ ಬರ್ಪನು
ರಾಜರಾಜನು ಜಾಣೆ ।
ಭೂಜಾಳಿ ಪಲ್ಲವ ತೇಜಗೊಳಿಪ ವನ
ರಾಜನೊಲಹಿವೇಣಿ
ಭೋಜನೋಲ್ ಪಂಡಿತ ರಾಜಿಯೊಳನಿಶ ವಿ
ರಾಜಮಾನನೆ ಸರಸೀಜದಳೇಕ್ಷಣೆ ||೧||

ಮದಗಜ ಮಣಿಪುಷ್ಪಕದಿ ಭಟವ್ರಾ
ತದಲಿ ಬರುವ ನೀರೆ ।
ಉದಯಶೈಲದ ಚೆಂಗದಿರನೆನಲು ಶಾಂ
ತದಲಿ ತೋರುವ ಧೀರೆ ।
ಚದುರ ಕಳಾಕೋವಿದಗೆ ಧರಣಿಯೊಳ
ಗಿದಿರಿಲ್ಲವು ಬಾರೆ ।
ಸದಯನುದಾರ ಭೋಗದಲಿ ವಿಚಾರಿಸೆ
ತ್ರಿದಶಾಧೀಶ್ವರನುದಧಿ ಗಭೀರ ॥೨॥

ವಿತರಣದಲಿ ಭೂಪತಿಯ ಕರವು ಸಂ
ತತ ಕರ್ಣನು ಬಾಲೆ ।
ವಿತತ ರಣದಿ ರಿಪುತತಿಯ ಗೆಲುವ ಬಲ
ಯುತ ಮಣಿಗಣಮಾಲೆ ॥
ಶ್ರಿತಜನಾವನ ಹೃದ್ಗತ ವಿಬುಧಸ್ತುತ
ಕ್ಷಿತಿನಾಥನು ಮೇಲೆ।
ಶ್ರುತಿತತಿ ಸನ್ನುತಿ ಹಿತ ತಾಪಸಪುರ
ಪತಿ ಸಿದ್ಧೇಶನ ಸತತಾರಾಧಿಪ ॥೩॥

೫೦

ರಾಗ-ಜಂಗಲ

ಮಲ್ಲಮಹೀಶನೆ ।ಸುಖಕೋಶನೆ ।
ಎಲ್ಲಾರಂಥವನೇನೆ। ಎನ್ನ ಪ್ರಿಯನೆ ॥ಪಲ್ಲ॥

ಪರನಾರಿಯು ಸುರನಾರಿ ಬರಲು ತಾ
ಪರವೆಗೆ ತಾರದ ಪಾವನನೆ।
ಪರತರ ಚಿತ್ಸುಖಭರಿತ ಪರಾರ್ಥವ
ನಿರುತ ಸಾಧಿಸುವ ನಿರ್ಮಲನೆ । ಭುಜಬಲನೆ।ಕೇಳ್ ಸಖಿಯೆ ॥೧॥

ಮನಸಿಜಾಕೃತಿಯ ಮನುಜಾಧೀಶನ
ತನುರುಚಿಗಾಣುತ ಮೋಹಿಸಲು ।

ವನಿತೆಯರನು ಲೋಚನದಿ ನೋಡುವನೆ
ವನಜದಳೋದಕವಾಗಿಹನೆ।ಈಗಿಹನೆ ।ಕೇಳ್ ಸಖಿಯೆ ॥೨॥

ವೀರವಿಜಯ ರಣಶೂರ ದಯಾರಸ
ಪೂರ ಶರೀರ ಯಶೋಮಯನೆ।
ಧೀರ ಮುನಿಪುರಾಗಾರ ಸಿದ್ಧೇಶನ
ಚಾರುಪದಾಬ್ಜಾರಾಧಕನೆ ।ಸಾಧಕನೆ ।ಕೇಳ್ ಸಖಿಯೆ ॥೩॥

೫೧

ರಾಗ-ಕಲ್ಯಾಣಿ

ಲಾಲಿಸು ಮಲ್ಲೇಂದ್ರ।ನೃಪಕುಲಚಂದ್ರ।
ಪಾಲಿಸು ಸುಖಸಾಂದ್ರ।
ಪಾಲಿಸು ನಿನ್ನಯ ಬಾಲಕರೋಲೆನ್ನ।
ಕಾಲಕಾಲದಿ ಕಾಲಕಾಲಾನುಗ್ರಹದಿಂದ।
ಶ್ರೀಲ ಸದ್ಗುಣಜಾಲ ಪರಮಸು
ಶೀಲ ಭಕ್ತ್ಯನುಕೂಲ ಪರಮತ
ಕಾಲ ಚಿತ್ಸುಖಮೂಲ ಕಾರು
ಣ್ಯಾಲವಾಲ ವಿಶಾಲಲೀಲಾ ॥ಪಲ್ಲ॥

ಭೂವರ ನಿನ್ನ ಯಶೋವಿಲಾಸದಿ ಜಗ
ತೀವಲಯವು ಧವಲ।ವಾಗಿರೆ ಭ್ರಾಂತಿ
ಯಾವರಿಸುತೆ ಪ್ರಬಲ।ವಾಗಿಂದ್ರಗೈ
ರಾವತವಾವುದೆಂದಂಕುಶ ತುಡುಕುವ ।
ಮಾವರನು ದುಗ್ಧಾಬ್ಧಿಯೊಳಗಿರೆ
ಠಾವಗಾಣದೆ ತಕ್ರವಿಡಿದಿಹ
ನಾ ವಿಧಿಯು ಕ್ಷೀರೋದಕದಿ ಹಂ
ಸಾವಲೋಕನಗೆಯ್ಯಲೆಳಸುವ ॥೧॥

ಧರಣೀಜ ಸಮುದಾಯ ಪರಶುಭಯದಿ ಹೇಮ
ಗಿರಿಯೊಳಗುದ್ಭವಿಸೆ।ರೌಪ್ಯಾದ್ರಿಯೊ
ಳಿರದೆ ಕೆಲವು ಜನಿಸೆ। ಆ ಗಿರಿಗಳು

ಮರಗಳ ತಮ್ಮ ತೆರನ ಮಾಡಿದುದ ಕಾಣೆ।
ಬರಿಯ ಭ್ರಾಂತಿಯು ಮಲಯಭೂಧರ
ಧರೆಯೊಳುದಿಸಿದ ಸರ್ವಕುಜಗಳ
ಪರಿಮಳಿಪ ಭೂಜಗಳ ಮಾಡಿದ
ಪರಿ ಸದಾಶ್ರಿತ ಜನ ಸುರದ್ರುಮ ॥೨॥

ಕರಿ ತುರಂಗಮ ರಥ ಚರಗಣ ಸಪ್ತಾಂಗ
ಶರಧಿ ಮೀರಿದ ರಾಜ್ಯ। ವೈಭವವು ಸಂ
ಗರ ಜಯ ಪರಿಪೂಜ್ಯ।ಪಟುಭಟರಿಂದ
ಸುರಪಾಲೋಪಮ ಶಮಶರಜಂಗ ಭೂಪಾಲ।
ದೊರೆಯೆ ಕೀರ್ತಿವಿಶೇಷ ಕವಿಬುಧ
ವರರ ಸಂತೋಷಿಸಲು ಶಶಿಭಾ
ಸ್ಕರ ಧರೆಗಳನ್ನಬರ ಸುಸ್ಥಿರ
ಪುರದ ಸಿದ್ಧೇಶ್ವರನ ಕರುಣದಿ ॥೩॥

೫೨

ರಾಗ-ಜಂಗಲ

ನೋಡುವ ಬಾ ಮಲ್ಲಮಹೀಶನ ॥ಪಲ್ಲ॥

ಮಂಗಳಕರ ಶಿವಲಿಂಗಾರ್ಚನೆಯನು
ಪಿಂಗದೆ ಮಾಡುವ ಶಿಷ್ಟ॥
ಸಂಗರವಿಜಯ ಮತಂಗಜ ಮುಖ ಚತು
ರಂಗದ ಶಮಶರಜಂಗ ಬಹದರನ ॥೧॥

ನೃತ್ಯ ಸಂಗೀತ ಸಾಹಿತ್ಯವನಾಲಿಸಿ
ಸ್ತುತ್ಯನಾಗುತ ಸುಖದಾಳಿ।
ನಿತ್ಯ ಭೂಪಾಲಾಮಾತ್ಯರ ನಡುವೆಯಾ
ದಿತ್ಯನಂದದಿ ಹೊಳೆಹೊಳೆವ ನರೇಂದ್ರನ ॥೨॥

ದಾನದಿ ಕರ್ಣ ಸಮಾನಾಶ್ರೀತ ಸಂ
ತಾನ ಸಂಪತ್ಸಾರದಲಿ।
ಭೂನುತ ಕೀರ್ತಿನಿಧಾನ ನಿರಾಮಯ
ಮೌನಿಪುರದ ಸಿದ್ಧೇಶನ ದಯದಿಂದ ॥೩॥

೫೩

ರಾಗ-ವಸಂತ

ಬೇಡುವೆನು। ಬೇಡುವೆನು।
ಪ್ರೌಢ ಮಲ್ಲಸರ್ಜನೆ ನಾನೊಂದನು ||ಪಲ್ಲ||

ಸಕಲಕಳಾವಿದ ಭೂಪಾಲ।
ಪ್ರಕರ ಮಕುಟಮಣಿ ಗುಣಿಯೆಂಬುದರಿಂ ||೧||

ಕೊಡುವೆಡೆಯೊಳು ಕರ್ಣನ ಮರೆಸಿದಿ ಕಂ
ಗೆಡಲೇತಕೆ ಕಾಮಿತಕೆ ಕಳಾನಿಧಿ ||೨||

ಲಕ್ಷಕುಟುಂಬವ ರಕ್ಷಿಸುವ ಪ್ರ
ತ್ಯಕ್ಷ ಶಿವಮತಾಧ್ಯಕ್ಷ ಭೂವರ ||೩||

ಚತುರಂಗಾಯತ ಬಲದಿಂ ಕೀರ್ತಿಯು
ಕ್ಷಿತಿಯೊಳ್ ಕವಿಗಳೆನುತ ಪೊರೆವುದರಿಂ ||೪||

ಧನಕನಕಾದ್ಯೈಶ್ವರ್ಯವು ನಂಬಿದ
ತನುಜರ ಮನೆಯೊಳು ಘನವೆನಿಸಿದ ದೊರಿ ||೫||

ಗುರುಮುಖ್ಯಾಷ್ಟಾವರಣ ವಿಭೂಷಿತ
ಪರಮತ ಖಂಡನ ಪರಮದಯಾಕರ ||೬||

ಮುನಿಪುರ ಸಿದ್ಧೇಶ್ವರ ಸೌಭಾಗ್ಯದ
ಖನಿ ಚಿಂತಾಮಣಿಯೆಂದು ನಿರ್ಮಿಸಿರೆ ||೭||

೫೪

ರಾಗ-ಸಾಳಂಗಾ

ಕಾದರವಳ್ಳಿಯ ನೋಡುವ ।ಕಾಮ್ಯ ಬೇಡುವ ।
ಕಾಮಿನಿಯೇ ಕೊಂಡಾಡುವ ।
ಮೇದಿನಿ ವರ ಮಲ್ಲಸರ್ಜನ । ಪುಣ್ಯವು ಘನ ।
ವಾಗಿರುವ ಪುರಾತನ ||ಪಲ್ಲ||

ಧರೆಗೆ ದಕ್ಷಿಣಕಾಶಿಯೆನಿಸುವ । ಕ್ಷೇತ್ರವೆನಿಸುವ।
ಜನರಿಷ್ಟವ ನೀವ ।

ಪರತರ ಪಾವನಸ್ಥಳದೊಳು । ಇರ್ಪರು ಕೇಳು ।
ನಾಲ್ವರ ರುದ್ರರೊಳು ।
ಮೆರೆವ ಮಧ್ಯದಿ ವೀರಭದ್ರನು ।ಚಿನ್ಮುದ್ರನು।
ಕಾರುಣ್ಯ ಸಮುದ್ರನು ।
ದುರಿತಾರಣ್ಯದಾವಾನಲ।ತೇಜೋಬಲ।
ದೇವರ ವಾಸ ಸುಸ್ಥಲ ||೧||

ಶ್ಲೋಕ

ಕಾದ್ಯಾಕಾಶ ಚರೌಘದಿಂದ ನಿರುತಂ ತಾನಾದರಂ ಬೆತ್ತಿರ।
ಲ್ಯಾದ್ಯರ್ ಕಾದರವಳ್ಳಿಯೆಂದು ಕರೆದರ್ ಕಂಜಾತ ಪತ್ರೇಕ್ಷಣೇ।।
ವೇದ್ಯಾಖ್ಯಾಖಿಲ ಲೋಕಮೋಹನಕರಂ ಸತ್ಪುಷ್ಪವಾಟೀವನಂ।
ಚೋದ್ಯಂ ತಾಂ ನೆರೆ ಬೀರಿ ನಿರ್ಜರನಿವಾಸ ಸ್ಥಾನಮಾಗಿರ್ಪುದು ||೧||

ಸ್ನಾನದಿ ತಜ್ಜಲಪಾನದಿ ।ಸನ್ಮಾನದಿ।
ತನ್ನೊಳು ಸ್ನಾನಗೆಯ್ವ।
ಮಾನವರನು ಪೂತರೆನಿಸುವ । ನಿರ್ಮಲಭಾವ ।
ನಿಖಿಲಾರ್ಥವನೀವ ।
ಭೂನಾಥಶೀಮನು ಸರಣಿಯು।ಪುಣ್ಯಾಚರಣೆಯು ।
ದುರ್ಮಲಾಪಹಾರಿಣಿಯು ।
ತಾ ನಿತ್ಯ ವಿಮಲ ಪ್ರವಾಹಿನಿ ।ಸುರಮೋಹಿನಿ।
ಸುಖತರ ಸಂಧಾಯಿನೀ ||೨||

ಶ್ಲೋಕ

ದೋಷಧ್ವಾಂತ ನಿವಾರಣೈಕ ತರಣೀ ತತ್ತುಲ್ಯ ನದ್ಯಾಗ್ರಣೀ ।
ಕ್ಲೇಶಚ್ಛೇದಿನಿ ಕೇವಲಾಮೃತ ಸಮಾನಾಂಭಃ ಸದಾ ನಿರ್ಮಲಂ ||
ವಾಸಾನೇಕ ಜನಾನುಮೋದಿನಿ ತರಂಗವ್ರಾತ ಕಲ್ಲೋಲಿನೀ ।
ಶ್ರೀ ಶಂಭು ಪ್ರಿಯಕಾರಿಣೀಯೆನಿಸುವಾ ಪುಣ್ಯಾಪಗಾ ಶೋಭಿಕುಂ ||೨||

ಪದ

ಪರಮಪಾವನ ಪುಣ್ಯನದಿಯೊಳು । ಸಾದರದೊಳು ।
ಗುಪ್ತದೊಳಿಹ ಕೇಳು ।
ಗಿರಿಜಾಯುಕ್ತದಿ ಶಂಕರ ।ಶಿವಂಕರ।
ಶ್ರಿತಜನಾಭಯಂಕರ।
ಕರಿಮುಖ ಷಣ್ಮುಖರಿಂದಲಿ । ಛಂದದಿಂದಲಿ।
ಸುರಗಣದೊಳು ಶೂಲಿ।
ವರ ಮಲ್ಲೇಂದ್ರನ ಶೌರ್ಯಕೆ । ಐಶ್ವರ್ಯಕೆ ।
ನಿಂದಿಹನೀಶನದಕೆ ||೩||

ಶ್ಲೋಕ

ಶ್ರೀಮನ್ಮಲ್ಲನೃಪಾಲ ಜಂಗಮಪದಾಂಭೋಜಾತಭೃಂಗೋಪಮಂ।
ಪ್ರೇಮಾನಂದರಸಾಧಿಕಾರ್ಥದಿ ಮಹಾದೇವೇಶ್ವರಂ ಶಂಕರಂ ।।
ಭಾಮಾಪುತ್ರಗಣೇಂದ್ರರಿಂದಲಿ ಸದಾ ಕೈಲಾಸವೆಂದೀಶ್ವರಂ ।
ಧಾಮಾಂತರ್ಗತನಾಗಿರಲ್ಕೇರಿದಾ ನಂದೀಶ್ವರಂ ತೋರ್ಪನು ।।

ಪದ

ಮುಂದಿಹ ಶ್ರೀ ನಂದೀಶ್ವರ। ಬಹು ಸುಂದರ।
ಭಕ್ತಿರಸದಿಂದ ಭಾಸ್ವರ।
ಕಂದರ್ಪಹರಗಣವೃಂದವು ।ಸ್ವಚ್ಛಂದವು ।
ನೆಲಸಿರುತಿಹ ಠಾವು ।
ಎಂದು ಶ್ರೀ ಮಲ್ಲಭೂಪಾಲನು । ಭಕ್ತಿಲೋಲನು ।
ಚತುರಂಗ ಸಮೇತ।
ದಿಂದ ಶಿವರಾತ್ರಿಗೆ ನಡೆಯುತ।ಚರಗಣಯುತ
ಕ್ಷೇತ್ರವು ಕಾಣೆ ತ್ವರಿತ ||೪||

ಶ್ಲೋಕ

ರಂಗತ್ತುಂಗ ತರಂಗ ಗಾಂಗಜಲದಿಂ ಶೃಂಗಾರ ಶೀರ್ಷೋಜ್ವಲಂ ।
ಗಾಂಗೇಯಾದ್ರಿ ಶರಾಸನಂಗೆ ಚತುರಂಗೋಪೇತ ಭೂವಲ್ಲಭಂ ।।

ಮಾಂಗಲ್ಯಾತಿಶಯಾಗಪುಂಗವ ಸುತಾ ವಾಮಾಂಗದೋಳಿಟ್ಟಿಹಾ
ನಂಗೋದ್ಭಂಗಗೆ ಲಗ್ನಮಂ ಸಕಲಸಂಪತ್ಸಾರದಿಂ ಮಾಡಿದಂ ||೪||

ಪದ
ಗಿರಿಜಾಯುಕ್ತ ಮಹೇಶಗೆ । ಮುಕ್ತಿಕೋಶಗೆ
ಮದುವೆಯ ತಾ ಮಾಡಿದ।
ಧರಣೇಂದ್ರ ಚಂದ್ರ ಮಲ್ಲೇಂದ್ರನು ।ಸುಖಸಾಂದ್ರನು ।
ಹರಗಣದೊಡಗೂಡಿ ।
ಪರಮ ಸಂಭ್ರಮದಿ ಶೋಭನಪಾಡಿ । ನೃತ್ಯವ ನೋಡಿ।
ನಾನಾ ವಿಲಾಸ।
ಭರಿತದಿ ನಾಲ್ದೆಸೆಯಿಂ ಬಂದ । ಜಾತ್ರೆಯು ಚೆಂದ ।
ಹರಗಣ ತೃಪ್ತಿಯಿಂದ ।
ತರಣಿಜನೆನಿಸಿ ಸತ್ಯಾಗದಿ । ವರಭೋಗದಿ ।
ಒಪ್ಪಿರುವನು ರಾಗದಿ ||೫||

ಶ್ಲೋಕ
ಶ್ರೀ ಸಿದ್ಧೇಶ ಕೃಪಾನ್ವಿತಂ ಕುಶಲದಂ ಕೌಶಲ್ಯ ಶಾಂತಂ ಕಳಾ ।
ವಾಸಂ ಕಾಮಿತ ನಿರ್ಜರದ್ರುಮ ಸಮಂ ಶ್ರೀ ಮಲ್ಲಭೂಮೀಶ್ವರಂ ॥
ಈಶಾನುಗ್ರಹ ಪಾತ್ರ ಕಾಯ ಮಮಲಂ ದೋಷಾಗ ಶಂಭೋಪಮಂ ।
ಶ್ರೀ ಸಾಂಬಾಭಿದ ಸಾರ್ಥಕೋತ್ಸವವನತ್ಯಾನಂದದಿಂ ಮಾಡಿದಂ ||೫||

ಪದ
ಪ್ರತಿವರ್ಷದಿ ಭೂನಾಥನು । ಗುಣಯೂಥನು ।
ಶಿವಯೋಗವು ಬರಲು ।
ನುತ ಶಂಭು ವೈವಾಹ ಮಾಡುವ । ಮೇಲೆ ನೋಡುವ
ಸುಕ್ಷೇಮ ಬೇಡುವ ॥
ರತಿನಾಯಕ ದರ್ಪಭಂಗನ ।ಶ್ವೇತಾಂಗನ ।
ಯತಿಪುರ ಸಿದ್ಧಲಿಂಗನ ।

ಮತಿಯುತ ಶ್ರೀ ಮಲ್ಲಸರ್ಜನ । ದೋಷವರ್ಜನ ।
ಪುಣ್ಯಗ್ರಾಮವನನುದಿನ ॥೬॥

೫೫

ರಾಗ-ಸಾವೇರಿ

ಮಲ್ಲನೃಪನ ಸಂರಕ್ಷಿಸಲಿ । ದಯ
ದಲ್ಲಿ ಸರ್ವೇಶ್ವರನೀಕ್ಷಿಸಲಿ ॥ಪಲ್ಲ॥

ದುರಿತಾವನಿಧರ ಭಿದುರ ಕೃಪಾಕರ
ಗುರುಸಿದ್ಧೇಶ್ವರ ಕೂರ್ಮೆಯಲಿ ।
ವಿರತಿಸುಖೈಕ ವಿರಾಜಿತ ಪೂಜಿತ ।
ದುರದುಂಡೀಶ್ವರ ಪೆರ್ಮೆಯಲಿ ॥೧॥

ಖಂಡಕಳಾನಿಧಿ ಮಂಡನ ಭಕ್ತಿ ಕ
ರಂಡ ಹೊಂಡದ ಬಸವೇಶ್ವರನು ।
ಖಂಡೆಯವಾಂತಿಹ ಚಂಡಪರಾಕ್ರಮಿ
ಕೆಂಡಗಣ್ಣಿನ ವೀರೇಶ್ವರನು ॥೨॥

ಎಲ್ಲ ವಿರಕ್ತರ ಬಲ್ಲಹನೆನಿಸುವ
ಬಲ್ಲಿದನಲ್ಲಮಗುರುವರನು ।
ಸಲ್ಲಲಿತಾಚಲದಲ್ಲಿ ವಿನೋದಿಪ
ಮಲ್ಲಿಕಾರ್ಜುನ ಮಹಿಮಾಕರನು ॥೩॥

ನಂದಿಹಳ್ಳಿಯಲಿ ಅಮಂದಾನಂದದಿ
ನಿಂದಿಹ ಶ್ರೀ ಬಸವೇಶ್ವರನು ।
ಚೆಂದದ ತಿಗುಡಿಯ ಮಂದಿರದೊಳಗಿಹ
ಸುಂದರ ಸಿದ್ಧವೃಷೇಶ್ವರನು ॥೪॥

ಕಾದರವಳ್ಳಿಯ ಹ್ರಾದಿನಿಯೊಳಗಿಹ
ಶ್ರೀದ ಶಿವಾಪರಮೇಶ್ವರರು ।
ಓದುವ ಬುಧತತಿಗಾದಿಯೆನಿಪ ಧೃತ
ಮೋದಕ ಗಣಪತಿ ಷಣ್ಮುಖರು ॥೫॥

ಸಂಕಟಹರನಭಯಂಕರ ಶಂಕರ
ಸಂಕರ್ಷಣ ಸುಮಹಾದೇವ ।
ಕಿಂಕರವರದ ಕಲಂಕವಿರಹಿತ ಶು
ಭಂಕರ ಸಾವಳಿಗಿಯ ದೇವ ॥೬॥

ರಾವಣನಿಂದ ರಸಾವಲಯದಿ ಬಂ
ದಾವಗ ನಿಂದ ಮಹಾಬಲನು ।
ಪಾವನಶೀಲ ಕೃಪಾವನನಿಧಿ ಪಂ
ಪಾವನ ವಿರೂಪಾಕ್ಷೇಶ್ವರನು ॥೭॥

ನೋಡಲು ಭಕ್ತಿಯ ಮಾಡಿದ ಬಸವನ
ಕೂಡಿಕೊಂಡಿಹ ಸಂಗಮಶಿವನು ।
ಪೀಡಿಪ ಗರಳವ ನಾಡೆ ತಳೆದ ಶಶಿ
ಚೂಡ ನಂಜುಂಡೇಶ್ವರ ಭವನು ॥೮॥

ಪ್ರಮಥ ಸಂಚಯವನುಪಮ ರುದ್ರಾವಳಿ
ವಿಮಲಪುರಾತನ ಪುಂಗವರು।
ಕ್ಷಮೆಯೊಳು ನೆಲಸಿಹ ಶಮನಹರಾರ್ಚಕ
ಸಮುದಾಯವು ಶಿವಮುನಿವರರು ॥೯॥

ಖ್ಯಾತೆ ಹಿಮಾಚಲಜಾತೆ ಷಡಾನನ
ಮಾತೆ ಭವಾನಿ ಭವಪ್ರೀತೆ ।
ಸ್ಪೀತ ಪುನೀತ ಗುಣಾತಿಶಯಾನ್ವಿತೆ ।
ಭೂತೇಶಾಂಕ ಸದಾಲಸಿತೆ ॥೧೦॥

ಗುರುಮುಖ್ಯಷ್ಟಾವರಣ ವಿಭೂಷಣ
ವರ ಕಿತ್ತೂರ ಪುರಾಧಿಪನ ।
ಹರಶರಣಾಗ್ರಣಿ ಚರಣ ಸರೋರುಹ
ಸುರಭಿ ಮಧುವ್ರತ ಸುಂದರನ ॥೧೧॥

ಪುರವಿಜಯಾಮೃತಕರ ಶೇಖರ ಸುಮ
ಶರಸಂಹರ ಹರ ಶಂಕರನು ।
ಗಿರಿಜಾಮುಖ ಸರಸಿರುಹದಿವಾಕರ
ಪರತರ ಪದ ಸಿದ್ಧೇಶ್ವರನು ॥೧೨॥

೫೬

ರಾಗ-ವರಾಳಿ

ನೋಡಿದವನೆ ಧನ್ಯಧನ್ಯನು । ಶ್ರೀ ಮಲ್ಲನೃಪನ ॥
ರೂಢಿಯರಿಯಲೀಶ ಭಜನೆ ಮಾಡುವ ಮಹೀಶವರನ ॥ಪಲ್ಲ॥

ನಿತ್ಯಲಿಂಗಾರ್ಚನಾ ಕೃತ್ಯ ಸಂಗೀತ ಸಾ
ಹಿತ್ಯಲೋಲ ಭೃತ್ಯಪಾಲ ಸತ್ಯಶೀಲ ಸೌಮ್ಯನ ॥೧॥

ರಾಜನುತ ಸಮಾಜ ಕಲ್ಪಭೂಜ ದಿವ್ಯತೇಜ ಸತ್ಸ
ಭಾಜನಾಂತ ಭೋಜರಾಜ ರಾಜ ಸಾಮ್ಯನ ॥೨॥

ತುಂಗಬಲ ಮತಂಗಜೋತ್ತುರಂಗ ರಥಪದಾತಿ ಸುಚತು
ರಂಗಬಲವನಾಳ್ವ ಶತ್ರುಭಂಗ ಭಾಸುರಾಂಗನ ॥೩॥

ಭಸಿತಭೂಷಿತಾಲಿಕಾತಿ ಸುಷಮ ಶಶಿಧರೋಪಮಾನ
ಹಸಿತವದನ ಲಸಿತರದನ ಕುಸುಮಚಾಪರೋಪನ ॥೪॥

ವಾಸವೋಪಮಾನ ಶ್ರೀವಿಲಾಸದಿಂದ ಮೆರೆವ ಸಿ
ದ್ಧೇಶ ಮತ ನದೀಶ ದೇಶಕೋಶರಮ್ಯನ ॥೫॥

೫೭

ರಾಗ-ದ್ವಿಜಾವಂತಿ

ಭಾವೇ ಶಮಶರಜಂಗ ಬಹದರ।
ಕೋವಿದಗೆಣೆಗಾಣೆ॥
ಭಾವಜಸಮ ವರ ಭಾವುಕಮಯ ಭುಜ
ಗಾವಳಿ ರತ್ನನು ಭೂವಲಯದೊಳಗ।
ದಾವ ಸುದತಿ ಮುನ್ನಾವ ಪುಣ್ಯವೋ।
ತಾ ಒಲಿದಿಹ ನೀ ಸೇವಿಸು ಬಿಡದೆ ॥ಪಲ್ಲ॥

ಸುಂದರ ವಸುಂಧರಾಧರ ಧೈರ್ಯನೆ । ಕಾರ್ಯ
ಧುರಂಧರ ಪುರಂದರ ಸಮೌದಾರ್ಯನೆ ।
ಸಿಂಧುರಸ್ಯಂದನವೇರುವ ಸಿಂಧುಗಾಂಭೀರ್ಯನೆ ।
ಸನ್ಮಣಿವೃಂದ ಮಾಲಾ ಕಂಧರಾತುಲ ಶೌರ್ಯನೆ ।

ನಂದತನೂಭವ ನಂದನ ಕಾಯುವ
ನಿಂದು ತಾಳಿದಾಮಂದ ಮುದನ್ವಿತ
ನಿಂದು ಕಳಾಮಯ ಕುಂದ ರದನೆಯರ
ವಿಂದವದನೆ ನೀನೊಂದೆ ಭಾವದಿ ||೧||

ಶಾರದೇಂದು ಗೌರಕೀರ್ತಿಪೂರನೆ । ಸಕಲ ವಿ
ಶಾರದ ಕರುಣಾರಸ ಪರಿಪೂರ್ಣ ಶರೀರನೆ ।
ನಾರದ ಸಮ ವೀಣೈಕ ವಿಚಾರ ವಿಹಾರನೆ । ವಿದ್ವದ್
ವಾರ ವಿನೋದ ಸ್ವಾಂತ ವಿನುತ ಮಂದಾರನೆ ।
ಧೀರನೆ ದೀನಾವನಕರ ವಿರಹ ನಿ
ವಾರಣಕಾರಣ ನಿನ್ನ ಮನೋದಯ
ಪೂರಣ ವಾರಣಯಾನೆ ಸಖಿನ ಸರಿ
ಯಾರೆ ನೀರೆ ನೀ ತೋರೆ ಗಭೀರೆ ||೨||

ಮಣಿಗಣ ಘೃಣಿ ಸಮುದಂಚಿತ ಭೂಷಣವೀವನೆ।
ನಾಯಕ।ಮಣಿ ನಯ ವಿತರಣಲೋಲ ವಿಮಲತರ ಭಾವನೆ।
ಗಣಿಸಲರಿದು ಗುಣಗಣವ ಫಣೀಶನೆ ದೇವನೆ ।
ರಣದೊಳ್ । ಸೆಣಸುವ ರಿಪುಗಳ ಮಣಿಸಿದ ಮಾನ್ಯನದಾವನೆ ।
ಕ್ಷಣರುಚಿ ರುಚಿರೇಕ್ಷಣೆ ಸಿದ್ಧೇಶನ
ಕ್ಷಣವಗಲದೆ ನೀನೊಲಿಸಲು ಫಲಿಸಲು
ಕ್ಷಣದಾಮಣಿಯಿಂ ಕೂಡಿಹ ತಾರಾ
ಗಣದೊಲಾಗುವೀ ಎಣೆ ಯಾರೀಗ ||೩||

೫೮

ರಾಗ-ವಸಂತ

ಬಿಡು ಭೇಡ ಬೇಡ ಛಲ ||ಪಲ್ಲ||

ನನ್ನವರನು ನಾನನ್ಯರೊಲರಿದಿಹೆ।
ನಿನ್ನನು ಮಾಡಿಹೆ ಬಲ ||೧||
ಇಂದಿನ ಸ್ನೇಹವೆ ಸುಂದರ ಭಾವಿಸೆ
ಹಿಂದಣ ಜನ್ಮದ ಫಲ ||೨||

ಮುನಿಪುರವಾಸನೆನಿಪ ಸಿದ್ಧೇಶ್ವರ
ಮುನಿಯೆ ಬಿಡದು ಹಂಬಲ ||೩||

೫೯

ರಾಗ-ದರಬಾರಿ

ನೋಡದಿರುವರೇ । ಪ್ರಿಯನೇ ।ಸಖಿಯ ।
ನೋಡದಿರುವರೇ ಶಶಾಂಕಚೂಡಭಜಕ ಕಿತ್ತೂರ
ನಾಡನಾಳ್ವ ದೊರಿ ಶಿವಲಿಂಗ ಪ್ರೌಢ ರುದ್ರೇಂದ್ರ ಬಿಡದೆ ||ಪಲ್ಲ||

ಸ್ಮರನು ಕೋಪದಿ । ಭರದಿ ಪಂಚ।
ಶರವ ಚಾಪದಿ । ಪೂಡಿಪೊಡೆಯ।
ಲರಿದು ತಾಪದಿ ।
ಕರಗಿ ಸೊರಗಿ ಮರುಗಿ ಕಾತರಿಸಿ ಸ್ಮರಿಸಿ ತರುಣಿ ತ
ದ್ವಿರಹದೊಡನೆ ದಿನವ ಸಾವಿರವ ಮಾಡಿ ಕಳೆವಳಿಂದು ||೧||

ಮಾರಸುಂದರಾ ।ಸುರುಚಿರತ್ನ ।
ಹಾರಕಂಧರಾ । ಕರುಣಾರಸಾಬ್ಧಿ ।
ಚಾರುಚಂದಿರಾ ।
ಧೀರ ರತಿಕಳಾವಿಚಾರ ಸಾರ ಸತತ ಸನ್ನಿಧಿಯನು ।
ಸಾರಿದ ಸಾರಸಾಕ್ಷಿ ಸಾಕ್ಷಿಗಾರು ಬಾರರೆಂದು ತಿಳಿದು ||೨||

ಮಂದಹಾಸದಿ ॥ ಸರ್ವದಾ ।
ನಂದ ಘೋಷದಿ ॥ ಪಾಡಲು ಪ್ರೌಢಿ ।
ಯೆಂದು ತೋಷದಿ ।
ಎಂದಗಲದಲೊಂದುಗೂಡಿಸೆಂದು ಬಂದು ನಿಂದು ನಿಯಮಿ
ವೃಂದ ಸಿದ್ಧಪತಿಯ ಪದಕೆ ವಂದಿಸುವಳು ಚೆಂದದಿಂದ ||೩||

೬೦

ರಾಗ-ರೇಗುಪ್ತಿ

ಶಿವಲಿಂಗರುದ್ರಸರ್ಜನೊಳು । ಕೂಡಿದ।
ಯುವತಿ ಧನ್ಯಳು ಲೋಕದೊಳು ।
ಶಿವಪದಾಂಬುಜ ಪೂಜನೋತ್ಸವ।

ಶಿವಸಮಯ ಮಣಿದೀಪ ಶಿವಗಣ।
ನಿವಹಕಾಮಿತ ಕಲ್ಪಭೂರುಹ।
ಪವಿಧರಾತುಲ ವಿಭವ ರಾಜಿತ ||ಪಲ್ಲ||

ನಯವಿದ ನಿಪುಣನಾಯಕನು ।ಕುವ
ಲಯದೊಳತೀವ ದಾಯಕನು ।
ಜಯಶೀಲ ಸುಗುಣಸಂಚಯ ಲೋಲ ಸತತ ಸ
ದಯನು ದಯಾನ್ವಿತ ನಯನ ನರಾಧಿಪ ।
ಭಯನಿವಾರಣ ಭವ್ಯಪದ್ಮಾ
ಶ್ರಯ ವರಾಭಯ ಲಕ್ಷಣಾಂಚಿತ।
ಶಯ ಕುಶೇಶಯ ಯುಗಳ ಮಂಗಲ।
ಮಯ ಮನೋರಥಿ ಫಲದ ಸುಂದರ ||೧||

ಕುಂದಕುಮ್ಮಟ ರದನೆ ಕೇಳು ।ನಾ।
ನಿಂದು ನೋಡಿದೆನು ವೀಥಿಯೊಳು ।
ಮಂದರನಿಭ ಮದಸಿಂಧುರಪೀಠದೊ।
ಳಂದವಡೆದ ಭೂಪುರಂದರನೆನುತಲಿ।
ಸುಂದರಿಯರೊಂದೊಂದು ಬಗೆಯೊಳ್
ನಿಂದು ಮುಖಚಂದಿರವ ನಿಟ್ಟಿಸ
ಲಿಂದಿರಾನಂದನನ ತಾಪದಿ
ಮಂದಿರವ ಮರೆದವರ ನೋಡದ ||೨||

ಮಾರಾಗಮಾರ್ಥವನರಿವ । ಸುಖ
ಸಾರನೀ ರೀತಿಯೆಂದೊರೆವ ।
ತೋರುವ ತನ್ನನು ಸೇರಿದ ಸಾಧ್ವಿಯು
ಸೂರೆಗೊಂಬಳು ಶೃಂಗಾರದ ಸೊಬಗನು ।
ಧೀರ ಗುರುಸಿದ್ಧೇಶ ಪದಪಂ।
ಕೇರುಹವನನವರತ ಭಜಿಸಿದ ।
ನೀರೆಯಲ್ಲದೆ ಬೇರೆಯುಪಮಿಸ।
ಲಾರೆ ಸುಕೃತ ಶರೀರಿಯಗಲದೆ ||೩||

೬೧

ರಾಗ-ಸಾರಂಗ

ಶಿವಲಿಂಗರುದ್ರ ಭೂಧವನ ಕಾಣದಲೊಂದು ।
ದಿವಸವಾನಿರಲಾರೆ ನೀರೆ ನೀ ಸಾರೆ ॥ಪಲ್ಲ॥

ಉರಿಯೊಳು ಕೆಳೆಗೊಂಡು ಬರುವ ಮರುತನಿವ ।
ವಿರಹಿಗಳ ಬಾಧಿಪುದರಿದೇನೆ ಧೀರೆ ॥೧॥

ಪಾವಗಿದು ಬದುಕಿದನೀ ವಸುಧೆಯೊಳಿವ ।
ಕಾವನ ಮಾವನು ಕಾವನೆ ಚಂದ್ರ ॥೨॥

ಗುರುಸಿದ್ಧೇಶನ ಉರಿಗಣ್ಣಿಂದುರಿದವ ।
ಮರಳಿ ಮನಸಿಜನಾಗಿ ಸರಳ್ಮಳೆಗರೆವ ॥೩॥

೬೨

ರಾಗ-ದೇಶಿ

ಶಿವಲಿಂಗರುದ್ರಾಧಿಪ ಲಾಲಿಪುದು ।
ಯುವತಿಯ ಸದ್ಭಾವವನಾಲಿಪುದು ।
ಕುವಲಯದಲನೇತ್ರೆಯ ಪಾಲಿಪುದು ॥ಪಲ್ಲ॥

ಸದನಾಂಗಣಮದು ಸರ್ಪನ ಪೆಡೆಯು ।
ರದನದ ಪೊಗರ್ನಗೆಗಧರವೆ ತಡಿಯು ।
ಚದುರೆಯ ನುಡಿಯೊಡೆಯನ ಕಿವಿಗಡಿಯು ॥೧॥

ಪರಗೃಹಮಪರ ದ್ವೀಪಕೆ ಸಮವು ।
ತರುಣಿಯ ನೋಟದ ಬೇಟದ ಕ್ರಮವು ।
ಪರಮಪ್ರಿಯಗರಿವನಿಶೋತ್ಸವವು ॥೨॥

ಭೇಶ ಸಮಾನನೆ ಭಾಷಾಮತಿಯು ।
ಬೇಸರವಿಲ್ಲವು ಪತಿಗತಿಹಿತೆಯು ।
ಶ್ರೀ ಸಿದ್ಧೇಶನನೊಲಿಸುವ ಸತಿಯು ॥೩॥

೬೩

ರಾಗ-ಬೇಗಡ

ಶಿವಲಿಂಗರುದ್ರೇಂದ್ರನ ತೋರೆ ।ನಾ
ಸವಿಲಾಸದಿ ನೋಡುವ ನೀರೆ ||ಪಲ್ಲ||

ಹಾವಭಾವಾದಿಗಳನು ನೋಡಿ । ಆ
ಶ್ರೀವರ್ಧನನೆಳಸನು ಪ್ರೌಢಿ ||೧||

ಸುಗುಣನ ಮೊಗಸಸಿಯನು ಕಾಣೆ ।
ಮುಗುಳಂಬನು ಬಾಧಿಪ ಜಾಣೆ ||೨||

ಸಿದ್ಧೇಶನ ಪಾದವ ಪ್ರಾರ್ಥಿಪೆನು ।
ಹೃದ್ದೇಶದೊಳನಿಶಂ ಸ್ಮರಿಸುವೆನು ||೩||

೬೪

ರಾಗ-ಶ್ಯಾಮಕಲ್ಯಾಣಿ

ನೋಡಿದೆ ಶ್ರೀ ಶಿವಲಿಂಗರುದ್ರೇಂದ್ರನ ।
ರೂಢಿಯೊಳತಿಶಯ ಪ್ರೌಢನರೇಂದ್ರನ ||ಪಲ್ಲ||

ವೀರಶೈವಾನ್ವಯ ನೀರಧಿಚಂದ್ರನ ।
ಧೀರ ದೀನೋದಾರ ದೀರ್ಘದಯಾಕ್ಷನ ||೧||

ಭುಜಬಲ ವಿಕ್ರಮ ವಿಜಯ ವಿಬುಧನುತ ।
ಸುಜನರಕ್ಷಣ ಕುಜನಾಗಕುಠಾರನ ||೨||

ಮಂಗಳಕರ ಸಿದ್ಧಲಿಂಗ ಪದಾಂಭೋಜ
ಭೃಂಗ ಭೂಪನ ಚತುರಂಗಬಲೇಶನ ||೩||

೬೫

ರಾಗ-ಧನಶ್ರೀ

ಮರೆವೆನೆಂದಿಗೆ ಭವತ್ಪದವ ।ಸುಂ
ದರ ಶಿವಲಿಂಗರುದ್ರೇಂದ್ರ ಸಂಪದವ ||ಪಲ್ಲ||

ಮಲ್ಲಭೂಪಾಲನ ತೆರದಿ । ಮಹ
ದುಲ್ಲಾಸದಿಂದ ಪಾಲಿಪನೆಂಬ ಭರದಿ ।

ಇಲ್ಲಿಗೈತಂದೆನಾತುರದಿ । ಬಂದು
ಸೊಲ್ಲಿಸಿದುದನಾಲಿಸಿದಿಯಾದರದಿ ॥೧॥

ಪೂತನೋರ್ವನ ಲಗ್ನವೆಂದು ।ಪಾದ
ಶತಪತ್ರಯುಗಳ ಸನ್ನಿಧಿಯೊಳು ನಿಂದು ।
ಶ್ರುತಗೊಳಿಸಲು ಸುಖಸಿಂಧು ।ಪೂ
ರಿತ ವಿತ್ತವಿತ್ತು ಕಳುಹಿದಿ ದೀನಬಂಧು ॥೨॥

ಮುನಿಪುರಾಧಿಪ ಸಿದ್ಧೇಶ । ನನ್ನ ।
ಮನೆ ಮೇರು ಮಂದಿರಕಿಂದ ವಿಶೇಷ ।
ವೆನುತ ಪೇಳಿದರಿಂದಲಾಶಾ । ಸಂ
ಜನಿಸಿ ಬರಲದ ಪೂರ್ಣಗೈದಿ ಮಹೀಶ ॥೩॥

೬೬

ರಾಗ-ರೇಗುಪ್ತಿ

ಶಿವಲಿಂಗರುದ್ರೇಂದ್ರ ಭವದಂಘ್ರಿಯುಗಕೆ ನಮಿ
ಸುವರು ಸಂಪದಮಿವೆಂದು । ನಿಂದು ।
ಭವಭವದೊಳೀ ನೃಪೋದ್ಭವರ ಕ್ರಮಸೇವೆಯಂ
ಭವನು ಸಂಘಟಿಸಲೆಂದವಿರತಾನಂದದಿಂ ॥ಪಲ್ಲ॥

ಕರದ ಲಸದಿಷ್ಟಮಂಗಲಲಿಂಗದೊಳು ಮನಂ ।
ಕೊರಳೊಳ್ ಶಿವಾಕ್ಷಿಮಾಲ। ಜಾಲ।
ಮೆರೆವ ಫಾಲದಿ ವಿಧಿಯ ಬರಹವನೊರಸುವ ರುಚಿ
ವೆರೆದಸಿತ ಭಸಿತಾಲೇಪ।ಭೂಪ।
ನಿರುಪಮ ಷಡಕ್ಷರೋಚ್ಚರಣ ಶುಭಲಪನ ಸುಂ
ದರ ಸುಧಾ ಮಧುರಭಾಷ । ಘೋಷ।
ಸ್ಫುರದವನಿ ಗಿರೀಶನೆಂದರಿದು ಪಣೆಪೊಣೆಯಾಗಿ।
ಎರಗುವರ್ ನಯದಿ ಶಂಕರ ಭಕ್ತರನುದಿನಂ ॥೧॥

ಇಳೆಯಾಳ್ದ ಪರಮಮಂಗಳಗಾತ್ರನೆಂದು ಬಂ
ದಳವಿಯೊಳ್ ಸಾಲ್ಗೊಂಡು ನಿಂದು । ಇಂದು।

ಕಳೆದಳೆದನೆಂದು ಕೈಗಳ ನೆಲಕೆ ಮುಟ್ಟಿ ಪಣೆ
ಗಳ ಸಾಕ್ಷಿಯಿಂದೆರಗುತ । ತ್ವರಿತ ।
ಇಳೆಯಮ್ಮ ತಾಯೆ ನೀನಳುಕದಪ್ಪಗೆ ಪೋಗಿ
ತಿಳುಹು ಮಕ್ಕಳ ನೆಲೆಯನು । ನೀನು।
ಕೊಳಗುಳದಿ ಮತಿತ ರಿಪುಗಳ ಗೆಲುವರೆಂದು ವೆ
ಗ್ಗಳವಾಗಿಯರುಹೆಂದು ಬಳಿಕವರ್ ಬೇಸರದೆ ||೨||

ಧರಣೀಶನೆಂದು ಪದಕೆರಡಿಲ್ಲವೆಂದು ಭಯ
ಭರಿತ ಮೂರರೊಳು ಸಂದು । ಎಂದು ।
ಮರೆಯೆವು ಚತುರ್ವಿಧದ ಪುರುಷಾರ್ಥ ಫಲದ ಭೂ
ವರ ಸುಪಂಚಾಸ್ಯನೀತ। ದಾತ।
ಪರಿವಿಡಿಯೊಳತುಳ ಸುಸ್ಥಿರರಾಜ್ಯಲಕ್ಷ್ಮಿಯಿಂ
ದಿರಲಿ ಶಶಿರವಿಗಳವಧಿ । ಜವದಿ।
ಪರಮಗುರು ಸಿದ್ಧೇಶ ವರದ ದುರುದುಂಡೀಶ
ಶರಭೇಶ ಪ್ರಭುವರರೆ ಪೊರೆಯಲಿ ನೃಪನೆಂದು ||೩||

೬೭

ರಾಗ-ಪುನ್ನಾಗ ತೋಡಿ

ಶಿವಲಿಂಗ ರುದ್ರ ಭೂಧವ ಭವನ್ನುತಿಯ ಮಾ
ಡುವದು ಮನ್ಮತಿಗೆ ತೀರದು ಮಹಾದೇವ ||ಪಲ್ಲ||

ಹಿತದಿ ಲೋಕವನು ಸಂತತ ಪಾಲಿಪೆಡೆಯೊಳು
ದ್ಧತ ಸಾಹಿತ್ಯದೊಳು ಪೂರಿತ ಕೃಪಾಕ್ಷಿಯೊಳು ।
ಪ್ರತಿರಹಿತವು ವಿದ್ವತ್ತತಿ ನೋಡಿ ಕರೆದರೀ
ಕ್ಷಿತಿಯೊಳು ಭೋಜನೆಂದತಿ ಮನೋರಮದಿಂದ ||೧||

ಅನುಪಮ ವಿಭವದೊಳ್ ಘನಭಾವದೊಳು ನಾಡೆ
ಜನಪದ ಪೂರ್ಣ ಮುಂದೆನಿಪ ಕೀರ್ತಿಯೊಳು ||
ಮನುಜೇಂದ್ರ ಚಂದ್ರ ನಿನ್ನನು ನೋಡಿ ಕರೆದರಾ
ದಿನದಿ ಮಾಂಧಾತನೆಂದೆನುತ ಮೋಹದೊಳು ||೨||

ಅರಿಗಳ ಪುರವ ಸಂಹರಿಪೆಡೆಯೊಳು ಧೃತಿ
ಭರಿತ ಗುಣದಿ ಭವ್ಯತರ ಬುದ್ಧಿ ಬಲವ।

ಅರಿದು ಪಂಡಿತರುರಗೇಂದ್ರನೀ ನೃಪನೆಂದು
ಪಿರಿಯ ಪೊಗಳ್ದರು ಸಿದ್ಧೇಶ್ವರನ ಕರುಣದಿಂದ ||೩||

-೬೭

ರಾಗ-ಭೈರವಿ

ನೋಡಿರೆ ಕಿತ್ತೂರ ನಾಡಿಗೊಡೆಯ ಚಂದ್ರ|
ಚೂಡಾರ್ಚಕ ಮಲ್ಲೇಂದ್ರನ | ನೃಪಕುಲ ಚಂದ್ರನ|
ಸದ್ಗುಣ ಸಾಂದ್ರನ |
ಕೀರ್ತಿಪಾತ್ರನ | ಸಚ್ಚರಿತ್ರನ |
ಪುಣ್ಯಗಾತ್ರನ | ಭಕ್ತಿ
ಗೀಡಾಗಿ ಶ್ರಾವಣದೊಳು ಪಾದಪೂಜೆಯ
ಮಾಡುವ ಮಹಾನಂದವ | ನಾನಾವಿಧ ಚಂದವ |
ಚಮತ್ಕಾರದಂದವ | ಕೂಡಿಹ ಗಣವೃಂದವ ||ಪಲ್ಲ||

ಧರೆಗೆ ದಕ್ಷಿಣಕಾಶಿ ಸರಿಯಾದ ಪಂಪಾಖ್ಯ|
ಪುರಕೆ ದಕ್ಷಿಣದಿಶೆಯೊಳಗಿರುವ |
ಹರಶರಣರ ಸರಣಿಯೊಳು ಕಲ್ಯಾಣವ |
ಮರೆಸುವ ಭಕ್ತಿಭಾವದಿ ಮೆರೆವ |
ಸುರಪುರದಮಲ ಸಿರಿಯನು ಜರೆವ | ಪರಿ
ಪರಿಯ ಸೌಭಾಗ್ಯಸಾಧನದಿರವ |
ತತ್ಪುರವ ಪಾಲನೆಗೈವ |
ಕಾಮಿಸಿದರರ್ಥವನೀವ|
ಕಳಾಕೋವಿದ ಭಾವ |
ಸರಸಸುಂದರ | ಸುಖಮಂದಿರ|
ಭೂಪುರಂದರ||
ಗಿರೀಶಪೂಜಾ ಧುರಂಧರ | ರಿಪುಕುಲ ಭಯಂಕರ |
ಸತ್ಕೀರ್ತಿಕಲಾಪನ | ಶಾಂತಿಯಲಿ ನಿಶಾಪನ |
ಶಮಶರಜಂಗ ಭೂಪನ ||೧||

ಶ್ರಾವಣ ಬರೆ ಪೂರ್ವಾವನಿವರರು ಸ|
ದ್ಭಾವದಿ ಪದಪೂಜೆ ಮಾಡುವರು |

ಕೇವಲ ಶ್ರೀ ಜಂಗಮಾವಳಿ ಸನ್ಮಹಿ
ಮಾವಲಂಬನರೆಂದು ನೋಡುವರು ।
ಸೇವಿಸಿ ಶಿವರೆಂದು ಭಾವಿಸಿ ಸದ್ಭಕ್ತಿ
ತೀವಿ ಮೃಷ್ಟಾನ್ನವ ನೀಡುವರು ।
ವಸ್ತ್ರಾದಿಗಳ ಕೊಡುವವರು ।
ಸತ್ಕೀರ್ತಿಯ ಪಡೆವವರು।
ವೀರತ್ವದಿ ನಡೆವವರು ॥
ಶಿವಭಕ್ತರು ।ಸತ್ಯಾಸಕ್ತರು ।ಜೀವನ್ಮುಕ್ತರು ।
ಈ ವಿಧವಾದ ಭೂವಲಯ ವಿನೋದವ ।
ನಾವ ಮೊದಲು ಮಾಡಿದುದಿಲ್ಲ। ನೋಡಿದ
ವರು ಮುನ್ನಿಲ್ಲ ಪ್ರೌಢಗೆ ನಾಡೆ ಸರಿಯಿಲ್ಲ ॥೨॥

ತರಣಿಜಸಮದೃಷ್ಟ ಪರಿಪಂಥಿ ಕರದೊಳು ।
ದೊರೆಯಲು ದೊರೆ ಮಲ್ಲೇಂದ್ರನು ।
ಗಿರೀಶನ ಕರ ಸರಸಿರುಹ ಕಪಾಲದೊ
ಳಿರಲತ್ತಲು ಭೂಮೀಂದ್ರನು ।
ಕರತಳ ಲಿಂಗದಿ ಬೆರೆದ ನೀಲಾಂಬೆಯ
ತೆರದ ನೀಲಾಂಬೆಯಾತ್ಮಜೆ ತಾನು ।
ರುದ್ರಾಂಬೆ ರೂಪದಿ ರಂಭೆ ।
ಚರಪದ ಕಂಜ ರೋಲಂಬೆ।
ವಿಲಸದ್ಗುಣ ನಿಕರುಂಬೆ ।
ಪತಿ ಬರಲೆಂದು। ಸ್ಮೃತಿಯೊಳು ಸಂದು । ವ್ರತದೊಳು ನಿಂದು ।
ಬರಲು ಕಿತ್ತೂರಿಗೆ ವರ ಮಡಿವಾಳಾಖ್ಯ
ಗುರು ಪಾದಪೂಜಿಸಿ ನಲವಿಂದ।
ಗುರುತವ ಪೇಳಲದರಂದ। ಗುಣಾರ್ಣವ
ತಾ ಬಂದ ॥೩॥

ದೇವ ಮಹೇಶ್ವರ ಭೂವಲಯದ ಭ
ಕ್ತಾವಳಿಯನು ಪಾಲಿಸಲೆಂದು ।
ಕೇವಲ ಬ್ರಹ್ಮ ನಿರಾವರಣವೆ ಜಂಗ
ಮಾವೇಷದಿ ಸಗುಣದೊಳೆಂದು।

ಸಾವಯವದಿಂದ ಸಾವಧಾನದಿ ಗುರು
ದೇವ ದೇಶಿಕನೆನಿಸುತ ಬಂದು ।
ವಿರಕ್ತಿಸುಖದಿ ನಿಂದು ।
ಕರುಣಾಮೃತರಸ ಸಿಂಧು ।
ನಿಶ್ಚಯವೆಂದು ಮನದಂದು ।
ಭೂಪಶೇಖರ। ಭವಭೀಕರ ।ಶೀತಶ್ರೀಕರ।
ಭಾವಜಾಂತಕರೆಂದು ಭಾವಿಸಿ ಕರೆತಂ
ದಾ ವಿಮಲಪ್ರಭುರಾಯನ । ಚಿನ್ಮಯ ನಿರ್ಮಾಯನ।
ಶೋಭನ ನಾಮಧೇಯನ ॥೪॥

ಸುರುಚಿರ ಮಣಿಮಯ ಹರಿವಿಷ್ಟರದಲಿ ಸ
ದ್ಗುರುವರರನು ಕುಳ್ಳಿರಿಸುತಲಿ ।
ಚರಣ ಚಾಮೀಕರ ಸರಸಿರುಹವನಾ
ದರದಿಂದಲಿ ಸಮರ್ಚಿಸುತಲಿ।
ಪರತರ ಪಾವನ ಚರಿತರ ಪದಪೂಜೆಗೆ
ಸರಿ ವೀರಸಂಗಪ್ಪನೆನುತಲಿ ।
ಸ್ಥಿರತರ ಚಿತ್ತಗೆ।
ನಿರುಪಮ ಸದ್ವೃತ್ತಗೆ ।
ನಿರುತ ನಿರ್ಮತ್ತಗೆ ।
ನೇಮಿಸಲಾಗ। ಕಾಯಿಸಿ ಬೇಗ । ಸ್ವಾಮಿಯೆನುತಾಗ।
ಚರಣದ್ವಯವ ಯುಗಕರದಿ ಪಿಡಿದು ಪಗ
ಲಿರುಳೆನ್ನದಲೊಂದೆ ಭಾವದಿ ।
ವರ ವೀರಶೈವದಿ ।
ಪೂಜಿಪ ಜಾವಜಾವದಿ ॥೫॥

ಶ್ರೀಗುರು ಪದಪೂಜೆಗಾಗಮೋಕ್ತವನನು
ರಾಗದಿ ಮಡಿವಾಳಶಾಸ್ತ್ರಿಗಳು।
ಆಗ ಪೇಳಿದ ತೆರನಾಗಿ ಮಾಳ್ಪನು ಮಂತ್ರಿ
ಪೂಗಾಗ್ರಣಿ ಪೂತಾಂಘ್ರಿಯೊಳು ।
ಮೇಗೆ ದ್ವಾದಶಕೋಟಿ ಪೂಗಳಿಗೆ ಮಿಗಿ
ಲಾಗಿಹ ಸ್ವರ್ಣಪುಷ್ಪವು ಕೇಳು ।

ತತ್ಕೋಟಿಗಧಿಕವೆಂದು।
ತ್ರಿಬಿಲ್ವದಳವನೊಂದು ।
ಧರಿಸಲಿಷ್ಟವಹುದೆಂದು ।
ದೋಷ ಕಕ್ಷವ । ಸುಡುವ ಲಕ್ಷವ । ನಿತ್ಯ ಮೋಕ್ಷವ ॥
ರಾಗದಿಂದೀವ ಬಿಲ್ವಗಳನು ಧರಿಸುವ
ಶ್ರೀಗಾಗರ ಭೂಪಾಲಗೆ । ಶಂಕರನೀವದನೀಗೆ ।
ತಿಳಿದುದು ಸತ್ಯಶೀಲಗೆ ॥೬॥

ಕುಂದ ಬಕುಳ ಕರವೀರ ಯುಗಚ್ಛದ
ಮಂದಾರ ಕಲ್ಹಾರ ಪುನ್ನಾಗ।
ನಂದ್ಯಾವರ್ತ ಮರಂದಾರವಿಂದೌಘ
ಗಂಧಫಲೀ ಸುಮನೋಪೂಗ।
ಕಂದದ ಪೂಗಳ ವೃಂದವ ತರಿಸಿದ
ನಂದದಿ ಭೂವಲ್ಲಭನಾಗ।
ಮನ್ಮಥನ ಬಾಣಗಳಾಗಿ।
ಬಾಧಿಸಿದವೆನುತ ಯೋಗಿ ।
ಸಂದೋಹ ನೊಂದಿರಲಾಗಿ ।
ಸುಮಸ್ತೋಮವ । ಸುಮಾರಾಮವ । ಮಾಡಿ ಕ್ಷೇಮವ ।
ಹೊಂದಿರಲೆಂದು ದೇಶಿಕರ ಪದದ್ವಯ।
ಕೊಂದೆ ಭಾವದಲಿ ಏರಿಸಿ ನೋಡಿ ।
ಶಿವಗಣದೊಡಗೂಡಿ । ಸತ್ಕೀರ್ತನೆಯನು ಮಾಡಿ ॥೭॥

ಸೂಳೈಸಿ ಹೊಡೆವ ನಿಸ್ಸಾಳ ಕಂಸಾಳ ಕೈ
ತಾಳದ ಕೌತುಕ ನಾದವ ।
ತಾಳಮೃದಂಗ ಸಮೇಳ ಮೇಳದ ರವ ।
ಕೇಳುವ ಭೇರಿ ನಿನಾದವ।
ಭಾಳಲೋಚನ ರೂಪದಾಳಿದ ವೈರಾಗ್ಯ
ಶೀಲರು ಮಾಳ್ಪಾಶೀರ್ವಾದವ ।
ಪಿಡಿದಿಹ ಗುರುಪಾದವ ।
ಶಿವತತ್ವಾನುಬೋಧವ ।
ಹೇಳಲು ಕೇಳಿ ಮೋದವ ।

ತಾಳ್ವ ರಾಜನು । ನತಸಮಾಜನು । ನಿರುಪಮತೇಜನು ।
ಬಾಳುವ ಬಾಲಕರಿಂದ ಪುಷ್ಪಾಂಜಲಿ
ಗೇಳಲು ಗಣಜಾಲವು ಸುತ್ತ।
ಜೆಯರವಗೊಳಿಸುತ್ತ।
ತೂರಿದರು ಪೂಗಳನತ್ತ ||೮||

ಮಂಗಳಾತ್ಮಕ ಶಿವಜಂಗಮ ಪದಪೂಜೆ
ತಿಂಗಳ ಮಾಡಿದ ಚಿತ್ರದಿ।
ರಂಗವಲ್ಲಿಯ ಚಿತ್ರಂಗಳ ನೂತನ
ಶೃಂಗಾರಗೊಳಿಸಿದ ಚೈತ್ರದಿ ।
ಕಂಗೊಳಿಸುವಮರ ಜಂಗುಳಿಯಂತೆ ಬೆ
ಡಂಗಾಗಿಸಿ ಕ್ಷಣಮಾತ್ರದಿ ।
ತೋರಿಸಿದ ಭೂನಾಥನು । ವಿಜಯ ವರೂಥನು ।
ವಿಲಸದ್ಗುಣಯೂಥನು ।
ಧರಿಸಿದ ಶ್ರೀಫಲ।ದಳ ಸಂಕುಲ। ತನ್ನ ಕರತಲ।
ಲಿಂಗಕೇರಿಸಿ ಮಂಗಳಾರತಿಯಿಂ ಗಣ
ಪುಂಗವರನು ತೃಪ್ತಿಗೊಳಿಸುವ ।
ಈ ಪರಿಯೆಂದು ತಿಳಿಸುವ ।
ಸುಕೃತರಾಶಿ ಗಳಿಸುವ ||೯||

ವಸುಧೇಶ ತನ್ನಯ ವಶಗತ ರಾಜ್ಯದೊ
ಳೆಸೆವ ಗ್ರಾಮಾನುಗ್ರಾಮಗಳಿಂದ।
ಕುಸುಮ ಬಿಲ್ವಗಳ ರಾಜಿಸುವ ಕೇತಕಿಗಳ
ಸಸಿನೆಯಿಂ ತರವೇಳೆ ನಲವಿಂದ।।
ದ್ವಿಸಹಸ್ರ ಭಾರ ಮಾಲೂರ ಕುಸುಮಗಳೆ
ಣಿಸಲಿಕಕ್ಷೋಹಿಣಿಯೆನಲಂದ।
ತಂದವರ ನಂದದಿ ನೋಡಿ ।
ಕಂದರ ತೆರ ದಯಮಾಡಿ ।
ಸಂತೋಷದೊಳೊಡಗೂಡಿ ।
ಸರಗಟ್ಟಿಸಿ । ಚಂಡ ನಿಟ್ಟಿಸಿ । ಸೌಧ ಮುಟ್ಟಿಸಿ ।।
ಬಿಸಜಸಂಭವ ಶಶಿಧರನ ನೋಡಿದನೆಂದು

ಪುಸಿವಾತ ನುಡಿದ ಕೇತಕಿಗಳನು । ಬಹು ಪಾತಕಿಗಳನು ।
ಕಟ್ಟಿಸಿದನತುಳ ಬಲನು ||೧೦||

ಇದು ಮಹಾಪೂಜೆ ಸಂಪದದ ಸಾಧನ ಸಭಾ
ಸದನ ಸಿಂಹಾಸನಪರರೆಂದು ।
ಕದಲದ ಕದಲಿಯ ಕಂಬ ಶತಕಗಳ ಕಟ್ಟಿ
ಸಿದನಲ್ಲಲ್ಲಿಗಾಕ್ಷಣಕಂದು ।
ಮಧುನೃಪ ವನಸಹವಿದಿರ್ಗೊಂಬಂದದೊ
ಳೊದವಿದ ಮರಗಳಷ್ಟಿಷ್ಟೆಂದು।
ವರ್ಣಿಸುವವನವನ್ಯಾರೆ ।
ಮಾಪೆಗಳಂತರದಿ ತೋರೆ ।
ದಿನಪ ಕದಿರ್ಗಳು ಬೀರೆ ।
ದೀಪಗಳಿಂದ ತೋರ್ಪವು ಚೆಂದ । ಗಾಯಕವೃಂದ।
ತ್ರಿದಿವ ರಂಭಾದಿ ಸದ್ವಧುಗಳೆನಿಸುವ ನಾ
ಟ್ಯದ ಸುದತಿಯರ ಚಮತ್ಕಾರ।
ತೋರಿಸುವಭಿನಯ ಸಾರ।
ನೋಡುವ ರೂಪದಿ ಮಾರ ||೧೧||

ಮಾರ ತ್ರಿಲೋಕದ ವೀರ ವಿರಹಿಗಳ
ಸೂರೆಗೊ[ಳು]ವ ಕಾರಣಕೆಂದು ।
ಸಾರಸಭವಗವ ಸಾರೆ ಸೌಂದರ್ಯಸಾ
ಕಾರ ಮೂರ್ತಿಗಳ ನೋಡಿದನಂದು ।
ಆ ರತಿವರ ಶಿವವೈರವ ಕಳೆಯಲಿಕೀ ರಮಣಿ
ಯರಸಿಡಲು ಬಂದು ।
ಆರತಿಗಳ ಪಿಡಿದವರು ।
ಆ ರತಿರೂಪ ಪಡೆದವರು ।
ಬೇರೆನಿಸದೆ ನಡೆದವರು ।
ಭಾವಕಿಯರು । ತಮ್ಮ ಸಖಿಯರು । ಶಶಿಮುಖಿಯರು ।
ನಾರಿಯರು ಮದನಾರಿಗೆ ಬೆಳಗಿದ
ರಾ ರವಿಕೋಟಿ ಪ್ರಕಾಶಗೆ।
ವಿಭೂತಿ ವಿಭೂಷಗೆ ।
ಮಲ್ಲೇಂದ್ರೇಷ್ಟಕೋಶಗೆ ||೧೨||

ದೇಶದೇಶದಿ ಭಕ್ತಿಕೋಶ ಶ್ರೀ ಮಲ್ಲಮ
ಹೀಶ ವೃಷೇಶನೆಂಬುದ ಕೇಳಿ ।
ಶ್ರೀ ಸದಾಶಿವ ಚರವೇಷ ವಿರತಿಸುಖ
ದೇಶಿಕರೈತರೆ ಮುದದಾಳಿ ।
ಕೂಸುಗಳೆತ್ತುತ ಸ್ತ್ರೀಸಮೂಹವು ಬರೆ
ತೋಷಿಸುವುದ ಸುತರಿಗೆ ಹೇಳಿ ।
ಲಿಂಗಾರ್ಚನವ ಮಾಡಿಸಿ ।
ಮೃಷ್ಟಾನ್ನವ ನೀಡಿಸಿ ।
ಕ್ಷುತ್ಪೀಡೆಯನೋಡಿಸಿ ।
ಇಷ್ಟ ಕೊಡುವನು । ಕಷ್ಟ ಕಡಿವನು । ಸ್ಪಷ್ಟ ನುಡಿವನು ।
ಈಶಾಕೃತಿಯ ಮಹೇಶಾಳಿಗೆ ವಸ
ನಾಶಾದಕ್ಷಿಣೆಗಳ ಕೊಟ್ಟು।
ಸುತರು ಸಹ ಪೊಡಮಟ್ಟು।
ಭಕ್ತಿಯೊಳಿಂದು ರತಿಯಿಟ್ಟು ||೧೩||

ಪುರವ ಸಿಂಗರಿಸಿದ ಪರಮವೈಭವದಿ ಶಂ
ಕರ ರಜತಾದ್ರಿಯೆಂಬಂದದಿ।
ಹರ ಪರ ಕರ ಶರ ತರುಗಳ ತಳಿರ್ಗಳ
ತರಿಸಿ ತೋರಣಗಟ್ಟಿ ಛಂದದಿ ।।
ಪರಿಮಳಗರೆವ ಪೂಸರಗಳ ಸರಣಿಯೊ
ಳಿರದೆ ಕಟ್ಟಿಸಿದನಾನಂದದಿ।
ಮೆರೆಸಿದನೀಶ ರೂಪರ।
ಸಚ್ಚಿತ್ಸುಖಾಲಾಪರ।
ವಿರತಿಬಲಶ್ರೀಪರ।।
ಭೂಪಾಲನು। ಭಕ್ತಿಶ್ರೀಲನು । ಸುವಿಶಾಲನು ।
ಚರಣ ನಡೆಯೊಳಗಾದರದಿ ಬರಲು ಸುಖ
ಕರನ ಸುತ್ತಿರೆ ಚತುರಂಗ ಬಲ ।
ನಾನಾ ವಾದ್ಯ ಕಲಕಲ ।
ಚರಿಸುವನು ವೀರೋಜ್ವಲ ||೧೪||

ಸಾಮಜಾರೂಢ ಸುತ್ರಾಮಪದವನೊಮ್ಮೆ
ಕಾಮಿಸದಾ ಮಾಹೇಶ್ವರರ ।

ಸ್ತೋಮವ ಪ್ರೇಮವಗೊಳಿಸಲು ರಜತಾದ್ರಿ
ಧಾಮಾರ್ಚಕನವನೀಶ್ವರ।
ನೇಮದಿ ರಜತ ಚಾಮೀಕರ ಪೂಗಳ
ತಾ ಮಾಡಿಸಿದ ನವ ಭಾಸ್ಕರ ।
ಹಸ್ತಗಳಿಂದ ತೂರಿದ ।
ಸ್ವಸ್ತದ ಮಳೆ ತೋರಿದ ।
ವಿಸ್ತಾರವ ಬೀರಿದ।
ಬಲವಂತನು ಗೆಲುವಾಂತನು ।ನಿತ್ಯಶಾಂತನು ।
ಕ್ಷೇಮವಾಗಲಿ ಕ್ಷಾಮವಡಗಲಿ ವಿಷಯ ಜ
ನಾಮೋದದಿಂದ ಬಾಳಲಿ ಎಂದು ।
ಕಲಾವಿದ ಮನದಂದು ।
ಶಂಕರ ಮೃಡ ಶಿವನೆಂದು ॥೧೫॥

ವೀರವಿಕ್ರಮ ಗುರುವಾರದಿ ಶ್ರೀಗುರು
ವಾರವನಾ ರಾಜವೀಥಿಯೊಳು ।
ವಾರಣಗಳನೇರಿದಾ ರಮ್ಯ ಮಹಿಮರ
ತಾರಾಗವಾಸ ದೀಧಿತಿಗಳು ।
ಬೀರುವವಮರರು ತೂರುವಲರ ಮಳೆ
ಯಾರಯ್ಯಲಾ ಬಾಣ ಬಿರಸುಗಳು ।
ಬೀಳುವ ಕಿಡಿಧಾರೆಗಳು।
ಹಚ್ಚಿಹ ಚಂದ್ರಜ್ಯೋತಿಗಳು।
ಪಗಲನಿಸುವ । ಮಿಗೆ ಸೊಗಸುವ । ಝುಗಝುಗಿಸುವ ।
ಸೂರ್ಯೋದಯವಾಗಲಾ ರಾಜ ನಡೆದ ವಿ
ಹಾರದಿ ಗುರುಸಿದ್ಧೇಶ್ವರನ ।
ಸುಕೃತಮಯ ಭವನ ।
ತೋರಿದನರ್ಥಿಯಾದೀನ ॥೧೬॥

ಗುರುಸಿದ್ಧೇಶ್ವರ ಪರಮಪ್ರಭಾಕರ
ಕರುಣಾಕರ ನಿಮ್ಮ ದಯದಿಂದ ।
ಪರಿಪೂರ್ಣ ಶ್ರಾವಣ ಚರಣಪೂಜೆಯ ಶ್ರೀ
ಚರಣಾಂಭೋಜಕೊಪ್ಪಿಸ ಬಂದ ।

ದರಿವು ನಿಮಗೆ ಸುಖಕರನೆ ಕಾಯೆಂದು ಶ್ರೀ
ಕರನು ಕಿಂಕರಭಾವದಿ ನಿಂದ ।
ತೋರಿದನತಿ ಚಿತ್ರವ ।
ರಂಭಾಸಮ ಪಾತ್ರವ ।
ಮಾಡುವ ಗಣಸ್ತೋತ್ರವ ।
ಪಾಡುವರಿಗೆ । ನೋಡುವರಿಗೆ । ಬೇಡುವರಿಗೆ ।
ಧರಣಿಯೊಳ್ ಚೌಕಿಯ ಗುರುಸಿದ್ಧೇಶ್ವರ
ನಿರಿಸಿದ ಸ್ಥಿರವಾದ ಸುರಭೂಜ।
ಮಲ್ಲೇಂದ್ರ ಮಹಾರಾಜ।
ಚರಿತದಿಂದ ಘನತೇಜ ॥೧೭॥

ಶ್ರೀ ಗುರುವರರ ಸರಾಗದಿ ಕಳಿಸಿ ಮ
ಹಾಗಜ ಮಣಿಪುಷ್ಪಕವನೇರಿ ।
ಕೂಗುವ ಪಾಠಕರಾಗತ ಭಟಮಾನ್ಯ
ರಾಗ ಬರಲು ಹೊಡೆಸುತ ಭೇರಿ ।
ಸಾಗಿಯಲ್ಲಿಂ ಸೊಗಸಾಗಿ ರಾಜಾಲಯ
ವಾಗ ಪೊಕ್ಕಾನಂದ ಕಳೆದೋರಿ ।
ಕಲಾನಿಧಿ ಶೇಖರ ।
ಮಾಡಿಸಿದ ಶ್ರಾವಣಪೂರ।
ಭಕ್ತೇಷ್ಟದ ಮಂದಾರ।
ಹರ್ಷದಾಳುವ । ರಾಜ್ಯವಾಳುವ । ಸುಖದಿ ಬಾಳುವ ।
ತ್ಯಾಗದಿ ಭೋಗದಿ ಯೋಗದಿ ನೃಪವರ
ಗೀಗಿಲ್ಲ ಸಿದ್ಧೇಶನ ದಯದಿ।
ಕಿತ್ತೂರೊಳಗತಿಶಯದಿ ।
ಒಪ್ಪಿರುವ ರಾಜನ ನಯದಿ ॥೧೮॥

೬೯

ರಾಜೇಂದ್ರಚಂದ್ರ ಮಲ್ಲೇಂದ್ರ ಹೋಳಿಯನು ।
ತೇಜದೊಳಾಡಿದ ಕಾಮಕೇಳಿಯನು ॥ಪಲ್ಲ॥

ಗಣೆಯನೆಳಸಿ ಸ್ಥಾಪನವನು ಮಾಡಿ ।
ಗುಣಮಣಿ ಕುಣಿವ ಮಕ್ಕಳ ನೋಡಿ ನೋಡಿ ॥೧॥

ಸರ್ವರ ಕರದೊಳು ವೇಣುದಂಡಗಳ ।
ಸುರ್ವೀಶನಿತ್ತನು ತಂಡತಂಡಗಳ ॥೨॥

ಗುರುಚರಗಣ ಮಂತ್ರಿ ಸುತರೊಡಗೂಡಿ
ಸುರಪಾಲನಂದದ ಸಭೆಯನು ಮಾಡಿ ॥೩॥

ಕಾಮವ ಸುಟ್ಟು ಕ್ರೋಧವ ಕಡೆಗಿಟ್ಟು
ನೇಮದಿ ಲೋಭದ ಸೀಮೆಯ ಬಿಟ್ಟು ॥೪॥

ಆಡುವ ಮಕ್ಕಳೊಡನೆ ಮೋಹವಿಟ್ಟು ।
ಮಾಡುವ ಮದವ ಮೂಢರ ಕಂಡು ಸಿಟ್ಟು ॥೫॥

ಮತ್ಸರ ವೈರಿವರ್ಗದೊಳಗೆ ತೊಟ್ಟು ।
ಸತ್ಸಭೆಯನು ನೋಡಿ ಸಂತಸವಟ್ಟು ॥೬॥

ನೆರೆದರ ಕರದೊಳಗಿತ್ತ ಕಾಯ್ಗಳನು ।
ಧರಣೀಶ ಹೊಡೆಸಿದ ಶತಸಂಖ್ಯೆಗಳನು ॥೭॥

ನಾರಿ ಕೇಳ್ ನಾರಿಕೇಳಗಳ ವೃಷ್ಟಿಯನು ।
ತೋರುತ ಹಸ್ತದಿ ಚಾರು ಸೃಷ್ಟಿಯನು ॥೮॥

ಹರನುರಿಗಣ್ಣಿಗಾಹುತಿಯಾದನಿಂದು ।
ಸ್ಮರಭಸ್ಮ ಶಂಕರ ಧರಿಸಿದನೆಂದು ॥೯॥

ಬಲವಂದು ಬಲುಮಕ್ಕಳೊಡನೆ ಭೂಪಾಲ।
ಕಲರವ ಗೀತವನಾಲಿಪ ಲೋಲ ॥೧೦॥

ಪರಿಮಳ ದ್ರವ್ಯವ ಧೂಳಿಗೆ ಸರಿಯ ।
ದೊರೆ ಮಾಡಿಯಾಡಿದ ಬಹು ಪರಿಪರಿಯ ॥೧೧॥

ಮುನಿಪುರವಾಸ ಸಿದ್ಧೇಶನ ಸ್ಮರಿಸಿ ।
ಜನನಾಥ ನೋಳ್ಪರಿಗಾನಂದಗರೆಸಿ ॥೧೨॥

೭೦

ರಾಗ-ಜಂಗಲ

ಹೋಳಿಯಾಡುವ ಮಲ್ಲನೃಪನಾಟವನು ।
ಹೇಳಲರಿದು ಮಾಡುವ ಬೇಟವನು ॥ಪಲ್ಲ॥

ಸಾಮಜಾರೂಢನಾಗುತ ದೇವೇಂದ್ರ।
ಭೂಮಿಗೆ ಬಂದವೋಲ್ ನೃಪಕುಲಚಂದ್ರ ॥೧॥

ಪಟುಭಟ ಪಾಯದಳವು ಭಾಲೆದವರು ।
ಸ್ಫುಟವಾಗಿ ನಡೆವುದ ವರ್ಣಿಪರಾರು ॥೨॥

ಗಣಪ ಷಣ್ಮುಖ ವೀರಭದ್ರರ ಸರಿಯ ।
ಗುಣವತ್ಪುತ್ರರಿಂದಲಿ ಪರಿಪರಿಯ ॥೩॥

ರೂಪದಿ ಮಾರ ಪ್ರತಾಪದಿ ಸೂರ್ಯ।
ಭೂಪಾಲವರ್ಯ ಮಾಡುವ ಪರಿಚರ್ಯ ॥೪॥

ತನುಜರನೇಕರು ಕಾಯ್ದುಕೊಂಡಿಹರು ।
ಜನನಾಥ ಜನಕನೆನುತ ಕಂಡಿಹರು ॥೫॥

ಅಪ್ಪನೆಂಬುವ ಶಬ್ದ ಒಪ್ಪುವದಿಳೆಗೆ ।
ತಪ್ಪಲ್ಲ ಸಖಿಯೆ ಕರುಣದಿ ಕಾವ ಕಳೆಗೆ ॥೬॥

ನಾನಾ ವಾದ್ಯವಿನೋದದಿ ನಡೆವ ।
ಭೂನುತ ಕೀರ್ತಿನಿದಾನವ ಪಡೆವ ॥೭॥

ಚತುರಂಗ ಬಲದೊಳು ಚತುರ್ಮುಖನಂತೆ ।
ಕ್ಷಿತಿನಾಥ ತೋರ್ಪನು ಕೇಳೆಲೆ ಕಾಂತೆ ॥೮॥

ಶ್ರೀಮನ್ಮಲ್ಲನೃಪಾಲನರ್ತಿಯಲಿ ।
ಕಾಮನ ಮಂಟಪ ಮಧ್ಯಪೀಠದಲಿ ॥೯॥

ಸುಂದರ ಸುತರಿಂದ ಬಂದು ಮಂಡಿಸಲು ।
ಕಂದರ್ಪ ಮೂರ್ತಿಯ ರೂಪ ಖಂಡಿಸಲು ॥೧೦॥

ನೃತ್ಯಸಂಗೀತ ಸಾಹಿತ್ಯವನರಿದು ।
ಹತ್ತೆಂಟು ಮೇಳವಿರಲು ಹತ್ತೆಗರೆದು ॥೧೧॥

ಹಿಂದುಸ್ಥಾನದ ಖೇಲಿಗೆ ಸರಿಯು ।
ಹೊಂದಿದ ಪದಗಳನೆನಿಸುವ ದೊರೆಯು ॥೧೨॥

ಶೃಂಗಾರ ಸಾರ ಲಕ್ಷಣವನು ಗರೆವ ।
ಮಂಗಳಪದವ ಪಾಡುವರೊಳು ಮೆರೆವ ॥೧೩॥

ಧೂಳಿಗೆ ಸರಿಯ ಬುಕ್ಕಿಟ್ಟನು ಮಾಡಿ ।
ಬಾಲಕರಿಂ ಪೊಡಿಸುವ ನೋಡಿ ನೋಡಿ ॥೧೪॥

ನೀಲಾಂಗರ ವದನದ ಮೇಲೆ ಬೀಳೆ ।
ಪೋಲುವರೀಶನಂಗದ ಬಣ್ಣದಾಳೆ ॥೧೫॥

ವೃಂದಾರಕ ವೃಂದವೆಂದೆಂಬ ಸಭೆಯು ।
ಸಂದೇಹಗೊಳಿಪುದು ನೃಪಸಭೆ ಪ್ರಭೆಯ ॥೧೬॥

ಅನ್ನವಸ್ತ್ರವನಿತ್ತು ಪೊರೆವುದು ಚೆಂದ।
ಕಣ್ಣಗೆಡಿಸುವ ಪರಿಮಳ ದ್ರವ್ಯದಿಂದ ॥೧೭॥

ಮುಷ್ಟಿಯೊಳ್ ಪಿಡಿದ ಪರಿಮಳ ಪಿಷ್ಟವನು।
ಪುಷ್ಟಿಯಿಂದೊಗೆಯಲು ಪಡೆಯನಿಷ್ಟವನು ॥೧೮॥

ಚಂದನ ಚಂಪಕ ತೈಲವ ತರಿಸಿ ।
ಹೊಂದಿ ಗುಲಾಲ ವಿಶಾಲದಿ ಧರಿಸಿ ॥೧೯॥

ಚಂದನ ತೈಲವು ಜಲಕೆ ಸಮಾನ ।
ವೆಂದೆಂಬ ವಿಷಯದೊಳಿಲ್ಲನುಮಾನ ॥೨೦॥

ಶಮಶರಜಂಗ ಬಹದರನಾಟಕ್ಕೆ।
ಸಮಗಾಣೆ ನೋಡುವ ಜನರ ನೋಟಕ್ಕೆ ॥೨೧॥

ಕಂಡುದ ಬರೆದೆನದರೊಳಗಾಪನಿತ।
ಚಂಡವಿಕ್ರಮ ದೊರಿ ಮಾಡಿದನಿನಿತ ॥೨೨॥

ಶ್ರೀಕರನೋಕುಳಿಯಾಡುವ ಪರಿಯ।
ನಾಕದವರೆ ಬಲ್ಲರಾಕಾರ ಸಿರಿಯ ॥೨೩॥

ಕಲಿಯುಗದೊಳು ಶಿವಭಕ್ತರ ಮತಕೆ ।
ಫಲರೂಪವಾಗಿಹ ಪರಬ್ರಹ್ಮಪಥಕೆ ॥೨೪॥

ಮುನಿಪುರವಾಸ ಸಿದ್ಧೇಶ ವಿನೋದ ।
ಜನಪದ ಜನಪನ ನಿರ್ಮಾಣಗೈದ ॥೨॥

೬೧

ರಾಗ-ಭೈರವಿ

ಪುಣ್ಯಾನ್ವಿತ ಪುಣ್ಯದಿ ಪೆಸರ್ವಡೆದಿಯ
ಗಣ್ಯ ಶ್ರೀಯುತ ಮಲ್ಲೇಂದ್ರ ॥ಪಲ್ಲ॥

ಶ್ರೀದ ಶ್ರೀದ ಶುಭೋದಯನಾದ ಮ
ಹಾದೇವ ತಾನೊಲಿದಿತ್ತ।
ಮೇದಿನಿಯ ಪದವಾದಿಯೊಳಿರುತಿರೆ
ಪಾದಶಾಹ ತಾನಿತ್ತ।
ಮೋದದಿಂದ ಮೇಲಾದ ಬಿರುದುಗಳ
ತಾ ದಯೆಗೆಯ್ಯೆ ಸುಚಿತ್ತ॥
ಸಾದರದಿಂದಂದಿಂ ನಡೆಸುವರು ।
ಭೇದೋಪಾಯದವರ ಕೆಡಿಸುವರು ।
ಪಾದಾಶ್ರಿತರನು ಸುಖಬಡಿಸುವರು ।
ಆದಿಯವರೊಳು । ಆದಿಯದರೊಳು । ಅಗ್ರ ದಯಾಳು ॥
ಭೂಪ ಸತ್ಕೀರ್ತಿಕಲಾಪ ॥೧॥

ಮಾರಾರಿಯ ಕರುಣಾರಸಪೂರ ರಸಾರಮಣಗೆ ನಿತ್ಯ।
ಘೋರತರದ ಕಾಂತಾರವು ನಗರಾಕಾರವಾಗುವದು ಸತ್ಯ।
ವೈರಭಾವದಿ ಸೇರಿ ರಹಸ್ಯದಿ ಪ್ರೇರಿಸಲದು ಮಿಥ್ಯ।
ಶ್ರೀರಮ್ಯನ ಶ್ರೀಮಂತನ ನೋಡಿ ।
ಸೇರದೆ ಮಾಡಿದರೆಮ್ಮೊಳ್ ಚಹಡಿ ।
ಕ್ರೂರರೆನುತಲವರುಗಳನು ಕಾಡಿ ।
ತೋರಿದ ಭಯವ । ಬೀರಿದ ನಯವ । ಸಾರಿದ ಜಯವ ॥
ಭೂಪ ಸತ್ಕೀರ್ತಿಕಲಾಪ ॥೨॥

ಕ್ಷ್ಮಾಪನ ಪುಣ್ಯಪ್ರತಾಪನ ಜಯಶ್ರೀಯೋಪನ ಕಂಡು ನಲಿದು ।
ಈ ಪೂತಾನ್ವಯದೀಪಗೆ ಸಲಲಿ ಪ್ರತಾಪರಾವಾಖ್ಯವನೊಲಿದು ।
ಸ್ಥಾಪಿಸಿದನು ಶ್ರೀಪತಿರಂಜಿತನು ಚಮೂಪರೊಳಗಿದು ತಾ ಬಲಿದು ॥

ವ್ಯಾಪಿಸುತಲಿ ಚತುರಂಗ ಸಮೇತ।
ತಾ ಪೊರಡಲು ಶ್ರೀಮಂತ ನಿಲಿಸುತ।
ಭೂಪನ ಕರೆಸಲ್ ಸ್ವಬಲವು ಬರುತ ।
ಆ ಪಥದೊಳಗೆ ಈರ್ವರು ಬೆಳಗೆ । ಭೇರಿಯು ಮೊಳಗೆ ॥
ಭೂಪ ಸತ್ಕೀರ್ತಿಕಲಾಪ ॥೩॥

ಕಿತ್ತೂರಪ್ರಭುವಿತ್ತುದನರಿದು ಮಹತ್ತೋಷವನು ತಾಳಿ ।
ಸುತ್ತುಮುತ್ತಲೆತ್ತೆತ್ತಣ ಕವಿಗಳ ವೃತ್ತ ಪದ್ಯಗಳ ಕೇಳಿ
ಚಿತ್ತಕೆ ತಂದು ಮಹೋತ್ತಮಾಂಗಮೊಲೆವುತ್ತ ಸುತರಿಗೆ ಹೇಳಿ।
ಹೊತ್ತಾಗಲು ಪಾಕವ ಮಾಡಿಸಿದ ।
ಒತ್ತರದಿಂದವರಿಗೆ ನೀಡಿಸಿದ।
ಮತ್ತವರಾಶಾರಿಯನೋಡಿಸಿದ।
ಚಿತ್ತಜರೂಪ। ಪರಿಹೃತಶಾಪ। ಸತ್ಯಾಲಾಪ॥
ಭೂಪ ಸತ್ಕೀರ್ತಿಕಲಾಪ ॥೪॥

ನಿರುತೋತ್ಸವ ಸಂಸ್ಥಾನಕಿಂದ ಕಡು ಪಿರಿದೆಸಗಲ್ ಪುಣ್ಯಾದಿ ತಾ।
ನಿರುತಿರಲಸ್ಥಿರ ಕಾಯಕೆ ರೋಗವು ಬರಲಪ್ಪಣೆಯಿಂ ತ್ವರಿತ ।
ದುರದುಂಡೀಶನ ಕ್ಷೇತ್ರಕೆ ಬರುತ ಚರಗಣ ತೃಪ್ತಿಗೊಳಿಸುತ ॥
ವರ ವೀರೇಶನ ಕಂಡಲ್ಲಿಂದ ।
ಗುರುಸಿದ್ಧೇಶನ ಚರಣಕೆ ಬಂದ ।
ದರಿವರ ಮನೆಯೊಳಪೊಗೆ ನಲವಿಂದ ॥
ಹರಸ್ಮರಣೆಯೊಳು । ಪರಮೇಶನೊಳು । ಬೆರೆದಿ ಕೃಪಾಳು ॥
ಭೂಪ ಸತ್ಕೀರ್ತಿಕಲಾಪ ॥೫॥

೭೨

ರಾಗ-ಸಾರಂಗ

ಸದರನೇರಿದ ಶಿವಲಿಂಗರುದ್ರೇಂದ್ರ।
ಸದಯ ಸಪ್ತಾಂಗ ವೈಭವಸುಖಸಾಂದ್ರ ॥ಪಲ್ಲ॥

ಮಣಿಗಣ ಘೃಣಿ ಸಂರಾಜಿತಾಸನದಿ ।
ಮಣಿದರ ರಕ್ಷಣಗೆಯ್ವ ಶಾಸನದಿ ॥೧॥

ಸಚಿವ ಮುಖಾಖಿಲರಾಶ್ರಯಿಸಿರಲು ।
ಶಚಿಯಾಣ್ಮನಂತೆ ಮಧ್ಯದೊಳೊಪ್ಪಿರಲು ॥೨॥

ಶಿವಗಣಾವಳಿ ವಲಯದಿ ಬಳಸಿರಲು ।
ಶಿವಮತೋದ್ಧಾರಕ ಪ್ರಭು ತೋರಿರಲು ॥೩॥

ಚತುರ್ದಶ ಮಹಲಿನವರು ನಡೆತಂದು ।
ಹಿತದಿ ಕಾಣಿಕೆಯನಿಕ್ಕೆರಗುವರಿಂದು ॥೪॥

ಧೀರ ಗಭೀರ ವೀರಾಧಿಪನೆಂದು ।
ಸೂರಿಗಳ್ ನುತಿಗೆಯ್ಯಲು ದೀನಬಂಧು ॥೫॥

ತೌರ್ಯತ್ರಯ ನಾದವು ಮೊಳಗಿರಲು ।
ಶೌರ್ಯೌದಾರ್ಯವ ಕೊಂಡಾಡುತಿರಲು ॥೬॥

ಚತುರಂಗಬಲವು ಮುಂಗಡೆಯೊಳೊಪ್ಪಿರಲು ।
ಪ್ರತಿರಹಿತೋದ್ಭಟ ವಿತತಿ ಕಾದಿರಲು ॥೭॥
ರಾಜೇಂದ್ರ ಚಂದ್ರ ಮಲ್ಲೇಂದ್ರಾತ್ಮಜಾತ।
ರಾಜಶೇಖರ ಬುಧನಿವಹ ವಿಖ್ಯಾತ ॥೮॥

ಗುರುಸಿದ್ಧೇಶ್ವರ ಚರಣಾಂಭೋಜ
ಸುರಭಿ ಮಿಲಿಂದಾಶ್ರಿತ ಸುರಭೂಜ ॥೯॥

೭೩

ರಾಗ-ಭೈರವಿ

ಶಿವಲಿಂಗರುದ್ರ ಭೂಧವ ನಿನ್ನ ಕೀರ್ತಿಭಾ
ರ್ಗವಿಯರಾಡುವ ಮಾತಾ। ಕೇಳ್ವುದು ದಾತಾ।
ಸುವಿಲಾಸದಿಂದೀರ್ವರವಿರತ ಸುಖಿಸುವ ।
ರವರ ಪಾಲಿಸುವಂಥ। ವಿಮಲಸ್ವಾಂತ ॥ಪಲ್ಲ॥

ವಿಮಲೆ ಕಮಲೆ ಭೂರಮಣನ ಕಣ್ಮುಂದೆ ।
ಮಮತೆಯಿಂದಿರುತಿರ್ಪೆ। ಸರ್ವಕೆ ಬರ್ಪೆ।
ರಮೆಯೆ ನಿನ್ನದು ಬಹು ಭ್ರಮೆಯೆ ಲೋಕಾಳಿಯ
ಸಮಯವು ನಿನ್ನಿಂದೆ । ನಾನು ಮುಂದೆ ॥

ಗಮಿಸುವೆ ಶ್ರೀಯೆ ದಿಕ್ಸಮವಾಯದೊಳಗರೆ
ನಿಮಿಷವು ನಿಲ್ಲದಲೆ । ತಿರುಗುವೆ ಮೇಲೆ ॥೧॥

ಮನುಜಪಾತುಲಗುಣಮಣಿಯನು ಕಟ್ಟಿಕೊಂ।
ಡನಿಲವೇಗದಿ ಸಾರಿ । ಬೆಳಗನು ಬೀರಿ ॥
ಬಿನದಿಪೆ ಕೀರ್ತಿಯನವು ಬಂದ ವಿದ್ವ।
ಜ್ಜನವಾನಂದಿಸಲು । ನಾ ನೋಡಲು ।
ಘನವಾಗಿ ಕೋಶಸದನದೊಳಿರ್ಪೆನು ದಿನ
ದಿನಕೆ ಪೆಚ್ಚಾಗುವೆನು । ನಚ್ಚಿಹೆ ನಾನು ॥೨॥

ಶ್ರೀಕರ ಹಸ್ತವ ಸೋಕಲು ನೋಡಲು ।
ನಾ ಕಳೆಯೇರುವೆನು । ತೋರುವೆನು ॥
ನಾಕಾದಿ ಪಾತಾಳ ಲೋಕವನನುದಿನ
ಬೇಕೆಂದು ತಿರುಗುವೆನು । ಬೇಸರೆನು ।
ಶ್ರೀಕಂಠ ಸಿದ್ಧೇಶ ತಾ ಕಡೆಗೀರ್ವರ
ಸಾಕುವ ದೊರೆಯೆಂದು । ಪೇಳಿದನಂದು ॥೩॥

ಸ್ತೋತ್ರಪದಗಳು

೭೪

ರಾಗ-ಶಂಕರಾಭರಣ

ತೋರು ಗುರುಸಿದ್ಧೇಶ ವೀರಮಾಹೇಶ ಸುಖ
ಸಾರ ಶಿವಲಿಂಗರುದ್ರೇಂದ್ರಗಿಷ್ಟವನು ॥ಪಲ್ಲ॥

ಪರಮ ಪಾವನ ಪುಣ್ಯಚರಿತ ದಯಾರಸ।
ಭರಿತ ಭವ್ಯಾಂಗ ಸದ್ಭಕ್ತಾಂತರಂಗ ॥
ವಿರತಿವೈಭವದಿ ನಿರ್ಜರಪದವನು ನಿರಾ
ಕರಿಸಿದ ನಿತ್ಯ ನಿರೀಹ ನಿರಂಜನ ॥೧॥

ಭೂನುತ ಮಹಿಮ ನಿಧಾನ ನಿರಾಮಯ।
ದೀನರಕ್ಷಣ ದಿವಸೇನ ಸಂಕಾಶ॥

ಸ್ವಾನುಭಾವಾರ್ಥ ಸುಜ್ಞಾನದ ಭವಭಯ
ಕಾನನದಾವ ಮಾನಂದನ ವಿಜಯ ॥೨॥

ಚರಮೂರ್ತಿತ್ವವನಾಂತು ಚರಿಸಿದ ಸಿದ್ಧೇ
ಶ್ವರನೆ ಕಿತ್ತೂರ ನಾಡೆರೆಯರಿಗೊಲಿದು॥
ತರಣಿ ಸುಧಾಕರರಿರುವ ಪರ್ಯಂತಮಾ।
ಪುರದಿ ಚೌಕಿಯ ಮಠದಿ ಪೊರೆಯಲು ನೆಲಸಿದ ॥೩॥

೭೫

ರಾಗ-ಕನ್ನಡ ಕಾಂಬೋದಿ
ಗುರುವರ ದುರುದುಂಡೀಶ್ವರ ಕರುಣಾ
ಕರ ಪರಿಪಾಹಿ ಸದಾ ।
ಪರಿವೃಢ ವರ ಶಿವಲಿಂಗರುದ್ರ ಭೂ
ವರ ಕಾಮದ ಸುರಭೂಜ ವಿನೋದ ॥ಪಲ್ಲ॥

ಅವಿರಳ ತೇಜಃಪ್ರವರ ಜಗನ್ಮಯ।
ಭವ ಭೂಧರ ಶಂಬ
ಶಿವಲೀಲಾವಿಗ್ರಹ ಶಿವಭಕ್ತ
ಸ್ತವ ಲಸದವಲಂಬ ॥
ಶಿವಕವಿತಾ ವಾಗುತ್ಸವ ಸುಗುಣೋ
ದ್ಭವ ಸುನಿರಾಲಂಬ।
ಧವಲಸ್ಮಿತವದನಾಬ್ಜ ವರದ ಶಾಂ
ಭವ ಶಂಕರ ಶಾಶ್ವತ ಫಲದಾಯಕ ॥೧॥

ಪರತರಪಾವನ ಚರಿತ ಪರಾತ್ಪರ।
ಸುರುಚಿ ಭವ್ಯಗಾತ್ರ
ಸುರನತಪದ ಸರಸೀರುಹ ಸುಜನೋ
ತ್ಕರ ಸನ್ನುತಿ ಪಾತ್ರ॥
ಅರಿಗಜ ಕಂಠೀರವ ದುರ್ಮಲ ಕುಲ
ಹರ ವಿಶಾಲನೇತ್ರ।
ಶರಣ ದುರಿತ ಸಂಹರಣ ಶಿವಾಕ್ಷಾ
ಭರಣ ಸುನಿಷ್ಠಾಚರಣ ನಿರಾಮಯ ॥೨॥

ಭಸಿತವಿಭೂಷಿತ ಫಾಲ ಶ್ರೀಕರ ।
ರಸಿಕ ಜನೋಲ್ಲಾಸಾ ।
ವಿಷಯಾರಣ್ಯದವಾನಲ ವಿಷ್ಟಪ।
ವಿಸರ ಪೂತ ಲೀಲ॥
ಅಸಮಾರ್ಚಕ ಹೃತ್ಕುಶಜದಿವಾಕರ
ಕುಶಲಾರ್ಥದ ಶೀಲ।
ಋಷಿಪುರ ಸಿದ್ಧೇಶ್ವರ ಮಹಿಮಾರ್ಣವ
ಶಶಿಧರಸಮ ಶಾಂತರಸಾನಂದ ॥೩॥

೭೬

ರಾಗ-ಶಂಕರಾಭರಣ

ಬಸವಲಿಂಗಾರ್ಯ ಪಾಲಿಸು ಭಕ್ತಹೃದಯಸಾ
ರಸ ಸೂರ್ಯ ಶಿವಲಿಂಗರುದ್ರ ಭೂವರನಂ ॥ಪಲ್ಲ॥

ಪರಮಾನುಭವ ರಹಸ್ಯಾರ್ಥದ ಸಾರವ
ಪರಿವಿಡಿಯಿಂ ಚರ ವಿಸರಕಾದರದಿ ॥
ಕರತಳಾಮಲಕದೋಲ್ ಕರುಣಿಸಿದಿರದರಿಂದ
ಕರೆದರಾದಿಯೊಳು ಟೀಕಿನ ಗಣರೆಂದು ॥೧॥

ಕ್ಷುದ್ರೋಪದ್ರವವ ವಿದ್ರಾವಣಗೆಯ್ವ ಶ್ರೀ
ರುದ್ರದೃಗ್ಜಾತಯೂಥವ ತಾಳ್ದರಿಂದ ॥
ಭದ್ರ ರುದ್ರಾಕ್ಷಾಖ್ಯಮುದ್ರಮಾದುದು ಜಗದಿ
ಚಿದ್ರೂಪ ಕರುಣಾ ಸಮುದ್ರ ಶಾಶ್ವತ ಮಹಿಮ ॥೨॥

ಬಸವೇಶನೋಲ್ ಭಕ್ತಿರಸವ ಪಸರಿಪ ಮಲ್ಲ
ರಸೆಯಾಣ್ಮಗೊಲಿದಂಘ್ರಿವಶವಾಗಲರಿದು ॥
ಬಸವಪುರಾಣವನಸಮನೋದಿಸಲು ಬೋ
ಧಿಸಿದಂತೆ ಮಾಡಿಸಿ ಜಸವಿತ್ತ ದೇವ ॥೩॥

ವಿರತಿವೈಭವದಿ ಸಂಚರಿಸಿ ಗಣಾಳಿಯ
ಮೆರಸಿವೆರಸಿ ದೇಶಾಂತರಗೆಯ್ದು ಬರಲು ॥
ಪರನಿಂ ಘಟಿತಮಾದ ಪರಮಾಪಾಯವ ಕಂಡು ।
ಗಿರಿಶಪುರವರವ ಸಾರುವೆನೆನಲಭವ ॥೪॥

ಕರಜಾತರಾರೆಂದು ಹರಭಕ್ತಮಾಹೇಶ
ರಿರದೆ ನವ ಭೂವಲ್ಲಿಪುರದ ಮಠದಿ ಕೇಳೆ ||
ಕರೆದು ಕರವಿಡಿದಿವರೆಂದರುಹಿ ಸಂಭ್ರಮದಿಂದ
ಗುರುಸಿದ್ಧೇಶ್ವರನೊಡವೆರೆದ ಗಣೇಂದ್ರ||೫||

೭೭

ರಾಗ-ಕಲ್ಯಾಣಿ

ಪಾಲಿಸು ವೀರೇಶ| ಪಾವನಕೋಶ||
ಶ್ರೀಲಾಶ್ರಿತಜನ ಪೋಷ||
ಪಾಲಿಸು ಪರಮದಯಾಲಯ ಶಿವಲಿಂಗ
ಲೋಲ ಶ್ರೀರುದ್ರಭೂಪಾಲನನನಿಶಂ ||ಪಲ್ಲ||

ಲೀಲೆಯಿಂ ಪೂಗಾರನೋಲ್ ಮಖ
ಶಾಲೆಯೆಂಬುವ ಪೂಬನದಿ ಸುಮ
ಜಾಲದೊಳಗಾರ್ಯೆದು ಕೊಯ್ದ ವಿ
ಶಾಲ ವಿಕ್ರಮ ವಿಜಯ ದೇವಪ ||ಅನುಪಲ್ಲ||

ಅಕ್ಷಯಾನತ ಜನಪಕ್ಷ ವಿಶ್ವಾಧ್ಯಕ್ಷ
ಸುಕ್ಷೇಮಕರನೆಂದು ತಿಳಿದು ತಾ ವಿ|
ಪಕ್ಷ ಭಾವದಿ ಬಂದು | ಯಜ್ಞಕೆ ತಾನು |
ದೀಕ್ಷೆಯಗೊಂಡು ಮುಂದೀಕ್ಷಿಸದೆ ಗರ್ವದಿ |
ದಕ್ಷನೆಸಗಲ್ಕರಿದು ಹರ ನಿಟಿ|
ಲೇಕ್ಷಣ ಜ್ವಾಲಾಕೃತಿಯೆ ಪ್ರ|
ತ್ಯಕ್ಷಮವನ ಶಿರಸ್ಸರೋಜವ |
ನಾಕ್ಷಣದಿ ಖಂಡಿಸಿದ ಬಲಯುತ ||೧||

ಖಗಕೋಟ ಸಂಕಾಶನಗಲದಷ್ಟಾಂಗದೊಳ್ |
ಮಿಗೆ ಸೊಗಸಿಂ ತಾಳ್ದ| ಕಣ್ಣೊಳು ಝಗ|
ಝುಗಿಸುತ ಸತಿ ಬಾಳ್ದ| ಈರ್ವರು ನಾಡೆ |
ಪಗೆಯ ಬಗಲೊಳ್ ಕುಂಡದೊಳಗಿರ್ಪುದ ಕಂಡು |
ಭಗನ ನೇತ್ರೋತ್ಪಲವ ಜ್ವಾಲೆಯ
ಪೊಗರೊಗುವ ನಾಲಗೆಯ ಕೆಂದಳಿ |

ರುಗಳನುಗುರಿಂ ಚಿವುಟಿ ಮಿಕ್ಕಿನ
ಮುಗುಳ ನೋಡದೆ ಮುಂದೆ ಗಮಿಸಿದ ||೨||

ಪೂಷ ಬಾಯ್ದೆರೆದತಿ ಘೋಷಿಸುವದನು ಕಂ|
ಡಾ ಸಮಯದಿ ವೀರ | ರೋಷದಿ ಪಲ್ಗ|
ಳೈಸನುದಿರ್ಚಲು ಧೀರ | ಕುಂದಗಳೆಂದು
ಭಾಷೆಯನಾಸೆಯೆಂಬಾ ಸಂಪಿಗೆಯ ಕೊಯ್ದ |
ಶ್ರೀ ಸರ್ಮನು ತಾನು ಮಲ್ಲಮ
ಹೀಶವಂಶ ವಿಶೇಷ ಭೇಶವಿ
ನೇಶರಿಹ ಪರ್ಯಂತ ಬೆಳವಡೆ
ವಾಸನಹ ಸಿದ್ಧೇಶ ವೇಷ ||೩||

೭೮

ರಾಗ-ಭೈರವಿ

ಶ್ರೀ ಶಿವಲಿಂಗರುದ್ರೇಂದ್ರ ಸದ್ಗುಣಸಾಂದ್ರ|
ಪೋಷಿಸು ಬಿಡದೆನ್ನನವರತ|
ಆಶಾಂತಕೀರ್ತಿವಿಶೇಷ ವಿದ್ವಜ್ಜನ |
ತೋಷ ಶಿವಾಂಘ್ರಿಕುಶೇಶಯಾರ್ಚಕ ರತ್ನ ||ಪಲ್ಲ||

ಮಾರಸುಂದರ ಸುಕುಮಾರ ಶೃಂಗಾರ ಶ|
ರೀರ ಗಭೀರ ಮಹೋದಾರ|
ಸಾರಕೃಪಾರಸಪೂರ ತತ್ವಾರ್ಥ ವಿ
ಚಾರ ತತ್ವದ ಸೂರಿವಾರ ಮಂದಾರ ||೧||

ಶಿವಸಮಯಾಂಬುಧಿ ಕುಮುದಬಾಂಧವ ಶ್ರಿತ
ಸಮುದಯಾಭೀಷ್ಟದ ಶಿವವೇಷ |
ಕಮನೀಯ ಸಪ್ತಾಂಗ ವಿಮಲಸಭಾಧಿಪ
ನಮದ ಮನುಜ ಮಣಿ ಸಮನೀವ ಭೂಮೀಶ ||೨||

ಸುಂದರ ಮಲ್ಲೇಂದ್ರ ನಂಧನ ನಿನ್ನಯ|
ಕಂದನ ತೆರದಿಂದಲೀಕ್ಷಿಪುದು |
ಇಂದುಶೇಖರ ಮುನಿವೃಂದ ಸಿದ್ಧಪ ತನ್ನ |
ಮಂದಿರವೆಂದದರಂದವ ತಿಳಿಸಿಹ ||೩||

೭೯

ಪಾಲಿಪುದು ಮಲ್ಲೇಂದ್ರ ಪಾವನಚರಿತ್ರ ಭೂ
ಪಾಲ ಶಿವಲಿಂಗರುದ್ರೇಂದ್ರನಂ ಬಿಡದೆ ||ಪಲ್ಲ||

ಸಂತಾನ ಸತ್ಯ ಸಂಪತ್ಸರಸ್ವತಿ ಸಾಧು
ಸಂತತಿ ಸಮಾಗಮಗಳೆಂಬಿವೈದು ||
ಸಂತತಮಿರುವುದ ತಿಳಿದಂತರಿಸದೆ ಬರದೆ
ನಂತೆಸಗು ಶಾಂತಿಯಿಂ ಕಾಂತಿಯಿಂ ರಾಜೇಂದ್ರ ||೧||

ದಾನಿ ದಯಾಳು ಧರ್ಮಜ್ಞ ರೂಪವನಾಂತ
ಮಾನವ ಸರಸಕವಿಗಳೆಂಬೈವರು ||
ಭೂನುತರ್ ನಿರ್ಗುಣವನಾನಲಿರ್ಪರ ನಡುವೆ
ಧ್ಯಾನಮೂರ್ತಿಯು ಸರ್ವದಾನಂದ ಫಲದ ||೨||

ಪುಣ್ಯಾನ್ವಿತ ಪ್ರಭುವರೇಣ್ಯನಾದದರಿಂದ
ಪುಣ್ಯದಿ ಪೆಸರ್ವಡೆದಿ ವಿತರಣವಿಷಯದಿ ||
ಗಣ್ಯವಿಲ್ಲದೆ ಕೊಟ್ಟು ಕಿತ್ತೂರಿಗೈದಿ ಕಾ
ರುಣ್ಯದಿಂ ಸಿದ್ಧೇಶನೊಳಗಾಗಿ ನಿಂದಿ ||೩||

೮೦

ರಾಗ-ಭೈರವೀ

ಶಿವಲಿಂಗರುದ್ರಭೂವರ।ಉತ್ಸವವೆಮಗೀ[ಗೆ] ನಿರಂತರ ||ಪಲ್ಲ||

ನವಮಣಿಸೃಗ್ರಂಜಿತ ಸತ್ಕಂಧರ।
ನವ ಕವಿತಾಗೀರ್ವರ।
ಪವಿಧರವಿಭವ ವಿಭವ ವಿರಾಜಿತ ಶ್ರೀಕರ ।
ಧವಲಸ್ಮಿತಮುಖ ಚಂದಿರ ||೧||

ವಿತರಣದಲಿ ಸುರಭೂಜವ ಮರೆಸುವ
ಮತಿಯುತ ಮಂಗಳಕರ ।
ಕೃತಿತತಿ ನುತ ಪ್ರತಿಭಟರಹಿತೋತ್ಪಲ
ಹಿತಭವ ಪೂಜಾಧುರಂಧರ ||೨||

ಗುರುಸಿದ್ಧೇಶ್ವರ ಚರಣಾಂಬುಜ ಮಧು ।
ಕರ ಮನ್ಮಥ ಸುಂದರ ॥
ಪರಮತಖಂಡನ ಹರಮತಮಂಡನ
ನಿರುಪಮ ಪರಿವೃಢಶೇಖರ ॥೩॥

೮೧

ತೋಷಿಸು ಬಿಡದೊಲಿದು ॥ ಶಿವಲಿಂಗರುದ್ರೇಂದ್ರ॥
ಶ್ರೀಶಜಸುಂದರ ।ವೇಷ ಮಹೇಶ್ವರ ॥ಪಲ್ಲ॥

ಶಿವಮತ ಸಿದ್ಧಾಂತವನು ಮಾಡುವ ನೆವ
ಕವತರಿಸಿದ ಗಣಪ್ರವರ ರಾಜೇಂದ್ರ ॥೧॥

ಲಕ್ಷ ಕುಟುಂಬವ ರಕ್ಷಿಸುವ ಪ್ರ
ತ್ಯಕ್ಷ ಶಂಕರನೆಂದಪೇಕ್ಷಿಸಿ ನುತಿಪೆವು ॥೨॥

ಗುರುಮುಖ ಲಸದಷ್ಟಾವರಣವಿಭೂಷಣ
ನಿರುತ ಪಂಚಾಚಾರ ಸ್ಥಿರಗೊಳಿಸುವ ॥೩॥

ತುಂಗಪರಾಕ್ರಮ ಸಂಗರವಿಜಯ ಮ
ತಂಗಜಮುಖ ಚತುರಂಗಬಲಾಧಿಪ ॥೪॥

ಗುರುಸಿದ್ಧೇಶ್ವರ ಚರಣಸರೋರುಹ
ಸುರಭಿಕುಸುಮಲಿಟ್ಟುರವರ ವೈಭವ ॥೫॥

೮೨

ರಾಗ-ಪುನ್ನಾಗ ತೋಡಿ

ಶಿವಲಿಂಗರುದ್ರಭೂಪಾಲ । ಶ್ರಿತ
ನಿವಹ ಕಾಮಿತ ಕಲ್ಪಶಾಲ ॥ಪಲ್ಲ॥

ಸೂರನಂ ಕೋಕವಾರವು ಸುಧಾರೋಚಿಯಂ
ಕೈರವವನವು ಮಯೂರಮಭ್ರವನು ॥
ಹಾರೈಸಿದಂತೆ ಕಿತ್ತೂರಿಗೆ ಬರಲಿಷ್ಟ
ಪೂರಣಮಾಯ್ತು ಪಾದಾರವಿಂದವ ನೋಡೆ ॥೧॥

ದೀನಗೆ ನಿಕ್ಷೇಪ ಮಾನಿಗೆ ರಾಜಸ ।
ನ್ಮಾನಮಂಧಕಗೆ ಕಣ್ ತಾನೈದಿದಂತೆ ॥
ಭೇನ ಸಮಾನ ದಿವ್ಯಾನನವನು ನೋಡ
ಲಾನಂದಮೆಂಬ ನದೀನಮುಕ್ಕಿದುದು ॥೨॥

ದೇಶದೊಳಿರ್ಪ ಮಾಹೇಶ ಭಕ್ತಾಳಿ ಸ
ದಾಶಿವಾರ್ಚನೆಯ ತೋಷದಿ ಮಾಡಲದರಿಂ ॥
ಕ್ಲೇಶ ಕಾರಣ ಭವಪಾಶವ ಪರಿದು ಸಿ
ದ್ಧೇಶ ಪದವ ಸಾರ್ವ ಶಾಸನಗೊಳಿಸಿದ ॥೩॥

೮೩

ರಾಗ-ದೇಸಿ

ಶಿವಲಿಂಗರುದ್ರೇಂದ್ರ ಶಿವಮತಾಂಬುಧಿಚಂದ್ರ।
ಕುವರನಂ ನೋಡಿ ಕುಶಲವನಾಲಿಸುವದು ॥ಪಲ್ಲ॥

ಭೂತಳದೊಳ್ ವಾಪಿ ಕೂಪಗಳೊಳು ನದಿ
ವ್ರಾತದೊಳ್ ಪೂತಾಂಬುವಿರಲಪೇಕ್ಷಿಸದೆ ।
ಚಾತಕ ನೂತ್ನ ಜೀಮೂತ ಬಿಂದುಗಳಿಂದ
ತಾ ತಣಿವಂತೆ ವಿಖ್ಯಾತರಾಜೇಂದ್ರ ॥೧॥

ಕಮಲಪರಾಗವ ಮಮತೆಯಿಂದುಂಡುಂಡು
ಗಮಿಸುವ ಮರಳಿ ತಾ ಭ್ರಮಿಸುವ ಭ್ರಮರವು।
ರಮಣೀಯ ಚಂಪಕ ಸುಮವ ಕಂಡೆರಗದೋಲ್
ಕ್ಷಮೆಯಾಣ್ಮ ಪದಪದ್ಮವೆಮಗೆ ಗತಿಮತಿಯೆಂಬೆ ॥೨॥

ವಾಸವವಿಭವ ವಿಲಾಸ ಕೈಲಾಸನಿ
ವಾಸ ಶ್ರೀ ಮಲ್ಲಮಹೀಶ ಪೋಷಿಸಿದಂತೆ ।
ದೇಶದೇಶದಿ ಕೀರ್ತಿ ಘೋಷಿಸುವದು ಸುಖ
ಕೋಸ ಸಿದ್ಧೇಶ ಕರುಣಾಸಮನ್ವಿತನಾದ ॥೩॥

೮೪

ರಾಗ-ಕನ್ನಡ ಕಾಂಬೋದಿ

ವೀರಭದ್ರ ವೀರಾಧಿಪ ಸಲಹು ದಯಾರಸ ಸುಸಮುದ್ರ॥
ಧೀರ ಮಲ್ಲಭೂರಮಣನ ದುರ್ಘಟ ದೂರಮಾಡಿ ಪದ
ತೋರಿದ ರುದ್ರ ॥ಪಲ್ಲ॥

ದೇವಾವಳಿ ಸಂಸೇವಿತ ಪದರಾ
ಜೀವಯುಗಳ ಹರನ।
ಭಾವವನರಿಯದ ಗಾವಿಲ ದಕ್ಷ ಕು
ಭಾವದಿ ಶಂಕರನ।
ನಾ ವಧಿಸುವೆನೆಂದಾ ವಿಧಿ ಯಾಗವ
ನಾವರಿಸಲು ಪರನ।
ಪಾವಕದೃಗ್ಜ್ವಲಾವಯವಾನುತ
ಜಾವದೊಳವನ ಸವನವನು ಸವರಿದ ॥೧॥

ದುರುಳ ಹಿರಣ್ಯಕಶಿಪು ದಾನವನನು
ಮುರಿದೆನೆಂಬ ಭರದಿ।
ನರಸಿಂಹಾಕೃತಿಯಲಿ ಲೋಕವನಪ
ಹರಿಸಲ್ಕಾತುರದಿ।
ಮೊರೆವುತಿರಲು ಸರ್ವರು ಮೊರೆಯಿಡಲಾ
ಗಿರದತಿ ಕಾತರದಿ।
ಶರಭಾಕಾರವ ಧರಿಸಿ ಚರಿಸಿ ಸಂ
ಹರಿಸಿ ಕೀರ್ತಿಮುಖವಾಂತ ನಿರಂತರ ॥೨॥

ಭೂಸತಿವದನ ಕುಶೇಶಯ ಭಕ್ತಿಯ
ಕೋಶದ ಕಿತ್ತೂರ।
ದೇಶವನತಿ ಸಂತೋಷದಿ ಪೊರೆವ ಮ
ಹೀಶವರ್ಯವಾರ।
ವಾಸವವಿಭವ ವಿಲಾಸದೊಳಿರಲೆಂ
ಬಾಶೆಯೊಳಾ ವೀರ।
ಶ್ರೀ ಸಮರ್ಥ ಚಿತ್ಕೋಶ ಬೆಳವಡಿ
ವಾಸನಾದ ಸಿದ್ಧೇಶ ಸುವೇಷ ॥೩॥

೮೫

ರಾಗ-ಭೈರವಿ

ಆರತಿ ಬೆಳಗುವೆನು । ಶ್ರೀ ಗುರುವಿಗೆ
ಆರತಿ ಬೆಳಗುವೆನು।
ಆರರಿಗಳ ಗೆದ್ದ ವೀರಮಾಹೇಶಗೆ ||ಪಲ್ಲ||

ಪರತರ ಪಾವನ ಚರಿತ ಚಿನ್ಮಾತ್ರಗೆ।
ವಿರತಿ ಸುಖೈಕ ವಿರಾಜಿತ ಗಾತ್ರಗೆ ||೧||

ತತ್ವಮಸೀತಿ ಪದಾರ್ಥವಿಚಾರಗೆ ।
ಸತ್ವಗುಣಾಂಕಿತ ಸಕಲಾಧಾರಗೆ ||೨||

ದಿಕ್ತಟಾಯತಕೀರ್ತಿಮಯಗೆ ಮಹೇಶಗೆ ।
ಮುಕ್ತಿದಾಯಕ ಶ್ರೀ ಸಿದ್ಧಲಿಂಗೇಶಗೆ ||೩||

೮೬

ರಾಗ-ಪೂರ್ವಿ

ಸಾಂಬ ಪಾಲಯ।ಲೀಲಯಾಶು ಶಿವ ।
ಶಂಬರಾರಿ ಹರ ಶರಣಾಗತರಕ್ಷಕ ||ಪಲ್ಲ||

ಶೌನಕಾದಿ ಮುನಿ ಮಾನಸರಂಜನ ।
ದೀನಾವನ ದೀರ್ಘದಯಾಕರ ಸುಂದರ ||೧||

ಶರಧ್ವನಗೋತ್ರ ಶಮನ ಮದವನದವ।
ಗರಗಲ ಪರತರ ಪಾವನಚರಿತ ||೨||

ಯಮಿಪುರವರ ಸಿದ್ಧೇಶ್ವರ ಶಂಕರ।
ನಮದಮರದ್ರುಮ ಹಿಮಕರಶೇಖರ ||೩||

೮೭

ರಾಗ-ಪೂರ್ವಿ

ಪಾಲಿಸೆನ್ನ ಭೂಪಾಲಶೇಖರ।
ಬಾಲಕನೋಲ್ ಶಿವಲಿಂಗರುದ್ರನೃಪ ||ಪಲ್ಲ||

ಶಿವಮತಸಾಗರ ವರ್ಧನ ಸಿತಕರ।
ಕವಿ ವಿಸರಾದರ ಸುಂದರ ಶ್ರೀಕರ ॥೧॥

ಮಲಯಾಚಲ ತನ್ನೊಳು ಪುಟ್ಟಿದ ಮರ
ಗಳ ಚಂದನದ್ರುಮಗಳ ಮಾಡಿದ ತೆರ ॥೨॥

ಗುರುಸಿದ್ಧೇಶ್ವರ ಪೂಜಾಸಂಭ್ರಮ।
ಧರಣೀಶ್ವರ ಶುಭಕಾರ್ಯಧುರಂಧರ ॥೩॥

೮೮

ರಾಗ - ಕಾಂಬೋದಿ

ಮಾತೆ ರುದ್ರಾಂಬೆ ಪಾಲಿಸು ಮನೋರಥವಿತ್ತು ।
ಪ್ರೀತಿಯಿಂ ಶಿವಲಿಂಗರುದ್ರಭೂವರನಂ ॥ಪಲ್ಲ॥

ಸೋಮವಾರವ್ರತದಿ ಸೀಮಂತಿನೀದೇವಿ
ಪ್ರೇಮದಿಂ ಚಂದ್ರಾಂಗದನ ಬರಿಸಿದಂತೆ।
ಶ್ರೀಮಲ್ಲಭೂಮೀಂದ್ರನಂ ತಪಿಸಿ ಬರಿಸಿದಿ ಮ
ಹಾಮಹಿಮೆ ಮಂಗಲಪ್ರದೆ ಮಹಾದೇವಿ ॥೧॥

ಸುರರಕ್ಷಣಕೆ ಸುಧಾಕರಮೌಲಿಯಗಜೆಯೊಳ್
ವೆರಸಿ ಸುಕುಮಾರನಂ ಪಡೆದ ತೆರದಿ ।
ಕರುಣಾಬ್ಧಿ ಮಲ್ಲಭೂವರನ ಯೋಗದಿಂದ ಸುಂ
ದರ ಸುತನ ಸುಜನರಕ್ಷಣಕೆಂದು ಪಡೆದಿ ॥೨॥

ಕಲುಷಾಪಹಾರೀ ಸರಿತ್ತೀರದೊಳು ನೆಲಸಿ ।
ಸಲೆ ಸಂತಸಂಗೊಳಿಪೆ ಸಕಲಾರ್ಥವ ॥
ಬಲವತ್ಕುವರ ಭಾಗ್ಯನಿಲಯ ಸಿದ್ಧೇಶಪದ
ಜಲಜಾರ್ಚಕಗೆ ಮಹತ್ಫಲವ ಭುಜಬಲವ ॥೩॥

೮೯

ರಾಗ-ಸಾವೇರಿ

ನೀಲಾಂಬೆ ಕರುಣಾರಸಾಲಂಬೆ ಸಲಹು ಸ
ಲ್ಲೀಲೆಯಿಂ ಶಿವಲಿಂಗರುದ್ರ ಭೂವರನಂ ॥ಪಲ್ಲ॥

ಗಿರಿಜೆಯ ಹಿಮನಗವರ ಮೇನಕೆಯರ್ಪಡೆದು ।
ಪರಮ ವೈಭವದಿ ಶಂಕರಗಿತ್ತ ತೆರದಿ ।
ಸರಸ ಸಲ್ಲಕ್ಷಣೋತ್ಕರೆ ರುದ್ರಾಂಬೆಯ ಪೆತ್ತು
ಧರಣೇಂದ್ರ ಮಲ್ಲೇಂದ್ರಗಿತ್ತು ಕೀರ್ತಿಯನಾಂತ ॥೧॥

ವೀರಶೈವ ಕ್ರಿಯಾಚಾರವನು ಸಾರವನು
ಚಾರು ಗುರುಲಿಂಗಜಂಗಮ ಮುಖಾಷ್ಟವನು ।
ಪೂರರಿದು ಮಹಿಮ ಗಣವಾರ ಕಾಮಿತಕಲ್ಪ
ಭೂರುಹಳೆನಿಸಿ ಕಿತ್ತೂರೊಳ್ ಪೆಸರ್ವಡೆದ ॥೨॥

ನೀಲಾಂಬಿಕಾಭಿದಕೆ ಪೋಲಿಸಲ್ ಸಾಮ್ಯ ಚರ
ಜಾಲ ಜಗತಿಯೊಳು ಬಣ್ಣಿಪರು ಬಲ್ಲವರು ।
ಆಲಯದೊಳು ಭವದ್ಬಾಲಕರೋಲೆನ್ನ
ಪಾಲಿಸಿದಿ ಮೇಲೆ ಸಿದ್ಧೇಶಪದದೊಳು ನಿಂದ ॥೩॥

೯೦

ರಾಗ-ಶಂಕರಾಭರಣ

ಶಿವಲಿಂಗರುದ್ರೇಂದ್ರನವಿರತ ಕೈವಿಡಿ
ದವರ್ಧನ್ಯರಹರವನಿಯೊಳು ॥ಪಲ್ಲ॥

ರವಿಯ ಮಯೂಖವು ಭುವನದೆಲ್ಲೆಡೆಯೊಳ್
ತವೆ ತೀವಿ ಬೆಳಗಿದ ತೆರದಿ ।
ಕುವರರಾಗಿರ್ದವರ ಕುವರರೊಲ್ ಮಾಡಿ ನಾ
ಡವರನಾರೈವಿಯಾದರದಿ ॥೧॥

ಕ್ಷಮೆಯೊಳ್ ಮಹಾಶ್ರಯಮಮರೆ ದರಿದ್ರತೆ
ಗಮಿಸುವದರಿದೇನಾತುರದಿ ।
ಕಮಲಾಜ ಕೋಮಲ ಸುಮಗಳ ಪಿಡಿಯಲಾ
ಕ್ರಮದಿ ಕಣೆಗಳಾದೋಲ್ ಭರದಿ ॥೨॥

ಸಿದ್ಧೇಶನಾಮವು ಹೃದ್ದೇಶಮಧ್ಯದೊ
ಳಿದ್ದವಗೆಲ್ಲಿಯ ದುರಿತ ।
ಸಿದ್ಧಾಂತಪಾದದಿ ಬಿದ್ದವರ್ ಶ್ರಮವನು
ಗೆದ್ದವರವರ್ ಸುಖಭರಿತ ॥೩॥

೯೧

ರಾಗ-ತಮ್ಮಿಚ್ಚೆ

ಪಾಲಿಸುವದು ಶಿವಲಿಂಗೇಶ್ವರ ಕರು
ಣಾಲವಾಲ ದುರದುಂಡೀಶ್ವರ ಶ್ರಿತ
ಜಾಲ ಪಾಲ ಶಿವಲಿಂಗರುದ್ರ ಭೂಪಾಲನ
ನನವರತಂ ||ಪಲ್ಲ||

ಶ್ರೀಶಜ ವಿಜಯ ಮಹೇಶ ಪರಾಮೃತ
ಕೋಶಶುಭದ ಚಿದ್ದೇಶ ನಿವೇಶ ನಿ
ಶೇಶ ವಿಭೂಷ ಸುವೇಷ ಸುಧಾಸಮಭಾಷ
ಮಂದಹಾಸ।
ದೋಷತಿಮಿರ ದಿವಸೇಶ ಸದಾ ಸಂ
ತೋಷ ಚಿತ್ತ ಕರುಣಾಸಮುದ್ರ ಭವ
ಪಾಶನಾಶ ವಿಜಿತಾಶನ ಮಜ್ಜನ ಪೋಷ
ದೇಶಿಕೇಂದ್ರ ||೧||

ಶಿವನಾಮವು ಮಂಗಳಕರ ಲಿಂಗಾ
ಖ್ಯವು ಲಯಗಮನ ವರ್ಜಿತಮಪ್ಪುವ
ದವಿರತಮೀಶ್ವರ ನಾಮವದಿಷ್ಟಾರ್ಥವ
ಕೈಸಾರ್ಚುವದು ।
ಕುವಲಯದೊಳಗೆ ಷಡಕ್ಷರಮನುವೆಂ
ದವಿಕಲ ಭಾವದಿ ಪಠಿಸುವ ಭಾವಿಕ
ನಿವಹ ನಿಜಾನಂದೈಕ್ಯಪದವ ಪಡೆವರು
ಪೆಸರಿಂ ದೇವಾ ||೨||

ಭವದನುಪಮ ಪಾದಾಬ್ಜಾನುಗ್ರಹ
ಮವಯವವಾಂತವತರಿಸಿದ ಕರುಣಾ
ಭುವನಧಿ ರಾಜಪ್ರವರ ಕಾಮಕಲ್ಪದ್ರುಮ
ನೆಂದೆನಿಪ।
ಭುವನಸ್ತುತ ಮಹಿಮಾವಲಂಬ ಶಾಂ
ಭವ ಯೋಗೀಶ್ವರ ಲಸದಿಷ್ಟವನತಿ
ಜವದಿಂ ಕೊಡುವುದರಿದೆ ಸಿದ್ಧೇಶ್ವರನೆಂದು
ಪ್ರಾರ್ಥಿಸುವೆನು ||೩||

೯೨

ರಾಗ-ಪುನ್ನಾಗ ತೋಡಿ

ವೀರಭದ್ರಂ ಭಜೇ । ವಿಬುಧ ವಿನುತಂ ।

ಧೀರ ಶಿವಲಿಂಗರುದ್ರೇಂದ್ರೇಷ್ಟದೇವಪಂ ||ಪಲ್ಲ||

ಸೂರಕೋಟಿ ಪ್ರಭಾಪೂರಗಾತ್ರಂ ದಿವಿಜ

ವಾರ ಸೇವಿತ ಚರಣ ಸಾರಸಯುಗಂ ।

ಕ್ರೂರನರಸಿಂಹ ಮದಭೂರುಹ ಕುಠಾರಂ ಕೃ

ಪಾರಸಾಂಭೋನಿಧಿಂ ಚಾರುಶೌರ್ಯಾಧಿಪಂ ||೧||

ದಕ್ಷಸವ ಕಕ್ಷದವದಾವಾನಲಂ ತತ್ಪಕ್ಷ

ಲಕ್ಷಿತ ವಿಪಕ್ಷ ಜನಶಿಕ್ಷಮಮಲಂ ।

ಅಕ್ಷಯಮನುಪಮಂ ಮಮುಕ್ಷುವರದಂ ಗಣಾ

ಧ್ಯಕ್ಷಂ ವಿಶಾಲಫಾಲೇಕ್ಷಣಂ ಶುಭಕರಂ ||೨||

ಮಂದಾರಕುಂದರುಚಿಮಂದಹಾಸಂ ಯೋಗಿ

ವೃಂದ ಸಾನಂದ ಫಲದಮಭವಂ ।

ಸುಂದರಸಮೃದ್ಧಿ ಪದ ಮಂದಿರಂ ಮಲ್ಲೇಂದ್ರ

ನಂದನೇಚ್ಛಾಪ್ರದಂ ಸಿದ್ಧಲಿಂಗೇಶ್ವರಂ ||೩||

೯೩

ರಾಗ-ಭೈರವಿ

ಶ್ರೀ ಮಹೇಶ ಸದಾ ಪಾಲಯ ಭೋ।

ಕಾಮದ ಶಿವಲಿಂಗ ರುದ್ರಾವನಿಪಂ ||ಪಲ್ಲ||

ನೀಲಲೋಹಿತ ಮುಕ್ತಿಕೋಶ । ಶ್ರುತಿ

ಜಾಲ ವಿನುತ ವಿಜಿತಾಶಾ । ಭವ

ಮೂಲ ಕುದ್ದಾಲ ವಿಶಾಲ ವಿಲಾಸ ||೧||

ಶರದಭ್ರ ಪಾಂಡುರಗಾತ್ರ।ಶಶ

ಧರ ಭಾಸ್ಕರ ಶಿಖಿನೇತ್ರ।ಶಂ

ಶರ ಮರುದ್ಗಣ ನತಪದ ಶತಪತ್ರ ||೨||

ವಿಜಯ ವಿಶಿಖದ ವಿಶ್ವೇಶ ।ನೀ
ರಜಮಿತ್ರಕೋಟಿ ಸಂಕಾಶ । ಮನ।
ಸಿಜನಾಶ ಮಂಗಲಕೋಶ ಸಿದ್ಧೇಶ ॥೩॥*

೯೪

ಚಿಂತೆಯ ಬಿಡು ಜಗದಂತರ್ಯಾಮಿ ನಿ
ರಂತರ ಶಿವನಿರಲು । ಮನುಜ ॥ಪಲ್ಲ॥

ಗಿರಿಗಳೊಳುದಿಸಿದ ತರುಗಳಿಗೆ ನೀ
ರೆರೆದು ಸಲಹುವವರು ।
ನರರೆ! ನೋಡು ಸುಖಕರ ಸರ್ವೇಶ್ವರ
ನಿರೆ ನೀನಂಜದಿರು । ಮನುಜ ॥೧॥

ನಾರಿಕೇಳದೊಳ್ ವಾರಿಯ ತುಂಬಿದ
ರಾರು ವಿಚಾರಿಸಲು ।
ಕ್ಷೀರವ ಜನನಿಯುರೋರುಹ ಯುಗಳದಿ
ಸೇರಿಸಿರುವವ್ರೋಲು ॥ ಮನುಜ ॥೨॥

ನವಿಲಗರಿಗಳೊಳು ನವಚಿತ್ರವ ಬರೆ
ದವರ ತೋರಿಸಿಂದು ।
ಭವ ಸಿದ್ಧೇಶ್ವರನವನ ಲೀಲೆ ।
ದ್ಧವು ಶಿವಮಯವೆಂದು ।ಮನುಜ ॥೩॥

---

* ಇದರ ಮುಂದಿನ ಹಾಡಿನ ಮುದ್ರಿಕೆ ಬೇರೆ ಇರುವುದರಿಂದ ಅಡಿಯಲ್ಲಿ ಕೊಡಲಾಗಿದೆ. [ಸಂ]

ರಾಗ-ಶಂಕರಾಭರಣ

ಮರವೆಯೊಂದ ಬಿಡು ಮರುಳೆ ।
ಅರಿತಿರು ಹಗಲಿರುಳೆ ॥ಪಲ್ಲ॥

ಅರಿವಿನೊಳಗೆ ನಿಜದರಿವ ಭಾವಿಸಲು
ಸ್ಫುರಿಸಿ ತೋರುವದು ಬ್ರಹ್ಮ । ಸುಖ ಭೋಗಿಸು ತಮ್ಮ ॥೧॥

ನೋಟದೊಳಗೆ ನೋಟಾಗಿಹ ನಿನ್ನ ತ್ರಿ
ಕೂಟ ಗಿರಿಯೊಳಗೆ ನೋಡು । ಮನೋನ್ಮನಗೂಡು ॥೨॥
ಜ್ಯೋತಿಯ ಮುಟ್ಟಿದ ಕರ್ಪೂರದೋಲ್ ಗುರು
ನಾಥ ಕುಮಾರನೊಳ್ ಬೆರೆದು । ಬೆರೆದೆಂಬುದ ತೊರೆದು ॥೩॥

ಆರತಿಯ ಪದಗಳು

೯೫

ರಾಗ-ಮೋಹನ ಕಲ್ಯಾಣಿ

ಬೆಳಗಿರಾರತಿಯ ದುರದುಂಡೀಶಗೊಲಿದು ನಿ
ರ್ಮಲ ನಿಖಿಲ ನಿಗಮಾಗಮಸ್ತುತಗೆ ನಲಿದು ||ಪಲ್ಲ||

ಭುವನ ಪಾವನವ ಮಾಡುವ ನೆವದಿ ಶ್ರೀ ಸದಾ
ಶಿವ ಚಿತ್ಕಳಾರೂಪಮವನಿಯೊಳು ಬಂದು |
ಅವಯವನಾಂತು ಶಿವಲಿಂಗೇಶನಾದ ಭವ
ದವ ದವಾನಲ ದಯಾದೀರ್ಘಲೋಚನಗೆ ||೧||

ನೂರೊಂದು ಸ್ಥಲ ವಿಚಾರವನರುಹಿ ಶಿವಯೋಗಿ
ವಾರ ಮಣಿಯೆನಿಸಿ ಮಹಿಮಾಗಾರನಾಗಿ |
ಕಾರಣ್ಯದಿಂದಲರೆ ಬಾವಿ ಶೈಲದ ಮಠವೆ
ಭೂರಮ್ಯಕೈಲಾಸವೆನಿಸಿ ನೆಲಸಿದಗೆ ||೨||

ಮುರುಗಾ ಜಗದ್ಗುರುವರಾನಂದಕರ ಪುಣ್ಯ
ಚರಿತ ತತ್ಕರಜಾತ ಲೋಕವಿಖ್ಯಾತ||
ಧರಣೇಂದ್ರಚಂದ್ರ ಮಲ್ಲೇಂದ್ರ ವೈಭವದ ಶ್ರೀ
ಕರ ಸಿದ್ಧಲಿಂಗ ಭವಭಂಗ ಭಾಸ್ವರಗೆ ||೩||

೯೬

ರಾಗ-ಮೋಹನಕಲ್ಯಾಣಿ

ಮಂಗಲಂ ಶುಭ ನಿರಂಜನ ಪರಂಪರೆಗೆ ಜಯ
ಮಂಗಲಂ ಭುವನ ಗುರು ಮುರುಗೇಂದ್ರರಡಿಗೆ ||ಪಲ್ಲ||

ನಲಿದರ್ಚಿಸುವ ಭಕ್ತಮಾಹೇಶ್ವರಾವಳಿಗೆ
ಫಲಪದವನೀವ ತೋಂಟದಸಿದ್ಧಪತಿಗೆ ||
ಕಲಿಮಲಾಪಹ ಕಲುಷಹರ ಕಲಾಭಿಜ್ಞ ಚಿ
ದ್ಬಲ ನಿರಕ್ಷರ ಬೋಳಬಸವೇಂದ್ರರಡಿಗೆ ||೧||

ಪರಮಾನುಭವ ಸುಖಾರ್ಣವ ಸುಷಮ ಗುಮ್ಮಳಾ
ಪುರದ ಶ್ರೀ ಸಿದ್ಧವೀರೇಂದ್ರ ವಿಜಯರಿಗೆ ॥
ಸ್ಮರವಿಜಯ ಗೂಳೂರ ಸಿದ್ಧವೀರೇಶ ಸುಂ
ದರ ಸದ್ಗುರೂತ್ತಮರ ಚರಣಾಬ್ಜಗಳಿಗೆ ॥೨॥

ಶ್ರೀಲ ಶ್ರಿತಜನಕಲ್ಪಶಾಲ ಸನ್ನಿಷ್ಠಾನು
ಕೂಲ ತದ್ರುಚಿಕಾರ್ಯ ಗಗನದಾರ್ಯರಿಗೆ ॥
ಕಾಲಹರ ಕರುಣಾಲವಾಲ ಶಿವತತ್ವಾರ್ಥ
ಮೂಲ ಕಟ್ಟಿಗೆಹಳ್ಳಿ ಗುರುವರರ ಪದಕೆ ॥೩॥

ವೀರಮಾಹೇಶ್ವರಾಚಾರ ಸಂಸ್ಥಾಪನಾ
ಧಾರ ಮುರುಗಾ ಶಾಂತವೀರ ವಿಕ್ರಮಗೆ ।
ತಾರಕಬ್ರಹ್ಮ ಸಾಕಾರರಾದಿಮ್ಮಡಿಯ
ಧೀರ ಗುರುಸಿದ್ಧ ಪ್ರಸಿದ್ಧರಡಿಗಳಿಗೆ ॥೪॥

ಶ್ರೀದ ಸಂಗೀತಾನುಮೋದ ಸಂಭ್ರಮ ಚಿದ್ವಿ
ನೋದ ಸೋದೆಯ ಚೆನ್ನಬಸವಾಧಿಪರಿಗೆ ।
ಆದಿತ್ಯಕೋಟಿ ಕಿರಣಾದರರದ ಭಕ್ತವಶ
ನಾದ ಸಿರಪುರ ಸಿದ್ಧಲಿಂಗಾಂಘ್ರಿಗಳಿಗೆ ॥೫॥

ಕಾಯಜಾಂತಕ ಶ್ರುತಿನಿಕಾಯನುತ ನಿರ್ಮಾಯ
ನಾಯಕನಪಲ್ಲಿ ಗುರುಪಾದಯತಿವರಗೆ ।
ರಾಯ ಮೆದಕೇರಿ ನೃಪನಾಯಕನ ಭಕ್ತಿ ಸಾ
ರಾಯರಿಮ್ಮಡಿಯ ಗುರುಪಾದಯುಗಗಳಿಗೆ ॥೬॥

ಶಿವಯೋಗಿನಿವಹ ತೋಷಣ ಮೂರು ಸಾವಿರದ
ಶಿವಲಿಂಗಯತಿಕುಲೋತ್ತುಂಗ ಪುಂಗವಗೆ ।
ಭುವನಾಳಿ ಭಕ್ತಿಗೊಪ್ಪತ್ತು ರಂಜಿಪ ಸದಾ
ಶಿವ ಚೆನ್ನವೀರ ಗುರು ಪತ್ಪದ್ಮಗಳಿಗೆ ॥೭॥

ಶ್ರೀಕರಾವೇಶ ಲೋಕಸ್ತುತ ಮಹಾಮಹಿಮ
ವ್ಯಾಕರಣದಾ ಸಿದ್ಧಲಿಂಗದೇಶಿಕಗೆ।
ನಾಕಪ ಪದವ ನಿರಾಕರಿಸಿದ ನಿಘಂಟಿನ ದ
ಯಾಕರ ಶ್ರೀ ಸಿದ್ಧವೃಷಭೇಂದ್ರರಡಿಗೆ ॥೮॥

ವೈರಾಗ್ಯಸಂಪತ್ಸದಾರಮ್ಯ ಕಾಮಾದಿ
ವೈರಿವಾರಣದಳನ ಕಂಠೀರವ।
ಶ್ರೀ ರಾಚವಟ್ಟಿ ಮುರುಗೇಂದ್ರ ಯತಿಕುಲಚಂದ್ರ
ಸಾರ ಸದ್ಗುಣಸಾಂದ್ರ ಸಿದ್ಧೇಂದ್ರರಡಿಗೆ ||೯||

೯೭

ರಾಗ-ಭೈರವೀ

ಪಾಲಿಸು ಪ್ರಭುರಾಯ।ಪಾವನಕಾಯ ||ಪಲ್ಲ||

ಪಾಲಿಸು ಪರಮ ದಯಾಲವಾಲ ಶುಭ
ಶೀಲ ಮಲ್ಲಭೂಪಾಲನ ನಿರುತಂ ||ಅನುಪಲ್ಲ||

ನಿತ್ಯ ನಿರಾವರಣ । ನಿರಂಜನ ।
ಸ್ತುತ್ಯ ಶುಭಾಚರಣ ||
ರತ್ಯಧೀಶ ಜಯ ಸತ್ಯಭಾಷ ಪದ
ಭೃತ್ಯಪೋಷಣಾದಿತ್ಯ ಶತಪ್ರಭ ||೧||

ಮಾಯಾಮದಭಂಗ। ಯೋಗಿ ನಿ-
ಕಾಯ ಸದಾಸಂಗ||
ಶ್ರೇಯಃ ಪದ ಸುರನಾಯಕ ಪದವನು
ಹೇಯಗಳೆದ ಸೌಖ್ಯಾಯತ ನಿರುಪಮ ||೨||

ಪರಶಿವ ಸಗುಣವನು।ಧರಿಸಿ ಸಂ।
ಚರಿಸಿದಭವ ನೀನು ||
ನಿರಘ ಬಸವ ಮುಖ್ಯರಿಗೆ ಸುಬೋಧೆಯ
ನೊರೆದು ಪೊರೆದ ಶ್ರೀಕರ ಸಿದ್ಧೇಶ್ವರ ||೩||

೯೮

ಗುರುವರ ದುರದುಂಡೀಶ ಮಹೇಶಗೆ ।
ಸುರುಚಿರಾರತಿಯ ಬೆಳಗುವೆನು ||ಪಲ್ಲ||

ಮಲಕುಲಹರಗುಜ್ವಲ ಮಹಿಮಾಬ್ಧಿಗೆ ।
ಬಲವರ್ಧನಗೆ ಫಲಪ್ರದಗೆ ||೧||

ಅವನಿಯ ಭಾವುಕ ನಿವಹವ ಪೊರೆಯಲು
ಶಿವಲಿಂಗೇಶ್ವರನೆನಿಸಿದಗೆ ||೨||

ಮಲ್ಲಧರಾವಲ್ಲಭ ಕಾಮ್ಯಾರ್ಥದ
ಬಲ್ಲಿದ ಶ್ರೀ ಸಿದ್ಧೇಶ್ವರಗೆ ||೩||

೯೯

ರಾಗ-ಪುನ್ನಾಗತೋಡಿ

ಮಂಗಲಮತುಲ ಕೃಪಾಂಗ ತುಂಗ ಶಿವ ।
ಲಿಂಗ ಮಹೇಶ್ವರ ತೇ ||ಪಲ್ಲ||

ನಿರಘು ನಿರಂಜನ ನಿತ್ಯ ಸತ್ಯ ಶುಭ
ಕರ ಪರಮಾನಂದ।
ಪರಸುಖಭವನ ಪರಾತ್ಪರ ಚಿತ್ಸುಖ
ಭರಿತ ಸುಗುಣವೃಂದ ||೧||

ಮಲಗಜಮದ ವಿದಳನ ಕಂಠೀರವ
ಖಲಕುಲ ವನದಾವ ||
ಕಲಿ ಕಲ್ಮಷಹರ ಫಲಪ್ರದ ಮಹಿಮೋ
ಜ್ವಲ ಭಾವುಕ ಭಾವ ||೨||

ಮದನವಿಜಯ ಸರ್ವದ ಮಲ್ಲೇಂದ್ರಾ
ಭ್ಯುದಯದ ದೇವೇಶ।
ಸದಯ ಸಿದ್ಧೇಶ್ವರ ಪದಶೋಭಿತ ನಿ
ರ್ಗದ ದುರದುಂಡೀಶ ||೩||

೧೦೦

ರಾಗ-ಕನ್ನಡ ಕಾಂಬೋದಿ

ನಂದಿಕೇಶಗೆ ವಂದಿಸುವೆನು ನಾ
ನಂದಿಹಳ್ಳಿಯೊಳು ನಿಂದ ಮಹಿಮಗೆ ||ಪಲ್ಲ||

ದುರಿತಾಂಭೋನಿಧಿ ವಾಡವಾನಲಗೆ ।
ಶರಣ ಮನೋರಥಪ್ರದ ಸುರಕುಜಗೆ ।

ಮರುದ್ಗಣಸೇವಿತ ಚರಣಸರೋಜಗೆ ।
ಕರುಣಾಕರಗೆ ಕಲುಷಸಂಹರಗೆ ॥೧॥

ಭಸಿತವಿಭೂಷಗೆ ಭವ್ಯಶರೀರಗೆ
ದಶದಿಗ್ಭರಿತ ಯಶೋವಿಲಾಸಗೆ ।
ವಸುದಾಧಿಪ ಮಲ್ಲೇಂದ್ರಕಾಮದಗೆ
ಪೆಸರುಗೊಳಲು ಗಣವಿಸರವಿನೋದಗೆ ॥೨॥

ಶ್ರೀಕಂಠಾನ್ವಯ ಶ್ರಿತಶುಭಕರಗೆ
ಲೋಕಾವನ ವೃಷಭಾಕೃತಿಧರಗೆ ।
ಮಾಕುಮಾರ ಮದಶೈಲ ಕುಲಿಶಗೆ
ಶ್ರೀಕರ ಸಿದ್ಧೇಶ್ವರ ವಾಹನಗೆ ॥೩॥

೧೦೧

ರಾಗ-ಭೈರವಿ

ಪಾಲಿಸು ಬಸವೇಶ। ಪಾವನಕೋಶ।
ನೀಲಲೋಚನೆಯ ಲೀಲಾನಂದದ
ಜಾಲಿಕಟ್ಟಿಯ ಪುರ ಶೈಲನಿವಾಸ ॥ಪಲ್ಲ॥

ವೀರಶೈವಾಚಾರ।ಸಂಸ್ಥಾಪನಾ।
ಕಾರಣಕವತಾರ।
ಶಾರದ ನೀರದ ಹಾರ ಹೀರ ಘನ
ಸಾರ ಗೌರ ಸತ್ಕೀರ್ತಿವಿಹಾರ ॥೧॥

ಗುರುಮುಖ್ಯಾವರಣ । ವಿಭೂಷಣ ।
ಧರ ಮಲಸಂಹರಣ ॥
ಶರಣಮನೋರಥಸುರತರು ಶಿವಮತ
ಶರಧಿವರ್ಧನ ಸಿತಕರ ಕರುಣಾಕರ ॥೨॥

ನುತಿಹಿತ ಸರ್ವೇಶ।ಸಜ್ಜನ ಪೋಷ।
ಪ್ರತಿರಹಿತ ಶ್ರೀಶ।
ಸತತಾರಾಧಕ ತತಿಗೆ ತವಕದಿಂ
ಚತುರ್ವಿಧ ಪದ ಸಂಗತಿಯನು ತೋರಿದಿ ॥೩॥

ಜಂಗಮಾರ್ಚಕಲೋಲ । ಜಗನ್ಮಯ
ತುಂಗ ಚರಿತಶೀಲ ।
ಮಂಗಳ ಕೂಡಲಸಂಗಮೇಶ ದಿ
ವ್ಯಾಂಗ ಸಂಗ ವೃಷಲಿಂಗ ಚಿದಂಗ ॥೪॥

ಪರಶಿವಧರ್ಮಾಂಗ। ವೃಷಾಕೃತಿ।
ಧರಿಸಿದ ಭವಭಂಗ ।
ನಿರುತ ಮಹಿಮೆಗಳ ಮೆರೆದರಿದೆನಿಸಿದಿ ।
ವರದ ಪುರದ ಸಿದ್ಧೇಶ್ವರ ವಾಹನ ॥೫॥

೧೦೨

ರಾಗ-ಕಲ್ಯಾಣ

ಸಲಹು ವೀರಭದ್ರ।ಸತತಂ ॥
ಬಲವರ್ಧನ ಖಲಕುಲಮರ್ದನ ನಿ
ರ್ಮಲ ಮುರಗೋಡೊಳು ನೆಲಸಿದ ಶುಭಕರ ॥ಪಲ್ಲ॥

ಅಲಿಕಾಕ್ಷನ ರೌದ್ರ।ವಾಕೃತಿ।
ತಳೆದು ನಿಂದ ರುದ್ರ॥
ಹಲಗೆ ಖಡ್ಗಗಳ ತಳೆದು ದಕ್ಷಗೆ ಕುರಿ
ದಲೆಯನಿತ್ತವನ ಬಲವ ಭಂಗಿಸಿದಿ ॥೧॥

ನರಸಿಂಹಾಕೃತಿಯ । ಧರಿಸಿ ಹರಿ ।
ಹರಿಸಲು ಸುರತತಿಯ ॥
ಮೊರೆಯ ಕೇಳಿ ಭೀಕರ ಶರಭಾಂಗದಿ
ಚರಿಸಿ ಮಥಿಸಿ ಸುಖಗರೆಸಿದ ಮಹಿಮಾ ॥೨॥

ಶರಣರ ಸಂಚಾರ । ಪುರವೆಂ
ದರಿದು ಸುಖಾಗಾರ ॥
ಸ್ಥಿರಗೊಳಿಸಿದಿ ಶಂಕರಮತ ವರ್ಧನ
ಪರಮತಖಂಡನ ಗುರುಸಿದ್ಧೇಶ್ವರ ॥೩॥

೧೦೩

ರಾಗ-ಶ್ಯಾಮಕಲ್ಯಾಣಿ

ಪಾಲಿಸು ಗೌರಿ! ದಯಾಲಯೆ, ಮುದದಿ।
ಶೈಲಜೆ । ಮಲ್ಲಭೂಪಾಲನ ದಯದಿ ॥ಪಲ್ಲ॥

ನಿರುಪಮೆ ನಿಖಿಲ ಕಲಾಮಯೆ ಚಿತ್ಸುಖ
ಭರಿತೆ ಭವಾನಿ ಭವಾಟವಿದಾವೆ ॥೧॥

ಪಾವನಶೀಲೆ ಪದಾವನತೇಷ್ಟದೆ
ಭಾವಜಪಾಲೆ ಗಜಾನನ ಜನನಿ ॥೨॥

ಸುರಸಮೂಹಾದರೆ ಸೂರ್ಯಕೋಟಿಪ್ರಭೆ
ಸುರುಚಿರ ಮಣಿಗಣ ಹಾರೆ ಗಭೀರೆ ॥೩॥

ಮಂದಹಸಿತ ಮುಖಚಂದಿರೆ ಬಂಧುರೆ
ಸುಂದರಿ ಕಂಬು ಸುಕಂಧರೆ ಶುಭಕರಿ ॥೪॥

ಪುರದ ಸಿದ್ಧೇಶ್ವರಾಲಿಂಗಿತೆ ನಿರ್ಮಲೆ
ಪರಮಪದೇಶೆ ಸಚ್ಚರಿತೆ ಸದಾಶಿವೆ ॥೫॥

೧೦೪

ಮಂಗಲಂ ಶ್ರೀ ದುರದುಂಡೀಶ್ವರ ಜಯ
ತುಂಗಚರಿತ ಶಿವಲಿಂಗ ಯತಿಪತೇ ॥ಪಲ್ಲ॥

ಪರಮಪದೇಶ ಪರಾತ್ಪರಾಮೃತ ಭಾಷ
ದುರಿತವಿನಾಶ ಸಚ್ಚರಿತ ಮಹೇಶ ॥೧॥

ಮಲ್ಲ ವಸುಂಧರಾವಲ್ಲಭೇಷ್ಟದ ಸರ್ವ
ದೋಲ್ಲಸಿತಾನನಚಂದ್ರ ಗಣೇಂದ್ರ ॥೨॥

ಸಿದ್ಧಲಿಂಗೇಶ ಪ್ರಸಿದ್ಧಸುವೇಷ ಲೋ
ಕೋದ್ಧವ ಕೋಶ ವಿರುದ್ಧವಿವರ್ಜಿತ ॥೩॥

೧೦೫

ಮಂಗಲಮಯೆ ಗಂಗಾಂಬಿಕೆ ರಕ್ಷಿಸು ।
ತುಂಗತರಂಗೆ ಸದಾನಂದೆ ॥ಪಲ್ಲ॥

ಸುರಪಮುಖಾಮರ ಪರಿಸೇವಿತೆ ಸುಂ
ದರಿ ಶುಭಕರಿ ಪರದೈವತೆಯೆ ॥೧॥

ಮಲಕುಲಹರೆ ಮಂಜುಲತರೆ ಭೀಷ್ಮನ
ಬಲದ ಜನನಿ ಭಾಗೀರಥಿಯೆ ॥೨॥

ಸ್ನಾನವ ಮಾಡುವ ಮಾನವರನು ಸುವಿ
ಮಾನದಿ ಶಿವಪುರಕೈದಿಸುವೆ ॥೩॥

ಮಲ್ಲಮಹೀವಲ್ಲಭನ ತಾರಿಸುತ
ಬಲ್ಲಿದಗುತ್ಸವ ತೋರಿಸಿದೆ ॥೪॥

ಸಿದ್ಧೇಶ್ವರ ಸುಜಟಾಮಂಡಿತೆ ಲೋ
ಕೋದ್ಭವವಾಹಿನಿ ಪಾವನೆಯೆ ॥೫॥

೧೦೬

ಎತ್ತಿರಾರತಿ ಯತಿಪುಂಗವಗೆ ।
ಚಿತ್ತಜಹರ ಗುರುಸಿದ್ಧೇಶ್ವರಗೆ ॥ಪಲ್ಲ॥

ಭೂತಿ ವಿಭೂಷಿತೋಜ್ವಲಗೆ ।ಭವ
ಭೀತಿಗೆಡಿಪ ಭುಜಬಲಗೆ ಸೌ
ಖ್ಯಾತಿಶಯದ ನಿರ್ಮಲಗೆ । ಪುರ
ಹೂತಪದವ ತೃಣೀಕರಿಸಿದ ಮಹಿಮಗೆ ॥೧॥

ವೀರಮಾಹೇಶ್ವರಾಗ್ರಣಿಗೆ ।ಸುಖ
ಸಾರದ ಚಿಂತಾಮಣಿಗೆ । ಬಾಲ
ಸೂರ್ಯ ಸಹಸ್ರೋದ್ಘಣಿಗೆ । ಕರು
ಣಾರಸ ಪೂರ ಶರೀರಗೆ ಶಿವಗೆ ॥೨॥

ಪರಮಾನುಭವ ಸುಂದರಗೆ । ಏಕೋ
ತ್ತರಶತಸ್ಥಲ ತತ್ಪರಗೆ । ಶ್ರೀ

ಕರ ಸಿದ್ಧೇಶಭಾಸುರಗೆ । ನರೇ
ಶ್ವರ ಶಿವಲಿಂಗರುದ್ರೇಂದ್ರ ಭಾಸ್ವರಗೆ ||೩||

೧೦೭

ರಾಗ-ಬೇಗಡ

ಗುರುವರ ದುರದುಂಡೀಶ್ವರ।
ಪರಿಪಾಹಿ ಪ್ರವರ ||ಪಲ್ಲ||

ದೇಶಿಕವರ ಚಿತ್ಕೋಶ ಶ್ರೀಕರ ।
ಕ್ಲೇಷದೋಷಭವನಾಶ। ಮಾಹೇಶ।ಶ್ರೀಶ ||೧||

ಭೂನುತ ಸನ್ಮಹಿಮಾನಿದಾನ ಬಹು ।
ದೀನ ಜನಾವನ ಪಾಲ । ಸುವಿಶಾಲ ।ಲೀಲ ||೨||

ವಿರತಿಸುಖೈಕವಿರಾಜಮಾನ ಶುಭ।
ಕರಣ ರುಚಿರ ಸುಖಸಾಂದ್ರ। ರುಚಿರುಂದ್ರ ।ಗಣೇಂದ್ರ ||೩||

ಧೀರ ಮಲ್ಲಭೂರಮಣ ಮನೋದಯ ।
ಪಾರಿಜಾತ ಪ್ರಖ್ಯಾತ। ಗುಣಯೂಥ ।ನಾಥ ||೪||

ಮಲಹರ ಮಂಗಳಕರ ಸಿದ್ಧೇಶ್ವರ
ಫಲದಾಯಕ ಹೃತ್ಪಾಶ। ಪರಮೇಶ । ಸುವೇಷ ||೫||

೧೦೮

ರಾಗ-ಶ್ಯಾಮಕಲ್ಯಾಣಿ

ಪಟ್ಟದಾರ್ಯರ ಪಾದಕೆ । ಪೊಡ
ಮಟ್ಟು ಬೆಳಗುವೆನಾರತಿ ||ಪಲ್ಲ||

ಶಿವವಿನುತ ಜನನಿವಹ ಪಾಲಿಸ
ಲವನಿಯೊಳಗವತರಿಸಿದ ||
ಭುವನಪಾವನಮೂರ್ತಿ ಕರುಣಾ
ಭವನ ಕಾಯವ ಧರಿಸಿದ ||೧||

ಸುಂದರ ಸದಾನಂದ ಶುಭತರ
ಕಂಧರಾಶ್ರಿತ ರಕ್ಷಣ ||

ಮಂದಹಾಸ ವಿನಿಂದಿತಾನನ
ಚಂದಿರಕರ ದಯೇಕ್ಷಣ ||೨||

ಕಾಮಮುಖರಿಪು ಸಾಮಜಹರಿ ನಿ
ರಾಮಯಾಂತಕ ಶಾತ್ರವ ||
ಕಾಮದ ಮುನಿಸ್ತೋಮ ಪತ್ತನ
ಧಾಮ ಸಿದ್ಧೇಶ್ವರ ಶಿವ ||೩||

೧೦೯

ರಾಗ-ಮಾಂದೀ

ಆರತಿ ಬೆಳಗುವೆನು । ದುರದುಂಡೀಶ
ಗಾರತಿ ಬೆಳಗುವೆನು||
ಧೀರ ಶ್ರೀಕರವರ ವೀರಮಹೇಶಗೆ ||ಪಲ್ಲ||

ಭುವನಪಾವನ ಸದಾಶಿವನು ಚರಾಕೃತಿ
ಯವಯವವಾಂತ ಶಾಂಭವಗೆ ಶಾಶ್ವತಗೆ ||೧||

ಚರಣಸರೋರುಹ ಸ್ಮರಣ ಮಹಾಶ್ರೀ
ಕರಣ ಕಾರಣ ನಾಮೋಚ್ಚರಣ ವರದಗೆ ||೨||

ಮಲಕುಲಹರ ಪದಜಲಜಕ್ಷಾಲಿತ ಜಲ
ಫಲದ ವಿವರ್ಧನ ಬಲದ ಯತೀಶಗೆ ||೩||

ರಾಜಸಮಾಜ ಸುಮಾಜಿತಪಾದಸ
ರೋಜಯುಗಗೆ ಸುರತೇಜ ಶರೀರಗೆ ||೪||

ಮಲ್ಲಮಹೀಶ ಮನೋರಥ ಸಿದ್ಧಿಗ
ಳೆಲ್ಲವನೀವ ಸಿದ್ಧೇಶ ಸುವೇಷಗೆ ||೫||

೧೧೦

ರಾಗ-ಸೌರಾಷ್ಟ್ರ

ಶ್ರೀಕರ ಧೀರ ಫಕೀರೇಶ್ವರ ಕರು
ಣಾಕರ ಪಾಲಿಪುದು ||
ನಾಕಪ ಪದವ ನಿರಾಕರಿಸಿದ ಚಿದ್ವಿ
ವೇಕ ವಿರಕ್ತ ಲಾಲಿಪುದು ||ಪಲ್ಲ||

ರಾಜಾಧಿರಾಜ ಸಮಾಜಸೇವಿತ ಪಾದ
ರಾಜೀವ ಯುಗಳ ಗಣೇಂದ್ರ।
ಘಾಜಮಹಾಮದ ಭೂಜಕುಠಾರ ವಿ
ರಾಜಿತ ಸದ್ಗುಣ ಸಾಂದ್ರ॥
ರಾಜೋಪಮಾನ ವಿಭ್ರಾಜಮಾನಾನನ
ಪೂಜಿತ ವಿಬುಧನಿಸ್ತಂದ್ರ।
ರಾಜರಾಜಪ್ರಿಯ ತೇಜದಿ ಮೆರೆವ ಯ
ಶೋಜಿತ ಪಾರ್ವಣ ಚಂದ್ರ ॥೧॥

ವಿಷಯ ವಿಷದ ಘನಶ್ವಸನ ಲಸಿತ ಸಿತ
ಭಸಿತ ಭೂಷಿತ ಭವ್ಯ ಭಾಲ ।
ಶಶಿಧರಮತವಾರ್ಧಿ ಶಶಧರ ಶರದಭ್ರ
ಹಸನ ರುಚಿರ ಸುಕಪೋಲ॥
ಕಸವರಕದಿರ ನಿಂದಿಸುವ ನಿಡಿದು ರಾ
ಜಿಸುವ ನಿರ್ಮಲ ಕಚಜಾಲ ।
ಕುಶಲದ ಪದನತ ವಿಸರ ತಾಮಸವನೋ
ಡಿಸುವ ಮಹತ್ವ ಸುಶೀಲ ॥೨॥

ಅವಿರಳ ಸುಖಸಾರವ ಬಯಸುವ ಮಾ
ನವರ ಮನೋರಥವೀವ।
ಭವಿಕಚರಿತ್ರ ಸಾಧುವರೇಣ್ಯ ಚಿನ್ಮಯ
ಭವ ಭವಕಾಂತಾರದಾವ ॥
ರವಿಕೋಟಿರುಚಿ ಲಸದವಯವ ತತ್ವಾನು
ಭವಬೋಧಕ ಸದ್ಭಾವ ।
ಕುವಲಯ ಪಾವನ ಶಿವಭಕ್ತಜೀವನ
ಶಿವ ಸಿದ್ಧೇಶ್ವರದೇವ ॥೩॥

೧೧೧

ರಾಗ-ಪುನ್ನಾಗ ತೋಡಿ

ಗುರುವರ ಶುಭಕರ ಗುರುಸಿದ್ಧೇಶ್ವರ
ಪರಿಪಾಲಯ ನಿರುತಂ ॥ ದಯಯಾಂ ॥ಪಲ್ಲ॥

ವಿರತಿ ಸುಖೇನ ತಿರಸ್ಕೃತ ಸುರವರ
ಪರಮಪದ ವಿಲಾಸ ||
ಸುರವರ ಸುಮನೋವರ ಸುಜ್ಞಾನ
ಸ್ಫುರಣ ದೇಶಿಕೇಶ ||೧||

ಭೂತಿಪ್ರದ ಸದ್ಭೂತಿ ವಿಭೂಷಿತ
ಪೂತ ಫಾಲದೇಶ||
ಭೂತಲರುದ್ರವಿನೂತನ ಮಹಿಮ ನಿ
ಕೇತನ ಜಿತಪಾಶ ||೨||

ಕೋವಿದ ಮಲ್ಲಮಹೀವರ ವಿಷಯ ಸು
ಖಾವಲಂಬನಾರ್ಥ||
ಶ್ರೀವರ್ಧನ ಸಿದ್ಧೇಶಾಶ್ರಿತ ಜನ
ಪಾವನ ಚರಿತಾರ್ಥ ||೩||*

---

* ಇಲ್ಲಿಂದ ಮುಂದಿನ ೫ ಹಾಡುಗಳಲ್ಲಿ ೧ನೆಯದು ಲಿಪಿಕಾರ ಮುನವಳ್ಳಿ ಚೆನ್ನಬಸವ ರಚಿಸಿದುದು. ಆಮೇಲಿನ ೨,೩,೪,೫ನೆಯ ಹಾಡುಗಳು 'ಗೌರೀಶ' ಮುದ್ರಿಕೆಯನ್ನೊಳಗೊಂಡಿದ್ದು ಕರ್ತೃ ಗೊತ್ತಿಲ್ಲ. ಹೀಗಾಗಿ ಈ ೫ ಹಾಡುಗಳನ್ನು ಇಲ್ಲಿ ಅಡಿಟಿಪ್ಪಣಿಯಲ್ಲಿ ಕೊಡಲಾಗಿದೆ. (ಸಂ.)

೧. **ವಾರ್ಧಕ** : ಶ್ರೀಮದತುಲಾನಂದ ಸಿಂಧುವರ್ಧನ ಪೂರ್ಣಸೋಮ ಸೋಮಾಂಘ್ರಿ ತಾಮರಸಯುಗ ಪೂಜಾಭಿರಾಮ ರಮಣೀಯ ರಾಜ್ಯಾಧಿಪ ಶ್ರೀ ವಿರಾಜಿತ ವೀರಮಲ್ಲಸರ್ಜ॥ ಭೂಮೀಶನೊಲಿದಿತ್ತ ಹೊಂಗಲೋತ್ಪಾಟನ ಗ್ರಾಮ ಶಮಶರಗಡಗಳೊಳ್ ಮಠಗಳಂ ಕೃಷಿಗಳಾಮೋದದಿಂದಲನುಭವಿಸುತಿಹ ಚೆನ್ನಬಸವಾರ್ಯಸುತರೈವರೊಳಗೆ ॥೧॥ ಬುದ್ಧಿವರ್ಧನ ಸಿದ್ಧಬಸವಪ್ಪ ಕೈವಲ್ಯ ಪದ್ಧತಿಯ ಪುಸ್ತಕಂ ಬೇಕೆನಲ್ ಬರೆದಾತ ಶುದ್ಧಮಾನಸನಾಗಿ ಮುನಿಪುರ ಶ್ರೇಷ್ಠ ರುದ್ರಾತ್ಮಜಂ ಚೆನ್ನಬಸವಂ ॥ ಸಿದ್ಧವಿಡೆ ತತ್ಕೃತಿಯ ಲೇಖನದೊಳಿರುತಿಹವಪದ್ಧವಗಣಿತಗಳಂ ತಿದ್ದಿ ಮುದ್ದಿಪುದು ಪ್ರ। ಸಿದ್ಧ ಸದ್ಗುಣಗಣರ್ ಶಿವಭಕ್ತರಾದರದೊಳು ಧ್ಧರಿಮದಣುಗನೆಂದು ॥೨॥ ಶಾಲಿವಾಹಾವನಿಪ ಶಕ ಸಪ್ತದಶಶತದ ಮೇಲೆ ಮೂವತ್ತಾರನೆಯ ಭಾವವರ್ಷ ಮಧು ಕಾಲಸ್ಥಿತದ ದಶಮಿ ಶನಿವಾರ ಶತಭ ತಾರಾ ಮುಹೂರ್ತದಿ ಮುಗಿದುದು ॥ ಲೀಲೆಯಿಂ ವಂಶ ಪಾರಂಪರೆಯೊಳೀ ಪ್ರತಿಯನಾಲಸ್ಯಮಿಲ್ಲದೋದುತ ಪಠಿಸಿ ಶಿವಶರಣ ಜಾಲದೊಳ್ ಜ್ಞಾನಿಮಾನಿಗಳೆನಿಸಿ ಸುಖಿಸುವುದು ಸಿದ್ಧೇಶ್ವರನ ಕರುಣದಿ ॥೩॥

೨. **ರಾಗ-ನೀಲಾಂಬರಿ**: ತರಹರಿಸದು ಕಾಣಮ್ಮಾ । ತರುಣಿ ಎನ್ನಯ ಮನಸು॥ ನೆರೆದು ಪವನದೊಳು ರಮಣನ ಕೇಳಿಯ ನೆನೆನೆನೆದು ॥ಪಲ್ಲ॥ ಅಮರ್ದಪ್ಪಿದ ಮಲ್ಲಿಗೆಯಲರ್ಗಳ ಮೇಲೆ ಸಾಲ್ವಿಡಿದ ಭ್ರಮರಂಗಳ ತಳಿರಿಂದಡಹುವ ಚೂತವ ಕಂಡು । ರಮಣಿ ಎನ್ನಳಿಗುರುಳ ತನ್ನ ತಳಿರ್ಗಯ್ಯಿಂದ ರಮಣನಪ್ಪುತ ತಿದ್ದುವ ಭಾವವ ನೆನೆನೆನೆದು ॥೧॥ ಕೊನೆನಾಲಗೆಯಿಂ ತೀಡುತ ಬಿಸದದಿ ಚುಂಬಿಸಿ ಬಿಂಬದ ತನಿವಣ್ಣಿನ ಸಾರವ ಸವಿವರಗಿಳಿಯನು ಕಂಡು । ಇನಿವಾತುಗಳಾಡುತ ರಮಣನು ಸಾರ್ದೇಕನ್ನಯ ಚೆಂದುಟಿಯನು ಈಂಟುವ ಸೊಬಗದ ಬಗೆಯನು ನೆನೆನೆನೆದು॥೨॥ ತೆರೆ ಹುಯ್ಯಲು ಕೊಣನೊಳು ತಾವರೆ ತಾವರೆಯೊಳಗಮರಲು ಸುರಿವಬ್ಜದ ಮಧುವೆರಸಿದ ರಜದೊಬ್ಬುಳಿ ಗಂಡು॥ ತರಳೆ ರಸದಾಂಬುಲ ಗುಟುಕನು ಮುಖದೊಳು ಮುಖವಿಡುತ ವರಗೌರೀಶ್ವರನೂಡುವ ಭಾವವ ನೆನೆನೆನೆದು ॥೩॥

೩ **ರಾಗ-ಗೌರಿ**: ಇದೆ ಮೂಡಲಾಗಿ ಮೂಡಿತು ಚಂದ್ರಬಿಂಬ। ಸುದತಿ ಕೇಳಿನಿಯನೈತಹ ವೇಳೆಯಾದುದು ॥ಪಲ್ಲ॥ ಸ್ಮರಶಿಖಿಪಿಂಡಿವೊ ಮಾರನ ಮಾಣಿಕ್ಯದ। ಹರಿಗೆಯೊ ಮದನನ ರನ್ನಗನ್ನಡಿಯೊ॥ ಅರಳಂಬನಂಬ ಮಸೆವ ಮಣಿಶಾಣೆಯ। ಪರಿಯೊ ಎಂದೆನೆ ನೀರೆ ನೋಡು ನಿನ್ನಿದಿರೊಳೆ ॥೧॥ ತೊಳಗುವ ತಾರೆಗಳೆನಿಪ ಶಂಖಿನ ಮಣಿ। ಗಳ ತಾಳ್ದು ಕಾಲ್ಜೋಗಿ ಪರಿವೇಷವೆಂಬ॥ ಬಲುಗೆರೆಯೊಳಗಿಟ್ಟು ಕಾಳಾಹಿಯೊಪ್ಪುವ ಪಳುಕಿನ ಪೆಟ್ಟಿಗೆಯಂತೆ ನುಣ್ಗರೆಗೂಡಿ ॥೨॥ ತಿಂಗಳಾಗಲು ಬಾಹೆಯೆನಲದ ಕೇಳ್ದು ತಾನಂಗನೆ ಕಂಗೆಢುತಿರಲಮರ್ದಪ್ಪಿ ॥ ತಿಂಗಳೆಂದೆನೆ ಚಂದ್ರನೆಂದು ಮೊದ ಗೌರೀಶ। ಲಿಂಗನೀಗಳೆ ಬಂದನೊಡಗೂಡಂಬುಜಾಕ್ಷಿ॥೩॥

೪. **ರಾಗ-ಕಲ್ಯಾಣಿ**: ಏನು ಬಗೆ ಪೇಳಬಲೆ ತಮ್ಮೊಳಗೆ ಸೆಣಸುತಿಹರೀ ನಳಿನಮುಖಿಯಂಗದಿರವ ನೆರೆ ನೋಡಿ ॥ಪಲ್ಲ॥ ಬಳಲುಮುಡಿಗಿಂದ್ರಗುಹ ಮಧುಸಖರು ನಗೆಮೊಗಕೆ । ಗಿಳಿದೇರನರ್ಧಾಂಗಿ ಸಿರಿರೋಹಿಣಿಯರು ॥ ತೊಳಗುವಕ್ಷಿಗೆ ಜಲಾಧಿಪ ಚಂದ್ರ ಮಾರುತರು । ಕಳಶ ಕುಚಕಿನ ನಗೇಶ್ವರ ಮನೋಭವರು ॥೧॥ ಮಧುರಾಧರಕೆ ರೋಹಣಾಚಲಸಮುದ್ರ ಶಶಿ। ಮೃದುರವಕೆಯುಹಂಸ ಕಳಕಂಠ ತುಂಬುರರು ॥ ಸುದತಿಯಸಿನಡುವಿಗೆ ವಸಂತ ನಭಕೇಸರಿಯುಪ್ರದಿದ ಜಘನಕೆ ನದೀ ದ್ರೋಣದಂತಿಗಳು ॥೨॥ ತಳಿರಡಿಗೆ ಬನಸಿರಿಯು ರವಿರಮಾವಲ್ಲಭರು । ಥಳಥಳಿಪ ತನುರುಚಿಗೆ ಮೇರು ಕಾರ್ಮುಗಿಲು ॥ ಸಲೆಯತ್ರಿಮುನಿ ಕಾದುತಿಹರು ಬಾಲೆಂದುಪುರ ನಿಳಯ ಗೌರೀಶನರ್ಧಾಂಗಿ ಮೈಸಿರಿಗೆ॥೩॥ →

೧೧೨

ಚೂರ್ಣಿಕಾ*

ಶ್ರೀಮದರವಿಂದನಂದನ ಸಂಕ್ರಂದನ ಮುಖ
ನಿಖಿಲ ನಿರ್ಜರ ಮಕುಟತಟ ಘಟಿತ ಮಣಿಗಣ
ಘೃಣಿ ನೀರಾಜನ ರಾರಾಜಿತ ಚರಣ ಸರೋಜ
ಪರಶಿವ ಪೂಜಾ ಸಾಮ್ರಾಜ್ಯ ಪ್ರಾಜ್ಯ ಸಾಮ್ರಾಜ್ಯ
ಧುರಂದರ। ದುಷ್ಟಸಂಹರ। ನೂತನ ವಿಭ
ವಾತಿಶಯ ತಿರಸ್ಕೃತ ಭರತ ಭಗೀರಥ ಪಙ್ತಿ
ರಥ ಮಾಂಧಾತ ಪ್ರಭೃತಿ ಧರಾನಾಥಸಂಘಾತ
ಶೌರ್ಯಧೈರ್ಯ ಗಾಂಭೀರ್ಯೌದಾರ್ಯಾದಿ
ಗುಣಾಭಿರಾಮ। ಸೌಂದರ್ಯಕಾಮ। ನಿಜ
ಲೀಲಾಲೋಲ ಬಾಲಾಕರ ಕಮಲತಲ ಕಲಿತ
ಲಲಿತ ಸಿತ ಕಾಂತಿ ಮಿಲಿತ ಚಾರು ಚಾಮರ
ವೀಜನ ಪಾರ್ಶ್ವದ್ವಯ ಪ್ರದೇಶ। ಸುಖಾದಿಕೋ
ಶ। ಸ್ವಕೀಯ ಸಭಾಗತ ಸಭಾಜಿತ ವಿದ್ವ
ತ್ಪಟಲೀ ಕಳಾಪರಿಕ್ಷಣ ನಿರೀಕ್ಷಣ ವಿಚಕ್ಷಣ
ಪ್ರತಿಕ್ಷಣ ನಿರೀಕ್ಷಣ ವಿತರಣ ಸುರಭೂರುಹ
ಭೂತಿವಿರಾಜಿತ। ಭುವನಖ್ಯಾತ। ಶ್ರೀ ಸಿದ್ಧೇ
ಶ್ವರಾನುಗ್ರಹ ಪಾತ್ರ। ಚಾರುತರ ಚಾಮೀಕರ
ಪ್ರಖ್ಯಗಾತ್ರ।ದಯಾರಸನೇತ್ರ।ಶ್ರೀ
ಮಲ್ಲರಾಜ ಪ್ರಭೋ। ಸದಾ ವಿಜಯೋಸ್ತು
ತೇ ವಿಭೋ ॥

❖❖

→ ೫. ರಾಗ-ಯರಕಲಕಾಂಬೋಧಿ: ಎಂಥ ಮೇಲ್ಬಗೆಗಾರ್ತಿಯೇ । ನಾನರಿತುದಿ । ಲ್ಲಿಂಥವಳೆಂಬುದನು ॥ ಕಾಂತೆ ಕೇಳವಳಾಳ್ದ ಕಾಂತನನ್ನಗಳೊಳೇಕಾಂತಕೇಳಿಯೊಳಿರ್ದ ಕಲೆಗಂಡು ಬಗೆಗೆಯ್ದಳ್ ॥ಪಲ್ಲ॥ ಪೊರಬಾಗಿಲೊಳು ಮಂಚವನಿಟ್ಟದರ ಮೇಲ್
ಪರಿವ ಗಂಧವನೆ ಪೊಯ್ದು ॥ ಎರಳೆಮರಿಯ ಕೊರಳೊಳೆಳೆದಳಿರನೆ ಕಟ್ಟಿ । ಬರುವ ಬಟ್ಟೆಯ ನೋಡಿ ಬಿಚ್ಚಾಟದೊಳಗಿರ್ದಳ್॥೧॥ ಕದಳಿಯ ಕಂಬವನು ಕಡಿದು ಬಾಗಿಲಿದಿರೊಳು ನಟ್ಟಿಹಳು ॥ ಮದವೇರಿದಾನೆಯ ಮೈಗೆ ಚಂದನವನು। ಹದವಾಗಿ ಲೇಪಿಸಿ ಗಹಗಹಿಸಿ ನಗುವಳು ॥೨॥ ಹಾಲುಸಕ್ಕರೆಯನೊಂದುಗೂಡ್ಯದರೊಳ್ ನೀಲದುಂಗುರವನಿಟ್ಟು ॥ ಬಾಲೇಂದು ಪುರವಾಸ ಲೋಲ ಶ್ರೀ ಗೌರೀಶ ಲೀಲೆಗಾರ್ತಿಯ ಸಂಗ ನಿಜವಲ್ಲೆಂದೆಂಬುವಳ್॥೩॥

* ಶೈಲಿ, ಮುದ್ರಿಕೆಗಳನ್ನು ಗಮನಿಸಿ ಇದು ಮುನವಳ್ಳಿ ನೀಲಕಂಠಾರ್ಯನದೆಂದು ಭಾವಿಸಿ ಮೇಲೆ ಇಟ್ಟುಕೊಳ್ಳಲಾಗಿದೆ.(ಸಂ.)

II

ಮುನವಳ್ಳಿ ನೀಲಕಂಠಾರ್ಯನ ಪದಗಳು

ವಹಿ: ಎರಡು

೧೧೩

ರಾಗ-ದ್ವಿಜಾವಂತಿ

ಮಂಗಲಮಮರ ವರಾರ್ಚಿತ ಕೂಡಲ
ಸಂಗಮೇಶ್ವರ ಶಿರತೇ ಭರತೇ
ತುಂಗಪರಾಕ್ರಮಾನಂಗಭಂಗ ಸುರ
ಗಂಗೋತ್ತಮಾಂಗ ಕುರಂಗ ಕಲಿತಕರ ||ಪ||

ಹಾರ ಪಟೀರ ತುಷಾರ ಕುಲಿಶ ಘನ
ಸಾರಗೌರಗಾತ್ರ ಪಾರಾವಾರ ಕು
ಮಾರ ಕಳಾಧರ ನಾರದ ನುತಿಪಾತ್ರ
ಸೂರತನಯ ಮದ ನೀರದ ಚಂಡಸ
ಮೀರಾಳಿಕ ನೇತ್ರ ವಾರಣ ಮುಖ ಸುಖ
ವಾರಿಧಿ ಫೇನ ದಯಾರಸಪೂರ ಗಭೀರ ಶ್ರೀಕರ ||೧||

ಮಂದಾರಭೂಧರ ಸುಂದರಮಂದಿರ
ಸಿಂಧುರಾಜಿನ ಚೇಲ ಇಂದೀವರ ರುಚಿ
ಕಂಧರ ಸಮಿತ ಪುರಂದರಾಂಬರವಾ
ನಂದನಂದನ ನಂದನಪ್ರದ ಸನಕಸ
ನಂದನಾದಿಲೋಲ ಕುಂದ
ಚಂದನ ಸಿತಕರ ಮಂದಹಾಸಾಶ್ರಿತ
ಮಂದಾರೋಪಮ ||೨||

ಭೂವರೂಥ ರಾಜೀವಜ ಸೂತ ಸು
ರಾವನಿಧರ ಚಾಪಜೀವನಜಾರಿ ವಿ
ಭಾವ ಸುಚಕ್ರ ರಮಾವಲ್ಲಭ ರೋಪ

ಭಾವುಕ ಮಯ ಭವದಾವದವಾನಲ
ಧೀವರ ಗತತಾಪ ಶ್ರೀವರ್ಧನ ಮ
ಲ್ಲಾವನಿಪಾವನ ಪಾವನದೇವ ಸಿದ್ಧೇಶ್ವರ ಶುಭಕರ ||೩||

೧೧೪

ರಾಗ-ಸೊರಟ

ಮಂಗಲಂ ಮಂಗಲಂ ಮಹೇಶ ತೇ ||ಪ||

ಹಿಮಗಿರಿಜಾಮುಖಕಮಲ ಖದ್ಯೋತ ಮಾ
ರಮಣಶಿಲೀಮುಖ ಶಮನ ಮದಾಪಹ ||೧||

ನೀಲಕಂಧರ ಸುರಶೈಲ ಧನುರ್ಧರ
ಪ್ರಲೇಯಕರಧರ ವ್ಯಾಲ ವಿಭೂಷಗೆ ||೨||

ಕುಂದೇಂದು ಧವಲಾತಿ ಸುಂದರಕಾಯ ಪು
ರಂದರ ನತ ಮುನಿವೃಂದ ಸಿದ್ಧೇಶ ||೩||

೧೧೫

ರಾಗ-ಕಲ್ಯಾಣಿ

ವೀರ ಮಲ್ಲಮಹೀರಮಣನೆ ನಿನ್ನ
ನೀರೆಯಳನು ನೋಡು।
ತಾರಹಾರ ಹೀರ ಗೌರ ಕೀರ್ತಿ। ವಿ
ಹಾರಪೂರ ಧೀರ ಸಾರ ನೃಪವರ ||ಪಲ್ಲ||

ಕಾಮಿನಿ ಕಲಹಂಸ ಸಮಾನ ಗಾಮಿನಿ
ಕಾಯಾಂಶು ಜಿತ ಸೌದಾಮಿನಿ
ಕಮನೀಯ ಕಳಾವಿದ ಭಾಮಿನಿ
ಯಾಮಿನಿ ಸೋಮವದನೆಗಿಂದು ಯುಗ
ಸಮ ನೀ ಮುನಿಯಲು ನೊಂದು ಶೌರ್ಯೋ
ದ್ದಾಮ ಭೀಮ ಹೇಮಧಾಮ ಸುಜನ

ಪ್ರೇಮ ನಾಮ ಕಾಮದಾಮರ ದ್ರುಮ ||೧||

ನಾಯಕ ನಾಯಕಿಯಳಭಿಮತ
ದಾಯಕ ನೀನಗಲಲು ಸ್ಮರಸಾಯಕಂ ಪೀಡಾಹರಣ ವಿ
ಧಾಯಕಯಂಬಳ ಕಾಯದುಳಿವಳಲ್ಲ ತಿಳಿದಿಹೆ
ನಾ ಯುವತಿಯ ಸೊಲ್ಲಾ ಸುಗುಣ ನಿ
ಕಾಯಜಾಯತಾಯ ಚತುರೋ
ಪಾಯ ರಾಯ ಪ್ರಾಯದಾಕ್ಷಿಯ ||೨||

ಸುಂದರ ಸಂಪತ್ಸೌಖ್ಯದಲಿ ಪುರಂದರ
ಸದ್ರತ್ನಾಲಂಕೃತ ಕಂಧರ ಮುನಿವೃಂದಮನೋಹರ
ಮಂದಿರ ಸಿದ್ಧೇಶ ಕುಂದರದನೆಗಿಂದು ಕುಶಲವು
ಕುಂದದಿರಲ್ಕಂದು ನಾನಾ ಛಂದ ಬಂಧ ವೃಂದದಿಂದ ನಿರುತದಿಂ
ಬಂದು [ಇ]ಂದು ನಿಂದು ಹೊಂದು ಸಖಿಯಳ ||೩||

೧೧೬

ರಾಗ-ಜಂಗಲ

ಮಲ್ಲಸರ್ಜ ಮಹೀವರವಲ್ಲಭ ಧೀರ
ಬಲ್ಲಿದ ಸಖರೊಳು ಕೂಡಿ ಗಭೀರ
ನಿಲ್ಲದೆ ಹೋಳಿಯನಾಡಿದ ಧೀರ ಮಕರಂದ
ಮಲ್ಲಿಗೆಯ ಹಾರ ನಿಕರವ ತರಿಸುತ ವೀರ ಸ
ಕಲರ ಶಿರದೊಳು ಮುಡಿಸಿಯುದಾರ ||೧||

ಪರಿಪರಿ ಹಾಸವಿಲಾಸದಿ ಬಂದ
ಪರಿಮಳ ಚೂರ್ಣದ ಪೊಟ್ಟಣದಿಂದ
ಸರಸಗೀತವ ಕೇಳುತ ನಿಂದ ||೨||

ಶಿವಪಾದಾರ್ಚಕ ಶಿಷ್ಟನಭಂಗ
ರವಿರುಚಿ ರತ್ನಾಲಂಕೃತ ಸಂಗ
ಕುವರರೊಡನೆ ಕೂಡುತ್ತ ಕೃಪಾಂಗ ||೩||

ತಾರಾಮಧ್ಯದ ಚಂದ್ರನ ತೆರದಿ
ಸೇರಿದ ಪರಿವಾರದಿಯಾತುರದಿ
ಮಾರ ಸುಂದರ ಮಲ್ಲೇಂದ್ರಾದರದಿ ||೪||

ಶತಮಖವಿಭವಾಶ್ರಿತ ಜಯಶೀಲ
ನುತ ಕಾಮಿತ ಸುರಶಾಲ ವಿಶಾಲ
ನುತಹಿತ ಸಿದ್ಧೇಶ್ವರ ||೫||

೧೧೭

ಶ್ರೀಮನ್ಮಲ್ಲನೃಪಾಲ ಚರಿತ್ರ
ಕಾಮಿನಿ ಪೇಳುವೆನು ಪವಿತ್ರ
ಚಾಮೀಕರ ಸನ್ನಿಭ ಚಾರುಗಾತ್ರ
ಸೋಮ ಸಮಾನ ಸುಂದರತರವಕ್ತ್ರ ||೧||

ಧರಣೀಸ್ತ್ರೀಮುಖ ಕಮಲದ ತೆರದ
ಪರಿರಂಜಿತ ಶ್ರೀ ಕಿತ್ತೂರಪುರದ
ಸಿರಿಯಮರಾವತಿಗೆನೆ ಸಿಂಗರದ
ದೊರೆ ಮಲ್ಲೇಂದ್ರನು ಸುಖ ಶರದ ||೨||

ಗುರುಮುಖ್ಯಷ್ಟಾವರಣ ವಿಲೋಲ
ಸುರಚಿರಮಣಿರುಚಿರ ರಂಜಿತಮಾಲ
ಹರಚರಣಾಂಭೋಜಾರ್ಚನ ಶೀಲ
ಪರಮತ ಖಂಡನ ಕರುಣಾವಾಲ ||೩||

ಮತ್ತಗಜವನೇರಿ ರಾಜವೀಧಿಯೊಳು
ಸುತ್ತಮುತ್ತಲು ಚತುರಂಗ ಬಲದೊಳು
ಒತ್ತರದಿಂದಲಿ ಬರಲು ಕೃಪಾಳು
ಚಿತ್ತಜನೆಂಬರು ಸಖಿಯರು ಕೇಳು ||೪||

ದೇವೇಂದ್ರ ಭೂಮಿಯ ನೋಡಲು ಬಂದ
ಭಾವ ಭದ್ರೇಭದೊಳೊಪ್ಪಿರೆ ಛಂದ
ದೇವತೆಗಳು ಕೂಡಿಹ ಸಭೆಯಂದ
ಕೋವಿದ ನೀವಿದ ಸರಿ ನಲವಿಂದ ||೫||

ಸುತರು ಸೌಂದರ್ಯಾಯತರು ಮನ್ಮಥರು
ನುತರು ಮಂಜುಳಮಣಿ ಭೂಷಣಾಧೃತರು
ಶತಮಖ ವಿಭವರು
ಕ್ಷಿತಿಪ ಕಾಮಿತರು ||೬||

ಕುಶಲರು ಕುಶಲವರಂದದಲಿಹರು
ಶಶಿಧರಶಾಂತರು ಶ್ರಮಪರಿಹರರು
ವಸುಧಾಕಾಂತರು ಸುಷಮಸ್ವಾಂತರು
ರಸಿಕರು ಮಲ್ಲೇಂದ್ರಾತ್ಮಸಂಭವರು ||೭||

ಶಿವಲಿಂಗ ಶ್ರೀ ರುದ್ರಸರ್ಜಾಭಿಧಾನ
ಕುವರಕಳಾಕೋವಿದ ಸುಜ್ಞಾನ
[ಭು]ವನಮಣಿದೀಪ ನಿಧಾನ
ಶಿವಕರುಣಾಮೃತ ಪಾತ್ರ ಸಮಾನ ||೮||

ಶ್ರೀ ವೀರಭದ್ರಸರ್ಜಾಭಿದ ಸುತನು
ಮಾವರ ನಂದನ ಸುಮಂದಾರಯತನು
ಶಾವಕರತ್ನನು ಸೇವಕಹಿತನು
ಕೇವಲಾನಂದೋದಯಕರ ನುತನು ||೯||

ಶ್ರೀ ಮಲ್ಲೇಂದ್ರನ ಸೌಂದರ್ಯಸಾರ
ತಾ ಮೂರು ತೆರನಾಗಿ ತೋರ್ಪರು ಧೀರ
ಕಾಮಿನಿ ಶಿವಲಿಂಗಸರ್ಜ ಗಂಭೀರ
ಭೂಮೀಶಗತಿಹಿತ ವೀರಾಧಿವೀರ ||೧೦||

ಫಲಗುಣಸಮಶೂರ ದೊರಿ ಫಾಲ್ಗುಣದಿ
ರಮಣೀಯ ಸುತರೊಡಗೂಡುತ ಗುಣದಿ।
ಕ್ರಮದಿ ಸಚಿವ ಜಂಗಮ ತಿಂಥಿಣಿಯಿಂ ಸುಖಸಾಂದ್ರ
ಮುಖ್ಯರಿಂದಾಕ್ಷಣದಿವಿಮಲಾಂಗನ ಕಾರುಣೇಕ್ಷಣದಿ ||೧೧||

ಮೆರೆವ ಸಭಾ ಸಪ್ತಾಂಗ ಸಮೇತ
ತರಣಿಜ ಸಮ ವಿತರಣ ವಿಖ್ಯಾತ

ಧರಣೀಶವರ್ಯಾದಿ ನೇಷ್ಟದದಾತ
ಕರುಣಾಕರ ಖಂಡಿತ ರಿಪುಜಾತ ॥೧೨॥

ನೃತ್ಯ ಸಂಗೀತ ಸಾಹಿತ್ಯದಿ ನೃಪನು
ಸತ್ಯೇಂದ್ರಾನಂದದ ಸಭೆಯೊಳೊಪ್ಪಿಹನು
ನಿತ್ಯವಿನೋದ ವಿಲಾಸದೊಳಿಹನು
ಸ್ತುತ್ಯನು ದ್ಯುತ್ಯಾದಿತ್ಯ ಸನ್ನಿಭನು ॥೧೩॥

ರಂಗತರಂಗಗೊಳಿಪ ರಾಜೇಂದ್ರ
ಮಂಗಳಕರ ಮನ್ಮಥ ರುಚಿರುಂದ್ರ
ಅಂಗ ವಿವರ್ಣಗೊಳಿಪ ನೃಪಚಂದ್ರ ॥೧೪॥*

ಅಂಬರಗಳ ಚಿತ್ರಾಂಬರಗಳನು
ಶಂಭರಹರ ಸುಂದರ ಮಾಡುವನು
ಮುಂಬರಿದು ಕರದಿಂ ತುಳುಕುವನು
ಶಂಖಾಯುಧ ಸಮ ವಿಭವ ವಿಕ್ರಮನು ॥೧೫॥

ಪರಿಮಳ ಪಿಷ್ಟವ ಕರದೊಳು ಪಿಡಿದು
ನೆರೆದ ಸಭೆಯೊಳಿರ್ದರ ನೋಡಿ ಹೊಡೆದು
ಗುರುತಗಾಣದೆ ರಕ್ತೋದಕ ಸಿಡಿದು
ಅರಿವಿಗಂತರವಿಲ್ಲದ ಭಯವ ಪಡೆದು ॥೧೬॥

ಉದ್ದನಾದುದು ಮುರಿದೀತೆಂಬುವದು
ಸಿದ್ಧವಾದುದು ವನದೊಳು ಬೆಳೆದಿಹುದು
ಬದ್ಧವಾದ ಗಣೆಯನು ನೋಡಿ ಕಡಿದು
ಉದ್ದಾಮ ತರಿಸಲ್ಕದು ದೈವ ಪಡೆದು ॥೧೭॥

ಗುಣದಿಂದುಭಯ ಕಡೆ ಬಿಗಿದಿಹ ಗಣೆಯ
ಗಣಿಸಲು ಪಂಚವಿಂಶತಿ ಹಸ್ತಕೆಣೆಯ
ಗುಣಮಣಿ ತರಿಸಲದರ ದೈವ ಘೃಣೆಯ
ಕ್ಷಣದಾಕ್ರಮ ನೃಪಕುಲಶಿರೋಮಣಿಯ ॥೧೮॥

* ಇಲ್ಲಿ ಒಂದು ಸಾಲು ಇಲ್ಲ (ಸಂ.).

ಶ್ರೀ ರಂಜಿತ ಸುಕುಮಾರರಿಂ ಕೂಡಿ
ಯಾ ರಮ್ಯ ಗಣಿಯಾಟಕೆ ದೈವ ನೋಡಿ
ದಾರಿಗೆ ತೆರವಿಲ್ಲದಂತೆಳೆದಾಡಿ
ಸೂರ್ಯೋದಯವಾಗೆ ತೀರದಾ ಗಾಡಿ ||೧೯||

ಬೇಸರ ಭೂಪಾಲಗೆಂಬುದ ಕಾಣೆ
ಶ್ರೀ ಸಮರ್ಥನು ಗಣೆಯನು ನೀಲವೇಣೆ
ಭೂಸತಿಯೋತ್ಸವ ನಡೆಸಲು ಕೂಣೆ
ಶಾಸನ ಪ್ರಾಕಾರ ಮೀರಿತು ಜಾಣೆ ||೨೦||

ಮಲ್ಲೇಂದ್ರನಾ ಗಣೆಯ ತರಿಸಿದರಿಂದ
ಎಲ್ಲರಿಂ ಲೀಲಾಸ್ಪದವಾಯ್ತು ಚಂದ
ಪಲ್ಲವ ಪೂಮಾಲೆ ಪಡೆದದರಂದ
ಸೊಲ್ಲಿಸಲಾರೆನು ಸೊಬಗಿಲಿ ನಿಂದ ||೨೧||

ವೇಣುದಂಡಗಳನೊಂದೊಂದನು ಕೊಟ್ಟು
ಕ್ಷೋಣಿಗೀಶ ಕಾಮನನಾಕ್ಷಣ ಸುಟ್ಟು
ಮಾಣದೆ ಬಲವಂದು ಕಾಯ್ಗಳನಿಟ್ಟು
ಜಾಣ ನೋಡುವ ಜನರಚ್ಚರಿವಟ್ಟು ||೨೨||

ಈ ತೆರ ಕಾಮನಾಟವ ಭೂಪನಾಡಿ
ತಾ ತಣಿಯದಲಿಲ್ಲಿ ಸಭೆಯನು ಮಾಡಿ
ಗೀತವ ತಾಲ ಮೃದಂಗದಿ ಕೂಡಿ
ನೂತನ ಪದವ ಪಾಡುವರನು ನೋಡಿ ||೨೩||

ನೀಲಕಂಠಾರ್ಯರ ಭೂಪ ಕೇಳಿದನು
ಭಾಲಾಕ್ಷಿಯಿಂ ಶಿವ ಸ್ಮರನ ಸುಟ್ಟಿದನು
ಲೀಲೆಯೊಂದನು ಪೇಳಬೇಕೆನಲದನು
ಶ್ರೀಲ ದೇಶಿಕರಿಂದಾರಂಭಿಸಿದೆನು ||೨೪||

ಸಾರಸ ಭವನ ಕುರಿತು ತಾರಕನು
ಕ್ರೂರದಾನವನುಗ್ರತಪವ ಮಾಡಿದನು

ಭಾರತಿಯಾಣ್ಮ ತತ್ತಪಕೆ ಮೆಚ್ಚಿದನು
ಮೀರಿದ ವರವನಾ ದನುಜ ಬೇಡಿದನು ||೨೫||

ಹರನಿಂದಲೆಂದಿಗೆ ಸಾಯದ ವರವ
ಕರುಣಿಸೆನಲು ಚಿಂತಿಸಿದನೀ ಗರುವ
ದುರುಳ ನಮ್ಮೆಲ್ಲರ ಧುರದೊಳು ಮುರಿವ
ಪರಿ ಬಂದುದು ಕಷ್ಟ ಸುರರಿಗೆ ಕರವ ||೨೬||

ಎನುತಾಲೋಚಿಸಿ ಪಂಚಾಸ್ಯನಿಂದ
ನನಗೆ ಮರಣ ಬ್ಯಾಡ ಷಣ್ಮುಖ ಬಂದ
ದಿನವೇಳರೊಳು ಮೃತ್ಯು ಸಮನಿಸಲೆಂದ
ದನುಜಗಿತ್ತನು ವರವನು ಛದ್ಮದಿಂದ ||೨೭||

ವರವ ಪಡೆದು ತಾರಕಾಸುರನಂದು
ಮೊರೆವ ಬಲಕೆ ದಿವಿಜರು ಕಡು ನೊಂದು
ಹರಿಗೆ ಪೇಳಲು ಪರಿಹರವಾವುದೆಂದು
ಹರನಿಂದಲ್ಲದಾಗದು ಎಂದು ನಿಂದು ||೨೮||

ದಕ್ಷಗೆ ಬುದ್ಧಿ ಪೇಳಲು ಕೇಳದಿರಲು
ದಾಕ್ಷಾಯಣಿ ತತ್ಕಾಯವ ಬಿಡಲು
ಆ ಕ್ಷಣ ಹಿಮಗಿರಿಯೊಳಗವತರಿಸಲು
ತ್ರ್ಯಕ್ಷನು ಕೈಲಾಸದೊಳಗಿಲ್ಲದಿರಲು ||೨೯||

ಹರಿಯಾಲೋಚನೆ ಸುರರಾಗ ಕೇಳೆ
ಸ್ಮರನಿಂದ ತಪವ ಬಿಡುವನೆಂದು ಪೇಳೆ
ಗುರುವ ಕಳಿಸೆ ಮದನಗೆ ಬುದ್ಧಿ ಪೇಳೆ
ಗಿರೀಶನೊಡನೆ ಯುದ್ಧಕೆನುತಾಗಲೇಳೆ ||೩೦||

ಕಾಮ ತನ್ನಯ ಬಲವನು ಕೂಡಿಕೊಂಡು
ಹೇಮಕೂಟಾಚಲವನು ದ್ಭೂರ ಕಂಡು
ಕಾಮಿಸಿ ನಡೆವನಿತಕೆ ಮಾರ ದಂಡು
ತಾ ಮುಂದೆ ನಡೆಯಲು ಮಾಡಿ ತಾ ಬಂಡು ||೩೧||

ಮಗಳೆಮಗನುಪಮಳುದಿಸಿದಳೆಂದು
ಮಿಗೆ ಮೋಹದೊಳಿರೆ ನಾರದನರಿದು
ಗಗನದಿಂದಗವರನೆಡೆಗೈತಂದು
ಬಗೆಯ ಪೇಳಿದ ಜಗದಂಬಿಕೆಯೆಂದು ||೩೨||

ನಾರದ ಪೇಳಿದರಿಂ ಹಿಮಶೈಲ
ಗೌರಿಯೆಂದರಿದವಳಗಲಿದ ಮೂಲ
ಸೇರಿ ತಪವನಾಚರಿಪ ಪೂಗೋಲ
ಪಾರುಪತ್ಯಕೆ ಬಂದಿಹನಿದೆ ಕಾಲ ||೩೩||

ಈ ಸಮಯದಿ ದೇವಿಯ ಕಳಿಸೆನಲು
ಭಾಸುರ ರಥವ ಪಾರ್ವತಿಯನೇರಿಸಲು
ಶ್ರೀ ಶಿವನಿಹ ಹೇಮಕೂಟಕೆ ಬರಲು
ಆ ಶಂಭುವ ನಂದೀಶ ಕಾದಿರಲು ||೩೪||

ದೇವಿಯ ನುತ ಸಂಜೀವಿಯ ನೋಡಿ
ಭಾವಿಸಿ ಮನದೊಳು ವಂದನೆ ಮಾಡಿ
ಪೂವಿಲ್ಲ ತನ್ನಯ ಒಲವನುಗೂಡಿ
ಧಾವಿಸುವದ ಕಂಡು ಗಿರಿಜೆ ಮಾತಾಡಿ ||೩೫||

ಬಂದ ಕಾರಣವೇನು ಮದನ ಹೇಳೆನಲು
ಮುಂದೆ ನಾ ಮಾಡುವ ಕಾರ್ಯ ಕೇಳೆನಲು
ಇಂದೀಶನ ತಪವನು ನಾ ಕೆಡಿಸಲು
ಛಂದದಿ ನಿಮ್ಮೊಳೀಶ್ವರನು ಕ್ರೀಡಿಸಲು ||೩೬||

ಜನಿಸಿದ ಸುತನಿಂ ತಾರಕಾಸುರನು
ಹನನವಾಗುವನೆನಲೊಪ್ಪಿದೆ ನಾನು
ಜನನಿಯೆನಲು ಸಮ್ಮತಿಯಾದಳವನು
ಕನಲಿ ಎಸೆಯಲಗ್ನಿಗಣ್ಣ ತೆಗೆದನು ||೩೭||

ನೋಡಿದಾಕ್ಷಣ ಮದನನು ಬೂದಿಯಾದ
ಪ್ರೌಢೆ ರತಿಯು ಕೇಳಿ ಮಾಡಲು ಖೇದ

ಬೇಡವೆಂದಗಜಾತೆಯಾಲಿಸಿ ನಾದ
ಗಾಢದಿಂದಿರು ಎಂದೊಡೆದಳು ಬೋಧ ||೩೮||

ರತಿ ಪತಿ ದಹಿಸಿದ ಠಾವಿಗೆ ಬಂದು
ಧೃತಿಗುಂದಿ ಹೊರಳುತ ನರಳುತ ನಿಂದು
ಗತಿಮತಿಯೆನಗಾವುದೀಶ ಪೇಳೆಂದು
ಸತಿ ಶೋಕಿಸಲು ತಿಳಿದ ದೀನಬಂಧು ||೩೯||

ಆ ಸಮಯದಿ ಗಿರಿರಾಜಕುಮಾರಿ
ಶ್ರೀ ಶಂಕರನ ಸನ್ನಿಧಿಯನು ಸಾರಿ
ಆ ಸತಿಯನು ಸಂತೈಸು ಸ್ಮರಾರಿ
ಭೂಷಣವೆನಲಾಗ ಕಾರುಣ್ಯದೋರಿ ||೪೦||

ಮನಸಿಜನಾಗಿ ನಿನ್ನೊಳು ರತಿಗೂಡುವ
ನಿನಿಯನನಾರತ ತನು ಸುಖ ಬಿಡವ
ನೆನೆದರೆ ಸಿದ್ಧನಾಗುತ ಮಾರ್ನುಡಿವ
ನಿನಗೆ ಮುತ್ತೈದೆತನವು ಪಿಡಿ ದೃಢವ ||೪೧||

ಭಾವವ ಭಾವದೊಳೀಕ್ಷಿಸಿ ಸ್ಮರನ
ಶ್ರೀ ವಿಲಾಸದ ತನುರುಚಿಯ ಸುಂದರನ
ಭಾವೆ ತಾ ಕಂಡಳು ಮುನ್ನಿನ ತೆರನ
ಹಾವ ಭಾವದೊಳೆಸಗುವ ವರನ ||೪೨||

ಸಿತಿಗಳ ನೀನಿತ್ತ ವರದಂತೆ ಪತಿಯ ದ್ಯುತಿಯ
ರತಿಯ ಮಾಡುವ ಚಮತ್ಕೃತಿಯ
ಜತಿಯ ಕಂಡೆನು ದೃಕ್ಪಾವಕಾಹುತಿಯ
ಪತಿಯ ಭಸ್ಮವ ಧರಿಸೆಂಬಳ ನುತಿಯ ||೪೩||

ಆಲಿಸಿಯಭವನಂಗದಿ ಧರಿಸಿದನು
ಪ್ರಾಲೇಯ ಕುಂದೇಂದು ಧವಲಭಸ್ಮವನು
ಕೈಲಾಸ ಪರ್ವತಾಲಯವ ಸಾರಿದನು
ಲೀಲೆಯಿಂ ಮುನಿವೃಂದ ಸಿದ್ಧೇಶ್ವರನು ||೪೪||

ನೀಲಕಂಠಾರ್ಯರು ಶಿವಲೀಲೆಗೇಳಿ
ಶ್ರೀ ಮಲ್ಲಭೂಲೋಲಗೆ ಹೇಳಿ ಬಾಲಕನಂದ
ದಿ ಮೋಹವ ತಾಳಿ ಪಾಲಿಸಿದರು
ಚಿತ್ಸುಖಾಬ್ಧಿಯೊಳಾಳಿ ||೪೫||

೧೧೮

ರಾಗ-ಶ್ಯಾಮ ಕಲ್ಯಾಣಿ

ನೀರೆ ಸಖಿ ಶೃಂಗಾರೆ ನೀ ಕರೆತಾರೆ ದೊರೆ ಬಹದ್ದೂರನ
ವೀರ ದೊರೆ ಸುಕುಮಾರ ಸುಮವತಾರ ಗಂಭೀರನ ||ಪಲ್ಲ||

ಕಮಲವಾಸನೆ ಕುಲಸತಿ ಭೂರಮಣ ಸುಖಸಲ್ಲಾಪನ
ಭ್ರಮಿಸಿ ನಾ ಮರುಳಾದೆ ನೋಡದೆ ಸುಮತಿ ಸತ್ಕುಲದೀಪನ
ಕುಮುದಬಂಧುವ ಕಾಂತೆಯ ಸ[ಲ]ಹುವ ಪ್ರಮುಖ ಪುಣ್ಯಪ್ರತಾಪನ ||೧||

ಮಂದಮಾರುತ ಸೋಕಿ ನಾ ಕಡು ನೊಂದು ಸೈರಿಸಲಾರೆನೆ
ಬಂದು ಬೇಗನೆ ರಮಿಸನ್ಯಾತಕೆ ಸುಂದರಾಂಗ ವಜೀರನೆ ||೨||*

ಶಾಲೆ ಕಂಚುಕವಾಭರಣ ಮಣಿಮಾಲೆ ಎನಗೆರವಾದವೆ
ಕಾಲಕಾಲದಿ ಮಾಳ್ಪ ಸಾಧನಶೀಲ ವ್ರತವೆರವಾದವೆ
ಬಾಲೆ ಬೇಸರವಾಗಿ ಚಿತ್ತ ಕುಶಾಲದೋರದೆ ಪೋದವೆ ||೩||

ಎಂತು ಧ್ಯಾನಿಸಲೆಂತು ಯೋಚಿಸಲೆಂತು ಕಾಲವಗಳೆಯಲಿ
ಕಾಂತೆ ಲಾಲಿಸು ಕಾಯೆ ಯೌವನ ಎಂತು ನಾ ಹಿಂದುಳಿಯಲೆ
ಕಂತು ರೂಪಿಗ ಬಾರ ಬರಿದೆ ದುಶ್ಚಿಂತೆಯಾದೆನು ತಿಳಿಯೆಲೆ ||೪||

ನಲ್ಲೆ ನಿನ್ನಯ ಜಾನದೊಳ್ ತಿಳಿ ಮಲ್ಲಸರ್ಜನೃಪಾಲನ
ಇಲ್ಲಿ ಬಾಹವ್ಯೇತರದಿ ಮಾಡದೆ ಚೆಲ್ವಯಿಂದಿರಿ ಲೋಲ
ಸಲ್ಲಿಸುವ ರುದ್ರನಿಗೆ ಮನ ಚಾಪಲ್ಯ ಪ್ರಣಮ ಸಕೀಲನ ||೫||**

---

* ಇಲ್ಲಿಯ ಒಂದು ಸಾಲು ಹಸ್ತಪ್ರತಿಯಲ್ಲಿ ಇಲ್ಲ(ಸಂ)

** ಈ ರಚನೆಗೆ ಮುದ್ರಿಕೆ ಇಲ್ಲ(ಸಂ)

೧೧೯

ರಾಗ-ಶ್ರೀರಾಗ

ಬಲಯುತ ಸುಲಲಿತ ಚರಿತ
ಸಲಹೋ ಮಲ್ಲೇಂದ್ರ ||ದ್ರು||

ವಿತರಣಲೋಲ ವಿಜಯವಿಶಾಲ
ಶತಮಖವಿಭವಾಶ್ರಿತ ನುತ ಹಿತ ಕ್ಷಿತಿಪಾಲ ||೧||

ಕಾರಣಪುರುಷ ಕಾಮಿತಕೋಶ
ಹಾರಹೀರ ಮಂದಾರ ಗೌ[ರಾ]ರ್ಯ ವಿಶೇಷ ||೨||

ಸುರುಚಿರಗಾತ್ರ ಸುಮಹಸ್ತೋತ್ರ ವರದೇವ
ಪುರದ ಸಿದ್ಧೇಶ್ವರ ಕರುಣದಿ ಪೇಳಿದ ||೩||

೧೨೦

ಸಾರಸಾಕ್ಷಿ ಸತ್ವರದಲಿ ಸಖನ ಕರೆದು ತಾರೆ ತೋರೆ
ತೋರ ಮುತ್ತಿನ ಹಾರ ಸೂರೆಗೊಡುವೆ ನೀರೆ ||ದ್ರು||

ಕುಂದರದನೆ ಕುಶಲ ಕಾಂತನೊಂದು ದಿವಸ ತಡಿ
ಕಂದಿದೇನೆ ಕುಂದಿದೇನೆ ಮಂದಯಾನೆ ನಡಿ ||೧||

ಸಾರಹೃದಯ ಸದಯ ಸಾಕಾರ ಮಾರವೀರ
ಬಾರ ಮುಖವಿದು ಪ್ರಪಚಕೋರ ಸುಗುಣಧಾರ ||೨||

ಮುನಿಪುರಾಧಿನಾಥ ಪ್ರಖ್ಯಾತ ಸಿದ್ಧಲಿಂಗ
ಮುನಿವನಲ್ಲ ಮನವ ಬಲ್ಲ ಘನ ದಯಾಪಾಂಗ ||೩||

೧೨೧

ಸಾಂಬ ಸದಾಶಿವ ಸಾಂಬ ಜಯ ಜಗ
ದಂಬಕ ಕೋಟಿ ಮಯೂಖಮಯ ||ಪ||

ಸಾರಸಭವ ಸುರಪ ಪ್ರಮುಖ
ಸುರವಾರನತ ಪದಾಪಾರ ಸುಖ

ತಾರಾಕರಜಿತ ಗೌರನಖ ಸುಕು
ಮಾರ ಜನಕ ಶುಭ ಪಂಚಮುಖ ||೧||

ಶಂಬರಹರ ಪರ ಶರ್ಮಕರ ಲಸ
ದಂಬರ ಚಕೋರ ತ್ರಿಪುರಹರ
ಶಂಬರ ಸಂಭವ ಶತ್ರುಧರ ಹರಿ
ದಂಬರವರದಾ ಭೀತಿಕರ ||೨||

ದೀನಜನೇಷ್ಟದ ದಿವಿಜಕರೋ ಕರು
ಣಾನದೀನ ಲೋಕೈಕ ಗುರೋ ಮಾ
ನಿನಿವಹ ಸಿದ್ಧೇಶ ವಿಭೋ ಸು
ಜ್ಞಾನಪ್ರದ ದೇವೇಶ ವಿಭೋ ||೩||

❖❖

III

"ಮುಚಖಂಡಿವೀರ" ಮುದ್ರಿಕೆಯ ಪದಗಳು

ವಹಿ: ಎರಡು

೧೨೨

ರಾಗ-ಯರಕಲ ಕಾಂಬೋಧಿ

ಗುರು ಸಿದ್ಧೇಶ್ವರ ಕರುಣದಿ ಸಲಹೆನ್ನ ನಂಬಿದೆ ನಾ ನಿನ್ನ
ದೊರೆ ಮಲ್ಲೇಂದ್ರಗೆ ಬರುವ ದುರ್ಘಟವ
ಪರಿಹರಿಸಲಿ ಬಂದುರು ಚವಿಕೆಯಲ್ಲಿರುವ ಗುರುವೆ
ಸ್ಮರಹರವರ ಪಾವನ ಪರಮ ಪ್ರಸನ್ನ ||ದ್ರು||

ಮುನಿಜನ ನತಪದಪಂಕೇರುಹದ್ವಯನೇ ಸದ್ಭಕ್ತರ ತತಿಗೆ
ನೆನೆಯಲು ಬೇಡಿದ ಪದವನು ಪಾಲಿಪನೇ||
ಪಾಮರರಿಗೆ ತಿಳಿವಡೆ ಘನಮಹತ್ವವನೆಸಗಿ ತೋರುವನೆ
ಚಿನ್ಮಯ ಚಿದ್ರೂಪನೆ ವನಿತೆಯರೆಲ್ಲರು ತನುವನು ದಂಡಿಸಿ
ಮನವಿಟ್ಟತಿಶಯದಿ ದಿನದಿನ ಭಜಿಸಲು
ಘನಸಂಪದ ಸುತರನು ಕೊಡುತಿಹ ದೇವ ಮಾಡುವೆನು ಸೇವಾ ||೧||

ಮಂದಮತಿಗೆ ಆನಂದಬುದ್ಧಿಗಳನು ನೀನೀಯಲು ನಾ ನಲು
ವಿಂದ ಕವಿತವನು ಬಂದಂತ್ಹೇಳುವೆನು|ಯತಿವಡಿಪ್ರಾಸಗಳಲಿ
ಕುಂದ ಹತ್ತಗೊಡದಲಿ ಸವಿನುಡಿಗಳನು ನುಡಿಸೈ ಸ್ತುತಿಸುವೆನು
ಹೊಂದಿದವರ ದಯದಿಂದಲಿ ಸಲಹುವ
ತಂದೆ ನಿರಂತರ ಕಂದನ ಅವಗುಣ
ಒಂದು ನೋಡದೆ ಚಂದದಿ ಕಾಯಯ್ಯ ನಮಿಸುವೆ ದಮ್ಮಯ್ಯ ||೨||

ಕಿತ್ತೂರೆಂಬುವದುತ್ತಮ ಸ್ಥಲವೆಂದು ದೊರೆಗಳ ಸಂಕುಳದಾ ಸತ್ಯವಚನ
ಚರಭಕ್ತಿಗೊಲಿದು ಬಂದು ಅತಿಸಂತೋಷದಲಿ
ನಿತ್ಯೈಶ್ವರ್ಯಗಳೊದವಿಸುತ ನಿಂದು ಅನಾಥಬಂಧು
ಉತ್ತಮ ಗಂಣಗಳ ಬಿತ್ತರಿಪಡೆ ಮಹಿಪೊತ್ತ ಶೇಷನಿಗೆ ಗೊತ್ತು ತಿಳಿಯದಿಹ
ಕರ್ತು ಮುಚಖಂಡಿಯ ವೀರನ ಪಿತವೇಷಾ ಘನಮುಕ್ತಿಯ ಕೋಶಾ ||೩||

೧೨೩

ರಾಗ-ಸಾರಂಗ, ತಾಳ-ಆದಿ

ಆರತಿಯನು ಬೆಳಗಿರೆ ಶಿವಲಿಂಗಕ್ಕೊಲಿದು
ಆರತಿಯನು ಬೆಳಗಿರೆ।
ಧೀರಮಲ್ಲೇಂದ್ರ ಚಾರು ಕರದಿ ಕಳೆಯೇರಿ
ಮೆರೆವ ಮೃಡ ಮಾರಮರ್ದನಗೆ ॥ದ್ರು॥

ಸಿಂಧುರಾನನ ಪಿತಗೆ। ಹರಿಯಜ ಸುರ
ವೃಂದ ಇಂದ್ರಾದಿ ನುತಗೆ॥
ಮಂದರಗಿರಿವರಮಂದಿರ ಮುನಿಜನ
ವಂದಿತ ಚರಣಾರವಿಂದಗಳಿಗೆ ॥೧॥

ದೇವ ಗಂಗಾಧರಗೆ ಸದ್ಭಕ್ತಜನ ಸಂ
ಜೀವ ಪಾವನತರಗೆ।
ದೇವ ದೇವ ಭವದಾವ ದಾವಾನಲ
ಮಾವರ ನಯನದಿ ಸೇವಿತ ಪದಗೆ ॥೨॥

ಖಂಡಸುಧಾಂಶುಭೂಷಗೆ ಕರುಣಾಕರ ಮಾ
ರ್ತಾಂಡ ಕೋಟಿ ಪ್ರಕಾಶಗೆ।
ಚಂಡಿರೇಶ ಹರಿಮಂಡನ ಘನ ಅ
ಖಂಡ ಮೂರ್ತಿ ಮುಚಖಂಡಿವೀರಗೆ ॥೩॥

೧೨೪

ರಾಗ-ಸಾವೇರಿ, ತಾಳ-ಆದಿ

ಶಮಶೇರಜಂಗ ಬಹಾದ್ದೂರ
ರಾಜೇಂದ್ರ ಚಂದ್ರ ಮಲ್ಲೇಂದ್ರ ॥ದ್ರು॥

ರಾಜರಾಜಸಖ ಪೂಜದುರಂದರ
ರಾಜರತ್ನ ಮಲ್ಲೇಂದ್ರ ॥೧॥

ರಾಜಿಸುತಿಹ ಸುರರಾಜರಂತೆ
ದ್ವಿಜರಾಜ ಮಲ್ಲೇಂದ್ರ ॥೨॥

ಅತಿಶಯವನು ಸದ್ಗತಿಯ ಕಾಂಬ
ಸಂಗತಿಯಲ್ಲಿರ್ಪ ಮಲ್ಲೇಂದ್ರ ||೩||

ನಂದನರೀಕ್ಷಿಸಿ ಮಂದಹಸಿತದಾ
ನಂದದೋರ್ಪ ಮಲ್ಲೇಂದ್ರ ||೪||

ಕಂದುಗೊರಳನಿವರೆಂದು ಜಂಗಮ
ಕ್ಕೊಂದಿಸುತಿಹ ಮಲ್ಲೇಂದ್ರ ||೫||
ನೋಡಿ ಚರಕೆ ತಾ ಬೇಡಿದ ವಸ್ತುವ
ನೀಡುತಿರ್ಪ ಮಲ್ಲೇಂದ್ರ ||೬||

ಲಕ್ಷದ ತೊಂಬತ್ತಾರು ಸಾಸಿರಕೆ
ಭಿಕ್ಷವೀವ ಮಲ್ಲೇಂದ್ರ ||೭||

ಪಾದಪೂಜೆಯನು ಸಾಧಿಸಿ ಮಾಳ್ಪ
ವಿನೋದಗಾರ ಮಲ್ಲೇಂದ್ರ ||೮||

ಧೀರ ಮುಚಖಂಡಿವೀರನ ಕೃಪೆ
ಪೂರ ಪಡೆದ ಮಲ್ಲೇಂದ್ರ ||೯||

೧೨೫

ರಾಗ-ಶ್ಯಾಮಕಲ್ಯಾಣ, ತಾಳ-ತ್ರಿವಿದಿ

ಬಂದು ರಕ್ಷಿಸು ಸುಂದರಿಯ ಮ
ಲ್ಲೇಂದ್ರಭೂಪತಿ ಚಂದ್ರನೆ ||ದ್ರು||

ಕುಸುಮಶರನ್ನೆದೆಸೆವ ಬಾಣದ
ಘಸಣೆಯ ಸೈರಿಸಲಾರದೆ
ಮಿಸುಪ ದೇಹ[ವ] ವಸುಧಿಪತಿ ನಿ
ನ್ನೊಶವ ಬಯಸುತಿರ್ಪಳು ||೧||

ಅರಳು ಮಲ್ಲಿಗಿ ಸರಸ ಕ್ಯಾದಿಗಿ
ಪರಿಮಳಗಳ ಸುಗಾಳಿಯು
ಮುರಳು ಕರಗಸ ಉರಗನುಗುಳಿದ
ಗರಳ ತರುಣಿಗೆ ತೋರ್ಪವು ||೨||

ಒಡೆಯ ಮುಚಖಂಡಿವೀರನಾ ಕೃಪೆ
ಪಡೆದ ಕಿತ್ತೂರ ರಾಜನೇ
ಮಡದಿಯಳ ಕರ ಹಿಡಿಯಾನಂದದಿ
ಪೊಡವಿಪತಿ ಮಲ್ಲೇಂದ್ರನೇ ||೩||

೧೨೬

ರಾಗ-ಬೇಗಡ

ಕಾಂತಾ ಮಲ್ಲೇಂದ್ರನ ತೋರೇ ಕಾಂತಾ ||ದ್ರು||

ನಂದನಂದನ ನಂದನಸಮ ಸುಂದರ
ನಂದವ ಕಾಣದಿರಲಾರೆ ||೧||

ಅಂಗನೆ ಶಮಶೇರಜಂಗ ಬಹದ್ದೂರ
ಸಂಗ ಸುಖದಿ ಮನಪೂರೆ ||೨||

ಪೊಡವಿಪ ಮುಚಖಂಡಿ ಒಡೆಯ ವೀರನ
ಕೃಪೆ ಪಡೆದ ನೃಪನ ಕರೆತಾರೆ ||೩||

೧೨೭

ರಾಗ:ಶಂಕರಾಭರಣ ತಾಳ ತ್ರಿತಾಳ

ನಾರಿಮಣಿ ಕರೆತಾರ ನೀ ಹೋಗಿ ಮಲ್ಲೇಂದ್ರಗೆರಗಿ
ಚಾರು ಚೆನ್ನಿಗ ಬಾರದೆನ್ನನು ಮಾರನತಿಶಯ।
ಘೋರಿಸುವ ಸಖಿ ತೋರೆ ಶಮಶೇರಜಂಗ ಬಹಾದ್ದೂರನಾ
ಭಕ್ತಿಮಂದಿರನಾ ||ದ್ರು||

ಇಂದು ಮುಖಿಯಳೆ ಇಂದು ಸದನದಿ ಬಂಧುಜರ ಹಿತ
ಬಂಧುರತ್ವದಿ ಬಂದು ಬೆರೆವುವದೊಂದುಪಾಯಾನಂದ
ದಿಂದ ಅಂದಗೊಳಿಸಲು ಅಂದುಗೆಯ
ನಿನಗಿಡುವೆನು ದೂತೆ
ಭೂಪತಿ ಎನ್ನೊಳೆಂದು ಎಂದಿಗೆ ಇರುತಿಹನು
ಪ್ರೀತೆ ಈ ವ್ಯಾಳೆಕಾತನ ಹೊಂದಿಕೆಯು ಎನಗಿಲ್ಲದಾಯ್ತೆ

ಹತ್ತಿಯದು ಭೀ[ತಿ] ಬಂಧುಗಳ ಮಲ್ಲೇಂದ್ರನಲಿ ಮರತೆ
ಸುಂದರಗೆ ಸೋತೆ ||೧||

ಸುಳಿವ ಮಾರುತ ಅಳಿಯ ಝೇಂಕೃತ ಗಿಳಿಗಳೆಸಗುವ
ಕಳಕಳಿಕೆ ಶಶಿಕಳೆಯದೋರಲು ತಳಿರಬಾಣವ
ಸೆಳೆದು ಮದನನು ಬಳಲಿಸುವನಸು
ಗಳೆವ ಸಮಯಾಗಿರುವದೆನಗೇಳೇ
ಮದ್ರಮಣಗೀಗೆ ಉಳಿಸಿಕೊ ಎಂದೆನುತ ನೀ ಹೇಳೆ
ಭಾವಜ ರೂಪನ ಸುಳಿಹುಗಾಣದೆ ಭ್ರಮಿಸುವೆನು ಬಹಳೆ
ನಿದ್ರಿಲ್ಲದಿರುಳೆ ನಳಿನಮುಖಿ ನಾ ನಂಬಿದೆನು
ಕೇಳೇ ಎಳೆದುಂಬಿಗುರುಳೆ ||೨||

ಧಾರುಣಿಯಲಿ ಮಿಗೆ ಮೀರಿರುವ ಕಿ
ತ್ತೂರ ರಾಜೇಂದ್ರುದಾರ ದೊರೆ ಗಂಭೀರ
ಕರುಣಕುಮಾರ ಮುಚಖಂಡಿವೀರನಾ ಕೃಪನಾಗಿಹ ಶೂರ
ಶ್ರೀ ಮಲ್ಲೇಂದ್ರಮಹೀನಾಥ||
ಬಗೆಬಗೆಯ ಬಂಧವಿಚಾರವನು ಬಲ್ಲಂಥ ಪ್ರಖ್ಯಾತಾ
ಅರಿಗಜಗಳಿಗೆ ಕಂಠೀರವನವೊಲಿರ್ಪ ಸಮರ್ಥ ಬುಧಜನಪ್ರೀತ||
ನೀರೆ ನಿಮು[ಷ]ದಿರಲಾರೆ ಎನ್ನಾತ ಸಲುವಂತ ದಾತಾ ||೩||

೧೨೮

ತಾಳ-ಆದಿ

ಬಾರೆ ಕರೆತಾರೇ ಮಲ್ಲೇಂದ್ರ ಭೂಪಾಲನು
ಮಾರಸನ್ನಿಭ ಸುಕುಮಾರ ದಯಾರಸಪೂರ ||ದ್ರು||

ಮಂದಗಮನೆ ತನ್ನ ಹೊಂದಿರುತಿಹಳಿಗೆ
ಮಂದಹಸಿತಾನನ ದೊರೆ ಬುಧಮಂದಾರ ||೧||

ಅಂಗಜಾತನ ತಾಪ ಅಂಗದಲತಿಶಯ
ಹಿಂಗಿರಲಾರೆ ಶಮಶೇರ ಜಂಗ ಬಹದ್ದರನಾ ತೋರೆ ||೨||

ಮನದನ್ನನಿಲ್ಲದೆ ಮನಸು ತಾ ನಿಲ್ಲದೆ
ವಿನುತ ಮುಚಖಂಡಿ ವೀರೇಶನ ಭಜಕ ಮಲ್ಲೇಶ ||೩||

೧೨೯

ತಾಳ-ಆದಿ

ಮಲ್ಲೇಂದ್ರ ಮಾರನ। ಸಮತೇಜ ||ಧ್ರು||

ಮಂದಹಸಿತಯುತ ಇಂದುವದನ ಆ
ನಂದಿತ ನಯನಸರೋಜ ||೧||

ಹಿಂದುಭೂಪರೊಳ್ ಮಂಡೆಯ ಮಣಿ ಘನ
ಪಂಡಿತಜನ ಸುರಭೂಜ ||೨||

ಶಾಂತ ಶ್ರೀ ಮುಚಖಂಡಿ ವೀರೇಶನ
ಒಲವಾಂತ ಕಿತ್ತೂರ ವರರಾಜ ||೩||

೧೩೦

ರಾಗ-ಭೈರವಿ, ತಾಳ-ಆದಿ

ಪ್ರಾಣಪತಿ ಮಲಸರ್ಜ ಬಾರನ್ಯಾಕೆ ನೀರೆ ||ಧ್ರು||

ಸುರಪನ ಭೋಗಿ ತರಣಿಜ ತ್ಯಾಗಿ
ಕರುಣಶರಧಿ ತ್ವರಿತದಿ ಕರೆತಾರೆ ||೧||

ಕಂದರ್ಪ ಕಾಂತಿ ಚಂದಿರ ಶಾಂತಿ
ಹೊಂದಿದ ಸುಂದರಾನಂದ ತೋರೆ ||೨||

ವರ ಕಿತ್ತೂರ ದೊರೆ ಶಮಶೂರ ನಿರುತ
ಮುಚಖಂಡಿವೀರನ ಕೃಪೆ ಪೂರ ||೩||

೧೩೧

ರಾಗ-ನೀಲಾಂಬರಿ

ಮಾರನ ಸಮರೂಪ।ಧೀರ ಮಲ್ಲೇಂದ್ರಭೂಪ
ಬಾರೆ ಕರೆತಾರೆ ಪ್ರಾಣಾಪಾಯಕಳಾದೆ ಕೇಳದೆ ||ಧ್ರು||

ಕುಂದಕಟ್ಮಳ ರದನ। ಚಂದಿರ ಸಮವದನ
ಸುಂದರ ಸದ್ಗುಣ ಸದನ ||೧||

ಮುಗುಳ್ನಗಿ ಸೊಗಸಿನ । ಬಗೆಯದೋದರೆ ಎನ್ನ
ಅಗಲಿಹರೇನೇ ಮೋಹನ್ನ ||೨||

ಅಂಗನೆ ಶಮಶೇರ । ಜಂಗ ಬಹಾದ್ದೂರ
ಸಂಗೀತಲೋಲ ಗಂಭೀರ ||೩||

ಚಿತ್ತಜತಾಪಕೆ। ಚಿತ್ತದೊಲ್ಲಭ ಬೇಕೆ
ಪೃಥ್ವೀಶನ ದಯವಿದ್ದರೆ ಸಾಕೆ ||೪||

ದೇವ ಮುಚಖಂಡಿಯ ।
ಶ್ರೀ ವೀರೇಶನ ದಯ
ತಾ ವಹಿಸಿಕೊಂಡಿರ್ಪ ರಾಯ ||೫||

❖❖

ಲಿಂಗಾಯತ ಪ್ರಾಚೀನ ಅಪ್ರಕಟಿತ ಸಾಹಿತ್ಯಮಾಲೆ : ೭೧

ಕಿತ್ತೂರು ಸಂಸ್ಥಾನ ಸಾಹಿತ್ಯ

[ಭಾಗ–ಮೂರು]

ಡಾ. ಎಂ.ಎಂ.ಕಲಬುರ್ಗಿ

೨೦೧೫

ಲಿಂಗಾಯತ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ
ಯಡೆಯೂರು–ಡಂಬಳ–ಗದಗ

*

ಪ್ರಸ್ತಾವನೆ

ಆಂಗ್ಲರು ಆಳುವ ಸಂದರ್ಭದ ಕರ್ನಾಟಕದ ಸಂಸ್ಥಾನಗಳಲ್ಲಿ ಕಿತ್ತೂರು ದೇಶಗತಿಗೆ ವಿಶೇಷ ಸ್ಥಾನವಿದೆ. ಹೀಗಿದ್ದೂ ಅದರ ಸಿದ್ಧಿ–ಪ್ರಸಿದ್ಧಿಗಳನ್ನು ಸರಿಯಾಗಿ ಚಿತ್ರಿಸುವ ಪ್ರಯತ್ನ ಈ ವರೆಗೆ ಜರುಗಲಿಲ್ಲ. ಕರ್ನಾಟಕ ಸರ್ಕಾರ ಅಕ್ಟೋಬರ್ ೨೪ರಂದು ಆಚರಿಸುವ 'ಕಿತ್ತೂರು ಉತ್ಸವ'ದಲ್ಲಿ ಇಂತಹ 'ವಿದ್ವತ್ ಪ್ರಯತ್ನ'ವನ್ನು ಕೂಡಲೇ ಕೈಕೊಳ್ಳಲಾಗುವುದೆಂದು ವೇದಿಕೆಯ ಮೇಲೆ ನಿಂತು ಹೇಳುತ್ತಲಿರುವುದು ಈ ವರೆಗೆ ಕೇವಲ ಘೋಷಣೆಯಾಗಿ ಉಳಿದಿದೆ.

ಇಂತಹ ಸಂದರ್ಭದಲ್ಲಿ ಕೆಲವು ವಿದ್ವಾಂಸರು ಸೀಮಿತ ಆಕರಗಳನ್ನು ಆಧರಿಸಿ ಒಂದೆರಡು ಪುಸ್ತಕ, ಕೆಲವು ಲೇಖನ ಬರೆದುದು ಶ್ಲಾಘನೀಯವಾದುದು. ಈ ಶ್ರೇಣಿಯಲ್ಲಿ ನಾನು ಕಿತ್ತೂರು ಸಂಸ್ಥಾನಿಕರ ಆಸ್ಥಾನದಲ್ಲಿ ಹುಟ್ಟಿದ ಕೆಲವು ಹಾಡುಗಳನ್ನು ನನ್ನ ವಿದ್ಯಾರ್ಥಿ ಮಿತ್ರರ ನೆರವಿನಿಂದ ಸಂಶೋಧಿಸಿ–ಸಂಸ್ಕರಿಸಿ 'ಕಿತ್ತೂರು ಸಂಸ್ಥಾನ ಸಾಹಿತ್ಯ' ಹೆಸರಿನಿಂದ ಎರಡು ಸಂಪುಟಗಳನ್ನು ಪ್ರಕಟಿಸಿದ್ದೇನೆ. ಇವು ಗದುಗಿನ ಶ್ರೀ ಎಡೆಯೂರು ತೋಂಟದಾರ್ಯ ಸಂಸ್ಥಾನಮಠದ ಲಿಂಗಾಯತ ಅಧ್ಯಯನ ಸಂಸ್ಥೆಯ ಮೂಲಕ ಪ್ರಕಟವಾಗಿವೆ(೧೯೯೯, ೨೦೦೫). ಈಗ ಇದರ ಮುಂದುವರಿಕೆಯಾಗಿ ಪ್ರಸ್ತುತ ಮೂರನೆಯ ಕೃತಿ ಬೆಳಕು ಕಾಣುತ್ತಲಿದೆ.

ಈ ಕೃತಿ ಎರಡು ದೊಡ್ಡ ಲೇಖನಗಳ ಸಂಯುಕ್ತ ಸಂಪುಟವಾಗಿದೆ. ಒಂದು: 'ನಿರ್ಣಯ ಪುರಾಣ' ಹೆಸರಿನ ಪ್ರಾಚೀನ ಗ್ರಂಥದಿಂದ ಕಿತ್ತೂರು ಸಂಸ್ಥಾನಕ್ಕೆ ಮತ್ತು ಅದರ ಸಮಕಾಲೀನ ಸಮಾಜಕ್ಕೆ ಸಂಬಂಧಪಟ್ಟ ವಿಷಯಗಳನ್ನು ಆಯ್ದು, ನಾನು ಬೆಳಗಾವಿಯ ಶ್ರೀ ನಾಗನೂರುಮಠದ ಲಿಂಗಾಯತ ಪತ್ರಿಕೆ (೨–೪, ೫, ೬, ೭, ೮, ೯, ೧೦, ೧೧, ೩–೧, ೨, ೩)ಯಲ್ಲಿ ಪ್ರಕಟಿಸಿದ್ದ, ಮಾರ್ಗ–೩ ಕೃತಿಯಲ್ಲಿ ಮರುಮುದ್ರಿಸಿದ್ದ ಸುದೀರ್ಘ ಲೇಖನವನ್ನು ಇಲ್ಲಿ ಎತ್ತಿಕೊಳ್ಳಲಾಗಿದೆ. ಎರಡು: "Miscellaneous Notes of Sir Walter Elliot" ಪುಸ್ತಕದಿಂದ ಆಯ್ದುಕೊಂಡ 'SKETCH OF THE EVENTS IN THE SOUTHERN MARATHA COUNTRY, CONNECTED WITH THE INSURRECTIONAT KITTUR BETWEEN SEPTEMBER AND DECEMBER, 1824' ಎಂಬ ವಾಲ್ಟರ್ ಎಲಿಯಟ್‌ರವರ ಲೇಖನವನ್ನೂ ಇದರ ಕನ್ನಡ ಅನುವಾದವನ್ನೂ (ದಕ್ಷಿಣ ಮರಾಠಾದೇಶಕ್ಕೆ ಸೇರಿದ ಕಿತ್ತೂರಿನಲ್ಲಿ ೧೮೨೪ರ ಸಪ್ಟಂಬರ್ ಮತ್ತು ಡಿಸೆಂಬರ್ ನಡುವೆ

ಜರುಗಿದ ಬಂಡಾಯಕ್ಕೆ ಸಂಬಂಧಿಸಿದ ಘಟನಾವಳಿಗಳು. ಅನು: ಡಾ. ಸಿ. ಆರ್. ಯರವಿನತೆಲಿಮಠ) ಇಲ್ಲಿ ಸೇರಿಸಲಾಗಿದೆ.

ಕಿತ್ತೂರು ಪುರಾಣ ಪರ್ಯಾಯ ನಾಮದ ನಿರ್ಣಯ ಪುರಾಣವು ರಾಣಿ ಚೆನ್ನಮ್ಮನ ಕಾಲಾವಧಿಯಲ್ಲಿ ಹುಟ್ಟಿದೆ. ಇದರ ಕರ್ತೃ ಸಿಂಧೆ ಮುನವಳ್ಳಿಯ ಸಾಲೊಟಗಿ ಮಠದ ಶ್ರೀ ಶಿವಲಿಂಗಸ್ವಾಮಿಗಳೆಂದೂ, ಇದರ ಒಂದು ಪ್ರತಿ ಪುಣೆಯ ಪತ್ರಾಗಾರ ಇಲಾಖೆಯಲ್ಲಿ, ಇನ್ನೊಂದು ಪ್ರತಿ ಬೈಲಹೊಂಗಲದ ಶ್ರೀ ದೊಡ್ಡಭಾವೆಪ್ಪ ಮೂಗಿ ಅವರಲ್ಲಿ ಇರುವುದಾಗಿ ತಿಳಿದು ಬರುತ್ತದೆ. ಬಹುಶಃ ಶ್ರೀ ದೊಡ್ಡಭಾವೆಪ್ಪ ಮೂಗಿ ಅವರ ಪ್ರತಿ ಧಾರವಾಡದ ಕನ್ನಡ ಅಧ್ಯಯನಪೀಠಕ್ಕೆ ಬಂದಿದ್ದು, ಇದನ್ನು ಆಧರಿಸಿ ನಾನು ಈ ಲೇಖನಗಳನ್ನು ಬರೆದಿದ್ದೇನೆ. ಇದು ಕಿತ್ತೂರು ಸಂಸ್ಥಾನದ ಬಗ್ಗೆ ಮತ್ತು ಅದರ ಪರಿಸರದಲ್ಲಿ ಜರುಗಿದ ಘಟನೆಗಳ ಬಗ್ಗೆ ವಿವರಗಳನ್ನು ಒದಗಿಸುತ್ತದೆ.

ವಾಲ್ಟರ್ ಎಲಿಯಟ್ ಧಾರವಾಡ ಕಲೆಕ್ಟರ್‌ನಾಗಿದ್ದ ಥ್ಯಾಕರೆ ಕೈಕೆಳಗೆ ಅಧಿಕಾರಿಯಾದ್ದನು. ಇವನೂ, ಇನ್ನೊಬ್ಬ ಅಧಿಕಾರಿಯಾಗಿದ್ದ ಸ್ಟೀವನ್‌ಸನ್‌ನೂ ಕಿತ್ತೂರು ಕಾಳಗದ ಸಂದರ್ಭದಲ್ಲಿ ಆ ಸಂಸ್ಥಾನದ ನೇರಸಂಪರ್ಕದಲ್ಲಿದ್ದವರು, ಕಿತ್ತೂರಿನ ಎರಡೂ ಯುದ್ಧಗಳನ್ನು ಕಣ್ಣಾರೆ ಕಂಡವರು. ಇಷ್ಟೇ ಏಕೆ, ಮೊದಲನೆಯ ಯುದ್ಧದಲ್ಲಿ ಸೋತ ಬ್ರಿಟಿಷರಲ್ಲಿ ಕೆಲವರನ್ನು ಕಿತ್ತೂರಿನವರು ಸೆರೆ ಹಿಡಿದಿದ್ದರು. ಇವರಲ್ಲಿ ಎಲಿಯಟ್ ಮತ್ತು ಸ್ಟೀವನ್‌ಸನ್ ಮುಖ್ಯರು. ಅಕ್ಟೋಬರ್, ನವೆಂಬರ್ ಈ ಎರಡೂ ತಿಂಗಳು ಕಿತ್ತೂರಿನಲ್ಲಿ ನಗರಬಂದಿಯಾಗಿದ್ದ ಎಲಿಯಟ್ ಈ ಎರಡೂ ಯುದ್ಧಗಳ ವಿವರವನ್ನು ಈ ಲೇಖನದಲ್ಲಿ ದಾಖಲಿಸಿದ್ದಾನೆ. ಕಂದಾಯ ಅಧಿಕಾರಿಯಾಗಿದ್ದರೂ ಈತನ ಶಿಕ್ಷಣ, ಇತಿಹಾಸಗಳ ಪ್ರೀತಿ ಅನನ್ಯವಾದುದು. ಈ ಪ್ರದೇಶದ ಭಾಷೆ ಮರಾಠಿಯಲ್ಲ, ಕನ್ನಡ. ಹೀಗಾಗಿ, ಇಲ್ಲಿ ಕನ್ನಡ ಶಾಲೆಗಳನ್ನು ಆರಂಭಿಸಬೇಕೆಂದು ಬ್ರಿಟಿಷ್ ಸರಕಾರವನ್ನು ಒತ್ತಾಯಿಸಿದ ಪ್ರಥಮವ್ಯಕ್ತಿ ಈತ. ಸರಕಾರದ ಭರವಸೆಯನ್ನು ನಂಬಿ ಕನ್ನಡ ಶಾಲೆಯನ್ನು ಆರಂಭಿಸಿ, ಕೆಲವು ತಿಂಗಳು ಸ್ವಂತ ಹಣದಿಂದಲೇ ಶಿಕ್ಷಕರ ಸಂಬಳ ನೀಡಿದುದು ಇವನ ಕನ್ನಡ ಪ್ರೀತಿಗೆ ನಿದರ್ಶನವೆನಿಸಿದೆ. ಇದಲ್ಲದೆ ಇತಿಹಾಸದ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದ ಇವನು ಮುಂಬೈ ಕರ್ನಾಟಕ, ನಿಜಾಮ ಕರ್ನಾಟಕದ ಪಶ್ಚಿಮ ಭಾಗ, ಹಳೆಯ ಮೈಸೂರು ಪ್ರಾಂತದ ಉತ್ತರ ಭಾಗಗಳಿಂದ ೧೩೦೦ ಶಾಸನಗಳನ್ನು ಸಂಗ್ರಹಿಸಿ, ಇವುಗಳಲ್ಲಿ ೫೯೫ ಶಾಸನಗಳನ್ನು ಆರಿಸಿಕೊಂಡು 'ಕರ್ನಾಟಕ ದೇಶ್ ಇನ್‌ಸ್ಕ್ರಿಪ್ಶನ್ಸ್' ಹೆಸರಿನ ಸಂಪುಟವನ್ನು ಸಿದ್ಧಪಡಿಸಿದ್ದಾನೆ. ಇದೆಲ್ಲವನ್ನು ನೋಡಿದರೆ ಇತಿಹಾಸ ಪ್ರಜ್ಞೆಯ ಈತನ ಈ ಬರಹ ಪ್ರಾಮಾಣಿಕವಾಗಿರಬಹುದಾಗಿದೆ. ಹೀಗಿದ್ದೂ ಇದು ವಿರೋಧಪಕ್ಷದವನ ಬರವಣಿಗೆಯೆಂಬುದನ್ನು ಮರೆಯಲಾಗದು. ಆದುದರಿಂದ ಇಂಗ್ಲೆಂಡಿನ ಬ್ರಿಟಿಷ ಲೈಬ್ರರಿಯಿಂದ ತಂದಿದ್ದ ಈ ಇಂಗ್ಲಿಷ್ ಪಠ್ಯವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಕನ್ನಡ ಭಾಷಿಕರಿಗೂ ಇದರಲ್ಲಿಯ ವಿಷಯ ತಿಳಿಯಲೆಂದು ಇದನ್ನು ಇಲ್ಲಿ ಅನುವಾದಿಸಲಾಗಿದೆ. ತುಂಬಾ ಶ್ರದ್ಧೆಯಿಂದ ಅನುವಾದ ಕಾರ್ಯ ಪೂರೈಸಿದ ಡಾ.ಸಿ.ಆರ್.ಯರವಿನತೆಲಿಮಠ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಕೃತಿಯನ್ನು ಪ್ರಕಟಿಸುತ್ತಿರುವ ಗದುಗಿನ ಶ್ರೀ ಎಡೆಯೂರು ತೋಂಟದಾರ್ಯಮಠದ ಲಿಂಗಾಯತ ಅಧ್ಯಯನ ಸಂಸ್ಥೆಗೆ, ಇದರ ಅಧಿಪತಿಗಳಾಗಿರುವ ಪೂಜ್ಯ ಶ್ರೀ ತೋಂಟದ ಸಿದ್ಧಲಿಂಗಸ್ವಾಮಿಗಳಿಗೆ ಭಕ್ತಿಪೂರ್ವಕ ನಮಸ್ಕಾರಗಳನ್ನು ಸಲ್ಲಿಸುತ್ತೇನೆ.

❖❖

*

ಪರಿವಿಡಿ

SKETCH OF THE EVENTS IN THE SOUTHERN MARATHA COUNTRY CONNECTED WITH THE INSURRECTION AT KITTUR BETWEEN SEPTEMBER AND DECEMBER, 1824[1]

-Sir Walter Elliot

Having in the India Office accidentally met Mr. Jardine, B.C.S. who had formerly been employed in my old District in the Southern Maratha Country, he requested me to give him some account of the insurrection at Kittur in 1824, of which I am now probably the only survivor. And although my memory does not allow me, after the lapse of sixty-one years, to recall the more minute incidents connected with that affair, the main features of the event are so deeply impressed on my recollection that I am able to do so with the assistance of a memorandum, only now accidentally discovered among my papers. It was written a few months after the event, with the view of exculpating the principal actors, both civil and military, from the blame which was freely attributed to them.

---

1. See an acconunt of the further consequences of this affair in the Ind. Asnt. xiv., p. 293; *Bom, Gan.* (Belgaum), p. 581; *Historical Account of Belgaum District in the bombay presidency(1870)* p. 82. by H. J. Stokes, M.C.S.

appears that, after mustering the different pagas from the countr instead of returning them to their separate villages they were kept at Nandihali, within two miles of Kittur, and actually came and participated in the affair on the 23rd.

Many of the best kataks who came to the Dassera were likewise retained, and acted a conspicuous part on the day. A little circumstance occurred to myself which marked the temper of the people. We were beating a jungle near Kittur with some of the Sardars, when Gurusiddapah, taking an opportunity when I was quite alone, came up and asked me when the Government would come to some decision regarding the Samasthan. I said, when the answer from the Sarkar should arrive. He rejoined that the people were of a martial character, and strongly attached to the Samasthan, and again dwelt on their warlike disposition, describing the country as "Katak-ka-Mulk." This I repeated to Mr. Thackery. About this time it was determined by Government to do away with the Cantonment at Kaladgi, the force being divided between Sholapur and Belgaum. Mr. Thackery represented to Colonel Pierce the excellent supply of forage and water at Kittur, and recommended part of it being sent thither; but whether he specified the Troop of Horse Artillery I do not know. However, on the 18th inst the C Troop of Native Horse Artillery arrived at Kittur, under command of Capt. Black, with Lieuts. Sewell and Dighton. This was not considered a military measure; for Mr. Thackery repeatedly expressed an opinion that the country would be settled without the interference of an armed force.

Still no answer was received from Government regarding the final disposal of the place. The people daily showed more distrust and jealousy of our proceedings; and Mr. Thackery evinced much solicitude at the state of suspense in which he was placed, and I believe wrote in urgent terms to Mr. Chaplin on the subject. The elder Desaini, too, and Gurusiddapah, in whom she chiefly trusted, finding that day after day passed in this uncertainty, exhibited much impatience, and even talked of setting out for Bombay to lay their claims before the Governor himself.

They became more determined in this plan, which at first they had mentioned as a mark of discontent; and at length they actually made preparations, and proposed to carry the money in the treasury (to the amount of nearly 9 lakhs of rupees)with them. This Mr. Thackery declared he could not allow, as he was responsible to Government for the money, the amount of which he had already reported; and finding that they persisted, he, on the 20^{th} Oct., ordered his escort to take possession of the two gates of the fort, 30 men at each, and to suffer no one to go out without his permission. He then proceeded to take measures for the security of the public property of the Samasthan, such as sealing up the treasury, etc., the people manifesting increasing symptoms of anger and discontent but having been very unwell for two or three days previous, I did not myself observe what passed. On the 22^{nd}, as I went into the Fort to the Kacheri with Messrs, Thackery and Stevenson, the most unequivocal marks of bad feeling were shown; and, indeed, all intercourse seemed broken off. Mr. Thackery, in the evening, sent for the principal Sardars to expostulate with them; but they distinctly refused to come, alleging that they were not treated with respect. Mr. Thackery, though always kind and attentive in his intercourse with the people, had, on one or two occasions, among his frequent interviews with Gurusiddapah, requested him to be seated on the ground, as there was no chair present. This, it was afterwards discovered, had given great offence. Mr. Thackery now wrote a few lines to Capt. Black, Stating shortly the temper that had been displayed, and desiring him to send down a division of guns to the fort for the purpose of overawing the people. Capt. Black came down with them himself; but on arriving at the gates, he found them locked and entrance refused; for though Mr. Thackery had placed his escort there, the gates (3 in number) were not all in our possession, the men being posted at the innermost, while the two outermost were entirely under the control of the inmates of the Fort. The unwillingness of the people, however, to resist, and Capt. Black's firmness in demanding entrance, induced them to open the way, when we all left the Fort; the division of guns, with its usual complement of non-commissioned officers and troopers remaining within. Stevenson and I dined at the troop mess; but Mr. Thackery went to bed. The incident at the gates led to a conversation

insolence of office, conducted himself with such disgust in the minds of the principal Sardars. Mr. Thackery hesitated between appointing this man or Antaji Punt, Munsiff of Dharwar; but decided against the latter as being a Konkanist and a man of the country, qualities that would have rendered him unpalatable to the Lingayat chiefs, whilst the former was a stranger, free from these objections, and more likely to remain unbiased by any party.

Kunnur Malapa had many enemies in men whose power had been abridged through his influence with the late chief. One of these, named Auradi Virappa,-who had been removed from the superintendence of the Katak, or village militia, in favour of a dependent of Kunnur Malapa's named Sardar or Hudkadli Malapa,-came secretly to Dharwar, and informed Mr. Thackery that the Desai had died the day before the visit of the Sardars; that the letter, adoption, etc., were inventions of Kunur Malapa to retain his influence; that he abused the trust so reposed in him and had abstracted large sums of money from the treasury. On the 25th September. Mr. Thackery returned to Kittur, taking with him Messrs. Stevenson and Elliot (first and second Assistants). Kunur Malapa, being called on, admitted the truth of Auradi Virappa's information, and stated that the signature of the letter had been effected by placing the pen in the hand of the corpse. He was there upon suspended and ordered to confine himself to his house. Gurusiddapah, the head of the paga or Irregular Horse, who had the greatest influence after Kunur Malapa, and with whom he was at enmity, was appointed Manager on the part of the Samasthan, and Auradi Virappa became head of the Katak.

Meantime, an answer from Government arrived, directing inquiries to be made, into the genealogy of the family, with a view to discover whether any one possessed claims on the Desgatti; but no one could be found, either collateral with the founder or within the seven generations that followed. The Mastmaradi Patil traced his descent from an ancestor of the person who founded the Kittur family, and the Khudavindpur Patil and others were his illegitimate descendants. This result also was duly reported to Government, but for a long time no answer was received. In consequence of this failure of heirs Mr. Thackery doubted that the adoption would be allowed. The only

other person who had the slightest claim on the estate was the young wife of the late Desai still a mere child. She had no immediate friends or relations of her own, having been transplanted into her husband's house alone, and from a distant land. She was surrounded by the relatives of her late husband, who looked only to their own interests, and who attached themselves rather to a mother-in-law of the late Desai, named Chenama a woman of violent and intermeddling disposition, who had been carefully secluded from affairs by the Desai on that account. If the Government should not be disposed to sanction an adoption, the Desgatti lands would either revert entirely to the Sarkar, or they might be bestowed wholly, or in part, on the younger, Desaini during her lifetime. In either case, Mr. Thackery felt that a considerable degree of responsibility attached to him; and, to see that the interests of neither party suffered, he commenced an inquiry into the resources of the Samasthan, taking an account of the treasury, pagas, etc., a course which created some anxiety in the minds of the people.

On the 29th September, Mr. Thackery went into Dharwar during the Dassera week. Stvenson and I remained and distributed the persents and poshaks, or honorary dresses, according to custom. We were a little alarmed by reports of collections and assemblies of the people, but attributed it to the occasion of the feast. On the 2nd October, Mr. Thackery returned. No answer had yet arrived from Government regarding the final adjustment of the succession. Mr. Thackery expressed considerable anxiety at the delay. The conviction in his own mind seemed to be, that Government would consider the bulk of the Desgatti lands to have lapsed; and, anxious that in the event of such a determination, no further obstruction should occur to the revenue arrangements of the year, the season for which had already commenced, he proceeded sedulously in the preparation of the village accounts, and even nominated Amildars, Sirashtadars, Ziladars, etc., to facilitate the attainment of this country augmented the distrust and jealousy already felt by the people at the continued silence of Government regarding their final condition; and even at this period they appear to have meditated resistance, as is proved by certain facts afterwards brought to light, but which the ignorance or incompetence of the native Manger prevented our learning at the time. It

On the subjugation of the Peshwa's territory, that protion of it known as the Southern Maratha Country, or, according to native usage, the Carnatic, was placed under the Administration of a Principal Collector and Political Agent. It originally comprised the three present Collectorates of Belgaum, Dharwar, and Sholapur, in which Canarese was the vernacular dialect. The native Government had conferred extensive possessions in this province on a number of feudatories, who were bound to render military service when required. At the conquest the possession of these lands was conformed on hereditary tenure by the British Government, but with the special reservation that on the failure of the direct male descent, no claim to continue the succession would be recognized without the previous sanction of the ruling power. The practice of adoption being so general among Hindus, it was considered necessary to make it clearly understood that the performance of this rite, however valid with reference to family ties, conveyed no political right unless confirmed by the State.

One of these chiefs, the Desai of Kittur, remarkable as being the only one belonging to the Lingayat, or Jangam, sect, had rendered some service to General Monro at the conquest, in recognition of which his claim to a considerable tract, yielding from two to three lakhs of rupees (the exact value I do nor remember), had been favourably recognized.

Sivalinga Rudra Sirje, the late Desai or Sir-Desai, was, at the time of this narrative, in a declining state of health. He had been twice married, but both wives had died without children, and he was betrothed to a third, the daughter of the Setti of Homenabad (? Mominabad), but the marriage had not been completed. The Desai's only brother had also died without heirs, and there was no collateral branch, or other connection of the family, that was known to have claim to the succession. As, however, the Desai was still in the prime of life and hoped to recover from his malady, he was averse to provide an heir to his estate by means of adoption. In consequence of this feeling and the precarious state of the Desai's health, Mr. Thackery took several opportunities of reading to the assembled vakils, included the Kittur envoy, the proclamations of Government affecting Sardars, among which

he purposely included that which requires all adoptions to be previously submitted to, and sanctioned by, the Governor in Council, before they could be deemed valid. This was specially intended for the Kittur case, and was repeated several times. Patil of Mastmaradi, and a letter was delivered from the Desai himself to the same purport, bearing his signature. Mr. Thackery replied that he must refer the matter to higher

In the month of September, whilst on a shooting party at Teygoor, five miles from Kittur, a party of Sardars from the latter place waited on Mr. Thackery (on the 12th). They stated that their chief was then so dangerously ill that he was not expected to survive many hours longer, and that he was anxious to procure the sanction of Government for the adoption of a boy originally of the same family, and son of the patil of Mastmaradi, and a letter was delivered from the Desai himself to the same purport, bearing his signature. Mr. Thackery replied that he must refer the matter to higher authority, and in the meantime proposed to send the Surgon, Mr. Bell, to see the Desai. To this they somewhat unwillingly agreed; and Mr. Bell, who was of the party, immediately rode over to Kittur. Hi returned in about an hour, and reported that he had found the Desai already dead; that he saw the body decked with flowers, seated in state in the *Diwan-i-Aam,* or reception-hall; that from its appearance he must have been dead a considerable time, and that in his opinion he had expired the day before (the IIth). The letter, however, was dated the 12th; but as the signature did not resemble the Desai's usual handwriting, this fact, coupled with Mr. Bell's information, induced considerable doubts of its authenticity. The following day Mr. Thackery, accompanied by Messrs. Stevenson and Freese (the first and third Assistants) repaired to Kittur, and two days afterwards (on the 15th) returned to Dharwar. Having reported the above circumstancces, together with the want of any legitimate successor to the Samasthan, Mr. Thackery appointed a Brahman named Venkat Rao, a Karkun in his own Kacheri, who in conjunction with Kunur Malapa, the person most trusted and favoured by the late Desai, and generally called Diwan, were to manage affairs till the decision of Government should be received. This choice was afterwards found to have been an unfortunate one, Venkat Rao, though an excellent Karkun, being of low, vulgar extraction, and elated with the

about blowing them open with guns. I don's recollect whether the question was settled by the younger members of the party alone; but this I know, the impression produced on my mind was, that in such a case the doors would fly open at the first discharge. The evening passed pleasantly; and no presentiment came over us of the impending catastrophe of the morrow. Early the following morning, Capt, Black came to Mr. Thackery and stated that the party sent to relieve his men had been refused admittance. When I entered the tent, I found Mr. Thackery, Capt. Black, and Stevenson there (Thackery and Stevenson in their dressing-gowns). Capt. Black was urging th necessity of relieving his men; and Mr. Thackery replied that if he thought he could do so by forcing the gate, it had better be done. Capt. Black then ordered down another division of guns;[2] and, without waiting for them, rode down to the gate of the Fort to see what was going on. (After this he never saw Mr. Thackery again.) I went with him. We were quite alone, and sat under the gate nearly an hour (from 8 to 9 a.m). When the guns arrived the Artillery Camp was about half a mile distant; our tents were within three or four hundred yards of the Fort the people within, who had till then been quite quiet, began to show themselves along the walls, others appeared on the high ground in front of the upper Fort; and confused rumours were heard of men having been marching into the place all night; of guns having been brought out from the Topkhana, or arsenal; and of every preparation having been made for resistance. Capt. Black had written to Mr. Thackery to know what time he was to allow the people to wait after having demanded the release of his men, and received a written answer specifying minutes. On the arrival of the guns, about 9 o'clock, the head Brahman Karkun, named Dafterdar Timapa, appeard through the postern or diddi in answer to our summons, and I think it was Stevenson (who had now joined us) who addressed him, and demanded the release of the guard. This he flatly refused, except on condition of the Desaini and her party with the treasure departing also. On being threatened with force, he answered that they also could use force, and retired. His manner

2. The troop, when it arrived at Kittur, consisted of 200 or 250 men, and or 6 guns, the others (2 or 4) having been left at Belgaum for some repairs.

was very agitated and disturbed. At the expiration of the 20 minutes, Capt. Black requested Stevenson to ask Mr. Thackery if he was to fire. Stevenson returned in a few minutes with an answer in the affirmative; and about 20 minutes past 9 o'clock the first gun was discharged. While preparations were making, Stevenson addressed all the Shetsanadis, etc., who were within hearing, and warned them that they would be treated as rebels if they resisted; but they did not appear to pay attention. Meantime, Mr. Thackery, after I had left him, had superseded Gurusiddapah in his authority, appointing the younger Desaini's father as guardian and manager,[3] and putting Kunnur Malapa at the head of the Katak; but it was then too late. The father-in-law was a timid man, without influence. Both were unable to get inside the Fort, or to make their new authority known.

Capt. Black and Lieut. Dighton with one gun and twelve men stood at the gate, Lieut. Sewell with the other gun and the same number of men, was posted on the glacis to kep down fire from the wall. I expected to have seen the gate fly open at the first gun; but it stood unshaken and continued immovable after two discharges more. A few shots now began to fall from the walls which Sewell's gun, unable to command both sides, failed to check. Some men were wounded, and Sewell himself shortly afterwards fell, shot through the breast. Stevenson and I got him on his horse, and took him by a short cut to the tents, where the sergeon of the troop was waiting. Hardly had we lifted him in, when two or three shots penetrating the tent showed that this was no safe place in which to dress his wounds, and Dr. Turubull at once carried him out to his own camp. Hence he was carried to Dharwar in the evening, where he died on the 5th Nov. Inquiring for Mr. Thackery, we learnd that he had gone in his palanquin by the principal road to confer with Capt. Black at the gate. Stevenson and I ran down to join him, but on reaching the esplanade we found that a sortie had been made, and the gunners were flying for their lives. Two men of the party of Irregular Horse, always in attendance on the Political Agent, who had ridden down with him, reported that Mr. Thackery had been

3. He had been sent for from Homenabad, and arrived only a few days before.

ದಕ್ಷಿಣ ಮರಾಠಾದೇಶಕ್ಕೆ ಸೇರಿದ ಕಿತ್ತೂರಿನಲ್ಲಿ ೧೮೨೪ರ ಸಪ್ಟಂಬರ್ ಮತ್ತು ಡಿಸೆಂಬರ್ ನಡುವೆ ಜರುಗಿದ ಬಂಡಾಯಕ್ಕೆ ಸಂಬಂಧಿಸಿದ ಘಟನಾವಳಿಗಳು[೧]

ಇಂಗ್ಲಿಷ್ ಮೂಲ: ಸರ್ ವಾಲ್ಟರ್ ಎಲಿಯಟ್

ಕನ್ನಡ ಅನುವಾದ: ಡಾ. ಸಿ. ಆರ್. ಯರವಿನತೆಲಿಮಠ

❖

ಹಳೆಯ ದಕ್ಷಿಣ ಮರಾಠಾದೇಶದಲ್ಲಿ ನನ್ನೊಂದಿಗೆ ಸೇವೆಸಲ್ಲಿಸುತ್ತಿದ್ದ ಮಿಸ್ಟರ್ ಜಾರ್ಡಿನ್ (ಇಂಗ್ಲೆಂಡಿನ) ಇಂಡಿಯಾ ಆಫೀಸಿನಲ್ಲಿ ಒಮ್ಮೆ ಆಕಸ್ಮಿಕ ನನ್ನನ್ನು ಭೆಟ್ಟಿಯಾಗಿ, ೧೮೨೪ರಲ್ಲಿ ಜರುಗಿದ ಕಿತ್ತೂರ ಬಂಡಾಯದ ಬಗೆಗೆ ಸ್ವಲ್ಪ ಮಾಹಿತಿ ನೀಡಲು ಕೇಳಿಕೊಂಡನು. ಆ ಬಂಡಾಯದಲ್ಲಿ ಭಾಗವಹಿಸಿದವರಲ್ಲಿ ಈಗ ನಾನೊಬ್ಬನೇ ಉಳಿದಿದ್ದೇನೆ. ಅರುವತ್ತೊಂದು ವರುಷಗಳು ಕಳೆದ ಬಳಿಕ ಆ ಬಂಡಾಯಕ್ಕೆ ಸಂಬಂಧಿಸಿದ ಚಿಕ್ಕಪುಟ್ಟ ಸಂಗತಿಗಳನ್ನು ನೆನಪಿಸಿಕೊಳ್ಳಲಾಗದಿದ್ದರೂ ಮುಖ್ಯ ಘಟನೆಗಳು ನನ್ನ ಸ್ಮರಣೆಯಲ್ಲಿ ಆಳವಾಗಿ ಅಚ್ಚೊತ್ತಿವೆ. ಅಲ್ಲದೆ ನನ್ನ ಕಾಗದ ಪತ್ರಗಳಲ್ಲಿ ಆಕಸ್ಮಿಕ ದೊರೆತ ಆ ಘಟನೆಗಳಿಗೆ ಸಂಬಂಧಿಸಿದ ನೆನಪಿನ ಟಿಪ್ಪಣಿ ನನಗೆ ನೆರವಾಗಿರುತ್ತದೆ. ಆ ಬಂಡಾಯದಲ್ಲಿ ಪ್ರಮುಖ ಪಾತ್ರವಹಿಸಿದ ನಾಗರಿಕರನ್ನು ಮತ್ತು ಸೈನಿಕರನ್ನು ಆಪಾದನೆಗಳಿಂದ ಮುಕ್ತಗೊಳಿಸುವ ಉದ್ದೇಶದಿಂದ, ಬಂಡಾಯ ಜರುಗಿದ ಕೆಲವೇ ತಿಂಗಳುಗಳ ಬಳಿಕ ಆ ಟಿಪ್ಪಣಿಯನ್ನು ಬರೆದಿಡಲಾಗಿತ್ತು.

ಪೇಶ್ವೆಗಳಿಂದ ಇಂಗ್ಲಿಷರು ವಶಪಡಿಸಿಕೊಂಡ ದಕ್ಷಿಣ ಮರಾಠಾಪ್ರದೇಶ ಅರ್ಥಾತ್ ಉತ್ತರಕರ್ನಾಟಕ ಪ್ರದೇಶವನ್ನು ಬಳಿಕ ಕಲೆಕ್ಟರನ ಆಡಳಿತಕ್ಕೆ ಒಳಪಡಿಸಲಾಗಿತ್ತು. ಈ ಪ್ರದೇಶದ ಬೆಳಗಾಂವ, ಧಾರವಾಡ ಮತ್ತು ಸೋಲಾಪುರ ಜಿಲ್ಲೆಗಳ ಆಡಳಿತ ಭಾಷೆ ಕನ್ನಡವಾಗಿದ್ದಿತು. ಅವಶ್ಯ ಬಿದ್ದಾಗ ಸೈನಿಕ ನೆರವು ಪೂರೈಸುವದಕ್ಕಾಗಿ ಹಿಂದಿನ ಸ್ಥಳೀಯ ಸರಕಾರ ಅನೇಕ ಸಾಮಂತರಿಗೆ ಅಪಾರ ಭೂ ಆಸ್ತಿಯನ್ನು

---

೧. ಈ ಘಟನೆಯ ಮುಂದಿನ ಪರಿಣಾಮದ ವಿವರಣೆಗಾಗಿ ಇಂಡಿಯನ್ ಆ್ಯಂಟಿಕ್ವರಿ XIV, p-293. ಬಾಂಬೆ ಗೆಜಿಟಿಯರ್(ಬೆಳಗಾವಿ) ಪು.೫೮೧, ಹಿಸ್ಟಾರಿಕಲ್ ಅಕೌಂಟ ಆಫ್ ಬೆಳಗಾವಿ ಡಿಸ್ಟ್ರಿಕ್ಟ್ (ಎಚ್.ಟಿ. ಸ್ಟೋಕ್ಸ. ಎಂ.ಸಿ.ಎಸ್) ಪು. ೮೨ ನೋಡಿರಿ.

ಕೊಡಮಾಡಿದ್ದಿತು. ಆ ಪ್ರದೇಶವನ್ನು ಗೆದ್ದುಕೊಂಡ ಬ್ರಿಟಿಷ್ ಸರಕಾರವು ಆ ಆಸ್ತಿಯು ಅವರ ವಂಶಪಾರಂಪರಿಕ ಒಡೆತನದ್ದೆಂದು ದೃಢೀಕರಿಸಿತು. ಒಂದು ವೇಳೆ ನೇರ ವಾರಸುದಾರನಿರದಿದ್ದ ಪಕ್ಷದಲ್ಲಿ ದತ್ತು ಪಡೆಯುವಾಗ ಆ ಸಾಮಂತರು ತನ್ನ ಪರವಾನಗಿ ಪಡೆಯಬೇಕೆಂಬ ನಿಯಮವನ್ನು ಬ್ರಿಟಿಷ್ ಸರಕಾರ ರೂಪಿಸಿದ್ದಿತು. ಇದರಿಂದಾಗಿ ದತ್ತು ತೆಗೆದುಕೊಳ್ಳುವುದು ಕೌಟುಂಬಿಕ ಸಂಬಂಧಗಳಿಗನುಗುಣವಾಗಿ ಸಿಂಧುವಾಗಿದ್ದರೂ, ಅದನ್ನು ಸರಕಾರದಿಂದ ದೃಢಪಡಿಸದ ಹೊರತು ದತ್ತುಪುತ್ರನಿಗೆ ಯಾವುದೇ ರಾಜಕೀಯ ಅಧಿಕಾರವಿರುವುದಿಲ್ಲವೆಂದು ಭಾವಿಸಲಾಗಿತ್ತು.

ಅಂದಿನ ಪ್ರಮುಖ ಸಾಮಂತ ಮನೆತನಗಳಲ್ಲಿ ಕಿತ್ತೂರ ದೇಸಗತಿಯೂ ಒಂದು. ಅದು ಲಿಂಗಾಯತ ಇಲ್ಲವೆ ಜಂಗಮ ಮತಕ್ಕೆ ಸೇರಿದುದಾಗಿದ್ದಿತು. ಬ್ರಿಟಿಷರು ಈ ಪ್ರದೇಶವನ್ನು ಗೆದ್ದ ಸಂದರ್ಭದಲ್ಲಿ ಜನರಲ್ ಮನ್ರೋ (Monro)ಗೆ ಸ್ವಲ್ಪ ಸಹಾಯ ಮಾಡಿದ್ದಕ್ಕಾಗಿ ಸುಮಾರು ಎರಡರಿಂದ ಮೂರು ಲಕ್ಷ ವಾರ್ಷಿಕ ಆದಾಯ ತರುವ ವಿಶಾಲಭೂಮಿಯ (ಜಮೀನು) ಒಡೆತನದ ಹಕ್ಕನ್ನು ಈ ದೇಸಾಯಿಗೆ ಕೊಡಲಾಗಿತ್ತು.

ಈ ಹಂತದಲ್ಲಿ ದೇಸಾಯಿ ಇಲ್ಲವೆ ಸರದೇಸಾಯಿ ಶಿವಲಿಂಗರುದ್ರ ಸರ್ಜನ ಆರೋಗ್ಯ ಹದಗೆಟ್ಟಿದ್ದು. ಅವನಿಗೆ ಎರಡು ಬಾರಿ ಮದುವೆಯಾಗಿದ್ದರೂ ಇಬ್ಬರೂ ಹೆಂಡಂದಿರು ಸಂತಾನಭಾಗ್ಯವಿಲ್ಲದೆ ನಿಧನರಾಗಿದ್ದರು. ಆಗ ಹುಮನಾಬಾದದ (ಮೊಮಿನಾಬಾದ?) ಸೆಟ್ಟಿಯ ಅಪ್ರಾಪ್ತ ಮಗಳೊಂದಿಗೆ ಮೂರನೆಯ ಮದುವೆಯ ನಿಶ್ಚಯವಾಗಿದ್ದಿತೇ ಹೊರತು ಅದು ಪೂರ್ಣ ನೆರವೇರಿರಲಿಲ್ಲ. ಈ ದೇಸಾಯಿಯ ಒಬ್ಬನೇ ಒಬ್ಬ ಸೋದರನೂ ತೀರಿಕೊಂಡಿದ್ದನು. ಅವನಿಗೂ ಅವನ ವಂಶದ ಮತ್ತಾವ ಕುಟುಂಬದಲ್ಲಿಯೂ ವಾರಸುದಾರರು ಇದ್ದಿರಲಿಲ್ಲ. ತಾನು ಇನ್ನೂ ಪ್ರಾಯದವನಾದುದರಿಂದ ಮತ್ತು ರೋಗದಿಂದ ಗುಣಮುಖನಾಗುವೆನೆಂಬ ಆಶೆಯಿಂದ ಅವನು ದತ್ತು ನೇಮಿಸಲಿಲ್ಲ. ದೇಸಾಯಿಯ ಇಂಥ ನಿರ್ಧಾರವನ್ನು ಮತ್ತು ಅವನ ಆರೋಗ್ಯ ಅಪಾಯದ ಅಂಚಿನಲ್ಲಿದ್ದುದನ್ನು ಲಕ್ಷ್ಯದಲ್ಲಿಟ್ಟುಕೊಂಡು, ಇಂಥ ಸಾಮಂತರಿಗೆ ಅನ್ವಯಿಸುವ ಕೆಲವು ನಿಯಮಗಳನ್ನು ಥ್ಯಾಕರೆ ಬಳಸಿಕೊಂಡನು. ದತ್ತು ಊರ್ಜಿತವಾಗಬೇಕಾದರೆ ಅದಕ್ಕೆ ಗವ್ಹರ್ನರನಿಂದ ಅನುಮತಿ ಪಡೆಯುವುದು ಕಡ್ಡಾಯವಿರುತ್ತದೆಂಬ ಅಂಶವನ್ನು ಉದ್ದೇಶಪೂರ್ವಕವಾಗಿ ನಿಯಮಗಳಲ್ಲಿ ಸೇರಿಸಿದನು. ಕಿತ್ತೂರನ್ನು ಗಮನದಲ್ಲಿಟ್ಟುಕೊಂಡು ಇದು ಅವನಿಂದ ಪುನಃ ಪುನಃ ಪ್ರಕಟಿಸಲಾಗುತ್ತಿದ್ದಿತು.

ಸಪ್ಟೆಂಬರ್ ೧೨ನೇ ತಾರೀಖಿನಂದು ಕಿತ್ತೂರಿನಿಂದ ಬಂದ ಸರದಾರರ ಗುಂಪೊಂದು ಅಲ್ಲಿಂದ ೫ ಮೈಲು ದೂರದಲ್ಲಿರುವ ತೇಗೂರಿನಲ್ಲಿ ಬೇಟೆಯಾಡುವ ತಂಡದೊಂದಿಗೆ ಇದ್ದ ಮಿ. ಥ್ಯಾಕರೆಯನ್ನು ಕಂಡು, ತಮ್ಮ ಒಡೆಯನ ಕಾಯಿಲೆ ಉಲ್ಬಣಿಸಿದ್ದು, ಅವನು ಬಹಳ ಹೊತ್ತು ಉಳಿಯಲಾರನೆಂದೂ ಮತ್ತು ಮೂಲತಃ ತಮ್ಮ ಸಂಬಂಧಿಕನಾಗಿರುವ ಮಾಸ್ತಮರಡಿಯ ಗೌಡನ ಮಗನನ್ನು ದತ್ತು ತಗೆದಕೊಳ್ಳಲು ಸರಕಾರದ ಪರವಾನಗಿ ಪಡೆಯಲು ಕಾತರನಾಗಿರುವನೆಂದೂ ಹೇಳಿ, ಆ ಉದ್ದೇಶಕ್ಕಾಗಿ ಸ್ವತಃ ಸಹಿ ಇರುವ ಪತ್ರವೊಂದನ್ನು ಕೊಟ್ಟರು. ತಾನು ಈ ವಿಷಯವನ್ನು ತನ್ನ ಮೇಲಿನ ಅಧಿಕಾರಿಗೆ ತಿಳಿಸಿ, ಅವರಿಂದ ಅನುಮತಿ ಪಡೆಯಬೇಕೆಂದು ಹೇಳಿದನಲ್ಲದೆ, ಇಷ್ಟರಲ್ಲಿ ದೇಸಾಯಿಯನ್ನು ನೋಡಲು ಮಿ. ಬೆಲ್ (Bell)ನೆಂಬ ಸರ್ಜನ್‌ನನ್ನು ಕಳಿಸಿಕೊಡುವುದಾಗಿ ಥ್ಯಾಕರೆ ತಿಳಿಸಿದನು. ಅದಕ್ಕೆ ಅವರು ಅರೆಮನಸ್ಸಿನಿಂದ ಆಗಬಹುದೆಂದರು. ಬೇಟೆಯವರೊಂದಿಗಿದ್ದ

After some further hesitation and a delay to us of much anxiety, whilst they alternately adopted and again rejected the plan, they alternately adopted and again rejected the plan they at last determined to deliver us up; and, accompanied by two vakils and preceded by a flag of truce, we hastened to the outposts, which were commanded by Colonel Trewman, who conducted us to the Commissioner's tent. There we introduced the vakils to Mr. Chaplin, and in their presence fulfilled our promise, which, as we had told them, proved of no avail, and they returned to the Fort. The same day the last detachments required to complete the force arrived from Haidarabad under Colonel Deacon, C.B., the officer appointed to conduct the final operations against the place. A summons for surrender within twenty-four hours was sent to the inmates, and the interval was employed by Colonel Deacon in reconnoitering the place and forming his plan of attack. On the expiration of that time (on the evening of the 3rd), no signs of submission being shown, a fortified hill called Kempanmaradi, or Kamanmati, which commanded the Fort, and was garrisond by a strong party, amongst whom were some Sikh mercenaries from Nandair, was stormed and carried without the loss of a man, the only casualty being that of Mr. John Monro, the Sub Collector, who had accompanied an intimate friend of the 23rd Light Infantry, and, led away by his ardour in the pursuit, received a wound of which he died at Dharwar some days later.[5] During the night, a battery to breach the Fort was constructed on this point, which opened with effect next morning. In the afternoon a message was received, requesting permission to send a vakil, who, on repairing to the Commissioner, was referred to the officer commanding, by whom he was told that if they were ready to surrender the Fort, to lay down their arms, and to deliver up the persons specified in the proclamation, they should hoist a white flag, when orders to cease firing would be given. By-and-by a white flag was seen on the ramparts; but some hesitation was evinced in fulfilling the conditions, owing apparently to the conflicting counsels and the want of unanimity which had prevailed among the leaders from the first. Preparations were therefore made for resuming the attack, and it was not until eight o'clock

5. On the 13th December; he was a nephew of Sir Thomas Munro.

next morning (5th inst.) that the gates were thrown open and the prisoners delivered up. During the night many of the Shetsanadis quietly evacuated the Fort, being allowed to pass through the investing pickets without hindrance. Order was soon restored, liberal terms were granted to all except Auradi Virappa, who was tried and sentenced to transportation for life.[6]

Gurusiddapah received back his estate, and I saw him repeatedly in after years comfortable and contented. He was a man of excellent natural disposition, and was much respected. Baslingapa Teli received a special grant for the protection he had afforded us.

On breaking up the force, The 7th Cavalry, which had come from Sholapur, was ordered to return by way of Scindago, a Village in Hungund Taluk, which had been occupied by a party of Arabs from the Nizam's country, invited by the patil of the place. They were easily expelled, and the patil was seized and tried for high treason. This was in Mr. Munro's Sub-Collectorate, to which I was at the same time sent in temporary charge, while Mr. Stevenson went to his own Sub-Division at Ranibennur. Soon afterwards, Mr. T.H. Baber was appointed Principal Collector and Political Agent; and so ended the Kittur tragedy.

---

6. I forget if any others were tried.

killed, and wished to carry us off to the camp while there was yet time. I was inclined to follow their advice, but Stevenson thought we ought not to desert our chief, and we were left alone. In a very few minutes the approach of the enemy, who were giving no quarter, forced us to take refuge in a house, where we remained for some little time, uncertain what might happen. A dependent of the Raja named Baslingapa Teli,[4] a respectable man, with whom we had some acquaintance, hailed us through the door, and advised us to give ourselves up, promising to protect us from the excited soldiery outside. We complied, and surrounding us with a compact body of his own followers, he carried us into the fort, not, however, without difficulty, as several onslaughts were made on us, and a blow with a compact body of his own followers, he carried us into the fort, not, however, without difficulty, as several onslaughts were made on us, and a blow with a sword over the heads of our defenders cut through Stevenson's hat. Near the glacis, we passed Mr. Thackery lying dead on the ground, and descending to the gate also dead. On reaching the third gate, the sepoys and the gunners were standing to their arms, the walls all round swarming with matchlock men ready to fire on the slightest movement. As further resistance would only entail their destruction, we halted, and advised them to yield themselves prisoners, with which they somewhat unwillingly complied. The like course was pursued with the other party posted in the court of the mahal; and Sergeant Denton, a fine old soldier, gave up his arms on our assuming the responsibility of the order. The prisoners were all well treatd, and were sent out to the camp on the following day, each man receiving a rupee. We were then conducted to a large upstair house, belonging. I believe, to Kunnur Malapa, where we remained till our release. Here we were carefully watched, three men being always on guard in the same room with us, day and night.

During the afternoon several of the leading men came to visit us, and whilst talking over the events of the day among themselves, Stevenson, who understood Canarese, learned among other things, that Auradi Virappa, the

4. I am not quite sure of this man's name; I should like to know it.

chief of the Katak or Shetsanadi militia, had caused Kunnur Malapa, the late Diwan, to be murdered. This Virappa was a rough violent man, who, supported, by the local soldiery, thence forward took a leading part in the insurrection.

Our tents having ben sacked and everything plundered and destroyed, we were for some days without even a change of clothing, but afterwards received a few necessary articles of dress, books, papers, etc., from Dharwar, though our servants were not allowed to join us. In all other respects we were well treated and comfortably lodged; we wrote and received letters without hindrance.

Meanwhile the insurgents continued to press their demands on the Government, and showed no intention to submit. It was therefore determined to reduce the place by force. Mr. Chaplin, the Commissioner, proceeded to the District, and issued a proclamation offering pardon to all who would submit before a certain date, except the ringleaders, and even promising to spare their lives if they gave themselves up. Troops began to arrive from different quarters, and by th 26th Nov. a sufficient body had assembled under Colonel Walker to invest the place; and Mr. Chaplin soon after joined the camp. Frequent communications then passed between the leaders and the Commissioner, who sternly refused to listc to any proposal based on conditions connected with our safety, and referred them to the proclamation as his ultimatum. That there might be on mistake Mr. Chaplin wrote several replies, through us, in Hindustani, with his own hand, which we rehearsed carefully to Gurusiddapaha in the presence of the other leaders, to whom he translated them. Every now and then cannon-shots were fired on the troops from the walls, which, however, did no harm. We pointed out the folly of this proceeding if they really wished to enter into terms, and again and again orders were sent by one party to discontinue the practice, but after an interval it was resumed by orders of another, the garrison in fact being under no efficient control. At length, on the morning of the 2nd Dec., the leader came to us and offered, if we would intercede for them, to carry us out to the camp. To this we readily agreed, premising that we had no influence, and could hold out no hope of success.

ಮಿ. ಬೆಲ್ ಕೂಡಲೇ ಕಿತ್ತೂರಿಗೆ ಧಾವಿಸಿದನು. ಅವನು ಒಂದೇ ತಾಸಿನಲ್ಲಿ ತಿರುಗಿ ಬಂದು, ದೇಸಾಯಿ ಆಗಲೇ ಸತ್ತುದು ತನಗೆ ಕಂಡುಬಂದಿತೆಂದೂ ಅವನ ಶವವನ್ನು ಹೂವಿನಿಂದ ಅಲಂಕರಿಸಿ ಸದರಿನಲ್ಲಿ ಕೂಡಿಸಲಾಗಿತ್ತೆಂದೂ, ತನ್ನ ಪ್ರಕಾರ ದೇಸಾಯಿ ಹಿಂದಿನ ದಿನವೇ ಅಂದರೆ ಸಪ್ಟಂಬರ್ ೧೧ರಂದೇ ತೀರಿಕೊಂಡಿದ್ದಾನೆಂದೂ ಹೇಳಿದನು. ಆದಾಗ್ಯೂ ಪತ್ರದ ತಾರೀಖು ೧೨ ಇದ್ದಿತು. ಆದರೆ ಸಹಿ ದೇಸಾಯಿ ಎಂದಿನಂತೆ ಮಾಡುತ್ತಿರುವಂತೆ ಇದ್ದಿರಲಿಲ್ಲ. ಈ ಅಂಶ ಮತ್ತು ಮಿ. ಬೆಲ್ ತಂದ ಸಮಾಚಾರಗಳು ಅವರ ಪತ್ರದ ಪ್ರಾಮಾಣಿಕತೆಯನ್ನು ಸಂಶಯದಿಂದ ಕಾಣುವಂತೆ ಮಾಡಿದವು.

ಮರುದಿನ (ದಿ ೧೩) ಮಿ. ಥ್ಯಾಕರೆ ಪ್ರಥಮ ಮತ್ತು ತೃತೀಯ ಸಹಾಯಕರಾದ ಸ್ಟೀವೆನ್ಸನ್ (Stivenson) ಮತ್ತು ಫ್ರೀಜ್(Freese)ರೊಂದಿಗೆ ಕಿತ್ತೂರಿಗೆ ಪ್ರಯಾಣ ಬೆಳೆಸಿದನು ಮತ್ತು ಎರಡು ದಿವಸದ ಬಳಿಕ (ದಿ. ೧೫) ಧಾರವಾಡಕ್ಕೆ ಮರಳಿದನು. ಸಂಸ್ಥಾನಕ್ಕೆ ನ್ಯಾಯಸಮ್ಮತ ವಾರಸುದಾರನಿಲ್ಲದ ಸಂಗತಿಯನ್ನು ವಿವರಣೆಗಳೊಂದಿಗೆ ಮೇಲಾಧಿಕಾರಿಗೆ ತಿಳಿಸಿ, ಸರಕಾರದ ಆದೇಶ ಬರುವ ವರೆಗೆ ದಿವಂಗತ ದೇಸಾಯಿಯ ಅತ್ಯಂತ ನಂಬಿಗಸ್ಥ ಹಾಗೂ ಪ್ರೀತಿಗೆ ಪಾತ್ರನಾಗಿದ್ದ ದಿವಾನ ಕುನ್ನೂರ ಮಲ್ಲಪ್ಪನ ಜೊತೆಗೂಡಿ, ಸಂಸ್ಥಾನದ ವ್ಯವಹಾರ ನೋಡಿಕೊಳ್ಳಲು ತನ್ನ (ಧಾರವಾಡ) ಕಚೇರಿಯ ವೆಂಕಟರಾವ್ ಎಂಬ ಒಬ್ಬ ಬ್ರಾಹ್ಮಣ ಕಾರಕೂನನ್ನು ನೇಮಿಸಿದನು. ಈ ನೇಮಣೂಕಿ ದುರದೃಷ್ಟಕರವಾದದ್ದೆಂದು ನಂತರ ತಿಳಿದು ಬಂದಿತು. ಏಕೆಂದರೆ ವೆಂಕಟರಾವ್ ಒಬ್ಬ ಅತ್ಯುತ್ತಮ ಕಾರಕೂನ ಆಗಿದ್ದರೂ ಸ್ಥಾನ ಮತ್ತು ಅಧಿಕಾರದ ಮದ ತಲೆಗೇರಿದ್ದರಿಂದ ಮತ್ತು ಜನಸಾಮಾನ್ಯರ ಭಾವನೆಗಳಿಗೆ ಧಕ್ಕೆ ಬರುವಂತೆ ದರ್ಪದಿಂದ ನಡೆದುಕೊಳ್ಳುತ್ತಿದ್ದುದರಿಂದ ಪ್ರಮುಖ ಜನರ ಮನಸ್ಸಿನಲ್ಲಿ ಅವನ ಬಗ್ಗೆ ಜಿಗುಪ್ಸೆ ಹುಟ್ಟುವಂತಾಯಿತು. ಇವನು ಮತ್ತು ಧಾರವಾಡದ ಮುನ್ಸಿಪ್ ಅಂತಾಜಿ ಪಂತ (Antaji Punt) ಇವರಿರ್ವರಲ್ಲಿ ಯಾರನ್ನು ನೇಮಿಸಬೇಕೆಂಬ ಗೊಂದಲಕ್ಕೆ ಸಿಕ್ಕುಬಿದ್ದು, ಕೊನೆಗೆ (ಅಂತಾಜಿ) ಪಂತ ಕೊಂಕಣಸ್ಥ ಹಾಗೂ ಹಳ್ಳಿಯವನಾಗಿದ್ದುದರಿಂದ ಲಿಂಗಾಯತ ಸರದಾರರಿಗೆ ಅವನ ಸ್ವಭಾವ ಹಿಡಿಸಲಿಕ್ಕಿಲೆಂದು ವೆಂಕಟರಾವನನ್ನು ನೇಮಿಸಲಾಗಿದ್ದಿತು.

ಕುನ್ನೂರು ಮಲ್ಲಪ್ಪನಿಗೆ ಅನೇಕ ವಿರೋಧಿಗಳಿದ್ದರು. ಏಕೆಂದರೆ, ತಾನು ದಿವಂಗತ ದೇಸಾಯಿಯವರ ನಿಕಟವರ್ತಿಯೆಂಬ ಪ್ರಭಾವ ಬಳಸಿಕೊಂಡು ಹಲವರ ಅಧಿಕಾರವನ್ನು ಮೊಟಕುಗೊಳಿಸಿದ್ದನು. ಅಂಥವರಲ್ಲಿ ಅವರಾದಿ ವೀರಪ್ಪನೂ ಒಬ್ಬ. ಯುದ್ಧ ಪ್ರಸಂಗಗಳಲ್ಲಿ ಬಳಸಿಕೊಳ್ಳಲಾಗುವ ಗ್ರಾಮಸೈನ್ಯದ (Kataka or Village Militia) ಅಧಿಕಾರದಿಂದ ಅವನನ್ನು ಕಿತ್ತೊಗೆದು, ಆ ಸ್ಥಾನದಲ್ಲಿ ಹುರಕಡ್ಲಿ ಮಲ್ಲಪ್ಪನನ್ನು ನೇಮಿಸಲಾಗಿತ್ತು. ಈ ವೀರಪ್ಪನು ಗೌಪ್ಯವಾಗಿ ಧಾರವಾಡಕ್ಕೆ ಬಂದು, "ಕೆಲವು ಸರದಾರರು ಮಿ.ಥ್ಯಾಕರೆಯನ್ನು (ತೇಗೂರಿನಲ್ಲಿ) ಭೇಟಿಯಾದ ಹಿಂದಿನ ದಿನವೇ ದೇಸಾಯಿ ತೀರಿಕೊಂಡಿದ್ದನೆಂದೂ ದತ್ತಕಕ್ಕೆ ಸಂಬಂಧಿಸಿದ ಪತ್ರ ಕುನ್ನೂರು ಮಲ್ಲಪ್ಪ ಸೃಷ್ಟಿಸಿದ್ದೆಂದೂ ಅವನು ತನ್ನ ಪ್ರಭಾವ ಉಳಿಸಿಕೊಳ್ಳಲು ಹೀಗೆ ಮಾಡಿರುವನೆಂದೂ ತನ್ನ ಮೇಲಿದ್ದ (ದೇಸಾಯಿಯವರ) ನಂಬಿಕೆಯನ್ನು ದುರುಪಯೋಗ ಮಾಡಿಕೊಂಡು ಸಂಸ್ಥಾನದ ಖಜಾನೆಯಿಂದ ಹೇರಳ ಹಣವನ್ನು ಲಪಟಾಯಿಸಿರುವನೆಂದೂ" ವರದಿ ಮಾಡಿದನು.

ಸಪ್ಟೆಂಬರ ೨೫ರಂದು ಸಹಾಯಕ ಸಿಬ್ಬಂದಿಯ ಪೈಕಿ ಸ್ಟೀವೆನ್ಸನ್ (Stivenson) ಮತ್ತು ಎಲಿಯೆಟ್ (Elliot)ರೊಡಗೂಡಿ ಮಿ.ಥ್ಯಾಕರೆ ಕಿತ್ತೂರಿಗೆ ಬಂದನು. ಕುನ್ನೂರ ಮಲ್ಲಪ್ಪನನ್ನು ಕರೆಯಿಸಿ ವಿಚಾರಿಸಲಾಗಿ ಅವನು ಅವರಾದಿ ವೀರಪ್ಪ ಹೇಳಿದುದು ಅಂದರೆ ಪತ್ರದಲ್ಲಿರುವ

ದೇಸಾಯಿಯ ಸಹಿಯನ್ನು ಸತ್ತ ದೇಸಾಯಿಯ ಕೈಯಲ್ಲಿ ಲೆಕ್ಕಣಿಕೆ ಇಟ್ಟು ಬರೆದುದು ನಿಜವೆಂದು ಒಪ್ಪಿಕೊಂಡನು. ತಕ್ಷಣ ಕುನ್ನೂರು ಮಲ್ಲಪ್ಪನನ್ನು ಅಮಾನತುಗೊಳಿಸಿ, ಅವನ ಸ್ಥಾನದಲ್ಲಿ ಕುದುರೆ ದಳದ ಮುಖ್ಯಸ್ಥನಾಗಿದ್ದ ಗುರುಸಿದ್ದಪ್ಪನನ್ನು ಸಂಸ್ಥಾನದ ದಿವಾನನ್ನಾಗಿ ಮತ್ತು ಅವರಾದಿ ವೀರಪ್ಪನನ್ನು ಈ ಮೊದಲಿನ ಗ್ರಾಮಸೈನ್ಯ (Kataka)ದ ಮುಖ್ಯಸ್ಥನನ್ನಾಗಿ ನೇಮಿಸಿದನು.

ಅಷ್ಟರಲ್ಲಿ "ದೇಸಗತಿಯ ವಾರಸುದಾರಿಕೆಯ ಮೇಲೆ ಹಕ್ಕು ಹೊಂದಿದ ವಂಶಸ್ಥರು ಯಾರಾದರೂ ಇದ್ದಾರೆಯೇ? ಎಂಬುದನ್ನು ಪರಿಶೀಲಿಸಿರಿ" ಎಂದು ಸರಕಾರದಿಂದ ಥ್ಯಾಕರೆಗೆ ಆದೇಶ ಬಂದಿತು. ಆಗ "ದೂರದ ಸಂಬಂಧಿಗಳಲ್ಲಾಗಲೀ ದೇಸಾಯಿಯ ಏಳು ಪೀಳಿಗೆಗಳಲ್ಲಾಗಲೀ ಯಾವ ವಾರಸುದಾರನೂ ಸಿಗಲಿಲ್ಲ. ಮಾಸ್ತಮರಡಿ ಗೌಡ ಮಾತ್ರ ತನ್ನ ಮೂಲವನ್ನು ಕಿತ್ತೂರ ಸಂಸ್ಥಾನದ ಸಂಸ್ಥಾಪಕನೊಂದಿಗೆ ಗುರುತಿಸಿದ್ದಾನೆ. ಇನ್ನುಳಿದ ಖುದವಿಂದಪುರ (ಖುದಾನಪುರ?)ಪಾಟೀಲ ಮೊದಲಾದ ಆಕಾಂಕ್ಷಿಗಳು ಈ ಸಂಸ್ಥಾನದ ಅಸ್ಪಷ್ಟ ಸಂಬಂಧದವರಾಗಿದ್ದಾರೆ" ಎಂಬ ವಂಶಾವಳಿ ವಿವರವನ್ನು ಸರಕಾರಕ್ಕೆ ವರದಿ ಮಾಡಲಾಯಿತು. ವಾರಸುದಾರರು ಸಿಗದಿದ್ದ ಪರಿಣಾಮವಾಗಿ ದತ್ತು ತೆಗೆದುಕೊಳ್ಳಲು ಸರಕಾರದಿಂದ ಪರವಾನಗಿ ದೊರೆಯುವುದು ಸಂದೇಹಾಸ್ಪದವಾಯಿತು. ಸಂಸ್ಥಾನದ ಆಸ್ತಿಯ ಮೇಲೆ ಅತ್ಯಂತ ಸ್ವಲ್ಪ ಹಕ್ಕುಳ್ಳವಳು ದೇಸಾಯಿಯ ಪತ್ನಿ(ವೀರಮ್ಮ)ಯಾಗಿದ್ದಳು. ಆದರೆ ಅವಳಿನ್ನೂ ಬಾಲಕಿಯಾಗಿದ್ದಳು. ಅವಳೊಂದಿಗೆ ಅರಮನೆಯಲ್ಲಿ ಹತ್ತಿರದ ಸಂಬಂಧಿಗಳಾರೂ ಇದ್ದಿರಲಿಲ್ಲ. ಬಹುದೂರದ ಊರಿನಿಂದ ಕರೆತಂದ ಅವಳ ಸುತ್ತಲೂ ಗಂಡನ ಸಂಬಂಧಿಗಳೇ ತುಂಬಿದ್ದರು. ತಮ್ಮ ತಮ್ಮ ಹಿತವನ್ನೇ ಕಾಯ್ದುಕೊಳ್ಳುವವರಾಗಿದ್ದ ಅವರೆಲ್ಲರೂ ಈ ದೇಸಾಯಿಯ (ದೇಸಾಯಿಣಿಯ) ಅತ್ತೆ ಚಿ(ಚೆ)ನ್ನಮ್ಮನಿಗೆ ಹೊಂದಿಕೊಂಡಿದ್ದರು. ಅವಳು ಉಗ್ರಳೂ ಮತ್ತು ಎಲ್ಲ ವಿಷಯಗಳಲ್ಲಿ ಗಮನ ಹರಿಸುವ ಸ್ವಭಾವದವಳೂ ಆಗಿದ್ದುದರಿಂದ ದೇಸಾಯಿ ಅವಳನ್ನು ದತ್ತಕ ವಿಷಯದಲ್ಲಿ ಜಾಗರೂಕತೆಯಿಂದ ದೂರ ಇರಿಸಿದ್ದನು. ಒಂದು ವೇಳೆ ದತ್ತು ತಗೆದುಕೊಳ್ಳಲು ಅನುಮತಿಕೊಡುವ ಮನಸ್ಸಿರದಿದ್ದರೆ, ಆಗ ದೇಸಗತಿಯ ಎಲ್ಲ ಜಮೀನುಗಳು ಸರಕಾರಕ್ಕೆ ಸೇರಬೇಕಾಗುತ್ತಿತ್ತು. ಇಲ್ಲವೆ ಎಲ್ಲ ಅಥವಾ ಕೆಲವು ಜಮೀನುಗಳನ್ನು ಬದುಕಿರುವ ವರೆಗೆ ಚಿಕ್ಕ ದೇಸಾಯಿಣಿಗೆ ಕೊಡಬೇಕಾಗುತ್ತಿತ್ತು. ಈ ಎರಡರಲ್ಲಿ ಯಾವುದನ್ನು ಮಾಡಲು ಸರಕಾರ ನಿರ್ಧರಿಸಿದರೂ ಅದನ್ನು ನಿರ್ವಹಿಸುವ ಗುರುತರ ಹೊಣೆ ತನ್ನದೇ ಆಗಿರುತ್ತದೆಂದು ಮಿ. ಥ್ಯಾಕರೆ ದೃಢವಾಗಿ ನಂಬಿದ್ದನು. ಹೀಗಾಗಿ ಯಾರ ಹಿತಾಸಕ್ತಿಗೂ ಧಕ್ಕೆ ಬಾರದಂತೆ ನೋಡಿಕೊಳ್ಳುವ ಉದ್ದೇಶದಿಂದ ಸಂಸ್ಥಾನದ ಎಲ್ಲ ಆದಾಯ ಮೂಲಗಳ ತಪಾಸಣೆಗೆ ತೊಡಗಿದನು. ಅದಕ್ಕಾಗಿ ಖಜಾನೆ, ಅಶ್ವದಳ ಮುಂತಾದವುಗಳ ಲೆಕ್ಕವನ್ನು ಪ್ರಾರಂಭಿಸಿದನು. ಈ ಕೆಲಸ ಜನರ ಮನಸ್ಸಿನಲ್ಲಿ ಸ್ವಲ್ಪ ಕಳವಳ ಹುಟ್ಟಿಸಿತು.

ಮಿ. ಥ್ಯಾಕರೆ ದಸರೆ ಹಬ್ಬದಲ್ಲಿ ಅಂದರೆ ಸಪ್ಟೆಂಬರ್ ೨೯ರಂದು ಧಾರವಾಡಕ್ಕೆ ಹೋದನು. ಮಿ. ಸ್ಟೀವನ್ಸನ್ ಮತ್ತು ನಾನು ಕಿತ್ತೂರಲ್ಲೇ ಉಳಿದು ವಾಡಿಕೆಯಂತೆ ದಸರೆ ಹಬ್ಬದ ಕಾಣಿಕೆ ಮತ್ತು ಪೋಷಾಕು (ಗೌರವ ಸೂಚಕ ಸಂಸ್ಥಾನದ ಉಡಿಗೆ)ಗಳನ್ನು ಸಂಸ್ಥಾನದ ಪ್ರತಿಷ್ಠಿತರಿಗೆ ನೀಡಿದೆವು. ಈಗ ಹೆಚ್ಚಿನ ಸಂಖ್ಯೆಯಲ್ಲಿ ಜನರು ಕಿತ್ತೂರನ್ನು ಸೇರುತ್ತಿರುವ ವರದಿಗಳು ನಮ್ಮಲ್ಲಿ ಸ್ವಲ್ಪ ನಡುಕ ಹುಟ್ಟಿಸಿದವು. ಆದರೆ ಹಬ್ಬದ ಭೂರಿಭೋಜನಕ್ಕಾಗಿ ಜನರು ಅಷ್ಟೊಂದು ಸಂಖ್ಯೆಯಲ್ಲಿ ಸೇರುತ್ತಿದ್ದಾರೆಂದು ನಾವು ಭಾವಿಸಿದೆವು.

ಅಕ್ಟೋಬರ್ ೨ರಂದು ಮಿ. ಥ್ಯಾಕರೆ ಮರಳಿ ಕಿತ್ತೂರಿಗೆ ಬಂದನು. ವಾರಸುದಾರಿಕೆ ಅಂತಿಮ ನಿರ್ಣಯ ಸರಕಾರದಿಂದ ಬಂದಿರಲಿಲ್ಲ. ಸರಕಾರದ ನಿರ್ಣಯ ತಡವಾದುದಕ್ಕೆ ಮಿ. ಥ್ಯಾಕರೆ ಬಹಳ ಕಳವಳ ವ್ಯಕ್ತಪಡಿಸಿದನು. ದೇಶಗತಿಯ ಬಹುಪಾಲು ಜಮೀನುಗಳು ಸಂಸ್ಥಾನದ ಕೈತಪ್ಪುತ್ತವೆಂಬುದು ಅವನಿಗೆ ಖಚಿತವಾಗಿತ್ತು. ಒಂದು ವೇಳೆ ಅಂಥ ಪರಿಸ್ಥಿತಿ ಒದಗಿದ್ದಾದರೆ ಆ ವರ್ಷದ ಹಣಕಾಸಿಗೆ ಯಾವುದೇ ಆತಂಕ ಒದಗಬಾರದೆಂದು ಹಳ್ಳಿಯ ಆದಾಯದ (ಅಲ್ಲಿ ಆಗಲೇ ಸುಗ್ಗಿ ಪ್ರಾರಂಭವಾಗಿದ್ದಿತು) ಲೆಕ್ಕಪತ್ರವನ್ನು ಸಿದ್ಧಗೊಳಿಸಲು ಗಾಢವಾಗಿ ತೊಡಗಿಕೊಂಡನು ಮತ್ತು ತನ್ನ ಈ ಉದ್ದೇಶ ಈಡೇರುವುದಕ್ಕಾಗಿ ಅಮಲ್ದಾರ, ಸಿರಸ್ತೆದಾರ ಮತ್ತು ಜಿಲ್ಲಾಡಳಿತಗಾರರನ್ನು ಕೂಡ ತೊಡಗಿಸಿಕೊಂಡನು. ಸಂಸ್ಥಾನದ ಆಂತರಿಕ ಸಂಪನ್ಮೂಲಗಳ ತನಿಖೆ, ತಮ್ಮ ಸ್ಥಿತಿಯ ಬಗ್ಗೆ ಬ್ರಿಟಿಷ್ ಸರಕಾರ ತಳೆದಿರುವ ದೀರ್ಘಮೌನದಿಂದಾಗಿ ಜನರಲ್ಲಿ ಈಗಾಗಲೇ ಹುಟ್ಟಿದ ಅಪನಂಬಿಕೆ ಮತ್ತು ಅಸೂಯೆ ಮತ್ತಷ್ಟು ಉಲ್ಬಣಗೊಂಡಿತು. ಸಂಪನ್ಮೂಲಗಳ ಈ ಲೆಕ್ಕ ತಗೆದುಕೊಳ್ಳುವುದಕ್ಕೆ ಜನರು ಪ್ರತಿಭಟನೆಯೊಡ್ಡಲು ಆಲೋಚಿಸಿದ್ದರೆಂದು ನಂತರ ಬೆಳಕಿಗೆ ಬಂದ ಕೆಲವು ಸಂಗತಿಗಳಿಂದ ತಿಳಿದುಬಂದಿತು. ಆದರೆ ನಮ್ಮ ಸ್ಥಳೀಯ ಅಧಿಕಾರಿಯ ಅಜ್ಞಾನ ಇಲ್ಲವೆ ಅಸಾಮರ್ಥ್ಯದಿಂದಾಗಿ ನಮಗೆ ಆ ಸುಳಿವು ಸಿಗದೇ ಹೋಗಿದ್ದಿತು. ಗ್ರಾಮಾಂತರ ಪ್ರದೇಶಗಳಿಂದ ದಸರಾ ಹಬ್ಬದ ನಿಮಿತ್ತ ತರಿಸಿಕೊಂಡಿದ್ದ ವಿವಿಧ ಅಶ್ವದಳಗಳನ್ನು ಆಯಾ ಹಳ್ಳಿಗಳಿಗೆ ತಿರುಗಿ ಕಳಿಸದೆ, ಕಿತ್ತೂರಿನಿಂದ ಎರಡು ಕಿ.ಮೀ. ದೂರದ ನಂದಿಹಳ್ಳಿಯಲ್ಲಿ ಇರಿಸಲಾಯಿತು. ಅವು ಮುಂದೆ (ಅಕ್ಟೋಬರ್) ೨೩ರ ಘರ್ಷಣೆಯ ಘಟನೆಯಲ್ಲಿ ಪಾಲ್ಗೊಂಡವು.

ಅದೇ ರೀತಿ ದಸರೆಯ ಪ್ರದರ್ಶನಕ್ಕೆ ಬಂದ ಅನೇಕ ಅತ್ಯುತ್ತಮ ಅಶ್ವದಳಗಳನ್ನು ಇರಿಸಿಕೊಳ್ಳಲಾಯಿತು. ಅವುಗಳ ಪಾತ್ರ ಕೂಡ ಎದ್ದುಕಾಣುವಂತಿದ್ದಿತು. ಒಂದು ಆತಂಕದ ಪ್ರಸಂಗ ನನಗೂ ಒದಗಿತು. ಅದು ಜನರ ಕ್ಷುಬ್ಧ ಮನಸ್ಥಿತಿಯ ಸಂಕೇತವಾಗಿದ್ದಿತು. ಅದು ಕಿತ್ತೂರ ಸಮೀಪದ ಅಡವಿಯೊಳಗೆ ಕೆಲವು ಪ್ರಮುಖರೊಂದಿಗೆ ಹೋಗುತ್ತಿದ್ದೆನು. ಆಗ ನಾನು ಒಬ್ಬನೇ ಇದ್ದ ಅವಕಾಶವನ್ನು ಬಳಸಿ ಗುರುಸಿದ್ದಪ್ಪ ನನ್ನ ಬಳಿಗೆ ಬಂದು "ಸರಕಾರ ಸಂಸ್ಥಾನದ ವಾರಸುದಾರಿಕೆಯ ವಿಷಯದಲ್ಲಿ ಯಾವಾಗ ನಿರ್ಧಾರಕ್ಕೆ ಬರುತ್ತದೆ?" ಎಂದು ಕೇಳಿದನು. "ಸರಕಾರಕ್ಕೆ ಯಾವಾಗ ನಿಧಾರಕ್ಕೆ ಬರಬೇಕೆನಿಸುತ್ತದೆಯೋ ಆಗ" ಎಂದು ಉತ್ತರಿಸಿದೆ. "ಜನರು ಬಹಳ ಉದ್ರಿಕ್ತರೂ ಭಯಭೀತರೂ ಆಗಿದ್ದಾರೆ" ಎಂದು ನನ್ನ ಮಾತಿಗೆ ತನ್ನ ಮಾತು ಜೋಡಿಸಿದನು. ಅವನು ಮುಂದುವರಿದು "ಜನರು ಶಸ್ತ್ರಾಸ್ತ್ರನಿಪುಣರೂ ಭಾವನಾತ್ಮಕವಾಗಿ ಅವರು ಸಂಸ್ಥಾನಕ್ಕೆ ಗಟ್ಟಿಯಾಗಿ ಅಂಟಿಕೊಂಡವರೂ ಆಗಿದ್ದು, ಯುದ್ಧಮಾಡುವ ಮನಸ್ಥಿತಿಯಲ್ಲಿದ್ದಾರೆ" ಎಂದು ವಿವರಿಸಿದನು. ಮತ್ತು "ಕಿತ್ತೂರ ಸಂಸ್ಥಾನವು (ಗ್ರಾಮೀಣ) ಸೈನಿಕರಿಂದ ತುಂಬಿದ ಪ್ರದೇಶ (Katak-ka-Mulk) ವಾಗಿದೆ" ಎಂದು ಬಣ್ಣಿಸಿದನು. ನಾನು ಇದನ್ನು ಮಿ. ಥ್ಯಾಕರೆಗೆ ಹೇಳಿದೆನು. ಅಷ್ಟು ಹೊತ್ತಿಗೆ ಕಲಾದಗಿಯಲ್ಲಿದ್ದ ಮಿಲಿಟರಿ ಕ್ಯಾಂಟೋನ್‌ಮೆಂಟನ್ನು ವಿಸರ್ಜಿಸಿ ಅಲ್ಲಿದ್ದ ಸೈನ್ಯವನ್ನು ಸೋಲಾಪುರ ಮತ್ತು ಬೆಳಗಾಂವ ಜಿಲ್ಲೆಗಳಲ್ಲಿ ಹಂಚಲು ಸರಕಾರ ನಿರ್ಧರಿಸಿತ್ತು. ಕಿತ್ತೂರಿನಲ್ಲಿ ಅತ್ಯುತ್ತಮ ಮೇವು ಮತ್ತು ನೀರಿನ ಸರಬರಾಜು ಇರುವುದೆಂದು ಹೇಳಿ, ಕಲಾದಗಿಯಲ್ಲಿದ್ದ ಅರ್ಧ ಸೈನ್ಯವನ್ನು ಕಿತ್ತೂರಿಗೆ ಕಳಿಸಿಕೊಡಬಹುದೆಂದು ಕರ್ನಲ್ ಪೀರ್(Piere)ಗೆ ಮಿ. ಥ್ಯಾಕರೆ ಸಿಫಾರಸ್ಸು ಮಾಡಿದ್ದನು. ಫಿರಂಗಿಗಳ ಅಶ್ವದಳವನ್ನು ಕಳಿಸಿಕೊಡಬೇಕೆಂದು ಸಿಫಾರಸು ಮಾಡಿದ್ದನೋ ಇಲ್ಲವೋ

ನನಗೆ ನಿರ್ದಿಷ್ಟ ಗೊತ್ತಾಗದು. ಏನೇ ಆಗಲಿ ಅಕ್ಟೋಬರ್ ೧೮ರಂದು ನಾಡ ಅಶ್ವ ಫಿರಂಗಿ ದಳದ ಸಿ. ಟ್ರೂಪ್ (C. Troop) (ಕಲಾದಗಿಯಿಂದ) ಕಿತ್ತೂರಿಗೆ ಬಂದಿತು. ಕ್ಯಾಪ್ಟನ್ ಬ್ಲಾಕ್ (Black) ಲೆ. ಸಿವೆಲ್ (Sewell) ಮತ್ತು ಲೆ. ಡಿಟನ್ (Deghton) ಅದರ ಕಮಾಂಡರುಗಳಾಗಿದ್ದರು. ಇದು ಯುದ್ಧದ ಕಾರ್ಯಾಚರಣೆ ಆಗಿರಲಿಲ್ಲ. ಏಕೆಂದರೆ ಮಿ. ಥ್ಯಾಕರೆ ಆ ಸಂಸ್ಥಾನದ ಸಮಸ್ಯೆಯನ್ನು ಸಶಸ್ತ್ರ ಸಿಪಾಯಿಗಳನ್ನು ಬಳಸಿಕೊಳ್ಳದೆ ಬಗೆಹಸರಿಸಲಾಗುವುದೆಂದು ತನ್ನ ಇಂಗಿತವನ್ನು ಮೇಲಿಂದ ಮೇಲೆ ವ್ಯಕ್ತಪಡಿಸಿದ್ದನು. ಆದಾಗ್ಯೂ ಆ ಸಂಸ್ಥಾನದ ಅಂತಿಮ ವ್ಯವಸ್ಥೆಯ ಬಗೆಗೆ ಸರಕಾರದಿಂದ ಯಾವುದೇ ಉತ್ತರ ಇನ್ನೂ ಬಂದಿರಲಿಲ್ಲ. ಪ್ರತಿದಿನ ಜನರು ನಮ್ಮ ನಡವಳಿಕೆಗಳ ವಿಷಯದಲ್ಲಿ ಹೆಚ್ಚು ಹೆಚ್ಚು ಅವಿಶ್ವಾಸ ಮತ್ತು ಅಸೂಯೆ ತೋರಿಸುತ್ತಿದ್ದರು. ತನ್ನ ಅತಂತ್ರ ಸ್ಥಿತಿಯ ಬಗ್ಗೆ ಮಿ. ಥ್ಯಾಕರೆ ಹೆಚ್ಚು ಕಳವಳ ವ್ಯಕ್ತಪಡಿಸಿದನು. ಈ ವಿಷಯವನ್ನು ಬೇಗ ಇತ್ಯರ್ಥಗೊಳಿಸುವಂತೆ ಮಿ. ಚಾಪ್ಲಿನ್ (Chaplin)ಗೆ ಮಿ. ಥ್ಯಾಕರೆ ಆಗ್ರಹ ಪೂರ್ವಕ ಬರೆದಿದ್ದನೆಂದು ನಾನು ನಂಬುತ್ತೇನೆ. ಹಿರಿಯ ದೇಸಾಯಿಣಿ ಮತ್ತು ಅವಳು ಮುಖ್ಯವಾಗಿ ನಂಬಿದ್ದ ಗುರುಸಿದ್ದಪ್ಪ ಅನಿಶ್ಚಿತೆಯಲ್ಲಿ ದಿನಗಳುರುಳುತ್ತಿದ್ದುದನ್ನು ಸಹಿಸದೆ ತಮ್ಮ ಅಸಹನೆಯನ್ನು ವ್ಯಕ್ತಪಡಿಸಿದರಲ್ಲದೆ, ಮುಂಬಯಿಗೆ ಹೋಗಿ ತಾವೇ ಸ್ವತಃ ಗವ್ಹರ್ನರ್ ಮುಂದೆ ತಮ್ಮ ಹಕ್ಕನ್ನು ಪ್ರತಿಪಾದಿಸುವುದಾಗಿ ಹೇಳಿದರು.

ಅವರು ತಮ್ಮ ಈ ಯೋಜನೆಗೆ ಗಟ್ಟಿಯಾಗಿ ಅಂಟಿಕೊಂಡರು. ಆ ನಿರ್ಧಾರ ಅವರ ಅಸಮಾಧಾನದ ಸಂಕೇತವಾಗಿದ್ದಿತು. ಅಂತಿಮವಾಗಿ ಮುಂಬಯಿಗೆ ಹೋಗುವ ಸಿದ್ಧತೆಯನ್ನು ಮಾಡಿಕೊಂಡರು. ಅಲ್ಲದೆ ತಮ್ಮೊಂದಿಗೆ ಖಜಾನೆಯಿಂದ (ಸುಮಾರು ಒಂಬತ್ತು ಲಕ್ಷ) ಹಣವನ್ನು ತೆಗೆದುಕೊಂಡು ಹೋಗುವುದಾಗಿ ಥ್ಯಾಕರೆಗೆ ಪ್ರಸ್ತಾವನೆ ಸಲ್ಲಿಸಿದರು. "ಹಾಗೆ ಮಾಡಲು ಬಿಡುವುದಿಲ್ಲ" ಎಂದು ಮಿ. ಥ್ಯಾಕರೆ ಸಾರಿದನು. ಏಕೆಂದರೆ ಸರಕಾರ ನಿರ್ಣಯಿಸಿರುವಂತೆ ಆ ಹಣದ ಸಂಪೂರ್ಣ ಹೊಣೆ ಮಿ. ಥ್ಯಾಕರೆಯದಾಗಿದ್ದಿತು. ಆ ಹಣದ ಬಗ್ಗೆ ಸರಕಾರಕ್ಕೆ ಆಗಲೇ ವರದಿಯನ್ನು ಸಲ್ಲಿಸಲಾಗಿತ್ತು.

ಅವರು ಹಣ ತೆಗೆದುಕೊಂಡು ಹೋಗುವುದಕ್ಕೆ ಪಟ್ಟುಹಿಡಿದಿದ್ದರಿಂದ, ಅದನ್ನು ತಡೆಗಟ್ಟಲು ಅಕ್ಟೋಬರ ೨೦ರಂದು ಕೋಟೆಯ ಎರಡು ಹೆಬ್ಬಾಗಿಲುಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವಂತೆ ಮತ್ತು ಈ ಪ್ರತಿಯೊಂದು ಹೆಬ್ಬಾಗಿಲಿಗೆ ಮೂವತ್ತು ಮೂವತ್ತು ಸೈನಿಕರು ನಿಲ್ಲುವಂತೆ ತನ್ನ ಬೆಂಗಾವಲು ಪಡೆಗೆ ಥ್ಯಾಕರೆ ಆದೇಶ ಕೊಟ್ಟನು. ಅಲ್ಲದೆ ತನ್ನ ಪರವಾನಗಿ ಇಲ್ಲದೆ ಯಾರನ್ನೂ ಹೊರಗೆ ಹೋಗಲು ಬಿಡಬಾರದೆಂದು ಆಜ್ಞಾಪಿಸಿದನು. ಬಳಿಕ ಸಂಸ್ಥಾನದ ಆಸ್ತಿ, ಖಜಾನೆಯ ಮುದ್ರೆ ಇತ್ಯಾದಿ ರಕ್ಷಣೆಗೆ ಕ್ರಮಕೈಕೊಳ್ಳಲು ಮುಂದುವರಿದನು. ಜನರು ತಮ್ಮ ರೋಷ ಮತ್ತು ಅಸಹನೆಯನ್ನು ಹೆಚ್ಚು ಹೆಚ್ಚು ವ್ಯಕ್ತಪಡಿಸುತ್ತಿದ್ದಂತೆ ಖಜಾನೆಗೆ ಮುದ್ರೆಯನ್ನೊತ್ತಿ ಅದನ್ನು ಭದ್ರಪಡಿಸುವಂಥ ಮುಂಜಾಗ್ರತಾ ಕ್ರಮಗಳು ಅಲ್ಲಿ ಜರುಗಿದವು. ಆದರೆ, ಹಿಂದಿನ ಎರಡು ದಿವಸ ಅಧಿಕ ಅಸ್ವಸ್ಥನಾಗಿದ್ದುದರಿಂದ ನನಗೆ ಆಗ ಅಲ್ಲಿ ನಡೆದದ್ದನ್ನೆಲ್ಲ ನೋಡಲಿಕ್ಕಾಗಲಿಲ್ಲ. ಅಕ್ಟೋಬರ ೨೨ರಂದು ನಾನು ಮಿ. ಥ್ಯಾಕರೆ ಮತ್ತು ಮಿ. ಸ್ಟೀವನ್ಸನ್‌ರ ಜೊತೆಗೆ ಕೋಟೆಯೊಳಗಿರುವ ನಮ್ಮ ಕಚೇರಿಗೆ ಹೋಗುತ್ತಿದ್ದಾಗ ಜನರಲ್ಲಿ ದ್ವೇಷಭಾವನೆಯ ಅತ್ಯಂತ ಸ್ಪಷ್ಟಚಿಹ್ನೆಗಳು ಕಂಡುಬಂದವು ಮತ್ತು ಪರಸ್ಪರ ಸಂವಹನ ಮುರಿದುಬಿದ್ದಂತೆ ತೋರಿತು. ಆ ದಿನ ಸಾಯಂಕಾಲ ಬುದ್ಧಿ ಹೇಳುವುದಕ್ಕಾಗಿ ಥ್ಯಾಕರೆ ಪ್ರಮುಖ ಸರದಾರರಿಗೆ ಬರಹೇಳಿದನು. ಆದರೆ ನಮ್ಮನ್ನು ಗೌರವದಿಂದ ಕಂಡಿಲ್ಲವೆಂದು ಆರೋಪಿಸಿ ಅವರು ಬರಲು ಒಪ್ಪಲಿಲ್ಲ. ಜನರೊಂದಿಗೆ ಮಾತನಾಡುವಾಗ ಯಾವತ್ತೂ

ಔದಾರ್ಯ ಮತ್ತು ಎಚ್ಚರದಿಂದಿರುತ್ತಿದ್ದ ಮಿ. ಥ್ಯಾಕರೆ ಗುರುಸಿದ್ದಪ್ಪನನ್ನು ಒಂದೆರಡು ಸಂದರ್ಭಗಳಲ್ಲಿ ಕೂಡಲು ಖುರ್ಚಿ ಇಲ್ಲದ್ದರಿಂದ ನೆಲದ ಮೇಲೆ ಕುಳಿತುಕೊಳ್ಳಲು ಕೇಳಿಕೊಂಡಿದ್ದನು. ನಂತರ ಕಂಡು ಬಂದಂತೆ ಅದು ಅವನನ್ನು ಬಹಳ ನೋಯಿಸಿದ್ದಿತು. ಸದ್ಯ ಮಿ. ಥ್ಯಾಕರೆ ಸಂಕ್ಷಿಪ್ತವಾಗಿ ಜನರ ಮನಸ್ಥಿತಿಯನ್ನು ವರ್ಣಿಸಿ, ಕ್ಯಾ. ಬ್ಲ್ಯಾಕ್‌ಗೆ ಒಂದೆರೆಡು ಸಾಲು ಬರೆದು, ಜನರನ್ನು ಹೆದರಿಸುವುದಕ್ಕಾಗಿ ಫಿರಂಗಿಗಳ ಒಂದು ತುಕಡಿಯನ್ನು ಕೋಟೆಗೆ ಕೊಟ್ಟುಕಳಿಸಬೇಕೆಂದು ಕೇಳಿಕೊಂಡನು. ಕೂಡಲೇ ಫಿರಂಗಿಗಳೊಂದಿಗೆ ಕ್ಯಾ. ಬ್ಲ್ಯಾಕ್ ಸ್ವತಃ ಬಂದುಬಿಟ್ಟನು. ಆದರೆ ಅವನು ಬಂದಾಗ ಕೋಟೆಯ ಬಾಗಿಲುಗಳನ್ನು ಮುಚ್ಚಿ ಬೀಗ ಹಾಕಲಾಗಿತ್ತು. ಆದ್ದರಿಂದ ಅವನಿಗೆ ಪ್ರವೇಶ ನಿರಾಕರಿಸಲಾಯಿತು. ಮಿ. ಥ್ಯಾಕರೆ (ಮೂರು) ಹೆಬ್ಬಾಗಿಲುಗಳಿಗೆ ತನ್ನ ಬೆಂಗಾವಲು ಪಡೆಯವರನ್ನು ನಿಲ್ಲಿಸಿದ್ದರೂ ಅವು ನಮ್ಮ ವಶದಲ್ಲಿರಲಿಲ್ಲ. ಒಳಗಿನ ಒಂದು ಬಾಗಿಲಿಗೆ ನಮ್ಮ ಸೈನಿಕರನ್ನು ನಿಲ್ಲಿಸಲಾಗಿದ್ದು, ಹೊರಗಿನ ಎರಡೂ ಹೆಬ್ಬಾಗಿಲುಗಳು ಸಂಪೂರ್ಣ ಕೋಟೆಯ ನಿವಾಸಿಗಳ ಅಧೀನವಿದ್ದವು. ಪ್ರತಿರೋಧ ಒಡ್ಡಲು ಒಳಗಿನ ಜನರು ಅರೆಮನಸ್ಸಿನವರಾಗಿದ್ದುದರಿಂದ, ಕ್ಯಾ. ಬ್ಲ್ಯಾಕ್‌ನು ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸುತ್ತಿದ್ದುದರಿಂದ, ನಾವೆಲ್ಲರೂ ಕೋಟೆಯನ್ನು ಬಿಟ್ಟು ಹೋದ ಬಳಿಕ ಜನರು ಒಳಗಿನ ಬಾಗಿಲ ತೆರೆದರು. ಆದರೆ ಫಿರಂಗಿಗಳ ತುಕಡಿ, ಅದರ ಕಮಿಶನ್ ಆಫೀಸರುಗಳು (Commission Officers) ಮತ್ತು ಸೈನಿಕರ ಟ್ರೂಪ್ ಒಳಗೆ ಉಳಿದವು. ಮಿ. ಸ್ಟೀವೆನ್ಸನ್ ಮತ್ತು ನಾನು ಟ್ರೂಪ್‌ದ ಮೆಸ್ (ಊಟದ ಮನೆ)ದಲ್ಲಿ ಊಟ ಮಾಡಿದೆವು. ಆದರೆ ಮಿ. ಥ್ಯಾಕರೆ ಊಟ ಮಾಡದೆ ಮಲಗಿಕೊಂಡನು. ಹೆಬ್ಬಾಗಿಲ ಬಳಿ ಜರುಗಿದ ಘಟನೆಯು ಹೆಬ್ಬಾಗಿಲುಗಳನ್ನು ಫಿರಂಗಿ ಹಾರಿಸಿ ತೆರೆಯುವ ನಿರ್ಧಾರಕ್ಕೆ ಕೊಂಡೊಯ್ದಿತು. ಫಿರಂಗಿ ತುಕಡಿಯ ಕಿರಿಯ ಸದಸ್ಯರೇ ಆ ಸಮಸ್ಯೆಗೆ ಪರಿಹಾರ ಕಂಡುಕೊಂಡರೋ ಹೇಗೆ ಎಂಬುದು ನನಗೆ ನೆನಪಾಗುತ್ತಿಲ್ಲ. ಆದರೆ ಇಂಥ ಪ್ರಕರಣದಲ್ಲಿ ಹೆಬ್ಬಾಗಿಲುಗಳನ್ನು ಫಿರಂಗಿ ಹಾರಿಸಿ ತೆರೆಯಲಾಗುತ್ತದೆಂಬ ಅಂಶ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿರುತ್ತದೆ.

ಅಂತೂ ಸಂಜೆ ಯಾವುದೇ ಅಹಿತಕರ ಘಟನೆ ನಡೆಯದೇ ಕಳೆಯಿತು. ಮರುದಿನ (೨೩ ಅಕ್ಟೋಬರ್) ಸಂಭವಿಸಲಿದ್ದ ದುರಂತದ ಮುನ್ಸೂಚನೆ ನಮಗೆ ಕಂಡು ಬರಲಿಲ್ಲ. ಮರುದಿನ (೨೩ ಅಕ್ಟೋಬರ್) ಬೆಳಗಾಗುತ್ತಲೇ ಮಿ. ಥ್ಯಾಕರೆ ಬಳಿಗೆ ಬಂದು ಕ್ಯಾ.ಬ್ಲಾಕ್ "ಕೋಟೆಯ ಒಳಗಿದ್ದ ನಮ್ಮ ಸೈನಿಕರ ಸರದಿ ಬದಲಿಸಲು ತೆರಳಿದ್ದ ನಮ್ಮ ಸೈನಿಕರಿಗೆ ಪ್ರವೇಶ ನಿರಾಕರಿಸಲಾಗಿದೆ" ಎಂದು ಹೇಳಿದನು. ನಾನು ಟೆಂಟ್ (ಗುಡಾರ) ಪ್ರವೇಶಿಸಿದಾಗ ಮಿ. ಥ್ಯಾಕರೆ ಮತ್ತು ಮಿ. ಸ್ಟೀವನ್ಸನ್‌ರನ್ನು ಅಲ್ಲಿ ಕಂಡೆನು. (ಮಿ. ಥ್ಯಾಕರೆ ಮತ್ತು ಮಿ. ಸ್ಟೀವನ್ಸನ್ ತಮ್ಮ ರಾತ್ರಿ ಪೋಷಾಕುಗಳಲ್ಲಿಯೇ ಇದ್ದರು). ಕ್ಯಾ. ಬ್ಲಾಕ್, ಒಳಗಿನ ಸೈನಿಕರಿಗೆ ಬಿಡುವು ಕೊಟ್ಟು ಅವರ ಸ್ಥಾನದಲ್ಲಿ ಬೇರೆಯವರನ್ನು ನಿಲ್ಲಿಸುವುದರ ಜರೂರಿಯನ್ನು ಥ್ಯಾಕರೆಗೆ ಒತ್ತಿ ಹೇಳುತ್ತಿದ್ದನು. "ಹೆಬ್ಬಾಗಿಲನ್ನು ಫಿರಂಗಿ ಹಾರಿಸಿ ತೆರೆಯುವುದು ಜರೂರು ಎನಿಸಿದಲ್ಲಿ ಹಾಗೆ ಮಾಡುವುದು ಉತ್ತಮ" ಎಂದು ಮಿ. ಥ್ಯಾಕರೆ ಉತ್ತರಿಸಿದನು. ಆಗ ಕ್ಯಾ. ಬ್ಲಾಕ್ ಫಿರಂಗಿಗಳ ಇನ್ನೊಂದು ತುಕಡಿಯನ್ನು ಕಳಿಸಲು ಆದೇಶಿಸಿದನು.[೨] ಅದು ಬರುವುದಕ್ಕೆ ಮೊದಲೇ ಅಲ್ಲಿ ಏನು ನಡೆದಿದೆಯೆಂದು

---

೨. ಕಿತ್ತೂರು ತಲುಪಿದ ಈ ತುಕಡಿಯು ೨೦೦ ಇಲ್ಲವೇ ೨೫೦ ಜನ ಸೈನಿಕರನ್ನು ೫-೬ ಫಿರಂಗಿಗಳನ್ನು (೨-೩ ಫಿರಂಗಿಗಳನ್ನು ರಿಪೇರಿಗಾಗಿ ಬೆಳಗಾವಿಯಲ್ಲಿ ಬಿಡಲಾಗಿದ್ದಿತು) ಒಳಗೊಂಡಿದ್ದಿತು.

ನೋಡಲು ಬ್ಲಾಕ್ ಕುದುರೆಯನ್ನೇರಿ ಕೋಟೆಯ ಹೆಬ್ಬಾಗಿಲಿನ ಬಳಿ ಓಡಿಹೋದನು. (ಬಳಿಕ ಅವನಿಗೆ ಮಿ. ಥ್ಯಾಕರೆಯನ್ನು ಮತ್ತೆ ನೋಡುವುದಾಗಲೇ ಇಲ್ಲ). ನಾನೂ ಬ್ಲಾಕ್‌ನೊಂದಿಗೆ ಹೋದೆನು. ಸುಮಾರು ಒಂದು ತಾಸು ಗೇಟ್ ಹತ್ತಿರ ನಾವಿಬ್ಬರೇ ಕುಳಿತೆವು. ಮುಂಜಾನೆ ನಮ್ಮ ಮತ್ತೆರಡು ಫಿರಂಗಿಗಳು ಬಂದಾಗ, ಮದ್ದು ಗುಂಡಿನ ನಮ್ಮ ಕ್ಯಾಂಪ ಸುಮಾರು ಒಂದು ಮೈಲಿ ದೂರವಿದ್ದಿತು. ನಮ್ಮ ಗುಡಾರಗಳು ಕೋಟೆಯಿಂದ ಸುಮಾರು ೩೦೦ ರಿಂದ ೪೦೦ ಮೀಟರ ದೂರ ಇದ್ದವು. ಅದುವರೆಗೆ ತುಂಬ ಶಾಂತವಾಗಿದ್ದ ಕೋಟೆಯ ಒಳಗಿನವರಲ್ಲಿ ಕೆಲವರು ಕೋಟೆಯ ಗೋಡೆಯ ಮೇಲೆ ಕಾಣಿಸಿಕೊಳ್ಳತೊಡಗಿದರು. ಉಳಿದವರು ಕೋಟೆಯ ಗೋಡೆಯ ಎದುರಿನ ದಿಬ್ಬದ ಮೇಲೆ ಕಾಣಿಸಿಕೊಂಡರು. ಅಲ್ಲಿ ಸೇರಲು ಕಿತ್ತೂರಿನ ಸೈನಿಕರು ಇಡೀ ರಾತ್ರಿ ನಡೆದು ಬಂದಿರುವುರೆಂದೂ ಮತ್ತು ತೋಫುಖಾನೆಯಿಂದ ತೋಫುಗಳನ್ನು ಹೊರತೆಗೆಯಲಾಗುತ್ತದೆಯೆಂದೂ ಗೊಂದಲಮಯ ಹಾರಿಕೆಯ ಸುದ್ದಿ ಕೇಳಿಬರುತ್ತದ್ದಿತು. "ಒಳಗಿರುವ ತನ್ನ ಕಾವಲು ಸೈನಿಕರನ್ನು ಬಿಡುಗಡೆಗೊಳಿಸಲು" ಕೇಳಿಕೊಂಡ ಬಳಿಕ, "ಫಿರಂಗಿ ಹಾರಿಸಲು ಎಷ್ಟು ಹೊತ್ತು ಕಳೆಯುಬೇಕೆಂದು ತಿಳಿಯಬಯುಸುತ್ತೇನೆ"ಂದು ಕ್ಯಾ. ಬ್ಲಾಕ್‌ನು ಮಿ. ಥ್ಯಾಕರೆಗೆ ಕಾಗದ ಬರೆದು ಕೇಳಿಕೊಂಡನು. "೨೦ ನಿಮಿಷ ಕಾಯಬೇಕೆ"ಂದು ಮಿ. ಥ್ಯಾಕರೆಯಿಂದ ಲಿಖಿತ ಉತ್ತರ ಪಡೆದನು. ನಮ್ಮ ಮತ್ತೆರಡು ಫಿರಂಗಿಗಳು ಬಂದ ಬಳಿಕ ಬೆಳಗಿನ ೯ ಗಂಟೆ ಸುಮಾರು ಮುಖ್ಯ ಕಾರಕೂನ ಬ್ರಾಹ್ಮಣ ದಫೇದಾರ ತಿಮ್ಮಪ್ಪ ನಮ್ಮ ಕರೆಯ ಮೇರೆಗೆ ದಿಡ್ಡಿಯ ಬಾಗಿಲು ಮುಖಾಂತರ ಹೊರಗೆ ಬಂದನು. ಆಗಲೇ ನಮ್ಮ ಹತ್ತಿರ ಬಂದಿದ್ದ ಸ್ಟೀವನ್ಸನ್‌ನು "ನಮ್ಮ ಸುರಕ್ಷಾ ಪಡೆಯವರನ್ನು ಬಿಟ್ಟುಕೊಡಬೇಕು" ಎಂದು ಅವನನ್ನು ಕೇಳಿಕೊಂಡನು. "ದೇಸಾಯಿಣಿ ಮತ್ತು ಅವಳ ಬೆಂಬಲಿಗರು ಖಜಾನೆಯನ್ನು ತೆಗೆದುಕೊಂಡು ಹೋಗಲು ಒಪ್ಪಿದಲ್ಲದೆ (ಒಳಗಿನ ಬ್ರಿಟೀಷ್ ಕಾವಲುಗಾರರನ್ನು ಬಿಡುಗಡೆಗೊಳಿಸಬೇಕೆಂಬ) ನಮ್ಮ ಬೇಡಿಕೆಯನ್ನು ಈಡೇರಿಸಲು ಒಪ್ಪರೆ"ಂದು ಸ್ಪಷ್ಟವಾಗಿ ಹೇಳಿದನು. "ಬಲಪ್ರಯೋಗದಿಂದ ಬಾಗಿಲು ತೆಗೆ"ಯುವುದಾಗಿ ಅವನನ್ನು ಹೆದರಿಸಿದೆವು. "ಅದನ್ನು ತಡೆಯಲು ನಾವೂ ಬಲಪ್ರಯೋಗ ಮಾಡಬಲ್ಲೆವೆ"ಂದು ಅವನು ಉತ್ತರಿಸಿದನು. ಅಷ್ಟು ಹೇಳಿ ಅವನು ಹೊರಟು ಹೋದನು. ಅವನ ನಡತೆಯಿಂದ ಅವನು ಪ್ರಕ್ಷುಬ್ಧಗೊಂಡಿದ್ದು ಕಂಡುಬಂದಿತು. ೨೦ ನಿಮಿಷ ಕಳೆದ ಬಳಿಕ ಕ್ಯಾ. ಬ್ಲಾಕ್‌ನು 'ಫಿರಂಗಿ ಗುಂಡು ಹಾರಿಸಬಹುದೇ'ಎಂದು ಮಿ. ಥ್ಯಾಕರೆಯನ್ನು ಕೇಳಿಕೊಂಡು ಬರಲು ಮಿ. ಸ್ಟೀವನ್ಸನ್‌ನಿಗೆ ವಿನಂತಿಸಿದನು. 'ಗುಂಡು ಹಾರಿಸಬಹುದೆ'ಂದು ಕೆಲವೇ ನಿಮಿಷದಲ್ಲಿ ಉತ್ತರ ಪಡೆದುಕೊಂಡು ಮಿ. ಸ್ಟೀವನ್ಸನ್ ತಿರುಗಿ ಬಂದನು. ಸುಮಾರು ೯ಗಂಟೆ ೨೦ ನಿಮಿಷ ಗತಿಸುವಲ್ಲಿ ಫಿರಂಗಿ ಗುಂಡು ಹಾರಿತು. ಒಳಗೆ ಸಿದ್ಧತೆ ನಡೆಸುತ್ತಿದ್ದ, ಸಮೀಪದಲ್ಲಿದ್ದ ಎಲ್ಲ ಸೇತಸನದಿಗಳನ್ನುದ್ದೇಶಿಸಿ ಮಿ. ಸ್ಟೀವನ್ಸನ್ "ನೀವು ಪ್ರತಿಭಟಿಸಿದರೆ ನಿಮ್ಮನ್ನು ದಂಗೆಕೋರರೆಂದು ತಿಳಿಯಲಾಗುತ್ತದೆ." ಎಂದು ಹೇಳಿದನು. ಆದರೆ ಅವರು ಅದಕ್ಕೆ ಕಿವಿಗೊಟ್ಟಂತೆ ಕಾಣಲಿಲ್ಲ. ಅಷ್ಟರಲ್ಲಿ ನಾನು ಅಲ್ಲಿಂದ ಹೊರಟುಹೋದ ಬಳಿಕ ಮಿ. ಥ್ಯಾಕರೆ ಗುರುಸಿದ್ದಪ್ಪನು ಅಧಿಕಾರದಲ್ಲಿ ಮುಂದುವರೆಯದಂತೆ ಅಜ್ಞಾಪಿಸಿದನು ಮತ್ತು ಕೆಲವೇ ದಿನಗಳ ಮುಂಚೆ ಬಂದಿದ್ದ ಕಿರಿಯ ದೇಸಾಯಿಣಿಯ ತಂದೆಯನ್ನು ಅವನ ಸ್ಥಾನದಲ್ಲಿ ದಿವಾನನೆಂದೂ,[೩] ಕುನ್ನೂರ

೩. ಹುಮನಾಬಾದದಿಂದ ಬರಲು ಅವನಿಗೆ ಕರೆಕಳಿಸಲಾಗಿತ್ತು. ಅವನು ಕೆಲವೇ ದಿನಗಳ ಮುಂಚೆ ಬಂದಿದ್ದನು.

ಮಲ್ಲಪ್ಪನನ್ನು(ಅವರಾದಿ ವೀರಪ್ಪನ ಬದಲು) ಗ್ರಾಮಸೈನ್ಯದ ಮುಖ್ಯಸ್ಥನೆಂದೂ ನೇಮಿಸಿದನು. ಆದರೆ ಆಗಲೇ ಸಾಕಷ್ಟು ತಡವಾಗಿತ್ತು. ಹುಮನಾಬಾದ ದೇಸಾಯಿ ಯಾವುದೇ ಪ್ರಭಾವ ಇಲ್ಲದವನೂ ಆಗಿದ್ದನು. ಅವರಿರ್ವರಿಗೆ ಕೋಟೆಯ ಒಳಗೆ ಹೋಗಿ ತಮ್ಮ ಅಧಿಕಾರ ಚಲಾಯಿಸಲಾಗಲಿಲ್ಲ.

ಕ್ಯಾ. ಬ್ಲಾಕ್ ಮತ್ತು ಮಿ. ಡಿಟನ್ ಒಂದು ಫಿರಂಗಿ ಮತ್ತು ಹನ್ನೆರಡು ಸೈನಿಕರೊಂದಿಗೆ ಒಂದು ಹೆಬ್ಬಾಗಿಲಿಗೆ ನಿಂತರು ಮತ್ತು ಲೆ.ಸಿವೆಲ್ ಮತ್ತೊಂದು ಫಿರಂಗಿ ಮತ್ತು ಅಷ್ಟೇ ಸೈನಿಕರೊಂದಿಗೆ ಕೋಟೆಗೋಡೆಯ ಮೇಲಿಂದ ಬಂದೂಕು ಹಾರಿಸುವುದನ್ನು ತಡೆಯಲು ಕೋಟೆಗೋಡೆಯ ಹೊರಗಿನ ಇಳಿಜಾರಿಗೆ ನಿಂತನು. ಮೇಲೆ ಹೇಳಿದ ಮೊದಲನೆಯ ಫಿರಂಗಿ ಗುಂಡಿಗೆ ಹೆಬ್ಬಾಗಿಲು ಕಿತ್ತುಬೀಳಬಹುದೆಂದು ನಾನು ನಿರೀಕ್ಷಿಸಿದ್ದೆ. ಆದರೆ ಅದು ಎಳ್ಳಷ್ಟೂ ಅಲುಗಾಡದೆ ಭದ್ರವಾಗಿ ನಿಂತಿದ್ದಿತು. ಮತ್ತೆರಡು ಫಿರಂಗಿ ಗುಂಡು ಹಾರಿಸಿದರೂ ಅದು ಅಚಲವಾಗಿದ್ದಿತು. ಕೋಟೆಯ ಗೋಡೆಗಳ ಮೇಲಿಂದ ಕೆಲವು ಗುಂಡುಗಳು ಹಾರಿದವು. ಅವುಗಳನ್ನು ತಡೆಯಲು ಲೆ.ಸಿವೆಲ್‌ನ ಫಿರಂಗಿಗೆ ಆಗಲಿಲ್ಲ. ನಮ್ಮ ಕೆಲವು ಸೈನಿಕರು ಗಾಯಗೊಂಡರು. ಸ್ವಲ್ಪ ಹೊತ್ತಿನಲ್ಲಿ ಲೆ. ಸಿವೆಲ್‌ನೇ ಕೆಳಗೆ ಬಿದ್ದನು. ಅವನ ಎದೆಯಲ್ಲಿ ಗುಂಡು ನಟ್ಟಿತ್ತು. ಸ್ಟೀವೆನ್ಸನ್ ಮತ್ತು ನಾನು ಕೂಡಿ ಅವನನ್ನು ಅವನ ಕುದುರೆ ಮೇಲೆ ಹೇರಿಕೊಂಡು ಸಮೀಪದ ದಾರಿ ಹಿಡಿದು ನಮ್ಮ ಗುಡಾರಗಳಿಗೆ ಕೊಂಡೊಯ್ದೆವು. ಅವನನ್ನು ಗುಡಾರದೊಳಗೆ ಇಳಿಸುವಷ್ಟರಲ್ಲಿ ಎರಡು ಮೂರು ಗುಂಡುಗಳು ಗುಡಾರ ಭೇದಿಸಿದ್ದವು. ಆದ್ದರಿಂದ ಅವನ ಗಾಯಕ್ಕೆ ಉಪಚಾರ ಮಾಡಲು ಅದು ತಕ್ಕ ಸ್ಥಳವಲ್ಲವೆಂದು ಕಂಡುಬಂದಿದ್ದರಿಂದ ಅವನನ್ನು ಡಾ. ಟರ್ನ್‌ಬುಲ್ (Turnbull) ತನ್ನ ಗುಡಾರಕ್ಕೆ ಹೊತ್ತೊಯ್ದನು. ಅಲ್ಲಿಂದ ಅಂದಿನ ಸಂಜೆ ಅವನನ್ನು ಧಾರವಾಡಕ್ಕೆ ತೆಗೆದುಕೊಂಡು ಹೋಗಲಾಯಿತು. ಅಲ್ಲಿ ಅವನು ನವೆಂಬರ ೫ ರಂದು ಕೊನೆಯುಸಿರೆಳದನು. ಮಿ. ಥ್ಯಾಕರೆ ಬಗೆಗೆ ವಿಚಾರಿಸಲಾಗಿ ಅವನು ತನ್ನ ಮೇಣೆಯಲ್ಲಿ ಪ್ರಮುಖ ಬೀದಿಗುಂಟ ಕ್ಯಾ. ಬ್ಲಾಕ್‌ನ ಕಡೆಗೆ ಹೋದನೆಂದು ತಿಳಿದುಬಂದಿತು. ಸ್ಟೀವನ್ಸನ್ ಮತ್ತು ನಾನು ಅವನನ್ನು ಕೂಡಿಕೊಳ್ಳಲು ಕುದುರೆ ಏರಿಕೊಂಡು ಹೋದೆವು. ಆದರೆ ನಾವು ಸಮತಲ ಪ್ರದೇಶ ಮುಟ್ಟುತ್ತಲೇ ಮುತ್ತಿಗೆ ಹಾಕಿದ ನಮ್ಮವರ ಮೇಲೆ ಒಳಗಿನ ಸೈನಿಕರು ದಾಳಿಮಾಡಿದ್ದು ಕಂಡುಬಂದಿತು. ಮತ್ತು ನಮ್ಮ ಫಿರಂಗಿ ಸೈನಿಕರು ತಮ್ಮ ಪ್ರಾಣ ಉಳಿಸಿಕೊಳ್ಳಲು ಓಡಿ ಹೋಗುತ್ತಿದ್ದರು. ಯಾವಾಗಲೂ ಥ್ಯಾಕರೆ ಜೊತೆಗಿರುತ್ತಿದ್ದ ಮತ್ತು ಈಗ ಅವನ ಜೊತೆಗೆ ಹೋಗಿದ್ದ ಇಬ್ಬರು ಅಶ್ವದಳ ಸೈನಿಕರು ಅವನು ಮೃತಪಟ್ಟದ್ದನ್ನು ವರದಿ ಮಾಡಿದರು. ಮತ್ತು ಇದ್ದ ಸ್ವಲ್ಪ ಸಮಯದಲ್ಲಿ ನಮ್ಮನ್ನು ಗುಡಾರಕ್ಕೆ ಕರೆದುಕೊಂಡು ಹೋಗಲು ಅವರು ಬಯಸಿದರು. ಅವರ ಸಲಹೆಯನ್ನು ಪಾಲಿಸುವ ಒಲವು ನಮ್ಮದಾಗಿದ್ದರೂ ನಮ್ಮ ನಾಯಕನನ್ನು ಬಿಟ್ಟು ಹೋಗಬಾರದೆಂದು ನಾವು ಆಲೋಚಿಸಿದ್ದರಿಂದ, ಅಲ್ಲಿ ನಮ್ಮಿಬ್ಬರನ್ನೇ ಬಿಟ್ಟು ಅವರು ಹೋದರು. ಕೆಲವೇ ಕ್ಷಣಗಳಲ್ಲಿ ಅಲ್ಲಿಗೆ ನುಗ್ಗಿದ ವೈರಿ ಸೈನಿಕರು ನನ್ನನ್ನು ಅಲ್ಲಿ ನಿಲ್ಲಗೊಡದೆ ನಾನು ಒಂದು ಮನೆಯ ಆಶ್ರಯ ಪಡೆಯುವ ಪರಿಸ್ಥಿತಿ ನಿರ್ಮಾಣ ಮಾಡಿದರು. ಮುಂದೆ ಏನಾಗಬಹುದೆಂದು ಖಚಿತವಾಗಿ ಗೊತ್ತಾಗದೆ ಕೆಲಹೊತ್ತು ಅಲ್ಲೇ ಉಳಿದೆವಾದರೂ ದೇಸಾಯಿಯನ್ನು ಆಶ್ರಯಿಸಿದ್ದ, ನಮಗೆ ಸ್ವಲ್ಪ ಪರಿಚಯವಿದ್ದ ಬಸಲಿಂಗಪ್ಪ ತೇಲಿ ಎಂಬವನು[೪] ತನ್ನ ಮನೆಯ ಬಾಗಿಲೊಳಗಿಂದಲೇ

---

೪. ಈತನ ಹೆಸರು ನನಗೆ ಖಚಿತ ಗೊತ್ತಿಲ್ಲ. ನಾನು ತಿಳಿದುಕೊಳ್ಳಬೇಕಾಗಿದೆ.

ಶರಣಾಗಲು ನಮಗೆ ಸಲಹೆ ಮಾಡಿದನಲ್ಲದೆ, ಹೊರಗಿನ ಉದ್ರಿಕ್ತ ಸೈನ್ಯದಿಂದ ನಮ್ಮನ್ನು ರಕ್ಷಿಸುವ ಭರವಸೆ ಕೊಟ್ಟನು. ನಾವು ಅವನು ಹೇಳಿದಂತೆಯೇ ಮಾಡಿದೆವು. ಅವನು ತನ್ನ ಅನುಯಾಯಿಗಳ ಚಿಕ್ಕ ತಂಡದೊಂದಿಗೆ ನಮ್ಮನ್ನು ಸುತ್ತುವರಿದು, ಕೋಟೆಯ ಒಳಗೆ ಕರೆದುಕೊಂಡು ಹೋದನು. ಆಗ ನಮ್ಮ ಮೇಲೆ ಅನೇಕ ದಾಳಿಗಳು ನಡೆಯುತ್ತಿದ್ದುದರಿಂದ ನಮ್ಮನ್ನು ಒಳಗೆ ಸುರಕ್ಷಿತ ಕೊಂಡ್ಯೊಯ್ಯುವುದು ಸುಲಭವಿರಲಿಲ್ಲ. ಅಲ್ಲದೆ ಒಂದು ಖಡ್ಗದ ಹೊಡೆತ ನಮ್ಮ ರಕ್ಷಕದಳದ ತಲೆಯ ಮೇಲೆ ಹಾಯ್ದು ಸ್ಟೀವನ್ಸನ್‌ನ ಟೊಪ್ಪಿಗೆಯನ್ನು ಕತ್ತರಿಸಿತು. ಕೋಟೆಯ ಹೊರಬದಿಯ ಇಳಿಜಾರ ಕೆಳಗೆ ಬಿದ್ದಿರುವ ಮಿ. ಥ್ಯಾಕರೆಯ ಮೃತದೇಹದ ಪಕ್ಕಕ್ಕೆ ಹಾಯ್ದು ಮುಂದೆ ಹೋದ ನಾವು, ಹೆಬ್ಬಾಗಿಲ ಬಳಿ ಬಿದ್ದಿರುವ ಲೆ. ಡಿಟನ್‌ನ ಮೃತದೇಹವನ್ನು ಕಂಡೆವು. ಅವನು ಸತ್ತು ಬಹಳ ಹೊತ್ತಾಗಿತ್ತು. ಅವನ ಜೊತೆಗೆ ಎರಡು ಮೂರು ಸೈನಿಕರೂ ಕೊಲ್ಲಲ್ಪಟ್ಟಿದ್ದರು. ಕ್ಯಾ. ಬ್ಲಾಕ ಕೂಡ ಸತ್ತುಹೋಗಿದ್ದನು. ಅವನ ಮೃತದೇಹ ಹೆಬ್ಬಾಗಿಲ ಬಳಿ ಬಿದ್ದಿತ್ತು. ಮೂರನೆಯ ಹೆಬ್ಬಾಗಿಲನ್ನು ತಲುಪಿದಾಗ ನಮಗೆ ಕಂಡದ್ದು ಇಷ್ಟು: ನಮ್ಮ ಸಿಪಾಯಿಗಳು ಮತ್ತು ಫಿರಂಗಿ ಸೈನಿಕರು ತಮ್ಮ ಆಯುಧಗಳೊಂದಿಗೆ ಸನ್ನದ್ಧರಾಗಿದ್ದರು. ಫಿರಂಗಿ ಮದ್ದಿಗೆ ಬೆಂಕಿ ಇಡುವ ನಮ್ಮ ಸೈನಿಕರು ಕೋಟೆ ಗೋಡೆಗಳ ಸುತ್ತ ದಟ್ಟವಾಗಿ ನೆರೆದಿದ್ದರು. ಇವರು ಪ್ರತಿರೋಧ ಮುಂದುವರಿಸಿದ್ದಾದರೆ, ಅದು ಅವರ ವಿನಾಶಕ್ಕೆಡೆಗೊಡುತ್ತದೆಂಬ ಕಾರಣಕ್ಕೆ ನಾವು ಸ್ವಲ್ಪ ತಡೆದು ನಿಂತು, ಶರಣಾಗಲು ಇವರಿಗೆ ತಿಳಿಹೇಳಿದೆವು. ಅದಕ್ಕೆ ಇವರು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿ ಕಿತ್ತೂರಿನವರಿಗೆ ಶರಣಾದರು. ಮಹಲಿನ ಅಂಗಳದಲ್ಲಿ ನಿಲ್ಲಿಸಿದ್ದ ನಮ್ಮ ಸೈನ್ಯದ ಮತ್ತೊಂದು ತಂಡದವರಿಗೂ ಶರಣಾಗಲು ಮನವೊಲಿಸಿದೆವು. ನಾವು ಅಲ್ಲಿಯ ವ್ಯವಸ್ಥೆಯ ಹೊಣೆ ಹೊತ್ತಾದ ಬಳಿಕ ಬಹಳ ವಯಸ್ಸಾದ ಒಬ್ಬ ಸೈನಿಕ ಸಾರ್ಜಂಟ್ ಡೆಟನ್ ತನ್ನ ಆಯುಧಗಳನ್ನು ನಮಗೆ ಒಪ್ಪಿಸಿದನು. ನಮ್ಮ ಸೆರೆಯಾಳುಗಳೆಲ್ಲರನ್ನೂ (ಕಿತ್ತೂರಿನವರು) ಚೆನ್ನಾಗಿ ನೋಡಿಕೊಂಡರು. ಮರುದಿನ ಪ್ರತಿಯೊಬ್ಬನಿಗೆ ಒಂದೊಂದು ರೂಪಾಯಿಕೊಟ್ಟು ಹೊರಗಿದ್ದ ಗುಡಾರಗಳಿಗೆ ಅವರನ್ನು ಕಳಿಸಿಕೊಟ್ಟರು. ಬಳಿಕ ನಮ್ಮನ್ನು ಮೇಲ್ಮಾಳಿಗೆಯಲ್ಲಿದ್ದ ಒಂದು ವಿಶಾಲವಾದ ಮನೆಗೆ ಕರೆದೊಯ್ಯಲಾಯಿತು. ಅದು ಬಹುಶಃ ಕುನ್ನೂರು ಮಲ್ಲಪ್ಪನ ಮನೆಯಾಗಿತ್ತು. ನಮ್ಮ ಬಿಡುಗಡೆಯ ವರೆಗೆ ನಾವು ಅಲ್ಲಿಯೇ ಉಳಿದೆವು. ಅಲ್ಲಿ ನಮ್ಮನ್ನು ಕಟ್ಟೆಚ್ಚರದಿಂದ ಕಾಯಲಾಯಿತು. ಹಗಲು ರಾತ್ರಿ ಮೂವರು ಸೈನಿಕರು ನಾವಿದ್ದ ಕೋಣೆಯಲ್ಲೇ ಇದ್ದು ನಮ್ಮನ್ನು ಕಾಯುತ್ತಿದ್ದರು.

ಮಧ್ಯಾಹ್ನ ನಮ್ಮನ್ನು ಕಾಣಲು ಅನೇಕ ಮುಂದಾಳುಗಳು ಬಂದರು. ಅವರು ಆ ದಿನ ನಡೆದ ಘಟನೆಗಳನ್ನು ಕುರಿತು ತಮ್ಮ ತಮ್ಮೊಳಗೆ ಮಾತಾಡುತ್ತಿದ್ದುದನ್ನು ಕನ್ನಡ ತಿಳಿಯುತ್ತಿದ್ದ ಸ್ಟೀವನ್ಸನ್ ಕೇಳಿಸಿಕೊಂಡನು. ಗ್ರಾಮದಳದ ಅಧಿಪತಿಯಾಗಿದ್ದ ಅವರಾದಿ ವೀರಪ್ಪನು ಮಾಜಿ ದಿವಾನ ಕುನ್ನೂರ ಮಲ್ಲಪ್ಪನನ್ನು ಕೊಲ್ಲಿಸಿದನು, ಇದಲ್ಲದೆ ಇನ್ನುಳಿದ ಘಟನೆಗಳ ಬಗ್ಗೆಯೂ ಅವರು ಮಾತಾಡುತ್ತಿದ್ದರು. ಗ್ರಾಮೀಣ ಸೈನ್ಯದ ಬೆಂಬಲ ಹೊಂದಿದ್ದ ವೀರಪ್ಪ ಒರಟ ಮತ್ತು ಉಗ್ರ ಸ್ವಭಾವದವನಾಗಿದ್ದು, ಈ ಬಂಡಾಯದಲ್ಲಿ ಪಾತ್ರವಹಿಸಿದ ಮುಖ್ಯರಲ್ಲೊಬ್ಬನಾಗಿದ್ದನು.

ನಮ್ಮ ಗುಡಾರಗಳನ್ನು ಕಿತ್ತೊಗೆದು ಅಲ್ಲಿದ್ದದ್ದನ್ನೆಲ್ಲ ಕೊಳ್ಳೆ ಹೊಡೆದದ್ದರಿಂದ, ನಾವು ಕೆಲವು ದಿನ ಬದಲಿಸಲು ಬೇರೆ ಬಟ್ಟೆ ಇರದೆ ಉಟ್ಟ ಬಟ್ಟೆಯಲ್ಲೇ ಇದ್ದೆವು. ಬಳಿಕ ನಮ್ಮ ಸೈನಿಕರಿಗೆ ನಮ್ಮ ಹತ್ತಿರ ಬರಲು ಅನುಮತಿಸಿರಲಿಲ್ಲವಾಗಿ ಧಾರವಾಡದಿಂದ ಕೆಲವು ಆವಶ್ಯಕ ವಸ್ತುಗಳು, ಬಟ್ಟೆ ಬರೆ,

ಪುಸ್ತಕ, ಕಾಗದ ಮುಂತಾದವು ಬಂದವು. ಉಳಿದೆಲ್ಲ ವಿಷಯಗಳಲ್ಲಿ ನಮ್ಮನ್ನು ಚೆನ್ನಾಗಿ ನೋಡಿಕೊಳ್ಳಲಾಗುತ್ತಿತ್ತು ಮತ್ತು ವಾಸಿಸುತ್ತಿದ್ದ ಸ್ಥಳ ಆರಾಮ ಇದ್ದಿತು. ನಾವು ಪತ್ರ ಬರೆಯಲಿಕ್ಕೆ ಮತ್ತು ಹೊರಗಿನ ಪತ್ರಗಳನ್ನು ಸ್ವೀಕರಿಸಲಿಕ್ಕೆ ಯಾವುದೇ ಅಡ್ಡಿಯಿರಲಿಲ್ಲ. ಬಳಿಕವೂ ಬಂಡಾಯಗಾರರು ತಮ್ಮ ಬೇಡಿಕೆಗಳನ್ನು ಈಡೇರಿಸಲು ಸರಕಾರದ ಮೇಲೆ ಒತ್ತಡ ಹೇರುವುದನ್ನು ಮುಂದುವರೆಸಿದರು. ಅಲ್ಲದೆ ಅವರು ಶರಣಾಗುವ ಯಾವುದೇ ಇಂಗಿತವನ್ನು ತೋರಲಿಲ್ಲ. ಆದ್ದರಿಂದ ಸೈನಿಕ ಕಾರ್ಯಾಚರಣೆಯ ಮೂಲಕ ಆ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲು ಬ್ರಿಟಿಷ್ ಸರಕಾರ ನಿರ್ಧರಿಸಿತು. ಕಮಿಶನರ್ ಮಿ. ಚಾಪ್ಲಿನ್ ಜಿಲ್ಲಾ ಮುಖ್ಯಸ್ಥಳಕ್ಕೆ ಹೋಗಿ, "ಒಂದು ನಿರ್ದಿಷ್ಟ ಕಾಲಮಿತಿಯೊಳಗೆ ಈ ಬಂಡಾಯದ ಮುಖಂಡರನ್ನು ಹೊರತುಪಡಿಸಿ, ಶರಣಾಗತರಾಗುವ ಎಲ್ಲರನ್ನು ಕ್ಷಮಿಸುವು"ದಾಗಿ ಘೋಷಣಾ ಪತ್ರ ಹೊರಡಿಸಿದನು. "ಹೀಗೆ ಶರಣಾಗತರಾದವರೆಲ್ಲರಿಗೂ ಜೀವದಾನ ಮಾಡುವು"ದಾಗಿ ಕೂಡ ಭರವಸೆ ಕೊಟ್ಟನು.

* * *

ಬೇರೆ ಬೇರೆ ಸ್ಥಳಗಳಿಂದ ನಮ್ಮ ಸೈನಿಕ ತಂಡಗಳು ಬರಲಾರಂಭಿಸಿದವು. ಕರ್ನಲ್ ವಾಕರ್(Walker)ನ ನೇತೃತ್ವದಲ್ಲಿ ಕೋಟೆಗೆ ಮುತ್ತಿಗೆ ಹಾಕಲು ಸಾಕಷ್ಟು ಸಂಖ್ಯೆಯ ಸೈನಿಕರು ಒಟ್ಟುಗೂಡಿದರು. ಬಳಿಕ ಮಿ. ಚಾಪ್ಲಿನ್ (Chaplin)ಸೈನಿಕ ಕ್ಯಾಂಪನ್ನು ಸೇರಿದನು. ಮುಖಂಡರು ಮತ್ತು ಕಮಿಶನರ್ ಚಾಪ್ಲಿನ್ ನಡುವೆ ಸಂಕರ್ಷ ಪದೇ ಪದೇ ನಡೆಯುತ್ತಿದ್ದಿತು. ಕೈದಿಗಳಾಗಿದ್ದ ನಮ್ಮ ಸುರಕ್ಷೆಗೆ ಧಕ್ಕೆ ಬರುವಂತಿದ್ದ ವಿರೋಧಿಗಳ ಎಲ್ಲ ಕರಾರುಗಳನ್ನು ನಿಷ್ಠುರವಾಗಿ ತಿರಸ್ಕರಿಸಿ, ತಾನು ಹೊರಡಿಸಿದ ಘೋಷಣೆಯೇ ಅಂತಿಮನಿರ್ಧಾರವೆಂದು ಸಾರಿದನು. ಯಾವುದೇ ತಪ್ಪು ಆಗಬಾರದೆಂದು ಮಿ. ಚಾಪ್ಲಿನ್ ಹಿಂದುಸ್ತಾನಿಯಲ್ಲಿ ತನ್ನ ಕೈಯಿಂದಲೇ ಘೋಷಣೆಗಳನ್ನು ಬರೆದನು. ನಾವು ಅವುಗಳನ್ನು ಉಳಿದ ನಾಯಕರ ಸಮ್ಮುಖದಲ್ಲಿ ಜಾಗರೂಕತೆಯಿಂದ ಗುರುಸಿದ್ದಪ್ಪನಿಗೆ ಓದಿ ಹೇಳಿದೆವು. ಅವನ್ನು ಗುರುಸಿದ್ದಪ್ಪನು ತನ್ನವರಿಗೆ ಅನುವಾದ ಮಾಡಿದನು. ಆಗಾಗ ಕೋಟೆಗೋಡೆಗಳ ಮೇಲಿಂದ ಫಿರಂಗಿಯ ಗುಂಡುಗಳು ಹಾರುತ್ತಿದ್ದವು. ಆದರೆ ಅವುಗಳಿಂದ ಏನೂ ಹಾನಿ ಸಂಭವಿಸಲಿಲ್ಲ. ನಿಜಕ್ಕೂ "ನೀವು ಸಂಧಾನದ ಮಾತುಕತೆಗೆ ಮುಂದಾಗುವುದಾದರೆ, ಇದು ವರೆಗೆ ಮಾಡುತ್ತ ಬಂದ ನಿಮ್ಮ ತಪ್ಪನ್ನು ಇನ್ನು ಮೇಲೆ ತಿದ್ದಕೊಳ್ಳಿ"ರೆಂದು ಮೇಲಿಂದ ಮೇಲೆ ಅವರಿಗೆ ತಿಳಿಹೇಳಿದೆವು. ಒಂದು ತಂಡದಿಂದ ಸಂಧಾನಕ್ಕೆ ಒಪ್ಪುವಂತೆ ಆದೇಶ ಹೊರಟರೆ, ಇನ್ನೊಂದು ತಂಡದಿಂದ ಅದರ ವಿರುದ್ಧ ಆದೇಶ ಹೋರಬೀಳುತ್ತಿದ್ದುದರ ಪರಿಣಾಮವಾಗಿ, ಅವರ ಮೊದಲಿನ ರೀತಿಯೆ ಮುಂದುವರಿಯುತ್ತಿತ್ತು. ವಾಸ್ತವದಲ್ಲಿ ಕೋಟೆರಕ್ಷಣೆಯ ಅವರ ಸೈನ್ಯವು ಯಾರ ನಿಯಂತ್ರಣದಲ್ಲಿಯೂ ಇದ್ದಿರಲಿಲ್ಲ. ಕೊನೆಗೆ ಡಿಸೆಂಬರ್ ೨೮ ಮುಂಜಾವು ಅವರ ಒಬ್ಬ ಮುಂದಾಳು ಬಂದು (ಬಂದಿಯಾಗಿದ್ದ) ನಾವಿಬ್ಬರೂ ಮಧ್ಯಸ್ಥಿಕೆ ವಹಿಸುವುದಾದರೆ, ನಮ್ಮನ್ನು ಕೋಟೆಯ ಹೊರಗಿದ್ದ ನಮ್ಮ ಗುಡಾರಗಳಿಗೆ ಕರೆದುಕೊಂಡು ಹೋಗುವುದಾಗಿ ಹೇಳಿದನು. ಅದಕ್ಕೆ ನಾವು ಕೂಡಲೇ ಒಪ್ಪಿದೆವು. ಆದರೆ ಹಾಗೆ ಒಪ್ಪುವ ಮೊದಲು ನಮ್ಮ ಬಳಿ ಯಾವುದೇ ಅಧಿಕಾರವಿಲ್ಲವೆಂದು, ನಮ್ಮ ಮಧ್ಯಸ್ಥಿಕೆ ಬಹುಶಃ ಯಶಸ್ವಿಯಾವುದಿಲ್ಲವೆಂದು ಅವರಿಗೆ ಹೇಳಿದ್ದೆವು.

ಅವರು ನಮ್ಮ ವಿಚಾರವನ್ನು ಒಮ್ಮೆ ಒಪ್ಪಿಕೊಳ್ಳುವುದು, ಮತ್ತೊಮ್ಮೆ ತಿರಸ್ಕರಿಸುವುದು ಮಾಡುತ್ತಿದ್ದಾಗ ಸ್ವಲ್ಪ ಹೊತ್ತು ಅನಿಶ್ಚಿತತೆ ಮುಂದುವರೆಯಿತು. ಬಳಿಕ ಅಂತಿಮವಾಗಿ ನಮ್ಮಿಬ್ಬರನ್ನು ಬಂಧಮುಕ್ತ

ಮಾಡಲು ನಿರ್ಧರಿಸಿದರು. ನಾವು ಇಬ್ಬರು ವಕೀಲರೊಂದಿಗೆ ಯುದ್ಧವಿರಾಮದ ನಿಶಾನೆ ಹಿಡಿದು, ಕರ್ನಲ್ ಟ್ರುಮನ್ (Trewman)ನ ಆಧಿಪತ್ಯದಲ್ಲಿದ್ದ ಒಂದು ಹೊರಠಾಣೆ (ಔಟಪೋಸ್ಟ್)ಕಡೆಗೆ ಹೋದೆವು. ಅಲ್ಲಿಂದ ಕ. ಟ್ರ್ಯೂಮನ್‌ನು ಕಮಿಶನರ್‌ನ (ಚಾಪ್ಲಿನ್) ಗುಡಾರಕ್ಕೆ ನಮ್ಮನ್ನು ಕರೆದುಕೊಂಡು ಹೋದನು. ಅಲ್ಲಿ ನಾವು ವಕೀಲರನ್ನು ಮಿ. ಚಾಪ್ಲಿನ್‌ಗೆ ಪರಿಚಯಿಸಿದೆವು ಮತ್ತು ಮಾತುಕೊಟ್ಟುದನ್ನು ವಿವರಿಸಿದೆವು. ಅದು, ನಾವು ಈ ಮೊದಲು ಹೇಳಿದಂತೆ ಫಲಪ್ರದವಾಗಲಿಲ್ಲ. ಮಧ್ಯಸ್ಥಿಕೆ ವಹಿಸಲು ಬಂದವರು ಆ ಬಳಿಕ ಕೋಟೆಗೆ ತಿರುಗಿ ಹೋದರು. ಸೈನ್ಯವನ್ನು ಪೂರ್ಣಗೊಳಿಸಲು ಬೇಕಾಗಿದ್ದ ಅಂತಿಮ ತುಕಡಿ ಕರ್ನಲ್ ಡೀಕನ್ ಸಿ.ಬಿ. (Deacon. C.B) ಯ ಅಧಿಪತ್ಯದಲ್ಲಿ ಹೈದರಾಬಾದದಿಂದ ಅಂದೇ ಬಂದಿತು. ಕಿತ್ತೂರ ಸಂಸ್ಥಾನದ ವಿರುದ್ಧ ನಡೆಸಬೇಕಿದ್ದ ಸೈನಿಕ ಕಾರ್ಯಾಚರಣೆಯನ್ನು ನಿರ್ವಹಿಸಲು ಕರ್ನಲ್ ಡೀಕನ್‌ನನ್ನು ನೇಮಿಸಲಾಗಿತ್ತು. ೨೪ ಗಂಟೆಯೊಳಗೆ ಶರಣಾಗಬೇಕೆಂದು ಕೋಟೆಯ ಒಳಗಿನವರಿಗೆ ಸಮನ್ಸ್ ಕಳಿಸಲಾಯಿತು. ಮಧ್ಯಂತರ ಸಮಯವನ್ನು ಸ್ಥಳ ಪರಿಶೀಲಿಸಲು ಮತ್ತು ದಾಳಿಯ ಯೋಜನೆಯನ್ನು ರೂಪಿಸಲು ಕರ್ನಲ್ ಡೀಕನ್ ಬಳಸಿಕೊಂಡನು. ಕೊಟ್ಟ ಗಡುವು ಮುಗಿಯುತ್ತಲೇ (ಡಿಸೆಂಬರ್ ೩ನೆಯ ತಾರೀಖು ಸಾಯಂಕಾಲ) ಶರಣಾಗುವ ಯಾವುದೇ ಚಿಹ್ನ ಕಾಣದ್ದರಿಂದ, ಕೋಟೆಯನ್ನು ಅಧೀನದಲ್ಲಿರಿಸಿಕೊಂಡಿದ್ದ ಸಶಕ್ತ ಸೈನ್ಯದ–ಆ ಸೈನ್ಯದಲ್ಲಿ ಕೆಲವು ಜನ ಕೂಲಿಯ ಸೀಖ ಸಿಪಾಯಿಗಳಿದ್ದರು–ಕೆಂಪನ ಮರಡಿ ಇಲ್ಲವೆ ಕೆಮ್ಮನಮಟ್ಟಿ ಎಂದು ಕರೆಯಲಾಗುತ್ತಿದ್ದ ಕಾವಲು ದಿಬ್ಬವನ್ನು ವಶಪಡಿಸಿಕೊಳ್ಳಲಾಯಿತು. ಯಾವುದೇ ಸಾವು ಸಂಭವಿಸಲಿಲ್ಲ. ಆದರೂ ಒಬ್ಬ ಗಾಯಗೊಂಡನು. ಅವನು ಸಬ್‌ಕಲೆಕ್ಟರ್ ಮಿ. ಜಾನ್ ಮನ್ರೋ. ಅವನು ೨೩ನೇ ಲಘು ಆಯುಧದ ಪದಾತಿ ದಳದೊಂದಿಗೆ ಹೋಗಿದ್ದನು. ಅವನು ಉತ್ಸಾಹದಿಂದ ಮೈಮರೆತು ವೈರಿಯನ್ನು ಬೆನ್ನಟ್ಟಿಕೊಂಡು ಹೋಗಿ ಗಾಯಗೊಂಡಿದ್ದನು. ಕೆಲವು ದಿವಸಗಳ ಬಳಿಕ ಡಿಸೆಂಬರ ೧೩ರಂದು ಆ ಗಾಯದಿಂದ ಧಾರವಾಡದಲ್ಲಿ ಅಸುನೀಗಿದನು.[೫] ಆ ದಿನ ರಾತ್ರಿ ಕೋಟೆಯನ್ನು ಭೇದಿಸಲು ಈ ಸ್ಥಳದಲ್ಲಿ ಸಾಲು ಫಿರಂಗಿಗಳನ್ನಿಡಲಾಯಿತು. ಅವುಗಳನ್ನು ಮರುದಿನ ಮುಂಜಾನೆ (ಡಿಸೆಂಬರ ೪) ಹಾರಿಸಲಾಯಿತು. ಮಧ್ಯಾಹ್ನ ಒಬ್ಬ ವಕೀಲನನ್ನು ಕಳಿಸಿಕೊಡುವುದಾಗಿ ತಿಳಿಸಿದ ಕಿತ್ತೂರಿನವರ ಸಂದೇಶವನ್ನು ಸ್ವೀಕರಿಸಲಾಯಿತು. ಆ ವಕೀಲನನ್ನು ಕಮಿಶನ್‌ರ ಬದಲು ಆಫೀಸರ್ ಕಮಾಂಡಿಂಗ್ ಬಳಿಗೆ ಕಳಿಸಲಾಯಿತು. "ಕಿತ್ತೂರಿನವರು ಕೋಟೆಯನ್ನು ಒಪ್ಪಿಸಲು ತಯಾರಿದ್ದರೆ ತಮ್ಮ ಆಯುಧಗಳನ್ನು ಕೆಳಗಿರಿಸಬೇಕು. ಘೋಷಣಾಪತ್ರದಲ್ಲಿ ನಿರ್ದಿಷ್ಟಪಡಿಸಿದ ಸೈನಿಕರನ್ನು ತಮಗೆ ಒಪ್ಪಿಸಬೇಕು ಮತ್ತು ಯುದ್ಧವಿರಾಮದ ಆದೇಶ ಹೊರಡಿಸಿದಾಗ ಬಿಳಿಯ ನಿಶಾನೆ ಹಾರಿಸಬೇಕು" ಎಂದು ಆಫೀಸರ್ ಕಮಾಂಡಿಂಗ್ ವಕೀಲನಿಗೆ ಹೇಳಿದನು. ಸ್ವಲ್ಪ ಸಮಯದ ಬಳಿಕ ಕೋಟೆ ಗೋಡೆಗಳ ಮೇಲೆ ಬಿಳಿಯ ಧ್ವಜ ಕಾಣಿಸಿಕೊಂಡಿತು. ಆದರೆ ಅವರಲ್ಲಿ ಪರಸ್ಪರ ವಿರುದ್ಧ ಮಂತ್ರಾಲೋಚನೆ ನಡೆಯುತ್ತಿದ್ದ ಕಾರಣ ಮತ್ತು ಪ್ರಾರಂಭದಿಂದಲೂ ಅವರ ನಾಯಕರೊಳಗೆ ಒಮ್ಮತವಿಲ್ಲದ ಕಾರಣ ಕರಾರುಗಳನ್ನು ಈಡೇರಿಸುವಲ್ಲಿ ಸ್ವಲ್ಪ ಹಿಂಜರಿತ ಕಂಡುಬಂದಿತು. ಆದ್ದರಿಂದ ದಾಳಿಯನ್ನು ಪುನಃ ಪ್ರಾರಂಭಿಸಲು ಅವರಲ್ಲಿ ಸಿದ್ಧತೆಗಳು ನಡೆದಿದ್ದವು. ಮರುದಿನ (ಡಿ. ೫ನೇ ತಾರೀಖು) ಮುಂಜಾನೆ ೮ಗಂಟೆ ವರೆಗೂ ಹೆಬ್ಬಾಗಿಲುಗಳನ್ನು ತೆರೆದು ಸೆರೆಯಾಳುಗಳನ್ನು

೫. ಅವನು ಸರ್ ಥಾಮಸ್ ಮನ್ರೋನ ಅಣ್ಣನ ಮಗನು.

ಒಪ್ಪಿಸಲಿಲ್ಲವಾದರೂ ಹಿಂದಿನ ರಾತ್ರಿ ಗ್ರಾಮ ದಳಗಳು (ಸೇತಸನದಿಗಳು) ಯಾವುದೇ ಅಡೆತಡೆಯಿಲ್ಲದೆ ಗಡಿರಕ್ಷಕ ಸ್ಥಳಗಳ ಮೂಲಕ ಸಾಗಿ, ಸದ್ದಿಲ್ಲದೆ ಕೋಟೆಯನ್ನು ತೆರವು ಮಾಡಿದ್ದವು. ಯುದ್ಧ ವಿರಾಮದ ಆದೇಶವನ್ನು ಪುನಃ ಜಾರಿಗೆ ತರಲಾಯಿತು. ಅವರಾದಿ ವೀರಪ್ಪನನ್ನು ಬಿಟ್ಟು ಉಳಿದವರೆಲ್ಲರ ಜೊತೆಗೆ ಉದಾರ ನೀತಿಯನ್ನು ಅನುಸರಿಸಲಾಯಿತು. ಅವರಾದಿ ವೀರಪ್ಪನನ್ನು ಆಜೀವ ಗಡಿಪಾರು ಮಾಡಲಾಯಿತು.[೬] ಡಿಸೆಂಬರ ೧೩ರಂದು ಗುರುಸಿದ್ದಪ್ಪ ತನ್ನ ಆಸ್ತಿಯನ್ನೆಲ್ಲ ಮರಳಿಪಡೆದನು. ನಂತರದ ವರುಷಗಳಲ್ಲಿ ನಾನು ಅವನು ಮೇಲಿಂದ ಮೇಲೆ ಭೆಟ್ಟಿಯಾಗುತ್ತಿದ್ದೆವು. ಅವನು ತೃಪ್ತಿಯಿಂದ ಸುಖವಾಗಿದ್ದುದನ್ನು ಕಂಡೆನು. ಅವನು ಸುಸ್ವಭಾವದವನೂ ಹೆಚ್ಚು ಗೌರವಾನ್ವಿತನೂ ಆಗಿದ್ದನು. ನಮಗೆ ರಕ್ಷಣೆ ಕೊಟ್ಟಿದ್ದಕ್ಕಾಗಿ ಬಸಲಿಂಗಪ್ಪ ತೇಲಿ ವಿಶೇಷ ಕೊಡುಗೆ ಸ್ವೀಕರಿಸಿದನು.

ಸೈನ್ಯವನ್ನು ವಿಸರ್ಜಿಸಿದ ಬಳಿಕ, ಸೋಲಾಪುರದಿಂದ ಬಂದ ೭ನೇ ಅಶ್ವದಳವನ್ನು ಹುನಗುಂದ ತಾಲೂಕಿನ ಸಿಂದಗೋ (Scindago) ಎಂಬ ಹಳ್ಳಿಯ ಮೂಲಕ ಮರಳಿ ಸೋಲಾಪುರಕ್ಕೆ ಹೋಗಲು ಆದೇಶಿಸಲಾಯಿತು. ಆ ಹಳ್ಳಿಯನ್ನು ಅಲ್ಲಿಯ ಪಟೇಲನ ಆಮಂತ್ರಣದ ಮೇರೆಗೆ ನಿಜಾಮನ ದೇಶದಿಂದ ಬಂದ ಅರಬ ಸೈನಿಕರ ಪಡೆಯೊಂದು ಆಕ್ರಮಿಸಿತ್ತು. ಅದನ್ನು ಸುಲಭವಾಗಿ ಹೊರಹಾಕಲಾಯಿತು ಮತ್ತು ರಾಜದ್ರೋಹ ಎಸಗಿದ್ದಕ್ಕಾಗಿ ಪಟೇಲನನ್ನು ಹಿಡಿದು ವಿಚಾರಣೆಗೊಳಪಡಿಸಲಾಯಿತು. ಆ ಪ್ರದೇಶವು ಮಿ. ಮನ್ರೋನ ಉಪಜಿಲ್ಲೆ (ಸಬ್ ಕಲೆಕ್ಟರೇಟ್)ಆಗಿದ್ದಿತು.

ಅದೇ ಸಮಯಕ್ಕೆ ನನ್ನನ್ನು ಅದೇ ಸ್ಥಳದಲ್ಲಿ ತಾತ್ಪೂರ್ತಿಕ ಕಾರ್ಯ ನಿರ್ವಹಿಸಲು ಕಳಿಸಲಾಯಿತು. ಮಿ. ಸ್ಟಿವನ್ಸನ್‌ಸು ರಾಣೆಬೆನ್ನೂರಿನಲ್ಲಿರುವ ಅವನ ಉಪವಿಭಾಗಕ್ಕೆ ಮರಳಿ ಹೋದನು. ಬಳಿಕ ಸ್ವಲ್ಪೇ ಸಮಯದಲ್ಲಿ ಮಿ. ಟಿ.ಎಚ್.ಬೇಬರ್(Baber)ನನ್ನು ಪ್ರಧಾನ ಕಲೆಕ್ಟರನೆಂದು ನೇಮಿಸಲಾಯಿತು. ಹೀಗೆ ಮುಗಿಯಿತು ಕಿತ್ತೂರಿನ ದುರಂತ.

❖❖

---

೬. ಮತ್ತೆ ಯಾರನ್ನಾದರೂ ವಿಚಾರಣೆಗೊಳಪಡಿಸಿದರೋ ಇಲ್ಲವೋ ನನಗೆ ನೆನಪಿಲ್ಲ.

ನಿರ್ಣಯ ಪುರಾಣ

ಸಂಪಾದಕರು
ಡಾ. ಎಂ. ಎಂ. ಕಲಬುರ್ಗಿ
ಡಾ. ಎ. ಬಿ. ವಗ್ಗರ

ಅಪ್ರಕಟಿತ

ನಿರ್ಣಯ ಪುರಾಣ

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಭಾಂಡಾರದಲ್ಲಿ "ನಿರ್ಣಯ ಪುರಾಣ" ಹೆಸರಿನ ಕೈಬರಹದ ಕಾಗದ ಪ್ರತಿಯಿದೆ. ಪುಣೆಯ ಪತ್ರಾಗಾರ ಇಲಾಖೆಯಲ್ಲಿ ಕಿತ್ತೂರಿನ ಕಾಗದ ಪತ್ರಗಳ ಜೊತೆ "ನಿರ್ಣಯ ಪುರಾಣ"ದ ಇನ್ನೊಂದು ಪ್ರತಿ ಇರುವುದಾಗಿಯೂ ತಿಳಿದು ಬರುತ್ತದೆ. "ವಚನ ಸಾಹಿತ್ಯ ಪ್ರಕಟನ ಯೋಜನೆ" ಅಸ್ತಿತ್ವಕ್ಕೆ ಬಂದ ಆರಂಭದಲ್ಲಿ (೧೯೬೨) ಮೇಲೆ ಹೇಳಿದ ಹಸ್ತಪ್ರತಿಯು ಕನ್ನಡ ಅಧ್ಯಯನ ಪೀಠದ ಈ ಭಂಡಾರಕ್ಕೆ ಬಂದಿದೆ. ಇದನ್ನು ಯಾರು? ಎಲ್ಲಿಂದ ತಂದರು? ಇತ್ಯಾದಿ ವಿವರಗಳು ಲಭ್ಯವಿಲ್ಲ.

ಅಲ್ಲಲ್ಲಿ ತ್ರುಟಿತ, ಅಸ್ತವ್ಯಸ್ತ, ಲುಪ್ತ ಪುಟಗಳಿಂದ ಕೂಡಿದ ಈ ಪ್ರತಿ ತುಂಬ ದುಸ್ಥಿತಿಯಲ್ಲಿದೆ. ಮುಟ್ಟಿದರೆ ಪುಟಗಳು ಮುರಿಯುವ ಕಾರಣ, ಇದರ ರಕ್ಷಣೆಯ ಉದ್ದೇಶದಿಂದ ಮುರಿದ ಪುಟಗಳ ನಕಲು ಕಾರ್ಯ ಪೂರೈಸಿ, ಆ ಹಾಳೆಗಳನ್ನು ಅಲ್ಲಲ್ಲಿ ಅವುಗಳ ಮಗ್ಗುಲಲ್ಲಿಯೇ ಇಡಲಾಗಿದೆ. ಆಶ್ಚರ್ಯದ ಸಂಗತಿಯೆಂದರೆ, ಇಂಥ ಕೆಲವು ನಕಲು ಪುಟಗಳು ನನ್ನ ಹಸ್ತಾಕ್ಷರದಲ್ಲಿವೆ. ಬಹುಶಃ ೧೯೬೨ರಲ್ಲಿ ಸಹಾಯಕ ಸಂಶೋಧಕನಾಗಿದ್ದ ಕಾಲದಲ್ಲಿ ನಾನು ಈ ನಕಲುಕಾರ್ಯ ಮಾಡಿರಬಹುದು. ಗಮನಿಸಬೇಕಾದ ಅಂಶವೆಂದರೆ, ಈ ಕಾಗದ ಪ್ರತಿಯ ಮುಖಪುಟದ ಮೇಲೆ 'ಕಿತ್ತೂರು ಪುರಾಣ' ವೆಂದೂ ಬರೆಯಲಾಗಿದೆ.

ಕೆಲವು ಕುಸುಮ, ಪರಿವರ್ಧಿನಿ ಷಟ್ಪದಿ, ಡಂಗುರ ಪದದ ದ್ವಿಪದಿಗಳನ್ನು ಬಿಟ್ಟರೆ, ಇಡೀ ಕಾವ್ಯ ವಾರ್ಧಕ ಷಟ್ಪದಿಯಲ್ಲಿದೆ. ಸುಮಾರು ಐದು ಸಾವಿರ ಪದ್ಯಗಳನ್ನೊಳಗೊಂಡ ಈ ಪ್ರತಿಯ ಆದಿ-ಅಂತ್ಯ ಪುಟಗಳು ಕಳೆದಿರುವ ಕಾರಣ ಕರ್ತೃ ಇತ್ಯಾದಿ ವಿವರಗಳು ಕಾಣೆಯಾಗಿವೆ. ಅಲ್ಲಲ್ಲಿ ಕಿತ್ತೂರು ದೊರೆ ಶಿವಲಿಂಗರುದ್ರಸರ್ಜ, ಚೆನ್ನಮ್ಮ, ಕಂಪನಿ ಸರಕಾರದ ವಿವರಗಳನ್ನು ಉಲ್ಲೇಖಿಸುವುದರಿಂದ ಇದು ೧೯ನೆಯ ಶತಮಾನದ ಮೊದಲ ಪಾದದಲ್ಲಿ ಹುಟ್ಟಿದೆಯೆಂದು ಖಚಿತವಾಗಿ ಹೇಳಬಹುದು.

ಗುರು-ಶಿಷ್ಯರ ಸಂವಾದರೂಪದಲ್ಲಿರುವ ಇದರ ಪ್ರತಿಯೊಂದು ಪದ್ಯ "ಗುರುವೆ ಶರಣು" ಎಂದು ಮುಗಿಯುತ್ತದೆ. ಈ ಕೃತಿ ಕಿತ್ತೂರು ನಾಡಿನಲ್ಲಿ ಹುಟ್ಟಿದ್ದು, ಇದರ ಕರ್ತೃ ಕಿತ್ತೂರು, ಬೈಲಹೊಂಗಲ, ಮುನವಳ್ಳಿ, ಬೈಲವಾಡ, ಸವದತ್ತಿ- ಈ ಪ್ರದೇಶಕ್ಕೆ ಸಂಬಂಧಪಟ್ಟವನಾಗಿದ್ದಾನೆ. ಹುಡುಕಿದರೆ ಈ ಪ್ರದೇಶದಲ್ಲಿ ಕರ್ತೃವಿನ ವಿವರ, ಈ ಕೃತಿಯ ಬೇರೆ ಪ್ರತಿಗಳು ಸಿಗಬಹುದು. ಸಿಂಧೆ ಮುನವಳ್ಳಿಯ ಸಾಲೊಟಗಿ ಮಠದ ಶ್ರೀ ಶಿವಲಿಂಗಸ್ವಾಮಿಗಳು ಇದರ ಕರ್ತೃವೆಂದೂ, ಇದರ ಒಂದು ಪ್ರತಿ ತಮ್ಮಲ್ಲಿ ಇದೆಯೆಂದೂ ದೊಡ್ಡಭಾವೆಪ್ಪ ಮೂಗಿ ಅವರು ತಮ್ಮ 'ಕಿತ್ತೂರು ಕಾಳಗ' ಕೃತಿಯಲ್ಲಿಯ

'ಶಿವಲಿಂಗರುದ್ರಸರ್ಜ' ಹಾಡಿಗೆ ಬರೆದ ಟಿಪ್ಪಣಿಯಲ್ಲಿ ತಿಳಿಸಿದ್ದಾರೆ. ನಾನು ಬಳಸಿದ ಕನ್ನಡ ಅಧ್ಯಯನ ಪೀಠದ ಈ ಪ್ರತಿ ಶ್ರೀ ದೊಡ್ಡ ಭಾವೆಪ್ಪ ಮೂಗಿ ಅವರದಾಗಿರುವ ಸಂಭವವಿದೆ.

ಪ್ರಧಾನವಾಗಿ ಧಾರ್ಮಿಕ ತತ್ತ್ವ-ಆಚರಣೆಗಳ ವಿಷಯವನ್ನೊಳಗೊಂಡಿರುವ ಇದರಲ್ಲಿ ಗುರು-ಶಿಷ್ಯರ ಸಂವಾದ ಕಥನ ಮಡುಗಟ್ಟಿದೆ. ಊರೂರಿನ ಸಂಚಾರ ಸಂದರ್ಭದಲ್ಲಿ ಜರುಗಿದ ಘಟನೆ, ಕಂಡ-ಕೇಳಿದ ವ್ಯಕ್ತಿ ಕುಟುಂಬಗಳ ವಿವರಗಳು ಇಲ್ಲಿ ವಿಶೇಷವಾಗಿ ದಾಖಲಾಗಿವೆ. ಸಮಕಾಲೀನ ಕಿತ್ತೂರಿನ ವಳಸಂಗ, ಬೆಂಬಳಗಿ, ಜಿಗಜಿನ್ನಿ ಮೊದಲಾದ ಹತ್ತಾರು ಕುಟುಂಬಗಳ ಚರಿತ್ರೆ ಇಲ್ಲಿ ಮೂಡಿನಿಂತಿದ್ದು, ಕಂಪನಿ ಸರಕಾರ ಮತ್ತು ಕಿತ್ತೂರು ಸಂಸ್ಥಾನದ ವಿಷಯಗಳೂ ಅಲ್ಲಲ್ಲಿ ಎಡೆ ಪಡೆದಿವೆ.

ಶಿವಲಿಂಗರುದ್ರಸರ್ಜ, ಹೆಂಡತಿ ವೀರಮ್ಮ, ರಾಣಿ ಚೆನ್ನಮ್ಮನ ವಿವರಗಳೂ ಕಲ್ಲುಮಠ ಮೊದಲಾದ ಮಠಗಳ ಉಲ್ಲೇಖಗಳೂ ಇಲ್ಲಿವೆ. ಅರಮನೆ-ಗುರುಮನೆಗಳಲ್ಲಿ ದುಷ್ಟಪಾತ್ರವಹಿಸಿದ ಗೆಜ್ಜಿ ಮಹಾಂತಮ್ಮ ಮೊದಲಾದವರ ವಿಷಯಗಳೂ ಅಲ್ಲಿಲ್ಲಿ ಕಂಡುಬರುತ್ತವೆ. ಕೆಲವು ಘಟನೆಗಳು ಗಾಬರಿ ಹುಟ್ಟಿಸುತ್ತವೆ. ಅದೇನೆ ಇರಲಿ, ಕಿತ್ತೂರ ಸಂಸ್ಥಾನಕ್ಕೆ ಸಂಬಂಧಿಸಿದ ಕೆಲವು ಘಟನೆಗಳು ಇಲ್ಲಿ ಹೀಗೆ ಚಿತ್ರಿತವಾಗಿವೆ.*

ಕಿತ್ತೂರು ದೊರೆ ಮಲ್ಲಸರ್ಜ

"ನಿರ್ಣಯ ಪುರಾಣ"ವು ಕಿತ್ತೂರು ದೊರೆ ಶಿವಲಿಂಗರುದ್ರಸರ್ಜ ಮತ್ತು ಕಂಪನಿ ಸರಕಾರಗಳ ಆಡಳಿತಾವಧಿಯಲ್ಲಿ ಹುಟ್ಟಿರುವ ಕಾರಣ ಇದರಲ್ಲಿ ಶಿವಲಿಂಗರುದ್ರಸರ್ಜ ಮತ್ತು ರಾಣಿ ಚೆನ್ನಮ್ಮ-ವೀರಮ್ಮ ಇವರ ಚರಿತ್ರೆ ಮುಖ್ಯವಾಗಿ, ಮಲ್ಲಸರ್ಜನ ಚರಿತ್ರೆ ಪ್ರಾಸಂಗಿಕವಾಗಿ ಹೀಗೆ ತೋರಿಬರುತ್ತದೆ.

ಪದ್ಯ ೪೧೭೭ರಿಂದ ಮೊದಲು ಮಾಡಿ ವೃತ್ತಿಪಂಚಾಚಾರ್ಯರನ್ನು ೧. ಮಠದಯ್ಯ, ೨. ಮಠಪತಿ, ೩.ಗಣಾಚಾರಿ, ೪. ಶೆಟ್ಟಿ, ೫. ಗೌಡ - ಎಂದು ಬಿಡಿಸಿ ಹೇಳುತ್ತ, ಇವರಲ್ಲಿ ಗೌಡನದು ಮಧ್ಯಮವೃತ್ತಿ, ದೇಸಾಯಿ-ದೇಶಪಾಂಡೆಯವರದು ಉತ್ತಮವೃತ್ತಿಯೆಂದು ವಿವರಿಸಿದ ಬಳಿಕ, "ವೃತ್ತಿಯೊಳತ್ಯುತ್ತಮವೆನಿಸಿ ಸಲೆ ರಾಜಿಸುತ್ತಿರುವ ಸರದೇಸಾಯಿತನಮಂ ಪಡೆದ ಕಿತ್ತೂರ ನಾಡೆರೆಯ" ಎಂದು ಹೇಳುವ ಮೂಲಕ, ಕಿತ್ತೂರು ಅರಸು ಮನೆತನವು ಸರದೇಸಾಯಿ ಹಂತದ್ದು - ಎಂದು ಸೂಚಿಸಲಾಗಿದೆ. ಈ ಸರದೇಸಾಯಿ ಸಂಸ್ಥಾನದಲ್ಲಿ ಪ್ರಸಿದ್ಧನಾದವ ಮಲ್ಲಸರ್ಜ.

ಈ ಮೊದಲು ನಾನು ಸಂಪಾದಿಸಿ ಪ್ರಕಟಿಸಿದ 'ಕಿತ್ತೂರು ಸಂಸ್ಥಾನ ಸಾಹಿತ್ಯ' ಭಾಗ-೧, ಭಾಗ-೨ ರಲ್ಲಿ ಈ ಮಲ್ಲಸರ್ಜನ ವಿಷಯ ಪ್ರಧಾನವಾಗಿ ಬಂದಿದೆ. ಅಲ್ಲಿ ಈತನು ಲಿಂಗಪೂಜೆ-ಜಂಗಮದಾಸೋಹಗಳಲ್ಲಿ ಆಸಕ್ತನೆಂದು ವಿವರವಾಗಿ ತಿಳಿಸಲಾಗಿದೆ. ಈ ನಿರ್ಣಯ ಪುರಾಣದಲ್ಲಿ ಈತನ ಜಂಗಮದಾಸೋಹವನ್ನು ಸೂಚಿಸುವ ಎರಡು ಉಲ್ಲೇಖಗಳು ಹೀಗೆ ಬಂದಿವೆ:

ಶಿವಲಿಂಗರುದ್ರಸರ್ಜನ ಜಂಗಮದಾಸೋಹದ ರೀತಿಯನ್ನು ವಿವರಿಸುವ ಸಂದರ್ಭದಲ್ಲಿ "ಮಲ್ಲಸರ್ಜ ಮಹೀಪಾಲನಾತ್ಮಜನೆನಿಸಿ । ಮಲ್ಲಸರ್ಜನ ಹಾಂಗೆ ಜಂಗಮರಿಗುಣಿಸದೆ" (೩೩೪೧) ಇರುವನೆಂದು ಹೇಳಲಾಗಿದೆ. ಇದರಿಂದ ಜಂಗಮಾರೋಗಣೆ ವಿಷಯವಾಗಿ ಶಿವಲಿಂಗರುದ್ರಸರ್ಜನಿಗಿಂತ ಮಲ್ಲಸರ್ಜನ ಮನೋಧರ್ಮ ಭಿನ್ನವೂ, ಉದಾತ್ತವೂ ಆಗಿದ್ದಿತೆಂದು ವ್ಯಕ್ತವಾಗುತ್ತದೆ.

* ನನ್ನ ಮೂಲ ಲೇಖನದಲ್ಲಿದ್ದ 'ಬಸವಣ್ಣನವರ ಷಟ್ಸ್ಥಲ ವಚನ ಕಟ್ಟು : ಯಾರ ರಚನೆ?', "ಬಾಗಿಲಕೋಟೆಯ ದೈವದವರು', 'ತುಕಾರಾಮನು ಜಾತಿಯಿಂದ ಲಿಂಗಾಯತ'–ಈ ಮೂರು ಟಿಪ್ಪಣಿಗಳು ಕಿತ್ತೂರಿಗೆ ಸಂಬಂಧಪಟ್ಟಿಲ್ಲವಾಗಿ, ಅವುಗಳನ್ನು ಇಲ್ಲಿ ಕೈಬಿಡಲಾಗಿದೆ.

ಇನ್ನೊಂದೆಡೆ, ಜಂಗಮಾರೋಗಣೆಯ ಸ್ವರೂಪ ಹೇಗಿರಬೇಕೆಂಬುವನ್ನು ಶಿಷ್ಯನಿಗೆ ವಿವರಿಸುತ್ತ "ಈ ನಾಡ ದೊರೆಯ ಅನ್ನವನುಣಿಸುತಿರ್ಪುದಂ । ನಾನಂದು ನೋಡಿರ್ದೆನಿವನ ಪಿತನಿದ್ದಾಗ । ಮೌನದಿಂದುಣಿಸುತಿರ್ದಂ" (೩೧೩೦) ಎಂದು ಹೇಳಲಾಗಿದೆ. ಇದರಿಂದ ಮಲ್ಲಸರ್ಜನು ಏರ್ಪಡಿಸುತ್ತಿದ್ದ ಜಂಗಮದಾಸೋಹ-ಪ್ರಸಂಗದಲ್ಲಿ ಮೌನದಿಂದ ಊಟಮಾಡುವುದು (?) ರೂಢಿಯಲ್ಲಿದ್ದಿತೆಂದು ತಿಳಿದು ಬರುತ್ತದೆ.

* * *

ಪುಣೆಯ ಬಂಧನದಿಂದ ಬಿಡುಗಡೆ ಹೊಂದಿದ ಮಲ್ಲಸರ್ಜ ಅರಭಾವಿಯ ದುರುದುಂಡೇಶ್ವರ ಮಠಕ್ಕೆ ಬಂದು, ಅಲ್ಲಿಂದ ಕಿತ್ತೂರಿಗೆ ಆಗಮಿಸಿ ತೀರಿಕೊಂಡುದು ಈಗಾಗಲೇ ಗೊತ್ತಿರುವ ಸಂಗತಿ. ಇದನ್ನು ಇನ್ನಷ್ಟು ವಿವರವಾಗಿ ಈ ಕೃತಿ ಹೀಗೆ ತಿಳಿಸುತ್ತದೆ (೧೨೦೯) :

ಪರಸ್ಥಳದಲ್ಲಿ ಪ್ರಾಣ ಬಿಡಬಾರದೆಂದು ಬಗೆದು ಮಲ್ಲಸರ್ಜನು "ಘಣೆಯಿಂ ಬೀಳ್ಕೊಂಡು ತಾನು ಪುಣೆಯಿಂದ ತನ್ನ ಪುರಕೆ" ಬರುವಾಗ ಮಾರ್ಗಮಧ್ಯದಲ್ಲಿ "ದುರದುಂಡಿಯೊಡೆಯನಹ ಶಿವಲಿಂಗದೇವನುರುತರ ಗರ್ದುಗೆಯೊಳುರೆ ಗಣಾರಾಧನೆಯ ಮಾಡಿಸಿ"ದನು. ಹೀಗೆ ಗಣಾರಾಧನೆ ಮಾಡಿಸಿ, ಅಲ್ಲಿ ರಾತ್ರಿ ಮಲಗಿರಲು "ನೀನಿಲ್ಲಿಂದಲೇ (ಕೈಲಾಸಕ್ಕೆ) ಬರುವುದು" ಎಂದು ಶಿವಗಣಂಗಳು ಕನಸಿನಲ್ಲಿ ಸೂಚಿಸಿದರು. ಆಗ ಮಲ್ಲಸರ್ಜನು "ನಾನಿಲ್ಲಿಂದ ಬಾರೆನೆನ್ನಯ ಮನೆಗೆ ಪೋಗಿ ನಾನಲ್ಲಿಂದ ಬಹೆನು" ಎಂದು ನುಡಿದು, ಕಿತ್ತೂರಿಗೆ ಬಂದನು. "ಇಲ್ಲಿ ಎಸಗಿರ್ದ ದೋಷವನುರದೆ ಕಳೆಯಬೇಕಿಲ್ಲಿಯೇ" ಎಂದು "ತನ್ನೊಳಗೆ ತಾನೆ ತಿಳಿದು" ತನ್ನವರಾದ ಮಾಹೇಶ್ವರರನ್ನು (ಜಂಗಮರನ್ನು) ಅರಮನೆಗೆ ಆಮಂತ್ರಿಸಿದನು. ಎಲ್ಲರ ಪಾಪವನ್ನು ಕಳೆಯುವ "ಅಲ್ಲಮಪ್ರಭು ಸಂಪ್ರದಾಯಕರೆನಿಸುತಿಪ್ಪ ಬಲ್ಲಿದರು ನೀವು" ಎಂದು "ವಿರತರೆನಿಪರ ನುತಿಸಿದನು." ನನ್ನ ದೋಷಗಳನ್ನು ನಿಮ್ಮ ಪಾದಕ್ಕೆ ಅರ್ಪಿಸುವ ಸಲುವಾಗಿ ನಿಮ್ಮನ್ನೆಲ್ಲ ಬರಮಾಡಿಕೊಂಡಿದ್ದೇನೆ- ಎಂದು ನುಡಿದು, ತಾನು ಈ ವರೆಗೆ ಮಾಡಿರುವ ದೋಷಗಳನ್ನು ಪ್ರಕಟವಾಗಿ ಸಾರಿ, ಈ ದೋಷಗಳಿಗೆ ತಕ್ಕ ಪ್ರಾಯಶ್ಚಿತ್ತಗಳೇನು? ಎಂದು ಕೇಳಿ, ಅವುಗಳನ್ನು ಪೂರೈಸಿದನು. "ಅಪ್ಪನವರೆಸಗಿದ ದೋಷವೆಮಗುರೆ ಬರಲಿ, ಅಪ್ಪನವರಿಗೆ ನಾವು ಲಿಂಗಮಂ ಬಿಡದೆ ಭಜಿಸಿಪ್ಪ ಪುಣ್ಯವದುರದೆ ತಾಗಿ ಅಪ್ಪನವರಿಗೆ ಕಲ್ಯಾಣವಾಗಲಿ" ಎಂದು ಮೂರು ಸಲ ನುಡಿದು, ಮರಣಹೊಂದಿದನು. ಇದನ್ನು ಗಮನಿಸಿ "ಇಂತಪ್ಪ ಜಾಣರ ಕಾಣೆನೀ ಕ್ಷೋಣಿಯೊಳು" ಎಂದು ಕವಿಯು ಮಲ್ಲಸರ್ಜನನ್ನು ಹೊಗಳಿದ್ದಾನೆ.

(ಇಂಥ ನಡತೆ, ಇಂಥ ಮರಣ ಮಹಾನುಭಾವರಿಗೆ ಮಾತ್ರ ಸಾಧ್ಯ), ಕೇವಲ ಶಾಸ್ತ್ರಜ್ಞರಿಗೆ ಸಾಧ್ಯವಿಲ್ಲ. ಶಾಸ್ತ್ರಜ್ಞನಾದ ನರಗುಂದದ ಸಿದ್ಧರಾಮಶೆಟ್ಟಿ ಮನೆತನದ ಬಸವನೆಂಬವನು ಛಡಿ ಏಟಿನಿಂದ ಮಡಿದ (ಈತನಿಗೆ ಬೇಡಿ ಹಾಕಿದ ವಿಷಯವೂ ಇಲ್ಲಿದೆ ೧೯೯೯-೨೦೦೦), ಶಾಸ್ತ್ರಜ್ಞನಾದ ತಮ್ಮಯ್ಯನೆಂಬ ಬ್ರಾಹ್ಮಣನು ಶಸ್ತ್ರಘಾತದಿಂದ ಮಡಿದ. "ಶಾಸ್ತ್ರಜ್ಞರಿಗೆ ಈ ಜಾಣತನ ಬರಲಾರದು." ಉಳ್ಳಿಗಡ್ಡೆಗೆ ಉದ್ದಿನ ಸಂಡಿಗೆಯ ಗಳಿಸುವ" "ಮಲ್ಲಸರ್ಜನ ಮಹಾಜಾಣತನ" ಶ್ಲಾಘನೀಯವೆಂದು ಇಲ್ಲಿ ಹೇಳಲಾಗಿದೆ. ಇನ್ನೊಂದೆಡೆಯಲ್ಲಿ "ಕಾಲಮೃತ್ಯುವಿಗೆ ಮಲ್ಲಸರ್ಜ, ಅಕಾಲಮೃತ್ಯುವಿಗೆ ಶಿವಲಿಂಗರುದ್ರಸರ್ಜ" ತುತ್ತಾದರೆಂದು ತಿಳಿಸಲಾಗಿದೆ. (೪೨೩೩).

ಹೀಗೆ, ಈ ಕೃತಿಯಲ್ಲಿ ಮಲ್ಲಸರ್ಜನಿಗೆ ಸಂಬಂಧಿಸಿದಂತೆ ಇಷ್ಟು ವಿಷಯಗಳು ಮಾತ್ರ ಕಾಣಿಸಿಕೊಂಡಿವೆ. ಇದು ಶಿವಲಿಂಗರುದ್ರಸರ್ಜನ ಕಾಲಾವಧಿಯಲ್ಲಿ ಹುಟ್ಟಿದ ಕೃತಿಯಾಗಿರುವ ಕಾರಣ, ತಂದೆ ಮಲ್ಲಸರ್ಜನ ವಿಷಯ ಇಲ್ಲಿ ಅಲ್ಪ ಪ್ರಮಾಣದಲ್ಲಿ ಸಿಗುವುದೆಂದೇ ಹೇಳಬೇಕು.

* * *

ಕಿತ್ತೂರು ದೊರೆ ಶಿವಲಿಂಗರುದ್ರ ಸರ್ಜ

ಶಿವಲಿಂಗರುದ್ರಸರ್ಜನ ಆಳಿಕೆಯ ಅವಧಿಯಲ್ಲಿ ಹುಟ್ಟಿರುವ 'ನಿರ್ಣಯ ಪುರಾಣ' ಈ ದೊರೆಯನ್ನು ಮತ್ತು ಇವನ ಘಟನೆಗಳನ್ನು ಬಹಳಷ್ಟು ಸಲ ಪ್ರಸ್ತಾಪಿಸುತ್ತದೆ.

ಮಲ್ಲಸರ್ಜನ ಮಗ ಶಿವಲಿಂಗರುದ್ರಸರ್ಜ. ಈ ವಿಷಯವನ್ನು "ಮಲ್ಲಸರ್ಜ ಮಹೀಪಾಲಾತ್ಮಜಾತಂ ಭೂವಲ್ಲಭಂ ಶಿವಲಿಂಗರುದ್ರಸರ್ಜಂ" (೨೯೨೭) ಎಂದು ಮುಂತಾಗಿ ಅನೇಕ ಸಲ ಹೇಳಲಾಗಿದೆ. ಮಲ್ಲಸರ್ಜನು ತನ್ನ ಮಗನಿಗೆ ಶಿವಲಿಂಗರುದ್ರಸರ್ಜನೆಂದು ಹೆಸರಿಡಲು ಅರಭಾವಿಯ ದುರದುಂಡೀಶ್ವರ ಮಠದ ಶಿವಲಿಂಗಸ್ವಾಮಿಗಳ ಬಗೆಗಿನ ಭಕ್ತಿಯೇ ಕಾರಣವಾಗಿದೆ. ಇದಕ್ಕೆ, ಶಿವಲಿಂಗಸ್ವಾಮಿಯು "ಲಿಂಗೈಕ್ಯನಾಗಿ ಬಯಲಾಗಿಹ ಮಹಾತಳದಿ ಗರ್ದುಗೆಯ ರಚಿಸಿ ಈಗೆರಡು ಪಟ್ಟವೆನಿಸಿತು. ನಿಟ್ಟಿಸೈ ನೀಂ ಆತನಭಿಧಾನವೀ ನಾಡ ದೊರೆಗಿಟ್ಟಿರುವರು" (೯೧೩) ಎಂಬ ಗುರುವಿನ ಹೇಳಿಕೆ ಆಧಾರವಾಗಿದೆ. (ಈ ಹೆಸರಿನಲ್ಲಿ, ರುದ್ರ ಶಬ್ದ ಸೇರಿಕೊಳ್ಳಲು ಇವನು ರುದ್ರಮ್ಮನ ಮಗನಾಗಿರುವುದೇ ಕಾರಣವಾಗಿರಬಹುದು).

ಶಿಷ್ಯನಿಗೆ ಗುರುವು ಘಟನೆಗಳನ್ನು ಹೇಳುತ್ತ ಹೋಗುವ ಈ ಕೃತಿಯಲ್ಲಿ "ತಮ್ಮ ತಮ್ಮನಂ ಈ ನಾಡ ದೊರೆಯೆಂಬ ಗುರುವೆ" (೨೯೪೧) ಎಂದು ಶಿಷ್ಯನು ಗುರುವಿಗೆ ಹೇಳುವ, "ನೀನೆನಗೆ ತಮ್ಮನೆನಿಸಿರುವ ಕಾರಣದಿಂದ I ಸಾನುರಾಗದಿ ಬರೆದು ಕಳಿಸಿ ತಿಳಿಸುವೆನೀಗಳೀ ನಾಡ ದೊರೆಯೆನಿಪ ಶಿವಲಿಂಗರುದ್ರಸರ್ಜಾಹ್ವಯ ಮಹೀನಾಥ" (೩೪೯೯ ರ ಮುಂದಿನ ಪತ್ರ) ಎಂದು ಗುರುವು ಶಿವಲಿಂಗರುದ್ರಸರ್ಜನಿಗೆ ತಿಳಿಸುವ ಸೂಚನೆಗಳು, ಈ ಗುರು ಮತ್ತು ಶಿವಲಿಂಗರುದ್ರಸರ್ಜರು ಸೋದರ ಸಂಬಂಧಿಗಳೋ, ಸೋದರಭಾವದ ಆತ್ಮೀಯರೋ ಆಗಿರಬಹುದೆಂಬ ಭಾವನೆ ಮೂಡಿಸುತ್ತವೆ. ಇಲ್ಲಿ ಬಹುಶಃ ಎರಡನೆಯ ಅನಿಸಿಕೆಯೇ ಸರಿಯಾಗಿರಬಹುದು.

ಈ ಕೃತಿಯಲ್ಲಿ ಗುರುವನ್ನು ಕುರಿತ "ಹದಿನೇಳನೂರ ನಾಲ್ವತ್ತರೊಂಬತ್ತನೆಯಾಬ್ದದ ಚೈತ್ರಾದಾದಿಯೊಳ್ ಹಸಿರು ಬಣ್ಣದ ಹೊದಿಕೆಯನ್ನು ಸಂಗ್ರಹಿಸುತೊಡನೆ . . . . ಮುದದಿ ಡಂಗುರವನುರೆ ಹೊಯ್ಸು ಕಾಲಜ್ಞಾನದ ನುಡಿಯನುರೆ ನುಡಿದು" (೪೭೧೩). "ಹಸಿರು ಬಣ್ಣದ ವಸ್ತ್ರವಿಸರವ . . . . . ನೀಲಗಾರರಿಂ ಮಾಡಿಸಿ ತರಿಸಿ" (೪೭೧೪), "ನೀನಂದು ಸಂಗ್ರಹಿಸಿದ ಹರಿದ್ವರ್ಣ ವಸನಮುಮನುಟ್ಟುತೊಟ್ಟು" (೪೭೬೨) ಎಂಬ ಉದ್ಧರಣೆಗಳಲ್ಲಿ ಬರುವ ಹಸಿರು ವಸ್ತ್ರಧಾರಣೆ, ಕಾಲಜ್ಞಾನ ಘೋಷಣೆ ಇತ್ಯಾದಿಗಳಿಂದ ಈ ಗುರುವು ಆರೂಢ (ಅವಧೂತ) ಪಂಥೀಯನೆಂದು ಸ್ಪಷ್ಟವಾಗುತ್ತದೆ.

ಶಿವಲಿಂಗರುದ್ರಸರ್ಜನ ಗುಣಾವಗುಣಗಳ ಬಗ್ಗೆ ಈ ಕೃತಿ ಅನೇಕ ಉಲ್ಲೇಖಗಳನ್ನು ಹೀಗೆ ನೀಡುತ್ತದೆ: ಶಿವಲಿಂಗರುದ್ರಸರ್ಜನು ಪಂಚಾಂಗದ ವಿಷಯವಾಗಿ ಯಾವ ಭಾವನೆ ತಾಳಿದ್ದನೆಂಬುದನ್ನು-

ಊರಿಗುರೆ ಹೋಗುತಿಹ ಕಾಲದೊಳ್ ಕೇಳುತಿಹ
ನೋರೆಯಾಗದೆ ಮದುವೆ ಮೊದಲಾದ ಕಾರ್ಯದೊ
ಳಾರೈದು ಕೇಳುತಹನೀ ನಾಡದೊರೆಯೆನಿಪ ಶಿವಲಿಂಗರುದ್ರಸರ್ಜಂ ।
ಊರು ಕೆರೆ ಭಾವಿ ಗುಡಿ ಮನೆಗಳಂ ಮಠಗಳಂ

ಈ ರಸೆಯೊಳುರದೆ ಕಟ್ಟಿಸುವ ಕಾರ್ಯದಿ ಕೇಳ್ವ
ಓರಂತೆ ಲಿಂಗಾರ್ಚನಾದಿ ಕಾರ್ಯದಿ ಕೇಳನು . . . . . ॥ (೯೨೮)

ಎಂಬ ಪದ್ಯದಲ್ಲಿ ವಿವರಿಸಲಾಗಿದೆ. ಇದರ ಪ್ರಕಾರ ಈತನು ಪ್ರವಾಸ ಸಂದರ್ಭ, ಮದುವೆ ಮೊದಲಾದ ಶುಭಕಾರ್ಯ, ಊರು, ಕೆರೆ, ಭಾವಿ, ಗುಡಿ, ಮನೆ-ಮಠಗಳ ನಿರ್ಮಾಣ ಪ್ರಸಂಗದಲ್ಲಿ ಪಂಚಾಂಗ ಕೇಳುತಿದ್ದನೇ ಹೊರತು, ಲಿಂಗಾರ್ಚನೆ ಇತ್ಯಾದಿ ಪ್ರಸಂಗಗಳಲ್ಲಿ ಕೇಳುತ್ತಿರಲಿಲ್ಲವೆಂದು ತಿಳಿದುಬರುತ್ತದೆ.

ಈತನು ತುಂಬ ವಿದ್ವಾಂಸನಾಗಿದ್ದರೂ ಕೆಲವು ದೋಷಗಳು ಇವನಲ್ಲಿ ಮನೆಮಾಡಿರುವುದನ್ನು ಈ ಕೃತಿ ಉದ್ದಕ್ಕೂ ದಾಖಲಿಸುತ್ತ ಹೋಗಿದೆ. "ಶಿವಲಿಂಗರುದ್ರಸರ್ಜಾಹ್ವಯ ಮಹೀನಾಥಗೆ I ಇಲ್ಲಿಗುರೆ ಬರಿಸಿರ್ದುದಂ ತಿಳಿಸೆ, ಶಾಸ್ತ್ರಮಂ ಬಲ್ಲಾತ ನಾನೆಂಬ ಮದದಿಂದ ಉದಾಸಿಸಲ್ . . . . . . ತನ್ನ ತಮ್ಮನಂ ಕಳೆದಿರುವನೀಗ . . . ." (೩೦೮೨), "ನಾನುರೆ ಪ್ರೌಢನೆಂದಿರ್ದ ಮೂಢತನದಿಂ . . . . . ನಾಡೆ ಕಳೆದಿಹ ತನ್ನ ತಮ್ಮನಂ ನಾಡ ದೊರೆ" (೨೯೪೧), "ಈ ನಾಡದೊರೆಯನುಜನಳಿಯೆ" (೧೯೨೧), "ತಮ್ಮನಳಿದನೆನುತ್ತ ಕಿತ್ತೂರ ದೊರೆ ಈಗ ಉಮ್ಮಳಿಸುತುರೆ ದುಃಖಿಸುತ್ತಿರ್ಪಂ" (೨೯೪೫) ಇತ್ಯಾದಿ ಹೇಳಿಕೆಗಳಲ್ಲಿ ಇವನು ವಿದ್ವಾಂಸನಾಗಿದ್ದನೆಂದೂ, ಈ ವಿದ್ವತ್ತು ಇತ್ಯಾದಿ ಅಹಂಕಾರ ಕಾರಣವಾಗಿ ತನ್ನ ತಮ್ಮ (ರುದ್ರಮ್ಮನ ಮಗ? ಚೆನ್ನಮ್ಮನ ಮಗ?)ನನ್ನು ಕಳೆದುಕೊಂಡನೆಂದೂ ಇಲ್ಲಿ ಸೂಚಿಸಲಾಗಿದೆ.

"ಈ ನಾಡನಾಳುವ ಧಣಿಯು ಬಲು ಜಾಣನೈ" (೩೧೦೦), "ಮಾನನಿಧಿ ಶಿವಲಿಂಗರುದ್ರನೊಳಿರುವ ಜಾಣತನಮಂ ಪಸರಿಸುತ್ತ" (೩೧೦೧), "ತರ್ಕ ವ್ಯಾಕರಣಾದಿ ಶಾಸ್ತ್ರಗಳನುರೆ ಬಲ್ಲನರ್ಕಜಾರಾತಿ ಪೂಜಾಧುರಂಧರ, ಮರ್ಕಟಧ್ವಜನಂತೆ ಪರಸತಿಯ ನೆರೆಯದಿಹ ಶಿವಲಿಂಗರುದ್ರಸರ್ಜಂ" (೩೧೦೨) ಎಂಬ ಮಾತುಗಳು ಅವನ ವಿದ್ವತ್ತು, ಪೂಜಾಧುರಂಧರತೆ, ಪರನಾರೀ ಸೋದರತ್ವಗಳನ್ನು ಎತ್ತಿ ಹೇಳುತ್ತವೆ. ಆದರೆ ಸೂರ್ಯೋದಯ ಸಮಯದಲ್ಲಿ ನಿದ್ರಿಸುವನು, ಸೂರ್ಯಾಸ್ತ ಸಮಯದಿ ಶಿವನನ್ನು ಸ್ತುತಿಸನು. ಹೀಗಾಗಿ ತರ್ಕ ವ್ಯಾಕರಣಾದಿ ಶಾಸ್ತ್ರಗಳನೋದಿ ಫಲವೇನು? (೩೧೦೨), "ಓದಿ ಗಿಳಿ ತನ್ನ ಮಲವ ಭುಂಜಿಸಿದಂತೆ ಬಲುವೋದಿ ಜಾಣನೆನಿಸಿ" (೩೧೦೩) ಎಂದು ಅವನ ಅವಗುಣವನ್ನೂ ಇಲ್ಲಿ ಹೇಳಲಾಗಿದೆ. ಇದಲ್ಲದೆ "ಅಳತೆಯಿಲ್ಲದೆ ಭಜಿಸಿ, ಅಳತೆಯಿಲ್ಲದೆ ಉಣಿಸಿ, ಅಳತೆಯಿಲ್ಲದೆ ಕೊಟ್ಟು, ಅಳೆತೆಯಿಲ್ಲದೆ ಕೊಂಡುI ಅಳಿಸುತಿಹನೀಗ ರೈತರಂ" (೩೧೦೩) - ಈ ಹೇಳಿಕೆಯಂತೂ ಅವನ ಅವಿವೇಕತನಕ್ಕೆ ಸಾಕ್ಷಿಯಾಗಿದೆ. ಇನ್ನೊಂದೆಡೆ "ನಾಡೊಳಗಿರುವ ಲಿಂಗಜಂಗಮ ನಿಕರದಿಂದ ಕೈಮುಗಿಸಿಕೊಳುತಿರ್ಪ" (೨೯೪೭) ಎಂದು ಹೇಳಲಾಗಿದೆ.

ಇದಲ್ಲದೆ "ಲಿಂಗಪೂಜಾ ಕಾಲದೊಳ್ ಸಲ್ಲದೈ ಕರ್ಣಾಟಭಾಷೆ" (೩೩೪೧) ಯೆಂದು ಪೂಜಾ ಸಂದರ್ಭದಲ್ಲಿ ಕನ್ನಡಭಾಷೆಯ ಬಳಕೆಯನ್ನು ನಿಲ್ಲಿಸಿದನು. ಬಹುಶಃ ಸಂಸ್ಕೃತ ಭಾಷೆಯನ್ನು ರೂಢಗೊಳಿಸಿದನು.

ಮಲ್ಲಸರ್ಜನ ಕಾಲಾವಧಿಯಲ್ಲಿದ್ದ ಜಂಗಮಾರೋಗಣೆಯ ವ್ಯವಸ್ಥೆ ಶಿವಲಿಂಗರುದ್ರಸರ್ಜನ ಕಾಲಾವಧಿಯಲ್ಲಿ ಶಿಥಿಲಗೊಂಡಿತು. "ಮಲಿನಸಹಿತ ಪಾಕ" (೩೩೩೮)ವನ್ನು ಸಿದ್ಧಪಡಿಸಿ ಜಂಗಮಾರೋಗಣೆಗೆ ಬಳಸುವುದು ಆರಂಭವಾಯಿತು. ಒಮ್ಮೆ ಜಂಗಮನೊಬ್ಬ ಪಾತ್ರೆಗಳನ್ನು ಬೀಸಿ ಒಗೆದು, ಇಂಥ ಮಲಿನ ಪ್ರಸಾದವನ್ನು ನಿರಾಕರಿಸಿದ (೩೩೯). ಮರುದಿನ ಇವನಿಗೆ ಸಣ್ಣಕ್ಕಿ ಅನ್ನ ನೀಡಿ, ಮಿಕ್ಕವರಿಗೆ ಮಲಿನ ಪಾಕ ನೀಡುವುದು ಮುಂದುವರಿಯಿತು (೩೩೪೦).

ಇದಲ್ಲದೆ "ಮದದತನದಿಂದ" ಎಮ್ಮೆಯ ತುಪ್ಪವನ್ನು ಲಿಂಗಾಭಿಷೇಕಕ್ಕೆ, ಪೂಜ್ಯರಿಗೆ ಸಲ್ಲಿಸುತ್ತಿದ್ದಾನೆ (೩೩೭೫). ಮುಂದುವರಿದು -

ಹಾಗಮಂ ಕೈಕೊಳಿಸಿ ಉಣಿಸಿಯುರೆ ಕಳಿಸದೆ
ಹಾಗಮಂ ಕೈಕೊಳಿಸದೆ ಉಣಿಸಿ ಮಿಗೆ ಬಂಧ
ನಾಗಾರದೊಳ್ ಪೊಗಿಸುವಂತೆಯುರೆ ಪೊಗಿಸಿ ಬಾಗಿಲದಲ್ಲಿ ನಿಲ್ಲುತೊಡನೆ ।
ಹಾಗಮಂ ಕೊಟ್ಟು ಅಟ್ಟುತ್ತಿರುವನ್ನೆ ಕೆಲರ್ಗೆ
ತ್ಯಾಗಿ ಎನ್ನಿಸಲೋಸುಗ ಬೇಡಿದುದನೀವ
ಹ್ಯಾಗತನಮಂ ನೋಡಿ ನೋಡಿ ಬೇಸತ್ತೆ ನಾನೆಂಬ ಗುರುವೆ ಶರಣು॥(೩೩೩೬)

ತಾರತಮ್ಯವನರಿಯದ ದೊರೆ ಎನಿಸಿಕೊಂಡಿರ್ದು
ತಾರತಮ್ಯವನುರೆ ವಿಚಾರಿಸದೆ ಬರು XX
ತಾರತಮ್ಯದಿ ಕೊಟ್ಟು ಅಟ್ಟಿಸುವ ಖೊಟ್ಟಿತನದನ್ಯಾಯನ್ಯಾಯದಿಂದ ।
ಈ ರಾಜಗಿವನವರ್ಗೆ ರೋಗವಾವರಿಪುದು ಕು
ಮಾರನೇ ನೀನೀಗ ನಿರ್ಣಯದಿಂದುಣಿಸು
ತಾ ರೋಗಮಂ ನಿವಾರಿಪುದೆಂದು ತಿಳಿಸಿಕೊಡುವ ಗುರುವೆ ಶರಣು॥(೩೩೩೭)

ಎಂದು ಸೂಚಿಸುವ ದೋಷಗಳ ಉಲ್ಲೇಖ, ಈ ಕಾವ್ಯದಲ್ಲಿ ಮತ್ತೆ ಮತ್ತೆ ಬರುತ್ತದೆ. ಅಂಥ ಒಂದು ಉಲ್ಲೇಖ ಹೀಗಿದೆ : "ಗಿಳಿಯೋದಿದೊಲೋದಿ ವಿನೋದಿಸುವ ಪಂಡಿತರ ತಂಡದೊಳ್ ಪಂಡಿತನೆನಿಸಿ ರಮಾಮಂಡಿತನೆನಿಸಿರ್ದ ಶಿವಲಿಂಗರುದ್ರಸರ್ಜಾಹ್ವಯ ಮಹೀಶನೀ ಶಾಲಿವಾಹನಶಕದೊಳ್ ೧೭೪೫ನೆಯ ಸುಭಾನುನಾಮ ಸಂವತ್ಸರದಲ್ಲಿ ಹೊಂಗಲಿನಲ್ಲಿ ನೆಲಸಿರ್ದ ನಿರ್ಣಯ ಭಿಕ್ಷುಕನಂ ಲಕ್ಷಿಸದೆ, ನಿರ್ಣಯ ಪುರಾಣಮಂ ಕಾಣದೆ. . . . . . ಖೂತಳತನದಿಂ ಬಾಳುವ ಖೂಳ್ವಣಿಗರಂ ಬೆಳೆಸುತ್ತ, ... ಮರೆವರಿವಿನನ್ಯಾಯನ್ಯಾಯದಿಂ ನಡೆವ ಲಿಂಗಜಂಗಮರಿಗುಣಿಸುತ್ತ ತಣಿಸುತ್ತ, ತತ್ಪಾದೋದಕ ಪ್ರಸಾದವ ಕೈಕೊಂಡು ಉಂಡು ನಲಿಯುತ್ತ ಕೆಲೆಯುತ್ತ ಮಲೆಯುತಿರ್ದು, ತತ್ಸಂವತ್ಸರದಲ್ಲಿಯೇ ತನ್ನವರನುರೆ ಅಳಿಸಿ ಹೂಳಿಸಿ ತಾನಾಳುತಿರ್ದುದಂ ಬಲ್ಲವರೆ ಬಲ್ಲರಲ್ಲದೆ ಅರಿಯದಧಮರರಿಯರು."

"ಮತ್ತಂ ಮರೆವರಿವಿನನ್ಯಾಯನ್ಯಾಯದೆ ಮದಾಂಧನಾಗಿ ಬಾಗದೆ, ತನಗುರೆ ಬಾಗದಿರ್ದವರನುರೆ ಬಾಗಿಸುತ್ತಿರ್ದು ೧೭೪೬ನೆಯ ತಾರಣಾಹ್ವಯಹಾಯನದಲ್ಲಿ ಮಾಧವ ಜೇಷ್ಠಾಷಾಢ ಮಾಸಗಳೊಳ್ ಪೂರ್ವದುಷ್ಕರ್ಮದೊದವಿನಿಂದಾಮಯ (=ರೋಗ)ವಾವರಿಸಿ ಬಳಲುತ್ತಿರ್ಪುದಂ ಬಲ್ಲವರೆ ಬಲ್ಲರಲ್ಲದೆ ಅರಿಯದಧಮರರಿಯರು (೪೮೬೯ ಗದ್ಯ) - ಎಂಬ ವಿವರಣೆ ಶಿವಲಿಂಗರುದ್ರಸರ್ಜನ ಅನ್ಯಾಯದ ಆಡಳಿತ, ಅನಾರೋಗ್ಯಗಳನ್ನು ಕಾಲಮಿತಿ ಸಹಿತವಾಗಿ ತಿಳಿಸುತ್ತದೆ.

ಚಿಕ್ಕಮ್ಮ ಚೆನ್ನಮ್ಮ, ಹೆಂಡತಿ ವೀರಮ್ಮ ಅರಮನೆಯಲ್ಲಿದ್ದರೂ ಶಿವಲಿಂಗರುದ್ರಸರ್ಜನು ದಾಸಿ ಗೆಜ್ಜಿ ಮಹಾಂತಮ್ಮನಿಂದ ಊಟ ನೀಡಿಸಿಕೊಳ್ಳುತ್ತಿದ್ದ (೩೧೦೫-೦೬)ನೆಂಬುದು ಇವನ ವಿಕ್ಷಿಪ್ತ ನಡತೆಗೆ ಉದಾಹರಣೆಯಾಗಿದೆ.

ಇನ್ನೊಂದು ಸಂದರ್ಭದಲ್ಲಿ "ದೊರೆಯೆನಿಪ ಶಿವಲಿಂಗರುದ್ರಸರ್ಜನ ಪುಣ್ಯಮುರೆ ತೀರಿತಿಲ್ಲಿಗೆ" (೩೪೯೭). "ಪುಣ್ಯಮುರೆ ಕ್ಷಯಿಸಿ ಕ್ಷಯಮನೊಂದುವನೀಗ" (೩೪೯೯) ಎಂಬ ಮಾತುಗಳು

ಕಾಣಿಸಿಕೊಂಡಿವೆ. "ಅನ್ಯಾಯದಿಂ ಪುಣ್ಯಮುರೆ ಕ್ಷಯಿಸುವುದು" ಎಂದು ಗುರು ಹೇಳುವುದು, "ಅನ್ಯಾಯಮುಮನೇನನೆಸಗಿರ್ದನ್ನೆ?" ಎಂದು ಶಿಷ್ಯ ಕೇಳುವುದು, ಆಗ ಗುರು "ಧೂಳಿ ಪಾದೋದಕವನುರೆ ನಂಬದೆ ಅನ್ಯರಿಂದೌಷಧವನುರೆ ಕೊಂಡುದನ್ಯಾಯ" (೩೪೯೮) ಎಂದು ಉತ್ತರಿಸುವುದು ಇಲ್ಲಿ ಗಮನಿಸಬೇಕಾದ ದಾಖಲೆಯೆನಿಸಿವೆ. ಮುಂದುವರಿದು ಹೇಳಿದ "ಶಿವಲಿಂಗರುದ್ರಸರ್ಜಂ ತಾನುರೆ ಲಿಂಗಾಂಗಿಯೆನಿಸಿ ಅಲಿಂಗಿಗಳೆಸಗಿರ್ದೌಷಧದ ಗುಳಿಗೆಗಳಂ ಗಳಗಳನೆ ಮುಕ್ಕುತನದಿಂ ತೆಕ್ಕೊಂಡು ತದೇವ ಸಂವತ್ಸರ ಭಾದ್ರಪದ ಸಂವತ್ಸರದೊಳಳಿದಿರ್ದುದಂ ಬಲ್ಲವರೆ ಬಲ್ಲರಲ್ಲದೆ ಅಧಮರರಿಯರು" (೪೮೬೯ ಗ) ಎಂಬ ಮಾತಿನಿಂದ, ಇವನ ನಿಧನಕ್ಕೆ ದೇಶೀಔಷಧ ಪಾದೋದಕಗಳನ್ನು ತ್ಯಜಿಸಿ, ವಿದೇಶೀ ಔಷಧ ಸೇವಿಸಿದುದೇ ಕಾರಣವಾಯಿತೆಂದು ಅಂದಿನ ಜನತೆ ನಂಬಿದ್ದಿತೆನಿಸುತ್ತದೆ. ಕೊನೆಯದಾಗಿ, ಇಲ್ಲಿಯ ಕಾಲಜ್ಞಾನದ ವಿಚಿತ್ರ ಹೇಳಿಕೆಯೊಂದು ಹೀಗಿದೆ: (೪೨೩೫ರ ಮುಂದಿನ ಭಾಗ)

ಕಿತ್ತೂರ ದೊರೆಯೀಗ ಸತ್ತನೆಂಬರು ಈಗ ಹೊಯ್ಯಲೊ ಡಂಗುರವ
ಸತ್ತರೇನಹುದಹುದು ಸತ್ತು ಇರುವನೆಂದು ಹೊಯ್ಯಲೊ ಡಂಗುರವ
ಸತ್ತು ಇರುತ್ತೀ ನಾಡನಾಳುವನೆಂದು ಹೊಯ್ಯಲೊ ಡಂಗುರವ
ಮುತ್ತೈದೆಯೆನಿಸುವಳವನರ್ಧಾಂಗಿಯು ಹೊಯ್ಯಲೊ ಡಂಗುರವ
ಕೆಡುವ ಕಾಲಕೆ ಕೆಟ್ಟು ಹೋದನೆಂಬುವುದೀಗ ಹೊಯ್ಯಲೊ ಡಂಗುರವ ||೯||

....

ಹುಡುಗತನದ ಸೊಕ್ಕಿನಿಂದ ಕೆಟ್ಟಹನೀಗ ಹೊಯ್ಯಲೊ ಡಂಗುರವ ||೧೦||
ಕೆಟ್ಟರೇನಿನ್ನೂ ಬಿಟ್ಟು ಹೋಗಿಲ್ಲೆಂದು ಹೊಯ್ಯಲೊ ಡಂಗುರವ

ಪಟ್ಟದರಸಿಯನಿನ್ನು ಬಿಟ್ಟು ಹೋಗನು ಎಂದು ಹೊಯ್ಯಲೊ ಡಂಗುರವ
ಕಟ್ಟಕ್ಕರದಿ ಮಗನ ಪಡೆವನೆಂದು ಹೊಯ್ಯಲೊ ಡಂಗುರವ ||೧೧||

ಸೋಜಿಗವಲ್ಲಿದು ವಾಜಿಬಿಯೈಯೆಂದು ಹೊಯ್ಯಲೊ ಡಂಗುರವ
ವಾಜಿಬಿಯೆನ್ನರು ಈಗಿನ ಜನರೆಂದು ಹೊಯ್ಯಲೊ ಡಂಗುರವ
ಈ ಜನರೆ ಮುಂದೆ ವಾಜಿಬಿಯೆಂಬರು ಹೊಯ್ಯಲೊ ಡಂಗುರವ ||೧೩||

....

ಈ ಅಸಂಭವ ಹೇಳಿಕೆ ಇದೇ ಪುರಾಣದ ೪೮೫೨, ೪೮೫೩. ಮತ್ತು ಮುಂದಿನ ೧೧ ಕಂದ ಪದ್ಯಗಳಲ್ಲಿ, ೪೮೭೦ನೆಯ ಪದ್ಯದ ಮುಂದಿನ ಆಶೀರ್ವಾದ ರೂಪದ ಪತ್ರದಲ್ಲಿ, ೪೫೭೬-೪೫೮೨ ವರೆಗಿನ ಪದ್ಯಗಳಲ್ಲಿ ಮತ್ತೆ ಮತ್ತೆ ಬಂದಿದೆ. ಬಹುಶಃ ಕಿತ್ತೂರು ಸಂಸ್ಥಾನ ಭವಿಷ್ಯತ್ತಿನಲ್ಲಿ ಬೆಳೆಯಬೇಕೆಂಬ ಆಶಯವಿಲ್ಲಿದೆ.

ಒಟ್ಟಾರೆ, ಶಿವಲಿಂಗರುದ್ರಸರ್ಜ ವಿದ್ವಾಂಸ, ಲಿಂಗಪೂಜಾ ಧುರಂಧರನಾಗಿದ್ದರೂ ಮದಾಂಧನಾಗಿದ್ದನೆಂಬ ಧ್ವನಿ ಈ ಕೃತಿಯಲ್ಲಿದೆ.

* * *

ಕಿತ್ತೂರ ರಾಣಿ ಚೆನ್ನಮ್ಮ

ನಿರ್ಣಯ ಪುರಾಣದಲ್ಲಿ ಕಿತ್ತೂರಿನ ರಾಣಿ ಚೆನ್ನಮ್ಮನ ಬಗೆಗೂ ಕೆಲವು ವಿವರಗಳಿವೆ. ಈಕೆ ಬ್ರಿಟಿಶರೊಂದಿಗಿನ ಯುದ್ಧದಲ್ಲಿ ಸೋತು ಸೆರೆಮನೆ ಸೇರಿದ ದುರಂತ ನಮಗೆಲ್ಲ ಗೊತ್ತು. ಆದರೆ ನಿರ್ಣಯ ಪುರಾಣವು ಸೆರೆಮನೆಯಲ್ಲಿಯಂತೆ ಅರಮನೆಯಲ್ಲಿಯೂ ಅವಳು ದುರಂತ ಅನುಭವಿಸಿದ ಒಂದು ಘಟನೆಯನ್ನು ಹೀಗೆ ತಿಳಿಸುತ್ತದೆ:

ಈ ಪುರಾಣದ ಪ್ರಕಾರ ಈಗ ಅರಮನೆಯಲ್ಲಿದ್ದವರು ಶಿವಲಿಂಗರುದ್ರಸರ್ಜ, ಹೆಂಡತಿ ವೀರಮ್ಮ, ಚಿಕ್ಕಮ್ಮ ಚೆನ್ನಮ್ಮ. ಇಂಥ ಸನ್ನಿವೇಶದಲ್ಲಿ ದಾಸಿಯಾಗಿ ಅರಮನೆ ಸೇರಿದ ಗೆಜ್ಜಿ ಮಹಾಂತವ್ವ ಶಿವಲಿಂಗರುದ್ರಸರ್ಜನಿಗೆ ಆಪ್ತಳೆನಿಸಿದಳು. ತಾಯಿ, ಹೆಂಡತಿ ಇವರನ್ನು ಬಿಟ್ಟು, ಶಿವಲಿಂಗರುದ್ರಸರ್ಜ ಈ ಮಹಾಂತವ್ವನಿಂದ ಊಟ ನೀಡಿಸಿಕೊಳ್ಳುತ್ತಿದ್ದನು. ಇಷ್ಟೇ ಏಕೆ ಅವಳನ್ನು "ಬೆಳೆಸಿ, ಚೆನ್ನವ್ವೆಯೆಂಬ ತನ್ನವ್ವೆಗವಳಿಂದ ಪ್ರತ್ಯುತ್ತರವನುರದೆ ಕೊಡಿಸಿ। ತನ್ನವ್ವೆಯಂ ಮರುಗಿಸುತ್ತ ಬ್ಯಾರಿಡಿಸಿರ್ದು" (೩೧೦೫) ಎಂಬ ಹೇಳಿಕೆ ಇಲ್ಲಿದೆ. ಇದರಿಂದ ದಾಸಿಯಾದ ಮಹಾಂತವ್ವನಿಂದ ಇದಿರುತ್ತರ ಆಡಿಸಿಕೊಳ್ಳುವ, ಅರಮನೆಯಿಂದ ಹೊರಗೆ ಹಾಕಿಸಿಕೊಂಡು ಬೇರೆ ಮನೆಯಲ್ಲಿ ವಾಸಿಸುವ ದುಸ್ಥಿತಿ ಚೆನ್ನಮ್ಮ ಅನುಭವಿಸಿದಳೆಂದು ತಿಳಿದುಬರುತ್ತದೆ.

ಶಿವಲಿಂಗರುದ್ರಸರ್ಜನ ಮರಣ, ವೀರಮ್ಮನ ವೈಧವ್ಯ, ಚೆನ್ನಮ್ಮನ ಆಡಳಿತ, ದತ್ತಕ ವಿಷಯ, ಚೆನ್ನಮ್ಮನ ಸೋಲು ಮೊದಲಾದ ವಿವರಗಳೂ ಈ ಪುರಾಣದಲ್ಲಿ ದಾಖಲಾಗಿವೆ. ಈ ಪ್ರಸಂಗದ ಪೂರ್ಣಪಾಠ ಹೀಗಿದೆ:

"ಶಿವಲಿಂಗರುದ್ರಸರ್ಜನಳಿಯಲವನರ್ಧಾಂಗಿಯೆನಿಪ ವೀರಾಂಬೆಯು ಪ್ರಥಮ ಋತುಮತಿಗಾಣದೆ ಇನ್ನೂ ಗೌರಿಯೆನಿಸಿರಲನ್ಯಾಯನ್ಯಾಯದಿಂ ಸುತನೆನಿಸಬಾರದೆಂಬುವಳತಿಯ ತಿಳಿಯದ ಕಳತಿಗಳ ಮಾತನುರೆ ಕೇಳಿ, ಇನ್ನು ನಾನೇ ಸಾಮ್ರಾಜ್ಯವನಾಳುವನೆಂದು XXXX ತನೆನಿಸಿ, ಶಿಖಾಧಿಪತಿಯೆನಿಸಿ, ಸವಾಯಿ ಮಲ್ಲಸರ್ಜನೆಂದು ತನ್ನ ಗಂಡನ ಹೆಸರಿಟ್ಟು, ಮೊಮ್ಮಗನಂ ಮುಂದಿಟ್ಟುಕೊಂಡು ಚೆನ್ನಾಂಬೆಯೆಂಬವಳು ಚೆನ್ನಾಗಿ ಕೀರ್ತಿವಡೆದಿರ್ದು, ಕಾರ್ತಿಕ ಮಾಸವನೊಂದೇ ಕಳೆದು, ಮಾರ್ಗಶೀರ್ಷ್ಯದಲ್ಲಿಯೇ ಮಾರ್ಗಣ (=ಆಯುಧ) ವಿಡಿದು ಕಾದುತಿರ್ದು, ತದೇವ ಮಾರ್ಗಶೀರ್ಷ್ಯದಲ್ಲಿಯೇ ಮಾರ್ಗಣಮಂ ಬಿಟ್ಟು, ಕಂಗೆಟ್ಟು, ಅರಮನೆಯಂ ಪೊಕ್ಕು ಕೈಯೊಳಗೆ ಸಿಕ್ಕು, ಕಳವಳಿಸುತ್ತಿರ್ದುದಂ ಬಲ್ಲವರೆ ಬಲ್ಲರಲ್ಲದೆ ಅರಿಯರಧಮರರಿಯರು" (೪೮೬೯ ಗದ್ಯ).

ಇದರಿಂದ ತಿಳಿದುಬರುವುದಿಷ್ಟು: ಶಿವಲಿಂಗರುದ್ರಸರ್ಜ ಸಾಯುವಾಗ ಹೆಂಡತಿ ವೀರಮ್ಮ ಋತುಮತಿಯಾಗಿರಲಿಲ್ಲ. ಈಗ ಚೆನ್ನಮ್ಮ ಕೆಲವರ ಅಭಿಪ್ರಾಯದಂತೆ ತಾನೇ ರಾಜ್ಯವಾಳಬಯಸಿ, ದೂರದ ಸಂಬಂಧಿ ಮೊಮ್ಮಗನಿಗೆ ಸವಾಯಿ ಮಲ್ಲಸರ್ಜನೆಂದು ತನ್ನ ಗಂಡನ ಹೆಸರಿಟ್ಟು ಶಿಖಾಧಿಪತಿ (=ಸಿಕ್ಕಾ ಅಧಿಪತಿ)ಯನ್ನಾಗಿ ಮಾಡಿದಳು. ಇಲ್ಲಿಯ "ಚೆನ್ನಾಂಬೆಯೆಂಬವಳು ಚೆನ್ನಾಗಿ ಕೀರ್ತಿವಡೆದಿರ್ದು" ಎಂಬ ಮೆಚ್ಚುಗೆಯ ಮಾತಿನಿಂದ ಅವಳ ಆಡಳಿತ ಚೆನ್ನಾಗಿದ್ದಿತೆಂದು ತಿಳಿದುಬರುತ್ತದೆ.

ಶಿವಲಿಂಗರುದ್ರಸರ್ಜ ತಾರಣ ಸಂವತ್ಸರದ ಭಾದ್ರಪದ ಮಾಸದಲ್ಲಿ ತೀರಿಕೊಂಡ. ಬಳಿಕ ದತ್ತಕ ಮಗನ ಪಟ್ಟಬಂಧೋತ್ಸವ ಜರುಗಿ, ಕಾರ್ತಿಕಮಾಸ ಮುಗಿದು, ಮಾರ್ಗಶೀರ್ಷದಲ್ಲಿ (ಬ್ರಿಟಿಶರೊಂದಿಗೆ) ಯುದ್ಧಘಟಿಸಿ, ಅದೇ ಮಾಸದಲ್ಲಿ ಚೆನ್ನಮ್ಮ ಸೆರೆಸಿಕ್ಕಳೆಂದು ಮೇಲಿನ ಗದ್ಯ ತಿಳಿಸುತ್ತದೆ.

ಸೆರೆಸಿಕ್ಕ ಅತ್ತೆ-ಸೊಸೆಯರನ್ನು ಮಾರ್ಗಶೀರ್ಷದಂದು (ಬೈಲ)ಹೊಂಗಲಿನಲ್ಲಿ ಸೆರೆಯಿಟ್ಟರು. ಸೆರೆಮನೆಯಲ್ಲಿದ್ದ ವೀರಮ್ಮ ಅದೇ ವರ್ಷ ಮಾಘಮಾಸದಲ್ಲಿ ಪ್ರಥಮ ಋತುಮತಿಯಾದಳು. ಈಗ ನಿರ್ಣಯ ಪುರಾಣಿಯು (ಪುರಾಣದಲ್ಲಿ ಬರುವ ಗುರು) ತಾನೊಂದು ಪತ್ರ ಬರೆದು ಕಳಿಸುವುದಾಗಿಯೂ, ಇದನ್ನು ಮೊದಲು ವೀರಮ್ಮನೂ ಬಳಿಕ ಚೆನ್ನಮ್ಮ ಮೊದಲಾದ ಪರಿವಾರದವರೂ ನೋಡಬೇಕೆಂದು ತಿಳಿಸಿದನು. ಈ ಮಾತಿಗೆ ಚೆನ್ನಮ್ಮ ಸಿಟ್ಟಿಗೆದ್ದು "ಹಿರಿಯಳಾನಿರಲಾಗಿ, ಸವಾಯಿ ಮಲ್ಲಸರ್ಜನೆನಿಪ ದೊರೆಯಿರಲಾಗಿ, ನಮ್ಮೀರ್ವರಂ ಬಿಟ್ಟು ವೀರಾಂಬೆಯೆಂಬವಳೆ ಮುಂಚೆ ನೋಡುವುದೆಂದು ನುಡಿವ ನಿರ್ಣಯ ಪುರಾಣಿಯೆನಿಪನವನಾರು? ಶಿರಸ್ಸಿರಲಾಗಿ ಮೊಣಕಾಲಿಗೆ ಪಟ್ಟವೇ?" (೪೮೪ ರ ಗದ್ಯ) ಎಂದು ನುಡಿದು ಆ ಮಾತನ್ನು ತಿರಸ್ಕರಿಸಿದಳು.

ಬಳಿಕ ಫಾಲ್ಗುಣ ಬಹುಳ ಪ್ರತಿಪದೆ ಉಷಃಕಾಲದಲ್ಲಿ ಕಂಪನಿ ಸರಕಾರದ ಆಜ್ಞೆಯಂತೆ ಬೇಬರ್ ಸಾಹೇಬನು ಬಂದು, ಬೈಲಹೊಂಗಲದಲ್ಲಿದ್ದ ಸವಾಯಿ ಮಲ್ಲಸರ್ಜನೆಂಬ ಹುಡುಗನನ್ನು ಹುಡುಕಿ ಹಿಡಿದು, ಮಾಸ್ತಮರಡಿ ಗ್ರಾಮಕ್ಕೆ ಕರೆದುಕೊಂಡು ಹೋಗಿ, ಅವನ ತಂದೆ ತಾಯಿಗಳಿಂದ "ನಮ್ಮ ಹುಡುಗನನ್ನು ನಮಗೆ ಒಪ್ಪಿಸಲಾಗಿದೆ. ಇವನು ಕಿತ್ತೂರು ಸಂಸ್ಥಾನದ ಅಧಿಪತಿಯಲ್ಲ"ವೆಂದು ಬರೆಯಿಸಿಕೊಂಡನು.

ಇದರಿಂದ ಚೆನ್ನಮ್ಮ ಮೊದಲಾದವರು ಕಳವಳಿಸಿದರು. ಕಂಪನಿ ಸರಕಾರ ನೀಡುತ್ತಲಿದ್ದ ಉಪಜೀವನ ಹಣದಿಂದ ಅತ್ತೆ ಸೊಸೆಯರು ಬೈಲಹೊಂಗಲದಲ್ಲಿ ೩೦ ತಿಂಗಳು ಕಳೆದರು. ಮುಂದೆ ಚೆನ್ನಮ್ಮನು ಶಕೆ ೧೭೪೯ನೆಯ ಸರ್ವಜಿತ್ ಸಂವತ್ಸರದ ಶ್ರಾವಣ ಮಾಸದಲ್ಲಿ ಅದ್ದೂರಿಯ ಜಂಗಮ ದಾಸೋಹ ಜರುಗಿಸಿ, ಮಿತಿಮೀರಿ ಖರ್ಚು ಮಾಡಿದಳು. ಸಖಾರಾಮನೆಂಬ ಚಿಟ್ನೀಸ್ ಈ ಬಗೆಯ ಅದ್ದೂರಿ ಆಚರಣೆ ಸರಿಯಲ್ಲವೆಂದು ಹೇಳಿದರೂ ಚೆನ್ನಮ್ಮ ಕೇಳಲಿಲ್ಲ. ಆಗ ಅತ್ತೆ-ಸೊಸೆಯರನ್ನು ಬೇರೆ ಬೇರೆ ಇಟ್ಟು, ಖರ್ಚಿಗೆ ಕೊಡುವುದನ್ನು ನಿಲ್ಲಿಸಿದರು.

ಹೀಗೆ ಖರ್ಚಿಗೆ ಹಣವಿಲ್ಲದೆ ಮೂರು ತಿಂಗಳು ಗತಿಸಿದವು. ಈಗ ನಿರ್ಣಯ ಪುರಾಣಿ(ಗುರು)ಯು "ಹಸಿರು ಹೊದಿಕೆ ಹೊದ್ದು ಈ ಪುರದ ಓಣಿಯೊಳ್" (೪೭೬) ಸಂಚರಿಸಿದ. ಬಳಿಕ "ಅನ್ನ ವಸ್ತ್ರವನುಳಿದು, ಏನಾದರೂ ನೀಡಲು" ಸೆರೆಮನೆಯಲ್ಲಿರುವ ಚೆನ್ನಮ್ಮನಿಗೆ ಭಿಕ್ಷೆ ಕೇಳೆಂದು ಶಿಷ್ಯನಿಗೆ ಹೇಳಿ ಕಳಿಸಿದ. ಚಿಟನೀಸನ ಸಹಾಯದಿಂದ ಶಿಷ್ಯನು ಮನೆಯೊಳಗೆ ಹೋಗಿ, ಎದುರಾದ ಮಡಿವಳನಿಗೆ "ನಿಮ್ಮವ್ವೆಯರ ಕರದಿ ಅನ್ನವಸ್ತ್ರವನುಳಿದು. . . . . . . ಏನಾದರೂ ಕೊಡಿಸು" (೪೭೭) ಎಂದು ಕೇಳಿದನು. "ಒಳಮನೆಯಲ್ಲಿ ಬಂದು ಭೋಜನವ ಮಾಡಿದರೆ ಕೊಡುತ್ತಾರೆ, ಇಲ್ಲದಿರೆ ಕೊಡರು" ಎಂದು ಅವನು ಉತ್ತರಿಸಿದ. ಬರಿಗೈಯಿಂದ ಹಿಂದುರುಗಿದ ಶಿಷ್ಯನನ್ನು ನೋಡಿ "ಜಡರಿಗೆ ಉಣಿಸಿ ನಿನ್ನನ್ನು ಚೆನ್ನಾಂಬೆ ಮರೆತಿದ್ದಾಳೆ" ಎಂದು ಗುರು ನೊಂದು ನುಡಿದ. ಆಮೇಲೆಯೂ ಸರಕಾರ ಚೆನ್ನಮ್ಮನಿಗೆ ಖರ್ಚಿಗಾಗಿ ಹಲವು ತಿಂಗಳು ಹಣ ನೀಡಲಿಲ್ಲವೆಂದು ಈ ಕೃತಿ ತಿಳಿಸುತ್ತದೆ.

ಗಮನಿಸಬೇಕಾದ ವಿಷಯವೆಂದರೆ, ಸೋತ ಚೆನ್ನಮ್ಮ ಸೆರೆಯಿಂದ ಮುಕ್ತಳಾಗಲು, ಆದರೆ ಬೈಲಹೊಂಗಲದಲ್ಲಿ ಗೃಹಬಂಧಿ ಮಾತ್ರ ಆಗಲು, ಕಂಪನಿ ಸರಕಾರದಿಂದ ಅವಳಿಗೆ ಜೀವನಾಂಶದ ಹಣ ಲಭಿಸಲು, ತಾನೇ ಕಾರಣನೆಂದು ನಿರ್ಣಯ ಪುರಾಣಿ (ಗುರು) ಈ ಕೃತಿಯಲ್ಲಿ ಪರೋಕ್ಷವಾಗಿ ಹೇಳಿಕೊಂಡಿದ್ದಾನೆ. ಇದರಿಂದ ಇವನಿಗೂ ಕಂಪನಿ ಸರಕಾರಕ್ಕೂ ಒಳ್ಳೆಯ ಸಂಬಂಧವಿರಬಹುದೆನಿಸುತ್ತದೆ.

ಚೆನ್ನಮ್ಮನ ಆಡಳಿತದ ಬಗ್ಗೆ ಮೆಚ್ಚುಗೆ ಇದ್ದರೂ ಇವನು ಒಂದೆರಡು ಸಲ (ದತ್ತಕ ಪ್ರಕರಣ, ಅಮ್ಮೂರಿಯ ಜಂಗಮಾರಾಧನೆ) ಅಸಮಾಧಾನ ವ್ಯಕ್ತಪಡಿಸಿದ್ದಾನೆ.

ಚೆನ್ನಮ್ಮ ಯುದ್ಧದಲ್ಲಿ ಸೋತ ಬಳಿಕ ಅರಮನೆ ಕಟ್ಟಡಕ್ಕೆ ಒದಗಿದ ದುಸ್ಥಿತಿ ಮತ್ತು ಅದರ ಪುನರುಜ್ಜೀವನಕ್ಕಾಗಿ ನಿರ್ಣಯ ಪುರಾಣಿ(ಗುರು) ವ್ಯಕ್ತಪಡಿಸಿದ ಸದಾಶಯಗಳು ಈ ಪುರಾಣದಲ್ಲಿ ಹೀಗೆ ದಾಖಲಾಗಿವೆ: ಶಿಷ್ಯನಿಗೆ ಗುರುವು "ಹಾಳುಬಿದ್ದರಮನೆಯಂ ತೋರಿಸಿ" (೪೮೬೩ ರ ಮುಂದಿನ ಕಂದ ಪದ್ಯ ೧೧)ದನೆಂದು ಒಮ್ಮೆ ಪ್ರಸ್ತಾಪಿಸಲಾಗಿದೆ. ಇನ್ನೊಮ್ಮೆ, ಹಾಳಾಗಿರುವ "ಈ ಸಂಸ್ಥಾನಮಂ ಬೆಳೆಸಿ, ನಾನುರೆ ಬೆಳೆವೆನೆಂದು ತನ್ನೊಳಗೆ ತಾಂ ತಿಳಿದು, ತಳಹದೇ ಹೊಂಗಲ್ಲಿನಿಂ ಕಿತ್ತೂರಿಗೈಯ್ತಂದು, ತನ್ನವರೆನಿಪ ವಳಸಂಗದವರಾಲಯದಲ್ಲಿ ಎಂದಿನಂದದಿ ನಿಂದು, ಮಾಘ ಕೃಷ್ಣಾಷ್ಟಮಿಯೊಳರಮನೆಯಂ ಪೊಕ್ಕು, ನಸುನಕ್ಕು, ಇಕ್ಕೆಲದೊಳಿಟ್ಟಿರ್ದ ಕಟ್ಟಿಗೆಗಳೊಟ್ಟಿಲವನುರೆ ನಿಟ್ಟಿಸಿ, ಮಲಮಲನೆ ಮರುಗಿ, ಮನದೊಳುರೆ ಕರುಣಮುದಿಸಿ, ಈ ಅರಮನೆಯನಿನ್ನುರೆ ಬಿಚ್ಚಿಸಬಾರದು, ದೀಪವನುರೆ ಹಚ್ಚಿಸಿ, ಈ ಸಂಸ್ಥಾನಮಂ ಪೆರ್ಚಿಸುವೆ ನಾನೆಂದು ತನ್ನೊಳ್ ತಾನೆ ನಲಿದುಲಿದು, ಮತ್ತಮೀಗಳೇ ಪೆರ್ಚಿಸಲಾಗದು, ಇನ್ನು ಮುಂದುರೆ ಬರುವ ೧೭೫೦ನೆಯ ಸರ್ವಧಾರಿ ಸಂವತ್ಸರದಲ್ಲಿ ಈ ಅರಮನೆಗೆ ದೀಪ ಹಚ್ಚಿಸಿ, ಪೆರ್ಚಿಸಿ, ಸರ್ವರಿಂ ನಿರ್ಣಯ ಪುರಾಣಿಯೆನಿಪನಿವನಹುದಹುದೆನಿಸಿಕೊಳುವೆ ನಾನೆಂದು ತನ್ನೊಳಗೆ ತಾನೆ ನಲಿನಲಿಯುತ್ತಿರ್ದುದಂ ಬಲ್ಲವರೆ ಬಲ್ಲರಲ್ಲದೆ ಅರಿಯರಥಮರರಿಯರು" ಎಂದು ಹೇಳಲಾಗಿದೆ. (೪೮೮೯ ರ ಮುಂದಿನ ಗದ್ಯ). ಇದರಿಂದ ಶಿಷ್ಯನಿಗೆ ಈ ಪುರಾಣವನ್ನು ಹೇಳಿದ ಗುರುವು (ಗರಗದ ಮಡಿವಾಳಪ್ಪ?) ಕಿತ್ತೂರ ಸಂಸ್ಥಾನ ಪುನರುಜ್ಜೀವನಗೊಳ್ಳಬೇಕೆಂಬ ಆಶಾವಾದಿಯಾಗಿದ್ದನೆನಿಸುತ್ತದೆ.

* * *

ಕಿತ್ತೂರು ರಾಣಿ ವೀರಮ್ಮ

ನಿರ್ಣಯ ಪುರಾಣ ಬಾಲವಿಧವೆ ರಾಣಿ ವೀರಮ್ಮನ ಬಗೆಗೆ ಒಂದಿಷ್ಟು ಅನುಕಂಪ ತೋರುತ್ತ ಮುಂದುವರಿದಿದೆ. ಈ ಪುರಾಣದಲ್ಲಿ ಇವಳನ್ನು ಪ್ರಸ್ತಾಪಿಸುವ ಪಠ್ಯಭಾಗಗಳು ಹೀಗಿವೆ:

೧. ಪದ್ಯ ೩೧೦೬

೨. ಪದ್ಯ ೩೪೯೯ರ ಮುಂದಿನ ೧೧ ಷಟ್ಪದಿಗಳ ಪತ್ರ

೩. ಪದ್ಯ ೪೨೩೫ರ ಮುಂದಿನ ಡಂಗುರ ಸಾಹಿತ್ಯ

೪. ಪದ್ಯ ೪೫೭೬-೪೫೮೨ ವರೆಗಿನ ಭಾಗ

೫. ಪದ್ಯ ೪೮೨೭ರ ಮುಂದಿನ ವಿಸ್ತಾರನಾಮಾ ಪತ್ರ

೬. ಪದ್ಯ ೪೮೫೨-೪೮೫೩ ಮತ್ತು ಮುಂದಿನ ೧೧ ಕಂದಪದ್ಯ

೭. ಪದ್ಯ ೪೮೮೯ರ ಮುಂದಿನ 'ಕಿತ್ತೂರ ಸಂಸ್ಥಾನದ ತ್ರಿಕಾಲಜ್ಞಾನ'

೮. ಪದ್ಯ ೪೮೭೦ರ ಮುಂದಿನ ಆಶೀರ್ವಾದ ಪತ್ರ

ಈ ಪಠ್ಯ ಭಾಗಗಳನ್ನು ಆಧರಿಸಿ ವೀರಮ್ಮನ ಜೀವನದ ಘಟನೆಗಳನ್ನು ಹೀಗೆ ಕ್ರಮಗೊಳಿಸಿಬಹುದಾಗಿದೆ.

೧. ವೀರಮ್ಮನ ಮದುವೆ-ಶಕೆ ೧೭೪೫ ಸುಭಾನು ಸಂವತ್ಸರ.

೨. ಶಿವಲಿಂಗರುದ್ರಸರ್ಜನ ಅನಾರೋಗ್ಯ - ಶಕೆ ೧೭೪೬ ತಾರಣ ಸಂವತ್ಸರ ಜ್ಯೇಷ್ಠ-ಆಷಾಢ.

೩. ಶಿವಲಿಂಗರುದ್ರಸರ್ಜನ ಮರಣ - ಶಕೆ ೧೭೪೬ ತಾರಣ ಸಂವತ್ಸರ ಭಾದ್ರಪದ ಬಹುಳ.

೪. ಬ್ರಿಟಿಶರೊಂದಿಗೆ ಯುದ್ಧ-ಸೋಲು-ಶಕೆ ೧೭೪೬ ತಾರಣ ಸಂವತ್ಸರ ಮಾರ್ಗಶಿರ.

೫. ವೀರಮ್ಮ ಪ್ರಥಮ ಋತುಮತಿಯಾದುದು - ಶಕೆ ೧೭೪೬ ಮಾಘಶುದ್ಧ.

೬. ಬೇಬರ್ ಸಾಹೇಬನು ಸವಾಯಿ ಮಲ್ಲಸರ್ಜನನ್ನು ಪದಚ್ಯುತಗೊಳಿಸಿದುದು - ಶಕೆ ೧೭೪೬ ಫಾಲ್ಗುಣ ಬಹುಳ ಪ್ರತಿಪದೆ.

೭. ಚೆನ್ನಮ್ಮ ಬೈಲಹೊಂಗಲದಲ್ಲಿ ಅದ್ದೂರಿಯ ಜಂಗಮಾರೋಗಣೆ ಜರುಗಿಸಿದುದು- ಶಕೆ ೧೭೪೯ ಸರ್ವಜಿತ ಶ್ರಾವಣ.

ವೀರಮ್ಮನಿಗೆ ನೇರ ಇಲ್ಲವೆ ಪರ್ಯಾಯವಾಗಿ ಸಂಬಂಧಿಸಿದ ಮೇಲಿನ ಘಟನೆಗಳಲ್ಲಿ ಮೊದಲಿನ ನಾಲ್ಕು ಕಿತ್ತೂರಿನಲ್ಲಿ, ಆಮೇಲಿನ ಮೂರು ಬೈಲಹೊಂಗಲದಲ್ಲಿ ಜರುಗಿವೆ.

ಪದ್ಯ ೪೮೭೦ರ ಮುಂದಿನ "ಆಶೀರ್ವಾದ ಪತ್ರ"ದಲ್ಲಿ "ಶ್ರೀಮದ್ವಿದ್ವಜ್ಜನವಿಲೋಲ ಶಿವಲಿಂಗರುದ್ರಸರ್ಜನೀ ಶಾಲಿವಾಹನ ಶಕದ ೧೭೪೫ನೆಯ ಸುಭಾನು ಸಂವತ್ಸರದಲ್ಲಿ ಸಲ್ಲೀಲೆಯಿಂ ಮಹೋತ್ಸವದಿಂದ ನಿನ್ನನುರೆ ಮದುವೆಯಾಗಿ, ತಾನುರೆ ಬೀಗಿ, ನಿನ್ನಂ ತಾಗದೆ ಇರಲಾಗಿ" ಎಂಬ ಪಠ್ಯವಿದ್ದು, ಮದುವೆಯಾದರೂ (ಋತುಮತಿ ಯಾಗಿರಲಿಲ್ಲವಾಗಿ) ದಾಂಪತ್ಯ ಸಂಬಂಧ ಏರ್ಪಡಲಿಲ್ಲವೆಂಬ ಸೂಚನೆಯಿದೆ.

ಪದ್ಯ ೪೮೯೯ ಮುಂದಿನ "ಕಿತ್ತೂರ ಸಂಸ್ಥಾನದ ತ್ರಿಕಾಲಜ್ಞಾನ"ದಲ್ಲಿ "೧೭೪೬ನೆಯ ತಾರಣಾಹ್ವಯ ಹಾಯನದಲ್ಲಿ ಮಾಧವಜೇಷ್ಠಾಷಾಢ ಮಾಸದೊಳ್ ಪೂರ್ವ ದುಷ್ಕರ್ಮದೊದವಿನಿಂದಾಮಯ (=ರೋಗ)ವಾವರಿಸಿ ಬಳಲುತ್ತಿರ್ದುದು" ಎಂಬ ಪಠ್ಯವಿದ್ದು, ಇದರಿಂದ ಗಂಡನಾದ ಶಿವಲಿಂಗರುದ್ರಸರ್ಜನಿಗೆ ಮದುವೆಯಾದ ಮರುವರ್ಷವೇ ಕ್ಷಯರೋಗ ತಗುಲಿತೆಂದು ತಿಳಿದುಬರುತ್ತದೆ. ಇಲ್ಲಿಯೇ "ತದೇವ ಸಂವತ್ಸರದ ಭಾದ್ರಪದ ಬಹುಳದೊಳಳಿದಿರ್ದಂ" ಎಂಬ ಪಠ್ಯವು ಅದೇ ವರ್ಷದಲ್ಲಿ ವೀರಮ್ಮ ವಿಧವೆಯಾದಳೆಂದು(ಮದುವೆಯಾದ ಒಂದು ವರ್ಷದಲ್ಲಿ) ತಿಳಿಸುತ್ತದೆ.

ಬಳಿಕ ಮಾರ್ಗಶೀರ್ಷದಲ್ಲಿ ಸೋತ ಪರಿಣಾಮ ಅತ್ತೆಯೊಂದಿಗೆ ಬೈಲಹೊಂಗಲದಲ್ಲಿ ಗೃಹಬಂಧಿಯಾದ ಅವಳು, ಅದೇ ವರ್ಷದ ಮಾಘಮಾಸದಲ್ಲಿ ಋತುಮತಿಯಾದಳು. ಹೀಗೆ ಮದುವೆಯಾಗಿ ೨ ವರ್ಷದೊಳಗೆ ಗಂಡನನ್ನು ಕಳೆದುಕೊಂಡ ಅವಳು, ಗಂಡಸತ್ತ ೬ ತಿಂಗಳೊಳಗೆ ಋತುಮತಿಯಾದ ದುರ್ದೈವಿಯೆನಿಸಿದಳು.

ಶಿವಲಿಂಗರುದ್ರಸರ್ಜನು "ತಾಯಿಯಿರೆ ಪತ್ನಿಯಿರೆ ನೀಡಿಸಿಕೊಳ್ಳದೆ ಇರ್ದು1 ನಾಯಿಯೊಲಿಹ ದಾಸಿಯ ಹಸ್ತದಿಂದ" (೩೧೦೬) ಊಟಕ್ಕೆ ನೀಡಿಸಿಕೊಳ್ಳುತ್ತಲಿದ್ದನೆಂಬುದನ್ನು ನೆನೆದರೆ, ವೀರಮ್ಮನಿಗೆ ಇರುವಷ್ಟು ಕಾಲವೂ ಗಂಡನೊಂದಿಗೆ ಸಂತೋಷದಿಂದ ಬಾಳುವುದು ಸಾಧ್ಯವಾಗಲಿಲ್ಲವೆನಿಸುತ್ತದೆ. ಹೀಗಿದ್ದೂ "ಪೂರ್ವದುಷ್ಕರ್ಮದಿಂ ತಿಳಿಯದಳಿಯುತ್ತಿರ್ದನುರ್ವಿಪ ಶಿವಲಿಂಗರುದ್ರಸರ್ಜಂ ನಿಜಾಂಗನೆಯಿಂದ ಅಳಿಯದುಳಿದಂ" (೩೪೯೯-೯) ಎಂಬ ಮಾತು ಅವಳ ಪತಿಭಕ್ತಿಗೆ ನಿದರ್ಶನವೆನಿಸಿದೆ. ನಿರ್ಣಯಪುರಾಣ ಬರೆಯಲಿರುವ ಪತ್ರವನ್ನು ಮೊದಲು ವಿಧವೆ ವೀರಮ್ಮ, ಆಮೇಲೆ ಚೆನ್ನಮ್ಮ ನೋಡಬೇಕೆಂಬ ಅಭಿಪ್ರಾಯವನ್ನು ಚೆನ್ನಮ್ಮ "ಶಿರಸ್ಸಿರಲಾಗಿ ಮೊಣಕಾಲಿಗೆ ಪಟ್ಟವೇ?" (೪೮೯೯ ರ ಗದ್ಯ) ಎನ್ನುತ್ತ ನಿರಾಕರಿಸುವುದನ್ನು ನೋಡಿದರೆ, ಗಂಡನ ಮನೆಯಲ್ಲಿ ಇರುವಷ್ಟು ಕಾಲ ವೀರಮ್ಮ ವಿನೀತಳಾಗಿಯೇ ಬಾಳಿದಳೆನಿಸುತ್ತದೆ. ಬೈಲಹೊಂಗಲ ಸೆರೆಮನೆಯಲ್ಲಿ ಋತುಮತಿಯಾದ ವೀರಮ್ಮ

ಅಲ್ಲಿ ಮೂರುವರ್ಷ ವಾಸವಾಗಿದ್ದು ಅಸುನೀಗಿದಳೆಂಬುದನ್ನು ನೆನೆದರೆ, ಅವಳು ಸುಮಾರು ೧೫ನೆಯ ವಯಸ್ಸಿಗೆ ನಿಧನಳಾದಳೆಂದು ಹೇಳಬೇಕಾಗುತ್ತದೆ.

ನಿರ್ಣಯಪುರಾಣೆಯು "ಅನ್ಯಾಯದಿಂದೀ ಕಿತ್ತೂರ ನಾಡನಾಳುತಿರ್ದ ಶಿವಲಿಂಗರುದ್ರಸರ್ಜಾಹ್ವಯ ಮಹೀವರನಂ ಒರೆಸೊರಸಿ ನಿಂದೊರೆಸುತ್ತಂ ಮರೆಸುತ್ತಂ" ತಾನು ಕಾಲಕಳೆಯುವುದಾಗಿ ಹೇಳುವನಾದರೂ "ತತ್ಸತ್ಯಾದಿಯಾದ ಕಾದಲೆಯರನುರದೆ ಒರೆಸದೆ ಮರೆಸದೆ ಬಲ್ಪೆಚ್ಚಿಸದೆ ಮಚ್ಚಿಸದೆ ಸ್ವೇಚ್ಛೆಯಿಂ ಹೊರಗುರೆ ಹೊರಡದವೋಲ್ ಬಲ್ಗಾವಲವೆನಿಸುತ್ತ ಕಾಯುತ್ತ" ಇರುವೆನೆನ್ನುವುದನ್ನು ನೋಡಿದರೆ, ಅರಮನೆಯ ಕಾದಲೆ(=ಹೆಂಡತಿ) ಮೊದಲಾದ ಸ್ತ್ರೀ ಪರಿವಾರದ ಬಗ್ಗೆ ಅವನಿಗೆ ಅನುಕಂಪೆಯಿದ್ದಿತೆನಿಸುತ್ತದೆ. ಅದಕ್ಕಾಗಿಯೇ ಅವನು ವಿಧವೆ ವೀರಮ್ಮ ಋತುಮತಿಯಾಗುತ್ತಲೇ ಅವಳ ದುರ್ದೈವಕ್ಕೆ "ಮಲಮಲ ಮರುಗಿ ಮನಕರಗಿ" (೪೮೬೯ ಗದ್ಯ) ಪರಿತಪಿಸುತ್ತಾನೆ. ಇದಕ್ಕಿಂತ ಗಮನಾರ್ಹ ಸಂಗತಿಯೆಂದರೆ ಸತ್ತಿರುವ ಶಿವಲಿಂಗರುದ್ರಸರ್ಜ ಶರಣನೊಬ್ಬನ ಶರೀರದಲ್ಲಿ ವೀರಶಿವಲಿಂಗರುದ್ರಸರ್ಜ ಹೆಸರಿನಿಂದ ಪ್ರವೇಶ ಪಡೆದು, ವೀರಮ್ಮನಿಗೆ ಪುತ್ರಸಂತಾನ ನೀಡುವನೆಂದೂ, ಕಿತ್ತೂರು ಸಂಸ್ಥಾನ ಮತ್ತೆ ಬೆಳಗುವುದೆಂದೂ ಈ ಕಾವ್ಯದಲ್ಲಿ ೫ ಸಲ (೩೪೯೯ ರ ಮುಂದಿನ ಷಟ್ಪದಿ, ೪೨೩೫ ರ ಡಂಗುರ, ೪೫೭೬-೪೫೮೨, ೪೮೫೨-೫೩ ಮತ್ತು ಮುಂದಿನ ೧೧ ಕಂದಪದ್ಯ, ೪೮೭೦ ರ ಗದ್ಯ) ಕಾಲಜ್ಞಾನ ನುಡಿಯುತ್ತಾನೆ. ಈ ಅಸಂಭವನೀಯ ಹೇಳಿಕೆಯನ್ನು ಕಿತ್ತೂರು ಸಂಸ್ಥಾನ ಹಾಳಾಗದೆ ಭವಿಷ್ಯತ್ತಿನಲ್ಲಿ ಬೆಳೆಯಬೇಕೆಂಬ ಒಂದು ಆಶಯವನ್ನಾಗಿ ಇಟ್ಟುಕೊಳ್ಳಬಹುದು.

* * *

ಗೆಜ್ಜಿ ಮಹಾಂತಮ್ಮ

ಕಿತ್ತೂರು ಸ್ವಾತಂತ್ರ್ಯಯುದ್ಧಕ್ಕೆ ಸಂಬಂಧಿಸಿದಂತೆ ಮದ್ದಿನ ಸಂಗ್ರಹವನ್ನು ವಿಫಲಗೊಳಿಸಿದವರಲ್ಲಿ ಗೆಜ್ಜಿ ಮಹಾಂತವ್ವನ ಹೆಸರನ್ನೂ ಆಧುನಿಕ ಸಂಶೋಧಕರು ಆಗಾಗ ದಾಖಲಿಸುತ್ತ ಬಂದಿದ್ದಾರೆ. ಆದರೆ ನಿರ್ಣಯ ಪುರಾಣವು ಈ ವಿಷಯವನ್ನು ಪ್ರಸ್ತಾಪಿಸದೆ ಇವಳ ಇತರ ದುಷ್ಟ ಕೆಲಸಗಳನ್ನೂ, ಚರಿತ್ರೆಯನ್ನೂ ಎರಡು ಸಲ (ಪದ್ಯ ೨೯೩೬-೪೪, ೩೧೦೩-೭) ಪ್ರಸ್ತಾಪಿಸಿದ್ದು, ಈ ಪದ್ಯಗಳು ಮತ್ತು ಇವುಗಳ ಗದ್ಯಾನುವಾದ ಹೀಗಿದೆ: ಪದ್ಯ ೨೯೩೬-೪೪:

....................ಅರಮನೆಯ ದಾಸಿಯೆನಿಸಿ ।
ಮಾರನರ್ಧಾಂಗಿಯೋಲೊಪ್ಪುತಿಪ್ಪಾ [ಸತಿಯ]
ನೋರಂತೆ ಬಡಿಸಿ ....॥೨೯೩೬॥
ದಾಸಿಯೆಂದುರೆ ನುಡಿದು ಸತಿಯೆಂದು ತಿಳಿಸಿದಿರಿ
ದಾಸಿಯರಿಗುರೆ ಗಂಡನುಂಟೆ? ಎಂದುರೆ ನುಡಿಯೆ
ದಾಸಿಯವಳಲ್ಲವವಳಿಗೆ ಪತಿಯೆನಿಪನುಂಟು ಪತಿಯೊಡನೆ ಬಾಳದದುರೆ ।
ದಾಸಿಯೋಲರಮನೆಯ ರಾಣಿವಾಸದೊಳಿರ್ದು
ದಾಸಿಯರ ಸೀಮಂತಮಣಿಯೆನಿಸಿಕೊಂಡಿರ್ದು
ದಾಸಿಗಿಂ ಕಡೆಯೆನಿಸಿ ಬಡಿಸಿಕೊಂಡಳು ಎನುತ್ತಿರುವ ಗುರುವೆ ಶರಣು ॥ ೨೯೩೭॥

ಬಡಿಸಿಕೊಂಡಳದ್ಯಾತಕೆ ತಿಳಿಸೆಂದು ನಮಿಸುತಿರ
ಲಡಿಗೆಯೊಳ್ವಿಷವನುರೆ ಬೆರೆಸಿ ಕೆಲರಸುವನುರೆ
ಅಡಗಿಸಿದಳದರಿಂದ ಬಡಿಸಿಕೊಂಡಳು ಕೇಳು ಕೇಳೆಂದು ತಿಳಿಸಲೊಡನೆ
.... ॥೨೯೩೮॥

ಅವಳು ಮಾಯಾಪಾಶದಿಂದ ಗಂಡನ ಬಿಟ್ಟು
ಸುವಸನಾಭರಣಗಳಿಗುರೆ ಮಚ್ಚಿ ನಚ್ಚಿ ಪರ
ಧವನನುರೆ ಅಪ್ಪಿ ಅಧರವ ಚೆಪ್ಪರಿದ ದುರಾಚಾರವದು ಪಕ್ಷವೆನಿಸಿ ।
ತವಕದಿಂದುರೆ ದುರಾಚಾರಿಗಳೊಳಗಿಹ ದುರ್ಮ
ದವನುಳಿಸಲೋಸುಗಂ ಈ ನಾಡಿಗುರೆ ಬರಲು
.... ॥೨೯೪೦॥

ದಾಸಿಯವಳೆನಿಸುವಳೆ ಎನಲಲ್ಲವೆಲೆ ಮಗನೆ
ನ್ಯಾಸರಗಿಯೊಳಗಿರುವ ಗೆಜ್ಜಿಯವರ ಮಗಳು
ಈಶ ಶರಣಾರ್ಭಕನೆ ನಿನ್ನ ಮಾತೆಯ ತಂಗಿ ಎಂಬ ಗುರುವರನೆ ಶರಣು ॥೨೯೪೩॥

ಈ ಪದ್ಯಗಳಿಂದ ತಿಳಿದು ಬರುವ ವಿವರ ಹೀಗಿದೆ:

ಅರಮನೆಯ ದಾಸಿಯಾಗಿದ್ದ ಮಹಾಂತವ್ವ ಕಾಮನ ಮಡದಿಯಂತೆ ಚೆಲುವೆಯಾಗಿದ್ದಳು. ಇವಳನ್ನು ದಂಡಿಸಲಾಯಿತು. ದಾಸಿಯಾಗಿದ್ದ ಇವಳು ಮೂಲತಃ ಒಬ್ಬನ ಹೆಂಡತಿಯಾಗಿದ್ದಳು. ಆದರೆ ಗಂಡನೊಡನೆ ಬಾಳುವುದನ್ನು ಬಿಟ್ಟು, (ಕಿತ್ತೂರ) ಅರಮನೆಯ ದಾಸಿಯಾಗಿ, ಕ್ರಮೇಣ ದಾಸಿಯರ ಸೀಮಂತಮಣಿಯಾಗಿ ಬೆಳೆದಳು. ಕೊನೆಗೆ ಅಡಿಗೆಯಲ್ಲಿ ವಿಷ ಬೆರಸಿ, ಕೆಲವರ ಮರಣಕ್ಕೆ ಕಾರಣಳಾದಳೆಂಬ ಆರೋಪ ಹೊತ್ತು ದಂಡನೆಗೆ ಗುರಿಯಾದಳು. . . . ಇವಳು ಗಂಡನನ್ನು ಬಿಟ್ಟು, ಬಟ್ಟೆ ಆಭರಣಗಳ ದುರಾಸೆಗೆ ಬಿದ್ದು, ಅನ್ಯರ ಸಹವಾಸಕ್ಕೆ ತೊಡಗಿ, (ಕಿತ್ತೂರ) ನಾಡಿಗೆ ಬಂದಿದ್ದಳು . . . . ಇವಳು ದಾಸಿ ಮೂಲದವಳಲ್ಲ. ನೇಸರಗಿಯ ಗೆಜ್ಜಿ ಮನೆತನದ ಮಗಳು. ನಿನ್ನ ತಾಯಿಯ ತಂಗಿ-ಎಂದು ಗುರುವು ಶಿಷ್ಯನಿಗೆ ತಿಳಿಸಿದನೆಂಬುದು ಈ ಪದ್ಯಗಳ ಆಶಯ.

* * *

ಇವಳಿಂದ ವಿಷಯುಕ್ತ ಅನ್ನವನ್ನುಂಡು ಕೆಲವರು ಅಸುನೀಗಿದರೆಂದು ಈ ಪದ್ಯಗಳು ಹೇಳುವುವಾದರೂ, ಹೀಗೆ ಅಸು ನೀಗಿದವರಾರು? ಎಂಬ ವಿಷಯದ ಬಗ್ಗೆ ಮೌನತಾಳಿವೆ. ಅರಮನೆಯಲ್ಲಿ ಇಂಥ ಪಿತೂರಿಗಳು ಪ್ರಸಿದ್ಧ ವ್ಯಕ್ತಿಗಳ ವಿಷಯದಲ್ಲಿ ಜರುಗುವುದು ಸಹಜವಾದುದರಿಂದ, ಇವಳ ವಿಷದಿಂದ ಅಸುನೀಗಿದ ಘಟನೆ ಪ್ರಸಿದ್ಧವ್ಯಕ್ತಿಗಳಿಗೆ ಸಂಬಂಧಿಸಿರಬಹುದು. ಇಲ್ಲಿ ಮಹಾಂತವ್ವ ಬಡಿಸಿಕೊಂಡ ಘಟನೆ ವಿವರಿಸಿ, ತಕ್ಷಣ "ತಮ್ಮನಳಿದನೆನುತ್ತ ಕಿತ್ತೂರ ದೊರೆ ಈಗ ಉಮ್ಮಳಿಸುತುರೆ ದುಃಖಿಸುತಿರ್ಪಂ" (ಪದ್ಯ ೨೯೪೫) ಎಂದು ಮುಂತಾಗಿ ಹೇಳಿರುವುದರಿಂದ ಶಿವಲಿಂಗರುದ್ರಸರ್ಜ ದೊರೆಯ ತಮ್ಮನ (ಹೆಸರು?) ಅಕಾಲಿಕ ಮರಣಕ್ಕೆ ಇವಳೇ ಕಾರಣವಾಗಿರಬಹುದೇ? ಎಂಬ ಸಂದೇಹ ಮೂಡುತ್ತದೆ.

ಹೀಗೆ ಅರಮನೆಯ ವ್ಯವಹಾರದಲ್ಲಿಯಂತೆ ಗುರುಮನೆಯ ವ್ಯವಹಾರದಲ್ಲಿಯೂ ಮಹಾಂತವ್ವ ಹಸ್ತಚಾಚಿದ್ದಳೆಂಬ ಸೂಚನೆಗಳೂ ಈ ಕಾವ್ಯದಲ್ಲಿವೆ. ಪದ್ಯ ೩೧೦೩-೭ರಲ್ಲಿ ಇವಳ ಬಗ್ಗೆ ಇನ್ನಷ್ಟು ವಿಷಯ ಹೀಗಿದೆ :

................ನಿಸ್ನಾತನೆನಿಸುತೀ ಭೂನಾಥನು ।
.... ||೩೧೦೩||

ತನ್ನ ರೈತರನುರದೆ ತಾನೆ ಅಳಿಸುತ್ತಿರ್ದು
ತನ್ನ ರೈತರನುರದೆ ತಾನೆ ನಗಿಸುತ್ತಿರುವ
ನೆನ್ನ ಮಗನೇ ಎಂದು ನುಡಿಯುತಿಹ ಗುರುವಿನಡಿದಾವರೆಗೆ ಪೊಡಮಡುತ್ತ ।
ತನ್ನ ರೈತರನಳಿಸುವಂ ರೊಕ್ಕವ ಸೆಳೆದು
ಇನ್ನು ರೈತರನುರದೆ ನಗಿಸಿರ್ದುದಂ ತಿಳಿಸು
ಎನ್ನ ಗುರುವೇ ಎಂದು ಕೈಮುಗಿದು ನಿಂದಿರಲು ತಿಳಿಸುತಿಹ ಗುರುವೆ ಶರಣು
||೩೧೦೪||

ತನ್ನ ಅನ್ನವ ತನ್ನ ದಾಸಿಯೆನಿಪ ಮಹಾಂತೆ
ಯಿಂ ನಾಡೆ ನೀಡಿಸಿಕೊಳುತ್ತವಳನುರೆ ಬೆಳೆಸಿ
ಚೆನ್ನವ್ವೆಯೆಂಬ ತನ್ನವ್ವೆಗವಳಿಂದ ಪ್ರತ್ಯುತ್ತರವನುರದೆ ಕೊಡಿಸಿ ।
ತನ್ನವ್ವೆಯಂ ಮರುಗಿಸುತ್ತ ಬ್ಯಾರಿಡಿಸಿರ್ದು
ಚೆನ್ನಾಗಿ ದಾಸಿಯಿಂ ನೀಡಿಸಿಕೊಳುತ್ತುಂಡು
ಮನ್ನಿಸುತ ಮತ್ತೆಯವಳಂ ಬಡಿಸೆ ನಕ್ಕರುರೆ ಕೇಳೆಂಬ ಗುರುವೆ ಶರಣು ||೩೧೦೫||

ತಾಯಿಯಿರೆ ತಾಯಿಯಿಂ ನೀಡಿಸಿಕೊಳುವುದುರದೆ
ತಾಯಿಯಿಲ್ಲದಿರೆ ತಾಯಿಯೇ ತಂದ ಸತಿಯಿಂದ
ನಾಯಾಸದಿಂದೆ ನೀಡಿಸಿಕೊಂಡು ಉಂಡು ಸುಖಿಸುವುದೆಂಬ ನೀತಿಯರಿದು ।
ತಾಯಿಯಿರೆ ಪತ್ನಿಯಿರೆ ನೀಡಿಸಿಕೊಳದೆ ಇರ್ದು
ನಾಯಿಯೋಲಿಹ ದಾಸಿಯ ಹಸ್ತದಿಂದುಂಡು
ಮಾಯಾವಿಯುತನಾಗಿ ಅಳುವನೀಗೆಂದು ನಗುತಿಹರೆಂಬ ಗುರುವೆ ಶರಣು ||೩೧೦೬||

ನಿನ್ನೀ ಪುರಾಣವವ[ದೀ] ನಾಡಿನೊಳ್ ನಿಂದ
ಪುಣ್ಯದಿಂ ದಾಸಿಯಿಂ ನೀಡಿಸಿಕೊಳುವುದುಳಿದು
ತನ್ನ ಸತಿಯಿಂದೆ ನೀಡಿಸಿಕೊಳುವನೀಗ ನೀಂ ನೋಡು ನೋಡೆಂಬುತೊಡನೆ ।
ತನ್ನವ್ವೆಯೆನಿಪ ಚೆನ್ನವ್ವೆಯಾ ಹಸ್ತದಿಂ
ದಿನ್ನು ಮುಂದುರೆ ನೀಡಿಸಿಕೊಳುವನು......... ||೩೧೦೭||

ಈ ಪದ್ಯಗಳಿಂದ ತಿಳಿದು ಬರುವ ವಿವರ ಹೀಗಿದೆ: "ನಿನ್ನ ಸಂಬಂಧಿಯಾದ(?) (ಶಿವಲಿಂಗರುದ್ರಸರ್ಜನು) ತನ್ನ ರೈತರನ್ನು ಅಳಿಸುತ್ತಲಿದ್ದಾನೆ ಮತ್ತು ನಗಿಸುತ್ತಿಲಿದ್ದಾನೆ" ಎಂದು ಗುರು ನುಡಿಯಲು, "ಹಣ ಸುಲಿಯುವ ಮೂಲಕ ರೈತರನ್ನು ಅಳಿಸುತ್ತಲಿದ್ದಾನೆ; ನಗಿಸಿಕೊಳ್ಳುವುದಕ್ಕೆ

ಕಾರಣವೇನು?" ಎಂದು ಶಿಷ್ಯ ಪ್ರಶ್ನಿಸಿದ. ಆಗ ಗುರುವು, "ಶಿವಲಿಂಗ ರುದ್ರಸರ್ಜನು ತನ್ನ ದಾಸಿಯಾದ ಮಹಾಂತವ್ವನ ಕೈಯಿಂದ ಊಟ ನೀಡಿಸಿಕೊಳ್ಳುತ್ತಿರುವನು. ಅವಳನ್ನು ಅರಮನೆಯಲ್ಲಿ ವಿಪರೀತ ಬೆಳೆಸಿದನು. ರಾಣಿ ಚೆನ್ನಮ್ಮನಿಗೆ ಎದುರುತ್ತರ ಕೊಡುವಷ್ಟು ಅವಳು ಬೆಳೆದಳು. ಇದರ ಪರಿಣಾಮವಾಗಿ ಚೆನ್ನಮ್ಮ ಅರಮನೆ ಬಿಟ್ಟು ಬೇರೆ ಮನೆಯಲ್ಲಿ ವಾಸಿಸುವ ಪರಿಸ್ಥಿತಿ ನಿರ್ಮಾಣವಾಯಿತು. ಕೊನೆಗೆ (ಅನ್ನದಲ್ಲಿ ವಿಷ ಬೆರೆಸಿದುದಕ್ಕಾಗಿ) ಮಹಾಂತವ್ವನನ್ನು ದಂಡಿಸಿದನು. ಈಗ ತಾನೇ ಬೆಳೆಸಿ, ತಾನೇ ದಂಡಿಸಿದ ಶಿವಲಿಂಗುರುದ್ರಸರ್ಜನ ಈ ವರ್ತನೆಗಾಗಿ ಜನರು ನಗತೊಡಗಿದರು. ತಾಯಿ ಇದ್ದರೆ ಅವಳಿಂದ, ಇಲ್ಲದಿದ್ದರೆ ಅವಳು ತಂದ ತನ್ನ ಸತಿಯಿಂದ ಊಟ ನೀಡಿಸಿಕೊಳ್ಳುವುದು ಕೌಟುಂಬಿಕ ನೀತಿ. ಆದರೆ ಶಿವಲಿಂಗರುದ್ರಸರ್ಜನು "ತಾಯಿಯಿರೆ ಪತ್ನಿಯಿರೆ ನೀಡಿಸಿಕೊಳ್ಳದೆ ಇರ್ದುI ನಾಯಿಯೊಲಿಹ ದಾಸಿಯ ಹಸ್ತದಿಂದುಂಡು (ತಮ್ಮನ ಮರಣಕ್ಕಾಗಿ)" ಈಗ ಅಳುತ್ತಲಿದ್ದಾನೆ. ಇನ್ನು ಮುಂದೆ ಈ ಪುರಾಣದ ಪ್ರಭಾವದಿಂದ ದಾಸಿಯಿಂದ ನೀಡಿಸಿಕೊಳ್ಳುವುದನ್ನು ಬಿಟ್ಟು, ತನ್ನ ಪತ್ನಿಯಿಂದ ತಾಯಿಯಾದ ಚೆನ್ನವ್ವನಿಂದ ನೀಡಿಸಿಕೊಳ್ಳುವನು" ಎಂದು ಹೇಳಿದನು.

* * *

ಯುದ್ಧ ಪ್ರಸಂಗದ ಯಾವುದೇ ಪಿತೂರಿಯ ಬಗ್ಗೆ ಮೌನವಾಗಿರುವ ಈ ಪುರಾಣ, ಅರಮನೆಯಲ್ಲಿ ಜರುಗಿದ ಮಹಾಂತವ್ವನ ಕಾರಸ್ಥಾನಗಳನ್ನು ಮೇಲಿನಂತೆ ಹೇಳುತ್ತದೆ. ಒಟ್ಟಾರೆ, ಚನ್ನಮ್ಮನಂಥವಳಿಗೆ ಎದುರುತ್ತರ ಕೊಡುವಷ್ಟು, ಅವಳನ್ನು ಅರಮನೆಯಿಂದ ಹೊರಹಾಕಿಸುವಷ್ಟು ಮಹಾಂತವ್ವ ಬೆಳೆದು ನಿಂತಿದ್ದಳೆಂಬುದನ್ನು ನೆನೆದರೆ, ಕಿತ್ತೂರು ಸಂಸ್ಥಾನ ಕೇವಲ ಬ್ರಿಟಿಶರಿಂದಲ್ಲ, ಇಂಥ ಕುಟಿಲ ವ್ಯಕ್ತಿಗಳಿಂದಲೂ ಹಾಳಾಯಿತೆಂದು ಹೇಳಬಹುದು. ಆಧುನಿಕ ಸಂಶೋಧಕರು ಹೇಳುವಂತೆ ಮಹಾಂತವ್ವ ಮದ್ದಿನ ಸಂಗ್ರಹ ವಿಫಲಗೊಳಿಸುವ ಪಿತೂರಿ ಮಾಡಿದಳೋ, ಇಲ್ಲವೋ, ಅರಮನೆ-ಗುರುಮನೆಗಳಲ್ಲಿ ಮಾತ್ರ ವಿಧ್ವಂಸಕ ಕೃತ್ಯವೆಸಗಿದಳೆಂದು ಈ ಪುರಾಣದಿಂದ ತಿಳಿದು ಬರುತ್ತದೆ.

ವೃತ್ತಿ ಪಂಚಮಾ(>ಚಾ)ರ್ಯರು

ಕರ್ನಾಟಕದ ಶಾಸನಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ಶಬ್ದ ಪಂಚಮಠ. ಬ್ರಹ್ಮ ವಿಷ್ಣು ಮಹೇಶ್ವರ ಬುದ್ಧ ಜಿನ-ಈ ಐದು ದೇವತೆಗಳಿಗೆ ಸಂಬಂಧಿಸಿದುದೇ ಪಂಚಮಠವೆಂದು ಬಳ್ಳಿಗಾವಿ ಶಾಸನ ಹೇಳುತ್ತಿದ್ದರೂ, ಇದು ಸರಿಯಾದ ಅರ್ಥವಲ್ಲವೆಂದು ಈಗಾಗಲೇ ವಿದ್ವಾಂಸರು ತೀರ್ಮಾನಿಸಿದ್ದಾರೆ. ಈ ಪಂಚಮಠ ಶಬ್ದಕ್ಕೂ ವೀರಶೈವ ಪಂಚಾಚಾರ್ಯಪೀಠಗಳಿಗೂ ಯಾವುದೇ ಸಂಬಂಧವಿಲ್ಲವೆಂದು ತಿಳಿದು ಬಂದಿದೆ. ಹೀಗಾಗಿ ನಾನೂ ಒಳಗೊಂಡಂತೆ ಅನೇಕರು ಈ ಬಗ್ಗೆ ಚರ್ಚಿಸಿದ್ದರೂ ಇದರ ಅರ್ಥ ಇನ್ನೂ ಸ್ಪಷ್ಟವಾಗಿಲ್ಲ.[೧] ಇಂಥ ಸಂದರ್ಭದಲ್ಲಿ ನಿರ್ಣಯ ಪುರಾಣ ನೀಡುವ ವೃತ್ತಿ ಪಂಚಾಚಾರ್ಯರೇ (೪೧೭-೪೩೨) ಪಂಚಮಠವಾಗಿರಬಹುದೆನಿಸುತ್ತಿದ್ದು, ಇಲ್ಲಿ ಆ ಬಗ್ಗೆ ತಿಳಿದುಕೊಳ್ಳಬಹುದಾಗಿದೆ. ನಿರ್ಣಯ ಪುರಾಣ ಧಾರ್ಮಿಕ, ರಾಜಕೀಯ ಅಂಶಗಳ ಜೊತೆಗೆ ಸಾಮಾಜಿಕ ಅಂಶಗಳನ್ನೂ ಪ್ರತಿಪಾದಿಸುತ್ತದೆ. ಇಲ್ಲಿ ಪಂಚಮಾಚಾರ್ಯ, ವಿರಕ್ತ, ವೃತ್ತಿಪಂಚಾಚಾರ್ಯರೆಂಬ ಮೂರು ಸಂಪ್ರದಾಯಗಳ ಸ್ವರೂಪವನ್ನು-

---

೧. ಪಂಚಮಠ (ಮಾರ್ಗ-೪. ಪು. ೨೮೬ - ಎಂ. ಎಂ. ಕಲಬುರ್ಗಿ).

ಶಿಕ್ಷಾಧಿಪತಿಗಳೀ ಪಂಚಮಾಚಾರ್ಯರಾ
ಮೋಕ್ಷಾಧಿಪತಿಗಳವರೇ ವಿರತರೆನಿಪರ್ಶೆ
ದೀಕ್ಷಾಧಿಪತಿಗಳವರೇ ವೃತ್ತಿಪಂಚಮಾಚಾರ್ಯರೆಂದರುಪುತೊಡನೆ।
ದೀಕ್ಷಾಧಿಪತಿಗಳಿಂದೋಲೈಸಿಕೊಳುತಿಪ್ಪ
ಶಿಕ್ಷಾಧಿಪತಿಗಳಿಂ ವಂದಿಸಿಕೊಳುತಿಪ್ಪ
ಮೋಕ್ಷಾಧಿಪತಿಗಳೇ ಷಟ್ಸ್ಥಲಾಚಾರ್ಯರು . . . . ॥

ಎಂದು ವಿವರಿಸಲಾಗಿದೆ. ಇಲ್ಲಿ ವಿರಕ್ತರು ಪಂಚಾಚಾರ್ಯರಿಂದಲೂ ವೃತ್ತಿಪಂಚಾಚಾರ್ಯರಿಂದಲೂ ವಂದಿಸಿಕೊಳ್ಳುವರೆಂದು ಹೇಳುತ್ತ, ಈ ಮೂವರಲ್ಲಿ ವಿರಕ್ತರ ಶ್ರೇಷ್ಠತೆಯನ್ನು ಸೂಚಿಸಿದುದು ಗಮನಾರ್ಹವೆನಿಸಿದೆ. ಅದೇನೇ ಇರಲಿ. ಇಲ್ಲಿ ಮುಂದುವರಿದು ಮಠದಯ್ಯ, ಮಠಪತಿ, ಗಣಾಚಾರ್ಯ, ಶೆಟ್ಟಿ, ಗೌಡ ಇವರೇ ವೃತ್ತಿಪಂಚಾಚಾರ್ಯರೆಂದು ಹೇಳಿ, ಮುನವಳ್ಳಿಯಲ್ಲಿ ಈ ಐದೂ ಬಗೆಯವರಿರುವರೆಂದು ತಿಳಿಸಿ, ಇವರ ಕೆಲಸ ಕಾರ್ಯಗಳನ್ನು ಹೀಗೆ ವಿವರಿಸಲಾಗಿದೆ.

ಇವರಲ್ಲಿ ಶೆಟ್ಟಿಯು ಭಂಡಾರಿಯೆನಿಸುವನು. ಇವನು ತಾನೇ ನೇರವಾಗಿ ಇಲ್ಲವೆ ತನ್ನ ಪ್ರತಿನಿಧಿಯ ಮೂಲಕ ಪಟ್ಟಣದ (=ಸಂತೆಯೆ?) ಕೆಲಸ ಮಾಡಿಸುತ್ತಾನೆ. ಮುನವಳ್ಳಿಯಲ್ಲಿ ತನ್ನ ಪ್ರತಿನಿಧಿಯ ಮೂಲಕ ಮಾಡಿಸದೆ, ಇವನು ತಾನೇ ಆ ಕೆಲಸವನ್ನು ನಿರ್ವಹಿಸುತ್ತಿದ್ದಾನೆ. ಗೌಡನು ಸ್ಥಾವರಿಕನೆನಿಸುತ್ತಿದ್ದು, ಕೆಲವೊಮ್ಮೆ ಪ್ರತಿನಿಧಿಯ ಮೂಲಕ ತನ್ನ ವೃತ್ತಿಯನ್ನು ಪೂರೈಸುತ್ತಾನೆ. ಮುನವಳ್ಳಿಯಲ್ಲಿ ಮಾತ್ರ ತನ್ನ ವೃತ್ತಿಯನ್ನು ತಾನೇ ನೇರವಾಗಿ ನಿರ್ವಹಿಸುತ್ತಿದ್ದಾನೆ.

ಈ ಐದೂ ಬಗೆಯ ವೃತ್ತಿಕಾರರನ್ನು ವೃತ್ಯಾಚಾರ್ಯ, ಮಹಾವೃತ್ಯಾಚಾರ್ಯರೆಂದು ವರ್ಗೀಕರಿಸಬಹುದು. ಈ ಎರಡೂ ವಿಧದವರು ಮುನವಳ್ಳಿಯಲ್ಲಿದ್ದಾರೆ.

ವೃತ್ತಿಯೆಂದರೆ ಸ್ವಾಸ್ಥ್ಯ-ಮಾನ್ಯವೆಂದೂ, ಮಹಾವೃತ್ತಿಯೆಂದರೆ ಜೋಳಿಗೆಯೆಂದೂ ಅರ್ಥ. ವೃತ್ತಿ (ಸ್ವಾಸ್ಥ್ಯ, ಮಾನ್ಯ)ಗಿಂತ ಮಹಾವೃತ್ತಿ (ಜೋಳಿಗೆ) ಶ್ರೇಷ್ಠವಾದುದು. ವೃತ್ತಿಯಲ್ಲಿ ತಾರತಮ್ಯವುಂಟು. ವೃತ್ತಿಯಲ್ಲಿ ಅಧಮವು ಅಗಸ - ನಾಯಿದ, ಮಧ್ಯಮವು ಗೌಡ - ನಾಯಕತನ, ಉತ್ತಮವು ದೇಸಾಯಿ - ದೇಶಪಾಂಡೆತನ, ಅತ್ಯುತ್ತಮ ಸರದೇಸಾಯಿತನ, ಕಿತ್ತೂರಿನದು ಸರದೇಸಾಯಿತನವಾಗಿದೆ.

ಮಹಾವೃತ್ತಿಯಲ್ಲಿಯೂ ಉತ್ತಮ, ಅತ್ಯುತ್ತಮ, ಮಧ್ಯಮ, ಅಧಮವೆಂದು ತಾರತಮ್ಯವುಂಟು. ಹೊಟ್ಟೆ ಪಾಡಿಗಾಗಿ ಜೋಳಿಗೆ (ಮಹಾವೃತ್ತಿ) ಬಳಸುವುದು ಕನಿಷ್ಠ. ಗುರುಕೊಟ್ಟ ಜೋಳಿಗೆಯ ಬಿಡಬಾರದೆಂದು ಧರಿಸಿ ತಿರುಗುವುದೇ ಮಧ್ಯಮ. ತಿರಿದು ತಂದು ಹಸಿದವರಿಗೆ ನೀಡುವುದೇ ಉತ್ತಮ. ಮುನವಳ್ಳಿಯಲ್ಲಿ ಹೋದ ವರ್ಷ ಧರಿಸಿದ್ದ ಜೋಳಿಗೆಯೇ ಅತ್ಯುತ್ತಮ. ಈ ಅತ್ಯುತ್ತಮ ಜೋಳಿಗೆಯನ್ನು ಈಗ ಒತ್ತೆ ಇಡಲಾಗಿದೆ. ಇದು ನಿರ್ಣಯ ಜೋಳಿಗೆಯಾಗಿದೆ. ಇದನ್ನು ಧರಿಸಿ, ಡಂಗುರ ಸಾರುತ್ತ ಭಿಕ್ಷೆಗೆ ಹೋಗಬೇಕು. ಮಹಾವೃತ್ತಿ (ಜೋಳಿಗೆ)ಯು ಶ್ರೇಷ್ಠವಾದುದು. ಏಕೆಂದರೆ ವೃತ್ತಿಯು ತಳದಲ್ಲಿಯೇ ಇರುವಂಥದು. ಮಹಾವೃತ್ತಿಯು ಛಪ್ಪನ್ನದೇಶ ವ್ಯಾಪ್ತಿಯುಳ್ಳುದು. ವೃತ್ತಿಗೆ ಅಳತೆಯುಂಟು, ಮಹಾವೃತ್ತಿಗೆ ಅಳತೆಯಿಲ್ಲ.

* * *

ಇಲ್ಲಿ ಮಹಾವೃತ್ತಿಗೆ ಪರ್ಯಾಯವಾಗಿ ಜೋಳಿಗೆ ಪದ ಬಳಸಲಾಗಿದೆ. ಇವುಗಳ ಸ್ವರೂಪ ಇಲ್ಲಿ ಅಸ್ಪಷ್ಟವಾಗಿದೆ. ಆದುದರಿಂದ ಮುನವಳ್ಳಿ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಮಾಡಿ, ಈ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಬಹುದಾಗಿದೆ.

ಮಹಾವೃತ್ತಿಯೆಲ್ಲಿ 'ನಿರ್ಣಯ ಭಿಕ್ಷೆ' ಬೇಡುವುದು ಅತ್ಯುತ್ತಮವೆಂದೂ, ಮುನವಳ್ಳಿಯಲ್ಲಿ ಕಳೆದ ವರ್ಷ ಈ 'ನಿರ್ಣಯ ಭಿಕ್ಷಾ' ಕಾರ್ಯಕ್ರಮ ಜರುಗಿತೆಂದೂ, ಆಗ ಡಂಗುರ ಪದಗಳನ್ನು ಸಾರುವ ಪದ್ಧತಿ ಇರುವುದೆಂದೂ ಈ ಕೃತಿ ತಿಳಿಸುತ್ತದೆ. ಬಹುಶಃ ಇದು ಇಂದಿಗೂ ಕೊಡೇಕಲ್ಲ ಬಸವಣ್ಣನ ಸಂಪ್ರದಾಯದವರು ಆಚರಿಸುತ್ತಲಿರುವ 'ಹಂಡಿಭಿಕ್ಷಾ' ಆಚರಣೆಯೇ ಆಗಿರಬಹುದು.[೨] ಈ ನಿರ್ಣಯ ಭಿಕ್ಷಾ ಜೋಳಿಗೆಯನ್ನು ಈಗ ಒತ್ತೆ ಇಡಲಾಗಿದೆ - ಎಂದು ಪ್ರಸ್ತುತ ಪುರಾಣ ತಿಳಿಸುತ್ತಿದ್ದು, ಇದು ವಿವರಣೆಯನ್ನು ಬಯಸುತ್ತದೆ.

* * *

ಕೂಡಲಸಂಗಮದ ಕಳಸ ಉರಿದುದು

ನಿರ್ಣಯ ಪುರಾಣದ ಗುರುವು ಹಸಿರು ವಸ್ತ್ರ ಧರಿಸುವುದು, ಕಾಲಜ್ಞಾನ ಡಂಗುರ ಸಾರುವುದು ಇತ್ಯಾದಿಗಳನ್ನು ನೋಡಿದರೆ, ಇವನದು ನಾಥ (ಆರೂಢ) ಸಂಪ್ರದಾಯವೆಂಬ ಅನುಮಾನ ಮೂಡುತ್ತದೆ. ನಾನು ಬೇರೆಡೆ ಚರ್ಚಿಸಿದ ಮೇರೆಗೆ ಈ ನಾಥ ಸಂಪ್ರದಾಯದ ದೈವತ ಸಂಗಮನಾಥ. ಬಹುಶಃ ಈ ಕಾರಣದಿಂದಾಗಿಯೇ ನಿರ್ಣಯ ಪುರಾಣದಲ್ಲಿ ಕೂಡಲಸಂಗಮದ ಕಳಸಕ್ಕೆ ಉರಿ ಹತ್ತಿದ ಘಟನೆ ಎಡೆಪಡೆದಂತಿದೆ.

ಇಲ್ಲಿ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವ ಶಿಷ್ಯನು ಸಂಗಮದ ಕಳಸಕ್ಕೆ ಉರಿಹತ್ತಿದ ಘಟನೆಯ ಬಗ್ಗೆ ವಿವರಿಸಬೇಕೆಂದು ಗುರುವಿಗೆ ಬಿನ್ನವಿಸಿಕೊಳ್ಳುತ್ತಾನೆ. ಆಗ ಗುರು ನೀಡಿದ ವಿವರಣೆ (ಪದ್ಯ ೧೧೬೦-೧೧೭೧) ಹೀಗಿದೆ:

ಕೂಡಲಸಂಗಮದ ಸಂಗಮೇಶ್ವರ ದೇವಾಲಯದ ಕಳಸವು ಭವಿಷ್ಯತ್ತಿನಲ್ಲಿ ಘಟಿಸಲಿರುವ ಅಹಿತಕರ ಘಟನೆಯ ಸೂಚನೆಯೆಂಬಂತೆ ತಾನಾಗಿಯೇ ಉರಿದು ಆರುತ್ತದೆ. ಒಮ್ಮೆ ಕಿತ್ತೂರಿನ ವಳಸಂಗ ಕುಟುಂಬದವರು ದೇವರ ದರ್ಶನಕ್ಕೆ ಬಂದಿದ್ದರು. ರಾತ್ರಿ ಸಮಯ, ಸ್ವಲ್ಪ ಮಳೆ. ಒಮ್ಮೆಲೇ ಕಳಸಕ್ಕೆ ಉರಿ ಹತ್ತಿ ಆರಿತು. ಇವರು ಪೂಜಾರಿಯನ್ನು ಕರೆಸಿ ಈ ಬಗ್ಗೆ ಕೇಳಿದರು. ಈ ಮೊದಲು ಹೀಗೆಯೇ ಉರಿದು ಆರಿದುದನ್ನು ಅವರು ನೆನಪಿಸಿಕೊಟ್ಟರು. ಈ ಉರಿ ಏಕೆ ಹತ್ತುತ್ತದೆ? ಎಂಬ ಪ್ರಶ್ನೆಗೆ 'ನಮಗೆ ತಿಳಿಯದು. ಬಹುಶಃ ಚೆನ್ನಬಸವಣ್ಣ ಹುಟ್ಟಿಬರುವುದರ ಸೂಚನೆಯಿರಬೇಕು' ಎಂದು ಅವರು ಉತ್ತರ ನೀಡಿದರು. ವಳಸಂಗ ಕುಟುಂಬದವರು ಮುಂಜಾನೆ ಎದ್ದು, ಮಾಳಿಗೆ ಏರಿ ನೋಡಲು ಕಳಸದ ಕೆಲವು ಭಾಗ ಕಪ್ಪಾಗಿದ್ದಿತು.

ಇದೇ ರೀತಿ, ಈ ಹಿಂದೆ ಬಾಗಿಲುಕೋಟೆಯಲ್ಲಿ ಅಹಿತಕರ ಘಟನೆ ಜರುಗಲಿರುವ ಸೂಚನೆಯೆಂಬಂತೆ ಕಳಸ ಉರಿದಿದ್ದಿತು. ಈಗ ವಳಸಂಗ ಕುಟುಂಬದವರು ನೋಡಿದ ಉರಿಯುವಿಕೆಯು ಪೆಂಡಾರೆಯವರ ದಾಳಿಯ ಸೂಚನೆಯಾಗಿದ್ದಿತು. ಅದು : ಅನ್ಯರನ್ನು ಸುಲಿದು ಸಂಪತ್ತಿನೊಂದಿಗೆ ಎರಡು ಕುದುರೆ ಏರಿ

---

೨. ಕೊಡೇಕಲ್ಲ ಬಸವಣ್ಣ : ಒಂದು ಅಧ್ಯಯನ (ಲೇ: ಬಸವಲಿಂಗ ಸೊಪ್ಪಿಮಠ ಪು. ೩೮೦ ನೋಡಿರಿ).

ಪೆಂಡಾರೆಯವರು ನೇರವಾಗಿ ತಮ್ಮ ಊರಿಗೆ ಹೋಗದೆ, ಸಂಗಮಕ್ಕೆ ಬಂದರು. ಸಂಗಮೇಶ್ವರನ ಆಭರಣಗಳನ್ನು ಕದ್ದೊಯ್ಯಬೇಕೆಂದು ದೇವಾಲಯಕ್ಕೆ ಧಾವಿಸಿದರು. ಬಾಗಿಲು ಮುಚ್ಚಿ, ದೇವರ ಪೂಜೆ ಮಾಡುತ್ತಲಿದ್ದ ಅರ್ಚಕರನ್ನು ಬೆದರಿಸಿ, ಬಾಗಿಲು ತೆರೆಯಿಸಿ, ಒಳಗೆ ಬಂದು, ವಿಗ್ರಹದ ಮೇಲೆ ದಾಳಿ ಮಾಡಿ, ಆಭರಣಗಳನ್ನು ಸೆಳೆದುಕೊಳ್ಳತೊಡಗಿದರು. ಅರ್ಚಕರು ಸಂಗಮ ಗ್ರಾಮಕ್ಕೆ ಧಾವಿಸಿ, ಸರಕಾರದ ಅಧಿಕಾರಿಗಳಿಗೆ ಈ ಸುದ್ದಿ ತಿಳಿಸಿದರು. ಅಧಿಕಾರಿಗಳು ಬೆನ್ನಟ್ಟಿ ಬರಲು ಪೆಂಡಾರೆಯವರು ಕುದುರೆ ಏರಿ ಓಡಿದರು. ಆದರೆ ಕಣ್ಣಿಗೆ ಕತ್ತಲು ಕವಿದಂತಾಗಿ ನದಿಯ ಮಡುವಿನಲ್ಲಿ ಮರಣಾಂತಿಕವಾಗಿ ಬಿದ್ದು, ಕುದುರೆಗಳ ಸಹಾಯದಿಂದ ಈಸಿ, ಆಚೆಯ ದಡ ಸೇರಿದರು. ಸುಲಿದು ತಂದ ಸಂಪತ್ತನ್ನು ತಮ್ಮ ಧಣಿಯ ಮುಂದಿಟ್ಟು, (ಕಣ್ಣಿಗೆ ಕತ್ತಲು ಕವಿದ) ಘಟನೆಯನ್ನು ಅವನಿಗೆ ವಿವರಿಸಿದರು. ಇದೆಲ್ಲವನ್ನು ಕೇಳಿ ವಿಸ್ಮಿತನಾದ ಆ ಧಣಿಯು ದೇವಾಲಯಕ್ಕೆ ಬಂದು, ಈಡಾಡಿದ ಶಿಲಾಮೂರ್ತಿಯಿಂದ ರಕ್ತ ಸುರಿಯುತ್ತಲಿದ್ದುದನ್ನು ಕಂಡು ಆಶ್ಚರ್ಯಚಕಿತನಾಗಿ, ಗಾಯಕ್ಕೆ ಅರಿವೆ ಕಟ್ಟಿಸಿದನು. ಹೀಗೆ ಗಾಯಕ್ಕೆ ಅರಿವೆ ಕಟ್ಟಿಸಿದವರೂ ಕಟ್ಟಿದವರೂ ಈಗಲೂ ಬದುಕಿದ್ದಾರೆ. ಅವರನ್ನೇ ಕೇಳು-ಎಂದು ಗುರುವು ಶಿಷ್ಯನಿಗೆ ನುಡಿದನು.

* * *

ಇದು ನಿರ್ಣಯ ಪುರಾಣದಲ್ಲಿ ವಿವರಿಸಲಾದ ಘಟನೆ. ಇಲ್ಲಿಯ ಪವಾಡವನ್ನು ಕೈಬಿಟ್ಟು, ನಾವು ಪೆಂಡಾರೆಯವರ ದಾಳಿಯನ್ನು ಮಾತ್ರ ಒಪ್ಪಬಹುದು. ನಿಜಾಂಶವೇನೇ ಇರಲಿ, ಈಗಲೂ ಸಂಗಮೇಶ್ವರಲಿಂಗದ ತಲೆಯ ಮೇಲಿರುವ ತಗ್ಗು, ಈ ಪೆಂಡಾರೆಯವರು ಮಾಡಿದ ಗಾಯದ ಕುರುಹು ಆಗಿರಬಹುದು. ಸಂಗಮ ಪರಿಸರದ ಜನರು ಈಗಲೂ ಈ ದಾಳಿಯ ಘಟನೆಯನ್ನು ಮಾತನಾಡಿಕೊಳ್ಳುತ್ತಲಿದ್ದಾರೆ. ಇಂದು ಸಂಗಮೇಶ್ವರ ದೇವಾಲಯದ ಕಳಸವನ್ನು ತಾಲೂಕು ಸ್ಥಳವಾಗಿರುವ ಬಾಗಿಲಕೋಟೆಯ ತಹಶೀಲ ಕಚೇರಿಯ ಭಂಡಾರದಲ್ಲಿ ಸುರಕ್ಷಿತವಾಗಿಡಲಾಗಿದ್ದು, ಜಾತ್ರೆಯ ಸಂದರ್ಭದಲ್ಲಿ ಮಾತ್ರ ಅಲ್ಲಿಂದ ತರುತ್ತಾರೆ. ಹೀಗೆ ಕಳಸವನ್ನು ಕಚೇರಿಯಲ್ಲಿಡುವ ಉಪಕ್ರಮ ಬಹುಶಃ ಪೆಂಡಾರೆಯವರ ದಾಳಿಯ ಬಳಿಕ ಆರಂಭವಾಗಿರಬೇಕು.

* * *

ಹುಬ್ಬಳ್ಳಿ, ಬೈಲಹೊಂಗಲ, ಮುನವಳ್ಳಿ ಭಕ್ತರು

ಬೆಳಗಾವಿ ಜಿಲ್ಲೆಯ ಕಿತ್ತೂರು ಬೈಲಹೊಂಗಲ ಬಯಲವಾಡ ಸವದತ್ತಿ ಮೊದಲಾದ ಗ್ರಾಮಗಳಲ್ಲಿ ಜರುಗಿದ ಘಟನೆಗಳನ್ನು ವಿವರಿಸುತ್ತಿರುವ ನಿರ್ಣಯ ಪುರಾಣವು ಅನುಷಂಗಿಕವಾಗಿ ಬಾಗಿಲಕೋಟೆ, ಧಾರವಾಡ ಜಿಲ್ಲೆಗಳ ಘಟನೆಗಳನ್ನು ನಿರೂಪಿಸುತ್ತದೆ. ಇವುಗಳಲ್ಲಿ ಧಾರವಾಡ ಜಿಲ್ಲೆಯ ಹುಬ್ಬಳ್ಳಿಗೆ ಸಂಬಂಧಪಟ್ಟ ಕೆಲವು ಮಾಹಿತಿಗಳನ್ನು ಇದು ಹೀಗೆ ನೀಡುತ್ತದೆ.

ಹಳೇಹುಬ್ಬಳ್ಳಿ ಹೊಸಹುಬ್ಬಳ್ಳಿಗಳಿಗೆ ಆಗಾಗ ಜೀರ್ಣಭೂಪುರ, ನವೀನಭೂಪುರ ಶಬ್ದಗಳನ್ನು ಈ ಕೃತಿಕಾರ ಬಳಸಿದ್ದಾನೆ. ಹೀಗೆ ಗ್ರಾಮನಾಮಗಳನ್ನು ಸಂಸ್ಕೃತೀಕರಿಸುವುದು ಅಂದು ತೀರ ಸಾಮಾನ್ಯವಾಗಿದ್ದಿತು.

ಅನ್ಯಾಯ, ನ್ಯಾಯಗಳ ಪ್ರಸ್ತಾಪ ಮಾಡುತ್ತ ಗುರುವು, ಹಳೆಯ ಹುಬ್ಬಳ್ಳಿಯವರು ಅನ್ಯಾಯವಂತರು, ಹೊಸಹುಬ್ಬಳ್ಳಿಯವರು ನ್ಯಾಯವಂತರು ಎಂಬ ಪೀಠಿಕೆ ಹಾಕಿ, ಈ ಅಂಶವನ್ನು ಕೆಳಗಿನಂತೆ ಸ್ಪಷ್ಟೀಕರಿಸಿದ್ದಾನೆ.

ಹಳೆಯ ಹುಬ್ಬಳ್ಳಿಯ ಹಟಕಾರರು (ಲಿಂಗಾಯತ ನೇಕಾರರು? ಸಾಳೇರು?) ಮತ್ತು ಚಲವಾದಿಗಳಲ್ಲಿ ಪರಸ್ಪರ ಜಗಳವೇರ್ಪಟ್ಟಿತು. ಇದಕ್ಕೆ ಕಾರಣ. ಚಲವಾದಿಯು ಹಟಕಾರರ ಓಣಿ ಪ್ರವೇಶಿಸಿದುದು. ಕರೆಯ ಕಳಿಸಿದರೆ ಓಣಿಯೊಳಗೆ ಬರುವುದು ನ್ಯಾಯ, ಬರಬೇಡೆಂದು ಹೇಳಿದರೂ ಬಂದುದು ಅನ್ಯಾಯ. ಇಂಥ ಅನ್ಯಾಯದಿಂದ ಚಲವಾದಿಯು ಓಣಿಯನ್ನು ಪ್ರವೇಶಿಸಲಾಗಿ ಅವನನ್ನು ಹಟಕಾರರು ಹೊಡೆದರು. ಈ ಬಗೆಯ ಸಂದರ್ಭದಲ್ಲಿ ಜಗಳ ಬಗೆಹರಿಸುವುದೇ ನ್ಯಾಯವು. ಹೀಗೆ ಮಾಡದೆ ಗುಂಪುಗೂಡಿ ಪರಸ್ಪರರು ಜಗಳವಾಡಿದುದು ತೀರ ಅನ್ಯಾಯವೇ ಸರಿ. ಇಷ್ಟಕ್ಕೆ ನಿಲ್ಲದೆ ಮೂರ್ಖರು ರಾತ್ರಿವೇಳೆಯಲ್ಲಿ ಹೋಗಿ ಚಲವಾದಿಗಳನ್ನು ಬಡಿದರು. ಅವರ ಮನೆಗಳನ್ನು ಲೂಟಿ ಮಾಡಿದರು.

ಬಹಳೆಂದರೆ ಅನ್ಯಾಯದಿಂದ ಓಣಿ ಪ್ರವೇಶ ಮಾಡಿದ ಚಲವಾದಿಯಿಂದ ಕ್ಷಮೆ ಕೇಳಿಸಿಕೊಳ್ಳಬಹುದಿತ್ತು. ಅವನು ಕೇಳದಿದ್ದರೆ ಆ ವಿಷಯವನ್ನು ಉಪೇಕ್ಷಿಸಿ ಬಿಡುವುದೇ ಸರಿಯಾದ ಕ್ರಮವಾಗಿದ್ದಿತು. ಆದರೆ ನ್ಯಾಯ-ಅನ್ಯಾಯಗಳ ಸ್ವರೂಪ ಗೊತ್ತಿಲ್ಲವಾಗಿ ಹಳೇಹುಬ್ಬಳ್ಳಿಯವರು ಹೀಗೆ ಜಗಳವಾಡಿದರು.

ಮನುಷ್ಯ ಅನ್ಯಾಯ ಮಾರ್ಗದಲ್ಲಿರಬಾರದು, ಯಾವಾಗಲೂ ನ್ಯಾಯ ಮಾರ್ಗದಲ್ಲಿರಬೇಕು. ಹೀಗೆ ನ್ಯಾಯದಲ್ಲಿರುವವರಾಗಿದ್ದಾರೆ ಹೊಸಹುಬ್ಬಳ್ಳಿ ಭಕ್ತರು. ಇಲ್ಲಿ ಗುರು ಮೂರುಸಾವಿರದೊಡೆಯನಿದ್ದಾನೆ; ಭಕ್ತ ನಿರಂಜನಶೆಟ್ಟಿ ಇದ್ದಾನೆ. ಅನ್ಯಾಯದ ಸ್ವರೂಪವನ್ನು ತಮ್ಮಲ್ಲಿ ತಾವೇ ಅರ್ಥ ಮಾಡಿಕೊಂಡು ಇವರು ಬಾಳುತ್ತಲಿದ್ದಾರೆ. "ಚೆನ್ನಬಸವಣ್ಣನ ನೀತಿ"ಯೆಂಬ ಸರಕಾರದ ಆದರ್ಶದಲ್ಲಿ ಇವರು ಬಾಳುತ್ತಲಿದ್ದಾರೆ. ಈ "ಚೆನ್ನಬಸವ ನೀತಿ" ಹಳೆ ಹುಬ್ಬಳ್ಳಿಯಲ್ಲಿ ಮಸಳಿಸುತ್ತಲಿದ್ದರೆ, ಹೊಸಹುಬ್ಬಳ್ಳಿಯಲ್ಲಿ ಪ್ರಕಾಶಿಸುತ್ತಿದೆ.

ಈ ಹೊಸಹುಬ್ಬಳ್ಳಿಯವರು ಖಿಲ್ಲರನ್ನು ದೂರಮಾಡಿ, ಬೂದನಗುಡ್ಡದ ಬಸವನಲ್ಲಿಗೆ ನಂದಿಧ್ವಜ ಸಹಿತ ವ್ಯಾಸನತೋಳು ತರುತ್ತಾರೆ. ಸದಾಚಾರಿಗಳಾದ ಇವರಲ್ಲಿಯ ನಿರಂಜನಶೆಟ್ಟಿಯು ನಿರ್ಣಯ ಪುರಾಣದ ಭಕ್ತನಾಗಿದ್ದಾನೆ. ಈ ಪುರಾಣವನ್ನು ಕೇಳಿಸುವ-ಪ್ರತಿಮಾಡಿಸುವ ಈತನ ಚಟುವಟಿಕೆಗಳನ್ನು ಗಮನಿಸಿ, ಹಳೆಯ ಹುಬ್ಬಳ್ಳಿಯ ಮಂದಮತಿಗಳು ಬಂದು, ತಮ್ಮ ತಪ್ಪನ್ನು ತಿದ್ದಿಕೊಂಡು, ಇಂಥ ಪುರಾಣವನ್ನು ನಾವು ಎಂದೂ ಕೇಳಿರಲಿಲ್ಲ. ಕಂಡಿರಲಿಲ್ಲವೆಂದು ನುಡಿದರು. ಆಗ 'ಇನ್ನು ಮೇಲಾದರೂ ಬಡಿದಾಡದೆ ಸುಖದಿಂದ ಬಾಳಿರಿ' ಎಂದು ಹೇಳಿ ನಿರಂಜನಶೆಟ್ಟಿ ಅವರನ್ನು ಆಶೀರ್ವದಿಸಿದನು.

ಹಳೆಯ ಹುಬ್ಬಳ್ಳಿ ಹೊಸಹುಬ್ಬಳ್ಳಿಯವರಿಗಿಂತ ಬಯಲಹೊಂಗಲಿನವರು ಭಿನ್ನರು. ಇವರೂ ನ್ಯಾಯವಂತರೇ, "ಸರಕಾರದವರ ದರಕಾರಕುರೆ ತಾರದೆ, ಸರಕಾರದವರೆ ತಾವಾಗಿರುವರು." ದೊರೆಯಾಗಿರುವ ಶಿವಲಿಂಗರುದ್ರಸರ್ಜನನ್ನು ಒಲಿಸಿಕೊಂಡು ಅವರು ಬಾಳುತ್ತಲಿದ್ದಾರೆ. "ಸರಕಾರದವರೆನಿಪ ಮಠದಯ್ಯ ಮೊದಲಾದವರನುರದೆ ಬರಗೊಡರು ತಮ್ಮ ಪೇಟೆಯೊಳಗೆ." ಅಂದರೆ ಇಲ್ಲಿ ವೃತ್ತಿಪಂಚಾಚಾರ್ಯರೆನಿಸುವ ಮಠದಯ್ಯ, ಮಠಪತಿ, ಗಣಾಚಾರಿ, ಸೆಟ್ಟಿ, ಗೌಡರ ಅಧಿಕಾರ ನಡೆಯುವುದಿಲ್ಲ. "ಈ ಪುರದಂತೆ ಪುರವಿಲ್ಲವೀ ನಾಡೊಳು" ಏಕೆಂದರೆ -

ಸರಕಾರದವರಿಗಂಜದೆ ಇರುವರ್ಹೆ ಇವರು
ಸರಕಾರದರನುರೆ ಅಂಜಿಸುತ್ತಿಹರಿವರು
ಸರಕಾರವೆನಿಸಿಹರು ತಾವೆ ಅನ್ಯರಿಗೆ . . . . . .॥

ಎಂಬಂತೆ ಇವರು ಬಾಳುತ್ತಲಿದ್ದಾರೆ. ತಾವೇ ಸರಕಾರವಾಗಿರುವುದರಿಂದ ಇವರು ಈ ಗ್ರಾಮದಲ್ಲಿದ್ದ ಹಟಕಾರರನ್ನು ಊರು ಬಿಡಿಸಿದ್ದಾರೆ.

ಹೀಗೆ ಈ ಮೂರು ಊರುಗಳ (ಹಳೇ ಹುಬ್ಬಳ್ಳಿ, ಹೊಸಹುಬ್ಬಳ್ಳಿ, ಬೈಲಹೊಂಗಲ) ಭಕ್ತರ ಬಗ್ಗೆ ಬರೆಯುತ್ತ, ಇವರಲ್ಲಿ ಒಬ್ಬರು ಅನ್ಯಾಯದವರು, ಇನ್ನೊಬ್ಬರು ನ್ಯಾಯದವರು, ಮತ್ತೊಬ್ಬರು ನಿರ್ನ್ಯಾಯದವರೆಂದು ಹೇಳಿ, ಮುನವಳ್ಳಿಯವರು ಮಾತ್ರ ಈ ಮೂರು ಲಕ್ಷಣವುಳ್ಳವರೆಂದು ಈ ಪುರಾಣ ತಿಳಿಸುತ್ತದೆ.

–ಎಂ. ಎಂ. ಕಲಬುರ್ಗಿ

❖❖

ನಿರ್ಣಯ ಪುರಾಣ

(ಪತ್ರ ೭೭೬-೨೪೯) (ಪತ್ರ ೭೪೦-೭೪೧ ಕಳೆದು ಹೋಗಿದೆ)

(ಪದ್ಯ ೩೦೫೨-೩೦೬೯ ಕಳೆದು ಹೋಗಿದೆ)

(ಪದ್ಯ ೨೪೯೭-೩೧೪೨)

xxxದು ಎಡೆಯೆನಿಸುವನಕ ನಿರ್ಣದಿಂ
ದುಣ್ಣಬೇಕೈ ಹನ್ನೆರಡೆನಿಸೆ ನ್ಯಾಯದಿಂ
ರುನ್ನತೋತ್ಸವದಿಂದ ಹದಿಮೂರೆಡೆಗಳೆನಿಸಲನ್ಯಾಯನ್ಯಾಯವದುವೆ।
ಇನ್ನಧಿಕವೆನಿಸಲನ್ಯಾಯವೇ ಎನಿಸುವುದು
ಎನ್ನ ಮಗನೇ ಮುಂದಕುರೆ ಗುಣಿಸಬಾರದೆನೆ
ಇನ್ನೊಂದನುರೆ ಕೇಳ್ವೆನೆನೆ ಕೇಳು ಕೇಳೆನುತಿರುವ ಗುರುವರನೆ ಶರಣು ॥೨೪೯೭॥

ಬಡವರಾಲಯದಿ ನೀನೊರೆದವೊಲೆನಿಸು
ಎಡೆಗಳುರೆ ಬಹಳವೆನಿಸುವವು ಬಲ್ಲಿದರಲ್ಲಿ
ಬಡವ ಬಲ್ಲಿದರೆಲ್ಲರು ಒಡಂಬಡುವಂತೆ ತಿಳಿಸೆಂದು ನುಡಿಯುತೊಡನೆ।
ಪೊಡಮಡುವ ಮಗನನುರೆ ನೋಡಿ ನಲಿದಾಡು(ತಲಿ)
ಬಡವ ಬಲ್ಲಿದರನುರೆ ಪೊಡಮಡಿಸು ಇನ್ನುರದೆ
ತಡವೆನಿಸದೇ ತಿಳಿಸುತಿಹೆನೀಗ ಕೇಳು ಕೇಳೆಂಬ ಗುರುವರನೆ ಶರಣು ॥೨೪೯೮॥

ಹನ್ನೊಂದು [ಎಡೆ]ಗಳಿಗೆ ಒಂದು ಹಿರಿ ಎಡೆಯೆನಿಸಿ
ಹನ್ನೆರಡು ಎಡೆಯುಳ್ಳದೊಂದು ಪಜ್ಜೆ ಎನಿಸುತ
ಚೆನ್ನಾಗಿ ಬಾಗಿ ನೀಡುವರಿರ್ವರುರೆ ತಂದು ಕೊಡುವರೀರ್ವರನೆ xx।
ಉಣ್ಣುತಿಹ ಸಮಯದೊಳ್ ಬೇಡಿದೋಲ್ ನೀಡಿಸುವ

ನಿನ್ನ ಬಲ್ಲಿದರಲ್ಲಿ ಅಖಿಳ ಪಜ್ತೆಯೊಳುಣ್ಣು
ನಿನ್ನ ಬಡವರ ಗೃಹದಿ ಒಂದೆ ಪಜ್ತೆಯೊಳುಣ್ಣೆ xxವ ಗುರುವೆ ಶರಣು ॥೨೮೯೯॥

ಬಡವ ಬಲ್ಲಿದರೊಡಂಬಡುವಂತೆ ತಿಳಿಸಿದಿರಿ
ಬಡವರೆನಿಸುವರಾರು ಬಲ್ಲಿದರೆನಿಸವರಾರು
ತಡಮಾಡದೇ ತಿಳಿಸು ತಿಳಿಸೆಂದು ವಂದಿಸುವ [ಕಂದನ] ನೋಡಿ ನಲಿದು ।
ಬಡವರೇ ಬಲ್ಲಿದರೆನಿಸರೊಮ್ಮೆ ಬಲ್ಲಿದರೆ
ಬಡವರೆನಿಸುವರು ಕಾಲಾಂತರದೊಳೆನುತಿರ್ದು
ಬಡವ ಬಲ್ಲಿದರನುರೆ ತಿಳಿಸುತಿಹೆನೀಗ ಕೇಳೆಂಬ ಗುರುವರನೆ ಶರಣು ॥೨೯೦೦॥

ನೀನುರದೆ ಹೇಳಿದೋಲ್ ಕೇಳಿ ನಿನಗುಣಿಸುತಿಹ
ಮಾನವರೆ ಬಡವರದೇ ಬಲ್ಲಿದರೆನಿಪರು
ಸಾನುರಾಗದಿಂ ನಿನ್ನವರಿಗುರೆ ಉಣಿಸಿ ತಣಿಸಿದ ಪು x xx ದೊಳೆ ।
ನೀನುರದೆ ಹೇಳಿದೋಲ್ ಕೇಳಿ ನಿನಗುಣಸದಿ
ರ್ದಾನರದೆ ಬಲ್ಲಿದರೆನಿಸುತಿರ್ದು ಬಡವರಹ
ರೈ ನಿನ್ನವರಿಗುಣಿಸದಿಹ ಪಾಪ ಬಲದಿಂ x x x x x x x x ವಂದಿಸುವ । ॥೨೯೦೧॥

ಸಣ್ಣ ಮಗನಂ ನೋಡಿ ನಲಿದಾಡಿ ಮುಂಡಾಡಿ
ಉಣ್ಣುವುದನುರೆ ತಿಳಿಪು x x x x
x x x x x x x x x x x x x x x x x x x x
x x x x x x x x
x x x x x x x
x x x x x x x x ॥೨೯೦೧॥

x x x x x x x
x x x x x x x
x x x x x x x
x x x x x x x x x x x x
xx x x x x x x
ಎಡೆಯೊಡನೆ ಅನ್ನಮಂ ನೀಡಿಸಿದೆನ್ನೈಯೆಂಬ ಗುರುವೆ ಶರಣು ॥೨೯೦೨॥

ಹನ್ನೆರಡು ಎಡೆಯೊಡನೆ ಅನ್ನಮಂ ನೀಡಿಸುತ
ನಿನ್ನವರಿಗುಣಿಸುತ್ತ ತಣಿ x x ಕಡೆಯಲ್ಲಿ
ಹನ್ನೆರಡನೆಯ ಧಿನದಿ ನಿನ್ನವರ್ಗೆ ನೀಡಿಸುತ ನಿನಗುರದೆ ನೀಡಿಸದೆ ನಾಂ ।
ಸನ್ನುತಿಪ ಕಾಲಜ್ಞಾನವ ಬರಿಸಿ ಬಳಿಕ
ನಿನ್ನವರ ಕರದಿಂ ಲಕೂಟಿಯಂ ಮಾಡಿಸು
[ನಿ]ನ್ನ ಬಳಿಯಲ್ಲಿ ಇರಿಸಿರುವೆನೀಗುರೆ ನೋಡು ನೋಡೆಂಬ ಗುರುವೆ ಶರಣು ॥೨೯೦೩॥

ಇನ್ನಾ ಲಕೂಟಿಗಳ ಕಳಿಸುವುದಕಿಂ ಮೊದಲೆ
ಎನ್ನ ಮಗನೇ ನಿನಗೆ ಉಣ್ಣುವುದ x x ತಿಳಿಸಿ
ನಿನ್ನ ಕರದಿಂದಾ ಕಲೂಟಿಗಳ ಕೊಡಿಸುತಿಹೆನೆನಲೆರಗುತದೆ ಭಕ್ತಿಯಿಂ ।
ಎನ್ನ ಗುರುವೇ ಎಂದು ತಿಳಿಸೆಂದೆನಲು ಈ ಹೋಳಿ
ಹುಣ್ಣಿಮೆಯು ಹೋದೆರಡು x x ದಿನದೊಳಗೆನಲು
ಹುಣ್ಣಿವೆಯು ಇನ್ನು ಎರಡೇ ದಿವಸವಿರುವುದೆನಲಿರಲಿರುವ ಗುರುವೆ ಶರಣು ॥೨೯೦೪॥

ನೀನುಂಬವೋಲ್ ನಿನ್ನವರುರದೆ ಉಣ್ಣರೈ
ನೀನೊರxxಳ್ಪುವೋಲ್ ನಿನ್ನವರು ಏಳರೈ
ನೀನೆನ್ನನರ್ಚಿಸುವಹಾಂಗೆ ನಿನ್ನವರು ಅರ್ಚಿಸದೆಂದು ನುಡಿಯುತೊಡನೆ ।
ನೀನುರೆ ತ್ರಿಸಂಧ್ಯಾ ಕಾಲದೊಳ್ ಭಜಿಪಂತೆ
ಸಾನುರಾಗದಿ ತ್ರಿಕಾಲದೊಳುಣಬೇಕೆಲೆ
ಸೂನುವೆ ನಿನ್ನೊಡನೆ ನಾನುಂಬೆನುರೆ ನೋಡು ನೋಡೆಂಬ ಗುರುವೆ ಶರಣು ॥೨೯೦೫॥

ತಂದೆ ಮಗನುರೆ ಕೂಡಿ ಉಂಬುದೇನರಿದು ಹ
ನ್ನೊಂದು ಮಂದಿಯು ಕೂಡಿ ಉಂಬುವುದ ನೆರೆ ತೋರಿ
ಸಂದೇಹಮಂ ಬಿಡಿಸೆಂದು ವಂದಿಸು ಕಂದನಂ ನೋಡಿ ನಿನ್ನ ।
ತಂದೆಯೊಳ್ಛೈವರಾ ತಾಯಿಯೊಳ್ಛೈವರುರೆ
ಕಂಡನೆನಿಸುವ ನೀನೊರ್ವನೊಡಗೂಡಿ ಹ
ನ್ನೊಂದು ಮಂದಿಗಳೆನಿಸುತಿರ್ಪರೆಲೆ ಮಗನೆ ನೋಡು ನೋಡೆಂಬ ಗುರುವೆ ಶರಣು
॥೨೯೦೬॥

ಇಂತು ತಿಳಿಸುತ್ತ ಸಂಶಯವನುಳಿಸುತ್ತ ನಿ
ಶ್ಚಿಂತೆಯಿಂ ನಿನ್ನ ಈ ಒಂದೆಡೆಯೊಳಗುರದೆ
ಸಂತತಂ ಪನ್ನೊಂದು ಎಡೆಗಳುರೆ ಬೆರೆದಿxನೋಡೆಂದು ತೋರುತೊಡನೆ ।
ತಾಂ ತವಕದಿಂ ರುದ್ರನಿಂದ ಕದಳೀಪಲಗ
ಳಂ ತರಿಸಿ ಇಷ್ಟಲಿಂಗಕ್ಕರ್ಪಿಸುತ್ತೆಂದಿನ
ನಂತೆ ಸವಿಸುತ್ತ ತಾನುರೆ ಸರಿದು ಬಳಿಕ ತಿಳಿಸು ಗುರುವೆ ಶರಣು ॥೨೯೦೭॥

ಇನ್ನು ನಾಳಿಗೆ ಅರಳಿನ ಹಿಟ್ಟನುರೆ ಮಾಡಿ
ಸೆನ್ನೊಡನೆ ನೀನುಣ್ಣಬೇಕೆಂದು ತಿಳಿಸಿ ಬಳಿ
ಕುನ್ನತೋತ್ಸದಿಂದ ರುದ್ರಪ್ಪನಿಗೆ ತಿಳಿಸಿ x x x x x
ಚೆನ್ನಾಗಿ x x x x x x
ಇನ್ನು ಅನ್ನವನುಣ್ಣಬಾರದೈ ಹೋಳಿ
ಹುಣ್ಣಿವೆಯ ಮಾಡಿ ಅನ್ನ x x ಕೆಂದು ತಿಳಿಸುತಿಹ ಗುರುವೆ ಶರಣು ॥೨೯೦೮॥

ಹೋಳಿ ಹುಣ್ಣಿಮೆಯು ನಾಳೆ ಎನಿಸುತಿರ್ಪುದೈ
ಹೋಳಿಯನುಂಬರೆಲ್ಲರು ಎಂದು ವಂದಿಸಲ್
ಹೋಳಿಗಿx ವಿಯ ದಿನದೊಳುಣಬಾರದೈ ಮರುದಿನದೊಳುಣ್ಣಬೇಕೈ ।
ಬಾಲನೇ ಎನಲದ್ಯಾಕೆಂದು ವಂದಿಸಲೊಡನೆ
ಹೋಳಿ ಹೊಲೆಯರ ಮಗಳು ಕಾಮನುರೆ ಹಾ
x x ಲ ಕಾಲಾಜ್ಞೆಯಿಂ ಕೂಡಿ ಕೆಟ್ಟಳಿದರಿರುಳಿನೊಳೆಂಬ ಗುರುವೆ ಶರಣು ॥೨೯೦೯॥

ಅವರ ಪೂರ್ವಾಪರವ ತಿಳಿಸೆಂದು ವಂದಿಸಲ್
ಕುವರನೇ ಅನುಭವ ಶಿಖಾಮಣಿ x x x
ತವಕದಿಂ ನಿನಗೀಗ. ಸಂಕ್ಷೇಪದಿಂ ತಿಳಿಸುತಿಹೆನೆಂದು ನುಡಿಯುತೊಡನೆ ।
ಅವನಿಯೊಳ್ ಕುಲಗೆಟ್ಟವನಳಿಯೆ ಕುಲಜರು
ತ್ಸವದಿಂದ ಹೋಳಿಗೆಯನುಂಬುವುದ್ಕೆxx ಯಂ
ಅವಿವೇಕತನದಿ ಮುಂದಾಗಿಯುಂಬುವರ ನಿರ್ಣಯವೆಂದ ಗುರುವೆ ಶರಣು ॥೨೯೧೦॥

ಕುಲಜರಾರೈ ಸತ್ಕುಲಜರಾರೈ ದುಷ್ಕುಲರಾರೈ
ತಿಳಿಸು ತಿಳಿಸೆಂದು x x
ಚಲುವ ಮಗನಂ ನೋಡಿ ನಲಿದಾಡಿ ಮುಂಡಾಡಿ ಕೇಳು ಕೇಳೆಂಬುತೊಡನೆ ।
ಕುಲಧಿದೈವವನೆ ಭಜಿಸುವವರೀಗ ಕುಲಜರಾ
ಕುಲದೈವವಹ ದೈವಮಂ ಭಜಿಪ
ಕುಲಜರೇ ಸತ್ಕುಲಜರೆನಿಸುತಿಹರದೆ ಕೇಳು ಕೇಳೆಂಬ ಗುರುವೆ ಶರಣು ॥೨೯೧೧॥

ಕುಲದೈವದಿಂ ಕಡಿಮೆಯಹ ದೈವಮಂ ಭಜಿಸು
xxರೆ ದುಷ್ಕುಲಜರೆಂದರುಪುತೀಗ ದು
ಷ್ಕುಲಜರೆನಿಸಿಹರು ಲಿಂಗವನಂಗದೊಳ್ ಧರಿಸಿದವರೆಂದು ನುಡಿಯಲೊಡನೆ ।
ಸಲೆ ಕರಯುಗವ ಮುಗಿದು ಸಕಲರುರೆ ತಿಳಿವಂತೆ
x x x ನೆ ತಿಳಿಸಬೇಕೆಂದು ವಂದಿಸುವ
ಮಲಹರಾತ್ಮಕ ಶರಣರಣುಗನಂ ನೋಡಿ ನಲಿದುಲಿವ ಗುರುವರನೆ ಶರಣು ॥೨೯೧೨॥

ನಿನ್ನ ನಿರ್ಣಯ ಪುರಾಣವನೋದಿ
xxxxಸುವ ಲಿಂಗಾಂಗಿಗಳು ಇನ್ನು
ಮುನ್ನಿನೋಲ್ ಹೋಳಿಯಂ ಸುಡಿಸಿದರು ಬಳಸರೈ ಎಂದುರದೆ ತಿಳಿಸಲೊಡನೆ ।
ಮುನ್ನ ಹೋಳಿಯ ಸುಡಿಸಿ ಬxxxx
xxxxತಿಳಿಸುವುದೆಂದು ವಂದಿಸುವ
ತನ್ನ ಮಗನಂ ನೋಡಿ ನಲಿದಾಡಿ ಬಳಿಕ ಬಿತ್ತರಿಪ ಗುರುವರನೆ ಶರಣು ॥೨೯೧೩॥

ಅರಿಯದವರೆನಿಸಿ xxxxxxxxxx
xxxxxxxxxx ಕಿತ್ತೂರ xxxxxx
ದೊರೆ ಪುಂಗವರನೊಡಗೊಂಡು ಹೋಳಿಯಂ xxಗಿಯುರೆ ಬಳಸುತಿರ್ದಂ ।
ತರುಣ xxxxxxxxxxxx
xx ನೊಳ್ ಬಳಸದೋಲ್ ಮಾಡಿದಿಯೆನುತ್ತ ನಗು
ತೆರಕದಿಂ ಬಿಗಿಯಪ್ಪಿ ಮುಂಡಾಡಿ ಮುದ್ದಿಸುತ್ತರುಹಿಸುವ ಗುರುವೆ ಶರಣು ॥೨೯೧೪॥

xxxxxx ನುರಹೆ ಬಳಸನ್ನೈ
ನಿನ್ನವರೆನಿಪ ಕಿತ್ತೂರ ದೊರೆಯೆನುತಿರ್ದು
ನಿನ್ನವರೆನಿಪ ಲಿಂಗಾಂಗಿಗಳು ತಿಳಿದವರು ಬಳಸರೆಂದರುಪುತೊಡನೆ ।
ಮುxxಬಳಸುವರರಿಯದಧಮರುಗ
ಳೆನ್ನ ಮಗನೇ ನೋಡು ನೋಡೆಂದು ತೋರಿ ಬಳಿ
ಕಿನ್ನು ಹೋಳಿಯ ಸುಡಿಸಿ ಬಳಸದೊಲ್ ಮಾಡು ಮಗನೆ ಎಂಬ ಗುರುವೆ ಶರಣು ॥೨೯೧೫॥

ಹೋಳಿಯಂ ನುಡಿಸಿ ಹೋಳಿಯ ಬಳಸದೆಯಿರಲ್
ಹೋಳಿಹುಣ್ಣಿಮೆಯೆಂತು ಚಂದವೆನಿಪುದು ಎನಲ್
ಹೋಳಿಯನಲಿಂಗಿಗಳು ಸುತ್ತುವರು ಲಿಂಗಾಂಗಿಗಳು ಸುತ್ತಬಾರದು ।
ಕೂಳತನದಿಂದೆ ಸುತ್ತೆ ದುಷ್ಕುಲಜರೆನಿಸುವರು
ಬಾಲನೇ ದುಷ್ಕುಲಜರಾಲಯದೊಳೆಸಗಿರ್ದ
ಹೋಳಿಗೆಯನುಂಬುವರು ದುಷ್ಕುಲಜರೆಂದು ತಿಳಿಯೆಂಬ ಗುರುವರನೆ ಶರಣು ॥೨೯೧೬॥

ಹೋಳಿಯಂ ಸುಡಿಸಿ ಹೋಳಿಯನುರದೆ ಬಳಸದೆ
ಹೋಳಿಗೆಯನುರೆ ಮಾಡಿ ಗುರುಲಿಂಗ ಜಂಗಮಕೆ
ಲೀಲೆಯಿಂ ನೀಡಿಯುಣಿಸುತ ತಣಿಸುತಿರುವ ಲಿಂಗಾಂಗಿಗಳವರಾ ।
ಆಲಯದೊಳೆಸಗಿರ್ದ ಹೋಳಿಗೆಯನುರದೆ ಸ
ಲ್ಲೀಲೆಯಿಂ ಲಿಂಗದೇವನಿಗುಣಿಸಿ ತಣಿಸುತಿಹ
ಪಾಲಾಕ್ಷರೂಪರೇ ಕುಲಜರ ಗುರುಗಳೆನಿಪರೆಂಬ ಗುರುವರನೆ ಶರಣು ॥೨೯೧೭॥

ಹೋಳಿಯಂ ಸುಡಿಸದೆ ಹೋಳಿಯಂ ಬಳಸದೆ
ಹೋಳಿ[ಗೆಯನು] ಮಾಡಿ ಗುರುಲಿಂಗ ಜಂಗಮಕೆ
ಲೀಲೆಯಿಂ ನೀಡಿಯುಣಿಸುತ್ತಿರುವ,ಲಿಂಗಾಂಗಿಗಳೆ ಸತ್ಕುಲಜರವರಾ ।
ಆಲಯದೊಳೆಸಗಿರ್ದ ಪೂರ್ಣ ಗರ್ಭಾದಿಯಂ
ಲೀಲೆಯಂ ಲಿಂಗಕ್ಕರ್ಪಿಸಿ ಸೇವಿಸುತ್ತಿರ್ಪ
ಬಾಲ ಶಶಿಧರ ರೂಪರೇ ಸತ್ಕುಲಜರ ಗುರುಗಳು ಎಂಬ ಗುರುವೆ ಶರಣು ॥೨೯೧೮॥

ಹೋಳಿಯಂ ಸುಡಿಸುತ್ತ ಹೋಳಿಯಂ ಬಳಸುತ್ತ
ಹೋಳಿಗೆಯ [ಮಾಡಿ]ಕೊಂಡುಣುತಿರ್ಪ
ಖೂಳರೇ ಅನ್ನಿರ್ಣಯದವರ ವರxxದೊಳುಂಬುವವರ ನಿರ್ಣಯದ ಚರರ್‍ಯೆ ।
ಬಾಲನೇ ಎನಲು ಹೊಡಮಡುತುರದೆ ಭಕ್ತಿಯಿಂ
ಕೇಳುತಿಹನಿನ್ನೊಂದನಂದು ವಂದಿಸ ನಗುತ
ಕೇಳು ಕೇಳೆಲೆ ಮಗನೆಯೆಂದೊಳಗೆ ಕುಳಿತು ಥಳಥಳಿಸುತಿಹ ಗುರುವೆ ಶರಣು ॥೨೯೧೯॥

ಮಂದಿಯೋಳ್ ಮುಂದಾಗಿ ಮಾಡಿಕೊಂಡುಣುತಿರ್ದು
ಮಂದಿಯೋಲ್ ಕಾಮನಂ ನೋಡಿ ನಲಿದಾಡಿ ಮಿಗೆ
ಮಂದಿಯೋಲ್ ಕಾಮನೊಡನೆ ಹೋಳಿಯನೆ ಸುಟ್ಟು ಬೂದಿಯನಿರದೆ ಬಳಸಿ ।
ಮಂದಿಯನ್ನೋಡುತಿಹ ಲಿಂಗಾಂಗಿಗಳ ಮನೆಯೊ
ಳಿಂದು ಎಂದಿನೊಲುಂಬುವವರಾರು ತಿಳಿಸೆನಲ್
ಕಂದನೇ ಅವರೆ ನಿನ್ನವರು ನಿರ್ಣಯದಿ ನಡೆವವರೆಂಬ ಗುರುವೆ ಶರಣು॥೨೯೨೦॥

ಈಗೆನ್ನ ಸಂಶಯ ಪೋಗುವೋಲರುಹಿದಿರಿ
ಶ್ರೀಗುರುವೆ ಕರುಣದಿಂ ಸಲಹೆಂದು ವಂದಿಸುತ
ಕೈಗಳಂ ಮುಗಿದು ನಿಂದಿರಲು ನಿನ್ನಿಷ್ಟಮಂ ಪೇಳೆಂದು ನಿರವಿಸುತಿರೆ ।
ಈಗ ಈ 'ನಾಡದೊರೆ'ಯನುಜನಳಿಯೆ xರಲೇ
ಸಾಗಿಸಿದ ಕಾಮನಂ ತಾಂ ನೋಡದೆ ಸುಡಿಸಿ
ಭೂಗತನೆನಿಸಿ ಹೊರಳಿ ಅಳುತಿಹನವನ ಸುಮ್ಮಿಸೆನಲುಲಿವ ಗುರುವೆ ಶರಣು ॥೨೯೨೧॥

ಅವನನುರೆ ಸುಮ್ಮಿಸುವ ಮಗನಹುದು ನೀನೆಲೆ
ಕುವರನೇ ಇನ್ನು ಅನ್ನವನುರದೆ ಉಣ್ಣುತಿರ್ದು
ತವೆ ಬೆಳೆದು ನಿರ್ಣಯ ಪುರಾಣವರ್ಧನ ಕಾಲಜ್ಞಾನದ ಲಕೂಟಿಯ ।
ಅವನ ಬಳಿಗುರೆ ಕಳಿಸಿ ಅವನ ದುಃಖವನುಳಿಸಿ
ಅವನವರನಿಲ್ಲಿಗುರೆ ಬರಿಸಿ ನೀನುರೆ ಪೋಗಿ
ಅವನನುರೆ ನೋಡದೆ ಅವನವರ ನೋಡೀಗೆಂದುಲಿವ ಗುರುವೆ ಶರಣು ॥೨೯೨೨॥

ಮುಂದೆ ತನ್ನಯ ಕಂದನಂ ಎತ್ತಿಕೊಂಡವಂ
ಬಂದು ನಿನಗುರೆ ವಂದಿಸುವ ಸಮಯದೊಳ್ ನೋಡು
ಕಂದನೇ ನೀನೀಗ ನೋಡಬಾರದು ಎಂದು ತಿಳಿಸುತಿಹ ಗುರುವಿನಡಿಗೆ ।
ವಂದಿಸುತ ಈಗಿಂತು ತಿಳಿಸುವರೆ ಎನೆ ನಗುತ
ಮಂದಿಗುರೆ ತಿಳಿಸೆ ನಾಂ ನಿನಗೆ ತಿಳಿಸುತ್ತಿರ್ಪೆ
ನೆಂದು ಮುಂಡಾಡಿ ಮುದ್ದಿಸುತೊಳಗೆ ಕುಳಿತು ಥಳಥಳಿಸುತಿಹ ಗುರುವೆ ಶರಣು॥೨೯೨೩॥

ಉಣ್ಣುವುದನುರೆ ತಿಳಿಸುತಿಹೆನು ನೀನೀ ಹೋಳಿ
ಹುಣ್ಣಿವೆಯು ಹೋಗಲೆಂದುಲಿದಿರ್ದಿರರುಹಿಸೆನ
ಲನ್ನಮಂ ಮೂವತ್ತೆರಡು ಭೋಜ್ಯಗಳಿಂದ ಉಂಬುವರದೆ ನ್ಯಾಯವೈ ।
ಅನ್ನಮನೊಂದು ತುತ್ತಂ ಹೆಚ್ಚಿಗುಂಬುವದ
ದನ್ಯಾಯ ನ್ಯಾಯವೈ ಒಂದು ತುತ್ತಂ ಕಡಿಮೆ
ಯುಣ್ಣುವದದೇ ನಿರ್ಣಯವೆಂದುದೆ ತಿಳಿಸಿ ನಲಿದುಲಿವ ಗುರುವೆ ಶರಣು ॥೨೯೨೪॥

ಅನ್ಯಾಯ ನ್ಯಾಯ ನಿರ್ಣಯ ನ್ಯಾಯ ವಿಮುಕ್ತ
ನನ್ನಿಯಹ ನಿರ್ಣಯ ಪುರಾಣಮಂ ಬೆಳೆಸುತ್ತ
ಅನ್ಯಾಯ ನ್ಯಾಯ ನಿರ್ಣಯನ್ಯಾಯದಿನುಂಬ ಮಗನಹುದು ನೀನೆನುತ್ತ ।
ಅನ್ನಮುಮನೀಗಳೇ ಉಣ್ಣಬಾರದು ನೀನು
ಎನ್ನ ಮಗನೇ ಎಂದು ತಿಳಿಸುತೊಡನೇ ಸುಧಾ
ಅನ್ನಮುಮನುಣುತಿರ್ಪ ಸಮಯಮಂ ಕೇಳು ಪೇಳುವೆನೆಂಬ ಗುರುವೆ ಶರಣು॥೨೯೨೫॥

ಇಂದುರದೆ ಮಿಕ್ಕ ಹುಣ್ಣಿವೆಯೆನಿಸಿಕೊಳುತಿರ್ಪ
ಇಂದುಹಾರಂ ಮಗನೆ ಇಂದುವೇ ಕರಿಯೆನಿಪು
ದಿಂದು ಮೊದಲಾಗಿ ಇನ್ನೇಳಹೋರಾತ್ರೆಗಳ ಕಳೆಯೆಂದು ತಿಳಿಸಿ ಬಳಿಕ ।
ಮುಂದೆ ಬರುದಿಂದುವಾರದೊಳುದಯ ಸಮಯದೊ
ಳೆಂದಿನೊಲು ಲಿಂಗಾರ್ಚನೆಯ ಮಾಡಿ ತವಕದಿಂ
ಅಂದು ಅನ್ನವನುಂಬುವದಕ ಪ್ರಾರಂಭಿಸೆಂದರುಹಿಸುವ ಗುರುವೆ ಶರಣು ॥೨೯೨೬॥

ಅಲ್ಲಿತನಕುರೆ ಫಲಾಹಾರಿಯೆನಿಸುತ್ತಿರ್ದು
ಸಲ್ಲೀಲೆಯಿಂದ ನಿನ್ನಿಷ್ಟಲಿಂಗವ ಭಜಿಸು
ತಲ್ಲಿರುವ ನಿನ್ನಷ್ಟಾಂಗರುಹಿ ಬೇಕಾದ ಫಲಗಳನುರದೆ ತರಿಸಿಕೊಳ್ಳೈ ।
ಮಲ್ಲಸರ್ಜನ ಮಹೀಪಾಲಾತ್ಮಜಾತ ಭೂ
ವಲ್ಲಭಂ ಶಿವಲಿಂಗರುದ್ರ ಸರ್ಜಂ ಕೇಳಿ
ಇಲ್ಲಿಗುರೆ ಕಳಿಸೆ ತನ್ನವರನವರಿಗೆ ತಿಳಿಸುತಿಳಿಸೆಂಬ ಗುರುವೆ ಶರಣು ॥೨೯೨೭॥

ಬಂದವರಿಗುರೆ ತಿಳಿಸು ತಿಳಿಸು ನೀನೇ ಗುರುವೆ
ಎಂದು ವಂದಿಸುವ ಕಂದನ ನೋಡಿ ನಲಿದಾಡಿ
ಅಂದು ನಾ ನಿನ್ನೊಳಗೆ ನಿಂದು ನಿನ್ನಿಂದ ತಿಳಿಸುವೆನು ನೀನಂಜ ಬ್ಯಾಡೈ ।
ಎಂದಭಯಮುಮನಿತ್ತು ಕುಮಟಿಗೆಯ ಸಂಗನಿಂ
ವಂದಿಸಿಕೊಳ್ಳುತ್ತ ನೀನೀ ಪಡಿಗಳಂ ತೋರಿ
ಸಂದೇಹಮಂ ಬಿಡಿಸೆನುತ್ತರುಹಿ ಮತ್ತಮರುಹಿಸುವ ಗುರುವರನೆ ಶರಣು ॥೨೯೨೮॥

ಈಗಳೇ ಪೋಗದೈ ಅವನ ಸಂಶಯಮುರದೆ
ಪೋಗುವುದು ಮುಂದೆ ನಿನ್ನಿಂದ ಎಂದುರೆ ತಿಳಿಸಿ
ಯಾಗನಕ ಇಂದು ಲಿಖಿಸಿರ್ದ ಪಡಿಗಳನುರದೆ ತೋರಿ ವಿಸ್ಮಯನ ಬೀರಿ ।
ಬೀಗಿಸುತ ಬಾಗಿಸುತ ಫಲಗಳಂ ತರಿಸುತನು
ರಾಗದಿಂ ನಿನ್ನಿಷ್ಟಲಿಂಗಕರ್ಪಿಸಿಸವಿದು
ಶ್ರೀಗುರು ಧ್ಯಾನದಿಂದೀ ಏಳು ರಾತ್ರಿಗಳ ಕಳೆಯೆಂಬ ಗುರುವೆ ಶರಣು ॥೨೯೨೯॥

ಇನಿತನುರೆ ತಿಳಿಸಿ ಲಿಂಗಭಜಿಯಿಸನಿತರೊಳನು
ನಯದಿನೊಂದು ನಾರಿಕೇಳಮಂ ತಂದು
ಘನತವಕದಿಂದೊಡೆದು ಹೆರಜಿ ಬೆಲ್ಲವ ಬೆರೆಸಿ ಇಟ್ಟು ಪೊಡಮಟ್ಟು ನಿಂದ ।
ಅನಘ ಶಿವಭಕ್ತನಿವನೆನಿಸಿದ ಉಪಾಸಿ ರು
ದ್ರನ ನೋಡಿ ನಲಿದಾಡಿ ಕುಮಟಗಿಯ ಸಂಗಪ್ಪ
ನಕೂಡಿಕೊಂಡು ನಾಳೆಗೆ ಬರುವುದೆಂದು ಸೂಚಿಸಿದ ಗುರುವೆ ಶರಣು ॥೨೯೩೦॥

ಸಂಗಪ್ಪನೊಡಗೊಂಡು ಬರುವುದೆಂದುರೆ ಕಳಿಸಿ
ಸಂಗಪ್ಪನೂರಿಗೆ ಪೋಗುತಿರ್ಪಂ ನಾಳೆ
ಪಿಂಗದೇ ಇಂದೆ ಒಡಗೊಂಡು ಕೇಳಬೇಕೆಂದು ರುದ್ರಂ ।
ಸಂಗಪ್ಪಗುರೆ ತಿಳಿಸಿ ಅವನನೊಡಗೊಂಡು ಬೆಳ
ದಿಂಗಳೊಳ್ ಬಂದು ಇನ್ನಾವ ಕದವ ತೆಗೆಸುತ ಮ
ಲಂಗಿರಲು ನೋಡಿ ಬಿಡದೆ ಏಳಿಸಿದರೆದ್ದು ಕುಳಿತಿರ್ದ ಗುರುವೆ ಶರಣು ॥೨೯೩೧॥

ಎದ್ದು ಕರಕೊಂಡು ಬಂದಿದ್ದ ರುದ್ರನ ಸೇರ
ಬುದ್ಧಿಯಂ ನೋಡಿ ನಲಿದಾಡಿ ತನ್ನೊಳ್ ತಾನೆ
ಬುದ್ಧಿಯುರೆ ಪಸರಿಸದು ನಿದ್ರಿಸುವ ಸಮಯದೊಳೆಂದುರದೆ ತಿಳಿಯುತೊಡನೆ ।
ಇದ್ದದುರೆ ಬರುವರ್‍ಯ ನಾಳಿಗೂರಿಗೆ ಪೋಗು
ತಿದ್ದದುರೆ ಪೋಗಿ ಬರುವದು ಎಂದು ಹೇಳಿ ಬಳಿ
ಕೆದ್ದು ಅವರಂ ತಿಳಿಸಿ ಮತ್ತಮುರೆ ನಿದ್ರಿಸುತ್ತರುಹಿಸಿದ ಗುರುವೆ ಶರಣು ॥೨೯೩೨॥

ಇಬ್ಬರುರೆ ಒಂದಾಗಿ ಬಂದು ನಿನ್ನಂ ಬಿಡದೆ
ಎಬ್ಬಿಸಿದರಿನ್ನು ನೀನುರೆ ನಿದ್ರಿಸಲ್ಯಾರ
ದಿಬ್ಬರಿಂ ಮೂವರಾ ಮೂವರಿಂ ಸಬ್ಬರೆನಿಸುವರಿನ್ನೆನುತ್ತ ನಗುತ ।
ಒಬ್ಬನೇ ಬರಲು ಇಬ್ಬರು ಬರಲು ಮೂವರುರೆ
ಸಬ್ಬರು ಬರಲು ನೀನುಬ್ಬಿ ತೋರಿಸುವುದೆಲೆ
ಸಬ್ಬೆರೆಯನಮಲ ಶರಣರ ಸುತನೆ ಎಂದು ಬಳಿಕರುಹಿಸುವ ಗುರುವೆ ಶರಣು ॥೨೯೩೩॥

ಇನ್ನು ನಿನ್ನೀ ಪುರಾಣಂ ಪಸರಿಸುವುದುರದೆ
ನಿನ್ನ ಭಕ್ತರು ನಿನ್ನ ಬಳಿಗೆ ಬರುತಿಹರಿನ್ನು
ಮುನ್ನಿನೋಲ್ ಮುಚ್ಚದೆ ಬಿಚ್ಚಿಯುರೆ ತೋರಬೇಕೆಂದು ನುಡಿಯುತ್ತ ಮತ್ತಂ ।
ಚೆನ್ನಾಗಿ ಬಾಗಿ ನೋಡುವರಿಗುರೆ ತೋರುವುದು
ಚೆನ್ನಾಗಿ ಬಾಗದವರಿಗೆ ತೋರಬಾರದೈ
ಚೆನ್ನಾಗಿ ಬಾಗಿಸಿದಿ ನಿನ್ನವರ ನೀನೆ ಈಗೆಂಬ ಗುರುವರನೆ ಶರಣು ॥೨೯೩೪॥

ಆರು ಬಾಗಿದರೀಗ ತಿಳಿಸೆಂದು ವಂದಿಪ ಕು
ಮಾರನಂ ನೋಡಿ ನಲಿದಾಡಿ ಕೇಳೈ ಕಿ
ತ್ತೂರೊಳಗೆ ಕಲ್ಲಮಠದೊಡೆಯರವರಂಟಿ ಇರ್ದರಮನೆ[ಯ ದಾ] xx ಸಿ ಎನಿಸಿ।
ಮಾರನರ್ಧಾಂಗಿಯೋಲೊಪ್ಪುತಿಪ್ಪಾ [ಸತಿಯ] x x
ನೋರಂತೆ ಬಿಡಿಸಿ ಮಲಮೂತ್ರವ ಬಿಡಿಸುತವಳ
ನಾಮೈದು ಉಪಚರಿಪ ಮಗ[ಸಹು] xx ದು ನೀನೀಗೆನುತ್ತಿರುವ ಗುರುವೆ ಶರಣು॥೨೯೩೬॥

ದಾಸಿಯೆದುರೆ ನುಡಿದು ಸತಿಯೆಂದು ತಿಳಿಸಿದಿರಿ
ದಾಸಿಯರಿದುರೆ ಗಂಡನುಂಟೆ ಎಂದುದೆ ನುಡಿಯೆ
ದಾಸಿಯವಳಲ್ಲವವಳಿಗೆ ಪತಿಯೆನಿಪನುಂಟು ಪತಿಯೊಡನೆ ಬಾಳದುರದೆ ।
ದಾಸಿಯೋಲರಮನೆಯ ರಾಣಿವಾದೋಳಿರ್ದು
ದಾಸಿಯರ ಸೀಮಂತ ಮಣಿ ಎನಿಸಿಕೊಂಡಿರ್ದು
ದಾಸಿಗಿಂ ಕಡೆಯೆನಿಸಿ ಬಡಿಸಿಕೊಂಡಳು ಎನುತ್ತಿರುವ ಗುರುವರನೆ ಶರಣು ॥೨೯೩೭॥

ಬಡಿಸಿಕೊಂಡಳದ್ಯಾತಕೆ ತಿಳಿಸೆಂದು ನಮಿಸುತಿರ
ಲಡಿಗೆಯೊಳ್ವಿಷವನುರೆ ಬೆರೆಸಿ ಕೆಲರಸುವನುರೆ
ಅಡಗಿಸಿದಳದರಿಂದ ಬಡಿಸಿಕೊಂಡಳು ಕೇಳು ಕೇಳೆಂದು ತಿಳಿಸಲೊಡನೆ ।
ಬಡವನಾನ್ಯೆ ಎನ್ನ ಬಿನ್ನಪವನವಧರಿಪು
ದಡಿಗೆಯೊಳ್ವಿಷ ಬೆರೆಸಿ ಕೆಲವರಸುವನುರೆ
ಅಡಗಿಸುವುದಳಿಂದ ಆಗುವುದೆ ಎನಲು ನಲಿದುಲಿಯುತಿಹ ಗುರುವೆ ಶರಣು ॥೨೯೩೮॥

ಅಸುವನುರೆ ಅಡಗಿಸುವನವನೆ ಶಿವನಹುದಹುದು
ಅಸುವನುರೆ ಪಸರಿಸುವನವಗೆ ಶಿವನಹುದಹುದು
ಅಸುವೇ ಶಿವಂ ಶಿವನೆ ಅಸು ಇದಕೇನು ಸಂಶಯವಿಲ್ಲವೆಂಬುತೊಡನೆ ।
ಅಸುವೆ ಮಾಯಾಪಾಶವಿಯುಕ್ತವೆನಿಸುತಿರೆ
ಪಶುವೆನಿಸುತಿಹುದು ಮಾಯಾಪಾಶಮಂ ಪರಿದ
ಪಶುವೆನಿಸುವಸುವೆ ಪಶುಪತಿಯೆನಿಪುದು ಬಳಿಕ ರುದ್ರಸುತ ಗುರುವೆ ಶರಣು ॥೨೯೩೯॥

ಅವಳು ಮಾಯಾ ಪಾಶದಿಂ ಗಂಡನಂ ಬಿಟ್ಟು
ಸುವಸನಾಭರಣಗಳಿಗುರೆ ಮಚ್ಚಿ ನಚ್ಚಿ ಪರ
ಧನವನುರೆ ಅಪ್ಪಿ, ಅಧರವ ಚೆಪ್ಪಿರಿದ ದುರಾಚಾರವದು ಪಕ್ಷವೆನಿಸೆ।
ತವಕದಿಂದುರೆ ದುರಾಚಾರಿಗಳೊಳಗಿಹ ದುರ್ಮ
ದವನುಳಿಸಲೋಸುಗಂ ಈ ನಾಡಿಗುರೆ ಬದಲು
ಕುವರನೇ ನಿನ್ನಿಂದ ಅನುಭವಿಸಿರುವಳೆಂಬ ಗುರುವೆ ಶರಣು ॥೨೪೦॥

ನಾಡೊಳಿರುವವರು ಮಾಡಿದ ಪಾಪವೆಲ್ಲವೀ
ನಾಡನಾಳುವಗೆ ಘಟಿಸುವುದೆಂದುರದೆ ತಿಳಿದ
ಪ್ರೌಢನೇ ನೀನೀ ನಾಡಿಗುರೆ ಬಂದು ಸಲೆ ನಿಂದು ನಿರ್ಣಯವ ತಿಳಿಸಿ।
ನಾಡೆ ಪರಕಿಸದೆ ನಾನುರೆ ಪ್ರೌಢನೆಂದಿರ್ದ
ಮೂಢತನದಿಂ ನಾಡಿಗಾ ಪಾಪಮುರೆ ಘಟಿಸಿ
ನಾಡೆ ಕಳೆದಂ ತನ್ನ ತಮ್ಮನಂ ಈ ನಾಡದೊರೆಯೆಂಬ ಗುರುವೆ ಶರಣು ॥೨೪೧॥

ವಿರತನೆನಿಸಿರ್ದು ವಿರತರ ನಡತೆಯಲ್ಲಿರದೆ
ಸರಕಾರದವರಂತೆ ಹೊಕ್ಕನುಂ ಕೊಳುತ
ನೆರೆ ಸೊಕ್ಕಿ ಮಿಕ್ಕ ವಿರತರನುರದೆ ಲೆಕ್ಕಿಸದೆ ಇರ್ದಾ ದುರಾಚಾರದೊಳ್।
ಬರೆದಿರ್ದ ಕಥನದಿಂ ಕಲ್ಲಮಠದೊಡೆಯನುರೆ
ದೊರೆದನೀ ದಾಸಿಯೆನಿಸುವ ಮಹಂತೆಯ ಸಂಗ
ಕುರದೆ ನೀನೀ ನಾಡಿಗುರೆ ಬಂದ ಕಾರಣದೊಳೆಂಬ ಗುರುವರನೆ ಶರಣು ॥೨೪೨॥

ದಾಸಿಯೊಡಗೂಡಿಯಪಮಾನಕ್ಕೆ ಪಕ್ಕಾಗಿ
ದೇಶಿಕೇಂದ್ರರ ನೋಡಿ ಸಿಗ್ಗಾಗುತಿರ್ದ ಪರ
ದೇಶಿಯೆನಿಸುವ ನಿನ್ನ ಗುರುಸಿದ್ಧ ದೇಶಿಕಂ ಮುನ್ನಿನೋಲೆಂದು ನುಡಿಯೆ।
ದಾಸಿಯವಳೆನಿಸುವಳೆ ಎನಲಲ್ಲವೆಲೆ ಮಗನೆ
ನ್ಯಾಸರಗಿಯೊಳಗಿರುವ ಗೆಜ್ಜೆಯವರ್‍ ಮಗಳು
ಈಶ ಶರಣಾರ್ಭಕನೆ ನಿನ್ನ ಮಾತೆಯ ತಂಗಿ ಎಂಬ ಗುರುವರನೆ ಶರಣು ॥೨೪೩॥

ಅದರಿಂದ ಗುರುಸಿದ್ಧ ದೇಶಿಕಂ ಮುನ್ನಿನೋಲ್
ಪದುಳದಿಂ ಪೂಜ್ಯನೆನಿಸಿರುವನೆಂದರುಪಿ
ವಿದಿತನೆನಿಸುವ ಕಲ್ಲುಮಠದೊಡೆತನಂ ಪೋಪುದೆಂದರುಹಿಸುತ್ತ ಮತ್ತಂ ।
ಮದನಹರ ಶರಣರಣುಗನೆ ನಿನ್ನನುರೆ ನೋ
ಡಿದ ಮಾತ್ರದಲ್ಲಿ ಮತ್ತಂ ಬರ್ಪುದೆಂದರುಪಿ
ಅದಿದೆನ್ನದೆಲ್ಲಾ ಸಮಯದಲಿ ಭಕ್ತಿಯೊಳಿರುವನೆಂಬ ಗುರುವೆ ಶರಣು ॥೨೯೪೪॥

ತಮ್ಮನಳಿದನೆನುತ ಕಿತ್ತೂರ ದೊರೆ ಈಗ
ಉಮ್ಮಳಿಸುತಂದೆ ದುಃಖಿಸುತ್ತಿರ್ಪನೆಲೆ ಮಗನೆ
ಸಮ್ಮುದದಿ ನಿರ್ಣಯ ಪುರಾಣವರ್ಧನ ಕಾಲಜ್ಞಾನದ ಲಕೂಟಿಯು ।
ತಮ್ಮವರ ಕರದಿಂದ ಒಡೆಸಿಯುದೆ ನೋಡಿ ಬಳಿ
ಕುಮ್ಮಳಿಕೆಯಂ ಬಿಟ್ಟು ಕಟ್ಟಕ್ಕರದೊಳಿರುವ
ನೊಮ್ಮನದಿ ನಿನ್ನಿಂದ ಮುಂದೆಯಂದುರೆ ತಿಳಿಸುತಿರುವ ಗುರು ವರನೆ ಶರಣು ॥೨೯೪೫॥

ಮುಂದೆ ನಿನ್ನಿಂದ ನಿರ್ಣಯವನುರೆ ತಿಳಿವುತಾ
ನಂದದಿಂದೀ ನಾಡನಾಳುತಿರ್ಪಂ ಮಗನೆ
ಇಂದು ನೀ ಬಂದಿರ್ದುದಂ ಕೇಳಿಯುಳಿದು ಇನಿತರೆ ಶೋಕಿಸಿದ
ತಂದೆಯಡಿಗುರೆ ನಮಿಸಿ ಶಿವಲಿಂಗರುದ್ರ ಸ
ರ್ಜಂ ಧುರಂಧರನೆನಿಪನ್ನೆ ಲಿಂಗಪೂಜೆಯೊಳ್
ಮಂದಮತಿಯುತರಂತೆ ಶೋಕಿಸಿದನ್ನಾಕೆನಲ್ ನಲಿದುಲಿವ ಗುರುವೆ ಶರಣು ॥೨೯೪೬॥

ನಿನ್ನಂತೆ ಲಿಂಗಪೂಜಕನೆನಿಸನಹುದು
ನಿನ್ನಂತೆ ಲಿಂಗಜಂಗಮ ಭಕ್ತನಹುದಹುದು
ನಿನ್ನಂತೆ ಅನ್ಯಾಯನ್ಯಾಯ ನಿರ್ಣಯಗಳನುಗೆ ತಿಳಿದಿಲ್ಲವೈ ।
ತನ್ನ ನಾಡೊಳಗಿರುವ ಲಿಂಗ ಜಂಗಮ ನಿಕರ
ದಿಂ ನಾಡೆ ಕೈಮುಗಿಸಿಕೊಳ್ಳುತಿರ್ಪನೆಂದರುಹೆ
ಎನ್ನ ಗುರುವೇ ಇದಂ ಬಿಡಿಸಬೇಕೆನಲುಲಿದುಲಿಯುತಿಹ ಗುರುವೆ ಶರಣು ॥೨೯೪೭॥

ನಿನ್ನ ನಿರ್ಣಯ ಪುರಾಣಂ ಪಸರಿಸಿದ ಬಳಿಕ
ನಿನ್ನ ಮುಖದಿಂ ಕೇಳಿ ಸಂತೋಷಮಂ ತಾಳಿ
ತನ್ನೊಳಗೆ ತಾನೇ ತಿಳಿದು ಬಿಡುತಿಹನೀಗ ಬಿಡನೆಂದು ತಿಳಿಸುತೊಡನೆ ।
ಮುನ್ನಿನೋಲಿನ್ನು ಅನ್ಯಾಯದಿಂದಾಚರಿಸ
ನೆನ್ನ ಮಗನೇ ನಿನ್ನಾಚರಣೆಯಂ ಕೇಳಿ
ತನ್ನೊಳಗೆ ತಾನೆ ತಿಳಿವನ್ನೆ ಮೆಲ್ಲಮೆಲ್ಲನೆಯೆಂಬ ಗುರುವೆ ಶರಣು ॥೨೯೪೮॥

ಅನ್ಯಾಯ ನ್ಯಾಯ ನಿರ್ಣಯ ನ್ಯಾಯಗಳರಿಯ
ದನ್ಯಾಯ ನ್ಯಾಯದಿಂ ಲಿಂಗಪೂಜಕನೆನಿಸಿ
ತನ್ನ ತಮ್ಮರ ನೀಗಿ ಅತ್ತು ಅತ್ತುರೆ ಬ್ಯಾಸತ್ತು ಬಾಗಿರುವನೀಗೈ ।
ಇನ್ನು ನೀನೀ ಕಾಲಜ್ಞಾನದ ಲಕೂಟಿ
ಯಂ ನಾಡೆ ಕಳಿಸೆ ತನ್ನೊಳ್ ತಾನೆ ತಿಳಿದು ಜವ
ದಿಂ ನಿನ್ನೆಡೆಗೆ ತನ್ನವರನುರದೆ ಕಳಿಸುತಿಹನೆಂಬ ಗುರುವರನೆ ಶರಣು ॥೨೯೪೯॥

ತನ್ನವರನುರೆ ಕುಳಿಸಿ ನಿನಗುರದೆ ಬಿನ್ನೈಸಿ
ತನ್ನ ಪುರಕುರೆ ಬರೆಸಿ ನಿನ್ನಂ ಪರಂಬರಿಪ
ನನ್ನ ಮಗನೇ ನೀನಿಂದು ಬಲುದಿವಸಮುರೆ ನಿಲ್ಲದೆ ಸಲ್ಲೀಲೆಯಂ ।
ನಿನ್ನ ದೈವದ ಮುಖದಿ ಬಿಳ್ಕೊಂಡು ಹೊರಡು ನಿ
ನ್ನಯ ಬಯಲವಾಡವನುತ್ಸವದಿ ಪೊಕ್ಕು
ಹನ್ನೊಂದು ದಿನತನಕ ಅಲ್ಲೆ ಸಲ್ಲೀಲೆಯಿಂದಿರು ಎಂಬ ಗುರುವೆ ಶರಣು ॥೨೯೫೦॥

ಅಲ್ಲಿ ಇರುವನಿತರೊಳ್ ನಿನ್ನವರೆನಿಪ ಮುನಿ
ವಲ್ಲಿಯವರುರೆ ಬಂದು ಬಿನ್ನೈಸುತಿರಲೊಡನೆ
ಎಲ್ಲರರಿವಂತೆ ನೀನುಲ್ಲಾಸದಿಂದ ಇಲ್ಲಿಗೆ ಬಂದು ನಿಂದು ಜವದಿಂ ।
ದಿಲ್ಲಿಂದ ಸೂಗೋಲಗಿರಿಗುರದೆ ಪೋಗಿ ಬಳಿ
ಕಲ್ಲಿಂದ ಮುರಗೋಡ ಭಕ್ತರಂ ನೋಡಿ ನಲಿ
ದಲ್ಲಿಂ ತಲ್ಲೂರಿಗುರೆ ಪೋಗಿ ಅಲ್ಲಿಂದ ಪೋಗೆಂಬ ಗುರುವೆ ಶರಣು ॥೨೯೫೧॥

ಮುನಿನಲ್ಲಿಗುರೆ ಪೋಗಿ ನಿನ್ನನುರವ ಪೊಗದೆ
ಅನುನಯದಿ ಪಶುಪತಿಯ ಮಡವನುರೆ ಪೊಕ್ಕು ಸ
ದ್ವಿನಯದಿಂ ದೈವದವರಿಂ ಭಕ್ತಿ ಬಿನ್ನಹವ ಕೈಕೊಂಬುತಿರುವನಿತದೊಳ್ ।
ತನಯನೇ ನಿನ್ನ ಸವದತ್ತಿಯವರುರೆ ಬಂದು
ನಿನಗುರದೆ ಬಿನ್ನೈಸಿ ಕರಕೊಂಡು ಪೋಪರೈ
ಎನುತ ಸೂಚಿಸುತ ಎನ್ನೊಳ್ ಕುಳಿತು ಥಳಥಳಿಸುತಿರ್ಪ ಗುರುವರನೆ ಶರಣು ॥೨೯೫೨॥

ಗುರುವೆ ಇನ್ನೊಂದನುರೆ ಕೇಳೆಂದು ನೀನೀಗ
ನಿರವಿಸಿದರಾಂ ಕೇಳುತಿಹೆನೆಂದು ವಂದಿಸುವ
ತರುಣನಂ ನೋಡಿ ನಲಿನಲಿದಾಡಿ ನೀನುರೆ ಕೇಳು ಕೇಳೆಂದು ನಿರವಿಸುತಿಹ ।
ಗುರುವಿನಡಿಗುರೆ ಬಾಗಿ ತಾಗಿ ಇಕ್ಕೈಗಳಂ
ನೆರೆ ಜೋಡಿಸುತ್ತಿರ್ದು ಎನ್ನ ಅತ್ತಿಗೆಯೆನಿಪ
ಸರಸಿಜಾಂಬಕಿ ಎಲ್ಲಿರ್ದಳೆನಲರಿದು ಸೂಚಿಸುತಿರುವ ಗುರುವರನೆ ಶರಣು ॥೨೯೫೩॥

ಅವರಿಗುರೆ ರೋಗವಾವರಿಸಿ ಬಲು ಜೇರೆನಿಸಿ
ಕುವರನೇ ನಿನ್ನನುರೆ ನೋಳ್ಪ ಕಾಂಕ್ಷೆಯೊಳೆ ಪ
ತ್ರವ ತನ್ನ ತಮ್ಮನಿಂ ಬರೆಸಿಯುರೆ ಕಳಿಸೆ ನೀನುರೆ ಪೋಗದಿಲ್ಲೇ
ಶಿವಶರಣರಾಜ್ಞಾಯುತನಾಗಿ ನಿಂದಿಯಾ
ಶಿವಶರಣರಾಜ್ಞಾಯುತೆ ಎನಿಸಿಯವಳುರದೆ
ಶಿವ ಪದವನೊಂದಿದಳು ಈ ಹೋಳಿಹುಣ್ಣಿಮೆಯ ಮುಂದೆಂಬ ಗುರುವೆ ಶರಣು ॥೨೯೫೪॥

ಅವಳ ಪತಿ ನಿಜಲಿಂಗನವಳಾತ್ಮಜಂ ಸದ್ಬ
ಸವನವಳ ಮಾತುಳಾನಿ ಎನಿಸುವ ರುದ್ರಾಂಬೆ
ಅವಳ ಮಾತುಗಳೆನಿಪ ಶಾಂತವೀರಾಖ್ಯರು ಶೋಕಿಸುತಂ ಮತ್ತಂ ।
ಅವಿರತಂ ಬಿಡದೆ ವಾಲ್ಯೆಸಿರ್ದ ಅತ್ತಿಗೆಯ
ತವೆ ಮರೆದು ಹೊಂಗಲದೊಳುರೆ ಕುಳಿತನೀಗೆಂದು
ಕುವರನೇ ನಿನ್ನಾಸೆಯುಳಿದು ಹೂಳಿದರು ಹುಣ್ಣಿವೆಯೊಳೆಂಬ ಗುರುವೆ ಶರಣು ॥೨೯೫೫॥

ಅವರು ನಿನ್ನಾಸೆಯಂ ಬಿಟ್ಟರೂ ನೀಂ ಬಿಡದೆ
ಸವದತ್ತಿಗುರೆ ಹೋದ ಸಮಯದೊಳವರಾಲ
ಯವ ಪೊಕ್ಕು ಅವರನುವನುರೆ ತಿಳಿದು ನಿನ್ನನುವನುರೆ ತಿಳಿಸಿ ಮಾತಾಡಿಸಿ ।
ಅವರ ಮನೆಯಲ್ಲಿಯುರೆ ನಿಲ್ಲದೇ ನಿಮಿಷ ಮ
ಠವ ಹೊಕ್ಕು ನಿಂದು ಅವರೊಡಗೊಂಡು ನಲಿದುಂಡು
ಅವಿರತಂ ಮುನ್ನಿನೋಲವರಣುಗನೆನಿಸುತಿರು ಎಂಬ ಗುರುವರನೆ ಶರಣು ॥೨೯೫೬॥

ಮುನ್ನಿನೋಲವರ ಮಗನೆನಿಸಿದ್ದಿಕೊಳುತಿರ್ದು ನೀಂ
ಮುನ್ನಿನೋಲವರ ಮನೆಯಲ್ಲಿಯುರೆಯುಣ್ಣದೆ
ಬಿನ್ನೈಸಿ ಕರಕೊಂಡು ಪೋಗಿ ನಿನ್ನನುವನರಿದುಣಿಸಿದರೆ ಉಣ್ಣು ಉಣ್ಣೈ ।
ಎನ್ನ ಮಗನೆ ಎಂದು ತಿಳಿಸಿ ಸಂಶಯವಳಿಸಿ
ಅನ್ನವನುಣುವುದಕ್ಕೆ ಪ್ರಾರಂಭಿಸುವುದಕ್ಕೆ
ಇನ್ನೈದಹೋರಾತ್ರಿಗಳು ಉಳಿದವಿಂದಿಂಗೆಂದರುಹಿಸುವ ಗುರುವೆ ಶರಣು ॥೨೯೫೭॥

ಎಂತು ಲಿಂಗಾರ್ಚನೆಯದಂತು ಲಿಂಗಾರ್ಪಣಂ
ಸಂತತಂ ಮೂರು ವ್ಯಾಳ್ಯೆದೊಳುಣ್ಣಬೇಕೆಂದು
ಅಂತರಾಂತಕರೂಪನೆನಿಪ ಗುರುವೆ ನೀವಂದು ತಿಳಿಸಿರ್ದಿರಿನ್ನು
ಸಂತಸದಿನಡುಗೆಯಂ ಮಾಡಿ ನೀಡುವರಾರು
ನೀಂ ತನಕದಿಂ ತಿಳಿಸು ತಿಳಿಸೆಂದು ವಂದಿಸುವ
ಕಂತುಹರ ಶರಣರಣುಗನ ನೋಡಿಕಲಿದುಲಿಯುತಿಹ ಗುರುವೆ ಶರಣು ॥೨೯೫೮॥

ನಿನಗೆ ಬಿನ್ನಹವನುರೆ ಮಾಡದವರಾರು ಕೇಳ್
ನಿನಗಡುಗೆಯಂ ಮಾಡಿ ನೀಡಿಯುಣಿಸದರಾರು
ನಿನಗಡುಗೆಯಂ ಮಾಡಿ ನೀಡು x x x x x ಪಟ್ಟಿರುವರ್ಯೆ
ತನಯನೇ ನೀ x'x ಮಾಡಿ ನೀನೇ ಉಂಡು
ತನಿನೇಹದಿಂದ ನಿನ್ನಯ ಭಕ್ತರಿಗೆ ತೋರೆ
ಘನ ತವಕದಿಂ ಮಾಡಿ x x x ಸುವರು ಮುಂದೆಂಬ ಗುರುವರನೆ ಶರಣು ॥೨೯೫೯॥

ನೀನೀಗ ಅಡುಗೆಯಂ ಮಾಡಿಸೆನೆಯುಂಡು
ಸಾನುರಾಗದೆ ನಿನ್ನ ಭಕ್ತರಿಗೆ ತೋರೆಂಬ
ಕಾನನಾಂತರ್ರೂಪನೆನಿಪ ಗುರುವೇ ಎಂದೆಂದು ನಾಂ ಮಾಡಿಲ್ಲವೈ ।
ನೀನೀಗ ಮಾಡಿಯುರೆ ತೋರಿ ಮಾಡಿಸು ಎಂಬ
ಸೂನುವಂ ನೋಡಿ ನಲಿದಾಡುತುರೆ ನಗುತಿರ್ದು
ನಾನೀಗ ನಿನ್ನ ಸತಿಯೊಳಗಡಗಿ ಮಾಡುವೆಂ ನೋಡೆಂಬ ಗುರುವೆ ಶರಣು ॥೨೯೬೦॥

ನಾನೀಗ ನಿನ್ನ ಸತಿಯೊಳಗಡಗಿ ಅಡುಗೆಯಂ
ಸಾನುರಾಗದಿ ಮಾಡಿ ನಿನಗುರದೆ ನೀಡುವೆಂ
ನೀನೀಗ ತಂಡುಲಾದಿಗಳನುರೆ ತಂದು ಕೊಡುಯೆಂದುರದೆ ನುಡಿಯಲೊಡನೆ ।
ಆನೇನ ತರುವನೆಲ್ಲಿಂದೆಲೇ ಮದ್ಗುರುವೆ
ನೀನೇ ದಯಾರಸವಹಿಸಿ ತಂದುಕೊಡುಯೆಂಬ
ಸೂನುವಂ ನೋಡಿ ನಲಿದಾಡಿಯುರೆ ನಗುತಿರ್ದು ನುಡಿಯುತಿಹ ಗುರುವೆ ಶರಣು
॥೨೯೬೧॥

ಆನೀಗ ನಿನ್ನ ಮಡಿವಳನ ಮನದೊಳಗಡಗಿ
ಏನನುರೆ ಬೇಕಾದುದಂ ತರಿಸಿ ಕೊಡುತಿರ್ಪೆನ್ನೈ
ನೀನವನಿಗುರೆ ಹೇಳು ಹೇಳೆಂದು ನುಡಿಯುತಿಹ ಗುರುವಿಗುರೆ ಪೊಡಮಡುತ್ತ ।
ಆನವನಿಗೇನೆಂದು ಹೇಳಲಿ ಮಹಾಗುರುವೆ
ನೀನೀಗ ತಿಳಿಸು ತಿಳಿಸೆಂದು ನುತಿಸುತ್ತಿರ್ಪ
ಸೂನುವಂ ನೋಡಿ ನಲಿದುರೆ ಕೇಳು ಕೇಳೆಂದು ಪೇಳುತಿಹ ಗುರುವೆ ಶರಣು ॥೨೯೬೨॥

ಶ್ರಾವಣದಿ ಸೂಗೋಲಗೇರಿಯೊಳಿರುತಿಹೆನೆನಲ್
ತೀವಿದಾನಂದದಿಂ ನೀನಂದು ಭಕ್ತಿಯೆಂ
ದಾವಗಂ ಅಂಬರದ ಹಿಟ್ಟು ಮೊದಲಾದುದಂ ಕೊಟ್ಟು ಕಳಿಸಿದಿ ಇಲ್ಲಿಗೆ ।
ಆ ವೇಳೆಯೊಳೆನಗನುವೆನಿಸಿಹ ಕಥದಿ
ನೀ ಊರಿನಿಂದದಂ ಹಿಂದಕುರೆ ಕಳಿಸಿದೆಂ
ಈ ವ್ಯಾಳೆಯೊಳ್ ನಿನಗೆ ಅನುವೆನಿಸಿ ಬಿನ್ನೈಸುವನ್ನೆವರಂ ಗುರುವೆ ಶರಣು ॥೨೯೬೩॥

ನೀನುರದೆ ಕಳಿಸಿದ ಪದಾರ್ಥಮಂ ಹಿಂದಕ್ಕೆ
ನಾನಂದು ಕಳಿಸಿರ್ದ ಕಥನದಿಂದನ್ಯರಿಗೆ
ಸಾನುರಾಗದಿ ತಿಳಿಸಬಾರದೆಂಬುದರಿಂದ ನಿನಗುರದೆ ತಿಳಿಸುತಿಹೆನ್ನೈ ।
ನೀನೀಗಳನುಕೂಲಿ ಎನಿಸಿ ಬಿನ್ನೈಸುತಿರ
ಲಾನುರದೆ ಕೈಕೊಂಬೆನಿಲ್ಲವೇ ಕೈಕೊಳ್ಳೆ
ನಾನೀಗ ಹೇಳಿಬಿಟ್ಟೆನು ನಿನ್ನನುವ ನೋಡೆಂಬ ಗುರುವೆ ಶರಣು ॥೨೯೬೪॥

ಅಲ್ಲಿ ಮೂವತ್ತು ದಿನ ತನಕ ಉಣಿಸುವ ವೃಷವ
ನಿಲ್ಲಿ ಹನ್ನೊಂದು ದಿನತನಕುಣಿಸಿ ಗಳಿಸಿಕೊಂ
ಡೆಲ್ಲರೊಳುರೆ ಬೆಳೆದು ಕಲ್ಯಾಣ ಪಟ್ಟಣದೊಳಿರ್ದ ಮಡಿವಳನ ಹಾಂಗೆ ।
ಇಲ್ಲಿ ನೀನುರೆ ಬೆಳೆಯಬೇಕೆಂದು ನುಡಿದು ಬಳಿ
ಕೊಲ್ಲೆನೆಂದರೆ ನಿನಗೆ ಜುಲ್ಮಿ ಇಲ್ಲೆಂದು ಮಿಗೆ
ಮೆಲ್ಲನೇ ಭಕ್ತಿಯಂ ಪುಟ್ಟಿಸುವುದೆಂದು ಬಳಿಕರುಹಿಸುವ ಗುರುವೆ ಶರಣು ॥೨೯೬೫॥

ಪುಟ್ಟಿಸುವುದಕ್ಕಿಂದ ಮೊದಲೆ ಪುಟ್ಟಿಹುದಲ್ಲಿ
ಕೆಟ್ಟವನೆನಿಪನೆಲ್ಲರಿಗೆ[ಯು] ನಿನಗೋರ್ವನಿಗೆ
ಕಟ್ಟಕ್ಕರದಿ ನೀನೇನುರದೆ ಬೇಡಿದರೂ ಕೊಡುವನೆಂದರುಪುತೊಡನೆ ।
ಕೊಟ್ಟುದಂ ಬರೆದಿಟ್ಟಿಹನೀಗ ತನ್ನಲ್ಲಿ
ಕೊಟ್ಟಹರೆ ಕೊಂಬನ್ನೆ ಕೊಡದಿರಲ್ ಕೊಡು ಎಂದು
ಸಿಟ್ಟು ಮಾಡನು ನಿನಗೆ ಎಂದೆಂದು ಕೇಳೆಂಬ ಗುರುವರನೆ ಶರಣು ॥೨೯೬೬॥

ಮನೆಯ ಖರ್ಚಿಗೆ ಕೊಟ್ಟುದಂ ತಿರುಗಿ ಕೊಡುವುದೆಲೆ
ತನಯನೇ ಮುಂದೆ ಎಂದುರೆ ತಿಳಿಸಿ ನೀನೀಗ
ಳನುನಯದಿ ಬಿನ್ನೈಸಿಕೊಳದಲ್ಲದೆ ಔತಣ ಕೊಡಗುಡಬಾರದೆ ।
ಎನುತುರದೆ ತಿಳಿಸುವನಿಂ ಖರ್ಚಿಗಿಸಕೊಂಡು
ನಿನಗೆ ಬೇಕಾದುದಂ ರುದ್ರಪ್ಪನಿಂದೆ ನ್ನಾ
ಳಿನ ಸಂತೆಯೊಳ್ ಕೇಳಿಸಿ ಇಡಿಸು ಈ ಮಠದೊಳೆಂದರುಹಿಸುವ ಗುರುವೆ ಶರಣು
॥೨೯೬೭॥

ಮುಂದೆ ಬರುವಿಂದುವಾರದಿನುದಯ ಕಾಲದೊಳ್
ಎಂದಿನೋಲ್ ಲಿಂಗಾರ್ಚನೆಯ ಮಾಡಿಯುಣ್ಣಬೇ
ಕೆಂದಿರ್ದೈ ಅಂದು ಆರಾರುಣ್ಣಬೇಕೆಂದು ತಿಳಿಸೆಂದು ವಂದಿಸಿನಿಂದಿಹ ।
ಕಂದನಂ ನೋಡಿ ನಲಿದಾಡಿ ನೀನುರೆ ಕೇಳು
ದಂದು ಆರಾರಿಲ್ಲವಾನುನೀನಿರ್ವರೇ
ಹೆಂದದಾನಂದದಿಂದೊಂದೆಡೆಯೊಳುಣ್ಣಬೇಕೆಂಬ ಗುರುವರನೆ ಶರಣು ॥೨೯೬೮॥

ಮುಂದೆ ಆರೆಡೆಯೊಡನೆ ಹನ್ನೊಂದು ಎಡೆಯೊಡನೆ
ಇಂದುಧರ ಗಣಪಜ್ತೆಯೊಳ್ ಕುಳಿತು ಉಂಬುವುದು
ಒಂದೆಡೆಯೊಳಾವೀಗ ಉಂಬುವುದನಾರಾರು ನೋಡಬಾರದು ಎನುತಿಹ ।
ಇಂದುಧರರೂಪ ಗುರುವೇ ನೀನೆ ತಿಳಿಸು ದಯ
ದಿಂದ ಅಡಿಗೆಯ ಮಾಡಿ ನೀಡಿದವರಲ್ಲಿರುವ
ದಂದು ಕೇಳುವ ಬಾಲಕನಂ ನೋಡಿ ನಲಿದು ತಿಳಿಸುತ್ತಿರುವ ಗುರುವೆ ಶರಣು ॥೨೯೬೯॥

ಮಾಡಿದವರೂ ಹೊರಗೆ ನೀಡಿದವರೂ ಹೊರಗೆ
ನಾಡೆ ಕುಳ್ಳಿರಬೇಕು ನಾನು ನೀನೀವರೇ
ಕೂಡಿ ಲಿಂಗಾರ್ಪಿತವ ಮಾಡಿಹ x x x ನುರೆ ಕರೆಯೆ ಬ x
x x x x x x ನೀಡಿಕೊಂಡುಣ್ಣ ಬೇಕೆಲೆ
ಪ್ರೌಢ ಶರಣರ ಸುತನೆ ನೀನೆ ತಿಳಿಯೆಂದು ಮುಂ
ಡಾಡಿ ಮುದ್ದಿಸಿದ ಬಳಿಕೊಳಗು x x x ಥಳಥಳಿಸುತಿಹ [ಗುರುವೆ ಶರಣು] ॥೨೯೭೦॥

[ತನ್ನಿ]ಂದ ತಾನೇ ತಿಳಿವವೋಲ್ ತಿಳಿಸುತಿ
ರ್ಪೆನ್ನ ಗುರುವೀತನಹುದೆಂದು ನುತಿಸುತ್ತಿರ್ಪ
ತನ್ನ ಮಗನಂ ನೋಡಿ ನಲಿದೆನ್ನ ಪುಣ್ಯಕೆ ಸಮಾನವಿಲ್ಲ x x x x ।
x x x ನನದಿ ಗುರು ಸುಪ್ರಸಾದಮಂ
ಚೆನ್ನಾಗಿ ಸೇವಿಸುವೆನೆಂದು ಸಲೆ ನಿಂದಿರ್ದು
ಇನ್ನು ನೀನುರೆ ತಿಳಿಹುದೆಂದು ತಿಳಿಸುತ್ತೊಳಗೆ ತೊಳಗುತಿಹ ಗುರುವೆ ಶರಣು ॥೨೯೭೧॥

ನೀಡಿದವಗುರೆ ಹೊರಗೆ ಹೋಗಿ ಕುಳ್ಳಿರಲೊಡನೆ
ನಾಡೆ ನೀಂ ಮೂವತ್ತೆರಡು ಭೋಜ್ಯಗಳನುರೆ
ಮಾಡಿಟ್ಟ ಕಟ್ಟಕ್ಕರದಿ ಯಥಾಕ್ರಮದಿ ನಿನ್ನಿಷ್ಟಲಿಂಗಕರ್ಪಿಸಿ ।
ನೀಡಿ ಕೊಡುತಿರೆ ನೀನು ನೀ[ಡೆ] ನಾಂ ಕೈಕೊಂಡು
ನಾಡೆ ಶಿವಲಿಂಗದೇವನಿಗುಣಿಸಿ ತಣಿಸಿ ಮಿಗೆ
ನೋಡಿ ಹೊರಗಿರ್ದವರ ಕರೆಯಬೇಕೆಲೆ ಮಗನೆಯೆಂಬ ಗುರುವರನೆ ಶರಣು ॥೨೯೭॥

ಮಾಡುವಾಗೇನನುಚ್ಚರಿಸುವುದು ತಿಳಿಸು ನೀಂ
ನೀಡುವಾಗೇನುಚ್ಚರಿಸುವುದು ತಿಳಿಸೆಂಬ
ಪ್ರೌಢಶಿವಶರಣ ಸುತನಂ ನೋಡಿ ನಲಿದಾಡಿ ಕೇಳು ಕೇಳೆಂಬುತೊಡನೆ ।
ಮಾಡುವರು ಮೌನದಿ ಗುರುಧ್ಯಾನದಿ ಮಾಡಿ
ನೀಡುವರು ಮೌನದಿಂ ನೀಡಿ ಅರ್ಪಿಸಿರೆಂದು
ನಾಡೆ ಪೊಡಮಟ್ಟು ಹೊರಗುರೆ ಹೋಗಬೇಕು ಈಗೆಂಬ ಗುರುವರನೆ ಶರಣು ॥೨೯೩॥

ಮುಂದೆ ಆರೆಡೆಯೊಡನೆ ಹನ್ನೊಂದು ಎಡೆಯೊಡನೆ
ಹೆಂದದಾನಂದದಿಂದುಣುವಾಗೆ ಅರ್ಪಿಸು
ತ್ತೊಂದು ತುತ್ತಂ ಸ್ವೀಕರಿಸುವನಕ ಪೊಡಮಟ್ಟಿರುವುದೆಂದು ತಿಳಿಸಲೊಡನೆ ।
ಅಂದೇಕೆ ಹಾಂಗೆ ಇನ್ನೇಕೆ ಹಿಂಗದುದೆಂಬ
ಕಂದನಂ ನೋಡಿ ನಲಿದಾಡಿ ನೀನುರೆ ಪೇಳು
ಅಂದು ನಿನ್ನವರು ಪಸರಿಸುತಿರುವರೀಗಡಗಿರುವರೆಂಬ ಗುರುವೆ ಶರಣು ॥೨೯೪॥

ನಿನ್ನವರು ಅಡಗಿರುವ ಸಮಯದೊಳ್ ನೀನಡಗಿ
ನಿನ್ನವರು ಪಸರಿಸುವ ಸಮಯದೊಳ್ ಪಸರಿಸುವು
ದೆನ್ನ ಮಗನೇ ನೀನು ಎಂದು ತಿಳಿಸುತ್ತ ಈಗಡಗಿಯೆಂಬುವದೆನುತ್ತ ।
ಅನ್ನಮಂ ಮಾಡಿಸುವುದಂ ಪೇಳುತಿರ್ಪನ್ನೈ
ಚೆನ್ನಾಗಿ ನೀನೀಗ ಕೇಳು ಕೇಳೆನುತಿರ್ದು
ತನ್ನೊಳಗೆ ತಾನೆ ನಲಿದಾಡುತಿರ್ದು ತಿಳಿಸುತ್ತಿರುವ ಗುರುವೆ ಶರಣು ॥೨೯೫॥

ಧೂಳಿ ಪಾದೋದಕವ ಸೋಸಿಯxಡಿಸುತ್ತ
ಹಾಲು ಮೊದಲಾದುದಂ ಸೋಸಿ ಮಿಗೆ ಕಾಸುತ್ತ
ಬಾಲನೇ ತಂಡುಲಾದಿಗಳನುರೆ ಹಸನಮಂ ಮಾಡಿಯುರೆ ನೋಡಿ ಹಾಕಿ ।
ಲೀಲೆಯಿಂ ಪಾಯಸವನುರೆ ಮಾಡಿ ನೀಡುತಿಹ
ಬಾಲೆಯರು ನಿರ್ಮಲಾಂಗಿಯರೆನಿಸುತಿರ್ಪದೀ
ಕಾಲದೊಳ್ ಪಾಯಸವನೇ ಮಾಡಿಸೈ ಮೊದಲೆ ಎಂಬ ಗುರುವರನೆ ಶರಣು ॥೨೯೭೬॥

ಹನ್ನೊಂದು ದಿನತನಕ ಪಾಯಸವನೇ ಮಾಡಿ
ಸೆನ್ನ ಮಗನೇ ಮುಂದೆ ರೊಟ್ಟಿಯೊಂದಂ ಬಿಟ್ಟು
ಇನ್ನುಳಿದ ದಧ್ಯಾನ್ನ ಮೊದಲಾದ ಓದವನ ಕಾಲವರಿದುರೆ ಮಾಡಿಸಿ ।
ಚೆನ್ನಾಗಿ ನೀನುಣುತ ಎನಗುಣಿಸಿ ತಣಿಸೆಲೇ
ಚೆನ್ನವೀರಾರ್ಯಗುರು ವರಸುತನೆ ಎನುತಿರ್ದು
ತನ್ನೊಳಗೆ ತಾನೆ ನಲಿದಾಡುತೊಲಿದಾಡಿ ಥಳಥಳಿಸುತಿಹ ಗುರುವೆ ಶರಣು ॥೨೯೭೭॥

ಮಾಡಿಸುವವಂ ನೀನೆ ನೀಡಿಸುವವಂ ನೀನೆ
ಮಾಡುವಾತನು ನೀನೆ ನೀಡುವಾತನು ನೀನೆ
ನಾಡೆ ಮಾಡುವವನುರೆ ನೀನುಣಿಸುವವನೂ ನೀನೆ ಏನೇನನರಿಯದಿರ್ಪ ।
ಮೂಢನಾನೈಯೆಂದು ವಂದಿಸುತ ಕೈಗಳಂ
ಜಾಡಿಸುತ್ತುರೆ ನಿಂದ ಕಂದನಂ ಕಂಡು ಮುಂ
ಡಾಡಿ ನೀ೧ ಮೂಢನಹುದೆಂದು ಮೈದಡಹಿ ನಲಿಯುತಿಹ ಗುರುವೆ ಶರಣು ॥೨೯೭೮॥

ಮೂಢನೆನೆ ಮುಗ್ಧನೆಂದೆಂಬ ಶಬ್ದಂ ಮಗನೆ
ಮೂಢನೆನೆ ಸುಂಚರನೆನಿಪ್ಪ ಶಬ್ದಂ ಮಗನೆ
ಮೂಢನೆನೆ ಹುಟ್ಟನಿನ್ನೆಂಬ ಶಬ್ದಂ ಮಗನೆ ಮೂಢನೆಂಬುದೆ ನಿಶ್ಚಯಂ ।
ಮೂಡಿದರು ಮೌಢರ ಮೌಢ್ಯಮಂ ಬಿಡಿಸುತ
ಮೂಢರಂ ಪ್ರೌಢರಂ ಮಾಡಿಯೊಳಗೂಡಿ ನಲಿದಾಡುತಿಹ
ಮೂಢನೆನಿಸುವ ಬಾಲನಹುದು ನೀನೆಂಬ ಗುರುವರನೆ ಶರಣು ॥೨೯೭೯॥

ಕಾಗೆಯುರೆ ತನ್ನ ಮಕ್ಕಳಿಗೆ ಕೋಗಿಲೆಯೆಂಬ
ಹಾಂಗೆ ನೀನೀಗ ನುಡಿದ್ಯೆಯೆಂದು ವಂದಿಸುತ
ಕೈಗಳಂ ಮುಗಿದು ನಿಂದಿಹ ಕಂದನಂ ಕಂಡು ಮುಂಡಾಡಿ ಕಡು ತವಕದಿಂ ।
ಕಾಗೆಯಾನಹುದು ಕಾಗಿಯ ಮರಿಯು ನೀನಹುದು
ಕೂಗಿ ನಿನ್ನಯ ಬಳಗಮಂ ಬಿಡದೆ ಕರೆಕರೆಯುವಾಗ
ಕೂಗುವೆಂ ನಿನ್ನೊಡನೆ ನೀನುರದೆ ಕೇಳು ಕೇಳೆಂಬ ಗುರುವರನೆ ಶರಣು ॥೨೯೮೦॥

ಕಾಗೆಯುರೆ ಕೂಗಿ ತನ್ನಯ ಬಳಗ ಸಹಿತವಾ
ರೋಗಿಸುವದೊಮ್ಮೆ ಕೂಗದೆ ಇರ್ದು ತಾನೆ ಆ
ರೋಗಿಸುವುದೊಮ್ಮೆ ಅದರಂತೆ ನೀನೀಗ ಕೂಗದೆ ಎನ್ನೊಡನುಣುತ್ತ ।
ಕಾಗೆಯ ಬಳಗದಂಥ ನಿನ್ನ ಬಳಗವನುರದೆ
ಕೂಗಿಕರಕೊಂಡುಂಡು ನಲಿದಾಡುವುದು ಮುಂದೆ
ಈಗ ನಾವಿರ್ವದುರೆ ಗೋಪ್ಯದಿಂದುಣ್ಣಬೇಕೆಂಬ ಗುರುವೆ ಶರಣು ॥೨೯೮೧॥

ಗೋಪ್ಯದಿಂದುಣ್ಣಬೇಕೆಂದುರದೆ ತಿಳಿಸಿದಿರಿ
ಗೋಪ್ಯವೆನಿಸದೆ ಬಿಲ್ಪ್ರಕಟಿಸುವುದಿದು ಎಂಬ
ಗೋಪ್ಯೆನುತನುತವ ತನ್ನಶರಣಸುತನಂ ನೋಡಿ ನಖಿಹಾಳಿ ಕೇಳು ಕೇಳ್ಯೆ ।
ಗೋತ್ಯವೆನಿಸುತ್ತೊಡನೆ ಪ್ರಕಟಿಸುವುದ್ಯೆಯುದರೆ
ಈ ಪುದೊಳೀ ಮಠದೊಳೆ ಉಣ್ಣಬೇಕೆಲೆ
ಭೂಪಾಲ ಶಿವಲಿಂಗ ರುದ್ರಸರ್ಜನ ನಾಡಿನೊಳಗೆಂಬ ಗುರುವೆ ಶರಣು ॥೨೯೮೨॥

ಇಲ್ಲಿ ಗೋಪ್ಯದೊಳುಣ್ಣುತಿಲ್ಲಿಯೇ ಪ್ರಕಟಿಸುತ
ಮೆಲ್ಲನೇ ನಿನ್ನ ಯಕ್ಕುಂಡಿನಾಡಿನೊಳುಣ್ಣು
ತಲ್ಲಿಂದ ನಿನ್ನ ಮೂಗಿನಲ್ಲಿ ನಾಡಿನೊಳುಂಡು ನಲಿದಾಡು ತೊಲೆದಾಡುತ ।
ಸಲ್ಲೀಲೆಯಿಂದ ಎಲ್ಲಾ ನಾಡೊಳುಣುತಿರ್ದು
ಇಲ್ಲಿರುವ ಬಯಲವಾಡದೊಳೀ ಪುರಾಣಮಂ
ಎಲ್ಲರೊಡನೇ ಬಂದು ಸ್ಥಾಪಿಸುವುದ್ಯೆ ಮುಂದೆ ಎಂದುಲಿವ ಗುರುವೆ ಶರಣು ॥೨೯೮೩॥

ಸ್ಥಾಪಿಸಿದ ಬಳಿಕ ಮತ್ತೊಂದು ಪ್ರತಿಯಂ ಬರೆಸಿ
ಭೂಪಾಲ ಶಿವಲಿಂಗರುದ್ರ ಸರ್ಜಾಹ್ವಯ ಪ್ರ
ಚಾಪರಾಯನ್ನೆ ಮುಂದೆ ಪಸರಿಸುವನೆಂದು ನಿನ್ನ ಬಿಡದೆ ಭಜಿಸುತಿರ್ಪ ।
ಈ ಪುರದೊಳೀಗ ನಿನ್ನಂ ನೋಡಿ ಬಾಗದಿರು
ವಾ ಪುರುಷರೆಲ್ಲರುರೆ ನಾಚಿ ಬಾಗುತ್ತಿರುವ
ರೀ ಪುರದೊಳೊಂದು ಮಠಮಂ ನಿರ್ಮಿಸುವರು ನನಗಂ ಎಂಬ ಗುರುವೆ ಶರಣು
॥೨೯೮೪॥

ಅಂದು ಮಠಮಂ ನಿರ್ಮಿಸುವುದನುರೆ ತಿಳಿಸು
ಇಂದು ಈ ಮಠದೊಳ್ ಕುಟುಂಬಿನಿಯನುರೆ ಬರೆಸಿ
ಅಂಥಮುಮ ಉಣುವುದೋ ಉಂಡ ಬಳಿಕವಳನುರೆ ಬರಿಸುವುದೇ ತಿಳಿಸು ತಿಳಿಸೈ ।
ಎಂದು ವಂದಿಪ ಕಂದನಂ ನೋಡಿ ನಲಿದಾಡಿ
ಮಂದವಾರದಿ ಬರೆಸಿ ಅವಳಿಗುರೆ ತಿಳಿಸದೆ
ಇಂದುವಾರದಿನುದಯದೊಳುಣುವುದೆಂದು ಬಳಿಕರುಹಿಸುವ ಗುರುವೆ ಶರಣು॥೨೯೮೫॥

ಮಂದವಾರದೊಳಥವಾ ಇಂದುವಾರದೊಳಥವಾ
ಮುಂದೆ ಎಂದಾದರೇಂ ಬಂದಾಗ್ಗೆ ಬರೆಸುವುದು
ಕಂದನೇ ನೀಂ ನಾಳಿನ ಇಂದುವಾರದೊಳುಣುವುದೈ ತವಕದಿಂದ ।
ಎಂದೆನಲು ಅಡಿಗೆಯಂ ಮಾಳ್ಪರಾರೈ ತಿಳಿಸು
ಎಂದು ವಂದಿಸುವ ಕಂದನ ನೋಡಿ ನಲಿದಾಡಿ
ಇಂದು ಇವಗುರೆ ತಿಳಿಸಬೇಕೆಂದು ತಿಳಿಸುತೊಳಗಿರುವ ಗುರುವರನೆ ಶರಣು ॥೨೯೮೬॥

ಆ ಕುಟುಂಬನಿಯು ಲೌಕಿಕಳೆನಿಸುವಳುರದೆ
ಈ ಕುಟುಂಬಿನಿಯುರದೆ ಪಾರಮಾರ್ಥಿಕಳ್ಳೆ
ಲೌಕಿಕರಿಗೆ ತಿಳಿಯದಿರು ನಿನ್ನೊಳಗೆ ನೀನೆ ತಿಳಿಯೆಂದು ತಿಳಿಸುತೊಡನೆ ।
ಆ ಕುಟುಂಬಿನಿಯೊಡನೆ ಅಡಗಿರುವಳ್ಳೆ ಇವಳು
ಈ ಕುಟುಂಬಿನಿಯೊಡನೆ ಅಡಗಿಲ್ಲವವಳೀಗ
ಈಕೆಯೊಳಾಕೆಯಡಗಿದ ಬಳಿಕ ಬರೆಸಬೇಕೈಯೆಂಬ ಗುರುವೆ ಶರಣು ॥೨೯೮೭॥

ತಿಳಿಯಲಿಲ್ಲೆನಗೆ ಏನೇನು ಎಂದೆರಗುತಿಹ
ಮಲಹರಾತ್ಮಕ ಶರಣಸುತನನುರೆ ನೋಡುತ್ತ
ತಿಳಿದರೂ ತಿಳಿಯಲಿಲ್ಲೆಂದುರದೆ ಕೇಳಿ ತನ್ನವರಿಗುರೆ ತಿಳಿಸುತಿರ್ಪ ।
ಬಲವಂತ ಪೋತನೀತನೆನುತ ನಲಿಯುತ
ತಿಳಿವಂತೆ ತಿಳಿಸುತಿಹೆನುರೆ ಕೇಳು ಕೇಳೆನುತ
ತ್ತಲಘುತರ ಸತ್ಕೃಪಾಪಾಂಗದಿಂ ನಿಟ್ಟಿಸುತ್ತರುಹಿಸುವ ಗುರುವೆ ಶರಣು ॥೨೯೮೮॥

ಪಾರಮಾರ್ಥಿಕಳೀ ಶಾಂತಿಯೆನಿಸುವ ಸತಿಯು
ಪಾರಮಾರ್ಥಿಕಳೀ ಸತ್ಯವೆನಿಸುವ ಜನನಿ
ಪಾರಮಾರ್ಥಿಕ ಜ್ಞಾನವೆನಿಸುವ ಜನಕನೆಂದರುಹಿ ಇನ್ನು ಕೇಳೈ ।
ಪಾರಮಾರ್ಥಿಕನೀ ಧರ್ಮವೆನಿಸುವ ಭ್ರಾತೃ
ಪಾರಮಾರ್ಥಿಕನೀ ದಯನೆನಿಸುತ್ತಿಹ ಸಖಂ
ಪಾರಮಾರ್ಥಿಕನೀ ಕ್ಷಮೆಯೆನಿಪ ಸುತನುರದೆ ಕೇಳೆಂಬ ಗುರುವೆ ಶರಣು ॥೨೯೮೯॥

ಲೌಕಿಕರೊಳ್ ಪಾರಮಾರ್ಥಿಕರಡಗಿಹರು
ಲೌಕಿಕರೀ ಪಾರಮಾರ್ಥಿಕರೊಳಡಗ
ರೈ ಕುವರನೆ ನೀನೆ ಈ ಪಾರಮಾರ್ಥಿಕರೊಳಡಗಿರುಹಿ ಎನುತ ।
ಲೋಕರಿಗೆ ತಿಳಿಯದೈ ಆನೆ ತಿಳಿದಿರುವೆನೈ
ಈ ಕಾಲದೋಳನಕ ಅವಳು ಅಲ್ಲೇ ಇರಲಿ
ಬೇಕಾದ ಕಾಲದೊಳ್ ಬರಿಸುತಿಹೆ ನಾನೇ ಎಂಬ ಗುರುವರನೆ ಶರಣು ॥೨೯೯೦॥

ಅಡಿಗೆಯಂ ಮಾಡಿಸುತ ನೀಡಿಸುತ್ತಿಹೆ ನಾನೆ
ಅಡಿಗೆಯಂ ಮಾಡಿಯುರೆ ನೀಡುವಾತನು ನಾನೆ
ಕಡು ತವಕದಿಂ ತುತ್ತನುರೆ ಮಾಡಿ ನೋಡಿ ನಿನಗುಣಿಸಿಯುರೆ ತಣಿಸುತೊಡನೆ ।
ಸಡಗರದಿ ಹಾಸಿಕೆಯ ಹಾಸಿ ಮಲಗಿಸೆ
ನ್ನೊಡನೆ ನಿದ್ರಿಸುತೇಳಿಸಿ ಕುಳ್ಳಿರಿಸಿ ಬಯಲ
ಕಡೆಗೆ ಹೋಗಿಸಿ ಬರಿಸಿ ಭಜಿಸಿಕೊಂಬವ ನಾನೆ ಎಂದುಲಿವ ಗುರುವೆ ಶರಣು ॥೨೯೯೧॥

ನಿನ್ನಯ ಕುಟುಂಬಿನಿಯು ನಾನೆ ನಿನ್ನಯ ಪಿತಂ
ನಿನ್ನ ಜನನಿಯು ನಾನೆ ನಿನ್ನ ಭ್ರಾತೃವೆ ನಾನೆ
ನಿನ್ನ ಸುಖವ್ಯೂ ನಾನೆ ನಿನ್ನ ಸುತನು ನಾನೆಯೆಂದು ತಿಳಿಸುತ್ತ ಮತ್ತಂ ।
ಎನ್ನಯ ಕುಟುಂಬಿನಿಯು ನೀನೆ ಎನ್ನಯ ಪಿತಂ
ನಿನ್ನ ಭವನಿಯು ನೀನೆ ಎನ್ನ ಭ್ರಾತೃವು ನೀನೆ
ಎನ್ನ ಸಖನೂ ಸುತನು ನೀನೆ ಎಂದುಲಿದು ಬಳಿಕರುಹಿಸುವ ಗುರುವೆ ಶರಣು ॥೨೯೯೨॥

ಎನಗೆ ಭಕ್ತಂ ನೀನೆ ನಿನಗೆ ಭಕ್ತಂ ನಾನೆ
ಎನಗೆ ಮಾಹೇಶ್ವರಂ ನೀನೆ ನಾನೇ ನಿನಗೆ
ತನಯನೇ ನೀನೀಗ ಭಕ್ತ ಮಾಹೇಶ್ವರನರಸಿಮುರೆ ಬಳಲಬೇಡೈ ।
ಘನ ತವಕದಿಂ ಭಕ್ತ ಮಾಹೇಶ್ವರರು ತಾವೆ
ಅನುನಯದಿ ನಿನ್ನನರಸುತ ಬರುವರೈ ಮುಂದೆ
ಎನುತುರದೆ ತಿಳಿಸಿ ಸಂಶಯವನುರೆ ಬಿಡಿಸಿ ಬಳಿಕರುಹಿಸುವ ಗುರುವೆ ಶರಣು ॥೨೯೯೩॥

ಆನಿರುವೆನೀಗ ನೀನಂಜಬೇಡೈ ನಿನ್ನ
ಮಾನಿಯನಾ ಮನೆಯೊಳಾನೆ ಉಪಚರಿಸುತ್ತ
ಸೂನುವೇ ನಿನ್ನನೀ ಮಠದಲ್ಲಿಯುಪಚರಿಸುತಿರ್ಪನೆಂದರಮತೊಡನೆ ।
ನೀನೀಗ ನಿನ್ನ ರುದ್ರಪ್ಪನಿಗೆ ತಿಳಿಸಿ ಅನು
ಮಾನಮಂ ಬಿಟ್ಟು ಬೇಕಾದುದಂ ತರಿಸುವುದು
ನಾನೀಗ ಬಿನ್ನಹವನುರೆ ಮಾಳ್ಪೆ ನಿನಗೆನುತ್ತಿರುವ ಗುರುವೆ ಶರಣು ॥೨೯೯೪॥

ನೀನೆ ಬಿನ್ನಹವನುರೆ ಮಾಡುವರೆ ಎನುತಿರ್ಪ
ಸೂನುವಂ ನೋಡಿ ನಲಿದಾಡಿ ನೀನುರೆ ಕೇಳು
ನಾನೀಗ ಬಿನ್ನಹವ ಮಾಡದಿರಲುಳಿದವರು ಮಾಡರೆಂದರುಪಲೊಡನೆ ।
ನೀನೆ ಜೋಳಿಗೆಯನುರೆ ಕೊಟ್ಟು ಮುಂಚೆಗೆ ನೀಡೆ
ಸಾನುರಾಗದಿ ಹಿಂಚೆ ಸಕಲರುರೆ ನೀಡಿರುವ
ರೈ ನಾನುರದೆ ಮರೆದು ನಿನಗುತ್ತರವನಿತ್ತೆನೆನಲುಲಿವ ಗುರುವೆ ಶರಣು ॥೨೯೯೫॥

ಮರೆದು ಉತ್ತರವನಿತ್ತಾತನಲ್ಲೈ ನೀನು
ಮರೆದೊರಗಿಹವರನೆಚ್ಚರಿಸಬೇಕೆಂದು ನೀ
ನರಿದಿರ್ದು ಅರಿಯದವನೋಲ್ ಕೇಳಿ ಮರೆದಿರ್ದಧಮರಿಗೆ ತಿಳಿಸುತಿರ್ಪ ।
ತರುಣನಹುದೆಂದು ಮುಂಡಾಡಿ ಮುದ್ದಿಸುತಿರಲ್
ಗುರುವೆ ನಾನೀಗ ಬಿನ್ನೈಸುತಿರ್ದೆನು ನಿನಗೆ
ತರಿಸಬೇಕೆನಲುರೆ ತಿಳಿಸ ತಿಳಿಸಬೇಕೆನಲ್ ನಲಿದುಲಿವ ಗುರುವೆ ಶರಣು ॥೨೯೬॥

ಏನನುರೆ ಸವಿಯಬೇಕೆಂದು ನೀನೆಳಸಿರುವಿ
ಸೂನುವೇ ತಿಳಿಸೆನಲ್ ನೀನೆಳಸಿದುದನುರದೆ
ನಾನೆಳಸಿರುವೆನೆನಲು ನೀನೆಳಸಿದುದನುರದೆ ನಾನೆಳಸುತಿಹೆನೆನುತ್ತ ।
ಮಾನಿನಿಯರುರೆ ಬಸಿರಾದಾಗ ಬಯಸುವ ಹಾಂಗೆ
ನಾನೀಗ ಪಾಯಸವನುರೆ ಬಯಸುತಿರ್ಪೆನ್ನೈ
ನೀನೀಗ ಪಾಯಸವನೆಸಗಿಸುವ ಜೀನಸುವ ತರಿಸೆಂಬ ಗುರುವೆ ಶರಣು ॥೨೯೭॥

ಸಂತೆ ಎನಿಸಿಹುದಿಂದೆ ತರಿಸುನೀ ತಂಡುಲವ
ಸಂತಸದಿ ಬೆಲ್ಲಮಂ ತರಿಸು ತರಿಸೆಂದೊರೆದು
ಸಂತೆಯೊಳ್ ತರಿಸಬಾರದು ಈಗಳುರೆ ಗೋಪ್ಯದಿಂದುಂಬ ಊಟಕೆನುತ ।
ತಾಂ ತವಕದಿಂ ತರುವ ರುದ್ರಪ್ಪಗುರೆ ತಿಳಿಸ
ಹಂತರಂಗದಿ ತನ್ನೊಳು ತಾನೆ ತಿಳಿಯುತ್ತ
ಸಂಜೆ ಎನಿಸಿದ ಶುಕ್ರವಾರದೊಳ್ ಕೊಳಿಸದೆ ಬಳಿಕುಲಿವ ಗುರುವೆ ಶರಣು ॥೨೯೮॥

ಇಕ್ಷುರಸಮಂ ತೆಗೆವ ಗಾಣವೇ ಇಲ್ಲಹುದು
ಉಕ್ಷಜ ರಸದಿಂದೊಗೆವ ಬೆಲ್ಲವೇತಕೆ ಬೇಕು
ಇಕ್ಷುಗಳನುರೆ ತರಿಸಿ ರಸವ ತೆಗೆಸುವುದೆಂದು ತಿಳಿಸುತ್ತ ಮತ್ತಮುರದೆ ।
ಇಕ್ಷುರಸವಂ ತೆಗೆವರೀಗನಾಯಾಸದಿಂ
ದುಕ್ಷುಗಳ ಹೂಡಿ ಸರಕಾರದುದ್ಯಾನ್ನದೊಳ್
ಸುಕ್ಷಣದಿನವರಿಗುರೆ ತಿಳಿಸಿ ತರಿಸೈ ಎಂದು ತಿಳಿಸುತಿಹ ಗುರುವೆ ಶರಣು ॥೨೯೯॥

ಅದು ನಿನಗೊಡಂಬಡಿಕೆಯೇ ಎಂದು ಬಿನ್ನೈಸೆ
ಪದುಳದಿಂ ಸಂತೆಯಿಂ ತಂದ ಬೆಲ್ಲಕೆ ಧೂಳಿ
ಪದಜಲವನ್ನುರೆ ಸಿಡಿಸುವೊಲು ಸಿಡಿಸಿ ಶುದ್ಧವೆನಿಸಿದರೆನಗೊಡಂಬಡಿಕೆಯ್ಯೆ ।
ಅದನು ಕಡೆ ನಿರ್ಮಲವೆನಿಸಿ ಭಾಂಡದೊಳಿರಿಸಿ
ಪದುಳದಿಂ ಸೋಸಿ ಮತ್ತೊಂದು ಭಾಂಡದಿ ಧೂಳಿ
ಪದ ಜಲವ ಬೆರಸಿಯೆ ಸರಿಡಿಸಿ ತಂಡುಲವ ಹಾಕಿಸು ಎಂಬ ಗುರುವೆ ಶರಣು ॥೩೦೦೦॥

ಜೀನಸವ ರುದ್ರಪ್ಪನಿಂ ತರಿಸಬೇಕೆಂದು
ಸಾನುರಾಗದಿನರುಹಿಸಿದಿರಿ ಅಡಿಗೆಯನಾವ
ಮಾನಿನಿಯ ಕರದಿಂದ ಮಾಡಿಸುವುದೈ ಗುರುವೆ ಎಂದು ವಂದಿಸಿ ನಿಂದಿಹ ।
ಸೂನುವಂ ನೋಡಿ ನಲಿದಾಡಿ ನೀನುರೆ ಕೇಳು
ನಾನು ನೀನೀಗುರದೆ ಗೋಪ್ಯದೊಳುಣುವೆವನ್ಯ
ಮಾನಿನಿಯರಂ ಬರಿಸಬಾರದೆಂದುರೆ ತಿಳಿಸುತಿರುವ ಗುರುವರನೆ ಶರಣು ॥೩೦೦೧॥

ನಿನ್ನ ಕುಟುಂಬಿನಿಯನೊರ್ವಳನ್ನೇ ಬರಿಸಿ
ಚೆನ್ನಾಗಿ ಅವಳಿಂದ ಮಾಡಿಸುತ ನೀಡಿಸುತ
ನೀಂ ನಾಡೆ ಹೊರಗೆ ಹೋಗೆಂದವಳನುರೆ ಕಳಿಸಿ ನಾನು ನೀನಿರ್ವರುಂಡು ।
ಮುನ್ನಿನೋಲ್ ಒಳಗೆ ಬಾಯೆಂದುರದೆ ಕರೆದು ಮಿ
ಕ್ಕನ್ನಮಂ ತಕ್ಕೊಂಡು ಹೋಗಿ ಸುತರೊಡಗೊಂಡು
ನೀಂ ನಾಡೆ ಉಂಡು ಬಾಯೆಂದಟ್ಟು ಅವಳಿರುವ ಮನೆಗೆಂಬ ಗುರುವೆ ಶರಣು ॥೩೦೦೨॥

ನೀನಡಿಗೆಯಂ ಮಾಡಿ ನೀಡೆ ನೀನುರೆ ಸವಿದು
ವಿನಯದಿಂದತ್ತ ಓದನವನುರೆ ಒಯ್ದು ಸ
ದ್ವಿನಯದಿಂ ನಿನ್ನ ಸುತರಿಗೆ ಉಣಿಸಿ ತಾನುಂಡು ಮತ್ತಮುರೆ ಬಂದು ನಿಂದು ।
ಘನತವಕದಿಂದಡಿಗೆಯಂ ಮಾಡಿ ನೀಡಿ ಮುಂ
ದಿನ ಹಾಂಗೆ ಹೋಗಿ ಉಂಡುಂಡು ಬರೆ ಹನ್ನೊಂದು
ದಿನವೆನಿಸಲವಳ್ಗೆ ಜ್ಞಾನೋದಯವೆನಿಸುತಿರ್ಪುದೆಂದೆಂಬ ಗುರುವೆ ಶರಣು ॥೩೦೦೩॥

ಅಲ್ಲಿಂದ ಮೆಲ್ಲಮೆಲ್ಲನೆ ಸಚ್ಚರಿತೆಯೆನಿಸು
ತೆಲ್ಲಾಗಳುಂ ಜಗಳಗಂಟಿ ಎನಿಸದೆ ಇರ್ದು
ಎಲ್ಲರಿಗೆ ಬೇಕಾಗಿ ನಿನಗುರದೆ ಬಾಗಿ ತಾಗುವಳೆಂದು ತಿಳಿಸುತೊಡನೆ ।
ಇಲ್ಲಿ ಈಗಳೆ ತಾಗಳು ಮುಂದೆ ತಾಗುತಿಹ
ಳುಲ್ಲಾಸದಿಂ ನಿನ್ನ ಬಳಿಯೊಳಿರುವಳು ನಿನ್ನ
ವಲ್ಲಭೆಯು ಈಗನಕ ಅಲ್ಲೆ ಇರಲಿ ಎಂದು ತಿಳಿಸುತಿಹ ಗುರುವೆ ಶರಣು ॥೩೦೦೪॥

ಅವಳನಲ್ಲೇ ಇರಿಸಿ ಎನ್ನನಿವೋ ಇರಿಸಿ
ತವಕದಿಂದವಳನುರೆ ಬರಿಸಿ ಉಪಚರಿಸಿಕೊಳು
ತವಳನುರೆ ಸಂತುಷ್ಟಿವಡಿಸಿ ಎನ್ನಂ ಕಷ್ಟ ಬಡಿಸದೇ ಸಲಹುತಿರ್ಪಾ ।
ಅವಿರಳಾತ್ಮಕ ಶರಣಗುರುವೆ ನೀನೇ ಬಲ್ಲೆ
ಯವಳುದರದೋಳಿರುವ ಶಿಶುವನಂದುರೆ ನುತಿಪ
ಕುವರನಂ ನೋಡಿ ನಲಿದಾಡಿ ನಾನೇ ಇರುವೆನೆಂಬ ಗುರುವರನೆ ಶರಣು ॥೩೦೦೫॥

ನೀನೆ ಇರಲವಳಿಗಿನ್ನೇನು ಭಯವಿಲ್ಲವೈ
ಆನಂದದಿಂದವಳನುರೆ ಪೊರೆಯುವಂ ನೀನೆ
ಸಾನುರಾಗದಿ ಎನ್ನುವಂ ಪೊರೆವವಂ ನೀನೆ ಎಂದು ವಂದಿಸಿ ನಿಂದಿಹ ।
ಸೂನುವಂ ನೋಡಿ ಮುಂಡಾಡಿ ಮುದ್ದಿಸುತ ಈ
ಜಾಣಮಗನಿಗೆ ಇನ್ನು ಅನ್ನವನ್ನುರೆಯುಣಿಸಿ
ನಾನುರದೆ ಉಣಬೇಕೆನುತ್ತ ಕಡು ತವಕದಿಂ ತಿಳಿಸುತಿಪ ಗುರುವೆ ಶರಣು ॥೩೦೦೬॥

ನಾಳೆ ಫಾಲ್ಗುಣ ಬಹುಳಾಷ್ಟಮಿ ಎನಿಪ ಕೀ
ಲಾಲಜಾರಾತಿ ವಾರವೆನಿಸುವುದಲೆ ಮಗನೆ
ಲೀಲೆಯಿಂ ಪ್ರತ್ಯೂಷೆ ಕಾಲದೊಳೆದ್ದು ಎಂದಿನೊಲು ಲಿಂಗವ ಭಜಿಸುತ ।
ಬಾಲೆಯಂ ಮೈದೊಳೆಸಿ ಪಾಕವಂ ಮಾಡಿಸುವ
ಕಾಲದೊಳ್ ಗಳಪಬೇಡೆಂದುರದೆ ಪೇಳುತ ಸು
ಶೀಲತನದಿಂದಡಿಗೆಯಂ ಮಾಡಿಸುವುದೆಂದು ತಿಳಿಸುತಿಹ ಗುರುವೆ ಶರಣು ॥೩೦೦೭॥

ನಾನುರದೆ ಪೇಳಲಾರೆನು ನೀನೆ ಪೇಳ್ವುದೆನೆ
ನಾನು ಪೇಳುವೆನು ನೀನಿಚ್ಚರಿಸೆನುತ್ತರುಪಿ
ನೀನೀಗ ತಂಡುಲವ ತರಿಸಿ ಇಡಿಸೈ ಇಂದೆ ಎಂದುರದೆ ತಿಳಿಸುತೊಡನೆ ।
ತಾನೆ ರುದ್ರಪ್ಪನಿಂ ತರಿಸಿ ತಂಡುಲಗಳಂ
ಸಾನುರಾಗದಿ ಹಸನಮಂ ಮಾಡಿಸಿರೆ ನೋಡಿ
ಕೋಣೆಯೊಳಗಿರಿಸಿ ಕಬ್ಬಿನರಸವ ತರುವುದೀಗೆನುತಿರುವ ಗುರುವೆ ಶರಣು ॥೩೦೦೮॥

ಕಬ್ಬಿನ ರಸದಿ ಪಾಯಸವನುರೆ ಮಾಡಿಸುವ
ಉಬ್ಬಿನಿಂದುರದೆ ಇಪ್ಪತ್ತು ದಿನವನ್ನಮಂ
ಸಬ್ಬರರಿವೋಲ್ ಬಿಟ್ಟು ಸಲೆ ಫಲಾಹಾರಿಯೆನಿಸುತ ಫಲವ ಸವಿಸುತೊಡನೆ ।
ಕಬ್ಬಿನ ರಸದಿನೊಗೆದ ಬೆಲ್ಲಮಂ ಸವಿಸುತ್ತ
ಒಬ್ಬರಿಗೆ ಹೇಳದೆ ಅನ್ನವನುಣಿಸುತಿರ್ಪಿ
ಸಬ್ಬರುರೆ ನಗರೆ ಗುರುವೆ ಎನಲು ನಲಿದುಲಿಯುತಿರುವ ಗುರುವರನೆ ಶರಣು ॥೩೦೦೯॥

ಇಬ್ಬರಿರಲೊಬ್ಬನುರೆ ಕೇಳುವಂ ಹೇಳುತಿಹ
ನೊಬ್ಬನೈ ಇಬ್ಬರೀಗಿಲ್ಲವಲೆ ಮಗನೆ ನೀ
ನೊಬ್ಬನೇ ನಿನ್ನೊಳಿರುವಾತ ನಾನೊಬ್ಬನೇ ಎಂದು ತಿಳಿಸುತ್ತ ಮತ್ತಂ ।
ಸಬ್ಬರಿರುವರು ಇದ್ದರೇಂ ನಿನ್ನೊಲಾಚರಿಪ
ಸಬ್ಬೆಡೆಯನಮಲ ಶರಣರ ತರುಣನಿಲ್ಲವಿ
ನ್ನೊಬ್ಬನುದಯಿಸುವತನಕ ನೀನೊಬ್ಬನೇ ಎಂದು ತಿಳಿಸುತಿಹ ಗುರುವೆ ಶರಣು ॥೩೦೧೦॥

ಆತನುದಿಸಿದ ಬಳಿಕ ಆತನು ನೀನು ಸಂ
ಪ್ರೀತಿಯಿಂ ಕೂಡಿ ಮಾತಾಡಿ ಈಗುರೆ ನಗುವ
ಪಾತಕರ ಕಳಿಸಿ ಸತ್ಪಾತಕವನವನುಳಿಸಿ ಪೂತ ಸಚ್ಚರಿತರೆನಿಸಿ ।
ಓತು ನೀನೇ ಸಲಹಬೇಕೆಂದು ತಿಳಿಸುತಿಹ
ಲಾತನುದಿಸುವನೆಂದು ಆವತಳದೊಳ್ತಿಳಿಸು
ಪೂತ ಸಚ್ಚರಿತಗುರುವೇ ಎಂದು ವಂದಿಸಲ್ ತಿಳಿಸುತಿಹ ಗುರುವೆ ಶರಣು ॥೩೦೧೧॥

ನಿನಗುಣಿಸಿ ತಣಿಸಿ ನಾನುಂಡಬಳಿಕರುಹಿಸುವೆ
ನನಕ ನೀನೀಗಳುಸಿಕನೆ ಇರುವುದೆಂದುಲಿದು
ಘನ ತವಕದಿಂದ ಗೋಘೃತವನುರೆ ತರಿಸಿದಿಯಾ ಎಂದುರದೆ ಕೇಳುತೊಡನೆ ।
ತನಿ ನೇಹದಿಂ ಮೊದಲೆ ತರಿಸಿದ ಘೃತವನಡಿಗೆ
ಮನೆಯೊಳಿಟ್ಟುರೆ ನಾಳಿಗೆ ಸಾಕು ನಾಡದಾ
ನನುನಯದಿ ತರಿಸುತಿಹೆನೆಂದುಲಿದು ನಲಿದಾಡುತಿರುವ ಗುರುವರನೆ ಶರಣು ॥೩೦೧೨॥

ನಿನಗೆ ನೀನೇ ತರಿಸಿಕೊಂಡು ನೀನೇ ಉಂಡು
ನಿನಗೆ ನೀನೇ ನುಡಿದು ನಲಿದಾಡುತಿಹ ಗುರುವೆ
ತಮಗೆ ತಾನೇ ತರಿಸಿಕೊಂಡುಣುವ ಡೊಣಗನಿವನೆಂದು ನಗುತಿಹರು ಜನರ್ರೈ ।
ಎನುತ ವಂದಿಪ ಕಂದನಂ ನೋಡಿ ನಗುತಿರುವ
ಜನರೆಲ್ಲರಳುತಿರುವರ್ರೈ ಮುಂದೆ ಈ ಜೀವ
ಧನವೆನಿಪ ಜನರನನುಸರಿಸದೆ ಇರುವುದೀಗೆಂಬ ಗುರುವರನೆ ಶರಣು ॥೩೦೧೩॥

ನಿನ್ನವನೆನಿಪ್ಪ ಸಂಗಪ್ಪನಿಗೆ ತಿಳಿಸುತ್ತ
ನಿನ್ನವನೆನಿಪ್ಪ ರುದ್ರಪ್ಪನಿಂ ತರಿಸುತ್ತ
ನಿನ್ನ ಸತಿಯಿಂದಡಿಗೆಯಂ ಮಾಡಿಸುತ ನೀಡಿಸುತ್ತಿರ್ದು ನೀನೆವುಂಡು ।
ನಿನ್ನ ಸುತರಿಗೆ ಉಣಿಸಿ ನೀನೇ ಉಣ್ಣೆಂದು ಮಿ
ಕ್ಕನ್ನಮಂ ವಂದಿಸಿಕೊಳುತ ನಿನ್ನ ಸತಿಗಿತ್ತು
ಅನ್ಯರಿಗೆ ಸಿಕ್ತಮಾತ್ರಂ ಕೊಡದಿರೆಂದು ತಿಳಿಸುತ್ತಿರುವ ಗುರುವರನೆ ಶರಣು ॥೩೦೧೪॥

ಅವಳಿಗಿಂತುರೆ ತಿಳಿಸುತವಳಿಗುರೆ ಕೊಡುತಿರ್ದು
ಕುವರನೇ ನೀನೀಗೆರಗಿ ಬೇಡಿದವರೆ ಕೊಡುವ
ಅವಿವೇಕಿಗಳು ಈಗ ನಿನಗೆರಗಿ ಬೇಡದ್ಯೆ ಕೊಡಬಾರದೆಂದು ತಿಳಿಸೆ ।
ತವೆ ತಿಳಿಸು ಸಂಗಪ್ಪ ರುದ್ರಪ್ಪರಿಗೆ ಅ
ನ್ನವ ಕೊಡುವದೊ ಕೊಡಬಾರದ್ಕೋ ಎನುತಿಪ್ಪ
ಕುವರನ್ನೋಡಿ ನಲಿದಾಡಿ ನೀನುರೆ ಕೇಳು ಕೇಳೆಂಬ ಗುರುವೆ ಶರಣು ॥೩೦೧೫॥

ಅವರಿಗುರೆ ಉಂಡುಹೋಗೈ ಎಂದು ಸೂಚಿಸೈ
ತವಕದಿಂ ಬರಲುಣಿಸಿ ತಣಿಸುತಣಿಸೈ ಮಗನೆ
ಅವರೀಗ ಒಲ್ಲೆವೆನೆ ಜುಲ್ಮಿಯಿಂದುರೆ ಕರೆಯಬೇಡೆಂದು ತಿಳಿಸುತೊಡನೆ ।
ಅವರ ದುಷ್ಕೃತ ಸುಕೃತದೊಳವು ತಾನೇ ತಿಳಿವು
ದವಿರತಂ ನಿನ್ನನನುಸರಿಸುವರೈ ಈಗ
ಕುವರನೇ ನೀನವರನನುಸರಿಸುವುದೆ ನಿರ್ಣಯವೆಂಬ ಗುರುವೆ ಶರಣು ॥೩೦೧೬॥

ಅನುಸರಿಸದವರನನುಸರಿಸದೆ ಇರುತ್ತಿರ್ದು
ಅನುಸರಿಸುವರನುರೆ ಅನುಸರಿಸಿ ನಡೆವುತಿಹ
ತನಯನೇ ನೀನೀಗ ನಿರ್ಣಯ ಪುರಾಣಮಂ ತೂರ್ಣದಿಂ ನಿರ್ಮಿಸುತ್ತ ।
ಮುನಿವಲ್ಲಿಯಲ್ಲಿ ಮರನಂ ಕಡಿದು ಕೆಡಪುವೋಲ್
ಘನವೆನಿಪ ನಿರ್ಣಯಾಚರಣಗೆಯಂ ತೋರಿ ಬಳಿಕ
ನುನಯ ಈ ಹೊಂಗಲದಿ ಬಂದು ನಿಂದಿ ನೀನೆಂಬ ಗುರುವರನೆ ಶರಣು ॥೩೦೧೭॥

ಇಲ್ಲಿಯುರೆ ನಿಂದು ಸಲೆ ಕೆತ್ತಿ ಹೊಳೆವೆನಿಸುವೋಲ್
ಮೆಲ್ಲನೇ ನಿರ್ಣಯಾಚರಣೆಯಂ ತೋರಿಸಿದಿ
ಸಲ್ಲೀಲೆಯಿಂದನ್ನು ನೂಲಿಸದೆ ಹಾಕಿ ವಕ್ರತೆಯನುಳಿದು ತೋರಾ ।
ಅಲ್ಲಮಪ್ರಭು ಚೆನ್ನಬಸವ ಬಸವಾಧೀಶ
ರುಲ್ಲಾಸದಿಂದಾಚರಿಸಿದಾಚರಣೆಯಿದು
ಅಲ್ಲೆಂದವರ ಮೂಗನುರೆ ಕೊಯ್ವ ಕತ್ತಿ ನೀನೆಂಬ ಗುರುವರನೆ ಶರಣು ॥೩೦೧೮॥

ಕತ್ತಿಯಾನಹುದು ಕತ್ತಿಯನುರದೆ ಪಿಡಿದುಕೊ
ಯ್ಯುತ್ತಿರುವ ಬಲಿಯು ನೀನೇ ಎಂದು ವಂದಿಸುವ
ಉತ್ತಮೋತ್ತಮ ಶರಣರಣುಗನಂ ನೋಡಿ ನಲಿದಾಡಿ ಮುಂಡಾಡುತೊಡನೆ ।
ಕತ್ತಿಯಂ ಪಿಡಿಸಿ ಕೊಯ್ಯುತ್ತಿರುವವನೆ ನಿನ್ನ
ಚಿತ್ತದೊಳಿಹನೆನಲು ಇರುವಾತನೇ ನೀನೆ
ನುತ್ತಿರುವ ಮಗನಿಗುಣಿಸುವೆನಿನ್ನೆನುತ್ತ ಸಂಭ್ರಮಿಸುತಿಹ ಗುರುವೆ ಶರಣು ॥೩೦೧೯॥

ಇಂದು ಈಗಳೆ ಕಬ್ಬಿನ ರಸವ ತರಿಸಿರಿಸಿ
ಕಂದನೇ ನಾಳಿನುದಯಕೆ ಹುಳಿಯೆನಿಸುತಿಹವು
ಇಂದು ತರಬಾರದ್ಯೆ ನಾಳೆ ಅರುಣೋಹಯದಿ ತರುವುದೆಂದುರದೆ ತಿಳಿಸಿ ।
ಇಂದು ರಾತ್ರಿಯೊಳೆ ಇಲ್ಲೇ ಬಂದು ಒರಗನೇ
ಕೆಂದು ನಿನ್ನಯ ಸತಿಗೆ ಹೇಳೆಂದು ಹೇಳಿಸುತ
ಹೆಂದದಾನಂದವಳನುರೆ ಬರಸಿ ಒರಗಿಸಿಹ ಗುರುವರನೆ ಶರಣು ॥೩೦೨೦॥

ಅವಳನೊರಗಿಸಿ ತಾನುರೆ ಒರಗಿ ನಿದ್ರಿಸುತ
ತವಕದಿಂ ಮುಂದಾಗಿ ತಾನೆ ಎದ್ದುರೆ ಕುಳಿತು
ಸವಿಮಾತಿನಿಂದವಳನೇಳಿಸುತ್ತವಳಿಂದ ಸತ್ಕರಿಸಿಕೊಳುತೆಂದಿನೋಲ್ ।
ತವಕದಿಂ ಮಿಂದು ಲಿಂಗಾರ್ಚನೆಯನೆಸಗುತಿ
ಪ್ಪವಸರದೊಳೇ ಕಬ್ಬಿನ ರಸವ ತಕ್ಕೊಂಡು
ಜವದಿಂದ ಬಂದು ವಂದಿಸಿದವರನುರೆ ನೋಡಿ ನಲಿದುಲಿದ ಗುರುವೆ ಶರಣು ॥೩೦೨೧॥

ಸಮಯಕುರೆ ಒದಗಿಸಿದ ರುದ್ರ ಸಂಗರಿಗಿಂದು
ಮಮತೆಯವರಾರು ಈಗಿಲ್ಲವೆಂದುರೆ ನುಡಿದು
ಮಮತೆಯವರಿರುವರೂ ಇದ್ದರೂ ಪೂರ್ವದುಷ್ಕರ್ಮ ಬಲದಿಂದ ಸರಿದು ।
ಸಮಯಕುರೆ ಬಾರದೇ ದೂರಾಗಿರುವರೀಗ
ಸಮಯಕುರೆ ಒದಗುವರು ಮುಂದೆ ಸುಕೃತದ ಬಲದಿ
ಸಮಯಕುರೆ ಒದಗಿರುವರಿವರೀಗ ಸುಕೃತ ಬಲದಿಂದೆಂದ ಗುರುವೆ ಶರಣು ॥೩೦೨೨॥

ಲಿಂಗಮಂ ಭಜಿಪ ಸಮಯದಿ ಪ್ರಸಂಗಿಸುವುದಂ
ವೆಂಗುವುದೆ ನಿರ್ಣಯವೆನುತ್ತರಿದು ತಾನುರೆ ಪ್ರ
ಸಂಗಿಸದೆ ಈಗ ಪೋಗಿರಿ ಬರುವದ್ಯೆ ಮುಂಜಾವದೊಳೆಂದು ಕಳಿಸಿ ।
ಲಿಂಗಮಂ ಭಜಿಸುತ ಗಣಂಗಳಂ ತುತಿಸುತ ತ
ದಂಗನೆಯ ಹಸ್ತದಿಂದಡಿಗೆಯಂ ಮಾಡಿಸುತ
ಮಂಗಳಾರತಿ ಎತ್ತಿ ಜಲವನುರೆ ಮಾಡಿ ನಲಿದರುಹಿಸಿದ ಗುರುವೆ ಶರಣು ॥೩.೦೨೩॥

ದಿನದುದಯವೆನಿಸುತಿರ್ಪುದು ಈಗ ಪಾಯಸವ
ನುಣಬೇಕು ಪಾಯಸಂ ಸಿದ್ಧವಾಯಿತೊ ಇಲ್ಲೊ
ಎನೆ ಸಿದ್ಧವಾಗಿರುವುದೈ ಎಂದು ನುಡಿಯುತಿಹ ಮಡದಿಯಂ ನೋಡಿ ನಲಿದು ।
ಅನುಕೂಲೆ ಏನಿಸಿರುವಳೀಗೆಂದು ತಿಳಿದು ಬಳಿ
ಕನುನಯದಿನವಳಿಂದ ನೀಡಿಸಿಕೊಳುತ್ತಿರ್ದು
ಘನ ತವಕದಿಂದವಳಿಗುರೆ ತಿಳಿಸುತೊಳಗೆ ಕುಳಿತಿರುವ ಗುರುವೆ ಶರಣು ॥೨೦೧೪॥

ನಾನೀಗ ಅರ್ಪಿಸೆಂದುರೆ ಹೊರಗೆ ಹೋಗಲ್ಯಾ
ಪ್ರಾಣನಾಥನೆ ಎನಲ್ ಪಡಿಯನುರದೇ ಕೊಟ್ಟು
ಸಾನುರಾಗದಿ ಹಾಗವ ಕೊಡದೆ ಇರಲು ಪಡಿಯೆಂತು ಸಲ್ಲುತಿಹುದು ।
ನೀನೀಗ ಹಾಗಮುಮನಿತ್ತು ವಂದಿಸಿ ಪೋಗ
ಲಾನಂದದಿಂದೀ ಪಡಿಯು ಸಲ್ಲುತಿಹುದೆಂದು
ಜಾಣತನದಿಂದ ಕೈಗೊಂಡು ಅವಳಂ ಕಳಿಸಿ ಉಣುತಿರ್ದ ಗುರುವೆ ಶರಣು ॥೨೦೧೫॥

ಹಾಗವೆನೆ ನಾಲ್ಕು ದುಡ್ಡುಗಳನಿತ್ತಿಹಳಹುದು
ಶ್ರೀಗುರುವೆ ಪಡಿಯೆನಿಪುದನದನುರೆ ತಿಳಿಪು
ದೀಗ ಜೋಳಿಗೆ ಎನಿಸುದಾವುದೆ ತಿಳಿಸು ತಿಳಿಸೆಂದು ವಂದಿಸಿ ನಿಂದಿರೆ ।
ಯೋಗರಿಗೆ ತಿಳಿಸಬೇಕೆಂದು ಕೇಳುತ್ತಿರುವ
ನೀಗಿಂತನೆಂದು ತನ್ನೊಳ್ ತಾನೆ ತಿಳಿದು ಕಡು
ವೇಗದಿಂ ಪಡಿಯನುರೆ ಜೋಳಿಗೆಯನುರೆ ತೋರುತಿರ್ಪ ಗುರುವರನೆ ಶರಣು ॥೨೦೧೬॥

ಪಡಿಯೆನಿಪುದೀ ಎಡೆಯ ನೋಡು ನೋಡೆಲೆ ಮಗನೆ
ಪೊಡೆ ಇದುವೆ ಜೋಳಿಗೆಯೆನಿಸುತಿರ್ಪುದುದೆ ನೋಡು
ಕಡು ಜಾಣದೊಡೆಯರಣುಗನೆ ನೀನೆ ತಿಳಿಯಬೇಕೆಂದುರದೆ ತಿಳಿಸಲೊಡನೆ ।
ಕಡುಜಾಣರೊಡೆಯರೊಡೆಯನೆ ನೀನೆ ತಿಳಿಸುವುದು
ಕೊಡುತಿಹ ಬಗುತಣರು ಕೊಳುತಿಹ ಒಡೆಯನಾರು
ಕಡುತವಕದಿಂದೆಂದು ವಂದಿಸಲು ನಲಿದರುಹಿಸುತ್ತಿರ್ದ ಗುರುವೆ ಶರಣು ॥೨೦೧೭॥

ಸತಿಯೆನಿಸಿಕೊಳುತಿರ್ಪನೀ ಭಕ್ತಂ ಮಗನೆ
ಪತಿಯೆನಿಸಿಕೊಳುತಿರ್ಪನೀಗ ಮಾಹೇಶ್ವರಂ
ಸತಿಪತಿಗಳೊಂದಾಗಿಸುವನೆನಿಸ ವಿನತನಂ ಪೂಜಿಸುತ್ತಿಹದು ಮುಂದೆ ।
ಸುತರೆನಿಪ ಸುವಿರಕ್ತರ ಮಗನೆ ಕೇಳೆನಲ್
ಸುತನೆನಿಪ ನೀನಿಲ್ಲವೇ ಎಂದು ವಂದಿಸಲ್
ಸುತನುರೆ ದುರಾಚಾರಿಯಾಗಿರುವನೀಗ ಕೇಳೆಂಬ ಗುರುವರನೆ ಶರಣು ॥೩೦೨೮॥

ಸುತನುರೆ ದುರಾಚಾರಿಯಾಗಿರ್ದ ಕಥನದಿಂ
ಸುತನನುರೆ ಮನ್ನಿಸದೆ ಸತಿಪತಿಗಳೇ ತಾವು
ಸತತಮುರೆ ಭಕ್ತ ಮಾಹೇಶರೆನಿಸುತ ಪೂಜ್ಯ ಪೂಜಕರೆನಿಪರೀಗೆನೆ
ಸತತ ಭಕ್ತಮಾಹೇಶ್ವರರೆನಿಸರೆಂಬ
ಪ್ರತಿಸಹಿತ ಗುರುವೆ ನೀನೀಗಳುರೆ ತಿಳಿಸುವುದು
ಸತಿಯನುರೆ ಹೊರಗಿರಿಸಿ ಸತಿಯೊಳಗುಣಬಹುದೆ ಎನಲುಲಿವ ಗುರುವೆ ಶರಣು ॥೩೦೨೯॥

ಸತಿಪತಿಗಳೊಳ್ ತಾರತಮ್ಯವಿಹುದೆಲೆ ಮಗನೆ
ಸತಿಪತಿಗಳೆಲ್ಲರೊಂದೇ ಎಂದು ಬಗೆವರೆ
ಸತಿಯನುವನರಿದು ಸಂಯೋಗಮಂ ಮಾಡಬಲ್ಲಾತನೇ ಸುಪತಿಯೆನಿಸಂ ।
ಸತಿಯನುವನರಿಯದೇ ಸಂಯೋಗಕೆಳಸುತಿಹ
ಪತಿಯ ದುಷ್ಪತಿಯೆನಿಸುತಿರ್ಪನೀ ಪತಿಯಂ ನಿಜ
ಸತಿಯನುವನರಿಯದು ಹೊರಗಟ್ಟುತಿಹನುಂಬುವಾಗೆಂಬ ಗುರುವರನೆ ಶರಣು ॥೩೦೩೦॥

ಉಣುವಾಗ ಅವಳನುರೆ ಹೊರಗೆ ಕುಳ್ಳಿರೇ
ಉಣುತಿರ್ದು ಉಂಡಬಳಿಕವಳನೊಳಗುರೆ ಕರೆದು
ವಿನಯದಿಂದನ್ನಘುಮನಿತ್ತು ವಂದಿಸಿಕೊಳುತ ಕಳಿಸುತವಳಿರುವ ಮನೆಯೊಳ್ ।
ಉಣಿಸುತಿಹನೀಗ ಇನ್ನುರೆ ಮುಂದೆ ತನ್ನ ಸತಿ
ಯನುವರಿದು ತನ್ನ ಬಳಿಯಲ್ಲಿಯೇ ಉಣಿಸಿ ಸ
ದ್ವಿನಯದಿಂ ತಾನುಂಬುವಾಗ ಹೊರಗಿರಿಸನೈ ಎಂಬ ಗುರುವರನೆ ಶರಣು ॥೩೦೩೧॥

ಹೊರಗಿಡಿಸುತಿಹ ಸಮಯದೊಳ್ ಹೊರಗೆ ಇರಿಸುವಂ
ಕರುಣದೊಳಗಿರಿಸಿಕೊಳುತಿರ್ಪ ಸಮಯದೊ
ಳೆರಡಿಲ್ಲ ಒಂದ್ಕೆಯೆಂದುದದೆ ತಿಳಿಸಿ ಸಂಶಯವಳಿಸಿ ಇರಿಸಿಕೊಳುವಂ ।
ಅರಿಯದವರಿಗೆ ದುರ್ಬೋಧೆಯಂ ಪೇಳಿಯುರು
ಮರುಳತನದಿಂದೊಂದೆ ಭಾಜನದೊಳುಂಬ
ದುರುಳರೆನಿಸುವ ದುರ್ವಿರಕ್ತರಂ ಬಸಿಯನಿವರೆಂಬ ಗುರುವರನೆ ಶರಣು ॥೩೦೩೨॥

ಒಂದೆ ಭಾಜನದೊಳುಂಬುವುದನಕ ಹಾಗಿರಲಿ
ಒಂದೆ ಪಜ್ತೆಯೊಳುರದೆ ಕುಳಿತು ಇವನುಣ್ಣೆನೆಲೆ
ಕಂದನೇ ತನ್ನೊಲಾಚರಿಪ ಸಮಯಾಚಾರಿಗಳ ಪಜ್ತೆಯೊಳಗೆ ಕುಳಿತು ।
ಹೆಂದದಾಸುವದಿಂದುಂಬುತಿಹನ್ಯೆ ಮುಂದೆ
ಎಂದು ನುಡಿಯುತ್ತಿರಲು ಪೊಡಮಟ್ಟು ಗುರುವೆ ಇ
ನ್ನೊಂದನುರೆ ಕೇಳ್ವೆನೆನೆ ಕೇಳು ಕೇಳೆಲೆ ಮಗನೆ ಎಂಬ ಗುರುವರನೆ ಶರಣು ॥೩೦೩೩॥

ಒಂದೆ ಭಾಜನದೊಳುಣಬಾರದೆಂದರುಹಿದಿರಿ
ಒಂದೆ ಭಾಜನದಿ ನೀನುಂಡಿಲ್ಲವೇ ಎಂಬ
ಕಂದನಂ ನೋಡಿ ನಲಿದಾಡಿ ನೀನುರೆ ಕೇಳು ಕೇಳೆಂದು ನುಡಿವುತೆಡನೆ ।
ಹೆಂದದಾನಂದದಿಂ ಗುರುವೆ ತಾನೇ ಕರುಣ
ದಿಂದುರದೆ ಕರಕೊಂಡು ಉಂಡರುರೆ ಬಾಗಿರೆ ಭಯ
ದಿಂದುಂಡು ನಾನುಂಡೆನೆಂಬುದಂ ಮರೆದಿರುವುದ್ಯೆ ಎಂಬ ಗುರುವೆ ಶರಣು ॥೩೦೩೪॥

ಗುರುಕರುಣಮಂ ಪಡೆದು ಗುರುವಿನೊಡನುಂಡೆವೆನು
ತಿರುವ ತರವಾಯಿಗಳವರೊಡನೆ ಕೂಡುಂಡ
ಗುರುಗಳಂ ಕಂಡು ಕಾಣದ ಹಾಗೆ ಹೋಗುತಿಹ ಜಾಣನಿವನೆಂಬುತೊಡನೆ ।
ನೆರೆ ಸಮೀಪಕೆ ಬರಲು ವಂದಿಸುವನೆಂದಿನೋಲ್
ಮರುಳತನದಿಂದವರೊಡನೆ ಸಮರಸನೊಳಿರಂ
ಗುರುಬಸವ ದಂಡಾಧಿಪನ ವಚನಮಂ ಕೇಳಿದವನೆಂಬ ಗುರುವೆ ಶರಣು ॥೩೦೩೫॥

ಆ ಪುಣ್ಯ ಗುರುಬಸವನಾ ವಚನಮಂ ತಿಳಿಸು
ಶ್ರೀಪಶರರೂತನೇ ಎಂದು xxxಲೊಡನೆ
ಆಪ್ಯಾಯನಕ್ಕೆ ಅನ್ನವ ನೀಡುವೆ ಲಾಂಛನ ಕೆ ಶರಣೆಂಬೆನುರದೆ ।
ರೂಪಕ್ಕೆ ತಕ್ಕ ಆಚರಣೆಯವರಲ್ಲಿಲ್ಲ
ದೇ ಪೋಗೆ ನೀ ಸಾಕ್ಷಿಯಾಗಿ ಛೀ ಎನುತಿಪ್ಪೆ
ನೈ ಪರಾತ್ಪರ ಕೂಡಲಸಂಗಮನೆ ಎಂದರುಪಿದನೆಂಬ ಗುರುವೆ ಶರಣು ॥೩೦೩೬॥

ಒಂಬತ್ತುನೂರು ವಚನಗಳಿದೊಂದೇ ವಚನ
ಎಂಬಾಗಿರುವುದು ನಿರ್ಣಯಕೆಂದು ತಿಳಿಸುತಿರೆ
ತೊಂಬತ್ತುನೂರು ವಚನಗಳನುರೆ ಸೇರುವೆಯ ಮಾಡಿದವರಾರು ತಿಳಿಸೈ ।
ಎಂಬ ಕಂದನ ಕಂಡು ಮುಂಡಾಡಿ ಕೇಳೀಗ
ಕುಂಬಾರ ಅರಸು ಪಾಲಿಸುವ ಬಿದರೂರೊಳಗೆ
ಇಂಬುಗೊಂಡಿರ್ದ ತಾ ಬೂದಿಬಸವನಾಯಕನೆಂಬವನೆಂಬ ಗುರುವೆ ಶರಣು ॥೩೦೩೭॥

ಆತನುರೆ ಭಕ್ತಿಯಿಂ ಬಸವನೋಲ್ ಆ ಪುರದಿ
ಖ್ಯಾತಿವಡೆದಿರ್ದು ಬಸವೇಶ್ವರನ ವಚನಗಳ
ನೋಡು ಸೇರುವೆಯ ಮಾಡಿಸಿದನ್ನೈ ಬಲ್ಲಬಲ್ಲವರಿಂದ ಎಂದು ತಿಳಿಸೆ ।
ಆತನುರೆ ಸೇರುವೆಯ ಮಾಡಿಸಿದುದಂ ತಿಳಿಸು
ತಾತನೇ ಎಂದು ವಂದಿಪ ಕಂದನಂ ನೋಡಿ
ಈ ತರುಣಗುರೆ ತಿಳಿಸಬೇಕೆಂದು ತಿಳಿಸುತೊಳಗಿರುವ ಗುರುವದನೆ ಶರಣು ॥೩೦೩೮॥

ಹೆಂದದಾನಂದದಿಂ ಪೇಳಿರುವ ವಚನಂಗ
ಳೊಂದೊಂದೆಯಾಗಿ ಅಗಲಿದೆ ರಸಿಕತನದಿಂದ
ಒಂದು ವಚನಕೆ ಒಂದು ಎರಡು ವಚನಕೆ ಎರಡು ಮೂರು ವಚನಕೆ ಮೂರು ।
ಮುಂದೆ ನಾಲ್ಕೈದಾರು ಎನಿತಾದರೇನು ದಯ
ದಿಂದುರೆ ಬರೆದು ತಂದ ಹೇಳಿಕರಿಗ್ಗನಿತು ಜವ
ದಿಂದ ವರಹಗಳ ಕೊಡುತಿಹೆನೆಂದು ಒರಸಿ ಕಳಿಸಿದನೆಂಬ ಗುರುವೆ ಶರಣು ॥೩೦೩೯॥

ಬರೆಸಿ ಕಳಿಸಿದ ಪತ್ರವ ನೋಡಿ ದೇಶಿಕರು
ವರಹಗಳ ಸೆಳೆವ ಬುದ್ಧಿಯೊಳದ್ರಮತನದಿಂದ
ಗುರು ಬಸವರಾಜನಾ ವಚನವೊಂದಿರೆ ಒಂಬತ್ತು ವಚನಗಳ ಸೃಜಿಸಿ ।
ಪರಮ ಕೂಡಲಸಂಗಮದೇವನೇ ಎಂದು
ನೆರೆ ಕಡೆಯೊಳಂದುತವನಿಟ್ಟು ಬರೆದುರೆ ತರಲು
ನೆರೆ ನೋಡಿ ಸೇರುವೆಯ ಮಾಡಿಸಿದುದಂ ಕೇಳು ಕೇಳೆಂಬ ಗುರುವೆ ಶರಣು ॥೩೦೪೦॥

ಎನಿತು ವಚನಗಳನಿತು ವರಹಗಳನುರೆ ಕೊಟ್ಟು
ವಿನಯದಿಂದವರನುರೆ ಕಳಿಸಿ ಅವರವರೂರ್ಗೆ
ಇನಿತು ವಚನಗಳು ಬಸವೇಶನ ಪ್ರಸಾದವಾಕ್ಯಗಳೆನಿಸನೆಂದು ಬಗೆದು ।
ಘನ ತವಕದಿಂದೆ ಹೋರೆ ಹೊಳೆಯ ಬಸವೇಶ್ವ
ರನ ಬಳಿಗೆ ಬಂದು ಸಲೆನಿಂದು ತನ್ನೆದಿಯೊಳಗೆ
ತನಯನೇ ಒಂದೊಂದನುರೆ ಬರೆಸಿ ಹಾಕಿಸಿದನರಿಯೆಂಬ ಗುರುವೆ ಶರಣು ॥೩೦೪೧॥

ಬಸವನ ಪ್ರಸಾದ ವಾಕ್ಯವೆನಿಸುವ ವಚನಗಳು
ಸಸಿಗೆ ಇದಿರೇರಿ ಬರುವುದು ಪರರಿನೊಗೆದ ತಾ
ಮನ ವಚನಗಳು ಹರಿದು ಹೋಗಲೆಂದುರೆ ನುಡಿದು ಹಾಕಿಸುತ್ತುರೆ ಕುಳಿತಿರೆ ।
ಬಸವನ ಪ್ರಸಾದವಾಕ್ಯವೆನಿಸುವ ವಚನಗಳು
ಸಸಿಗೆ ಒಂಬತ್ತು ನೂರಿದಿರೇರಿ ಬರಲು ಸಂ
ತಸದಿ ತೆಗೆದು ಬರೆಸಿದನು ನವಶತಕ ವಚನವನೆಂಬ ಗುರುವೆ ಶರಣು ॥೩೦೪೨॥

ವರಹಗಳನುರೆ ಸೆಳೆವ ಬುದ್ಧಿಯಿಂ ಬರೆತಂದ
ವರ ವಚನಗಳು ಹೊಳೆಯೊಳಗೆ ತೇಲಿ ಹೋದನೆಲೆ
ತರುಣನೇ ತಿಳಿಯೆನಲು ನೈಜವಿದು ಎಂದು ವರಹಗಳ ತಿಳಿದವರು ಕೊಳರ್ಕೈ ।
ಅರಿಯದವರುರೆ ಕೊಂಡು ಇಟ್ಟು ಮುಂದುರೆ ಕೊಟ್ಟು
ನರಳುವರು ಅವರಂತೆ ದುರ್ವಿರಕ್ತರ ವಿಸರವ
ನುರೆ ಭಜಿಸಿ ಕೆಡುವರೀಗಿರುವ ಭಕ್ತರು ಎನಲ್ ನಲಿದುಲಿವ ಗುರುವೆ ಶರಣು ॥೩೦೪೩॥

ನಿನ್ನ ಭಕ್ತರು ಕೆಡುವರೆಂದರಿದು ನೀನೀಗ
ನನ್ನಿಯಹ ನಿರ್ಣಯ ಪುರಾಣಮಂ ನಿರ್ಮಿಸುತ
ನಿನ್ನ ಗುರು ಚೆನ್ನವೀರಾದಿ ವಿರತ ವಿಸದವನುಳಿದು ನೀನೊರ್ವನೀಗ ।
ನಿನ್ನ ಸತಿಯಂ ಭಜಿಸಿಕೊಳುತ ನೀನೀ ಮಠದಿ
ನೀಂ ನಾಡೆ ಮೂರು ವ್ಯಾಳ್ಯದಿ ಲಿಂಗಮಂ ಭಜಿಸಿ
ಚೆನ್ನಾಗಿ ಲಿಂಗಕರ್ಪಿಸಿ ಉಂಡು ನಲಿದಾಡುತಿರಿಯೆಂಬ ಗುರುವೆ ಶರಣು ॥೩೦೪೪॥

ಆನರಿಯದಿಪ್ಪತ್ತು ದಿನತನಕ ಬಳಲುತಿರೆ
ನೀನೆ ದಯದಿಂ ತಿಳಿಸಿ ಉಣಿಸುತಿರ್ಪೈ ಈಗ
ನೀನೆ ದಯದಿಂದಿನ್ನು ಉಳಿದವರಿಗುರೆ ತಿಳಿಸಬೇಕೆಂದು ವಂದಿಸುತಿಹ ।
ಸೂನುವಂ ನೋಡಿ ನಲಿದಾಡಿ ಮುಂಡಾಡುತ್ತ
ನೀನಿಂತು ನಿರ್ಣಯದೊಳುಣುತಿರಲು ತನ್ನಿಂ
ತಾನೆ ತಿಳಿವುದು ಮಗನೆ ಈಗನಕ ಉಣ್ಣೆಂದು ಉಣಿಸುತಿಹ ಗುರುವೆ ಶರಣು ॥೩೦೪೫॥

ಕಬ್ಬಿನ ರಸದಿನೆಸಗಿದ ಪಾಯಸವನುರೆ
ಉಬ್ಬಿಸಂ ನೀಡಿಸಿದೆ ಎನಗಿರುವೆ ರುಚಿಸದೆನೆ
ಕಬ್ಬಿನ ರಸವನನದು ಭಕ್ತಿಯಿಂದಿತ್ತಿಲ್ಲವವರ್ಗೆ ರೊಕ್ಕವನು ಕೊಡದೆ
ಮಬ್ಬಿನಿಂ ತಂದಿxxxದ ರುಚಿಸದೇ
xxxxxಡಿಸಿತನುತ ಬಿಡಿಸಿ
ಕಬ್ಬಿನ ರಸದಿನೊಗೆದ ಬೆಲ್ಲಮಂ ತರಿಸಿ ಮೆಲ್ಲಿಸುತುಲಿವ ಗುರುವೆ ಶರಣು ॥೩೦೪೬॥

ಇದನುರದೆ ರೊಕ್ಕಮುಮನಿತ್ತು ತಂದಿರುವರೈ
ಇದು ರುಚಿಯೆನಿಪುದೀಗ ನೋಡು ನೋಡೆನುತಿರ್ದ
ಇದನುರದೆ ಹಾಕಿ ಗೋಧಿಯ ಹುಗ್ಗಿಯಂ ಮಾಡಿಸೆಂದರುಪಿ ಮಾಡಿಸುತ್ತ ।
ವಿದಿತವೆನಿಸುತ್ತಿರ್ಪ ಗೋಧಿ ಪಾಯಸನಿದ್ಕೆ
ಇದರೊಳಗೆ ಪರಡಿ ಶಾವಿಗಿ ಗವಲಿ ಗುಳಿಗೆಗಳು
ಹುದುಗಿಹವು ಪಂಚ ಪಾಯಸವಿಚ್ಛೆಯಾದುದುಣ್ಣೆಂಬ ಗುರುವರನೆ ಶರಣು ॥೩೦೪೭॥

ಇಚ್ಛೆಯಾದುದನುಣುವುದೆಂದರುಹಿಸಿದಿರಿ ನಿ
ನ್ನಿಚ್ಛೆಯಾದುದನುಣುವ ಇಚ್ಛೆಯಂ ಕೊಡುಯೆಂಬ
ಸಚ್ಚರಿತ ಸುತನನುರೆ ನೋಡಿ ನಲಿದಾಡಿ ನಿನ್ನಿಚ್ಛೆಯೇಯೆನ್ನಿಚ್ಛೆಯ್ಯೆ ।
ಮಚ್ಚಿದಂಗನೆಯನುರೆ ಮಚ್ಚಿಸುವ ಪುರುಷನೋಲ್
ಮಚ್ಚಿರು ನಿನ್ನ ಸತಿಯಂ ಮಚ್ಚಿಸುತ್ತಾರೆ ತ
ದಿಚ್ಛೆಯನರಿದು ಮಾಡಿಸಿಯುಣುತ ಉಣಿಸಿ ತಣಿಸೆಂದುಲಿವ ಗುರುವೆ ಶರಣು ॥೩೦೪೮॥

ನಿನ್ನಿಚ್ಛೆಯೇ ಎನ್ನ ಇಚ್ಛೆ ಎನಿಸುತ್ತಿಹುದು
ನಿನ್ನ ಸತಿ ಇಚ್ಛೆಯೇ ಎನ್ನಿಚ್ಛೆ ಎನಿಸುವುದು
ನಿನ್ನೊಳಿರುತಿರ್ಪೆನ್ನೈ ಅವರೊಳಿರುತಿರ್ಪೆನ್ನೈ ನೆನಿದುನೋಡೆಂಬುತೊಡನೆ ।
ಎನ್ನೊಳಗೆ ನೀನಿರ್ವಿ ಅವಳು ಎನ್ನೊಳಗಿಪ್ಪ
ಳೆನ್ನ ಮಗನೇ ನೋಡು ನೋಡೆಂದು ತೋರುತ್ತ
ಇನ್ನುಣುವ ವ್ಯಾಳೆಯೊಳ್ ಬರಲು ಬರಬ್ಯಾಡೆನ್ನದಿರು ಎಂಬ ಗುರುವೆ ಶರಣು ॥೩೦೪೯॥

ಬರಲು ಹೋಗೆನ್ನದಿರು ಬಾರದಿರೆ ಬಾಯೆನ್ನ
ದಿರುತ ನಿನ್ನೆಡೆಯನುರೆ ನೋಡಿಕೊಳುತುಂಬುವುದು
ಪರರು ಬರಲವಳೆ ಬರಬ್ಯಾಡೆಂದು ಸೂಚಿಸುತ್ತಿರೆ ನಾಚಿ ಪೋಪರವರ್ಯೆ ।
ತರುಣನೆ ನೀನೀಗಳೊಮ್ಮೆ ನೀಡಿಸಿಕೊಳುವ
ದೆರಡು ಸೂಳಂ ನೀಡಿಸಿಕೊಳದೆ ಉಣ್ಣಿವಳ
ಕರದಿಂದೆ ಎನಲುರದೆ ತಿಳಿಸೆಂದು ವಂದಿಸಲ್ ತಿಳಿಸುತಿಹ ಗುರುವೆ ಶರಣು ॥೩೦೫೦॥

ದೀಕ್ಷಿತರ ಕರದಿಂದೊಮ್ಮೆ ನೀಡಿಸಿಕೊಂಡು
ಶೀಕ್ಷಿತರ ಕರದಿಂದಿನ್ನೊಮ್ಮೆ ನೀಡಿಸಿಕೊಂಡು
ಮೋಕ್ಷಾಗುರುವಿನಿಂದ ಜ್ಞಾನೋಪದೇಶಮಂ ಪಡೆದವರ ಹಸುxxx ॥೩೦೫೧॥

ಇಲ್ಲಿ ಒಂದು ಪತ್ರ (೭೪೦ ಮತ್ತು ೭೪೧) (ಪದ್ಯ ೩೦೫೨–೩೦೬೯)
ಕಳೆದು ಹೋಗಿದೆ.

॥೩೦೬೯॥

ನೀನೆ ನಿನ್ನಯ ಕರದೆ ಕೊಡುಬಾರದ್ಯೆ ಈಗ
ಸಾನುರಾಗದಿ ನಿನ್ನ ಸತಿಯ ಕರದಿಂ ಕೊಡಿಸು
ಸೂನುವೇ ಎಂದರುಹಿ ತಾನೆ ತನ್ನಯ ಸೊಸೆಯ ಕರೆದವಳಿಗುರದೆ ತಿಳಿಸಿ ।
ತಾನೆ ಗುರುವಯ್ಯನಂ ಬರಿಸಿ ಅಕ್ಕಿಯ ಕೊಡುವ
ಳ್ಯೆ ನೀನೆ ಅನ್ನಮಂ ಮಾಡಿಕೊಂಡುಣುವುದೆನ
ಲಾನೆಲಲ್ಲೆನೀಗನಕ ಇರಲಿ ಎನಲುರೆ ನಗುತ್ತಿರುವ ಗುರುವರನೆ ಶರಣು ॥೩೦೭೦॥

ಹಿಟ್ಟನುರೆ ಕೊಟ್ಟು ರೊಟ್ಟಿಯ ಮಾಡಿಸುತ್ತಿರ್ದು
ರೊಟ್ಟಿಯನೆನಗೆ ಕೊಟ್ಟು ಎನ್ನನುರೆ ಪೊರೆಯುತಿಹ
ಕೊಟ್ಟೂರ ಒಡೆಯರೆನಗೀಗ ಹಿಟ್ಟಂ ಕೊಟ್ಟು ರೊಟ್ಟಿಯಂ ಮಾಡಿಸಿರೆನೆ ।
ಕಟ್ಟಕ್ಕರದಿ ಕರೆದು ಅಕ್ಕಿಯಂ ಕೊಡಿಸುತುರೆ
ಬಿಟ್ಟು ಈಗಲಿಲ್ಲೆನನಕಾ ಇರಲಿ ಎಂದುಲಿದ
ನಟ್ಟುಂಬುವವನಲ್ಲ ಸುಟ್ಟುಂಬ ಸೋಂಬನಿವನೆಂಬ ಗುರುವರನೆ ಶರಣು ॥೩೦೭೧॥

ಸುಟ್ಟುಂಬ ಸೋಂಬನಿವನೆಂದುರದೆ ನುಡಿದಿದ್ದು
ರೊಟ್ಟಿಯಂ ತಿಂಬುವರು ಸುಟ್ಟುಂಬ ಸೋಂಬರೆ
ನೆಟ್ಟನೇ ನೀನೀಗ ತಿಳಿಸೆಂದು ವಂದಿಸುವ ಕಂದನಂ ನೋಡಿ ನಲಿದು ।
ಸುಟ್ಟುಂಬ ಸಮಯದೊಳಟ್ಟುಂಬವನೆ ಸೋಂಬ
ನಿಟ್ಟಣಿಸದಮಳ ಗುಣಗಳನುಳ್ಳ ಮಗನೆ ನೀನರಿಯೆಂಬ ಗುರುವೆ ಶರಣು ॥೩೦೭೨॥

ಅಟ್ಟುಂಬ ಸಮಯ ಸುಟ್ಟುಂಬ ಸಮಯಮಮಂ
ಕಟ್ಟಕ್ಕರದಿ ತಿಳಿವ ಹಾಂಗೆ ತಿಳಿಸೆಂದು ಪೊಡ
ಮಟ್ಟ ಮಗನಂ ಕಂಡು ಮುಂಡಾಡಿನೀನುರದೆ ಕೇಳುಕೇಳೆನುತ ನಗುತ ।
ಅಟ್ಟುಂಬ ಸಮಯವದು ಹೊಟ್ಟೆಯುರೆ ಕೆಟ್ಟಾಗ
ಸುಟ್ಟುಂಬ ಸಮಯವದು ಹೊಟ್ಟೆಯುರೆ ಕೆಡದಾಗ
ಅಟ್ಟುಂಡು ಸುಟ್ಟುಂಡು ಬಾಳುವವರೊಳಗೆಂದು ಬಳಿಕುಲಿವ ಗುರುವೆ ಶರಣು ॥೩೦೭೩॥

ಅಟ್ಟುಂಬವನುವಿಲ್ಲದಿರಲು ಸುಟ್ಟುಂಬುವುದು
ಅಟ್ಟುಂಬವನುವಿರಲು ಸುಟ್ಟುಂಬೆನ್ಯೆ ಎಂದು

ರೊಟ್ಟಿಯಂ ಸುಟ್ಟು ತಿಂಬವನವನೆ ಸೋಂಬನೆಂದರುಹಿಸುತ್ತಿರ್ದು ಮತ್ತಂ ।
ಅಟ್ಟುಂಡರೂ ಒಂದೆ ಸುಟ್ಟುಂಡರೂ ಒಂದೆ
ಕಟ್ಟಿಲ್ಲದುಂಬವ್ವರು ಹ್ಯಾಗುಂಡರೇಂ ಮಗನ
ಕಟ್ಟಿನಿಂದುಂಬವರು ಸುಟ್ಟುಣ್ಣಬಾರದೆಂದರುಹಿಸುವ ಗುರುವೆ ಶರಣು ॥೩೦೭೪॥

ಕಟ್ಟಿಲ್ಲದುಂಬವರನುರೆ ತಿಳಿಸು ಮದ್ಗುರುವೆ
ಕಟ್ಟಿನಿಂದುಂಬುವರನುರೆ ತಿಳಿಸೆನುತ್ತ ಪೊಡ
ಮಟ್ಟ ಮಗನಂ ನೋಡಿ ನಲಿದಾಡಿ ನೀನೀಗ ಕೇಳು ಕೇಳೆನುತ ನಗುತ
ಕಟ್ಟಿಲ್ಲದೇ ನುಡಿದು ಕಟ್ಟಿಲ್ಲದೇ ನಡೆದು
ಕಟ್ಟಿಲ್ಲದೇ ಕೊಟ್ಟು ಕಟ್ಟಿಲ್ಲದೇ ಕೊಂಡು
ಕೆಟ್ಟು ಹೋಗುವರೆ ಕಟ್ಟಿಲ್ಲದುಂಬುವರೆಂದು ಬಳಿಕುಲಿವ ಗುರುವೆ ಶರಣು ॥೩೦೭೫॥

ಕಟ್ಟಿನಿಂದುರೆ ನುಡಿದು ಕಟ್ಟಿನಿಂದುರೆ ನಡೆದು
ಕಟ್ಟಿನಿಂದುರೆ ಕೊಂಡು ಕಟ್ಟಿನಿಂದುರೆ ಕೊಟ್ಟು
ಕಟ್ಟಕ್ಕರದಿ ಹೇಳಿ ಹೋಗುವರೆ ಕಟ್ಟಿನಿಂದುಂಬವರೆನುತ್ತ ಮತ್ತಂ
ಕೆಟ್ಟು ಹೋಗುವ ಕೊಟ್ಟಿ ಮಾನವರು ನಿನ್ನವರೆ
ಕಟ್ಟಕ್ಕರದಿ ಹೇಳಿ ಹೋಗುವದು ನಿನ್ನವರೆ
ಸಿಟ್ಟು ಮಾಡಲಿಬ್ಯಾಡ ಮಗನೆ ನಿನಗಿನ್ನು ತಿಳಿಸುವೆಂಬ ಗುರುವೆ ಶರಣು ॥೩೦೭೬॥

ನಿನಗೆ ಸಿಟ್ಟಂ ಮಾಡಿ ಆನೆಂತು ಬದುಕುವೇ
ಘನ ಗುರುವೆ ನೀನೀಗ ತಿಳಿಸೆಂದು ವಂದಿಸುವ
ತನಯನಂ ಕಂಡು ಮುಂಡಾಡಿ ಮುದ್ದಿಸಿ ಕೇಳು ಕೇಳೆಂದು ನಲಿವುತೊಡನೆ ।
ವಿನಯದಿಂ ಮಂತ್ರೋಚ್ಚರಣದಿಂದ ಪೋಪ ತು
ತ್ತಿನ ಹಾಂಗೆ ಕಟ್ಟಿನಿಂದುಂಬುವವರೆಂದು ಉಸಿ
ಕನೆ ಪೋಪ ಮಲದಂತೆ ಕಟ್ಟಿಲ್ಲದುಂಬುವರೆಂಬ ಗುರುವರನೆ ಶರಣು ॥೩೦೭೭॥

ಎನ್ನ ಸಂಶಯಮುರದೆ ಪೋಪಂತೆ ತಿಳಿಸಿದಿರಿ
ಎನ್ನ ಗುರುವೇ ಎಂದು ವಂದಿಸುತ್ತಿರ್ದು ಬಳಿ
ಕಿನ್ನೊಂದನುರೆ ಕೇಳುತಿಹೆನೆಂದು ವಂದಿಸುವ ಕಂದನಂ ನೋಡಿ ನಲಿದು ।

ಚೆನ್ನಾಗಿ ಕೇಳು ಕೇಳೆಂದು ನಿರವಿಸಿ ಪಾದ
ಪನ್ನಳಿನಮಂ ಪಿಡಿದು ಪೊಡಮಟ್ಟು ಸಲೆ ಕುಳಿತು
ಎನ್ನ ಮನದೊಳಗಿರ್ದುದಂ ತಿಳಿದು ನೀನೆ ಪೇಳೆನಲುಲಿವ ಗುರುವೆ ಶರಣು ॥೩೦೭೮॥

ನಿನ್ನ ಮನದೊಳಗಿರ್ದುದೇ ಎನ್ನ ಮನದೊಳಹು
ದೆನ್ನ ಮಗನೇ ಎನಗೆ ನಿನಗೆ ಭಿನ್ನತೆಯುಂಟೆ
ಚೆನ್ನಾಗಿ ಸಕಳರಿಗೆ ತಿಳಿಸಿಯವರವಗುಣವನುಳಿಸಬೇಕೆಂಬ ಮತಿಯಿಂ ।
ಭಿನ್ನತೆಯನಾಂತು ಗುರುಶಿಷ್ಯರೆನಿಸುತ್ತಿರ್ದು
ಎನ್ನ ಮನದೊಳಗಿರ್ದುದಂ ತಿಳಿದು ಪೇಳೆಂದಿ
ಭಿನ್ನವಿಲ್ಲೈ ಇನ್ನು ನೀನೆ ತಿಳಿಸೆಂದು ಕೇಳಿಸುತ್ತಿರುವ ಗುರುವೆ ಶರಣು ॥೩೦೭೯॥

ಕಟ್ಟಿನಿಂದಿರುವುದೀ ಬ್ರಹ್ಮಾಂಡವೆಲೆ ಮಗನೆ
ಕಟ್ಟಿನಿಂದಿರುವುದೀ ಪಿಂಡಾಂಡವೆಲೆ ಮಗನೆ
ಕಟ್ಟಳಿಯಲೀ ಬ್ರಹ್ಮಾಂಡ ಮುಂದೆ ನಿಲ್ಲಿದೀ ಪಿಂಡಾಂಡಮುರೆ ನಿಲ್ಲದೈ ।
ಕಟ್ಟಿಲ್ಲದಿಹ ಪ್ರಾಣಿಯೊಂದಿಲ್ಲೆಲೆ ಮಗನೆ
ಕಟ್ಟಿನೊಳಿರ್ದು ಕಟ್ಟಂ ತಿಳಿಯದೇ ಬರಿದೆ
ಕೆಟ್ಟು ಹೋಗುವ ಲೋಗರು ನೋಡಿ ಬೆರಗಾಗುಸುರೆನೆಂಬ ಗುರುವೆ ಶರಣು ॥೩೦೮೦॥

ಕೆಟ್ಟು ಹೋಗುವ ಲೋಗರಂ ನೊಡಿ ಬೆರಗಾಗಿ
ಕಟ್ಟನುರೆ ನಿನಗರುಹಿನಿಂ ನಿಂದಿವರಿಗರುಹಿ
ಕಟ್ಟಕ್ಕರದಿನಿವರ ಸಲಹಬೇಕೆಂಬ ಸದ್ಬುದ್ಧಿಯಿಂದಾನೆ ನಿನ್ನಂ ।
ಪುಟ್ಟಿಸುತ ಸಾಲೀಯಗನೆನಿಸಿರ್ದು ಒಡ
ಹುಟ್ಟಿದವರಿಂದ ಕಾಡಿಸಿ ಮಡವನುರೆ ಬಿಡಿಸಿ
ಕಟ್ಟನರುಹಿಸಲೋಸುಗಂ ಬರಿಸಿರುವೆನಿಲ್ಲನೆಂಬ ಗುರುವೆ ಶರಣು ॥೩೦೮೧॥

ಇಲ್ಲಿಗುರೆ ಬದಿಸಿ ನಿರ್ಣಯ ಪುರಾಣವ ಬೆಳೆಸಿ
ಎಲ್ಲರನೊಡಂಬಡಿಸಿ ನಿರ್ಣಯ ಭಿಕ್ಷೆಯಂ
ಮೆಲ್ಲನೇ ಕೈಕೊಳಿಸಿ ಶಿವಲಿಂಗರುದ್ರಸರ್ಜಾಹ್ವಯ ಮಹೀನಾಥಗೆ ।
ಇಲ್ಲಿಗುರೆ ಬರಿಸಿರ್ದುದಂ ತಿಳಿಸೆ ಶಾಸ್ತ್ರಮಂ

ಬಲ್ಲಾತ ನಾನೆಂಬ ಮಡದಿಂದುದಾಸಿಸಲ್
ಎಲ್ಲರರಿವೋಲ್ ತನ್ನ ತಮ್ಮನಂ ಕಳೆದಿರುವನೀಗೆಂಬ ಗುರುವೆ ಶರಣು ॥೩೦೮೨॥

ನೀನಿಂತು ಮೂದಲಿಪರೇ ಎಂದು ವಂದಿಸುವ
ಸೂನುವಂ ನೋಡಿ ನಲಿದಾಡಿ ನೀನುರೆ ಕೇಳು
ಭೂನಾಥನೆನಿಸುತನುರದೆ ನಿರ್ಣಯದಿಂದ ರಾಜ್ಯಮುಮನಾಳಬೇಕೈ ।
ಭೂನಾಥನೆನಿಪಾತನನ್ಯಾಯದಿಂದಾಳೆ
ಹಾನಿಯುರೆ ಬರುವುದೆಂದರಿದು ಸಸಿಕನಿರಲಾ
ಹಾಗಿಯಂ ನಾನೆ ಬರಿಸಿದೊಲಾಗುತಿಹುದೆಂದು ನಗುತಿರುವ ಗುರುವೆ ಶರಣು ॥೩೦೮೩॥

ನೀನೆ ಬರಿಸಲು ಎಂತಾದರುರೆ ಬರುವುದೈ
ನೀನೆ ಸರಿಸಲು ಎಂತಾದರುರೆ ಸರಿವುದೈ
ನೀನೀಗ ಶಿವಲಿಂಗರುದ್ರ ಸರ್ಜಗೆ ಬರುವ ಹಾನಿಯಂ ಸರಿಸಬೇಕೈ ।
ಮಾನಾಥನಾಥ ರೂಪನೆಯೆಂದು ವಂದಿಸುವ
ಸೂನುವಂ ನೋಡಿ ನಲಿದಾಡುತೊಲಿದಾಡುತ್ತ
ನೀನಿರುವ ಈ ತಳದೊಳಿರಲಿವನ ಹಾನಿಯೋಡುವುದೆಂಬ ಗುರುವೆ ಶರಣು ॥೩೦೮೪॥

ಈ ತಳಕೆ ಬರುವಂತೆ ಮಾಡಿಸುವುದೈ ಇನ್ನು
ತಾತನೆಂದು ವಂದಿಸಿ ಕರವನುರೆ ಮುಗಿದು
ಓತು ನಿಂದಿಹ ಕಂದನಂ ಮುಂಡಾಡಿ ಮುದ್ದಿಸುತ್ತಿರ್ದು ಕೇಳೈ ।
ಈ ತಳದಿ ನೀನಿರುವನಿತರೊಳಗುರೆ ಬರುವ
ಆತನುರೆ ಬರುವನಕ ನೀನಿಲ್ಲೆ ಇರು ಎಂದು
ಪ್ರೀತಿಯಿಂ ತಿಳಿಸುತೆನ್ನೊಳ್ ಕುಳಿತು ನಲಿದುಲಿಯುತಿರ್ಪ ಗುರುವರನೆ ಶರಣು ॥೩೦೮೫॥

ಕಟ್ಟನುರೆ ನಿನಗರುಹಬೇಕೆಂಬನಿತರೊಳಗೆ
ಕಟ್ಟನುರೆ ತಿಳಿಯುತ ತ್ರಿಕಾಲದೊಳ್ ಲಿಂಗಮಂ
ಕಟ್ಟಕಳದಿ ಭಜಿಸಿ ಕಟ್ಟನಿಂ ಲಿಂಗಕರ್ಪಿಸಿ ಸವಿದು ನಲಿಯುತೊಡನೆ ।
ಕಟ್ಟನಿಂದೊಂದು ಕಾಲದಿನೊಂದು ಹಾಗಮಂ
ಕೊಟ್ಟು ಲಿಂಗಕ್ಕರ್ಪಿಸಿ ಸೇವಿಸುತ್ತಿರ್ಪ
ಕಟ್ಟನುರೆ ತಿಳಿದಿ ನಿನ್ನೊಳ್ ನೀನೆ ಎಂದು ಮುಂಡಾಡುತಿಹ ಗುರುವೆ ಶರಣು ॥೩೦೮೬॥

ನಿನ್ನೊಳಗೆ ನೀನೇ ತಿಳಿದು ಕಡು ತವಕದಿಂ
ನಿನ್ನ ಸತಿಯಿಂ ನೀನೆ ಕೈಕೊಂಡು ಹಾಗಮಂ
ನಿನ್ನ ಲಿಂಗಕೆ ಕೊಟ್ಟು ನೀನೆ ಅರ್ಪಿಸಿ ಸವಿದು
ನಲಿದಾಡುತಿರ್ಪಿ ಈಗೈ ಇನ್ನು ನಿನ್ನಯ ಭಕ್ತರುರೆ ಬಂದುರದೆ ಕೇಳಿ
ಬಿನ್ನಹವ ಮಾಡಲಿದರಂತೆ ಕೈಕೊಳ್ಳುದೈ
ಎನ್ನ ಮಗನೇ ಎಂದು ತಿಳಿಸುತ್ತೊಳಗೆ ತೊಳಗುತಿರ್ಪ ಗುರುವರನೆ ಶರಣು ॥೩೦೮೭॥

ಬಡವ ಬಲ್ಲಿದರ ಬಿನ್ನಹವನುರೆ ಕೈಕೊಂಡು
ಹೆಡೆವಿಡದೆ ಮುಂದೆ ಎಂದರುಹಿಸುವ ಮದ್ಗುರುವೆ
ಕಡು ತವಕದಿಂ ತಿಳಿಸು ಬಲ್ಲಿದರು ಹಾಗಮುಮನಿತ್ತು ಉಣಿಸುತ್ತಿರ್ಪರ್ರೈ ।
ಬಡವರೂ ಕೊಟ್ಟು ಉಣಿಸುವರೆ ಎನುತ ನುತಿಸೆ
ಬಡವರೇ ಮುಂಚೆ ಉಣಿಸುವರು ಅದರಿಂ ಹಿಂಚೆ
ಸಡಗರದ ಬಲ್ಲಿದರು ಉಣಿಸುತಿಹರೆಂದು ಬಳಿಕರುಹಿಸುವ ಗುರುವೆ ಶರಣು ॥೩೦೮೮॥

ಬಡವರೊಂದವಸರದಿ ಹಾಗವನುರದೆ ನಿನಗೆ
ಕೊಡಲಾರೆವೆನಲು ನೀನುರೆ ಕೊಟ್ಟುಕೊಂಡು
ಬಡವರ ಮನೆಯೊಳುಂಡು ಬಡವರಂ ಬಿಡದೆ ಪೊರೆವುದು ಎಂದು ತಿಳಿಸುತೊಡನೆ ।
ಎಡೆಗಳೆರಡೆನಿಸಿರಲು ಕೊಡಬಾರದೊಂದೆ
ಎಡೆಯೆನಿಸಿ ಈಗಿನೊಲಡಗಿಸಿಯುಣಿಸುತಿರಲು
ಕೊಡು ಎನಲು ಕೊಡುವರ್ರೈ ಇಲ್ಲವೇ ಕೊಡಬಾರದೆಂಬ ಗುರುವರನೆ ಶರಣು ॥೩೦೮೯॥

ಈಗಿನೋಲೊಂದೆಡೆಯೊಳುಣವಾಗ್ಯೆ ಬೇಡಲನು
ರಾಗದಿಂ ಕೊಟ್ಟು ಕೈಕೊಂಡುಣ್ಣಬೇಕೆಂಬ
ಶ್ರೀಗುರುವೆ ತಾನೇಯಿತ್ತು ಕೈಕೊಂಬುತುಂಬುತ್ತಿರುವುದೇಂ ನಿಮಿತ್ತಂ ।
ಈಗೆನಗೆ ತಿಳಿಸು ತಿಳಿಸೆಂದು ವಂದಿಸೆ ನಗುತ
ಮೂಗನಾಗಿರೆ ಮೂಗನಾದಿ ಯಾಕೈ ಗುರುವೆ
ಬ್ಯಾಗದಿಂ ತಿಳಿಸೆಂದು ವಂದಿಸುತ್ತಿರಲು ನಲಿದುಲಿಯುತಿಹ ಗುರುವೆ ಶರಣು ॥೩೦೯೦॥

ಇನ್ನು ನಿನಗುತ್ತರವನೀವರಾರಿಲ್ಲೆಲೆ
ಚೆನ್ನವೀರಾರ್ಯಗುರು ವರಸುತನೆ ನಿನ್ನ ಗುರು

ಚೆನ್ನವೀರಾದಿ ವಿರತರು ತಮ್ಮೊಳಗೆ ತಾವೆ ಉಮ್ಮಳಿಸುತಿಹರೆಂತೆನೆ ।
ಇನ್ನು ಮುನ್ನಿನೊಲು ನಮ್ಮಾಚರಣೆಯುರೆ ನಡೆಯ
ದಿನ್ನು ಮುನ್ನಿನೊಲು ಸ್ವೇಚ್ಛೆಯೊಳಿರೂಣಾಗದಿವ
ನೀಂ ನಾಡೆ ಅಪಮಾನಕೀಡಾದೆವೆಂದುಮ್ಮಳಿಪರೆಂಬ ಗುರುವೆ ಶರಣು ॥೩೦೯೧॥

ಅವರ ಮಗನೆನಿಸಿ ಅವರಾಚರಣೆಯಂ ಸರಿಸಿ
ಅವರನಳ್ಕಿಸಿ ಅವರಿಗೆ ಬಳ್ಕುತಿಹ ಮಗನೆ
ತವಕದಿಂ ನಿನಗೀಗ ತಿಳಿಸುತಿಹೆನುರೆ ಕೇಳು ಕೇಳೆಂದು ನುಡಿಯುತೊಡನೆ ।
ಅವಿರತಂ ಲಿಂಗಾರ್ಚನೆಯ ಮಾಡಿ ಲಿಂಗಾರ್ಪಿ
ತವ ಮಾಡಿ ನಲಿದಾಡುತಿಹ ಮಗನೆ ನಿನಗೆ ವಂ
ದವನುರದೆ ತಪ್ಪಬಾರದೆನಿಪ್ಪ ಕಾರಣದಿ ಕೇಳೆಂಬ ಗುರುವೆ ಶರಣು ॥೩೦೯೨॥

ತಪ್ಪಬಾರದೆನಿಪ್ಪ ಕಾರಣದಿ ಪೇಳ್ದನೆ
ತಪ್ಪಿಸಲು ತಪ್ಪುತಿಹುದಲ್ಲದೇ ತಾನೇ
ತಪ್ಪುವುದೆ ನೀನೀಗ ತಿಳಿಸೆಂದು ವಂದಿಸುವ ಕಂದನಂ ನೋಡಿ ನಲಿದು ।
ತಪ್ಪಿಸೆನು ನಿನಗೆ ಎಂದೆಂದು ಕಾಲಾಂತರದಿ
ತಪ್ಪಿ ತಪ್ಪಿಸಿದರೆನ್ನಯ ತಪ್ಪನುರೆ ಕ್ಷಮಿಸು
ಮುಪ್ಪಿನವನಾದಾಗ್ಯೆ ಎಂದುರದೆ ತಿಳಿಸಿ ಬಳಿಕರುಹಿಸುವ ಗುರುವೆ ಶರಣು ॥೩೦೯೩॥

ತಪ್ಪಿತಪ್ಪಿರೆ ಕಂಡು ನುಡಿವವನೆ ನೀನೊಮ್ಮೆ
ತಪ್ಪಿದರು ಎನಗೊಪ್ಪು ಎನುತರುರಿಸುತ್ತಿರ್ದು
ತಪ್ಪಿ ತಪ್ಪಿದೆವೆಂದು ನುಡಿಯದಿಹ ನೀಚರಂ ನಾಚಿಸುವ ಕಾರಣದೊಳೆ ।
ತಪ್ಪದೇ ನುಡಿದಂತೆ ನಡೆದು ನಡೆದಂತೆ ನುಡಿ
ದಿಪ್ಪ ಶಿವಶರಣರು ಪೊಗಳುತಿಹ ಪೋತನೇ
ತಪ್ಪದೇ ನಡೆಸುವೆನು ನಿನ್ನತ್ತವೀ ಕ್ರಮವ ನಾನೆಂಬ ಗುರುವೆ ಶರಣು ॥೩೦೯೪॥

ನೀನೆ ನಡೆಸುತ್ತಿರ್ದು ನೀನೇ ಭಜಿಸಿಕೊಳುತ
ನೀನೆ ಹಾಗವನಿತ್ತು ಕೈಕೊಳುತ ಲಿಂಗಕ್ಕೆ
ನೀನೆ ಅರ್ಪಿಸಿ ಸವಿದು ಎನಗುಣಿಸಿ ಸಲಹಬೇಕೆಂದು ವಂದಿಸಿ ನಿಂದಿಹ ।

ಸೂನುವಂ ನೋಡಿ ನಲಿದಾಡಿಯೊಡಗೂಡಿರ್ದು
ನಾನು ನೀನುರೆ ಬೆರೆದು ಲಿಂಗದೇವನಿಗೀಗ
ಸಾನುರಾಗದಿನುಣಿಸುತುಣಿತಿರ್ಪವೈ ಮಗನೆ ನೋಡೆಂಬ ಗುರುವೆ ಶರಣು ॥೩೯೫॥

ಕದವನುರೆ ಹಾಕಿ ಒಳಗಾರನುರೆ ಬರಗೊಡದೆ
ಅಧಮತನದಿಂದೊರ್ವನೇ ಉಂಬನೀಗೆಂದು
ಅದಿದೆನ್ನದೆಲ್ಲಾ ಸಮಯದಲ್ಲಿ ನಿಂದಿಸುವರೀಗೈ ಎಂದು ವಂದಿಸುತಿರೆ ।
ಮದನಹರ ಶರಣರಣುಗನೆ ಈಗಳುರೆ ನಿಂದಿ
ಸಿದ ನಿಂದಕರ ಮುಂದೆ ವಂದಿಸುವರೆಂದರುಪಿ
ಇದನುರದೆ ಈ ನಾಡದೊರೆಯುರದೆ ಕೇಳುತಿಹನಿನ್ನೆಂಬ ಗುರುವೆ ಶರಣು ॥೩೯೬॥

ಈ ನಾಡದೊರೆಯುರದೆ ಕೇಳಿ ಕಡು ತವಕದಿಂ
ನೀನಿರ್ದೆಡೆಗೆ ತನ್ನವರನಟ್ಟಲು ಕಾಲ
ಜ್ಞಾನದ ಲಕೋಟಿಯಂ ಮುಟ್ಟಿಸದೆ ನುಡಿಯಬಾರದು ಎಂದು ನುಡಿಯುತೊಡನೆ ।
ಆನಿಂತು ಒರ್ವನೇ ಕಡೆತನಕ ಉಣ್ಣೋನೈ
ಸಾನುರಾಗದೆ ಸಕಲರೊಡಗೊಂಡು ನಲದುಂಬೆ
ನೈ ನೈಜಮುರೆ ಮುಂದೆ ಎಂದು ತಿಳಿಸೆಂದು ತಿಳಿಸುತ್ತಿರುವ ಗುರುವೆ ಶರಣು ॥೩೯೭॥

ಈ ಲಕೋಟಿಗಳಾವ ತಳದಿಂದ ಕಳಿಸುವುದು
ಪೇಳು ಗುರುವೇ ಎಂದು ವಂದಿಸುತ್ತಿರಲೊಡನೆ
ಬಾಲನೇ ನಿನ್ನಯಾ ಬಯಲವಾಡದ ತಳದೆ ಕಳಿಸೆಂದು ತಿಳಿಸುತೊಡನೆ ।
ಲೀಲೆಯಿಂ ನೀನಿಹ ತಳವೆ ಬಯಲವಾಡವನು
ಕೂಲವರಿದಾವ ತಳದಿಂದಾದರೂ ಕಳಿಸು
ನಾಳಿನ ಯುಗಾದಿಯಿಂ ಮಾಡಿ ಕಡು ತವಕದಿಂದೆಂಬ ಗುರುವರನೆ ಶರಣು ॥೩೯೮॥

ಇಂದಿಗೆ ಯುಗಾದಿಯುಳಿದುದು ಮೂರಹೋರಾಡೀ
ಎಂದು ವಂದಿಪ ಕಂದನಂ ನೋಡಿ ನಲಿದಾಡಿ
ಇಂದುವಾರಂ ನಾಳೆ ಬಂದವರು ನಿನ್ನವಳೆನುತ್ತ ತಿಳಿಸುತ್ತ ಮತ್ತಂ ।
ಬಂದರೂ ಗೌಪ್ಯದಿಂದೇ ಬರುವರೆಲೆ ಮಗನೆ

ಮುಂದೆ ಬರುವಿಂದುವಾರದಿ ಪ್ರಕಟಿಸುತ ಬರುವ
ರೆಂದರುಪಿ ನೀನೀಗಳೆಂದಿನೋಲುಣದೆಂದುಣಿಸುತಿಹ ಗುರುವೆ ಶರಣು ॥೩೦೯೯॥

ಎಂದಿರ್ಪೋಲ್ ಮೂಲವ್ಯಾಖ್ಯೆದೊಳು ಮುಪ್ಪಾಗಮಂ
ಹೆಂದದಾನಂದದಿಂ ಕೈಕೊಳುತುಣಿಸುತೀ
ತಂದೆಯೇ ಈ ಕ್ರಮವನಂದವರಿಗುರೆ ತಿಳಿಸಬೇಕೆಂದು ವಂದಿಸುತಿಹ ।
ಕಂದನಂ ನೋಡಿ ನಲಿದಾಡಿ ತಿಳಿಸುವೆನು ನಿ–
ನ್ನಿಂದ ಈ ನಾಡನಾಳುವ ದೊರೆಯು ಮೊದಲಾದ
ಕಂದುಗೊರಲನ ಭಗುತೆಗೊಂದಣಕ್ಕೆಂದು ತಿಳಿಸುತ್ತಿರುವ ಗುರುವೆ ಶರಣು ॥೩೧೦೦॥

ಈ ನಾಡನಾಳುವ ಧಣಿಯು ಕಡು ಜಾಣನೈ
ಆನವನಿಗರುಹೊರೆನು ಎಂದು ವಂದಿಸುವ
ಸೂನುವೇ ಅವನೊಳಿಹ ಜಾಣತನಮಂ ಪಸರಿಸುವೆನಿನ್ನೆನುತ್ತ ನಗುತ ।
ಮಾನನಿಧಿ ಶಿವಲಿಂಗ ರುದ್ರಸರ್ಜನೊಳಿರುವ
ಜಾಣತನಮಂ ಪಸರಿಸುತ್ತವನಿಗಿರಿಸುತಿಹ
ಜಾಣಮಗನ್ನೆ ನೀನೆನುತ್ತೆಂದೊಳಗೆ ತೊಳಗುತುಲಿವುತಿಹ ಗುರುವೆ ಶರಣು ॥೩೧೦೧॥

ತರ್ಕ ವ್ಯಾಕರಣಾದಿ ಶಾಸ್ತ್ರಗಳನುರೆ ಬಲ್ಲ
ನರ್ಕಜಾತಿ ಪೂಜಾಧುರಂಧರನಹುದು
ಮರ್ಕಟ ಧ್ವಜನಂತೆ ಪರಸತಿಯ ನೆರೆಯದಿಹ ಶಿವಲಿಂಗ ರುದ್ರಸರ್ಜಂ ।
ಅರ್ಕನುದಿಸುತ್ತಿರ್ಪ ಸಮಯದೊಳ್ ನಿದ್ರಿಸುವ
ನರ್ಕನಸ್ತಮಿಪ ಸಮಯದಿ ಶಿವನ ಭಜಿಸನಾ
ತರ್ಕ ವ್ಯಾಕರಣಾದಿ ಶಾಸ್ತ್ರಗಳನೋದಿ ಫಲವೇನೆಂಬ ಗುರುವೆ ಶರಣು ॥೩೧೦೨॥

ಸಲೆ ಓದಿ ಗಿಳಿ ತನ್ನ ಮಲಿನ ಭುಂಜಿಸಿದಂತೆ
ಬಲುಭೇದಿ ಜಾಣನೆನಿಸಿರ್ದು ಫಲವೇನೆಲೆ
ಮಲಹರಾತ್ಮಕ ಶರಣರಣುಗನೆ ನಿನ್ನಾತನೆನಿಸುತೀ ಭೂನಾಥನು ।
ಅಳತೆಯಿಲ್ಲದೆ ಭಜಿಸಿ ಅಳತೆಯಿಲ್ಲದೆ ಉಣಿಸಿ
ಅಳತೆಯಿಲ್ಲದೆ ಕೊಟ್ಟು ಅಳತೆಯಿಲ್ಲದೆ ಕೊಂಡು
ಗಳಿಸುತಿಹನೀಗಲೈತರನೆಂದು ಬಳಿಕ ತಿಳಿಸುತ್ತಿರುವ ಗುರುವೆ ಶರಣು ॥೩೧೦೩॥

ತನ್ನ ರೈತರನುರದೆ ತಾನೆ ಅಳಿಸುತ್ತಿರ್ದು
ತನ್ನ ರೈತರನುರದೆ ತಾನೆ ನಗಿಸುತ್ತಿರುವ
ನೆನ್ನ ಮಗನೇ ಎಂದು ನುಡಿಯುತಿಹ ಗುರುವಿನಡಿದಾವರೆಗೆ ಪೊಡಮಡುತ್ತ ।
ತನ್ನ ರಐತರನಳಿಸುವಂ ರೊಕ್ಕವಂ ಸೆಳೆದು
ಇನ್ನು ರೈತರನುರದೆ ನಗಿಸಿರ್ದುದಂ ತಿಳಿಸು
ಎನ್ನ ಗುರುವೇ ಎಂದು ಕೈಮುಗಿದು ನಿಂದಿರಲು ತಿಳಿಸುತಿಹ ಗುರುವೆ ಶರಣು ॥೩೧೦೪॥

ತನ್ನ ಅನ್ನವ ತನ್ನ ದಾಸಿಯೆನಿಪ ಮಹಂತೆ
ಯಿಂ ನಾಡೆ ನೀಡಿಸಿಕೊಳುತ್ತವಳನುರೆ ಬೆಳೆಸಿ
ಚೆನ್ನವ್ವೆಯೆಂಬ ತನ್ನವ್ವೆಗವಳಿಂದ ಪ್ರತ್ಯುತ್ತರವನುರದೆ ಕೊಡಿಸಿ ।
ತನ್ನವ್ವೆಯಂ ಮರುಗಿಸುತ್ತ ಬ್ಯಾಡಿತಿಸಿರ್ದು
ಚೆನ್ನಾಗಿ ಹಾಸಿಯಿಂ ನೀಡಿಸಿಕೊಳುತ್ತುಂಡು
ಮನ್ನಿಸುತ ಮತ್ತೆಯವಳಂ ಬಡಿಸೆನಕ್ಕರುರೆ ಕೇಳೆಂಬ ಗುರುವೆ ಶರಣು ॥೩೧೦೫॥

ತಾಯಿಯಿರೆ ತಾಯಿಯಿಂ ನೀಡಿಸಿಕೊಳುವುದುರದೆ
ತಾಯಿಯಿಲ್ಲದಿರೆ ತಾಯಿಯೇ ತಂದ ಸತಿಯಿಂದ
ನಾಯಾಸದಿಂದೆ ನೀಡಿಸಿಕೊಂಡು ಉಂಡು ಸುಖಿಸುವುದೆಂಬ ನೀತಿಯರಿದು ।
ತಾಯಿಯಿರೆ ಪತ್ನಿಯಿರೆ ನೀಡಿಸಿಕೊಳದೆ ಇರ್ದು
ನಾಯಿನೊಲಿಹ ದಾಸಿಯ ಹಸ್ತದಿಂದುಂಡು
ಮಾಯಾವಿಯುತನಾಗಿ ಅಳುವನೀಗೆಂದು ನಗುತಿಹರೆಂಬ ಗುರುವೆ ಶರಣು ॥೩೧೦೬॥

ನಿನ್ನೀ ಪುರಾಣವವನೀ ನಾಡಿನೊಳ್ ನಿಂದ
ಪುಣ್ಯದಿಂ ದಾಸಿಯಿಂ ನೀಡಿಸಿಕೊಳುವುದುಳಿದು
ತನ್ನ ಸತಿಯಿಂದೆ ನೀಡಿಸಿಕೊಳುವನೀಗ ನೀಂ ನೋಡುನೋಡೆಂಬುತೊಡನೆ ।
ತನ್ನವ್ವೆಯೆನಿಪ ಚೆನ್ನವ್ವೆಯಾ ಹಸ್ತದಿಂ
ದಿನ್ನು ಮುಂದುರೆ ನೀಡಿಸಿಕೊಳುವನೆಂದರುಪಿ
ಅನ್ನಮಂ ಭವಿಗಳಿಗೆ ನೀಡಬಾರದು ಭಕ್ತರಾದವರೆಂಬ ಗುರುವೆ ಶರಣು ॥೩೧೦೭॥

ಭವಿಗಳಾರವರು ಪೇಳ್ ಭಕ್ತರಾರವರು ಪೇಳ್
ಭವಿಭಕ್ತ ಭೇದಮಂ ತಿಳಿದ ಗುರುವೇ ಎಂಬ
ಕುವರನಂ ನೋಡಿ ನಲಿದಾಡಿ ನೀನುರೆ ಕೇಳು ಕೇಳೆಂದು ನಲಿಯುತೊಡನೆ ।
ಭವಿಗಳೂ ನಿನ್ನವರೆ ಭಕ್ತರೂ ನಿನ್ನವರೆ
ಭವಿ ಭಕ್ತರೊಳಿರುವ ಭೇದಮಂ ನಿನಗೀಗ
ತವಕದಿಂ ತಿಳಿಸುವೆನು ತಿಳಿಯೆಂದು ತಿಳಿಸುತೊಳಗಿರುವ ಗುರುವರನೆ ಶರಣು ॥೩೧೦೮॥

ಲಿಂಗವಂಗದಿ ಧರಿಸದ ಭವಿಗಳ ಮುಟ್ಟಿ
ಲಿಂಗವಂಗದಿ ಧರಿಸಿದ ಭಕ್ತರೊಡವೆರೆದ
ಲಿಂಗವಂಗದಿ ಧರಿಸಿದ ಭಕ್ತರಣುಗನೆ ಎಂದು ತಿಳಿಸುತ್ತ ಮತ್ತಂ ।
ಲಿಂಗವಂಗದಿ ಧರಿಸದ ಭವಿಗಳಂ ನೋಡಿ
ಲಿಂಗವಂಗದಿ ಧರಿಸಿದ ಭಕ್ತರೊಡವೆರೆಯೆಂಬ ಗುರುವೆ ಶರಣು ॥೩೧೦೯॥

ಕುರುಪಿಟ್ಟು ತೋರು ತೋರೈ ಎಂದು ವಂದಿಸುವ
ತರುಣನಂ ನೋಡಿ ನಲಿದಾಡಿ ನೀನುರೆ ಕೇಳು
ಕುರುಪಿಟ್ಟು ತೋರಲುರೆ ಸಿಟ್ಟಗೇಳುವರೀ ಖೂಳರೆಂದರುಪುತೊಡನೆ ।
ಧರಿಸಿ ಲಿಂಗವ ಬಾಹ್ಯದೊಳಂತರಂಗದೊಳ್
ಮರದಿಹರು ಪ್ರಾಣಲಿಂಗವನವರೆ ಲಿಂಗಮಂ
ಧರಿಸಿರ್ದ ಭವಿಗಳೆನಿಪರು ಮಗನೆ ನೋಡೆಂದು ಬಳಿಕುಲಿವ ಗುರುವೆ ಶರಣು ॥೩೧೧೦॥

ಧರಿಸಿ ಲಿಂಗವ ಬಾಹ್ಯದೊಳಂತರಂಗದೊಳ್
ಮರೆಯದೆ ಪ್ರಾಣಲಿಂಗವನುರೆ ನಿರಂತರಂ
ಧರಿಸಿದವರೇ ಲಿಂಗಮಂ ಧರಿಸಿರುವ ಭಕ್ತರಿವರೆ ನಿನ್ನಯ ಭಕ್ತರೈ ।
ತರುಣನೇ ನೀನೀಗ ನೋಡು ನೋಡೆಂದು ಬಳಿ
ಕುರದೆ ತೋರಿಸುತ ದ್ವಾಪರಮಂ ನಿವಾರಿಸುತ
ಎರಕದಿಂದಿನ್ನು ಉಳಿದವರನುರೆ ತೋರಿಸುವೆ ನೀನೆಂಬ ಗುರುವೆ ಶರಣು ॥೩೧೧೧॥

ಗುರುಮುಖದಿ ಲಿಂಗಮಂ ಧರಿಸದೆ ಇರುತ್ತಿರ್ದು
ನೆರೆಸಂತೆಯಿಂಕೊಂಡು ತಂದು ತಾನೇ ತಾ

ೞಿರುವ ನಾಪಿತ ರಜಕರಾದಿಯಾದವರು ಲಿಂಗವ ಧರಿಸದಿಹ ಭವಿಗಳೈ ।
ಪರಮ ಸದ್ಭಕ್ತಿಯಿಂ ಮಣ್ಣಿನಿಂ ಲಿಂಗಮಂ
ಎರಚಿಸುತ ಭಜಿಸಿಯುಂಬುತ ನದಿಯೊಳುರೆ ಬಿಡುವ
ನರರೆ ಲಿಂಗವ ಧರಿಸದಿಹ ಭಕ್ತರೆಲೆ ಮಗನೆ ತಿಳಿಯೆಂಬ ಗುರುವೆ ಶರಣು ॥೩೧೧೨॥

ಈ ನಾಲ್ಕು ವಿಧದವರು ನಿನ್ನವರೆಲೇ ಮಗನೆ
ನೀನವರನುವನರಿದು ಅವರವರ ಕರದಿಂದ
ಸಾನುರಾಗದಿನನ್ನಮಂ ಮಾಡಿಸುತ ನೀಡಿಸುತ್ತುಣಿಸಿ ತಣಿಸಬೇಕೈ
ಸೂನುವೇ ನೀನೇ ಮಾಡಿದೆ ನೀಡದೆ
ಆನಂದದಿಂ ನಿನ್ನ ಭಕ್ತರಿಂ ಮಾಡಿಸುವ
ಮೌನದಿಂ ನೀನುಣುತ ನಿನ್ನವರಿಗುಣಿಸಿ ತಣಿಸೈ ಎಂಬ ಗುರುವೆ ಶರಣು ॥೩೧೧೩॥

ಮೌನದಿಂದುಂಬುವರೆ ತಿಳಿಸೆಂದು ವಂದಿಸುವ
ಸೂನುವಂ ನೋಡಿ ನಲಿದಾಡಿ ನೀನುರೆ ಕೇಳು
ಮೌನದಿಂದುಂಬವೋಲುಣುತ ಮಂತ್ರೋಚ್ಚರಣದಿಂದ ನೀಂ ತುತ್ತನೆತ್ತಿ ।
ಸಾನುರಾಗದಿ ಲಿಂಗದೇವನಿಗೆ ತೋರಿ ಬಳಿ
ಕಾನಂದದಿಂದ ಮಹಲಿಂಗದೇವನನಿತ್ತು
ನೀನಾ ಮಹಾಲಿಂಗದೊಡನೇ ಉಣುವುದೆಂದುಣಿಸುತಿಹ ಗುರುವೆ ಶರಣು ॥೩೧೧೪॥

ತಾರಣಾಬ್ಧದ ಚೈತ್ರ ಶುದ್ಧ ಪ್ರತಿಪದತ್ತಿಯೊ
ಳೋರಂತೆ ಮಿಂದು ಶಾವಿಗೆಯನುಣ್ಣೆಂದು ಬಣ
ಗಾರವಳ ಕರದಿಂದ ಮಾಡಿಸಿ ತರಿಸಿ ನೋಡಿ ನೀನೀಗ ಉಣಬಾರದೈ ।
ಊರವರು ಮಾಡುವ ಯುಗಾದಿಯಿಂದೆ ಕೇಳೋ ಕು
ಮಾರನೇ ನೀನುಣದೆ ಮಾಡುವ ಯುಗಾದಿಯುರೆ
ಬ್ಯಾರಿರುವುದೈ ಇನ್ನು ಮುಂದೆ ಎಂದೊರೆದರುಹಿಸುತ್ತಿರುವ ಗುರುವೆ ಶರಣು ॥೩೧೧೫॥

ನೀನುಂಡ ತಿಥಿಯೇ ನಿನಗೇ ಯುಗಾದಿಯೈ
ನೀನುರದೆ ಮಿಂದ ತಿಥಿಯದುವೆ ದೀಪಾವಳಿಯು
ನೀನು ನಿನ್ನಯ ಸತಿಯ ಮಥನಿಸಿದ ತಿಥಿಯೆ ಹೋಳಿಹುಣ್ಣಿವೆಯೆನುತ ನಗುತ ।

ಮಾನವರು ಮಾಡುವ ಯುಗಾದಿ ದೀಪಾವಳಿಗ-
ಳಾನಂದದಿಂ ತಮ್ಮಿಂ ತಾವೆ ಘಟಿಸುವವು
ಭಾನುಸಾರಥಿಯುದಯ ಕಾಲದೊಳೆಂದು ಬಳಿಕರುಹಿಸುವ ಗುರುವೆ ಶರಣು ॥೩೧೧೬॥

ತಮ್ಮಾಪ್ತರುರೆ ಬರಲು ಶಾವಿಗೆಯನುರೆ ಬಸಿದು
ಸಮ್ಮುದದಿ ಪಜ್ತೆಯೊಳೊಡಗೊಂಡು ಉಂಡು ಬಳಿ
ಕೊಮ್ಮನದಿ ನಾಲ್ಕೊಪ್ಪತ್ತು ಸತ್ಕರಿಸುತಿರ್ಪರು ಧನಿಗಳೆಂತುಟಂತೆ ।
ಕಮ್ಮಗಣೆಯನ ಪಗೆಯನ ಶರಣರಣುಗನೆ
ಸಮ್ಮುದದಿ ನಿನ್ನವರು ನಿನ್ನೆಡೆಗೆ ಬರಲೊಡನೆ
ಸಮ್ಮುದದಿ ಶಾವಿಗೆಯನುರೆ ಒಸೆದು ಉಣಿಸೆನುತ್ತರುಹಿಸುವ ಗುರುವೆ ಶರಣು ॥೩೧೧೭॥

ನಿನ್ನೆಡೆಗೆ ಬಂದು ನಿನ್ನಯ ಭೆಟ್ಟಿಯಂ ಕೊಂಬ
ರೆನ್ನ ಮಗನೇ ನಿನಗೆ ಅಂದದೆ ಯುಗಾದಿಯ್ಯೆ
ಇನ್ನೊಂದು ಹನ್ನೊಂದು ದಿನ ತನಕ ಈಗಿನೋಲನುರಾಗದಿಂದುಬ್ಬುತ ।
ಸನ್ನುತಿಪ ಶಿವಶರಣರಣುಗನೆನಿಸುತ್ತಿರ್ದು
ನಿನ್ನೊಳಗೆ ನೀನೇ ವಿನೋದಿಸುತ್ತೇ ಮಠದಿ
ನಿನ್ನಯ ಕುಟುಂಬ ಸಹವಿರುವುದೆಂದುರೆ ತಿಳಿಸುತಿರುವ ಗುರುವರನೆ ಶರಣು ॥೩೧೧೮॥

ನಿನ್ನಯ ಕುಟುಂಬ ಸಹವಿಲ್ಲಿರುವುದೆಂದು ಬಳಿ
ಕಿನ್ನು ಆ ಮನೆಯನುರೆ ಬಿಡಬಾರದೆಂದರುಪಿ
ಎನ್ನ ಮಗನೇ ನಿನ್ನ ಗೋವುಗಳನುರೆ ತರಿಸಿ ಇಲ್ಲಿಯೇ ಕಟ್ಟಿಸೆನುತ ।
ಚೆನ್ನೆಯಾಲಯದಿ ಕಟ್ಟಿರ್ದ ಪಶುಗಳ ತರಿಸಿ
ಚೆನ್ನಾಗಿ ಗೂಟಗಳ ನಡಿಸಿ ಕಟ್ಟಿಸುತಿರ್ದು
ಇನ್ನು ಹನ್ನೊಂದು ದಿನ ತನಕ ನಿನ್ನನುವನರಿದುಣಿಸೆಂಬ ಗುರುವೆ ಶರಣು ॥೩೧೧೯॥

ರೊಟ್ಟಿಯೊಂದಂ ಬಿಟ್ಟು ಉಳಿದಾದಗರ್ದವ
ಕಟ್ಟಕ್ಕರದಿ ಮಾಡಿಸಿ ನೀಡಿಸೆನಲು ಪೊಡ
ಮಟ್ಟು ಖರ್ಚಿಗೆ ಕೊಡುವ ಮಡಿವಳಂ ಪೋಗಿರುವನೂರಿಗೀಗೆಂದು ನುಡಿಯೆ ।
ನಿಟ್ಟಿಸುತ ಕುಮಟಗಿಯ ಸಂಗಪ್ಪನಂ ಬರೆಸಿ

ರೊಟ್ಟಿಯಿಂ ತಣಿಸಿ ಓದನದರಿಂದ ತಣಿಸದೆ
ರೊಟ್ಟಿಯಿಂ ತಣಿಸಿದೊಲನ್ನದಿಂ ತಣಿಸು ಇನ್ನೆಂದುಲಿವ ಗುರುವೆ ಶರಣು ॥೩೧೨೦॥

ಇನ್ನು ಹನ್ನೊಂದು ದಿನ ತನಕ ನಿನ್ನನುವರಿದು
ನಿನ್ನುರೆ ಭಜಿಪ ಭಕ್ತರನುರದೆ ಬರಿಸಿ ಬಳಿ
ಕನ್ನದಿಂ ತಂಗಿಸುವುದು ನೀನುರೆ ತಣಿದ ಮೇಲೆ ಲೀಲಿಯಿಂದೆಂಬುತೊಡನೆ ।
ನಿನ್ನ ಖರ್ಚಿಗೆ ಸಂಗಪ್ಪನೇ ಕೊಡುವನೀಗ
ನಿನ್ನ ಮಡಿವಳನೆಯ್ದಿ ಮುಟ್ಟಿಸಿಕೊಡುವನವಗೆ
ನೀಂ ನಾಡೆ ಮುಟ್ಟಿಸುವುದೈ ಮುಂದೆ ಮಡಿವಳನಿಗೆನುತಿರುವ ಗುರುವೆ ಶರಣು॥೩೧೨೧॥

ಇಂತು ತಿಳಿಸುತ್ತ ಖರ್ಚಿಗೆ ಕೈಕೊಳಿಸುತಿರ್ದು
ಸಂತೆಯೊಳಕ್ಕಿ ಗೋದಿಯು ಬೇಳೆ ಮೊದಲಾದ
ವಂ ತವಕದಿಂದ ರುದ್ರಪ್ಪನಿಂ ಕೊಳಿಸಿ ತರಿಸುತ್ತಿರ್ದು ಎಂದಿನಂತೆ ।
ತಾಂ ತವಕದಿಂದ ಲಿಂಗಾರ್ಚನೆಯ ಮಾಡಿಸುತ
ಸಂತನದಿ ಲಿಂಗಾರ್ಪಿತವ ಮಾಡಿಸುತ್ತ ನಿ
ಶ್ಚಿಂತೆಯಿಂ ನಿದ್ರಿಸುತ್ತೆಚ್ಚರಿಸಿ ಕುಳ್ಳಿರಿಸಿ ತಿಳಿಸುತಿಹ ಗುರುವೆ ಶರಣು ॥೩೧೨೨॥

ನಿನ್ನ ಜಿಗಜಿನ್ನಿಯವರಿಗೆ ತಿಳಿಸು ನೀನೊಮ್ಮೆ
ನಿನ್ನ ಬೆಮ್ಮಳಗಿಯವರಿಗೆ ತಿಳಿಸು ನೀನೊಮ್ಮೆ
ಚಿನ್ನವರದರ ಬಾಳಪ್ಪಗೊರ್ವಗೆ ತಿಳಿಸಬೇಕು ನೀನೊಮ್ಮೆ ಎನುತ ।
ತನ್ನವರೆನಿಪ ಜಿಗಜಿನ್ನಿಯವರಿಗೆ ತಿಳಿಸಿ
ತನ್ನವರೆನಿಪ ಬೆಮ್ಮಳಗಿಯವರಿಗೆ ತಿಳಿಸಿ
ಚಿನ್ನವರದರ ಬಾಳಗೇ ತಿಳಿಸಿ ಬಂದು ನಿಂದಿರುವ ಗುರುವರನೆ ಶರಣು ॥೩೧೨೩॥

ಇನ್ನು ತಿಳಿಸುವುದಾರಿಗೇ ಎಂದು ವಂದಿಸಲ್
ನಿನ್ನ ಕುಮಟಗಿಯ ಸಂಗನಿಗೆ ರುದ್ರನಿಗೆ ನೀಂ
ಮುನ್ನವೇ ತಿಳಿಸಿರುವಿ ಇನ್ನೊಮ್ಮೆ ತಿಳಿಸಬೇಕೆಂಬುದೇನಿಲ್ಲವವರ್ಗೆ ।
ಎನ್ನ ಮಗನೇ ನಿನ್ನ ಸತಿಯನುವನುರೆ ತಿಳಿದು
ನಿನ್ನ ಗುರುವಯ್ಯನಿಂದೊಯ್ಯನೇ ಕರೆಸುತಿರ್ದು
ನೀಂ ನಾಡೆ ಉಂಡ ಬಳಿಕವರಿಗುಣಿಸುತ್ತ ತಣಿಸೆಂದುಲಿವ ಗುರುವೆ ಶರಣು ॥೩೧೨೪॥

ಭಕ್ತರಾಗಲಿ ಮಾಹೇಶರಾಗಲಿ ಆ
ಸಕ್ತಿಯಿಂ ತಾವೆ ಅನಾಯಾಸದಿಂ ಬರಲು
ಭಕ್ತರಿರೆ ನೀಡಿ ಕಳಿಸುವುದು ಇಲ್ಲವೆ ನಾಳೆಗೆ ಬರುವದೆಂದು ತಿಳಿಸೈ ।
ಭಕ್ತಮಾಹೇಶರಣುಗನೆ ಅವರು ಹಟವಿಡಿದು
ಭಕ್ತಮುಮನುಣ್ಣದೇ ಪೋಗೆವೀಗಾವೆನಲು
ಭಕ್ತಮಾಹೇಶರಿವರಲ್ಲೆಂದು ಹೊರಗೆ ನೂಕಿಸು ಎಂಬ ಗುರುವೆ ಶರಣು ॥೩೧೨೫॥

ಹೊರಗೆ ನೂಕಿಸಿಕೊಂಡು ಹೋಗಿ ಐದು ದಿನದಲ್ಲಿ
ಮರುದಿನದಿ ಬರಲು ಅನ್ನವ ನೀಡಬಾರದೈ
ಮರುಳತನದಿಂದ ನೀಡಿದರದುವೆ ನಿಷ್ಫಲವೆನಿಸೂದೆಂದು ತಿಳಿಸುತೊಡನೆ ।
ತರುಣನೇ ನೀನಂದು ಅಕ್ಕಿಯನುರದೆ ಕೊಡಿಸಿ
ಬರಬೇಡಿರಿನ್ನೆಂದು ಹೇಳಿಯುರೆ ಕಳಿಸುವುದು
ಮರುದಿನದಿ ಮತ್ತಮುರೆ ಬರಲು ಅಕ್ಕಿಯ ಕೊಡಿಸಬೇಡೆಂಬ ಗುರುವೆ ಶರಣು ॥೩೧೨೬॥

ಭವಿಗಳಿಗೆ ಅಕ್ಕಿಯಂ ಕೊಡಿಸುವೋಲ್ ಕೊಡಿಸುತಿರ
ಲವರುರದೆ ನಾಂಚಿ ಅಕ್ಕಿಯನುರದೆ ಕೊಳ್ಳದಿರ
ಲವಿವೇಕತನದಿಂದ ಇನ್ನೆಲ್ಲಿಯಾದರೂ ಹಟದಿನುಣಬಾರದೆಂದು ।
ಕುವರನೇ ನೀನವರಿಗುರೆ ತಿಳಿಸಲುರೆ ನಾಂಚಿ
ಅವರು ನೀನುರೆ ಹೇಳಿದೋಲ್ ಕೇಳೆವಿನ್ನೆನಲು
ಶಿವಶಿವಾ ಎನಿಸಿ ಅನ್ನವನುಣಿಸಿ ತಣಿಸಿ ಕಳಿಸೆಂದುಲಿವ ಗುರುವೆ ಶರಣು ॥೩೧೨೭॥

ಅವರಾದರೇನು ಬಳಿಕಾರಾದರೇನು ಅ
ನ್ನವ ನೀಡುವಾಗ ಅನ್ನವನುರದೆ ಸವಿವಾಗ
ಶಿವಶಿವಾಯೆಂದು ನೀಡುವುದು ಉಂಬುವುದು ಬಲು ಮೌನದಿಂದಿರಬಾರದೈ ।
ಅವಿವೇಕತನದಿನುಚ್ಚೈರ್ಧ್ವಾನದಿಂದಂದು
ಶಿವಶಿವಾ ಎನಬಾರದು ಅನ್ನದಿರಬಾರ
ದವಿರಳಾತ್ಮಕ ಶರಣಸುತನೆ ನಿರ್ಣಯದೊಳೆನಿಸುವದೆಂಬ ಗುರುವೆ ಶರಣು ॥೩೧೨೮॥

ನಿರ್ಣಯದೊಳೆನಿಸುವರನುರೆ ತಿಳಿಸು ತಿಳಿಸೆಂಬ
ನಿರ್ಣಯ ಪುರಾಣಿಗಳ ಮಗನನುರೆ ನೋಡ ನಿಜ
ಕರ್ಣಕುರೆ ಕೇಳಿ ಅನ್ಯರ ಕರ್ಣಕುರೆ ಕೇಳದೊಲೆನಿಸುವರೆ ನಿರ್ಣಯಂ ।
ನಿರ್ಣಯದೊಳೆನಿಸುವದನುರೆ ತಿಳಿದೆಯಾ ಎನುತ
ಪರ್ಣಾಪ ಶರಣರಣುಗನನಪ್ಪಿ ಮುಂಡಾಡಿ
ತೂರ್ಣದಿಂದನ್ನ ಉಣಿಸುವುದೆಂದು ತಿಳಿಸುತೊಳಗಿರುವ ಗುರುವೆ ಶರಣು ॥೩೧೨೯॥

ಈ ನಾಡ ದೊರೆಯು ಅನ್ನವನುಣಿಸುತಿರ್ಪುದಂ
ನಾನಂದು ನೋಡಿರ್ದೆನಿವನ ಪಿತನಿದ್ದಾಗ
ಮೌನದಿಂದುಣುತಿರ್ದನೀಗಿರುವ ಶಿವಲಿಂಗರುದ್ರಸರ್ಜ
ನಾನುರಾಗದಿ ಶಿವಶಿವಾ ಎನಿಸಿ ಉಣಿಸುವಲ್ಲಿ
ಮೌನದಿಂದುಣಿಸುವನೊ ನಾನರಿಯೆನೆಂದುಲಿವ
ಸೂನುವಂ ನೋಡಿ ನಲಿದಾಡಿ ಮುಂಡಾಡಿ ಮುದ್ದಿಸುತುಲಿವ ಗುರುವೆ ಶರಣು ॥೩೧೩೦॥

ಅರಿಯೆನೆಂದುರೆ ಕೇಳಿ ಅರಿಯದವರಿಗೆ ತಿಳಿಸು
ತಿರುವ ಮಗನೇ ನಿನಗೆ ಸರಿಯೆನಿಪ ಶಿವಶರಣ
ತರುಣರಂ ಕಾಣೆನೀ ತಾಣದೊಳೆಂದು ಮುಂಡಾಡಿ ಮುದ್ದಿಸಿ ತವಕದಿಂ ।
ಬರುವನೀ ಪುರಕೆ ತಾನೇ ಅನಾಯಾಸದಿಂ
ದೊರೆಯೆನಿಪ ಶಿವಲಿಂಗ ರುದ್ರಸರ್ಜಾಹ್ವಯಂ
ಅರಿವುದೈ ತನ್ನಿಂದ ತಾನೆ ಎಲ್ಲರಿಗೆಂದು ತಿಳಿಸುತಿಹ ಗುರುವೆ ಶರಣು ॥೩೧೩೧॥

ಎಲ್ಲರಿಗೆ ತಿಳಿವುದೈ ಎಂದುರದೆ ನಿರವಿಸಿದಿ
ರೆಲ್ಲರಿಗೆ ಕಳುಳೆಂತಂದೆ ತಿಳಿವುದೈ ಎನಲು
ಬಲ್ಲಹರ ಮಗನೀತನಹುದೆಂದು ತನ್ನೊಳಗೆ ತಾನೆ ನಗುನಗುತ ನಲಿದು ।
ಎಲ್ಲರಿಗೆ ತಿಳಿಯದಹುದಹುದೀಗ ನಿನ್ನುರೆ
ಬಲ್ಲವರಿಗುರೆ ತಿಳಿವುದೆಂದರುಹಿಸುತ್ತಿರ್ದು
ಮೆಲ್ಲನೇ ನಿನ್ನ ಜವಳಿಯ ಗುರುಬಸವಗೆ ತಿಳಿಸೆನುತಿರುವ ಗುರುವೆ ಶರಣು ॥೩೧೩೨॥

ಆತನುರೆ ನಿರ್ಮಿಸಿದ ಮಠದಿ ನೀನೀಗಿರುತ
ಆತಗುರೆ ತಿಳಿಸದೆ ಗೋಪ್ಯದಿಂದುಣಿಸುವುದು
ನೀತಿಯೇ ಎನಲು ಪೊಡಮಡುತ ಸದ್ಭಕ್ತಿಯಿಂ ಕೇಳು ಕೇಳೆನ್ನ ಗುರುವೆ ।
ಈ ತಳದ-ದೈವದವರಿಗೆ ತಿಳಿಸದೆ ಇರ್ದು
ಈ ತಳದ ಧಣಿಗೆ ತಿಳಿಸದೆ ಇರುವುದುಚಿತವೇ
ನೀಲಿ ತವಕದಿಂದ ತಿಳಿಸೆಂದು ವಂದಿಸಲು ನಲಿದುಲಿಯುತಿಹ ಗುರುವೆ ಶರಣು ॥೩೧೩೩॥

ಭಲರೆ ಭಲರೇ ಮಗನೆ ಕುಲದೀಪನಹುದಹುದು
ಭಲರೆ ಭಲರೇ ಮಗನೆ ಎನ್ನನುರೆ ಬೆಳೆಸುತಿಹ
ಬಲಯೂಥ ಶಿವಶರಣರಣುಗನಹುದಹುದು ಒಂದು ತಿಳಿಸಲೆರಡನರಿದ್ಯೆ ।
ತಳಹದೇ ದೈವದವರಿಗೆ ತಿಳಿಸಿ ನೀನೀಗ
ಗಳಿಗೆಯಾಲಸ್ಯ ಮಾಡದೆ ಅಂದು ಬರೆಸಿದನಾ
ಅಲಘರು ಕಾಲಜ್ಞಾನದ ಲಕೋಟಿಯ ಕಳಿಸಿ ತಿಳಿಸೆಂಬ ಗುರುವೆ ಶರಣು ॥೩೧೩೪॥

ಕಳಿಸಿ ಕಾಲಜ್ಞಾನದ ಲಕೋಟಿಯನುರದೆ
ಕಳಿಸಿ ಬಳಿಕುರೆ ಬರುವ ಭಕ್ತರಂ ಬರಿಸುವುದು
ಮಲಹರಾತ್ಮಕ ಶರಣರಣುಗ ನೀನೀಗಳಾರನುರದೆ ಬರಿಸಬೇಡ್ಯೆ ।
ಒಲಿದು ತಾವೇ ಬಂದ ಭಕ್ತರಿಗುಣಿಸಿ ತಂಗಿಸು
ಒಲಿದು ನಿನ್ನನುಸರಿಸಿರುವ ರುದ್ರಸಂಗರಿಗೆ
ಬಲು ಗೋಪ್ಯದಿಂದ ನೀನುಂಡ ಬಳಿಕುಣಿಸೆಂದುಣಿಸುತಿರುವ ಗುರುವೆ ಶರಣು ॥೩೧೩೫॥

ತಾರಣಾಬ್ದದ ಚೈತ್ರ ಶುದ್ಧ ಪಂಚಮಿಯೆನಿಪ
ಸೂರ್ಯವಾರದಿ ಪಾಯಸವಿನ್ನು ಸಾಕೆನಿಸು
ತೋರಂತೆ ಆಮ್ರಾದಿ ಶಾಲ್ಯೋದನವನುರದೆ ಉಣಿಸುವುದಕುದ್ಯೋಗಿಸಿ ।
ಧೀರತನದಿಂದ ನೀನಿನ್ನಾರಿಗಳುಕದೆ
ಕ್ರೂರತನದನ್ಯಾಯ ನಾಯಕರನಳಿಸುತಿಹ
ಕಾರಣದಿ ನಿನ್ನಾ ಲಕೋಟಿಗಳನುರೆ ಕಳಿಸು ಎನುತುಲಿವ ಗುರುವೆ ಶರಣು ॥೩೧೩೬॥

ನೀನಂದು ಹೇಳಿದೋಲ್ ಮೂರೂ ಲಕೋಟಿಗಳ
ಸಾನುರಾಗದಿಮಾರೈದು ಮಂದಿಗಳೊಡನೆ
ಮಾಣದೇ ಮೂರು ಪತ್ತನಗಳಿಗೆ ಕಳಿಸಬೇಕೆಂದುರದೆ ತಿಳಿಸುತೊಡನೆ ।
ನೀ ನಿನ್ನ ನಿನ್ನ ಗುರುವಯ್ಯಗನ್ನವನಿತ್ತು
ಸಾನುರಾಗದಿ ಅವನಿಂದ ಸತ್ಕರಿಸಿಕೊಳು
ತಾನಂದದಿಂದ ಗೋಪ್ಯದೊಳುಣಿಸಬೇಕೆಂದುಣಿಸುತಿರುವ ಗುರುವೆ ಶರಣು ॥೩೧೩೭॥

ತಾರಣಾಬ್ಧದ ಚೈತ್ರ ಶುದ್ಧ ಷಷ್ಠೀ
xxxxxxx ನೀಡಿಸುತ
ಆರರಿಯದೋಲನಾಯಾಸದಿಂ xxxxxxxx ನೀಡಿಸುವುದೈ ।
ಬಾರದವರ xxxxxx
xxx ವರಂ ಉದಾಸೀನ ಬೇಡೆಲೆ ಮತ್ತು
ಮೂರನೆಂದರುಹಿ ಸಾರಿದವರಂ ಸತ್ಕರಿಸುತಿರುವ ಗುರುವೆ ಶರಣು ॥೩೧೩೮॥

ಸಾರಿರುವ ಭಕ್ತರಂ ಸತ್ಕರಿಸುತವರಿಂದ
ಸಾರ ಸದ್ಭಕ್ತಿಯಿಂ ಸತ್ಕರಿಸಿಕೊಳುತ ನೀ
ನೋಡಂತೆ ಹನ್ನೊಂದು ಎನುತನಕ ನಿನ್ನ ಮನವೆಳೆಸಿದಡುಗೆಯ ಮಾಡಿಸಿ ।
ಆರೈದು ಐದು ತಾಸಿನೊಳೆ ನೀನುರೆ ಉಣುತ
ಆರು ತಾಸಿನೊಳೈತಂದ ಭಕ್ತರಿಗುಣಿಸು
ಆರು ತಾಸಂ ಮೀರಿ ಬಂದವರಿಗನ್ನವಿತ್ತಟ್ಟೆಂಬ ಗುರುವೆ ಶರಣು ॥೩೧೩೯॥

ಅನ್ನವಿರಲಿತ್ತು ಕಳಿಸುವುದನ್ನವಿಲ್ಲದಿರೆ
ಅನ್ನವಿಲ್ಲೈ ಎಂದು ನುಡಿಯಬಾರದು ನಾಳೆ
ಚೆನ್ನಾಗಿ ಐದುತಾಸಿನೊಳೆಯ್ದಿ ಉಂಡುಪೋಗೆಂದುರದೆ ಹೇಳಬೇಕೈ ।
ತನ್ನೊಳಗೆ ತಾನೆ ತಿಳಿದವಂ ಪೋಗುತಿರೆ
ಮನ್ನಿಸುತ ಮರುದಿನದಿ ಕರೆಸಿ ಉಣಿಸುವುದುರದೆ
ನಿನ್ನನುರೆ ಕಾಡಿಬೇಡುವ ಮೂಢರ ಕರೆಸಬೇಡೆಂಬ ಗುರುವೆ ಶರಣು ॥೩೧೪೦॥

ಮೂಢರಂ ಕರೆಸಬೇಡೆಂದುರದೆ ತಿಳಿಸಿದಿರಿ
ಪ್ರೌಢರಂ ಕರೆಸುವುದೆ ಈಗೆಂದು ವಂದಿಸುವ
ಪ್ರೌಢ ಶಿವಶರಣ ಸುತನಂ ನೋಡಿ ನಲಿದಾಡಿ ನೀನುರದೆ ಕೇಳು ಕೇಳ್ಕೆ ।
ಪ್ರೌಢರೆನಿಸರು ಕರೆಸಿಕೊಳ್ಳರ್ಕೆ ನಿನ್ನಿಂದ
ನಾಡೆ ತಾನೇ ಬಂದು ವಂದಿಸುತ ನುಡಿಸುತೊಡ
ಗೂಡಿ ಮೂಢರ ಕರೆಸಬೇಕೆಂದು ಕರೆಸದಿಹರವರೆಂಬ ಗುರುವೆ ಶರಣು ॥೩೧೪೧॥

ಈಗೆನ್ನ ಸಂಶಯವು ಪೋಗುವೋಲರುಹಿದಿರಿ
ಶ್ರೀಗುರುವೆ ಎಂದು ವಂದಿಸಿ ಕುಳಿತು ಬಳಿಕ ಇ
ಕ್ಕೈಗಳಂ ಮುಗಿದಿರಲು ನಿನ್ನಿಷ್ಟವೇ ನಿನ್ನದೇಳೆಂದು ನಿರವಿಸುತಿರೆ ।
ಈಗೀ ಲಕೋಟಿಗಳ ಕಳಿಸುವದನುರೆ ತಿಳಿಸಿ
ಬೇಗದಿಂ ಕಳಿಸುವುದೆನುತ್ತುರದೆ ಪ್ರಾರ್ಥಿಸುವ
ನಾಗಾರಿಗಮನವರ ಶರಣಸುತನಂ ನೋಡಿ ನಲಿದುಲಿವ ಗುರುವೆ ಶರಣು ॥೩೧೪೨॥

ಇನ್ನು ನಿನ್ನೀ ಲಕೋಟಿಗಳು ಇಲ್ಲೇನಿಲ್ಲ
❖❖

ಪತ್ರ – ೫೦
ಪದ್ಯ – ೧
ಮದುವೆ, ವಿಧವಾ ವಿವಾಹ ಇತ್ಯಾದಿ
ಶ್ರೀಮನ್ನಿರ್ಣಯ ಮಹಾಗುರುವೇ ನಮಃ

ಗುರುವೆ ಸದ್ವೀರಾಖ್ಯ । ಗುರುವೆ ಮದ್ಗುರುವೆ ಚಿ
ದ್ಗುರುವೆ ಭವ ಪಾಶಮಂ ಪರಿವ ಗುರುವೆ ॥ಪ॥

ಶ್ರೀಕರ ಶಿವಾಕರ ದಿವಾಕರ ನಿಶಾಕರಾ
ನೇಕ ಸಂಕಾಶ ಚಿತ್ಕೋಶ ಗುರುವೆ
ಆಕಾಶಕೇಶನಾಕಾರ ನಿರುಪಮ ನಿರಾ
ಕಾರ ನಿರುಪಮಾಚಾರ ಗುರುವೆ ॥೧॥

ವಿತ್ತವನಿತಾದಿಯಂ ಚಿತ್ತದೊಳ್ ನೆನೆಯದೆ
ಚಿತ್ತಜಾಂತಕ ಲಿಂಗದಲ್ಲಿ ಮನವಂ
ಹತ್ತಿರಿಸಿದತ್ಯುತ್ತಮೋತ್ತಮರ ಭಜಿಸುತಿಹ
ಭೃತ್ಯನೆನಿಸುತ್ತ ಸಲೆ ಸಲಹು ಗುರುವೆ ॥೨॥

ಇಂದರಸನಾಜ್ಞೆಯಿಂ ಬಂದ ಸುಖದುಃಖಗಳ
ನೊಂದಿಯೋವದೆ ಕಂದದೇ ಕುಂದದೇ
ಹೆಂದದಾನಂದದಿಂದುಧರನಂ ಭಜಿಪ
ತಂದೆಗಳ ಕಂದನೆಂದೆನಿಸು ಗುರುವೆ ॥೩॥

ಹರಗುರವರಾಜ್ಞೆಯಿಂದಿರದೆಯ್ದಿದರ್ಧಾಂಗಿ
ಯರನಗಲದೇ ಸುರತಸುಖದೊಳಿರುತ
ಹರನ ಭಜಿಸುತ್ತಘವಿರಸವ ಸರಿಸುತ್ತಿರುವ
ಹಿರಿಯರೆನಿಪರ ಪೊರೆಯೊಳಿರುವ ಗುರುವೆ ॥೪॥

ಎರಡನೆಯ ಮದುವೆಯಂ ಪರಿಕಿಸುತ್ತೆಸಗಿಸುವ
ಹಿರಿಯರಿಗೆ ಹೆದರುತಂಗೀಕರಿಸುತ
ಪರಸತಿಯ ಪರಪತಿಯನುರೆ ನೋಡದಿರುವ ಸತಿ
ಪುರುಷರೆನಿಪರನುರದೆ ಪೊರೆವ ಗುರುವೆ ॥೫॥

ಮೂರನೆಯ ಮದುವೆಯ ವಿಚಾರಿಸುತ್ತೆಸಗುವಾ
ಚಾರ್ಯರಿಗೆ ಹೆದರುತಂಗೀಕರಿಸುತ
ಜಾರ ಜಾರೆಯರುಗಳ ಮೋರೆಯಂ ನೋಡದಿರು
ವಾರಮಣಿ ರಮಣರಂ ಪೊರೆವ ಗುರುವೆ ॥೬॥

ಚಾತುರ್ಥಿಕಾ ಲಗ್ನವಾತುರದಿ ಮಾಡುವ ಪು
ನೀತರಿಗೆ ಹೆದರಿ ಅಂಗೀಕರಿಸುತ
ಓತು ಪರಸತಿ ಪರಪ್ರೀತರಂ ನೋಡದಿರು
ವಾತರುಣಿ ತರುಣರಂ ಪೊರೆವ ಗುರುವೆ ॥೭॥

ಮನಿತನವ ಮಾಡುವ ವನಿತೆ ಇಲ್ಲೆನುತೊರ್ವ
ವನಿತೆಯಂ ಹುಡುಕಿ ತಾನುಡಿಕಿಯಾಗಿ
ಮನೆತನವ ನಡೆಸುತವಳಿನಿ ಯನೆನಿಸುತ್ತಿರ್ಪ
ಬಿನುಗುತನೆಮಮಂ ನೋಡಿ ನಗುವ ಗುರುವೆ ॥೮॥

ಸಾಯ್ವತನಕೆನ್ನನುರೆ ಕಾಯ್ವರಾರೆಂದು ಬಲ್
ಬಾಯ್ಬಿಡುವ ಬಾಲೆಯಂ ನೋಡುತೊಡನೆ
ಕಾಯ್ವೆನೆಂದು ಸುರ್ದವಳ ಸಾತ್ವುತನಕಾಳುವಾ
ನಾಯ್ವಾನಿಸರ ನೋಡಿ ನಗುವ ಗುರುವೆ ॥೯॥

ಸತ್ತವರ ಮಕ್ಕಳಂ ಎತ್ತುವವರಿಲ್ಲೆನು
ತುತ್ತರವ ತಣ್ಣಸ್ತರುಗಳಿಗಿತ್ತು
ವೃತ್ತಕುಚದವಳ ಹುಡುಕುತ್ತುಡುಕಿಯಾಗುತಿಹ
ಕತ್ತೆತನಮಂ ಕುತ್ತುತಿರುವ ಗುರುವೆ ॥೧೦॥

ಮಕ್ಕಳುಳ್ಳವಳೆನ್ನ ರಕ್ಕಿಸುವರಾರೆಂದು
ಚಿಕ್ಕಪ್ರಾಯದ ದಂಡುಗನನ್ನು ಹುಡುಕಿ
ಕಕ್ಕಸಮೊಲೆಯ ತೋರಿ ಚಕ್ಕನೇ ಉಡುಕಿಯಹ
ಮುಕ್ಕತನಮಂ ತಿಕ್ಕುತಿರುವ ಗುರುವೆ ॥೧೧॥

ಮಡಿದ ಮಡದಿಯ ಮರೆದು ಕಡುಚೆಲುವೆಯಾಗಿರುವ
ಹುಡುಗಿಯಂ ಹುಡುಕಿ ತಾನುಡುಕಿಯಾಗಿ
ಕಡಿದು ಗಲ್ಲವ ಕುಚವ ಹಿಡಿದು ರಮಿಸುತ್ತಿರುವ
ಹುಡುಗತನಮಂ ನೋಡಿ ನಗುವ ಗುರುವೆ ॥೧೨॥

ಮಡಿದ ಪತಿಯಂ ಮರೆದು ಮಡಿಯುಡಿಗೆಯುಡುತ ಬಲ್
ಬಡಿವಾರಮಂ ಮಾಡುವಳ ನೋಡುತಾ
ಹುಡುಗತನದಿಂದವಳನೊಡಗೂಡಿ ಪೊಡೆಯುಬ್ಬಿ
ಲುಡುಕಿಯಾಗುವ ಲೋಗರರಿವ ಗುರುವೆ ॥೧೩॥

ಉಡುಕಿಯಾಗುವುದೊಂದು ನಡತಿಯಿಹುದೈ ಮಗನೆ
ಒಡೆಯರೆಂಬವರು ಮಾಡಿಹರೆನಲ್ಕಾ
ನಡತೆಯೆಂತಿಹುದೊಡಂಬಡಿಸಿ ತಿಳುಪೆನಲೆರಗ
ಲೊಡನೇ ಒಡಂಬಡಿಸುತಿರು ಗುರುವೆ ॥೧೪॥

ಉಡುಕಿಯಾಗುತ್ತಿರುವ ನಡತೆಯದು ಮದುವಿಗಿಂ
ಕಡಿಮೆಯಹುದಹುದು ಮಿಡುಕುತ ಕೆಡುತಿಹ
ನಡತೆಗಿಂದಧಿಕವದು ಉಡುಕಿಯಾಗುವುದೆಂದು
ಹುಡುಕಿ ಮಾಡಿಹರೊಡೆಯರೆಂಬ ಗುರುವೆ ॥೧೫॥

ಉಡುಕಿಯಾಗುತ್ತಿರುವ ನಡತೆಯದು ಕಡಿಮೆಯೆಂ
ದುಡುಕಿಯಾಗುವುದನುಳಿದುದೆ ಸುಖಿಸುವ
ಹುಡುಗಿ ಹುಡುಗರ ಕಂಡು ಮಿಡುಕುತಿಹ ಪಾಪಿಗಳ
ನಡತೆಯಂ ಬಿಡಿಸಿರುವರೆಂಬ ಗುರುವೆ ॥೧೬॥

ಕೆಟ್ಟು ಹೋಗುತ್ತಿರುವ ಸೊಟ್ಟ ನಡತೆಯಿದೆಂದು
ನಿಟ್ಟಿಸದೆ ಘಟ್ಟಿಯೆಂದುವೆ ಪಿಡಿದಿಹ
ಮಟ್ಟಿ ಇಟ್ಟವರನುರೆ ಮುಟ್ಟಬಾರದು ಮಗನೆ
ನಿಟ್ಟಿಸಲ್ಬಾರದೆಂದೊರೆವ ಗುರುವೆ ॥೧೭॥

ಕೆಟ್ಟು ಪೋಪುದಕಿಂದ ಕಟ್ಟಕ್ಕರಿಂ ನೊಡದೆ
ನಿಟ್ಟಿಸುತ ಸತಿಯೆನಿಸಿಕೊಂಡು ಕೂಡಿ
ಪುಟ್ಟುತಿಹ ಮಕ್ಕಳಂ ಪುಟ್ಟಿಸುವದೊಳಿತೆಂದು
ನಿಟ್ಟಿಸುತ ಮಾಡಿರುವರೆಂಬ ಗುರುವೆ ॥೧೮॥

ಹಡೆಯದೇ ಸತಿಯಳಿದ ಹುಡುಗನಿರಲಾತನೆ
ಉಡುಕಿಯಾಗುವುದೆಂದೊಡಂಬಡಿಸುತ।
ಮಿಡುಕುತಿಹ ಹುಡುಗೆಯುಂ ಉಡುಕಿಯವಳೆಂದೆನಿಪ
ನಡತೆಯೋದಿರುವುದೆಂದೊರೆವ ಗುರುವೆ ॥೧೯॥

ಮಿಡುಕವುದನುಳಿಯುತಾ ಹುಡುಗಿ ಹುಡುಗನೊಳಾದ
ಕಡು ನೇಹದಿಂದ ಒಡಗೂಡಿ ಸುಖಿಸಿ
ಹಡೆವ ಮಕ್ಕಳ ಹಡೆದು ಹುಡುಗತನಮಂ ಬಿಟ್ಟು
ಕಡು ಜಾಣೆಯಾಗಿರುವಳೆಂಬ ಗುರುವೆ ॥೨೦॥

ಮೊಳೆ ಮೊಲೆಯ ಸತಿಯು ಪತಿಯಳಿಯಲವರೆರೆಯರುಗ
ಳೊಲಿದವಳ್ಗೆ ತಕ್ಕ ಚಿಕ್ಕವನ ಹುಡುಕಿ
ಸಲೆಯುಡುಕಿಯಾಗಿಸಲ್ಕೊಲಿದವರು ಸತಿಪತಿಗ
ಳೊಲು ಸುಖಿಸೆ ಲೇಸು ಲೇಸೆಂಬ ಗುರುವೆ ॥೨೧॥

ಇನಿಯನಳಿದಿರಲು ಜವ್ವನವಡಗುತಿರಲು ಮಿಗೆ
ಬಿನುಗುತನದಿಂದೊರ್ವನುಡುಕೆಯಾಗಿ
ಬಿನದಕ್ಕ ಮನವೆಳಸಿ ಮನೆಗೆಲಸಗಳನುಳಿಯ
ಲೊನಕೆಯಿಂ ಹಣಿವನನನೆಂಬ ಗುರುವೆ ॥೨೨॥

ಹಡೆದ ಹುಡುಗರನುಳಿದು ಮಡದಿಯಳಿದಿರಲು ಮಿಗೆ
ಹುಡುಗತನದಿಂದೊರ್ವಳುಡುಕಿಯಾಗಿ
ಉಡುಕಿಯವಳಿಂದೊಗೆದ ಹುಡುಗರನೆ ಕುಣಿಸಲಾ
ಹುಡುಗರಿವರಂ ಹಣಿವರೆಂಬ ಗುರುವೆ ॥೨೩॥

ಬಂಗಾರದೂರೊಡೆಯ ಮಂಗರಾವಣನನ್ನು
ಭಂಗಿಸುವನೆಂದವನ ತೂಗಿಯಿಂದ
ಎಂಗಿತನದಿಂದ ತಿಳಿಸುತಂಜನಾರತ್ನ ಸೀ
ತಾಂಗನೆಯಳಿಂದಳಿಸಿ ನಗುವ ಗುರುವೆ ॥೨೪॥

ತಮ್ಮನ ಸತಿಯನುರದೆ ನೆಮ್ಮಿಕೊಂಡಿರ್ದವನ
ಗುಮ್ಮಿಸುವೆನೆಂದವನ ತಮ್ಮನಿಂದ ।
ಸಮ್ಮಿಸುತ ರಾಮನಿಂ ಗುಮ್ಮಿಸುತ ವಾಲಿಯ
ಹಮ್ಮನುಳಿಸುತ್ತಳಿಸಿ ನಗುವ ಗುರುವೆ ॥೨೫॥

ಶ್ವೇತನೆಂದೆಂಬ ವಿಖ್ಯಾತ ಪಾತಕಿಯ ತವೆ
ಪೂತನಂ ಮಾಡಿಸುವೆನೆಂದುದಯದಿಂ
ಓತುರಂಭೆಯ ಮುಖದೊಳಾತು ನಿಂದಿರ್ದವನ
ಪೂತನಂ ಮಾಡಿಸಿದನಾಥ ಗುರುವೆ ॥೨೬॥

ಸೊಕ್ಕಿರ್ದವರನಿಕ್ಕಿ ಸೊಕ್ಕದಿರ್ದವರನುರೆ
ರಕ್ಕಿಸುತ್ತವರೊಳಗೆ ಸಿಕ್ಕರೇ ತಾಂ
ಅಕ್ಕರಿಂದವರು ಮಿಗೆ ಲಕ್ಕಿಸಲ್ಕವರೊಳಗೆ
ಸಿಕ್ಕಿರುವ ಶಿವನ ತೋರಿಸುವ ಗುರುವೆ ॥೨೭॥

ಹುಡುಗತನದಿಂದಿರುವ ಹುಡುಗರಿಗೆ ಹುಡುಗನೋಲ್
ಬಡಿದಾಟ ಹಚ್ಚಿ ಮಿಗೆ ಮುಚ್ಚಿಸುತ್ತ
ಹುಡುಗತನಮಂ ಬಿಟ್ಟು ಬಡವರಿಗೆ ಇಂಬುಗೊ
ಟ್ಟೊಡೆಯರಿಂದವರ ಸಲುಹಿಸುವ ಗುರುವೆ ॥೨೮॥

ಉಡುಕಿಯಾಗುವುದನುರೆ ಬಿಡಿಸದೇ ಬಿಡಿಸಿರುವ
ಕಡು ಜಾಣತನನಿದೆಂದೆರಗಲೊಡನೆ ।
ಒಡೆಯರೆಂದೆಂಬವರು ಬಡವರಾಧಾರಿಗಳು
ಬಡವರಂ ಬಾಳಿಸುವರೆಂಬ ಗುರುವೆ ॥೨೯॥

ಬಡವರಂ ಬಾಳಿಸುವ ಒಡೆಯರಹುದೈ ಗುರುವೆ
ನಡತೆಯರು ಕಡಿಮೆಯೆಂದೊರೆದ ಬಳಿಕ
ನಡತೆಯುಳ್ಳವರವರ ಹುಡುಗರಿಗೆ ಹುಡುಗಿಯರ
ಕೊಡುವರೆಂತೆನಲು ನಲಿದುಲಿವ ಗುರುವೆ ॥೩೦॥

ನಡತೆಯುಳ್ಳವರವನ ನಡತೆಗಳ ತಿಳಿದು ಮಿಗೆ
ಕೊಡುವರಲ್ಲದೆ ಹಾಂಗೆ ಕೊಡರು ಕೇಳಾ
ಉಡುಕಿಯವರಾವೆಂದು ನುಡಿದದಾ ಕಡಿಮೆತನ
ವಡಗುವುದು ಕೇಳುಕೇಳೆಂಬ ಗುರುವೆ ॥೩೧॥

ಉಡುಕಿಯವರಾದರೇಂ ಬಿಡಿಕಿಯವರಾದರೇಂ
ಕಡುಸೊಬಗಿನ ಮದುವೆಯವರಾದರೇಂ
ಪೊಡೆಯಲ್ಲವಂದು ಮಿಗೆ ನಡೆಯೆಲ್ಲ ಒಂದೆಂಬ
ಹುಡುಗರೇ ಕಡಿಮೆಯವರೆಂಬ ಗುರುವೆ ॥೩೨॥

ಕಡಿಮೆಯವರಾವೆನಲ್ ಕಡಿಮೆಯವರಾಗರೈ
ಕಡಿಮೆಯಾವಲ್ಲೆನಲು ಕಡಿಮೆಯಹರೈ
ಕಡಿಮೆತನವೆಂಬುದೀ ನುಡಿಯಿಂದಲಳಿವುದೀ
ನುಡಿಯಿಂದ ಬೆಳೆವುದೆಂದೊರೆವ ಗುರುವೆ ॥೩೩॥

ಉಡುಕಿಯಾಗದೆ ಇರುವ ನಡತೆಯುಳ್ಳವರುಗಳ
ಅಡಿಗಳಂ ಕಂಡು ಕಡು ತವಕದಿಂದ
ಪೊಡಮಡುತ್ತಿರಲವರ ಉಡುಕಿತನದೀ ಬಂದ
ಕಡಿಮೆತನವಡಗುತಿಹುದೆಂಬ ಗುರುವೆ ॥೩೪॥

ಉಡುಕಿಯವರಾರೆಂದು ನಡುಗಿ ಭಯಭಕ್ತಿಯಿಂ
ಮೃಡಲಿಂಗಮಂ ಭಜಿಪ ಭಕ್ತರುಗಳ
ಎಡೆಯೊಳುರೆ ಸಾರದೆ ಬಿಡದೆ ಸತ್ಕರಿಸುತಿರ
ಲುಡುಕಿತನವಡಗುತಿಹುದೆಂಬ ಗುರುವೆ ॥೩೫॥

ಮೃಡಲಿಂಗಮಂ ಸೋಂಕಿ ಮೃಡರೂಪಮಂ ಭಜಿಸಿ
ನಡತೆಗಳ ತಿಳಿದು ಒಡನಾಡಿ ಬಳಿಕ
ಒಡೆಯರನುಮತದಿಂದ ಕೊಡುತಿಹದುಕೊಳುತಿಹರು
ಹುಡುಗೆಯರನೆಂದು ನಸುನಗುವ ಗುರುವೆ ॥೩೬॥

ಗುರುವೆ ಇದು ನಿರ್ಣಯವೆ ತರಿಸಂದು ಪೇಳೆನಲ್
ತರುಣನೇ ಕೇಳು ನಿರ್ಣಯವಿದಲ್ಲೈ ।
ಚರಲಿಂಗ ಭಕ್ತಿಯಿಂ ದುರುಳತನವಳಿದು ಮಿಗೆ
ಪರಿಶುದ್ಧದಾಹರೆಂದೊರೆಂದೊರೆವ ಗುರುವೆ ॥೩೭॥

ನಿರ್ಣಯವನೊಂದಿರುವ ಪರ್ಣಾಪಭಕ್ತರಾ
ಪರ್ಣಾಪರೂಪರಾಚರಿಸುತಿರ್ಪ
ನಿರ್ಣಯವನರುಹಿಸು ದಯಾರ್ಣವನೆ ಎನುತ ಹ
ಸ್ತಾರುಹಮಂ ಮುಗಿಯಲುಲಿವ ಗುರುವೆ ॥೩೮॥

ಉಡುಕಿಯವರಿಂದೊಗೆದ ಹುಡುಗ ಹುಡುಗಿಯರುಗಳ
ಹುಡುಕಿ ತೊಡಕಿಸುತ ಮದುವೆಯ ಮಾಡಲಾ
ಹುಡುಗ ಹುಡುಗಿಯರುಗಳು ಹಡೆದ ಹುಡುಗರುಗಳಿಗೆ
ಉಡುಕಿತನನಿಲ್ಲೆಂದೊರೆವ ಗುರುವೆ ॥೩೯॥

ತಂದೆಯಂದದೊಳು ಹನ್ನೊಂದು ತಲೆತನಕ ತಾಯಿ
ಯೆಂದೆಂಬಳೊಳ್ ಹತ್ತು ತಲೆತನಕ
ವೊಂದಿರುವದುಡುಕಿತನವೆಂದು ನುಡಿಯುತ್ತಿರುವ
ಮಂದಮತಿಗಳ ತಿರಸ್ಕರಿಪ ಗುರುವೆ ॥೪೦॥

ಉಳಿದಾದ ಮತಗಳೊಳ್ ತಿಳಿವರೀ ನಿರ್ಣಯವ
ಉಳಿದಾದ ಮತಗಳಂತಿದುವೆ ಹೇಳಾ ।
ಮಲಹರಾತ್ಮಕಲಿಂಗನೊಲಿದು ಒಂದೇ ಭವದಿ
ತೊಲಗಿಸುವನೆನುತ ನಲಿದುಲಿವ ಗುರುವೆ ॥೪೧॥

ಕಡು ಸೊಬಗಿನಿಂ ಮಾಳ್ಪ ಸಡಗರದ ಮದುವೆಯೋ
ಉಡುಕೆಯಾಗಿರ್ದವರಯೋಗ್ಯರೆಂದು ।
ಜಡರೆಲ್ಲರುಂ ಬಲ್ಲರುಡುಕಿತನವದು ಹುಡುಗ
ರೆಡೆಯೊಳಿಲ್ಲಿಹುದು ಹೇಳೆಂಬ ಗುರುವೆ ॥೪೨॥

ಜಡರೆಲ್ಲರುಂ ಬಲ್ಲನಡತೆಯರಿಯದೆ ಬರುದೆ
ಕಡು ಜಾಣರೆನಿಸಿಕೊಳಬೇಕೆಂಬುತಾ
ನುಡಿಯುತಿಹ ಕೋಣಗಳ ನುಡಿಯ ಕೆಡೆ ಮೆಟ್ಟುತಿಹ
ಕಡು ಜಾಣರೊಡೆಯನೆನಿಸಿರುವ ಗುರುವೆ ॥೪೩॥

ಉಡುಕಿತನವದು ನಡುವೆ ತುಡುಗನೋಲುದಿಸುತ್ತೆ
ಉಡುಗನೋಲಡಗಿ ನಡುವೇ ಪೋಪುದೈ
ತುಡುಗನಂ ಕಂಡು ಮಿಗೆ ತುಡುಗತನನು ಕಲಿತು
ತುಡುಗರಾಗಿಹರು ಕೆಲರೆಂಬ ಗುರುವೆ ॥೪೪॥

ಕುಲದೀಪನಹ ಪುಣ್ಯ ಬಲಯೂಥ ಪೋತನಿಂ
ಕುಲವೆಲ್ಲ ದೀಪದೋಲ್ ಬೆಳಗುತಿಹುದೈ
ಕುಲನಾಶನಹ ಪಾಪ ಬಲಯೂಥ ಪೋತನಿಂ
ಕುಲವೆಲ್ಲ ನಾಶವಹುದೆಂಬ ಗುರುವೆ ॥೪೫॥

ಹತ್ತುಹನ್ನೊಂದು ಎಂಬುತ್ತ ನುಡಿವರು ಬರುದೆ
ಹತ್ತು ಹನ್ನೊಂದು ಎಂಬುದನರಿಯರೀ
ಮತ್ತತೆಯೊಳಿರುವರೆನೆ ಹತ್ತು ಹನ್ನೊಂದನುರೆ
ಬಿತ್ತರಿಸಬೇಕೆನಲೆ ನಲಿವ ಗುರುವೆ ॥೪೬॥

ಹತ್ತು ಹನ್ನೊಂದನುರೆ ಬಿತ್ತರಿಸಬಹುದುದರ
ಗೊತ್ತನರಿಯಲ್ಬಾರದೆಂದರುಪುತ
ಹತ್ತು ಹನ್ನೊಂದಾಗ ಗೊತ್ತನರಿದವನಿರುವ
ಗೊತ್ತುವೇ ಶಿವನ ಗೊತ್ತೆಂಬ ಗುರುವೆ ॥೪೭॥

ಹತ್ತು ಹನ್ನೊಂದಾದ ಗೊತ್ತನರಿದವರೊಳಗೆ
ದುತ್ತಮಾರ್ಭಕರೊಳಿರುವವನೆ ನಿನಗಾ
ಹತ್ತು ಹನ್ನೊಂದನುರೆ ಬಿತ್ತರಿಸುತಿಹನೇಕ
ಚಿತ್ತದಿಂ ಕೇಳು ಕೇಳೆಂಬ ಗುರುವೆ ॥೪೮॥

ಒಂದರಿಂ ಹತ್ತು ಮಿಗೆ ಒಂದರಿಂ ಹನ್ನೊಂದು
ಒಂದರಿಂದೆ ಮುಂದು ನಿಂದುದೆಲ್ಲಂ
ಒಂದನಿಂದೆನಗೆ ಹನ್ನೊಂದು ಹತ್ತೆಂಬುವ
ಮಂದಮತಿಗಳನುಳಿವುದೆಂಬ ಗುರುವೆ ॥೪೯॥

ಹೆತ್ತಾಕೆಯೇ ಹತ್ತು ಹೆತ್ತಾತನೇ ಒಂದೆ
ನುತ್ತವೊಡವೆರೆದು ಹನ್ನೊಂದಹುದೆನೆ
ಹೆತ್ತವಳು ಹತ್ತೆಂತು ಹೆತ್ತಾತಗೊಂಡೆಂತು
ಬಿತ್ತರಿಸಿ ತಿಳಿಪೆನಲ್ಕುರಿವ ಗುರುವೆ ||೫೦||

ಒಂದರಿಂ ಮುಂದೊಂದು ಬಿಂದುವನೆ ಹತ್ತೆನಿಸಿ
ಒಂದರಿಂ ಬಿಡುವದು ಹಿಂದಿರಲ್ಕೆ
ಒಂದೆ ಎಂದೆನಿಸಿ ಮಿಗೆ ಒಂದುವೊಂದಿಸುತ ಹ
ನ್ನೊಂದಾಯಿತೀಗ ತಿಳಿಯೆಂಬ ಗುರುವೆ ||೫೧||

ತಿಳಿಯಲಿಲ್ಲೈ ಗುರುವೆ ತಿಳಿವಂತೆ ಪೇಳೆನುತ
ತಳಹದೇ ಪದದೊಳಿಹ ಧೂಳಿಯಂ
ತಳೆದುಕೊಳುತಿಹ ಮಗನ ತಳಹದೇ ಮುಂಡಾಡಿ
ತಿಳಿವರಿಗೆ ತಿಳಿವಂತೆ ಪೇಳ್ವ ಗುರುವೆ ||೫೨||

ಒಂದುವೇ ಸತಿಯದರ ಮುಂದಿರುವ ಬಿಂದುವವ
ಳೊಂದುವ ಪತಿಸ್ಥಾನವೆಂದರುಪುತ ।
ಒಂದುವೇ ಪತಿಯದರ ಹಿಂದಿರುವ ಬಿಂದುವವ
ನೊಂದುವ ಸತಿಸ್ಥಾನವೆಂಬ ಗುರುವೆ ||೫೩||

ಹತ್ತುವೇ ಸತಿಯಳೆನಿಸುತ್ತವಳ ಪತಿಯೊಂದೆ
ನುತ್ತ ಒಡವೆರೆದು ಹನ್ನೊಂದೆನಿಸುವಾ
ಉತ್ತಮ ಕುಮಾರಂ ಪೆತ್ತು ಇವನೊಳಗಡಗಿ
ರುತ್ತಿಹರು ನೋಡು ನೋಡೆಂಬ ಗುರುವೆ ||೫೪||

ಹಿಂದು ಮುಂದೆಂಬುವಾ ಸಂದೇಹವಳಿದ ಹ
ನ್ನೊಂದಿದಂ ನೋಡುನೋಡೆಂದರುಪುತ
ಇಂದುಧರಲಿಂಗವಟಮನೊಂದಿ ಪೂಜಿಸುವರಿಹ
ರಂದನುಂ ತಿಳಿವರೆಂದೊರೆವ ಗುರುವೆ ಶರಣು ||೫೫||

ಹತ್ತುವೇ ಜೀವವೆನಿಸುತ್ತ ಪರಮನೆ ಒಂದೆ
ನುತ್ತ ಒಡವೆರೆದು ಹನ್ನೊಂದೆನಿಸುವ
ಉತ್ತರೋತ್ತರನಾಗಿರುತ್ತಿರುವ ಪರಮಾತ್ಮ
ನುತ್ತರನೆ ನಿತ್ಯನವನೆಂಬ ಗುರುವೆ ॥೫೬॥

ಹತ್ತುವೇ ಶಿಷ್ಯನೆನಿಸುತ್ತ ಗುರುವೇ ಒಂದೆ
ನುತ್ತ ಒಡನೆರೆದು ಹನ್ನೊಂದೆನಿಸುವ
ಉತ್ತರೋತ್ತರನಾಗಿ ಹತ್ತಿರುವ ಗುರುಶಿಷ್ಯ
ರುತ್ತಮರೆ ನಿತ್ಯನವನೆಂಬ ಗುರುವೆ ॥೫೭॥

ಹತ್ತುವೇ ಹೆಂಡತಿ ಎನುತ್ತ ಗಂಡನೆ ಒಂದೆ
ನುತ್ತ ಒಡವೆರೆದು ಹನ್ನೊಂದೆನಿಸುವ ।
ಉತ್ತರೋತ್ತರನಾಗಿಸುತ್ತಿರುವ ಗಂಡು ಮಗ
ನಿತ್ತವನೆ ಗುಂಡನಹನೆಂಬ ಗುರುವೆ ॥೫೮॥

ಹತ್ತುವೇ ಅಂಗವೆನಿಸುತ್ತ ಲಿಂಗವೆ ಒಂದೆ
ನುತ್ತ ಒಡವೆರೆದು ಹನ್ನೊಂದೆನಿಸುವ
ಉತ್ತರೋತ್ತರನಾಗಿರುತ್ತಿರುವ ಶಿವಲಿಂಗ
ವಿತ್ತವನೆ ಪತಿಯೆನುತ್ತೊರೆವ ಗುರುವೆ ॥೫೯॥

ಹತ್ತುವೇ ಪದಜಲವೆನುತ್ತ ಶೇಷವೆ ಒಂದೆ
ನುತ್ತ ಒಡವೆರೆದು ಹನ್ನೊಂದೆನಿಸುವ
ಉತ್ತರೋತ್ತರವಾಗಿರುತ್ತಿಹ ಮಹಾಶೇಷ
ವಿತ್ತು ಸಲಹುವ ಮಹಾಮಹಿಮ ಗುರುವೆ ॥೬೦॥

ಲಿಂಗದೇವನ ಧರಿಸಿ ಅಂಗಗುಣದಿಂದ ಮಿಗೆ
ಮಂಗತನದಿಂದಿರುವರಂ ತಿಳಿಸುತ ।
ಲಿಂಗದೇವನ ಭಜಿಪದಿಂಗಿತವನರಿಯೆಂದು
ಕಂಗೊಳಿಸಿ ಮುಂದೆ ನಿಂದಿರುವ ಗುರುವೆ ॥೬೧॥

ನಿರ್ಣಯವ ನಿರ್ಣೈಪ ಪರ್ಣಾಪಭಕ್ತರೀ
ನಿರ್ಣಯವ ನಿರ್ಣೈಸಿಕೊಳುತಿರ್ಪರೀ
ನಿರ್ಣಯವನುಳಿದಿರುವ ನಿರ್ಣಯದ ಜಾಣರೀ
ನಿರ್ಣಯವನರಿಯರೆಂದೊರೆವ ಗುರುವೆ ॥೬೨॥

ಚೆನ್ನವೀರೇಶನೆಂಬುನ್ನತಾಹ್ವಯದೆ ನೀ
ನೆನ್ನನುದ್ಧರಿಸುವುದನರಿದೆನಿನ್ನು
ಎನ್ನ ನಿಂದಿಸುವ ವದನ ನ್ಯಾಯದಿಂದ ನೀಂ
ಬನ್ನಬಡಿಸದೆ ಸದಾ ಸಲಹು ಗುರುವೆ ॥೬೩॥

ಮೂರನೆಯ ಕಾಂಡದೊಳ್ ಪದಿಗಳು ೬೦೬ಕ್ಕೆ ಹದಿನಾರನೆಯ ಪ್ರಕರಣಂ ಸಮಾಪ್ತಂ,
ಮಂಗಲಮಸ್ತು ಕಲ್ಯಾಣಂ ಭವತು, ವಿಪ್ರಂ ಭೂಯಾತ್.

❖❖

ಪತ್ರ ೩೨೩
ಪದ್ಯ ೧೦೫೫

ಚೋರನೆನಿಸಿರುವುದೀ ಹೊಂಗಲ್ಲಿನಲ್ಲಿ ಸರ
ಕಾರವೆನಿಸಿರುವುದಾ ಜೀರ್ಣಭೂಪುರದೊಳ್ ಕು
ಮಾರನೆನಿಸಿರುವುದು ನವೀನಭೂಪುರದಲ್ಲಿ ನೋಡೆಂದು ತಿಳಿಸುತೊಡನೆ ।
ಚೀರನೆನಿಸಿರುವುದೈ ನ್ಯಾಯದವರಿಂಗೆ ಸರ
ಕಾರವೆನಿಸಿರುವುದನ್ಯಾಯದವರುಗಳಿಗೆ ಕು
ಮಾರನೆನಿಸಿರುವುದೈ ನಿರ್ನ್ಯಾಯದವರಿಗೆಂದರುಹಿಸುವ ಗುರುವೆ ಶರಣು ॥೧೦೫೬॥

ಎನ್ನ ಹಳಿಹುಬ್ಬಳ್ಳಿಯೊಳಗಿರುವ ಭಕ್ತರಿಗೆ
ಅನ್ಯಾಯದವರೆಂದು ನೀನುರದೆ ನುಡಿದೆಯ್ಯೆ
ಚೆನ್ನಾಗಿ ತಿಳಿಸಿ ಎನ್ನೊಳಗಿರುವ ಸಂಶಯವನಳಿಸೆಂದು ವಂದಿಸುತಿರೆ ।
ನಿನ್ನೊಳಿಹ ಸಂಶಯವ ನಿನ್ನವರೆ ಕಳೆವರೈ
ನಿನ್ನವರನುರೆ ಕೇಳು ಕೇಳೆಂದು ನಿರವಿಸುತ
ನಿನ್ನವರನುರೆ ಕೇಳಿಯಾನೆ ಹೇಳುವೆನೀಗ ಕೇಳೆಂಬ ಗುರುವೆ ಶರಣು ॥೧೦೫೭॥

ಅನ್ಯರೆನಿಸಿರ್ದ ಹಟಕಾರದೊಳ್ ಬಡಿದಾಡಿ
ಅನ್ಯಾಯದಿಂದವರ ಮನೆಯನುರೆ ಲೂಟಿಸಿದ
ಕನ್ಯಾಯದವರಹುದೊ ಅಲ್ಲವೊ ನೀನೀಗ ಹೇಳುಹೇಳೆನುತ ನುಡಿಯೆ ।
ಅನ್ಯಾಯದಿಂದೆ ಚಲವಾದಿಯಂ ಕೊಲ್ಲುತಿರೆ
ಅನ್ಯಾಯದಿಂದವರ ಮನೆಯನುರೆ ಲೂಟಿಸಿದ
ಕೆನ್ನ ಗುರುವೆ ನೀನೆ ತಿಳಿದು ಹೇಳುವುದೆನಲು ನಲಿದುಲಿದ ಗುರುವೆ ಶರಣು ॥೧೦೫೮॥

ಅನ್ಯಾಯದವರಿಗನ್ಯಾಯದವನೇ ಎನಿಸಿ
ಅನ್ಯಾಯದಿಂದವರನಿರಿವುದದು ನಿರ್ಣಯಂ
ಎನ್ನ ಮಗನೇ ಇದಕ್ಕೇನು ಸಂಶಯವಿಲ್ಲವಾಲಯವ ಲೂಟಿಸುವುದೈ ।
ಅನ್ಯಾಯದಿಂ ಪೋಪ ಚಲವಾದಿಯಂ ಬಡಿಯ
ಅನ್ಯಾಯ ನ್ಯಾಯ ನಿರ್ಣಯಗಳನರಿಯದೆ
ಟೊಣ್ಣೆತನದಿಂದ ಬಡಿದಾಡಿರುವ ಟೊಣ್ಣೆರಿವರರಿಯೆಂಬ ಗುರುವೆ ಶರಣು ॥೧೦೫೯॥

ತನ್ನವರು ಅನ್ಯರುರೆ ಬಡಿದಾಡುತಿರಲೊಡನೆ
ಅನ್ಯರಂ ಸೋಲಿಸದೆ ತನ್ನವರ ಸೋಲಿಸಿದ
ನೆನ್ನ ಗುರುವೇ ಇದೇನಾಶ್ಚರ್ಯವೆನಗೆ ತಿಳಿಸೆಂದು ವಂದಿಸಿ ನಿಂದಿಹ ।
ತನ್ನ ಮಗನಂ ನೋಡಿ ನಲಿದಾಡಿ ಮುಂಡಾಡಿ
ಅನ್ಯಾಯವದು ಪೆಚ್ಚಲಗಾದರುರೆ ಸೋಲ್ವ
ರೆನ್ನ ಮಗನೇ ಕೇಳಿದಾಶ್ಚರ್ಯವಲ್ಲವೆಂದೊರೆವ ಗುರುವೆ ಶರಣು ॥೧೦೬೦॥

ಅನ್ಯಾಯಮುರೆ ಪೆಚ್ಚಿರುವುದೆಂದು ತಿಳಿಸಿದಿರಿ
ಅನ್ಯಾಯಮಂ ಪೆಚ್ಚಿಸಿರ್ದುದಂ ತಿಳಿಸೆಂಬ
ತನ್ನ ಮಗನಂ ನೋಡಿ ನಲಿದಾಡಿ ಮುಂಡಾಡಿ ಮುದ್ದಿಸುತ್ತಿರ್ದು ಕೇಳ್ವೆ ।
ಅನ್ಯರೆನಿಸಿರ್ದ ಹಟಕಾರರಿಹ ಕೇರಿಯೋ
ಳನ್ಯಾಯದಿಂ ಚಲವಾದಿಯಂ ಬಡಿಯ
ಅನ್ಯಾಯನ್ಯಾಯದಿಂದವರನುರೆ ಬಡಿದರಿವರದಿಯೆಂಬ ಗುರುವೆ ಶರಣು ॥೧೦೬೧॥

ಅನ್ಯಾಯದಿಂಪೋದ ಚಲವಾದಿ ಎಂದೊರೆದಿ
ರೆನ್ನ ಗುರುವೇ ಇನ್ನು ಸಕಳರುರೆ ತಿಳಿವಂತೆ
ಅನ್ಯಾಯ ನ್ಯಾಯ ನಿರ್ನ್ಯಾಯಗಳನುರೆ ತಿಳಿಸುತಿಳಿಸೆಂದು ವಂದಿಸುತಿಹ ।
ತನ್ನ ಮಗನಂ ನೋಡಿ ನಲಿದು ತನ್ನೊಳ್ ತಾನೆ
ಇನ್ನು ಇವನಿಂದ ಹಳಿ ಹುಬ್ಬಳ್ಳಿಯವರರಿವ
ರನ್ಯಾಯ ನ್ಯಾಯ ನಿರ್ನ್ಯಾಯಗಳನೆಂದು ಪಸರಿಸುತಿರುವ ಗುರುವೆ ಶರಣು ॥೧೦೬೩॥

ಬಾಯೆಂದು ಕರೆದೊಯ್ಯೆ ಪೋಪುದದು ನ್ಯಾಯವೈ
ಬಾಯೆಂದು ಕರೆಯುತಿರೆ ಪೋಗೆ ನಿರ್ನ್ಯಾಯವದು
ಬಾಯೆಂದು ಕರೆಯದೆ ಸುಮ್ಮನಿರೆ ತಾ ಪೋಗುವದದನ್ಯಾಯ ನ್ಯಾಯಂ ।
ಬಾಯೆಂದು ನುಡಿಯದೆ ಬರಬ್ಯಾಡೆನುತ್ತಿರಲು
ಛೀಯೆಂದರೆನಗೆ ಬಾಯೆಂದರೆಂದುರೆ ಪೋಪ
ನಾಯಿವಾನಿಸರಂತೆ ಪೋಗುವುದದನ್ಯಾಯವೆಂಬ ಗುರುವರನೆ ಶರಣು ॥೧೦೬೪॥

ಇಂತಪ್ಪ ಅನ್ಯಾಯದಿಂ ಪೋದ ಚಲವಾದಿ
ಯಂ ತವಕದಿಂದವರು ಬಡಿಯುತಿರಲುರೆ ಪೋಗಿ
ತಾಂ ತವಕದಿಂದ ಚಲವಾದಿಯ ಬಿಡಿಸಿಕೊಂಡು ಬರುವುದಿಹು ನಿರ್ನ್ಯಾಯದ್ದೈ ।
ಇಂತಪ್ಪ ನಿರ್ನ್ಯಾಯಮಂ ಬಿಟ್ಟು ಸಿಟ್ಟಿನಿಂ
ಸಂತೆಮೂಳರು ಮತ್ತಮುರೆ ನೆರೆದು ಬಡಿದಾಡಿ
ದಂಥದಿದು ಅನ್ಯಾಯನ್ಯಾಯವೆನಿಸಿರುವುದರಿಯೆಂಬ ಗುರುವರನೆ ಶರಣು ॥೧೦೬೫॥

ಇಂತಪ್ಪ ಅನ್ಯಾಯ ನ್ಯಾಯವದು ಸಾಲದೇ
ಸಂತೆಮೂಳರು ಮತ್ತಮುರೆ ನೆರೆದು ಅವರಸುಗಿ
ಶಾಂತಕ್ಕೆ ಪೋಗಿ ಅವರಂ ಬಡಿದು ಅವರ ಮನೆಯಂ ಲೂಟಿಸಿರ್ದರಿದುವೆ ।
ಅಂತಕಾಂತಕ ಶರಣರಿಗೆ ಯೋಗ್ಯವೆನಿಸದಿರು
ವಂಥ ಅನ್ಯಾಯವಹುದೆಂದು ಸೂಚಿಸಲೊಡನೆ
ನೀಂ ತವಕದಿಂದಿನ್ನನ್ಯಾಯಮಂ ತಿಳಿಸೆನಲ್ ತಿಳಿಸುತಿಹ ಗುರುವೆ ಶರಣು ॥೧೦೬೬॥

ಅನ್ಯಾಯದಿಂ ಪೋದ ಚಲವಾದಿಯಂ ಬಿಡದೆ
ಚೆನ್ನಾಗಿ ತಪ್ಪುತಪ್ಪೆನಿಸಿ ಕರೆಕೊಂಬುದ್ಯೆ
ಚೆನ್ನಾಗಿ ತಪ್ಪೆನ್ನದಿರಲು ಆ ಚಲವಾದಿಯಂ ಬಿಡುವುದಿದೆ ನ್ಯಾಯವ್ಯೆ ।
ಎನ್ನ ಮಗನೇ ತಿಳಿದಿಯಾ ಎಂದು ಮ್ಯೆದಡಹ
ಲೆನ್ನ ಗುರುವೇ ಇನ್ನು ಆವುದರೊಳಿರುವುದ್ಯೆ
ಚೆನ್ನಾಗಿ ತಿಳಿಸಿ ಸಂಶಯವನಳಿಸೆನಲು ತಿಳಿಸುತ್ತಿರುವ ಗುರುವೆ ಶರಣು ॥೧೦೬೭॥

ನ್ಯಾಯದೊಳಿಹುದು ನಿರ್ನ್ಯಾಯದೊಳಿಹುದು ಆ
ನ್ಯಾಯನ್ಯಾಯದೊಳಿರುವುದೊಂದು ಸಮಯದೋ
ಳನ್ಯಾಯದೋಳೆಂದೆಂದು ಇರಬಾರದ್ಯೆ ಇರ್ವ ಕಥನದಿಂದ ಸೋತರುರದೆ ।
ನ್ಯಾಯ ನಿರ್ನ್ಯಾಯಯುತ ನಿರ್ಣಯ ಪುರಾಣವಿದ
ನಾಯಾಸದಿಂದಲ್ಲಿಗುರೆ ಪೋಗೆ ಬಾಗಿ ಅ
ನ್ಯಾಯಮಂ ನೀಗಿ ನಿಜ ನಿರ್ಣಯದೊಳಿರುವರೆಂದೆಂಬ ಗುರುವರನೆ ಶರಣು ॥೧೦೬೮॥

ಎನ್ನ ಹಳಿಹುಬ್ಬಳ್ಳಿಯೊಳಗಿರುವ ಭಕ್ತರೀ
ಗನ್ಯಾಯದವರೆನಿಪರೆಂದುರದೆ ತಿಳಿಸಿದಿರಿ
ಇನ್ನು ಹೊಸಹುಬ್ಬಳ್ಳಿಯೊಳಗಿರುವವರನುರದೆ ತಿಳಿಸೆಂದು ವಂದಿಸುತಿರೆ ।
ನಿನ್ನ ಹೊಸ ಹುಬ್ಬಳ್ಳಿಯೊಳಗಿರುವ ಭಕ್ತರವ
ರನ್ಯಾಯದವರೆನಿಸರೀಗ ನೀನುರೆ ಕೇಳು
ಎನ್ನ ಮಗನೇ ನಿರ್ನ್ಯಾಯದವರೆನಿಸರೆಂದರುಹಿಸುವ ಗುರುವೆ ಶರಣು ॥೧೦೬೯॥

ಇನ್ನುಳಿದ ಪೇಟೆಯವರುರೆ ಕೇಳಿ ನಲಿವಂತೆ
ಎನ್ನ ಹೊಸಹುಬ್ಬಳ್ಳಿಯೊಳಗಿರುವರನುರೆ ತಿಳಿಸೆಂಬ
ತನ್ನ ಮಗನಂ ನೋಡಿ ನಲಿದಾಡಿ ಮುಂಡಾಡಿ ಮುದ್ದಿಸುತ್ತಿರ್ದು ಕೇಳ್ಯೆ ।
ನಿನ್ನ ಗುರು ಮೂರುಸಾವಿರದೊಡೆಯನಿಹನಲ್ಲಿ
ನಿನ್ನ ಭಕ್ತಂ ನಿರಂಜನಶೆಟ್ಟಿ ಇಹನಲ್ಲಿ
ನಿನ್ನವರೆನಿಪ ನಿರ್ನ್ಯಾಯದವರಲ್ಲಿ ರಂಜಿಪರೆಂಬ ಗುರುವೆ ಶರಣು ॥೧೦೭೦॥

ಅನ್ಯಾಯವೆಂದು ತಮ್ಮೊಳ್ ತಾವೆ ತಿಳಿದಿರ್ದು
ಚೆನ್ನಾಗಿ ತಮ್ಮವರಿಗುರೆ ಕುಮುಕವಾಗದೆ
ಚೆನ್ನಬಸವನವರ ಕುಮಾರರಂ ಒಲಿಸಿಕೊಂಡಿರುವರುರೆ ನೋಡು ನೋಡೈ ।
ಚೆನ್ನಬಸವಾಂಶಭವನೇ ಕೇಳು ಕೇಳೆನಲ್
ಚೆನ್ನಬಸವನ ವರ ಕುಮಾರರಾರು ಪೇಳೆನಲ್
ಚೆನ್ನಾಗಿ ತಿಳಿಸಿ ನೀನೆ ಅಲ್ಲಿರುವ ಸರಕಾರದವರೆಂಬ ಗುರುವೆ ಶರಣು ॥೧೦೭೧॥

ಅಲ್ಲಿರುವ ಸರಕಾರವೇ ಚೆನ್ನಬಸವನೆನ
ಲಲ್ಲಿರುವ ಸರಕಾರದವರನವರ ಪುತ್ರ
ರೆಲ್ಲರಿಗೆ ತಿಳಿಯದಿದು ಬಲ್ಲವರೆ ಬಲ್ಲರೆಂದರುಹಿಸುತ್ತಿರ್ದು ಮತ್ತಂ ।
ಅಲ್ಲಿಯೇ ನಿಲ್ಲಿಯೇಲ್ಲಾಹರೇಂ ಮಗನೆ
ಸಲ್ಲಲಿತ ನಿರ್ಣಯವೆ ಚೆನ್ನಬಸವೇಶನನ
ನಿಲ್ಲದಿಹ ತಾಣದೊಂದಿಲ್ಲವೆಲ್ಲಾದರೂ ಇರುವನೆಂಬ ಗುರುವೆ ಶರಣು ॥೧೦೭೨॥

ಅಲ್ಲಿ ಹೊಸ ಹುಬ್ಬಳ್ಳಿಯೊಳ್ ಪಸರಿಸುತ್ತಿರ್ದು
ಅಲ್ಲಿ ಹಳಿ ಹುಬ್ಬಳ್ಳಿಯೊಳ್ ಮಸುಳಿಸುತ್ತಿರ್ದು
ಇಲ್ಲಿ ಹೊಂಗಲ್ಲಿನೋಳಡಗಿ ನೋಡುವನೀಗ ನೋಡೆಂದು ತೋರುತೊಡನೆ ।
ಸಲ್ಲೀಲೆಯಿಂ ಬೂದನಗುಡ್ಡದಾ ಬಸವ
ನಲ್ಲಿಗುರೆ ವ್ಯಾಸಭುಜ ಸಹಿತ ನಂದೀಧ್ವಜವ
ಖುಲ್ಲರ ನಿವಾರಿಸುತ ತರುವರುರೆ ನೋಡೆಂಬ ಗುರುವರನೆ ಶರಣು ॥೧೦೭೩॥

ಅಂಜದಿರುವರು ಸದಾಚಾರಕುರೆ ಬಂದು ಬರ
ಲಂಜಿ ಸರಿವರು ಅನಾಚಾರದೊಳುರೆ ಪೊಗದೆ
ಅಂಜದೇ ಅಂಜಿರುವ ನಿರ್ನ್ಯಾಯದವರೆ ನಿನ್ನ ಹೊಸಹುಬ್ಬಳ್ಳಿಯೊಳ್
ರಂಜಿಸುತ ನಿನ್ನ ಸದ್ಭಕ್ತರೆನಿಸರು ನಿ
ರಂಜನ ಪದಾಬ್ಜಮದ್ಭ್ರಮರನೆನಿಸುವ ನಿ
ರಂಜನ ಶ್ರೇಷ್ಠನವನವನುರದೆ ನಿನ್ನವನೆನಿಪನೆಂಬ ಗುರುವೆ ಶರಣು ॥೧೦೭೪॥

ನಿನ್ನ ನಿರ್ಣಯ ಪುರಾಣವನುರದೆ ನೋಡಿಹಂ
ನಿನ್ನ ನಿರ್ಣಯ ಪುರಾಣವ ಕೇಳಿಸೈಯೆಂದು
ಚೆನ್ನಾಗಿ ನಿನ್ನಗಂದು ಬಿನ್ನೈಸಿರುವನುರದೆ ತಿಳಿಯೆಂದು ತಿಳಿಸುತೊಡನೆ ।
ನಿನ್ನನವನವರುರದೆ ಕರೆಸುತಿಹರ್‍ೖ ಮುಂದೆ
ನಿನ್ನ ನಿರ್ಣಯ ಪುರಾಣವ ಬರೆಸುವರು ಮುಂದೆ
ಚೆನ್ನಾಗಿ ಗಡಿಸಿ ವಿನೋದಿಸುವರಿನ್ನು ನೋಡೆಂಬ ಗುರುವರನೆ ಶರಣು ॥೧೦೭೫॥

ಅಂದು ನಿನ್ನಯ ಹಳೆಹುಬ್ಬಳಿಯೊಳಗಿರುವ
ಮಂದಮತಿಗಳು ಬಂದು ನಿಂದು ನಿನ್ನಂ ನೋಡಿ
ವಂದಿಸುತ್ತಿರ್ದು ನಾವಂದನಂದೆವು ಮಂದಮತಿಯಿಂದ ಎಂಬುತೊಡನೆ ।
ಅಂದು ಹೊಸಹುಬ್ಬಳ್ಳಿಯವರೋದಿಸುತ್ತಿರ್ಪ
ಬಂಧುರಾನಂದಕರ ನಿರ್ಣಯ ಪುರಾಣವಾ
ನಂದದಿಂ ಕೇಳಿ ಖತಿಯಂ ತಾಳದೆ ಪೊಗಳ್ವರೆಂಬ ಗುರುವರನೆ ಶರಣು ॥೧೦೭೬॥

ಎಂದು ಕೇಳಿದ್ದಿಲ್ಲವೀ ಪುರಾಣವನುರದೆ
ಎಂದು ಕಂಡಿದ್ದಿಲ್ಲವೀ ಪುರಾಣವನುರದೆ
ತಂದೆಯೇ ನಿಮ್ಮಿಂದ ಕಂಡೆವೈ ಕೇಳ್ದೆವಾವೆಂದು ವಂದಿಸಿ ನಿಂದಿರೆ ।
ಅಂದು ನೀವನ್ಯರೊಳ್ ಬಡಿದಾಡಿ ಬಳಲ್ದ ಕತ
ದಿಂದೆ ನಿರ್ಣಯಪುರಾಣಮುದಿಸಿದುದಿನ್ನು
ಅಂದಿನೋಲ್ ಬಳಲದೆ ಸುಖದಿ ಬಾಳಿರಿಯೆಂದು ಪರಸೆಂಬ ಗುರುವೆ ಶರಣು॥೧೦೭೭॥

ಎನ್ನ ಹಳಿಹುಬ್ಬಳಿಯವರನುರೆ ತಿಳಿಸಿದಿರಿ
ಎನ್ನ ಹೊಸ ಹುಬ್ಬಳ್ಳಿಯವರನುರೆ ತಿಳಿಸಿದಿರಿ
ಇನ್ನು ಈ ಬಯಲ ಹೊಂಗಲ್ಲಿನನತಂ ತಿಳಿಸು ತಿಳಿಸೆಂದು ವಂದಿಸುತಿರೆ ।
ಅನ್ಯಾಯದವರಲ್ಲ ನಿರ್‍ನ್ಯಾಯದವರಲ್ಲ
ಎನ್ನ ಮಗನೇ ಕೇಳು ನ್ಯಾಯದವರೆನಿಪರನೆ
ಚೆನ್ನಾಗಿ ಎನ್ನವರು ತಿಳಿವಂತೆ ತಿಳಿಸೆನಲ್ ತಿಳಿಸುತಿಹ ಗುರುವೆ ಶರಣು ॥೧೦೭೮॥

ಸರಕಾರದವರ ಹರಸಾದಕುರೆ ತಾರದೆ
ಸರಕಾರದವರೆ ತಾವಾಗಿರುವರುರೆ ನೋಡು
ದೊರೆಯೆನಿಪ ಶಿವಲಿಂಗರುದ್ರಸರ್ಜ ನೃಪಾಲನೊರ್ವನಂ ಒಲಿಸುತೊಡನೆ ।
ಸರಕಾರದವರೆನಿಪ ಮಠದಯ್ಯ ಮೊದಲಾದ
ವರನುರದೆ ಬರಗೊಡರು ತಮ್ಮ ಪೇಟೆಯೊಳೀಗ
ಸರಕಾರದವನಡಗಿರುವ ನೀನಡಗಿ ನೋಡೆಂಬ ಗುರುವೆ ಶರಣು ॥೧೦೭೯॥

ಸರಕಾರದವನಿಲ್ಲಿ ಅಡಗಿ ಊರೊಳಗಿಹಂ
ಸರಕಾರದವರು ಭಿಕ್ಷುಕರೆನಿಸಿ ತಿರಿವರೀ
ಪುರದಂತೆ ಪುರವಿಲ್ಲವೀನಾಡೊಳೆಲ್ಲೆಲ್ಲ ನೋಡುನೋಡೆನುತ ಮತ್ತಂ ।
ಸರಕಾರದವನಿಗಳಾದೆ ಇರುವರ್‍ಯೈ ಇವರು
ಸರಕಾರದವರನುರೆ ಅಂಜಿಸುತ್ತಿಹರಿವರು
ಸರಕಾರವೆನಿಸಿಹರು ತಾವೆ ಅನ್ಯರಿಗೆ ನೋಡೆಂಬ ಗುರುವೆ ಶರಣು ॥೧೦೮೦॥

ಅನ್ಯರೆನಿಸಿರ್ಪ ಹಟಕಾರಾದಿಯಾದವರ್ಗೆ
ಚೆನ್ನಾಗಿ ತಾವೆ ಸರಕಾರವೆನಿಸಿರ್ದು
ಮುನ್ನಿರ್ದ ಹಟಕಾರರೀ ಊರನುರೆ ಬಿಡಿಸಿ ಕಟ್ಟಿಹರು ನೋಡು ನೋಡೈ ।
ಇನ್ನುಳಿದ ಪೇಟೆಗಳದೇ ನಡತೆ ಇಲ್ಲವೈ
ಎನ್ನ ಮಗನೇ ಇವರು ನ್ಯಾಯದವರೆನಿಸುವರು
ಪುಣ್ಯಬಲರಿಂ ನಡೆವುದೈ ಇಲ್ಲದಿರೆ ನಡೆಯದೆಂಬ ಗುರುವರನೆ ಶರಣು ॥೧೦೮೧॥

ಪುಣ್ಯಬಲವಿರುವನಕ ಹೀಗೆ ನಡೆವುದು ಎನಲ್
ಪುಣ್ಯಬಲವೀಗಿರುವುದೇ ಎಂದು ವಂದಿಸಲ್
ಪುಣ್ಯ ಬಲವಿದ್ದ ಕಾರಣದಿಂದ ನೀನೇ ಇಲ್ಲಿಯುರೆ ಬಂದಿರ್ದವೈ ।
ಪುಣ್ಯ ಬಲವದು ಸರಿಯೆ ನೀನುರದೆ ಸರಿವುದೈ
ಎನ್ನ ಮಗನೇ ಎಂದು ತಿಳಿಸಿ ನೀನೇ ದಯದಿ
ಪುಣ್ಯಪಾಪಗಳ ತಿಳಿಸೆಂದು ವಂದಿಸಲೊಡನೆ ತಿಳಿಸುತಿಹ ಗುರುವೆ ಶರಣು ॥೧೦೮೨॥

ಪರರ ಪೀಡಿಸುತಿರ್ಪುದದುವೆ ಪಾಪವೆನಿಪುದು
ಪರರ ಪೀಡಿಸದಿರ್ಪುದದುವೆ ಪುಣ್ಯವೆನಿಪುದು
ಪರಧನವ್ಃಪರಸತಿಯನಪಹರಿಸುವದು ಹೇ ಮಹಾಪಾಪವೆನಿಸುವುದುರದೆ ।
ಪರಧನವ ಪರಸತಿಯನಪಹರಿಸದಿರ್ಪುದದು
ಧರೆಯೋಳ್ ಮಹಾಪುಣ್ಯವೆನಿಪುದೆಂದರುಹಿಸಲ್
ಗುರುವೆ ಇನ್ನುರೆ ಕೇಳುತಿಹೆನೆನಲು ನಲಿದು ಕೇಳೆಂಬ ಗುರುವೆ ಶರಣು ॥೧೦೮೩॥

ಪುಣ್ಯವೆಂತಿರುವುದೈ ಪಾಪವೆಂತಿರುವುದೈ
ಪುಣ್ಯಬಲವೆಂತಿಹುದು ಪಾಪಬಲವೆಂತಿಹುದು
ಚೆನ್ನಾಗಿ ನೀನೆನಗೆ ತಿಳಿಸೆಂದು ವಂದಿಸುವ ಕಂದನಂ ನೋಡಿ ನಲಿದು ।
ಪುಣ್ಯವಿಹುದಕ್ಕಿಯೋಲ್ ಪಾಪವದು ಭತ್ತದೋಲ್
ಪುಣ್ಯಬಲವದು ಜಲ ಪ್ರವಾಹದೊಲಿರುವುದೈ
ಎನ್ನ ಮಗನೇ ಪಾಪಬಲವದುವೆ ಉರಿಯೊಲಿಹುದರಿಯೆಂಬ ಗುರುವೆ ಶರಣು ॥೧೦೮೪॥

ಪುಣ್ಯ ಪಾಪಂಗಳನುರೆ ವಿವರಿಸುತ್ತಿರ್ಪುದೋ
ಪುಣ್ಯ ಪಾಪಗಳನುರೆ ವಿವರಿಸಲ್ಬಾರದೋ
ಚೆನ್ನಾಗಿ ನೀನೆನಗೆ ತಿಳಿಸು ತಿಳಿಸೈ ಗುರುವೆ ಎಂದು ವಂದಿಸಿ ನಿಂದಿರೆ ।
ಪುಣ್ಯಪಾಪಗಳ ವಿವರಿಪುದದುವೆ ನ್ಯಾಯವೆನ
ಲಿನ್ನು ಅನ್ಯಾಯ ನಿರ್ನ್ಯಾಯಗಳ ತಿಳಿಸೆನಲ್
ಪುಣ್ಯಪಾಪಗಳ ವಿವರಸದಿರ್ಪುದನ್ಯಾಯವರಿಯೆಂಬ ಗುರುವೆ ಶರಣು ॥೧೦೮೫॥

ವಿವರಿಸುವ ಸ್ಥಾನದೊಳ್ ವಿವರಿಸುತ್ತಿರ್ದುರ್ಪ ಮಿಗೆ
ವಿವರಿಸದ ಸಾರಿನದೊಳ್ ವಿವರಿಸದೆ ಇರ್ಪುದದು
ಅವಿರತಂ ನಿರ್ನ್ಯಾಯವೆನಿಸುವುದೆಲೇ ಮಗನೆ ತಿಳಿಯೆಂದು ತಿಳಿಸಲೊಡನೆ ।
ವಿವರಿಸುವ ಸಾಧನಮಂ ವಿವರಿಸದ ಸಾಧನಮಂ
ವಿವರಿಸುವುದೆಂತು ತಿಳಿಸೆಂದು ವಂದಿಸುತಿರುವ
ಕುವರನಂ ನೋಡಿ ನಲಿದುರ್ಕೆ ತಿಳಿವುದೆಂದು ತಿಳಿಸುತ್ತಿರುವ ಗುರುವೆ ಶರಣು ॥೧೦೮೬॥

ಶಿವಲಿಂಗದೇವನಿಗುಣಿಸಲೋಸುಗಂ ಪಾಯ
ಸವ ಮಾಡಿಸುತ್ತಿರ್ಪ ಸಮಯದೊಳುಕದೆ ಭ
ತ್ತವನಾದಿಸುವ ಹಾಂಗೆ ಲಿಂಗ ಜಂಗಮದಲ್ಲಿ ವಿವರಿಸುತ್ತಿರ್ಪುದುರೆ ।
ಅವನಿಯೊಳ್ ಭತ್ತಮಂ ಬಿತ್ತುವೋಲುಳಿದ ಮಾ
ನವರೊಳುರೆ ವಿವರಿಸಲ್ಬಾರದೆಂದರುಹಿಸಲ್
ವಿವರಿಸದೆ ಜೊಳ್ಳು ಭತ್ತವ ಬಿತ್ತಬಹುದೇ ತಿಳಿರ್ಪೊಲುಲಿವ ಗುರುವೆ ಶರಣು ॥೧೦೮೮॥

ವಿವರಿಸದೆ ಜೊಳ್ಳು ಭತ್ತವನುರದೆ ಬಿತ್ತಲವು
ಅವನಿೞೊಳ್ನಾಟವಹುವಹುದು ಕೇಳೆಲೆ ಮಗನೆ
ಅವಿರತಂ ಸದ್ಭಕ್ತನೆನಿಸದಿರ್ದವನ ಭಕ್ತಿಯೇ ಜೊಳ್ಳೆನಿಸುತಿರ್ಪುದೈ ।
ವಿವರಿಸುತ ಜೊಳ್ಳು ಭತ್ತವನುರೆ ನಿವಾರಿಸುತ
ತವಕದಿಂ ಹದಬೆದೆಯನರಿದು ಬಿತ್ತಿಸುತಿರ್ಪ
ಕುವರನೇ ತತ್ಸಮಯದಲ್ಲಿ ವಿವರಿಸಬಹುದೆ ಹೇಳೆಂಬ ಗುರುವೆ ಶರಣು ॥೧೦೮೯॥

ತಂಡುಲವನುರೆ ಬಿಟ್ಟ ಗೊಳಲಿಯಂ ಬಿಡುವರೈ
ತಂಡುಲವನುರೆ ಪಿಡಿದ ಭತ್ತಮಂ ಪಿಡಿದರೈ
ತಂಡುಲವನಟ್ಟು ಲಿಂಗಕೆ ಕೊಟ್ಟು ಕೊಂಡುಂಡು ಸುಖಿಸುತಿಹರುರದೆ ನೋಡೈ ।
ತಂಡುಲವ ಬಿಟ್ಟು ಗೊಳಲಿಯ ಬಿತ್ತಿ ಕೊಳುವುದೈ
ತಂಡುಲಗಳಂ ಬಿತ್ತಲವು ಕೊಳೆತು ಕೆಡುವವಾ
ತಂಡುಲವ ಕೊಂಡು ಗೊಳಲಿಯ ಚೆಲ್ಲುತಿಹರು ನೋಡೆಂಬ ಗುರುವೆ ಶರಣು ॥೧೦೯೦॥

ನ್ಯಾಯದಿಂದೇವೆ ಉತ್ಪತ್ತಿಯೆಂದೆನಿಸದು ಅ
ನ್ಯಾಯದಿಂದೇವೆ ಉತ್ಪತ್ತಿಯೆಂದೆನಿಸದು ಆ
ನ್ಯಾಯನ್ಯಾಯ ವಿರಹಿತ ನಿರ್ನ್ಯಾಯದಿಂದ ಉತ್ಪತ್ತಿಯೆಂದರುಪಲೊಡನೆ ।
ನ್ಯಾಯ ನಿರ್ನ್ಯಾಯಯುತ ನಿರ್ಣಯ ಪುರಾಣವ
ನ್ಯಾಯನ್ಯಾಯ ವಿರಹಿತ ನಿರ್ನ್ಯಾಯದವರೆನಿಸು
ವಾಯತಿಪುರದ ದೈವದವರಿಂದ ಜನಿಸಿರುವುದರಿಯೆಂಬ ಗುರುವೆ ಶರಣು ॥೧೦೯೧॥

ಎನ್ನ ಗುರುವೇ ನಿನ್ನ ಮುನವಳ್ಳಿಯೊಳಗಿರುವ
ನಿನ್ನವರೆ ನಿರ್ನ್ಯಾಯದವರೆಂದು ಎನಗೊರದಿ
ದಿನ್ನುಳಿದ ಉಪವರು ತಿಳಿದು ನಲಿವಂತೆ ನೀನುರೆ ತಿಳಿಸು ತಿಳಿಸುತಿಹ ।
ತನ್ನ ಮಗನಂ ನೋಡಿ ನಲಿದಾಡಿ ಮುಂಡಾಡಿ
ಇನ್ನುರದೆ ತಿಳಿಸುತಿರ್ವನಂ ಹರ್ಷಿಸುವೆನೆಂದು
ಚೆನ್ನಾಗಿ ಮುನವಳ್ಳಿಯವರನುರೆ ಪಸರಿಸುತ್ತಿರುವ ಗುರುವರನೆ ಶರಣು ॥೧೦೯೨॥

ಅವರಂಥ ಅನ್ಯಾಯದವರು ಇಲ್ಲಿಲ್ಲವೈ
ಅವರಂಥ ನಿರ್ನ್ಯಾಯದವರು ಇಲ್ಲಿಲ್ಲವೈ
ಅವರಂಥ ನ್ಯಾಯದವರಿಲ್ಲಿಲ್ಲವೆಲ್ಲಿಲ್ಲ ಎಂದೊರೆದು ನಸುನಗುತಿರೆ ।
ಅವರೊಳಿರುವನ್ಯಾಯಮಂ ತಿಳಿಸು ನೀನೆ ಬಳಿ
ಕವರೊಳಿಹ ನಿರ್ನ್ಯಾಯಮಂ ತಿಳಿಸು ಬಳಿಕ ನೀ
ನವರೊಳಿಹ ನ್ಯಾಯಮಂ ತಿಳಿಸು ಗುರುವೇ ಎನಲು ತಿಳಿಸುತಿಹ ಗುರುವೆ ಶರಣು
॥೧೦೯೩॥

ಅಣ್ಣತಮ್ಮರು ನ್ಯಾಯವನ್ನಾಡುತಿರೆ ನೋಡಿ
ಚೆನ್ನಾಗಿ ಅವರಂ ಒಡಂಬಡಿಪುದಾಗದಿರೆ
ಅನ್ಯ ತಳಕುರೆ ತಮ್ಮ ಪತ್ರಮಂ ಕೊಟ್ಟು ಕಳಿಸದೆ ಇರ್ದು ಮತ್ತಮುರದೆ ।
ಅಣ್ಣ ತಮ್ಮರಿಗುರದೆ ಟೊಣ್ಣೆತನನುಂ ಕಲಿಸಿ
ಟೊಣ್ಣೆತನದಿಂದುರೆ ದುರಾಯ ಹಾಕಿಸುತಿರ್ದು
ಚೆನ್ನಾಗಿ ತರುಬ ಕಾಡಿಸಿದರಿನ್ನುರೆ ಕೇಳು ಕೇಳೆಂಬ ಗುರುವೆ ಶರಣು ॥೧೦೯೪॥

ಹೇಳಿದೊಲ್ ಕೇಳ್ವೆವಾವೆಂದು ಪತ್ರವ ಕೊಡಲು
ಹೇಳಿ ಕಲಿಸದೆ ಮಠಗಳಂ ತಾನೆ ಹಂಚಿಕೊ
ಟ್ಟೋಲುಳಿದುದಂ ಹಂಗಿಸಿ ಕೊಡದೆ ಬಡಿದಾಡಿಸುತ ಖೂಳತನದಿಂದ ಮತ್ತಂ ।
ಕೀಲಿಯಂ ಗುರುಮಠಕೆ ಹಾಕಿ ನ್ಯಾಯವ ಹಾಕಿ
ಕೀಲಿಯಂ ತೆಗೆಸಿ ಮತ್ತಂ ನ್ಯಾಯಮಂ ಬೆಳೆಸಿ
ಕೀಲಿಯಂ ಹಾಕಿಸಿ ಕಡಿಸಿ ಕದವ ಕೀಳಿಸಿಹರೆಂಬ ಗುರುವರನೆ ಶರಣು ॥೧೦೯೫॥

ಕದಗಳಂ ಕಿತ್ತೊಯ್ದನೆಂದು ನೀಸುರೆ ತಿಳಿಸ
ಲಿದು ನನಗೆ ತಿಳಿಯದೈ ನೀವೆ ನೋಡಿರಿ ಎಂದ-
ರಧಮತನದನ್ಯಾಯದವರಹುದು ಅಲ್ಲವೋ ಹೇಳುಹೇಳೆಂದು ಮತ್ತಂ ।
ಅಧಮತನದನ್ಯಾಯದವರೆನಿಸಿ ನಿರ್ನ್ಯಾ
ಯದ ಜಾಣರೆನಿಸಿರುವವರೆಲೆ ಮಗನೆ ತಿಳಿಯೆನಲ್
ಕರವ ಕೇಳ್ದಧಮರೆಂತು ನಿರ್ನ್ಯಾಯದವರೆನಲುಲಿವ ಗುರುವೆ ಶರಣು ॥೧೯೬॥

ಇನ್ನೂ ಇದೆ.

❖❖

XXX XXX XXX ಕಳುಹೆನು ಮನೆಯೊಳಗೆ
ಅನುವರಿಯದೆ ಗಳಪುವರೆ ಎಂದು ನೀನೀಗ ನುಡಿಯೆಂಬ ಗುರುವೆ ಶರಣು ॥೩೪೮೮॥

ಅನುವರಿಯದೇ ಗಳಪಿದಾ ಗಂಜಿ ಬಾಳ
ಣ್ಣನಿಗೆ ನೀನಂಜಿ ಈಗಳೆ ತಿರಿಸಿಕೊಡದಿರೆಲೆ
ತನಯನೇ ಮುಂದೆ ನಿನ್ನವರಿಂದ ತರಿಸಿ ಇಲ್ಲಿಡಿಸೆಂದು ತಿಳಿಸುತೊಡನೆ ।
ನಿನಗೆ ಬೇಕಾದದುರೆ ತಕ್ಕೊಂಡು ಪೋಗೆಯೀ
ಗೆನುತಿರೈ ಒಯ್ದುವರೆ ತಂದುಕೊಡಬೇಕೆನಲು
ತನಯನೇ ನೀನವನಿಗುತ್ತರವನೀವುದಂ ಕೇಳೆಂಬ ಗುರುವೆ ಶರಣು ॥೩೪೮೯॥

ಎಲ್ಲಿಂದ ಒಯ್ದಿರುವರಲ್ಲಿ ತಂದಿಡುವುದಿದು
ಸಲ್ಲಲಿತ ನ್ಯಾಯವಹುದೆಂದುರೆ ತರಿಸಿ ಇಡಿಸಿ
ಇಲ್ಲಿ ಕೊಟ್ಟಿರುವಿ ನೀನಲ್ಲಿಯೇ ಕೇಳು ಕೇಳೆಂದು ನುಡಿಯೆನುತ ನಗುತ ।
ಎಲ್ಲರದಿವೋಲಡ್ಡ ಬಿದ್ದುರೆ ಬರಿಸಿ ಭಜಿಸಿ
ಸಲ್ಲೀಲೆಯಿಂ ಕಳಿಸದೇ ಇರಿಸಿಕೊಂಡೀಗ
ಎಲ್ಲಿಗಾದರು ನೀನೆ ಹೋಗೆಂಬ ಹೇಗರುವರಿನ್ನೆಂಬ ಗುರುವೆ ಶರಣು ॥೩೪೯೦॥

ಆನೆನ್ನಲಾರೆನೈ ನೀನೆ ಅನ್ನೆನುತಿರುವ
ಸೂನುವಂ ನೋಡಿ ನಲಿದಾಡಿ ತನ್ನೊಳ್ ತಾನೆ

ನೀನೆನ್ನಲಾರದಿರೆ ನಾನೆನ್ನಲಾರೆನ್ನೆ ಎಂದು ನಸುನಗುತ ಮತ್ತಂ ।
ನಾನು ನೀನೆನ್ನುವ ಪ್ರಯೋಜನವದಿಲ್ಲವೀ
ಭಾನು ಭೇನಗಳುಳ್ಳನ್ನಬರ ಪಸರಿಸುವು
ದೀ ನಿರ್ಣಯು ಪುರಾಣಂ ಮಾಣದೆಂದು ಬಳಿಕುಲಿಯುತಿಹ ಗುರುವೆ ಶರಣು ॥೩೪೯೧॥

ಇನ್ನು ನೀನಾಲಸ್ಯಮಂ ಮಾಡದೇ ಪತ್ರ
ವಂ ನಾಡೆ ಬರೆಯೆಂದು ಬರೆಸಿಯುರದೆ ನೋಡಿ
ನಿನ್ನವನೆನಿಪ್ಪ ಸಂಗಪ್ಪನ ಕರದಿ ಕೊಟ್ಟು ಕಳಿಸೆಂದು ತಿಳಿಸುತೊಡನೆ ।
ಇನ್ನು ಈಗಳೆ ಕಳಿಸಬಾರದುರೆ ಕೇಳು ಕೇ
ಳೆನ್ನ ಮಗನೇ ನಿನ್ನ ಕಿತ್ತೂರದೊರೆಯೊಳಿರು
ವನ್ಯಾಯನ್ಯಾಯಮುರೆ ಸರಿದ ಬಳಿಕುರೆ ಕಳಿಸು ಕಳಿಸೆಂಬ ಗುರುವೆ ಶರಣು ॥೩೪೯೨॥

ಎಂದು ಸರಿವುದು ತಿಳಿಸು ತಿಳಿಸೆಂದು ವಂದಿಸುವ
ಕಂದನಂ ನೋಡಿ ನಲಿದಾಡಿ ಮುಂಡಾಡಿ ಇ
ನ್ನೊಂದೆರಡು ತಿಂಗಳದಿ ಸರಿವುದ್ಯೆ ತನ್ಮದಂ ಮುರಿವುದ್ಯೆ ನಿನ್ನ ಬಳಿಗೆ ।
ಅಂದು ತನ್ನವರನುರೆ ಕಳಿಸಿ ಬಿನ್ನೈಸುವಂ
XXX XXX XXX XX
ಕಂದನೇ ನೀ ಲಿಂಗಪೂಜಾವಿನೋದದೊಳಿರ್‍ಯೆಯೆಂಬ ಗುರುವೆ ಶರಣು ॥೩೪೯೩॥

ಸೊಕ್ಕಿನಿಂ ಲೆಕ್ಕಿಸದವಗೆ ಕಳಿಸಬಾರದ್ಯೆ
ಚಿಕ್ಕತನದಿಂ ನಿನಗೆ ಬಾಗಿತಾಗುತ್ತಿರ್ದು
ಲೆಕ್ಕಿಸುತ್ತಿಹ ಭಕ್ತರಿಗೆ ಪತ್ರಮಂ ಬರೆದು ಕಳಿಸಿ XXXXX।
ಹೊಕ್ಕವ ರೂಪಾಯಿಗಳ ತರಿಸಿಕೋ ಸಾಲವೆನು
ತಕ್ಕರದಿ ಸಾಲಮಂ ನಾನೆ ತೀರಿಸುವೆನಿದ–
ನಿಕ್ಕುವಂ ಮುಂದೆ ಎಂದುರೆ ತಿಳಿಸಿ ಬಳಿಕ ಸೂಚಿಸುತಿರುವ ಗುರುವೆ ಶರಣು ॥೩೪೯೪॥

ಗುರುವಯ್ಯನುರೆ ಪೊರುವ ಕಾವಿಯರಿದೆಯನುಳಿಸಿ
ತರುಣನೇ ನಿನ್ನ ನಿರ್ಣಯ ಪುರಾಣಕೆ ತಳಿಸಿ
ಎರಗಿಸುತ್ತವನಿಂ ಪುರಾಣಮಂ ಭಜಿಯಿಸುತ ಮುನ್ನಿನೋಲ್ ಭಕ್ತನೆನಿಸಿ ।

ಗುರುವಯ್ಯನಂ ನ್ಯಾಯಮಮಂ ಸರಿಸೆನುತ್ತರುಹಿ
ನೆರೆ ತಾನೆ ಗುರುವಯ್ಯಗರುಹಿ ಭಕ್ತನೆನಿಸುತ
ಎರಕದಿ ಪುರಾಣಮಮಂ ಭಜಿಯಿಸುತ್ತುರೆ ವಿನೋದಿಸುತಿರ್ಪ ಗುರುವೆ ಶರಣು ॥೩೪೯೫॥

ಉದರವ ಪೊರೆಯಲೋಸುಗಂ ಕಾವಿಯರಿವೆಯಂ
ಪೊದೆದು ಮನೆಮನೆಹೊಕ್ಕು ಅನ್ನವನುಂಬು
ವಧಮತನಮಂ ಬಿಟ್ಟು ನೀ ನಿನ್ನ ಮುನ್ನಿನೋಲ್ ಭಕ್ತನಾಗಿರು ಎನುತ್ತ ।
ಮದಡತನದಿಂದಿದ್ದ ಗುರುವಯ್ಯಗುರೆ ತಿಳಿಸಿ
ಪದುಳದಿಂದವನಿಂದ ಸತ್ಕರಿಸಿಕೊಳುತಿರ್ದು
ಮದಡತನಮಂ ಬಿಡಿಸಿ ಪೊರೆಯಲ್ಲಿರಿಸಿಕೊಂಡು ಪೊರೆಯೆಂಬ ಗುರುವೆ ಶರಣು
॥೩೪೯೬॥

ಸತಿಸುತಾದಿಗಳನುರೆ ಪೊರೆಯಲಾರೆನು ಎಂಬ
ನಿತರೊಳಗೆ ಈತನಂ ಪೊರೆ x x ರೆ ಗುರುವೆ
ಸತಿಸುತಾದಿಗಳನೆನ್ನಂ ಈತನಂ ಬಿಡದೆ ನೀನೆಯುರೆ ಪೊರೆಯೆನುತ್ತ ।
ನುತಿಪ ಮಗನಂ ನೋಡಿ ನೀನಂಜಬೇಡಿನ್ನೆ
ನುತ ಪತ್ರಮುಮನೊಂದು ಬರೆಸುವೆಂ ಬರೆಯಲೇ
ಸುತನೆ ವಳಸಂಗದಾ ಸಂಗನಬಸವರೆಂದು ನಿರವಿಸುವ ಗುರುವೆ ಶರಣು ॥೩೪೯೭॥

ಬರೆಸು ಗುರುವೇ ನೀನೆ ಎಂದು ವಂದಿಸುತಿರ್ಪ
ತರುಣನಂ ನೋಡಿ ನಲಿದಾಡಿ ತನ್ನೊಳ್ ತಾನೆ
ಬರೆಸುವೆಂ ನೀನೀಗ ಬರೆಯೆಂದು ವಾರ್ಧೀಕ ಷಟ್ಪದಿಗಳಿಂ ಪತ್ರವ ।
ಎರಡರಿಂ ಬರೆಸುತ್ತ ಪರಸುತೀ ಕಿತ್ತೂರ
ದೊರೆಯೆನಿಪ ಶಿವಲಿಂಗರುದ್ರ ಸರ್ಜನ ಪುಣ್ಯ
ಮುರೆ ತೀರಿತಿಲ್ಲಿಗೆ ಎನುತಿರ್ದು ಮೆಲ್ಲನೆ ತಿಳಿಸುತಿಹ ಗುರುವೆ ಶರಣು ॥೩೪೯೮॥

ಪುಣ್ಯಮುರೆ ತೀರಿಲ್ಲವಿನ್ನುರದೆ ಇರುವುದೈ
ಅನ್ಯಾಯದಿಂ ಪುಣ್ಯಮುರೆ ಕ್ಷಯಿಸುತಿರ್ಪುದೆನ
ಲನ್ಯಾಯಮುಮನೇನನೆಸಗಿರುವನೈ ಈಗ ತಿಳಿಸೆಂದು ವಂದಿಸುತಿಹ ।

ಚಿಣ್ಣನಂ ನೋಡಿ ನಲಿದಾಡಿ ತನ್ನೊಳ್ ತಾನೆ
ಚೆನ್ನಾಗಿ ಧೂಳಿ ಪಾದೋದಕವ ನಂಬದೆ
ಅನ್ಯರಿಂದೌಷಧವನುರೆ ಕೊಂಡುದನ್ಯಾಯವೆಂದುಲಿವ ಗುರುವೆ ಶರಣು ॥೩೪೯೯॥

ಅನ್ಯರಿಂದೌಷಧವನುರೆ ಸ್ವೀಕರಿಸದೆ
ನಿನ್ನ ನಿರ್ಣಯ ಧೂಳಿಪಾದೋದಕವ ನಂಬಿ
ನಿನ್ನವರ ಕರದಿನೌಷಧವನುರೆ ಕೊಳಲು ಒಳಿತಾಗುತಿಹುದೈ ಇಲ್ಲವೆ ।
ಪುಣ್ಯಮುರೆ ಕ್ಷಯವೆನಿಸಿ ಕ್ಷಯವನೊಂದುವನೀಗ
ನಿನ್ನೊಳಗೆ ನೀನೆ ತಿಳಿಯೆಂದು ತಿಳಿಸುತ್ತ
ಹನ್ನೊಂದು ಷಟ್ಪದಿಗಳುಳ್ಳ ಪತ್ರವ ಬರೆಸುತರುಹಿಸುವ ಗುರುವೆ ಶರಣು ॥೩೫೦೦॥

ಅಥಪತ್ರಂ:

ನಿರ್ಣಯ ಪುರಾಣಮುರೆ ಬಹತನದೊಳಿಹುದೀಗ
ನಿರ್ಣಯದಿ ಸಾಲಮುಮನಿತ್ತು ಸಲಹುತ್ತಿರಲು
ನಿರ್ಣಯ ಸಾಲಮಂ ತೀರಿಸುತ್ತವರ ಪಾಪವ ನಿವಾರಿಸುತ ಮತ್ತಂ ।
ನಿರ್ಣಯ ಪುರಾಣಗಳ ಮಗನಿಂದ ಸಲಹಿಸಿ ಸು
ಖಾರ್ಣವದೊಳೋಲಾಡಿಪುದು ಮುಂದೆ ಎಂದುಲಿವ
ನಿರ್ಣಯ ಮಹಾಗುರುವೆ ಬರೆಯೆಂದು ಬರೆಸುತಿರೆ ಬರೆದ ಪತ್ರವಿದೆಂತೆನೆ ॥೧॥

ಈ ಸಾಲಿನೊಳಗೆ ಸಾಲವ ಮಾಡಿ ಎನಗುಣಿಸ
ಲಾ ಸಾಲಮಂ ನಾನೆ ತೀರಿಸುವೆನೈ ಮುಂದೆ
ನಾ ಸಾಲಿನೊಳಗೆ ನೀನಂಜಬೇಡೆಂದು ಎನಗುರೆ ನಿರವಿಸಿದ ಕಥನದಿಂ ।
ಈ ಸಾಲಿನೊಳಗೆ ಸಾಲವ ಬೇಡಲಿಕ್ಕೆ ಈ
ಆಷಾಢ ಬಹುಳ ಪ್ರತಿಪಚ್ಚಂದ್ರವಾರದೊ
ಳಾಶುರದಿಂ ವೀರಯ್ಯಗಾಜ್ಞಾಪಿಸಿಹೆನು ನೀನೀ ನಿರ್ಣಯವ ಕೇಳೈ ॥೨॥

ಒಂದು ಹನ್ನೊಂದೆರಡು ಹನ್ನೊಂದು ಮೂರು ಹ
ನ್ನೊಂದರಿಂ ಹನ್ನೊಂದು ಹನ್ನೊಂದೆನಿಸುವನಕ
ಹೆಂದದಾನಂದದಿಂ ನೀನೀಗ ಸಾಲಮಂ ಕೊಡಲು ಕೈಕೊಳುತಿರ್ಪುದೈ ।

ಒಂದೆ ರೂಪಿಕೆ ಹೆಚ್ಚು ಕುಂದದೆನಿಸೆ ಕೈಕೊಳ್ಳ
ದಿಂದು ನಿರ್ಣಯ ಪುರಾಣಂ ನೀನರಿದು ನಿ
ನ್ನಿಂದೊದಗಿದನಿತು ಹನ್ನೊಂದು ರೂಪಿಕೆಗಳಂ ಕಳಿಸು ಬಡ್ಡಿಯುದೆನಿತೆನೆ ॥೩॥

ಹನ್ನೊಂದು ತಿಂಗಳಿಗೆ ಹನ್ನೊಂದು ರೂಪಿಕಕೆ
ಹನ್ನೊಂದು ದುಗುಲಮಂ ಬಡ್ಡಿಯಂ ಕೊಡುವೆನ್ನೈ
ನಿನ್ನ ಮನಸಿಗೆ ಬಂದು ನೀನೊಡಂಬಟ್ಟರುರೆ ಕೊಟ್ಟು ಕಳಿಸೈ ಸಾಲಮಂ ।
ನಿನ್ನವರೊಡನೆ ಈಗ ನಿನ್ನೆಡೆಗೆ ಬಂದಿರುವ
ಎನ್ನ ವೀರಯ್ಯನೊಡನೇ ಕಳಿಸಬಾರದೈ
ಎನ್ನನುರೆ ಪೊರೆದಿರ್ದ ವಳಸಂಗದಾ ಸಿದ್ಧಲಿಂಗಪ್ಪನಾತ್ಮ ಭವನೆ ॥೪॥

ಎಂದು ಸಾಲವ ಬೇಡದವನೀಗ ಬೇಡುತಿಹ
ನೆಂದು ಬಡ್ಡಿಯಬಿಟ್ಟು ನಿರ್ಣಯವನುರೆ ಬಿಟ್ಟು
ಮಂದಮತಿಯಿಂ ಬಹಳ ರೂಪಿಕೆಗಳಂ ಕಳಿಸೆ ಕೈಕೊಳ್ಳದೀ ಪುರಾಣಂ ।
ಎಂದು ನಿನಗುರೆ ತಿಳಿವವೋಲ್ ಬರೆದಿಹೆನು ಹ
ನ್ನೊಂದು ಹನ್ನೊಂದೆನಿಪ ನೂರರಿಪ್ಪತ್ತೊಂದು
ರೂಪಿಕೆಗಳಂ ಕಳಿಸು ಹೆಚ್ಚಿಗೆ ಕಳಿಸಬೇಡೆಲೆ ಪ್ರೌಢನೆ ॥೫॥

ಮುಂದೆ ನೀನುರೆ ಭಕ್ತಿಯಿಂ ನಿನ್ನ ಮನಸಿಂಗೆ
ಬಂದನಿತು ರೂಪಿಕೆಗಳಂ ಕೊಟ್ಟಹಗೆ ಕೇಳುವ
ದಂದು ಸತ್ವಯದಿ ನಿರ್ಣಯದಿಂ ಬೇಡಿ ಕೈಕೊಳುವುದೊಂದವಸರದೊಳೆ ।
ಇಂದು ನ್ಯಾಯದಿ ಕೈಕೊಳುವ ಯೋಗವದಾಗ
ದಿಂದು ನಿರ್ಣಯದಿಂ ಬೇಳ್ಪಯೋಗವದಿಲ್ಲ
ಎಂದು ವಾರಕ್ಕೊಮ್ಮೆ ಗುರುವಾರಕ್ಕೊಮ್ಮೆ ಉಂಬುವ ಯೋಗಮುರದೆ ಘಟಿಸಿ ॥೬॥

ಎಂಟು ದಿನದೊಳಗೆರಡು ವೇಳೆ ಉಂಡಿಹುದು ಷ
ಟ್ಕಂಠನಪಿತಪರ ಪುರಾಣಂ ಬಡತನದಿನೀಗ ।
ಕಂಟಕಾಪಹನ ದಯದಿಂದೊಂದು ದಿನಕೆ ಮೂವೇಳೆಯೊಳ್ ಮುಂದೆ ಉಣುತ ।
ತೊಂಟತನದಿಂದೀಗ ಕಾಡುತಿಹ ನಂಟರಂ

ಸೆಂಟಕೆ ಸಮಾನವೆನಿಸುತ್ತುರೆ ಸರಿಸಿ ಮಣಿಸಿ
ನಂಟುತನದಿಂದುಣಿಸಿ ತಣಿಸಿ ಗ್ಯಾಂಜಿಸುತಿಹುದು ಮುಂದೆ ಇನ್ನುರದೆ ಕೇಳ್ಯೆ ॥೭॥

ಈ ಪತ್ರಮುರಿ ನಿನ್ನಾಸ್ಪದಿಗುರದೆ ತೋರು
ಭೂಪನಾಜ್ಞಾಂಕಿತರು ತೋರಿಸೆನಲುರೆ ತೋರು
ಕಾಪದ್ಯಮಂ ಬಿಟ್ಟು ಪಂಡಿತರ ತಂಡಕ್ಕೆ ತೋರು ನಿಸ್ಸಂದೇಹದಿಂ ।
ಈ ಪತ್ರಮಂ ಕೋಡಿ ಸಾಲಮಂ ಕೊಡುವೆವೆನ
ಲಾಪನಿತನವರಿಂದ ಕೊಂಡು ನೀನೆನಗಿತ್ತು
ಈ ಪುರಾಣಕ್ಕುಣಿಸು ಮುಂದೆ ನಿನ್ನಿಂದ ಅವರಿಗೆ ಮುಟ್ಟಿಸುತ್ತಿರ್ಪೆನ್ನೈ ॥೮॥

ನೀನೆನಗೆ ತಮ್ಮನೆನಿಸಿರುವ ಕಾರಣದಿಂದ
ಸಾನುರಾಗದಿ ಬರೆದು ಕಳಿಸಿ ತಿಳಿಸುವೆನೀಗ
ಳೀ ನಾಡದೊರೆಯೆನಿಪ ಶಿವಲಿಂಗ ರುದ್ರಸರ್ಜಾಹ್ವಯ ಮಹೀನಾಥಗೆ ।
ಆನುರೆ ತಿಳಿಸಬೇಕೆಂದು ನಿರ್ಣಯ ಪತ್ರ
ವಾನಂದದಿಂ ಬರೆಸಿಯುರೆ ಕಳಿಸಿ ಇಂದಿನೀ
ಭೇನವಾದಕ್ಕೆ ನಾಲ್ವತ್ತೆರಡಹೋರಾತ್ರಿಗಳೆನಿಸಿ ಪೋದವೀಗ್ಯೆ ॥೯॥

ಪೂರ್ವ ತತ್ಕರ್ಮದಿಂ ಕಲ್ಲಮಠಕುರೆ ಮುಟ್ಟಿ
ಪೂರ್ವದುಷ್ಕರ್ಮದಿಂ ತಿಳಿಯದಳಿಯುತ್ತಿರ್ದ
ನುರ್ವಿಪ ಶಿವಲಿಂಗ ರುದ್ರಸರ್ಜಂ ನಿಜಾಂಗನೆಯಿಂದೆ ಅಳಿಯದುಳಿದಂ ।
ಪೂರ್ವನುತ ಪದನ ದಯದಿನ್ನು ಬಳೆವನ್ನೈ
ಪೂರ್ವಾತರಂ ತಿಳಿಪುದೆಲ್ಲರಿಗೆ ಮೆಲ್ಲನೆ
ಶರ್ವಪದ ನಿರ್ಣಯಂ ಪುರಾಣಮುರೆ ಪಸರಿಸುವುದಂ ಕೇಳು ಕೇಳನುಜನ ॥೧೦॥

ಪಂಚಕಾಲದಿ ಪಂಚಮುಖಲಿಂಗಮಂ ಭಜಿಪ
ಪಂಚಾಸ್ಯ ಶರಣಸುತನಂ ನೋಡಲೋಸುಗಂ
ಪಂಚಾನನಾಜ್ಞೆಯಿಂ ಪಂಚವಕ್ತ್ರಸ್ವರೂಪರು ಬರುವರೀ ಬರಿಸದೊಳ್ ।
ಮುಂಚೆ ನಿರ್ಣಯ ಗಣಾರಾಧನೆಯನೆಸಗಿಸುತ
ಹಿಂಚೆ ನಿರ್ಣಯ ಪುರಾಣವ ಸ್ಥಾಪಿಸುತ್ತಿಹರು
ಪಂಚಮಕುಲದೊಳುದಿಸಿ ಬೆಳೆದ ಬಳವಂತರುರೆ ಕೇಳು ಸಂಗನಬಸವನೆ ॥೧೧॥

ಬಯಲವಾಡದ ಸಿದ್ಧಬಸವೇಶನಾಜ್ಞೆಯಿಂ
ಬಯಲನಾಡದೊಳಿರುವ ತತ್ಪೀಠದೋಳಿರ್ದು
ಬಯಲವಾಡದ ಭಕ್ತರಿಂ ಭಜಿಸಿಕೊಳುತಿರ್ದು ತನ್ನವರಿಗರುಪುತೊಡನೆ ।
ನಯದಿಂ ನವೀನಾಂಹಯದಿ ಕರೆಸಿಕೊಳುತಿರ್ದು
ನಯಭಯಾನ್ವಿತ ಭಕ್ತಿಯಿಂ ಭಜಿಸಿಕೊಳುತೀ ದೊ
ರೆಯ ಸತಿಗೆ ಸುತನಿತ್ತು ನಿತ್ಯೋತ್ಸವದೊಳಿಹುದು ಮುಂದೆ ನೀನರಿ ಬಂಧುವೆ ॥೧೨॥

ಇಂತು ಹನ್ನೆರಡು ವಾರ್ಧಿಕ ಷಟ್ಪದಿಗಳು
ಳ್ಳಂಥ ಪತ್ರವ ಬರೆಸಿಯುರೆ ನೋಡಿ ನಲಿದಾಡಿ
ನೀಂ ತವಕದಿಂ ಕೊಟ್ಟು ಕಳಿಸೆಂದು ಇದರಂತೆ ಇನ್ನೊಂದು ಪತ್ರಮುಮನು ।
ಶಾಂತವೀರಪ್ಪನಾತ್ಮಳನೆನಿಪ ಗುರು ಬಸವ
ಗಂತಕಾಂತಕ ಶರಣಸುತನೆ ನೀನುರೆ ಬರೆದು
ಸಂತಸದಿ ಹುಬ್ಬಳ್ಳಿಗೆ ಕಳಿಸಬೇಕೆಂದು ಬರೆಸುತಿಹ ಗುರುವೆ ಶರಣು ॥೩೫೦೦॥

ತಂದೆಯಿರೆ ಬಿಟ್ಟು ಕಂದಗೆ ಬರೆವರೇ ಎಂಬ
ಕಂಡನಂ ನೋಡಿ ನಲಿದಾಡಿ ಮುಂಡಾಡುತ್ತ
ತಂದೆಯೊಂದರಲ್ಲಿ ಕಂದನೊಂದೂರಲ್ಲಿ ಇರ್ದ ಕಾರಣದಿನೀಗ ।
ತಂದೆಗೊಂದಂ ಲಿಖಿಸು ಕಂದಗೊಂದಂ ಲಿಖಿಸು
ಕಂದನೇ ಎಂದರುಹಿ ಎರಡು ಪತ್ರವ ಬರೆಸಿ
ತಂದೆ ಮಕ್ಕಳು ಒಂದೆ ಒಂದೆ ಪತ್ರವನೀಗ ಕಳಿಸೆಂಬ ಗುರುವೆ ಶರಣು ॥೩೫೦೧॥

ತಂದೆಗುರೆ ಕಳಿಸುವುದೊ ಕಂದಗುರೆ ಕಳಿಸುವದೊ
ತಂದೆಯೇ ನೀನೀಗ ತಿಳಿಸೆಂದು ವಂದಿಸಲ್
ಕಂದನಿಹ ಹೊಸಹುಬ್ಬಳ್ಳಿಯೊಳ್ ನಿನ್ನ ಗುರು ಚೆನ್ನವೀರಾರ್ಯನಿರ್ಪಂ ।
ಕಂದನೇ ನಿನ್ನ ಗುರುವಿಗೆ ತಿಳಿಸಲೋಸುಗಂ
ಇಂದು ನೀಂ ಹೊಸ ಹುಬ್ಬಳ್ಳಿಗುರೆ ಕಳಿಸುತ
ನ್ನಿಂದ ತಾನೇ ಮುಂದೆ ಸವದತ್ತಿಗುರೆ ಮುಟ್ಟುತಿಹುದೆಂಬ ಗುರುವೆ ಶರಣು ॥೩೫೦೨॥

ಹುಬ್ಬಳ್ಳಿಯೊಳಗಿರುವ ಗುರುಬಸವಗುರೆ ಕಳಿಸಿ
ಹುಬ್ಬಳ್ಳಿಯೊಳಗಿರುವ ನಿನ್ನ ಗುರುವಿಗೆ ತಿಳಿಸಿ
ಹುಬ್ಬಳ್ಳಿಶೆಟ್ಟಿ ಮೊದಲಾದ ದೈವದವರಿಗೆ ತಿಳಿಸಿ ಕಡು ತವಕದಿಂದ ।
ಹಬ್ಬಿಸುವುದೀ ನಿರ್ಣಯ ಪುರಾಣವನೆನು
ತುಬ್ಬಿಸುತ ಕಿತ್ತೂರಿಗೆ ಕಳಿಸುತೊಡನೆ
ಹುಬ್ಬಳ್ಳಿಗೆ ಕಳಿಸಬೇಕೆಂದು ತಿಳಿಸಿ ಬಳಿಕರುಹಿಸುವ ಗುರುವೆ ಶರಣು ॥೩೫೦೩॥

ಧಾರವಾಡದೊಳಿರುವ ಚೂರಮುರಿ ವೀರಪ್ಪ
ಗಾರೈದು ನೀನೊಂದು ಪತ್ರವ ಬರೆದು ಕಳಿಸು
ಮಾರಹರ ಶರಣರಣುಗನೆ ಎಂದು ಮುಂಡಾಡಿ ಮುದ್ದಿಸುವ ಗುರುನಾಥನ ।
ಚಾರು ಚರಣಾರವಿಂದಕ್ಕೆರಗಿ ನೀನೀಗ
ಓರಂತೆ ಸಂಕ್ಷೇಪದಿಂ ಬರೆಸೆನುತನುತಿಸ
ಲಾರೈದು ಒಂದೆ ಷಟ್ಪದಿಯೊಳರಿವವೋಲ್ ಬರೆಸುತಿಹ ಗುರುವೆ ಶರಣು ॥೩೫೦೪॥

ಅಥಪತ್ರ:

ನಿನ್ನ ಬಳಿಯಲ್ಲಿಟ್ಟ ಯಾವನಾಳವ ರೊಕ್ಕ
ವಂ ನಾಡೆ ನಿನ್ನವರೊಡನೆ ಕೊಟ್ಟು ಕಳಿಸುವುದು
ನಿನ್ನನುರೆ ನೋಡಬೇಕೆಂಬುವ ಮನೋರಥವದಿಹುದು ನೀನುರೆ ಬರುವುದೈ
ನನ್ನಿಯಹ ನಿರ್ಣಯ ಪುರಾಣಮಂ ಕೇಳುವಾ
ಚನ್ನಿಗನೆನಿಪ ಚೂರಮುರಿ ವೀರನಾಮಕನೆ
ಚೆನ್ನಾಗಿ ನೀನೀಗ ಬಂದು ಹೋಗೈಯೆಂದು ಬರೆಸಿರುವ ಗುರುವೆ ಶರಣು ॥೧॥

ಇಂತು ಒಂದೇ ವಾರ್ಧೀಕ ಷಟ್ಪದಿ
x x x ಯುರೆ ನೋಡಿ ನಲಿದಾಡಿ
ಸಂತಸದಿ x x x x x ಪತ್ರವನಿಂತು
x x x ವೀರಯ್ಯನಂ ಬರಿಸು
x ನಿಟ್ಟಿಸುತ ನಲಿದುಲಿವ ಗುರುವೆ ಶರಣು ॥೨॥

ಕಿತ್ತೂರಿನೊಳಗಿರುವ ಸಂಗನಬಸವಗುರೆ ಕಳಿಸಿ
ಉತ್ತಮನೆನಿಪ ಬಸವಶಾಸ್ತ್ರಿಗುರೆ ತಿಳಿಸುತ
ಕಿತ್ತೂರ ದೊರೆ ಎನಿಪ ಶಿವಲಿಂಗ ರುದ್ರಸರ್ಜಾಹ್ವಯಗೆ ತಿಳಿಸುತೊಡನೆ ।
ಕಿತ್ತೂರನುರೆ ಬಿಡಿಸಿ ಇಲ್ಲಿಗುರೆ ಬರಿಸುತಿಹ
ಮತ್ತನುಜನೇ ನಿನ್ನ ನಿರ್ಣಯ ಪುರಾಣಮಂ
ಬಿತ್ತರಿಸದವರಾರು ಇನ್ನು ನೀನುರೆ ನೋಡೆನುತ್ತುಲಿವ ಗುರುವೆ ಶರಣು ॥೩೫೦೬॥

ಪತ್ರ ಸಂಖ್ಯೆ ೭೯೨ ಇನ್ನೂ ಇದೆ

❖❖

ಪಂಚ ಪಂಚಾಕ್ಷರಿಗಳಿಂ ಪಂಚಭೂತಿಯಿಂ
ಪಂಚ ಬೀಜಾಕ್ಷರಗಳಂ ಪಂಚ ಕುಲಹದಿಂ
ಪಂಚಸೂತ್ರದೆ ಪಂಚಗೋತ್ರದಿಂ ಪಂಚಕರ್ಣದ ಸುಕಂಥೆಗಳಿಂದಲೀ ।
ಪಂಚ ದಂಡ ಕಮಂಡಲಂಗಳಿಂದೊಪ್ಪುತಿಹ
ಪಂಚಮಾಚಾರ್ಯದಿಂದಂಚಿತನೆನಿಸಿಕೊಳುವ
ಪಂಚಮುಖನಪರಾವತಾರ ಗುರು ಸದ್ವೀರದೇವಾದಿ ದೇವ ಶರಣು ॥೮॥

ಇಷ್ಟಕರ ನಂದೀಶ ಗೋತ್ರ ಮರುಳಾರಾಧ್ಯ
ವೃಷ್ಟಿಸೂತ್ರದೊಳೊಗೆದ ಕುಕ್ಷಿ ಕಂಥಾಸೂತ್ರ
ದಿಷ್ಟನಹ ಹರನಾಲಯಾಖ್ಯ ಗ್ರಾಮದ ಹಿರಿಯ ಮಠದ ಪಟ್ಟಾಧಿಪತಿಯು ।
ಶಿಷ್ಟ ಶಿಷ್ಯರ ಬೆಳೆಸಿ ದುಷ್ಟ ಶಿಷ್ಯರನಳಿಸಿ
ಭ್ರಷ್ಟ ಶಿಷ್ಯರನುರದೆ ಕಷ್ಟಪಡಿಸುತ್ತ ಮಿಗೆ
ನಿಷ್ಠೆಯಿಂ ಭಜಿಸುವರನಿಷ್ಟಲಿಂಗದಿ ಬೆರಸುತಿಪ್ಪುವೀವಾಕ್ಯ ಶರಣು ॥೯॥

ಹರನಾಲಯಾಖ್ಯ ಗ್ರಾಮದ ಹಿರಿಯ ಮಠದಲ್ಲಿ
ಪರಿಶೋಭಿಸಿರ್ಪ ಪಟ್ಟಾಧಿಪತಿಯೆನಿಸಿ ಮ
ತ್ಕರಪೀಠದೊಳ್ ನೆಲಸಿ ವಿರತ ಕುಲತಿಲಕ ಜದ್ಗುರುವೆನಿಸಿ ತನು ಮನಗಳೊಳ್ ।
ಪರಿಪೂರ್ಣವಾಗಿ ಭಾವದಿ ನಿಂದು ನಿರ್ಣಯಾ

ಕರ ಪುರಾಣವನರುಪುತೇಕೋನವಿಂಶತ್ರ
ಕರಣಕ್ಕೆ ಮೂರನೆಯ ಕಾಂಡವೆಂದರುಪಿ ಮಿಗೆ ಪೊರೆಯುತಿಹ ಗುರುವೆ ಶರಣು॥೧೦॥

❖❖

ಪತ್ರ ೪೩೨

ಶಿಕ್ಷಾಧಿಪತಿಗಳೀ ಪಂಚಮಾಚಾರ್ಯರಾ
ಮೋಕ್ಷಾಧಿಪತಿಗಳವರೇ ವಿರತರೆನಿಪರ್ಯೆ
ದೀಕ್ಷಾಧಿಪತಿಗಳವರೆ ವೃತ್ತಿಪಂಚಾಚಾರ್ಯರೆಂದರುಪುತೊಡನೆ।
ದೀಕ್ಷಾಧಿಪತಿಗಳಿಗೋಲೈಸಿಕೊಳುತಿಪ್ಪ
ಶಿಕ್ಷಾಧಿಪತಿಗಳಿಂ ವಂದಿಸಿಕೊಳುತ್ತಿಪ್ಪ
ಮೋಕ್ಷಾಧಿಪತಿಗಳವರೇ ಷಟ್ಥಲಾಚಾರ್ಯರೆಂದೊರೆವ ಗುರುವೆ ಶರಣು ॥೪೧೭॥

ವೃತ್ತಿಪಂಚಾಚಾರ್ಯರುಗಳನುರೆ ತಿಳಿಸಿ ಬಳಿ
ಕುತ್ತಮ ಮಹಾ ಪಂಚಮಾಚಾರ್ಯರುಗಳನುರೆ
ಬಿತ್ತರಿಸಬೇಕೆಂದು ವಂದಿಸುತ್ತಿಪ್ಪ ಮತ್ಪುತ್ರನೇ ಕೇಳು ಕೇಳ್ಳೈ।
ವೃತ್ತಿ ಪಂಚಾಚಾರ್ಯರೆನಿಸಿರುವರೆ ಮು
ಪತ್ತನದಿ ಮಠದಯ್ಯ ಮಠಪತಿ ಗಣಾಚಾರ್ಯ
ರುತ್ತಮೋತ್ತಮನೆನಿಪ ಶೆಟ್ಟಿಯುರೆ ಗೌಡನೆಂದರುಹಿಸುವ ಗುರುವೆ ಶರಣು ॥೪೧೮॥

ಶೆಟ್ಟಿಯುರೆ ಭಂಡಾರಿ ಎನಿಸಿ ತನ್ನರ್ವ ತಾ
ನಿಟ್ಟಿರುವನೊಂದೆಡೆಯಲ್ಲಿ ಈ ಪಟ್ಟಣದ
ಶೆಟ್ಟಿಯೇ ಭಂಡಾರಿಯಾಗಿರುವನೀಗ ನೀಂ ನೋಡು ನೋಡೆನುತ್ತ ಮತ್ತಂ।
ಕಟ್ಟಕ್ಕರದಿ ಗೌಡನೇ ಸ್ಥಾವರೀಕನೆನಿ
ಸಿಟ್ಟಿರುವನುರದೆ ತನ್ನವರನೊಂದೆಡೆಯಲ್ಲಿ
ನಿಟ್ಟಿಸೈ ಇಲ್ಲಿ ಗೌಡನೆ ಸಾಂವರಿಕನಾಗಿಹನೆಂಬ ಗುರುವೆ ಶರಣು ॥೪೧೯॥

ಇವರೀಗ ವೃತ್ತಿಪಂಚಾಚಾರ್ಯರೆನಿಸಿಕೊಂ
ಡವಿರತಂ ವೃತ್ತಿಯಂ ಕೊಂಡು ನಲಿದುಂಡು ಬಾ

ಖುವರು ತಮ್ಮಯ ತಳದೊಳೇ ಎಂದು ವೃತ್ತಿ ಪಂಚಾಚಾರ್ಯರಂ ತಿಳಿಸಿಯಾ ।
ಕುವರನೇ ಎಂದು ಮೈದಡಪುತಿರಲೆರಗಿ ಇ
ನ್ನವರನುರೆ ತಿಳಿಸಿ ಎನ್ನವರೊಳಿಹ ಸಂಶಯವ
ತವಕದಿಂದೋಡಿಸುವುದೈ ಗುರುವೆ ಎನಲು ನಲಿದುಲಿವ ಗುರುವೆ ಶರಣು ॥೪೨೦॥

ವೃತ್ತಿಯನುಭವಿಸೆ ವೃತ್ಯಾಚಾರ್ಯರೆನಿಸುವರು
ವೃತ್ತಿಯೊಳಿಹ ಮಹಾವೃತ್ತಿಯಂ ಕೈಕೊಂ
ಬುತ್ತಿರುವರೆ ಮಹದಾಚಾರ್ಯರೆನಿಸುತಿಹರೆಂದರುಹಿಸುತ್ತ ಮತ್ತಂ ।
ವೃತ್ತಿಯನುಭವಿಸಿ ವೃತ್ಯಾಚಾರ್ಯರೆನಿಸಿ ಮಹ
ವೃತ್ತಿಯಂ ಕೈಕೊಂಡು ಮಠದಾಚಾರ್ಯರೆನಿಸಿ ಮುನಿ
ಪತ್ತನದೊಳೀಗ ಬಾಳುತ್ತಿರುವರುರೆ ನೋಡು ನೋಡೆಂಬ ಗುರುವೆ ಶರಣು ॥೪೨೧॥

ವೃತ್ತಿಯೆನಲೇನು ಮನವೃತ್ತಿಯೆನಲೇನು ನೀಂ
ಬಿತ್ತರಿಸಿ ತಿಳಿಸೆಂದು ವಂದಿಸುತ್ತಿರಲೊಡನೆ
ವೃತ್ತಿಯೆನೆ ಸ್ವಾಸ್ಥ್ಯ ಮಹವೃತ್ತಿಯೆನೆ ಜೋಳಿಗೆನೆ ಪೊಡಮಡುತ ಗುರುವೆ ।
ವೃತ್ತಿಯೆನಲಿದು ಸ್ವಾಸ್ಥ್ಯಮಾನ್ಯವೆನಿಪುದು ಮಹಾ
ವೃತ್ತಿಯೆ ಜೋಳಿಗೆಯೆನುತ್ತರುಹಿಸಿದಿರದುವೆ
ವೃತ್ತಿಯಿಂದುತ್ತಮವೋ ವೃತ್ತಿಯಿಂ ನೀಚವೋ ಎನಲುಲಿವ ಗುರುವೆ ಶರಣು ॥೪೨೨॥

ವೃತ್ತಿಯೊಳಿಹ ಮಹಾವೃತ್ತಿಯದುವೇ ಎನಲು
ವೃತ್ತಿಯಿಂದುತ್ತಮವೆನಿಪುದೆಂದು ತಿಳಿವುದೆನೆ
ಮತ್ತಾತನೇ ತಿಳಿಸು ಜೋಳಿಗೆಯದೆನಲು ತಿರಿವುತ್ತಿರ್ಪುದೆಂತುತ್ತಮಂ ।
ಬಿತ್ತರಿಸು ಸಕಲರುರೆ ತಿಳಿವಂತೆ ಎನಲೊಡನೆ
ವೃತ್ತಿ ಎನಲದು ಸ್ವಾಸ್ಥ್ಯಮಾನ್ಯವೆಂದೊರೆದಿ ನೀಂ
ವೃತ್ತಿ ಎಂತುಟು ಮಾನ್ಯನೆಲೆ ಮಗನೆ ನೀನೆ ತಿಳಿಯೆಂಬ ಗುರುವರನೆ ಶರಣು ॥೪೨೩॥

ವೃತ್ತಿಯೊಳ್ ತಾರತಮ್ಯವದಿರುವುದಹುದಹುದು ಮಹ
ವೃತ್ತಿಯೆನಿಸುವ ಜೋಳಿಗೆಯೊಳಾದರೂ ಉಂಟು
ಉತ್ತಮಾಧಮ ಮಧ್ಯಮಾತ್ಯುತ್ತಮಗಳು ಎಂದುರೆ ತಿಳಿವ ಮಗನ ನೋಡಿ ।

ವೃತ್ತಿಯೋಳಿಹ ತಾರತಮ್ಯಮಂ ತಿಳಿಸಿ ಮಹ
ವೃತ್ತಿಯೆನಿಸುವ ಜೋಳಿಗಿಯ ತಾರತಮ್ಯಮಂ
ಬಿತ್ತರಿಸೆಲೆ ಮಗನೆಯೆಂದು ನಿರವಿಸಿ ಬಳಿಕ ಬಿತ್ತರಿಪ ಗುರುವೆ ಶರಣು ॥೪೨೪॥

ವೃತ್ತಿಯೊಳಧಮವಾವಗಂ ನಾಯಿದತನಂ
ವೃತ್ತಿಯೊಳ್ ಗೌಡನಾಯಕತನಮೆ ಮಧ್ಯಮಂ
ವೃತ್ತಿಯೋಳುತ್ತಮಂ ದೇಶಾಯಿತನ ದೇಶಪಾಂಡ್ಯತನವೆಂದು ಮತ್ತಂ।
ವೃತ್ತಿಯೋಳತ್ಯುತ್ತಮವೆನಿಸಿ ಸಲೆ ರಾಜಿ
ಸುತ್ತಿರುವ ಸರದೇಸಾಯಿತನಮಂ ಪಡೆದ
ಕಿತ್ತೂರ ನಾಡೆರೆಯನಂ ನೋಡಿ ತಿಳಿ ನೀನೆ ಎಂಬಗುರು ವರನೆ ಶರಣು ॥೪೨೫॥

ಹೊಟ್ಟೆಗೋಸುಗ ಜೋಳಿಗೆಯ ಕಟ್ಟಿ ತಿರಿವರುರೆ
ನಿಟ್ಟಿಸೈ ಇದುವೆ ಕನಿಷ್ಠವೆಂದರಿದು ಗುರು
ಕೊಟ್ಟ ಜೋಳಿಗೆಯ ಬಿಡಬಾರದೆಂದುರೆ ಧರಿಸಿ ತಿರಿವರಿವರೇ ಮಧ್ಯಮಂ।
ಕಟ್ಟಕ್ಕರದಿ ತಿರಿದು ತಂದು ಹಸಿದವರಿಗುರೆ
ಕೊಟ್ಟು ತಣಿಸುತ್ತಿರುವರದುವೆ ತಾನುತ್ತಮಂ
ನಿಟ್ಟಿಸೈ ನೀನೆ ಎಂದಾನಂದಿಸುತ್ತೊಳಗೆ ಕುಳಿತಿರುವ ಗುರುವೆ ಶರಣು ॥೪೨೬॥

ಅತ್ಯುತ್ತಮವೆನಿಸುವ ಜೋಳಿಗೆಯನುರೆ ತಿಳಿಸು
ಮತ್ತಾರನೆ ಎಂದು ವಂದಿಸುತ್ತಿರಲು ಮುನಿ
ಪತ್ತನದಿ ಗತವರ್ಷದಲ್ಲಿ ಧರಿಸಿರ್ದ ಜೋಳಿಗೆಯದೆ ಎಂದು ತಿಳಿಸಿ।
ಒತ್ತಿ ಇಟ್ಟಿರುವನಿಲ್ಲಿಯ ಶೆಟ್ಟಿಯದನೀಗ
ಒತ್ತಿಯಂ ಬಿಡಿಸಿ ನಿನಗುರೆ ಕೊಡಿಸುತಿಹನು x x x x
ತಿಳಿಸುತ್ತ ಬಳಿಕxವ ಗುರುವೆ ಶರಣು ॥೪೨೭॥

x x x ಮಧ್ಯನೆ
ಒತ್ತಿಯದು ತಾನೆ ಬಿದ್ದಿಹುದೆನಲದ್ಯಾಕೆನಲ್
ಹತ್ತು ಮಂದಿಯ ಬೆರಸಿ ಬಿನ್ನೈಸಿಕೊಂಡು ನಿರ್ಣಯದ ಭಿಕ್ಷೆ x x ತಾಂ।
ಹತ್ತು ಮಂದಿಯ ಬೆರಸಿ ಬರಸಿ ಒಪ್ಪೊತ್ತೊಳದೆ

ನಿತ್ಯ ನಿರ್ಣಯ ಪುರಾಣವ ಬೆಳೆಸಲೋಸುಗಂ
ಕಿತ್ತೂರವರು ಬರುವನಕ ಬಿದ್ದಿರುವುದೆಂದರುಹಿಸುವ ಗುರುವೆ ಶರಣು ॥೪೨೮॥

ಕಿತ್ತೂರವರು ಬರಲು ನೋಡಿ ನಲಿದಾಡುತ್ತ
ಮತ್ತಮುರೆ ಶೆಟ್ಟಿಯೈತಂದು ವಂದಿಸುತೊಡನೆ
ಹತ್ತು ಮಂದಿಯ ಬೆರಸಿ ಬಿನ್ನೈಸಿ ಬಳಿಕ ನಿರ್ಣಯ ಜೋಳಿಗೆಯ ಧರಿಸಿ ।
ಅತ್ಯುನ್ನತದಿ ನಿನ್ಯಾಯ ಭಿಕ್ಷವ ಕೊಡಿಸಿ
ಮತ್ತಮುರೆ ಡಂಗುರವ ಹೊಯ್ಸಿ ಭಿಕ್ಷವನೊಪ್ಪಿ
ಸುತ್ತಿರಲು ಕಿತ್ತೂರ ನಾಡಿಗುರೆ ಪೋಗುತಿಹುದೆಂಬ ಗುರುವರನೆ ಶರಣು ॥೪೨೯॥

ಮುಂದೆ ಪೋಗುವುದು ತಿಳಿಸೆಂದು ವಂದಿಸುತಿರಲ್
ಎಂದು ನೀನುರೆ ಪೋಗಿ ಬಯಲವಾಡದಿ ನಿಂದು
ಹೆಂದದಾನಂದದಿಂ ಕಿತ್ತೂರ ದೊರೆಗೆ ಪತ್ರವ ಬರೆದು ಕಳಿಸಲೊಡನೆ ।
ಅಂದು ಕಿತ್ತೂರವರು ಬಂದು ನಿನ್ನಂ ನೋಡಿ
ಬಂದು ಸಾನಂದದಿಂ ಮಠವಕಟ್ಟಿಸುತೊಡನೆ
ಬಂದು ಇಲ್ಲಿಂದ ಕರೆದೊಯ್ವರಾಗುರದೆ ಪೋಗುತಿಹುದೆಂಬ ಗುರುವೆ ಶರಣು ॥೪೩೦॥

ಇಂತಪ್ಪ ಜೋಳಿಗೆಯ ಧರಿಸಿರುವ ಮಗನೆ ನೀಂ
ಸಂತಸದಿ ನಿರ್ಣಯ ಭಿಕ್ಷಮಂ ಕೊಂಡು
ನಿಶ್ಚಿಂತೆಯಿಂ ಶಿವಶರಣ ಸಂತರ್ಪಣವ ಮಾಡಬಲ್ಲ ಬಲ್ಲಹದೊಳಿರ್ದು ।
ಸಂತತ ಸುಖಾಬ್ಧಿಯೊಳೋಲಾಡಿ ನಲಿದಾಡಿ
ಸಂತೆಮೂಳರ ಮನದ ಮೈಲಿಗೆಯನೀಡಾಡಿ
ಕಂತುಹರ ಶರಣರಂ ಪಾಡುಪಾಡೆಂದು ಪಾಡಿಸುತಿರುವ ಗುರುವೆ ಶರಣು ॥೪೩೧॥

ವೃತ್ತಿಯಿಂ ಮಹವೃತ್ತಿಯುತ್ತಮವೆನಿಪುದಹುದು
ಮತ್ತಾತನೇ ಎನಲದೆಂತು ತಿಳಿಸೆನಲೊಡನೆ
ವೃತ್ತಿಯದು ತಳಹಲ್ಲೆ ಇರುವುದೈ ಮಹವೃತ್ತಿಯದುವೆ ತನ್ನೊಡನೆ ಬಹುದೈ ।
ವೃತ್ತಿಯದು ಇದ್ದ ತಳದಲ್ಲೆ ನಡೆವುದು ಮಹಾ

ವೃತ್ತಿಯದು ಛಪ್ಪನ್ನದೇಶದೊಳ್ ನಡೆವುದಾ
ವೃತ್ತಿಗಳತಿಯದುಂಟು ಮಹವೃತ್ತಿಗಳತಿ ಇಲ್ಲೆನಲುಲಿವ ಗುರುವೆ ಶರಣು ॥೪೩೨॥
❖❖

ಎನ್ನ ಬಾಗಿಲಕೋಟೆಯೊಳಗಿರುವ ದೈವದವ
ರಂ ನ್ಯಾಯದವರೆಂದು ತಿಳಿಸಿದಿರಿ ನೀವೀಗ
ಅನ್ಯಾಯದವರೆಂತು ತಿಳಿಸು ತಿಳಿಸೈ ಗುರುವೆ ಎಂದು ವಂದಿಸಿ ನಿಂದಿರೆ ।
ಮುನ್ನ ಸರಕಾರದವರೊಳ್ಕಾದಿ ಸರದುರದೆ
ಬನ್ನಬಟ್ಟಿರುವರು ಅದಲ್ಲದೆ ಈಗುರದೆ
ಮೊನ್ನೆ ಇಪ್ಪುವತ್ಸರದಿ ವಾದಿಗಳಿಗುರೆ ಸರಿದಿರುವರೆಂಬ ಗುರುವೆ ಶರಣು ॥೧೧೨೯॥

ಅನ್ಯಾಯದವನೆನಿಪ ಪಲ್ಲೇದ ಹೆಸರಿನವ
ನನ್ಯ ತಳದೊಳಗಿರುವನೈ ತನ್ನ ತಳವನುಳಿ
ದಂ ನ್ಯಾಯದವರಿವರು ತಮ್ಮತಮ್ಮಯ ತಳದಿ ನಿಂದಿರ್ದು ಸುಖಿಸುತಿಹರೈ ।
ಎನ್ನ ಗುರುವೇ ಈಗ ತಿಳಿಸೆಂದು ವಂದಿಸುವ
ತನ್ನ ಮಗನಂ ನೋಡಿ ನಲಿದು ನಿಂದಿಹರಹುದು
ನಿನ್ನ ಸಾವಳಿಗೆಪ್ಪನ ಪುಣ್ಯ ಬಲದಿಂದ ತಿಳಿಯೆಂಬ ಗುರುವೆ ಶರಣು ॥೧೧೩೦॥

ಒಬ್ಬನಿಂದವನಿರುವ ಕೇರಿಯದು ಪಾವನಂ
ಒಬ್ಬನಿಂದವನಿರುವ ಪುರವದುವೆ ಪಾವನಂ
ಒಬ್ಬನಿಂದವನಿರುವ ದೇಶವದು ಪಾವನವೆನಿಪುದೆಂದು ತಿಳಿಸುತೊಡನೆ ।
ಒಬ್ಬನೇ ಅಬ್ದುಲ್‌ಪುರದ ಸಾವಳಿಗೆಪ್ಪ
ನಿಬ್ಬರಿಲ್ಲಾ ಊರೊಳಾತನೆಸಗಿದ ಪುಣ್ಯ
ದೊಬ್ಬುಳಿಯವನ ಸುತರ ಸಲಹಲ್ಕೆ ನಿಲ್ಲಿಸಿತಿವರನೆಂಬ ಗುರುವೆ ಶರಣು ॥೧೧೩೧॥

ಅವನಾತ್ಮಜಂ ಚೆನ್ನಬಸವಪ್ಪನೆಂಬುವವ
ನವನನುಜನಾತ್ಮಜಂ ಗಂಗಪ್ಪನೆಂಬಾತ
ನವಿರತಂ ಗುರುಲಿಂಗ ಜಂಗಮದ ಪಜ್ಜೆಯೊಳುಂಬುತಿಹನುರದೆ ನೋಡೈ ।
ಅವನಂತೆ ಇವರು ಆಚರಿಸಲುರೆ ಬಾರದೈ

ಕುವರನೇ ಎನಲದ್ಯಾಕೆಂದು ವಂದಿಸಲೊಡನೆ
ಇವರು ನಿರ್ನ್ಯಾಯದವರವನುರದೆ ನ್ಯಾಯದವನರಿಯೆಂಬ ಗುರುವೆ ಶರಣು ॥೧೧೩೨॥

ಅವನೊಳುರೆ ನೆಲಸಿರ್ದ ನ್ಯಾಯಮಂ ತಿಳಿಸಿ ಬಳಿ
ಕಿವರೊಳಿಹ ನಿರ್ನ್ಯಾಯಮಂ ತಿಳಿಸೆನುತ ನುತಿಪ
ಕುವರನಂ ನೋಡಿ ನಲಿದಾಡಿ ಮುಂಡಾಡಿ ನೀನುರೆ ಕೇಳು ಕೇಳೆನುತ್ತ ।
ಅವನುರದೆ ತನ್ನವರಿಗುಣಿಸಿ ತಾನುಣುತಿರ್ದ
ನಿವರು ತಮ್ಮವರಿಗುಣಿಸುತ್ತೊಡನೆ ಉಣುತಿರ್ಪ
ರಿವರೆ ನಿರ್ನ್ಯಾಯದವರವನುರದೆ ನ್ಯಾಯದವನರಿಯೆಂಬ ಗುರುವೆ ಶರಣು ॥೧೧೩೩॥

ನ್ಯಾಯದಿಂದುಂಬುವುದನುರೆ ತಿಳಿಸಿದಿರಿ ನಿ
ರ್ನ್ಯಾಯದಿಂದುಂಬವರನುರೆ ಪಸರಿಸಿದಿರಿ ಅ-
ನ್ಯಾಯದಿಂದುಂಬುವದನುರೆ ತಿಳಿಸು ತಿಳಿಸೆಂಬ ಕಂದನಂ ನೋಡಿ ನಗುತ ।
ನ್ಯಾಯ ನಿರ್ನ್ಯಾಯದಿಂದುಣ್ಣದಿರ್ದವರೆ ಅ
ನ್ಯಾಯದಿಂದುಂಬ ಸೋಂಬರು ಎಂದು ತಿಳಿವುದೈ
ನ್ಯಾಯ ನಿರ್ನ್ಯಾಯದಿಂದುಂಬುವರ ಮಗನೆ ನೀಂ ಕೇಳೆಂಬ ಗುರುವೆ ಶರಣು ॥೧೧೩೪॥

ಆತನೋಲ್ ನ್ಯಾಯದಿಂದುಂಬಾತನಲ್ಲಿಲ್ಲ
ವಾತನೋಲ್ ನ್ಯಾಯದಿಂದುಂಬಾತನಿಲ್ಲಿಲ್ಲ
ವಾತನೋಲ್ ನ್ಯಾಯದಿಂದುಂಬಾತನೀಗಿಲ್ಲವೆಂದರುಹಿಸುತ್ತ ಮತ್ತಂ ।
ಆತನೋಲಿನ್ನ ಜನಿಸಿದರುರದೆ ಜನಿಸುವಂ
ಆತನೇ ಮಹಾಸುಕೃತಿಯೆಂದುಲಿಯೆ ನಲಿ ನಲಿದು
ಯಾತರಿಂ ತಿಳಿವುದೆನೆ ನೀನುರದೆ ಕೇಳು ಕೇಳೆಂಬ ಗುರುವರನೆ ಶರಣು ॥೧೧೩೫॥

ಆತನುರೆ ಲಿಂಗೈಕ್ಯನೆನಿಸಿರ್ದ ಸಮಯದೊ
ಳಾತನನರುರೆ ವಿಮಾನವ ರಚಿಸಿ ಇರಲದುವೆ
ಆತನವೆನಿಪ ಪುರದ್ವಾರದಿಂ ಮಿಗಿಲೆನಿಪುದವನಾರು ತಿಳಿಯದಿರ್ದು ।
ಓತು ಪುಷ್ಪಾಂಜಲಿಯನೆಸಗಿ ಅದರೊಳಗಿಟ್ಟು

ಪ್ರೀತಿಯಿಂ ಭಕ್ತರುರೆ ಪೊತ್ತು ನಡೆತರುತಿರಲು
ಭೂತಳದೊಳಿಹ ಶರಣರಂದು ನಲಿದುಲಿದರೆಂದರುಹಿಸುವ ಗುರುವೆ ಶರಣು ॥೧೧೩೬॥

ಅಂದು ನಳಿದುಲಿದರೆಂತೆಂದು ವಂದಿಸಲೊಡನೆ
ಒಂದು ಕಲಶವನುಳ್ಳ ತೇರಮಂ ಕಂಡಿರ್ದೆ
ಎಂದು ಒಂಬತ್ತು ಕಲಶವನುಳ್ಳ ತೇರಮಂ ಕಂಡೆವೆಂದನಿಬರುಲಿಯೆ ।
ಇಂದು ಈ ಲಿಂಗದೊಳಗೊಂಬತ್ತು ಲಿಂಗಗಳು
ಹೆಂದದಾನಂದದಿಂದಡಗಿರ್ದ ಕಥನದಿಂ
ಹೊಂದರೋಳೊಂಬತ್ತು ಅಡಗಿರುವವೆಂದುಲಿದರೆಂಬ ಗುರುವರನೆ ಶರಣು ॥೧೧೩೭॥

ಈ ತೆರದಿ ನಲಿದುಲಿದು ನಡೆತರುತ ಸಂಭ್ರಮದಿ
ನಾತತವೆನಿಪ ಮಹಾದ್ವಾರಕುರೆ ತರಲೊಡನೆ
ಆತನ ವಿಮಾನವದು ಅಗಸಿಯಿಂ ಮಿಗಿಲೆನಿಸೆ ನೋಡಿ ಗಡಬಡಿಸುತೊಡನೆ ।
ಭೂತಳದೊಳಿರಿಸಲದು ಭಾವಣಿಗೆ ತಾಗುತಿರ
ಲಾತನ ಕುಮಾರರುರೆ ನೋಡಿ ಚಿಂತಿಸಲೊಡನೆ
ಆ ತಳದ ಹಿರಿಯರುರೆ ಚಿಂತಿಸದೆ ಜಾನಿಸಿದರೆಂಬ ಗುರುವರನೆ ಶರಣು ॥೧೧೩೮॥

ಬಾಗಿಲವನುರೆ ಕೆಡವಿ ಒಯ್ವೆವಾವೆಂದು ಕೆಲ
ರಾಗ ಗುದ್ದಲಿ ಸಲಿಕಿಗಳ ತರಿಸುತಿರಲೊಡನೆ
ಬಾಗಿಲವನುರೆ ಕೆಡವಿ ಹೋಗಬಾರದು ಇವನ ಪುಣ್ಯಮಂ ಪರಿಕಿಸುವುದೈ ।
ಈಗೆಂದು ತದ್ವಿಮಾನವನುರದೆ ಪಿಡಿದೆತ್ತಿ
ಪೋಗುತ್ತ ಹರಹರ ಎನುತುತ್ತುಚ್ಚರಿಸುತಿರಲ್
ಬಾಗಿ ಬಾಗಿಲವನುರೆ ದಾಂಟಿತು ವಿಮಾನವೆಂದರುಹಿಸುವ ಗುರುವೆ ಶರಣು ॥೧೧೩೯॥

ಬಾಗಿ ಬಾಗಿಲವನುರೆ ದಾಂಟಿ ಮುನ್ನಿನೊಲು ತಾ
ನಾಗಿ ಪೋಗುತ್ತಿರುವ ತದ್ವಿಮಾನವ ನೋಡಿ
ಲೋಗರುರೆ ಬೆರಗಾಗಿ ಇವನೀಗ ಪುಣ್ಯಾತ್ಮನಹುದೆಂದು ನಲಿದು ಮತ್ತಂ ।
ಕೈಗಳಂ ಮುಗಿದು ಪೋದರು ಕೆಲರು ಕೆಲೆದಾಡಿ

ನೀಗಿ ದುರ್ಭವವನೆಂದು ಕೊಂಡಾಡಿರುವ
ರಾಗಳಲ್ಲಿರ್ದನೀ ಜಿಗಜಿನ್ನಿ ಕರಿಬಸವನರಿಯೆಂಬ ಗುರುವೆ ಶರಣು ॥೧೧೪೦॥

ಈತನೇ ಆತನಂ ಲಿಂಗೈಕ್ಯನೆನಿಸಿದವ
ನೀತನೇ ಆತನ ವಿಮಾನವಂ ಸಾಗಿಸಿಹ
ನೀತನೇ ತಲ್ಲಿಂದಮಂ ತತ್ಸಮಾಧಿಯಂ ಬಂಗದೊಳ್ ನೆಲೆಗೊಳಿಸುತ ।
ಆತನ ಸುತರ ದುಃಖವನುರೆ ನಿವಾರಿಸು
ತ್ತಾ ತಳದೊಳಿರ್ದು ಇತ್ತಂ ಮತ್ತತೆಯೊಳುರದೆ
ಆ ತಳದ ಹಿರಿಯರಿರಲವರ ಸಂಗಮನುಳಿದ ಶಿವನೆಂಬ ಗುರುವೆ ಶರಣು ॥೧೧೪೧॥

ಇವನುರದೆ ಅವರ ಸಂಗಮನುಳಿದು ಇರಲವರು
ಅವಿವೇಕತನದ ಅನ್ಯಾಯದಿಂ ಸರಕಾರ
ದವರೊಡನೆ ಮತ್ಸರಿಸಿ ಅವರ ರೋಷಕ್ಕೆ ದಿಕ್ಕತ್ತನುರೆ ಹಾಕಲೊಡನೆ ।
ಅವರುರದೆ ಸಿಟ್ಟಿನಿಂ ಶೆಟ್ಟಿಯಂ ಪಿಡಿದೊಯ್ಯೆ
ಸುವಿವೇಕತನದಿ ನಿಟ್ಟಿಸಿ ಶೆಟ್ಟಿಯಂ ಬಿಡಿಸಿ
ದವಿವೇಕತನದಿ ಮಡಗಿಸಲಿವರನಳಿಸಿ ಮಣಿಸಿದರೆಂಬ ಗುರುವೆ ಶರಣು ॥೧೧೪೨॥

ಇಂತಿವರನಳಿಸಿದರು ಎಂತು ಕುಣಿಸಿರುವರ್ರೈ
ಸಂತಸದಿ ನೀನೀಗ ತಿಳಿಸೆಂದು ವಂದಿಸಲ್
ಕುಂತವರ ನಿಂತವರ ಕತ್ತಿಯಿಂ ಕಡಿಸಿ ಓಡ್ಯಾಡಿಸುತ್ತಿರ್ದು ಮತ್ತಂ ।
ಸಂತೆಮೂಳರ ಮನೆಯನುರದೆ ಸುಲಿಸುತ್ತಿರ್ದು
ಕಂತುಹರ ಶರಣರಾಲಯಗಳಂ ಕಾಯ್ದುಸ್ತಾ
ಸಂತೆ ಮಾಳರನಳಿಸಿ ಮಣಿಸಿರುವರಿಂತು ಕೇಳೆಂಬ ಗುರುವೆ ಶರಣು ॥೧೧೪೩॥

ಮಕ್ಕಳೆನಿಸುವ ರೈತರನಿಂತು ಕೊಬ್ಬುವರೆ
ಚಕ್ಕನೇ ನೀನೀಗ ತಿಳಿಸೆಂದು ವಂದಿಸುವ
ಚಿಕ್ಕಮಗನಂ ನೋಡಿ ನಲಿದು ತನ್ನೊಳ್ ತಾನೆ ನೀನೀಗ ಕೇಳು ಕೇಳ್ಳೈ ।
ಮಕ್ಕಳೇಂ ಒಡಹುಟ್ಟಿದವರಾದರೇಂ ತನ್ನ

ರಕ್ಕಿಸುವ ತಂದೆಯಾದರು ಬಿಡಗೆ ನೆಲಸಿರುವ
ಮುಕ್ಕುತನವಂ ಬಿಡಿಸಲೋಸುಗಂ ಕಕ್ಕುತಿಹರೆಂಬ ಗುರುವರನೆ ಶರಣು ॥೧೧೪೪॥

ಇವರೊಳಿಹ ಮುಕ್ಕುತನವೇನೆಂದು ನಮಿಸುತಿರ
ಲಿವರೊಳಿಹ ಮುಕ್ಕುತನಕಳತೆಯಿಲ್ಲೆಲೆ ಮಗನೆ
ಶಿವಭಕ್ತರೊಳಿರುವ ಮುಕ್ಕುತನಮಂ ಪಸರಿಸಲ್ಬಾರದೆಂದು ಮತ್ತಂ ।
ಶಿವಭಕ್ತರೊಳಿರುವ ಮುಕ್ಕುತನಮಂ ಬಿಡಿಸಿ
ಶಿವಶರಣರೆನಿಸುತಿಹ ಮಗನಹುದು ನೀನೆಂದು
ತವಕದಿಂ ನಿನಗೆ ಸಂಕ್ಷೇಪದಿಂದರುಹಿಸುವೆನರಿಯೆಂಬ ಗುರುವೆ ಶರಣು ॥೧೧೪೫॥

ಊರುವೆ ಅಂಗ ಸರಕಾರವೇ ಲಿಂಗವೆನ
ಲೂರವರು ಸರಕಾರದವರೊಳು ಮಥನಿಸಲ್
ಬಾರದ್ಕೆ ಮಥನಿಸಿದರದುವೆ ಅನ್ಯಾಯವೆಂದರಿಯದೇ ಅಧಮತನದಿಂ ।
ಊರುವರು ನೆರೆದು ಬಾಜಾರದೊಳ್ ಕುಳಿತು ಸರ
ಕಾರದವರಂ ಲೆಕ್ಕಿಸದೆ ಸೊಕ್ಕಿನಿಂದ ಸರ
ಕಾರದವರಂ ಮಣಿಸುತಿಹೆವೆಂದು ತಾನೆ ಮಣಿದಿಹರೆಂಬ ಗುರುವೆ ಶರಣು ॥೧೧೪೬॥

ಅವರನುರೆ ಮಣಿಸಬೇಕೆಂದು ತಾವೆ ಮಣಿದ
ಅವಿವೇಕಿಗಳು ಇವರೆ ನೋಡೆನುತ ನಗುತ ಕಡು
ತವಕದಿಂ ಮಣಗಿಯದೆ ಕಡಿಸಿಕೊಂಡು ಬಡಿಸಿಕೊಂಡುರೆ ಮಣಿದ ಮೂಢರೆನುತ ।
ಅವನಿಯೊಳಪಕೀರ್ತಿ ಭಾಜನರೆನಿಸುತಿರ್ಪ
ಶಿವಭಕ್ತರಂ ನಾಂಚಿಸುವೆನೆಂದು ಈ ಪುರಾ
ಣವ ನಿರ್ಮಿಸಿರ್ದ ನಿರ್ಣಯ ಪುರಾಣಿಯೆ ನೀನೆನುತ್ತಿರುವ ಗುರುವೆ ಶರಣು ॥೧೧೪೭॥

ಆನೆಂತು ನಿರ್ಮಿಸಿಹೆನೆಂದು ವಂದಿಸುತಿರ್ಪ
ಸೂನುವಂ ನೋಡಿ ನಲಿದಾಡಿ ಸಂತಸದಿಂದ
ನಾನು ನೀನುರೆ ಬೆರೆಯಲದುವೆ ಸಂಗಮವೆನಿಪುದಾ ಸಂಗಮದಿ ನೆಲಸಿಹ ।
ಕಾನನಾಂತಕ ಸಂಗಮೇಶ್ವರನೆ ದಯದಿಂದ

ತಾನೆ ನಿರ್ಮಿಸಿ ತನ್ನವರನುರೆ ನಾಚಿಸು
ತ್ತಾನುದದಿಂದ ತನ್ನವರೊಳ್ವಿನೋದಿಸುತ್ತಿಹನೆಂಬ ಗುರುವೆ ಶರಣು ॥೧೧೪೮॥

ಅನ್ಯಾಯದಿಂದ ತನ್ನವರುರದೆ ತೊಳಲುತಿರ
ಲನ್ಯಾಯಮಂ ಬಿಡಿಸಲೋಸುಗಂ ತಾನೀಗ
ಳನ್ಯಾಯನ್ಯಾಯ ನಿರ್ನ್ಯಾಯಗಳ ತಿಳಿಸುತಿಹ ನಿರ್ಣಯ ಪುರಾಣಮುಮನು ।
ನಿನ್ನಿಂದ ನುಡಿಸುತ್ತ ನಿನ್ನಿಂದ ಬರೆಸುತ್ತ
ನಿನ್ನಿಂದ ತನ್ನವರ್ಗೆ ತಿಳಿಸುತ್ತ ತಾನೀಗ
ನಿನ್ನೊಳಡಗಿರುವನೆಲೆ ಕುವರನೇ ನಿನ್ನ ಸಂಗಮನೆಂಬ ಗುರುವೆ ಶರಣು ॥೧೧೪೯॥

ಆನೆ ಸಂಗಮನೆನಿಸೆ ನೀನೆ ಸಂಗಮನಾಥ
ನಾನೆ ಸಂಗಮನಾಥನೆನಿಸಿ ನೀನೇ ವೃಷಭ
ನಾನೇ ವೃಷಭನೆನಿಸಿ ನೀನೇ ವೃಷಭವಾಹನನೆಂದು ಎರಗುತೊಡನೆ ।
ನೀನೀಗ ತಿಳಿಸು ಬಾಗಿಲಕೋಟೆಯಲ್ಲಿ ಯಜ
ಮಾನರಂ ಭಂಗಿಸಿದ್ರ್ದುದನೆಂದು ವಂದಿಸುವ
ಸೂನುವಂ ನೋಡಿ ನಲಿದಾಡಿ ನೀನೀಗ ಕೇಳೆಂಬ ಗುರುವರನೆ ಶರಣು ॥೧೧೫೦॥

ತಮ್ಮವರೊಳೊರ್ವನಂ ನ್ಯಾಯದವರಿವರೆಂದು
ತಮ್ಮವರನುಳಿದುಸರಕಾರದವರನುಸರಿಸೆ
ನಮ್ಮನುಳಿದವರನನುಸರಿಸಿರುವನಿವನೆಂದು ತಿಳಿದು ಮಿಗೆ ಮುನಿಸಿನಿಂದೆ ।
ತಮ್ಮವನ ಮಳಿಗೆಯಂ ತಾವೇ ಸುಡುತ್ತಿರುವ
ಚುಮ್ಮರಂ ನೋಡಿ ಸರಕಾರದವರುರೆ ಕೂಡಿ
ಗುಮ್ಮಿಸಿದದಂದು ನಿನ್ನಯದೈವದವರನುರೆ ಕೇಳೆಂಬ ಗುರುವೆ ಶರಣು ॥೧೧೫೧॥

ತಮ್ಮವನ ಮಳಿಗೆಯಂ ತಾವೆ ಸುಡುತಿರಲವರು
ಗುಮ್ಮಿಸಿದರ್‍ಯಾಕೆ ತಿಳಿಸೆಂದು ವಂದಿಸಲೊಡನೆ
ಗುಮ್ಮಿಸಿದ ವಿಸ್ತರವನುರೆ ಕೇಳುತಿಹ ಮಗನೆ ಕೇಳೆನುತ ನಲಿವುತೊಡನೆ ।
ತಮ್ಮವರನಟ್ಟಿ ಸರಕಾರದವರುರೆ ಕರೆಸೆ

ಸುಮ್ಮನುರೆ ಮಾತಿನಿಂ ಸರಿಸದೇ ಮದದಿಂದ
ತಮ್ಮವರ ಕರಹಿ ಕೂಡಿಸಿದ ಕಲ್ಲುಗಳ ತೂರಿದರೆಂಬ ಗುರುವೆ ಶರಣು ॥೧೦೫೨॥

ಕರೆಯಲಿಕೆ ಬಂದವರ ಕೂಡ ಮಾತಾಡದೆ
ಸರಕಾರದವರನುರೆ ಹರಕಾರದೋಳಿಡದೆ
ಕರೆಯಲಿಕೆ ಬಂದವರ ಗುಂಡಿಗೆಗೆ ಗುಂಡುಗಳನಿಡಲವರು ಕಡು ತವಕದಿಂ ।
ಪರಿತಂದು ಸರಕಾರದವರಿಗುರೆ ತಿಳಿಸುತಿರೆ
ಸರಕಾರದವರು ತಮ್ಮೊಳ್ ತಾವೆ ತಿಳಿಯುತಿರೆ
ಸರಕಾರದವನೊರ್ವನುರೆ ತಿಳಿಸಿರುವನದಂ ಕೇಳೆಂಬ ಗುರುವೆ ಶರಣು ॥೧೧೫೩॥

ಕರೆದರ್ರೈತರುವವರೆ ರೈತರೆನಿಸುತ್ತಿಹರು
ಕರೆಸಲುರೆ ನಿಟ್ಟಿಸುತ ಬರುವವರೆ ಶೆಟ್ಟಿಗಳು
ಕರೆಸಲುರೆ ಬಾರದೆ ಮಾತಿನಿಂದುರೆ ಸರಿಸುತಿರ್ಪುದದುವೇ ದೈವವೈ ।
ಕರೆಸಲುರೆ ಬಾರದೆ ಮಾತನಾಡದೆ ಇರ್ದು
ಅರಿನೃಪರ ಶರಗಳೋಲ್ ಶಿಲೆಗಳನ್ನಿಡಿಸುತಿ
ರ್ಪರಿಗಳೆನಿಸುವರಿವರ ತರಿಸೆಂದು ಬಲವ ಕಳಿಸಿದನೆಂಬ ಗುರುವೆ ಶರಣು ॥೧೧೫೪॥

ಸರಕಾರದವನಪ್ಪಣೆಯಿಂದ ಬರುತಿಹ ಕು
ದುರೆ ಮಂದಿಯು ನೋಡಿ ಓಡಿಹೋದರುರೆಲ್ಲರು
ಸರಕಾರದವನುರದೆ ರೈತರಂ ಕೊಲ್ಲಿಸುವನೆ ಎಂದುರದೆ ಮದಡತನದಿಂ ।
ಸರಿಯದಿರ್ದವರನುರೆ ಇರಿದು ಸರಿಸುತ್ತಿರೆ ಹೆ
ದರಿ ಹಿಂದನಿಂದವರು ನುಸುಳಿ ಹೋದರು ಕೆಲರು
ಸರಕಾರದವರ ನೀ ದೈವದವರಿಡೆ ನೋಡೆಂಬ ಗುರುವರನೆ ಶರಣು ॥೧೧೫೫॥

ಕುಂಬಿಗಳೊಳುರೆ ಕುಳಿತು ಕಲ್ಲುಗಳನೊಗೆಯುತಿರೆ
ಸೋಂಬರೀ ದಂಡಮಂ ಕಂಡು ಬಳಿಕಂಡಲೆದು
ಡೊಂಬರೋಲ್ ಹಾರಿ ಹೋದರು ಕೆಲರು ಬಿದ್ದು ಕೈಕಾಲುಗಳ ಮುರಕೊಂಡರ್ರೈ ।
ಸೋಂಟತನದಿಂ ನಿಂದವರು ಕಡಿಸಿಕೊಂಡರು ಈ

ದಂಬಮಂ ಬಿಟ್ಟೋಡಿ ಹೋಗಿ ಮನೆಯೊಳಗಡಗೆ
ಬೆಂಬಿಡದೆ ಬಂದು ಮಂತ್ರಿಯಂ ಮುತ್ತಿ ಸುರಿದರುದೆ ಕೇಳೆಂಬ ಗುರುವೆ ಶರಣು ॥೧೧೫೬॥

ಅರಿನೃಪರು ಪುರವನುರೆ ಮುತ್ತಿ ಸುಲಿವಂತೆ ನಿಜ
ಪುರವನುರೆ ಮುತ್ತಿ ತನ್ನವರಿಂದ ಸುಲಿಸಿದಂ
ಸರಕಾರದವನಂದು ಈ ದೈವದವರ ಅನ್ಯಾಯದಿಂದಂದು ಮತ್ತಂ ।
ಎರಡುಮನೆಯವರ ತನ್ನವರಿಂದ ಕಾಯ್ಸಿದಂ
ತರುಣನೇ ಕೇಳು ಕೇಳೆನಲವರನರುಪೆನಲ್
ಅರಿಯದೋಳ್ ಕೇಳಿ ಸಕಳರಿಗೆ ತಿಳಿಪುವ ಮಗನೆ ಕೇಳೆಂಬ ಗುರುವೆ ಶರಣು ॥೧೧೫೭॥

ನಿನ್ನ ಅಬ್ದುಲ್ಪುರದವರನುರೆ ಕಾಯ್ಸಿದಂ
ನಿನ್ನ ಜಿಗಜಿನ್ನಿಯವರನುರೆ ಕಾಯ್ಸಿದನುರದೆ
ಇನ್ನುಳಿದವರು ಇವರೊಳಡಗಿರ್ದ ಪ್ರೌಢರುರೆ ಬನ್ನ ಬಡದೆ ಇರ್ದರ್ರೈ ।
ಚೆನ್ನಾಗಿ ನಾವೇ ದೈವದವರೆಂದೆಂಬ
ಮಾನ್ಯರುರೆ ಬನ್ನಬಟ್ಟುರದೆ ಕೆಟ್ಟಿರ್ಪರ್ರೈ
ಅನ್ಯಾಯಬಲದಿಂದ ನೀನುರದೆ ಕೇಳು ಕೇಳೆಂಬ ಗುರುವರನೆ ಶರಣು ॥೧೧೫೮॥

ಇಂತಪ್ಪ ಅನ್ಯಾಯಮಂ ಕಂಡು ತಾನಲ್ಲಿ
ಸಂತಸದಿ ನಿಲ್ಲದೆ ಇಲ್ಲಿಗುರೆ ಬಂದಿರುವ
ನಂತಕಾಂತಕ ಶರಣನೆನಿಸ ಜಿಗಜಿನ್ನಿ ಕರಿಬಸವಪ್ಪನೆಂದರುಪುತಾ ।
ಸಂತಿಮೂಳರನಲ್ಲಿ ನಿಲ್ಲಿಸಲೊಳಿಸುಗಂ
ಸಂತಸದಿ ಅಬ್ದುಲ್ಪುರದವರನಿರಿಸಿರುವ
ನಂತಕಾಂತಕನೆನಿಪ ಸಂಗಮೇಶ್ವರನೆ ತಿಳಿಯೆಂಬ ಗುರುವರನೆ ಶರಣು ॥೧೧೫೯॥

❖❖

ಪತ್ರ ೧೦೫೦–೧೦೬೪
ಪದ್ಯ ೪೮೩೭ – ೪೮೯೩

ನಿಂದು ನಿಟ್ಟಿಸುತೊಡನೆ ಆ ಊರೊಳಿಹ ಗೌಡ
ನಿಂದ ಬಿನ್ನಹವೆನಿಸಿಕೊಂಡು ಲಿಂಗಾರ್ಚನೆಯ
ಹೆಂದದಾನಂದದಿಂ ಮಾಡಿ ಲಿಂಗಾರ್ಪಿತವ ಮಾಡಿ ನಲಿದಾಡುತೊಡನೆ ।
ಒಂದಿರುಳನುರೆ ಕಳೆದು ಮರುದಿನದಿ ಹೊರಟು ಅ
ಲ್ಲಿಂದ ಪಟ್ಟೀಹಾಳಮಂ ನಿಟ್ಟಿಸುತ್ತೊಡನೆ
ಎಂದಿನೊಲು ಸಂಪಗಾವಿಗೆ ಬಂದು ನಿಂದು ನಿಟ್ಟಿಸುತಿರುವ ಗುರುವೆ ಶರಣು ॥೪೮೩೭॥

ತಾನುರೆ ಬರುವ ತನಕ ನೀವಿಲ್ಲಿರುವುದೆಂದು
ಸಾನುರಾಗದಿ ಬಾಗಿ ಪೇಳಿಪೋಗಿರುವನ್ನೈ
ನೀನೀಗಳವನುರೆ ಬರುವತನಕ ಇಲ್ಲಿಯೇ ಇರುವುದೆಂದರಪುತೊಡನೆ ।
ಮೌನದಿ ವೃಥಾ ದಿನವ ಕಳೆಯಬಾರದು ಮಗನೆ
ಜಾಣತನದಿಂದೊಂದು ಪತ್ರಮುಮನಿಲ್ಲಿ ಹರಿ
ವಾಣದವರಿಗೆ ಬರೆಯಬೇಕೆಂದು ಬರೆಸುತೊಳಗಿರುವ ಗುರುವರನೆ ಶರಣು ॥೪೮೩೮॥

ಅಥ: ನಿರ್ಣಯ ಪತ್ರಂ ॥

ನಿರ್ಣಯ ಪುರಾಣಿಯಣುಗಂ ನಿರ್ಣಯ ಮಹಾಗುರುವಿನಾಜ್ಞಾನಾಜ್ಞೆಯಿಂ ಸಂಪಗಾವಿಯಲ್ಲಿರುವ ಕುಂಪಣಿ ಸರಕಾರದವರಿಗೆ ತೂರ್ಣದಿಂ ಬರೆಸಿರುವ ನಿರ್ಣಯ ಪತ್ರವಿದೆಂ ತುಟಿದೇ ನಿಮಿತ್ತವೆನೆ । ವ್ಯಾಸಹಸ್ತವನನ್ಯಾಯದಿಂದ ಮುಂದುಗಾಣದೆ ಕೋಣತನದಿಂದೇ ಮಾಫದೊಳುರೆ ಹ್ಯಾಗತನದಿಂದ ಕಟ್ಟಿಸುವ ಕೊಟ್ಟಿಶೆಟ್ಟಿಗಳನುರೆ ಕುಟ್ಟಿಸಲ್ಕೋಸುಗಂ ಅನಾಚಾರಿಗಳನುರೆ ನಾಚಿಸಲ್ಕೋಸುಗಂ ಸದಾಚಾರಿಗಳನುರೆ ಸೂಚಿಸಲ್ಕೋಸುಗಂ ದುರಾಚಾರಿಗಳನುರೆ ಕೊಚ್ಚಿಸಲ್ಕೋಸುಗಂ ತನ್ನವರನುರೆ ನಚ್ಚಿಸಲ್ಕೋಸುಗಮೀ ಶಾಲಿವಾಹನ ಶಕದ ೧೭೪೯ನೆಯ ಸರ್ವಜಿನ್ನಾಮ ಸಂ। ಮಾಘ ಶುದ್ಧ

ಪೂರ್ಣಿಮೆಯಲ್ಲಿ ವ್ಯಾಸಹಸ್ತವನುರೆ ಹರಿಸಿ ಚೆಲ್ಲಿಸೆಂದುಲ್ಲಾಸದಿಂ ಬರೆಸಿದ ನಿರ್ಣಯ ಪತ್ರವಿದು ವಿದಿತಂ ವಿದಿತಂ ವಿದಿತಂ ಮಂಗಲಮಸ್ತು ಶ್ರೀರಸ್ತು ॥

ವಾರ್ಧಕ ಷಟ್ಪದಿ :

ಇಂತು ನಿರ್ಣಯ ಪತ್ರಮಂ ಬರೆಸಿ ನೋಡಿ ನಿ
ಶ್ಚಿಂತೆಯಿಂ ನಿನ್ನ ಬಳಿಯಲ್ಲಿಯೆ ಅನಕ ಇರಲಿ
ಸಂತಿಮೂಳರು ನೋಡಿದರೆ ನಗುವರೀಗುರದೆ ಕೊಡರು ಸರಕಾರಕೆನುತ ।
ಸಂತಿಮೂಳರ ಸೊಕ್ಕನುರೆ ಮುರಿದು ವ್ಯಾಸಕರ
ವಂ ತೆಗೆಸಿ ಸಿಗ್ಗಾಗಿಸೀ ತೋರಿಸುವೆನೆಂದು
ಸಂತತಂ ತನ್ನ ಬಳಿಯಲ್ಲಿಟ್ಟುಕೊಂಡು ಕುಳಿತಿರುವ ಗುರುವರನೆ ಶರಣು ॥೪೮೯॥

ಇಟ್ಟುಕೊಂಡಿರೆ ನಿಟ್ಟಿಸುತ್ತಿರಲು ಬಂದು ಪೊಡ
ಮಟ್ಟಿರುವ ಚೆನ್ನಮಲ್ಲನ ನೋಡಿ ನಲಿದಾಡಿ
ಕಟ್ಟಕ್ಕರದಿ ನಿಂದು ಬಂದೆಯಾ ಎಂದು ಸಲೆ ಮಿಂದು
ಮುಟ್ಟಿ ಷಡ್ರಸಮಯ ಪದಾರ್ಥಮಂ ಲಿಂಗಕ್ಕೆ
ಕೊಟ್ಟು ಕೈಕೊಂಡುಂಡು ನೀನೀಗಳಪ್ಪಣೆಯ
ಕೊಟ್ಟು ಕಳುಹುವುದೆಂದು ನುಡಿವುತ್ತೊಡನೆ ನಸುನಗುತ್ತಿರುವ ಗುರುವೆ ಶರಣು ॥೪೪೦॥

ಆನೀಗ ಹೊಂಗಲಕೆ ಹೋಗುತಿರ್ಪೆನು ಅಲ್ಲಿ
ಗೇ ನೀವು ದಯಮಾಡಿ ಬರುವುದೆಂದುರೆ ಪೇಳ್ದು
ಜಾಣತನದಿಂ ಪೋದನೀ ಚೆನ್ನಮಲ್ಲನಂ ಮೆಲ್ಲನೇ ಇನ್ನು ಮುಂದೆ
ನೀನುರದೆ ಪರಿಕಿಸುವವೀಗ ಪರಿಕಿಸಬಾರ
ದಾನೀಗ ದೇವಲಾಪುರದೊಳಿಹ ವೀರ ನೃಪ
ನಾನವ[ನ] ನೋಡುತಿಹೆನುರೆ ನಡೆವುದೆಂದು ನಡೆಸುತ್ತಿರ್ದ ಗುರುವೆ ಶರಣು ॥೪೪೧॥

ನಡೆಸಿಯುರೆ ನಡೆಯುತೊಡನೇ ದೇವಲಾಪುರವ
ಕಡು ತವಕದಿಂ ಪೊಕ್ಕು ನಕ್ಕು ಅಲ್ಲಿರುವ ಮಠ
ದೊಡೆಯರಂ ಪರಿಕಿಸುತ ವೀರಬಸವಪ್ಪನೆಂಬುವ ಬಿಗುತನಂ ನೋಡುತ ।
ಜಡಜೀವರೆನಿಪ ಜಂಗಮದೊಡನೆ ನುಡಿಯುತಿಹ

ನುಡಿಯನುರೆ ಕೇಳಿ ಇನ್ನೊಮ್ಮೆ ಬರುತಿಹೆನೆಂದು
ನುಡಿಯುತೊಡನೇ ಹೊರಟು ಹೊಂಗಲಕೆ ಬಂದು ನಿಂದಿರುವ ಗುರುವರನೆ ಶರಣು ॥೪೮೪೨॥

ಹೊಂಗಲದ ತನ್ನವರನೊಂದಿ ಸುಖಿಸುತ್ತಿರ್ದು
ಲಿಂಗಪೂಜಾ ವಿನೋದದಿ ವಿನೋದಿಸುತಿರ್ದು
ಮಂಗತನದನ್ಯಾಯ ನ್ಯಾಯದಿಂ ನಂದಿಧ್ವಜಕ್ಕೆ ವ್ಯಾಸನ ಹಸ್ತಮಂ ।
ಮುಂಗಾಣದೆ ಕಟ್ಟಿಸಿರುವ ಈ ಸೆಟ್ಟಿಗಳ
ಭಂಗಿಸದೆ ಬಿಡೆನೆಂದು ಇನ್ನು ಮುಂದುರೆ ಬರುವ
ತಿಂಗಳೊಳಗೇ ಇವರ ಸೆಟ್ಟಿತನಮಂ ನಿಟ್ಟಿಸುವೆನೆಂದ ಗುರುವೆ ಶರಣು ॥೪೮೪೩॥

ಸೆಟ್ಟಿತನಮಂ ನಿಟ್ಟಿಸುವೆನೆನುತ ನಗುತಿರ್ದು
ಬಿಟ್ಟು ನಿನ್ನಂ ಮುಂದಕುರೆ ಬಂದ ಭಗುತನಂ
ನಿಟ್ಟಿಸುವೆನೀಗುರದೆ ಎಂದು ಚನ್ನಮಲ್ಲಪ್ಪ ನಿಪ್ಪಟಿ ಕಾಣಿಕೆ ।
ಕಟ್ಟಕ್ಕರದಿ ಬಂದು ವಂದಿಸಿಕೊಳುತ್ತಿರ್ದು
ಮುಟ್ಟಿಸುವೆನ್ನೈ ಮುಂದೆ ಈಗೆನಗೆ ಸಾಲಮಂ
ಕೊಟ್ಟು ಕಳಿಸುವುದೆಂದು ನುಡಿಯುತೊಡನೇ ನಸುನಗುತುಲಿವ ಗುರುವೆ ಶರಣು॥೪೮೪೪॥

ಸಾಲವ ನಿಮಗೆ ಕೊಟ್ಟು ಕೇಳಬಾರದು ನಾವು
ಸಾಲವ ನಿಮಗೆ ನಾವು ಕೊಡಲಾರೆವೆನುತಿರ್ದು
ಬಾಲನ್ನೈ ನಾನೀಗ ಕೊಟ್ಟುದಂ ಕೈಕೊಂಡು ಉಂಡು ಸುಖಿಸುವುದೆನುತ್ತ ।
ಬಾಲನೆನಿಸುವ ಚೆನ್ನಮಲ್ಲಪ್ಪನುರೆ ನುಡಿಯು
ತಾಲಸ್ಯವೆನಿಸದೆ ಉಪಾಸಿ ರುದ್ರಪ್ಪನಿಗೆ
ಲೀಲೆಯಿಂ ಬರೆದಿತ್ತ ಪತ್ರಮಂ ನೋಡಿ ನಗುತುಲಿವ ಗುರುವರನೆ ಶರಣು ॥೪೮೪೫॥

ತನ್ನಭಿಧಾನದಿ ಬರೆಯದೇ ತನ್ನ ಹಿರಿ
ಯಣ್ಣನಭಿಧಾನದಿಂ ಬರೆಯದೇ ಮಂದಮತಿ
ಯಿಂ ನಾಡೆ ಮಂಗತನದಿಂದಿರುವ ಸಂಗನೆಂಬಣ್ಣನಭಿಧಾನದಿಂದ ।
ಅನ್ಯಾಯ ನ್ಯಾಯದಿಂ ಬರೆದ ಪತ್ರವ ನೋಡಿ
ತನ್ನೊಳಗೆ ತಾನೆ ನಗುತಿರ್ದು ತತ್ಪತ್ರಮಂ
ಚನ್ನಮಲ್ಲನ ಕರದಿ ಮೆಲ್ಲನೇ ಕೊಟ್ಟು ನಿಟ್ಟಿಸುತೊರೆವ ಗುರುವೆ ಶರಣು ॥೪೮೪೬॥

ಹೊಟ್ಟೆಗಿಲ್ಲಯೆಂದು ತಿರಿದಿರೀ ಊರೊಳಗೆ
ಕೊಟ್ಟು ಪೊರೆವವರುಂಟು ಈ ಕಾಲದೊಳೆನಗೆ
ಉಟ್ಟುಕೊಳಲಿಕೆ ಧೋತ್ರಮಂ ಕೊಡುವರಾರಿಲ್ಲವೆಂದರುಹಿ ಸುತ್ತ ಮುತ್ತಂ ।
ಕಟ್ಟಕ್ಕರದಿ ಬೇಡಿದರೆ ಕೊಡುವರರ್ಧಂಗಿ
ಯುಟ್ಟುಕೊಂಬುವ ಸೀರೆಯಂ ಕೊಡರು ಈಗಳೀ
ಪಟ್ಟಣದಿ ನೀನೆರಡು ಸೀರೆಗಳ ಕೊಟ್ಟು ಮುಟ್ಟಿಸುಯೆಂದ ಗುರುವೆ ಶರಣು ॥೪೮೪೭॥

ಎರಡು ಸೀರೆಗಳನ್ನೈದುರುಪಾಯದೊಳ್ಕೊಂಡು
ಎರಕದಿಂ ಮಾನಿನಿಗೆ ಮುಟ್ಟಿಸುವುದೆನುತಿರ್ದು
ಬರೆದಿತ್ತ ಪತ್ರಮಂ ಹಿಂದಕ್ಕೆ ಕೊಳಿಸಿ ಇವಗುರೆ ತಿಳಿಸಬೇಕೆನುತ್ತ ।
ಸರಕಾರಕುರೆ ಬರೆದ ಪತ್ರವ ಕರದಿ ಕೊಟ್ಟು
ಪರರಿಗುರೆ ತಿಳಿಸದೇ ನೀನೀಗ ನೋಳ್ಪುದೆಂ
ದೊರೆದುರದೆ ಸಂಪಗಾವಿಗೆ ಕಳಿಸಿ ಮನೆಗೆ ಬಂದರುಹಿಸುವ ಗುರುವೆ ಶರಣು ॥೪೮೪೮॥

ಚೆನ್ನಮಲ್ಲಪ್ಪನಂ ಮೆಲ್ಲನೇ ಪರಿಕಿಸಿದಿ
ಇನ್ನಿವನ ಹಿರಿಯಣ್ಣನೆನಿಪ ಸಂಗನಬಸವ
ನಲಿ ನಾಡೆ ನೋಡಿ ಪರಿಕಿಸುವುದೈ ಎಂದರುಹಿಸುತ್ತಿರ್ದು ತವಕದಿಂದ ।
ನಿನ್ನೀ ಪುರಾಣಿಯ ವಿಳಾಸಮಂ ಬರೆದೊಯ್ದು
ನಿನ್ನವನೆನಿಪ್ಪ ಕನ್ನೂರ ಶಿವಲಿಂಗಪ್ಪ
ನುನ್ನತೋತ್ಸವದಿಂದ ಉಳಿವಿಯೊಳು ಹಚ್ಚಿರುವನೀಗೆಂಬ ಗುರುವೆ ಶರಣು ॥೪೮೪೯॥

ಉಳಿವಿಯೊಳಗಿಹ ಚೆನ್ನಬಸವನಾಲಯದ ಬಾ
ಗಿಲ ಮ್ಯಾಲೆ ಹಚ್ಚಿರುವನೆಂದರುಹಿಸುತ್ತಿರ್ದು
ಉಳಿವಿಗುರೆ ಪೋಗಿರುವ ಪರುಷೆಯವರುರೆ ನೋಡುತಿಹರೆಂದು ತಿಳಿಸುತೊಡನೆ ।
ಉಳಿವಿಯನುಳಿದು ಚೆನ್ನಬಸವನ್ನೈತಂದು ನಿ
ನ್ನೊಳಗಿರುವನೀಗೆಂಬುದಂ ಬಲ್ಲವರೆ ಬಲ್ಲ
ರುಳಿದಾದವರಿಗುರದೆ ತಿಳಿಯದೆಂದುರೆ ತಿಳಿಸುತೊಳಗಿರುವ ಗುರುವೆ ಶರಣು ॥೪೮೫೦॥

ಪೌಷ ಮಾಸವ ದಾಂಟಿದರೆ ಲೇಸೆನಿಪುದೆಂದು
ಪೌಷದಾದಿಯೊಳೆ ಗಂಗವ್ವೆಗುರೆ ತಿಳಿಸಿರಲ್

ಪೌಷ ಮಾಸವ ದಾಂಟದೇ ಪೌಷ ಬಹುಳ ದಶಮಿಯೊಳೆ ಸೊಲಬವ್ವನಿರದೆ ।
ಈಶನಾಜ್ಞೆಯೊಳೆ ನಾಶವನೆಯ್ದಿರುವಳೀಗ
ನಾ ಸೊಲಭ್ಬೆಯವ್ವನಳುತಿರೆ ಸಮ್ಮಿಸುವೆನೆಂದು
ಆಶುವಿಂ ನೀನೀಗ ಪೋಗಬಾರದುಯೆಂದು ತಿಳಿಸುತಿಹ ಗುರುವೆ ಶರಣು ॥೪೮೫೧॥

ಪೋಗುವುದು ಮುಂದೆ ಈಗಳೆ ಪೋಗಬಾರದ್ಯೆ
ಪೋಗಬೇಕೀಗ ಕಿತ್ತೂರಿಗೆಂದರುಹಿಸುತ
ಮಾಘ ಬಹುಳದಿ ತದಿಗೆಯೆನಿಪ ವಿಧುವಾರ ದಿನದಲ್ಲಿ ಹೊಂಗಲ್ಲನುಳಿಸಿ ।
ವೇಗದಿಂದುರೆ ನಡೆಸುತುರೆ ನಡೆದು ಮಾಲಿನ್ಯ
ಪೂಗಮಂ ನೀಗುವ ಮಲಾಪಹಾರಿಯ ನೋಡಿ
ನೀಗಿಸುವೆನೀ ನಾಡ ದೊರೆಯಘವನೆನುತ ನಲಿದುಲಿಯುತಿಹ ಗುರುವೆ ಶರಣು॥೪೮೫೨॥

ಕಿತ್ತೂರ ದೊರೆಯುರದೆ ಸತ್ತಿರುವನೀಗಳಾ
ಕಿತ್ತೂರ ದೊರೆಯರಸಿ ವೀರಾಂಬೆಯುರೆ
ಚಿತ್ತಜನ ತಾಪದಿಂ ಬೆಂದು ಬೆಂಡಾಗಿ ಸುಯ್ಗರೆಯುತಿಹಳೀ ಪಾಪಮಂ ।
ಕತ್ತರಿಸುವವರಾರು ಧರೆಯೊಳೆನುತಿರ್ದು
ಮತ್ತ ಮಾನವರ ಮಾನವ ಭಂಗಿಸುತ್ತೊಡನೆ
ಕತ್ತರಿಸುತಿಹೆನು ನಿನ್ನಿಂದಲೆ ಎನುತ ನಲಿದುಲಿದ ಗುರುವೆ ಶರಣು ॥೪೮೫೩॥

ಈಗಳುರೆ ಹಾಳು ಬಿದ್ದಿರುವರ ಮನೆಯ ನೋಡಿ
ವೇಗದಿಂ ಬಹೆನೆಂದು ತನ್ನದಿಯನುರೆ ದಾಂಟಿ
ಶ್ರೀಗುರು ಧ್ಯಾನದಿಂದುರೆ ನಡೆದು ಕಿತ್ತೂರನುರೆ ಕಂಡು ಕಡು ತವಕದಿಂ ।
ದೇಗುಲವನುರೆ ನೋಳ್ಪೆನೆಂದು ವಳಸಂಗದವ
ರಾಗಾರದೊಳ್ನಿಂದು ಎಂದಿನೋಲ್ ಸುಖಮಿರ್ದು
ದೇಗುಲವ ನೋಡುತುರೆ ಬಳಸಿ ತನ್ನೊಳು ತಾನೆ ನಲಿದುಲಿವ ಗುರುವೆ ಶರಣು॥೪೮೫೪॥

ಕಂದ:

ಶ್ರೀ ಶಾಲಿವಾಹನ ಶಕದೊಳ್
ಸಾಸಿರದೇಳ್ನೂರ ನಾಲ್ವತ್ತರ ಒಂಬತ್ತನೆ ।

ಯಾ ಸರ್ವಜಿನ್ನಾಮೌಬ್ಧವ
ಲೇಸೆನಿಪ ಮಾಘಮಾಸದಿ ಕೃಷ್ಣಾಷ್ಟಮಿಯೊಳ್ ॥೧॥

ಮೂರು ಪೆಸರೊಂದೆನಿಸಿದ ಕಿ
ತ್ತೂರರಸನಳಿದು ಮೂರುವರೆ ವರ್ಷಾಯ್ತೆನೆ ।
ಮೂರುವೊಂದೊಂದಿದ ಪೆಸರಿನ
ಭೂರಮಣನೆನಿಸಿ ನಿನ್ನಯ ಮಗನಹನೆಂತನೆ ॥೨॥

ವೀರ ಶಿವಲಿಂಗರುದ್ರ ಮ
ಹೀರಮಣನೆನಿಸಿ ವೀರಾಂಬೆಯನುರೆ ಕೂಡಿ ಕು ।
ಮಾರರಂ ಪಡೆಸಿ ನಿನ್ನ ಕು
ಮಾರಂ ತಾನೆನಿಸಿ ನಿನ್ನಂ ಭಜಿಸುವನನಿಶಂ ॥೩॥

ನಿನ್ನಂ ಭಜಿಸುತ್ತೊಡನೆ
ನಿನ್ನೀ ನಿರ್ಣಯ ಪುರಾಣವನೋದುತ ಪಾಡುತ ।
ನಿನ್ನವರಿಗುಣಿಸುತ ತಣಿಸುತ
ಚೆನ್ನಾಗಿ ಬಾಗಿ ಸದ್ಭಕ್ತಿಯೊಳುರೆ ಬಾಳ್ವಂ ॥೪॥

ನಿನ್ನ ಮಗನೆನಿಪ ಸಮಯದಿ
ನಿನ್ನಯ ಸೊಸೆಯೆನಿಸುತಿಹಳೀ ವೀರಾಂಬೆಯು ಕೇ ।
ಳೆನ್ನ ಮಗನೇ ಈಗಿನ್ನು
ಚನ್ನವ್ವೆಯ ಸೊಸೆಯೆನಿಪಳುರೆ ಸೂಚಿಸು ನಾಚಿಸು ॥೫॥

ಆನೆಂತು ಸೂಚಿಸುವೆನ್ನೈ
ಆನೆಂತು ನಾಚಿಸುವೆನ್ನೈ ಮದ್ಗುರುವರನೆ ।
ನೀನೇ ಸೂಚಿಸಿ ನಾಚಿಸಿ
ನೀನೇ ಮೋಚಿಸುವುದೈ ತದ್ವೈಧವ್ಯವನೆನೆ ॥೬॥

ತವಕದಿ ಸೂಚಿಸಿ ನಾಚಿಸಿ
ತವಕದಿ ಮೋಚಿಸುವೆನ್ನೈ ತದ್ವೈಧವ್ಯವ ನೆಲೆ

ಕುವರನೆ ಈ ಕಾಲಜ್ಞಾ
ನವ ತವಕದಿ ಪೇಳುಪೇಳೆಂದರುಪುವ ಗುರುವೇ ॥೭॥

ಎಂದು ಪೇಳೆಂದು ಕೇಳುವ
ಸಂದೇಹ ಬುದ್ಧಿಯುಳ್ಳಜ್ಞಾನಿಗಳಿಗೆ ನಾ
ನೆಂದೆಂದು ಪೇಳಬೇಕಲೆ
ತಂದೆಯೆ ತಿಳಿಸೆಂದು ವಂದಿಸೆ ತಿಳಿಸುವ ಗುರುವೆ ॥೮॥

ಇಂದೇ ಈಗೆಂದೊರೆಯೈ
ಇಂದೆನೆ ಈ ಜನ್ಮ ನಾಳೆ ಮುಂದಣ ಜನ್ಮಂ ।
ಕಂದನ ಈಗೆಂದೆನೆ ಇ
ನ್ನೊಂದಡೆ ಬರಿಸೆಂದು ನಿಸ್ಸಂದೇಹದಿ ತಿಳಿಯೈ ॥೯॥

ಇಂತು ತಿಳಿಸುತ್ತೊಡನೆ ನಿ
ರಂತರಮುರೆ ಹಾಳ ಬಿದ್ದರಮನೆಯಂ ತೋರಿಸಿ ।
ತಾಂ ತವಕದಿಂದ ಸುತ್ತಿ
ನೀಂ ತಳುಹದೆ ನಡೆಯೆನುತ್ತುರೆ ನಡೆಸುವ ಗುರುವೆ ॥೧೦॥

ನಡೆಯೆನುತ ನಡೆಸುತೊಡನೆ
ಕಡು ತವಕದಿ ಮಕ್ಕಳೆನಿಪರ ಮನೆಗಳ ನಿಟ್ಟಿಸಿ ।
ಇಡನೇ ಬೆಳವಡಿ ವೀರನ
ಗುಡಿಯೊಳ್ ಗುರುತವನಿಡಿಸಿ ನುಡಿಸುವ ಮದ್ಗುರುವೇ ॥೧೧॥

ಇಂತು ಕಾಲಜ್ಞಾನವನರಸುತ್ತಿರ್ದು
ಸಂತಸದಿ ಸಂಗನುರೆ ಕಟ್ಟಿದ ನದಿಯಲ್ಲಿ
ತಾಂ ತವಕದಿಂದೆ ಸೋಮೇಶ್ವರನ ಶತಕಮಂ ಬರೆಸಿಯುರೆ ಮುಗಿಸುತೊಡನೆ ।
ಸಂತಿಮೂಳರುಗಳುರೆ ತಿಳಿಯಲೆಂದುರೆ ದಯದಿ
ದಂತಿ ಚರ್ಮಾಂಬರ ಶರಣರಾಜ್ಞೆಯಿಂದ ನಿ
ಶ್ಚಿಂತೆಯಿಂ ಮಾಘ ಕೃಷ್ಣ ಚತುರ್ದಶಿಯೊಳುರದೆ ಬರೆಸಿರುವ ಗುರುವೆ ಶರಣು ॥೪೮೬॥

ಮಾಘ ಕೃಷ್ಣ ಚತುರ್ದಶಿಯೊಳುರದೆ ಬರೆಸಿ
ವೇಗದಿಂ ಮಿಂದು ಮಡಿಯುಟ್ಟು ಲಿಂಗವ ಭಜಿಸು
ತೀಗಳೇ ಹೊಂಗಲ್ಲಿಗುರೆ ಹೋಗಬೇಕೆಂದು ತಿಳಿಸುತ್ತ ಮತ್ತಮುರದೆ ।
ಈಗಳೇ ಹೋಗಬಾರದು ಇಲ್ಲಿರುವ ಭಕ್ತ
ರಾಗಾರಕುರೆ ಪೋಗದೇ ಇರ್ದು ನೋಡುತನು
ರಾಗದಿಂ ಬಂದಿತ್ತವರ ಭಿಕ್ಷೆಯಂ ಕೈಕೊಳುವುದೆಂಬ ಗುರುವೆ ಶರಣು ॥೪೮೬॥

ತಾವೆ ಬಂದಿತ್ತೆರಗಿದವರ ಭಿಕ್ಷೆಯ ಕೊಳು
ತಾ ವಗಂ ಶಿವಗಣ ಸಹಸ್ರ ನಾಮವನುರದೆ
ತೀವಿದಾನಂದದಿಂ ಬರೆಯೆಂದ ನೀಲಾಂಬೆಯೆಂಬವಳನುರದೆ ನೋಡಿ ।
ಈ ವ್ಯಾಳ್ಯದೋಳೊಲ್ಲೆನೆನಬಾರದೆನುತಿರ್ದು
ಸಾವಧಾನದಿ ಸತ್ವರದಿಂದ ಬರೆಸಿ ಬಳಿ
ಕೀ ವೂರೊಳಿನ್ನೊಂದನುರೆ ಬರೆದು ತಿಳಿಸುವುದೆನುತ್ತಿರುವ ಗುರುವೆ ಶರಣು ॥೪೮೭॥

ಇನ್ನೊಂದನುರೆ ಬರೆದು ತಿಳಿಸೆಂದು ನಿರವಿಸುವ
ಎನ್ನ ಗುರುವೇ ಎನಗೆ ತಿಳಿವಂತೆ ಪೇಳೆಂದು
ಚೆನ್ನಾಗಿ ಬಾಗಿರುವ ಬಾಲನಂ ನೋಡಿ ನಲಿದಾಡುತೊಡನೇ ತವಕದಿಂ ।
ನಿನ್ನವನ ಬಾಲಲೀಲಾ ತ್ರಿಕಾಲಜ್ಞಾನ
ವಂ ನಾಡೆ ನೋಡಿ ನಿರ್ಮಿಸಿದಂತೆ ಸಂತಸದಿ
ಇನ್ನು ಈ ಕಿತ್ತೂರ ಸಂಸ್ಥಾನಮಂ ಪಸರಿಸೈಯೆಂಬ ಗುರುವೆ ಶರಣು ॥೪೮೮॥

ನೀಗೆ ಪಸರಿಸು ಗುರುವೆ ಎಂದು ವಂದಿಸುತಿರ್ಪ
ಸೂನುಮಂ ನೋಡಿ ಮುಂಡಾಡಿ ಕೊಂಡಾಡಿ ಮಿಗೆ
ಸಾನುರಾಗದಿ ನಿನ್ನೊಳುರೆ ಬೆರೆಬು ನಾನೀಗ ಬರೆವೆನೆಂದರುಪುತೊಡನೆ ।
ತಾನೇ ಗಣಸಹಸ್ರ ನಾಮವ ಬರೆದ ಪುಸ್ತಕವ
ನಾನಂದದಿಂ ಪಿಡಿಸಿಯುರೆ ನೋಡಿಸುತ್ತಿರ್ದು
ನೀನೀಗ ಬರೆಯೆಂದು ಬರೆಸುತೊಡನೆ ಬರೆಯುತ್ತಿರುವ ಗುರುವೆ ಶರಣು ॥೪೮೯॥

ಇನ್ನು ಕಿತ್ತೂರ ಸಂಸ್ಥಾನದ ತ್ರಿಕಾಲ ಜ್ಞಾನಂ:

ಶ್ರೀಮನ್ನಿರ್ಣಯ ಪುರಾಣಿಯ ಬಾಲಸಂತರ್ಗತ ವಸ್ತುವೆನಿಪ ನಿರ್ಣಯ ಮಹಾಗುರುವೆ । ಕಿತ್ತೂರ ಕಲ್ಲಮಠದೊಡೆಯರಾದಿಯಾದ ಶಾಸ್ತ್ರಿಗಳಂತಮಾದ ಸಮಸ್ತ ಭಕ್ತ ಮಾಹೇಶ್ವರರಂತರ್ಗತ ವಸ್ತು ಮಿಗೆ ವಿಸ್ತರಿಸಿ ಕಿತ್ತೂರ ಸಂಸ್ಥಾನದ ತ್ರಿಕಾಲ ಜ್ಞಾನವನುರೆ ಜಾನಿಸಿ ಬರೆಸಿದುದೆಂತುಟದೇಂ ನಿಮಿತ್ತವೆನೆ, ಗಿಳಿಯೋದಿದೊಲೋದಿ ವಿನೋದಿಸುವ ಪಂಡಿತರ ತಂಡದೊಳ್ ಪಂಡಿತನೆನಿಸಿ ರಮಾಮಂಡಿತನೆನಿಸಿರ್ದ ಶಿವಲಿಂಗಸರ್ಜಾಹ್ವಯ ಮಹೀಶನೀ ಶಾಲಿವಾಹನ ಶಕದೊಳ್ ೧೭೪೫ನೆಯ ಸುಜಾನು ನಾಮ ಸಂವತ್ಸರದಲ್ಲಿ ಹೊಂಗಲಿನಲ್ಲಿ ನೆಲಸಿರ್ದ ನಿರ್ಣಯ ಭಿಕ್ಷುಕನಂ ಲಕ್ಷಿಸದೆ, ನಿರ್ಣಯ ಪುರಾಣಮಂ ಕಾಣದೆ, ನಿರ್ಣಯ ಪುರಾಣಿಯನುರೆ ಜಾಣತನದಿಂ ಜಾಣಿಸದೆ, ನಿರ್ಣಯ ಪಾದೋದಕದ ಬಳಕೆಯಿಂ ಪಾಕವನುರೆ ನಿರ್ಣಯದಿಂದೆಸಗಿಸಿ ನಿರ್ಣಯದಿಂದುಣಿಸುವ ವಾರ್ತೆಯಂ ಕೇಳಿಯುರೆ ಕೇಳದೆ, ಕೂಳತನದಿಂ ಬಾಳುವ ಖೂಳ್ವಣಿಗರಂ ಬೆಳೆಸುತ್ತ ತಾನುರೆ ಬೆಳೆಯುತ್ತ ಮತ್ತಂ ಮರೆವರಿವಿನನ್ಯಾಯನ್ಯಾಯದಿಂ ನಡೆವ ಲಿಂಗಜಂಗಮರಿ ಗುಣಿಸುತ್ತ ತಣಿಸುತ್ತ ತತ್ಪಾದೋದಕಪ್ರಸಾದವ ಕೈಕೊಂಡು ಉಂಡು ನಲಿಯುತ್ತ ಕೆಲೆಯುತ್ತೆ ಮಲೆಯುತ್ತಿರ್ದು, ತತ್ಸಂವತ್ಸರದಲ್ಲಿಯೇ ತನ್ನವರನುರೆ ಅಳಿಸಿ ಹೂಳಿಸಿ ತಾನಾಳುತಿರ್ದುದಂ ಬಲ್ಲವರೆ ಬಲ್ಲರಲ್ಲದೆ ಅರಿಯದಧಮರರಿಯರು. ಮತ್ತಂ ಮರೆವರಿವಿನನ್ಯಾಯನ್ಯಾಯದಿಂ ಮದಾಂಧನಾಗಿ ಬಾಗದೆ, ತನಗುರೆ ಬಾಗದಿರ್ದವರನುರೆ ಬಾಗಿಸುತ್ತಿರ್ದು ೧೭೪೬ನೆಯ ತಾರಣಾಹ್ವಯಮಹಾಯಾನದಲ್ಲಿ ಮಾಧವ ಜೇಷ್ಠಾಷಾಢ ಮಾನಗಳೊಳ್ ಪೂರ್ವ ದುಷ್ಕರ್ಮದೊಡವಿನಿಂದಾಮಯವಾವರಿಸಿ ಬಳಲುತ್ತಿರ್ದುದಂ ಬಲ್ಲವರೆ ಬಲ್ಲರಲ್ಲದೆ ಅರಿಯದಧಮರರಿಯರು.

ತತ್ಕಾಲದೊಳ್ ಬಳಲುವ ಬಳಲಿಕೆಯಂ ಕೇಳಿ ದಯಾರಸವ ತಾಳಿ ತದ್ರೋಗವ ನೀಗಿಸಲೋಸುಗಂ ನಿರ್ಣಯ ಪುರಾಣಿಯ ಜಾಣತನದಿಂದೊಂದು ಪತ್ರವ ತನ್ನವರಿಂದ ನಿರ್ಣಯದಿಂ ಬರೆಸಿ ಲಕೂಟಿಯಂ ಮಾಡಿಸಿ ತನ್ನವರ ಕರದೊಳ್ ಕೊಟ್ಟು ಕಳಿಸಲಾ ಲಕೂಟಿಯಂ ಶಿವಲಿಂಗ ಸರ್ಜನಿಗೆ ಮುಟ್ಟಿಸದೆ, ಹಿಂದಕ್ಕಿಟ್ಟ ಖೊಟ್ಟಿ ಮೂಳರನುರೆ ಕುಟ್ಟಿಸಿ ಕಾಲಿಗೆ ಹಗ್ಗವ ಕಟ್ಟಿಸಿ ಎಳೆಸಿ ಅಳಿಸಿರ್ದುದಂ ಬಲ್ಲವರೆ ಬಲ್ಲರಲ್ಲದೆ ಅಡಿಯಧಮರರಿಯರು.

ಹಿಂದಕ್ಕಿಷ್ಟು ಲಕೂಟಿಯುಂ ಕಟ್ಟಕ್ಕರದಿ ಚಕ್ಕನೆ ತಕ್ಕೊಂಡು ನಯ ಭಯಾನ್ವಿತ ಭಕ್ತಿಯಿಂ ತಮ್ಮ ಲಿಂಗಪೂಜೋಪಕರಣಗಳನಿಡುವ ಪೆಟ್ಟಿಗೆಯೊಳಗಿಟ್ಟಿರ್ದ ಒಡೆಯರಿಗೆ ಬಂದ ವಿಪತ್ತನುರೆ ಪರಿಹರಿಸಿ ಎಂದಿನಂದದಧಿಕಾರಿಗಳೆನಿಸಿರ್ದುದಂ ಬಲ್ಲವರೆ ಬಲ್ಲರಲ್ಲದೆ ಅರಿಯದಧಮರರಿಯರು.

ಮತ್ತಮಾ ಶಿವಲಿಂಗರುದ್ರಸರ್ಜಂ ತಾನುರೆ ಲಿಂಗಾಂಗಿಯೆನಿಸಿ ಅಲಿಂಗಿಗಳೆಸಗಿರ್ದೌಷಧದ ಗುಳಿಗೆಗಳಂ ಗಳಗಳನೆ ಮುಕ್ಕತನದಿಂ ತಕ್ಕೊಂಡು ತದೇವ ಸಂವತ್ಸರದ ಭಾದ್ರಪದ ಬಹುಳದೊಳಳಿದಿರ್ದುದಂ ಬಲ್ಲವರೆ ಬಲ್ಲರಲ್ಲದೆ ಅರಿಯದಧಮರರಿಯರು.

ತಚ್ಛಿವಲಿಂಗರುದ್ರಸರ್ಜನಳಿಯಲವನರ್ಧಾಂಗಿಯೆನಿಪ ವೀರಾಂಬೆಯು ಪ್ರಥಮ ಋತುಗಾಣದೆ ಇನ್ನೂ ಗೌಡ್ತಿಯೆನಿಸಿದಲನ್ಯಾಯ ನ್ಯಾಯದಿಂ ಸುತನೆನಿಸಬಾರದೆಂಬುವಳತಿಯ ತಿಳಿಯದ ಕಳತಿಗಳ ಮಾತನುರೆ ಕೇಳಿ ಇ[ನ್ನು] ನಾನೇ ಸಾಮ್ರಾಜ್ಯವನಾಳುವೆನೆಂದು x x x x x ತನೆನಿಸಿ ಶಿಖಾಧಿಪತಿಯೆನಿಸಿ ಸವಾಯಿ ಮಲ್ಲಸರ್ಜನೆಂದು ತನ್ನ ಗಂಡನ ಪೆಸರಿಟ್ಟು ಪೊಮ್ಮಗನಂ

ಮುಂದಿಟ್ಟುಕೊಂಡು ಚೆನ್ನಾಂಬೆಯೆಂಬವಳು ಚೆನ್ನಾಗಿ ಕೀರ್ತಿವಡೆದಿರ್ದು ಕಾರ್ತಿಕ ಮಾಸವ ಕಳೆದು ಮಾರ್ಗಶೀರ್ಷ್ಯದಲ್ಲಿ ಮಾರ್ಗಣವಿಡಿದು ಕಾಡುತ್ತಿರ್ದು, ತಹೇವ ಮಾರ್ಗಶೀರ್ಷದಲ್ಲಿಯೇ ಮಾರ್ಗಣಮಂ ಬಿಟ್ಟು ಕಂಗೆಟ್ಟು ಅರಮನೆಯಂ ಪೊಕ್ಕು ಕೈಯೊಳಗೆ ಸಿಕ್ಕು ಕಳವಳಿಸುತಿರ್ದುದಂ ಬಲ್ಲವರೆ ಬಲ್ಲರಲ್ಲದೆ ಅರಿಯದಧಮರರಿಯರು.

ಕಳವಳಿಸುತಿರ್ದುದಂ ಕೇಳಿ ದಯಾಳು ಎನಿಪ ನಿರ್ಣಯ ಮಹಾಪುರಾಣಿಯಂ ಮಾಣದೆ ಜಾಣತನದಿಂ ಕುಂಪಣಿ ಸರಕಾರದವರೊಳ್ ಪೊಕ್ಕು ಸಿಕ್ಕಿರ್ದವರನುರೆ ಹೊರಗೆಡವಿ ಯುಕ್ತಿಯಂ ಬಸದುಕ್ತಿಯಿಂ ತನ್ನ ನಿರ್ಣಯ ಪುರಾಣಿಯುರೆ ನೆಲಸಿರ್ದ ಹೊಂಗಲಿನಲ್ಲಿಯೇ ನಿಲ್ಲಿಸಲೊಡನೆ ಮಾಘ ಶುದ್ಧದಲ್ಲಿ ಗೌರಿ ಎನಿಸಿರ್ದ ವೀರಾಂಬೆಯು ಪ್ರಥಮ ಋತುಗುಡು ಗಂಡನಂ ಬಯಸಿ ಹಂಬಲಿಸಿ ಬಳಲುತ್ತಿರ್ದುದಂ ಕೇಳಿ, ನಿರ್ಣಯ ಪುರಾಣಿಯು ಮಲಮಲನೆ ಮರುಗಿ ಮನಕರಗಿ ಈ ಪಾಪವನೀಗಳೇ ಲೋಪನ ಮಾಡಲಾಗದೆ ಮುಂದೆ ಮಾಡುವೆನೆಂದು ಮನದಂದು ಮಾಣ [ದೆ ತಾ] x x ನೊಂದು ಪತ್ರವ ಬರೆಸಿ ಕಳಿಸುವೆನೆಂದು ವೀರಾಂಬೆಯೆಂಬಾಕೆಯು ಮುಂಚೆ ನೋಡುವುದು, ಹಿಂಚೆ ಚೆನ್ನಾಂಬೆಯಾದಿಯಾದ ಸಮಸ್ತ ಪರಿಜನ ಪುರಜನರು ನೋಡುವುದಿದಕ್ಕೊಡಂಬಟ್ಟರೆ ಬರೆಸಿಕಳಿಸುವೆನೆಂದು ತನ್ನವರಿಂದ ಹೇಳಿಸಲಾ ಹೇಳಿಕೆಯಂ ಕೇಳಿ ಚೆನ್ನಾಂಬೆಯೆಂಬವಳುರೆ ಖತಿಯಂ ತಾಳಿ ನುಡಿದಳದೆಂತೆನೆ : ಹಿರಿಯ ಬರಲಾಗಿ ಸವಾಯಿ ಮಲ್ಲಸರ್ಜನೆನಿಪ ದೊರೆಯಿರಲಾಗಿ ನಮ್ಮೀರ್ವರಂ ಬಿಟ್ಟು ವೀರಾಂಬೆಯೆಂಬವಳೆ ಮುಂಚೆ ನೋಡುವುದೆಂದು ನುಡಿವ ನಿರ್ಣಯಪುರಾಣಿಯೆನಿಸನವನಾರು ? ಶಿರಸ್ಸಿರಲಾಗಿ ಮೊಣಕಾಲಿಗೆ ಪಟ್ಟವೇ? ಎಂದು ಮುಂದುಗಾಣದೆ, ಅನಾದರದಿಂ ನುಡಿಯಲೊಡನೆ ಇನ್ನಿಲ್ಲಿ ನಿಲ್ಲಬಾರದೀಗೆಂದು ನಿರ್ಣಯ ಪುರಾಣಿಯು ಹೊಂಗಲನುರೆ ಬಿಟ್ಟು ಬಯಲವಾಡದ ವರತಿಯ ಸನ್ನಿಧಾಗೆ ಹೋಗಿ ಅಲ್ಲಿಯುರೆ ನೆಲಸಲೊಡನೆ, ಫಾಲ್ಗುಣ ಬಹುಳ ಪ್ರತಿಪದ್ಯುಷಃಕಾಲದಲಿ ಕುಂಪಣಿ ಸರಕಾರದಾಜ್ಞೆಯಿಂ ಜೇಬರೀನ ಸಾಹೇಬನುರೆ ಬಂದು ಹೊಂಗಲಿನಲ್ಲಿರ್ದ ಸವಾಯಿ ಮಲ್ಲಸರ್ಜನೆಂಬ ಹುಡುಗನಂ ಹುಡುಕಿ ಹಿಡಿದು, ತಜ್ಜನನೀ ಜನಕರಿರ್ದ ಊರಿಗೆ ಮುಟ್ಟಿಸಿ, ನಮ್ಮ ಮಗಂ ನಮಗೊಪ್ಪಿದನೆಂದು ತಜ್ಜನನೀ ಜನಕದಿಂ ಪತ್ರವನುರೆ ಬರೆಸಿ, ಶಿಖಾಧಿಪತಿ ಇವನಲ್ಲಲ್ಲವೆನಿಸುತ್ತಿರ್ದುದಂ ತನ್ನವರ ಮುಖದಿಂ ಕೇಳಿ, ಬಯಲವಾಡದ ವರತಿಯೊಳ್ ಕುಳಿತು ತನ್ನೊಳಗೆ ತಾನೆ ನಗುತಿರ್ದುದಂ ಬಲ್ಲವರೆ ಬಲ್ಲರಲ್ಲದೆ ಅರಿಯರಧಮರರಿಯರು.

ತನ್ನೊಳಗೆ ತಾನೆ ನಗುತಿರ್ದು ಮತ್ತಂ ಶಿಖಾಧಿಪತಿಯೆನಿಸಿರ್ದ ಮಗನಂ ಕಳೆದೆವೆಂದು ಕಳವಳಿಸುತ್ತ ಹೊಂಗಲಿನಲ್ಲಿರುವ ಚೆನ್ನಾಂಬೆಯಾದಿಯಾದವರೆಲ್ಲರು ತೊಳಲುತ್ತ ಬಳಲುತ್ತಳುತ್ತಿರ್ದುದಂ ಕೇಳಿ, ಕೃಪಾರಸವ ತಾಳೆ, ಇನ್ನು ಶಿಖಾಧಿಪತಿಯೆನಿಸುತೀ ಸಂಸ್ಥಾನವ ಮುನ್ನಿನೋಲ್ ನಿಲ್ಲಿಸಿ ಪಸರಿಸುವೆನೀಗಳೇ ಪಸರಿಸಬಾರದೆಂದು ಕುಂಪಣಿ ಸರಕಾರದವರಿಂ ಹಳಿಸುತ್ತಳತೆಯಿಂದುಣಿಸುತ್ತ ತಣಿಸುತ್ತ ಅತ್ತ ಸೊಸೆಯರನೊಂದೆಯೆನಿಸಿ ಬೆರಸಿ ಬ್ಯಾರಿಲ್ಲೆನಿಸುತ್ತ ಮೂವತ್ತು ತಿಂಗಳ ತನಕ ನಿಷ್ಕಾಪಟ್ಯದಿಂ ಮ್ಯಾಲೆಮ್ಯಾಲೆ ಖರ್ಚಿಗೆ ಕೊಡಿಸುತ್ತಿರಲೊಡನೆ ೧೭೪೯ನೆಯ ಸರ್ವಜನ್ನಾಮ ಸಂವತ್ಸರದ ಶ್ರಾವಣಮಾಸದೊಳತಿಗೆಟ್ಟಾಚರಿಸುವವರಿಗೆ ಅಳತಿಗೆಟ್ಟುಣಿಸುವದಂ ಕೇಳಿ, ತಾನು ಮರೆಯಾಗಿ ನಿಂದು, ಕಾಪಟ್ಯದಿಂದ ಸಖಾರಾಮನೆಂಬ ಚಿಟನೇಸಿಯಿಂದ ಹೇಳಿಸಲಾ ಹೇಳಿಕೆಯಂ ಕೇಳಿ ತಿಳಿಯದೆ. ಅಳತಿಯ ತಿಳಿಯದ ಕಳತಿಗಳ ಮಾತನುರೆ ಕೇಳಿ ತನ್ನವನನುರೆ ತಿರುಗಿಸಲೊಡನೆ

ಅತ್ತೆ ಸೊಸೆಯರನುರೆ ಬ್ಯಾರೆನಿಸಿ, ಖರ್ಚಿಗೆ ಕೊಡುವುದನುರೆ ಬಿಡಿಸಿ. ತನ್ನೊಳಗೆ ತಾನೆ ಕ್ರೈಪ್ಲೊಂಯ್ದು ನಗುತಿರ್ದುದಂ ಬಲ್ಲವರೆ ಬಲ್ಲರಲ್ಲದೆ ಅರಿಯದಧಮರರಿಯರು.

ತನ್ನೊಳಗೆ ತಾನೆ ನಗುತಿರ್ದು ಮತ್ತಂ ಖರ್ಚಿಗೆ ಕೊಡುವುದಂ ಬಿಡಿಸಿ ಈಗಳಾರು ತಿಂಗಳಾಗುತ್ತ ಬಂತು, ಪರ್ಥಂತು ಸಮಂತು ತಿಳಿಯಲೊಲ್ಲದು, ಖರ್ಚಿಗೆ ಕೊಡುವುದನ್ನು ಬಿಡಿಸಿ ಕಷ್ಟಬಡಿಸಬಾರದೆಂದು ಮನದಂದು, ದಯದಿಂದ ಎಂದಿನಂದದಿ ಕೊಡಿಸುವೆನೆನುತ್ತಿರ್ದು, ಮತ್ತಂ ಇನ್ನು ಕಡು ತವಕದಿಂ ತಿಳಿಸಿ, ತತ್ಪಾಪವನುಳಿಸಿ, ಈ ಸಂಸ್ಥಾನಮಂ ಬೆಳೆಸಿ, ನಾನುರೆ ಬೆಳೆವೆನೆಂದು ತನ್ನೊಳಗೆ ತಾಂ ತಿಳಿದು, ತಳಹದೇ ಹೊಂಗಲ್ಲಿನಿಂ ಕಿತ್ತೂರಿಗೆಯ್ತಂದು, ತನ್ನವರೆನಿಪ ವಳಸಂಗದವರಾಲಯದಲ್ಲಿ ಎಂದಿನಂದದಿ ನಿಂದು, ಮಾಘ ಕೃಷ್ಣಾಷ್ಟಮಿಯೊಳರಮನೆಯಂ ಪೊಕ್ಕು ನಸುನಕ್ಕು, ಇಕ್ಕೆಲದೊಳಿಟ್ಟಿರ್ದ ಕಟ್ಟಿಗೆಗಳೊಟ್ಟಿಲವನುರೆ ನಿಟ್ಟಿಸಿ, ಮಲಮಲನೆ ಮರುಗಿ ಮನದೊಳುರೆ ಕರುಣಮುದಿಸಿ, ಈ ಅರಮನೆಯನಿನ್ನುರೆ ಬಿಚ್ಚಿಸಬಾರದು, ದೀಪವನುರೆ ಹಚ್ಚಿಸಿ, ಈ ಸಂಸ್ಥಾನಮಂ ಪೆಚ್ಚಿಸುವೆ ನಾನೆಂದು ತನ್ನೊಳ್ ತಾನೆ ನಲಿದುಲಿದು, ಮತ್ತ ಮೀಗಳೇ ಪೆಚ್ಚಿಸಲಾಗದು, ಇನ್ನು ಮುಂದುರೆ ಬರುವ ೧೭೫೦ ನೆಯ ಸರ್ವಧಾರಿ ಸಂವತ್ಸರದಲ್ಲಿ ಈ ಅರಮನೆಗೆ ದೀಪ ಹಚ್ಚಿಸಿ, ಪೆರ್ಚಿಸಿ, ಸರ್ವರಿಂ ನಿರ್ಣಯ ಪುರಾಣಿಯೆನಿಸನಿವನಹು ದಹುದೆನಿಸಿಕೊಳುವೆ ನಾನೆಂದು ತನ್ನೊಳಗೆ ತಾನೆ ನಲಿದುಲಿಯುತ್ತಿರ್ದುದಂ ಬಲ್ಲವರೆ ಬಲ್ಲರಲ್ಲದೆ ಅರಿಯದಧಮರೀಗರಿಯರು.

ಇಂತೀ ಕಿತ್ತೂರ ಸಂಸ್ಥಾನದ ತ್ರಿಕಾಲಜ್ಞಾನವನುರೆ ಜಾನಿಸಿ ಮಾನಸದಿಂ ತಿಳಿದು ಈ ತಳದೊಳಿರುವ ಸಮಸ್ತ ಪ್ರಾಣಿಗಳಿಗೆ ತಿಳಿಸಲೋಸುಗಮೀ ಫಾಲ್ಗುಣ ಶುದ್ಧ ೯ ನವಮಿ ಭಾನುವಾರ ಪ್ರಥಮ ಯಾಮದೊಳ್ ಬರೆಸಿರ್ದುದಿದು ವಿದಿತಂ ವಿದಿತಂ ವಿದಿತಂ ಮಂಗಲಮಸ್ತು, ಕಲ್ಯಾಣಂ ಭವತು. ಭದ್ರಂ ಭೂಯಾತ್.

ವಾರ್ಧಕ ಷಟ್ಪದಿ:

ಇಂತು ಈ ಸಂಸ್ಥಾನದ ತ್ರಿಕಾಲಜ್ಞಾನ
ವಂ ತವಕದಿಂ ಬರೆಸುತುರೆ ಬರೆದು ನಿ
ಶ್ಚಿಂತೆಯಿಂದಿನ್ನು ಆಶೀರ್ವಾದ ಪತ್ರಮಂ ಬರೆಯೆಂದು ನಿರಮಿಸುತಿರೆ ।
ಸಂತೆಮೂಳರು ನಗುವರೆಂದು ವಂದಿಸಲು ಈ
ಸಂತೆಮೂಳರ ದಂತಮಂ ಮುರಿಸಿ ಬಳಿಕ ನಿ
ಶ್ಚಿಂತೆಯಿಂ ತೋರಿಸುವನಕ ಬರೆದಿಡುಯೆಂದು ಬರೆಸುತಿಹ ಗುರುವೆ ಶರಣು ॥೪೮೭೦॥

ಅಥ ಆಶೀರ್ವಾದ ಪತ್ರಂ :

ಶ್ರೀಮನ್ನಿರ್ಣಯ ಪುರಾಣಿಯ ಬಾಲನಂತರ್ಗತ ವಸ್ತುವೆನಿಪ ನಿರ್ಣಯ ಮಹಾಗುರುವೆ, ಕಿತ್ತೂರ ದೊರೆಯೆನಿಸಿರ್ದ ಶಿವಲಿಂಗರುದ್ರ ಸರ್ಜನರ್ಧಾಂಗಿಯೆನಿಪ ವೀರಾಂಬೆಯಂಬುವಂಭೋರುದಾಂಬಕದ ರಾಕಾ ನಿಶಾಕರಾನನದ ಮಾನಿನಿಗೆ । ಸ್ವಸ್ತಿ ಶ್ರೀ

ಜಯಾಭ್ಯುದಯ ನೃಪ ಶಾಲಿವಾಹನ ಶಕದ ೧೭೪೯ನೆಯ ಸರ್ವಜಿನ್ನಾಮ ಸಂವತ್ಸರದ ಫಾಲ್ಗುಣ ಶುದ್ಧ ದಶಮೀ ಚಂದ್ರವಾರ ಚಂದ್ರೋದಯ ಸಮುದಯದತ್ತಣಿಂದೇಕಾದಶೀ ಮಂಗಳವಾರದೊಳ್ತಿಂಗಳನುರೆ ಮೂಡುವದಕಿಂ ಮುಂದೆ ನಯಂ ಮೂಡಿಯುರೆ ನೋಡಿ ದಯಾರಸವ ಧರಿಸಿ ಬರೆಸಿದಾಶೀರ್ವಾದ ಪತ್ರವಿದೇಂ ನಿಮಿತ್ತವೆನೆ; ಶ್ರೀಮದ್ವಿದ್ವಜ್ಜನ ವಿಲೋಲ ಶಿವಲಿಂಗರುದ್ರಸರ್ಜನೀ ಶಾಲಿವಾಹನ ಶಕದ ೧೭೪೫ ನೆಯ ಸುಭಾನು ಸಂವತ್ಸರದಲ್ಲಿ ಸಲ್ಲೀಲೆಯಿಂ ಮಹೋತ್ಸವದಿಂ ನಿನ್ನನುರೆ ಮದುವೆಯಾಗಿ, ತಾನುರೆ ಬೀಗಿ ನಿನ್ನಂ ತಾಗಿಯುರೆ ತಾಗದೆ ಇರಲಾಗಿ, ಶಕ ೧೭೪೬ನೆಯ ತಾರಣಾಬ್ಧದಲ್ಲಿ ತಾರಕಾರಿಯವತಾರಿಯೆನಿಪಾತನೀ ತಾಲೂಕದಲ್ಲಿಯೇ ಅವತರಿಸಲಾ ತಾರಣಾಹ್ವಯ ಹಾಯನದಲ್ಲಿಯೇ ಮೆಲ್ಲನೆ ಮಹಾರುದ್ರನ ಕೋಪ ಪ್ರಸಾದದಿಂ ಲೋಪವಾಗಿ, ಪೂರ್ವನಳಿದವನೆನಿಸಿಹನೀಗ ಇನ್ನು ಮುಂದುರೆ ಬರುವ ೧೭೫೦ನೆಯ ಸರ್ವಧಾರಿ ಸಂವತ್ಸರದಲ್ಲಿ ಸರ್ವೇಶ್ವರನ ಕರುಣ ಪ್ರಸಾದದಿಂ ಪುನರ್ಜಾತನೆನಿಸಿ ಪೂರ್ವವನಳಿದು ಪುನರ್ಜಾತನೆನಿಸಿರ್ದೊರ್ವ ಶಿವಶರಣ ನಸುವಿನೊಳ್ ಪ್ರವೇಶಿಸಿರ್ದು, ಮತ್ತಂ ತನ್ನೊಳ್ ಬೆಳವಡಿಯ ಸರ್ಜಾಹ್ವಯಮಹೀವರನೆನಿಸಿ ನಿನಗೆ ಪುನರ್ಭವ ಪುರುಷನೆನಿಸಿ, ನಿನ್ನೊಡಗೂಡಿ ನಿನ್ನಿಂ ಕುಮಾರನಂ ಪಡೆಸಿ ತಾನೆನ್ನ ಕುಮಾರನೆನಿಸಿ ನೀನೆನ್ನಯ ಸೊಸೆಯೆನಿಸುತೀ ರಸೆಯೊಳುರೆ ಪಸರಿಸಿ ರಸಿಕತನದಿಂದೀ ರಾಜ್ಯಸಾಮ್ರಾಜ್ಯವನಾಳುತ್ತುರೆ ಬಾಳುವುದೆಂದು ಹೆಂದದಾನಂದದಿಂ ಬರೆಸಿದೀ ಆಶೀರ್ವಾದ ಪತ್ರವನುರೆ ನೇತ್ರದಿಂ ನೋಡಿ, ವಿಸ್ಮಯಾಂಬುಧಿಯೊಳೋಲಾಡಿ ತನ್ಮನೋ ವೈಕಲ್ಯವನೀಡಾಡಿ, ನಿನ್ನಂತರಂಗದೊಳಿರ್ದ ಮಾಲಿನ್ಯವನೋಡಿಸಿ, ಅನ್ಯಾಯನ್ಯಾಯ ನಿರ್ಣಯಗಳನುರೆ ತಿಳಿಸುವ ನಿರ್ಣಯ ಪುರಾಣಿಯ ರಾಣಿಯನುರೆ ಜಾನಿಸಿ ಜಾಣತನದಿಂದಾಲೋಕಿಸಿ, ಸಂತೋಷಿಸಿ ನಿರಂತರಮುರೆ ಸುಖಿಸುತ್ತೀಗಳನುರಾಗದಿಂ ರಾಜ್ಯ ಸಾಮ್ರಾಜ್ಯವನಾಳಿಸುತ್ತಾಳುತ್ತಿರುವ ಕುಂಪನೀ ಸರಕಾರದವರಿಗೆ ತೋರಿಸಿ ಮನ್ಮನೋರಥವ ಕೈಸಾರಿಸಿ, ದುರಾಚಾರಿಗಳೊಳಗಿರುವ ದುರಾಚಾರತನವನ ನಾಚಾರಿಗಳೊಳಗಿರುವನಾಚಾರತನವನುರೆ ನಿವಾರಿಸಲೋಸುಗಂ ಬರೆಸಿರ್ದುದಿದು ವಿದಿತಂ ವಿದಿತಂ ವಿದಿತಂ. ಮಂಗಲಮಸ್ತು ಕಲ್ಯಾಣಂ ಭವತು ಭದ್ರಂ ಭೂಯಾತ್. ಶ್ರೀ ಶಿವಾಯನಮಃ

ವಾರ್ಧಕ ಷಟ್ಪದಿ :

ಇಂತು ಆಶೀರ್ವಾದ ಪತ್ರವನುರದೆ ಬರೆಸಿ
ಸಂತಸದಿನೀಗಳೇ ಕಳಿಸಬಾರದೆ ಮಗನೆ
ಸಂತೆಮೂಳರು ನೋಡಿ ನಕ್ಕರೂ ನಗಲಿ ನೀನಕ್ಕರದೊಳೀವಹಿಯೊಳೆ ।
ಪಂತಿವಿಡಿದುರೆ ಬರೆವುದೆಂದುರದೆ ಬರೆಸಿ ನಿ
ಶ್ಚಿಂತೆಯಿಂ ವಳಸಂಗದವರಾಲಯದೊಳಿಡಿಸಿ
ನೀಂ ತವಕದಿಂದೀಗ ಹೊಂಗಲಕೆ ನಡೆಯೆನುತ್ತುಲಿವ ಗುರುವರನೆ ಶರಣು ॥೪೮೭೧॥

ಹೊಂಗಲಕೆ ನಡೆವುದೆಂದುರೆ ತಿಳಿಸುತ್ತೊಡನೆ
ಹೊಂಗಲಕೆ ಈಗಳೆ ಹೋಗಬಾರದು ಇದೇ
ತಿಂಗಳೊಳಗೆ ವ್ಯಾಸಕರವನುರೆ ಕಟ್ಟಬ್ಯಾಡರಿ ವೃಷಧ್ವಜಕೆ ಎನುತ ।
ಡಂಗುರವ ಸ್ಸಾರಿಸುತ್ತಿಹರು ಸರಕಾರದವ
ಹಿಂಗಡಲ ಕಂದನಂ ತಳೆದಿರ್ವ ಮಗನೆ ನೀಂ
ಡಂಗುರವನುರೆ ಹೊಯ್ಯು ಮುಂದೆ ಬಹ ಸರ್ವಧಾರಿಯೊಳೆಂದ ಗುರುವೆ ಶರಣು॥೪೮೭೨॥

ಮುಂದೆ ಬಹ ಸರ್ವಧಾರೀ ವರ್ಷದೊಳಗೆ ಎ
ನೆಂದು ಡಂಗುರವನುರೆ ಹೊಯ್ಯಬೇಕೈ ಗುರುವೆ
ನೀಂ ದಯದಿ ತಿಳಿಸೆಂದು ವಂದಿಸುತ್ತಿರಂ ಮಗನನುರೆ ನೋಡಿ ನಲಿಯುತೊಡನೆ ।
ಅಂದು ನಾನುರೆ ತಿಳಿಸಿ ನಿನ್ನಿಂದ ಹೊಯ್ಸುತಿಹೆ
ನಿಂದು ನೀನಿಲ್ಲಿರುವ ಭಕ್ತರಂ ಪರಿಕಿಸುವು
ದೆಂದು ವಳಸಂಗದವರಾಲಯದಿ ಪೊರಮಟ್ಟು ನಡೆಯುತಿಹ ಗುರುವೆ ಶರಣು ॥೪೮೭೩॥

ವಳಸಗದವರ ಮನೆಯಂ ಬಿಟ್ಟು ಪೊರಮಟ್ಟು
ಗಳಗಳನೆ ಶಶಿವಾರ ಪೇಟೆಗೈತರುತ ಅಂ
ಗಳದಲ್ಲಿ ನಿಂದು, ನಿಟ್ಟಿಸಲೊಡನೆ ಶರಣಾರ್ಥಿಯೆಂದು ವಂದಿಪ ಬಗುತನಂ ।
ಉಳಿದು ಮುಂದಕೆ ಪೋಗಬಾರದೆಂದುರೆ ತಿಳಿದು
ತಳಹದೇ ತದ್ಗೃಹದಿ ಲಿಂಗಾರ್ಚನೆಯನೆಸಗಿ
ನಲವಿನಿಂ ಮುಂದಿಟ್ಟು ಪೊಡಮಟ್ಟವೋದನವ ಕೈಕೊಂಡ ಗುರುವೆ ಶರಣು ॥೪೮೭೪॥

ಮುಂದಿಟ್ಟು ಪೊರಮಟ್ಟುವೋದನವ ಕೈಕೊಂಡು
ಎಂದಿನಂದದಿ ಬಟ್ಟಲದಿ ನೀಡಿ ಕೊಂಡುಂಡು
ಇಂದು ಈ ಮನೆಯ ಬಗುತಂ ಎನ್ನ ದೆಸೆಯಿಂದ ಮಾಡಿದವನಲ್ಲವೆನುತ ।
ಅಂದದಿಂ ಸಂತೃಪ್ತಿಯಾಗದೇ ಕೈದೊಳೆದು
ಇಂದುವಾರದ ಪೇಟೆಗೈತಂದು ನಿಂದು ನಲ
ವಿಂದ ಲಿಂಗಾರ್ಪಿತಕೆ ಅನುಕೂಲವಾದಪುದೆನುತಿರ್ದ ಗುರುವೆ ಶರಣು ॥೪೮೭೫॥

ಲಿಂಗಾರ್ಪಿತಕ್ಕೆ ಅನುಕೂಲವಾದಪುದೆ ಎನೆ
ಜಂಗಮರ ಮಠಕೆ ಜಂಗಮರು ಬರುವರು ಎಂಬ
ಮಂಗತನದನ್ಯಾಯ ನ್ಯಾಯಮಂ ಬಿಟ್ಟು ಪೊಡಮಟ್ಟು ಸದ್ಭಕ್ತಿಯಿಂದ ।
ತಂಗುಳನ್ನವನುಣ್ಣೆನೆನೆ ಬಿಸಿಯವೋದ ನವ
ಲಿಂಗಾರ್ಚನೆಯನೆಸಗುವನಿತರೊಳ್ಮಾಡಿಸುತ
ಲಿಂಗ ಜಂಗಮಕುಣಿಸಿ ತಣಿಸಿದವನಂ ನೋಡಿ ನಲಿದುಲಿವ ಗುರುವೆ ಶರಣು ॥೪೮೭೬॥

ಈತನುರೆ ಶಾಸ್ತ್ರಿಯೋ ಶಾಸ್ತ್ರಿಯನುಜಾತನೋ
ಶಾಸ್ತ್ರಿಗಳ ಜಾಮಾತನೋ ಎನುತ ಈ ತರುಣಿ
ಈತನುರೆ ಹೇಳಿದೋಲ್ ಕೇಳಿ ಸಂತಸವನುರೆ ತಾಳುತೊಡನೆ ।
ಓತು ಸದ್ಭಕ್ತಿಯಿಂದಡುಗೆಯಂ ಮಾಡಿ ಸಂ
ಪ್ರೀತಿಯಿಂ ಮುಂದಿಟ್ಟು ಪೊಡಮಟ್ಟಳೆನುತಿರ್ದು
ಪೋತನೇ ನಿನಗಿನ್ನು ಪೊಡಮಡದರಾರು ಹೇಳೆನುತಿರುವ ಗುರುವೆ ಶರಣು ॥೪೮೭೭॥

ವೀರ ಶಿವಲಿಂಗರುದ್ರನ ಸತಿಯೆ ಸೊಸೆಯೆನಿಸಿ
ವೀರ ಶಿವಲಿಂಗ ರುದ್ರನೆ ನಿನಗೆ ಸುತನೆನಿಸ
ಲೀ ರಾಜ್ಯದೊಳಗಿರುವ ಭಕ್ತ ಮಾಹೇಶ್ವರರು ನಿನ್ನನುರೆ ನೋಡುತೊಡನೆ ।
ಸಾರ ಸದ್ಭಕ್ತಿಯಂ ಪೊಡಮಡುವರೆನುತಿರ್ದು
ಆರಿಗುರೆ ತಿಳಿಸಬಾರದು ಈಗಳೆಂದು ಶಶಿ
ವಾರ ಪೇಟೆಯನುಳಿಸಿ ವಳಸಂಗದವರ ಮನೆಗೈತಂದ ಗುರುವೆ ಶರಣು ॥೪೮೭೮॥

ವಳಸಂಗದವರ ಮನೆಗೈತಂದು ನಿಂದು ನಿ
ರ್ಮಳ ಲಿಂಗಮಂ ಪಿಂಗದೇ ಭಜಿಸುತಿರ್ದು ಈ
ವಳಸಂಗದವರನುರೆ ಪರಿಕಿಸಲ್ಬಾರದ್ಯೆ ಈಗಳೇ ಎಂಬುತೊಡನೆ ।
ತಳಹದೇ ಲಿಂಗಾರ್ಪಿತವ ಮಾಡಿ ಕಿತ್ತೂರ
ನುಳಿದು ಸಂಗನಹಳ್ಳಿಯೊಳಗೊಂದಿರುಳಗಳೆದು
ಹೊಳೆಯನುರೆ ದಾಂಟಿ ಹೊಂಗಲಿನೊಳ್ ತನ್ನವರನೊಂದಿರುವ ಗುರುವೆ ಶರಣು॥೪೮೭೯॥

ತನ್ನವರನೊಂದಿ ಎಂದಿನೊಲು ಸುಖಿಸುತ್ತಿರ್ದು
ಅನ್ಯಾಯದವರನುರೆ ಹುರಿಸುತಿಹೆನಿಂತೆನುತ

ಪುಣ್ಣಿಮೆಯ ದಿನದಲ್ಲಿ ಜೋಳವನುರದೆ ಹುರಿಸಿ ಇರುಳಿನೊಳುರೆ ಚೆಲ್ಲಿಸಿ ।
ನನ್ನಿಯಹ ನಿರ್ಣಯ ಪುರಾಣವೆಂಬಾಯುಧವ
ಚೆನ್ನಾಗಿ ಕ್ಕರದಲ್ಲಿ ಪಿಡಿಸಿ ಹೋಳಿಯನಾಡು
ವಣ್ಣಗಳೊಡನೆ ನಡೆಸಿ ಪುರವನುರೆ ಬಳಸಿ ಬಂದಿರುವ ಗುರುವರನೆ ಶರಣು ॥೪೮೮೦॥

ಹೋಳಿಗೆಯನುಂಡು ಹೋಳಿಯ ಸುಟ್ಟು ಮರುದಿನದಿ
ಹೋಳಿಗೆಯ ಮತ್ತಮುರೆ ಮೂಡಿಸುತ ನೀಡಿಸುತ
ನಾಳೆ ಬರುತಿಹ ಸರ್ವಧಾರಿ ಸಂವತ್ಸರದಿ ಹೋಳಿಯಂ ಸುಡುವ ಜನರು ।
ಹೋಳಿಯಾಡಿಸುತೊಡನೆ ಹೋಳಿಯಾಡುತ್ತಿರುವ
ಬಾಳವದನೇ ಭಾಳಲೋಚನಾರ್ಭಕನೆಂದು
ಖೂಳತನದಿಂದಿರುವ ಖೂಳರಿಗೆ ತಿಳಿಸಬಾರದುಯೆಂಬ ಗುರುವೆ ಶರಣು ॥೪೮೮೧॥

ಇಂತರುಹಿಸುತ್ತಿರ್ದು ತನ್ನೊಳಗೆ ತಾನೆ ನಲಿ
ದಂತಕಾಂತಕ ಲಿಂಗಮಂ ಪೂಜಿಸುತ್ತ ಈ
ಸಂತಿಮೂಳರೆನಿಪರ ಮಾನಮಂ ಭಂಗಿಸಲ್ಕೋಸುಗಂ ಡಂಗುರವನು ।
ಸಂತಸದಿ ಸಾರಿಸಿದರೀಗ ಸರಕಾರದವ
ರಂತಕಾಪಹ ತರುಣನಾಜ್ಞೆಯಿಂದೆನುತಿರ್ದು
ನೀಂ ತವಕದಿಂ ಕೇಳುವದೆಂದು ತಿಳಿಸುತೊಳಗಿರುವ ಗುರುವರನೆ ಶರಣು ॥೪೮೮೨॥

ಕೇಳಬಾರದು ನೀನೆ ಈಗಳೆ ಇದೇನೆಂದು
ಹೇಳಬಾರದು ನೀನೆ ನಿನ್ನವರನುರೆ ಕರೆದು
ನಾಳೆ ಬರುತಿಹ ಸರ್ವಧಾರಿ ಸಂವತ್ಸರದಿ ಚೈತ್ರಾದಿ ತಿಥಿಯೊಳುರದೆ ।
ಈ ಲೋಕರುರೆ ಬಂದು ವಂದಿಸುತ್ತಿರೆ ಕೇಳೆ
ಹೇಳುವುದು ಡಂಗುರುವನುರೆ ಹೊಯ್ಸುತೆನುತಿರ್ದು
ನಾಳೆ ಪ್ರತಿಪತ್ತೆನಿಪುದಿಂದೇ ಅಮಾವಾಸಿ ಎನುತುಲಿವ ಗುರುವೆ ಶರಣು ॥೪೮೮೩॥

ಇಂದಿಗೆ ಸಮಾಪ್ತವೆನಿಸುವುದು ಈ ವತ್ಸರಂ
ಮುಂದೆ ಬರುತಿಹ ಸರ್ವಧಾರಿ ಸಂವತ್ಸರಂ
ಕಂದನೇ ನಾಳೆ ಬೆಳಗಾಗುವನಿತರೊಳ ಬರುತಿರುವುದೆಂದರುಪುತೊಡನೆ ।

ಇಂದೆ ಡಂಗುರವನುರದೇ ತರಿಸಿ ಇಡುವುದ್ಯೆ
ಎಂದು ವಿರತಪ್ಪನಿಂ ತರಿಸಿ ಡಂಗರುವಿಡಿಸಿ
ಎಂದಿನೊಲು ಲಿಂಗಾರ್ಪಿತವ ಮಾಡಿ ಮಲಗಿ ನಿರ್ದಿಸುತಿರ್ದ ಗುರುವೆ ಶರಣು ॥೪೮೪೪॥

ನಿರ್ದಿಸುತ್ತರ್ಧಾಂಗಿಯಿಂದೇಳಿಸುತ್ತೊಡನೆ
ರುದ್ರಪ್ಪನುರದೆ ಬರಲಿಲ್ಲೆಂದು ನುಡಿಯುತ್ತ
ರುದ್ರಸ್ಮರಣೆಯಿಂದ ಮಿಂದು ಮಡಿಯುಟ್ಟು ಗರ್ದುಗೆಯನುರೆ ಏರಿ ಕುಳಿತು ।
ಪದ್ದ್ರವವನುರದೆ ಒರೆಸಿಕೊಳ್ಳುತ್ತಿರಲೊಡನೆ
ರುದ್ರಪ್ಪನ್ಯೆತಂದು ನಿಂದು ನಿಟ್ಟಿಸಿ ನಮಿಸಿ
ರುದ್ರಪ್ಪನಿಗೆ ನಿಜಾರ್ಧಾಂಗಿಯಿಂದುರೆ ಹೇಳಿಸುತ್ತಿರುವ ಗುರುವೆ ಶರಣು ॥೪೮೪೫॥

ಪಂಚಾಳದವರು ವಂಚಿಸುತಿರುವರೆನುತಿರ್ದು
ವಂಚನೆಯ ಮಾಡದೊಲ್ ತಾಕೀದಿಯಂ ಮಾಡಿ
ಮುಂಚೆ ಒಂದು ರೂಪಾಯದ ತೂಕ ಚೊಕ್ಕಬೆಳ್ಳಿಯ ಕೊಟ್ಟು ತವಕದಿಂದ।
ಹಿಂಚೆ ಮಿಂಚುವ ಜಂಗನುರೆ ಮಾಡಿಸ್ಯೆ ಎನುತ
ಮುಂಚೆ ಮಾಡಿಸಿದ ಜಂಗಂ ಮಾಡಿಕೊಂಡು ನಾಂ
ನಾಂಚಿಕಿಲ್ಲದೆ ಉಂಡು ಉಳಿದೆನಿಂದಿನತನಕ ಎನಿಸಿರುವ ಗುರುವೆ ಶರಣು ॥೪೮೪೬॥

ಈ ಜಂಗಮುರೆ ಮಾಡಿಸಿ ಇಡುವುದ್ಯೆ ಅನಕ
ನ್ಯೆಜ ನಿರ್ಣಯಪುರಾಣಿ ಎನಿಸುವ ಸಮಯದೊ
ಳೀ ಜನರು ಸೋಜಿಗವಿದೆಂಬಂತೆ ಬಂಗಾರದ ಜಂಗನುರೆ ಮಾಡಿಸಿ
ನ್ಯೆಜ ಪಾದುಕೆಯ ಕೆಳಗುರೆ ಧರಿಸಿ ಮೆಟ್ಟುವುದು
ಈ ಜಂಗನೀಗುರೆ ಧರಿಸಿ ಮೆಟ್ಟು ಎನುತಿರ್ದು
ಈ ಜನರೊಳೀಗಳೇ ಮೆಟ್ಟಬಾರದು ಎಂದು ತಿಳಿಸುತಿಹ ಗುರುವೆ ಶರಣು ॥೪೮೪೭॥

ಇಂತರುಹಿ ರುದ್ರನಿಂ ಜಂಗನುರೆ ಮಾಡಿಸಿ ನಿ
ಶಾಂತದೊಳ್ ನಿರ್ಣಯ ಪುರಾಣದೊಡನೆ ಮಡಗಿ
ಸಂತೆಮೂಳರು ಈಗಳೇ ಬಂದು ನಿಂದು ವಂದಿಸಿ ನಿನ್ನನುರೆ ಕೇಳಿರ್ಯೆ ।
ದಂತ ಮುರಿಗುಟ್ಟಿಸಿಕೊಳುತ್ತೊಡನೆ ಅಳುತಿರ್ದು

ಪಂಥಮಂ ಬಿಟ್ಟು ಕಂಗೆಟ್ಟು ಕಳವಳಿಸುತ್ತ
ಮಂತಣಂಗೆಯ್ದು ನಿನ್ನೆಡೆಗೆ ಬರುವದು ಮುಂದೆ ಎನುತಿರುವ ಗುರುವೆ ಶರಣು ॥೪೮೮॥

ಈಗಳೇ ನಿನ್ನೊಡನೆ ಬಾರರೈ ಎನುತಿರ್ದು
ಈಗ ನೀ ಡಂಗುರವ ತರಿಸಿರ್ದುದಂ ಕೇಳಿ
ಹೇಗತನದಿಂದಿರುವ ಈ ಈ ಊರ ಬಣಜಿಗರು ನಗುವರೆಂದರುಪುತೊಡನೆ ।
ಬೈಗಿನೊಳ್ ಬಂದು ವಂದಿಸಿದ ವಿರತನ ಕರದಿ
ಜಾಗಟೆಯನುರೆ ಕೊಟ್ಟು ಜಾಗಟೆಯವರಿಗೆ ಈ
ಜಾಗಟೆಯನುರೆ ಕೊಟ್ಟು ಮುಟ್ಟಿಸೆಂದುರೆ ತಿಳಿಸಿ ಕಳಿಸಿರುವ ಗುರುವೆ ಶರಣು ॥೪೮೯॥

ಜಾಗಟೆಯು ಬೇಕೆಂದು ತರಿಸಿಕೊಂಡಿರ್ದು ಈ
ಜಾಗಟೆಯನೊಲ್ಲೆನೈ ಎಂದು ಹಿಂದಕೆ ಕೊಟ್ಟು
ಜಾಗಟೆಯನಿನ್ನೊಂದ ತರಿಸುತಿಹೆನ್ನೈದು ಸೇರಿಂಗೆ ಮುಂಭಾರವೆನಿಪ ।
ಜಾಗಟೆಯನೆನುತಿರ್ದು ಈಗಳುರೆ ದೊರೆಯದೀ
ಜಾಗದೊಳಗೆಂದು ತನ್ನೊಳ್ ತಾನೆ ತಿಳಿದು ಕಡು
ವೇಗದಿಂ ಹೊಂಗಲನುಳಿದು ಕಿತ್ತೂರಿಗೆಯ್ತರುತಿರುವ ಗುರುವೆ ಶರಣು ॥೪೯೦॥

ಶಾಲಿವಾಹನ ಶಕದಿ ಸಾವಿರದ ಏಳ್ನೂರ
ಮ್ಯಾಲೆ ಐವತ್ತನೆಯ ಸರ್ವಧಾರೀ ವರ್ಷ
ದೊಳುರದೆ ಒದಗಿರ್ದ ಚೈತ್ರಮಾಸದಿ ಶುಕ್ಲಪಕ್ಷ ನವಮೀ ತಿಥಿಯೊಳೆ ।
ಬಾಲೆಯಂ ಬೀಳ್ಕೊಂಡು ಬಾಲಕನನುರೆ ಕಂಡು
ಶಾಲೆಗಳ ತಹೆನೆಂದು ಹೇಳಿ ಹೊಂಗಲದಿಂದ
ಲೀಲೆಯಿಂ ಹೊರಟು ಕಿತ್ತೂರಿಗೆಯ್ತಂದು ನಿಂದಿರುವ ಗುರುವೆ ಶರಣು ॥೪೯೧॥

ಕಿತ್ತೂರೊಳುರೆ ನಿಂದು ಹತ್ತೂರ ಒಳಗಿರುವ
ಮತ್ತ ಮಾನವರನುರೆ ಭಂಗಿಸಲ್ಗೋಸುಗಂ
ಚಿತ್ತಜಾಂತಕ ಲಿಂಗದೇವನಂ ಪಿಂಗದೇ ಪೂಜಿಸುತ್ತಿರೆ ತವಕದಿಂ ।
ಮತ್ತನುಜನೇ ಈಗ ಡಂಗುರವನುರೆ ಹೊಯ್ಸಿ
ನುತ್ತರುಹಿಸುತ್ತಿರ್ದು ಡಂಗುರವ ದೊರಕಿಸು ಎ
ನುತ್ತ ನಿನ್ನವರೆನಿಪ ವಳಸಂಗದವರಿಗರುಹಿಸು ಎಂಬ ಗುರುವೆ ಶರಣು ॥೪೯೨॥

ವಳಸಂಗದವರಿಗರುಹಿಸು ಎಂದು ಮತ್ತಮೀ
ವಳಸಂಗದವರಿಗುರೆ ತಿಳಿಸಬಾರದು ಮಗನೆ
ವಳಸಂಗದವರು ನಿನ್ನವರೆನಿಸಿ ನಿನ್ನೊಲಾಚರಿಸರೀಗೆಂಬುತೊಡನೆ
ವಳಸಂಗದವರಿಗುರೆ ಒಳಿತಾಗದೀಗಳೇ
ವಳಿತಾಗುವುದು ಮುಂದೆ ನಿನ್ನೀ ಪುರಾಣದಿಂ
ವಳಸಂಗದವರ ಮಗನೇ ಎನುತ ನಗುತೊರೆಯುತಿರುವ ಗುರುವರನೆ ಶರಣು ॥೪೮೯೩॥

❖❖

ಪತ್ರ ೯೮೫ – ೧೦೪೦
ಪದ್ಯ ೪೫೫೩ – ೪೮೩೬

........ಸತಿಯಲ್ಲವೆಲೆ ತಾಯಿಯೆ
ತ್ವರಿತದಿಂದ ಇಂದೇ ಕಳಿಸಿಕೊಡಬೇಕೆಂದು ಎನ್ನಿಂದ ನುಡಿಸುತಿರ್ದು ।
ಪರಮನೀಚಾತ್ಮರಾನಂದ x x x ದ ಚರರು
ಸರಕಾರಕುರೆ ತಿಳಿಸಿ ತಾಕೀದಮಂ ಮಾಡಿ
ನೆರೆ ಕಳಿಸುತಿಹೆ ನಾನೆ ನೀನೀಗ ಸುಮ್ಮನಿರು ಎನಿಸಿರುವ ಗುರುವೆ ಶರಣು ॥೪೫೫೩॥

ಹೆಣ್ಣನುರೆ ಕರೆಯಲಿಕೆ ಬಂದಿರ್ದು ಬೆಲೆಗೇಡಿ
ಎನ್ನಬಹುದೇ ಎನಗೆ ಎಂದುರದೆ ನುಡಿಯುತಿರೆ
ಎನ್ನ ಕಿವಿಯುರೆ ಕೇಳುವಂತೆ ಮುಂದಾಗಿಯವನಂದಿಲ್ಲವೆಂದು ನುಡಿಯೆ ।
ಎನ್ನ ಪತಿಯೆನಿಸಿ ನೀನಿಂತು ಸಾಕ್ಷಿಯ ನುಡಿಯ
ಎನ್ನ ಮಾತಿನ್ನೆಂತು ನಡೆವುದೆನುತಿರ್ದು ಕಿನಿ
ಸಿಂ ನೀನು ಪತಿಯಲ್ಲವಾನು ಸತಿಯಲ್ಲೆನಿಸಿ ಬೊಗಳಿಸಿದ ಗುರುವೆ ಶರಣು ॥೪೫೫೪॥

ಎರಡೂ ಕಡೆಗೆ ನೀನಿರ್ದು ಬೊಗಳಿಸುತಿರ್ದು
ಎರಡೂ ಕಡೆಗೆ ನೀನಿರ್ದು ಬೊಗಳಿಸಿಕೊಳು
ತ್ತೆರಡೂ ಕಡೆಗೆ ನೀನಿರ್ದು ಬೊಗಳಿಸುತಿರ್ಪ ಗುರುವೆ ನಿಮ್ಮಯ ಮಹಿಮೆಯು ।
ಅರಿಯದಾರಿಗೆಯೆಂದು ವಂದಿಸುತ್ತಿರೆ ತುತಿಪ

ತರುಣನಂ ನೋಡಿ ನಲಿದಾಡಿ ತನ್ನೊಳ್ ತಾನೆ
ಇದು ಸುಮ್ಮನೇ ನೀನು ನಾನೆ ತಗ್ಗಿಸುವೆನಿಂದೆಂದುಲಿವ ಗುರುವೆ ಶರಣು ॥೪೫೫೫॥

ಹೆಣ್ಣು ಮ್ಗಗಳಂ ಬಂದ ಹಾಂಗೆ ಕಳುಹಿಸುತಿರ್ಪೆ
ನೆನ್ನ ಮಗನೇ ನೋಡು ನೋಡೆಂದು ಮಧ್ಯಸ್ಥ
ರಿನ್ನಾಡೆ ಇರಿಸಿಕೊಂಡದ್ದು ಅಲ್ಲೆನಿಸಿ ನಲ್ಲೆಯನುರದೆ ನಾಚಿಸುತ್ತ ।
ಇನ್ನವರು ಕರೆಯಲಿಕೆ ಬರರು ನೀನೇ ಹೋಗಿ
ನಿನ್ನ ಮಗಳಂ ಕಳಿಸಿಬಾಯೆಂದು ನುಡಿಸುತಾ
ಹೆಣ್ಣ ಮಗಳಂ ಕಳಿಸಿಯುರೆ ನಾಚಿಸುತಿರ್ದುದ ಸೂಚಿಸಿದ ಗುರುವೆ ಶರಣು ॥೪೫೫೬॥

ಪತಿಯ ಮಾತಂ ಮೀರಿ ಇರಿಸಿಕೊಂಡುದರಿಂದ
ಮತಿಹೀನಳೆನಿಸುತಲ್ಲೆನಿಸಿಕೊಂಡೆನು ಈಗ
ಪತಿವಾಕ್ಯಮಂ ಮೀರಬಾರದಿನ್ನೆಂದು ತನ್ನೊಳ್ ತಾನೆ ನಾಚುತೊಡನೆ ।
ಖತಿಯನುರೆ ಬಿಟ್ಟು ಮಾತಾಡಬೇಕೆಂಬುವಾ
ಮತಿಯೊಳಿರಿಸುತ್ತ ಇನ್ನುರೆ ಸುಮ್ಮನಿರಬೇಡ
ಸುತನೆ ಎಂದುರೆ ತಿಳಿಸಿ ಮಾತಾಡಿಸುತ್ತಿರ್ದುದ ಬಳಿಕುಲಿವ ಗುರುವೆ ಶರಣು ॥೪೫೫೭॥

ಇನ್ನು ನೀನುರೆ ಬಯ್ಯಬ್ಯಾಡ ನಿನ್ನಯ ಸತಿಗೆ
ಎನ್ನ ಮಗನೇ ಎನಲದೇಂ ಕಾರಣಂ ಗುರುವೆ
ಚೆನ್ನಾಗಿ ಎನಗೆ ತಿಳಿವಂತೆ ಪೇಳೆಂದು ವಂದಿಪ ಸುತನ ನೋಡುತೊಡನೆ ।
ನಿನ್ನ ಸತಿಯಲ್ಲಿ ವೀರಂ ಬಂದು ನಿಂದಿರುವ
ನೆನ್ನಂತೆ ವೀರನುರೆ ಸೈರಿಸನೆನುತ್ತಿರ್ದುದ
ನಿನ್ನ ಸತಿಯೆನಬ್ಯಾಡ ಬಂಧುವಿನೊಲಾಲೋಕಿಸೆಂದುಲಿವ ಗುರುವೆ ಶರಣು ॥೪೫೫೮॥

ಸತಿಯ..
ಯತಿ ಪ್ರೀತಿಯಿಂದ ಗಂಗಾ ಬಸವಲಿಂಗಾ ಎ ।
ನುತ ಕರೆವುದಿ..
ಅಡಿಗೆಯಂ ಮಾಡು ಜವದಿಂದ ಎಂದು ನೀನೆನ್ನ ಬ್ಯಾಡನ್ನು ಮಗನೆ ।
ಹಿತದಿಂದ ತಾನೆ ಮಾ.................................... ॥೪೫೫೯॥

ಸಂಧ್ಯಾಸಮಯವಾಗೂಣ ಬೊಬ್ಬಿರಿವಂತೆ
ಕಂದನೇ ನಿನ್ನ ಸತಿಗಾಗುವುದುರದೆ ಕೇಳ್ವ
ದೆಂದೆನಲದೇಕೆ ತಿಳಿಸೈ ಗುರುವೆ ಎಂದು ವಂದಿಸುತಿರ್ದು ತುತಿಸಲೊಡನೆ ।
ನಿಂದಿಸುವ ಮಂದಿಯಂ ಹೋಳಿಯಾಡುತ್ತಿರ್ಪ
ನೆಂದೆನಲು ಎಂದು ತಿಳಿಸೈ ಗುರುವೆಯೆಂದೆರಗಿ
ಮುಂದೆ ಬರುತಿರ್ಪ ಹೋಳಿಯ ಹುಣ್ವೆಗೆಂದು ನಗುತುಲಿಯುತಿಹ ಗುರುವೆ ಶರಣು॥೪೫೬೦॥

ಮುಂದೆ ಬರುತಿರುವ ಹೋಳಿಯ ಹುಣ್ವೆಗೆನುತಿರ್ದ
ಎಂದಾದರೆ ರೋಷಮುದಿಸಲಾಡುತ್ತಿರ್ಪ
ನೆಂದರುಹಿಸುತ್ತಿರ್ದು ಇನ್ನು ಚಮ್ಮಾವುಗೆಯು ನಿನ್ನೆಡೆಗೆ ಸದ್ಭಯಿಂ
ಬಂದಪುದು ತನ್ಮುಖದಿ ನಿರ್ಣಯವ ಕೇಳುತೀ
ಮಂದಮತಿಯುತರಿಗುರೆ ತಿಳಿಸಿ ನಾಚಿಸುತೊಡನೆ
ಕಂದನೇ ನಿರ್ಣಯದಿ ಚೆಮ್ಮಾವುಗೆಯ ಮೆಟ್ಟಬೇಕೆಂಬ ಗುರುವೆ ಶರಣು ॥೪೫೬೧॥

ಮೆಟ್ಟುತಿಹ ನಿರ್ಣಯವ ತಿಳಿಸುತಿಳಿಸೆಂದು ಪೊಡ
ಮಟ್ಟು ಪದಮಂ ಪಿಡಿದು ಬಿಡದೆ ಸ್ತುತಿಸುತ್ತಿರ್ಪ
ಹೊಟ್ಟೆಯ ಮಗನ ಕಂಡು ಮುಂಡಾಡಿ ಮುದ್ದಿಸುತ್ತಿರ್ದು ಸಲೆ ಕೇಳು ಕೇಳೈ ।
ಪಟ್ಟಣದ ಜಾಣರುರೆ ನಲಿವಂತೆ ತನ್ನನುರೆ
ಮೆಟ್ಟುತಿಹ ನಿರ್ಣಯವ ತಾನೆ ಪೇಳುತ್ತಿಹುದು
ಕಟ್ಟಕ್ಕರೊಳಾ ನಿರ್ಣಯದಿ ಮೆಟ್ಟೆಂದು ತಿಳಿಸುತಿಹ ಗುರುವೆ ಶರಣು ॥೪೫೬೨॥

ತನ್ನನುರೆ ಮೆಟ್ಟುತಿಹ ನಿರ್ಣಯವ ತಾನೆವೆ
ಚೆನ್ನಾಗಿ ಪೇಳುತಿಹರೆಂದು ನಿರವಿಸಿದಿರ್ರೈ ಲ
ತಾಯಿನ್ನುಳಿದ ನಿರ್ಣಯವನುರೆ ತಿಳಿಸುತಿಹುದೆಂದು ಸೂಚಿಸಿದರೆನ್ನ ಗುರುವೆ ।
ಚೆನ್ನಾಗಿ ತಿಳಿಸುತ್ತಾನೇ ಪೇಳ್ವುದೆಂತೆನಲು
ನೀಂ ನಾಡೆ ಪೇಳೆಂದು ನಿರವಿಸುತ್ತಿರಲೊಡನೆ
ನಿನ್ನ ವಾಕ್ಯದ ಬಲದಿ ಪೇಳುವುದು ಪೇಳಿಸುವೆನರಿಯೆಂಬ ಗುರುವೆ ಶರಣು ॥೪೫೬೩॥

ಈಗೆನ್ನ ಮನದೊಳಿಹ ಸಂಶಯಂ ಪೋದುದೈ
ಶ್ರೀ ಗುರುವೆಯೆಂದು ವಂದಿಸುತಿರ್ದು ತುತಿಸುತಿ
ಕೈಗಳಂ ಮುಗಿದು ನಿರ್ಣಯರು ಬರುತಿಹರು ಇನ್ನೂ x ।
ಈಗ ಸುಮ್ಮನಿರು ನೀಯೆಂದು ಕೇಳೆ ಮುಂದೆ
ಆಗಮಿಸಿರುವರಳಿದ ನಾಡೊಳಗೆನುತ್ತಿರ್ದು
ಈಗಳಾಗಮಿಸುತಿಹ ಚಮ್ಮಾವುಗೆಯ ನೋಡು ನೋಡೆಂಬ ಗುರುವೆ ಶರಣು ॥೪೫೬೪॥

ಉಳ್ಳಿಗಡ್ಡಿಯು ಎಮ್ಮೆಯ ಹೈನವಿಂಗುಗಳು
ಬಲ್ಲಹದ ಪದವಿಡಿದು ಯೋಗ್ಯವೆನಿಸಿದವೆಂದು
ಮೆಲ್ಲನೇ ಕೇಳಿ ಸಂತೋಷಮಂ ತಾಳಿ ಚಮ್ಮಾವುಗೆಯು ತವಕದಿಂದ ।
ನಿಲ್ಲದೆ ನಡೆತಂದು ದೂರದೊಳುರೆ ನಿಂದು
ಎಲ್ಲರುರೆ ಬಲ್ಲಂತೆ ಬಿಟ್ಟರ್ದೀ ಮೂವರ
ಎಲ್ಲರುರೆ ಕೇಳ್ವಂತೆ ಕೈಕೊಂಡ ಗುರುವೆ ಎನೆ ನಗುತಿರುವ ಗುರುವೆ ಶರಣು ॥೪೫೬೫॥

ಅವರವರ ಪುಣ್ಯದ ಬಲದಿನವರವರ್ಗೊಲಿದಿರ್ದೈ
ಶಿವರೂಪ ಗುರುವೆ ಎನ್ನಲ್ಲಿ ಪುಣ್ಯವದಿಲ್ಲ
ವವಿರತಂ ಪಾಪಿಗಳ ಕಾಲಿನೊಳ್ ಸಿಲ್ಕಿ ತೊಳಲುತ್ತ ತಿಕ್ಕಿಸಿಕೊಳುವೆನ್ನೈ ।
ತವೆ ನೀನೆ ದಯದಿಂದ ಎನ್ನನುರದೇ ಬಿಡದೆ
ತವಕದಿಂದುರೆ ಮೆಟ್ಟಿ ಎನ್ನನುರೆ ಪೊರೆಯೆಂಬ
ತೊವಲಿನಾ ಪಾದುಕೆಯನುರೆ ನೋಡಿ ನಲಿದು ನಗುತುಲಿವ ಗುರುವರನೆ ಶರಣು ॥೪೫೬೬॥

ಮೂವರಂ ಬಿಟ್ಟಾಗೆ ಇವನನುರೆ ಬಿಟ್ಟೆ ನಾ
ಮೂವರುರೆ ಭಕ್ತಿಯಿಂ ಬರಲು ಕೈಕೊಂಡೆ ನಾ
ಮೂವರೊಲಿವನೆಯ್ದಿ ದೈನ್ಯದಿಂ ಕೊಳುತಿರ್ಪ ನೀನೆಂಬುತೊಡನೆ ।
ಮೂವರು ಕಪಟದಿ ಭಾವನಿಸಿ ಬಿದ್ದಿರ್ದರಾ
ಮೂವರೊಲ್ ಕಪಟ ಸಂಯುತ ಭಕ್ತನಲ್ಲವಾ
ಮೂವರಿಂದಧಿಕ ಸದ್ಭಕ್ತನಿವನೆಂದು ನಲಿದುಲಿವ ಗುರುವರನೆ ಶರಣು ॥೪೫೬೭॥

ಹಿಂದಕೆಳೆಹೂಟಿ ಎನಿಸಿತ್ತು ಶರಣರಿಗೆ ನಿ
ನ್ನಿಂದ ಅದರಿಂದೆ ಬಿಟ್ಟಿರುವೆನೆನಲುರೆ ಎರಗಿ
ಹಿಂದಕಾದಂತೆ ಇನ್ನಾಗುವುದೆ ನೀನೀಗ ಹೇಳು ಹೇಳೆನ್ನ ಗುರುವೆ ।
ಅಂದು ನಿರ್ಣಯ ಪುರಾಣವ ನಿರ್ಮಿಸಿದಿಲ್ಲ
ಇಂದು ನಿರ್ಣಯ ಪುರಾಣವ ನಿರ್ಮಿಸಿದಿ ನೀನೆ
ಹಿಂದಕಾದಂತೆ ಇನ್ನೆಂದೆಂದು ಆಗದೆನೆ ನಗುತಿರುವ ಗುರುವೆ ಶರಣು ॥೪೫೬೮॥

ನಿರ್ಣಯವನರಿಯದೇ ಹೆಣ್ಣನಿತ್ತಿಹರಂದು
ನಿರ್ಣಯವನುರೆ ತಿಳಿದು ಹೆಣ್ಣನೀವರು ಇನ್ನ
ನಿರ್ಣಯವನುರೆ ತಿಳಿದು ಗಂಡನೀವರು ಇನ್ನ
ನಿರ್ಣಯವ ತಿಳಿಯದೆ ಕೊಡರುಕೊಳ್ಳರುಯಿನ್ನ ಎನಲುಲಿವ ಗುರುವೆ ಶರಣು ॥೪೫೬೯॥

ಹಣ್ಣನುರೆ ಕೊಡುವಂತೆ ಗಂಡನುರೆ ಕೊಡುವರೆ
ಚೆನ್ನಾಗಿ ಸಕಳರುರೆ ತಿಳಿವಂತೆ ಪೇಳೆಂದು
ಮನ್ನಿಸುತ ಮುಂದಕುರೆ ಬಾಯೆಂದು ನಿರವಿಸಲು ಹಿಗ್ಗಿಮಿಗೆ ಬಗ್ಗುತೊಡನೆ ।
ಸನ್ನಿಧಿಯೊಳುರೆ ಬರದೆ ಮುಂದಕ್ಕೆ ನಡೆತಂದು
ಪನ್ನಳಿನಮಂ ನೋಡುತೊಡನೆ ಪೊಗಳುತ್ತಿರ್ದು
ಎನ್ನ ಗುರುವೇ ಆನಿತನುರೆ ಬಲ್ಲೆನೇ ಎನಲು ನಗುತುಲಿವ ಗುರುವೆ ಶರಣು ॥೪೫೭೦॥

ಈಗ ನೀನುರೆ ಹೇಳಿದೀ ಹ್ಯಾಗೆ ಎನಲೆರಗಿ
ಶ್ರೀ ಗುರುವೆ ದೂರದೊಳ್ ನಿಂದು ನಿಮ್ಮಂ ನೋಡಿ
ದಾಗಳೇ ನಿಮ್ಮ ದರ್ಶನ ಮಾತ್ರದಿಂದ ನಿರ್ಣಯದ ನುಡಿಗಳೆ ಎನ್ನನು ।
ಮೂಗಿನಿಂ ಕೆಳಗಿರುವ ಬಾಯಿಂದುರದೆ ಹೊರಟು
ಆಗಮಿಸಿದವು ಈಗ ಪೇಳೆಂದು ನಿರವಿಸಿದಿ
ರಾಗಮಿಪುದರಿದಲ್ಲ ತಪ್ಪು ತಪ್ಪೈ ಗುರುವೆ ಎನೆ ನಗುವ ಗುರುವೆ ಶರಣು ॥೪೫೭೧॥

ಹಿಂದಕ್ಕೆ ಹಾವಿನಾಹಾಳ ಕಲ್ಲಯ್ಯನುರೆ
ಬಂದಿರುವ ದ್ವಿಜರೊಡನೆ ಮೂಡುವುದನುಳಿದು
ಮಂದಿರದಿ ಪೊರೆದ ಸುನಿಯಿಂದ ವೇದವನೋದಿಸುತವರ ನಾಂಚಿಸಿದೊಲು ।

ತಂದೆಯೇ ಎನ್ನಿಂದ ನಿರ್ಣಯವ ನುಡಿಸುತೀ
ಮಂದಮತಿಗಳಿಗೀಗ ತಿಳಿಸುತಿರ್ಪೈ ಗುರುವೆ
ಎಂದು ವಂದಿಸುತಿರಲು ಇನ್ನೆರದೆ ಹೇಳೆಂದು ಹೇಳಿಸುವ ಗುರುವೆ ಶರಣು ॥೪೫೭೨॥

ಹೆಣ್ಣುರೆ ಕೊಡುವಂತೆ ಗಂಡನುರದೇ ಕೊಡರು
ಹೆಣ್ಣುರೆ ಕೊಳುವಂತೆ ಗಂಡನುರದೇ ಕೊಳರು
ಹೆಣ್ಣಂ ಮದುವೆಯಾಗದಕಿಂದ ಮೊದಲೆ ಕೊಡುವುದು ಕೊಳುವುದೆಂಬುತೊಡನೆ ।
ಹೆಣ್ಣಂ ಮದುವೆಯಾಗಿರ್ದು ಬರ್ದುಕಿರ್ದು ಆ
ಹೆಣ್ಣು ದೈವಾಧೀನದಿಂದಳಿಯೆ ಮತ್ತೊಂದು
ಹೆಣ್ಣಿಗಾ ಗಂಡನುರೆ ಕೊಡುವುದು ಕೊಳುವುದೆನಲು ನಲಿದುಲಿವ ಗುರುವೆ ಶರಣು॥೪೫೭೩॥

ಮದುವೆಯಾಗಿರ್ದು ಪತಿಯಳಿದವಳ್ಗೆ ಕೊಡುವುದೋ
ಮದುವೆಯಾಗದೆ ಇರ್ವ ಕನ್ಯೆಗುರೆ ಕೊಡುವುದೋ
ಪದುಳದಿಂದೆಲ್ಲವಂ ತಿಳಿವಂತೆ ಪೇಳೆಂದು ನಿರಮಿಸುತ್ತಿರೆ ನಮಿಸುತ ।
ಮದುವೆಯಾಗಿರ್ದನನಳಿಯೆ ತವರು ಮನೆಗೆ ಪೋ
ಗದೆ ಅತ್ತೆಯಾಲಯದೊಳಿರ್ದವಳಿಗುರದೆ ಕೊಡು
ವುದು ಕೊಳುವುದೆಂದುದಿಸಲು ಇನ್ನು ಹೇಳು ಹೇಳೆಂಬ ಗುರುವೆ ಶರಣು ॥೪೫೭೪॥

ಮಗನುರದೆ ಮಡಿಯಲಾ ಸೊಸೆಯೆ ಮಗಳೆಂದರಿದು
ಸೊಗಸಿನಿಂ ಸಲಹುವುದು ತವರುಮನೆಯವರಂತೆ
ಒಗುಮಿಗೆಯ ತವಕದಿಂದೆಪ್ಪನವರಿದವಳ್ಗೆ ತಕ್ಕವನ ನಡಸಿಕೊಳುತ ।
ಅಗಣಿತೋತ್ಸವದಿಂದ ಪತಿ ಈತನೆನಿಸಲಾ
ಮಗಳೆ ಸೊಸೆಯೆನಿಸುತಿಹಳವನೆ ಮಗನೆನಿಸುವಂ
ನಗೆಯಲ್ಲವೀ ಮಾತು ತಥ್ಯವೆನಲಿನ್ನು ಹೇಳೆಂಬ ಗುರುವರನೆ ಶರಣು ॥೪೫೭೫॥

ಈ ನಾಡ ದೊರೆಯರಸಿ ಎನಿಪವೀರಾಂಬೆಯುರೆ
ಮೀನಕೇತನ ಬಾಧೆಯಿಂದ ಬಳಲುತ್ತಿರ್ಪ
ಳೀ ನಿರ್ಣಯಂ ತಿಳಿಯದೇ ಎಂದುರದೆ ಎರಗುತೊಡನೆ ।
ಈ ನಿರ್ಣಯವ ತಿಳಿಯುತರಸಿಗುರೆ ತಕ್ಕವನ

ಸಾನುರಾಗದಿ ತತ್ಸಮ್ಮತದಿ ಪತಿಯೆನಿಸಿ
ಮೀನಕೇತನ ಬಾಧೆಯಂ ನೀಗಿಸೆವಲಿನ್ನು ಹೇಳೆಂಬ ಗುರುವೆ ಶರಣು ॥೪೫೭೬॥

ಸತಿಯನುರೆ ಮುಟ್ಟದೆ ಪತಿಯಳಿಯಲಳುತಿರುವ
ಸತಿಗೆ ಸುತನಿವನೆಂದು ತಂದು ಈ ನಾಡಿಗಧಿ
ಪತಿಯೀತನೆಂದುರೆ ಶಿಖಾಧಿಪತಿಯೆನಿಸಿ ಮೆರೆಯಿಸಿದ ಮತಿವಂತರುಗಳು ।
ಹತಿಸಿಕೊಂಡುರೆ ಹೊರಳಿ ಹುಡಿಯೊಳಗೆ ಮಡಿದರ್ಕೈ
ಸುತನೆನಿಸಿ ಬಂದವಂ ಸುಳ್ಳೆನಿಸಿಕೊಂಡಿರುವ
ನತಿ ವರ್ಣದಾಶ್ರಮದ ಗುರುವೆ ಎನಲಿನ್ನು ಹೇಳೆ x x ಗುರುವರನೆ ಶರಣು ॥೪೫೭೭॥

ಹಡೆವ ಯೌವನವಿಲ್ಲದಿರೆ ಮಾಡುವುದು ಮಗನ
ಹಡೆವ ಯೌವನವಿರ್ದು ಮಗನನುರೆ ಮಾ x
ಹುಡುಗರಿವರ್ಕೈ ಗುರುವೆ ಎಂದುರದೆ ವಂದಿಸುತ್ತಿರ್ದು ತುತಿಸುತ್ತ ಮತ್ತಂ ।
ಹುಡುಗರಿವರೇ ಮುಂದೆ ಈ ನಿರ್ಣಯವ ತಿಳಿದು
ಕಡು ತವಕದಿಂದರಸಿಗುರೆ ತಕ್ಕವನನುರದೆ
ಹುಡುಕಿತಂದರಸನಂ ಮಾಳ್ಪರೆನಲಿನ್ನು ಹೇಳೆಂಬ ಗುರುವರನೆ ಶರಣು ॥೪೫೭೮॥

ಸತ್ತಿದುವ ಶಿವಲಿಂಗರುದ್ರ ಸರ್ಜಾಹ್ವಯ ನೃ
ಪೋತ್ತಮಂ ತನ್ನರಸಿಯೆನಿಪ ವೀರಾಂಬೆಯೊಳಿ
ರುತ್ತಿರವನದರಿಂದ ವೀರಶಿವಲಿಂಗರುದ್ರಾಹ್ವಯನೆನಿಪ ನಿನ್ನನೆ ।
ಸತ್ತಾತನೆಂತಿರುವನೆನಲು ವೀರಾಂಬೆಯ
ಚಿತ್ತವವನಲ್ಲಿರಲು ತಚ್ಚಿತ್ತದಲ್ಲಿಹನೆ
ನುತ್ತಿರಲು ತಥ್ಯವಹುದಿನ್ನು ಹೇಳೆಂದು ಹೇಳಿಸುವ ಗುರುವರನೆ ಶರಣು ॥೪೫೭೯॥

ಶಿವಲಿಂಗರುದ್ರಸರ್ಜಂ ನುಡಿಯಲೇನಾಯ್ತು
ಶಿವಲಿಂಗರುದ್ರ ಸರ್ಜಾಹ್ವಯನ ಅರ್ಧ ದೇ
ಹವೆನಿಸುವ ವೀರಾಂಬೆ ಇರ್ದ ಬಳಿಕವನಿರ್ದವೊಲೆಂದು ತಿಳಿಯುತೊಡನೆ ।
ಶಿವಲಿಂಗರುದ್ರ ಸರ್ಜನೆ ಈತನೆಂದು ತ

ದ್ಯುವತಿ ಸಮ್ಮತದಿಂದ ಪತಿಯೆನಿಸಲೊಡನೆ ನಿಜ
ಯುವತಿಯಿಂದವನೊಳಗೆ ಪೋಗುವನೆನಲಹುದಹುದು ಹೇಳೆಂಬ ಗುರುವೆ ಶರಣು॥೪೫೮೦॥

ವೀರ ಶಿವಲಿಂಗರುದ್ರಾಹ್ವಯನೆನಿಸುತಿರ್ಪ
ಭೂರಮಣನೀ ವೀರಾಂಬೆಯೊಡಗೂಡಿ
ಕೋರಂತೆ ಈ ನಾಡನಾಳುತಿಹನೆಂದು ಹೇಳುತ್ತ ನಮಿಸುತ್ತ ಮತ್ತಂ ।
ವೀರಶಿವಲಿಂಗ ರುದ್ರಾಹ್ವಯನೆ ನಿಮ್ಮಯ ಕು
ಮಾರನೆನಿಸುತ್ತಿರಲು ನೀವೆ ಧಣಿಯೆನಿಸುತ್ತ
ನಾರತಂ ಸಾಮ್ರಾಜ್ಯಮುಮನಾಳುತಿರ್ಪಿರೆನೆ ನಲಿವುತಿಹ ಗುರುವೆ ಶರಣು ॥೪೫೮೧॥

ಕುಳಿತು ಸಾಮ್ರಾಜ್ಯಮುಮನಾಳುತ್ತ ಬಾಳುತ್ತ
ಲಲಿತ ಸುಕ್ಷೇತ್ರ ಯಾತ್ರೆಯ ಮಾಡುತುರೆ ನೋಡಿ
ಬಲವತ್ಸದಾಚಾರಯುಕ್ತ ಸದ್ಭಕ್ತರಿಂ ಬಿನ್ನಹವ ಕೈಕೊಂಬ x x ।
x x ಅನ್ಯ ಸಮಯದ ಅಯ್ಯಗಳನುರದೆ
ಬೆಳೆಸುತ್ತ ನಿನ್ನ ಸಮಯವ ನೀನೆ ನಲಿಯುತಿ
ರ್ಪಲಫತರ ಶಿವಲಿಂಗ ಸಿ x x ಸೆವನೆ ಸಲಹೆನಲ್ಕುಲಿವ ಗುರುವೆ ಶರಣು ॥೪೫೮೨॥

ಉಡಿಕಿಯಂ ಮಾಡಬೇಕೆಂದು ತಿಳಿಸಿದಿ ಈಗ
ಉಡಿಕಿಯಂ ಮಾಡಿಕೊಡುವದು ತವರು ಮನೆಯವರು
ಉಡಿಕಿಯಂ ಮಾಡರತ್ತೆಯಮನೆಯವರು ಎಂದು ನಸುನಗುತ್ತಿರ್ದು ಮತ್ತಂ ।
ಉಡಿಕಿಯಂ ತವರು ಮನೆಯವರು ಮಾಳ್ಪುದು ದಿಟವೊ
ಉಡಿಕಿಯಂ ಅತ್ತೆಯಾಲಯದವರು ಮಾಳ್ಪುದೊ
ತಡಮಾಡದೆ ತಿಳಿಸು ತಿಳಿಸೆಂದು ನಿರುವಿಸುತ್ತಿರುವ ಗುರುವೆ ಶರಣು ॥೪೫೮೩॥

ಹೆಣ್ಣಾದರೇನು ಗಂಡಾದರೇನಾದರೇಂ
ಚೆನ್ನಾಗಿ ಕೊಟ್ಟು ಹಿಂದಕ್ಕಾತಕೊಂಬುತಿಹ
ಕುನ್ನಿವಾ x x x x x ಸರಗತಿ ಇನ್ನೇನೆಂದು ಪೇಳುತಿಹೆನೆಂದುರದೆ ನಮಿಸುತೊಡನೆ ।
ಪುಣ್ಯಮುರೆ ಸಣ್ಣಿಸುತ ಪಾಪಮುರದೆ ಪೆಚ್ಚಿ
ಕಣ್ಣು ಮೂರುಳ್ಳವನ ಕರುಣಮುರದೇ ತಪ್ಪಿ
ಬನ್ನಬಡುವರು ಜನ್ಮಜನ್ಮಾಂತರದೊಳೆನಲು ನಗುತುಲಿವ ಗುರುವೆ ಶರಣು ॥೪೫೮೪॥

ಕೊಟ್ಟ ಹಿಂದಕೆ ತಕ್ಕೊಳ್ಳಬಾರದಹುದೆಲೆ
ದಿಟ್ಟಸೇ ಕೇಳು ತಕ್ಕೊಂಡವರು ತಾವೆ ಬಿಡೆ
ಹೊಟ್ಟೆಯಿಂ ಹುಟ್ಟಿರುವವುಗಳನುರೆ ಹಿಂದಕಟ್ಟುವರೆ ಹೇಳೆಂದು ನುಡಿಯೆ ।
ಹೊಟ್ಟೆಯ ಮಗಳನೊರ್ವರ ಮನೆಗೆ ಸಲೆ ಕೊಡದೆ
ಕೊಟ್ಟು ಓರ್ವನಿಗೆ ಮದುವೆಯ ಮಾಡಿ ಮನೆಯಲ್ಲಿ
ಇಟ್ಟುಕೊಂಬುವುದೀರ್ನರನೆನಲು ನಗುತಿನ್ನು ಹೇಳೆಂಬ ಗುರುವೆ ಶರಣು ॥೪೫೮೫॥

ಹೆಣ್ಣನುರೆ ಕೊಟ್ಟು ಮದುವೆಯ ಮಾಡಿಯುರೆ ನೋಡಿ
ಹೆಣ್ಣನುರೆ ಕರೆದೊಯ್ದು ಕಳಿಸುತಿರಲಿನನಳಿಯೆ
ಹೆಣ್ಣನು ಹಿಂದಕ್ಕೆ ಕರೆದೊಯ್ವನಾ ಮಾನಿಸರಿಗೇನೆನ್ನಬೇಕೈ
ಎನ್ನ ಗುರುವೇ ಎನುತ ನುತಿಸಿಬಾರದ ಮಾಡಿ
ಯಿನ್ನುರೆ ಬರಿಸಿಕೊಂಬ ಸೋಂಬರವರೆ x x ರ್ದು
ಇನ್ನು ನೀನುರೆ ಹೆದರದೇ ಹೇಳು ಹೇಳೆಂದು ನಗುತಿರುವ ಗುರುವೆ ಶರಣು ॥೪೫೮೬॥

ಹೆಣ್ಣನುರೆ ತಕ್ಕೊಂಡು ಮದುವೆಯಂ ಮಾಡಿ ಸುಖ
ದಿಂ ನಾಡೆ ಬಾಳುತಿರಲವಳು ಪತಿಯುಳಿಯಲಾ
ಹೆಣ್ಣನುರೆ ಹಿಂದಕ್ಕೆ ಕರೆದೊಯ್ವುದೈ ಎಂಬ ಸೋಂಬರಿಗೆ ಏನೆಂಬುದೈ ।
ಎನ್ನ ಗುರುವೇ ಎನಲು ಎರಡು ಕಾಲಿನ ಕತ್ತೆ
ಎನ್ನ ಬೇಕೆಲೆ ಮಗನೆ ಎಂದು ತಿಳಿಸುತ್ತಿರ್ದು
ಇನ್ನು ಕೊಟ್ಟಿರ್ದುದಂ x x ಡಿರ್ದುದಂ ಪಸರಿಸೆಂಬ ಗುರುವರನೆ ಶರಣು ॥೪೫೮೭॥

ಕೊಟ್ಟವರ ಕೊಂಡವರ ಸೂತ್ರಗೋತ್ರವ ಕೇಳಿ
ಕೊಟ್ಟಿತೀ ಸೂತ್ರ ಗೋತ್ರದವರ ಮನೆಯ ಹೆಣ್ಣು
ಕಟ್ಟಕ್ಕರದಿ ಕೊಂಡರೀ ಸೂತ್ರ ಗೋತ್ರದವರೆನಿಸಿ ಸಾಕ್ಷಿಯ ವೀಳ್ಯವ ।
ಪಟ್ಟಣದ ಶೆಟ್ಟಿ ಕರದಿಡಿಸಿರುವುದುರದೆ
ಶೆಟ್ಟಿ ಮೊದಲಾದೂರ ಹಿರಿಯರಿಗೆನುತ್ತಿರ್ದು
ಕೊಟ್ಟಿತೀ ವರಕೆನಿಪುದೆಲ್ಲಿ ಇಲ್ಲೆನಲಿನ್ನು ಹೇಳೆಂಬ ಗುರುವೆ ಶರಣು ॥೪೫೮೮॥

ನಾಡೆ ಮದುವೆಯ ಮಾಡಿದ ನಾಲ್ಕನೆಯ ದಿನಕೆ
ಸಾಡಿಯಂ ಮಾಡುತಿಹ ಸಮಯದೊಳೆಲ್ಲರುರೆ
ಕೂಡಿ ಕೂಸ್ಗೊಪ್ಪಿಸುವೆವೆಂದು ಮದುಮಗಳು ಸಹಿತಂ ಪೋಗಿಯುರದೆ ಬಾಗಿ ।
ಕೂಡಿದಳು ನಿಮ್ಮನೆಂದುರೆ ಹಾಡುವವರಿಂದ
ಹಾಡಿಸುತ್ತಿರ್ದು ಹೆಣ್ಣೊಪ್ಪಿಸುತ್ತ ಮೊಗ
ಬಾಡಿ ಮನೆಗೆಯ್ದಿ ಸುಯಿಗರೆವರೆನಲುರದೆ ನಲಿದುಲಿವ ಗುರುವರನೆ ಶರಣು ॥೪೫೯॥

ಇಂತುರದೆ ಸಾಕ್ಷಿಯಿರಲೀ ಸಾಕ್ಷಿಯ ವೀಳ್ಯ
ವಂ ತವಕದಿಂ ಕೊಂಡ ಹಿರಿಯರಿಡುತಿರಲಾಗಿ
ಪಂಥಮಂ ಬಿಟ್ಟು ಹಿಂದಕೆ ಬಿಡುವ ಜಾಡ್ಯರುರೆ ತಕ್ಕೊಂಬ ಸೋಂಬರೆರ್ದೆಗೆ ।
ಕೊಂತವೆನಿಸುವುದೀ ಪುರಾಣವಿನ್ನೆನುತಿರ್ದು
ಸಂತಸದಿ ಅತ್ತೆ ಮನೆಯವರೆ ಮಾಡುವುದೆ ನಿ
ಶ್ಚಿಂತ ನಿರ್ಣಯವೆನಿಪುದಿದು ಸುಪ್ರಸಿದ್ಧವೆಂದುಲಿವ ಗುರುವರನೆ ಶರಣು ॥೪೫೦॥

ಎನ್ನನುರೆ ಮೆಟ್ಟಬೇಕೆಂದು ಬಂದಿರುವಿ ನೀಂ
ನಿನ್ನನುರೆ ಮೆಟ್ಟುತಿಹ ನಿರ್ಣಯವನುರೆ ನೀನೆ
ಚೆನ್ನಾಗಿ ಸಕಲರುರೆ ತಿಳಿವಂತೆ ಪೇಳೆಂದು ನಿರವಿಸುತ್ತಿರಲೆರಗುತ
ಇನ್ನಾಂ ಕೃತಾರ್ಥನಾದೆನೆನುತ್ತ ನುತಿಸುತ್ತ
ನೀಂ ನಾಡೆ ಪೇಳೆಂದು ನಿರವಿಸಿದೊಡಾಂ ಪೇಳ್ವೆ
ನೆನ್ನ ಗುರುವೇ ಎನಲು ಪೇಳು ಪೇಳೆಂದು ಪೇಳಿಸುವ ಗುರುವರನೆ ಶರಣು ॥೪೫೧॥

ಮಲ ಮೂತ್ರಮಂ ಬಿಡಲಿಕುರೆ ಪೋಪ ಸಮಯದೊ
ಳಲಘುತರ ತವಕದಿಂ ಮೆಟ್ಟಿ ನಡೆವುದು ಗುರುವೆ
ತಳಹದೆ ಊರಿಗುರೆ ಪೋಗುವಾಗುರೆ ಮೆಟ್ಟಬೇಕೆಂದು ಎರಗುತೊಡನೆ ।
ಸುಲಭವಾಹನವಿರಲು ಎನ್ನನುರೆ ಮೆಟ್ಟದೇ
ಒಲಿದು ನೀನೇ ಒರ್ವನಹವಾಲಿಯ ಮಾಡಿ
ಸಲೆ ಇಡಿಸಿ ಶೌಚಕ್ಕೆ ಪೋಪ ಸಮಯದಿ ಮೆಟ್ಟೆನಲ್ ನಗುವ ಗುರುವೆ ಶರಣು ॥೪೫೨॥

ಇನ್ನು ಭಕ್ತರ ಮನೆಗೆ ಪೋಗುತಿಹ ಸಮಯದೊಳ್
ಎನ್ನನುರೆ ಮೆಟ್ಟಬಾರದು ಎಂದುರದೆ ಕಾಷ್ಠ
ದಿನ್ನವಾರದಿನಥವ ಶಕಲಾತಿಯಿಂದ ನಿರ್ಮಿಸಿದ ಕಾಡಾವುಗೆಗಳಂ ।
ಚೆನ್ನಾಗಿ ಮೆಟ್ಟಿಕೊಂಡುರೆ ಪೋಗೆಲೇ ಗುರುವೆ
ಎನ್ನನೊಂದವಸರದಿ ಮೆಟ್ಟಿಕೊಂಡುರೆ ಪೋಗೆ
ನೀಂ ನಾಡೆ ಪದವ ತೊಳಕೊಂಡುರದೆ ಕುಳ್ಳಿರುವುದೆನೆ ನಲಿಯುತಿಹ ಗುರುವೆ ಶರಣು॥೪೫೩॥

ಇನ್ನು ಉಣ್ಣಲಿಕೆ ಪೋಗುತ್ತಿರ್ಪ ಸಮಯದೊಳ
ವಂ ನಾಡೆ ಮೆಟ್ಟಬೇಕೆಂದು ನಮಿಸುತ್ತಿರ್ದು
ಎನ್ನನೊಂದವಸರದಿ ಮೆಟ್ಟಿಕೊಂಡುರೆ ಪೋಗೆ ಸ್ನಾನಮಂ ಮಾಡಬೇಕೈ ।
ಎನ್ನ ಗುರುವೇ ಎಂದು ವಂದಿಸುತ್ತುರೆ ತುತಿಸಿ
ತನ್ನೊಳಗೆ ತಾನೆ ನಗುತೊಡನೆ ನಲಿದಾಡುತ್ತ
ಇನ್ನು ಸ್ನಾನವ ಮಾಡಿದಾಗ ಮೆಟ್ಟುವುದನರುಹೆಂಬ ಗುರುವರನೆ ಶರಣು ॥೪೫೪॥

ಸ್ನಾನಮಂ ಮಾಡಿ ಗರ್ದುಗೆಯತನಕ ಬರುವಾಗ
ಮಾಣದೆ ಕೊಟ್ಟುಳ್ಳ ಹಾವುಗೆಯ ಮೆಟ್ಟುವುದ
ನೂನ ಮಹಿಮಾಗಾರ ಲಿಂಗಮಂ ಭಜಿಸಿ ಲಿಂಗಾರ್ಪಿತವ ಮಾಡಿ ಬಳಿಕ ।
ನೀನೆದ್ದು ನೂರು ಹೆಜ್ಜೆಯನೆಣಿಸಿ ನಡೆವಾಗ
ಸಾನುರಾಗದಿ ಜಂಗನಿಟ್ಟಿರುವ ಹಾವುಗೆಯ
ನೀ ನರರು ಚೋದ್ಯವೆನಿಸುತೆ ಮೆಟ್ಟುವುದೆನಲು ನಲಿದುಲಿವ ಗುರುವೆ ಶರಣು ॥೪೫೫॥

ಈಗಳೇ ಮೆಟ್ಟುವುದೆ ಜಂಗನಿತ್ತಾವುಗೆಯ
ವೇಗದಿಂ ಪೇಳೆಂದು ನಿರವಿಸುತ್ತಿರಲೆರಗಿ
ಈಗಳೇ ಮೆಟ್ಟಬಾರದು ಮುಂದೆ ಮೆಟ್ಟಬೇಕೆಂದು ನಮಿಸುತ್ತ ಮತ್ತಂ ।
ಈಗೇನು ಆಗೇನು ಯಾವಾಗಳಾದರೇಂ
ಶ್ರೀಗುರುವೆ ನಿನ್ನನುವನರಿದು ಮೆಟ್ಟುವುದುತ್ಪ
ದ್ರೋಗಶೇಷವ ತವಕದಿಂ ನಿವಾರಿಸಿಕೊಳುವುದೆನೆ ನಲಿವ ಗುರುವೆ ಶರಣು ॥೪೫೬॥

ನಿನ್ನಘದ ಶೇಷಮಂ ನೀನೇ ನಿವಾರಿಸುತ
ನಿನ್ನ ಮಗಳಿಗೆ ನೀನೆ ಬುದ್ಧಿಗಲಿಸುತ್ತ
ನಿನ್ನಳಿಯ್ಯರೆನಿಪವರಿಗುರೆ ನೀನೇ ಬುದ್ಧಿಯಂ ಕಲಿಸಬೇಕೆನುತ್ತ ।
ನಿನ್ನ ದಾಯಾದಿಗಳ ನೀನೆ ಮಣಿಸಬೇಕು
ನಿನ್ನ ನೀನಾಲಸ್ಯಮಂ ಮಾಡಬಾರದೈ
ಎನ್ನ ಗುರುವೇ ಎಂದು ವಂದಿಸುತ್ತಿರಲು ನಲಿದುಲಿವ ಗುರುವರನೆ ಶರಣು ॥೪೫೭॥

ಎನ್ನ ಮಗಳಿಗೆ ಎನ್ನಳಿಯರೆನಿಪ ಬೀಗರಿಗೆ
ಚೆನ್ನಾಗಿ ಬುದ್ಧಿಗಲಿಸುವನೆನ್ನ ಗುರುವರಂ
ಇನ್ನು ದಾಯಾದಿಗಳ ಮಣಿಸುತಿಹನಾ ಮಹಾಗುರುವೆ ಎಂದರಪುತೊಡನೆ ।
ಎನ್ನಘದ ಶೇಷವ ನಿವಾರಿಸುತ್ತಿಹನವನೆ
ಎನ್ನ ಪಾದವ ರಕ್ಷಿಸುವ ಪಾದರಕ್ಷೆಯೇ
ನೀಂ ನಾಡೆ ಪೇಳ್ದ ನಿರ್ಣಯದಿ ಮೆಟ್ಟುವೆನೆಂದು ಅಟ್ಟಿರುವ ಗುರುವೆ ಶರಣು ॥೪೫೮॥

ಅಟ್ಟಿಯುರೆ ಮೆಟ್ಟಬೇಕೆಂದು ತನ್ನೊಳ್ ತಾನೆ
ನಿಟ್ಟಿಸುತ ಮೊದಲೆ ಮೆಟ್ಟಿಸುವೆನೆಂದುರದೆ ಪೊಡ
ಮಟ್ಟಿರ್ದ ಬೆಮ್ಮಳಿಗಿ ಬಸವಶೆಟ್ಟಿಗೆ ಹೇಳಿ ಕಳಿಸೆ ಮುನವಳ್ಳಿಗುರದೆ ।
ಕಟ್ಟಕ್ಕರದಿನಾತನೊಂದು ರೂಪಿಕವನುರೆ
ಕೊಟ್ಟು ಕಳಿಸಲು ಅವರ ವಿರತಪ್ಪನಿಂದಳತಿ
ಗೊಟ್ಟು ಮಾಡಿಸಿ ಈಗಳೇ ಮೆಟ್ಟಬಾರದೆಂದಿಡಿಸಿರುವ ಗುರುವೆ ಶರಣು ॥೪೫೯॥

ಇನ್ನು ಕಾಡಾವುಗೆಗಳಂ ಮೆಟ್ಟಬೇಕೆಂದು
ಚಿನ್ನವರದರು ಬಾಳಾಜಿಗೆ ತಿಳಿಸಿ ಗಡ
ದಿಂ ನಾಡೆ ತರೆಸಿಯುರದೇ ನವಾರದಿ ಬಿಗಿಸಿ ಯುರೆ ನೋಡಿ ಕರೆಸುತೊಡನೆ ।
ನಿನ್ನ ಕೈಯಿಂ ಬಿದ್ದ ರೊಕ್ಕವ ಕೊಡುವೆನೆನಲು
ನಾಂ ನಾಡೆ ಭಕ್ತಿಯಿಂ ಮೆಟ್ಟಿಸುವೆನೆನುತಿರ್ದು
ಚಿಣ್ಣನಂ ಪೊಡಮಡಿಸಿ ಕೈಕೊಳಿಸೆ ಕೈಕೊಂಡು ಮೆಟ್ಟಿರುವ ಗುರುವೆ ಶರಣು ॥೪೬೦೦॥

ಮಗಳಾದರೇನಳಿಯನಾದರೇನತ್ತೆಯೆಂ
ಬಗೆಗೊಳಿಪ ಸತಿಪತಿಗಳಾದರೇಂ ಬಂಧುವೇಂ
ಮಿಗಿಲೆನಿಪ ಗುರುವಾದರೇನು ನಿರ್ಣಯವರಿದು ನುಡಿಯಬೇಕುರದೆ ಕೇಳ್ಕೈ ।
ಮಗನೆ ನಿರ್ಣಯವನುರೆ ಬಿಟ್ಟು ತನ್ನಯ ಬಾ
ಯಿಗೆ ಬಂದ ಹಾಗೆ ನುಡಿಯುತ್ತಿರುವ ನಿನ್ನ ಹಿರಿ
ಮಗಳಿಗುರೆ ಬುದ್ಧಿಯಂ ಕಲಿಸಬೇಕೆಂದು ತಿಳಿಸುತ್ತಿರುವ ಗುರುವೆ ಶರಣು ॥೪೬೦೧॥

ಸುಮ್ಮನೇ ಬೀಳೆಂದು ನಿನಗುರದೆ ನುಡಿದಿಹಳು
ತಮ್ಮಿದರು ರೊಟ್ಟಿಯಂ ಬೇಡೆ ನಯದಿಂ ಕೊಡದೆ
ನಿಮ್ಮ ಬಾಯೊಳು ನನ್ನ ಹಾಟು ಅನಕಾ ನಿಲ್ಲಿರೆಂದುರದೆ ನುಡಿದಿರುವಳ್ಕೆ ।
ಸಮ್ಮುದದಿ ಹಡೆದವಳಿಗುರೆ ಮೂಳನೆಂದಿಹಳು
ಅಮ್ಮನೆನಿಸಿರುವ ಅತ್ತೆಗೆ ಅಂಜದಿರುವಳ್ಕೆ
ನೀಂ ಮುಂಚೆ ಮಗಳಿಗುರೆ ಬುದ್ಧಿಯಂ ಕಲಿಸಬೇಕೈ ಎಂಬ ಗುರುವೆ ಶರಣು ॥೪೬೦೨॥

ನೀನೆ ಕಲಿಸೈ ಗುರುವೆ ಎಂದು ವಂದಿಸುತಿರ್ಪ
ಸೂನುವಂ ನೋಡಿ ನಲಿದಾಡಿ ತನ್ನೊಳ್ ತಾನೆ
ನೀನುರದೆ ಒಳ್ಳೆವನೆನಿಸುತಿರ್ದು ಹೀನತನ
ಜಾಣಮಗನಹುದೆಂದು ಮುಂಡಾಡಿ ಮುದ್ದಿಸುತ
ಬ್ಯಾನಿಯವನೆನಿಸಿ ಮನೆಯಲ್ಲಿಯೇ ಮಲಗಿರು ದಿ
ವಾಣದವರಿಂದ ಬುದ್ಧಿಯ ಕಲಿಸುತಿಹೆನೆಂದು ತಿಳಿಸಿರುವ ಗುರುವೆ ಶರಣು ॥೪೬೦೩॥

ಒಡಹುಟ್ಟಿದವಳನುರೆ ಕರೆದುತರುತಿರ್ಪೆನಾಂ
ಕೊಡು ನಿನ್ನ ಕೊರಳೊಳಿಹ ಚೌಕವನೆನುತ್ತಿರ್ದು
ಕೊಡದಿರೆ ಬಿಡುವೆ ನಾಂ ಚೌಕಮಂ ಮಾರಿ ಜೋಳವ ಕೊಳುವೆನೆಂದು ನುಡಿದು ।
ಎಡವಿಡದೆ ಬೇಡುತಿಹ ಗಂಡನಿರವಂ ತಿಳಿದು
ಹಡೆದವಳಿಗುರೆ ಹೇಳಿ ಕಳಿಸಿಯುರದೇ ತಿಳಿಸಿ
ಹಡೆದಾಕೆಯಿಂ ಕರೆಸಿಕೊಂಡು ಬಂದಿಹಳೀಗ ನೋಡೆಂಬ ಗುರುವೆ ಶರಣು ॥೪೬೦೪॥

ನೀನೆ ನೋಡ್ಯೆ ಗುರುವೆ ಎಂದು ಮುಸುಕಿಕ್ಕಿರುವ
ಸೂನುವಂ ನೋಡಿ ನಲಿದಾಡಿಯುರೆ ಮುಂಡಾಡಿ
ಜಾಣ ಮಗನಿವನೀಗ ನೋಡನಹುದಹುದೆಂದು ತನ್ನೊಳಗೆ ತಾನೆ ತಿಳಿದು ।
ಮಾಣದೇ ಚೌಕಮಂ ಟೀಕೆಯಂ ಬಳೆಗಳಂ
ಸಾನುರಾಗದೆ ಹಡೆದಾಕೆಯಿಂ ಕೊಳಿಸಿ
ತಾನೀಗಳುರೆ ಹೇಳಿ ಕಳಿಸುವೆನು ನಡೆಯೆನಿಸಿ ನಡೆಸಿರುವ ಗುರುವೆ ಶರಣು ॥೪೬೦೫॥

ನಡೆಸಿಯವಳತ್ತೆಯ ಮನೆಯನುರದೆ ಪೊಗಿಸಿ ಬಳಿ
ಕೊಡನೆ ತಾನುರೆ ಹೊರಗೆ ನಿಂದು ಮನೆಯೊಳಗಿಹರ
ನೆಡೆ ಕರೆದು ಎನ್ನ ಗಂಡಗೆ ನೀವು ಕೊಡುವ ಸಾಲದೊಳು ನಿಮ್ಮ ಚೌಕಮಂ
ಬಿಡಿಸಿ ತಕ್ಕೊಂಡಿಹೆನು ಎನ್ನನ್ನೆ ಕೇಳುವುದು
ಹುಡುಗಿಯಂ ಕೇಳಿಯುರೆ ಕೇಳಿ ಕಾಡಬಾರದು ಎಂದು
ನುಡಿಸುತೊಡನೆ ಮನೆಗೆ ಬರಿಸಿಯುರೆ ನಲಿದಾಡುತುಲಿಯುತಿಹ ಗುರುವೆ ಶರಣು॥೪೬೦೬॥

ನೀನಂದು ಟೀಕೆಯೊಂದಂ ಬಿಟ್ಟು ಹೋಗೆನಲು
ನಾನೇಕೆ ಬಿಟ್ಟು ಹೋದೇನೆಂದು ಒಯ್ದವಳು
ತಾನಾಗಿ x x x x x ಬಂದೀಗ ದಳು ನಿನ್ನಾಕೆಯ ಸತಿಯ ಚೌಕವ ।
ಸೂನುವೇ x ನೋಡು ನೋಡೆಂದು ನಸುನಗುತಿರ್ದು
ಸಾನುರಾಗದಿ x x x ಗಳ ಸುಧಾ ಬಿಟ್ಟು
ಕೋಣತನದಿಂ ಪೋದವಳನುರದೆ ಬಳಲಿಸುತ್ತಿಹ x x x x x x x ॥೪೬೦೭॥

x x x x ನಾನು ಬೇಡೆ ಕೊಡದೆ ಹೋಗಿ
ನಿನ್ನ ಹಡೆದಾಕೆಗುರೆ ಕೊಟ್ಟು ಬಂದಿಹ ದಿಟ್ಟ
ಹೆಣ್ಣ ನಿನ್ನಂ ಭಂಗಿಸದೆ ಬಿಡೆ x x ದುಗಂಡನಿಂದುರೆ ನುಡಿಸುತ ।
ಟೊಣ್ಣೆತನದಿಂದ ಸರಕಾರಕುರದೇ ತಿಳಿಸಿ
ಹೆಣ್ಣಿನ ನರಾಧೀನಮಂ ಮಾಡಿರುವೆ x x x
x x x ನೋಡಿ ಪರಿಜನಂ ಪುರಜನಂ ನಕ್ಕುದಂ ಕೇಳೆಂಬ ಗುರುವೆ ಶರಣು ॥೪೬೦೮॥

ಕೊಡುವ ಸಾಲದೊಳು ತಕ್ಕೊಂಡಿರುವೆವೈ x x
x ಡಿಗಿಯಂ ಕಾಡಬಾರದು ಎಂದು ಹೇಳಿರುವ
ಒಡಹುಟ್ಟಿದವಳನುರೆ ಕೇಳದೇ ತನ್ನ ಸತಿಯಂ ತಾನೆ ಅನ್ಯರುಗಳೇ ।
ಹುಡುಗತನದಿಂದ ಒಪ್ಪಿಸಿ ಭಂಗಿಸಿದವನೀಗ
ಮಡದಿಯಂ ಮುಂದೆವಂದಿರುವೆನೆಂದರಿಯದಾ
ಕಡುಮಂದಮತಿಯೆಂದು ಕೈವೊಯ್ದು ನಗುತಿರ್ಪರೆಂದುಲಿವ ಗುರುವೆ ಶರಣು ॥೪೬೦೯॥

ಹಳಬ ವಾಲೇಕಾರರುರೆ ನೋಡಿ ಮನದೊಳಗೆ
ಮಲಮಲನೆ ಮರುಗಿ ಸರಕಾರಕುರೆ ಒಪ್ಪಿಸುವ
ಅಲಘುತರವೆನಿಪ ತಪ್ಪಲವಿದು ತನ್ನ ಹೆಂಡತಿಗೆ ತಾನೇ ಬುದ್ಧಿಯಂ ।
ಕಲಿಸುವುದನುರೆ ಬಿಟ್ಟು ಸರಕಾರಕೊಪ್ಪಿಸಿ
ರ್ದಲಘುತರ ಲಜ್ಜಾವಿಹೀನ ಜಂಗಮ ನಿನಗೆ
ಕುಲಗುರುವೆನುತ ನುತಿಪರೀ ಒಕ್ಕಲಿಗರೆಂದುಲಿವ ಗುರುವೆ ಶರಣು ॥೪೬೧೦॥

ಎನ್ನ ತಂದೆಯು ಮಾತನುಲ್ಲಂಘಿಸಿದ ಕತದಿ
ಎನ್ನ ಮೌನಂ ಕುಂದಿತೆಂದು ಸುಯ್ಗರೆಯುತಿಹ
ತನ್ನ ಮಗಳಂ ನೋಡಿ ಗಳಗಳನೆ ಹುಚ್ಚಪ್ಪನೆನಿಪ ಲಿಂಗಾಂಗಿ ಭಟನಂ ।
ತನ್ನೆಡೆಗೆ ಬರೆಸಿಯುರೆ ತಿಳಿಸಿ ಸರಕಾರದೊಳ
ಗಿಂ ನಾಡೆ ತರಿಸಿ ತನ್ನಾಧೀನವೆನಿಸಿಕೊಂ
ಡಿನ್ನೊಮ್ಮೆ ಕಳಿಸಿ ನೋಡುವೆನೆಂದು ಇರಿಸಿಕೊಂಡಿರ್ದ ಗುರುವರನೆ ಶರಣು ॥೪೬೧೧॥

ಕಂದ:

ನಂದಿಯ ಕೋಲಿನ ಜಂಗಮ
ರೆಂದಿನವೊಲು ಮಂದಿಗಳ ಮುಂದೆ ಗಳಪುತ್ತಿರ
ಲೊಂದುದಿನ ಹುಚ್ಚನ ಸಂಗಡ
ತಂದೆಯನುರೆ ಕಳಿಸಿ ಸಕಳರಿಗರುಹಿದ ಗುರುವೆ ॥೪೬೧೨॥

ಸಕಳದಿನರುಹಿಸುತೊಡನೆ
ಅಕಳಂಕನಿವನು ಇವನರ್ಧಾಂಗಿಯು ಬರುದೆ
ಸಕಲಹ ಪ್ರೀತೆಯನೀಗಳು
ಅಕುಟಿಲೆ ನಿಟ್ಟಿಲಾಕ್ಷನರ್ಧಾಂಗಿಯೊಲುರೆ ರೌದ್ರಿಯು ॥೪೬೧೩॥

ಇಂತು ಸಕಳರಿಗೆ ತಿಳಿಸುತ
ಸಂತಸದಿಂ ನಿನ್ನ ಮಗಳ ನಿನ್ನಯ ಬಳಿಯೊಳ್ ।
ಸಂತತಮುರೆ ಇರಿಸಿಕೊಳುವುದು
ಕಾಂತನ ಜನನೀ ಕರೆಯಬರುವನ್ನೆಗಮುರದೆ ॥೪೬೧೪॥

ಇಂತು ಸರಕಾರದವರಿಂ
ಸಂತಸದಿಂ ತಿಳಿಸಿ ಮಾಲಿನ್ಯವನುಳಿಸುತ್ತ ನೀ
ರಂತರಂ ಮನೆಯೊಳುರೆ ನಿ
ಶ್ಚಿಂತೆಯೊಳಿಸುತ್ತ ಮತ್ತಂ ತಿಳಿಸಿದ ಗುರುವೇ ॥೪೬೧೫॥

ವಾರ್ಧಕ:

ಚಿವಟಗುಂಡಿಯೊಳು ಬರೆದಿಹ ಜಹರನಾಮೆಗಳ
ತವಕದಿಂದೀ ಮಾಘ ಶುದ್ಧ ಪೂರ್ಣಿಮೆಯಲ್ಲಿ
ಜವಳಿಗುರುಬಸವನಂಗಡಿಯೊಳುರೆ ಹಚ್ಚಬೇಕೆಂದು ಹಚ್ಚಿಸುತ ಮತ್ತಂ ।
ಸುವಿಲಾಸದಿಂದೆ ಪಸರಿಸಬಾರದೀಗಳೇ
ಅವಿರತಂ ಮುಂದೆ ಪಸರಿಸುವುದೆಂದುರೆ ತಿಳಿಸಿ
ತವಕದಿಂ ತೆಗೆಸಿಯುರೆ ನಗಿಸಿ ತನ್ನೊಳ್ ತಾನೆ ನಲಿದುಲಿದ ಗುರುವೆ ಶರಣು ॥೪೬೧೬॥

ಈ ಜಹರನಾಮೆಗಳನುರೆ ಹಚ್ಚಿದವನಾರು
ಈ ಜಹರನಾಮೆಗಳನುರೆ ಬರೆದಿರುವನಾರು
ಈ ಜಹರನಾಮೆಗಳನುರೆ ಬರೆಸಿರುವನಾರು ಎಂದು ಗರ್ಜಿಸಿ ನುಡಿದಿಹ ।
ಈ ಜಿಲ್ಲೆದಾರನಂ ಬಳಲಿಸುತ್ತಳಲಿಸುತ
ಈ ಜಮಾತ್ತಾರನಿಗೆ ಬೇಡಿಯಂ ಹಾಕಿಸುತ
ಈ ಜನರು ನೋಳ್ಪಂತೆ ನೂಕಿಸುವೆನೆನುತ ಸೂಚಿಸಿದ ಗುರುವರನೆ ಶರಣು ॥೪೬೧೭॥

ಹಚ್ಚಿರ್ದ ಜಹರನಾಮೆಗಳ ಸರಕಾರಕ್ಕೆ
ಬೆಚ್ಚಿ ಹಿಂದಕ್ಕೆ ತಕ್ಕೊಂಡನೀಯಯ್ಯನೆಂ
ದುಚ್ಚರಿಸಿ ನಗುತಿರ್ದ ಲದ್ದಿಗಟ್ಟಿಯ ಗೊಡಚ ಚೆನ್ನವರದರ ಬಾಳರ ।
ಬೆಚ್ಚಿಸುವೆನುರೆ ಮುಂದೆ ಈಗಳೇ ನಾನುರದೆ
ಬೆಚ್ಚಿಸಲ್ಬಾರದೆಂದರಿದು ತನ್ನೊಳ್ ತಾನೆ
ಮಚ್ಚಿದರ್ಧಾಂಗಿಯೊಳ್ ಮಾತಾಡುತೊಡನೆ ತಿಳಿಸುತ್ತಿರುವ ಗುರುವೆ ಶರಣು ॥೪೬೧೮॥

ಈಗಳೇ ಅಳಿಯನವಗುಣವ ತೊಲಗಿಸಬಾರ
ದೀಗಳೇ ಅವನವ್ವೆಯಂ ನಾಂಚಿಸಲ್ಬಾರ
ದೀಗಳೇ ಇಲ್ಲಿರುವ ಲೋಗರೊಳಗಿರುವ ಸಂಶಯವಳಿಸಬಾರದೆನುತ ।
ಮಾಘ ಕೃಷ್ಣ ಚತುರ್ದ ಶಿಯೊಳನುರಾಗದಿಂ
ಶ್ರೀಗಣ ಸಹಸ್ರನಾಮವನೆಂದಿನೋಲ್ವರಿಸು
ತಾಗಮೋಕ್ತ ವಿಧಾನದಿಂದ ಲಿಂಗಾರ್ಚನೆಯ ಮಾಡಿಸಿದ ಗುರುವೆ ಶರಣು ॥೪೬೧೯॥

ಲಿಂಗಾರ್ಚನೆಯ ಮಾಡಿಸಿ ನೋಡಿಸುತ್ತಿರ್ದು
ಲಿಂಗಾರ್ಪಿತವ ಮಾಡಿಸುತ್ತೊಡನೆ ಲಿಂಗದೊಳ
ಡಂಗಿಸುತ ನಿದ್ರಿಸುತ ಎಚ್ಚರಿಸುತಿರ್ದು ಜಾಗರಣವೆನಿಸುತ್ತ ಮತ್ತಂ ।
ಅಂಗನಾದಿ ಕುಟುಂಬದೊಳಗಿರ್ದು ಬರ್ದುಕಿ ಮೂ
ದಿಂಗಳೆನಿಸಲು ಇಲ್ಲಿ ನಿಲ್ಲಬಾರದು ಈ
ಅಂಗನಾದಿ ಕುಟುಂಬನುರೆ ಬಿಟ್ಟು ನಡೆಯೆಂದು ತಿಳಿಸುತಿಹ ಗುರುವೆ ಶರಣು ॥೪೬೨೦॥

ಹದಿನೇಳನೂರ ನಾಲ್ವತ್ತೆಂಟನೆಯ ವ್ಯಯಾ
ಬ್ಧದ ಚೈತ್ರ ವೈಶಾಖ ಮಾಸಮುಮನುರೆ ಕಳೆದು
ಮದನಹರ ಶರಣರಣುಗನೆ ಇನ್ನು ಜೇಷ್ಠ ಮಾಸಮುಮನಿಲ್ಲಿ ಕಳೆದು
ಸುದತಿಯಂ ಮಕ್ಕಳಂ ಬಿಟ್ಟು ಆಷಾಡ ಶು
ದ್ಧದಿ ಹೊರಟು ನಿನ್ನ ಮುನವಳ್ಳಿಗುರದೆ ಪೋಗು
ವುದು ಎನಲು ನಡೆಯಲಾರೆನು ಗುರುವೆ ಎನೆ ಗದರುತಿರ್ದ ಗುರುವರನೆ ಶರಣು ॥೪೬೨೧॥

ನಡೆಯೆನಲು ನಡೆಯಲಾರೆ ಎನುತಿರ್ಪ ನೀಂ
ನುಡಿಯೆನಲು ನುಡಿಯಲಾರೆನು ಎನುತ್ತಿರ್ಪಿಯೈ
ಕೊಡುಯೆನಲು ಕೊಡಲಾರೆನೆನಲಿಲ್ಲವೇಕೆಂದು ಥವಣ ಗುರುಶಾಂತಗುರದೆ ।
ಬಿಡುಬಿಡೀ ಜಡನುಡಿಯ ಕಡುತವಕದಿಂ ಪೋಗಿ
ತಡಮಾಡದವನಿಂದ ಬರುವ ರೊಕ್ಕವ ಕೊಳುವ
ದೆಡೆವಿಡದೆ ಬಡತನದೊಳಿಹೆವೆಂದು ಮಡದಿಯಿಂ ಗದರಿಸಿದ ಗುರುವೆ ಶರಣು ॥೪೬೨॥

ಮಡದಿಯಿಂ ನುಡಿಸೆ ಮಡದಿಯೆ ನುಡಿದಳೆಂದಂದು
ಜಡತನದಿ ನೀನು ಹೆಂಗೂಸು ನಿನಗ್ಯಾಕದರ
ಗೊಡವಿ ನೀನುರೆ ಕೇಳಲಿಕ್ಕೆ ತಕ್ಕವಳಲ್ಲವೆಂದನಾದರಿಸಲೊಡನೆ ।
ಮಡದಿಯೊಳಾನಿರುವೆ ಮಡದಿಯೆಂದರಿಯದಿರು
ಒಡಹುಟ್ಟಿದವನೊಲಾಲೋಕಿಸೆಂದರುಹಿಸಿರೆ
ಮಡದಿ ಎನಬಹುದೆ ಎಂದುರೆ ಗದರುತೊಡನೆ ಬಡಿದಿರುವ ಗುರುವರನೆ ಶರಣು॥೪೬೩॥

ಬಡಿದು ಎಚ್ಚರಿಸುತೊಡನೆ ಸಮ್ಮಿಸುತಿರ್ದು
ಮಡದಿ ಮಕ್ಕಳಿಗುರದೆ ಹೇಳದೆ ಕೇಳದೆ
ಕಡು ಮೋಹದಣುಗನಹ ರುದ್ರಾಹ್ವಯಾದಿ ಸದ್ಭಕ್ತಸಂತತಿಗರುಹದೆ ।
ಕಡು ತವಕದಿಂದಾಷಾಢ ಸಿತ ಸಪ್ತಮೀ
ಉಡುರಾಜ ತನುಜವಾರದಿ ದಿನದುದಯಹೊಳೆ
ಬಿಡಿಸಿ ಹೊಂಗಲನುರೆ ನಡೆಸಿಯುರೆ ನಡೆಯುತೊಳಗಿರುವ ಗುರುವರನೆ ಶರಣು॥೪೬೪॥

ನಡೆಯುತೊಳಗಿರ್ದು ಮಿಗೆ ನಡೆಯದೆ ಕುಳ್ಳಿರಿಸು
ತೊಡನೆ ಹೊಸೂರ ಹಳ್ಳದಿ ಮಿಂದು ಅಲ್ಲಿಂದ
ನಡೆದು ಮಲ್ಲೂಗನುರೆ ಪೊಕ್ಕು ಅಲ್ಲಿರುವ ಗೌಡನ ಮನವನುರೆ ಪರಿಕಿಸಿ ।
ನಡೆದು ಧೂಪದಹಳ್ಳಿಯಂ ಪೊಕ್ಕು ಅಲ್ಲಿರುವ
ಬಡವರೊಳಗುರೆ ಬಡವಿಯೆನಿಸಿ ಬಾಳುವಳೊರ್ವ
ಬಡವಿಯ ಮನಕೆ ಮೆಚ್ಚಿ ಲಿಂಗಮಂ ಭಜಿಸಿಯುಣಿಸುತ್ತುಂಡಗುರುವೆ ಶರಣು ॥೪೬೫॥

ಉಂಡು ಕೈತೊಳೆದು ಅಲ್ಲಿಂದ ಮುಂದಿರುವ ಯ
ಕ್ಕುಂಡಿಯೊಳಗಿರುವ ತನ್ನಯ ಮಠವನುರೆ ಕಂಡು
ಕೊಂಡಾಡುತಲ್ಲಿರುವ ಬಡವಿಯ ಮನೆಯೊಳುಂಡು ಎಂದಿನೋಲ್ ಮಲಗಿ ಎದ್ದು ।
ಕಂಡು ಸತ್ಕರಿಸುತಿಹ ವಸ್ತ್ರದವರಾಲಯದೊ
ಳುಂಡು ವೃಷಭಾರೂಢನಾಗಿಯುರೆ ಬೀಗಿ ಯ
ಕ್ಕುಂಡಿಯಿಂ ಮುನಿವಳ್ಳಿಗುರೆ ಪೋಗಿ ತನ್ನವರ ತಾಗಿರುವ ಗುರುವೆ ಶರಣು ॥೪೬೨೬॥

ತನ್ನವರೆನಿಪ್ಪ ಮುನಿವಳ್ಳಿಯವರಂ ತಾಗಿ
ತನ್ನವನೆನಿಪ್ಪ ಸರಸಪ್ಪನಂ ನೆರೆ ನೋಡಿ
ತನ್ನ ನಿರ್ಣಯ ಪುರಾವದಿರ್ದ ಬೆಮ್ಮಳಿಗಿಯವರ ಮನೆಯಲ್ಲಿ ನಿಂದು ।
ಉನ್ನತೋತ್ಸವದಿಂದ ಲಿಂಗಾರ್ಚನೆಯ ಮಾಡಿ
ಯುನ್ನತೋತ್ಸವದಿಂದ ಲಿಂಗಾರ್ಪಿತವ ಮಾಡಿ
ತನ್ನಗದ ಶೇಷಮಂ ತಾನೇ ನಿವಾರಿಸುತ್ತಿರುವ ಗುರುವರನೆ ಶರಣು ॥೪೬೨೭॥

ತನ್ನಗದ ಶೇಷಮಂ ತಾನೇ ನಿವಾರಿಸುತ
ಚೆನ್ನಾಗಿ ಆಷಾಢ ಮಾಸಮುಮನುರೆ ಕಳೆದು
ಇನ್ನು ಈ ಶ್ರಾವಣದಿ ಬೆಮ್ಮಳಿಗಿಯವರ ಮನಮಂ ನೋಡಬೇಕೆನುತ್ತ ।
ಮುನ್ನಿನೋಲ್ ಪಾದಪೂಜಾಸಮೀಪಕೆ ಪೋಗ
ದಾಂ ನಾಡೆ ನೋಡಬಾರದು ಎನುತನಾದರಿಸು
ಉನ್ನತೋತ್ಸವದಿಂದೆ ತಾನೊರ್ವನುಣುತಿರ್ದು ತಿಳಿಸುತಿಹ ಗುರುವೆ ಶರಣು ॥೪೬೨೮॥

ನೀನೀಗ ಲಿಂಗಾರ್ಚನೆಯನೆಸಗಿ ಕುಳಿತಿರಲು
ಸಾನುರಾಗದಿ ಮುನ್ನಿನೋಲ್ ಬಂದು ಎಡೆಮಾಡದ
ರೈ ನೀಚರೆನಿಸುವ ಮಣೂರವರ ದುರ್ಬೋಧೆಯಿಂದ ವಿಶ್ವಾಸದಿಂದೆ ।
ನೀನುರದೆ ಬೇಡಿದರೆ ತಂದು ನೀಡುತ್ತಿಹರು
ನೀನುರದೆ ಸುಮ್ಮನಿರೆ ಸುಮ್ಮನೆ ಇರುತ್ತಿಹರ
ಮಾನ ಮಹಿಮಾಗಾರ ಶರಣರಣುಗನೆ ಕೇಳು ಕೇಳೆಂಬ ಗುರುವೆ ಶರಣು ॥೪೬೨೯॥

ಅನ್ಯಾಯನ್ಯಾಯ ನಿರ್ಣಯಗಳನರುಹಿಸುವ
ನನ್ನಿಹಯ ನಿರ್ಣಯ ಪುರಾಣಮಂ ನಿರ್ಮಿಸಿದ
ಚೆನ್ನಬಸವಯ್ಯನಯ್ಯನೆ ನಿನ್ನನುರೆ ಭಜಿಸದನ್ಯಾಯ ನ್ಯಾಯದಿಂದ ।
ಮುನ್ನಿನೋಲಾಚರಿಪ ಚರವರರಿಗುಣಿಸುತಿಹ
ರೆನ್ನ ಮಗನೇ ಈ ಬೆಮ್ಮಳಿಗಿಯವರು ನೋ
ಡಿನ್ನು ಮುಂದುರೆ ಕೆಟ್ಟು ಈ ತಳವ ಬಿಟ್ಟು ಹೋಗುವರೆಂದ ಗುರುವೆ ಶರಣು ॥೪೬೩೦॥

ಅವರಿಗುರೆ ಮಾಡಿದಡಿಗೆಯ ನಿನಗೆ ನೀಡುವರು
ಕುವರನೇ ನಿನಗೆಂದು ಮಾಡಿಯುರೆ ನೀಡರೀ
ಅವಸರದಿ ನಿನ್ನೆ ಮಾಡಿರ್ದ ರೊಟ್ಟಿಯನೆ ಅರ್ಪಿಸಿ ಸವಿವುದೆಂಬುತೊಡನೆ ।
ಯುವತಿಯರ ಕರದಿ ತಂಗಳ ರೊಟ್ಟಿಯಂ ಕೊಂಡು
ಶಿವಲಿಂಗ ಪೂಜಾ ನಿಮಿತ್ತದಿಂ ತಂದ ಪ
ತ್ರವನುರದೆ ಚಟ್ಣಿಯಂ ಕುಟ್ಟಿಸಿ ಸಮರ್ಪಿಸಿ ಸೇವಿಸುತರ್ದ ಗುರುವೆ ಶರಣು ॥೪೬೩೧॥

ಈ ತರದಿನುಣುತಿರಲಿದೇಕೆಂದು ಕೇಳೆ ಸವಿ
ವಾತಿನಿಂ ತಂಗಳದ ರೊಟ್ಟಿ ಹೊಟ್ಟೆಗೆ ಯೋಗ್ಯ
ಓತು ನನಗುರದೆ ಬೇಕಾಗಿ ನಾನುಣ್ಣುತಿಹೆನೆನಲು ಬೆಮ್ಮಳಿಗಿಯವರು ।
ಸೈತಿರದೆ ನೀವು ತಂಗಳ ರೊಟ್ಟಿಯುಣುತಿರಲು
ಪ್ರೀತಿಯಿಂದುಳಿದವರು ಮೃಷ್ಟಾನ್ನಮುಣ್ಣುತಿರಲು
ಪಾತಕತನಂ ಬರ್ಪುದೆಮಗೆನಲು ನಗುತ ತಿಳಿಸುತ್ತಿರ್ದ ಗುರುವೆ ಶರಣು ॥೪೬೩೨॥

ಆರಾಧ್ಯರೇನು ಬೇಕಾದ ಮೃಷ್ಟಾನ್ನಮುಮ
ನೋರಂತೆ ಅನುವರಿತು ಉಣಿಸೆ ಪಾತಕವಿಲ್ಲ
ವಾರಯ್ಯದೇ ಬರುದೆ ಮೃಷ್ಟಾನ್ನವನುವರಿಯದುಣಿಸಲದು ಭ್ರಷ್ಟವಹುದೈ ।
ಈ ರಸೆಯೊಳನ್ಯಾಯ ನ್ಯಾಯದಿಂದಾಚರಿಪ
ಕ್ರೂರ ಚರವರರುಂಬ ಭಾಜನದಿ ನಾನುಣ್ಣ
ಬಾರದೆನಗೊಂದು ಭಾಜನವನುರೆ ಬ್ಯಾರೆನಿಸಿಯುಣಿಸೆಂದ ಗುರುವೆ ಶರಣು ॥೪೬೩೩॥

ಯಾಕಾಗವಲ್ಲದೈ ನಿಮ್ಮ ಭಾಜನದಿ ನೀಂ
ಬೇಕಾದ ಮೃಷ್ಟಾನ್ನವನ್ನು ನೀಡಿಸಿಕೊಂಡು
ಏಕಚಿತ್ತದಿ ಲಿಂಗಕರ್ಪಿಸಿ ಸವಿವುದೆಂದು ಒಂದು ಭಾಜನವನುರದೇ
ಈ ಕಾಲದಲ್ಲಿ ತನ್ನಿಕಟದಲ್ಲಿಯೇ ಇರಲಿ
ಈ ಕೋಣೆಯಿಂ ಪೊರಗ ಒಯ್ಯಬಾರದು ಎಂದು
ತಾಕೀದಿಯಂ ಮಾಡಿ ತನ್ನ ಭಾಜನವೆನಿಸಿ ನೇಮಿಸಿದ ಗುರುವೆ ಶರಣು ॥೪೬೩೪॥

ತನ್ನ ಭಾಜನವನುರೆ ತಾನೆ ಬೆಳಗಿ ತೊಳೆದು
ತನ್ನ ಲಿಂಗಾರ್ಚನೆಗೆ ತಾನೆ ಎಡೆಮಾಡಿ ಮಿಗೆ
ತನ್ನ ಸ್ನಾನಕ್ಕೆ ತಾನೇ ಜಲವನುರೆಕೊಂಡು ಮಿಂದು ಧೌತಾಂಬರವನು ।
ತಾಂ ನಯದಿ ಉಡುತೊಡನೆ ಕುಳಿತು ಲಿಂಗಾರ್ಚನೆಯ
ಚೆನ್ನಾಗಿ ಮಾಡಿ ಲಿಂಗಾರ್ಪಿತವ ಮಾಡಿ ಮಿಗೆ
ತನ್ನ ಹಾಸಿಕೆಯ ತಾನೇ ಮಾಡಿಕೊಂಡು ಮಲಗಿರುವ ಗುರುವರನೆ ಶರಣು ॥೪೬೩೫॥

ತನ್ನ ಹಾಸಿಕೆಯ ತಾನೇ ತೆಗೆದು ನಗುತೊಡನೆ
ತನ್ನ ಮಲಿನಾಂಬರವ ತಾನೆ ತೊಳೆದು ತರುತ
ತನ್ನವರೆನಿಸರು ಈ ಬೆಮ್ಮಳಗಿಯವರೀಗಳೆಂದು ತಾನೊರ್ವನುರದೆ ।
ಚೆನ್ನಿಲಯ ನಿರ್ಣಯ ಪುರಾಣಮಂ ಮಾಣದೆ
ತನ್ನೊಳಗೆ ತಾನೆ ನಲಿದೋಹುತ ವಿನೋದದಿಂ
ದನ್ಯರುರೆ ಕೇಳದೊಲ್ ಮೆಲ್ಲನೇ ಡಂಗುರವ ಹೊಯ್ಸುತಿಹ ಗುರುವೆ ಶರಣು ॥೪೬೩೬॥

ಪದ:

ಸಮಯಗಳೊಳಗೀ ಸಮಯವಧಿಕವೆಂದು
ಹೊಯ್ಯಲೊ ಡಂಗುರವ ।
ಸಮಯಗಳನೆಲ್ಲ ಸರಿಸುವನಿನ್ನೆಂದು
ಹೊಯ್ಯಲೊ ಡಂಗುರವ ।
ಮುರಿಗಾ ಸಮಯವಿನ್ನು ಮುರಿದು ಹೋಗುವುದೆಂದು
ಹೊಯ್ಯಲೊ ಡಂಗುರವ ।
ಮುರಿಗಾಸಮಯದಿಂದೊಡೆದು ಬಂದವರಿವರು

ಹೊಯ್ಯಲೊ ಡಂಗುರವ ।
ಮುರಿದು ಹೋಗುವರೀ ಕುಮಾರ ಸಮಯದವರು
ಹೊಯ್ಯಲೊ ಡಂಗುರವ ।
ಮುರಿದೆಲ್ಲ ಸಮಯಂ ಒಂದೇ ಎನಿಪುದೆಂದು
ಹೊಯ್ಯಲೊ ಡಂಗುರವ ॥೧॥

ಅಷ್ಟಗಿರಿಯಯ್ಯ ನಷ್ಟವಾಗುವನೆಂದು
ಹೊಯ್ಯಲೊ ಡಂಗುರವ ।
ಇಷ್ಟಬಡುವನಾ ಸೋಮಯ್ಯನೆಂದುರೆ
ಹೊಯ್ಯಲೊ ಡಂಗುರವ ।
ಭ್ರಷ್ಟನೆನಿಪನಾ ರಾಚಯ್ಯನೆಂದುರೆ
ಹೊಯ್ಯಲೊ ಡಂಗುರವ ।
ಶಿಷ್ಟನೆನಿಪನಾ ಶಾಂತವೀರಾಖ್ಯಂ
ಹೊಯ್ಯಲೊ ಡಂಗುರವ । ॥೨॥

ಚೌಕಿಮಠದಯ್ಯ ನೂಕಿಸಿಕೊಳುವನೆಂದು
ಹೊಯ್ಯಲೊ ಡಂಗುರವ ।
ನೂಕಿಸಿಕೊಳುತುರೆ ಚೌಕಿಯೊಳಿಹನೆಂದು
ಹೊಯ್ಯಲೊ ಡಂಗುರವ ।
ಚೌಕಿಯೊಳಿರ್ದು ಚೌಕವ ಕೊಡುವನೆಂದು
ಹೊಯ್ಯಲೊ ಡಂಗುರವ ।
ಚೌಕವ ಕೊಟ್ಟು ಬಿಟ್ಟು ಬರುವನೆಂದು
ಹೊಯ್ಯಲೊ ಡಂಗುರವ ॥೩॥

ಓಲಿ ಮಡದಯ್ಯಂ ಓಡಿ ಹೋಗುವನೆಂದು
ಹೊಯ್ಯಲೊ ಡಂಗುರವ ।
ಸಾಲಿ ಅಯ್ಯಗಳಿನ್ನು ಸಾಲಿದ್ದಳುವರೆಂದು
ಹೊಯ್ಯಲೊ ಡಂಗುರವ ।
ಸಾಲಿ ಅಯ್ಯನ ಬೀಗರು ಬೀಗರಿನ್ನೆಂದು

ಹೊಯ್ಯಲೊ ಡಂಗುರವ ।
ಸಾಲಿ ಶಿವಲಿಂಗಪ್ಪನೆನಿಸುವನೀಗೆಂದು
ಹೊಯ್ಯಲೊ ಡಂಗುರವ ॥೪॥

ಶಿವಲಿಂಗ ಸಿದ್ಧಬಸವನೆನಿಸುವನಿನ್ನು
ಹೊಯ್ಯಲೊ ಡಂಗುರವ ।
ಶಿವಲಿಂಗ ಸಿದ್ಧಬಸವ ಸಮಯವಹುದೆಂದು
ಹೊಯ್ಯಲೊ ಡಂಗುರವ ।
ಶಿವಲಿಂಗ ಸಿದ್ಧಬಸವ ಸಮಯದೊಳ್ ಮುಂದೆ
ಹೊಯ್ಯಲೊ ಡಂಗುರವ ।
ತವಕದಿ ಚೆನ್ನಬಸವನೊಪ್ಪುತ್ತಿಪ್ಪ
ಹೊಯ್ಯಲೊ ಡಂಗುರವ ॥೫॥

ಚೆನ್ನಬಸವನೊಪ್ಪುತ್ತಿಪ್ಪ ಸಮಯದಲ್ಲಿ
ಹೊಯ್ಯಲೊ ಡಂಗುರವ ।
ಚೆನ್ನವೀರಂ ಮುಪ್ಪಿನವಣಗಿಪ್ಪ
ಹೊಯ್ಯಲೊ ಡಂಗುರವ ।
ಭಿನ್ನಭಾವದೊಳೆನ್ನೊಳಗಿಪ್ಪನೀಗೆಂದು
ಹೊಯ್ಯಲೊ ಡಂಗುರವ ।
ಭಿನ್ನತೆಯನುಳಿದು ಅಭಿನ್ನತೆಯೊಳಿಹನೆಂದು
ಹೊಯ್ಯಲೊ ಡಂಗುರವ । ॥೬॥

ಮುನವಳ್ಳಿಯಂ ಬಿಟ್ಟು ಮುನಿದು ಹೋಗಿಹನೀಗ
ಹೊಯ್ಯಲೊ ಡಂಗುರವ ।
ಮುನವಳ್ಳಿಯ ವಿರತಮಠದಯ್ಯನೆಂದುರೆ
ಹೊಯ್ಯಲೊ ಡಂಗುರವ ।
ಮುನಿದುಹೋದವನುರೆ ತಾನೆ ಬರುವನೆಂದು
ಹೊಯ್ಯಲೊ ಡಂಗುರವ ।
ಮುನವಳ್ಳಿಯಲ್ಲಿರುವ ಮುಖ್ಯರು ಮುರಿವರಿನ್ನು
ಹೊಯ್ಯಲೊ ಡಂಗುರವ ॥೭॥

ಬೆಮ್ಮಳಗಿಯವರು ನಮ್ಮವರಹುದೆಂದು
ಹೊಯ್ಯಲೊ ಡಂಗುರವ ।
ನಮ್ಮವರೆನಿಸಿ ನಮ್ಮವರೊಲಿಲ್ಲೀಗ
ಹೊಯ್ಯಲೊ ಡಂಗುರವ ।
ನಮ್ಮವರೆನಿಸರು ಇನ್ನೆಂದು ನೀನೀಗ
ಹೊಯ್ಯಲೊ ಡಂಗುರವ ।
ನಮ್ಮವರೆನಿಸುತಿಹರು ನಮ್ಮವರೊಲಿದ್ದಾಗ್ಗೆ
ಹೊಯ್ಯಲೊ ಡಂಗುರವ ॥೮॥

ಬಾಳಿಯವರು ಈಗ ಬಾಳ ಒಳ್ಳೆವರೆಂದು
ಹೊಯ್ಯಲೊ ಡಂಗುರವ ।
ಬಾಳೆವುಳ್ಳವರೆನಿಸರಿನ್ನೆಂದು ನೀನೀಗ
ಹೊಯ್ಯಲೊ ಡಂಗುರವ ।
ಬಾಳಿಯ ಬಸವಲಿಂಗ ಬಾಳುತಿಹನೆಂದು
ಹೊಯ್ಯಲೊ ಡಂಗುರವ ।
ಬಾಳರಿನ್ನುಳಿದ ಬಾಳಿಯವರು ಎಂದು
ಹೊಯ್ಯಲೊ ಡಂಗುರವ ॥೯॥

ಹಿಂದೆ ಹೇಳಿದ ಕಾಲಜ್ಞಾನವಲ್ಲೆಂದು
ಹೊಯ್ಯಲೊ ಡಂಗುರವ ।
ಮುಂದೆ ಹೇಳುವ ಕಾಲಜ್ಞಾನವಹುದೆಂದು
ಹೊಯ್ಯಲೊ ಡಂಗುರವ ।
ಇಂದೆ ಹೇಳಿದ ಕಾಲಜ್ಞಾನವಿದೆಯೆಂದು
ಹೊಯ್ಯಲೊ ಡಂಗುರವ ।
ಹಿಂದೆ ಹೇಳಿರ್ದವರು ಬಂದರೀಗರಿಯೆಂದು
ಹೊಯ್ಯಲೊ ಡಂಗುರವ ॥೧೦॥

ಬಂದಿಹೆವಾವೆಂದು ನುಡಿಯರವರೆಂದೆಂದು
ಹೊಯ್ಯಲೊ ಡಂಗುರವ ।

ಬಂದಾರು ಮುಂದೆ ನಮ್ಮವರೆಂದು ಪೇಳುವರು
ಹೊಯ್ಯಲೊ ಡಂಗುರವ ।
ಬಂದ ಬಳಿಕ ಬಂದರು ಎಂದುಲಿಯರವರು
ಹೊಯ್ಯಲೊ ಡಂಗುರವ ।
ತಂದೆಯೆನಿಪ ಚೆನ್ನವೀರನ ಶರಣರು
ಹೊಯ್ಯಲೊ ಡಂಗುರವ ॥೧೧॥

ಇತಿ ನಿರ್ಣಯ ಪುರಾಣೀ ಬಾತಿನ ನಿರ್ಮಿತಂ ಕಾಲಜ್ಞಾನಂ ವ್ಯಯಾಹ್ವಯಾಯನೇ ಭಾದ್ರಪದ ಮಾಸೇ ಶುಕ್ಲಪಕ್ಷೇ ಪ್ರತಿಪದ್ರವಿವಾರೇ ಮುನಿಪತ್ತನೇ ಬೆಮ್ಮಳಗಿ ಬಸವಶ್ರೇಷ್ಠಾಹ್ವಯ ಭಕ್ತಾಲಯೇ ಸಮಾಪ್ತಂ ಮಂಗಲಮಸ್ತು ಕಲ್ಯಾಣಂ ಭವತು ಭದ್ರಂ ಭೂಯಾತ್.

ವಾರ್ಧಕ ಷಟ್ಪದಿ :

ಇಂತು ಡಂಗುರವ ಹೊಯ್ಸುತ್ತ ಸರಿಸುತ್ತ ನಿ
ಶ್ಚಿಂತೆಯಿಂ ಭಾದ್ರಪದ ಶುದ್ಧ ಷಷ್ಠೀ ತನಕ
ಸಂತೋಷದಿಂದಿರಲನಂತರಂ ಚರರಿಗುಣಿಸುವೆನೆಂದು ಎಂದಿನಂತೆ
ಸಂತೆ ಮೂಳರನುರದೆ ಕೂಡಿಸುತ್ತುರೆ ಉಣಿಸು
ವಂಥ ಸಮಯದಿ ಎಚ್ಚರವ ಮರೆದು ಭಾಜನವ
ತಾಂ ತಳುಹದೇ ಕೊಂಡು ಕೊಟ್ಟುಣಿಸಿದುದನರಿದು ನಗುತಿರುವ ಗುರುವೆ ಶರಣು॥೪೬೪೮॥

ಆರಿಗುರೆ ಕೊಡಬಾರದೀ ಭಾಜನವನೆನು
ತ್ತೋರಂತೆ ಪೇಳಿರುವನವನ ಭಾಜನವನೀ
ಕ್ರೂರತನದನ್ಯಾಯ ನ್ಯಾಯದಿಂದಾಚರಿಪ ಚರದಿಗುರೆ ಕೊಟ್ಟುಣಿಸಿದ ।
ಪೋರರವರಿನ್ನು ಮುನ್ನಿನೊಲಿಲ್ಲಿ ನಿಲರು ಸರ
ಕಾರದವರಿಂ ಬನ್ನಬಡುತಡಗಿ ಇರ್ದು ಈ
ಊರನುರೆ ಬಿಟ್ಟು ಕಂಗೆಟ್ಟು ತೊಳಲುವರೆನುತ ನಗುತಿರುವ ಗುರುವೆ ಶರಣು ॥೪೬೪೯॥

ಇಂತು ತನ್ನೊಳ್ ತಾನೆ ನಗುತಿರ್ದು ತಾನೆಂದಿ
ನಂತೆ ಸ್ನಾನವ ಮಾಡಿ ಲಿಂಗಮಂ ಭಜಿಸಿ ನಿ
ಶ್ಚಿಂತೆಯಿಂ ತನ್ನ ಬಳಿಯಲ್ಲಿರ್ದ ಸಣ್ಣ ಬಟ್ಟಲವನುರೆ ಬೆಳಗಿ ತೊಳೆದು ।

ಮುನ್ನಿನೋಲನ್ನವ ಕೊಳದೆ ಭಕ್ಷಸುಪದಾರ್ಥ
ವಂ ನಾಡೆ ಕೈಕೊಂಡು ನೀಡಿಕೊಂಡುಣುತಿರ್ದು
ಇನ್ನಿಲ್ಲಿ ನಿಲ್ಲಬಾರದು ಮಗನೆಯೆಂದು ತಿಳಿಸುತ್ತಿರ್ದ ಗುರುವೆ ಶರಣು ॥೪೬೫೦॥

ಈಗಳೀ ಬೆಮ್ಮಳಗಿಯವರನುರೆ ಪರಿಕಿಸಿದಿ
ಹೋಗಿ ಸವದತ್ತಿಗಲ್ಲಿರುವ ವಳಸಂಗದವ
ರಾಗಾರದೊಳ್ನಿಂದು ಅಲ್ಲಿರುವ ನಿನ್ನವರೆನಿಪ್ಪ ಸದ್ಭಕ್ತರುಗಳ ।
ಆಗಾರಕುರೆ ಪೋಗಿ ಬೇಡುವುದನುರೆ ಬೇಡಿ
ಹೇಗತನದನ್ಯಾಯದವರನುರೆ ಈಡಾಡಿ
ರೋಗ ಶೇಷಮನಿವಾರಿಸಿಕೊಳುವುದೆಂದು ತಿಳಿಸುತ್ತಿರ್ದ ಗುರುವೆ ಶರಣು ॥೪೬೫೧॥

ಇಂತಿರುಹಿ ಲಿಂಗಾರ್ಚನೆಯನೆಸಗಿಸುತ್ತೆಂದಿ
ನಂತೆ ಲಿಂಗಾರ್ಪಿತವ ಮಾಡಿಯುರೆ ನೋಡಿ ನಿ
ಶ್ಚಿಂತ ನಿರ್ಣಯ ಪುರಾಣವ ಮಾಡದೆ ನಾಳೆ ಕೊಟ್ಟು ಕಳಿಸುವುದೆನುತ್ತ ।
ತಾಂ ತವಕದಿಂ ಬಸವಶೆಟ್ಟಿಗುರದೇ ಪೇಳಿ
ಸಂತಿಮೂಳರಿಗುರದೆ ಪೇಳದೇ ನರಸಪ್ಪ
ನೀ ತಳಹದೆ ಬೀಳ್ಕೊಂಡು ನದಿಯಂ ಕಂಡು ನಲಿದುಲಿದ ಗುರುವೆ ಶರಣು ॥೪೬೫೨॥

ಇಂದು ನದಿಯಂ ದಾಂಟಿ ಅಲ್ಲಿರುವ ಮಠದಯ್ಯ
ನಿಂದೆ ಎರಗಿಸಿಕೊಂಡು ಲಿಂಗಾರ್ಚನೆಯ ಮಾಡಿ
ಎಂದಿನೊಲು ಲಿಂಗಾರ್ಪಿತವ ಮಾಡಿ ಈ ಇರುಳನುರೆ ಕಳೆದು ನಾಳೆಗುರದೆ ।
ಮುಂದಕ್ಕೆ ಸವದತ್ತಿಗೇ ಪೋಪೆನೆನುತಿರ್ದು
ಸಂಧ್ಯಾ ಸಮಯದಲ್ಲಿ ಭಾದ್ರಪದ ಸಿತ ನವಮಿ
ಇಂದುವಾರದಿ ನಾವಿನೊಳ್ಕುಳಿತು ನದಿಯನುರೆ ದಾಂಟಿರುವ ಗುರುವೆ ಶರಣು ॥೪೬೫೩॥

ನದಿಯನುರೆ ದಾಂಟಿಯಲ್ಲಿರುವ ಮಠದಯ್ಯನಿಂ
ಮುದದಿ ಬಿನ್ನಹವೆನಿಸಿಕೊಂಡು ಲಿಂಗಾರ್ಚನೆಯ
ಪದುಳದಿಂ ಮಾಡಿ ಎಂದಿನೊಲು ಅರ್ಪಿಸಿ ಸರಿದು ನಿದ್ರಿಸುತ್ತೆಂದಿನಂತೆ ।
ಪದುಮಸಖನುದಯಿಸುವನಿತರೊಳೆದ್ದು ವೇಗದೊಳೆದು

ಪದಪಿನಿಂ ವಿಭೂತಿಯ ಧರಿಸಿ ಗುರುವಿನಂ ಸ್ಮರಿಸಿ
ಅಧಮರಂ ಸರಿಸಬೇಕೆಂದು ಸವದತ್ತಿಗುರೆ ನಡೆಸಿರುವ ಗುರುವೆ ಶರಣು ॥೪೬೫೪॥

ನಡೆಸಿಯುರೆ ನಡೆದು ಗುಡ್ಡವನೊಯ್ಯನೆ ಏರಿ
ಕಡು ಮೆಲ್ಲನೆ ಇಳಿದು ಹಳ್ಳಮಂ ದಾಂಟಿ ನಡೆ
ದೊಡನೆ ಸವದತ್ತಿಯಂ ಪೊಕ್ಕು ನಸುನಕ್ಕು ಅಲ್ಲಿರುವ ಮುಳಗುಂದ ಮಠದ ।
ಮಡಿವಳಯ್ಯನ ನೋಡಿ ತನ್ಮಠದೊಳುರೆ ಕುಳಿತು
ಕಡಗದ ಬಸವನಾತ್ಮಭವ ಶಾಂತವೀರನಿಂ
ಪೊಡಮಡಿಸಿಕೊಂಡು ವಳಸಂಗದವರಾಲಯದಿ ನಿಂದ ಗುರುವರನೆ ಶರಣು ॥೪೬೫೫॥

ವಳಸಂಗದವರಳಿಯನಿಂ ಪೊಡಮಡಿಸಿಕೊಂಡು
ವಳಸಂಗದವರಾಲಯದಿ ನಿಂದಿರುವ ಗುರುವೆ
ವಳಸಂಗದವರೊಳಗಿರುವ ಮದಡತನವನುರೆ ಸರಿಸೆಂದು ವಂದಿಸುತಿರೆ ।
ವಳಸಂಗದವರ ಮಗನೆನಿಸಿಕೊಳುತಿಹ ಮಗನೆ
ವಳಸಂಗದವರ ಈ ಮನೆಯಲ್ಲಿ ಎರಡು ತಿಂ
ಗಳ ತನಕ ಸುಮ್ಮನೇ ಇರುಯೆಂದು ಸುಮ್ಮನಿರಿಸಿರ್ದ ಗುರುವರನೆ ಶರಣು ॥೪೬೫೬॥

ಇಲ್ಲಿಗುರೆ ಬಂದೆರಡು ತಿಂಗಳಾಯಿತು ಮಗನೆ
ಮೆಲ್ಲನೇ ಮುನ್ನಿನೋಲ್ ನೀನಿನ್ನುಗಳುಪದೆ
ಸಲ್ಲೀಲೆಯಿಂದೆ ನಿನ್ನೊಳಗ ನೀನೇ ನಿನ್ನ ನಿರ್ಣಯಪುರಾಣಮುಮನು ।
ಎಲ್ಲರಿಗೆ ತಿಳಿಯದೋಲೋದುತ ವಿನೋದದಿಂ
ದೆಲ್ಲಾಗಳುಂ ತ್ರಿಕಾಲದಿ ಲಿಂಗಮನರ್ಚಿಸುತ
ಮೆಲ್ಲನೇ ಡಂಗುರವ ಹೊಯ್ಯೆನುತ ತಂಬಿಗೆಯ ಬಡಿಸುತಿಹ ಗುರುವೆ ಶರಣು ॥೪೬೫೭॥

ಪದ:

ಎಲ್ಲರರಿವವೋಲ್ ಕಾರ್ತಿಕೆಯಲ್ಲಿ
ಹೊಯ್ಯಲೊ ಡಂಗುರವ ।
ಇಲ್ಲಿರುವ ವಳಸಂಗದವರೆ ಕೇಳುವುದೆಂದು
ಹೊಯ್ಯಲೊ ಡಂಗುರವ ।

ವಳಸಂಗದವರಿಗೆ ಒಳಿತಾನದೀಗೆಂದು
ಹೊಯ್ಯಲೊ ಡಂಗುರವ ।
ಒಳಿತಾಗುವುದು ಮುಂದೆ ಈ ಪುರಾಣದೆಯೆಂದು
ಹೊಯ್ಯಲ್ಗೊ ಡಂಗುರವ ।
ಅಳಿವನೀಗಳೆ ಶಾಂತವೀರಪ್ಪನೆಂದುರೆ
ಹೊಯ್ಯಲೊ ಡಂಗುರವ
ಅಳಿಯರೀಗಳೆ ಅವನ ತಮ್ಮರೆನಿಪರೆಂದು
ಹೊಯ್ಯಲೊ ಡಂಗುರವ। ॥೧॥

ಚೆನ್ನವೀರನ ಸತಿಯಳಳಿವಳೀ ವತ್ಸರದಿ
ಹೊಯ್ಯಲೊ ಡಂಗುರವ ।
ಚೆನ್ನವೀರಪ್ಪನುರೆ ಅಳುತಿರುವನ್ನೈಯೆಂದು
ಹೊಯ್ಯಲೊ ಡಂಗುರವ ।
ಅನ್ನದಾನವ್ವ ಅಲ್ಲವ್ವರಳುವರೆಂದು
ಹೊಯ್ಯಲೊ ಡಂಗುರವ ।
ನಿನ್ನವ್ವೆಯೆನಿಪ ದಾನವ್ವನಳುವಳೀಗ
ಹೊಯ್ಯಲೊ ಡಂಗುರವ । ॥೨॥

ಶಿವಮೂರ್ತಿಯೆಂಬ ತದ್ಬಂಧುವಳುವನೆಂದು
ಹೊಯ್ಯಲೊ ಡಂಗುರವ ।
ಶಿವಲಿಂಗ ಪರ್ವತರು ಕಾಣದೆ ಅಳುವರೆಂದು
ಹೊಯ್ಯಲೊ ಡಂಗುರವ ।
ಶಿವಲಿಂಗ ಸಿದ್ಧಲಿಂಗರು ಮರುಗುತಿಹರೆಂದು
ಹೊಯ್ಯಲೊ ಡಂಗುರವ ।
ಶಿವಲಿಂಗ ಸಿದ್ಧಲಿಂಗರ ತಾಯಿ ಮರಗಳು
ಹೊಯ್ಯಲೊ ಡಂಗುರವ । ॥೩॥

ಸಂಗ ಸಂಗನಬಸವ ರಕವ ನುಂಗುವರೆಂದು
ಹೊಯ್ಯಲೊ ಡಂಗುರವ ।

ಸಂಗ ಸಂಗನ ಬಸವರವ್ವೆಯಳುವಳೆಂದು
ಹೊಯ್ಯಲೊ ಡಂಗುರವ ।
ತಂಗಿಯೆನಿಪ ತೋಟವ್ವನಳುವಳೆಂದು
ಹೊಯ್ಯಲೊ ಡಂಗುರವ ।
ಸಂಗ ಸತಿಯೆನಿಪ ಮಗಳು ಕಾಣದಳುವಳು
ಹೊಯ್ಯಲೊ ಡಂಗುರವ । ॥೪॥

ಗುರುಸಿದ್ಧನೆಂಬ ತದ್ಬಂಧುವಳುವನೆಂದು
ಹೊಯ್ಯಲೊ ಡಂಗುರವ ।
ಗುರುಬಸವನೆಂಬ ತತ್ಪುತ್ರನಳುವನೆಂದು
ಹೊಯ್ಯಲೊ ಡಂಗುರವ ।
ಗುರುಸಿದ್ಧ ಮುಖ್ಯ ಹೆಮ್ಮಕ್ಕಳಳುವರೆಂದು
ಹೊಯ್ಯಲೊ ಡಂಗುರವ ।
ಗುರು ಚೆನ್ನವೀರನುರೆ ದೂರನಾಗಿಹನೀಗ
ಹೊಯ್ಯಲೊ ಡಂಗುರವ । ॥೫॥

ಇತಿ ಶ್ರೀ ನಿರ್ಣಯ ಪುರಾಣಗೇ ಪ್ರೋಕ್ತಂ ಕಾಲಜ್ಞಾನಂ ವ್ಯಯಾಂ ಹಯಹಾಯನೇ ಕಾರ್ತಿಕಮಾಸೇ ಶುಕ್ಲಪಕ್ಷೇ ಪೌರ್ಣಿಮ್ಯಾಂ ವಳಸಂಗನಾಮ ಗ್ರಾಮೋಪನಾಮಕ ನಿಜಲಿಂಗ ಶಿವಲಿಂಗಾಹ್ವಯ ಭಕ್ತಾಲಯೇ ಸಮಾಪ್ತಂ ಮಂಗಲಮಸ್ತು ಕಲ್ಯಾಣಂ ಭವತು ಭದ್ರಂ ಭೂಯಾತ್ । ಶ್ರೀ ಶಿವಾಯನಮಃ ।

ವಾರ್ಧಕ ಷಟ್ಪದಿ:

ಇಂತು ನುಡಿಸುತ್ತ ತಂಬಿಗೆಯ ಬಡಿಸುತ್ತೊಡನೆ
ಶಾಂತವೀರಪ್ಪನೆಡೆಗುರೆ ಪೋಗದೆ ನಿ
ಶ್ಚಿಂತೆಯಿಂ ತಾನಿರ್ದು ರುದ್ರಾಂಬೆಯಾಲಯದೊಳಿರ್ದು ತಚ್ಛಾಂತವೀರಂ ।
ಅಂತಕಾಂತಕನಾಜ್ಞೆಯಿಂದಳಿದುದಂ ಕೇಳಿ
ದಂತಿ ಚರ್ಮಾಂಬರ ಶರಣರಾಜ್ಞೆಯಿಂದ ಬರೆ
ದಂತ ಪತ್ರವನುದಾಸಿಸಿ ನಾಶವೆಯ್ದಿದನೆನುತ್ತಿರುವ ಗುರುವೆ ಶರಣು ॥೪೬೬೮॥

ಶರಣರಣುಗಂ ಬರೆದ ಪತ್ರವನನಾದರಿಸಿ
ಕರುಬತನದಿಂದಣ್ಣ ತಮ್ಮರ ತನಯರುಗಳ್ಗೆ
ನೆರೆ ಹಂಚಿಕೆಯ ಮಾಡಿಕೊಡದೆ ಬಡದಾಡಿಸುತ್ತಿರ್ದು ಬಡದಾಡುತೊಡನೆ
ಸರಕಾರದವರನುರೆ ಕಂಡು ಬ್ಯಾಸತ್ತು ಸ
ತ್ತಿರುವನವನಿಗೆ ಪದವ ಸೋಂಕಿಸಲ್ಬಾರದೆನು
ತರುಹಿ ಸೋಂಕಿಸದೆ ನೋಡಿ ನಾಡೆ ನಲಿನಲಿದುಲಿವ ಗುರುವೆ ಶರಣು ॥೪೬೬೯॥

ಈ ಶಾಂತವೀರಪ್ಪನೆನಗಪ್ಪನೆನಿಸಿರ್ದ
ನೀ ಶಾಂತವೀರಪ್ಪನೆನ್ನನುರೆ ಸಲಹಿರ್ದ
ನೀಶನಾಜ್ಞೆಯಿಂದ ನಾಶಮುಮನೆಯ್ದಿರುವನೀಗರೋಗದಿಂದೇ ಲೋಗರೊಳ್ ।
ಈ ಶೀಲ ಕಾಲ ದೇಶದ ನಿರ್ಣಯವನರಿಯದು
ಭೂ ಸಮಾಧಿಯೊಳೊಂದಿಸುವೆನೆಂದು ನಲಿದುಲಿದು
ಲೇಸೆನಿಪ ಗೋಮುಖ ಸಮಾಧಿಯೊಳ್ ಪೊಗಿಸಿ ಹುಗಿಸುತ್ತಲಸುವ ಗುರುವೆ ಶರಣು ॥೪೬೭೦॥

ಇನ್ನು ಈ ವಳಸಂಗದವರಿಗುರೆ ತಿಳಿಯದೈ
ಇನ್ನು ಈ ಬೆಮ್ಮಳಗಿಯವರಿಗುರೆ ತಿಳಿಯದೈ
ನಿನ್ನ ನಿರ್ಣಯ ಪುರಾಣದ ಮಹಿಮೆಯೆಂದು ತಿಳಿಸುತ್ತ ತತ್ಸಮಯದಲ್ಲಿ ।
ಬನ್ನಬಡುತೂರನುರೆ ಬಿಟ್ಟು ಕಂಗೆಟ್ಟಿರುವ
ತನ್ನ ಬೆಮ್ಮಳಗಿಯವರಂ ತಾನೆ ನೋಡಿ ದಯ
ದಿಂ ನಾಡೆ ಸಿಕ್ಕ ಒಕ್ಕಲವ ಮುನವಳ್ಳಿಯಿಂ ತರಿಸಿರುವ ಗುರುವೆ ಶರಣು ॥೪೬೭೧॥

ತರಿಸಿ ತಾನಿರುವ ಮನೆಯೊಳಗಿರಿಸಿ ತಾನೊಂದು
ನೆರೆ ಮನೆಯೊಳಿರ್ದು ಬರ್ದುಕಿರ್ದು ತನ್ನ ಕುಟುಂಬ
ನುರೆ ಬರೆಸಿ ಹೊಂಗಲ್ಲಿ ನಿಂದ ಸವದತ್ತಿಯೊಳಗೊಂಡು ಮನೆಯಲ್ಲಿ ನಿಲಿಸಿ ।
ಪರತರಾನಂದದಿಂ ತಾನೊಂದು ಮನೆಯಲ್ಲಿ
ನೆರೆ ಲಿಂಗಪೂಜೆಯಂ ಮಾಡಿ ಲಿಂಗಾರ್ಪಿತವ
ನುರುತರ ತವಕದಿಂದ ಮಾಡಿಯುರೆ ನೋಡಿ ನಲಿದರುಹಿಸುವ ಗುರುವೆ ಶರಣು॥೪೬೭೨॥

ಇನ್ನು ದಾಯಾದಿಗಳನುರೆ ಸರಿಸಲೋಸುಗಂ
ನಿನ್ನ ವಳಸಂಗದವರಲ್ಲಿರುವ ರೂಪಿಕೆಗ
ಳಂ ನಾಡೆ ಬೇಡಬೇಡೆಂದು ಬೇಡಿಸುತ್ತೊಡನೆ ಒಡನೆ ಪೀಡಿಸುತ್ತಿರ್ದು ಮತ್ತಂ ।
ನೀಂ ನಾಡೆಯುಣಬ್ಯಾಡವೆಂದುಂಬುವುದನುಳಿಸಿ
ಚೆನ್ನಾಗಿ ಉಪವಾಸವೆನಿಸಿ ವಳಸಂಗದವ
ರಿಂ ನಾಡೆ ದಾಯಾದಿಯಂತರಿಸಿ ಸರಿಸುವೆನೆನುತ್ತಿರುವ ಗುರುವೆ ಶರಣು ॥೪೬೭೩॥

ನಿಮ್ಮ ರೂಪಿಕೆಗಳಂ ನೀವೀಗ ತಕ್ಕೊಂಡು
ನಮ್ಮಣ್ಣನುರೆ ಬರೆದು ಕೊಟ್ಟ ಪತ್ರವನೆಮಗೆ
ಸುಮ್ಮನೇ ಕೊಟ್ಟು ಹೋಗುವುದಿಲ್ಲವೇ ಮೆಲ್ಲನೇ ಕೋಣೆಯಂ ಪೊಗುವುದ್ಯೆ ।
ನಿಮ್ಮಣ್ಣನೋರ್ವನಿಲ್ಲಿಯೇ ಬಂದಿಹಂ
ನಿಮ್ಮಣ್ಣನಿನ್ನೊಬ್ಬನುರೆ ನಿನ್ನೊಳಿರ್ಪನೆಲೆ
ಚುಮ್ಮನೆ ಚುಮ್ಮತನಮಂ ಬಿಟ್ಟುಕೊಟ್ಟು ಹೋಗೆನಿಸಿರ್ದ ಗುರುವೆ ಶರಣು ॥೪೬೭೪॥

ಮರೆವರಿವಿನಿಂದ ನಿಮ್ಮಣ್ಣನುರೆ ಬರೆದು
ಕೊಟ್ಟಿರುವ ಪತ್ರವನೆಮಗೆ ಕೊಟ್ಟು ಪೋಗೈಯೆಂದು
ಗುರುಸಿದ್ಧ ಶಿವಮೂರ್ತಿ ಮೊದಲಾದ ವಳಸಂಗದವರು ನೆರೆ ಬರುತಲೊಡನೆ ।
ಮರುಳತನದಿಂದ ನಾಂ ಬಂದು ಸಿಕ್ಕಿಹೆನೀಗ
ಮರುಳತನದಿಂದ, ಕೊಡೆನೆನೆ ಇವರು ಬಿಡರೆನು
ತ್ತರಿದು ದಾಯಾದಿಯುರೆ ಚಿಂತಿಸುತ್ತಿಹ ನಸುನಗುತೊರೆವ ಗುರುವೆ ಶರಣು ॥೪೬೭೫॥

ಮುಂಚೆ ದಾಗೀನಿಗಳನೆರಡು ಪಾಲಿಲೆ ಹಂಚಿ
ಹಿಂಚೆ ಈ ರೂಪಿಕೆಗಳಂ ಮೂರು ಪಾಲಿನಿಂ
ಹಂಚಬೇಕೆಂದು ಮುಂದುರೆಗಾಣದೇ ಕೋಣತನದಿಂದ ಮಾಣದಂದು ।
ಲಂಚಮಂ ಕೊಡಿಸಿ ಮೂವರು ಕೂಡಿ ಬಂದಾಗ್ಗೆ
ಹಂಚಿಕೊಡುವುದು ನೀನೆಯೆಂದರುಹಿ ಬರೆಸಿರುವ
ಕೆಂಚ ಮೋರೆಯ ಬಾಳಿಯವನ ಬೀಳಿಸುವೆನೆನುತಿರುವ ಗುರುವರನೆ ಶರಣು ॥೪೬೭೬॥

ಅಂದುರೆ ಬರೆಸಿಕೊಟ್ಟ ದಿಟ್ಟ ಶಿವಲಿಂಗಪ್ಪ
ಇಂದು ಎನ್ನಂ ಬಿಡಿಸು ಬಿಡಿಸೆಂದು ಬಾಯ್ಬಿಡುವ
ಮಂದಮತಿಯುತನೆನಿಪ ದಾಯಾದಿಯಂ ನೋಡಿ ಲಾಳಿಯವನಂದು ನಗುತ ।
ಇಂದು ನ್ಯಾನಿವಗೆ ಹೊಣೆಯಾಗಿರುವೆನ್ನೈ ನಾಳೆ
ತಂದು ನಿಮಗೊಪ್ಪಿಸುವೆನೆಂದು ವಳಸಂಗದವ
ರಿಂದುರೆ ಬಿಡಿಸಿ ಒಯ್ದು ಬೋಧಿಸುತ್ತಿರಲು ನಸುನಗುವ ಗುರುವರನೆ ಶರಣು ॥೪೬೭೭॥

ಲಾಳಿಯವನುರೆ ಬೋಧಿಸುತ್ತಿರಲು ವೆಂಕಪ್ಪ
ನಾಲಯಕೆ ಪೋಗಲವನಾ ಲಾಳಿಯವನಿಗುರೆ
ಹೇಳಲಾ ಲಾಳಿಯವನುರು ತವಕದಿಂದ ದಾಯಾದಿಯಂ ತಂದು ನಿಂದು ।
ಹೇಳಿ ವಳಸಂಗದವರಿಗೆ ನಿಮ್ಮ ಕುಳವನೀ
ವ್ಯಾಳೆದೊಳಗೊಪ್ಪಿಸಿದೆವೆಂದು ಹೊಗಲು ಅದ
ಕೇಳಿ ಕಳವಳಕೊಂಡು ಕುಳ್ಳಿರಿಸಲೊಡನೆ ನಸುನಗುತಿರುವ ಗುರುವೆ ಶರಣು ॥೪೬೭೮॥

ಇನ್ನು ಇವರಿಗೆ ಮಣಿಯನೀ ಡೊಣಗನೆಲೆ ಮಗನೆ
ಇನ್ನೊಮ್ಮೆ ಬಂದು ಒಂದಾಗಿ ಪೋಗುತ್ತಿರುವ
ನೆನ್ನ ಮಗನೇ ಎಂದು ತಿಳಿಸುವನಿತರೊಳೆ ವೆಂಕಪ್ಪನುರೆ ಕರೆಸಿ ಕೇಳಿ ।
ಎನ್ನ ಕಂಡಿರುವನೀಯಯ್ಯನುರೆ ಹೋಗಿ ತ
ಮ್ಮಣ್ಣನಂ ಕೇಳಿ ಬಂದುರೆ ಕೊಟ್ಟು ಪೋಗುತಿಹ
ನೆನ್ನ ಮಾತಂ ಕೇಳಿ ಬಿಡಿರೆಂದು ಬಿಡಿಸಲುರೆ ನಗುತಿರುವ ಗುರುವೆ ಶರಣು ॥೪೬೭೯॥

ಇನ್ನು ಈ ವೆಂಕಪ್ಪಗುರೆ ತಿಳಿಯದೆಲೆ ಮಗನೆ
ಇನ್ನು ಈ ಲಾಳಿಯವನಿಗೆ ತಿಳಿಯದ್ಯೆಯುರದೆ
ಇನ್ನು ಈ ಊರೊಳಿಹ ದೈವಾಗ್ರಗಣ್ಯರೆನಿಪರ್ಗೆ ತಿಳಿಯದು ತಳಹದೆ ।
ನೀಂ ನಾಡೆ ಬಯಲವಾಡದಿ ಬರೆದ ಪತ್ರಂಗ
ಳಂ ನಾಡೆ ನೋಡಿಲ್ಲವೀ ಊರ ದೈವದವ
ರಿನ್ನೊಂದು ಪತ್ರಮುಮನೀಗ ಬರೆಯೆಂದು ಬರೆಸುತ್ತಿರುವ ಗುರುವೆ ಶರಣು ॥೪೬೮೦॥

ಅಥ ಪತ್ರಂ :

ಕಂದ :

ಪಂಚಾಸ್ಯ ಗಣಾಧೀಶನ
ಪಂಚಮುಖದಿಂದ ಜನಿಸುತ ಪಂಚಮವೆನಿಸುತ ।
ಪಂಚ ಪಂಚಾಕ್ಷರಿಯ ನಿ
ಶ್ಚಂಚಲದಿಂ ಜಪಿಸುವಸಮರಿಗೆರಗುವ ಮಿರುಗುವ ॥೧॥

ಚೆನ್ನಪ್ಪಶೆಟ್ಟಿಯೆಂಬಗೆ
ಎನ್ನ ಪೊರೆದಿರುವ ಒಳಸಂಗದವರಿಗೆ ಹಂ ।
ಪಣ್ಣನವರ ಚೆನ್ನಪ್ಪಗೆ
ಎನ್ನಯ ಬೆಳ್ಳುಬ್ಬಿಯ ವಿರೂಪಾಕ್ಷಪ್ಪನಿಗೆ ॥೨॥

ಎನ್ನ ಪಿತೃಕೇತೋಜಾತಗೆ
ಬೆನ್ನಬಲವಾಗಿ ವೆಂಕಪ್ಪಗೆ ತಿಳಿಸುತ್ತ ।
ವನ್ನಿಂ ನಾಡೆ ತೊಡಕಿದ ಲಾಳಿಯ
ಚೆನ್ನಿಗ ಶಿವಲಿಂಗ ಕಾಲವೃಷಾಖ್ಯರುಗಳಿಗೆ ॥೩॥

ಇನ್ನುಳಿದ ಕಲಾದಗಿ ತಿ
ಪ್ಪಣ್ಣನೆನಿಪ್ಪನಿಗೆ ತುಪ್ಪದ ಮಡಿವಾಳಪ್ಪಗೆ ।
ಚೆನ್ನವರದನೆನಿಸುವ ರು
ದ್ರಣ್ಣನಿಗಕ್ಕಿಯ ಶಿವಪ್ಪನೆನಿಪಾತ್ಮಕನಿಗೆ ॥೪॥

ಇಂತೀ ದಶಕರಿಗುರದೆ
ಸಂತಸದಿಂದಿಹ ಸಮಸ್ತ ದೈವದವರಿಗುರೆ ।
ಸಂತೋಷವಾಗಲೆಂದು ಪು
ರಾಂತಕನಾಜ್ಞೆಯೊಳೆ ಲಿಖಿಸಿದುದೇಂ ಕಾರಣವೆನೆ ॥೫॥

ಬಯಲವಾಡದಿ ಬಂದಾ ನಿ
ರ್ಣಯ ಪತ್ರಗಳನ್ನು ನೇತ್ರದಿ ನೋಡಿ ನಲಿದು ನಿ

ರ್ಭಯದಿಂ ಸಕಳರಿಗರುಹದೆ
ಭಯದಿಂ ಮುಚ್ಚಿರುವ ಮೂವರೊಳಳಿದಿಹನೋರ್ವಂ ॥೭॥

ಪರದೇಶಿಯೆನಿಸಿಹನೋರ್ವಂ
ಪರದೇಶಿಯಿವನೆನಿಸದೆ ಸ್ವದೇಶಿಯೆನಿಸುತೀ
ಪುರದೊಳಗಶಕ್ತನಾಗಿಯೆ
ಇರುತಿಹನಿಗೊರ್ವನವನಂ ಕರೆಸುವುದುರದೆ ॥೭॥

ಕರೆಸಿ ವಿಚಾರಿಸದೇ ಬಿ
ಟ್ಟರೆ ನಿಮಗಿನ್ನುರದೆ ಒಳಿತಾಗದು ವೇಗದಿ
ಕರೆಸಿ ವಿಚಾರಿಸಿ ಪರಿಕಿಸಿ
ಕರ ಲೇಸೆನಿಸುವುದು ಮುಂದೆ ಶಿವಕೃಪೆಯಿಂದೆ ॥೮॥

ನಿರ್ಣಯ ಪುರಾಣದೊಡನೇ
ನಿರ್ಣಯ ಪುರಾಣಿಯಣುಗಂ ಜನಿಸಿಹನೀಗ ।
ನಿರ್ಣಯ ಮಹಾಗುರುವೆ ತಾಂ
ನಿರ್ಣಯದಿಂ ನೋಡಿ ನಾಡೆ ನಲಿದೋದುವುದೈ ॥೯॥

ನಿರ್ಣಯವನರಿಯದೆ ನೋಡುವ
ನಿರ್ಣಯವನರಿಯದೋದುವ ಪೇಳುವ ಕೇಳುವ ।
ನಿರ್ಣಯದ ಜಾಣರುಗಳಂ
ತೂರ್ಣದಿನಳಿಸುತ ನಗಿಸುತ ನಗುತಿಹನುರದೆ ॥೧೦॥

ಕಾಲಕಾಲಾಜ್ಞೆಯಿಂದೀ
ಕಾಲದಿ ಒದಗಿರುವ ಕುಂಪಣಿ ಸರಕಾರ ಕಸಿ ।
ಲೀಲೆಯಿಂ ರಾಜನಾಮೆಯ
ನಾಲಸ್ಯವೆನಿಸದೆ ಬರೆಸಿ ರುಜುವೆನಿಸುವನೈ ॥೧೧॥

ಇತಿ ಸನುಮತಿಪುರೇ ವ್ಯಯಾಂಹಯ ರಾಯನೇ ಮಾಘ ಶುದ್ಧ ಪ್ರತಿಪದ್ರವಿವಾಸರೇ ಲಿಖಿತಂ ಕಾಲಜ್ಞಾನ ಪತ್ರಂ ಸಮಾಪ್ತಂ ಮಂಗಲಮಸ್ತು ಕಲ್ಯಾಣಂ ಭವತು ಭದ್ರಂ ಭೂಯಾತ್ , [illegible]ಾಯ ನಮಃ ।

ವಾರ್ಧಕ ಷಟ್ಪದಿ:

ಇಂತು ಪತ್ರವ ಬರೆಸಿ ನೀವಾಗಿ ಕೊಡಬಾರ-
ದಂತಕಾಂತಕ ಭಕ್ತನೆನಿಸುತಿಹ ಕಡಗದಾ
ಶಾಂತವೀರಪ್ಪನಿಂ ಶೆಟ್ಟಿಯಂ ಕರೆಸಿ ಶೆಟ್ಟಿಯ ಕರದಿ ಕೊಟ್ಟು ತಿಳಿಸೈ ।
ಸಂತಸದಿ ಶೆಟ್ಟಿಯುರೆ ಬರೆ ಕರದಿ ಕೊಡುಯೆಂದು
ತಾಂ ತವಕದಿಂ ಶಾಂತವೀರಪ್ಪನಂ ಕಳಿಸಿ
ಸಂತಸದಿನವನೀಗ ಬಾರನೆಂದುರೆ ತಿಳಿಸುತೊಳಗಿರುವ ಗುರುವೆ ಶರಣು ॥೪೬೨॥

ಈಗಳೇ ಶೆಟ್ಟಿಯುರೆ ಬಾರನೈ ಮುಂದೆಯನು
ರಾಗದಿಂದೆಲ್ಲರುರೆ ಬರುವರೆಂದೊರೆದು ಕಡು
ವೇಗದಿಂದೇಳಿಸುತ ಸ್ನಾನಮಂ ಮಾಡಿಸುತ ಲಿಂಗಾರ್ಚನೆಯ ಮಾಡುತ ।
ಮೂಗನಾಗಿರುವುದೀ ಕಾಲದೊಳ್ ಮಾತಾಡ
ಲಾಗದೆಂದುರೆ ತಿಳಿಸಿ ಮಾತಾಡುವದನುಳಿಸಿ
ಮಾಘದೊಳ್ ಲಿಂಗಪೂಜಾ ಸಮಯದೊಳ್ಮೂಗನಾನಿರ್ದ ಗುರುವೆ ಶರಣು ॥೪೬೩॥

ಲಿಂಗಪೂಜಾ ಸಮಯದೊಳ್ಮೂಗನಾಗಿರ್ದು
ಲಿಂಗಪೂಜೆಯನಾರಾರು ನೆರೆ ನಿಟ್ಟಿಸದ
ಹಾಂಗೆ ಜವನಿಕೆಯನಿಕ್ಕಿಸಿ ಕವಾಯವನಿಕ್ಕಿಸುತ್ತಲುರೆ ಗೋಪ್ಯದಿಂದ ।
ಲಿಂಗಮ ಭಜಿಸಿ ಲಿಂಗಾರ್ಪಿತವ ಮಾಡುತೀ
ತಿಂಗಳವ ಕಳೆವುದೆಂದುರದೆ ತಿಳಿಸುತ್ತೊಡನೆ
ಮಂಗತನವನ್ಯಾಯ ನ್ಯಾಯದವರಂ ಭಂಗಿಸುವುದೆಂದ ಗುರುವೆ ಶರಣು ॥೪೬೪॥

ಅಣ್ಣನಂ ಕೇಳಿ ಬರುತಿಹೆನೆಂದು ಹೋಗಿರುವ
ಟೊಣ್ಣೆನುರೆ ಬಾರದೇ ನಿಂದಿರುವನೆಲೆ ಮಗನೆ
ನಿನ್ನ ಒಳಸಂಗದವರಲ್ಲಿರುವ ರೂಪಿಕೆಗಳಂ ಬೇಡು ಬೇಡೆನುತ್ತ ।
ಟೊಣ್ಣೆನಂ ಸಣ್ಣಿಸಲ್ಕೋಸುಗಂ ಬೇಡಿಸುತ
ಚೆನ್ನಾಗಿ ಪೀಡಿಸುತ ಕಾಡಿಸುತ ವೆಂಕಪ್ಪ
ನಿಂ ನಾಡೆ ಉಳಿಯವನಿಗೆ ಹೇಳಿಸುತ್ತ ತರಿಸಿರುವ ಗುರುವೆ ಶರಣು ॥೪೬೫॥

ತರಿಸಿ ಕೌಜರಿಗಿ ಮಡಿವಾಳನ ಮನೆಯೊಳಿರಿಸಿ
ಕರೆಸಿಯುರೆ ಕೇಳಿ ಹೊಂಗಲದಲ್ಲಿ ಜಿಗಜಿನ್ನಿ
ಕರಿಬಸವನಲ್ಲಿ ಇಟ್ಟಿರ್ದ ದಾಗೀನಗಳಂ ವಿಭಾಗಿಸಿ ಕೊಂಡವೋಲ್ ।
ನೆರೆ ಹಂಚಿಕೊಳುವುದೀ ವಳಸಂಗದವರಲ್ಲಿ
ಇರುವ ರೂಪಿಕೆಗಳಂ ಗಳಗಳನೆ ಎನಲು ಇ
ಲ್ಲಿರುವ ರೂಪಿಕೆಗಳಂ ಹಂಚಿಕೊಳುತಿಹೆನೆನಲ್ ನಗುತಿರುವ ಗುರುವೆ ಶರಣು ॥೪೬೯೬॥

ಅಲ್ಲಿ ಹಂಚಿದ ಹಾಂಗೆ ಇಲ್ಲಿಯುರೆ ಹಂಚಿಕೊಂ
ಡಲ್ಲಿರುವ ರೂಪಿಕೆಗಳಂ ಕೊಳುವೆನ್ನೈಯೆಂದು
ಸಲ್ಲೀಲೆಯಿಂ ರಾಜಿನಾಮೆಯಂ ಬರೆದುಕೊಡು ಎನಲು ಮುಂಗಾಣದುರದೆ ।
ಎಲ್ಲರರಿವಂತೆ ಕಾಗದವಿಟ್ಟು ಬರಕೊಟ್ಟು
ಮೆಲ್ಲನೇ ನಮ್ಮಣ್ಣನಂ ಕೇಳುತಿಹೆನೆಂಬ
ಖುಲ್ಲನಂ ಕಂಡು ತರಹರಿಸಲಾರದೆ ಭಂಗಿಸುತ್ತಿರುವ ಗುರುವೆ ಶರಣು ॥೪೬೯೭॥

ಅಣ್ಣನಂ ಕೇಳಿ ಬಹೆನೆಂದುರದೆ ಹೋಗಿರ್ದು
ಟೊಣ್ಣೆತನದಿಂ ಬಾರದೇ ಬಲ್‌ದಿನಂ ನಿಂದು
ಸನ್ನೆಯಿಂ ಬರದೆ ಛೀ ಎನಿಸಿಕೊಂಡುರೆ ಬಂದು ಇಲ್ಲಿಹ
ಕಣ್ಣಿಗೆಟ್ಟುರೆ ಮಾತಕೊಟ್ಟು ಕಾಗದವನೀ
ಅಣ್ಣಗಳ ವಿದ್ಯಮಾನದಿ ಬರೆದುಕೊಟ್ಟಿರ್ದು
ಟೊಣ್ಣೆತನದಿಂ ತಿರಿಗಿ ಮಾತನಾಡದಿರೆಂದು ಗದರುತಿಹ ಗುರುವೆ ಶರಣು ॥೪೬೯೮॥

ಗದಡುತಿಹ ದೈವದವರಂ ನೋಡಿ ದೊಗಬಾಡಿ
ಇದಕೇನುಪಾಯವಿಲ್ಲೆಂದು ದೈವಕ್ಕೆ ಹೇ
ಳದೆ ಹೋದನೀಗ ನಿನ್ನಯ ಷಂಡತಾತನಿಂದುದಿಸಿರ್ದ ದಾಯಾದಿಯು ।
ಮದಡತನದನ್ಯಾಯ ನ್ಯಾಯದವರಂ ಕೂಡಿ
ಕದನಕ್ಕೆ ಮುಖವಾಗುತಿಹನಿನ್ನು ನೀನೀಗ
ಹೆದರದೇ ಹೊಂಗಲಕ ಪತ್ರಮಂ ಬರೆಯೆಂದು ಬರೆಸುತಿಹ ಗುರುವೆ ಶರಣು ॥೪೬೯೯॥

ಅಥ ಪತ್ರಂ:

ಕಂದ:

ನ್ಯಾಯ ನಿರ್ಣಯವ ಬಿಡದ
ನ್ಯಾಯವನುರೆ ಬಿಡದೆ ಬೀಳಿಸುತೇಳಿಸದೆ ನಿ
ರ್ಣಯ ನ್ಯಾಯವನುರೆ ನಿಲಿಸುವ
ನ್ಯಾಯವನರಿವವರ ಗುರು ಸದ್ವೀರಂ ಧೀರಂ ॥೧॥

ಜಿಗಜಿನ್ನಿಯ ಸಿತಿ ವೃಷಭಗೆ
ನಗಜಾವರ ಭಕ್ತನೆನಿಸುವ ಬೆಮ್ಮಳಗಿಯ ವಿರ
ತಗೆ ಕಾದರಹಳ್ಳಿಯ ರು
ದ್ರಗೆ ಜತ್ತಿಯ ವೀರಗೆ ಕುಮಟಗಿಯ ಸಂಗನಿಗೆ ॥೨॥

ಇಂದುಶೇಖರ ದಯಾಬಲ
ದಿಂದುರೆ ಆನಂದವಾಗಲಿ ಎಂದು ವ್ಯಯಾಬ್ಧದಿ
ಬಂದ ಮಾಘ ರವಿವಾರದಿ
ಕಂದನ ಕರದಿಂದ ಬರೆಸಿದ ಪತ್ರವಿದೆಂತೆನೆ ॥೩॥

ಕಂಪಣಿ ಧಣಿಯಿಂದೆ ವಿರಾ
ಜಿಪ ಸವದತ್ತಿಯೆಂಬೀ ಪೇಟೆಯ ದೈವಂ
ಕಪಟಿಗಳ ಕಪಟಮಂ ಪರಿ
ಕಿಪುದಕ ನೀವಿರುವ ಹೊಂಗಲ ಪೇಟೆಯ ದೈವಕೆ ॥೪॥

ಬರೆಸಿಯುರೆ ಕಳಿಸಿ ಪತ್ರವ
ನುರೆ ನೋಡುತೊಡನೆ ತದಭಿಪ್ರಾಯವನರಿವು
ತ್ತುರುತರ ತವಕದಿನದರು
ತ್ತರಮುಮನುರೆ ಬರೆಸಿ ಕಳಿಸಿ ತಿಳಿಸುವುದುರದೆ ॥೫॥

ಬರೆಸಿಯುರೆ ಕಳಿಸಿ ತಿಳಿಸದೆ
ಪರಬೋಧೆಯಿಂದವೇ ಬಾಸಣಿಸಲು ಮುಂದೆ

ಬರುವ ಕಾಲಕ್ಕೆ ನೀವೇ
ಬರುವುದು ನ್ಯಾಯಾಧಿಕಾರಿಗೆಳೆನಿಪರ ಬಳಿಗೆ ॥೬॥

ನ್ಯಾಯಾಧಿಕಾರಿಗಳೆನಿಸುವ
ನಾಯಕರು ಬರೆದ ಪತ್ರವ ನೇತ್ರದಿ ನೋಡುತ ।
ನಾಯಾಸದಿಂ ಯಥಾರ್ಥವ
ಬಾಯಿಂದುರೆ ನುಡಿದು ನಿರ್ಣಯದಿಂದಿರೆ ಲೇಸೈ ॥೭॥

ಬಾಯಿಂದುರೆ ನುಡಿಯದಿರ್ದರೆ
ಕೈಯಿಂದುರೆ ಬರೆದು ಪತ್ರವ ತೋರಿಸಿ ತಿಳಿಸಲ ।
ನಾಯಾಸದಿಂದಹು ಲೇಸೈ
ಕೈಯಿಂದುರೆ ಬರೆದು ಪತ್ರವ ತೋರುವುದುರದೆ ॥೮॥

ಬಾಯಿಂದುರದೇ ನುಡಿಯದೆ
ಕೈಯಿಂದುರೆ ಬರೆದು ಪತ್ರವ ತೋರಿಸದಿರ್ದರೆ
ನ್ಯಾಯಾಧಿಕಾರಿಗಳೆನಿಸುವ
ನಾಯಕರ ಬಳಿಗೆ ಬದಲಾಯಾಸವೆನಿಪುದೈ ॥೯॥

ನ್ಯಾಯಾಧಿಕಾರಿಗಳೆನಿಸುವ
ನಾಯಕರ ಬಳಿಗೆ ಬರುವಾಯಸವೆನಿಸದೊಲು
ನಾಯಾಸದಿಂದ ಬರಲಾ
ರಾಯಸಕೆಯುತ್ತರವನಿತ್ತರುಹಿಸಲುರೆ ಲೇಸೈ ॥೧೦॥

ಲೇಸೆನಿಸಲೋಸುಗಮೀಗಳೆ
ಆಶುವಿನಿಂ ಬರೆಸಿಕಳಿಸಿರುವೀ ಪತ್ರವನುರೆ
ಬಾಸಣಿಸದೆಲ್ಲರಿಗರುಹಿಸ
ಲೀಶಂ ಲೇಸೆನಿಸಿ ಪಾಲಿಸನಾಲಿಪುದುರದೇ ॥೧೧॥

ಇತಿ ಶ್ರೀ ನಿರ್ಣಯ ಪುರಾಣೀನಾಂತರುಣೇನ ನಿರ್ಮಿತಂ ನಿರ್ಣಯಕಾಲಜ್ಞಾನ ಪತ್ರಂ ಸಮಾಪ್ತಂ ಮಂಗಲಮಸ್ತು ಶ್ರೀರಸ್ತು ॥

ವಾರ್ಧಕ:

ಇಂತು ಪತ್ರವ ಬರೆಸಿ ಕಡುತವಕದಿಂದಿಂದು
ಸಂತೆಗುರೆ ಬಂದಿರುವನ್ನೈ ಕುಮಟಗಿಯ ಸಂಗ
ತಾಂ ತಿಳಿಸುತಿಹೆನು ನೀನುರೆ ತಿಳಿಸದೇ ಕೊಟ್ಟು ಕಳಿಸು ಹೋಗಲ್ಲಿಗೆನುತ ।
ಸಂತೆಗುರೆ ಬಂದ ಸಂಗಪ್ಪನಿಗೆ ಕೊಡು ಎಂದು
ತಾಂ ತವಕದಿಂ ಮಿಂದು ಮಡಿಯುಟ್ಟು ಬಳಿಕೆಂದಿ
ನಂತೆಯೇಕಾಂತವಾಸದಿ ಲಿಂಗಮಂ ಭಜಿಸುತೊಳಗಿರುವ ಗುರುವೆ ಶರಣು ॥೪೭೧೧॥

ಸಂಗನುರೆ ಬಂದು ಹೊರಗುರೆ ನಿಂದು ಹೊಸ್ತಿಲದ
ಮುಂಗಡೆಯೊಳಿಟ್ಟು ಕಾಗದಕ್ಕೆ ಪೊಡಮಟ್ಟು ವಳ
ಸಂಗದಾ ಸಿದ್ಧಲಿಂಗಪ್ಪನಿಂದಪ್ಪಣೆಯ ತಕ್ಕೊಂಡು ಪೋಗಲೊಡನೆ ।
ಲಿಂಗಪೂಜಾ ಸಮಯದೊಳ್ ಮಾತನಾಡದೆ ಕ
ದಂಗಳಂ ಮುಚ್ಚಿರುವೆನೀಗ ಇನ್ನುರದೆ ಕ
ದಂಗಳಂ ಮುಚ್ಚಿಸಲ್ಬಾರದೆಂದುರೆ ತಿಳಿಸುತಿರುವ ಗುರುವರನೆ ಶರಣು ॥೪೭೧೨॥

ಕದವನುರೆ ಮುಚ್ಚಿ ಭಜಿಸಲ್ಬಾರದ್ಯೆ ಇನ್ನ
ಹದಿನೇಳನೂರ ನಾಲ್ವತ್ತರೊಂಬತ್ತನೆಯಾ
ಬ್ದದ ಚೈತ್ರದಾದಿಯೊಳ್ ಹಸಿರುಬಣ್ಣದ ಹೊದಿಕೆಯನ್ನು ಸಂಗ್ರಹಿಸುತೊಡನೆ
ಮುದದಿ ಡಂಗುರವನುರೆ ಹೊಯ್ದು ಕಾಲಜ್ಞಾ
ನದ ನುಡಿಯನುರೆ ನುಡಿದು ಲಿಂಗಮಂ ಭಜಿಪುದೆಲೆ
ಮದನಹರ ಶರಣರಣುಗನೆ ಎಂದು ತಿಳಿಸುತೊಳಗಿರುವ ಗುರುವರನೆ ಶರಣು ॥೪೭೧೩॥

ಹಸಿರು ಬಣ್ಣದ ವಸ್ತ್ರವಿಸರಮುರೆ ದೊರೆಯವೆಲೆ
ಹಸುಳನೇ ಕೇಳೀಗ ಬಿಳಿಯ ವರ್ಣದ ವಸನ
ವಿಸರಮಂ ಕೊಂಡು ಕೊಡೆ ನೀಲಗಾರರು ಹಸಿರನುರೆ ಮಾಡಿಕೊಡುವದುರದೆ ।
ಸಸಿನೆ ನಿನ್ನವರೆನಿಪ ವಳಸಂಗದವರಿಗರು

ಹಿಸಲವರೆ ಮಾಡಿಸಿಕೊಡುವರೆಂದು ತಾನೇ ತಿ
ಳಿಸಿ ನೀಲಗಾರರಿಂ ಮಾಡಿಸಿ ತರಿಸಿ ಇಡಿಸುತದುಹಿಸುವ ಗುರುವೆ ಶರಣು ॥೪೭೧೪॥

ಈಗಳೇ ನೀನುರದೆ ಹೊದಿಯಬಾರದು ಮಗನೆ
ಈಗಳೇ ನೀನುರದೆ ಉಡಬಾರದೆಲೆ ಮಗನೆ
ಈಗಳೇ ನೀನುರದೆ ಮುಟ್ಟಬಾರದುಯೆಂದು ತಿಳಿಸಿ ಕಡು ತವಕದಿಂದ ।
ಮಾಘ ಫಾಲ್ಗುಣವೆನಿಪ ಶಿಶಿರ ಋತುವಂ ಕಳೆದು
x x x x x x x x x x x x x x x x x x x x x x x x
ವೇಗದಿಂ ಸರ್ವಜಿನ್ನಾಮ ಸಂವತ್ಸರಾದಿಯೊಳುಲಿವ ಗುರುವೆ ಶರಣು ॥೪೭೧೫॥

ಪದ:

ಮುಂದಾಗುವದನೀಗ ಕೇಳಿರಿ ನೀವೆಂದು
ಹೊಯ್ಯಲ ಡಂಗುರವ
ಹಿಂದಾದುದನೀಗ ನೀವೆ ತಿಳಿವುದೆಂದು
ಹೊಯ್ಯಲ ಡಂಗುರವ

ಶೆಟ್ಟಿಗಳೆನಿಪರು ಸೊಟ್ಟಿಗಳಹರೆಂದು
ಹೊಯ್ಯಲ ಡಂಗುರವ
ಸೊಟ್ಟಿಗಳೆನಿಪರು ಸೆಟ್ಟಿಗಳಹರೆಂದು
ಹೊಯ್ಯಲ ಡಂಗುರವ
ಖೊಟ್ಟಿ ಮಾತಂ ಪಿಡಿದ ಶೆಟ್ಟಿಗಳೆ ಸೊಟ್ಟಿಗಳು
ಹೊಯ್ಯಲ ಡಂಗುರವ
ಖೊಟ್ಟಿ ಮಾತಂ ಬಿಟ್ಟ ಸೊಟ್ಟಿಗಳೆ ಶೆಟ್ಟಿಗಳು
ಹೊಯ್ಯಲ ಡಂಗುರವ ॥೧॥

ಕುಟ್ಟಿಸುವನಾ ಶೊಟ್ಟಿತನದ ಶೆಟ್ಟಿಗಳನ್ನು
ಹೊಯ್ಯಲ ಡಂಗುರವ
ಕುಟ್ಟಿ ಬಿಡಿಸುವನಾ ಖೊಟ್ಟಿತನಗಳನ್ನು
ಹೊಯ್ಯಲ ಡಂಗುರವ
ಖೊಟ್ಟಿತನವ ಬಿಡಿಸಿ ಶೆಟ್ಟಿಗಳೆ ಎನಿಪಂ

ಹೊಯ್ಯಲ ಡಂಗುರವ
ಶೆಟ್ಟಿಗಳ ಶೆಟ್ಟಿ ಸರಶೆಟ್ಟಿಯವನೆ
ಹೊಯ್ಯಲ ಡಂಗುರವ ॥೨॥

ಸಿಂಹಾಸನಾಧ್ಯಕ್ಷರಾವೆಂದುಲಿವರೀಗ
ಹೊಯ್ಯಲ ಡಂಗುರವ
ಸಿಂಹಾಸನದವರ ಸಂಹರಿಪನೆಂದು
ಹೊಯ್ಯಲ ಡಂಗುರವ
ಸಂಹರಿಪನವರ ದುರಾಚಾರವನೆಂದು
ಹೊಯ್ಯಲ ಡಂಗುರವ
ಸಂಹರಿಸಿ ಮತ್ತಂ ಪುಟ್ಟಿಸಿ ಪೊರೆವನೆಂದು
ಹೊಯ್ಯಲ ಡಂಗುರವ ॥೩॥

ಮೂರು ಸಿಂಹಾಸನದ ಮೂಲವರಿಯರೀಗ
ಹೊಯ್ಯಲ ಡಂಗುರವ
ಆರೈವುತ್ತೈದು ಸಿಂಹಾಸನವನರಿಯರು
ಹೊಯ್ಯಲ ಡಂಗುರವ
ಆರನೆಯ ಸಿಂಹಾಸನವರಿವರೆಂತೀಗ
ಹೊಯ್ಯಲ ಡಂಗುರವ
ಆರನೆಯ ಸಿಂಹಾಸನಾಧೀಶನೀಶಂ
ಹೊಯ್ಯಲ ಡಂಗುರವ ॥೪॥

ಆರು ಮೊಗನವತಾರಿಯಹ ಚೆನ್ನಬಸವಂ
ಹೊಯ್ಯಲ ಡಂಗುರವ
ಆರು ಸಿಂಹಾಸನದಧೀಶನೆನಿಪನವನೆ
ಹೊಯ್ಯಲ ಡಂಗುರವ
ಆರನೆಯ ಕಲಶಾಧೀಶನೆನಿಪನವನೆ
ಹೊಯ್ಯಲ ಡಂಗುರವ
ಆರಯ್ಯಲವನೇ ಗುರುವೆನಿಪನ್ಯೆವರಿಗೆ
ಹೊಯ್ಯಲ ಡಂಗುರವ ॥೫॥

ಗುರು ಸದ್ವೀರಾರ್ಯನೆನಿಸುವನವನೆಂದು
ಹೊಯ್ಯಲ ಡಂಗುರವ
ಗುರು ಸದ್ವೀರನ ಶಿಷ್ಯನೆನಿಪನೆಂದು
ಹೊಯ್ಯಲ ಡಂಗುರವ
ಗುರು ಸದ್ವೀರನ ಶಿಷ್ಯನಶಿಷ್ಟನೆನಿಪಂ
ಹೊಯ್ಯಲ ಡಂಗುರವ ॥೬॥

ಗುರುವಿಂಗೆ ಶಿಷ್ಯಂ ಶಿಷ್ಯಂಗೆ ಗುರುವೆಂದು
ಹೊಯ್ಯಲ ಡಂಗುರವ
ಗುರು ಶಿಷ್ಯರೊಳಗಿರುವ ಗುರುಶಿಷ್ಯನವನೆಂದು
ಹೊಯ್ಯಲ ಡಂಗುರವ
ಹಿರಿಯಂಗೆ ಕಿರಿಯಂ ಕಿರಿಯಂಗೆ ಕಿರಿಯಂ
ಹೊಯ್ಯಲ ಡಂಗುರವ
ಹಿರಿಕಿರಿಯರೊಳಗಿರುವ ಹಿರಿಕಿರಿಯನವನೆಂದು
ಹೊಯ್ಯಲ ಡಂಗುರವ ॥೭॥

ಅಂಗಕ್ಕೆ ಲಿಂಗಂ ಲಿಂಗಕ್ಕೆ ಅಂಗಂ
ಹೊಯ್ಯಲ ಡಂಗುರವ
ಅಂಗ ಲಿಂಗದೊಳಿರುವ ಶಿವಲಿಂಗವವನೆಂದು
ಹೊಯ್ಯಲ ಡಂಗುರವ
ಅಂಗಲಿಂಗದೊಳಿರುವ ಶಿವಲಿಂಗವಾನೆಂದು
ಹೊಯ್ಯಲ ಡಂಗುರವ
ಲಿಂಗದೊಳಿಹ ಮಹಲಿಂಗವೆ ಅವನೆಂದು
ಹೊಯ್ಯಲ ಡಂಗುರವ ॥೮॥

ಈ ಸರ್ವಜಿನ್ನಾಮ ಸಂವತ್ಸರದಲ್ಲಿ
ಹೊಯ್ಯಲ ಡಂಗುರವ
ವ್ಯಾಸಹಸ್ತಕ್ಕಧಿಕ ಎನಿಸುವನೆಂದು
ಹೊಯ್ಯಲ ಡಂಗುರವ

ಈ ಸಾಮ್ಯವಾರವೆನಿಸುವಬ್ದಾಯೊಳೆ
ಹೊಯ್ಯಲ ಡಂಗುರವ
ಲೇಸೆನಿಸದನ್ಯಾಯ ನಾಮಕರಿಗಿನ್ನೆಂದು
ಹೊಯ್ಯಲ ಡಂಗುರವ ॥೯॥

ಇತಿ ನಿರ್ಣಯ ಮಹಾಪುರಾಣೀನಾಂ ತರುಣೇನ ನಿರ್ಮಿತಂ ನಿರ್ಣಯ ಕಾಲಜ್ಞಾನಂ ಸಮಯಮೀಪುರೇ ವಳಸಂಗನಾಮಗ್ರಾಮೋಪನಾಮಕ ನಿಜಲಿಂಗ ಶಿವಲಿಂಗಾಹ್ವಯ ಭಕ್ತಾಲಯೇ ಸಮಾಪ್ತಂ ಮಂಗಲಮಸ್ತು । ಶ್ರೀರಸ್ತು । ॥೪೭೪॥

ವಾರ್ಧಕ:

ಇಂತು ಕಾಲಜ್ಞಾನವನುಲಿಸುತೊಡನೆ ಸ
ಮಂತು ಡಂಗುರವ ಹೊಯ್ಸುತ್ತ ಲಿಂಗಾರ್ಪಿತವ
ಸಂತಸದಿ ಮಾಡಿಯುರೆ ನೋಡುತ ಹರಿದ್ವರ್ಣವಸ್ತ್ರಗಳನೊಂದು ಕಡೆಗೆ ।
ತಾಂ ತವಕದಿಂದಿಡಿಸಿ ಮುಂದುರೆ ಪೊದೆವೆನೆಂದು
ಅಂತಕಾಂತಕ ಲಿಂಗ ಪೂಜಾ ವಿನೋದದಿ ವ
ಸಂತ ಋತುವಂ ಕಳೆದು ತಿಳಿಸುತ್ತೊಳಗ ತೊಳಗುತಿರುವ ಗುರುವರನೆ ಶರಣು ॥೪೭೫॥

ಇನ್ನು ನೀನೀ ಮನೆಯೊಳುರೆ ನಿಲ್ಲಬಾರದೈ
ನಿನ್ನ ಅರ್ಧಾಂಗಿಯಿರ್ದಾಲಯದೊಳಿರುತಿರ್ದು
ನಿನ್ನ ವಳಸಂಗದವರಲ್ಲಿರುವ ನಿನ್ನ ರೂಪಿಕೆಗಳಂ ಬೇಡು ಬೇಡೈ ।
ಎನ್ನ ಮಗನೇ ಎಂದು ತಿಳಿಸುತೇಳಿಸುತೊಡನೆ
ಬೆನ್ನ ಶೂಲಿಯ ಬರಿಸಿ ಸತಿಯಿರ್ದ ಗೃಹದಲ್ಲಿ
ಚೆನ್ನಾಗಿ ಒರಗಿಸಿ ಶಿವಾರ್ಚನೆಯನುಳಿಸಿ ನಗುತಿರುಹಿಸುವ ಗುರುವೆ ಶರಣು ॥೪೭೬॥

ಚೆನ್ನವೀರಪ್ಪನರ್ಧಾಂಗಿಯುರದೆ ಮಡಿದು
ಇನ್ನೆರಡು ದಿನಕೆ ಮೂದಿಂಗಳೆನಿಸಿತ್ತಿಹುದು
ಚೆನ್ನವೀರಪ್ಪನಿಗುರೆ ಮದುವೆಯಾಗುತಿಹೆನೆಂದು ಮುಂದುರೆಗಾಣದೆ ।
ತನ್ನ ಮನಸಿಗೆ ಬಂದ ಹಾಂಗೆ ಹರಿದಾಡುತಿಹ
ನೆನ್ನ ಮಗನೇ ಹೋಗಿ ತಿಳಿಸಿ ಬಾಯೆಂದರುಹಿ
ಇನ್ನು ಲಿಂಗಾರ್ಚನೆಯ ಮಾಡು ಏಳೆಂದು ಏಳಿಸಿದ ಗುರುವರನೆ ಶರಣು ॥೪೭೭॥

ಏಳೆಂದು ಏಳಿಸುತ ಸ್ನಾನಮಂ ಮಾಡಿಸುತ
ನಾಳಿಗೆ ಬರುವೆನೆಂದು ಭೂತಿಯಾಧಾರಮಂ
ಕೇಳುತಿಹ ರುದ್ರಾಂಬೆಯಾದಿಯಾದವರಿಗುರೆ ಹೇಳಿಸುತ ತರಿಸಿಕೊಳುತ ।
ಆಲಯವನುಳಿದು ನಿಜರಮಣಿಯುರದೇ ನೆಲಸಿ
ದಾಲಯದಿ ನಿಂದು ಎಂದಿನೊಲು ಪೋಗುತ ಬರುತ
ಲೀಲೆಯಿಂದಿರ್ದು ಹನಸಿಗೆ ಹೋಗಿ ತಿಳಿಸಿ ಬಂದಿರುವ ಗುರುವರನೆ ಶರಣು ॥೪೭೮॥

ಮನಸಿಗುರೆ ಬಂದಂತೆ ಹರಿದಾಡಬ್ಯಾಡೆಂದು
ಹನಸಿಗುರೆ ಹೋಗಿ ಅಲ್ಲಿರುವ ವಳಸಂಗದವ
ನೆನಿಸುತಿಹ ಚನ್ನವೀರಪ್ಪಗುರೆ ಹೇಳಿ ಬಂದಿರ್ದ ಇನ್ನಿಲ್ಲಿ ಇರುವ ।
ಗುಣಿಯೆನಿಪ ಗುರುಸಿದ್ಧನಿಗೆ ತಿಳಿಸು ತಿಳಿಸೆಲೆ
ತನಯನೆ ನೀನವಗೆ ಕಾಕಾ ಏನುತ್ತ ಬಲು
ಇನಿವಾತಿನಿಂ ನುಡಿಯುತಿರ್ಪ ಇನ್ನುರೆ ನುಡಿಯ ಬ್ಯಾಡೆಂಬ ಗುರುವೆ ಶರಣು ॥೪೭೯॥

ಕಾಕಾಯೆನಲು ಕಾಗೆಯದು ನಿಶ್ಚಯಂ ಮಗನೆ
ಯಾಕಾಗವಲ್ಲದುರೆ ನುಡಿದರೂ ನುಡಿಯೆನುತ
ಈ ಕಾಲದೊಳ್ನಮ್ಮ ರೂಪಿಕೆಗಳಂ ನಮಗೆ ಕೊಡುಯೆಂದು ನುಡಿಸಲೊಡನೆ ।
ಯಾಕಾಗವಲ್ಲದ್ಯೆ ಪಾವತಿಯನುರೆ ಕೊಟ್ಟ
ರೀಕಾಲದೊಳ್ ನಿಮ್ಮ ರೂಪಿಕೆಗಳನ್ನು ನಿಮ
ಗೇ ಕೊಡುವೆವೆನಲು ನಸುನಗುತೊಳಗೆ ಕುಳಿತು ತಿಳಿಸುತ್ತಿರುವ ಗುರುವೆ ಶರಣು॥೪೮೦॥

ನಿಮಗೇ ಕೊಡುವೆವೆಂದು ನೀನುರದೆ ಬರೆದು ಈ
ಸಮಯದೊಳು ತೊರ್ಲಿಯವನಿಂ ಬಂದ ರೂಪಿಕಾ
ಸಮದಾಯಮಂ ಕೊಡಲು ಕೊಟ್ಟಷ್ಟು ರೂಪಿಕದ ಪಾವತಿಯ ಕೊಡುವೆನೆನಲು ।
ನಿಮಗಾನು ಬರೆಕೊಡುವ ಕಾರಣವದಿಲ್ಲವ್ಯೆ
ನಮಗೆ ನೀವೇ ಪಾವತಿಯ ಕೊಟ್ಟು ರೂಪಿಕಾ
ಸಮದಾಯಮಂ ಕೊಂಡು ಪೋಗು ಪೋಗೆನಲು ನಗುತೊರೆವ ಗುರುವರನೆ ಶರಣು॥೪೮೧॥

ಒಬ್ಬನಿಟ್ಟ ರುಪಾಯನಿಬ್ಬನಿಗೆ ಕೊಡಬಾರ
ದಿಬ್ಬರಿಟ್ಟ ರುಪಾಯನೊಬ್ಬನಿಗೆ ಕೊಡಬಾರ

ದಿಬ್ಬರಿಗೆ ಇಬ್ಬರಿಟ್ಟಿರ್ದುದಂ ಒಬ್ಬನಿಟ್ಟಿರ್ದುದಂ ಒಬ್ಬಗುರದೆ ।
ಸಬ್ಬರುರೆ ನಲಿವವೋಲ್ ಕೊಡುವ ನ್ಯಾಯವೆ ಇರಲ್
ಒಬ್ಬನಿಟ್ಟಿರಲು ಮೂವರಿಗೆ ಕೊಡುವೆವು ಎಂದು
ಮಬ್ಬಿನನ್ಯಾಯದಿಂ ಬರೆಕೊಟ್ಟ ಕಾರಣದಿನೆನುತುಲಿವ ಗುರುವೆ ಶರಣು ॥೪೭೩೨॥

ಮುಂಚೆ ಕೇಳಲು ಮೂವರು ಕೂಡಿ ಬಹುದೆಂದು
ಹಿಂಚೆ ದಾಯಾದಿಯಂತರಿಸಲವನುರೆ ಸರಿದು
ಪಂಚಮಾನ್ವಿತ ದೈವಕುರೆ ಹೇಳದೆ ಖೂಳತನದಿಂದೆ ಹೋದನವರಿಂ ।
ನಾಂಚಿ ನಿಮ್ಮೊಳ್ ನೀವೆ ತಿಳಿದು ಈಗುರೆ ಕೊಡುವ
ವಾಂಛೆ ಇರಯರೆ ಕೊಡುವುದೈ ರೂಪಿಕೆಯ ಕೊಡದ
ವಾಂಛೆಯಿದೆ ಕೊಡಬಾರದೈಯೆಂದು ನಸುನಗುತ್ತರುಹಿಸುವ ಗುರುವೆ ಶರಣು ॥೪೭೩೩॥

ಮಡಿವಳನ ಕಡೆಯ ಬಾಕಿ ರುಪಾಯ್ಗಳಂ ನಾವೆ
ಕೊಡುವೆವೆಂದುರೆ ನೀವು ಬರೆದು ಕೊಟ್ಟಿರ್ದಡಂ
ತಡವೆನಿಸದೇ ಪಾವತಿಯ ಕೊಟ್ಟು ರೂಪಿಕೆಗಳಂ ಕೊಂಬುದಿದು ನ್ಯಾಯವೈ ।
ಮಡಿವಳನ ಕಡೆಯ ಬಾಕಿ ರುಪಾಯ್ಗಳಂ ನಾವೆ
ಕೊಡುವೆವೆಂದುರೆ ಬರೆದು ಕೊಡದಿರಲ್ ಪಾವತಿಯ
ಕೊಡುವುದನ್ಯಾಯವೈ ಪಾವತಿಯ ಕೊಡೆನೆನಿಸಿ ಬಳಿಕುಲಿವ ಗುರುವೆ ಶರಣು ॥೪೭೩೪॥

ನಿಮಗೆ ಪಾವತಿಯನುರೆ ಬರೆಕೊಟ್ಟ ರೂಪಿಕಾ
ಸಮವಾಯಮಂ ಕೊಂಬುವನಕ ನಿಮ್ಮಲ್ಲಿರಲಿ
ಸಮಯವಲ್ಲಿದು ಈಗ ನೀನುರದೆ ಮದುವೆಯಾಗುತ್ತಿರ್ಪಿ ಎಂಬುತೊಡನೆ ।
ನಮಗೆ ನಿಮಗೀಗ ಸಂಘಟಿಸದೀ ಲಿಂಗ ಜಂ
ಗಮದ ಪದತೀರ್ಥ ಪ್ರಸಾದ ಸೇವನದೊಡನೆ
ಮಮತೆಯಿಂದಿರುಯೆಂದು ತನ್ಮಂದಿರವನುರದೆ ನಿಟ್ಟಿಸದ ಗುರುವೆ ಶರಣು ॥೪೭೩೫॥

ಮಂದಿರವ ನಿಟ್ಟಿಸದೆ ಹಂದರವ ಹಾಯದೆ
ಎಂದಿನೊಲು ರುದ್ರಾಂಬೆಯಾಲಯಕೆ ಪೋಗಿ ಬರು
ತೆಂದಿನಂತೆ ನಿಜಾರ್ಧಾಂಗಿ ಇರ್ದಾಲಯದಿ ನಿಂದು ಜೇಷ್ಠಾಂತ್ಯವೆನಿಸಿ ।

ಇಂದು ಮುನವಳ್ಳಿಗುರೆ ನಡೆಯೆಂದು ನಡೆಸಿ ನಗು
ತೆಂದಿನೊಲು ನರಸಪ್ಪನಾಲಯವನುರೆ ಪೊಗಿಸಿ
ನಿಂದು ದಾಯಾದಿಯುರೆ ಸರಿದುದಂ ತಿಳಿಸುತೊಳಗಿರುವ ಗುರುವರನೆ ಶರಣು ॥೪೭೩೬॥

ದೈವದವರೆನಿಪ ಹಿರಿಯರ ವಿದ್ಯಮಾನದಿಂ
ದಾವಗಂ ಕುಂಪಣೀ ಸರಕಾರದವರಿಗುರೆ
ಸಾವಧಾನದಿ ರಾಜಿನಾಮೆಯಂ ಬರೆಸಿ ರುಜುವೆಂದು ಬರೆದುಕೊಟ್ಟು।
ಗಾವಿಲತನದಿ ಮತ್ತಮುರೆ ನುಡಿದು ನುಡಿಯುಡುಗಿ
ದೈವದವರಿಂದ ಛೀ ಛೀ ಎನಿಸಿಕೊಳುತಿರ್ದು
ದೈವಕುರೆ ಹೇಳದೇ ಹೋಗಿರುವನೆನಿಸಿ ನಗಿಸುತ್ತುಲಿವ ಗುರುವೆ ಶರಣು ॥೪೭೩೭॥

ನಿನ್ನ ದಾಯಾದಿಯುರೆ ಬಾರನೈ ಬಂದರೂ
ನೀಂ ನುಡಿದ ನುಡಿಯೆ ದಿಟವೆನಿಸುತಿಹುದು ಜಗ
ಜಿನ್ನಿಯವನೆನಿಪ ಕರಿಬಸವನುತ್ತರವನುರೆ ತಿಳಿಸುವುದು ದೈವದವರ್ಗೆ।
ಇನ್ನು ನೀನಾಲಸ್ಯವೆನಿಸಬಾರದು ಎಂದು
ಚೆನ್ನಾಗಿ ತಿಳಿಸಿ ಮುನವಳ್ಳಿಯಿಂದುರದೆ ಜಿಗ
ಜಿನ್ನಿಯವನಿರುವ ಹೊಂಗಲಕುರದೆ ಬರಿಸುತರುಹಿಸುವ ಗುರುವರನೆ ಶರಣು ॥೪೭೩೮॥

ಈಗಲೇ ನೀನವನ ಮನೆಯಲ್ಲಿಯುರೆ ನಿಲ್ಲ
ಲಾಗದೈ ಎಂದರುಹಿ ಬೆಮ್ಮಳಿಗಿ ವಿರತಪ್ಪ
ನಾಗಾರದೊಳ್ ನಿಲಿಸಿ ನಿಂದು ಶೆಟ್ಟಿಗೆ ತಿಳಿಸಿ ಕರಿಬಸವ ಮುಖ್ಯರುಗಳಂ।
ವೇಗದಿಂ ನೆರಪಿಯುರೆ ಕೇಳಿ ನೀನಿನ್ನುರದೆ
ಪೋಗು ಸವದತ್ತಿಗಾಂ ಬರೆಸಿ ಕಳಿಸುವೆನೆನು
ತ್ತೀಗ ಜಿಗಜಿನ್ನಿಯವನಿಗೆ ಹೇಳಿ ನಡೆಯೆಂದು ನಡೆಸುತಿಹ ಗುರುವೆ ಶರಣು ॥೪೭೩೯॥

ಜಿಗಜಿನ್ನಿಯವನಿಗುರೆ ಹೇಳಿ ನಡೆಸುತ್ತೊಡನೆ
ಒಗುಮಿಗೆಯ ತವಕದಿಂ ಮುನಿವಳ್ಳಿಯಲ್ಲಿರುವ
ಜಿಗಜಿನ್ನಿಯ ಶಿವಪ್ಪ ಮೊದಲಾ ಪಂಚರುರೆ ನಾಂಚುವಂತೆ ನಿರಂತರಂ।

ವಿಗಡತನದನ್ಯಾಯ ನ್ಯಾಯಮಂ ಪಿಡಿದನಾ
ಯಿಗಳೆನಿಪ ದಾಯಾದಿಗಳು ಗಡಬಡಿಸುವಂತೆ
ಮಗುಳೆ ಈ ಶ್ರಾವಣದಿ ಬರುವದುತ್ತರವೆನುತ್ತ ರಕ್ಷಿಸುವ ಗುರುವೆ ಶರಣು ॥೪೭೪೦॥

ಇಂತರುಹಿಸುತ್ತ ನಡೆಸುತ್ತೊಡನೆ ಯಕ್ಕುಂಡಿ
ಯಂ ತವಕದಿಂ ಪೊಗಿಸಿ ಅಲ್ಲಿರುವ ಮಠದೊಡೆಯ
ರಂತರಂಗದೊಳಿರುವ ಭಕ್ತಿಯಂ ತಿಳಿದು ಭಕ್ತರ ಮನವನುರೆ ಪರಿಕಿಸಿ ।
ತಾಂ ತವಕದಿಂದ ಮುನಿವಳ್ಳಿಯಂ ಪೊಕ್ಕು ನಿ
ಶ್ಚಿಂತೆಯಿಂ ಬಾಳೀಯವರ ಭಕ್ತಿಯಂ ನೋಡಿ
ಸಂತಸದಿ ಸವದತ್ತಿಯಂ ಪೊಕ್ಕು ಶ್ರಾವಣದಿ ನೆಲಸಿರ್ದ ಗುರುವೆ ಶರಣು ॥೪೭೪೧॥

ಈಗ ನೀನಾರಾರ ಮನೆಗುರದೆ ಪೋಗದೆ
ಶ್ರೀಗಣಸಹಸ್ರನಾಮವನುರದೆ ಪಠಿಸುತನು
ರಾಗದಿಂ ಲಿಂಗಾರ್ಚನೆಯ ಮಾಡು ಮಾಡೆಂದು ಮಾಡಿಸುತ್ತಿರ್ದು ಮತ್ತಂ ।
ರೋಗದಿಂದುರೆ ಬಳಲುತಿರ್ಪ ಸೋಬವ್ವ ನಾಂ
ಪೋಗುವಾಗಾಷಾಢ ಮಾಸದೊಳುರದೆ ಅನು
ರಾಗದಿಂ ಹರಕೆಯಂ ಹೊತ್ತಿರುವಳ್ಳೈ ಎನುತ್ತರುಹಿಸುವ ಗುರುವೆ ಶರಣು ॥೪೭೪೨॥

ಹರಕೆಯಂ ಹೊತ್ತಂತೆ ಇಳುಹಿದರೆ ಲೇಸು
ಹರಕೆಯಂ ಹಿಂದಕುಳಿಸಿದರೆ ಲೇಸೆನಿಸದೆಲೆ
ತರುಣನೇ ನೀನೀಗ ಸುಮ್ಮನಿರು ತಾನಾಗಿ ಬಂದರುರೆ ಬಾಯೆಂಬುದೈ ।
ಎರಕದಿಂದೆರಗಿ ಕೈಕೊಳಿಸೆ ಕೈಕೊಳುವುದ
ನ್ಯರ ಧನವನುರದೆ ಮುಟ್ಟಬಾರದು ಎಂದು
ನೆರೆ ತಿಳಿಸಿ ಅನ್ಯರನ್ನವ ಶ್ರಾವಣಗಿ ಸ್ವೀಕರಿಸದಿಹ ಗುರುವೆ ಶರಣು ॥೪೭೪೩॥

ಅನ್ಯರನ್ನವನುರದೆ ಸ್ವೀಕರಿಸದೇ ಇರ್ದು
ಅನ್ಯರಾಲಯಕುರದೆ ಪೋಗದೇ ಇರುತಿರ್ದು
ಅನ್ಯಾಯನ್ಯಾಯದಿಂ ನಡೆವ ಚರವರರಿಗೆರಗದಿರೆಂದು ಎರಗದಿರ್ದು ।

ತನ್ನ ಅರ್ಧಾಂಗಿಯಿರ್ದಾಲಯದೊಳುರೆ ನೆಲಸಿ
ಚೆನ್ನಾಗಿ ಲಿಂಗಪೂಜಾ ವಿಲಾಸದೊಳಿರ್ದು
ಇನ್ನು ಪದಿನೈದು ದಿನ ಉಳಿಯಿತ್ತು ಶ್ರಾವಣವೆನುತ್ತಿರುವ ಗುರುವೆ ಶರಣು ॥೪೭೪೪॥

ಇಂದಿನ ತನಕ ಸೊಲಬವ್ವನುರೆ ಬರಲಿಲ್ಲ
ವೆಂದು ಇನ್ನುರೆ ಬರುವಳೈ ಬಂದರೇನು ನಲ
ವಿಂದದಂ ಬೇಡಿಕೊಂಡಂತೆ ನೀನುಂಬ ಭಾಜನವನುರೆ ತರಿಸಿಲ್ಲವೈ ।
ಮುಂದುರೆ ತರಿಸಿ ಕೊಡುವೆನಿಂದು ಪಾದೋದಕವ
ನೀಂ ದಯದಿ ಕೊಡುಯೆಂದು ಬೇಡಿದರ ಕೊಡಬಾರ
ದೆಂದರುಪುತೊಡನೆ ಸೊಲಬವ್ವನಂ ಬರೆಸಿ ಎರಗಿಸುತುಲಿವ ಗುರುವೆ ಶರಣು ॥೪೭೪೫॥

ನಾಳೆಗುರೆ ಬಿನ್ನಹವ ಕೈಕೊಳುವುದೆನುತಿರ್ದು
ನಾಳಿಗೆರೆ ನೀನೊರೆದ ಭಾಜನಂ ದೊರೆಯದೈ
ಹೇಳಿದರೆ ಎನ್ನ ಪತಿಯುರೆ ಕೇಳನೆಂದು ನಾನುರೆ ಹೇಳಲಿಲ್ಲವಿನ್ನು ।
ಹೇಳಿದರೆ ಈ ಮಾಸದೊಳ್ ದೊರೆಯದೈ ಇನ್ನು
ಹೇಳಿ ತರಿಸುವೆನು ಕಾರ್ತಿಕ ಮಾಸದೊಳೆನಗೆ
ನಾಳಿಗೇ ಪಾದೋದಕವ ಕೊಡುವುದೆನಿಸಿ ನಸುನಗುತುಲಿವ ಗುರುವೆ ಶರಣು ॥೪೭೪೬॥

ಭಾಜನಂ ದೊರೆಯದಿರೆ ಪಾದೋದಕವದೀಗ
ಈ ಜನರಿಗೆಂತು ದೊರೆವುದು ಎನುತ ನಸುನಗುತ
ಭಾಜನಂ ಮಿಗಿಲೊ ಪಾದೋದಕಂ ಮಿಗಿಲೊ ನೀನುರೆ ನೋಡು ನೋಡೆನುತ್ತ ।
ಭಾಜನಂ ದೊರೆದರೂ ಪಾದೋದಕಂ ದೊರೆವು
ದೀಜಗದೊಳೀಗಳುರೆ ದುರ್ಲಭವೆನುತ್ತಿರ್ದು
ಭಾಜನಂ ದೊರೆದು ಕಾರುಣ್ಯಮುದಿಸಲ್ ದೊರೆವುದೆಂದೊರೆದ ಗುರುವೆ ಶರಣು ॥೪೭೪೭॥

ಕಾರುಣ್ಯಮುದಿಸದಿರೆ ಭಾಜನಂ ದೊರೆತರೇಂ
ಕಾರುಣ್ಯವೇ ಮುಖ್ಯವೆಂದರುಹಿಸುತ್ತಿರ್ದು
ವೀರನಿಗುರದೆ ಕೋಪಪ್ರಸಾದದಿ ಬೆರೆದಿರುವನೆಂದು ತಿಳಿಸುತೊಡನೆ ।
ವೀರನಿಗೆ ಕಾರುಣ್ಯಮುರೆ ಜನಿಸುವಂತೆ ನೀ

ನೋರಂತೆ ಭಕ್ತಿಭಾಜನದೊಡನೆ ಇರು ಎನುತ
ನಾರತಂ ವೀರಶಿವಲಿಂಗನಾಮವ ಜಪಿಸುತಿರು ಎಂದ ಗುರುವೆ ಶರಣು ॥೪೭೪೮॥

ವೀರಶಿವಲಿಂಗ ನಾಮವ ಜಪಿಸಿಯುದಕಮುಮ
ನೋರಂತೆ ಶುದ್ಧವೆನಿಸುತ್ತಾನನಾದಿ ಸುಶ –
ರೀರಮಂ ತೊಳೆದು ನಾನಿತ್ತ ಭೂತಿಯ ತಳೆದು ಉಣುವುದೆಂದರಪುತೊಡನೆ ।
ಕ್ರೂರತನದ ನ್ಯಾಯನ್ಯಾಯದಿಂದಾಚರಿಪ
ವೀರಮಾಹೇಶ ಪದಜಲವ ಮುಟ್ಟದಿರು
ಕಾರುಣ್ಯಮುದಿಸೆ ಪಜ್ಜಲವೀಯೆ ಲೇಸೆಂದು ಬಳಿಕುಲಿವ ಗುರುವೆ ಶರಣು ॥೪೭೪೯॥

ವೀರಶಿವಲಿಂಗ ನಾಮವನುರದೆ ಜಪಿಸುತ್ತ
ವೀರನಿಹ ನಿನ್ನ ಪತ್ನಿಯನಾದರಿಸುತಿರ
ಲೀ ರೋಗಮುರೆ ಪೋಗದೈಯನಾದರಿಸದೋಲ್ ತಿಳಿಸೆಂದು ತಿಳಿಸುತೊಡನೆ ।
ಈ ರೋಗಮುರೆ ಪೋಗದೆನಲದೇಕ್ಕೈ ಎನಲು
ವೀರನುರೆ ಬೆರೆದ ನಿನ್ನಯ ಸತಿಯನುರೆ ನಂಬ
ರೋರಂತೆ ನಂಬಿದರೆ ಪೋಗುತಿಹುದೆಂದು ತಿಳಿಸುತ್ತಿರುವ ಗುರುವೆ ಶರಣು ॥೪೭೫೦॥

ರೋಗಮುರೆ ಪೋಗದೆಂದುರೆ ಪೇಳಬೇಡೀಗ
ರೋಗಮುರೆ ಪೋಗುತಿಹುದೆಂದುಸುರಬೇಡೀಗ
ರೋಗಮುರೆ ಪೋಗುವುದು ಪಾದೋದಕವನಿತ್ತ ಮೇಲೆಯೆಂದುಸುರಬೇಕ್ಕೈ ।
ಈಗ ಪಾದೋದಕವನೀಯ ಬಾರದು ಸಾನು
ರಾಗದಿಂ ಮುಂದೆ ಭಾಜನವನೀನುರೆ ತರಿಸಿ
ದಾಗ ಕೊಡುತಿಹೆನೆಂದು ಹೇಳೆಂದು ಹೇಳಿಸುತ್ತೊಳಗಿರುವ ಗುರುವೆ ಶರಣು ॥೪೭೫೧॥

ಇಂತುರದೆ ಹೇಳಿಸುತ ಬಿನ್ನಹವ ಕೈಕೊಂಡು
ಸಂತತಂ ತಾನಿರ್ದ ಮನೆಗೆ ಪಾಕವ ತರಿಸಿ
ತಾಂ ತವಕದಿಂದ ತನ್ನಯ ಸತಿಸುತಾದಿಗಳಿಗೆ ಉಣಿಸುತಿರೆ ಉಂಬುತೊಡನೆ ।
ತಂತು ಹರ್ಮ್ಯದೊಳಿನ್ನು ವ್ಯಾಸನ ಕರವ ಕಟ್ಟ
ದಂತೆ ಮಾಡುವದು ನಂದಿಯಕೋಲಿಗೆನುತಿರ್ದು
ನೀಂ ತವಕದಿಂ ಧಾರವಾಡಕ್ಕೆ ನಡೆಯೆಂದು ಬಳಿಕುಲಿವ ಗುರುವೆ ಶರಣು ॥೪೭೫೨॥

ಈಗಳೇ ಹೋಗಬಾರದು ಎಂದು ತಿಳಿಸಿ ಕಡು
ವೇಗದಿಂ ಹೊಂಗಲದಿ ಬಂದು ಉತ್ತರವನನು
ರಾಗದಿಂ ಶೆಟ್ಟಿಯ ಮುಖದಿ ಕೇಳು ಕೇಳೆಂದು ಕೇಳಿಸುತ್ತುರೆ ನಗುತ್ತ ।
ಕಾಗದವನುರೆ ನೋಡಿ ನಲಿದಾಡಿ ನಿನಗೆ ಈ
ಕಾಗದವೆ ಕಾರಣಂ ದಾಯಾದಿಗಳನುರದೆ
ಬಾಗಿಸುವ ಬಾಳೆನಿಸುತಿಹುದೆಲೇ ಬಾಳನೇ ಎನುತಿರ್ದ ಗುರುವೆ ಶರಣು ॥೪೭೫೩॥

ಇನ್ನು ನೀನಾನಲಸ್ಯಮಂ ಮಾಡಬಾರದೈ
ನಿನ್ನ ಮುನವಳ್ಳಿಗುರೆ ಪೋಗಿ ಅಲ್ಲಿರುವರ್ಗೆ
ಚೆನ್ನಾಗಿ ತಿಳಿಸಿ ದಾಯಾದಿಗಳನೀಡಾಡಬೇಕೆಂದು ತಿಳಿಸುತೊಡನೆ ।
ಇನ್ನು ಈಗಳೆ ಪೋಗಬಾರದೈ ಇಲ್ಲಿರುವ
ನಿನ್ನ ದೈವದವರಿಗೆ ಹೇಳಿ ಸರಕಾರಕ್ಕೆ
ನೀಂ ನಾಡೆ ತಿಳಿಸಿ ದಾಯಾದಿಯಂ ಇಲ್ಲಿಯೇ ತರಿಸೆಂಬ ಗುರುವೆ ಶರಣು ॥೪೭೫೪॥

ಇಲ್ಲಿಗುರೆ ತರಿಸೆಂದು ತಿಳಿಸುತೊಡನೇ ನಗುತ
ಇಲ್ಲಿಗವನಂ ಈಗಳೇ ತರಿಸದುರದೆ ಮುನಿ
ವಲ್ಲಿಯವರುರೆ ಕೊಡರು ಕುಂಪಣೀ ಸರಕಾರದವರಿಗೆಂದರುಪುತೊಡನೆ ।
ಇಲ್ಲಿರುವ ಕುಂಪಣೀ ಸರಕಾರದವರೆ ಮುನಿ
ವಲ್ಲಿಗುಹೆ ಸರಕಾರದವರೆನಿಸುತಿಹರು ನೀ
ನಲ್ಲಿಂದ ದಾಯಾದಿಗಳ ಮುಂದೆ ಈಡಾಡಬೇಕೆಂಬ ಗುರುವೆ ಶರಣು ॥೪೭೫೫॥

ಎಂದು ಮುನಿವಲ್ಲಿಗಿವರೇ ಧನಿಗಳೆನಿಸುವರು
ತಂದೆಯೇ ತಿಳಿಸೆಂದು ವಂದಿಸಲು ನಗುತ ಇ
ನ್ನೊಂದು ಮೂದಿಂಗಳಿಗೆ ಇಲ್ಲಿರುವವರೆ ಮೌನಿವಲ್ಲಿಗುರೆ ಧಣಿಗಳಹರೈ ।
ಕಂದನೇ ನೀನೀ ಭಾದ್ರಪದ ಮಾಸದೊ
ಳೆಂದಿನೊಲು ನಿನ್ನವರನೊಂದಿ ಲಿಂಗಾರ್ಚನೆಯ
ಹೆಂದದಾನಂದದಿಂ ಮಾಡೆಂದು ಮಾಡಿಸುತ್ತರುಹಿಸುವ ಗುರುವೆ ಶರಣು ॥೪೭೫೬॥

ಇಲ್ಲಿರುವ ಮಠದಯ್ಯನವರನುರೆ ಪರಿಕಿಸುವು
ದಿಲ್ಲಿರುವ ಭಕ್ತರಂ ಪರಿಕಿಸಲ್ಕೋಸುಗಂ
ಮೆಲ್ಲನೇ ನೀನೀಗಳವರಿದ್ದೆಡೆಗೆ ಪೋಗಿ ಬೇಡೆಂದು ಬೇಡಿಸುತ್ತ ।
ಬೆಲ್ಲದಂತುರೆ ಮಾತನಾಡಿಸುತ ನೀಡಿಸುತ
ಸಲ್ಲೀಲೆಯಿಂದ ಕೈಕೊಳಿಸುತ್ತ ಕೈಕೊಳು
ತ್ತೆಲ್ಲಾಗಳುಂ ಲಿಂಗಪೂಜೆಯೊಡನೆ ಮೌಜಿನಿಂದಿರ್ದ ಗುರುವೆ ಶರಣು ॥೪೭೫೭॥

ಮೌಜಿನಿಂ ಲಿಂಗಪೂಜಾವಿಲಾಸದೊಳಿರ್ದು
ಈ ಜನರು ಇಂದೆ ಆಶ್ವಿನ ಶುದ್ಧ ನವಮಿಯೊಳ್
ವಾಜಿಗಳ ಮೈತೊಳೆವರಾಯುಧವ ಪೂಜಿಪರು ಕೇಳು ಕೇಳೆನ್ನ ಮಗನೆ ।
ನೈಜ ನಿರ್ಣಯ ಪುರಾಣವೆನಿಸುವ ಸುರಗಿಯಂ
ಈ ಜನರು ಪೂಜಿಸುವ ಹಾಂಗೆ ನಿನ್ನವರಿಂದ
ಪೂಜೆಯಂ ಮಾಡಿಸುವುದೆಂದು ಮಾಡಿಸುತೊಡನೆ ತಿಳಿಸುತಿಹ ಗುರುವೆ ಶರಣು ॥೪೭೫೮॥

ಅವರಂತೆ ನೀನುರದೆ ಭಜಿಯಿಸಲ್ಬಾರದೆಲೆ
ಕುವರನೇ ನಿನ್ನ ಬಲಭಾಗದೊಳಗುರೆ ಇರಿಸಿ
ತವಕದಿಂ ಧೂಪಧೂಮದಿ ನಿನ್ನ ಸಹಿತಂ ಸಪರ್ಯಮುಮನೆಸಗುತೊಡನೆ ।
ಶಿವಲಿಂಗಕರ್ಪಿಸಿ ಸವಿವುದಲ್ಲದೆ ಓದ
ನವನದರ ಮುಂದಿರಿಸಬಾರದೆಂದರುಹಿ ಕಡು
ತವಕದಿಂ ಭಜಿಯಿಸುತೊಡನೆ ಲಿಂಗಕರ್ಪಿಸಿ ಸರಿದು ನಲಿದ ಗುರುವೆ ಶರಣು ॥೪೭೫೯॥

ಇಲ್ಲಿರುವ ಮಠದೊಡೆಯರಂ ಪರಿಕಿಸಿದಿ ಮತ್ತೆ
ಮಿಲ್ಲಿರುವ ನಿನ್ನ ಭಕ್ತರನುರದೆ ಪರಿಕಿಸಿದಿ
ಮೆಲ್ಲನೇ ಇನ್ನಿಲ್ಲಿರುವ ದೈವದವರನುರೆ ಪರಿಕಿಸುವುದೆಂಬುತೊಡನೆ ।
ಸಲ್ಲಲಿತವೆಂಬ ನಿರ್ಣಯ ಪುರಾಣವೆಂಬಾಯುಧವ
ಸಲ್ಲೀಲೆಯಿಂ ಕರದಿ ಪಿಡಿದು ಪುರಮಂ ಸುತ್ತಿ
ಯುಲ್ಲಾಸದಿಂದಿನ್ನು ಕಾರ್ತೀಕದೊಳ್ ಪರಿಕಿಸುವುದೆಂಬ ಗುರುವೆ ಶರಣು ॥೪೭೬೦॥

ಕಾರ್ತೀಕ ಮಾಸದೊಳ್ ಪರಿಕಿಸುವೆನೆನುತಿರ್ದು
ಕಾರ್ತೀಕದೋಳೀ ತಳವ ಬಿಡುವೆನೆನುತಿರ್ದು
ಕಾರ್ತಿಕೇಯನ ಜನಕಗರ್ಭಕನೆನಿಪ್ಪ ನಿರ್ಣಯ ಪುರಾಣಿಯ ರಾಣಿಯ ।
ಮೂರ್ತಿಜೆಯನತ್ತೆಯಾಲಯಕೆ ಕಳಿಸುವೆನೆನುತ
ಕೂರ್ತು ಲಿಂಗಾರ್ಚನೆಯ ಮಾಡುತಿರಲಾಶ್ವಿನಂ
ಪೂರ್ತಿಯಾಗಲು ಇನ್ನು ಏಳೆಂದು ಏಳಿಸುತ್ತುರುಹಿಸುವ ಗುರುವೆ ಶರಣು ॥೪೭೬೧॥

ಇಂದು ಕಾರ್ತೀಕ ಶುದ್ಧ ಪ್ರತಿಪದೆಯೆನಿಸುವ
ಇಂದುವಾರಂ ಮಗನೆ ಮಿಂದು ನಿಸ್ಸಂದೇಹ
ದಿಂದ ನೀ ಸಂದು ಸಂಗ್ರಹಿಸಿದ ಹರಿದ್ವರ್ಣ ವಸನಮುಮನುಟ್ಟು ತೊಟ್ಟು ।
ಹೆಂದದಾನಂದದಿಂ ಕುಳಿತು ಪಟ್ಟಣಶೆಟ್ಟಿ
ಯಿಂದ ಶೆಟ್ಟಿಗೆ ತಿಳಿಸಿ ದೈವದವರಂ ಬರಿಸು
ಎಂದರುಪುತೊಡನೆ ಏಳಿಸಿ ಸ್ನಾನಮಂ ಮಾಡಿಸಿರುವ ಗುರುವರನೆ ಶರಣು ॥೪೭೬೨॥

ಸ್ನಾನಮಂ ಮಾಡಿಸುತ ಲಿಂಗಾರ್ಚನೆಯನುರದೆ
ಸಾನುರಾಗದೆ ಮಾಡಿಸುತ್ತರ್ಪಿಸುತ ಸವಿದು
ಆ ನೀಲಗಾರರಿಂದೆಸಗಿಸಿದ ಹಸಿರ ಧೋತ್ರವನುಟ್ಟು ತೊಟ್ಟು ಕುಳಿತು ।
ಜಾಣತನದಿಂದೆ ಪಟ್ಟಣಶೆಟ್ಟಿಯಂ ಬರಿಸಿ
ಮಾಣದೇ ದೈವದವರೊಡಗೊಂಡು ಬಾಯೆಂದು
ನೀನೀಗ ಶೆಟ್ಟಿಗುರೆ ಹೇಳೆಂದು ಹೇಳಿಸುತ್ತರುಹಿಸುವ ಗುರುವೆ ಶರಣು ॥೪೭೬೩॥

ದೈವದವರೊಡಗೊಂಡು ಬಂದರೀಗಳೆ ಬರಲಿ
ದೈವದವರಂ ಬಿಟ್ಟು ಬಂದರುರೆ ಬರಬಾರ
ದೀ ವ್ಯಾಳ್ಯೆದೊಳಗೆಂದು ತಿಳಿಸಿ ಪಟ್ಟಣಶೆಟ್ಟಿಯಂ ಕಳಿಸಿ ನಸುನಗುತ್ತ ।
ದೈವದೈವರೊಡಗೊಂಡು ಬಾರನೀಗಳೆ ಶೆಟ್ಟಿ
ಯಾವಗಂ ಮುಂದೆ ತಾವೆ ಬರುತಿರುವರಖಿಳ
ರೀ ವ್ಯಾಳ್ಯೆದೊಳ್ಬಾರದೆಂದರುಪಿ ಏಳೆಂದು ಏಳಿಸಿದ ಗುರುವೆ ಶರಣು ॥೪೭೬೪॥

ಏಳಿಸಿ ಹರಿದ್ವರ್ಣ ವಸನವಿಸರವನುಳಿಸಿ
ನಾಳೆ ನೀನಿಲ್ಲಿಯುರೆ ನಿಲ್ಲಬಾರದು ಎನ್ನ
ಬಾಳನೇ ಎಂದರುಪುತೊಡನೆ ಲಿಂಗಾರ್ಚನೆಯ ಮಾಡಿಸುತ್ತುರೆ ಮಲಗಿಸಿ ।
ಏಳು ಏಳಿನ್ನು ಬೆಳಗಾಯಿತೆಲೆ ಮಗನೆ ಎಂ
ದೇಳಿಸಿ ಮೊಗವದೊಳಿಸಿ ಪತ್ನಿಪುತ್ರಾದಿಗಳ
ನಾಲಸ್ಯವೆನಿಸದೇ ತತ್ತಳವನುಳಿಸಿ ಕಳುಹಿಸುತ್ತಿರುವ ಗುರುವೆ ಶರಣು ॥೪೭೬೫॥

ಸವದತ್ತಿಯಂ ಬಿಡಿಸಿ ಹೊಂಗಲಕೆ ಕಳಿಸಿ ಕಡು
ತವಕದಿಂದಾನುರದೆ ಬರುತಿರ್ಪನೆನುತಿರ್ದು
ಸವದತ್ತಿಯಲ್ಲಿರುವ ಸೊಲಬವ್ವನಾವರಿಸಿದಾಮಯವ ನೋಡುತೊಡನೆ ।
ಸವಿವಾತಿನಿಂದ ತತ್ಪತಿಯಣ್ಣನಂ ಕರೆದು
ತವಕದಿಂ ಭಾಜನವನುರೆ ತರಿಸಿ ಪಾದೋದ
ಕವ ಕೊಡಿಸಿ ಲೇಸೆನಿಸುವುದಿಲ್ಲವೇ ಲೇಸೆನಿಸದರಿಯೆಂದ ಗುರುವೆ ಶರಣು ॥೪೭೬೬॥

ತರಿಸುವೆನು ಕಾರ್ತೀಕ ಮಾಸದೊಳ್ ಭಾಜನವ
ನಿರುತವೆಂದುರೆ ಹೇಳಿ ಇಂದಿನ ತನಕ ಉರದೆ
ಮರೆದಿರುವಳಿನ್ನು ತದ್ರೋಗಮುರೆ ಪೋಗದೆಂದರಿದು ತನ್ನೊಳಗೆ ತಾನೆ ।
ಮರುಗುತಿನ್ನೇ ಗೆಯ್ವೆನೆಂದು ಇನ್ನುರೆ ಮಾರ್ಗ
ಶಿರದೊಳಾದರು ತರಿಸಿದರೆ ಬರುವುದೆಂದು ಸ
ತ್ಕರುಣದಿಂದುಸುರ್ದು ಸವದತ್ತಿಯಿಂ ಹೊಂಗಲಕೆ ಬಂದಿರುವ ಗುರುವೆ ಶರಣು ॥೪೭೬೭॥

ಬಂದು ಕಾರ್ತೀಕ ಬಹುಳದಿ ಹೊಂಗಲದೆ
ನಂದದಿ ಕುಟುಂಬಿನಿಯೊಡನೆ ಸುಖಮಿರ್ದು
ಕಂದೆಯಂ ಕಳಿಸಬೇಕೆಂಬುವ ಸಖಾರಾಮನೆಂಬುನಂ ಮಡಿವಾಳನಂ ।
ಹಿಂದಕುರೆ ಸರಿಸಿ ಸರಕಾರಮಂ ಕಂಡು ಬಲು
ಹಿಂದ ನಂದಿಯಕೋಲ ಮುದುಕಿಯಂ ಬರಿಸಿ ಕರೆ
ಯೆಂದುರದೆ ಕರೆಸಿ ಮಗಳಂ ಕಳಿಸಿ ನಸುನಗುತ್ತರುಹಿಸುವ ಗುರುವೆ ಶರಣು ॥೪೭೬೮॥

ನಾನುರದೆ ಕರೆಯೆನೆಂದೆಂದು ಎನುತಿರ್ದೀಗ
ತಾನೆ ಮನೆತನಕ ನಡೆತಂದು ಹೊರಗುರೆ ನಿಂದು
ಸೂನುವೇ ನಿನ್ನ ಮಗಳೆಂಬ ತನ್ನಯ ಸೊಸೆಯ ಕರೆದೊಯ್ದಳಿನ್ನು ಮುಂದೆ
ಸಾನುರಾಗಧಿ ನಡೆಸಿಕೊಳೆನೆನುತ ತಿಳಿಸುತ್ತ
ನೀನೀಗ ಹಸಿರು ಹೊದಿಕೆಯ ಹೊದ್ದು ಈ ಪುರದ
ಓಣಿಯೊಳ್ ಸಂಚರಿಸಬೇಕೆಂದು ಹೊದ್ದು ಸಂಚರಿಸಿರುವ ಗುರುವೆ ಶರಣು ॥೪೭೯॥

ಏನು ಸೂಚನೆಯಿದ್ದೈ ಎಂದುರದೆ ಕೇಳುವ
ಮಾನವರಿಗುರೆ ಹೇಳದೆ ಸುಮ್ಮನೆ ಇರ್ದು
ಸಾನುರಾಗದಿ ತಿಂಗಳದ ತಂಗಳದ ರೊಟ್ಟಿಯಂ ಬೇಡಲುರೆ ನಿಟ್ಟಿಸಿ ।
ಏನಿದಚ್ಚರಿಯೆಂದು ಬೆಚ್ಚಿರುವ ಭಕ್ತರಿಗೆ
ತಾನೆ ತಿಳಿವುದು ಮುಂದೆ ಎಂದುರದೆ ಪೇಳುತ್ತ
ನೀನೀಗಳಲ್ಲಿರುವ ಚೆನ್ನಾಂಬೆಯಂ ಪರಿಕಿಸೆಂಬ ಗುರುವರನೆ ಶರಣು ॥೪೭೦॥

ಆನೆಂತು ಪರಿಕಿಸುವೆನೆಂದು ವಂದಿಸುತಿರ್ಪ
ಸೂನುವಂ ನೋಡಿ ನಲಿದಾಡಿಯುರೆ ಮುಂಡಾಡಿ
ನೀನೀಗ ಹೋಗಿ ಅರಮನೆಯ ಬಾಗಿಲ ಮುಂದೆ ನಿಂದು ನಮ್ಮಯ್ಯಗುರದೆ ।
ಸಾನುರಾಗದಿನನ್ನಾಂಬರವೆರಡುಳಿದು
ಏನಾದರೂ ಕೊಡುವುದೆಂದುರದೆ ಹೇಳಿ ನೀಂ
ಮೌನಿಯಾಗಿರು ನಿನ್ನ ಬಾಯೊಳಗೆ ನಾನಿರುವೆನೆಂದರುಹಿಸುವ ಗುರುವೆ ಶರಣು ॥೪೭೧॥

ಇಂತರುಹಿಸುತ್ತೊಡನೆ ಚಿಟನೇಸಿಯೆಂಬಾತ
ನಿಂ ತವಕದಿಂದರಮನೆಯ ಒಳಗೆ ಕಳಿಸುತ್ತ
ಸಂತಸದಿ ಬಾಗಿಲದ ಮುಂದೆ ತಾನುರೆ ನಿಂದು ಪೋಗುತೊಳಗಿಂದ ಬರುವ ।
ಸಂತೆಮೂಳರನುರದೆ ನೋಡದೇ ನುಡಿಸದೇ
ಅಂತಕಾಂತಕ ಶರಣರಂ ತುತಿಸಲೊಡನೆ ಒಳ
ಗಿಂ ತವಕದಿಂ ಬಂದು ವಂದಿಸಿದ ಮಡಿವಳನಿಗುಸುರ್ದ ಗುರುವೆ ಶರಣು ॥೪೭೨॥

ನಿಮ್ಮವ್ವೆ ಇರ್ದೆಡೆಗೆ ನಮ್ಮಯ್ಯನೆಯ್ತರಂ
ನಮ್ಮಯ್ಯನಿರ್ದೆಡೆಗೆ ನಿಮ್ಮವ್ವೆ ಎಯ್ತರಳ್
ನಮ್ಮಯ್ಯ ನಿಮ್ಮವ್ವೆಯರು ಕೂಡುವರು ಮುಂದೆ ಈಗ ಕೂಡರು ಎನುತ್ತ ।
ನಮ್ಮಯ್ಯನೆನ್ನನುರೆ ಕಳಿಸಿರುವನೈ ಈಗ
ನಿಮ್ಮವ್ವೆಯರ ಕರದಿ ಅನ್ನವಸ್ತ್ರವನುಳಿದು
ಸಮುದದೊಳೇನನಾದರೂ ಕೊಡಿಸು ಭಿಕ್ಷಮುಮನೆನುತಿರುವ ಗುರುವೆ ಶರಣು॥೪೭೭೩॥

ನಿಮ್ಮಯ್ಯನವರನೆನಗುರೆ ತೋರಿಸೈ ನಾನು
ನಮ್ಮವ್ವೆಯರ ಕರದಿ ತಂದು ಕೊಟ್ಟುರೆ ನಮಿಸು
ವೆಂ ಮುದದಿ ಎನುತಿಪ್ಪ ಮಡಿವಳನನುರೆ ನೋಡಿ ನಗುತಿರ್ದು ಕೇಳುಕೇಳೈ ।
ನಿಮ್ಮವ್ವೆಯರಿಗುರದೆ ಕಾಣದೆ ಇರುತ್ತಿರ್ಪ
ನಮ್ಮಯ್ಯನುರೆ ಮದಡತನದಿಂದ ನೋಡುವಾ
ನಿಮ್ಮ ಕಣ್ಣಿಗೆ ಕಾಣಿಸುವನೆ ಎನುತಿರ್ದು ನಗುತಿರುವ ಗುರುವರನೆ ಶರಣು ॥೪೭೭೪॥

ನಮ್ಮ ಕಣ್ಣಿಗೆ ಕಾಣಿಸದಿರ್ದ ನಿಮ್ಮಯ್ಯನುರೆ
ನಿಮ್ಮ ಕಣ್ಣಿಗೆ ಕಾಣಿಸುವನೇ ಎನಲಿ ನಗುತ
ನಿಮ್ಮವ್ವೆಯರು ನಿಮ್ಮ ಕಣ್ಣಿಗುರೆ ಕಾಣುವರೊ ಕಾಣರೋ ಪೇಳೆನುತ್ತ ।
ನಿಮ್ಮವ್ವೆಯರು ನಿಮಗೆ ಧಣಿಗಳೆನಿಸುತ್ತಿಹರು
ನಮ್ಮಯ್ಯನವರೆಮಗೆ ಕರ್ತೃವೆನಿಸುತ್ತಿಹರು
ಸುಮ್ಮನೇ ಗಳುಪುವುದಿದೇನು ನಿಮ್ಮವ್ವೆಯಂ ಕೇಳೆಂದ ಗುರುವೆ ಶರಣು ॥೪೭೭೫॥

ಕೇಳಿ ಬಂದಿಹೆವೀಗ ನೀನೊಳಗೆ ನಡೆವುದೈ
ಲೀಲೆಯಿಂ ಭೋಜನವ ಮಾಡಿಯುರೆ ಮಾತಾಡೆ
ನಾಳೆ ಎನ್ನದೆ ಈಗಳೇ ಕೊಡುವರೇನನಾದರು ಎಂದು ನುಡಿಯಲೊಡನೆ।
ಭಾಳ ಮಾತಾಡುವುದಿದೇಂ ಪ್ರಯೋಜನವಿಲ್ಲ
ಆಲಸ್ಯವಿಲ್ಲದೇ ಬರುವೆನಿನ್ನೊಡನೆ ನಾಂ
ಲೀಲೆಯಿಂ ಭೋಜನವ ಮಾಡೆನೀಗೆನಿಸಿ ನಗುತಿರುವ ಗುರುವೆ ಶರಣು ॥೪೭೭೬॥

ಭೋಜನವನರಮನೆಯೊಳೇಗುರದೆ ಮಾಡೆ ನಾಂ
ಭೋಜನವನೆಮ್ಮಯ್ಯನೊಡಗೊಂಡು ಮುಂದೆ ಈ
ರಾಜಧಾನಿಯೊಳುಂಡು ನಲಿದಾಡುತೊಲಿದಾಡುತಿಹೆನೆಂದು ನುಡಿಯಲೊಡನೆ ।
ಭೋಜನಪೆ ಮಾಡದಿರಲುರೆ ಕೊಡರು ಈಗಿದುವೆ
ನೈಜವೆನೆ ನಮ್ಮಯ್ಯನುರೆ ಕೊಳ್ಳನೀಗಿದುವೆ
ನೈಜವೆಂದುರೆ ತಿರುಗಿ ಬಂದು ಮನೆಯೊಳ್ ನಿಂದು ನಲಿದುಲಿವ ಗುರುವೆ ಶರಣು॥೪೭೭೭॥

ಅನ್ಯಾಯ ನ್ಯಾಯದಿಂ ನಡೆವ ಜಡರಿಗೆ ಉಣಿಸಿ
ನಿನ್ನನುರದೇ ಮರೆದು ಇರಲು ನೀನುರೆ ಬೇಡ
ನಿನ್ನ ಖರ್ಚಿಗೆ ಕೊಡದೆಯಿರ್ದ ಚೆನ್ನಾಂಬೆಯರ ಖರ್ಚಿಗುರೆ ಕೊಡದೆ ಈಗ ।
ಎನ್ನ ಮಗನೇ ಮೂರು ತಿಂಗಳಾಗಿರುವುದೈ
ಇನ್ನು ಮೂದಿಂಗಳ ತನಕ ಖರ್ಚಿಗುರೆ ಕೊಡರು
ನಿನ್ನ ಕುಂಪಣಿಯ ಸರಕಾರದವರುರೆ ಕೇಳು ಕೇಳೆಂಬ ಗುರುವೆ ಶರಣು ॥೪೭೭೮॥

ನಿನ್ನ ಕುಂಪಣಿಯ ಸರಕಾರದವನೇ ಈಗ
ನಿನ್ನ ಮುನವಳ್ಳಿಗೇಧಣಿಗಳೆನಿಸಿಹರುರದೆ
ನಿನ್ನ ದಾಯಾದಿಗಳನೀಡಾಡಬೇಕು ನಡೆ ಎಂದುರದೆ ನಡೆಸುತೊಡನೆ ।
ತನ್ನವನೆನಿಪ್ಪ ನರಸಪ್ಪನಾಲಯದಲ್ಲಿ
ಮುನ್ನಿನೋಲ್ ನಿಂದು ಶೆಟ್ಟಿಗೆ ತಿಳಿಸಿ ದಾಯಾದಿ
ಯಂ ನಾಡೆ ತರಿಸಿ ಮಾತಾಡಿಸುತ್ತುರೆ ನಗುತ್ತಿರುವ ಗುರುವರನೆ ಶರಣು ॥೪೭೭೯॥

ಅಣ್ಣ ತಮ್ಮರು ನೀವು ಕೂಡಿಕಟ್ಟುತ್ತರವ
ಚೆನ್ನಾಗಿ ಮೂವ್ವ್ಯಾಳ್ಯೆದೊಳ್ ಬರೆದುಕೊಟ್ಟಿರ್ದು
ಟೊಣ್ಣೆತನದಿಂದ ಬಡಿದಾಡಿ ಮಠಮಂ ಬಿಟ್ಟು ನಮ್ಮನುರದೇ ಕೇಳದೆ ।
ಹೊನ್ನಿಗಾಸೆಯ ಮಾಡಿ ಹೊಂಗಲ್ಲಿನಲ್ಲಿ ಜಿಗ
ಜಿನ್ನಿಯವರಲ್ಲಿಟ್ಟು ದಾಗೀನಗಳನುರದೆ
ನಿನ್ನ ತಮ್ಮಂ ಚುಮ್ಮತನದಿಂದ ಹಂಚಿಕೊಂಡಿಹನೆಂದ ಗುರುವೆ ಶರಣು ॥೪೭೮೦॥

ಚುಮ್ಮತನದಿಂ ಹಂಚಿಕೊಂಡು ನಿನಗುರೆ ಹೇಳೆ
ಚುಮ್ಮತನದಿಂ ನೀನು ವಳಸಂಗದವರಲ್ಲಿ
ನಿಮ್ಮಣ್ಣನುರೆ ಇಟ್ಟು ಎತ್ತಕ್ಕದಿಕ್ಕುತ್ತನುರೆ ಮಾಡಿಸಿರ್ದುದ ಮತ್ತಂ ।
ಸುಮ್ಮನಿರದೇ ಮೂವರು ಕೂಡಿ ಬಂದಾಗ್ಗೆ
ನಮ್ಮ ರೂಪಿಕೆಗಳಂ ನಮಗೇ ಕೊಡುವುದೆಂದು
ಚುಮ್ಮತನದಿಂದ ವಳಸಂಗದವರಿಂ ಬರೆಸಿಕೊಂಡಿರ್ದ ಗುರುವೆ ಶರಣು ॥೪೭೮೧॥

ಚುಮ್ಮತನದಿ ಬರೆಸಿಯಿಟ್ಟುಕೊಂಡಿರ್ದುದ ಮಿಗೆ
ಚುಮ್ಮತನದಿಂದಿರುವ ನಿನ್ನ ತಮ್ಮನನುರದೆ
ನೀಂ ಮದಡತನದಿ ಸವದತ್ತಿಯ ತಳಕೆ ಕಳಿಸಿ ದೈವದ ಗುಜಾರ್ತಿಯಿಂದ ।
ಸಮ್ಮತದಿ ಜಿಗಜಿನ್ನಿಯವರಲ್ಲಿ ಇಟ್ಟಿರ್ದ
ನಮ್ಮ ವಸ್ತುಗಳ ನಾಂ ಉರೆ ಹಂಚಿಕೊಂಡಂತೆ
ಸಮ್ಮತಂ ಇಲ್ಲಿಹ ರುಪಾಯಗಳ್ಗೆನಿಸಿರ್ದ ಎನುತುಲಿವ ಗುರುವೆ ಶರಣು ॥೪೭೮೨॥

ಇದರಂತೆ ರಾಜೀನಾಮೆಯಂ ಬರೆಯೆನಲು
ಮದಡತನದಿಂ ಬರೆದುಕೊಟ್ಟು ದೈವಕ್ಕೆ ಹೇ
ಳದೆ ಇಲ್ಲಿಗೆಯ್ತಂದು ನಿಂದು ನಿನಗುರೆ ಹೇಳಿ ಹೋಗಿ ಹೊಂಗಲದಿ ನಿಂದು ।
ಅಧಮತನದಿಂದುರದೆ ಹೇಳಿಕೊಂಡಿರ್ದುದ ಮಿಗೆ
ಮದಡತನದಿಂದುತ್ತರವ ಬರೆಸಿ ಕಳಿಸಿರುವ
ಮದಡನವನಿಂದ ನೀನುರೆ ಮದಡನಾದಿ ಈಗೆನುತಿರುವ ಗುರುವೆ ಶರಣು ॥೪೭೮೩॥

ಇನ್ನು ನಿನ್ನಯ ಮಾತು ನಡೆಯಿದೀ ನಾಡೊಳಗೆ
ಇನ್ನು ನಿನ್ನಯ ಮಾತು ಜಯಿಸದೀ ದೈವದೊಳ್
ಇನ್ನು ನಿನ್ನಯ ಮಾತು ಗೆಲಿಯದೆಲ್ಲೆಲ್ಲಿಯಾದರು ಎನುತ್ತುಲಿದು ಮತ್ತಂ ।
ಇನ್ನು ಜಯಿಸುವೆನು ನಾನೆಂಬುದಂ ನಿನ್ನೊಳಿರೆ
ನಿನ್ನಣ್ಣನುರೆ ಬರೆದುಕೊಟ್ಟು ಕಟ್ಟುತ್ತರವ
ನಿನ್ನ ಕಟ್ಟುತ್ತರವನಿತ್ತಪೆವು ಹಿಂದಕ್ಕೆನುತ್ತಿರುವ ಗುರುವೆ ಶರಣು ॥೪೭೮೪॥

ಹಿಂದಕ್ಕೆ ತಕ್ಕೊಂಡು ಹೋಗಿ ನಿಮ್ಮಯ ಮನಕೆ
ಬಂದಂತೆ ಮಾಡಿಕೊಳಿರ್ರೈ ಎಂದು ನುಡಿಯುತ್ತ
ಇಂದು ನೀ ಮರೆಹೋಗುಹೋಗೆಂದು ದಾಯಾದಿಯಂ ಕಳಿಸಿ ತಳಹದೇ ।
ನಿಂದು ನಿನ್ನಂ ಕರೆಸಿ ನಿನಗೆ ಪೇಳುವುದು ನಂ
ಮ್ಮಿಂದಾಗದೈ ನಿನ್ನ ಮೂರು ಕಟ್ಟುತ್ತರವ
ಹಿಂದಕಿತ್ತಪೆವೆನುತ್ತಿರಲು ನಸುನಗುತ ನಲಿದುಲಿವ ಗುರುವರನೆ ಶರಣು ॥೪೭೮೫॥

ಹಿಂದಕುರೆ ಕೊಡುಯೆಂದು ಬೇಡುವವನಲ್ಲವಾಂ
ಹಿಂದಕುರೆ ಕೊಡಲೊಲ್ಲೆನೆಂದು ನುಡಿವವನಲ್ಲ
ಎಂದು ನೀವೆಲ್ಲರುರೆ ಕೂಡಿ ಹೇಳಲು ಕೇಳದವನಲ್ಲವೆಂದು ಮತ್ತಂ ।
ಹಿಂದಕುರೆ ಕೊಡುವುದದು ಎಂದಿಗೈ ಎನಲು ಇ
ನ್ನೊಂದು ತಿಂಗಳಿಗೆಂದು ನುಡಿವ ಶೆಟ್ಟಿಯ ನೋಡಿ
ಮಂದಸ್ಮಿತಾನನದಿ ತನ್ನೊಳಗೆ ತಾನೆ ನಲಿದುಲಿಯುತಿಹ ಗುರುವೆ ಶರಣು ॥೪೭೮೬॥

ನ್ಯಾಯಮಂ ಪೇಳೈನಾವೆಂದು ಕಟ್ಟುತ್ತರವ
ನ್ಯಾಯಿಗಳ ಕರದಿ ತಕ್ಕೊಂಡು ತವೆ ಪೇಳದೆ
ನಾಯಿತನದಿಂದ ಒಡನಾಡಿಸುತ್ತಿರ್ದು ಬಡಿದಾಡುತುರೆ ಬನ್ನಬಟ್ಟು ।
ನ್ಯಾಯಮಂ ಪೇಳುವಾ ಅಧಿಕಾರಮಂ ಬಿಟ್ಟ
ನ್ಯಾಯಿಗಳ ಕಟ್ಟುತ್ತರವ ಹಿಂದಕುರೆ ಕೊಡುವ
ನಾಯಿವಾನಿಸನೆನುತ್ತ ನಗುತೊಳಗೆ ತೊಳಗುತ್ತಿರುವ ಗುರುವೆ ಶರಣು ॥೪೭೮೭॥

ನಾಯಿವಾನಿಸನಿವನನುರೆ ನೋಡಬಾರದೈ
ಈಯುವಸರದೊಳೆಂದು ತಿಳಿಸುತೇಳಿಸುತೊಡನೆ
ಆಯತಾಕ್ಷಿಯೆನಿಪ್ಪ ಸೊಲಬವ್ವೆಯಂ ನೋಡಬೇಕೆಂದು ತಿಳಿಸುತೊಡನೆ ।
ಆ ಯತಿಪುರದಿ ಹೊರಟು ಸವದತ್ತಿಗೆಯ್ದಿರ್ದು
ಈಯವಸರದಿ ಭಾಜನಮುರದೆ ಬರಲಿಲ್ಲ
ವೈ ಇನ್ನು ಲೇಸೆನಿಸದೀ ಸೊಲಬಿಗೆಂದು ಚಿಂತಿಸುತುಲಿವ ಗುರುವೆ ಶರಣು ॥೪೭೮೮॥

ಶ್ರಾವಣದಿ ತರಿಸುತಿಹೆನೆಂದುರದಿ ಪೇಳಿರುವ
ಭಾವೆಯುರೆ ಮರೆದು ಇನ್ನುರದೆ ಕಾರ್ತೀಕಕ್ಕೆ
ಸಾವಧಾನದಿ ತರಿಸಬೇಕೆಂದು ಪತಿಗುರದೆ ಹೇಳಲವನುರೆ ಕೇಳದೆ ।
ಗಾವಿಲತನದಿ ನುಡಿಯಲಳುಕಿ ಸುಮ್ಮನೆ ಇರ್ದಳೀ
ವ್ಯಾಳ್ಯೆಯೊಳ್ ಸಲೆ ಪೇಳಲುರೆ ಕೇಳ್ವನೆಲೆ
ಶಾವನೆ ಹೇಳೆಂದು ಹೇಳಿಸುತ್ತೊಡನೆ ಚಿಂತಿಸುತಿರುವ ಗುರುವೆ ಶರಣು ॥೪೭೯॥

ನೂರರಿಂದಿಪ್ಪತ್ತರೆಂಟ ರೂಪಿಕೆಗೆ ಮುಂ
ಭಾಗವೆನಿಸಿರ್ದು ಕಂಚಿನ ಭಾಜನಂ ದೊರೆಯ
ದೋರಂತೆ ಮುಂದಾಗಿ ತರಿಸೆಂದು ಆಶ್ವಿನದಿ ನಿನ್ನಣ್ಣನಿಂದ ತಿಳಿಸೆ ।
ಈ ರೋಗಮುರೆ ಪೋಗಲುರೆ ಕೊಡುವುದೆಂದು ಎನ
ಗೋರಂತೆ ಪೇಳಿರುವನೆಂದು ನೀನುರೆ ನುಡಿದು
ಆ ರಾಚನೆಂಬ ನಿಮ್ಮಣ್ಣನ ನುಡಿಯನುಡುಗಿಸಿದಿ ಎಂದ ಗುರುವೆ ಶರಣು ॥೪೮೦॥

ಆಗೊಂದು ಭಾಜನವನೀಗೊಂದು ಭಾಜನವ
ನೀಗ ಬಾರದು ಎಂದು ತಿಳಿದು ನೀನುರೆ ಬಿಟ್ಟು
ಆಗೊಂದು ಭಾಜನವನೀಗೊಂದು ಭಾಜನವ ಕೊಂಬುತಿಹ ಸೊಲಬನಲ್ಲೈ ।
ಈಗ ನೀನುರೆ ಹುಡುಕಿದರು ದೊರೆಯದೈ ಇನ್ನು
ರೋಗಯುರೆ ಪೋಪುದೆಂತೈ ಎಂದು ಚಿಂತಿಸುತ
ಪೋಗುತಿಹನನುತಿರ್ದು ಮತ್ತಮುರೆ ತಿಳಿಸುತೊಳಗಿರುವ ಗುರುವರನೆ ಶರಣು ॥೪೮೧॥

ಈಗ ನಾನುರೆ ಧಾರವಾಡಕ್ಕೆ ಹೋಗಿ ಕಡು
ವೇಗದಿಂದೆಂಟು ದಿವಸದ ಒಳಗೆ ಬರುವೆನೈ
ಪೋಗುತಿಹುದೀ ಮಾರ್ಗಶಿರ ಮಾಸವನಿತರೊಳ್ ಭಾಜನನ ದೊರಕಿಸಿರಲಾ ।
ಶ್ರೀಗುರುವೆ ಕರುಣದಿಂ ಪದಜಲವನೀವ ನೀ
ರೋಗಮುರೆ ಪೋಗಿ ಬಾಳುವಳೆಂದಿನಂತೆ ಕಡು
ವೇಗದಿಂ ತರಿಸೆಂದು ಹೇಳಿ ಸವದತ್ತಿಯಿಂ ನಡೆಯುತಿಹ ಗುರುವೆ ಶರಣು ॥೪೮೨॥

ನಡೆಸುತುರೆ ನಡೆವುತುಪ್ಪಿನ ಬೆಟ್ಟಕೇರಿ ಮುಂ
ಗಡೆಯೊಳುರೆ ಹರಿವ ಹಳ್ಳದಿ ಮಿಂದು ಮಡಿಯುಟ್ಟು
ನಡೆದು ಪುರಮಂ ಪೊಕ್ಕು ತನ್ನವರೆನಿಪ್ಪ ಸದ್ಭಕ್ತರಂ ಪರಿಕಿಸುತ್ತ ।
ಪೊಡಮಟ್ಟಿರುವ ಭಕ್ತನಂ ನಿಟ್ಟಿಸುತ್ತೊಡನೆ
ಕಡು ತವಕದಿಂದ ಲಿಂಗಾರ್ಪಿತವನುರೆ ಮಾಡಿ
ಕಡಗದವರೆನಿಪ ತನ್ನವರನುರೆ ನೋಡಿ ನುಡಿಯುತ್ತಿರುವ ಗುರುವೆ ಶರಣು ॥೪೭೯೩॥

ಇಂದು ನಾನುರೆ ಧಾರವಾಡಕ್ಕೆ ಪೋಗಿ ಜವ
ದಿಂದ ಇನ್ನಾರು ದಿನದೊಳಗೆ ಇಲ್ಲಿಗೆ ಬರುವೆ
ನೆಂದು ನುಡಿಯುತ್ತೊಡನೆ ನಡೆದು ಪುರಮಂ ಪೊಕ್ಕು ನಕ್ಕು ಸಂಧ್ಯಾಸಮಯದೊಳ್ ।
ಇಂದು ಇಲ್ಲಿರುವ ಮಠದೊಡೆಯರಂ ಪರಿಕಿಸುವೆ
ನೆಂದೆರಡು ಮೂರು ಮಠಗಳ ತಿರುಗಿಸುತ್ತೊಡನೆ
ಒಂದು ಮಠದಮ್ಮನಂ ಹೊರಗುರದೆ ಕರೆದು ಕೇಳುತ್ತಿರುವ ಗುರುವೆ ಶರಣು ॥೪೭೯೪॥

ಎನಗೀಗ ಮಲಗುವುದಕುರೆ ಜಾಗಮಂ ಕೊಡುವ
ಅನುಕೂಲವಿರೆ ಕೊಡುವುದೆಂದು ಕೇಳಲು ನೋಡಿ
ವಿನಯದಿಂ ನೀನಾರು ಎನಲು ನಾನೊರ್ವ ಜಂಗಮನೆಂದು ನುಡಿಯಲೊಡನೆ ।
ಅನುನಯದಿ ನೀನಾವ ಊರವನೆನಲ್ ನಗುತ
ಮುನಿವಲ್ಲಿಯವನೆನಲು ಪಾದಕ್ಕೆ ಜಲವನೀ
ಯೆನಲಿತ್ತು ನುತಿಸಿದಮ್ಮನ ಮಠವನೊಳಪೊಗುತ ನಗುತಿರುವ ಗುರುವೆ ಶರಣು ॥೪೭೯೫॥

ಅಲ್ಲಿ ಅನುಭಾವಮಂ ಪೇಳುತ್ತ ಕೇಳುತ್ತ
ಕುಳ್ಳಿರ್ದ ಅಮರಪ್ಪನವರನುರೆ ನೋಡುತ್ತ
ಮೆಲ್ಲನೇ ನಿಲ್ಲಲಲ್ಲಿರುವ ತೆಂಗಿನಕಾಯ ನೋಲಪ್ಪನುರೆಯರಿಯಲಾ ।
ಅಲ್ಲಿರುವ ಗೋದಿಯ ಶಿವಪ್ಪನುರೆಯರಿಯಲಾ
ಅಲ್ಲಿರುವ ಜವಳಿ ಲಿಂಗಪ್ಪನುರೆ ನಮಿಸುತ್ತ
ಎಲ್ಲಿಂದ ಬಂದಿರ್ದೈ ಈಗೆನಿಸಿ ನಸುನಗಿಸುತರುಹಿಸುವ ಗುರುವೆ ಶರಣು ॥೪೭೯೬॥

ಹಿಂದಕೀ ಊರ್ಗೆ ಬಂದಿರ್ದು ನಿರ್ಣಯ ಭಿಕ್ಷೆ
ಯಂ ದೈವದಿಂದ ಕೈಕೊಂಡು ಪೋಗಿರ್ದವರು
ಇಂದು ಬಂದಿರಿ ಅಂದು ಚೂರಮರಿ ವೀರಪ್ಪನಾಲಯದೊಳಿರ್ದಿರೆನುತ ।
ಅಂದಿನೋಲ್ ಪಡಿಜೋಳಮಂ ಹಾಗಮಂ ಬಿಡದೆ
ಇಂದು ಕೈಕೊಳುತಿರ್ಪಿರ್ರೈ ಎಂದು ನುಡಿವುತಿರ
ಲಂದಿನೋಲಿಂದಿಲ್ಲ ಇಂದಿನೋಲ್ ಮುಂದೆ ಇರೆನೆನುತಿರುವ ಗುರುವೆ ಶರಣು॥೪೭೭॥

ಅಂದಿನೋಲ್ ಇಂದಿಲ್ಲ ಇಂದಿನೋಲ್ ಮುಂದೆ ಇರೆ
ನೆಂದು ನುಡಿಯಲು ಈತನುರೆ ನಿರ್ಣಯ ಪುರಾಣಿ
ಎಂದು ತಮ್ಮೊಳ್ ತಾವೆ ನುಡಿವುತೊಡನೆ ಒಬ್ಬ ಭಗುತನಂ ಬರಿಸುತೊಡನೆ ।
ವಂದಿಸುತ್ತುರದೆ ನಾಳೆಗೆ ಬಿನ್ನಹವ ಮಾಳ್ಪೆ
ನೆಂದೆನಿಸೆ ನಾಳೆಗುರೆ ಬಂದಾಗ್ಯೆ ಪೇಳ್ವೆನೆನು
ತಿಂದುರೆ ನಡೆದು ಬಂದು ದಣಿದಿರುವೆನೆಂದು ಮಲಗಿರುವ ಗುರುವರನೆ ಶರಣು ॥೪೭೮॥

ಮಠದಲ್ಲೇ ಇರ್ದ ಗೋಲಪ್ಪನುರೆ ಬಂದು ನೀಂ
ನಿಟಿಲಾಕ್ಷಲಿಂಗ ಪೂಜೆಯ ಮಾಡಿ ಮಲಗುವುದು
ಮಠದಮ್ಮನವರು ಮಲಗುವುದಕ್ಕೆ ವ್ಯಾಳೆಯಾಗುವುದೇಳು ಏಳೆನುತ್ತ ।
ಮಠದಮ್ಮನಂ ಬರೆಸಿ ಬಿನ್ನಹವೆನಿಸಲುರದೆ
ನಿಟಿಲಾಕ್ಷ ಲಿಂಗಪೂಜೆಯ ಮಾಡಿ ನಲಿವುತ
ಮಠದಲ್ಲಿ ಸಲ್ಲೀಲೆಯಿಂ ಮಲಗಿ ನಿದ್ರಿಸುತಿರ್ದ ಗುರುವರನೆ ಶರಣು ॥೪೭೯॥

ಮಲಗಿ ನಿದ್ರಿಸಿ ಎದ್ದು ಮಲಮೂತ್ರಮಂ ಬಿಟ್ಟು
ಜಲವನುರೆ ಬಳಸಿ ಮೊಗದೊಳೆದು ಭೂತಿಯ ತಳೆದು
ತಳಹದೇ ಚೂರಮರಿ ವೀರಪ್ಪನಾಗಾರಮಂ ನೋಡಿ ನಲಿವುತೊಡನೆ ।
ಬಲುದಿನವೆನಿಸಿತೀಗ ಈ ಮನೆಗೆ ಬಾರದೆ ಎ
ನಲು ಬಂದು ವಂದಿಸಿದ ವೀರಪ್ಪನಣುಗನೆನಿ
ಪಲಘಟುತರ ಶಿವರುದ್ರನಂ ನೋಡಿ ನಲಿದಾಡು ತೊಳಗಿರುವ ಗುರುವೆ ಶರಣು॥೪೮೦೦॥

ಎಲ್ಲಿಯಿರ್ದಿರಿ ಇನಿತುದಿವಸವೆನುತಿರ್ದು ಬಳಿ
ಕಿಲ್ಲಿಗೆಂದಿಗೆ ಬಂದಿರ್ರೈ ಎಂದು ವಂದಿಸುತ
ಇಲ್ಲಿ ಬೆಳತನಕಾರ ಮನೆಯಲ್ಲಿ ಇರ್ದಿರ್ರೈ ಎಂದು ಎರಗುತ್ತ ಮತ್ತಂ ।
ಮೆಲ್ಲನೆ ಅಪ್ಪನೀಗೂರಿಗುರೆ ಪೋಗಿರುವ
ನಿಲ್ಲಿ ಈಗಿಲ್ಲಿ ನೀನೇ ಬಂದು ನಿಂದು ಮನೆ
ಯಲ್ಲಿ ಲಿಂಗಾರ್ಚನೆಯ ಮಾಡಬೇಕೆನಲು ನಲಿದುಲಿಯುತಿಹ ಗುರುವೆ ಶರಣು ॥೪೮೦೧॥

ಅಪ್ಪನುರೆ ಬಂದಾಗ ಬರುತಿರ್ಪೆವೆನಲೊಡನೆ
ಅಪ್ಪನುರೆ ಬಂದಾಗ ಮತ್ತಮುರೆ ಬರುವುದೆನು
ತಪ್ಪ ಶಿವರುದ್ರನಂ ನೋಡಿ ನಲಿದಾಡಿ ಬರುವೆನೆಂದುಸುರುತೊಡನೆ ।
ನಪ್ಪಿನಿಂ ನಿನ್ನೆ ಬಿನ್ನಹವೆನಿಸಿಮರೆರ ಅಮ
ರಪ್ಪನಂ ಪರಿಕಿಸುವೆನೆಂದು ಮಿಂದಾ ಮಠದೊ
ಳಿಪ್ಪವರನುರೆ ಕೇಳಿ ಭೂಸದೋಣಿಯ ಪೊಕ್ಕು ನಕ್ಕಿರುವ ಗುರುವೆ ಶರಣು ॥೪೮೦೨॥

ನಿನ್ನೆ ಈ ಊರ ಮಠದೊಡೆಯರಂ ಪರಿಕಿಸಿದೆ
ನಿನ್ನ ಇಲ್ಲಿರುವ ಭಕ್ತರ ಪರಿಕಿಸುವೆನೆಂದು
ಮೆಲ್ಲನೇ ಒಂದೆರಡು ಮೂರು ಮನೆಯಂ ತಿರುಗಿಸುತ್ತಿರ್ದು ನಸುನಗುತ್ತ ।
ಇನ್ನರದೆ ತಿರುಗಿಸಲ್ಬಾರದೆಂದುರೆ ನಯದಿ
ತನ್ನೊಳಗೆ ತಾನೇ ತಿಳಿದು ಕಡು ತವಕದಿಂ
ಚೆಣ್ಣನಿಂದುರೆ ಕರೆಸಿ ಬಿನ್ನಹವೆನಿಸಿ ನಮಿಸಿ ನಿಲ್ಲಿಸಿದ ಗುರುವೆ ಶರಣು ॥೪೮೦೩॥

ನಿಲ್ಲಿಸುತ್ತುರೆ ನಿಂದು ಲಿಂಗಾರ್ಚನೆಯ ಮಾಡಿ
ಮೆಲ್ಲನೇ ಲಿಂಗಾರ್ಪಿತವ ಮಾಡಿ ನೋಡಿ ಬಳಿ
ಕಿಲ್ಲಿಯುರೆ ನಿಲ್ಲಬಾರದು ಎಂದು ಗೋಲಪ್ಪನಿರ್ದ ಮಠಕೆಯ್ದಿ ನಗುತ ।
ಮೆಲ್ಲನೇ ಊರಿಗಾಂ ಪೋಪೆನೆಂದುರೆ ನುಡಿವು
ತಲ್ಲಿಂದ ಚೂರಮರಿ ವೀರಪ್ಪನಾ ಆಗಾರ
ಕುಲ್ಲಾಸದಿಂ ಬಂದು ನಿಂದು ನಿಟ್ಟಿಸಿ ನಗುತ್ತಿರುವ ಗುರುವರನೆ ಶರಣು ॥೪೮೦೪॥

ವೀರಪ್ಪನುರೆ ಬಂದ ಬಳಿಕ ಬರುತಿರ್ಪೆ ನಾ
ನೋರಂತೆ ಈಗಳೂರಿಗೆ ಪೋಪೆನೆನುತಿರ್ದು
ವೀರಪ್ಪನತ್ತಿಗೆಯೆನಿಪ್ಪ ವೀರಾಂಬೆಯೆಂಬವಳನುರೆ ನೋಡುತೊಡನೆ ।
ವೀರಪ್ಪನರ್ಧಾಂಗಿಯಂ ಕೇಳಲಿಲ್ಲಿಲ್ಲ
ವೀರಪ್ಪನೊಡನೆ ಕಾದರಹಳ್ಳಿಯೊಳಗಿರುವ
ಓರಂತೆ ಬರುವಳಿಲ್ಲಿಗೆ ಇನ್ನು ಎನಲುಲಿದುಲಿವ ಗುರುವರನೆ ಶರಣು ॥೪೮೦೫॥

ವೀರನಪ್ಪನ ಸತಿಯು ವೀರನಪ್ಪನ ತೊಡೆಯೊ
ಳೋರಂತೆ ಒಪ್ಪಿಪ್ಪಳೈ ನಿರಂತರಯೆಂದು
ಸೂರಿ ಜನ ಪೇಳ್ವರವರಂತೆ ಪೇಳ್ದಳಿವಳೀಗಳೆಂದು ನಗುತ ।
ವೀರಪ್ಪನುರದೆ ವೀರಪ್ಪನರ್ಧಾಂಗಿ ಈ
ಊರಿಗುರೆ ಬರಲು ನಾನುರೆ ಬರುವೆನೆನುತಿರ್ದು
ವೀರಪ್ಪ ನುರೆ ಬರಲು ಬರುತಿರ್ಪೆನೆನಿಸುತೊಳಗಿರುವ ಗುರುವರನೆ ಶರಣು ॥೪೮೦೬॥

ಒಳಗಿಂದ ಬಂದು ಕೈಯೊಳಗಿರುವ ಜಲಕಮಂ
ಡಲವ ತಕ್ಕೊಂಡು ಮನೆಯೊಳಗಿಟ್ಟು ಪೊಡಮಟ್ಟು
ತಳಹದೇ ಕಕ್ಷದೊಳಗಿಹ ಭೂತಿಯಾಧಾರಮಂ ತೆಗೆಸಿ ಮನೆಯೊಳಿರಿಸಿ ।
ನಳಿನಸಖನಾತಪದಿ ನಡೆದು ಬಂದಿರ್ದಿರೈ
ಮಲಗಿ ವಿಶ್ರಮಿಸಬೇಕೆಂದು ವಂದಿಸುತಿರ್ದು
ತಳಹದೇ ಹಾಸಿಕೆಯ ಹಾಸಿ ಮಲಗಿಸಿ ನಸುನಗುತ್ತುಲಿವ ಗುರುವೆ ಶರಣು ॥೪೮೦೭॥

ಮನೆಯಿಲ್ಲದವರು ಮನೆ ಮನೆಯನುರೆ ತಿರುಗುವರು
ಮನೆಯಿರ್ದು ನೀವು ಮನೆಮನೆಯನುರದೇ ತಿರುಗಿ
ಮನವನುರೆ ಪರಿಕಿಸಿದಿರಿನ್ನು ಮನೆಮನೆಯನುರೆ ತಿರುಗಬಾರದು ಎನುತ್ತ ।
ಮನೆಯೊಳುರದೇ ನಿಂದು ಮಿಂದು ಲಿಂಗಾರ್ಚನೆಯ
ನನುರಾಗದಿಂ ಮಾಡಿ ನಲಿದಾಡುತೊಡನೆಯಿಂ
ದಿನದಿನದಿ ಅಮರಪ್ಪನಂ ಪರಿಕಿಸುವೆನೀಗಡೆಯೆಂದ ಗುರುವೆ ಶರಣು ॥೪೮೦೮॥

ನಡೆಯೆಂದು ನಡೆಸುತುರೆ ಅಮರಪ್ಪನಿ
ರ್ದೆಡೆಗೆ ತಾನೇ ಬಂದು ಶರಣಾರ್ಥಿ ಎನುತಿರ್ದು
ಕೊಡುವುದೆನಗೇನನಾದರು ಎನಲು ಹುಬ್ಬಳ್ಳಿಯೊಳಗೆ ನಾನಿರ್ದು ಬಳಿಗೆ ।
ನಡೆದು ಬಂದರೆ ಕೊಡುವೆನ್ನೈ ಎನಲು ನಸುನಗುತ
ಒಡೆಯರ್ರೈ ನೀವು ನಿಮಗುರೆ ಹೇಳಬಾರದಾಂ
ಜಡದಂತೆ ನೀವಿಂತು ನುಡಿಯಬಾರದು ಎನುತ ನುಡಿಯುತಿಹ ಗುರುವೆ ಶರಣು॥೪೮೯॥

ಕೊಡುವುದಿದ್ದರೆ ಕೊಟ್ಟು ಕಳಿಸುವುದು ತವಕದಿಂ
ಕೊಡಲಾರದಿರಲು ಕೊಡೆನೆಂದುರದೆ ಪೇಳುವುದು
ಕೊಡುವೆನ್ನೈ ಆನಿರ್ದೆಡೆಗೆ ಬಂದರೆಂದುರದೆ ನುಡಿಯಬಾರದೆನುತ್ತ ।
ಒಡೆಯನೆನಿಸಿಪ್ಪ ಅಮರಪ್ಪನಂ ನೆರೆ ನೋಡು
ತೊಡನೆ ನಾನುರೆ ಪೋಗುತಿಹೆನೆಂದು ನುಡಿದಿರ್ದು
ಕಡು ತವಕದಿಂ ಬಂದು ಮಿಂದು ಲಿಂಗವ ಭಜಿಸುತರುಹಿಸುವ ಗುರುವೆ ಶರಣು॥೪೯೦॥

ಐದು ವರಹವನೊರ್ವನೇ ಕೊಟ್ಟಿರುವನೀಗ
ಈ ಧಾರವಾಡದಿ ಮುಸಂಡಯ್ಯನೆಂಬಾತ
ನಾದರದಿ ನಿನ್ನವನೆನಿಪ್ಪ ಅಮರಪ್ಪನಿಗೆ ಕೇಳು ಕೇಳೆಂದರಮುತ ।
ಐದು ವರಹದೊಳೊಂದು ಧರಣಮುಮನಾದರೂ
ಸಾದರದಿ ನಿನಗೀಯದೆ ಇಲ್ಲಿಯಿಲ್ಲೆಂದು
ನೀ ಧಾರವಾಡದೊಳಿನ್ನುರೆ ಬೆಳೆಯನೆಂದು ತಿಳಿಸುತಿಹ ಗುರುವೆ ಶರಣು ॥೪೯೧॥

ಇಂತರುಹಿಸುತ್ತ ಲಿಂಗಾರ್ಚನೆಯನೆಸಗಿಸುತ
ಸಂತಸದಿ ಲಿಂಗಾರ್ಪಿತವ ಮಾಡಿ ನಲಿದಾಡಿ
ನೀಂ ತವಕದಿಂದೀಗ ನಡೆಯೆಂದು ನಡೆಸುತುರೆ ನಡೆದು ಬೆಟಗೇರಿಯೊಳಿಹ ।
ಅಂತಕಾಂತಕ ಶರಣರೆನಿಪ ಕಡಗದವರ ನೀ
ಶಾಂತದೊಳ್ ನಿಂದೊಂದು ರಾತ್ರೆಯಂ ಕಳೆದೆಂದಿ
ನಂತೆ ಮರುದಿನದಿ ಸವದತ್ತಿಗೆಯ್ತಂದು ನಿಂದುಲಿವ ಗುರುವರನೆ ಶರಣು ॥೪೯೨॥

ನಿಂದು ನಿಟ್ಟಿಸುತೊಡನೆ ಸೊಲಬವ್ವೆಯುರೆ ರೋಗ
ವೆಂದಿನೋಲಿರುವುದಿಂದಿಗೆ ಎಂದು ನುಡಿಯುತ್ತ
ಇಂದಿಗುರೆ ಭಾಜನಂ ಬರಲು ದಯದಿಂದ ಪಾದೋದಕವನಿತ್ತು ಪೊರೆವಂ ।
ಇಂದಿಗುರೆ ಬಾರದಿರೆ ಪಾದೋದಕವಕೊಡಂ
ಮುಂದಿರುವ ಪೌಷ್ಯಮಾಸವ ದಾಂಟಿದರೆ ಲೇಸು
ಮುಂದಿರುವ ಪೌಷ್ಯಮಾಸವ ದಾಂಟಿದರೆ ಲೇಸೆನಿಸದೆಂದ ಗುರುವೆ ಶರಣು ॥೪೮೧೩॥

ಇನ್ನು ಎರಡೇ ದಿವಸವಿರುವುದೀ ಮಾರ್ಗಶಿರ
ವಿನ್ನುರದೆ ಭಾಜನವು ಬರುವುದದು ದುರ್ಲಭಂ
ಎನ್ನ ಮಗನೇ ಇನ್ನು ಪಾದೋದಕವನೀವುದದುವೆ ದುರ್ಲಭವೆನುತ್ತ ।
ಚೆನ್ನೆ ಎನಿಸುವ ನಿನ್ನ ಸೊಲಬವ್ವೆಯುರೆ ಬದುಕ
ಳಿನ್ನು ನೀನುರೆ ನಿಲ್ಲಬಾರದೆಂದುರೆ ತಿಳಿಸಿ
ಇನ್ನೊಮ್ಮೆ ಬಹೆನೆಂದು ಹೇಳಿ ನಡೆಯೆಂದು ಹೇಳಿಸಿ ನಡೆದ ಗುರುವೆ ಶರಣು ॥೪೮೧೪॥

ಇನ್ನೊಮ್ಮೆ ಬಹೆನೆಂದು ಹೇಳಿಯುರದೇ ನಡೆದು
ಇನ್ನೊಮ್ಮೆ ಈಗಳೇ ಹೋಗಿಬರಬೇಕೆಂದು
ತನ್ನವನೆನಿಪ್ಪ ಲಕ್ಕೀಮರದ ರಾಚಪ್ಪನಾಗಾರದಲ್ಲಿ ನಿಂದು ।
ತನ್ನನುವನುರೆ ಪೇಳಿ ಅವನನುವನುರೆ ಕೇಳಿ
ಚೆನ್ನಾಗಿ ಎರಡಹೋ ರಾತ್ರೆಗಳ ಕಳೆದಿರ್ದು
ಇನ್ನೊಮ್ಮೆ ಹೋಗಿಯುರೆ ನೋಡಿ ನಡೆಯೆಂದರುಹಿಸುತ್ತಿರುವ ಗುರುವೆ ಶರಣು॥೪೮೧೫॥

ಈಗ ನೀನುರೆ ಹೋಗಿ ನೋಡಿ ಕುಳ್ಳಿರ್ದು ಅವ
ರಾಗಾರದಲ್ಲಿ ಲಿಂಗಾರ್ಪಿತವ ಮಾಡದೆ
ಹೋಗುತಿಹೆನೆಂದುರದೆ ಹೇಳದೇ ಮುಳಗುಂದ ಮಡಿವಳನ ಮಠದೊಳಿರ್ದು ।
ಹೋಗಬೇಕೆಂದರುಪುತೊಡನೆ ಲಿಂಗಾರ್ಚನೆಯ
ವೇಗದಿಂ ಮಾಡಿ ಲಿಂಗಾರ್ಪಿತವನೆಸಗಿ ಕಡು
ವೇಗದಿಂ ಸೊಲಬವ್ವೆಯಂ ನೋಡುತೊಡನೆ ಕುಳಿತುಲಿಯುತಿಹ ಗುರುವೆ ಶರಣು॥೪೮೧೬॥

ನಿನ್ನ ಸಂಕಟವನುರೆ ನೋಡಲಾರದೆ ಈಗ
ನಾಂ ನಾಡೆ ಹೋಗುತಿಹೆನೆಂದುರದೆ ನುಡಿಯುತ್ತ

ಇನ್ನು ಈ ಪೌಷ್ಯ ಮಾಸವ ಕಳೆವುದೆ ಮಹಾ ಕಷ್ಟವೆಂದುಲಿವುತೊಡನೆ ।
ಇನ್ನು ಮುಳಗುಂದ ಮಡಿವಳ ಮಠದೊಳಗಿರುವೆ
ನಿನ್ನೊಮ್ಮೆ ಬಂದರುರೆ ಬರುವೆನಿಲ್ಲವೆ ಪೋಪೆ
ನಿನ್ನೊಮ್ಮೆ ಬಂದಾನೆಂದು ನಿಶ್ಚಯಿಸದಿರು ಎಂದ ಗುರುವರನೆ ಶರಣು ॥೪೮೧೭॥

ಇಂತುರದೆ ಹೇಳಿ ಸೊಲಬವ್ವೆಯಂ ಬೀಳ್ಕೊಂಡು
ತಾಂ ತಳುಹದೇ ಬಂದು ಮುಳುಗುಂದ ಮಠದೊಡೆಯ
ಅಂತರಂಗದೊಳಿರುವ ಭ್ರಾಂತಿಯಂ ತವೆ ತಿಳಿದು ತಿಳಿಯದವನಂತ ಇರ್ದು ।
ಅಂತಕಾಂತಕಲಿಂಗಮಂ ಭಜಿಸಿ ಬಳಿಕೆಂದಿ
ನಂತೆ ಲಿಂಗಾರ್ಪಿತವ ಮಾಡಿಯುರೆ ನೋಡಿ ನಿ
ಶ್ಚಿಂತ ನಿರ್ಣಯಪುರಾಣವ ಜಪಿಸುತಾತಪದಿ ನಡೆಸುತಿಹ ಗುರುವೆ ಶರಣು ॥೪೮೧೮॥

ಆತಪದಿ ನಡೆದು ಗುರುಗಳ ಹೊಸೂರಂ ಹೊಕ್ಕು
ಆ ತಳದೊಳಿಹ ದೇವಲಾಪುರದ ಲಿಂಗನ ನಿ
ಕೇತನದೊಳುರೆ ನಿಂದು ಮಿಂದು ಲಿಂಗವ ಭಜಿಸಿ ಅರ್ಪಿಸಿ ಸವಿದು ನಿಂದಿರೆ ।
ಓತು ಸದ್ಭಕ್ತಿಯಿಂದೆರಗಿ ಕುಳ್ಳಿರ್ದು ಬಳಿ
ಕೀ ತೆರದಿ ಹಿಂದಕುರೆ ಬಂದಾಗ್ಗೆ ಇದ್ದಿಲ್ಲ
ವೈ ತವಕದಿಂ ನೀವೆ ತಿಳಿಸಬೇಕೆನಲು ನಸುನಗುತೊರೆವ ಗುರುವೆ ಶರಣು ॥೪೮೧೯॥

ಹಿಂದಕುರೆ ಬಂದಾಗ್ಗೆ ನಿನ್ನನುರೆ ಬರೆಸಿ ನಿಂ
ನ್ನಿಂದ ತೀರ್ಥವ ಪಡೆಸಿಕೊಳುತಿರ್ದೆ ಕೊಡುತಿರ್ದೆ
ನಿಂದು ಆಹಾರಿಂದ ಪಡೆಸಿಕೊಂಬುವುದಿಲ್ಲ ಕೊಡುವುದಿಲ್ಲೆಂಬುತೊಡನೆ ।
ಮುಂದೆ ಹೀಗೆ ಕಡೆತನಕ ಒಬ್ಬನೇ ಉಣ್ಣೆ
ನೆಂದರುಹಿಸುತ್ತಿರ್ದು ಈಗೊಬ್ಬನೇ ಉಂಡೆ
ನೆಂದು ನಸುನಗುತೊಳಗೆ ತೊಳಗುತುರೆ ಥಳಥಳಿಸುತಿರುವ ಗುರುವರನೆ ಶರಣು॥೪೮೨೦॥

ನಿಮಗೆ ನಾನುರೆ ಹೇಳಬಾರದ್ಯೆ ಗುರುವರನೆ
ಮಮತೆಯಿಂ ನೀವೆ ಕರೆದುಕೊಳಲು ಬರುವೆನೆನೆ
ಮಮತೆಯಿಂ ಮುಂದೆ ನಾವೇ ಕರೆದುಕೊಳುತಿರ್ಪೆನ್ಯೆ ಎಂದು ನಸುನಗುತ್ತ ।

ಸಮಯಂಗಳುರೆ ಮುರಿದು ಸಮಯ ಒಂದೇ ಎನಿಪ
ಸಮಯದೊಳೆನ್ನ ಸಮಯಾಚಾರದವರು ಬರೆ
ಮಮತೆಯಿಂ ನಿನ್ನನುರೆ ಪಂಕ್ತಿಯೊಳ್ ಕರೆಕೊಂಬೆನೆಂಬ ಗುರುವರನೆ ಶರಣು ॥೪೮೨೧॥

ಅಂದು ನಾನುರೆ ಪಂಕ್ತಿಯಲ್ಲಿ ಕರೆಕೊಂಡುಂಬೆ
ನಿಂದು ನೀನುರೆ ಹೊರಗೆ ಕುಳ್ಳಿತು ಉಣ್ಣುವುದೆಂದು
ಮಿಂದು ಮಡಿಯುಟ್ಟು ಲಿಂಗವ ಭಜಿಸುವನಿತರೊಳ್ ಮಾಡಿದಡುಗೆಯನೆಲ್ಲನು ।
ಒಂದೆರಡು ಮೂರು ಪರಿಯಾಣದೋಳೆಡೆಮಾಡಿ
ತಂದು ಮುಂದಿಟ್ಟು ಪೊಡಮಟ್ಟು ಪೋಗಲು ನೋಡಿ
ಎಂದಿನೋಲ್ ತನ್ನ ಬಟ್ಟಲದಲ್ಲಿ ನೀಡಿಕೊಳುತಿರ್ದ ಗುರುವರನೆ ಶರಣು ॥೪೮೨೨॥

ತನ್ನ ಬಟ್ಟಲದಲ್ಲಿ ತಾನೆ ನೀಡಿಕೊಳುತ್ತ
ತನ್ನಿಷ್ಟಲಿಂಗಕ್ಕೆ ತಾನೆ ಅರ್ಪಿಸುತೊಡನೆ
ತನ್ನ ಸತ್ಪ್ರಾಣಲಿಂಗಕೆ ತಾನೆ ಸಲ್ಲಿಸುತ ಸಲ್ಲೀಲೆಯಿಂದ ಸವಿದು ।
ತನ್ನೊಳಗೆ ತಾನೆ ನಲಿದಾಡುತೊಲೆದಾಡುತ್ತ
ತನ್ನವನೆನಿಪ್ಪ ಲಿಂಗಪ್ಪನಂ ನೋಡಿ ನಲಿ
ದಿನ್ನೊಮ್ಮೆಯುರೆ ಬರುವೆನೆಂದುರದೆ ನುಡಿಸಿ ನಡೆಸುತ್ತಿರುವ ಗುರುವೆ ಶರಣು ॥೪೮೨೩॥

ನಡೆಸುತುರೆ ನಡೆವುತೊಡನೇ ಅಸುಂಡಿಯ ಕಂಡು
ಕಡುತವಕದಿಂ ಪೊಗುತ ಲೋಳಿಸರದವರ ಮಠ
ದೊಡೆಯರಂ ನೋಡಿ ನಲಿದಾಡುತಲ್ಲಿರುವ ತನ್ನವರನುರೆ ಕೇಳುತೊಡನೆ ।
ಸಡಗರದಿ ಲಿಂಗಮಂ ಭಜಿಸಿ ಅರ್ಪಿಸಿ ಸವಿದು
ನಡೆದು ಏಣಿಗೆಯ ಮುಂದಿರುವ ತೊರೆಯಂ ದಾಂಟಿ
ಕಡು ತವಕದಿಂ ಬಂದು ಹೊಂಗಲದಿ ತನ್ನವರನೊಂದಿರುವ ಗುರುವೆ ಶರಣು ॥೪೮೨೪॥

ತನ್ನವರನೊಂದಿ ಎಂದಿನೊಲು ಸುಖಿಸುತ್ತಿರ್ದು
ತನ್ನ ನಿರ್ಣಯ ಪುರಾಣವನೆಂದಿನೊಲು ಜಪಿಸಿ
ತನ್ನ ನಿರ್ಣಯ ಪುರಾಣಿಯ ರಾಣಿಯರ್ಭಕನ ಬಾಲಲೀಲೆಯ ನೋಡುತ ।
ಇನ್ನಿವನ ಬಾಲಲೀಲಾ ತ್ರಿಕಾಲಜ್ಞಾನ

ವಂ ನಾಡೆ ನಿರ್ಮಿಸುವುದೆಂದರುಹಿಸುತ್ತಿರ್ದು
ಎನ್ನ ಮಗನೇ ಈಗ ವಿಸ್ತಾರನಾಮೆಯಂ ಬರೆಯೆಂಬ ಗುರುವೆ ಶರಣು ॥೪೮೨೫॥

ಆನೆಂತು ಬರೆವೆನೈ ವಿಸ್ತಾರನಾಮೆಯಂ
ನೀನೆ ಬರೆಸು ಗುರುವೆ ಎಂದು ವಂದಿಸುತಿರ್ಪ
ಸೂಸುವಂ ನೋಡಿ ನಲಿದಾಡಿ ಮುಂಡಾಡಿ ತನ್ನೊಳ್ ತಾನೆ ನಸುನಗುತ್ತ ।
ಮೌನಿವಲ್ಲಿಯ ದೈವದವರುರದೆ ನಾಚುವೋ
ಲಾನೆ ನಿನ್ನಯ ಬಾಯೊಳಿರ್ದು ನುಡಿಸುತ್ತಿರ್ಪೆ
ನಾನೆ ನಿನ್ನಯ ಕರದೊಳಿರ್ದು ಬರೆಸುವೆನೆಂದು ಬರೆಸುತಿಹ ಗುರುವೆ ಶರಣು ॥೪೮೨೬॥

ಅಥ ವಿಸ್ತಾರ ನಾಮಪತ್ರ :

ಶ್ರೀ ಮನ್ನಿರ್ಣಯ ಮಹಾಗುರುವರಾಜ್ಞಾಸಾಜ್ಞೆಯಿಂ ಸಮಸ್ತ ಸದ್ಭಕ್ತ ಸದ್ವೀರ ಮಾಹೇಶ್ವರರಿಗರುಹಿಸಲೋಸುಗಂ ಸಮಸ್ತ ಪತ್ತನಗಳಿಗೆ ಕಳಿಸುತ್ತಿರುವ ವಿಸ್ತಾರನಾಮೆಯೆನಿಪ ನಿರ್ಣಯ ಪುರಾಣಿಯ ರಾಣಿಯ ಬಾಲನ ಬಾಲಲೀಲಾ ತ್ರಿಕಾಲಜ್ಞಾನ ಪತ್ರವಿದೆಂತೆನೆ:

ಹೊರಲಾರದ ಹೊರೆಯಂ ಹೊತ್ತು ಬ್ಯಾಸತ್ತು ಬಲ್ಬಳಲಿ ಬಾಯಾರಿ ಬೀಳುವ ಖೂಳರಂತೆ ತಮಗೆ ಸಮಂತರಿಯದಂಥ ತಾತ ರೇತೋಜಾತರ ವಿಭಾಗದ ನಿರ್ಣಯವನುರೆ ನಿರ್ಣಯಿಸಿ ತೂರ್ಣದಿಂದುಸುರ್ದು ವಿಭಾಗಿಸುವೆವಾವೆಂದು ತಾವನ್ಯಾಯಾಧೀಶ್ವರರೆನಿಸಿ ಉಲಿದವೊಲಾಲಿಸುವೆವಾವೆಂದು ದ್ವಂದ್ವ ವಾದಿಗಳಂ ಮೂರು ಸೂಳಂ ಮೂದೆರದಿಂದಂ ಬರೆಸಿಕೊಂಡಿರ್ದ ಕಟ್ಟುತ್ತರಗಳಂ ಸಿಟ್ಟಿಸುತ್ತ ಮತ್ತಂ ಪ್ರಾಚೀನರು ಸೂಚಿಸಿರ್ದುದನುರೆ ಮರೆದು ಮರೆವರಿವಿನನ್ಯಾಯ ನ್ಯಾಯದ ಮಂದಮತಿಯಿಂದ ನಾವೀಗಳೆಂದುದೇ ನಿರ್ಣಯವೆಂದು ತೂರ್ಣದಿಂದುಸಿರ್ದು ವಿಭಾಗಿಸುತ್ತಿರ್ದು ಮತ್ತಂ ವಿಭಾಗಿಸುವುದಕ್ಕಶಕ್ತರೆನಿಸಿ ಯುಕ್ತಿಯಿಂ ಬಿಡಲಾ ವಾದಿಗಳು ಬಿಡದೆ ವಿವಾದದೊಡನೆ ಇರ್ದು ಬಲ್ದಿನಂ ಬರ್ದುಕುತ್ತ ಮತ್ತಂ ಪೊರೆಯಂ ಪೊರ್ದುತಂ ತಮ್ಮ ಸೋಲು ಗೆಲುವನುರೆ ಸಂಮಿಸಿ ನಮ್ಮ ನಿರ್ಣಯವನಿನ್ನೂ ಚೆನ್ನಾಗಿ ತೂಗಿ ನೋಡಿ ಮಾತಾಡಿ ಹೇಳುವುದನುರೆ ಹೇಳಿ ದಾಯಾದಿಯ ತಗಾದೆಯ ನೀಗಿಸಿ, ಬೀಗಿಸುವುದೈ ದೈವದವರೇ ಎಂದು ಮುಂದನಿಂದುರೆ ನುಡಿಯಲೊಡನೆ, ಗಡಬಡಿಸಿ ನಾವಂದು ಮುಂದುಗಾಣದೆ ಕೋಣತನದಿಂ ಜಾಣತನವನುಳಿದು ನಿಮಗೆ ನ್ಯಾಯಾಧೀಶ್ವರರೆನಿಸಿರ್ದೆವೈ ಇನ್ನಾ ನ್ಯಾಯಾಧೀಶ್ವರತ್ವವೆಮಗುರೆ ಸಲ್ಲದೈಯೆಂದು ಮೆಲ್ಲನೆ ನೀವಂದು ಕೊಟ್ಟಿರುವ ಕಟ್ಟುತ್ತರಗಳಂ ಮಗುಳಿತ್ತಪೆವೆನುತ್ತುಸಿರುತ್ತುಭಯ ವಾದಿಗಳನುರೆ ಕಳಿಸಿ ಬಳಿಕೀ ವಾದಿಗಳ ವಿವಾದವೆಮ್ಮನಾವರಿಸುತ್ತಿರುವದಿನ್ನೇಗೆಯ್ವೆವೆಂದು ತಮ್ಮೊಳ್ ತಾವೆ ಚಿಂತಾಕ್ರಾಂತರಾಗಿರುವ ಮುನವಳ್ಳಿಯ ಕಳ್ಳ ದೈವದರುತ್ತರವನುತ್ತರಿಪ ಉತ್ತರೋತ್ತರಯೆನಿಪ ನಿಜ ನಿರ್ಣಯ ಪುರಾಣಮಂ ನಿರ್ಮಿಸಿದ ನಿರ್ಣಯ ಪುರಾಣಿಯ ರಾಣಿಯು ಕೂಸೆನಿಸುತಾ ರಾಣಿಯಂ ಸಲಹುತ್ತ ಮಾರಾಣಿಯಿಂ ಸಲಹಿಸಿಕೊಳುತ್ತೊಡನೆ ವ್ಯಾಸಹಸ್ತಸ್ತಂಭನವೆಂಬ

ಖಂಡನವೆಂಬುಭಯವಾದಿಗಳ ನಿರ್ಣಯವನುರೆ ನಿರ್ಣಯಿಸಿ ತೂರ್ಣದಿಂ ಪಂಚವರ್ಣಧ್ವಜದ್ವಯಮಂ ಪಿಡಿಸುತ್ತ ನಡೆಸುತ್ತ ಮತ್ತಂ ತನ್ನನುರೆ ಮರೆದು ಮರೆವರಿವಿನನ್ಯಾಯದಿಂ ಲಿಂಗ ಜಂಗಮರಿಗುಣಿಸುತ್ತ ತತ್ಪಾದೋದಕ ಪ್ರಸಾದವ ಕೈಕೊಳುತ್ತ ಮತ್ತತೆಯ ಮರೆವರಿವಿಸನ್ಯಾಯ ನ್ಯಾಯದಿಂದೀ ಕಿತ್ತೂರ ನಾಡನಾಳುತ್ತಿರ್ದ ಶಿವಲಿಂಗರುದ್ರ ಸರ್ಜಾಹ್ವಯ ಮಹೀವರನಂ ಒರೆಸೊರಸಿ ನಿಂದೊರೆಸುತ್ತ ಮರೆಸುತ್ತ ಮತ್ತಂ ತತ್ಸತ್ಯಾದಿಯಾದ ಕಾದಲೆಯರನುರೆ ಒರೆಸದೆ ಮರೆಸದೆ ಬಲ್ಬೆಚ್ಚಿಸದೆ ಮಚ್ಚಿಸದೆ ಸ್ವೇಚ್ಛೆಯಿಂ ಹೊರಗುರೆ ಹೊರಡದೋಲ್ ಬಲ್ಗಾವಲವೆನಿಸುತ್ತ ಕಾಯುತ್ತ ನೋಯುತ್ತ ನೋಯದೇ ಕಾಯ್ವುತ್ತಿರ್ದು ದಂ ಕಣ್ಣಿನಿಂ ಕಂಡು ಕಾಣದ ಕಾಣದಂತೆ, ಕಿವಿಯಿಂ ಕೇಳ್ದು ಕೇಳದ ಕಿವುಡರಂತೆ, ಈಗ ಮತ್ತೂ ಮರೆವರಿವಿನ ನ್ಯಾಯನ್ಯಾಯದಿಂ ನಡೆವ ಲಿಂಗ ಜಂಗಮರಿಗುಣಿಸುತ್ತ ತತ್ಪಾದೋದಕ ಪ್ರಸಾದವ ಕೈಕೊಳ್ಳುತ್ತ ವ್ಯಾಸಹಸ್ತಗಳಿವೆ ಎನುತ್ತರಿವೆಯ ಕರಗಳಂ ನಂದಿಯ ಕೋಲುಗಳಿಗೆ ನಂದಿಯಿಂ ಮ್ಯಾಲೆ ಜೋಲುವೋಲ್ ಕಟ್ಟಿಸುತ್ತಿರುವ ಕೊಟ್ಟಿಶೆಟ್ಟಿಗಳನಿನ್ನುರೆ ಕುಟ್ಟಿಸುತ್ತಿಹಂ. ವ್ಯಾಸಹಸ್ತವ ಹರಿಸೆನುತ್ತುರೆ ನಿರವಿಸುತ್ತಿಹಂ. ಲಿಂಗವಂತರಾವೆಂಬ ಸೋಂಬರ ಭಂಗಿಸುತ್ತಿಹಂ. ಲಿಂಗ ಜಂಗಮರಾವೆಂದೊರೆವ ಮಂಗರಂ ಕಂಗೆಡಿಸುತ್ತಿಹಂ. ವೀರಶೈವರಾವೆನುತೊರೆವ ತೆರದಾಯಿಗಳೆನಿಪ ಕೂಳರಂ ಬೀಳಿಸುತ್ತಿಹಂ. ಮತ್ತಂ ಮುಂದೆ ತನ್ನಯಾನಂದದಿಂದ ತಾನೇ ತನ್ನವರನುರೆ ಜೋಡೆನಿಸಿ ಕೂಡಿಸಿ ಮತ್ತತೆಯ ಮರವರಿವಿನ ನ್ಯಾಯಮಂ ಬಿಡಿಸುತ್ತ, ನಿರ್ಮತ್ತತೆಯ ಅರಿವಿರಿವಿನಾ ನಿರ್ನಾಯ ನ್ಯಾಯಗಳಂ ಪಿಡಿಸುತ್ತಿರೆ, ನಿರ್ಣಯದಿಂದಾಚರಿಸುವ ಲಿಂಗ ಜಂಗಮಕ್ಕುಣಿಸುತ್ತಿಹಂ, ತಣಿಸುತ್ತಿಹಂ, ತತ್ಪಾದೋದಕ ಪ್ರಸಾದವ ಕೈಕೊಳುತ್ತಿಹಂ, ಕೈಕೊಳಿಸುತ್ತಿಹಂ. ವ್ಯಾಸನ ಹಸ್ತವನಂದು ನಂದೀಧ್ವಜಕ್ಕೆ ನಂದಿಯಿಂ ಕೆಳಗೆ ಥಳಥಳಿಸುವವೋಲ್ ಕಟ್ಟಿಸುತ್ತಿಹಂ ಖೊಟ್ಟಿ ಶೆಟ್ಟಿಗಳ ಖೊಟ್ಟಿತನಮಂ ಬಿಡಿಸಿ ಮಿಗೆ ಶೆಟ್ಟಿತನಮಂ ಕೊಡಿಸಿ ಶೆಟ್ಟಿಗಳ ಶೆಟ್ಟಿ ಸರಶೆಟ್ಟಿಯೆನಿಸುತ್ತಿಹಂ.

ಈಗಳುರೆ ಗಡಿಗೆಯೊಳಡಗಿರುವ ಪಂಚವರ್ಣ ಧ್ವಜದ್ವಂದ್ವವನಂದು ಹೊರಗುರೆ ಹೊರಡಿಸುತ್ತೊಡನೆ ಮುಂಗಡೆಯಲ್ಲಿ ಪಿಡಿಸುತ್ತೆಡಭಾಗ ಬಲಭಾಗದೊಳೆಡವಿಡದೆ ನಡೆಸುತ್ತ ನಿಜ ನಿರ್ಣಯ ಪುರಾಣಿ ಎನಿಸುತ್ತುರೆ ಪಸರಿಸುತ್ತಿಹಂ.

ಈಗಳಿನ್ನೂ ಚೆನ್ನಾಗಿ ಪಸರಿಸದೆ ತುಡುಗನೋಲಡಗದೆ ಹುಡುಗರೊಳ್ ಹುಡುಗನಾಗಿ, ಹುಡಿಯೊಳಾಡುತ್ತಿಹನದೆಂತೆನೆ:

ನಿರ್ಣಯವ ನಿರ್ಣಯಿಸುತ್ತ ಸತ್ಯದಿಂದೀ ರಾಜ್ಯ ಸಾಮ್ರಾಜ್ಯವನಾಳಿಸುತ್ತಾಳುತ್ತಿರುವ ಕುಂಪಣೀ ಸರಕಾರದವರಿಗೆ ನಿರ್ಣಯವನರಪುವ ನಿರ್ಣಯ ಪುರಾಣಿಗಳ ಮರಿಯೆನಿಸುತ್ತಿಹಂ.

ಮತ್ತಮನ್ಯರೆನಿಪಾ ಮಾನ್ಯರಿಗುದೆಮರಿಯೆನಿಸಿ ಕಾಣಿಸದೆ ಕಾಣಿಕೆಯನುರೆ ಮಾಣದೆ ಜಾಣತನದಿಂ ಕೈಕೊಳುವ ತನ್ನವರಿಗೆ ಕೈಕೊಳಿಸಿ ತಾನುರೆ ಕೈಕೊಂಡು ಉಂಡು ಗುರ್ವಾದ್ಯಷ್ಟಾವರಣವ ತನ್ನಂತರಂಗದೊಳ್ ತಳೆದು ಬಹಿರಂಗದೊಳುಳಿದಿರುವ ನಿರ್ಣಯ ಪುರಾಣಿಯಣುಗನೆನಿಸುತ್ತಿಹಂ.

ಮತ್ತಮಾ ನಿರ್ಣಯ ಪುರಾಣಿಯ ರಾಣಿಯನುರೆ ಮಾಣದೆ ಮಲಗಿಸಿಕೊಳುತ್ತ ರಾಣಿಯ ಮೊಲೆಯನುಣುತ್ತಿಹಂ. ಮೊಲೆಯನುಣುತುಜತಕುಣತಿರ್ದು ಚಿಣಿಪಣಿಯನುರೆ ತರಿಸಿ ಪಿಡಿಯುತ್ತಿಹಂ. ಚಿಣಿಪಣಿಗಳಂ ಪಿಡಿದು ಚಿಣಿಗೋಲನಾಡುತ್ತಿಹಂ. ಚಿಣಿಗೋಲನಾಡುತಾಡುತ ತನಗೆ ಬೇಕಾದುದಂ

ಬೇಡಿಯುರೆ ಕಾಡುತ್ತಿಹಂ. ಕಾಡಿಯುರೆ ಬೇಡಿ ನೀಡಿಸಿಕೊಳುತ್ತಿಹಂ. ನೀಡಿಸಿಕೊಳುತ್ತುಣುತ್ತಿಹಂ, ಉಣುತುಣುತ್ತುಂಬುವುದಂ ಬಿಟ್ಟು ಹೊರಗೆ ಹೋಗುತ್ತಿಹಂ, ಹೊರಗೆ ಹೋಗುತ್ತ ಹುಡಿಯೊಳಾಡುತ್ತ ಹುಡುಗನೆನಿಸುತ್ತಿಹಂ.

ಇಂತೀ ಬಾಲ್ಯಲೀಲೆಯೊಳೀಗೊಪ್ಪಿ, ನಿರ್ಣಯ ಪುರಾಣಿಯಣುಗನೆನಿಸಿಪ್ಪ ನಿರ್ಣಯ ಪುರಾಣಿಯ ರಾಣಿಯಾತ್ಮಜನ ತಮ್ಮನಿಗೆ ತಮ್ಮ ತಮ್ಮ ಶಕ್ತ್ಯಾನುಸಾರವನರಿದು ಕಪ್ಪವನುರೆ ತಪ್ಪದೆ ಮನವಪ್ಪಿನಿಂ ಕೈಕೊಳಿಸಿ ಬೆಳೆಸಿಯುರೆ ಬೆಳೆವ ಮಾನ್ಯರೇ ಧನ್ಯರಹರೆಂದು ತಾನಿಂದು ಶಾಲಿವಾಹನ ಶಕದ ೧೭೪೯ನೆಯ ಸರ್ವಜಿನ್ನಾಮ ಸಂವತ್ಸರದ ಪೌಷ್ಯ ಶುದ್ಧ ೧೫ ಪೂರ್ಣಿಮೆಯಲ್ಲಿ ಬಯಲವಾಡದ ಬಳಿಯಲ್ಲಿರುವ ಈ ಬಯಲ ಹೊಂಗಲ್ಲಿನಲ್ಲಿ ಸೂಚಿಸುತ್ತಿರ್ದು ಮತ್ತಮುರೆ ಸೂಚಿಸದೆ ತಳವನುಳಿಸಿ ಉಪ್ಪಿನ ಬೆಟಕೇರಿ ಎನಿಸಿಪ್ಪ ತಳಕುರೆ ಬರಿಸಿ ಕುಳ್ಳಿರಿಸಿಯುರೆ ತಿಳಿಸಿ ಬರಸಿ ಬಳಿಕಿಲ್ಲಿಂದುರೆ ಕಳಿಸಬಾರದು ಕಿಲ್ಲೆ ಧಾರವಾಡಕ್ಕಿಲ್ಲಿಂದುರೆ ಪೋಗಿ ಬಳಿಕಲ್ಲಿರುವೆಲ್ಲರಿಗೆ ತೋರುತ್ತಚ್ಚರಿಯಂ ಬೀರುತ್ತವರಿಂದುರೆ ಬರಸುತ್ತಲ್ಲಿರುವ ಸರದಾರರಿಗುರೆ ತಿಳಿಸುತ್ತಲ್ಲಿಂದ ಎಲ್ಲಾ ತಾಲೂಕುಗಳಿಗೆ ಗಳಗಳನೆ ಕಳಿಸುವುದೆಂದುರೆ ತಿಳಿಸುತ್ತುರುತರದ ತವಕದಿಂದೀ ಧಾರವಾಡಕ್ಕರೆ ಬರೆಸಿ ತನ್ನವನೆನಿಪ್ಪ ಚೂರಮರಿ ವೀರಪ್ಪನಾಗಾರದಲ್ಲಿ ನಿಲ್ಲಿಸಿ ಸಲ್ಲೀಲೆಯಿಂ ಬರೆಸಿದ ವಿಸ್ತಾರನಾಮೆಯೆನಿಪ ನಿರ್ಣಯ ಪುರಾಣಿಯ ಬಾಲಲೀಲಾ ತ್ರಿಕಾಲಜ್ಞಾನ ಪತ್ರವಿದು ವಿದಿತಂ ವಿದಿತಂ ವಿದಿತಂ.

ಇಂತೀ ಪೌಷ್ಯ ಬಹುಳ ೭ ಸಪ್ತಮಿ ಸೌಮ್ಯವಾರದಲ್ಲಿ ಬರೆಸಿದ ಬಾಲಲೀಲಾ ತ್ರಿಕಾಲಜ್ಞಾನ ಪತ್ರ ಸಹಿತಂ । ಧಾರವಾಡದಿಂ ನಿಜ ದಾರಾದಿಯಾದವರಿರ್ದೂರ ದಾರಿಯಂ ಪಿಡಿಸಿ ನಡೆಸುತ್ತುರೆ ನಡೆದು ಲೋಕೂರನುರೆ ಕಂಡು ಅಲ್ಲಿರುವ ಲೋಕದಿಂ ಕಪ್ಪಮಂ ಮನವಪ್ಪಿನಿಂ ಕೈಕೊಂಡು, ಉಂಡು ಬಳಿಕೀ ಲೋಕರಾಲೋಕಿಸಲೋಸುಗಮೀ ಕಾಲದೊಳೀ ಕಾಲಜ್ಞಾನ ಪತ್ರವನುರೆ ಕರದಲ್ಲಿ ಪಿಡಿಯೆಂದು ಪಿಡಿಸುತ್ತ ನಡೆಸುತ್ತೊಡನೆ ಊರೂರನುರೆ ಪೊಗಿಸುತ್ತ ಮತ್ತಂ

ಮನೆ ಮನೆಯಂ ಪೊಗಿಸುತ್ತುರೆ ಹಸಿವಿಲ್ಲದೆ ಹಸಿದಿರುವೆನೆನಿಸುತ್ತಲ್ಲಿರುವ ಭಕ್ತರ ಭಕ್ತಿಯಂ ಪರಿಕಿಸಲೋಸುಗಂ ತಿರಿಗಿಸುತ್ತಿರ್ದು ಮತ್ತಮೆರಗಿದ ರುದ್ರಪ್ಪನೆನಿಸಿರ್ಪ ಬುಡರಕಟ್ಟಿಯ ಗೌಡನ ಭಕ್ತಿಯಿಂ ನಾಡೆ ಲಿಂಗಾರ್ಚನೆಯಂ ಮಾಡಿ ಲಿಂಗಾರ್ಪಿತನುಂ ಮಾಡಿಯುರೆ ನೋಡಿ ನಲಿದಾಡು ತಲ್ಲಿಂದ ಮೆಲ್ಲನೆ ಬೆಳವಡಿಗೆಯ್ತಂದು ನಿಂದು ಬೆಳವಡಿಯೊಳಗಿರುವ ಮಠದಯ್ಯಗಳ ಮನವನೊಯ್ಯನೆ ಪರಿಕಿಸುತ್ತಲ್ಲಿಮುರೆನಿಲ್ಲದೆ ಚಕ್ಕನೆ ವಕ್ಕುಂದಕೆಯ್ತಂದು ಅಲ್ಲಿರುವ ಮಲಾಪಹಾರಿಯೊಳ್ಮಿಂದು ಬಳಿಕಲ್ಲಿರುವ ಭಕ್ತರ ಭಕ್ತಿಯಂ ಪರಿಕಿಸಲೋಸುಗಂ ಮನೆಮನೆಯಂ ತಿರುಗಿಸುತ್ತ ಮತ್ತಮುರೆ ತಿರುಗಿಸದೇ ಚಕ್ಕನೇ ಒಬ್ಬ ಚಿಕ್ಕವನಿಂ ಬಿನ್ನಹವನೆಸಗುತ್ತೆರಗಿಸುತ್ತೊಡನೆ ಲಿಂಗಾರ್ಚನೆಯಂ ಮಾಡಿಸಿ ಲಿಂಗಾರ್ಪಿತಮಂ ಮಾಡಿಸಿ ತತ್ಪಳವನುಳಿಸುತ್ತಾನಿಗೊಳ್ಳಕುರೆ ಬರಸುತ್ತಲ್ಲಿರುವ ರಾಮಲಿಂಗನ ಪಿಂಗಡೆಯೊಳ್ ಕುಳ್ಳಿರಿಸಿ ಬಳಿಕಲ್ಲಿರುವ ಭಕ್ತರಂ ಬರಿಸಿ, ತಿಳಿಸುವುದನುರೆ ತಿಳಿಸಿ, ಮಿಗೆ ಹಸಿವಿಲ್ಲೆನಿಸಿ, ತಚ್ಛಿಲಾಲಯದಲ್ಲಿಯುರೆ ಮಲಗಿಸಿ, ಪೌಷ್ಯ ಬಹುಳ ಮಾವಾಸೆಯಂ ತೊಲಗಿಸಿ ಬಳಿಕಿನ್ನೇಳೆಂದು ಏಳಿಸುತ್ತೊಡನೆ ತನ್ನವರಿರುವ ತನ್ನ ಹೊಂಗಲ್ಲಿಗೆಯ್ತಂದು ನಿಂದು, ಹೆಂದದಾನಂದದಿಂ ಲಿಂಗಾರ್ಚನೆಯಂ ಮಾಡುತ್ತ ಲಿಂಗಾರ್ಪಿತಮಂ ಮಾಡುತ್ತ ತನ್ನ ನಿರ್ಣಯ ಪುರಾಣಮಂ ಮಾಣದೆ ನೋಡುತ್ತ ಪಾಡುತ್ತ ಕುಳ್ಳಿರ್ದು ತನ್ನೊಳ್ ತಾನೆ ನಲಿದುಲಿದನದೆಂತೆನೆ.

ಈ ಕಾಲದೊಳೀಶೀಲದೊಳೀ ದೇಶದೊಳನಾಯಾಸದಿಂದುದಿಸಿದೀ ನಿರ್ಣಯ ಪುರಾಣಂ ಚತುರ್ವಿಧಮೆನಿಸುತ್ತ ಮತ್ತಂ ಮೂವೆಸರಿಂದೊಪ್ಪುತ್ತಿಪ್ಪುದದೆಂತೆನೆ:

ನಿನ್ನ ದಾಯಾದಿಗಳಾದಿಯಾದ ಜೈನ ಚಾರ್ವಾಕ ಮಾಯಾವಾದಿಗಳೆನಿಪ ಪರವಾದಿಗಳ ಎರ್ದೆಗಿರಿವ ಕಠಾರಿಯೆನಿಪುದೀ ನಿರ್ಣಯ ಪುರಾಣಂ, ಮತ್ತಂ ನಿನ್ನನುರೆ ಮರೆದು ಮರೆವರಿವಿನ್ಯಾಯನ್ಯಾಯದಿಂ ನಡೆವ ನುಡಿವ ಖೊಟ್ಟಿ ಶೆಟ್ಟಿಗಳನುರೆ ಕುಟ್ಟಿಸುವ ಕುಠಾರವೆನಿಪುದೀ ನಿರ್ಣಯ ಪುರಾಣಂ, ಮತ್ತಂ ನಿನ್ನ ಮರೆಯದೇ ನ್ಯಾಯನ್ಯಾಯ ನಿರ್ಣಯದಿಂದಾಚರಿಸುವ ಸದ್ಭಕ್ತ ಸದ್ವೀರಮಾಹೇಶ್ವರರುರೆ ಮಾಣದೆ ಜಾಣತನದಿಂ ಕಾಣುವ ಕನ್ನಡಿ ಎನಿಪುದೀ ನಿರ್ಣಯ ಪುರಾಣಂ. ಮತ್ತಮೇನೇನನುರೆ ತಿಳಿಯದ ಮುಗ್ಧ ಭಕ್ತರುರೆ ಭಕ್ತಿಯಿಂ ಭಜಿಸುವ ದೇವರೆನಿಪುದೀ ಪುರಾಣಂ. ಇಂತು ಚತುರ್ವಿಧವೆನಿಸಿರುದೀ ನಿರ್ಣಯಪುರಾಣಂ ನಿರ್ಮಿಸಿದ ನಿರ್ಣಯ ಪುರಾಣಿಯ ರಾಣಿಯ ಬಾಲನ ಬಾಲಲೀಲಾ ತ್ರಿಕಾಲಜ್ಞಾನಮನುರೆ ಜಾನಿಸಿ ಪೇಳುವ ಕೇಳುವ ಬಾಲರವರೇ ಲೋಲರವರೆ ಸುಶೀಲರವರೆ xxx ವರೆ ಜ್ಞಾನಿಗಳವರೆ ನಿರ್ಣಯ ಪುರಾಣಿಗಳೆನಿಪರ್ಯೆ. ಆ ನಿರ್ಣಯ ಪುರಾಣಿಗಳೊಳಗಿರುವವನೆ ನಿರ್ಣಯ ಪುರಾಣಿಗಳ ಮರಿಯೆನಿಪನ್ಯೆ. ಆ ನಿರ್ಣಯ ಪುರಾಣಿಗಳ ಮರಿಯೊಳಗಿರುವವನೇ ನಿರ್ಣಯ ಪುರಾಣಿಯಣುಗನೆನಿಪನ್ಯೆ । ಆ ನಿರ್ಣಯ ಪುರಾಣಿಯಣುಗನೊಳಗಿರುವವನೆ ನಿರ್ಣಯ ಪುರಾಣಿಯೆನಿಪನ್ಯೆ. ಆ ನಿರ್ಣಯ ಪುರಾಣಿಯೊಳಗಿರುವವನೆ ನೀನು. ನಿನ್ನೊಳಗಿರುವವನೆ ನಾನು. ನೀನು ನಾನೊಂದಾಗಿ ನಿಂದು ನಿರ್ಮಿಸಿದ ಪುರಾಣಮಿದೀಗ ನಿರ್ಣಯ ಪುರಾಣವೆಂಬ ಪೆಸರಿಂದೊಪ್ಪುತ್ತಿಪ್ಪುದ್ಯೆ.

ಮುಂದೆ ನೀನು ನಾನೊಂದಾಗಿ ನಿಂದು ಒಂದೇ ಪೆಸರಿನಿಂ ಕರೆಸಿಕೊಳುತ ಬರಸಿಕೊಳುತಿರುವಾಗ್ಗೆ ಶಿವಲಿಂಗ ಸಿದ್ಧಬಸವ ಪುರಾಣವೆಂಬ ಪೆಸರಿಂದೊಪ್ಪುವುದ್ಯೆ. ಅಲ್ಲಿಂದ ಮುಂದೆ ಮೆಲ್ಲನೇ ತಡವಿಲ್ಲದೆ ಈಗಿರುವ ಚೀಲಾಳ ಕುಮಾರ ಮುರಿಗಾ ಸಮಯ ಮೊದಲಾದ ಸಮಯಗಳೆಲ್ಲಂ ಮಸುಳಿಸಿ ಶಿವಲಿಂಗ ಸಿದ್ಧಬಸವ ಸಮಯವೊಂದೇ ಎನಿಸಿ ಪಸರಿಸುವುದ್ಯೆ. ಆ ಸಮಯದಲ್ಲಿ ಮೆಲ್ಲನೇ ಚನ್ನಬಸವ ಜನಿಸಿ ಜಸವಡೆದಿರ್ಪನ್ಯೆ. ಅಂದು ಚೆನ್ನಬಸವ ಪುರಾಣವೆಂದು ಭಕ್ತ ಮಾಹೇಶ ಸಂದೋಹವಾನಂದದಿಂದೋದಿಸಿ ವಿನೋದಿಸುವುದ್ಯೆ. ಆ ಕಾಲದೊಳ್ ಚೆನ್ನಬಸವ ಪುರಾಣವೆಂಬ ಪೆಸರಿಂದೊಪ್ಪುವದ್ಯೆ. ಈಗಳಿನ್ನೂ ಚೆನ್ನಬಸವ ಪುರಾಣವೆನಿಸದು, ಶಿವಲಿಂಗ ಸಿದ್ಧಬಸವ ಪುರಾಣವೆನಿಸದು. ನಿರ್ಣಯ ಪುರಾಣವೆನಿಸಿ ಪಸರಿಸುವುದ್ಯೆಯೆಂದು ಮಾಘ ಶುದ್ಧ ಸಪ್ತಮಿಯಲ್ಲಿ ಹೊಂಗಲ್ಲಿನಲ್ಲಿ ನಲಿದುಲಿದು ಬರೆಸಿದ ನಿಜ ನಿರ್ಣಯ ಪುರಾಣವರ್ಧನ ಕಾಲಜ್ಞಾನವಿದಿತಂ ವಿದಿತಂ ವಿದಿತಂ ಮಂಗಲಮಸ್ತು ಕಲ್ಯಾಣಂ ಭವತು, ಭದ್ರಂ ಭೂಯಾತ್, ಶಿವಾಯನಮಃ.

ಪ । ವಾರ್ಧಕ:

ಇಂತು ತನ್ನವನ ಕಾಲಜ್ಞಾನಮಂ ತಾನೆ
ಸಂತಸದಿ ತಿಳಿಸುತುರೆ ಬರೆವುತೋ
ರಂತೆ ತನ್ನ ಪುರಾಣದ ಪೆರ್ಚುಗೆಯ ತಾನೆ ತಿಳಿಸಿ ಸಂಶಯವನುಳಿಸಿ ।

ತಂತುಹರ್ಮ್ಯದೊಳೀಗ ಪೌಷ್ಯಬಹುಳಾಷ್ಟಮಿಯೊ
ಳಂತಕಾಂತಕ ಭಕ್ತ ಚೂರಮರಿ ವೀರನ ನಿ
ಶಾಂತದೊಳ್ ಬರೆದಿಟ್ಟ ಪತ್ರಮುರೆ ಪಾತ್ರವಹುದೆನುತುಸುರ್ವ ಗುರುವೆ ಶರಣು॥೪೮೨೮॥

ಆ ಪತ್ರದಿಂದ ನಿನ್ನೀ ಪುರಾಣಂ ಬೆಳೆವು
ದಾ ಪತ್ರದಿಂ ಮುಂದೆ ನೀನುರೆ ಬೆಳೆವುತಿರ್ಪೆ
ಯಾ ಪತ್ರದಿಂ ನಿನ್ನ ಪುತ್ರಂ ಪವಿತ್ರಕರನಹುದೆನಿಸಿಕೊಳುತಿರ್ಪನೈ
ಆ ಪದಾಪಹ ಶರಣರಣುಗನೇ ಎನುತಿರ್ದು
ಆ ಪತ್ರಮಂ ಬರೆದ ಮಗನೆ ನೀನೀ ಇಳೆಯೊ
ಳೀ ಪುರಾಣದಿ ಬರೆವುದೆಂದು ಮಹಾರಾಷ್ಟ್ರದಿಂ ಬರೆಸುತಿಹ ಗುರುವೆ ಶರಣು ॥೪೮೨೯॥

ಶ್ರೀಗುರುಭ್ಯೋತನುಃ । ವಾರ್ಧಕ:

ಇಂತು ಮಹಾರಾಷ್ಟ್ರದಿಂ ಬರೆದು ಸರಕಾರಕ್ಕೆ
ಸಂತಸದಿ ತೋರಬೇಕೆಂದು ನೀನುಸುರಿರಲ
ದಂ ತವಕದಿಂದೀಗ ತೋರದೆ ಇರುವನಾ ಶಿವರುದ್ರನೆಂಬುತೊಡನೆ ।
ಅಂತಕಾಂತಕ ಶರಣರಣುಗನೇ ನೀನೀಗ
ಸಂತಸದಿ ಸಂಪಗಾವಿಗೆ ಹೋಗಿ ಅಲ್ಲಿಯಿರು
ವಂಥ ವಳಸಂಗದಾ ಚೆನ್ನಮಲ್ಲಪ್ಪನಂ ನೋಡೆಂಬ ಗುರುವೆ ಶರಣು ॥೪೮೩೦॥

ಅಲ್ಲಿರುವ ಚೆನ್ನಮಲ್ಲಪ್ಪನಂ ನೋಡಿ ಬಳಿ
ಕಲ್ಲಿರುವ ನಿನ್ನ ಭಕ್ತರನುರದೆ ಪರಿಕಿಸುತ
ಅಲ್ಲಿಂದ ತಿಗಡಿಗುರೆ ಹೋಗಿ ಅಲ್ಲಿಹ ನಿನ್ನ ಮಡಕೊಡೆಯರಂ ಪರಿಕಿಸಿ ।
ಮೆಲ್ಲನೇ ಹಿಂದಕುರೆ ಬಂದು ಸರಕಾರಕ್ಕೆ
ಸಲ್ಲೀಲೆಯಿಂದೊಂದು ಪತ್ರವ ಬರೆದು ತಿಳಿಸು
ಮಲ್ಲಿಕಾರ್ಜುನ ಶರಣರಣುಗನೇ ಎನುತ ಥಳಥಳಿಸುತಿಹ ಗುರುವೆ ಶರಣು ॥೪೮೩೧॥

ನೀನೆ ತಿಳಿಸೈ ಗುರುವೆ ಎಂದು ವಂದಿಸುತಿರ್ಪ
ಸೂನುವಂ ನೋಡಿ ನಲಿದಾಡಿಯುರೆ ಮುಂಡಾಡಿ
ನಾನೆ ತಿಳಿಸುವೆನೀಗ ನಡೆಯೆಂದುರದೆ ನಡೆಸಿ ನಡೆದು ಹೊಂಗಲ್ಲಿನಿಂದ ।

ಸಾನುರಾಗದಿ ಸಂಪಗಾವಿಯನುರದೆ ಪೊಕ್ಕು
ಮಾಣದೇ ತನ್ನವರನುರೆ ಪರಿಕಿಸುತ್ತಿರ್ದು
ಜಾಣತನದಿಂದುಂಡು ಚೆನ್ನಮಲ್ಲನ ಕಂಡು ನಗುತುಲಿವ ಗುರುವೆ ಶರಣು ॥೪೮೩೨॥

ನಿನ್ನ ದೆಸೆಯಿಂದ ಬಂದಿರ್ದನಿಲ್ಲಿಹ ಶೆಟ್ಟಿ
ನಿನ್ನ ದೆಸೆಯಿಂದ ಬಂದಿರ್ದನಿಲ್ಲಿಯ ರುದ್ರ
ನೆನ್ನ ದೆಸೆಯಿಂದ ಬಂದವರಲ್ಲವೀಗುರದೆ ನೋಡು ನೋಡೆಂಬುತೊಡನೆ ।
ಇನ್ನು ರದೆ ಕರೆಸಿ ಕೇಳುವುದೇಂ ಪ್ರಯೋಜನಂ
ಇನ್ನುರದೆ ಕರೆಸಿ ಹೇಳುವುದೇಂ ಪ್ರಯೋಜನಂ
ನಾಂ ನಾಡೆ ಹೋಗುತಿಹೆನೆಂದುರದೆ ನುಡಿಸುತೊಳಗಿರುವ ಗುರುವರನೆ ಶರಣು॥೪೮೩೨॥

ಇಂದು ನಾಂ ಬಾಗವಾಡಿಗೆ ಪೋಗಿ ಅಲ್ಲಿಂದ
ಬಂದಪೆನು ನಾಳಿಗಾಂ ಬರುವನಕ ನೀವಿಲ್ಲಿ
ಎಂದಿನಂದದಿ ಲಿಂಗಪೂಜಾವಿಲಾಸದೊಳಿರುವುದೆಂದುಸಿರುತೊಡನೆ ।
ವಂದಿಸುತ ಪೋಗಲವನುರೆ ಬರುವನಿತರೊಳಗೆ
ಇಂದು ನಾಂ ತಿಗಡಿಯೊಳಗಣ ಮಠವನುರೆ ನೋಡಿ
ಬಂದೆನೆನುತ್ತ ತಾನೊರ್ವನೆಲೆಗಡಿಗುರೆ ನಡೆಯುತಿಹ ಗುರುವೆ ಶರಣು ॥೪೮೩೩॥

ತಿಗಡಿಗುರೆ ನಡೆದು ತಿಗಡಿಯೊಳುರದೆ ಪೋಗು xx
xxxx ವ ತನ್ನ ಮಠದವರೊಳಿಹ
ವಿಗಡತನಮಂ ತಿಳಿದು ಮುಳಿದು ಹಿಂದಕೆಬಂದು ಸಂಪಗಾವಿಯೊಳು ಸಂದು ।
ಒಗುಮಿಗೆಯ ತವಕದಿಂದೊಂದು ರಾತ್ರಿಯ ಕಳೆದು
ನಗುತ ಮರುದಿನದಿ ಕಾದರವಳ್ಳಿಯೊಳಗಿರುವ
ನಗಜಾವರನ ಕಂಡು ಅಲ್ಲಿರುವ ಗೌಡನಂ ನೋಡಿರುವ ಗುರುವೆ ಶರಣು ॥೪೮೩೪॥

ಗೌಡನಂ ನೋಡಿ ಗೌಡನ ಮನೆಯೊಳುಣುತಿರ್ದು
ಗೌಡನ ಮನವನೀಗ ಪರಿಕಿಸುವೆನೆನುತೊಡನೆ
ಗೌಡತಿಯ ಮುಖದಿಂದ ಗೌಡನಂ ಕರೆಸಲಾ ಗೌಡನುರೆ ಮನದೊಳೀತಂ ।
ಬೇಡುವವನೆಂದರಿದು ಬರುವೆನೆಂದುರೆ ಪೋಗೆ

ಪಾಡಾಯಿತೆನುತ ತನ್ನೊಳ್ ತಾನೆ ನಲಿವುತಾ
ಗೌಡನ ಮನೆಯನುಳಿದು ನದಿಯ ತೀರಕೆ ಬಂದು ನಿಂದಿರುವ ಗುರುವೆ ಶರಣು॥೪೮೩೫॥

ನದಿಯ ತೀರದೊಳಿರುವ ಲಿಂಗಾಲಯವ ನೋಡಿ
ಪದಪಿನಿಂ ತನ್ನಯ ವಿಳಾಸಮಂ ತಾನೆ ಬ
ರೆದು ಬಳಿಕ ಅಲ್ಲಿಂದ ಹುಣಚೀಕಟ್ಟೆಗೆ ಬಂದು ಅಲ್ಲಿ ದೇವಾಲಯದೊಳೆ ।
ಪದಪಿನಿಂ ಬಾಲರಂ ಬರೆಸುವ ಚರನ ನೋಡಿ
ಮುದದಿ ಮಾತಾಡಿ ತನ್ನ ವಿಳಾಸಮಂ ಬರೆದು
ಪದುಳದಿಂ ಬಂದು ಕುರಗುಂದದೊಳ್ನಿಂದು ನಿಟ್ಟಿಸುತಿರುವ ಗುರುವೆ ಶರಣು ॥೪೮೩೬॥

ಪತ್ರ ೫೩೫
ಪದ್ಯ ೧೧೯
ಆ ಸಂಗಮನ ಕಳಶಕುರಿಹತ್ತಿ ನಂದಿರುವು
ದೀ ಸಮಸ್ತರು ಬಲ್ಲರುರೆ ಕೇಳು ಕೇಳೆನಲ್
ಶ್ರೀ ಸದ್ಗುರುವೆ ಆವ ಸಮಯದೊಳಾರು ಕಂಡರು ಏನು ಕಾರಣವೆನೆ ।
ಬ್ಯಾಸರಿಲ್ಲದೆ ಕೇಳುತಿಹ ಮಗನೆ ಕೇಳು ನಿನ
ಗಾಶುವಿಂದರುಹಿಸುವೆನೀಗೆಂದು ಬಳಿಕ ತಾ
ನಾ ಸಂಗಮನ ಕಲಶಕುರಿಹತ್ತಿ ನಂದಿದುದನರುಹಿಸುವ ಗುರುವೆ ಶರಣು ॥೧೧೬೧॥

ಅನ್ಯಾಯ[ಕಾಗಿಂತು][ದಿಂದಿಂತು] ಉರಿದು ನಂದುವುದೆಂದು
ತನ್ನವರಿಗುರೆ ತಾನೆ ಸೂಚಿಸಲ್ಕೋಸುಗಂ
ಎನ್ನ ಮಗನೇ ನಿನ್ನ ವಳಸಂಗದವರಂದು ಬಂದಿರಲವರು ಕಾಂಬುವೋಲ್ ।
ತನ್ನಿಶೆಯೊಳಲ್ಪ ದೃಷ್ಟಿಯೊಳುರದೆ ಉರಿಸುತ್ತ,
ತನ್ನ ಪೂಜಾರ್ಯರಂ ಬರಿಸಿ ಅವರುರೆ ಕೇಳೆ
ಮುನ್ನೊಮ್ಮೆ ಉರಿದು ನಂದಿರ್ದುದೆಂದುರೆ ನುಡಿಸಿರುವನೆಂಬ ಗುರುವೆ ಶರಣು॥೧೧೬೨॥

ಏನು ಕಾರಣಕುರಿವುದೆಂದವರು ಕೇಳುತಿರೆ
ಮಾನವರಿಗುರೆ ತಿಳಿಯದಿದು ಎಂದು ಹೇಳುತಿರ
ಲಾ ನೀಲಲೋಚನಾ ಪತಿಯಳಿಯನೈತರುವ ಸೂಚನೆಯಿದೇನೋ ಎನುತ ।

ಆ ನಿಶೆಯೊಳುರೆ ಮಲಗಿ ಮುಂಜಾವದೋಳೆದ್ದು
ಮಾಣದೆ ಗುಡಿಯನಡರಿ ನೋಡೆ ಕಲಶಂ ಸುಡದೆ ।
ತಾಣದೊಳ್ ಕಪ್ಪಾಗಿರಲು ನೋಡಿ ನಲಿದವರೆಂಬ ಗುರುವೆ ಶರಣು ॥೧೧೬೨॥

ಇದು ಮೊದಲೇ ಎನ್ನ ಬಾಗಿಲಕೋಟೆಯಲ್ಲಿರುವ
ಅಧಮತನದನ್ಯಾಯದವರನುರೆ ಅಳಿಸಿರ್ದು
ದದು ಮೊದಲೊ ತಿಳಿಸು ತಿಳಿಸೈಯೆಂದು ವಂದಿಸುವ ಕಂದನಂ ನೋಡಿ ನಲಿದು
ಪದುಳದಿಂ ನೀನೆ ತಿಳಿವ ಮಗನಹುದಹುದು
ಅಧಮರಿಗೆ ತಿಳಿಸಲೋಸುಗ ಕೇಳುತಿರ್ಪೆಯ್ಯೆ
ಇದುವೆ ಸೂಚನೆಯೆನಿಸಿತನ್ಯಾಯದವರಳುವುದಕೆ ಎಂಬ ಗುರುವೆ ಶರಣು ॥೧೧೬೩॥

ಮೊದಲು ಸೂಚನೆಯೆನಿಸಿ ಬಳಿಕ ಚಿತ್ತರಿಪಂತೆ
ಮೊದಲು ತನ್ನಯ ಕಲಶಮುಮನುರಿಸಿ ನಂದಿಸುತ
ಅಧಮತನದನ್ಯಾಯದವರನುರೆ ಬೆಳೆಸಿ ಬಳಿಕಳಿಸಿ ನಗಿಸಿಹನೆನುತ ।
ವಿದಿತವಹ ನಿರ್ಣಯ ಪುರಾಣಮಂ ಪಸರಿಸುವ
ಪದುಳದಿಂದಧಮತನದನ್ಯಾಯದವರನುರೆ
ಹೆಸರಿಸದೆ, ನಿಜ ವಸ್ತುಗಳ ಕೊಳಿಸಿ ಕುಳಿಸಿ ಅಳಿಸಿಹನೆಂಬ ಗುರುವೆ ಶರಣು ॥೧೧೬೪॥

ಅವರಾರು ತಿಳಿಸು ತಿಳಿಸೆಂದು ವಂದಿಸುತಿರ್ಪ
ಕುವರನಂ ನೋಡಿ ನಲಿದಾಡಿ ನೀನುರೆ ಕೇಳು
ಅವರೆರಡು ಕುದುರೆಯವರವರೆ ಪೆಂಡಾರರೆನಿಸುವರೆಂದು ತಿಳಿಸಲೊಡನೆ ।
ಅವರೆಂತು ಬಂದಿರುವರವರೆಂತು ಕದ್ದು ಬಳಿ
ಕವರೆಂತು ಪೋಗಿರುವರವರು ಮಡಿದಿಹರೆಲ್ಲಿ
ತವಕದಿಂ ತಿಳಿಸೆಂದು ವಂದಿಸಲು ಕೇಳು ಕೇಳೆಂಬ ಗುರುವರನೆ ಶರಣು ॥೧೧೬೫॥

ಅವರನ್ಯರಂ ಸುಲಿದು ಧನವನಾರ್ಜಿಸಿಕೊಂಡು
ತವಕದಿಂ ತಮ್ಮ ಪಟ್ಟಣಕುರದೆ ಪೋಗದೆ
ಅವಿವೇಕತನದಿ ಸಂಗಮವನುರೆ ನೋಡಬೇಕೆಂದು ಬರುತಿರ್ದು ಮತ್ತಂ ।
ಅವನಿಯೋಳಿಲ್ಲಿ ಸಂಗಮನಾಥನಿರ್ಪನಂ

ತವನಾಭರಣಗಳಂ ಕದ್ದೊಯ್ಯಬೇಕೆಂಬ
ತವಕದಿಂ ಸಂಗಮೇಶನ ಗುಡಿಗೆ ಬಂದರುರೆ ಕೇಳು ಕೇಳೆಂಬ ಗುರುವೆ ಶರಣು॥೧೧೬೬॥

ಅವರು ಬರುವನಿತರೊಳ್ ಪೂಜಾರ್ಯರೆಂದಿನೋಲ್
ತವೆ ಕವಾಟವನಿಕ್ಕಿ ಪೂಜಿಸುತ್ತಿರೆ ನೋಡಿ
ತವೆ ಕದವ ತೆಗೆಯೆಂದು ನುಡಿಯಲುರೆ ತೆಗೆಯದಿರೆ ಕದವನುರೆ ಮುರಿವೆವೆಂಬ ।
ವಿವೇಕಿಗಳ ನುಡಿಯ ಕೇಳಿ ಪೂಜಾರ್ಯರು ಕ
ದವ ತೆಗೆಯಲೊಳಪೊಕ್ಕು ಸಂಗಮೇಶನ ನೋಡು
ತವನಾಭರಣಗಳಂ ಸೆಳೆವುತಿರಲವರು ಓಡಿದರೆಂಬ ಗುರುವೆ ಶರಣು ॥೧೧೬೭॥

ಪೂಜಕರುರದೆ ಓಡಿ ಪೋಗಿ ಸಂಗಮದೊಳಿಹ
ರಾಜನಾಜ್ಞಾಧಾರಕರಿಗುರದೆ ತಿಳಿಸಲಾ
ರಾಜನಾಜ್ಞಾಧಾರಕರು ಬರುವನಿತರೊಳಗೆ ಪೆಂಡಾರರುರೆ ತವಕದಿಂ ।
ಮಾಜಹರ ಮೂರ್ತಿಯಂ ಎತ್ತಿ ಚೆಲ್ಲುತ್ತ ವಿ
ಭ್ರಾಜಿಸುತ್ತಿಹ ತದಾಭರಣಗಳ ಸೆಳೆದಿನ್ನು
ಗೋಜು ಬರುತಿಹುದೆಂದು ವಾಜಿಯನಡರಿ ನಡೆದರೆಂಬ ಗುರುವರನೆ ಶರಣು ॥೧೧೬೮॥

ಅನಿತದೊಳ್ ಸಂಗಮದೊಳಿರುವವರು ಬೆಂಬತ್ತ
ಲನಘನೆನಿಸುವ ಸಂಗಮನಾಥನವರ ಲೋ
ಚನಕೆ ಮರೆ ಎನಿಸೆ ನದಿಯಂ ದಾಂಟುವಲ್ಲಿ ಮಡುವಿಗೆ ಬಿದ್ದು ಮಡಿದರುರದೆ ।
ತನಯನೇ ಕೇಳು ಕುದುರೆಗಳೀಸಿ ಕಡೆಗೆ ಬರ
ಲನುನಯದಿ ತಕ್ಕೊಂಡು ಪೋಗಿ ತಮ್ಮಯ ಧಣಿಗೆ
ಇನಿತನುರೆ ತಿಳಿಸಿ ಮುಂದಿರಿಸಿ ನಮಿಸಿದರುರೆ ಕೇಳೆಂಬ ಗುರುವರನೆ ಶರಣು ॥೧೧೬೯॥

ಅವನುರದೆ ಕೇಳಿ ವಿಸ್ಮಿತನಾಗಿ ಬೇಗದಿಂ
ದವೆ ಬಂದು ನಿಂದು ಪರಿದಿರ್ದ ರಕ್ತವ ನೋಡಿ
ಬುವಿಯೊಳಾಶ್ಚರ್ಯವೆನಿಸಿತು ಶಿಲಾಮೂರ್ತಿಯಿಂ ಕೆನ್ನೀರು ಪರಿವ ಕಥದಿಂ ।
ಶಿವನ ಕೌತುಕವಿದೆಂದರಿದು ತನ್ನೊಳ್ ತಾನೆ
ತವಕದಿಂ ಗಾಯಮಂ ಕಟ್ಟಿಸಿದನಂದು ತ
ನ್ನವರಿಂದ ಅವರಿರುವರೀಗ ನೀನುರೆ ಕೇಳು ಕೇಳೆಂಬ ಗುರುವೆ ಶರಣು ॥೧೧೭೦॥

ಗಾಯಮಂ ಕಟ್ಟಿಸಿದ ರಾಜನಿಹನಹುದಹುದು
ಗಾಯಮಂ ಕಟ್ಟಿರ್ದ ರಾಜರಿಹರಹುದಹುದು
ಗಾಯಮಂ ಕಟ್ಟಿಸಿಕೊಳುತ್ತ ಮುನ್ನಿನೊಲೊಪ್ಪುತಿಹ ಮೂರ್ತಿ ಇರುವುದವುದೈ ।
ಕಾಯಜಾರುತಿ ಸಂಗಮನಾಥನೆಲ್ಲಿಹಂ
ಮಾಯಾರಹಿತ ಶರಣಗುರುವೆ ನೀನುರೆ ತಿಳಿಸು
ನ್ಯಾಯದವನಿವನೆಂದು ಮುಳಿಯದಿರು, ಎನಲು ನಗುತಿರುವ ಗುರುವರನೆ ಶರಣು ॥೧೧೭೧॥

ಮತ್ತತೆಯೊಳೆಯ್ತಂದು ಕದವನುರೆ ತೆರೆಯಯ್ಯೆ
ನುತ್ತ ಗರ್ಜಿಸುತಿರ್ಪ ಸಮಯದೋಳೆಲ್ಲಿರ್ದ
ನುತ್ತಮೋತ್ತಮ ಗುರುವೆ ನೀನೀಗ ತಿಳಿಸೆಂದು ವಂದಿಸುತ್ತಿರ್ದು ಮತ್ತಂ ।
ಪೊತ್ತಿರ್ದ ಶಾಲು ಸೆಳೆವಾಗಲೆಲ್ಲಿರ್ದನೈ
ಎತ್ತಿ ಚೆಲ್ಲುತ್ತಿರ್ಪ ಸಮಯದೊಳೆಲ್ಲಿರ್ದ
ನಿತ್ತಮುರೆ ಮಾತಾಡೆನುತ್ತಿರಲು ನಗುತನಲಿದುಲಿದ ಗುರುವೆ ಶರಣು ॥೧೧೭೨॥

ನಿನ್ನ ಸಿಟ್ಟಿಲ್ಲಿಗುರೆ ತೀರಿತೇನೆಲೆ ಮಗನೆ
ಇನ್ನು ಸಿಟ್ಟಿರಲೆನಗೆ ಪೆಟ್ಟನುರೆ ಹಾಕೆಂಬ
ತನ್ನ ಗುರುವಿನ ಪದಕೆ ಪೊಡಮಟ್ಟು ತಪ್ಪುತಪ್ಪೆನ್ನದೆನ್ನದು ಎನುತ್ತ ।
ನಿನ್ನಿದಿರೊಳುರೆ ಕುಳಿತು ಮಾತಾಡೆನುತ್ತೆನದ
ನನ್ಯಾಯವೆನಿಸಿತೀ ಅನ್ಯಾಯಮಂ ಸರಿಸಿ
ಎನ್ನನುರೆ ಸಲಹೆಂಬ ಕಂದನಂ ನೋಡಿ ನಲಿದುಲಿದ ಗುರುವರನೆ ಶರಣು ॥೧೧೭೩॥

ಅನ್ಯರನ್ಯಾಯಮಂ ಸರಿಸುವಸುತಂ ನೀನೆ
ನಿನ್ನಯನ್ಯಾಯಮಂ ಸರಿಸುವರಾರಿಲ್ಲಿ
ನಿನ್ನಯನ್ಯಾಯಮಂ ನೀನೆ ಸರಿಸಿದಿ ಈಗ ತಿಳಿಯೆಂದು ತಿಳಿಸುತೊಡನೆ ।
ಅನ್ಯಾಯನ್ಯಾಯವೆನಿಸುವುದಿದೇ ನೋಡು ನೋ
ಡನ್ಯಾಯ ನ್ಯಾಯವಿರಬೇಕು ಒಂದವನರದೊ
ಳನ್ಯಾಯ ನ್ಯಾಯವಿಲ್ಲದೆ ಇರಲ್ಬಾರದೆಂದರುಹಿಸಿದ ಗುರುವೆ ಶರಣು ॥೧೧೭೪॥

ಅನ್ಯಾಯನ್ಯಾಯ ನಿರ್ನ್ಯಾಯನ್ಯಾಯಗಳುಳ್ಳ
ನನ್ನಿಯಹ ನಿರ್ಣಯದೊಳಿರುವನವನೆಲೆ ಮಗನೆ
ನಿನ್ನ ಈ ನಿರ್ಣಯ ಪುರಾಣಮಂ ಮಾಣದೆ ಪಿಡಿದಿರುವನೀಗ ನೋಡೈ ।
ಮುನ್ನಿನೊಳ್ಳಾ ಸಂಗಮನ ಮೂರ್ತಿಯೊಳಿಹಂ
ಎನ್ನ ಮಗನೇ ಅಂದು ಅನ್ಯಾಯವದು ಪೆಚ್ಚ
ಲನ್ಯಾಯದೊಳಗಡಗಿ ಅವರನುರೆ ಬೆಳೆಸಿ ಅಳಿಸಿದನೆಂಬ ಗುರುವೆ ಶರಣು ॥೧೧೭೫॥

ಅನ್ಯಾಯದೊಳಡಗುವಂತೆ ನ್ಯಾಯದೊಳಡಗ
ನೆನ್ನ ಮಗನೇ ಕೇಳು ನಿರ್ನ್ಯಾಯದೊಳಗಡಗ
ನನ್ಯಾಯನ್ಯಾಯ ನಿರ್ನ್ಯಾಯನ್ಯಾಯಗಳುಳ್ಳ ನಿರ್ಣಯದೊಳಡಗನುರದೆ ।
ಅನ್ಯಾಯನೊಂದೆ ಇರಲಂದು ಅಡಗಿರ್ದು
ತನ್ನ ನಿರ್ನ್ಯಾಯ ನ್ಯಾಯದವರನುರದೆ ಬರಿಸಿ
ಮುನ್ನಿನೋಲಡಗದೆ ಪಸರಿಸುತ್ತವರನಳಿಸಿದನೆಂಬ ಗುರುವೆ ಶರಣು ॥೧೧೭೬॥

ಆವ ಮನೆಯಾದರೇನಾವ ಮಠವಾದರೇ
ನಾವ ಗುಡಿಯಾದರೇನಾವ ತಳವಾದರೇ
ನಾವ ಪುರವಾದರೇನು ಪುಣ್ಯಕ್ಷೇತ್ರವಾದರೇನ್ನಿವಗಳೊಳಗೆ
ಸಾವಧಾನಿಗಳೆನಿಪ ಜ್ಞಾನಿಗಳೋಳಿರುವನೈ
ಸಾವಧಾನಿಗಳೆನಿಸದ ಗಾವಿಲರೊಳಡಗಿ
ಗಾವಿಲರನುರೆ ಬೆಳೆಸಿ ಅಳಿಸುವನಂದು ನೋಡೆಂಬ ಗುರುವೆ ಶರಣು ॥೧೧೭೭॥

ಸಾವಧಾನಿಗಳೆನಿಸಿ ಗಾವಿಲರೆನಿಸುತಿರ್ಪ
ಗಾವಿಲತನವನುಳಿಸಿ ಸಾವಧಾನಿಗಳೆನಿಪ
ದೈವದವರೆನಿಸಿರುವನುರದೆ ಬಾಗಲಕೋಟೆಯಲ್ಲಿರುವ ಶ್ರೀ ಸಂಗಮೇಶಂ ।
ಶ್ರೀವರ ಸರೋಜಭವ ದೇವರಾಜಾದಿ ದೇ ।
ವಾವಳಿವಿನುತ ಲಿಂಗಪೂಜಾ ಪರಾಯಣರ
ಶಾವಕನೆನಿಪ ಎನ್ನ ಶಾಪಕನೆ ನೀನೆ ಕೇಳೆಂಬ ಗುರುವೆ ಶರಣು ॥೧೧೭೮॥

ಅನ್ಯಾಯದಿಂದ ಸರಕಾರದೊಳ್ ಮಥನಿಸುತ
ಬನ್ನಬಟ್ಟಿರ್ದುದಂ ತಿಳಿಸಿದಿರ ನೀವೀಗ
ಮೊನ್ನೆ ಇಷ್ಟು ವತ್ಸರದಿ ವಿಮುಖರಾಗಿಹರೆಂದು ನೀನೆ ತಿಳಿಸಿದಿರಿ ಅಂದು ।
ಚೆನ್ನಾಗಿ ಅದನುರದೆ ಪಸರಿಸೆಂದೆರಗುತಿಹ
ತನ್ನ ಮಗನಂ ನೋಡಿ ನಲಿದಾಡಿ ಮುಂಡಾಡಿ
ನಿನ್ನವರನುರೆ ನಾಚಿಸುವ ಎನ್ನ ಮಗನೆ ನೀಂ ಕೇಳೆಂಬ ಗುರುವೆ ಶರಣು ॥೧೧೭೯॥

ಆರಾರೆಡೆಯ ಒಡೆಯನ ಬಡಿದ ಹಾರುವರ
ನೋರಂತೆ ಮಣಿಸಬೇಕೆಂದು ಊರಂ ಬಿಟ್ಟು
ಧಾರವಾಡಕೆ ಪೋಪೆವೆಂದು ನರಗುಂದದೊಳ್ ನಿಂದು ಮಂದಮತಿಯಿಂ ।
ಹಾರುವರನುರೆ ಮಣಿಸದೇ ಪೋರತನದಿ ಸರ
ಕಾರದವರನುಸರಣೆಯಿಂದ ಪೊಂತಿರುಗಿ ಬಂ
ದೂರನುರೆ ಪೊಕ್ಕಿರುವ ಮುಕ್ಕರಿವರುರೆ ಕೇಳು ಕೇಳೆಂಬ ಗುರುವೆ ಶರಣು ॥೧೧೮೦॥

ವಿಮುಖರಹುದಲ್ಲವೋ ನೀನೆ ನೋಡೆನಲೊಡನೆ
ವಿಮುಖರಹುವಹುದು ಆಕಾರೆಡೆಯನುಳ್ಳ
ಪ್ರಮುಖನುರೆ ವಿಮುಖರೆನಿಪನ್ಯಾಕೆ ತಿಳಿಸು ತಿಳಿಸೆಂದು ವಂದಿಸಿ ನಿಂದಿಹ ।
ಸುಕುಮಾರನಂ ನೋಡಿ ನಲಿದಾಡಿ ಮುಂಡಾಡಿ
ಪ್ರಕಟಿಸುವುದಾರಾರೆಡೆಯ ಒಡೆಯನನುರದೇ
ಅಕುಟಿಲಾತ್ಮಕ ಶರಣರಣುಗನೇ ನೀನೀಗಳೆಂಬ ಗುರುವರನೆ ಶರಣು ॥೧೧೮೧॥

ಆನೆಂತು ಪ್ರಕಟಿಸುವೆನೆಂದು ವಂದಿಸಲೊಡನೆ
ಸೂನುವೇ ಕೇಳು ನಿನ್ನಯ ನಾಲಗೆಯ ತುದಿಯೊ
ಳಾನಿರುವೆನ್ಯೆ ನೀನೆ ನುಡಿಯೆನಲು ನೀನೆ ನುಡಿಸಿದರೆ ನಾಂ ನುಡಿವೆನೆನಲು ।
ಈ ನಿರ್ಣಯ ಪುರಾಣಿಯಣುಗನಾರಿಗೆ ಸಿಗದ
ಜಾಣನಹುದೆಂದು ತನ್ನೊಳ್ ತಾನೆ ನಲಿದಿರ್ದು
ಮಾಣದೆ ಆಕಡೆಯ ಒಡೆಯನುರದೆ ಪಸರಿಸುವ ಗುರುವೆ ಶರಣು ॥೧೧೮೨॥

ಆರಾರೆಡೆಯ ಒಡೆಯನೆನಿಸಿಕೊಳುತಿರ್ದು ತಾ
ನಾರಾರೆಡೆಯನುಂಬ ಮೂರ್ತಿಗಳ ಬಳಸದೆ
ಆರಾರಿಗುರೆ ತಿಳಿಸದೆ ಹೊರಟು ಹೊಯ್ಸಿಕೊಂಡಿರ್ದನಹುದೆನುತ ನಗುತ ।
ಹಾರುವರ ಕೈಯಿಂದ ಹೊಯ್ಸಿಕೊಂಡಿರ್ದು ಬಳಿ
ಕೋರಂತೆ ಪಿಂತಿರುಗಿ ಬಂದು ಮಠದಲ್ಲಿ ಕುಳಿ
ತಾರ್‍ಯನುರೆ ವಿಮುಖನಹುದಹುದೆಂದು ನಲಿದುಲಿವುತಿರ್ದ ಗುರುವೆ ಶರಣು ॥೧೧೮೩॥

ಸೂಗೋಲಗಿರಿಗೆ ನಾನುರೆ ಹೋಗುತಿಹೆನೆಂದು
ಈಗ ನೀಂ ನಿನ್ನವರಿಗುರೆ ತಿಳಿಸಿ ಹೊರಡುವಂ
ತಾವಗಂ ತನ್ನವರಿಗುರೆ ತಿಳಿಸದೇ ಹೊರಟ ಕಾರಣದಿ ಹೊಯ್ಸಿಕೊಂಡು ।
ನೀಗಿದಂ ತನ್ನಯ ತಳಿಹಿ ತೋರಣಗಳನುರೆ
ಈಗಿನ್ನು ಸರಕಾರದಲ್ಲಿಯುರೆ ಬಿದ್ದಿಹವು
ಪೋಗಿ ನೀನುರದೆ ಕೈಕೊಂಡು ಪಿಡಿಸೈಯೆಂದು ನುಡಿಯುತಿಹ ಗುರುವೆ ಶರಣು॥೧೧೮೪॥

ಆರಾರೆಡೆಯ ಒಡೆಯನ ತಳಿಗೆ ತೋರಣವ
ನಾರಾರೆಡೆಯ ಒಡೆಯನ ಮಗಂ ಪಿಡಿಸುವಂ
ಪೋರ ನಾನೆಂತು ಪಿಡಿಸುವೆನುರದೆ ಪಿಡಿವಾತನೆನಿಸೆಂದು ವಂದಿಸುತಿಹ ।
ಮಾರಹರನ ಶರಣನಣುಗನ ನೋಡಿ ನಲಿದು ನೀ
ನೋರಂತೆ ಪಿಡಿವಾತನಹುದು ಪಿಡಿಸವನಹುದು
ಆರಾರೆಡೆಯ ಒಡೆಯನ ಮಗನಹುದು ನೀನೆನುತ್ತಿರುವ ಗುರುವೆ ಶರಣು ॥೧೧೮೫॥

ಆರಾರೆಡೆಯ ಒಡೆಯನ ಮಗಂ ನೀನೆಂಬು
ತಾರೈದು ನುಡಿಯುತಿಹ ಗುರುವೆ ನೀನುರೆ ತಿಳಿಸು
ಹಾರುವರ ಕೈಯಿಂದ ಹೊಡಿಸಿಕೊಂಡವನೆನಗೆ ಏನೆನಿಪನೆನುತ ನುತಿಸೆ ।
ಹಾರುವರ ಕೈಯಿಂದ ಹೊಡಿಸಿಕೊಂಡವನಾ
ರಾರೆಡೆಯ ಒಡೆಯನುರೆ ಸೋಗಿನವನೆನಿಸುತಿಹ
ನೋರಂತೆ ನೀನೀಗ ತಿಳಿಯೆಂದು ತಿಳಿಸುತೊಳಗರುಹಿಸುವ ಗುರುವೆ ಶರಣು ॥೧೧೮೬॥

ಸೋಗಿನವನಾದರೂ ಅಪಮಾನಮಂ ಮಾಡ
ಲಾಗದೆಂದುರೆ ತಿಳಿದು ನಿನ್ನ ಅಬ್ಬುದ್ದುಬ್ಬರದ
ಸಾಗುಣಿಗಳುರೆ ಯತ್ನದಿಂ ತಮ್ಮ ಮನೆಯಿಂದ ಮಠತನಕ ಕಳಿಸಿರ್ಪರ್ರೈ ।
ಆಗುರದೆ ತಿಳಿದಿರ್ದು ಸೋಗಿನವನಾನೆನ್ನ
ಹೇ ಗರ್ವಿಸುತ ಸರ್ವದೊಳ್ ಮೆರೆದಿರುವೆನೆಂದು
ನೀಗಿದಂ ತಳಿಗಿ ತೋರಣವನುರದೆ ನೋಡು ನೋಡೆಂಬ ಗುರುವೆ ಶರಣು ॥೧೧೮೭॥

ಸೋಗಿನವನುರೆ ನೀಗೆ ನೀಂ ನೀಗಬಾರದೈ
ಪೋಗಿ ನಿನ್ನಯ ತಂದೆಯ ತಳಿಗಿ ತೋರಣವ
ನೀಗಳೀ ಲೋಗರುರೆ ನಲಿವಂತೆ ನೀನೆಪಿಡಿಸೆಂದು ತಿಳಿಸುತ್ತ ಮತ್ತಂ ।
ಆಗಮಿಸಿ ತಾವೆ ಕರೆದೊಯ್ದು ಪಿಡಿಸುತ್ತಿರುವ
ರಾಗುರದೆ ಪಿಡಿಸಬೇಕೆಂದರುಹಿಸುತ್ತಿರ್ದು
ಸೋಗಿನವನಂ ಭಂಗಿಸಿದ ಮಂಗನಂ ಭಂಗಿಸೀಗೆಂಬ ಗುರುವೆ ಶರಣು ॥೧೧೮೮॥

ಅವನಾರು ತಿಳಿಸುತಿಳಿಸೆಂದು ವಂದಿಸಲೊಡನೆ
ಅವನೆ ಮಿರ್ಜಿಯ ಜೀವಣ್ಣನಿಗೆ ತಮ್ಮನೆನಿ
ಸುವನೆನಲವನ ಹೆಸರೇನೆನಲು ರಾಮಣ್ಣನೆನಿಪನೆಂದರುಹುತೊಡನೆ ।
ಅವನಣ್ಣನೆನಿಪ ಜೀವಣ್ಣನುರೆ ಧನಿ ಎನಿಸಿ
ಶಿವಭಕ್ತರಿಗೆ ತಿಳಿಸಿ ತಕ್ಕವರನುರೆ ಇರಿಸಿ
ತವಕದಿಂ ಪೋಗಿ ಶೇಷಾಚುದೆ ದೇಹಪಟ್ಟಿಹನೆಂಬ ಗುರುವೆ ಶರಣು ॥೧೧೮೯॥

ಇವನೀಗ ನಿನ್ನ ತಂದೆಯ ಸೋಗಿನವನನುರು
ತವಕದಿಂ ತರುಬಿಸುತ ಭಂಗಿಸಿದದೋಷದಿಂ
ದವ ದಿವಾಳಿಯ ತೆಗೆದು ನಿರ್ಧನಿಕನಾಗಿರುವನೀಗ ನೀಂ ನೋಡು ನೋಡೈ ।
ಇವನಿನ್ನು ತೊಳಲಿ ಬಳಲುತ ಬಂದು ನಿಂದು ನೀ
ನ್ನವರನುರೆ ಬೇಡಿಕೊಂಡುಂಡು ಬಾಗುತ್ತಿರುವ
ನವಿರತಂ ನಿನ್ನವರ ಭಂಗಿಸಿದ ಮಂಗತನದಿಂದೆಂಬ ಗುರುವೆ ಶರಣು ॥೧೧೯೦॥

ನಿನ್ನ ತಂದೆಯ ಸೋವುವನ ಭಂಗಿಸಿದವರ
ಚೆನ್ನಾಗಿ ತೊಳಲಿ ಬಳಲಿಸುತ್ತಿಹ ಮಗನೆ
ನಿನ್ನ ತಂದೆಯ ಸೋಗಿನವನನುರೆ ಹಿಂದಿಕ್ಕಿ ಕಳಿಸಿ ನೀನುರೆ ಮುಂದಕೆ ।
ನಿನ್ನವರನೊಡಗೊಂಡು ಪೋಗಿ ಬಾಗಿಲಕೋಟೆಯ
ಯಂ ನೋಡಿ ಅಲ್ಲಿರುವ ನಿನ್ನವರ ಪೊರೆವಗುರು
ಚೆನ್ನವೀರಾರ‍್ಯನಂ ನೋಡಿಯವರೊಡಗೂಡಿ ನುಗಿಸೆಂಬ ಗುರುವೆ ಶರಣು ॥೧೯೧॥


ಆರಾರೆಡೆಯ ಒಡೆಯನೇ ನಿನ್ನ ತಂದೆಯೆಂದು
ಹೋದಂತೆ ತಿಳಿಸಿದಿರಿ ಅವನಾರು ತಿಳಿಸೆನಲ್
ಆರಾರೆಡೆಯ ಒಡೆಯನೆನಿಪನವನೆ ಚೆನ್ನ ಬಸವೇಶನೆಂದರುಪುತಾ ।
ಆರಿಗಿದು ತಿಳಿಯದು ಕುಮಾರನೇ ನೀನೆ ತಿಳಿ
ಆರಾರು ತತ್ವಗಳ ತಿಳಿದಾತನೇ ಆತ
ನಾರು ಸ್ಥಲದೊಳ್ವಿರಾಜಿಸುವನವನೇ ನೋಡು ನೋಡೆಂಬ ಗುರುವೆ ಶರಣು ॥೧೯೨॥

ಆರರಿಂ ಮುವ್ವತ್ತಾರೆನಿಸಿ ಮುವ್ವ
ತ್ತಾರರಿಂದಿನ್ನೂರ ಹದಿನಾರೆನಿಸುತ ಇ
ನ್ನೂರ ಹದಿನಾರರಿಂ ಹನ್ನೆರಡುನೂರ ತೊಂಬತ್ತಾರೆನಿಸುತಿರ್ಪನ್ನೈ ।
ವೀರಶೈವಾಚಾರ ಮಾರ್ಗದೋಳೊಪ್ಪಿರ್ದ
ನಾರತಂ ಷಟ್ಸ್ಥಲಬ್ರಹ್ಮಿಯೆನಿಸಿಹ ಚೆನ್ನ
ವೀರನವನೇ ಚೆನ್ನಬಸವೇಶನೆನಿಪನರಿಯೆಂಬ ಗುರುವರನೆ ಶರಣು ॥೧೯೩॥

ತಂದೆ ಎನಿಸುವನವನೆ ತಾಯಿ ಎನಿಸುವನವನೆ
ಬಂಧುವೆನಿಸುವನವನೆ ಬಳಗವೆನಿಸುವನವನೆ
ಕಂದನೆನಿಸುವನವನೆ ಎಸುದೆಂತುಟು ಗುರುವೆ ತಿಳಿಸೆಂದು ವಂದಿಸುತಿಹ ।
ಕಂದನಂ ನೋಡಿ ನಲಿದಾಡಿ ಕರದಲ್ಲಿಯುರೆ
ಬಂದವನೆ ಕಂದನೆಂದರಿದು ಸಂತಸದಿ ಈ
ಕಂದನಿಗುಣಿಸಿ ತಣಿಸಿ ನೀನೀಗ ಸಂತೃಪ್ತನಾಗೆಂಬ ಗುರುವೆ ಶರಣು ॥೧೯೪॥

ನೀನೀಗ ತೃಪ್ತನಾಗಲು ನಾನೆ ತೃಪ್ತನ್ಯೆ
ನೀನೀಗ ತೃಪ್ತನಾಗದಿರೆ ನಾನಾಗೆನ್ಯೆ
ನೀನೆ ಎನ್ನಯ ಕಂದ ನಾನೆ ನಿನ್ನಯ ಕಂದನೆಂದರುಹಿಸುತ್ತ ಮತ್ತಂ ।
ಈ ನಿರ್ಣಯ ಪುರಾಣವ ಬೆಳೆಸಲೋಸುಗಂ
ನೀನೀಗ ಕಂದನೆನಿಸಲು ನಾನೆ ತಂದೆಯಹೆ
ನಾನಂದದಿಂದೀರ್ವರಿಗಂದಾದುದೇ ನಿರ್ಣಯವೆಂಬ ಗುರುವೆ ಶರಣು ॥೧೧೯೫॥

❖❖



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಮಾಜಿ ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ : 97390 67359